Reg. No M. 3937. ಪಂಪೇ ನೂತರಂ

ನವ ಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:
ಸಂಚಿಕೆ ೧೩ ಬಳ್ಳಾರಿ ಜನವರಿ ೪ನೇ ಭಾನುವಾರ ೧೯೪೨. ಟಿ. ಬಿ. ಕೇಶವರಾವ್.

ಎಂಪೈರ್ ಆಫ್ ಇಂಡಿಯಾ

ಸ್ಥಾಪನೆ- ೧೯೯೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000, ರೂ.ಗಳಿಗೆಮೀರಿದೆ

ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ವಿಸ್ತರಿಸಿದ್ದಾರೆ ಎಂಬುದನ್ನು ವಿಚಾರಿಸುವುದರಿಂದ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚೆನ್ನಾಯಿಸಿಕೊಳ್ಳಲು ಅವಕಾಶವಾಗುತ್ತದೆ ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾಗಿ ನಿಮೆ ಮಾಡಿರಿ.

ಕೊಂದ್ರ ಕಚೇರಿ. ಎಂಪೈರ್ ಆಫ್ ಇಂಡಿಯಾ ಲೈಸ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಕಚೇರಿ. ಡಿಸ್ಪೆಕ್ಟ್‌ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

"UMMEED" in Royal Picture Palace
Best Social Picture From 7th Jan'y 1942
Encouragement from one & all solicited.
ರಾಯಲ್ ಪಿಕ್ಚರ್ ಪ್ಯಾಲೆಸಿನಲ್ಲಿ "ಉಮ್ಮೀದ್" (ಆಶೆ)
7-1-42ನೇ ಬುಧವಾರದಿಂದ ಶ್ರೇಷ್ಠ ಸಾಮಾಜಿಕ ವಾಕ್ಚಿತ್ರ.
ಎಲ್ಲರ ಪ್ರೋತ್ಸಾಹವನ್ನು ಬೇಡುತ್ತೇವೆ.

ಹಿಟ್ಲರನೇ ಸೇನಾಧಿಪತಿಯಾದನು.

ಜರ್ಮನ್ ಸರ್ವಾಧಿಕಾರಿ ಹಿಟ್ಲರನು ತನ್ನ ಎಲ್ಲಾ ಸೈನ್ಯಗಳ ಸರ್ವಾಧಿಕಾರವನ್ನೂ ವಹಿಸಿದನು. ಇದುವರೆಗೆ ಸೇನಾಧಿಪತಿಯಾಗಿದ್ದ ವಾನಬ್ರಾಜಿಟರವರು ಯಾವಕಾರಣದಿಂದಲೋ ನಿವೃತ್ತರಾದರು. ಇದು ರಷ್ಯಾದಲ್ಲಿ ಛಳಿಗಾಲದಲ್ಲಿ ಆಗುತ್ತಿರುವ ಸೋಲಿನೆಂದು ಊಹಿಸಲಾಗುತ್ತಿದೆ. ತಾವು ಸೇನಾಧಿಪತಿಯ ಕಾರ್ಯಭಾರವನ್ನು ವಹಿಸಿದಮೇಲೆ ಸೈನಿಕರಿಗೆಲ್ಲಾ ಈ ಬಿನ್ನಹವನ್ನು ಹಿಟ್ಲರನು ಕಳುಹಿಸಿದ್ದಾನೆ

ನಮ್ಮ ಜನರ ಸ್ವಾತಂತ್ರ್ಯಕ್ಕಾಗಿ ನನ್ನು ಜನರ ಉಳಿವಿಗಾಗಿ, ವಿನಾದರೊಂದು ನೆಪದಿಂದ ೨೦-೨೫ ವರ್ಷಗಳಿಗೂಮ್ಮೆ ನಮ್ಮ ಮೇಲೆ ಯಾರೂ ಯುದ್ಧ ಹೂಡದಂತೆ ಮಾಡಲಿಕ್ಕಾಗಿ ನಾವು ಆರಂಭಿಸಿರುವ ಕದನವು ಈಗ ಮಹಾಘಟ್ಟವನ್ನು ಮುಟ್ಟಿದೆ. ಪ್ರಪಂಚದ ಬಲಯುತ ರಾಷ್ಟ್ರಗಳಲ್ಲಿ ಒಂದಾದ ಜಪಾನು ಹೊನ ದಾಗಿ ನಮ್ಮ ಕಡೆಗೆ ನೇರಿ, ಶತ್ರುಗಳನ್ನು ಎದಿರುಸುತ್ತಿದೆ.

ನಾವೀಗ ವ್ಯವಸಾಚಕ್ಕೆ ಬಹಳ ವ್ಯಾಮುಖ್ಯನೆನಿಸಿದಂತಹ ನಿರ್ಧಾರಕ್ಕೆ ಬರಬೇಕಾಗಿದೆ. ಎಲ್ಲ ಕಾಲಗಳಲ್ಲೂ ಬಹಳ ಕ್ರೂರರೆನಿಸಿದ್ದ ಶತ್ರುಗಳನ್ನು ನಾವು ರಷ್ಯದಲ್ಲಿ ಎದುರಿಸಿ, ಇತಿಹಾಸದಲ್ಲಿ ಎಂದೂ ಕಾಣದಂತಹ ಪ್ರಚಂಡ ವಿಜಯವನ್ನು ಗಳಿಸಿದ್ದಾಯಿತು. ಈಗ ಇದ್ದಕ್ಕಿದ್ದ ಹಾಗೆಯೇ ಛಳಿಗಾಲವು ತಲೆಹಾಕಿರುವುದರಿಂದ ನಮ್ಮ ಸೇನೆಗಳನ್ನು ನುಂಗೆ ಬಿಡದೆ ತಡೆಯಬೇಕಾಗಿದೆ. ನಾವು ಇದುವರೆಗೆ ಎಷ್ಟು ಪೌರುಷ ಮತ್ತು ತ್ಯಾಗದಿಂದ ಶತ್ರು ಭೂಮಿಯನ್ನು ಜಯಿಸಿದೆವೋ ಅಷ್ಟೇ ಪೌರುಷ ಮತ್ತು ತ್ಯಾಗದಿಂದ ಅದನ್ನೀಗ ರಕ್ಷಿಸಿಕೊಳ್ಳುವುದುಕೂಡ ಅಗತ್ಯವಾಗಿದೆ.

ಹೊಸ ಸೇನೆಗಳ ರಚನೆ

ಈಗ ಹೊಸ ಸೊಸ ಸೈನಿಕರನ್ನು ರೂಪುಗೊಳಿಸುತ್ತಿರಲಾಗಿದೆ. ಮುಖ್ಯವಾಗಿ ಉತ್ತಮ ಬಗೆಯ ಶಸ್ತ್ರಾಸ್ತ್ರಗಳನ್ನೂ ಒದಗಿಸಲಾಗುತ್ತಿದೆ. ಕರ್ಕನೀಸ್ಸಾನಿಂದ ಸ್ಪೇಯಿನ್ ಗಡಿವರೆಗೆ ಪಶ್ಚಿಮ ಯೂರೋಪಿನ ರಕ್ಷಣೆಯನ್ನು ಬಲಪಡಿಸುವೆವು. ಛಳಿಗಾಲವು ಹೋದಕೂಡಲೇ ಪೂರ್ವದಲ್ಲಿ ಮತ್ತೆ ಕದನವನ್ನಾರಂಭಿಸಿ ಶತ್ರುಗಳು ನಿರ್ನಾಮವಾಗುವವರೆಗೆ ಹೋರಾಡಲು ಈಗಲೇ ಸಿದ್ಧತೆಗಳನ್ನು ನಾವು ಕೊಳ್ಳಬೇಕಾಗಿದೆ. ಇತರ ರಕ್ಷಣೆ ಕಾರ್ಯ ಕ್ರಮಗಳನ್ನು ಕೂಡ ಕೈಗೊಳ್ಳಲಾಗುತ್ತಿದೆ. ಜರ್ಮನಿಯು ಯೂರೋಪಿನಲ್ಲಿಯೂ ಮತ್ತು ಆಫ್ರಿಕಾದಲ್ಲಿಯೂ ತನ್ನ ಮಾರ್ಗ ಸೌಕರ್ಯವನ್ನು ಬಲಪಡಿಸಬೇಕಾಗಿದೆ.

ನನ್ನ ಹೃದಯವು ನಿಮ್ಮದು

ಈ ಕಾರ್ಯಗಳಾಗಬೇಕಾಗಿದ್ದರೆ ನಾಜಿ ಸೈನಿಕರೂ ಮತ್ತು ಪ್ರಜೆಗಳೂ ಏಕೀಭವಿಸಿ, ಅದ್ಭುತ ಪ್ರಯತ್ನ ಮಾಡಬೇಕಾಗಿದೆ. ಹೊಡದಾಟದ ಭಾರವು ಸೇನೆಯ ಮೇಲೆ ಬಿದ್ದಿದೆ. ಆದ್ದರಿಂದ ಸೇನೆ ವರಸೂಫಿಕಾರವನ್ನು ಮಾತ್ರವಲ್ಲದೆ, ದಂಡನಾಯಕತನವನ್ನೂ ಕೂಡ ನಾನೇ ವಹಿಸಿಕೊಂಡಿರುತ್ತೇನೆ. ೧೯೧೪ ರಿಂದ ೧೮ ರವರೆಗೆ ನಡೆದ ಪ್ರಥಮ ಮಹಾಯುದ್ಧದ ಅನುಭವ ನನಗಿದೆ. ನಾನು ನಾ ಮೂ ನ್ಯ ಯೋಧನಾಗಿದ್ದು ಕೊಂಡು ಸಂಗ್ರಾಮದ ಉಗ್ರ ಮುಖವನ್ನೆಲ್ಲ ಅನುಭವಿಸಿದ್ದೇನೆ. ಎರಡು ಸಾರೆ ನಾನು ಗಾಯಗೊಂಡೆ. ಕಣ್ಣುಗಳನ್ನು ಕಳೆದುಕೊಳ್ಳುವೆನೆಂಬ ಭಯವೂ ನನಗೆ ಉಂಟಾಯ್ತು. ನೀವೀಗ ಅನುಭವಿಸುತ್ತಿರುವ ತೊಂದರೆಗಳನ್ನೆಲ್ಲ ನಾನು ಅನುಭವಿಸಿದ್ದೇನೆ. ೪ ವರ್ಷಗಳು ನುಗ್ಗಿದನೆಲೆ ನಮ್ಮ ಜರ್ಮನರ ಗುಣ್ಕಿಯು ಎಂದಾಪತ್ತೊಂದುವಿನ ಬಂದೇ ತೀರುವುದೆಂದು ನಾನು ನುಸಗೆಂಡೆ. ಸಾಮಾನ್ಯ ಯೋಧನಾಗಿದ್ದ ನಾನು ೧೫ ವರ್ಷಗಳ ಕಾಲ ಅವಿಚ್ಛಿನ್ನವಾಗಿ ಕೆಲಸನಾಡಿ, ಜರ್ಮನ್ ಜನಾಂಗನನ್ನು ಮತ್ತೊಮ್ಮೆ ಒಂದುಗೂಡಿಸಿದೆ. ವರ್ಸೇಲ್ಸ್‌ನಲ್ಲಾದ ಮರಣದಂಡನೆಯಿಂದ ಜರ್ಮನ್ ಜನಾಂಗನನ್ನು ಬಿಡಿಸಿದೆ.

ನನ್ನ ಯೋಧರೆ! ನನ್ನ ಹೃದಯವು ಸಂಪೂರ್ಣವಾಗಿ ನಿಮ್ಮದು. ನನ್ನ ಜನರ ಕೀರ್ತಿಗಾಗಿಯೇ ನಾನು ಸೇವೆ ನಲ್ಲಿಸುತ್ತಿರುವುದು. ಶತ್ರುವನ್ನು ನಾಶಮಾಡುವುದೊಂದೇ ಈಗ ನನ್ನ ಮನಸ್ಸಿನಲ್ಲಿರುವ ಗುರಿ. ನಿಮ್ಮ ಯೋಗಕ್ಕೆಮವನ್ನೆ ನೋಡಿಕೊಂಡು, ನಿಮಗೆ ನೆರವಾದ ಮಾರ್ಗ ಹೋರಿಸುವ ಕಾರ್ಯದಲ್ಲಿ ಏನುಮಾಡಬಹುದೋ ಅವೆಲ್ಲವನ್ನು ನಾನು ನಿಮಗೆ ಮಾಡುತ್ತೇನೆ. ನೀವು ನನಗೆ ಮಾಡಬಹುದಾದುದನ್ನೆಲ್ಲ ಬಹಳ ಭಕ್ತಿಯಿಂದ, ಜರ್ಮನ್ ಜನಾಂಗವು ಮುಕ್ತಿ ಸಥವನ್ನು ಕಾಣುವನರಿಗೆ ಮಾಡುವರೆಂದು ನಾನು ನಂಬಿದ್ದೇನೆ. ವೀರ ಯೋಧರಿಗೆ ವಿಜಯ ನನ್ನೆಂದಿಗೂ ದೇವರು ದೊರಕಿಸದೆ ಇರಲಾರನು, ಎಂದು ತಿಳಿದ್ದಾನೆ.

ಸಿಂಗಪುರದ—ರಕ್ಷಣೆ

ಪೆಸಿಫಿಕ್ ಕದನವು ೩ ನೇ ವಾರದಲ್ಲಿ ಅಡಿಯಿಟ್ಟಿತು. ಈಗ ಎಲ್ಲರ ಕಣ್ಣೂ ಫಿಲಿಪ್ಪೈನಿಗಿಂತ ಹೆಚ್ಚಾಗಿ ಸಿಂಗಪುರದ ಮೇಲೆ ಕೇಂದ್ರೀಕೃತವಾಗಿದೆ. ಫಿಲಿಪ್ಪೈನ್ ದ್ವೀಪದ ರಕ್ಷಣೆಯು ಅಸಗತ್ಯವೆಂದು ಇಲ್ಲಿ ಯಾರೂ ತಿಳಿದಿಲ್ಲ. ಆದರೆ, ಸಿಂಗಪುರವನ್ನು ಮಿತ್ರರಾಷ್ಟ್ರಗಳ ಕೈಲೇ ಇರಿಸಿಕೊಳ್ಳುವುದು ಅತ್ಯಗತ್ಯವೆಂದು ಹೇಳಲಾಗಿದೆ.

ಸಿಂಗಪುರಕ್ಕೇನಾಗುವುದೆಂಬುದರ ಮೇಲೆ ಪೆಸಿಫಿಕ್ ಕದನದ ಭವಿಷ್ಯವು ನಿಂತಿದೆ. ಸಿಂಗಪುರವು ಹೋದರೆ, ಡಚ್ ಇಂಡೀಸ್‌ನ ಟೀ, ರಬ್ಬರ್, ಎಣ್ಣೆ ಇವೆಲ್ಲ ಮಿತ್ರರಾಷ್ಟ್ರಗಳ ಕೈಬಿಟ್ಟುಂತೆಯೇ. ಇತ್ತ ಫಿಲಿಪ್ಪೈನಿನಲ್ಲಿ ಅಮೆರಿಕ ಸೇನೆಗಳ ಕೈಬಿಡುವಾಗದಂತೆಹೊಡೆದಾಟ ನಡೆಸುತ್ತಿದ್ದು ಅತ್ತ ಸಿಂಗಪುರದ ಮೇಲೆ ಕ್ರೂರ ಧಾಳಿ ನಡೆಸಬೇಕೆಂದು ಜಪಾನು ನಿರ್ಧರಿಸಿದೆ. ಹಾಂಕಾಂಗು ಜಪಾನರ ವಶವಾದ್ದರಿಂದ ಚೀನಾ ತೀರದಲ್ಲಿ ಜಪಾನಿನ ಸರಬರಾಜು ಮಾರ್ಗವು ನಿರಾಪದವಾಯಿತು. ಒಂದು ಮೇಲೆ ಅಮೆರಿಕ, ಬ್ರಿಟ್ ನೌಕೆಗಳು ಮೇಲೆ ಬಿದ್ದರೂ ಹಾಂಕಾಂಗಿನಲ್ಲಿ ಜಪಾನ್ ಹಡಗುಗಳು ತಲೆ ನುರಿಸಿಕೊಳ್ಳಬಹುದಾಗಿದೆ. ಇದಲ್ಲದೆ ಫ್ರೀಮರುಗಳೆ ಮತ್ತು ನಣ್ಣ ಪುಟ್ಟ ಸಂಗ್ರಾನು ನೌಕೆಗಳಿರೇರಿ ಕೆಲನಕ್ಕೆ ಅಲ್ಲಿ ಬಹಳ ಅನುಕೂಲವಿದೆ. ಇದು ಹೀಗಿರಲಿ, ಸಿಂಗಪುರದ ಆಕ್ರಮಣಕ್ಕಾಗಿ ಜಪಾನು ಅಪಾರ ತ್ಯಾಗನಮಾಡಲು ಸಿದ್ಧವಾಗಿದೆಯೆಂದು ಹೇಳಲಾಗಿದೆ. ಮಿತ್ರರಾಷ್ಟ್ರಗಳು ಕೂಡಾ ಅದನ್ನು ಕೈವಿರಿಸಿಕೊಳ್ಳಲು ಅಷ್ಟೇ ಪ್ರಮಾಣದ ತ್ಯಾಗಕ್ಕೆ ಸಿದ್ಧರಾಗಿದ್ದಾರೆ. ಸಿಂಗಪುರವು ಜಪಾನಿನ ವಶವಾಗದೆ ಹೋದರೆ ಅದು ೧೧ ವರ್ಷಕಾಲ ಕೂಡ ಸಂಗ್ರಾನು ನನ್ನು ನಡೆಸಲು ಅಶಕ್ತವಾಗಬಹುದು ಅಂತೂ ಸಿಂಗಪುರದ ರಕ್ಷಣೆಗೆ ಮಿತ್ರರಾಷ್ಟ್ರಗಳು ಏನು ಕಾರ್ಯಕ್ರಮವನ್ನು ಕೈಗೊಂಡಿರೆಯೋ ತಿಳಿಯದು. ಆದರೆ ಅದರ ಪ್ರಾಮುಖ್ಯತೆಯನ್ನು ಲಂಡನ್ನು ಗ್ರಹಿಸಿರುವಂತೆಯೇ ವಾಷಿಂಗ್‌ಟನ್ನು ಸಹ ಗ್ರಹಿಸಿದೆ. ಅಂತೂ ಸಿಂಗಪುರದ ಕ್ಷೇತ್ರದಲ್ಲಿ ಇಷ್ಟರಲ್ಲಿಯೇ ಭಾರಿ ಘಟನಾವಳಿಗಳು ನಡೆದಾವೆಂದು ನಿರೀಕ್ಷಿಸಲಾಗಿದೆ.

ಪೆಸಿಫಿಕ್ ಸಾಗರದಲ್ಲಿರುವ ವೇಕ್ ದ್ವೀಪವು ಸಂಪೂರ್ಣವಾಗಿ ಜಪಾನರ ಸ್ವಾಧೀನವಾಯಿತೆಂದು ಹೇಳಲಾಗಿದೆ.

ಹಿಟ್ಲರನೇ ಸೇನಾಧಿಪತಿಯಾದನು.

ಜರ್ಮನ್ ಸರ್ವಾಧಿಕಾರಿ ಹಿಟ್ಲರನು ತನ್ನ ಎಲ್ಲಾ ಸೈನ್ಯಗಳ ಸರ್ವಾಧಿಕಾರವನ್ನೂ ವಹಿಸಿದನು. ಇದುವರೆಗೆ ಸೇನಾಧಿಪತಿಯಾಗಿದ್ದ ವಾನಬ್ರಾಜಿಬರವರು ಯಾವಕಾರಣದಿಂದಲೋ ನಿವೃತ್ತರಾದರು. ಇದು ರಷ್ಯಾದಲ್ಲಿ ಛಳಿಗಾಲದಲ್ಲಿ ಆಗುತ್ತಿರುವ ಸೋಲಿನೆಂದು ಊಹಿಸಲಾಗುತ್ತಿದೆ. ತಾವು ಸೇನಾನಿಯತ ಕಾರ್ಯಭಾರವನ್ನು ವಹಿಸಿದಮೇಲೆ ಸೈನಿಕರಿಗೆಲ್ಲಾ ಈ ವಿಸ್ಮಯವನ್ನು ಹಿಟ್ಲರನು ಕಳುಹಿಸಿದ್ದಾನೆ.

ನಮ್ಮ ಜನರ ಸ್ವಾತಂತ್ರ್ಯಕ್ಕಾಗಿ ನನ್ನು ಜನರ ಉಳಿವಿಗಾಗಿ, ಏನಾದರೊಂದು ನೆಪದಿಂದ ೨೦-೨೫ ವರ್ಷಗಳಿಗೊಮ್ಮೆ ನಮ್ಮ ಮೇಲೆ ಯಾರೂ ಯುದ್ಧ ಹೂಡದಂತೆ ಮಾಡಲಿಕ್ಕಾಗಿ ನಾವು ಆರಂಭಿಸಿರುವ ಕದನವು ಈಗ ಮಹಾಘಟ್ಟವನ್ನು ಮುಟ್ಟಿದೆ. ಪ್ರಸಂಚದ ಬಲಯುತ ರಾಷ್ಟ್ರಗಳಲ್ಲಿ ಒಂದಾದ ಜಪಾನು ಹೊಸದಾಗಿ ನಮ್ಮ ಕಡೆಗೆ ಸೇರಿ, ರತ್ನಗಳನ್ನು ಎದಿರುಸುತ್ತಿದೆ.

ನಾವೀಗ ಪ್ರಪಂಚಕ್ಕೆ ಬಹಳ ಸ್ಪಾಮುಖ್ಯವೆನಿಸಿದಂತಹ ನಿರ್ಧಾರಕ್ಕೆ ಬರಬೇಕಾಗಿದೆ. ಎಲ್ಲ ಕಾಲಗಳಲ್ಲೂ ಬಹಳ ಕ್ರೂರರೆನಿಸಿದ್ದ ರತ್ನಗಳನ್ನು ನಾವು ರಷ್ಯದಲ್ಲಿ ಎದುರಿಸಿ, ಇತಿಹಾಸದಲ್ಲಿ ಎಂದೂ ಕಾಣದಂತಹ ಪ್ರಚಂಡ ವಿಜಯವನ್ನು ಗಳಿಸಿದ್ದಾಯಿತು. ಈಗ ಇದ್ದಕ್ಕಿದ್ದ ಹಾಗೆಯೇ ಛಳಿಗಾಲವು ತಲೆಹಾಕಿರುವುದರಿಂದ ನಮ್ಮ ಸೇನೆಗಳನ್ನು ಮುಂದೆ ಬಿಡದೆ ತಡೆಯಬೇಕಾಗಿದೆ. ನಾವು ಇದುವರೆಗೆ ಎಷ್ಟು ವೌರುಷ ಮತ್ತು ತ್ಯಾಗದಿಂದ ರತ್ನ ಭೂಮಿಯನ್ನು ಜಯಿಸಿದೆವೋ ಅಷ್ಟೇ ವೌರುಷ ಮತ್ತು ತ್ಯಾಗದಿಂದ ಅದನ್ನೀಗ ರಕ್ಷಿಸಿಕೊಳ್ಳುವುದುಕೂಡ ಅಗತ್ಯವಾಗಿದೆ.

ಹೊಸ ಸೇನೆಗಳ ರಚನೆ

ಈಗ ಹೊಸ ಹೊಸ ಸೇನೆಗಳನ್ನು ರೂಪುಗೊಳಿಸುತ್ತಿರಲಾಗಿದೆ. ಮುಖ್ಯವಾಗಿ ಉತ್ತಮ ಬಗೆಯ ಶಸ್ತ್ರಾಸ್ತ್ರಗಳನ್ನು ಒದಗಿಸಲಾಗುತ್ತಿದೆ. ಕರ್ಕಸೀಸ್‌ನಿಂದ ಸೈಬಿನ್ ಗಡಿವರೆಗೆ ಪಶ್ಚಿಮ ಯೂರೋಪಿನ ರಕ್ಷಣೆಯನ್ನು ಬಲಪಡಿಸುವೆವು. ಛಳಿಗಾಲವು ಹೋದಕೂಡಲೇ ಪೂರ್ವದಲ್ಲಿ ಮತ್ತೆ ಕದನವನ್ನಾರಂಭಿಸಿ ಶತ್ರುಗಳು ಸರ್ವನಾಶವಾಗುವವರೆಗೆ ಹೋರಾಡಲು ಈಗಲೇ ಸಿದ್ಧತೆಗಳನ್ನು ನಾವು ಕೊಳ್ಳುತ್ತಾಗಿದೆ. ಇತರ ರಕ್ಷಣೆ ಕಾರ್ಯ ಕ್ರಮಗಳನ್ನು ಕೂಡ ಕೈಗೊಳ್ಳಲಾಗುತ್ತಿದೆ. ಜರ್ಮನಿಯು ಯೂರೇಷಿಯಲ್ಲಿಯೂ ಮತ್ತು ಆಫ್ರಿಕಾದಲ್ಲಿಯೂ ತನ್ನ ಮಾರ್ಗ ಸೌಕರ್ಯವನ್ನು ಬಲಪಡಿಸಬೇಕಾಗಿದೆ.

ನನ್ನ ಹೃದಯವು ನಿಮ್ಮದು

ಈ ಕಾರ್ಯಗಳಾಗಬೇಕಾಗಿದ್ದರೆ ನಾಜಿ ಸೈನಿಕರೂ ಮತ್ತು ಪ್ರಜೆಗಳೂ ಏಕೀಭವಿಸಿ, ಅದ್ಭುತ ವ್ಯಯತ್ನ ಮಾಡಬೇಕಾಗಿದೆ. ಹೊಡದಾಟದ ಭಾರವು ಸೇನೆಯ ಮೇಲೆ ಬಿದ್ದಿದೆ ಆದ್ದರಿಂದ ಸೇನೆ ಪರ ಸೂಪ್ರಿಕಾರವನ್ನು ಸೂತ್ರವನ್ನಲ್ಲದೆ, ದಂಡನಾಯಕತನವನ್ನೂ ಕೂಡ ನಾನೇ ವಹಿಸಿಕೊಂಡಿರುತ್ತೇನೆ. ೧೯೧೪ ರಿಂದ ೧೮ ರವರೆಗೆ ನಡೆದ ಸ್ಪರ್ಧೆಯು ಮಹಾಯುದ್ಧದ ಅನುಭವ ನನಗಿದೆ. ನಾನು ನಾ ನೂ ಸೈನ್ಯ ಯೋಧನಾಗಿದ್ದುಕೊಂಡು ಸಂಗ್ರಾಮದ ಉಗ್ರ ದುಃಖವನ್ನೆಲ್ಲ ಅನುಭವಿಸಿದ್ದೇನೆ ಎಲ್ಲಾ ನಾನೆ ನಾನು ಗಾಯಗೊಂಡೆ. ಕಣ್ಣುಗಳನ್ನು ಕಳೆದುಕೊಳ್ಳುವೆನೆಂಬ ಭಯಂಕರ ಸಹ ನುಂಡಿದ್ದೆ. ನೀವೀಗ ಅನುಭವಿಸುತ್ತಿರುವ ಪೊಂದರೆಗಳನ್ನೆಲ್ಲ ನಾನು ಅನುಭವಿಸಿದ್ದೇನೆ ೪ ವರ್ಷಗಳು ಮುಗಿದನಂತರ ಸಹ ಜರ್ಮನರ ಮುಕ್ತಿಯು ಎಂದಾದರೊಂದುದಿನ ಬಂದೇ ತೀರುವುದೆಂದು ನಾನು ನಂಬಿಗೆಂತೆ. ಸಾಮಾನ್ಯ ಯೋಧನಾಗಿದ್ದ ನಾನು ೧೫ ವರ್ಷಗಳ ಕಾಲ ಅವಿಚ್ಛಿನ್ನವಾಗಿ ಕೆಲಸಮಾಡಿ, ಜರ್ಮನ್ ಜನಾಂಗವನ್ನು ಮತ್ತೊಮ್ಮೆ ಒಂದುಗೂಡಿಸಿದೆ. ವರ್ಸೇಲ್ಸ್‌ನಲ್ಲಾದ ಮೋಸದಂತಹುದಿಯಿಂದ ಜರ್ಮನ್ ಜನಾಂಗವನ್ನು ಬಿಡಿಸಿದೆ.

ನನ್ನ ಯೋಧರೆ! ನನ್ನ ಹೃದಯವು ಸಂಪೂರ್ಣವಾಗಿ ನಿಮ್ಮದು. ನನ್ನ ಜನರ ಕೀರ್ತಿಗಾಗಿಯೇ ನಾನು ಸೇವೆ ನಲ್ಲಿಸುತ್ತಿರುವುದು. ಶತ್ರುವನ್ನು ನಾಶಮಾಡುವುದೊಂದೇ ಈಗ ನನ್ನ ಮನಸ್ಸಿನಲ್ಲಿರುವ ಗುರಿ. ನಿಮ್ಮ ಯೋಗಕ್ಷೇಮವನ್ನು ನೋಡಿಕೊಂಡು, ನಿಮಗೆ ಸರಿಜಾದ ಮಾರ್ಗದರ್ಶನವನ್ನು ಕಾರ್ಯದಲ್ಲಿ ಏನುಮಾಡಬಹುದೋ ಅವೆಲ್ಲವನ್ನು ನಾನು ನಿಮಗೆ ಮಾಡುತ್ತೇನೆ. ನೀವು ನನಗೆ ಮಾಡಬಹುದಾದುದನ್ನೆಲ್ಲ ಬಹಳ ಭಕ್ತಿಯಿಂದ, ಜರ್ಮನ್ ಜನಾಂಗವು ಮುಕ್ತಿ ಸಥವನ್ನು ಕಾಣುವನರೆಗೆ ಮಾಡುವಿರೆಂದು ನಾನು ನಂಬಿದ್ದೇನೆ. ವೀರ ಯೋಧರಿಗೆ ವಿಜಯವನ್ನೆಂದಿಗೂ ದೇವರು ದೊರಕಿಸದೆ ಇರಲಾರನು. ಎಂದು ತಿಳಿದಿದಾರೆ.

ಸಿಂಗಪುರದ—ರಕ್ಷಣೆ

ಪೆಸಿಫಿಕ್ ಕದನವು ೩ನೇ ವಾರದಲ್ಲಿ ಅಡಿಯಿಟ್ಟಿತು. ಈಗ ಎಲ್ಲರ ಕಣ್ಣೂ ಫಿಲಿಪ್ಪೈನಿಗಿಂತ ಹೆಚ್ಚಾಗಿ ಸಿಂಗಪುರದ ಮೇಲೆ ಕೇಂದ್ರೀಕೃತವಾಗಿದೆ. ಫಿಲಿಪ್ಪೈನ್ ದ್ವೀಪದ ರಕ್ಷಣೆಯು ಅನಗತ್ಯವೆಂದು ಇಲ್ಲಿ ಯಾರೂ ತಿಳಿದಿಲ್ಲ. ಆದರೆ, ಸಿಂಗಪುರವನ್ನು ಮಿತ್ರರಾಷ್ಟ್ರಗಳ ಕೈಲೇ ಇರಿಸಿಕೊಳ್ಳುವುದು ಅತ್ಯಗತ್ಯವೆಂದು ಹೇಳಲಾಗಿದೆ.

ಸಿಂಗಪುರಕ್ಕೇನಾಗುವುದೆಂಬುದರ ಮೇಲೆ ಪೆಸಿಫಿಕ್ ಕದನದ ಭವಿಷ್ಯವು ನಿಂತಿದೆ. ಸಿಂಗಪುರವು ಹೋದರೆ, ಡಚ್ ಇಂಡೀಸ್‌ನ ಟಿನ್, ರಬ್ಬರ್, ಎಣ್ಣೆ ಇವೆಲ್ಲ ಮಿತ್ರರಾಷ್ಟ್ರಗಳ ಕೈಬಿಟ್ಟಂತೆಯೇ. ಇತ್ತ ಫಿಲಿಪ್ಪೈನಿನಲ್ಲಿ ಅಮೆರಿಕ ಸೇನೆಗಳ ಕೈಬಿಡುವಾಗದಂತೆಹೊಡೆದಾಟ ನಡೆಸುತ್ತಿದ್ದು ಆತ್ಮ ಸಿಂಗಪುರದ ಮೇಲೆ ಕ್ರೂರ ಧಾಳಿ ನಡೆಸಬೇಕೆಂದು ಜಪಾನು ನಿರ್ಧರಿಸಿದೆ. ಹಾಂಕಾಂಗು ಜಪಾನರ ವಶವಾದ್ದರಿಂದ ಚೀನಾ ತೀರದಲ್ಲಿ ಜಪಾನಿನ ನರವರಾಜು ಮಾರ್ಗವು ನಿರಾಪದವಾಯಿತು. ಒಂದು ಮೇಲೆ ಅಮೆರಿಕ, ಬ್ರಿಟ್ ನೌಕೆಗಳು ಮೇಲೆ ಬಿದ್ದರೂ ಹಾಂಕಾಂಗಿನಲ್ಲಿ ಜಪಾನ್ ಹಡಗುಗಳು ತಲೆ ಮರಿಸಿಕೊಳ್ಳಬಹುದಾಗಿದೆ. ಇದಲ್ಲದೆ ಸ್ಪೇನುರುಗಳ ಮತ್ತು ನಣ್ಣ ವುಟ್ಟ ಸಂಗ್ರಾನು ನೌಕೆಗಳೆರಿನೇರಿ ಕೆಲನಕ್ಕೆ ಅಲ್ಲಿ ಬಹಳ ಅನುಕೂಲವಿದೆ. ಇದು ಹಾಗಿರಲಿ, ಸಿಂಗಪುರದ ಅಕ್ರಮಣಕ್ಕಾಗಿ ಜಪಾನು ಅಪಾರ ತ್ಯಾಗವನ್ನಾಡಲು ಸಿದ್ಧವಾಗಿದೆಯೆಂದು ಹೇಳಲಾಗಿದೆ. ಮಿತ್ರರಾಷ್ಟ್ರಗಳು ಕೂಡಾ ಅದನ್ನು ಕೈವಿಡಿಸಿಕೊಳ್ಳಲು ಅಷ್ಟೇ ಪ್ರಮಾಣದ ತ್ಯಾಗಕ್ಕೆ ಸಿದ್ಧರಾಗಿದ್ದಾರೆ. ಸಿಂಗಪುರವು ಜಪಾನಿನ ವಶವಾಗದೆ ಹೋದರೆ ಅದು ೧ ವರ್ಷಕಾಲ ಕೂಡ ಸಂಗ್ರಾನು ನನ್ನು ನಡೆನಲು ಅಶಕ್ತವಾಗಬಹುದು ಅಂತೂ ಸಿಂಗಪುರದ ರಕ್ಷಣೆಗೆ ಮಿತ್ರರಾಷ್ಟ್ರಗಳು ಏನು ಕಾರ್ಯಕ್ರಮವನ್ನು ಕೈಗೊಂಡಿವೆಯೋ ತಿಳಿಯದು. ಆದರೆ ಅದರ ಪ್ರಾಮುಖ್ಯತೆಯನ್ನು ಲಂಡನ್ನು ಗ್ರಹಿಸಿರುವಂತೆಯೇ ವಾಷಿಂಗ್‌ಟನ್ನು ಸಹ ಗ್ರಹಿಸಿದೆ. ಅಂತೂ ಸಿಂಗಪುರದ ಕ್ಷೇತ್ರದಲ್ಲಿ ಇಷ್ಟರಲ್ಲಿಯೇ ಭಾರಿ ಘಟನಾವಳಿಗಳು ನಡೆದಾವೆಂದು ನಿರೀಕ್ಷಿಸಲಾಗಿದೆ.

ಪೆಸಿಫಿಕ್ ಸಾಗರದಲ್ಲಿರುವ ವೇಕ್ ದ್ವೀಪವು ಸಂಪೂರ್ಣವಾಗಿ ಜಪಾನರ ಸ್ವಾಧೀನವಾಯಿತೆಂದು ಹೇಳಲಾಗಿದೆ.

NOTICE.

A General Meeting of the share-holders of the **Bellary Brucepettah Hindu Mutual Benefit Permanent Fund Ltd.** will be held on Sunday the 11th January 1942 at 8 A M. in the premises of the Fund Office Bellary, for considering all the subjects adjourned from the general meeting on the 21st December 1941

KOLAR RAMA RAO.
President B B. H. M. B. P F

ಪ್ರಕಟನೆ.

ಬಳ್ಳಾರಿ ಬ್ರೂಸಪೇಟೆ ಹಿಂದೂ ಮ್ಯೂಚುಯಲ್ ಬೆನೆಫಿಟ್ ಪರ್ಮನೆಂಟು ಫಂಡ್ ಲಿಮಿಟೆಡ್‌ನ ಸಾಧಾರಣ ಸಭೆಯು 11 ಜನವರಿ 1942 ನೆಯ ಭಾನುವಾರ ಪ್ರಾತಃಕಾಲ 8 ಗಂಟೆಗೆ ಮಂದ ಆಫೀಸಿನಲ್ಲಿ ನಡೆಯುವುದು 21 ಡಿಸಂಬರ್ 1941 ನೆಯ ತಾರೀಖಿನ ಸಾಧಾರಣ ಸಭೆಯಲ್ಲಿ ಮುಂದುವರಿಸಲ್ಪಟ್ಟ ವಿಷಯಗ ಳೆಲ್ಲಾ ವಿಚಾರಿಣೆಗೆ ಬರಲಿವೆ

ಕೋಲಾರ ರಾಮರಾವು,
ಅಧ್ಯಕ್ಷ, (ಬ ಬ್ರೂ ಹಿ ಮೂ. ಬೆ ಪ ನ)

ಜಪಾನರ ದಾಳಿಗೀಡಾದ ಫಿಲಿಪಾಯಿನ್.

೭೦೦೦ ಸಾಮಿರ ದ್ವೀಪಗಳ ಗುಂಪು.

ಪ್ಯಾಸಿಫಿಕ್‌ದಲ್ಲಿಯ ದ್ವೀಪಗಳಲ್ಲಿ ಫಿಲಿಪಾಯಿನ್ಸ್‌ಗಳು ಒಳ್ಳೇ ಮಹತ್ವದವೆಂದು ಹೇಳಬಹುದು ಅಂತೆಯೇ ಅಮೇರಿಕೆಯವರು ಅವುಗಳ ರಕ್ಷಣೆಗಾಗಿ ಯೋಗ್ಯ ಮನಸ್ಕೆ ಮಾಡಿರುವರು ಫಿಲಿಪಾಯಿನದಲ್ಲಿಯ ಎಲ್ಲ ಸೈನ್ಯವನ್ನು ತಮ್ಮ ವಶಕ್ಕೆ ತೆಗೆದುಕೊಂಡು ೭೫ಸಾವಿರ ಫಿಲಿಪಾಯಿನಾರನ್ನೊಳಗೊಂಡ ಪಡೆಯು ಕಡೆಗೆ ದ್ವೀಪಗಳ ರಕ್ಷಣೆಯ ಹೊಣೆಯನ್ನು ಹೊರಿಸಲಾಗಿದೆ. ಸುಮಾರು ೭೦೯೩ ಸಣ್ಣ ಸಣ್ಣ ದ್ವೀಪಗಳುಳ್ಳ ಈ ದ್ವೀಪಕಲ್ಪವೆ ಮೊದಲು ಸ್ಪೇನ ದ ಆಧೀನಕ್ಕೊಳಗಾಗಿತ್ತು ೨ನೇ ಫಿಲಿಪನ ಹೆಸರೇ ಈದ್ವೀಪಗಳಿಗೆ ಕೊಡಲಾಯಿತು ೧೮೯೮ ರಲ್ಲಿ ಅಮೇರಿಕೆಗೆ ಈ ದ್ವೀಪಗಳನ್ನು ಒಪ್ಪಿಸಲಾಯಿತು ಏಶಿಯಾದ ಆಗ್ನೇಯಕ್ಕೆ ೫೦೦ ಮೈಲಿಗಳಾಚೆ ಈ ದ್ವೀಪಕಲ್ಪವಿದೆ ನಶ್ಚಿಮ ಮತ್ತು ಉತ್ತರಕ್ಕೆ ಚೀನ ಸಮುದ್ರ ಪೂರ್ವಕ್ಕೆ ಪ್ಯಾಸಿಫಿಕ್ ಸಮುದ್ರ ಹಾಗು ದಕ್ಷಿಣಕ್ಕೆ ಸೊಲೆಬೆ ಸಮುದ್ರ ಮತ್ತು ಬೋರ್ನಿಯೋ ಕರಾವಳಿ ಇವೆ ಈ ದ್ವೀಪಗಳ ಪ್ರದೇಶವು ೧೧೪೬೦೦ ಚಚ್ಚೌಕು ಮೈಲು ಅಂದರೆ ಬ್ರಿಟಿಸ್ಸ್‌ಕ್ಕಿಂತ ೭೦೦೦ ಮೈಲು ಕಡಿಮೆ ಇದೆ ಆದರೆ ಅವುಗಳಲ್ಲಿ ಬಹಳ ದ್ವೀಪಗಳು ತೀರ ಚಿಕ್ಕವೆಂದರೆ ಒಂದು ಚಚ್ಚೌಕ ಮೈಲು ಕೂಡ ವಿಸ್ತೃತ ಇವೆ ಕೇವಲ ೧೧೧೯ ದ್ವೀಪಗಳು ೧೦೦೦ ಕ್ಕಿಂತ ಹೆಚ್ಚು ಚಚ್ಚೌಕು ಮೈಲು ವಿಸ್ತಾರವಾಗಿವೆ ಇವುಗಳಲ್ಲಿ ಲಝೆಂನವು ಎಲ್ಲಕ್ಕೂ ಉತ್ತರಕ್ಕಿದ್ದು ಇಡೀ ದ್ವೀಪಕಲ್ಪದಲ್ಲಿಯೇ ಹೆಚ್ಚು ದೊಡ್ಡದಿದೆ ಮನಿಲಾ ರಾಜಧಾನಿಯೂ ಇಲ್ಲಿಯೇ ಇದೆ ಉಳಿದ ೧೧ ದ್ವೀಪಗಳು ಮಿಂದೆನಾವ, ಸಮರ, ನಿಗ್ರೋಸ, ಪಾಲಪಾಸ, ಪಾನೆ, ಮಿಂಡೋರೊ, ಲೆಯಿಟು ಬಿಬು, ಬೋಹಲ ಮತ್ತು ಮೆಸ್ಬಾಟೆ ೩೬೯೦೬ ಮೈಲುಗಳಿಂದ ೧೨೩೫ ಚಚ್ಚೌಕು ಮೈಲುಗಳಷ್ಟು ವಿಸ್ತೃತವಿರುವವು. ತೀರ ದಕ್ಷಿಣಕ್ಕೆ ಇರುವ ಮಿಂಡೋರೊ ದ್ವೀಪವು ಲಝೋನಾ ಬಿಟ್ಟು ಉಳಿದ ಎಲ್ಲ ದ್ವೀಪಗಳಲ್ಲಿ ದೊಡ್ಡದು.

ಗುಡ್ಡಗಾಡು ಪ್ರದೇಶ

ಈ ಫಿಲಿಪಾಯನ ನಡುಗುಡ್ಡೆಗಳಿಗೆ ಒಟ್ಟು ೧೫೨೦೦ ಮೈಲು ಕರಾವಳಿಯಿದೆ ಇದೆಲ್ಲ ಪ್ರದೇಶ ಗುಡ್ಡಗಾಡು ಇದ್ದು ಎಷ್ಟೋ ದೊಡ್ಡ ದೊಡ್ಡ ಶಿಖರಗಳು ಸಮುದ್ರಕ್ಕೆ ತೀರ ಸಮೀಪದಲ್ಲಿವೆ. ಇವುಗಳ ರಕ್ಷಣೆಯ ಕಾರ್ಯವು ಕಠಿನವಿದ್ದಷ್ಟು ಇವುಗಳಮೇಲೆ ದಾಳಿ ಮಾಡುವುದೂ ಸುಲಭಸಾಧ್ಯವಿಲ್ಲ ಈ ಪ್ರದೇಶವು ಜ್ವಾಲಾಮುಖಿಗಳಿಗೆ ಆಹುತಿಯಾಗುತ್ತಿದ್ದರೂ ಹವಾಯಿ ದ್ವೀಪಗಳಷ್ಟು ಗೊಂಡಾಂತರ ಇಲ್ಲಿರುವದಿಲ್ಲ. ಫಿಲಿಪಾಯಿನದಲ್ಲಿ ಮೌಂಟ ಆಪೋ ಎಂಬುದು ಎಲ್ಲಕ್ಕೂ ಹೆಚ್ಚು ಎತ್ತರವಿದೆ. ಲಝೋನದಲ್ಲಿ ಅನೇಕ ಮಹತ್ವದ ನದಿಗಳಿವೆ ಅವುಗಳಲ್ಲಿ ಉತ್ತರ ಪ್ರದೇಶದಲ್ಲಿ ಹರಿಯುವ ಕ್ಯಾಗೆಯಿನ್ ಎಲ್ಲಕ್ಕೂ ದೊಡ್ಡದು. ವ್ಯಾಪಾರ ದೃಷ್ಟಿಯಿಂದ ಪ್ಯಾಸಿನ್ ನದಿ ಬಹಳ ಮಹತ್ವದ್ದು.

ಫಿಲಿಪಾಯಿನದಲ್ಲಿ ಎಲ್ಲ ವರ್ಣದ ಜನರಿರುವರು ಜನಗಣನೆಯ ವರದಿಯನ್ನು ನೋಡಿದರೆ ೫೩೮೬೬೩ ಕಪ್ಪು, ೫೦೮೭೩೬ ಹಳದಿ, ೧೨೩೯೦ ಬಿಳಿ, ೩೪೬೬೩ ಮಿಶ್ರಿತ ಹೀಗೆ ಭಿನ್ನ ಭಿನ್ನ ವರ್ಣಗಳ ಜನರಿದ್ದುದು ಕಂಡು ಬರುತ್ತದೆ ಇದಲ್ಲದೆ ಅಮೇರಿಕೆಯ ಕಲವು ನಿಗ್ರೊಗಳು ಇರುವರು ಇವರೆಲ್ಲ ಕೂಲಿಗಾಗಿ ಇಲ್ಲಿ ಬಂದವರು ಫಿಲಪಾಯಿನದ ಮೂಲ ನಿವಾಸಿಗಳು ಕಪ್ಪು ವರ್ಣದವರು. ಹಳದಿ ಬಣ್ಣದವರಲ್ಲಿ ಅಮೇರಿಕನರ ನಂತೆ ಹೆಚ್ಚು ಸ್ಪೇನ್, ಬ್ರಿಟನ, ಜರ್ಮನಿ, ಫ್ರಾನ್ಸ್ ಸ್ವಿತ್ಸರ್ಲಂಡಗಳ ಜನಸಂಖೆ ಕ್ರಮಶಃ ಇದೆ ಅವೇಯೊಸ್ಯಾಂಪ ಮತ್ತು ಒಲೊಕೊ ಗುಡ್ಡಗಾಡುಗಳಲ್ಲಿ ಅನೇಕ ನಿಗ್ರಿಗಳು ಇರುವರು. ಅವರು ಗಿಡ್ಡಗಿದ್ದರೂ ಗಟ್ಟಿಗರು ಕಷ್ಟಸಹಿಷ್ಣುಗಳಿರುವರು.

ನಗರಗಳಲ್ಲಿ ಮನಿಲಾ ಎಲ್ಲಕ್ಕೂ ದೊಡ್ಡದು ನಿಬಿಡ ವಸತಿಯ ಸ್ಥಳವು ೩ ಲಕ್ಷ ಜನಸಂಖೆಯಿದೆ. ಒಳ್ಳೆ ಊರ್ಜಿತ ಸ್ಥಿತಿಯಲ್ಲಿದ್ದ ಬಂದರವು ಒಳ್ಳೆ ವ್ಯೇಕ್ಷಣಿಯ ಗೋಡೆಗಳುಳ್ಳ ಈ ನಗರದಲ್ಲಿ ಅನೇಕ ಪ್ರಮುಖ ಕಟ್ಟಡಗಳಿವೆ. ಇಲ್ಲಿನ

(10 ನೆಯ ಪುಟವನ್ನು ನೋಡಿರಿ.)

ಯುದ್ಧ ವಾರ್ತೆಗಳು.

ಮನಿಲಾ ನಗರದ ಮೇಲೆ ಉಗ್ರ ಮುತ್ತಿಗೆ:—

ಫಿಲಿಪೈನ್ ದ್ವೀಪಗಳ ಮುಖ್ಯರಾಜಧಾನಿಯಾದ ಮನಿಲಾ ನಗರವು ಅರಕ್ಷಿತವಾದುದೆಂದು ಸಾರಿದ್ದರೂ ಜಪಾನರು 29 ನೆಯ ತಾ. 1½ ಘಂಟೆಯಕಾಲ ಉಗ್ರ ಮುತ್ತಿಗೆಯನ್ನು ನಡೆಸಿ ಬಾಂಬುಗಳನ್ನು ಲೆಕ್ಕವಿಲ್ಲದಷ್ಟು ಸುರಿವಿದರು. ವಿಮಾನಗಳಿಗೆ ಪ್ರತಿಭಟನೆಇಲ್ಲದಕಾರಣ ನಷ್ಟವು ಅಧಿಕವಾಯಿತು. ಅನೇಕ ಭವನಗಳು ಕುಸಿದು ಬಿದ್ದವು. ಲಗು ನಾವ್ಯಾಂಕ್ಯದಲ್ಲಿ ಳನಗರಗಳು ನಾಶವಾದವು ಫಿಲಿಪೈನ್ ಸೇನೆಯು ಯುದ್ಧವನ್ನು ನಿಲ್ಲಿಸಿ ಜಪಾನರೊಡನೆ ಸಹಕರಿಸಿದರೆ ಮನಿಲಾ ನಗರವು ಅರಕ್ಷಿತವೆಂದು ಭಾವಿಸಲಾಗುವುದು ಎಂಬುದಾಗಿ ಟೋಕಿಯೋ ರೇಡಿಯೋ ತಿಳಿಸಿರುವುದಂತೆ. ಈ ಮುತ್ತಿಗೆಯು ರಾಕ್ಷಸೀ ಕೃತ್ಯವೆಂದೂ, ಅಮಾನುಷವೆಂದೂ ಅನೇಕರಿಕಾದ ವಿದೇಶಾಂಗ ಸಚಿವರಾದ ಕಾರ್ಡೆಲ ಹಲವರು ಅಭಿಪ್ರಾಯಪಟ್ಟಿದ್ದಾರೆ. ೨೪ ನೆಯ ತಾ. ಕೂಡ ಮನಿಲಾದಮೇಲೆ ಬಾಂಬಿನ ದಾಳಿಯಾಯಿತು. ಫಿಲಿಪೈನ್ ದ್ವೀಪಗಳಿಗೆ ಅತ್ಯಧಿಕ ಸಂಖ್ಯಾಕರಾದ ಜಪಾನೀ ಸೈನ್ಯಗಳು ಬರುತ್ತಲೇ ಇವೆ. ಪರಿಸ್ಥಿತಿಯು ಕಠಿಣವಾಗುತ್ತಲಿದೆ.

ಬರ್ಮಾರಕ್ಷಣೆ

ರಂಗೂನ ಮುತ್ತಿಗೆ ವಿವರಗಳು:—

ಭಾರತದ ದಂಡನಾಯಕರಾದ ಜನರಲ ವೇವಲರವರು ಬರ್ಮಾರಕ್ಷಣೆ ಜವಾಬ್ದಾರಿಯನ್ನು ನಹಿಸಿದ್ದಾರೆಂದೂ, ಹಟನ್‌ರವರು ನೈನ್ಯಾಧಿಕಾರಿಗಳಾಗಿರುವರೆಂದೂ ಒಂದುವ್ರಕಟನೆಯು ಹೇಳುತ್ತದೆ. ದಿಶಂಬರ್ ೨೩ ನೆಯ ತಾ. ನಡೆದ ರಂಗೂನ ಧಾಳಿಯಲ್ಲಿ ೬೦೦ ಜನ ನಾಗರೀಕರು ಸತ್ತರು ಮತ್ತು ಘಾಯಗೊಂಡರು. ಎರಡನೇ ಮುತ್ತಿಗೆಯಲ್ಲಿ ಹೆಚ್ಚು ನಷ್ಟ ಸಂಭವಿಸಲಿಲ್ಲ. ಮುತ್ತಿಗೆ ಕಾಲದಲ್ಲಿ ಜನರು ಅಡಗಿಕೊಳ್ಳುವುದಕ್ಕೆ ಬದಲು ಹೊರಗೆಬಂದಕಾರಣ ಇಷ್ಟು ಅನಾಹುತವಾಯಿತಂತೆ.

ಆಸ್ಟ್ರೇಲಿಯಾದ ಮಾತು ಪ್ರಧಾನವಿರಬೇಕು:—

ಪೆಸಿಪಿಕ್ ಸಾಗರದಲ್ಲಿ ಆರಂಭವಾಗಿರುವ ಯುದ್ಧವು ಅಮೇರಿಕಾ' ಆಸ್ಟ್ರೇಲಿಯಾಗಳಿಗೆ ಸಂಭಂಧಿಸಿರುವ ಕಾರಣ ಇವೆರಡರ ವಾಣಿಯೇ ಪ್ರಧಾನವಾಗಿರಬೇಕೆಂದು ಅಲ್ಲಿಯ ಮುಖ್ಯಮಂತ್ರಿಗಳಾದ ಕರ್ಟಿನರವರು ಸೂಚಿಸಿರುತ್ತಾರೆ. ಜಪಾನವು ಮೇಲೆಬಿದ್ದರೆ ಬ್ರಿಟನ್, ರಷ್ಯಾ ಒಸ್ಪಂದ ಮಾಡಿಕೊಳ್ಳಬೇಕೆಂದು ನಾವು ಸೂಚಿಸಿದರೂ ಬ್ರಿಟನ್ನು ಕೇಳಲಿಲ್ಲ. ಆಸ್ಟ್ರೇಲಿಯವು ಭೂಸಟದಿಂದ ಹೋದರೆ ಬ್ರಿಟನ್ನು ಉಳಿಯಬಲ್ಲದೆಂದು ನಮಗೆ ಗೊತ್ತು. ಬ್ರಿಟನ್ನಿನ ಸಮಸ್ಯೆಗಳು ನಮಗೆ ಗೊತ್ತಿವೆ. ಜರ್ಮನರ ಮುತ್ತಿಗೆಯ ಭಯವಿದೆ. ರಷ್ಯಾದ ಸಹಾಯ ಸಡೆಯುವುದೇ ನಮ್ಮ ನೀತಿಯಾಗಿದೆ

ಬ್ರಿಟಿಶ ಸೈನ್ಯಗಳು ಇಪೋಹ ಖಾಲಿಮಾಡಿದವು:—

ಉತ್ತರ ಮಲಯದಲ್ಲಿದ್ದ ಇಪೋಹ ಎಂಬ ನಗರವನ್ನು ಬ್ರಿಟಿಷ್ ಸೈನ್ಯಗಳು ಖಾಲಿಮಾಡಿದವೆಂದೂ ಜಪಾನರು ಅದನ್ನು ಆಕ್ರಮಿಸಿಕೊಂಡರೆಂದೂ ಗೊತ್ತಿದೆ. ಜಗತ್ತಿನ 'ಟಿನ್' ಉದ್ಯೋಗದ ಮುಖ್ಯ ಕೇಂದ್ರವಾಗಿದ್ದಿತು. ಫಿಲಿಪೈನ್ ದ್ವೀಪಗಳೆಲ್ಲಾ ವಶಪಡಿಸಿಕೊಳ್ಳಲು ಜಪಾನೀಯರು ಅತ್ಯುಗ್ರ ಪ್ರಯತ್ನಗಳನ್ನು ನಡೆಸಿರುವರು.

ಬಳ್ಳಾರಿ.

ಹಿಂದೂ ಮಹಾಸಭೆ:—

ಅಖಿಲಭಾರತ ಹಿಂದೂಮಹಾಸಭೆಯ ಭಾಗಲ್ಪುರದ ಅಧಿವೇಶನವನ್ನು ಬೇಹಾರ ಸರಕಾರದವರು ನಿಲ್ಲಿಸಿದುದರ ನಿಷೇಧಾರ್ಥವಾಗಿ ಬಳ್ಳಾರಿ ಹಿಂದೂಮಹಾಸಭೆಯವರು ಏಸಾಚರಣೆ ಮಾಡಿದರು. ೨೫ ನೆಯ ತಾ. ಮುಖ್ಯನಾಯಕರ ಬಂಧನಕ್ಕಾಗಿ ನಗರದ ಹಿಂದೂ ಅಂಗಡಿಗಳೆಲ್ಲಾ ಮುಚ್ಚಲಾಗಿದ್ದವು. ಸಾಯಂಕಾಲ ಸಾರ್ವಜನಿಕಸಭೆಯೊಂದು ಸಾಂಬಮೂರ್ತಿ ಮೈದಾನದಲ್ಲಿ ಶ್ರೀ ನಗರೂರು ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಕೂಡಿ ನಿಷೇಧವರ ನಿರ್ಣಯವು ಸರ್ವಾನುಮತವಾಗಿ ತೀರ್ಮಾನಿಸಲ್ಪಟ್ಟಿತು. ಭಾಷಣ ಸ್ವಾತಂತ್ರ್ಯದ ವಿಷಯಕ್ಕೆ ಶ್ರೀ ಹನುಮಂತರಾವ್, ಪಪಕ್ಷರಶಾಸ್ತ್ರಿಗಳು ವೆಂಕೋಬರಾವ್, ರಾಜಗೋವಾಲರೆಟ್ಟಿಯವರು ಉಚಿತ ಭಾಷಣಗಳನ್ನು ಮಾಡಿದರು. ಹಿಂದೂಮಹಾಸಭಾಧ್ಯಕ್ಷರಾದ ಸಾವರ್ಕರರ ಭಾಷಣವನ್ನು ಹನುಮಂತರಾಯರು ಓದಿದರು.

ಸದ್ಯದ ರಾಜಕೀಯ ಪರಿಸ್ಥಿತಿ:—

ಮೈಸೂರಿನ ಶ್ರೀ ಕೆ. ಚಂಗಲರಾಯರೆಡ್ಡಿಯವರು ಶ್ರೀ ಮರಿಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕಳೆದವಾರ ಸಾಂಬಮೂರ್ತಿ ಮೈದಾನದಲ್ಲಿ ಸದ್ಯದ ರಾಜಕೀಯ ದಮೇಲೆ ಉಪನ್ಯಾಸನಿತ್ತರು.

ಜಿಲ್ಲಾ ಹಿಂದೀ ಪ್ರೇಮೀ ಮಂಡಲ

ಈ ಸಂಸ್ಥೆಯ ಆಶ್ರಯದಲ್ಲಿ ಉಚಿತ ಪುಸ್ತಕ ಭಂಡಾರ ಮತ್ತು ವಾಚನಾಲಯಕ್ಕಾಗಿ ಹಿಂದೀ ಮಂದಿರದ ಪ್ರಾರಂಭೋತ್ಸವನವು, ಮೈಸೂರಿನ ಶ್ರೀ ಚಂಗಲರಾಯರೆಡ್ಡಿಯವರಿಂದ ನೆರವೇರಿಸಲ್ಪಟ್ಟಿತು. ಸಾಯಂಕಾಲ ಮ್ಯು ಹೈಸ್ಕೂಲಿನಲ್ಲಿ ಉತ್ತೀರ್ಣ ಬಾಲಕರಿಗೆ ಪ್ರಮಾಣ ಪತ್ರಗಳನ್ನು ಶ್ರೀ ದೇವದೂತ ವಿದ್ಯಾರ್ಥಿಯವರು ಹಂಚಿದರು. ಅರಾತ್ರಿ ಭೋಜನದ ವಿಪ್ಪಾಟಿದ್ದಿತು.

ರೂದರ್ ಫರ್ಡರವರ ಭೇಟಿ:—

ಮದ್ರಾಸ ಗವರ್ನರ ಸಲಹೆಗಾರರಾದ ಮಿ॥ರೂದರ ಫರ್ಡರವರು ಕಳೆದವಾರ ಬಳ್ಳಾರಿಗೆ ಭೇಟಿಇತ್ತರು. ಮುನಿಸಿಪಲ್ ಭವನದಲ್ಲಿ ಅವರಿಗೆ ಒಂದು ವಿಸ್ತಾರವಾದ ಅರ್ಪಿತವಾಗಿ ಟಾರರಸ್ತೆ, ನೀರಿನಸೌಕರ್ಯ, ವಿದ್ಯುತ್ಶಾಕ್ತಿ, ಮುಸ್ಲಿಂ ಹೈಸ್ಕೂಲ್‌ಗಳಿಗಾಗಿ ಸಾಲವು ಬೇಡಲಾಯಿತು. ಮಿ॥ರೂದರಫರ್ಡರು ಉಚಿತ ಉತ್ತರ ಕೊಟ್ಟು ಪ್ರತ್ಯೇಕವಾಗಿ ಮುಸಲ್ಮಾನರಿಗೆ ಹೈಸ್ಕೂಲ್ ಸಾಧ್ಯವಿಲ್ಲೆಂದೂ ಇವರು ಹೈಸ್ಕೂಲಿನಲ್ಲೇ ಉರ್ದೂಶಿಕ್ಷಣಕ್ಕೆ ವಿಪರ್ಡಿಸಬಹುದೆಂದೂ ಅಭಿಪ್ರಾಯ ಕೊಟ್ಟರು. ಸಾಯಂಕಾಲ ಕಲೆಕ್ಟರರವರ ಅಧ್ಯಕ್ಷತೆಯಲ್ಲಿ ವಾರ್ಡಲಾಭವನದಲ್ಲಿ ಯುದ್ಧಕ್ಕೆ ಸಹಕಾರ ಒದಗಿಸುವ ಸಲುವಾಗಿ ಭಾಷಣಕೊಟ್ಟರು.

ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನವು

ಮೈಸೂರಿನಲ್ಲಿ ದಿಶಂಬರ್ ಕೊನೆಯವಾರ ಬಳ್ಳಾರಿಯ ಶ್ರೀ ಗುರು ಭಾಸ್ಕರಾಚಾರ್ಯ ರಾಮಚಂದ್ರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರೂ ಇತರ ಮಹಾಶಯರೂ ಆಯುರ್ವೇದದ ಮಹತ್ವದಮೇಲೆ ಭಾಷಣಕೊಟ್ಟರು.

ಗ್ರಾಮೋದ್ಯೋಗಿಗಳನ್ನು ಕೆಲಸದಿಂದ ತೆಗೆಯುವ ವಿಷಯ

ಮದ್ರಾಸ್ ಪ್ರಾಂತ್ಯದ ಗ್ರಾಮೋದ್ಯೋಗಿಗಳ ಶಾಸನಕ್ಕೆ ಈ ಕೆಳಗಿನ ವಾಕ್ಯಗಳು ಜೋಡಿಸಲ್ಪಟ್ಟಿವೆ. "ರಾಜಕೀಯ ಅಪರಾಧಕ್ಕಾಗಿ 6 ತಿಂಗಳಿಗಿಂತಲೂ ಹೆಚ್ಚಿಗೆ ಶಿಕ್ಷೆಯಾಗುವ ಕಾರಣ ಗ್ರಾಮೋದ್ಯೋಗಿಗಳನ್ನು ಕೆಲಸದಿಂದ ನಿವೃತ್ತರನ್ನಾಗಿ ಮಾಡಬೇಕೆಂಬುದು ಕ್ರಿಮಿನಲ್ ಅಪರಾಧಕ್ಕಾಗಿ ಶಿಕ್ಷೆತರಾಗುವುದರಿಂದಲೂ ಕೆಲಸಕ್ಕೆ ಅನರ್ಹರನ್ನಾಗಿ ಮಾಡುತ್ತದೆ.

THE NAVA BHARAT
ನವ ಭಾರತ
ಸಂಪಾದಕ-ಟಿ.ಪಿ.ಕೇತವರಾವ್

4—1—1942

ಅಖಿಲಭಾರತ ಹಿಂದೂಮಹಾ ಸಭೆ.

ಕಾಂಗ್ರೆಸ್ ಸಂಸ್ಥೆಯು ಪ್ರತಿವರ್ಷವೂ ತನ್ನ ಅಧಿವೇಶನಗಳನ್ನು ಇಂಡಿಯಾದ ವಿವಿಧ ನಗರಗಳಲ್ಲಿ ನಡೆಸುವಂತೆ ಹಿಂದೂ ಮಹಾಸಭೆಯೂ ತನ್ನ ಅಧಿವೇಶನಗಳನ್ನು ನಡೆಸುವುದು ಇವರ ರಾಜಕೀಯ ದೃಷ್ಟಿಕೋನಗಳಿಗೂ ಕಾಂಗ್ರೆಸ್‌ಗೂ ಬಹಳ ತ್ಯಾಗವುಂಟು ಮುಸ್ಲಿಂರೀಗು ಮುನ್ಸ್ಲಿಮರ ಅಭಿವೃದ್ಧಿ ಹಿತಕ್ಕಾಗಿ ಶ್ರಮಿಸುವುದೆಂದು ಹೇಳಿಕೊಳ್ಳುವಂತೆ ಹಿಂದೂ ಮಹಾಸಭೆಯಾದರೂ ಭಾರತದಲ್ಲಿನ ಹಿಂದೂಗಳ ಹಿತರಕ್ಷಣೆ ಮಾಡುವುದೆಂದು ಗೊತ್ತಾಗಿದೆ ಈ ವರ್ಷದ ಅಧಿವೇಶನವು ಬೀಹಾರದೇಶದ ಬಾಗಲ್ಪುರ ನಗರದಲ್ಲಿ ನಡೆಯಬೇಕೆಂದು ಹೋದವರ್ಷ ನಡುವಾದಲ್ಲಿನ ಅಧಿವೇಶನದಲ್ಲಿಯೇ ನಿಶ್ಚಿತವಾಗಿದ್ದಿತು.

ಆದರೆ ಸರಕಾರದವರು ಮುಸಲ್ಮಾನರ ಬಕ್ರೀದ್ ಹಬ್ಬವು ಆಕಾಲಕ್ಕೆ ಇರುವುದರಿಂದ ಹಿಂದೂ ಮಹಾಸಭೆಯು ಕೂಡಬಾರದೆಂದು ಪ್ರತಿಬಂಧಕಾಜ್ಞೆಗಳನ್ನು ಹೊರಡಿಸಿದರು. ಮುಸಲ್ಮಾನರ ಚಳವಳಿಗೇ ಹೆಚ್ಚಿಗೆ ಪ್ರೋತ್ಸಾಹ ಕೊಟ್ಟು ಹಿಂದುಗಳನ್ನು ತಿರಸ್ಕಾರದಿಂದ ಕಾಣುವರೆಂಬ ಅಪರಾಧವು ಬ್ರಿಟಿಷ್ ಸರಕಾರದಮೇಲೆ ಹೊರಿಸಲ್ಪಟ್ಟಿದ್ದು ಸತ್ಯವೆಂದು ಈ ಘಟನೆಯಿಂದ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿ ಒಡೆದು ಕಾಣುತ್ತಿಲಿದೆ. ಬಾಗಲ್ಪುರ ನಗರದಲ್ಲಿ ಶೇಕಡ ೧೦ ಮುಸಲ್ಮಾನರಿರುವರು. ಅವರು ಹಿಂದೂಗಳ ಆಕ್ಷೋತ್ತರಗಳಿಗೆ ವಿರುದ್ಧರಿದ್ದಿಲ್ಲೆಂಬುದು ಪರತಾಳದಲ್ಲಿ ಭಾಗವಹಿಸಿದ ಅವರ ವರ್ತನದಿಂದಲೇ ಚೆನ್ನಾಗಿ ವ್ಯಕ್ತವಪಡುತ್ತದೆ. ಅಧಿವೇಶನಗಳ ಕಾಲದಲ್ಲಿ ತುಂಟತನ ನಾಡುವ ಪ್ರವೃತ್ತಿಯುಳ್ಳ ಜನರು ಎಲ್ಲಾ ಜಾತಿಗಳಲ್ಲಿ ಇರುವರು. ಅಂಥ ಪರರನ್ನು ಇಂಥಾಬಲಾಢ್ಯ ಸರಕಾರವು ಪ್ರತಿಬಂಧಿಸಲಾಗುವುದಿಲ್ಲೆಂದರೆ ನಾಚಿಕೆಗೇಡು ಮಾತಾಗುವುದು. ಸಾಧಾರಣವಾಗಿ ಹಿಂದೂ ಮಹಾಸಭೆಯ ಅಧಿವೇಶನಕ್ಕೆ ಎಷ್ಟು ಪೋಲೀಸು ಸಿಬ್ಬಂದಿಯು ಬೇಕಾಗುತ್ತಿತ್ತೋ ಅದರ ೫-೬ ರಷ್ಟು ಈಗ ಬೇಕಾಯಿತು.

ಅಧ್ಯಕ್ಷರಾದ ಸಾವರ್ಕರ್, ಡಾಕ್ಟರ್ ಮುಂಜೆ ವರದರಾಜುಲುನಾಯಿಡು ಮತ್ತು ಬಂಗಾಳದ ಡಾ ಶಾಮಪ್ರಸಾದ ಮುಖರ್ಜಿಯವರನ್ನು ಹಿಂದೂ ಮಹಾಸಭೆಯು ನೂರಾರು ಪ್ರತಿನಿಧಿಗಳನ್ನೂ ಬಂಧಿಸಿ ಭಾರತದ ಹಿಂದೂ ಜನಾಂಗದಲ್ಲಿ ಅಶಾಂತಿ ಕಳವಳವನ್ನು ನಾಡಿದ ಬಿಹಾರ ಸರಕಾರದ ಸಲಹೆಗಾರರನ್ನು ಖಂಡಿಸದಿರುತಾವೆಯೆ ಸರಕಾರದ ಈ ಕೃತ್ಯವನ್ನು ಮಹಾತ್ಮಾ ಗಾಂಧಿಯವರೂ ಬಾಬೂ ರಾಜೇಂದ್ರಪ್ರಸಾದರೂ ಖಂಡಿಸಿ ಮಹಾಸಭೆಯು ರಾಜಕೀಯವು ಭಿನ್ನವಿದ್ದರೂ ಅದಕ್ಕೆ ಬಾಳಿನ ಸ್ವಾತಂತ್ರ್ಯವನ್ನು ಕೊಡುವುದು ಅಗತ್ಯವೆಂದು ಸಾರಿರುವರು ಯುದ್ಧಕಾಲದಲ್ಲಿನ ಈ ನೀತಿಯಿಂದ ಸರಕಾರದ ಕೃತಿಯ ಬಗ್ಗೆ ಅಪಹ್ಯವು ಹೆಚ್ಚುವುದೆಂದು ನನ್ನ ಅಭಿಪ್ರಾಯ

ಹೈದರಾಬಾದಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ.

26 ನೇ ಅಧಿವೇಶನದಲ್ಲಿ ಶ್ರೀ ಕೃಷ್ಣಶಾಸ್ತ್ರಿಗಳ ಭಾಷಣದ ಸಾರಾಂಶ.

ಮೈಸೂರು ಮಹರಾಜಾ ಕಾಲೇಜಿನ ಕನ್ನಡ ಪ್ರೊಫೆಸರ್ ಆದ ಶ್ರೀ ಎ ಆರ್. ಕೃಷ್ಣಶಾಸ್ತ್ರಿಯವರು ಈ ಸಲದ ಅಧ್ಯಕ್ಷರಾಗಿ ವಿಚಾರಪೂರ್ಣವಾದ ಭಾಷಣವನ್ನು ಕೊಟ್ಟರು.ಹೈದರಾಬಾದ ಪ್ರಾಂತ್ಯದಲ್ಲಿ ೩ ನೆಯಸಲ ಕೂಡುವ ಈ ಪರಿಷತ್ತಿಗಾಗಿ ಪ್ರಾಂತ್ಯದ ಕನ್ನಡಿಗರನ್ನು ಅಭಿನಂದಿಸಿದರು ಹೈದರಾಬಾದು, ಬೈಸೂರು, ಧಾರವಾಡ, ಮಂಗಳೂರುಗಳೆಂಬ ಭೇದವಿಲ್ಲದೆ ಕನ್ನಡಿಗರೆಲ್ಲ ಐಕಮತ್ಯವನ್ನು ಕಲ್ಪಿಸಿದ ಸಂಸ್ಥೆಯು ಕರ್ನಾಟಕ ಸಾಹಿತ್ಯ ಪರಿಷತ್ತು.

ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ಉಪಕಾರವಾಗುತ್ತಿದೆ. ನನ್ಮನ್ನು ನಾವು ತಿಳಿದುಕೊಳ್ಳಲು ಸಹಾಯಮಾಡಿದ್ದು ಇಂಗ್ಲಿಷ್ ನಮ್ಮಲ್ಲಿ ನವಜೀವನವನ್ನುಂಟುಮಾಡಿ ಸ್ವಹಸ್ತ ಪರಹಸ್ತಗಳಿಂದ ನಮ್ಮ ಕಣಜವನ್ನು ತುಂಬುವ ಸಂಪತ್ತುಗಳಿದ್ದು ಇಂಗ್ಲಿಷ್ ಅದರಿಂದ ಪಾಶ್ಚಾತ್ಯ ಮತ್ತು ಪ್ರಪಂಚಮೊತನೆ ಸುಲಭವಾಗಿ ವ್ಯವಹರಿಸಬಹುದು. ಆದರೂ ಕನ್ನಡನಾಡಿನಲ್ಲಿ ನೆಲಸಿರುವವರೆಲ್ಲ ಕನ್ನಡಕ್ಕಾಗಿ ದುಡಿಯಬೇಕು. ಮಾತೃಭಾಷೆಗೆ ಎರಡನೆಯ ಸ್ಥಾನ ಇಂಗ್ಲೀಷಿಗೆ ಮೂರನೆಯ ದನ್ನು ಕೊಡಬೇಕು. ಸಂಸ್ಕೃತದಿಂದ ನಮಗೆ ಸಂಸ್ಕೃತಿ ದೊರೆತಿದೆಯೆಂದು ಹೇಳುವುದನ್ನು ನಂಬಲಾರೆ ಭಾಷೆಗಿಂತಲೂ ಭಾವ ಮುಖ್ಯ ಹಿಂದಿಯ ಪ್ರಚಾರದಿಂದ ಕನ್ನಡದ ಏಳಿಗೆಗೆ ಕುಂದಾಗುತ್ತಲಿದೆ. ರಾಷ್ಟ್ರ ಭಾಷೆಯೆಂಬುದು ಆವಶ್ಯಕವೇ ಎಂಬುದು ನನಗೆ ಸಂದೇಹ. ತಮಿಳರು ನತ್ಯಾಗ್ರಹ ಮಾಡಿದರು. ಪ್ರತಿಭಟಿಸಿದರು, ಹಿಂದಿಯಿಂದ ಕನ್ನಡಕ್ಕೆ ಪ್ರಯೋಜನವಿಲ್ಲವೆಂದು ನಾನು ೧೦ ವರ್ಷಗಳಕಳಗೇ ಹೇಳಿದ್ದೇನೆ ಕನ್ನಡಕ್ಕೆ ಪ್ರಧಮ ಸ್ಥಾನವೂ ಪ್ರೋತ್ಸಹವೂ ಬೇಕು ಕನ್ನಡನಾಡಿನ ಶಿಕ್ಷಣವ್ಯವಸ್ಥೆಯಲ್ಲಿ, ಶಾಲಾ ಕಾಲೇಜುಗಳಲ್ಲಿ, ಇಂಗ್ಲಿಷ್ ಪಾರಮ್ಯವನ್ನು ಕಾಲಕಡಿಮೆಮಾಡಿ ಕನ್ನಡಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯುವಂತೆ ಮಾಡಬೇಕು. ವಿಜ್ಞಾನದ ವಿಷಯವು ಮುಖ್ಯವಾದದ್ದು ದೇವನಾಗರಿಗಿಂತ ಲೂರೋಮನ್ ಲಿಪಿಯಲ್ಲಿ ಹೆಚ್ಚಾದ ಸೌಕರ್ಯಗಳಿವೆ ಅದನ್ನು ಉಪಯೋಗಿಸಬಹುದು.

ಮೈಸೂರಿನ ಆಕಾಶವಾಣಿ ಪ್ರಯತ್ನವನ್ನು ಅಭಿನಂದಿಸಿ ಸರ್ ಅಕ್ಬರ್ ಹೈದರಿಯವರ ದಯದಿಂದ ಹೈದರಾಬಾದ್, ದೆಹಲಿ ಬ್ರಾಡಕಾಸ್ಟಿಂಗ್ ಕೇಂದ್ರಗಳಲ್ಲಿ ಕನ್ನಡಕ್ಕೆ ಹಿರಿಯಸ್ಥಾನ ದೊರೆಯಲಿ ಎಂದು ಹಾರೈಸಿದರು. ಇಲ್ಲಿಯವರೆಗೆ ಕನ್ನಡ ಚಲನಚಿತ್ರಗಳಲ್ಲಿ ಯಶಶ್ವಿಗಳಾದವರನ್ನೂ ಅಭಿನಂದಿಸಿದರು. ಸರಳ ಸಾಹಿತ್ಯದ ವಿಚಾರವೆತ್ತಿ ಸಾಮಾನ್ಯ ಜನರನ್ನು ಮೇಲಕ್ಕೆ ಎತ್ತುವುದು ಉದ್ದೇಶವಾಗಿರಬೇಕು.

ಕನ್ನಡಪತ್ರಿಕೆಗಳು ಶಬ್ದಸಂಪತ್ತಿಗೆ ಸಹಾಯಮಾಡಬಹುದು. ಅವರು ವ್ಯಾಕರಣರೀತ್ಯಾ ಭಾಷಾಶುದ್ಧಿಯನ್ನು ನೋಡುವುದು ಅನಾವಶ್ಯಕ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಶಾಸ್ತ್ರಗ್ರಂಥಗಳು ಕಡಿಮೆಯೆಂದು ಒಪ್ಪಿಕೊಳ್ಳಬೇಕು. ಆದರೆ ಕಾಲೇಜಿನಲ್ಲಿ ಕನ್ನಡವು ಭೋಧನಾ ಭಾಷೆಯೆಂದು ನಿರ್ಧಾರವಾಗಲಿರುವ ತಿಂಗಳಲ್ಲಿ ಒಂದು ವರ್ಷದಲ್ಲಿ ಬೇಕಾದ ಪಠ್ಯ ಪುಸ್ತಕಗಳು ಪ್ರಸಿದ್ಧವಾದಾವು. ಈ ವಿಷಯದಲ್ಲಿ ತಕ್ಕ ಸಂಶೋಧನಾಕಾ

[8ನೇ ಪುಟವನ್ನು ನೋಡಿರಿ.]

ಕೈಗಾರಿಕೆಗಳ ಅಭಿವೃದ್ಧಿ.

ಭಾರತ ಸರಕಾರವೂ ವಿರುದ್ಧವಾಗಿದೆ.

ಸರ್. ಎಂ. ವಿಶ್ವೇಶ್ವರಯ್ಯನವರ ಭಾಷಣ.

ಕಳೆದವಾರ ಬೆಂಗಳೂರು ವಾಣಿಜ್ಯ ಸಂಘದ ಆಶ್ರಯದಲ್ಲಿ ಮೈಸೂರು ದಿವಾನರ ಅಧ್ಯಕ್ಷತೆಯಲ್ಲಿ ಸರ್. ವಿಶ್ವೇಶ್ವರಯ್ಯನವರು ಕೈಗಾರಿಕೆಗಳ ಅಭಿವೃದ್ಧಿ ವಿಷಯಕ್ಕೆ ಭಾಷಣಕೊಟ್ಟರು.

ದೇಶದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಚಿಕ್ಕ ಪುಟ್ಟ ಕೈಗಾರಿಕೆಗಳನ್ನೂ ಸ್ಥಾಪಿಸಬೇಕು. ಸರಕಾರದವರೂ ಸಾರ್ವಜನಿಕರೂ ಏಕೀಭವಿಸಿ ದೂರಾಲೋಚನೆಯಿಂದ ಕೂಡಿ ರಾಷ್ಟ್ರದ ಸಂಪದ ವೃದ್ಧಿಗೆ ದುಡಿಯಬೇಕು.

,,ನಮ್ಮ ದೇಶವು ಸಾಂಪತ್ತಿಕ ದೃಷ್ಟಿಯಿಂದ ಕೇವಲ ಅನಾಗರಿಕ ಸ್ಥಿತಿಯಲ್ಲಿದೆ. ನಮ್ಮ ದೇಶದ ಬಡತನ ಊಹಿಸಲಸಾಧ್ಯವಾಗಿದೆ. ಹೊಟ್ಟೆಗಿಲ್ಲದ ಅಸ್ಥಿಪಂಜರಗಳ ಚಿತ್ರಗಳನ್ನು ನೀವು ನೋಡಿರಬೇಕು. ಈ ಬಡತನ, ಈ ಹಸಿವು, ಈನಿರುದ್ಯೋಗ ಹೋಗಬೇಕು. ಹೋಗಬೇಕಾದರೆ ದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಕೈಗಾರಿಕೆಗಳನ್ನು ಸ್ಥಾಪಿಸಿದರೆ ದೇಶದ ಸಂಪತ್ತು ವೃದ್ಧಿಯಾಗುತ್ತದೆ. ಜನರ ವರಮಾನದ ಮಟ್ಟನೇರುತ್ತದೆ. ಬ್ರಿಟ್ನ, ಅಮೆರಿಕ, ಜಪಾನ್ ದೇಶಗಳ ಕಡೆ ನೋಡಿದರೆ ಕೈಗಾರಿಕೆಗಳನ್ನು ಸ್ಥಾಪಿಸಿದ ದೇಶ ಹೇಗೆ ಸುಭಿಕ್ಷದಿಂದ ಜೀವನ ನಡೆಸಬಹುದೆಂದು ವ್ಯಕ್ತವಾಗುತ್ತದೆ."

"ಭಾರತದಲ್ಲಿ ಕೈಗಾರಿಕೆಗಳಿಂದ ಪ್ರತಿಯೊಬ್ಬರಿಗೂ ಸರಾಸರಿ ೧೫ ರೂಗಳ ವರಮಾನ ಬರುತ್ತಿದೆ. ಆದರೆ ಬ್ರಿಟನ್ನಿನಲ್ಲಿ ೫೦೦ ರೂಗಳ ವರಮಾನವಿದೆ. ಅಮೆರಿಕಾದಲ್ಲಿ ಸರಾಸರಿ ವರಮಾನವು ೮೫೦ ರೂಗಳು. **ಅಮೇರಿಕೆದಲ್ಲಿ ಕೈಗಾರಿಕೆಗಳ ಮೇಲೆ ಹಾಕಿರುವ ಬಂಡವಾಳ, ಸುಮಾರು ೨೫,೦೦೦ ಕೋಟಿ ರೂಗಳು. ಬ್ರಿಟನ್ನಿನಲ್ಲಿ ಹಾಕಿರುವ ಬಂಡವಾಳ ಸುಮಾರು ೬೦೦೦ ಕೋಟಿ ರೂಗಳು. ಇಂಡಿಯಾದಲ್ಲಿ ಹಾಕಿರುವ ಬಂಡವಾಳ ಸುಮಾರು ೬೦೦ ಕೋಟಿ ರೂಗಳು. ಈ ಮೂರು ದೇಶಗಳ ಜನಸಂಖ್ಯೆಯನ್ನು ಗಮನಿಸಿದರೆ, ಭಾರತವು ಕೈಗಾರಿಕೆಗಳ ವಿಚಾರದಲ್ಲಿ ಎಷ್ಟು ಹಿಂದೆ ಬಿದ್ದಿರುವುದು ವ್ಯಕ್ತವಾಗುವುದು."**

ಕಳೆದ ೨೫ ವರ್ಷಗಳಲ್ಲಿ ಜಪಾನ್ ಮತ್ತು ರಷ್ಯದೇಶಗಳು ಬಹಳ ಅಭಿವೃದ್ಧಿಗೆ ಬಂದಿವೆ. ರಷ್ಯ ದೇಶದಲ್ಲಿ ಕೈಗಾರಿಕೆಗಳು ಅತ್ಯುತ್ತಮ ರೀತಿಯಲ್ಲಿ ಮುಂದುವರಿದಿರುವ ಪ್ರಯುಕ್ತ ಇಂದು ಬಲಯುತವಾದ ಜರ್ಮನಿಯನ್ನು ಎದುರಿಸಲು ಸಾಧ್ಯವಾಯಿತು. ಒಂದು ದೇಶದ ಆತ್ಮರಕ್ಷಣೆಗೆ ಕೂಡ ಕೈಗಾರಿಕೆಗಳು ಅಭಿವೃದ್ಧಿಗೊಳ್ಳುವುದು ಅಗತ್ಯವಾದುದೆಂದು ಸೂಚಿಸಿದರು.

ವ್ಯವಸಾಯವನ್ನು ಮಾತ್ರ ನಂಬಿಕೊಂಡು ಕೂತಿದ್ದರೆ ನಾವು ಹೀಗೆ ನರಳುತ್ತಿರುವುದೇ ಖಂಡಿತ. ನಮ್ಮ ದೇಶದ ಜನರ ಸರಾಸರಿ ಆಯುಸ್ಸೆಷ್ಟು? ಬ್ರಿಟನ್ನಿನ ಜನರ ಆಯುಸ್ಸಿನಲ್ಲಿ ಅರ್ಧ. ಅದಕ್ಕೆ ಕಾರಣವೇನು? ಹೊಟ್ಟೆಗೆ ಹಿಟ್ಟಿಲ್ಲದಿರುವಿಕೆ, ಪುಷ್ಟಿಕರವಾದ ಆಹಾರವಿಲ್ಲದಿರುವಿಕೆ. ಸರಕಾರದವರು ಪ್ರೋತ್ಸಾಹ ಕೊಡಬೇಕು; ಜನರು ಮುಂದೆ ಬರಬೇಕು. ಎಲ್ಲ ಬಗೆಯ ಚಿಕ್ಕ ದೊಡ್ಡ ಕೈಗಾರಿಕೆಗಳನ್ನೂ ಸ್ಥಾಪಿಸಿ ಜನರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕು. ಇದ ಒಳ್ಳೆಯಕಾಲ; ಈ ಕಾಲ ಬಿಟ್ಟರೆ ಸರಿಯಾದಕಾಲ ನಮಗೆ ಸಿಗುವುದಿಲ್ಲ.

ಕಾಲ ಬಹಳ ವೇಗದಿಂದ ಓಡುತ್ತಿದೆ ಹಿಂದೆ ೩೦೦-೪೦೦ ವರ್ಷಗಳಲ್ಲಿ ಆದದ್ದು ಈಗ ೩೦-೪೦ ವರ್ಷಗಳಲ್ಲಿ ಆಗಿಹೋಗುತ್ತಿದೆ. ಇದು ವಿಜ್ಞಾನದ ಯುಗ; ಕೈಗಾರಿಕೆ ಯುಗ; ನಮ್ಮ ದೇಶಕ್ಕೆ ಬೇಕಾದ ಭೋಜ್ಯ, ಭೋಗ್ಯವಸ್ತುಗಳನ್ನೆಲ್ಲ ನಾವೇ ನಿರ್ಮಿಸಿಕೊಳ್ಳಬೇಕು. ನಮಗೆ ಬೇಕಾದುದಕ್ಕೆ ನಾವು ಬೇರೊಬ್ಬರಿಗೆ ಅಧೀನರಾಗಿರಲಾಗದು. ನಮ್ಮ ದೇಶದ ಕಚ್ಚಾ ಪದಾರ್ಥಗಳನ್ನು ರಫ್ತುಮಾಡಿ ಅವುಗಳಿಂದ ಸಿದ್ಧವಾದ ಕೈಗಾರಿಕೆಯ ಸಾಮಾನುಗಳನ್ನು ನಾವು ಮತ್ತೆ ಆಮದು ಮಾಡುತ್ತೇವಲ್ಲ? ಇಂತಹ ನಾಚಿಕೆ ಸಂಗತಿ. ನಾವೇ ಆ ಕಚ್ಚಾ ಪದಾರ್ಥಗಳಿಂದ ಸಿದ್ಧ ಪದಾರ್ಥಗಳನ್ನು ಮಾಡಿಕೊಂಡಿದ್ದರೆ ನಮಗೇ ಎಲ್ಲ ಲಾಭವೂ ಸಿಗುತ್ತಿತ್ತು. ನಮ್ಮ ಜನರಿಗೆ ಉದ್ಯೋಗ ಸಿಗುತ್ತಿತ್ತು.

ಇದು ಯುದ್ಧಕಾಲ; ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕಿದೇ ಒಳ್ಳೆಯಕಾಲ. ಮಾಡುವುದೇನು ಇಂಡಿಯಾ ಸರಕಾರದವರು ಕೈಗಾರಿಕೆಗಳನ್ನು ಸ್ಥಾಪಿಸಲು ಇಷ್ಟವಪಡುವುದಿಲ್ಲ. ಆದಕಾರಣ ಬೇಕೋ ಬೇಡವೋ ನೀತಿಯನ್ನು ಹಿಡಿದಿದೆ. ಸರ್ವೆಗಳು ನಡೆದದ್ದೂ ನಡೆದದ್ದೆ; ಸಮಿತಿಗಳೂ ಸಭೆಗಳೂ ವರದಿಗಳನ್ನು ಬರೆದದ್ದೂ ಬರದದ್ದೆ. ಆ ವರದಿಗಳೆಲ್ಲ ಕಸದ ಬುಟ್ಟಿಗೆ ನೇರುತ್ತಿವೆ. ಕೈಗಾರಿಕೆಗಳಿಗೆ ಸಾಕಾದ ಬೇಕಾದ ಸಂರಕ್ಷಣಾ ಶಾಸನಗಳಾಗಬೇಕಾಗಿವೆ. ಸುಂಕ ಸಾರಿಗೆಗಳ ನೀತಿ ರೀತಿಗಳಲ್ಲಿ ಬದಲಾವಣೆಗಳಾಗಬೇಕು. ಸಾರ್ವಜನಿಕರು ನಾಯಕತ್ವ ವಹಿಸಿ ಮುಂದೆ ಬರಬೇಕು. ಆರಂಭದೆಸೆಯಲ್ಲಿ ಕೊಂಚ ನಷ್ಟವಾದರೂ ಧೈರ್ಯದಿಂದ ಮುಂದುವರಿಯಬೇಕು. ದೂರ ದೃಷ್ಟಿಯಿಂದ ಕೈಗಾರಿಕೆಗಳನ್ನು ಸ್ಥಾಪಿಸಿದರೆ, ದೇಶ ಪರದೇಶಗಳಿಂದ ಯಂತ್ರೋಪಕರಣಗಳನ್ನು ಕೊಂಡುತಂದು ನಮ್ಮ ದೇಶದಲ್ಲಿ ಹಾಕಿದರೆ, ಒಳ್ಳೆ ವ್ಯಾಪಾರ ಕಾಲ. ಚನ್ನಾಗಿ ಲಾಭಸಂಪಾದನೆ ಮಾಡಬಹುದಾಗಿತ್ತು. ಸರಕಾರದವರಿಗಿಷ್ಟವಿಲ್ಲ; ಜನರಿಗೆ ಬೇಕಾಗಿಲ್ಲ. ಹೀಗಾಗಿ ನಮ್ಮ ದೇಶವು ಬಹಳ ಹಿಂದೆ ಬಿದ್ದಿದೆ. ನಾಗರೀಕ ದೇಶಗಳೊಂದಿಗೆ ಹೋಲಿಸಿ ನೋಡಿದ್ದಾದರೆ. ನಾವು ತೀರ ಅನಾಗರಿಕ ಜನರ ಹಾಗಿದ್ದೇನೆ.

ಭಾರತೀಯರ ಆಯುಸ್ಸು, ವಾರ್ಷಿಕ ವರಮಾನ, ಭಾರತವು ಕೈಗಾರಿಕೆಗಳಲ್ಲಿ ಹಾಕಿರುವ ಬಂಡವಾಳ, ಕೈಗಾರಿಕೆಗಳಿಂದ ಆ ದೇಶಗಳಲ್ಲಿ ಮಾಡುತ್ತಿರುವ ಸಂಪಾದನೆ ಇವುಗಳನ್ನೆಲ್ಲ ಹೋಲಿಸಿ ನೋಡಿದರೆ ನಮ್ಮ ಅಧೋಗತಿಯು ವಿಶದವಾಗುತ್ತದೆ. ನಾವೆಲ್ಲರೂ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಸಂಕಲ್ಪಮಾಡಿ, ಸಂಕಲ್ಪಸಾಧನೆ ಮಾಡಿದರೆ ನಾವು ಉಳಿಯುತ್ತೇವೆ. ಇಲ್ಲವಾದರೆ ನಾವು ಹೇಳಲು ಹೆಸರಿಲ್ಲದೆ ನಾಶವಾಗಿ ಹೋಗುತ್ತೇವೆ. (ಇಂಡಸ್ಟ್ರಿಯಲೈಜ್ ಆರ್ ಪೆರಿಷ್

ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಮೊದಲು ಸರಕಾರದವರು 'ಸರ್ವೆ' ಗಳನ್ನು ನಡಿಸಿ ಅಂಕಿ ಅಂಶಗಳನ್ನು ಸಂಗ್ರಹಮಾಡಬೇಕು. ಕೈಗಾರಿಕೆ ಕುರಿತೆ. ಕುರಿತೂ ನಿಖರವಾದರೂ ಸಿಕ್ಕುವುದಿ ಅಂಶಅಂಶಗಳ ಏಕಪ್ರಕಾರವಾ ಮಾತ್ರ ನಾವ ಕಂಡುಕೊಳ್ಳಲು ಇತರ ದೇಶಗಳ ದೇಶಗಳ ಅಂಕಿಗಸು ಹೊಸ ಹಾದಿ ದುವರಿಯಲು ಅ

ಸರ್ವೆ ನಡೆಸಿ, ರಿಕೆಗಳನ್ನು ಸ ರೂರಾಲೋಚನೆ ಸಬೇಕೆ. ಕಾರ್ಯ ಪ್ಪಡಿಸಿ, ನೇರ ಒಟ್ಟುಗೂಡಿಸಿ, ಕ್ಕಾ ಬೇಕು; ದೇಶದ ಕ್ಷೇ ಮಾರ್ಗದಲ್ಲಿ ಮುಂದ ಸರ್ವೆಗಳಾಗಬೇಕ ರ್ಯಗಳಾಗಬೇಕ ಬ್ಯಾಂಕು ಸಾಕಾ ಸುಂಕ ಸಾರಿಗೆ ಬೇಕು.

ಎಲ್ಲಕ್ಕಿಂತ ಅತ್ಯ ಗಳೂ ಸಾರ್ವಜನಿಕರ ಸಾಹಸದಿಂದ, ದೇಶಭ ಹಗಲಿರಳೂ ದೇಶ ಸ ಧ್ಧಾರಕ್ಕಾಗಿ ಆಲೋಚ ವಿಚಾರಪ ಡಬೇಕು, ಬೇಕು, ತಿಳುವಳಿಕೆ ಪೂರ್ಣಕ ಟೀಕೆ ಮಾಡುವು ಕ ಕಾರ್ಯಸಾಧಕ ಶಕ್ತಿ ಕು. ನಾವಸ್ಯು ಶಕ್ತಿ ನ್ಯಾಗಿ ಮಾಡಬೇಕಿ ಗಳಲ್ಲಿ ಚಿನ್ನದ ತಾಳಿ ಮಾಡಬೇಕು. ನಮ್ಮ ಜ ತುಂಬ ಅನ್ನ, ಸೌಖ್ಯ ನಂತೆ ಮಾಡಬೇಕ ಸುಖ, ಶಾಂತಿ"

ಪಂಪ ಸಹಸ್ರಾಬ್ದ

ದಿತಂಬರ್ 2[illegible]

ಧಾರ್ವಾಡ ಜಿಲ್ಲೆಯ ಆದಿ ಪಂಪ ಮಹಾಕವಿ ವರ್ಷದ ಮಹೋತ್ಸವ ವಿದ್ಯಾ ಪ್ರೇಮಿಗಳು ಸರ್ವ ಜನ ಕ್ಷೇಮದ

121

117

ಯುದ್ಧ ವಾರ್ತೆಗಳು.

ಹಾಂಕಾಂಗನ ಪತನ:—

ಬ್ರಿಟಿಷರ ಅಧೀನದಲ್ಲಿದ್ದ ಹಾಂಕಾಂಗದ್ವೀಪವು ಜಪಾನರ ವಶಕ್ಕೆ ಹೋಯಿತೆಂದು ಲಂಡನ್ನಿನ ವಸಾಹತು ಕಚೇರಿಯವರು ಪ್ರಕಟಿಸುತ್ತಾರೆ. ಡಿಸೆಂಬರ್ ೧೮ನೆಯ ತಾ. ದ್ವೀಪದ ಅನೇಕ ಭಾಗಗಳಲ್ಲಿ ಜಪಾನಿಯರು ಬಂದಿಳಿದರು ಆಗಲೇ ಅದರ ಆಶೆಯು ಮುಗಿದಂತೆ ಎಂದು ಭಾವಿಸಲಾಯಿತು. ಆದರೂ ಒಂದುವಾರದವರೆಗೆ ಇತೀಹಾಸ ಪ್ರಸಿದ್ಧವಾದ ಕದನ ನಡೆಸಿ ನೀರಿಗೆ ಕೊರತೆ ಬಂದಾಗ ಗನರ್ನರರು ದ್ವೀಪವನ್ನು ಜಪಾನರಿಗೆ ಒಪ್ಪಿಸಿದರು. ಸೈನಿಕರೂ ನಾಗರಿಕರೂ ಬಹಳ ಜನ ಹತರಾದರು.

ಸರವಾಕ್ ರಾಜಧಾನಿ:—

ಸರವಾಕ್ ದ್ವೀಪದ ರಾಜಧಾನಿಯಾದ ಕುರ್ಚಿಂಗನಲ್ಲಿ ಜಪಾನರು ಬಂದಿಳಿದಿದ್ದಾರೆ. ಅದರೊಡನೆ ನೇರವಾದ ಸಂಬಂಧ ತಪ್ಪಿಹೋಗಿದೆ.

ಮನಿಲಾ ಅರಕ್ಷಿತ ನಗರ:—

ಫಿಲಿಪೈನ್ ದ್ವೀಪಗಳಿಗೆ ರಾಜಧಾನಿಯಾದ ಮನಿಲಾ ನಗರವು ಅರಕ್ಷಿತ ನಗರವೆಂದು ಸಾರಲಾಗಿದೆ. ಅಲ್ಲಿಂದ ಮಿತ್ರ ಸೈನ್ಯಗಳೆಲ್ಲಾ ಬಿಟ್ಟು ಹೋಗಿವೆ. ಜಪಾನರು ಮನಿಲಾ ನಗರದ ಉತ್ತರಕ್ಕೆ ಬೇಸಿಗೆ ರಾಜಧಾನಿಯಾದ ಬಾಗಿಯೋ ನಗರವನ್ನು ಹಿಡಿದಿದ್ದಾರೆ. ಮುಖ್ಯ ರಾಜಧಾನಿಯಕಡೆ ಜಪಾನ್ ಸೈನ್ಯಗಳು ಸುಗ್ಗುತ್ತಲಿವೆ. ಫಿಲಿಪೈನ್ ಕ್ಷೇತ್ರದಲ್ಲಿ ಭಯಂಕರ ಯುದ್ಧವು ಸಾಗಿದೆ.

ರಂಗೂನ್ ಮೇಲೆ ಭಾಂಬುಗಳು:—

ಕಳೆದ ೩ ೦ ಗಳು ೨೩ ನೆಯ ತಾ. ಬರ್ಮಾ ರಾಜಧಾನಿ ರಂಗೂನ್ ಮೇಲೆ ನಡೆದ ಬಾಂಬು ದಾಳಿಯಲ್ಲಿ ಜಪಾನಿಯರ ೫೦-೬೦ ಬಾಂಬರ್ ವಿಮಾನಗಳು ಭಾಗವಹಿಸಿದ್ದವೆಂದು ಹೇಳಲಾಗಿದೆ. ಕೆಲ ಮನೆಗಳಿಗೂ, ನೆಲದಮೇಲಿದ್ದ ಆರ್. ಎ. ಎಫ್. ವಿಮಾನ ಪಡೆಯವರಿಗೂ, ಪೆಟ್ರೋಲಿಗೂ ಸ್ವಲ್ಪ ನಷ್ಟವಾಯಿತೆಂದೆ. ಶತ್ರು ವಿಮಾನಗಳಲ್ಲಿ ೧೦ ಸ್ವನ್ನು ಕೆಳಕ್ಕಿಳಿಸಲಾಯಿತಂತೆ. ರಂಗೂನಿನಿಂದ ೬೦೦ ಮಂದಿ ನುದ್ರಾಸಿಗೂ, ೨೧೦೦ ನುಂದಿ ಬಂಗಾಳಿಗಳು ಚಿಟಗಾಂಗಿಗೂ ಬಂದಿದ್ದರು.

ಜನರ ವಿಶ್ವಾಸವೇ ,

ನಮ್ಮ ಪ್ರಗತಿಯ ತಳಹಗಲ್ಲು!

ಅದನ್ನು ಯಾವಾಗಲು ಸಂಪಾದಿಸುತ್ತಿರುವುದೇ ನಮ್ಮ ಹೆಗ್ಗುರಿ.

ಒಳ್ಳೆಯರೀತಿಯಲ್ಲಿ ಬದುಕಬೇಕೆಂಬ ಆಶೆಯು ಪ್ರತಿ ಮಾನವನ ಧರ್ಮವಾಗಿರಬೇಕು. ಕುಟುಂಬ ರಕ್ಷಣೆಗೆ ಸಾಕಷ್ಟು ಆಸ್ತಿ ಏರ್ಪಾಟು ಮಾಡುವುದು ಪ್ರತಿಯೊಬ್ಬರ ಕರ್ತವ್ಯ.

— ಹಾಗಾದರೆ —

ಹಿಂದೂಸ್ಥಾನದಲ್ಲೇ ದೊಡ್ಡದಾದ, ಪ್ರಸಿದ್ಧವಾದ

ದಿ ಓರಿಯಂಟಲ್ (ಸ್ಥಾಪಿತ 1874)

ಕಛೇರಿಗೆ ಬನ್ನಿರಿ. ನಿಮ್ಮ ವರಮಾನಕ್ಕನುಸರಿಸಿ ಅನುಕೂಲವಾದ ವಿಮೆಯನ್ನು ಉಚಿತವಾಗಿ ಸೂಚಿಸುತ್ತೇವೆ.

ಒಟ್ಟು ಜಾರಿಯಲ್ಲಿರುವ ವಿಮೆ ಸುಮಾರು, ರೂ. 85 ಕೋಟಿ.

ವಾರ್ಷಿಕ ಆದಾಯ .... 5 ಲಕ್ಷ.

ದಿ ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ,
ಲೈಫ್ ಅಶೂರೆನ್ಸ ಕಂಪನಿ ಲಿಮಿಟೆಡ್.,
ಮುಖ್ಯ ಕಾರ್ಯಾಲಯ, **ಬೊಂಬಾಯಿ.**

ಬಳ್ಳಾರಿಯಲ್ಲಿ-ಇನ್ಸ್‌ಪೆಕ್ಟರ್, **312 ರೂಪರ್ಟಸ್ ಗೇಟ್,**

"ರಾಯಲ್" ಶಿನೆಮಾ ಭವನದಲ್ಲಿ

29 ನೆಯ ತಾ! ನಿಂದ ಪ್ರದರ್ಶಿಸಲಾಗುತ್ತಿರುವ

ಬೊಂಬಾಯಿ ಟಾಕೀಸಿನವರ

ಪುನರ್ಮಿಲನ.

ಸ್ನೇಹಪ್ರಭ, ಕಿಶೋರಿ ಸಾಹು, ಅಂಜಲಿದೇವಿ ಮತ್ತೆರಿ

ಮಹೋತ್ಸವ.

25 ನೆಯ ತಾ!!
ಲಕ್ಷ್ಮೀಶ್ವರದಲ್ಲಿ
ನಿಯ 1000 ನೇ
ನವು ನುಂಗಳೂರಿನ
ನ್ನು ಕಿಮ್ಮತ್ತಿನ್ನ
ನಡೆಯಿತು.

[5ನೇ ಪುಟದಿಂದ ಮುಂದುವರಿದಿದೆ.]

ರ್ಯವು ನಡೆಯುತ್ತಲಿದೆ. ಉಸ್ಮೇನಿಯಾ ವಿದ್ಯಾಲಯದ ಉದಾಹರಣೆ ಕೊಟ್ಟು ಕನ್ನಡವು ಸಾರ್ವತ್ರಿಕ ಭಾಷೆಯಾದರೆ ಜನರಿಗೆ ಕನ್ನಡದಲ್ಲಿ ಯೋಚಿಸುವ ಶಕ್ತಿ ಬರುತ್ತದೆ ಎಂದುಹೇಳಿದರು.

ಸಾಹಿತ್ಯ ವರಿಷತ್ತಿಗೆ ಮೈಸೂರು ಅರಸರ ಸರಕಾರದ ಸಹಾಯ ದೊರೆತಿವ್ವರಿಂದ ಇಷ್ಟು ಕಾರ್ಯವಾದರೂ ಆಯಿತು. ಈ ಸಂಸ್ಥೆಯು ಬೆಳೆಯ ಬೇಕಾದರೆ ಸಂಸ್ಥಾನಾಧಿಪತಿಗಳೂ ಸಾಮುಕಾರರೂ ಅದಕ್ಕೆ ಸಾಂವತ್ತಿಕ ಮತ್ತು ನೈತಿಕ ಬೆಂಬಲಗಳನ್ನು ಕೊಡಬೇಕು. ವರಿಷತ್ತೆಂಬ ಶಾರದೆಯ ದೇವಸ್ಥಾನಕ್ಕೆ ಕನ್ನಡ ಭಕ್ತರೆಲ್ಲಾ ಸಹಾಯ ಮಾಡಬೇಕು. ಸ್ತ್ರೀಯರನ್ನು ಸಂಬೋಧಿಸಿ ಶಿವಾಜಿಯನ್ನು ಸಾಕಿದವರು ನೀವು, ಪ್ರತಾಪಸಿಂಹನನ್ನು ಪೋಷಿಸಿದವರು ನೀವು, ಅದನ್ನು ನೀವು ಕಾಪಾಡಿದರೆ ಅದು ತಾಯಿನುಡಿಯಾಗಿ ಉಳಿಯುತ್ತದೆ, ಬೆಳೆಯುತ್ತದೆ, ಇಲ್ಲವಾದರೆ ಬಾಯಿಮಾತಾಗಿ ಅಳಿಯುತ್ತದೆ ಎಂದು ಅಭಿಪ್ರಾಯಪಟ್ಟರು.

ಬಳ್ಳಾರಿ ಚಲನಚಿತ್ರಗಳು.

ಕೃಷ್ಣಾ ಟಾಕೀಸಿನಲ್ಲಿ

ಖುಷಾಂಚಿ ನಡೆಯಲಿಕ್ಕೆ ಪ್ರಾರಂಭವಾಗಿ ಎರಡುವಾರಗಳಾಯಿತು. ಇದು ಪಾಂಜೋಲಿಯವರ ಸಾಂಘಿಕಚಿತ್ರ. ಫೋಟೋಗ್ರಫಿ, ಸಂಗೀತ, ವ್ಯಕ್ತಿಸೌಂದರ್ಯಕ್ಕೆ ಕೊರತೆಇಲ್ಲ. ಮಾಧುರಿಯು ಪ್ರಾಸ್ತಾವನ್ನು ಸಹಿಸಿದ ಸ್ತ್ರೀಯ ಗಾನವು ಮನಸೋಹಕವಾಗಿದೆ. ಪ್ರಾರಂಭದಲ್ಲಿನ ಹಾಸ್ಯಕ್ಕೆ ಸಂಬಂಧಿಸಿದ ದೃಶ್ಯಗಳು ಅಷ್ಟೇಸೊ ಅಸ್ಪ್ರಿಯವಾಗಿಲ್ಲ. ಶೃಂಗಾರವುಂಟು.

ಆದರೆ ಇದರಲ್ಲಿ ಬರುವ ನರ್ತನವು ಅಶ್ಲೀಲವಾದುದೆನ್ನಬೇಕು. ಭಾಷೆಯು ಉರ್ದುವಾದರೂ ಸಾಧಾರಣ ಭಾಷಾಜ್ಞಾನವಿದ್ದವರು ಅರ್ಥಮಾಡಿಕೊಳ್ಳುವಂತಿದೆ. ಭಾಷೆಯಲ್ಲಿ ರಸಿಕರಿಗೆ ಬೇಕಾದ ರಸವಿದೆ. ಆಪರೆ ಸಮಾಜಕ್ಕೆ ಬೇಕಾದ ನೀತಿಯ ಸಾರವಿಲ್ಲ. ಕಥೆಯ ಸಾರಾಂಶದಿಂದ ಕಲಿಯ ಬೇಕಾದುದು ಏನೂ ಇಲ್ಲದಿದ್ದರೂ ಆಧುನಿಕ ನಾಗರೀಕರಿಗೆ ಬೇಕಾದ ಸೌಂದರ್ಯವು ಇದರಲ್ಲಿರುವುದಕಾರಣ ಈ ವಾಕ್ಚಿತ್ರವು ಅಷ್ಟು ಜನಪ್ರಿಯವಾಗಿ ಬೊಂಬಾಯಿಯಲ್ಲಿ ೩೦ ವಾರ ಕಲ್ಕತ್ತೆಯಲ್ಲಿ ೨೭ ವಾರ ಮದ್ರಾಸಿನಲ್ಲಿ ೧೯ ವಾರ ಬಳ್ಳಾರಿಯಲ್ಲೂ ಕೂಡ ಇದು ಇನ್ನೂ ೨-೩ ವಾರಗಳು ನಡೆಯಬಹುದಾದ ಸೂಚನೆಗಳಿವೆ.

ರಾಯಲಸೀಮ ಬ್ಯಾಂಕು,
(ಲಿಮಿಟೆಡ್.)
ಮುಖ್ಯ ಕಾರ್ಯಾಲಯ, **ಬಳ್ಳಾರಿ.**

ಇಲ್ಲಿಯವರೆಗೆ ಆದ ಪ್ರಗತಿ.

ವಿವರಗಳು.	31-10-1940	30-11-1941
ಫಿಕ್ಸೆಡ್	ರೂ. Nil	90,930
ಚಾಲ್ತಿ	,, 3,173	20,994
ಸೇವಿಂಗ್ಸು	,, 1,231	18,368
ಇತರ	,, 40	781
ಸಾಲಗಳು.		
ಭಂಗಾರ	,, 520	27,478
ಮೂಲು	,, Nil	16,838
ಇತರ	,, Nil	6,181
ಇತರಆಸ್ತಿ.		
ಸರ್ಕಾರದ ಬಾಂಡುಗಳು	,, 13,300	32,476
ಬ್ಯಾಂಕುಗಳಲ್ಲಿರುವ ಹಣ	,, 32,502	23,904
ಕೈದ್ಯುಲ್ಲಿ ನಗದು	,, 5770	45,338

ಒಟ್ಟು ವ್ಯವಹಾರದ ಮೊತ್ತ.

31—10—40.	30—11—41.
ರು. 1,14,774-0-0	ರು. 2,16,664-00

ಶಾಖೆಗಳು:—
1 ತಿಮ್ಮನಚರ್ಲ 2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ

ಹೆಚ್. ಶೀತಾರಾಮರೆಡ್ಡಿ,, ಬಿ. ಎ. ಬಿ. ಎಲ್. (ಎಂ. ಎಲ್. ಎ.)
ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

'ರಾಯಲ್' ನಲ್ಲಿ

ಪುನರ್ಮಿಲನ:—

ಜಮೀಂದಾರ ಬಾಬೂ ಗೋಪೀನಾಥನ ಮಗನಾದ ಕೊಮಾರನು ತನ್ನ ತಂದೆಯು ಕುಡಿತದ ಕಾಲದಲ್ಲಿ ಮಾಡಿದ ಋಣಿಯನ್ನು ತನ್ನನೋಲೆ ಹಾಕಿಕೊಂಡು ವಿವಿಧ ಕೊಂದರೆಗಳನ್ನು ಅನುಭವಿಸಿ ಒಬ್ಬ ಭಿಕ್ಷುಕಿಯ ಮನೆಯಲ್ಲಿ ಆಶ್ರಯವನ್ನು ಹೊಂದಿಕೊನೆಯಲ್ಲಿ ಸುದುನೆಯಾಗುವನು. ಬೊಂಬಾಯಿ ಟಾಕೀಸಿನ ಸುಂದರಚಿತ್ರ. ಚಲನಚಿತ್ರದಲ್ಲಿ ಪ್ರಸಿದ್ಧಿಗೈದ ದೇವಿಕಾರಾಣಿಯೇ ಬೊಂಬಾಯಿ ಟಾಕೀಸಿನ ಮಾಲಿಕಳು. ಸ್ನೇಹಪ್ರಭ ಕಿಶೋರಿಸಾಹು ಇವರ ಸಂಗೀತ ಪ್ರಚನ್ನಾಗಿದೆ. ಪಾತ್ರಾಭಿನಯವು ಮೋಹಕವಾಗಿದೆ. ಜಾನಕೀದೇವಿಯ ಮುದುನೆಯನ್ನೂ ಮಾಡಿದ್ದರೆ ಕಥೆಯು ಪೂರ್ಣವಾಗುತ್ತಿತ್ತು. ಇದು ೨೯ನೆಯ ತಾರೀಖಿನಿಂದ ನಡೆಯುತ್ತಲಿದೆ.

ಬಳ್ಳಾರಿ ಪೇಟೆಧಾರಣೆ

2-1-42 ಶುಕ್ರವಾರ

ಭಂಗಾರ	ತೊಲ 1 ಕ್ಕೆ	47-0-0
ಸಾವರಿನ್	....	32-12-0
ಬೆಳ್ಳಿ	100 ತೊಲಗಳಿಗೆ	69-0-0

ಆಹಾರಸಾಮಗ್ರಿಗಳು

ಅಕ್ಕಿ	1 ರೂ. ಗೆ	4½ ರಿಂದ 6 ಸೇರು
ಬೇಳೆ	,, 5	,, 6 ಸೇರು
ಜೋಳ	,, 13	,, 14 ಸೇರು
ಗೋಧಿ	....	6 ಸೇರು
ಉಪ್ಪು	....	11 ಸೇರು
ಮೆಣಸಿನಕಾಯಿ	9 ಮಣ	25 ರಿಂದ 30
ಬೆಲ್ಲ	....	12ರಿಂದ 14 ರೂ.
ಸಕ್ಕರೆ (ನುಂಚ್ಕ)	9 ಮಣ	36 ರೂ.

ಮನಿಲಾ ಹೋಗುವುದು ಖಂಡಿತ?

ಜಪಾನೀ ಸೈನ್ಯಗಳು ಫಿಲಿಪೈನ್ ರಾಜಧಾನಿಯಾದ ಮನಿಲಾ ನಗರವನ್ನು ಸುತ್ತುಗಟ್ಟಿವೆಯೆಂದೂ ರಾಜಧಾನಿಯು ಜಪಾನರ ವಶವಾಗುವುದು ಖಂಡಿತವೆಂದೂ ಒಂದು ಸುದ್ದಿಯು ಹೇಳುತ್ತದೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ.

ಸದ್ಯಕ್ಕೆ ನೆರೆಮನೆಗೆ ಹೋದ ಜಿಲ್ಲಾ ಕಾಂಗ್ರೆಸ್ ಕಮಿಟಿಗಳ ಸಭಾಸದರೂ ಕಾಂಗ್ರೆಸ್ ಕಾರ್ಯಕರ್ತರೂ ಬಿಡುಗಡೆಯಾಗಿ ಬಂದಿರುವರು. ಸತ್ಯಾಗ್ರಹದ ಪೆಡಾಗಲೂ ಜಿಲ್ಲಾ ಕಾಂಗ್ರೆಸ್ ಕಮಿಟಿಗಳ ಕಾರ್ಯವು ಅಖಂಡವಾಗಿ ನಡೆಯುತ್ತ ಬಂದಿದೆ. ಬೆಳಗಾವಿ, ಧಾರವಾಡ ಉತ್ತರಕನ್ನಡ, ವಿಜಾಪೂರ, ಕೊಡಗು ಬಳ್ಳಾರಿ, ದಕ್ಷಿಣಕನ್ನಡ, ಜಿಲ್ಲೆಗಳಲ್ಲಿಯ ಕಾಂಗ್ರೆಸ್ ಕಮಿಟಿಗಳು ಕೆಲವು ಕಾಲದಿಂದ ರದ್ದುಗೊಂಡಿಟ್ಟು ಆ ಕಮೀಟಿಗಳ ಪರವಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಗಳ ಅಧ್ಯಕ್ಷರೇ ಕೆಲಸವನ್ನು ನೋಡುತ್ತಲಿರುವರು. ಸದ್ಯದ ಪರಿಸ್ಥಿತಿಯಲ್ಲಿ ಕಾರ್ಯಹಿತದ ದೃಷ್ಟಿಯಿಂದ ಈ ಕೆಳಗಿನಂತೆ ಮೇಲ್ಕಂಡ ಜಿಲ್ಲೆಗಳಲ್ಲಿ ನಡೆಸಬೇಕೆಂದು ಸೂಚಿಸುತ್ತೇವೆ.

೧ ಈ ಸೂಚನೆಯು ಮುಟ್ಟಿದ ೧೫ ದಿನಗಳಲ್ಲಿ ಜಿಲ್ಲಾ ಕಾಂಗ್ರೆಸ್ ಕಮೀಟಿಗಳ ಸಭಾಸದರ ವಿಶೇಷ ಸಭೆಯನ್ನು ಕರೆದು ಸದ್ಯಕ್ಕೆ ಜಿಲ್ಲಾ ಕಾಂಗ್ರೆಸ್ ಕಮೀಟಿಯ ಅಧ್ಯಕ್ಷರಿದ್ದವರು ಕೆಲಸ ನಡೆಸುವ ಕಾರ್ಯದ ವರದಿಗಳಿಂದಿಗೆ ರಾಜೀನಾಮೆ ಪತ್ರಗಳನ್ನು ಆ ಸಭೆಯ ಎದುರಿಗೆ ಇಡಬೇಕು. ವರದಿಯನ್ನೂ ರಾಜೀನಾಮೆಯನ್ನೂ ತಯಾರಿಸುವ ಕಾರ್ಯದಲ್ಲಿ ಮೊದಲಿನ ಅಧಿಕಾರಿಗಳು ಈಗಿನ ಅಧ್ಯಕ್ಷರಿಗೆ ಸಹಾಯಮಾಡಬೇಕು. ಮತ್ತು ಜಿಲ್ಲಾ ಕಾಂಗ್ರೆಸ್ ಕಮೀಟಿಗೆ ಸಂಬಂಧವಿಲ್ಲದ ಎಲ್ಲ ಕಾಗದಪತ್ರ ಹಾಗೂ ಹಣ ಹತ್ತರಿದ್ದವರು ಅವೆಲ್ಲವುಗಳನ್ನು ಈಗಿನ ಅಧ್ಯಕ್ಷರಿಗೆ ಕೂಡಲೇ ಒಪ್ಪಿಸಬೇಕು.

೨ ಸದ್ಯದ ಅನಿಶ್ಚಿತ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮೀಟಿಯಿಂದ ನಿಶ್ಚಿತ ಸೂಚನೆ ಬರುವವರೆಗೆ ಜಿಲ್ಲಾ ಕಾಂಗ್ರೆಸ್ ಕಮೀಟಿಗಳ ಕಾರ್ಯವನ್ನು ಜಿಲ್ಲಾಧ್ಯಕ್ಷರೇ ನಿರ್ವಹಿಸಬೇಕು.

೩ ಹೊಸದಾಗಿ ಸತ್ಯಾಗ್ರಹ ಮಾಡಲು ಬೇಕೆನ್ನುವವರು ತಾವು ಮಾಡುತ್ತಿರುವ ವಿಧಾಯಕ ಕಾರ್ಯದ ವರದಿಯನ್ನು ೧೫ ದಿನಗಳಿಗೊಮ್ಮೆ ಜಿಲ್ಲಾ ಕಾಂಗ್ರೆಸ್ ಕಮೀಟಿಗಳ ಮುಖಾಂತರವಾಗಿ ಪ್ರಾಂತಿಕ ಕಾಂಗ್ರೆಸ್ ಕಮೀಟಿಗೆ ಕಳಿಸಬೇಕು ಅವು ಮಹಾತ್ಮರಕಡೆಗೆ ಕಳಿಸಲ್ಪಡುವವು ಮಹಾತ್ಮರ ಅಪ್ಪಣೆ ಬಂದಮೇಲೆ ಸತ್ಯಾಗ್ರಹಿಗಳು ಸತ್ಯಾಗ್ರಹ ಮಾಡಬೇಕು.

S. V. Setty & Bros., Bangalore Road, Bellary.
ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

೪ ಈ ಮೊದಲು ಸತ್ಯಾಗ್ರಹ ಮಾಡಿದವರು ಮತ್ತೆ ಸತ್ಯಾಗ್ರಹವನ್ನು ಮಾಡಲಪೇಕ್ಷಿಸುತ್ತಿದ್ದಲ್ಲಿ ತಾವು ಸತ್ಯಾಗ್ರಹ ಮಾಡುವ ಕುರಿತು ಜಿಲ್ಲಾ ಮ್ಯಾಜಿಸ್ಟ್ರೇಟರಿಗೂ ಜಿಲ್ಲಾ ಕಾಂಗ್ರೆಸ್ ಕಮೀಟಿಗೂ ಪ್ರಾಂತಿಕ ಕಾಂಗ್ರೆಸ್ ಕಮೀಟಿಗೂ ತಿಳಿಸಿ ಆನಂತರ ಸತ್ಯಾಗ್ರಹ ಮಾಡಲು ಅಡ್ಡಿಇಲ್ಲ. ಸತ್ಯಾಗ್ರಹ ಮಾಡಿದರೂ ಅವರನ್ನು ಕೈದು ಮಾಡದೆ ಇದ್ದಲ್ಲಿ ಅವರು ಯಾವುದೊಂದು ವಿಧಾಯಕ ಕಾರ್ಯಕ್ರಮದಲ್ಲಿಯಾದರೂ ತೊಡಗಬೇಕು. ಅಥವಾ ಕಾಂಗ್ರೆಸಿನ ಯುದ್ಧವಿಷಯಕ ಧೋರಣೆಯ ಪ್ರಚಾರವನ್ನು ಮಾಡಬೇಕು.

೫ ಸತ್ಯಾಗ್ರಹಿಗಳನ್ನು ಹಿಡಿಯದೆ ಇದ್ದರೂ ತಮ್ಮ ಜಿಲ್ಲೆಗಳಲ್ಲಿ ಆಗುವ ಸತ್ಯಾಗ್ರಹವನ್ನು ಕುರಿತು ಈ ಮೊದಲಿನಂತೆಯೇ ಜಿಲ್ಲಾ ಕಾಂಗ್ರೆಸ ಕಮೀಟಿಗಳು ಕೋಷ್ಟಕ ತುಂಬಿ ಕಳಿಸಬೇಕು.

೬ ಮೇಲಿನ ಸೂಚನೆಗಳಂತೆ ಕಾರ್ಯವು ನಡೆದಬಗ್ಗೆ ಪ್ರಾಂತಿಕ ಕಾಂಗ್ರೆಸ್ ಕಮೀಟಿಗೆ ವರದಿಯನ್ನು ಕಳಿಸಬೇಕಾಗಿ ಬಿನ್ನಹ.

ದತ್ತಾತ್ರೇಯ ಕರಮರಕರ
ಅಧ್ಯಕ್ಷ
ಕ. ಪ್ರಾ. ಕಾ. ಸ.

ಶಿರಗುಪ್ಪ ತಾಲೂಕು
ಶೋರ್ಡು ಶಾಲೋಪಾಧ್ಯಾಯರ ಸಂಘ.

ಸಿರಗುಪ್ಪೆಯಲ್ಲಿ ಕೂಡಿದ ದಿಸಂಬರ್ 1941 ರ ಮಾಸಸಭೆಯಲ್ಲಿ ಈ ಕೆಳಗೆ ಕಾಣಿಸಿದ ತೀರ್ಮಾನಗಳಾದವು.

1 ಈಚೆಗೆ ವಿಧಿಸಿರುವ 4 ಪರೀಕ್ಷೆಗಳಲ್ಲಿ ಶಾಲೆಗಳು ತೃಪ್ತಿಪಡಿಸಲು 1942 ನೆಯ ಜೂ ಆಖೈರನವರಿಗಾದರೂ ಅವಧಿ ಕೊಡಬೇಕು.

2 ಆಹಾರಸಾಮಗ್ರಿಗಳ ಧಾರಣೆಯು ವಿಪರೀತವಾಗಿರುವಕಾರಣ ಉಪಾಧ್ಯಾಯರಿಗೆ ಕುಟ್ಟಿ ಭತ್ಯವನ್ನು ಕೊಡಬೇಕು.

3 ಮುಂಜೂರು ಹೊಂದಿದ ಶಾಲೆಗಳಲ್ಲಿ 18 ತಿಂಗಳು ಸರ್ವಿಸ್ ಮಾಡಿದ ಉಪಾಧ್ಯಾಯರ ಸರ್ಟಿಫಿಕೇಟ್ ಪೂರ್ಣ ಮಾಡಬೇಕು.

4 ಎಲ್. ಟಿ. ಮತ್ತು ಬಿ. ಇ. ಡಿಯಲ್ಲಿ ಉತ್ತೀರ್ಣರಾದವರ ಸರ್ಟಿಫಿಕೇಟ್ ಓದಿದ ಕಾಲೇಜುಗಳಲ್ಲೇ ಪೂರ್ಣವಾಗುತ್ತೆ. ಹಾಗೆಯೇ ಹೈಯರ್ ಮತ್ತು ಸೆಕಂಡರಿ ಗ್ರೇಡ್‌ನವರಿಗೂ ಉದಾರತೆ ತೋರಿಸಬೇಕು.

5 ಪತ್ರವ್ಯವಹಾರದ ಸಾಮಗ್ರಿಗಳು ಒಂದಕ್ಕೆ 4 ರಷ್ಟಾಗಿ ನಾವು ಪತ್ರವ್ಯವಹಾರವನ್ನು ಸರಿಯಾಗಿ ಸಕಾಲಕ್ಕೆ ಮಾಡಬೇಕಾಗಿರುವಕಾರಣ ಜಿಲ್ಲಾ ಬೋರ್ಡು ಅಧ್ಯಕ್ಷರು ಈಗಿರುವ ಕಂಟಿಂಜನ್ಸಿ ಅಲೋಯನ್ಸ್‌ನ್ನು ಎರಡರಷ್ಟಾದರೂ ಹೆಚ್ಚಿಸಬೇಕು.

6 ಶಾಲೆಗಳಿಗೆ ಬಾಲಕಿಯರೂ ದಾಖಲಾಗುತ್ತಿರುವುದರಿಂದ ಅವರ ಹಾಜರಿಯನ್ನು ಸರಿಯಾಗಿಡಲು ಅವರನ್ನು ನೋಡಿಕೊಳ್ಳಲು ಶಾಲೆಗಳಿಗೆ ಸ್ತ್ರೀವ್ಯವಸ್ಥಾಪಕರನ್ನು (Conductress) ಕೊಡಬೇಕು.

ಎ. ಅಂಬಾಜಿರಾವ್
ಕಾರ್ಯದರ್ಶಿ.

120

(3 ನೇ ಪುಟದಿಂದ ಮುಂದುವರಿದಿದೆ.)

ಕೈಗಾರಿಕೆಗಳು ದಿನ ದಿನಕ್ಕೆ ಅಭಿವೃದ್ಧಿ ಹೊಂದುತ್ತವೆ. ಮನಿಲಾ ನಗರವೇ ಇಡೀ ದ್ವೀಪದಲ್ಲಿಯ ವ್ಯಾಪಾರ ಕೇಂದ್ರವು. ಇಲ್ಲಿನ ಒಕ್ಕಲಿಗರು ತಮಗೆ ಬೇಕಾಗುವ ಧಾನ್ಯಗಳನ್ನು ಬೆಳೆಯುವದಲ್ಲದೆ ವರದೇಶಗಳಿಗೆ ಕಳಿಸುವದಕ್ಕಾಗಿಯೂ ಕೆಲ ಧಾನ್ಯಗಳನ್ನು ಬೆಳೆವರು. ವರದೇಶಗಳಿಗೆ ಕಳಿಸುವ ಧಾನ್ಯಗಳೆಲ್ಲ ಒಹುತರ ಅಮೇರಿಕನ್ನರ ಒಡೆತನದ ಹೊಲಗಳಲ್ಲಿಯೇ ಬೆಳೆಸಲ್ಪಡುವವು. ಸ್ಥಳೀಕರಿಗಾಗಿ ಬೆಳೆವ ಧಾನ್ಯಗಳಲ್ಲಿ ಭತ್ತವೇ ಮುಖ್ಯವಾದುದು. ಇಲ್ಲಿಂದ ವರದೇಶಗಳಿಗೆ ತೆಂಗಿನಕಾಯಿ, ಸಕ್ಕರೆ, ಕಾಫಿ, ಬತ್ತ, ಕೋಕೋ ಮುಂತಾದವು ಹೋಗುತ್ತವೆ. ಆ ಪ್ರದೇಶದ ಒಕ್ಕಲಿಗರು ಹಾಗು ಕೊಬ್ರಿ ಎಣ್ಣೆಯು ವರದೇಶಗಳಿಗೆ ಹೋಗುತ್ತವೆ. ಇದರ ಉತ್ಪತ್ತಿಯನ್ನು ದ್ವೀಪವು ಸ್ವಾರ್ಮ್ಯಾನಕ್ಕೆ ಸೊಪವಡಿದ್ದು ಜಪಾನದ ವಾಗ ಈಡಾಗ ಬೇಕಾಗಿತ್ತು. ಆದರೆ ಜಪಾನರು ಇಂಡೋ ಚೀನ ರಿಪಾನ ರಾಷ್ಟಗಳನ್ನಾಕ್ರಮಿಸಿದ್ದರಿಂದ ಫಿಲಿಪ್ಪಾಯಿನ್‌ಗಳ ಮೇಲೆಯೆ ದಾಳಿ ನಡಾಲತಕ್ಕಾದಾಯಿತು. ನೈಗಾಂಪದಿಂದ ಮನಿಲಾ ನಗರವು ೧೦೦ ಮೈಲುಗಳಿಗಿಂತ ಕಡಿಮೆ ಅಂತರದಲ್ಲಿದೆ.

ರಕ್ಷಣೆಯ ಏರ್ಪಾಡು.

ಕಳೆದ ವರ್ಷದವರಗೆ ಇಲ್ಲಿ ರಕ್ಷಣೆಯ ಸಿದ್ಧತೆ ಹೆಚ್ಚಗಿರಲಿಲ್ಲ. ಆದರೆ ಅನಂತರ ಯುದ್ಧ ಸಾಮಗ್ರಿಗಳು ಹಡಗ ತುಂಬಿ ಒಂದೇನವನೆ ಬರಹತ್ತಿದವು. ಯುದ್ಧಕ್ಕಾಗಿ ಹೊಸ ಹೊಸ ಸೈನಾಸಿಕ ರಚನೆಗಳು ಏರ್ಪಡಿಸಲ್ಪಟ್ಟವು. ಬಂದರದಲ್ಲಿ ೨೦ ವಿನಾಶಕೆಗಳು ಖಾಯಂ ಇದ್ದು ಹಲವು ಕಾವಲು ಕಾರ್ಯದಲ್ಲಿ ನಿರತವಾಗಿರುವವು. ಈ ವರ್ಷ ಪ್ರಾರಂಭಕ್ಕೆ ಸುಮಾರು ೧೦ ಸಾವಿರ ಅಮೇರಿಕನ್ ಸೈನ್ಯ ಇಲ್ಲಿ ಇತ್ತು. ಅನಂತರ ಮತ್ತೆವನ್ನು ಸೈನ್ಯ ಬಂದಿದೆಯೊ ತಿಳಿಯದು. ಸದ್ಯಕ್ಕೆ ನಡೆದ ಯುದ್ಧದಲ್ಲಿ ಯಾವಾಗ ದ್ವೀಪಗಳ ಮೇಲೆ ದಾಳಿಯಾಗುವದೊ ಎಂಬ ಭೀತಿಯಿಂದ ಅಮೇರಿಕೆಯವರು ಬಿಸ್ಕೊಂದು ವ್ಯವಸ್ಥೆಯನ್ನು ಇಲ್ಲ ಮಾಡಿರುವರು.

ಫಿಲಿಪ್ಪಾಯಿನ್‌ವು ಅಮೇರಿಕಕ್ಕೆ ನಿಷ್ಠವಾಗಿರುವದು. ಜನರಲ್ ಜನ್ಸಫ್ ಮ್ಯಾಕಾರ್ಥರ್ ಇವರು ಅತಿಪೂರ್ವ ಫಿಲಿಪ್ಪಾಯಿನ್ ಪಡೆಯ ಸೇನಾಪತಿಗಳಾಗಿರುವರು. ಫಿಲಿಪ್ಪಾಯಿನ್‌ದ ಸೇನಾಪತಿಯ ಕಡೆಗೆ ಇಡೀ ಅತಿಪೂರ್ವದ ಸೇನಾಧಿಪತ್ಯವನ್ನು ಒಪ್ಪಿಸಿದ್ದರಿಂದ ಅಲ್ಲಿನಜನರು ಒಳ್ಳೇ ಶೌರ್ಯೋತ್ಸಾಹದಿಂದ ಹೋರಾಡುತ್ತಿರುವರು. ಅಮೇರಿಕನ್ನರು ೪೦ ವರ್ಷಗಳ ಹಿಂದೆಯೆ ಫಿಲಿಪ್ಪಾಯಿನಕ್ಕೆ ಸ್ವರಾಜ್ಯ ಕೊಟ್ಟದ್ದು ಅಂತರ್‌ರಾಷ್ಟ್ರೀಯ ಸರಕಾರವನ್ನು ಕೇಳದೆ ಒಡಂಬಡಿಕೆ ಮುಂತಾದ್ದನ್ನು ಅದು ಮಾಡಿಕೊಳ್ಳದು. ೧೯೪೬ ಕ್ಕೆ ಈ ಮಧ್ಯಂತರ ಅವಧಿಯೂ ಮುಗಿದು ಅದು ಸಂಪೂರ್ಣ ಸ್ವತಂತ್ರ ವಾಗುವುದು. ಅನಂತರ ಅದು ವರದೇಶಗಳೊಡನೆ ತನ್ನ ಇಷ್ಟಾನಿಷ್ಟಗಳಿಗೆ ಬಂದಂತೆ ಸಂಬಂಧವನ್ನಿಟ್ಟುಕೊಳ್ಳಬಲ್ಲದು. ಆರ್ಥಿಕ ದೃಷ್ಟಿಯಿಂದ ನಲ್ಲ ಹಾನಿಯೆನಿಸಿದರೂ ಫಿಲಿಪ್ಪಾಯಿನ್ ಜನರು ಸ್ವಾತಂತ್ರ್ಯವನ್ನು ಬೇಡುತ್ತಿರುವರು. ನಮ್ಮದ ಕರಾರಿನಿಂದ ಅಮೇರಿಕನ್ನರು ಫಿಲಿಪ್ಪಾಯಿನ್ ಜೊಡನೆ ವ್ಯಾಪಾರ ಮಾಡುತ್ತಿರುವರು. ಅಮೇರಿಕೆಯು ಪ್ರತಿವರ್ಷ ೧೦ ಕೋಟಿ ಡಾಲರದಷ್ಟು ಸರಕುಗಳ್ನು ಫಿಲಿಪ್ಪಾಯಿನ್‌ವು ಸಾಮಾನ್ಯ ಅಭ್ಯೇಬೆಲೆಯ ಸರಕು ತರಿಸುತ್ತಿರುವವು. ಅಮೇರಿಕೆಯಿಂದ ಜನರ್, ಹಿಟ್ಟು, ಹಾಲು ಬಾಟ್ಲಿಗಳಲ್ಲಿ ತುಂಬಿದ ರಸ ಮುಂತಾದ್ದು ರಬ್ಬರ ಸಾಮಾನುಗಳು, ಟಾಯರ್, ಬಲೆಯುವ ಮತ್ತು ಮುದ್ರಣ ಕಾಗದ ಮುಂತಾದವುಗಳು ಬರುವವು. ಫಿಲಿಪ್ಪಾಯಿನ್‌ದಿಂದ ಅಮೇರಿಕೆಗೆ ಬರುವ ಸರಕುಗಳಿಗೆ ಹಾಗು ಅಮೇರಿಕೆಯಿಂದ ಫಿಲಿಪ್ಪಾಯಿನಗಳಿಗೆ ಹೋಗುವ ಸರಕುಗಳಿಗೆ ಜಕಾತಿ ಬೀಳುತ್ತಿರುವುದು ಇದರಿಂದ ಆರ್ಥಿಕ ಹಾನಿಯ ಭೀತಿಯುಂಟು ದಕ್ಷಿಣ ಪ್ಯಾಸಿಫಿಕ್ ಸಮುದ್ರದಲ್ಲಿರುವ ಬೇರೆ ಯಾವ ದ್ವೀಪದಲ್ಲಿಯು ಜೀವನದ ಮಟ್ಟಕ್ಕಿಂತ ನಾಲ್ಕುಪಟ್ಟು ಫಿಲಿಪ್ಪಾಯಿನ್‌ದ ವ್ರಜೆಗಳ ಜೀವನ ಮುಟ್ಟಿರುವದು. ಫಿಲಿಪ್ಪಾಯಿನದಲ್ಲಿ ದಿನಗೂಲಿ ಒಂದು ಪೆಸೊಇಲ್ಲ ಪೆಸೊ ಸೆಂಟು ಇರುವದು. ಸಾಧಾರಣವಾಗಿ ಕೆಲಸದ ಅವಧಿ ೮ ಗಂಟೆ ಮಾತ್ರ. ಕಬ್ಬು ಸಡುವನನಿಗೆ ಪ್ರತಿದಿನ ೫೦ ಸೆಂಟು ಕೂಲಿ ಸಿಕ್ಕುವದು. ಜಾವಾದಲ್ಲಿ ಇದೇ ಕೆಲಸ ಮಾಡುವನಿಗೆ ದಿನಕ್ಕೆ ೧೦ ಸೆಂಟು ಮಾತ್ರ ದೊರೆಯುವದು. ಫಿಲಿಪ್ಪಾಯಿನ್‌ದಿಂದ ಬರುವ ಸಕ್ಕರೆಗೂ ಜಾವಾ ಚೀನ ಮೊದಲಾದವುಗಳಿಂದ ಬರುವ ಸಕ್ಕರೆಯಷ್ಟೆ ಕರಕೊಡಬೇಕಾಗುವದರಿಂದ ಇಷ್ಟು ಹೆಚ್ಚು ದಿನಕೂಲಿ ಕೊಡುವದರಿಂದ ಅಲ್ಲಿಯ ಉದ್ಯೋಗದಲ್ಲಿ ಎಷ್ಟೊಂದು ಲಾಭ ಸಿಕ್ಕಬಲ್ಲದೆಂಬುದು ವಿಚಾರಿಸತಕ್ಕ ವಿಷಯವಾಗಿದೆ.

ಫಿಲಿಪ್ಪಾಯಿನದಲ್ಲಿ ಸಾಲ ಬಹಳಕಡಮೆ ಇಡೀ ಜಗತ್ತಿನಲ್ಲಿ ಇಷ್ಟು ಕಡಮೆ ಸಾಲವಿದ್ದ ದೇಶಗಳು ಬೇರೆ ಯಾವವೂ ಇಲ್ಲ. ಇಲ್ಲಿಯ ಜನಸಂಖ್ಯೆ ೧೯೩೮-೪೦ ಗಣತಿಯ ಪ್ರಕಾರ ೧೬೦ ಲಕ್ಷ ಇರುವದು ಇವರಲ್ಲಿ ೪೫೦೦ ಅಮೇರಿಕನ್ನರಿರುವರು. ಜಪಾನಿಗಳ ಸಂಖ್ಯೆ ೨೯ ಸಾವಿರ, (ಅದಕ್ಕೂ ಹೆಚ್ಚಾಗಬಹುದು.) ೧೩೦ ಸಾವಿರ ಚೀನಿಗಳಿರುವರು. ಇವರಲ್ಲಿ ೧೦೦ ಕ್ಕೆ ೩೧ ರಷ್ಟು ಚಿಕ್ಕತಕ್ಕಡಿ ಅಂಗಡಿಕಾರರಿದ್ದರೂ ಅವರು ೭೫ ರಷ್ಟು ವ್ಯಾಪಾರ ಮಾಡುತ್ತಿರುವರು. ೪೫೦೦ ಪ್ರೊಟಿಸ್ಟರಿರುವರು. ೨೦೦ ಕ್ರೈಂಡರು ೧೨೦೦೦ ಜರ್ಮನ್ನರಿದ್ದರು. ೨೦೦ ರಶಿಯನ್ನರು ೨೦೦ ಜಪ್ಪೆರು ಇದ್ದದಲ್ಲವೆ ಸ್ವೀಡನ್ ಮೊದಲಾದವುಗಳ ವಿಶ್ರಣ ೫೦೦೦ ಜನರದಿದೆ. ಫಿಲಿಪ್ಪಾಯಿನ್ ಶಾಲೆಗಳಲ್ಲಿ ೩೦ ಲಕ್ಷ ಮಕ್ಕಳು ಇಂಗ್ಲಿಷ ಕಲಿಯುತ್ತಿರುವರು. ಅಮೇರಿಕೆಯ ಮಾದರಿಯ ೫೫೦೦ ಶಾಲೆಗಳವೆ ಇಲ್ಲಿಯ ಶಾಲೆಗಳು ಬಹಳ ಸ್ವಚ್ಛ ಇರುವವು.

ಇಲ್ಲಿ ಸುಮಾರು ೪೦೦ ಸಿನೇಮಾ ಥೇಟರಗಳು, ೪೦ ಸಾವಿರ ರೇಡಿಯೋ, ಸುಮಾರು ೩೦ ಸಾವಿರ ರೇಡಿಯೊ ರಜಿಸ್ಟರಕ್ಕೆ ಹತ್ತಿದವು ಸುಮಾರು ೬೦ ಸಾವಿರ ಮೋಟರುಗಳು ೧೫೦೦ ಟ್ರಕ್ಕುಗಳು ಇರುವವು. (ಕರ್ಮವೀರ)

"ಖಜಾಂಚಿ" ಕೃಷ್ಣಾ ಟೀಕೆಸದಲ್ಲಿ ತೋರಿಸಲ್ಪಟ್ಟ ವಾಕ್ಚಟಿ.

ಚರ್ಚಿಲ್ ರೂಸವೆಲ್ಟರ ಭೇಟಿ:-

ಬ್ರಿಟಿಷ ಪ್ರಧಾನಮಂತ್ರಿ ಚರ್ಚಿಲರು ಅಮೇರಿಕಾಕ್ಕೆ ಹೋಗಿ ರೂಸವೆಲ್ಟರೊಡನೆ ಯುದ್ಧ ವಿಷಯಗಳನ್ನು ಕುರಿತು ಚರ್ಚಿಸುತ್ತಲಿರುವರು. ಈ ನಿಮಿತ್ತೆಯ ಸ್ಥಲವಾಗಿ ಮಿತ್ರ ರಾಷ್ಟ್ರಗಳಸ್ಥಿತಿಯು ಬಲಗೊಂಡಿದೆಯೆಂದು ಹೇಳಲಾಗಿದೆ.

ಉಪಾಧ್ಯಾಯರಿಗೆ ಪ್ರಾಥಮಿಕ ಪಾಠಪಟ್ಟಿಯ ಸೂಚನೆಗಳು.

(ಕಳೆದಪಾರದಿಂದ ಮುಂದುವರಿದುದು)

ಒಟ್ಟಾರೆ ಹೇಳುವುದಾದರೆ ಮಕ್ಕಳ ಮಾತುಗಳ ಕ್ರಮವನ್ನು ತಿದ್ದುವ ಭರದಲ್ಲಿ ಅವು ಅರ್ಥಗರ್ಭಿತವಾಗಿದ್ದು ಅವುಗಳ ತಕ್ಕ ರೂಪಗಳನ್ನು ಜಾಗ್ರತೆಯಿಂದ ಜೋಪಾನಮಾಡಬೇಕು ಎಂಬುದನ್ನು ಮರೆಯಬಾರದು. ಶಬ್ದಗಳ ಸಂಗ್ರಹವನ್ನು ಹೆಚ್ಚಿಸಲಿಕ್ಕೆ ಚಿತ್ರಗಳು ಅತ್ಯಂತ ಉಪಯುಕ್ತವಾದ ಸಾಧನಗಳು, ಬರೀ ತೋರ್ಪಡಿಕೆಗೆ ಬೇಕಾಗುವ ವಸ್ತುಗಳಲ್ಲ ಎಂಬುದನ್ನು ನೆನಪಿಸಲ್ಲಿಡಬೇಕು.

b) **ಓದು.** ಶಾಲೆಯಿಂದ ಹೊರಬಿದ್ದ ನಂತರ ಓದು, ಪ್ರಾಯಸ್ಥರ ಓದು ಹೆಚ್ಚಾಗಿ ಮೌನ ಓದು. ಬಾಯ್ದೆರೆ ಓದಿಗೂ ಮೌನ ಓದಿಗೂ ಅಗತ್ಯವಿರುವ ಅಭ್ಯಾಸಗಳೂ ಬೇರೆ ಬೇರೆ ರೀತಿಯವು. ಮೌನ ಓದಿಗೆ ಬೇಕಾದ ಅಭ್ಯಾಸಗಳಿಗೆ ಸರಿವಿರುದ್ಧವಾದ ಅಭ್ಯಾಸಗಳು ಬಾಯ್ದೆರೆ ಓದಿಗೆ ಬೇಕಾದಂಥವು. ತಕ್ಕ ಅಭ್ಯಾಸಮಾಡಿದರೆ, ಬಾಯ್ದೆರೆ ಓದಿನ ವೇಗಕ್ಕಿಂತ ಎಷ್ಟೋ ಹೆಚ್ಚು ವೇಗದಿಂದ ಮೌನ ಓದನ್ನು ಮಾಡಬಹುದು. ಅದಲ್ಲದೆ ಮೌನ ಓದಿನಿಂದ ಅರ್ಥವು ಮನಸ್ಸಿಗೆ ಹೊಳೆದಷ್ಟು ಕ್ಷುತ್ತನುವಾಗಿ ಬಾಯ್ದೆರೆ ಓದಿನಿಂದ ಆಗುವುದಿಲ್ಲ. ಓದುವ ವೇಗವೂ ಹೆಚ್ಚು, ಅರ್ಥವೂ ತಿಳಿದರೆ ಓದಿನಿಂದ ಸಂತೋಷವೂ ಹೆಚ್ಚುತ್ತದೆ.

ಈಗಿನ್ನೇಕೆ, ಬರೀ ಬಾಯ್ದೆರೆ ಓದಿಗೆ ಗಮನ ಕೊಡುವ ರೂಢಿಯು ಪ್ರಾಥಮಿಕ ಶಾಲೆಯ ಉದ್ದೇಶಕ್ಕೆ ವಿರುದ್ಧವಾಗಿದೆ. ಮೌನ ಓದಿನಿಂದ ದೊರೆಯುವ ಪ್ರಯೋಜನಕ್ಕಿಂತ ಬಾಯ್ದೆರೆ ಓದಿನ ಪ್ರಯೋಜನ ಕಡಿಮೆ ಎಂಬುದಕ್ಕೆ ಕೆಲವು ಕಾರಣಗಳು. 1. ಬಾಯ್ದೆರೆ ಓದು ನಿಧಾನವಾಗಿ ಶ್ರಮಪಟ್ಟು ಮಾಡುವಕೆಲಸ. ಸ್ನಾಯುಗಳು ಚಲಿಸುತ್ತ ಇರಬೇಕಾದುದರಿಂದ ಆಯಾಸ ಬಂಟಾಗುತ್ತದೆ. ಓದುವವನಿಗೆ ಸಂತೋಷವಾದರೆ ಈತರದ ಓದು ವಿರಾಮ ಕಾಲವೆಉಪಯೋಗಕ್ಕೆ ಬರುವುದಿಲ್ಲ.

2. ಬಾಯ್ದೆರೆ ಓದಿಗೆ ಬೇಕಾದ ಅಭ್ಯಾಸಗಳು ಮೌನ ಓದಿಗೆ ಬೇಕಾದ ಅಭ್ಯಾಸಗಳಿಗೆ ವಿರುದ್ಧವಾದವು. ವಿರುದ್ಧವಾದುವು; ಒಂದನ್ನು ತಡೆಯದೆ ಇನ್ನೊಂದನ್ನು ವೃದ್ಧಿಮಾಡುವುದು ಸಾಧ್ಯವಲ್ಲ. ಅದರಿಂದಾಗಿ ಎರಡು ವಿಧದಓದಿಗೆ ಬೇರೆ ಬೇರೆ ತರಬೇತಿ ಮಾಡಬೇಕಾಗುವುದು

3. ಪ್ರಾಯಸ್ಥರಿಗೆ ಬಾಯ್ದೆರೆ ಓದಿನ ಪ್ರಯೋಜನ ಬಹಳ ಕಡಿಮೆ. ಬಾಯ್ದೆರೆ ಓದನ್ನು ಬಿಟ್ಟುಬಿಡಬೇಕೆಂದು ಸೂಚನೆಯಲ್ಲ. ಅದರಿಂದ ಸ್ವಲ್ಪ ಪುಟ್ಟಿಗೆ ಪ್ರಯೋಜನವಿರುವುದರಿಂದ ಆಷ್ಟಕ್ಕೇನೇ ಅದಕ್ಕಾಗಿ ತರಬೇತಿ ಮಾಡಬೇಕು. ಬಾಯ್ದೆರೆ ಓದಿನ ಪ್ರಯೋಜನವೆಂದರೆ ಪುಗುವಿಗೆ ಹೊಸ ಶಬ್ದಗಳು ತಿಳಿದವೆಯೊ ಎಂದು ಸರಿ ನೋಡಲಿಕ್ಕೆ, ಮಗುವಿನ ಸಾಧಾರಣ ಜ್ಞಾನವನ್ನು ಪರೀಕ್ಷಿಸಲಿಕ್ಕೆ ಅದಕ್ಕಿರುವ ಹೊಡಕು (ಕಷ್ಟ) ತಿಳಿಯಲಿಕ್ಕೆ, ಹೊರತು ಪ್ರಾಯಕ್ಕೆ ಬಂದಮೇಲೆ ಅಗತ್ಯ ಬೀಳುವ ಓದಿಗಾಗಿ ತರಬೇತಿ ಮಾಡಲಿಕ್ಕಲ್ಲ. ಏಜನೆಯ ತರಗತಿಯಾಗುವುದರೊಳಗೆ ಕಣ್ಣಿನ ಚಲನೆಯನ್ನು ಸರಿಪಡಿಸಿಯೂ ಇತರ ತಕ್ಕ ಕ್ರಮಗಳನ್ನು ಅನುಸರಿಸಿಯೂ ಮೌನ ಓದಿನ ಅಭ್ಯಾಸವನ್ನು ಕಲಿಸುವುದು ಸಾಧ್ಯ.

C. **ಬರಿಹ.** ಬರಿಹವನ್ನು ಕಲಿಸುವಾಗ "ಬರಿಹಕ್ಕೆ ಸಿದ್ಧರಾಗುವಿಕೆ" ಎಂಬ ತತ್ವ ಒಂದಿದೆ ಎಂದು ಹೇಳಬೇಕಾಗಿದೆ. ಮಗುವಿಗೆ ಆರು ವರ್ಷ ಪ್ರಾಯವಾದೊಡನೆ ಈ ಸಿದ್ಧತೆ ಇರಲೇಬೇಕೆಂದಿಲ್ಲ. ಈ ಸಿದ್ಧತೆಗೂ ಬುದ್ಧಿವಂತಿಕೆಗೂ ಸಂಬಂಧವಿಲ್ಲ. ತನ್ನ ಸ್ನಾಯುಗಳ ಮೇಲೂ ನರಗಳ ಮೇಲೂ ಸ್ವಾಮಿತ್ವವಿರುವುದೇ ಸಿದ್ಧತೆ. ಆದುದರಿಂದೆ ಬರಿಹ ಕಲಿಸಲು ಪ್ರಯತ್ನಿಸಬೇಕಾದರೆ ಮಗುವು ಸಿದ್ಧವಿತೆಯೇ ಎಂಬುದನ್ನು ಪರೀಕ್ಷಿಸಬೇಕು. ಸಿದ್ಧವಿಲ್ಲದ ಮಗುವಿಗೆ ಒತ್ತಾಯಪಡಿಸಿ ಬರೆಯಲಿಕ್ಕೆ ಅಥವಾ ಬರೆದಿಟ್ಟ ಅಕ್ಷರಗಳ ಮೇಲೆ ತಿದ್ದಲಿಕ್ಕೆ ಹೇಳಿದರೆ ಶಾಲಾ ಕೆಲಸದ ಮೇಲೂ ಶಾಲೆಯ ಮೇಲೂ ಅನಾದರ ಹುಟ್ಟುತ್ತದೆ.

ಬರಿಹಕ್ಕೆ ಮಗುವು ಸಿದ್ಧವಿದೆಯೊ ಎಂಬುದನ್ನು ಪರೀಕ್ಷಿಸಲಿಕ್ಕೆ ಕೆಳಗೆ ಕೊಟ್ಟ ಕೆಲವು ಆಕೃತಿಗಳನ್ನು ಬೋರ್ಡಿನಲ್ಲಿ ಬರೆದು ಅವುಗಳ ನಕಲು ತೆಗೆಯಲು ಮಕ್ಕಳಿಗೆ ಹೇಳಬೇಕು; ನೋಡಿ ಬಿಡಿಸುವುದಲ್ಲದೆ ಸ್ಲೇಟಿನ ಮೇಲೆ ಬರೆದುದರ ಮೇಲೆ ತಿದ್ದುವುದಲ್ಲ. ಏಳು ಆಕೃತಿಗಳಲ್ಲಿ ಏದನ್ನಾದರೂ ಸಾಧಾರಣ ರೀತಿಯಲ್ಲಾದರೂ ಸರಿಯಾದ ಆಕೃತಿ ತೋರುವಂತೆ ಸ್ಪಷ್ಟವಾದ ಗೆರೆಗಳನ್ನು ಬರೆದರೆ ಕಲಿಯಿದೆರೆದನ್ನು ಬರೆಯಲು ಪ್ರಯತ್ನಿಸುತ್ತಿದ್ದರೆ ಮಗುವು ಬರಿಹಕ್ಕೆ ಸಿದ್ಧವಿದೆ ಎನ್ನಬಹುದು.

ಬರೆದುಕೊಟ್ಟ ಅಕ್ಷರಗಳ ಮೇಲೆ ಮಕ್ಕಳು ಕೈತಿದ್ದುವಂತೆ ಮಾಡಿ ಮಕ್ಕಳ ಸಮಯವನ್ನು ನಿರರ್ಥಕವಾಗಿ ಕಳೆಯುವುದು ತಪ್ಪು. ಪ್ರಕೃತಿಯ ಪರಿಪಾಕವೂ ಪ್ರಾಯವೂ ಒಟ್ಟಾಗಿ, ಬರಿಹಕ್ಕೆ ಅಗತ್ಯವಿರುವ ಸ್ನಾಯುಗಳ ಮತ್ತು ನರಗಳ ಮೇಲೆ ಸ್ವಾಮಿತ್ವ ಬರುವವರೆಗೆ ಮಕ್ಕಳು ಓದುವುದರಲ್ಲಿ, ಮಾತನಾಡುವುದರಲ್ಲಿ, ಆಡುವುದರಲ್ಲಿ ಮತ್ತು ನೋಡಿದ ಚಿತ್ರಗಳನ್ನು ಬರೆಯುವುದರಲ್ಲಿ ತೊಡಗಿರಬೇಕು

ಬರಿಹದ ಬೆಲೆಯನ್ನು ಮೂರು ಲಕ್ಷಣಗಳಿಂದ ಕಟ್ಟಬಹುದು. ಒಂದು ಅದರ ಆಕೃತಿ ಅಥವ ಚೆಲುವಿನಿಂದ. ಇನ್ನೊಂದು ಬರೆಯುವ ವೇಗದಿಂದ ಮೂರನೆಯದು ಅದನ್ನು ಸುಲಭವಾಗಿ ಓದಬಹುದೋ, ಶಬ್ದಗಳು ವಿರಳವಾಗಿ ಬರೆಯಲ್ಪಟ್ಟಿವೆಯೋ ಎಂಬುದರಿಂದ. ಬರಿಹವೆಂದರೆ ಒಂದು ಉಪಕರಣ (ಸಾಧನ); ವ್ಯಾಯವ್ಯವಹಾರದಲ್ಲಿ ಅದಷ್ಟು ಉಪಯೋಗಕ್ಕೆ ಬೀಳುವ ಸಾಧನವಾದರೇನೆ ಅದು ಜಲ್ಲೆಯದಂತಾಗುತ್ತದೆ. ನಾವು ಬರೆದುದನ್ನು ಇನ್ನೊಬ್ಬರು ಓದಬೇಕೆಂದೇ ನಾವು ಬರೆಯುವುದಲ್ಲವೆ. ಆದುದರಿಂದ ಬರಿಹದ ಸ್ಪಷ್ಟತೆಗೆ ಹೆಚ್ಚಿನ ಬೆಲೆ ಕೊಡಬೇಕು, ಓದಲಿಕ್ಕಾಗದ ಅಕ್ಷರವು ವ್ಯರ್ಥ. ಎರಡನೆಯದಾಗಿ ವೇಗಕ್ಕೆ ಬೆಲೆಕೊಡಬೇಕು ಸ್ಪಷ್ಟವಾದ ಅಕ್ಷರವನ್ನು ಬೇಗ ಬೇಗ ಬರೆಯಲಿಕ್ಕಾಗದಿದ್ದರೆ ಪ್ರಯೋಜನವಿಲ್ಲ ಅಕ್ಷರದ ಉಪಯೋಗವು ವ್ಯವಹಾರಿಕವಾದುದರಿಂದ ಅದರ ಚೆಲುವಿಗೆ ಬೆಲೆ ಅತಿ ಕಡಿಮೆ; ಚೆಲುವು ಇದ್ದರೆ ಓಕೆಯದು, ಇರಲೇ ಬೇಕೆಂದಿಲ್ಲ.

ಶಾಲೆಯಲ್ಲಿ ಇರುವ ಸಧ್ಯತೆ ನೋಡಿದರೆ ಚೆಲುವಿಗೆ ವಿಶೇಷ ಮರ್ಯಾದೆ, ವಿವರವಾಗಿ ಬರೆಯುವುದಕ್ಕೆ ಅಷ್ಟೊಂದು ಗಮನ ಕೊಡುವುದಿಲ್ಲ, ವೇಗಕ್ಕಂತೂ ಯಾರೂ ಲಕ್ಷ ಕೊಡುವುದಿಲ್ಲ. ಅದುದರಿಂದ ಬರಿಹಕ್ಕೆ ಶಾಲೆಯು ಕೊಡುವಲಕ್ಷ್ಯವೆಂದರೆ—ಕಾಪಿ ಬರೆಯುವ ಮೂಲಕ ಚೆಲುವಿಗೆ ಮಾತ್ರ. ಕೆಳಗಿನ ತರಗತಿಗಳಲ್ಲಾದರೂ ವೇಗಕ್ಕೂ ಚೆಲುವಿಗೂ ವಿರುದ್ಧ ಅನುಪಾತವಿದೆ ಎಂಬುದನ್ನು ನಾವು ತಿಳಿದಂತೆ ತೋರುವುದಿಲ್ಲ. ಆ ಕಾರಣದಿಂದ ಮಕ್ಕಳ ಸಮಯದ ಹೆಚ್ಚಿನ ಭಾಗವನ್ನು ಚೆಲುವಾದ ಅಕ್ಷರವನ್ನು ಬಹಳ ನಿಧಾನವಾಗಿಯಾದರೂ ಬರೆಯಲಿಕ್ಕೆ ಉಪಯೋಗಿಸುತ್ತಿದ್ದೇವೆ; ಎಷ್ಟು ನಿಧಾನವಾಗಿ ಬರೆಯುತ್ತಾರೆಂದರೆ ದಿನನಿತ್ಯದ ವ್ಯವಹಾರಕ್ಕೆ ಅದರಿಂದ ಏಳ್ಗೆಯ ಪ್ರಯೋಜನವಿಲ್ಲ

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟ.

ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **A. S.** ಸೀಲನ್ನು ಗಮನಿಸಿ. ಕೊಳ್ಳಿರಿ. ಮೋಸಹೋಗಬೇಡಿರಿ

ದೊರೆಯುವ ಸ್ಥಳ:- 1.) **ಎಂ. ಹುಶೇಂಜಿರಾವು,** **ಎಂ. ವೆಂಕೋಜಿರಾವು,** ತೇರುಬೀದಿ, ಬಳ್ಳಾರಿ. ಮತ್ತು 2) **ವಿ. ಯಂ. ಗಿರಿ ಅಂಡ್ ಸನ್ಸ್,** ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ. ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು ಪರೀಕ್ಷೆಯ ಸಾಕ್ಷ್ಯ ಪುಸ್ತಕಗಳು, ಕಛೇರಿ ಕಾಪಂಬರಿ ವಗೈರೆ ದೊರೆಯುವವಲ್ಲದೆ ನಿಮಗೆ ಎಲ್ಲಾವಿಧವಾದ ಮಾಹಿತಿಯೂ, ಉಚಿತವಾಗಿ ದೊರೆಯುವುದು.

ಟಿ ಬಿ. ಕೇಶವರಾವ್,
ಕೃಷ್ಣಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—0—0	ಬಳ್ಳಾರಿಯವರಿಗೆ 2-0-0
Moffusil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local 1—4—0	ಬಳ್ಳಾರಿಯವರಿಗೆ 1-4-0
Moffusil 2—0—0	ಹೊರಗಿನವರಿಗೆ 2 0-0

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary.

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ, ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ಪೈತ್ಯ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೪೦

ಸ್ಟಾಕಿಸ್ಟ್- **ತೋರಣಗಲ್ಲು ಮರಿಪ್ಪ, ಬಳ್ಳಾರಿ.**

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦	ಅಂಚೆ ವೆಚ್ಚವೇರೆ
ಕನ್ನಡ ವೇದೋಪನಿಷತ್ತುಗಳು	೦—೯—೦	ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ
ಶಿವಾನುಭವ ಬೋಧೆ	೧—೮—೦	ಕೊಳ್ಳುವರಿಗೆ ಧಾರಾಳವಾದ ಕಮೀಶನ್
ಸುಮತಿ ಶತಕ	೦—೧—೦	

ಕಾಲವ ಸುಬ್ಬಣ್ಣ, ಮಜೀಂತು, ಬಳ್ಳಾರಿ.

ದ್ವಿತೀಯ ಪಶುಪ್ರದರ್ಶನ ಬಳ್ಳಾರಿ.

ಫೆಬ್ರುವರಿ 2, 3, 4ನೆಯ ತಾರೀಖು ಕೋಟೆ ಮಲ್ಲೇಶ್ವರ ದೇವಸ್ಥಾನದ ಬಯಲಿನಲ್ಲಿ ನಡೆಯಲಿದೆ ವ್ಯವಸಾಯಗಾರರಿಗೆ, ರೈತರಿಗೆ ದನಗಳ ಉತ್ತಮ ತಳಿಯನ್ನು ಸ್ಪೃಹಾಪಿಸಬೇಕೆನ್ನುವವರಿಗೆ ಸುವರ್ಣಸಂಧಿ ಬಂದು ನೋಡಿ ಆನಂದಿಸಿ ಕೊಂಡು ತೃಪ್ತಿಪಡಿರಿ.

ಯ್. ತಾಳಿಕೆರಪ್ಪ ಟ್ರಸ್ಟಿ.

Nava Bharat, Bellary.

REG. No. 3337.

Sri _____

_____

Printed at Vittal Press, Car Street Edited & Published by T. B Keshava Rao, Bellary

Reg. No. M. 3937 ಸಂಪೂರ್ಣ ಮಾಸ್ತರಂ

ನವಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ
ಸಂಚಿಕೆ ೧೪ ಬಳ್ಳಾರಿ ಜನವರಿ ೧೧ನೇ ಭಾನುವಾರ ೧೯೪೩. ಟಿ. ಪಿ. ಕೇಶವರಾವ್

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೮೯೭.

ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಆಸ್ತಿಪಾಸ್ತಿಗಳು 5,60,00,000 ರೂ. ಗಳಿಗೆ ಮೀರಿದೆ

ಈ ಕಂಪನಿಯೆಷ್ಟರು ಯಾವಯಾವ ತರಹೆಯ ಜೀವ ವಿಮೆಯನ್ನು ವಿಧಿಸಿದ್ದಾರೆ ಎಂಬುವನ್ನು ವಿಚಾರಿಸುವುದರ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಮಾಡಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ನಿಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕಾಂಪ್ರ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಕಚೇರಿ- ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

'ರಾಯಲ್' ಸಿನೆಮಾಭವನದಲ್ಲಿ

ಬಾಳಾಜೀ ಗುಬ್ಬಿ ಫಿಲಮ್ಸ್‌ನವರ
ಕನ್ನಡ ಚಿತ್ರ

ಸುಭದ್ರ

14—1—1942 ಪ್ರಾರಂಭವಾಗಲಿದೆ,
'ಸುಭದ್ರೆಯಲ್ಲಿ' ಗುಬ್ಬಿವೀರಣ್ಣನವರ ಪಾತ್ರ,

ರೂಸವೆಲ್ಟರ ಘೋಷಣೆ

ಅಪರಿಮಿತ ಯುದ್ಧ ಸನ್ನಾಹ

1942ರಲ್ಲಿ 60 ಸಾವಿರ ವಿಮಾನ, 45 ಸಾವಿರ ಟ್ಯಾಂಕು, 20 ಸಾವಿರ ವಿಮಾನ ವಿರೋಧಿ ಫಿರಂಗಿಗಳು, 80 ಲಕ್ಷ ಟನ್ ಹಡಗುಗಳು ಮತ್ತು 1943ರಲ್ಲಿ 1 ಲಕ್ಷ 25 ಸಾವಿರ ವಿಮಾನ 75 ಸಾವಿರ ಟ್ಯಾಂಕು, 35 ಸಾವಿರ ವಿಮಾನ ನಿರೋಧಕ ಫಿರಂಗಿ 1 ಕೋಟಿ ಟನ್ ಹಡಗುಗಳು ತಯಾರಿಸಲು 1941-43 ನೇಯ ವರ್ಷಗಳಿಗಾಗಿ 56 ಬಿಲಿಯನ್ ಡಾಲರ್‌ಗಳ ಮುಂಜೂರಾತಿಯ ವಿಷಯವನ್ನು ಅಮೆರಿಕಾ ಕಾಂಗ್ರೆಸ್‌ನಲ್ಲಿ ರೂಸವೆಲ್ಟರು ಹೇಳಿದರು.

ಗುಲಾಮೀ ರಾಷ್ಟ್ರಗಳನ್ನು ಮುಕ್ತ ಮಾಡಿ ಅವರಿಗೆ ಭಾಷಣ ಸ್ವಾತಂತ್ರ್ಯ ಧರ್ಮ ಸ್ವಾತಂತ್ರ್ಯ ಕೊಡಿಸುವುದು, ಆರ್ಥಿಕ ಕಷ್ಟವಿಲ್ಲದೆ ನಿರ್ಭಯವಾಗಿ ಜೀವನವಾಧುವಂತೆ ಪ್ರಧಾನವಾಗಿರುವುದು" ಈ ಉದ್ದೇಶ ಸಾಧನೆಗಾಗಿ ಅಮೆರಿಕನ ಜನಾಂಗವು ಎಲ್ಲಾ ಕಡೆಗಳಲ್ಲಿಯೂ ಯುದ್ಧ ಮಾಡುವುದು ಬೃಟಿಷ್ ದ್ವೀಪಗಳಲ್ಲಿಯೂ ಯುದ್ಧ ಮಾಡಬೇಕಾಗುವುದು ಎಂದು ಹೇಳಿದರು

ಫ್ರಾನ್ಸಿನ ಪ್ಯಾರಿಸ್ ನಗರದಲ್ಲಿ ವಿದ್ಯಾರ್ಥಿಗಳ ತಂದೆಯೊಂದು 5 ಜನ ಜರ್ಮನ್ ಅಧಿಕಾರಿಗಳನ್ನು ಕೊಂದು 17 ಜನ ಇತರರಿಗೆ ಘಾಯ ಪಡಿಸಿದರೆಂದು ಗೊತ್ತಾಗಿದೆ. ನಾಜಿಗಳು ವಿದ್ಯಾರ್ಥಿಗಳನ್ನು ಮಶೀನ್ ಗನ್‌ಗಳಿಂದ ಕೊಲ್ಲುತ್ತಿರುವರೆಂದು ಹೇಳಲಾಗಿದೆ.

ರಷ್ಯಾ ಸೈನ್ಯಗಳು ಬಲಿಷ್ಠವಾದ ಶಿಸ್ತಿನ ಯೋಗವನ್ನು ತೆಗೆದುಕೊಂಡು ಅನೇಕ ಆಕ್ರಮಿತ ಪ್ರದೇಶಗಳನ್ನು ಜರ್ಮನರಿಂದ ಕಸಿದುಕೊಳ್ಳುತ್ತಿವೆ. ಕಾಕೇಸಸ್ ಮತ್ತು ವೊಜಾಯ್ಸ್‌ಕ ಪರ್ವತಗಳು ರಷ್ಯನರ ವಶವಾಗುವ ಲಕ್ಷಣಗಳು ತೋರಿಬರುತ್ತಿವೆ.

ಜಪಾನ ಸೈನ್ಯಗಳು ಮಲಯಾದ ದಕ್ಷಿಣದಲ್ಲಿ ಕೌಲಾ ಸಲಂಗಾರ ಸಮೀಪಿಸುತ್ತಿರುವವೆಂದೂ ಫಿಲಿಪೈನ್‌ನಲ್ಲಿ ನಿರಾಶಾ ಜನಕ ಪರಿಸ್ಥಿತಿಯಿರುವುದೂ ಗೊತ್ತಾಗಿದೆ.

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟ.

ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ನೈಜುಗಳಲ್ಲೂ ದೊರೆಯುತ್ತದೆ. **A. S.** ಸೀಲನ್ನು ಗಮನಿಸಿ. ಕೊಳ್ಳಿರಿ. ಮೋಸಹೋಗಬೇಡಿರಿ

ಮೊರೆಯುವ ಸ್ಥಳ:- 1.) ಎಂ. ಹುಶೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ. ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....

ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ. ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಛೇರಿ ಕಾದಂಬರಿ ವಗೈರೆ ದೊರೆಯುವಲ್ಲದೆ ನಿಮಗೆ ಎಲ್ಲಾವಿಧದಲೂ ಸಹಿತಿಯೂ, ಉಚಿತವಾಗಿ ಹೇಳಲಾಗುವುದು

ಟಿ ಬಿ. ಕೇಶವರಾವ್,
ಕ್ರೈಸ್ತಮಂದಿರ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—4—0	ಬಳ್ಳಾರಿಯವರಿಗೆ 2-0-0
Mofussil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local 1—4—0	ಬಳ್ಳಾರಿಯವರಿಗೆ 1-4-0
Mofussil 2—0—0	ಹೊರಗಿನವರಿಗೆ 2-0-0

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary.

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ಪೈತ್ಯ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೪೦

ಸ್ಟಾಕಿಸ್ಟ್- **ತೋರಣಗಲ್ಲು ಮರೆಪ್ಪ, ಬಳ್ಳಾರಿ.**

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦
ಕನ್ನಡ ದರೋಪನಿಷತ್ತುಗಳು	೦—೯—೦
ಶಿವಾನುಭವ ಬೋಧೆ	೦—೪—೦
ಸುನುತ ಶತಕ	೦—೧—೦

ಆಂಡ ಪೆಟ್ಟಿಮೇರೆ ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವರಿಗೆ ಧಾರಾಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮಚೀಂಟು, ಬಳ್ಳಾರಿ.

ದ್ವಿತೀಯ ಪಶುಪ್ರದರ್ಶನ ಬಳ್ಳಾರಿ.

ಫಿಬ್ರವರಿ 2, 3, 4ನೆಯ ತಾರೀಖು ಕೋಟೆ ಮಲ್ಲೇಶ್ವರ ದೇವಸ್ಥಾನದ ಬಯಲಿನಲ್ಲಿ ನಡೆಯಲಿದೆ. ವ್ಯವಸಾಯಗಾರರಿಗೆ ದೈತ್ತರಿಗೆ ದನಗಳ ಉತ್ತಮ ತಳಿಯನ್ನು ಪ್ರೋತ್ಸಾಹಿಸಬೇಕೆನ್ನುವವರಿಗೆ ಸುವರ್ಣಸಂಧಿ ಬಂದು ನೋಡಿ ಆನಂದಿಸಿ ಕೊಡುತೃಪ್ತಿಪಡಿರಿ.

ಯಂ. ತಾಳಿಕೆರಪ್ಪ ಟ್ರಸ್ಟಿ.

Nava Bharat, Bellary.

REG. No. 3937.

Sri _____

Printed at Vittal Press, Car Street Edited & Published by T. B Keshava Rao, Bellary

Reg. No. M. 3937 ವಂದೇಮಾತರಂ

ನವಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ—
ಸಂಚಿಕೆ ೧೪ ಬಳ್ಳಾರಿ ಜನವರಿ ೧೧ನೇ ಭಾನುವಾರ ೧೯೪೩ ಟಿ. ಬಿ. ಶೇಷಗಿರಿರಾವ್

ಸ್ವಾಮಿನೆ- ಎಂಪೈರ್ ಆಫ್ ಇಂಡಿಯಾ ವರ್ಷ:
ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಆಸ್ತಿಪಾಸ್ತಿಗಳು 5,60,00,000 ರೂ. ಗಳಿಗೆ ಮೀರಿದೆ

ಈ ಕಂಪೆನಿಯೆನೆಯರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುವನ್ನು ವಿಚಾರಿಸುವುದರ ನಿಮಗೆ ಯಾವ ವಿಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚಿ.ನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೊಂಪ್ರ ಕಚೇರಿ. ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಕಚೇರಿ. ಡಿಸ್ಪೆಕ್ಟ್ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

'ರಾಯಲ್' ಸಿನೆಮಾಭವನದಲ್ಲಿ

ಬಾಲಾಜೀ ಗುಬ್ಬಿ ಫಿಲ್ಮ್ಸ್‌ನವರ
ಕನ್ನಡ ಚಿತ್ರ

ಸುಭದ್ರ

14—1—1942 ಸೋಮವಾರ ಪ್ರಾರಂಭವಾಗಲಿದೆ
'ಸುಭದ್ರ'ದಲ್ಲಿ ಗುಬ್ಬಿ ವೀರಣ್ಣನವರ ಪಾತ್ರ



ರೂಸವೆಲ್ಟರ ಘೋಷಣೆ

ಅಪರಿಮಿತ ಯುದ್ಧ ಸನ್ನಾಹ

1942ರಲ್ಲಿ 60 ಸಾವಿರ ವಿಮಾನ, 45 ಸಾವಿರ ಟ್ಯಾಂಕು, 20 ಸಾವಿರ ವಿಮಾನ ವಿರೋಧಿ ಫಿರಂಗಿಗಳು, 80 ಲಕ್ಷ ಟನ್ ಹಡಗುಗಳು ಮತ್ತು 1943ರಲ್ಲಿ 1 ಲಕ್ಷ 25 ಸಾವಿರ ವಿಮಾನ 75 ಸಾವಿರ ಟ್ಯಾಂಕು 35 ಸಾವಿರ ವಿಮಾನ ನಿರೋಧಕ ಫಿರಂಗಿ 1 ಕೋಟಿ ಟನ್ ಹಡಗುಗಳು ತಯಾರಿಸಲು 1942-43 ನೇಯ ವರ್ಷಗಳಿಗಾಗಿ 56 ಬಿಲಿಯನ್ ಡಾಲರ್‌ಗಳ ಮುಂಜೂರಾತಿಯ ವಿಷಯವನ್ನು ಅಮೆ

ಗುಲಾಮೀರಿಕೆಯನ್ನು ಮುಕ್ತಿ ಮಾಡಿ ಅವನಿಗೆ ಭಾಷಣ ಸ್ವಾತಂತ್ರ್ಯ ಧರ್ಮ ಸ್ವಾತಂತ್ರ್ಯ ಕೊಡಿಸುವುದು, ಆರ್ಥಿಕ ಕಷ್ಟವಿಲ್ಲದೆ ಸಭ್ಯಯವಾಗಿ ಜೀವನವಾಡುವವನ್ನು ಪ್ರಧಾನವಾಡುವುದು" ಈ ಉದ್ದೇಶ ಸಾಧನೆಗಾಗಿ ಅನೆಂಕನ

ಜನಾಂಗವು ಎಲ್ಲಾ ಕಡೆಗಳಲ್ಲಿ ಯುದ್ಧ ಮಾಡುವುದು ಬ್ರಟಿಷು ದ್ವೀಪಗಳಲ್ಲಿ ಯುದ್ಧ ಮಾಡಬೇಕಾಗುವುದು ಎಂದು ಹೇಳಿದರು

ಫ್ರಾನ್ಸಿನ ಪ್ಯಾರಿಸ್ ನಗರದಲ್ಲಿ ವಿದ್ಯಾರ್ಥಿಗಳ ತಂಡವೊಂದು 5 ಜನ ಜರ್ಮನ್ ಅಧಿಕಾರಿಗಳನ್ನು ಕೊಂದು 17 ಜನ ಇತರರಿಗೆ ಹಾಯ ಪಡಿಸಿದರೆಂದು ಗೊತ್ತಾಗಿದೆ. ನಾಜಿಗಳು ವಿದ್ಯಾರ್ಥಿಗಳನ್ನು ಮಶೀನ್ ಗನ್‌ಗಳಿಂದ ಕೊಲ್ಲುತ್ತಿರುವರೆಂದು ಹೇಳಲಾಗಿದೆ.

ರಷ್ಯಾ ಸೈನ್ಯಗಳು ಛಳಿಗಾಲದ ಉಡುಪುಗಳನ್ನು ತೆಗೆದುಕೊಂಡು ಆನೇಕ ಜರ್ಮನರಿಂದ ಮೊವ ಮತ್ತು ಮೊಜಾಯ್ಸ್ಕ ಪಟ್ಟಣಗಳು ರಷ್ಯನರ ವಶವಾಗುವ ಲಕ್ಷಣಗಳು ತೋರುತ್ತಿವೆ.

ಜಪಾನ ಸೈನ್ಯಗಳು ಮಲಯಾದ ದಕ್ಷಿಣದಲ್ಲಿ ಕೌಲಾ ಸೆಲಂಗಾರ ಸಮೀಪಿಸುತ್ತಿರುವವೆಂದೂ ಫಿಲಿಪೈನ್‌ನಲ್ಲಿ ನಿರಾಶಾ ಜನಕ ಸುದ್ದಿ ತಿಂತಲು ಗೊತ್ತಾಗಿದೆ.

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟ.

ಇವರ A.S. ಬ್ರಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **A. S.** ಟೀನನ್ನು ಗಮನಿಸಿ, ಕೊಳ್ಳಿರಿ. ಮೋಸಹೋಗಬೇಡಿರಿ

ದೊರೆಯುವ ಸ್ಥಳ:- 1.) ಎಂ. ಪುಟ್ಟೇಂಜಿರಾವು, ಎಂ. ನೆಂಕೋಜಿರಾವು, ತೇರುಬೀದಿ, ಬಳ್ಳಾರಿ. ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ನೂತಾಡುವುದನ್ನು ಕಲಿಯಲು,.....
- ನಿಮಗೆ ಸಹಾಯವು ಬೇಕೋ?

ಪಾಗಾದರೆ ಕೂಡಲೆ ಕೆಳಗಿನವರಳಿ ವಿವರಗಳನ್ನು ತಿಳಿಯಿರಿ. ನಿಮಗನುಕೂಲವಾದ ತರಗತಿಗೆ ಏರ್ಪಡಿಸಲಾಗುವುದು ಪರೀಕ್ಷೆಯ ಜಾರ್ಕೆ ಪುಸ್ತಕಗಳು, ಕಛೇರಿ ಕಾದಂಬರಿ ಮ್ಯಾರೆ ದೊರೆಯುವುದಿಲ್ಲದೆ ನಿಮಗೆ ಏಲ್ಲಾವಿಧವಾದ ಮಾಹಿತಿಯನ್ನು, ಉಚಿತವಾಗಿ ಹೇಳಲಾಗುವುದು.

ಟಿ ಬಿ. ಕೇಶವರಾವ್,
ಕೃಷ್ಣಮಾಚಾರಿ ಕಾಂಪೌಂಡು, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary.

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ, ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ಸ್ತ್ರೈತ್ಯ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೪೦

ಸ್ಟಾಕಿಸ್ಟ್- **ಕೋರಣಗಲ್ಲು ಮರೆಪ್ಪ, ಬಳ್ಳಾರಿ.**

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦	ಅಂಚೆ ವೆಚ್ಚವೇರೆ ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವರಿಗೆ ಧಾರಾಳವಾದ ಕಮೀಶನ್
ಕನ್ನಡ ದಶೋಪನಿಷತ್ತುಗಳು	೦—೯—೦	
ಶಿವಾನುಭವ ಬೋಧೆ	೦—೪—೦	
ಸುಮತಿ ಶತಕ	೦—೧—೦	

ಕಾಲವ ಸುಬ್ಬಣ್ಣ, ಮಜೀಂಟು, ಬಳ್ಳಾರಿ.

ದ್ವಿತೀಯ ಪಶುಪ್ರದರ್ಶನ ಬಳ್ಳಾರಿ-

ಫಿಬ್ರವರಿ 2, 3, 4ನೆಯ ತಾ॥ ಕೋಟೆ ಮಲ್ಲೇಶ್ವರ ದೇವಸ್ಥಾನದ ಬಯಲಿನಲ್ಲಿ ನಡೆಯಲಿದೆ. ವ್ಯವಸಾಯಗಾರರಿಗೆ ರೈತರಿಗೆ ದನಗಳ ಉತ್ತಮ ತಳಿಯನ್ನು ಪ್ರೋತ್ಸಾಹಿಸಬೇಕೆನ್ನುವವರಿಗೆ ಸುವರ್ಣಸಂಧಿ ಬಂದು ನೋಡಿ ಆನಂದಿಸಿ ಕೊಂಡು ತೃಪ್ತಿಪಡಿರಿ.

ಯ್ಯರ್. ತಾಳಿಕೆರಪ್ಪ ಟ್ರಸ್ಟಿ.

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	
Annual	
Local	2—0—0
Mofussil	3—0—0
6 Months	
Local	1—4—0
Mofussil	2—0—0

ಚಂದಾ ನಿವರ

ವರ್ಷಕ್ಕೆ

ಬಳ್ಳಾರಿಯವರಿಗೆ 2-0-0

ಹೊರಗಿನವರಿಗೆ 3-0-0

೬ ತಿಂಗಳಿಗೆ

ಬಳ್ಳಾರಿಯವರಿಗೆ 1-4-0

ಹೊರಗಿನವರಿಗೆ 2-0-0

Nava Bharat, Bellary.

REG. No. 3937.

Sri _____

Printed at Vittal Press, Car Street Edited & Published by T. B Keshava Rao, Bellary

Reg. No. M. 3937 ಪಂದೇಶಾತರಂ

ನವಭಾರತ

ವರ್ಷ ೪ — ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ —
ಸಂಚಿಕೆ ೧೪ ಬಳ್ಳಾರಿ ಜನವರಿ ೧೦ನೇ ಭಾನುವಾರ ೧೯೪೩. ಟಿ. ಬಿ. ಶೇಷಗಿರಿರಾವ್

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೯೪೩.

ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000 ರೂ. ಗಳಿಗೆಮೀರಿದೆ

ಈ ಕಂಪೆನಿಯೆನೆರು ಯಾವಮಾನ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುವನ್ನು ವಿಚಾರಿಸುವುದರ ನಿಮಗೆ ಯಾವ ಪೆಚ್ಚನ್ನೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚ ನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆಮು- ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ಏಮೆ ಮಾಡಿರಿ.

ಕೊಂಪ್ರು ಕಚೇರಿ. ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ
ಬ್ರಾಂಚ್ ಕಚೇರಿ. ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

'ರಾಯಲ್' ಸಿನೆಮಾಭವನದಲ್ಲಿ

ಬಾಲುಜೀ ಗುಬ್ಬಿ ಪಿಲಮ್ಮನವರ
ಕನ್ನಡ ಚಿತ್ರ

ಸುಭದ್ರ

14—1—1942 ಸ್ವಾರಂಭವಾಗಲಿದ್ದು, 'ಸುಭದ್ರದಲ್ಲಿ' ಗುಬ್ಬಿವೀರಣ್ಣನವರ ಪಾತ್ರ



ರೂಸವೆಲ್ಟರ ಘೋಷಣೆ

ಅಪರಿಮಿತ ಯುದ್ಧ ಸನ್ನಾಹ

1942ರಲ್ಲಿ 60 ಸಾವಿರ ವಿಮಾನ, 45 ಸಾವಿರ ಟ್ಯಾಂಕು, 20 ಸಾವಿರ ವಿಮಾನ ವಿರೋಧಿ ಫಿರಂಗಿಗಳು, 80 ಲಕ್ಷ ಟನ್ ಹಡಗುಗಳು ಮತ್ತು 1943ರಲ್ಲಿ 1 ಲಕ್ಷ 25 ಸಾವಿರ ವಿಮಾನ 75 ಸಾವಿರ ಟ್ಯಾಂಕು 35 ಸಾವಿರ ವಿಮಾನ ನಿರೋಧಕ ಫಿರಂಗಿ 1 ಕೋಟಿ ಟನ್ ಹಡಗುಗಳು ತಯಾರಾಗಲು 1942-43 ನೆಯ ವರ್ಷಗಳಿಗಾಗಿ 56 ಬಿಲಿಯನ್ ಡಾಲರ್‌ಗಳ ಮುಂಜೂರಾತಿಯ ವಿಷಯವನ್ನು ಅಮೆ

ಗುಲಾಮಗಿರಿಯಿಂದ ಸ್ವತಂತ್ರ ಮಾಡಿ ಅನಂತರ ಭಾಷಣ ಸ್ವಾತಂತ್ರ್ಯ ಧರ್ಮ ಸ್ವಾತಂತ್ರ್ಯ ಕೊಡಿಸುವುದು, ಆರ್ಥಿಕ ಕಷ್ಟವಿಲ್ಲದೆ ನಿರ್ಭಯವಾಗಿ ಜೀವ ಸಮಾಧಾನವನ್ನು ಪ್ರದಾನಮಾಡುವುದು' ಈ ಉದ್ದೇಶ ಸಾಧನೆಗಾಗಿ ಅಮೆರಿಕನ

ಜನಾಂಗವು ಎಲ್ಲಾ ಕಡೆಗಳಲ್ಲೂ ಯುದ್ಧ ಮಾಡುವುದು ಬ್ರಿಟಿಷ್ ದ್ವೀಪಗಳಲ್ಲಿ ಯುದ್ಧ ಮಾಡಬೇಕಾಗುವುದು ಎಂದು ಹೇಳಿದರು

ಫ್ರಾನ್ಸಿನ ವ್ಯಾರಿಸ್ ನಗರದಲ್ಲಿ ವಿದ್ಯಾರ್ಥಿಗಳ ತಂಡವೊಂದು 5 ಜನ ಜರ್ಮನ್ ಅಧಿಕಾರಿಗಳನ್ನು ಕೊಂದು 17 ಜನ ಇತರರಿಗೆ ಪಾಪ ಪಡಿಸಿದರೆಂದು ಗೊತ್ತಾಗಿದೆ. ನಾಜಿಗಳು ವಿದ್ಯಾರ್ಥಿಗಳನ್ನು ಮಶೀನ್ ಗನ್‌ಗಳಿಂದ ಕೊಲ್ಲುತ್ತಿರುವರೆಂದು ಹೇಳಲಾಗಿದೆ.

ರಷ್ಯಾ ಸೈನ್ಯಗಳು ಲೆನಿನ್‌ಗ್ರಾಡ್ ಮುತ್ತಿಗೆಯನ್ನು ತೆಗೆದುಕೊಂಡು ಆನೇಕ ಜರ್ಮನರಿಂದ ಮತ್ತು ಮಾಜಿಯ್ಯಕ ಪಟ್ಟಣಗಳು ರಷ್ಯನರ ವಶವಾಗುವ ಲಕ್ಷಣಗಳು ತೋರಿಬರುತ್ತಿವೆ.

ಜಪಾನ ಸೈನ್ಯಗಳು ಮಲಯಾದ ದಕ್ಷಿಣದಲ್ಲಿ ಕೌಲಾ ಸಲಂಗಾರ ಸಮೀಪಿಸುತ್ತಿರುವವೆಂದೂ ಫಿಲಿಪೈನ್‌ನಲ್ಲಿ ನಿರಂತರ ಜನ ಕಪಟ್ಟಿತಿಯಂತಲು ಗೊತ್ತಾಗಿದೆ

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟೆ.

ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ. ಸೈಜುಗಳಲ್ಲೂ ದೊರೆಯುತ್ತದೆ. **A. S.** ಟಿನ್‌ಲನ್ನು ಗಮನಿಸಿ. ಕೊಳ್ಳಿರಿ. ಮೋಸಹೋಗಬೇಡಿರಿ

ದೊರೆಯುವ ಸ್ಥಳ - 1.) ಎಂ. ಪುಶೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ. ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೊಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....
- ನಿಮಗೆ ಸಹಾಯವು ಬೇಕೋ ?

ಹಾಗಾದರೆ ಕೂಡಲೆ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಛೇರಿ ಕಾರುಬಾರು ಪದ್ಧತಿ ದೊರೆಯುವವಲ್ಲದೆ ನಿಮಗೆ ಎಲ್ಲಾವಿಧವಾದ ಮಾಹಿತಿಯೂ, ಉಚಿತವಾಗಿ ಹೇಳಲಾಗುವುದು

ಟಿ ಬಿ. ಕೇಶವರಾವ್,
ಕೃಷ್ಣಪೂಜಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ-ಪತ್ರಿಕೆ.

The Rates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—1—0	ಬಳ್ಳಾರಿಯವರಿಗೆ 2-0-0
Mofussil 3—0—0	ಹೊರಗಿನವರಿಗೆ 3-0-0
6 Months	**೬ ತಿಂಗಳಿಗೆ**
Local 1—4—0	ಬಳ್ಳಾರಿಯವರಿಗೆ 1-4-0
Mofussil 2—0—0	ಹೊರಗಿನವರಿಗೆ 2 0-0

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary.

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ, ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ಪೈತ್ಯ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ½ ಸೇರಿನ ಸೀಸೆ ೩-೪-೦

ಸ್ಯಾಂಕಿಸ್ಟ್ - ತೋರಣಗಲ್ಲು ಮರೆಪ್ಪ, ಬಳ್ಳಾರಿ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಜಗದ್ವಿನೀತೆ	೦—೮—೦
ಕನ್ನಡ ದರೋಪಣಪತ್ತುಗಳು	೦—೪—೦
ಶಿವಾನುಭವ ಬೋಧೆ	೦—೮—೦
ಸುನೀತ ಚರಿತೆ	೦—೧—೦

ಅಂಚೆ ವೆಚ್ಚವೇರೆ ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವರಿಗೆ ಧಾರಾಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮಟ್ಟಿಂಟು, ಬಳ್ಳಾರಿ.

ದ್ವಿತೀಯ ಪಶುಪ್ರದರ್ಶನ ಬಳ್ಳಾರಿ.

ಫೆಬ್ರವರಿ 2, 3, 4ನೆಯ ತಾರೀ ಕೋಟೆ ಮಲ್ಲೇಶ್ವರ ದೇವಸ್ಥಾನದ ಬಯಲಿನಲ್ಲಿ ನಡೆಯಲಿದೆ ವ್ಯವಸಾಯಗಾರರಿಗೆ ರೈತರಿಗೆ ದನಗಳ ಉತ್ತಮ ತಳಿಯನ್ನು ಪ್ರೋತ್ಸಾಹಿಸಲೇಕೆನ್ನುವವರಿಗೆ ಸುವರ್ಣಸಂಧಿ ಬಂದು ನೋಡಿ ಆನಂದಿಸಿ ಕೊಂಡು ತೃಪ್ತಿಪಡಿರಿ.

ಯ್ಯ. ತಾಳಿಕೆರಪ್ಪ ಟ್ರಸ್ಟಿ.

Nava Bharat, Bellary.

REG. No. 3337.

Sri _____

Printed at Vittal Press, Car Street Edited & Published by T. B Keshava Rao, Bellary

Reg. No. M. 3937 ವಂದೇ ಮಾತರಂ

ನವಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೧೫೪ ಬಳ್ಳಾರಿ ಜನವರಿ ೧೫ನೇ ಭಾನುವಾರ ೧೯೪೨. ಟಿ. ಪಿ. ಕೇಶವಯ್ಯ

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೯೦೭.
ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಆಸ್ತಿಪಾಸ್ತಿಗಳು 5,60,00,000 ರೂ. ಗಳಿಗೆ ಮಿಗಿದೆ

ಈ ಕಂಪನಿಯೆನೆರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಆಯ್ಕೆಮಾಡಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ. ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಕಚೇರಿ. ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

'ರಾಯಲ್' ಸಿನೆಮಾಭವನದಲ್ಲಿ

ಬಾಲಾಜೀ ಗುಬ್ಬಿ ವೀರಣ್ಣನವರ
ಕನ್ನಡ ಚಿತ್ರ

ಸುಭದ್ರಾ

11—1—1942 ಪ್ರಾರಂಭವಾಗಲಿದೆ
'ಸುಭದ್ರೆ'ಯಲ್ಲಿ ಗುಬ್ಬಿ ವೀರಣ್ಣನವರ ಪಾತ್ರ



ರೂಸವೆಲ್ಟರ ಘೋಷಣೆ

ಅಪರಿಮಿತ ಯುದ್ಧ ಸನ್ನಾಹ

1942ರಲ್ಲಿ 60 ಸಾವಿರ ವಿಮಾನ, 45 ಸಾವಿರ ಟ್ಯಾಂಕು, 20 ಸಾವಿರ ವಿಮಾನ ವಿರೋಧಿ ಫಿರಂಗಿಗಳು, 80 ಲಕ್ಷ ಟನ್ ಹಡಗುಗಳು ಮತ್ತು 1943ರಲ್ಲಿ 1 ಲಕ್ಷ 25 ಸಾವಿರ ವಿಮಾನ 75 ಸಾವಿರ ಟ್ಯಾಂಕು 35 ಸಾವಿರ ವಿಮಾನ ನಿರೋಧಕ ಫಿರಂಗಿ 1 ಕೋಟಿ ಟನ್ ಹಡಗುಗಳು ತಯಾರಿಸಲು 1941-42 ನೆಯ ವರ್ಷಗಳಿಗಾಗಿ 56 ಬಿಲಿಯನ್ ಡಾಲರ್‌ಗಳ ಮುಂಜೂರು ತಿಯ ವಿಷಯವನ್ನು ಅಮೆರಿಕನ್ ಕಾಂಗ್ರೆಸ್ಸಿಗೆ ಮಾಡಿ ಅನಂತರ ಭಾಷಣ ಮಾಡುತ್ತಾ ಸ್ವಾತಂತ್ರ್ಯ, ಧರ್ಮ ಸ್ವಾತಂತ್ರ್ಯ ಕೊಡಿಸುವುದು, ಆರ್ಥಿಕ ಕಷ್ಟನಿವೃತ್ತಿ ನಿರ್ಭಯವಾಗಿ ಜೀವನ ಮಾಡುವುದನ್ನು ವ್ಯವಸ್ಥಾನಗೊಳಿಸುವುದು" ಈ ಉದ್ದೇಶ ಸಾಧನೆಗಾಗಿ ಅಮೆರಿಕನ ಜನಾಂಗವು ಎಲ್ಲಾ ಕಡೆಗಳಲ್ಲಿಯೂ ಯುದ್ಧ ಮಾಡುವುದು ಬ್ರಿಟಿಷ್ ವೈಫಲ್ಯಗಳಿಲ್ಲದೆ ಯುದ್ಧ ಮಾಡಬೇಕಾಗುವುದು ಎಂದು ಹೇಳಿದರು

ಫ್ರಾನ್ಸಿನ ಪ್ಯಾರಿಸ್ ನಗರದಲ್ಲಿ ವಿದ್ಯಾರ್ಥಿಗಳ ತಂಡವೊಂದು 5 ಜನ ಜರ್ಮನ್ ಅಧಿಕಾರಿಗಳನ್ನು ಕೊಂದು 17 ಜನ ಇತರರಿಗೆ ಮಾರಣ ಪಡಿಸಿದರೆಂದು ಗೊತ್ತಾಗಿದೆ. ನಾಜಿಗಳು ವಿದ್ಯಾರ್ಥಿಗಳನ್ನು ಮಶೀನ್ ಗನ್‌ಗಳಿಂದ ಕೊಲ್ಲುತ್ತಿರುವರೆಂದು ಹೇಳಲಾಗಿದೆ.

ರಷ್ಯಾ ಸೈನ್ಯಗಳು ಬಲಿಷ್ಠವಾಲೆ ಉಳಿಯೋಗವನ್ನು ತೆಗೆದುಕೊಂಡು ಅನೇಕ ಪ್ರದೇಶಗಳನ್ನು ಜರ್ಮನರಿಂದ ಸೋವೆ ಮತ್ತು ಮೊಜಾಯ್ಸ್ಕ ಪಟ್ಟಣಗಳು ರಷ್ಯನರ ವಶವಾಗುವ ಲಕ್ಷಣಗಳು ತೋರಿಬರುತ್ತಿವೆ.

ಜಪಾನ ಸೈನ್ಯಗಳು ಮಲಯಾದ ದಕ್ಷಿಣದಲ್ಲಿ ಕೌಲಾ ಸಲಂಗಾರ ಸಮೀಪೆಸುತ್ತಿರುವೆನೊ ಫಿಲಿಪೈನ್‌ನಲ್ಲಿ ನಿರಾಶಾ ಜನಕ ಸುದ್ದಿ ತಿಳಿಯಲು ಗೊತ್ತಾಗಿದೆ

೨೬ನೇ ಕನ್ನಡ ಸಾಹಿತ್ಯ ಸಮ್ಮೇಲನದ ವಿವಿಧ ಕಾರ್ಯಕಲಾಪ.

ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿ ಆಯ್ಕೆ.

೨೬ ನೇ ಕನ್ನಡ ಸಾಹಿತ್ಯ ಸಮ್ಮೇಲನವು ನಿಜಾಮ ಸಂಸ್ಥಾನದ ರಾಜಧಾನಿಯಾದ ಹೈದರಾಬಾದದಲ್ಲಿ ೨೯ ನೇ ತಾರೀಖಿಗೆ ಪ್ರಾರಂಭವಾಯಿತು ಸಂಸ್ಥಾನದ ಶಿಕ್ಷಣ ಮಂತ್ರಿಗಳಾದ ನವಾಬ ಮೆಹದಿಯಾರಜಂಗ ಬಹದ್ದೂರರು ಸಮ್ಮೇಲನದ ಉದ್ಘಾಟನ ಮಾಡಿದರು

ಸಮ್ಮೇಲನಕ್ಕೆ ಬೇರೆ ಬೇರೆ ಭಾಗಗಳಿಂದ ಕೂಡಿ ೨ ಸಾವಿರ ಜನ ಸ್ತ್ರೀಯರು ನೇರಿದ್ದರು ಅವರಲ್ಲಿ ರಾಜಾಬಹಾದ್ದೂರ, ದರ್ಮಕರಣ ರಾಜಾ ಪನ್ನಾಲಾಲ, ಗುಂಡೆರಾವ, ಅರವಮುದ ಅಯ್ಯಂಗಾರ, ಜನಾರ್ದನರಾವ ದೇಸಾಯಿ, ಜಸ್ಟಿಸ್ ರಾಮಚಂದ್ರ ನಾಯಿಕ, ಡಾ ನಾಯಿಡು ಡಾ ಮೇಲುಕೋಟೆ, ರಾಣಿಸಾಹೇಬ ಚಿಂಚೋಳಿ, ಚಂದ್ರಶೇಖರ ಶಾಸ್ತ್ರಿಗಳು, ಪದ್ಮಜಾ ನಾಯಿಡು ಮಾಸ್ತಿ ವೆಂಕಟೇಶ ಅಯ್ಯಂಗಾರ ಪ್ರೋ ಬಿ ಎಂ ಶ್ರೀಕಂಠಯ್ಯ, ಚಿದಂಬರ ವೀರಭದ್ರ ಶಾಸ್ತ್ರಿಗಳು, ಡಿ ಚಂಪಾಬಾಯಿ ಮೊದಲಾದವರು ಪ್ರಮುಖರಿದ್ದರು

ಉದ್ಘಾಟಕ ಭಾಷಣ ಮುಗಿದ ಒಲಿಕ ಸ್ವಾಗತಾಧ್ಯಕ್ಷರಾದ ಶ್ರೀ ಗುಡಗುಂಟಿ ರಾಮಾಚಾರ್ಯರ ಭಾಷಣವಾಗಿ ಅಧ್ಯಕ್ಷರ ಆಯ್ಕೆ ನಡೆಯಿತು ಶ್ರೀ ಜನಾರ್ದನರಾವ ದೇಸಾಯಿಯವರು ನಿಘೋಜಿತ ಅಧ್ಯಕ್ಷರಾಗಿ ಪ್ರೋ ಎ ಆರ್ ಕೃಷ್ಣ ಶಾಸ್ತ್ರಿಯವರ ಹೆಸರು ಸೂಚಿಸಿ ಅವರ ಪರಿಚಯ ಮಾಡಿಕೊಟ್ಟರು ಅನಂತರ ಮಾಸ್ತಿ ವೆಂಕಟೇಶ ಅಯ್ಯಂಗಾರ, ವ್ಹಿ. ಬಿ ನಾಯಿಕ, ಕೃಷ್ಣ ಶರ್ಮ ಬೆಟಗೇರಿ, ಪ್ರಿ. ಗೋಕಾಕ, ಬಿ ಡಿ ಬೆಳವಿ ಇವರು ಅದಕ್ಕೆ ಅನುಮೋದನ ಕೊಟ್ಟರು ಪ್ರೋ ಎ. ಆರ್ ಕೃಷ್ಣಶಾಸ್ತ್ರಿಗಳು ಅಧ್ಯಕ್ಷಸ್ಥಾನ ಅಲಂಕರಿಸಿದರು

ಅನಂತರ ಶುಭಸಂದೇಶಗಳು ಓದಿ ತೋರಿಸಲ್ಪಟ್ಟವು ನವಾಬ ಭತ್ತಾರಿ, ದಿವಾಣ ಎನ್ ಮಾಧವರಾವ, ಶೃಂಗೇರಿ ಸ್ವಾಮಿ, ಪಾಲಪಾರು ಶ್ರೀಗಳು, ಗುರು ಘರಾಜೇಂದ್ರಸ್ವಾಮಿ, ಸಾಂಗಲಿ ಮಹಾರಾಜರು, ನಂಟುಮುರಿ ಸರದೇಸಾಯರು, ದಿ! ಬಿ! ಕೆ. ರಾಮಸ್ವಾಮಿ, ಸೋಫಿಯಾ ವಾಡಿಯಾ ಮೊದಲಾದವರಿಂದ ಸಂದೇಶಗಳು ಬಂದಿದ್ದವು ಆಮೇಲೆ ಅಧ್ಯಕ್ಷರ ಭಾಷಣವಾಗಿ ನಿಜಾಮರ ಮಾತೆಯ ನಿಧನದ ಬಗ್ಗೆ ದುಃಖ ವ್ಯಕ್ತ ಮಾಡುವದು, ನಿಜಾಮರು ಹಾಗು ಮೈಸೂರ ಮಹಾರಾಜರಲ್ಲಿ ನಿಷ್ಠೆ ಪ್ರದರ್ಶಿಸುವದು ಹೀಗೆ ಗೊತ್ತುವಳಿಗಳಾಗಿ, ಬಿ.ಎಂ ಶ್ರೀಯವರ ಭಾಷಣದಿಂದ ಮುಂಜಾವಿನ ಕಾರ್ಯಕ್ರಮ ಕೊನೆಗಂಡಿತು. ನಿಜಾಮ ಸರಕಾರವರು ಸಮ್ಮೇಳನಕ್ಕೆ ೨೦೦೦ ರೂ.ಕೊಟ್ಟಿರುವರೆಂದು ಶ್ರೀ ಯವರು ಸಭೆಯಲ್ಲಿ ತಿಳಿಸಿದರು

೩೦ ನೇ ತಾರೀಖಿನ ದಿವಸ ಸಮ್ಮೇಲನವು ಪ್ರಥಮ ಕೂಡಿ ಅನೇಕ ಗೊತ್ತುವಳಿಗಳು ಸ್ವೀಕರಿಸಲ್ಪಟ್ಟವು ಸೊಲ್ಲಾಪುರ ಕೋರ್ಟ ಕಚೇರಿಗಳಲ್ಲಿ ಕನ್ನಡ ಭಾಷೆ ನಡೆಯಬೇಕು ಜಿಲ್ಲೆಯ ಅಂಠ ಕನ್ನಡ ಹಳ್ಳಿಗಳಲ್ಲಿ ಕನ್ನಡ ಶಾಲೆ ಪ್ರಾರಂಭಿಸಬೇಕು ಹೈದರಾಬಾದ ಸಂಸ್ಥಾನದಲ್ಲಿ ಶಾಲಗಳನ್ನು ತೆರೆಯುವದಕ್ಕಿದ್ದ ನಿರ್ಬಂಧ ತೆಗದೊಗಯಬೇಕು. ಕನ್ನಡ ಶಾಲೆ ಇಲ್ಲದ ಸ್ಥಳಗಳಲ್ಲಿ ಕನ್ನಡ ಶಾಲೆ ತೆಗೆಯಲು ಒಯಸುವವರಿಗೆ ಸಾಹಿತ್ಯ ಪರಿಷತ್ತು ಸಾಧ್ಯವಿದ್ದ ಸಹಾಯ ಸೌಕರ್ಯ ದೊರಿಸಿ ಕೊಡಬೇಕು ಮುಂಬಯಿ, ಮದ್ರಾಸ, ಹೈದರಾಬಾದ, ತ್ರಾವಣಕೋರ ಪ್ರದೇಶಗಳಲ್ಲಿಯೂ ಕನ್ನಡಿಗರಿಗೆ ಸುದ್ದಿ, ಸಂಗೀತ, ಸಾಹಿತ್ಯ ಆಕಾಶವಾಣಿ ಮೂಲಕ ಹೇಳುವ ವ್ಯವಸ್ಥೆ ಆ ಆ ಸರಕಾರದವರು ಮಾಡಬೇಕು ಕನ್ನಡ ನಾಡಿನ ಹಾಯಸ್ಕೂಲ, ನಾರ್ಮಲಸ್ಕೂಲ, ಕಾಲೇಜಗಳಲ್ಲಿ ಗನುಕ ಶಿಕ್ಷಣದ ಏರ್ಪಾಡು ಮಾಡಬೇಕು ಸಾಹಿತಿಗಳ, ಕೃತಿ, ಗ್ರಂಥ ಮೊದಲಾದುವುಗಳನ್ನು ಪಠ್ಯ ಪುಸ್ತಕ ಮೊದಲಾದುವುಗಳಲ್ಲಿ ಸಂಗ್ರಹಿಸುವಾಗ ಸಾಹಿತ್ಯಕರಿಗೆ ಯೋಗ್ಯ, ಸಂಭಾವನೆ ಕೊಡಬೇಕು. ಹೈದರಾಬಾದ ಸಂಸ್ಥಾನದಲ್ಲಿ ಹೆಣ್ಣುಮಕ್ಕಳು ಉರ್ದು ಬದಲು ಕಡ್ಡಾಯವಾಗಿ ಕಲಿಯಬೇಕೆಂಬ ನಿರ್ಬಂಧವನ್ನು ತೆಗೆದುಹಾಕಬೇಕು ನಿಜಾಮ ಕರ್ನಾಟಕದ ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡವೇ ಬೋಧ ಭಾಷೆಯಾಗಬೇಕು ಹೈದರಾಬಾದ ಸಂಸ್ಥಾನದ ಸಾಹಿತ್ಯ ಸಂಶೋಧನ ಖಾತೆಯಲ್ಲಿ ಕನ್ನಡ ವಿಭಾಗ ಏರ್ಪಡಿಸಬೇಕು ಹೈದರಾಬಾದಿನಿಂದ ಕರ್ನಾಟಕದ ಸೌರಭಿಸು**ವದಕ್ಕೆ ಸರಕಾರದವರು ಅಪ್ಪಣೆ ಕೊಡಬೇಕು; ಹೈದರಾಬಾದ ಸಂಸ್ಥಾನದ ಕನ್ನಡಭಾಗಗಳ ಗ್ರಾಮಸ್ಥರು, ತಹಸೀಲದಾರರು, ಅಂಚೆ ಕಚೇರಿಯವರು ಕನ್ನಡದಲ್ಲಿಯೂ ತಮ್ಮ ಕಾಗದ ಪತ್ರ ಇದಬೇಕು ಮುಂತಾದುವುಗಳು ಅವುಗಳಲ್ಲಿ ಪ್ರಮುಖವಿರುವವು.**

ಇತರಗೋಷ್ಠಿಗಳ.

ಸಾಹಿತ್ಯ ಸಮ್ಮೇಲನದ ಅಂಗವಾಗಿ ಶ್ರೀಮತಿ ಚಂಪಾಬಾಯಿಯವರ ಅಧ್ಯಕ್ಷತೆಯಲ್ಲಿ ಮಹಿಳಾ ಗೋಷ್ಠಿ, ಪ್ರೋ. ಕುಂದಣಗಾರರ ಅಧ್ಯಕ್ಷತೆಯಲ್ಲಿ ಸಾಹಿತ್ಯಗೋಷ್ಠಿ, ಶ್ರೀ ಸಾಲಿ ರಾದುಚಂದ್ರರಾಯರ ಅಧ್ಯಕ್ಷತೆಯಲ್ಲಿ ಕವಿ ಗೋಷ್ಠಿ, ಪ್ರೋ. ಮುಗಳಿಯವರ ಅಧ್ಯಕ್ಷತೆಯಲ್ಲಿ ನಾಟ್ಯ ಗೋಷ್ಠಿ ಸಾಂಗವಾದವು. ಮಹಿಳಾ ಗೋಷ್ಠಿಯ ಉದ್ಘಾಟನವು ಚಿಂಚೋಳಿ ರಾಣಿಸಾಹೇಬರಿಂದಲೂ ಸಾಹಿತ್ಯ ಗೋಷ್ಠಿ ಉದ್ಘಾಟನವು ಗುಂಡಗುಂಟ ರಾಜರಾದ ಜಡೆ ಸೋಮಪ್ಪನವರಿಂದಲೂ ನೆರವೇರಿದವು. ಸಾಹಿತ್ಯ ಗೋಷ್ಠಿಯಲ್ಲಿ ಈ ಸಲ ಕನ್ನಡದಲ್ಲಿಯ ಹಾಸ್ಯದ ಬಗ್ಗೆ ವಿಚಾರ ಸಂಕರಣ ನಡೆಯಿತು ಇದರಲ್ಲಿ ಶ್ರೀಯುತರಾದ ಮಾಸ್ತಿ, ಬೇಂದ್ರೆ, ವ್ಹಿ. ಬಿ ನಾಯಿಕ, ಬೆಟಗೇರಿ ಕೃಷ್ಣಶರ್ಮ, ಜಿ. ಬಿ ಜೋಶಿ ಮೊದಲಾದವರು ಭಾಗವಹಿಸಿದ್ದರು,

ಪರಿಷತ್ತಿನ ವಾರ್ಷಿಕಾಧಿವೇಶನ

ಪರಿಷತ್ತಿನ ವಾರ್ಷಿಕಾಧಿವೇಶನವು ೩೦ ನೇ ತಾರೀಖಿನ ದಿವಸ ಉಪಾಧ್ಯಕ್ಷರಾದ ಪ್ರೋ ಬಿ. ಎಂ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಕಳೆದ ವರ್ಷದ ವರದಿಯ ಸ್ವೀಕಾರ, ಮುಂದಿನ ವರ್ಷದ ಆಯವ್ಯಯ ಪತ್ರಿಕೆಯ ಸ್ವೀಕಾರ, ನಿಬಂಧನೆಗಳಲ್ಲಿ ಕೆಲವು ತಿದ್ದುಪಡಿ ಮೊದಲಾದ ಕಾರ್ಯ ನೆರವೇರಿತು. ಕನ್ನಡ ವಿಶ್ವಕೋಶ ನಿರ್ಮಾಣ ಬಗ್ಗೆ ಕಾರ್ಯಕಾರಿ ಮಂಡಲದವರು ಉಪಸಮಿತಿ ನಿಯಮಿಸಬೇಕೆಂತ್ತಾಯಿತು. ಅನಂತರ ಅಧಿಕಾರಿಗಳ ಆಯ್ಕೆ ನಡೆದು ರಾಜಾ ಬನವಪ್ರಭ

(6 ನೇ ಪುಟಕ್ಕೆನ್ನು ನೋಡಿರಿ)

ಪೆಸಿಫಿಕ್ ಸಾಗರದಲ್ಲಿ

ಹವಾಯಿ ದ್ವೀಪಗಳ ಮಹತ್ವ.

[ಕರ್ಮವೀರ ಪತ್ರಿಕೆಯ ಕೃಪೆ.]

ಹವಾಯಿ ದ್ವೀಪಗಳಿಗೆ ಸೇಂದವಿಚ್ ದ್ವೀಪಗಳೆಂದೂ ಹೆಸರು ಇದೆ. ಸಾಲಾಗಿ ವಾಯವ್ಯದಿಂದ ಆಗ್ನೇಯಕ್ಕೆ ಈ ದ್ವೀಪಗಳು ಹಬ್ಬಿವೆ. ನಿಹುವ, ಕವ್ಯಾಯಿ, ಓವಾಹು, ಮೇಲಕಾಯಿ, ಮೌಹಿ, ಕಹೂಲಾಯಿ, ಹವಾಯಿ ಮೊದಲಾದ ಎಂಟು ದ್ವೀಪಗಳು ಒಟ್ಟು ಸೇರಿ ಹವಾಯಿ ದ್ವೀಪಗಳೆನಿಸಿವೆ ಈದ್ವೀಪಗಳು ಟೋಕಿಯೋದಿಂದ ಮೂರುನೂರೆ ಸಾವಿರ ಮೈಲು ದೂರದಲ್ಲಿವೆ. ಪಾಶಿಂಗಟನದಿಂದ ೪೦೦೦ ಮೈಲೂ ಸ್ಯಾನ ಫ್ರಾನ್ಸಿಸ್ಕೋದಿಂದ ೨೦೦೦ ಮೈಲು ದೂರದಲ್ಲಿವೆ. ಹೀಗೆ ಮಧ್ಯದಲ್ಲಿರುವದರಿಂದ ಈ ದ್ವೀಪಗಳಿಗೆ ಎಂದೂ ಇಲ್ಲದ ಮಹತ್ವ ದೊರಕಿದೆ. ಈ ದ್ವೀಪಶ್ರೇಣಿಗಳ ಪುರಾತಿಹಾಸವು ಸಂಶೋಧಕ ದೃಷ್ಟಿಯಿಂದ ಮಹತ್ವದ್ದಿದೆ ಹಿಂದುಸ್ಥಾನದವರಿಗೂ ಇಲ್ಲಿಯ ಮೂಲ ನಿವಾಸಿಗಳಿಗೂ ವ್ಯಾಪಾರ ವ್ಯವಹಾರ ಸಂಬಂಧವು ಬಹಳ ಪ್ರಾಚೀನ ಕಾಲದಿಂದಲೇ ಇತ್ತೆಂದು ಹೇಳಲಾಗಿದೆ ಈ ದ್ವೀಪಗಳಲ್ಲಿ ಸಿದ್ಧವಾದ ಶ್ರೀಗಂಧ ಕಟ್ಟಿಗೆಯ ಸಾಮಗ್ರಿಗಳು ತಮ್ಮಲೇ ಒಂದು ವೈಶಿಷ್ಟ್ಯದಿಂದ ಜಗತ್ಪ್ರಸಿದ್ಧವಾಗಿದ್ದವು ಇಲ್ಲಿಯ ಮೂಲ ನಿವಾಸಿಗಳು ತಾಮ್ರವರ್ಣದವರಿದ್ದು ಯುದ್ಧ ಪ್ರಿಯರೆಂದೂ ಕುಡುಕರೆಂದೂ ವಿಷಯಲಂಪಟರೆಂದೂ ಐತಿಹ್ಯವಿದೆ

ಪಾಶ್ಚಾತ್ಯರಲ್ಲಿ ಇದನ್ನು ಮೊಟ್ಟ ಮೊದಲು ಕಂಡುಹಿಡಿದವನು ಕುಕ್ಕ ಎಂಬವನು ಇಲ್ಲಿಗೆ ಬಂದೊಡನೆ ಮೂಲನಿವಾಸಿಗಳು ಬಹಳ ಅದರದಿಂದ ಅವನನ್ನು ಕಂದರು, ಅವತಾರಪುರುಷನೆಂದು ಪೂಜಿಸಿದರು ಕೊನೆಗೆ ಯಾವುದೋ ಒಂದು ಬಗೆಯಿಂದ ಭಿನ್ನಾಭಿಪ್ರಾಯವುಂಟಾಗಿ ಮೂಲನಿವಾಸಿಗಳ ಮನೋಭಾವನೆಗೆ [illegible] ಯ ಪದವಿಗೆಳಲಿಸಲ್ಲಿ ಆಳಿ ಅಧಿಪತಿಯೆನಿಸಿದವನು. ಕುಕ್ಕನು ಇಲ್ಲಿ ಬಂದಾಗ ಕಾಮೇಹ ಮೇಹನೇ ಆಳುತ್ತಿದ್ದನೆಂದು ಹೇಳಲಾಗಿದೆ. ಆನಂತರ ಕ್ರೈಸ್ತ ಮಿಶನರಿಗಳು ಬಂದರೂ ಮೊದಲನೆ ಕಾಮೇಹ ಮೇಹನನ್ನು ಧರ್ಮಾಂತರ ಮಾಡುವುದು ಶಕ್ಯವಾಗಲಿಲ್ಲ ಈ ರಾಜಮನೆತನದವರು ಮೊನ್ನೆ ತನಕ ಆಳಿದರು. ೧೮೬೩ ರಲ್ಲಿ ಐದನೇ ಕಾಮೇಹನು ಮರಣ ಹೊಂದಿದ ಬಳಿಕ ಈ ರಾಜಮನೆತನವು ಕೊನೆಗೊಂಡಿತು. ಅಪ್ಪರಲ್ಲಿ ಐರೋಪ್ಯರು, ಅಮೇರಿಕನ್ನರು, ಚೀನಿಯರು ಮೊದಲಾದ ಬೇರೆ ವರ್ಗದವರು ಇಲ್ಲಿ ಬಂದು ಸೇರಿದರು. ಮೂಲನಿವಾಸಿಗಳ ಸಂಖ್ಯೆ ಕಡಿಮೆಯಾಗಹತ್ತಿತು ೧೮೯೬ ರಲ್ಲಿ ಈ ದ್ವೀಪಗಳು ಸಂಯುಕ್ತ ಸಂಸ್ಥಾನಕ್ಕೆ ಸೇರಿಸಲ್ಪಟ್ಟವು ೧೯೧೦ ರಲ್ಲಿ ಆಡಳಿತೆಯಲ್ಲಿ ಎಷ್ಟೋ ಬದಲಾಯಿತು ವರಕೀಯರು ಬಂದು ನೆಲೆಸಿದಂತೆ ಹವಾಯಿ ಜನರ ಸಂಖ್ಯೆ ಕಡಿಮೆಯಾಗಹತ್ತಿತು. ಮೂಲ ನಿವಾಸಿಗಳು ಕ್ರೈಸ್ತರಾದರು ೧೯೧೯ ರಲ್ಲಿ ಈ ದ್ವೀಪಗಳ ಜನಸಂಖ್ಯೆ ೨ ಲಕ್ಷವಿತ್ತೆಂದೂ, ಆ ಸ್ಥೈಕಲಂ ಸಾವಿರ ಜನರಿದ್ದರೆಂದೂ, ೧೯೩೦ ಸಾವಿರ ಐರೋಪ್ಯರು ಮತ್ತು ಮೇರಿಕನ್ನರು ಇದ್ದರೆಂದೂ ಹೇಳಲಾಗಿದೆ ೧೯೩೦ ರಲ್ಲಿ ದ್ವೀಪಗಳ ಜನಸಂಖ್ಯೆ ಸುಮಾರು ೪ ಲಕ್ಷದ ಹತ್ತೆರಡು ಸಾವಿರ ಇತ್ತು ಈ ಸ್ಥೈಕಲಂ ಸಾವಿರ ನುಂದಿ ಪರಕೀಯರೆಂದೂ ತಿಳಿದುಬಂದಿದೆ ಇದೇರೀತಿ ಮೂಲ ನಿವಾಸಿಗಳ ಜನಸಂಖ್ಯೆಯು ಇಳಿಯುತ್ತಾ ಬಂದರೆ ಮುಂದೊಂದು ಶತಮಾನದಲ್ಲಿ ಮೂಲ ನಿವಾಸಿಗಳು ಪೂರ್ಣವಾಗಿ ಅಳಿಯುವುದು

ನೈಸರ್ಗಿಕ ಪರಿಸ್ಥಿತಿ

ಈ ದ್ವೀಪಗಳು ನಿಸರ್ಗದತ್ತವಾದ ಸೌಲಭ್ಯ ಮತ್ತು ಸೌಂದರ್ಯದಿಂದ ಕೂಡಿದ್ದು ಚಿತ್ತಾಕರ್ಷಕವಾಗಿವೆ. ನಮ್ಮ [illegible] ಸಿವೆ ಇಲ್ಲಿಯ ಭೂಸ್ಥಿತಿಯು ಬಹಳ ಪಲನತ್ತಾಗಿರುವದರಿಂದ ನಯನೀಯೋ ಪ್ರದೇಶದಲ್ಲಿ ಬೆಳೆಯುವ ಯಾವ ಗಿಡಮರಗಳು ಹಾಗೂ ಬೆಳೆಗಳು ಸಮೃದ್ಧವಾಗಿ ಬೆಳೆಯುತ್ತಿವೆ. ವಿವಿಧಜಾತಿಯ ಸುಂದರವಾದ ಪಕ್ಷಿಗಳು ತಮ್ಮ ಇಷ್ಟಾನಿಷ್ಟಗಳಿಂದ ಮತ್ತೆಷ್ಟು ಮನೋರಂಜಕವಾಗಿವೆ. ಬೇಕಾದಾಗ ಮಳೆ ಬರುವುದರಿಂದ ಜಲಾಶ್ರಯವಿದ್ದು ಬಗೆ ಬಗೆಯ ಬೆಳೆಗೆ ಅನುಕೂಲವಾಗಿವೆ. ಇನ್ನಿತರ ಶಾಂತಸಾಗರದ ದ್ವೀಪಕಲ್ಪಗಳಂತೆ ಇಲ್ಲ ಕಾಡುಮೃಗಗಳಿಲ್ಲ. ಇಲ್ಲಿ ಇಲ್ಲಿ ಹೆಗ್ಗಣಗಳನ್ನು ಮಾತ್ರ ನೋಡಬಹುದು. ತರತರದ ನೀನುಗಳು ದೊರೆಯುತ್ತವೆ. ಒಂದು ಜಾತಿಯ ಹುಳವನ್ನು ನಾಶಪಡಿಸುವದಕ್ಕೆ ಇಲ್ಲಿ ಕಪ್ಪೆಗಳನ್ನು ಸಾಕುತ್ತಾರೆ. ಪರದೇಶಗಳಿಂದ ಬಂದ ಜನರೊಡನೆ ಉಷ್ಣಪಕ್ಷಿಗಳೂ ಇಲ್ಲಿಗೆ ಬಂದಿವೆ. ನಾಡಹಂದಿ, ಕೋಳಿ, ದನಕರಗಳು, ಆಡು, ಕುರಿಗಳು ಇಲ್ಲಿ ವಿಶೇಷವಾಗಿ ದೊರೆಯುತ್ತವೆ. ಪೋರ್ತುಗೀಸರು ಹಾಲು ಮಾರುತ್ತಾರೆ ಚೀನಿಯರು ಭತ್ತ ಬೆಳೆಸುತ್ತಾರೆ. ಜಪಾನರು ಕಬ್ಬು ಬೆಳೆಸುತ್ತಾರೆ. ಇಲ್ಲಿಯ ಮೂಲನಿವಾಸಿಗಳು ತಾಮ್ರ ಮಿಶ್ರಿತ-ಹಳದಿ ಮೈಬಣ್ಣದವರಿರುವುದರಿಂದ ಇವರನ್ನು ಕನಕರೆಂದು ಕರೆಯುವುದುಂಟು ಇವರು ಆಲಸಿಗಳು ಹಗಲೆಲ್ಲ ಸುಖತೋಲುಪತೆಯಲ್ಲಿ ಕಾಲಕಳೆಯುವುದು ಇವರಿಗೆ ಇಷ್ಟ. ಇಲ್ಲಿ ಬಂದು ಜಾತಿಯ ಟಾಕಣ ಕುದುರೆಗಳು ಸಿಗುವುದರಿಂದ ಅವುಗಳ ಮೇಲೆ ಸವಾರಿ ಮಾಡುವುದೆಂದರೆ ಇಲ್ಲಿಯ ಜನರಿಗೆ ತುಂಬಾ ಸಂತೋಷ. ಈ ದ್ವೀಪಗಳ ವಿಸ್ತೀರ್ಣ ೬೫೦೦ ಚೌರಸ ಮೈಲು. ಹವಾಯಿ ದ್ವೀಪವು ಉಳಿದ ಎಲ್ಲ ದ್ವೀಪಗಳ ಒಟ್ಟು ವಿಸ್ತೀರ್ಣದ ಎರಡು ಪಾಲಷ್ಟು ದೊಡ್ಡದಿದೆ ಅತೀ ಉತ್ತರಕ್ಕಿರುವ ಓವಾಹು ದ್ವೀಪವು ೬೦೦ ಮೈಲು ವಿಸ್ತೀರ್ಣವಿದ್ದು ಹೋನಲುಲುವು ಅದರ ಮುಖ್ಯ ಪಟ್ಟಣವಾಗಿದೆ ಈ ದ್ವೀಪಗಳಲ್ಲಿ ವಿಪುಲವಾಗಿ ಪೈರು, ಪಚ್ಚೆ ಹಸರು ಹುಲ್ಲು ಬೆಳೆಯುತ್ತದೆ. ಇದೊಂದು ಸುಂದರವಾದ ನಗರ ಇಲ್ಲಿ ಎಲ್ಲ ಆಧುನಿಕ [illegible] ನವನ್ನು ನೋಡಬಹುದು ಜನಸಂಖ್ಯೆ ೧೫೩೩ ಸಾವಿರ ಹೆಚ್ಚು ಕಡಿಮೆ ಜನರೆಲ್ಲ ಅಲಂಕಾರ ಪ್ರಿಯರೆನ್ನಬಹುದು. ಇಲ್ಲಿ ಸೊಳ್ಳೆಗಳ ಕಾಟ ಮಾತ್ರ ಹೆಚ್ಚು

ಕಾಮೇಹ ಮೇಹರು

ಈ ದ್ವೀಪಗಳನ್ನು ಆಳಿದವರಲ್ಲಿ ಕಾಮೇಹ ಮೇಹರಾಜನು ಸುಪ್ರಸಿದ್ಧನು ಅವನ [illegible]

126

ಇಲ್ಲಿಯ ಬಂದರುಗಳಲ್ಲಿ ನರ್ಮ ಬಂದರವು ಅತಿ ಮುಖ್ಯವಾದುದು ಇದು ಅಮೇರಿಕನರ ಮುಖ್ಯ ನೌಕಾ ಕೇಂದ್ರ. ಇಲ್ಲಿಯ ಜನರು ಕುಡುಕರಿದ್ದಂತೆ ದ್ಯೂತ್ಯ ಪ್ರಿಯರಿರುವರು

ಜ್ವಾಲಾಮುಖಿಯ ಅಂಜಿಕೆ

ಈ ದ್ವೀಪಗಳಿಗೆ ಜ್ವಾಲಾಮುಖಿಯ ಅಂಜಿಕೆಯು ತಪ್ಪಿದ್ದಲ್ಲ ಈಗ್ಗೆ ಎರಡು ಮೂರು ಶತಮಾನಗಳಿಂದ ಭೂಗರ್ಭವು ಬಹಳ ಶಾಂತವಿದ್ದಂತೆ ಕಂಡುಬರುತ್ತದೆ ಇಲ್ಲಿಯ ಪರ್ವತಗಳು ೧೪ ಸಾವಿರ ಅಡಿ ಎತ್ತರವಿದ್ದಂತೆ ಹೇಳಲಾಗಿದೆ.

ಮೌಹಿ ದ್ವೀಪ

ಹವಾಯಿ ದ್ವೀಪಶ್ರೇಣಿಯಲ್ಲಿ ಮೌಹಿ ದ್ವೀಪಕ್ಕೆ ಸಾಕಷ್ಟು ಸುಪ್ರಸಿದ್ಧ ಇಂ ದೊತ್ತ ದೊತ್ತ ಪರ್ವತ ಶಿಖರಗಳು ಗಗ ನಮುಂಡಲವನ್ನು ಭೇದಿಸಿವೆ ೧೦ ಸಾವಿರ ಅಡಿ ಎತ್ತರದ ಪರ್ವತ ಪ್ರದೇಶದಲ್ಲಿ ಜ್ವಾಲಾಮುಖಿಯಿಂದ ಏಳು ಮೈಲು ವಿಸ್ತೀರ್ಣದಲ್ಲಿ ೪ ಸಾವಿರ ಅಡಿ ಆಳವಾದ ತಗ್ಗು ದಿಣ್ಣೆಗಳನ್ನು ಕಾಣಬಹುದು ಈ ಪ್ರದೇಶವು ಸುಂದರವಾಗಿದ್ದು ಎಲ್ಲ ರ ಮನಸ್ಸನ್ನೆಳೆಯುವಂತಿದೆ ಒಟ್ಟು ಈ ಎಂಟು ದ್ವೀಪಗಳಲ್ಲಿ ಹೊನಲುಲು ದ್ವೀಪವೆಂದರೆ ಜನರು ಅಂಜುವರು ಅದು ಕುಷ್ಠರೋಗಿಗಳ ಆಗರ. ರಾಜಮನೆತನದವರಿಂದ ಹಿಡಿದು ಸಾಮಾನ್ಯರ ವರೆಗೆ ಈ ಹಿರಿ ಬೇ ನೆ ಗೆ ಗುರಿಯಾದವರನ್ನು ಪ್ರತ್ಯೇಕಿಸಿ ಇಲ್ಲಿಗೆ ಕಳುಹಿಸಲಾಗುವದು

ಇನ್ನಿತರ ದ್ವೀಪಗಳೂ ಸಹ ಎಲ್ಲಿ ರೀತಿಯಿಂದಲೂ ಸಂಪತ್ಸಮೃದ್ಧವಾಗಿವೆ. ಒಂದು ಕಾಲದಲ್ಲಿ ತಿಮಂಗಿಲಗಳ ಬೇಟೆಗೆ ವಿಶ್ವದ ನಿಂದ ಜನರು ಅಲ್ಲಿಗೆ ಹೋಗುತ್ತಿದ್ದರು

ಉಪಸಂಹಾರ

ಈ ದ್ವೀಪಗಳಿಗೆ ಪ್ರಜಾಪ್ರಭುತ್ವ ಸರಕಾರವಿದೆ. ಅಮೇರಿಕೆಯ ಆಧೀನದಲ್ಲಿ ಎ ಷ್ಟೋ ಪ್ರಗತಿಯಾದುದುಂಟು. ಈ ದ್ವೀಪಗಳು ವಿಶ್ವ ದ ಶಾಂತಸಾಗರಕ್ಕೆ ಅಮೇರಿಕನರ ಹೆಬ್ಬಾಗಿಲೆನ್ನಬಹುದು. ಇವನ್ನು ಕೈವಶ ಮಾಡಿಕೊಳ್ಳಬೇಕೆಂದು ಜಪಾನರು ಅನೇಕ ವರ್ಷಗಳಿಂದ ಪ್ರಯತ್ನಿಸುತ್ತಿದ್ದರು. ಈಗ ನಡೆಯುತ್ತಿರುವ ಶಾಂತಸಾಗರದ ಯುದ್ಧವಾದರೂ ಈಗುರಿಯನ್ನು ಸಾಧಿಸುವ ಸಲುವಾಗಿಯೇ ಮಾಡಲಾಗುತ್ತಿದೆಯೆಂದು ಹೇಳಿದಿಗತ್ಯಂತರವಿಲ್ಲ. ಅಮೇರಿಕನರು ಈ ದ್ವೀಪಕಲ್ಪಗಳನ್ನು ಬಹಳ ದಕ್ಷತೆಯಿಂದ ಕಾಪಿಟ್ಟುಕೊಳ್ಳಬೇಕಾಗುವುದು. ಯಾಕೆಂದರೆ ಹೇಗಾದರೂ ಈ ದ್ವೀಪಗಳನ್ನು ಕೈವಶ ಮಾಡಿಕೊಂಡು ಪನಾಮಾ ಭೂಕಂಠವನ್ನು ಭೇದಿಸಿ ಅಮೇರಿಕದ ಮೇಲೆ ದಾಳಿಮಾಡಿ ಹಡಗೆಡಿಸಿ ತಮ್ಮ ಸಾಮ್ರಾಜ್ಯವನ್ನು ಶಾಂತಸಾಗರದಲ್ಲಿ ಬೆಳೆಸಬೇಕೆಂಬುದು ಜಪಾನರ ದೂರದೃಷ್ಟಿಯ ಗುರಿ ಆದ ಕಾರಣ ಉತ್ತರ ದಕ್ಷಿಣ ಅಮೇರಿಕೆಗಳೆರಡೂ ಈ ಜಲದುರ್ಗಗಳನ್ನು ಸುತ್ತಿಪ್ಪ ಬಲಗೂಳಿಸಿ ಜಪಾನದ ದಾಳಿಯಿಂದ ಉಳಿಸುವುದು ಅತ್ಯಾವಶ್ಯಕವಿದೆ

ಬಾರ್ಡೋಲೀ ನಿರ್ಣಯ.

ಮಹಾತ್ಮಾ ಗಾಂಧಿಯವರ ಅಭಿಪ್ರಾಯ.

ನನ್ನ ಅಭಿಪ್ರಾಯವು ಹೇಗೇ ಇರಲಿ ಈ ವಿಚಾರದಲ್ಲಿ ನೀವು ನಿಮ್ಮ ಸ್ವತಂತ್ರ ಅಭಿಪ್ರಾಯವನ್ನು ಉಪಯೋಗಿಸಬೇಕು ಎಂಬುದಾಗಿ ಗಾಂಧೀಜಿಯವರು ಗುಜರಾತಿನ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಮಾತನಾಡುತ್ತ ತಿಳಿಸಿದರು. ಬಾರ್ಡೋಲಿ ನಿರ್ಣಯಗಳನ್ನು ಕುರಿತು ಒಂದು ಘಂಟೆಯಕಾಲ ತಮ್ಮ ಅಭಿಪ್ರಾಯಗಳನ್ನು ಗಾಂಧೀಜಿಯವರು ವಿವರಿಸಿ, ವಾರ್ಧಾದಲ್ಲಿ ನೇರುವ ಎ. ಐ. ಸಿ. ಸಿ. ಯಲ್ಲಿ ತಮ್ಮ ನಿಷ್ಪಕ್ಷಪಾತವಾದ ಅಭಿಪ್ರಾಯವನ್ನು ಗುಜರಾತಿನ ಸದಸ್ಯರು ವ್ಯಕ್ತಪಡಿಸಬೇಕೆಂದು ತಿಳಿಸಿದರು.

ತಾವು ಕಾಂಗ್ರೆಸನ್ನು ತ್ಯಜಿಸಿಲ್ಲವೆಂದೂ, ಮುಂಬಯಿನಲ್ಲಿ ಸಹ ತಮ್ಮ ಸ್ಥಾನ ವಿದೇಶಿತ ಇತ್ತೆಂದೂ ಗಾಂಧೀಜಿಯವರು ತಿಳಿಸಿ ನಾನು ಕಾಂಗ್ರೆಸ್ ನೇತಕ, ಸತ್ಯ ಮತ್ತು ಅಹಿಂಸಾ ತತ್ವಗಳ ಆಧಾರದಮೇಲೆ ಕಾಂಗ್ರೆಸಿಗೆ ಸೇವೆಮಾಡಬೇಕೆಂಬುದು ನನ್ನ ಇಷ್ಟ. ಬ್ರಿಟನ್ನು ಭರತಖಂಡಕ್ಕೆ ಸ್ವರಾಜ್ಯವನ್ನು ಕೊಡುವುದಾದರೆ ಸಂಗ್ರಾಮ ಪ್ರಯತ್ನದಲ್ಲಿ ಬ್ರಿಟನ್ನಿನೊಡನೆ ಸಹಕರಿಸುವುದಾಗಿ ಕಾಂಗ್ರೆಸು ತಿಳಿಸಿದೆ. ಕಾಂಗ್ರೆಸು ಅಹಿಂಸಾತತ್ವವನ್ನು ಮೂಲೆಗೊತ್ತಿಕೆಂಬುದು ನಿಜವಲ್ಲ. ಬ್ರಿಟನ್ನಿನೊಡನೆ ಕೈಕುಲಕಿಸುವ ಆತಿಯಿಂದ ಕಾಂಗ್ರೆಸು ಒಂದು ವಿಶಾಲವನ್ನು ಕೊಟ್ಟಿದೆ ಅಷ್ಟೆ. ನಾವು ಎಲ್ಲ ಶಸ್ತ್ರಾಸ್ತ್ರಗಳನ್ನು ಧರಿಸಿ ಸಂಗ್ರಾಮಕ್ಕೆ ತೆರಳಬೇಕೆಂಬುದು ರಾಜಾಜಿಗಳ ಇಷವಿರಬಹುದು. ಆದರೆ,ಅದು ಎಲ್ಲರ ಅಭಿಪ್ರಾಯವಾಗಿಲ್ಲದಿರಬಹುದು ಎಂದರು.

ರಚನಾತ್ಮಕ ಕಾರ್ಯಗಳನ್ನು ಮುಂದುವರಿಸಬೇಕೆಂದು ಹೇಳುತ್ತಾ "ಜನರ ಭಯ ಸಂಶಯಗಳನ್ನು ನೀಗುವುದಕ್ಕೆ ನಮ್ಮ ಕೆಲಸಗಾರರು ಬೇಕಾಗಿದ್ದಾಗೆ ನಾನವರನ್ನು ಸೆರೆಮನೆಗೆ ಕಳುಹಿಸುವುದಿಲ್ಲ" ಎಂದರು

ಅಧ್ಯಕ್ಷತೆವಹಿಸಿದ್ದ ॥ಶ್ರೀ॥ ವಲ್ಲಭಭಾಯಿ ಪಟೇಲರು ಮಾತನಾಡುತ್ತ "ಮುಂದೆ ನಮಗೆ ಬಹಳ ಕಷ್ಟಕಾಲ ಬರುತ್ತದೆ. ನಮ್ಮ ಜನಾಬ್ದಾರಿ ಹೆಚ್ಚುತ್ತದೆ. ಆಕಾಲದಲ್ಲಿ ನಾವು ಸಹಾಯಕ್ಕಾಗಿ ಸರಕಾರದ ಕಡೆ ನೋಡಲು ಸಾಧ್ಯವಿಲ್ಲ ಯಾಕೆಂದರೆ ಸರಕಾರದವರಿಗೆ ಅವರ ಜವಾಬ್ದಾರಿಯೇ ಸಾಕಾಗಿದೆ. ನಾವೇ ನಮ್ಮ ವೀರ್ಯಾನಗಳನ್ನು ಮಾಡಬೇಕಾಗಿದೆ" ಎಂದರು.

ಉ ಮೀ ದ್ :—

ತಾ. ೭-೧-೪೨ ರಿಂದ 'ರಾಯಲ್' ನಲ್ಲಿ ತೋರಿಸಲ್ಪಡುವುದು. ಇದು ಪ್ರೇಮಿಗಳ ಶೃಂಗಾರ ಚಿತ್ರ. ಸುಮನ್ ಮತ್ತು ಲೀಲಾ ಎಂಬಿಬ್ಬ ಕನ್ಯೆಯರು ಅನಿಲ್ ಎಂಬ ಯುವಕನನ್ನು ಪರಸ್ಪರ ತಿಳುವಳಿಕೆಯಿಲ್ಲದೆ,ಪ್ರೇಮಿಸುವರು. ಘಟನೆಗಳ ದೃಶ್ಯವು ಮೋಹಾಂಚಕಾರಿಯಾಗಿರುವುದರಲ್ಲಿ ಸಂದೇಹವಿಲ್ಲ.

ಸಿಂಧ ಪ್ರಾಂತ್ಯದಲ್ಲಿ ಅಮೆರಿಕನ್ ಮೋಟಾರ ಕಾರ್ಖಾನೆ.

ಪಂಡಿತ ಜವಹರಲಾಲರ ಉಗ್ರಖಂಡನೆ

ಸಿಂಧ ಪ್ರಾಂತ್ಯದಲ್ಲಿ ಹೊಸ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿದೇಶಿ ಕಂಪನಿಯೊಂದಕ್ಕೆ ಇಂಡಿಯಾ ಸರಕಾರದವರು ಅನುಮತಿ ಕೊಟ್ಟಿದ್ದಾರೆಂದು ತಿಳಿದು ಬಂದಿದೆ ಈ ವರ್ತಮಾನ ಕೇಳಿ ಇದಿನ ಕೈಗಾರಿಕೆಗಳಿಗೆ ಬಹಳ ಅಶಾಭಂಗವುಂಟಾಗಿದೆ ಭರತ ಖಂಡದಲ್ಲಿ ಮೋಟಾರು ಕಾರ್ಖಾನೆಯು ಸ್ಥಾಪಿತವಾದರೆ, ಯಂತ್ರ ಕರ್ಮಿಗಳಿಗೆ ತಾಪತ್ರಯ ಹೆಚ್ಚಾಗಿ, ನಂಗ್ರಾಸು ಸ್ವಯತ್ರಕ್ಕೆ ಅಡಚಣೆಯೊದಗಬಹುದೆಂಬ ಕಾರಣದ ಮೇಲೆ ಇದುವರೆಗೆ ಇಂಡಿಯಾ ಸರಕಾರದವರು ಅಂಥ ಸಲಹೆಯನ್ನು ರದ್ದುಮಾಡುತ್ತಿದ್ದರು ಇದೇಕೋಪಸೆಯು ಈ ಸಂದರ್ಭದಲ್ಲಿಯೂ ತಿಳುವುದಿಲ್ಲವೇ ಎಂಬುದು ಜನರು ಕೇಳುವುದು ಸ್ವಾಭಾವಿಕವಾಗಿದೆ

ಜವಹರಲಾಲರ ಹೇಳಿಕೆ

ಈ ಸಂಬಂಧವಾಗಿ ಪಂಡಿತ ಜವಹರಲಾಲರು ಒಂದು ಹೇಳಿಕೆಯಲ್ಲಿ ಸರಕಾರದ ನೀತಿಯನ್ನು ಉಗ್ರವಾಗಿ ಖಂಡಿಸಿದ್ದಾರೆ 'ಯುದ್ಧದಂಥ ಸಮಯದಲ್ಲಿ ಕಾರು ಅಗತ್ಯವಸ್ತುಗಳ ಉತ್ಪಾದನೆಗೆ ಅಗುವ ಅಬಿವೃದ್ಧಿಯನ್ನು ಭರತ ಖಂಡದ ಅಬಿವೃದ್ಧಿಯೊಂದಿಗೆ ಹೋಲಿಸಿದರೆ ಕೊಂಚವೂ ಪ್ರಾಮುಖ್ಯತೆ ಕೊಡಬಾರದು ಇಂಥ ಮುಖ್ಯ ಅವಶ್ಯಕತೆಯು ಕೂಡ, ಭಾರತದ ಕೈಗಾರಿಕೆ ಅಭಿವೃದ್ಧಿ ಕುರಿತು ಬ್ರಿಟಿಷ್ ಬಂಡವಾಳಗಾರರು ಇಟ್ಟು ಕೊಂಡಿರುವ ಪ್ರತಿಭಟನೆಯನ್ನು ಮುರಿಯಲು ಶಕ್ತವಾಗಿಲ್ಲ

"ಭರತಖಂಡವು ಅಪೂರ್ಣ ವಸ್ತುಗಳನ್ನೂ, ವ್ಯವಸಾಯೋತ್ಪನ್ನಗಳನ್ನೂ ಸರಸರಾಜುಮಾಡುವ ದೇಶವೆಂದು ಪೂರ್ವ ರಾಷ್ಟ್ರ ಸಮ್ಮೇಳನದವರು ಭಾವಿಸಿದ್ದಾರೆ. ಬಾರಿ ಕೈಗಾರಿಕೆಗಳನ್ನೆಲ್ಲ ಬೇರೆ ದೇಶಗಳಲ್ಲಿ ಕೇಂದ್ರೀಕರಿಸುತ್ತಿರಲಾಗಿದೆ ಭಾರತೀಯರು ಕೈಗಾರಿಕೆ ಸಾಹಸಿಗಳು ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ಪ್ರಯತ್ನಮಾಡುತ್ತಿದ್ದಾರೆ ಆದರೆ ಸರಕಾರದವರು ಪ್ರತಿಭಟಿಸುತ್ತಿದ್ದಾರೆ ಸಂಗ್ರಾಮದಂತಹ ಅವಶ್ಯಕತೆಯ ಸಮಯದಲ್ಲಿ ಎಂತಹ ಸರಕಾರದವರೂ ಈ ಸಲಹೆಗೆ ಅಹ್ವಾನಕೊಡುವರೆಂದು ಭಾವಿಸಲಾಗಿತ್ತು ಆದರೆ ಬಾರತದಲ್ಲಿರುವ ಬ್ರಿಟಿಷ್ ಸರಕಾರದವರು ಬೇರೆಯಾಗಿ ಹಿಡಿದರು ಭರತಖಂಡವು ತನ್ನ ಸ್ವಂತ ಮೋಟಾರು ಕೈಗಾರಿಕೆಯನ್ನು ಬೆಳೆಸಿಕೊಳ್ಳಲಾರದೆಂದು ಭಾವಿಸುವಂತಹ ಅಮೇರಿಕನ್ ಮೋಟಾರು ಕೈಗಾರಿಕೆಗಳವರ ಕೈಗೆ ಇಂಡಿಯಾ ಸರಕಾರದವರು ಬಿದ್ದರೆಂದೂ ಹೇಳಲಾಗಿದೆ

ಈಗ ಅಮೇರಿಕನ್ ಬಂಡವಾಳಗಾರರು ಸಿಂಧ್‌ನಲ್ಲಿ ಮೋಟಾರು ಕಾರ್ಖಾನೆಯೊಂದನ್ನು ಸ್ಥಾಪಿಸುವಂತೆ ತಿಳಿದು ಬಂದಿದೆ ವಿದೇಶಿ ಬಂಡವಾಳಗಾರರು ಮುಷಿ ಎಷ್ಟು ಬಲವಾಗಿದಯೆಂಬುದನ್ನು ವ್ಯಕ್ತಪಡಿಸುತ್ತದೆ ಭರತಖಂಡದಲ್ಲಿ ಅಮೇರಿಕನ್ ಬಂಡವಾಳಗಾರರ ಹಿತವು ಬೆಳೆಯುತ್ತಿದೆ ಆದರೆ ಬ್ರಿಟಿಷ್ ನೀತಿಯು ಹೊರಟು ಹೋಗುವ ಯೋಚನೆ ಮಾಡುವುದೊಂತೇ ಈಗ ಬಂದಿರುವುದು, ಎಂದು ತಿಳಿಯಬೇಕಾಗಿದೆ

ತಾ॥ ಶನಿವಾರ 11—1—1942.

ಕ್ವಾಮನಿವಾರಣೆ ಕಾರ್ಯಗಳು.

ಕೆಲ ಸೂಚನೆಗಳು.

ಈ ತಿಂಗಳು ಮೊದಲನೆಯ ವಾರದಲ್ಲಿ ಬಂದ ವರದಿಯಪ್ರಕಾರ, ಕಂಬಳದಿನ್ನೆ ಕೇಂದ್ರದಲ್ಲಿ ೫ ಸಾವಿರ ಜನರೂ, ನಂದವರ ಕೇಂದ್ರದಲ್ಲಿ ೩ ಸಾವಿರ ಜನರೂ, ಹಚ್ಚಿಗ್ಗಿಲೆಯಲ್ಲಿ 8 ನೂರು ಜನರೂ, ಸುಮಾರು ಕೆಲಸಗಳಿಗೆ ಬರುತ್ತಿರುವಂತೆ ವ್ಯಕ್ತಪಟ್ಟಿದೆ. ಕಂಬಳದಿನ್ನೆ ಸುತ್ತು ನಂದವರ ಕ್ಷೇತ್ರದಲ್ಲಿ ಜಲ್ಲಾ ಬೋರ್ಡಿನವರು ಒಂದೊಬ್ಬ ಓವರ್‌ಸಿಯರನ್ನು ಹೆಚ್ಚಾಗಿ ನಿಯಮಿಸಿರುವಂತೆ ತಿಳಿದುಬಂದಿದೆ ಅಲ್ಲದೆ, ಕ್ವಾಮುವಿಲ್ಲದ ಕೆಲವು ತಾಳೆಯಲ್ಲಿ ಸ್ವಾರಂಬವಾದ ರಸ್ತೆಯ ಕಾರ್ಯವನ್ನು ಕ್ವಾಮು ಬಾಧೆಯಿರುವ ಹಳ್ಳಿಗಳ ಪ್ರಾಂತ್ಯದಲ್ಲಿ ಪ್ರಾರಂಭಿಸಿರುವರು ಕೂಲಿಯ ಸಂದಾಯದ ಬಗ್ಗೆ ಕೆಲ ದೂರುಗಳು ಕಷ್ಟವಾಗಿ ಈಗ ಕೂಲಿಯನ್ನು ಕೊಟ್ಟಿರುವರು ಸಂತೋಷ

ಸರಕಾರದವರು ಪೂರ್ಣಾನಂದರ ಆಶ್ರಯದಲ್ಲಿ ಕ್ವಾಮುದ ಪೂರ್ವ ಜಿಲ್ಲಾ ಬೋರ್ಡಿನ ಆವಶ್ಯಕತ್ವ ನಿವಾರಣಾ ಕಾರ್ಯವನ್ನು ಅರಿಸಿಸುವುದು ಕ್ವಾಮುಕಾರ್ಯಗಳಿಗೆ ಬರುವ ಜನರು ಹೆಚ್ಚಾಗಿ ಬಾವೆಯು ಹೆಚ್ಚಾಗುವ ಲಕ್ಷಣಗಳು ಕೆಲವೆಡೆ ಸರಕಾರದವರು ತಾವೆ ಈ ಕೆಲಸಗಳನ್ನು ನಡೆಸಿ ನಿಲ್ಲಿಗೆ ಸಕ್ಕರೆಗೂ ಬುಚಿತಾಹಾರವನ್ನು ಒದಗಿಸುವ ವ್ಯವಸ್ಥೆಯುಂಟು ಕಂಪನಿಯ ಕೇಂದ್ರವು ಸರಕಾರದವರಿಂದ ತಗದುಕೊಳ್ಳಲಾಗುವುದೆಂದು ನಮಗೆ ಗೊತ್ತಾಗಿದ ಕ್ವಾಮು ಕೆಲಸಗಳನ್ನು ಸಂಪೂರ್ಣವಾಗಿಯೂ ತೆಗೆದುಕೊಳ್ಳಲು ಸಾಧ್ಯವಾಗಿಯೂ ತೋರಿದರೆಯಾದರೆ ಅಲ್ಲಿ ಸಿರುಗುಪ್ಪೆ ತಾಲ್ಲೂಕಿನಲ್ಲಿ ಸರಿ ಕಾರ್ಯಾರಂಭವಾಗಿದೆ (Test works) ಸಮಯವಿನ್ನೂ ಬಂದಿಲ್ಲ ಇನ್ನು ಕಲಕಿಂಗಳುಗಳಾದರೂ ಹೆಚ್ಚಿಲ್ಲ ಪ್ರಾಂತ್ಯದ ಕಾರ್ಯವು ಜಲ್ಲಾ ಬೋರ್ಡಿನವರ ಅಧೀನದಲ್ಲಿರುವುದು ಒಳ್ಳೆಯದೆಂದು ನಾವು ಸೂಚಿಸುತ್ತೇವೆ.

ಇನ್ನೊಂದು ವಿಷಯ

ಅನ್ನಾಹಾರಗಳಿಗಾಗಿ ದೇಶಾಂತರ ಹೋಗುತ್ತಿದ್ದ ಜನರಿಗೆ ಆಹಾರವನ್ನು ಒದಗಿಸುವ ಸಲುವಾಗಿ ಕ್ವಾಮುಕಾರ್ಯಗಳು ಏರ್ಪಟ್ಟಿವೆ. ಹೀಗಿದ್ದು ಅವರಿಗೆ ವಾರಕ್ಕೊಂದುಸಲ ಕೂಲಿಹಣವನ್ನು ಕೊಟ್ಟರೆ, ಅವರು ನಿತ್ಯ ಜೀವನವನ್ನು ಹೇಗೆ ಸಾಗಿಸಬೇಕು? ನಿರ್ಗತಿಕರಾದ ಈ ಜನರಿಗೆ ಪ್ರತಿನಿತ್ಯದ ಜೀವನದ ಕೊರತೆ ನಿವಾರಣೆಯಾದರೆ ಕೆಲಸವಾದರೂ ತೃಪ್ತಿಕರವಾಗಿ ನಡೆದೀತು ಈ ಕಾರಣ ಜಿಲ್ಲಾ ಬೋರ್ಡಿನವರು ಪ್ರತಿನಿತ್ಯವೂ ಕೂಲಿಕೊಡುವ ಏರ್ಪಾಟು ಮಾಡಿದರೆ ಒಳ್ಳೆಯದು ಕನಿಷ್ಟಕ್ಕೆ ವಾರಕ್ಕೆ ೨ ಸಲವಾದರೂ ಕೂಲಿಸಲ್ಲಿಸಲು ಏರ್ಪಡಿಸಬೇಕು.

ಜಿಲ್ಲಾ ಬೋರ್ಡಿನ ಎಂಜಿನಿಯರಿಂಗ್ ಖಾತೆಯವರ ಅಧೀನದಲ್ಲಿ ಕೆಲಸಗಳು ನಡೆಯುತ್ತಿವೆ ಈ ಖಾತೆಯವರು ಹೆಚ್ಚು ಶ್ರದ್ಧೆಯಿಂದ, ಹೆಚ್ಚಿನ ಸಹಾನುಭೂತಿಯಿಂದ ಹೆಚ್ಚಿನ ಚಟುವಟಿಕೆಯಿಂದ ಕಾರ್ಯನಿರ್ವಾಹಮಾಡಿ ಜನರ ಪ್ರೇಮಕ್ಕೂ ವಿಶ್ವಾಸಕ್ಕೂ ಪಾತ್ರರಾಗಬೇಕೆಂದು ಆಶಿಸುತ್ತೇವೆ ಅಲ್ಲದೆ ಜಿಲ್ಲಾ ಬೋರ್ಡು ಅಧ್ಯಕ್ಷರು ಕಾಂಗ್ರೆಸ್ ಸಂಸ್ಥೆಯಿಂದ ಒಂದಿರುವ ಕಾರಣ ಕೊನೆಯಪಕ್ಷ ವಾರಕ್ಕೊಂದುಸಲವಾದರೂ ಕ್ವಾಮು ಕೇಂದ್ರಗಳನ್ನು ಸಂದರ್ಶಿಸಿ ಅಲ್ಲಿ ನಡೆಯುತ್ತಿರುವ ಕಾರ್ಯದಬಗ್ಗೆ ಕೈಸ್ಥಿತಿಯೊಂದುವಂತಾಗಬೇಕು.

ಗಾಂಧೀಜಿ, ಹರಿಜನಪತ್ರಿಕೆ ಪ್ರಾರಂಭಿಸುವರು?

ಈಗಿನ ಯುದ್ಧ ಪರಿಸ್ಥಿತಿಯಲ್ಲಿ ಜನತೆಗೆ ನಿತ್ಯ ಸಲಹೆಗಳನ್ನು ಕೊಡುವುದು ಅವಶ್ಯಕವಿರುವ ಕಾರಣ ಮಹಾತ್ಮ ಗಾಂಧಿಯವರು ತಾವು ಇಲ್ಲಿಯವರೆವಿಗೆ ನಿಲ್ಲಿಸಿದ್ದ ಹರಿಜನ ಬಂಧು, ಹರಿಜನಸೇವಕ ಹರಿಜನ ಎಂಬ ಮೂರು ವಾರಪತ್ರಿಕೆಗ — ಪ್ರಾರಂಭಿಸುವರೆಂದೂ ಸರಕಾರ ಪರಿಸ್ಥಿತಿಯ ಬಗ್ಗೆ ಗಾಂಧಿಯವರ ಅಭಿಪ್ರಾಯಗಳನ್ನೊಪ್ಪದೆ ಇದ್ದರೆ ಕೆಲ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸತ್ಯಾಗ್ರಹವನ್ನು ಜಾರಿಯಲ್ಲಿಡುವುದಾಗಿಯೂ ಒಂದು ಹೇಳಿಕೆ ಕೊಟ್ಟಿರುವರು

[2ನೇ ಪುಟದಿಂದ ಮುಂದುವರಿದಿದೆ]

ವಂಟಮುರಿ ಸರವೇಸಾಯರು ಪುನಃ ಅಧ್ಯಕ್ಷರಾಗಿಯೂ ಪ್ರೋ. ಬಿ. ಎಂ ಶ್ರೀಕಂಠಯ್ಯನವರು ಪುನಃ ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಕಾರ್ಯದರ್ಶಿ ಸ್ಥಾನಕ್ಕೆ ಕೆ. ಪ್ಹಿ. ರಾಘವಾಚಾರ್ಯರನ್ನೂ ಕೋಶಾಧ್ಯಕ್ಷ ಸ್ಥಾನಕ್ಕೆ ಡಿ. ಸಿ. ಸುಬ್ಬರಾಯಪ್ಪನವರನ್ನೂ ಆರಿಸಲಾಯಿತು. ಕಾರ್ಯನಿರ್ವಾಹಕ ಮಂಡಲಕ್ಕೆ ಮೈಸೂರು ಸರವಾಗಿ ಶ್ರೀಯುತರಾದ ಮಾಸ್ತಿ, ವಿ. ಸೀತಾರಾಮಯ್ಯ, ಡಿ. ಜಂಪಾಬಾಯಿ, ಕೃಷ್ಣಮೂರ್ತಿರಾವ್, ಉತ್ತರ ಕರ್ನಾಟಕ ಪರವಾಗಿ ಮುಗಳಿ, ಬೆಂದ್ರೆ, ಪ್ರೋ. ಜಹಾಗೀರದಾರ, ವ್ಹಿ. ಜಿ. ಕುಲಕರ್ಣಿ, ವ್ಹಿ. ಬಿ. ನಾಯಿಕ, ನಿಜಾಮ ಕರ್ನಾಟಕ ಪರವಾಗಿ ಅತ್ತಳ್ಳರಾವ, ಮಂಗಳೂರು, ಕೂಡಗು ಪರವಾಗಿ ಶಂಕರಭಟ್ಟ ಕಡೆಕರೋಡ್ಡು ಇವರು ಆರಿಸಲ್ಪಟ್ಟರು.

ಯುದ್ಧ ವಾರ್ತೆಗಳು.

ಪೆಸಿಫಿಕ್ ರಣರಂಗದಲ್ಲಿ ಸೇನಾಧಿಪತಿ

ಬರ್ಮಾದಲ್ಲಿ ಸೇನಾಧಿಪತಿಗಳಾಗಿದ್ದ ಜನರಲ್ ವಾವೇಲರನ್ನು ಪೆಸಿಫಿಕ್ ರಣರಂಗದಲ್ಲಿ ಅಮೇರಿಕಾ ಬ್ರಿಟಿಷ್ ದಳಗಳ ಅಧಿಪತಿಯಾಗಿ ನಿಯುಕ್ತರಾಗಿದೆಯೆಂದು ಅವರಿಗೆ ನಾಮಕಾವಳಿ ಮಾನಪತ್ರ. ಮತ್ತು ಭೂಸೈನ್ಯಗಳ ಕಾರ್ಯಾಚರಣೆಯ ಸೈನ್ಯಗಳಮೇಲೆ ಸಂಪೂರ್ಣ ಅಧಿಕಾರವನ್ನಿರುವನೆಂದೂ, ಚೀನಾದ ಮತ್ತು ರೂಸಿಯಾ ಸೈನ್ಯವಿಭಾಗವೂ ಒಂದು ಹೇಳಿಕೆ ಕೊಟ್ಟಿರುವರು. ಇದರಿಂದ ಆಸ್ಟ್ರೇಲಿಯಾ ಪ್ರಧಾನವಾದ ಕರ್ಟಿನ್ ರವರು ಸಮಾಧಾನ ವ್ಯಕ್ತಪಡಿಸಿರುವರು

ಸಿಂಗಪುರದಮೇಲೆ ವಿಮಾನ ದಾಳಿ

ಕಳೆದವಾರದಿಂದ ಪ್ರತಿನಿತ್ಯವೂ ಸಿಂಗಪುರದಮೇಲೆ ವಾಯುಯಾನಗುತ್ತಿರುವೆ ವಿಸಹಿ ಸತೆಯುತ್ತಿರುವ ಈ ಸುದ್ದಿಗಳಿಗೆ. ಜನರಿಗೆ ಅಭ್ಯಾಸವಾಗಿ ಹೋಗಿರಬಹುದು ಆದ್ದರಿಂದ ಸಿಕ್ಕಾಗ ಸಿಕ್ಕೆ ಸಾಮಾನುಗಳು ಅಲ್ಲಲ್ಲಿ ಅಲ್ಪಸ್ವಲ್ಪ ಸಾಗರೀಕರ ಪ್ರಾಣ ಮತ್ತು ಆಸ್ತಿಗಳಿಗೆ ಹಾನಿಯಾಗಿದೆ. ಜಪಾನರ ವಿಮಾನಗಳನ್ನು ಕೆಳಗುರುಳಿಸಲಾಗಿದೆ.

ಮಲಯಾದ ಉತ್ತರ ಭಾಗದಲ್ಲಿ ಜಪಾನರ ಒತ್ತಡ:-

ಬ್ರಿಟಿಷ್ ಸೈನ್ಯವು ಉತ್ತರ ಮಲಯಾದ ಪೆರಾಕ್ ರಣಾಂಗಣದಿಂದ ಹಿಂದಕ್ಕೆ ಸರಿದಿದೆ ಬ್ರಿಟಿಷ್ ಯೋಧರಹಿಂದೆಯೇ ಶತೃಗಳ ಗಾಡಿಗಳು ಆಗಮಿಸಿದವು, ಕೈ ಕೈ ಯುದ್ಧವಾಗಿ ಜಪಾನರಿಗೆ ಹಾನಿಯಾಯ್ತೆಂದು ಹೇಳಲಾಗಿದೆ. ಬ್ರಿಟಿಷ್ ಸೈನ್ಯಗಳು ಶತೃ ಸೈನ್ಯಗಳನ್ನು ಉಗ್ರರೀತಿಯಲ್ಲಿ ಪ್ರತಿಭಟಿಸುವುದಾಗಿ ಸಿಂಗಪುರದಿಂದ ಆಸ್ಟ್ರೇಲಿಯಾ ರೇಡಿಯೋಕ್ಕೆ ತಿಳಿಸಲಾಯಿತು.

ಕಾರಿಡರ್ ದ್ವೀಪ:—

ಮನಿಲಾ ದ್ವೀಪವನ್ನು ರಕ್ಷಿಸುತ್ತಿರುವ ಕಾರಿಡರ್ ದ್ವೀಪದಮೇರ ಜಪಾನಿಯರು ೫ ಘಂಟೆಗಳಕಾಲ ವಿಮಾನಗಳಿಂದ ಬಾಂಬುಗಳನ್ನು ಸುರಿಸಿದವು. ನಗರದ ಕೋಟೆಗೆ ಅಷ್ಟೇನೂ ಹಾನಿಯಾಗಿಲ್ಲ. ಸುಮಾರು ೬೦ ಬಾಂಬುಗಳು ಮುತ್ತಿಗೆಯಲ್ಲಿ ಭಾಗವಹಿಸಿದ್ದವೆಂದು ಗೊತ್ತಾಗಿದೆ.

ಜಪಾನರಿಗೆ ಬಿನೂಸಿಗಲಿಲ್ಲ:—

ಅಮೇರಿಕನ್ನರು ಮನಿಲಾ ಮತ್ತು ಕೆನೇಟ್‌ಗಳನ್ನು ಬಿಡುವಮುನ್ನ ಅಲ್ಲಿದ್ದ ಯುದ್ಧಸಾಮಗ್ರಿ ಹಡಗುಗಳನ್ನು ಹಿಂದಕ್ಕೆ ಕೆಗದುಕೊಂಡು ಹೋದದೆಂದೂ ೧೨ ದಿನ್ಹಾಮರ ೨೫ ಸಬ್ಮೆರೀನ್ ಮತ್ತು ವಿಮಾನಗಳನ್ನು ಹೊರುವ ಒಂದು ಹಡಗು ತಮಗೆ ದೊರೆತಿವೆಯೆಂದು ಜಪಾನರು ಹೇಳುವುದು ಶುದ್ಧ ಸುಳ್ಳೆಂದೂ ವಾಷಿಂಗ್ಟನ್ ಪಾರ್ಟಿಯೊಂದು ತಿಳಿಸುತ್ತದೆ.

ರಂಗೂನಿನಮೇಲೆ ಬೆಳದಿಂಗಳಲ್ಲಿ ಮುತ್ತಿಗೆ:—

೪-೫ ನೇ ತಾ. ರಂಗೂನಿನಮೇಲೆ ಬೆಳದಿಂಗಳಲ್ಲಿ ಮುತ್ತಿಗೆಯು ನಡೆಯಿತು. ನಷ್ಟದ ವಿವರಗಳು ತಿಳಿದು ಬಂದಿಲ್ಲ. ದಕ್ಷಿಣ ಬರ್ಮಾದ ಮೌಲ್ಮೈನ್ ಭಾಗದಲ್ಲಿ ಜಪಾನರು ಇಳಿಯಲು ಪ್ರಯತ್ನಿಸಿದರು. ವಿಮಾನ ನಿಲ್ದಾಣದಬಳಿ ಕದನವಾಗಿ ಅನೇಕ ಜಪಾನಿ ವಿಮಾನಗಳು ನಾಶವಾದವಂತೆ.

ಬರ್ಮಾ ಸೇನೆಯು ಹೆಚ್ಚಿದೆ:

ಪೆಸಿಫಿಕ್ ಕದನವಾರಂಭವಾದಮೇಲೆ ಬರ್ಮಾ ಭಾಗದಲ್ಲಿ ಸೇನೆಯನ್ನು ೩ ಪಾಲು ಹೆಚ್ಚಿಸಿರುವರು.

ಜಪಾನರ ಕ್ರೌರ್ಯವರ್ತನೆ:—

ತಾವು ಆಕ್ರಮಿಸಿಕೊಂಡಿರುವ ಮನಿಲಾ ನಗರದಲ್ಲಿ ಬಿಳಿಯರಾರೂ ಹೊರಗೆ ಬರಬಾರದೆಂದೂ, ಬಂದರೆ ಗುಂಡಿನಿಂದ ಹೊಡೆದು ಕೊಲ್ಲುವುದಾಗಿಯೂ ಎಚ್ಚರಿಕೆ ಕೊಡಲಾಗಿದೆ. ಬಿಳಿಯರನ್ನೆಲ್ಲಾ (ಅಮೆರಿಕಾದವರೂ ಸಹ) ಪಟ್ಟಣದ ಹೊರಗೆ ಬಂಧನದಲ್ಲಿರಿಸಬೇಕೆಂದು ಸಂಕಲ್ಪಿಸಿದ್ದಾರೆ. ಸ್ಥಳೀಯ ಯೋಧರೆಲ್ಲಾ ಯುದ್ಧಕ್ಕೆ ನಿಲ್ಲಿಸಬೇಕೆಂಬ ಹಸ್ತ ಪತ್ರಿಕೆಗಳನ್ನು ಜಪಾನೀಯರು ಹಂಚುತ್ತಲಿರುವರು.

ರಷ್ಯಾದೇಶವು ಜಪಾನಿನಮೇಲೆ ಯುದ್ಧ ಹೂಡುವುದಿಲ್ಲ.

ಜಪಾನಿನ ಮೇಲೆ ರಷ್ಯವು ಸಂಗ್ರಾಮ ಹೂಡದೇ ಇರುವುದಕ್ಕೆ ಈ ಕೆಳಗೆ ಕಂಡ ಅಂಶಗಳೇ ಕಾರಣವೆಂದು 'ಡೈಲಿ ಟೆಲಿಗ್ರಾಫ್' ಪತ್ರಿಕೆಯ ಸುದ್ದಿಗಾರರು ತಿಳಿಸುತ್ತಾರೆ.

(೧) ರಷ್ಯಾ-ಜರ್ಮಾಗಳಿಗೆ ೫ ವರ್ಷಗಳ ಅವಧಿಯ ತಾಟಸ್ಥ್ಯ ಶಾಸನವಾಗಿರುವುದು.

(೨) ಹರ್ ಹಿಟ್ಲರನ ಮೇಲೆಯೇ ಈಗ ಗಮನವನ್ನೆಲ್ಲ ಕೇಂದ್ರೀಕರಿಸುವುದರಿಂದ ಜಪಾನಿನ ಸತನವಾಗುವುದೆಂಬ ಅದರ ನಂಬಿಕೆ.

(೩) ಸೈಬೀರಿಯನ್ ಮೂಲಗಳಿಂದ ಜಪಾನಿನ ಮೇಲೆ ಮುತ್ತಿಗೆ ನಡೆಸುವ ಸಾಧ್ಯತೆಯ ವಿಚಾರಣೆಯನ್ನು ಉತ್ಪ್ರೇಕ್ಷೆ ಮಾಡಲಾಗಿದೆಯೆಂದು ರಷ್ಯವು ಅಭಿಪ್ರಾಯವನ್ನಿಟ್ಟಿರುವುದು.

(೪) ಒಂದು ವೇಳೆ ರಷ್ಯದ ಮೂಲಗಳಿಂದ ಜಪಾನಿನ ಮೇಲೆ ಫಲಪ್ರದವಾಗಿ ಮುತ್ತಿಗೆ ನಡೆಸುವುದು ಸಾಧ್ಯವೇ ಆದರೂ, ಅದರ ಫಲವಾಗಿ ದಕ್ಷಿಣದ ಪೆಸಿಫಿಕ್‌ನಲ್ಲಿ ಜಪಾನಿನ ಬಲವು ಕುಗ್ಗುವುದಿಲ್ಲವೆಂದು ರಷ್ಯವು ನಂಬಿರುವುದು

ಜಪಾನೇನಾದರೂ ಪೋಸದಿಂದ [illegible] ಮೇಲೆ ಬೀಳುವುದಾದಲ್ಲಿ ಅದನ್ನು ಎದುರಿಸಲು ಸೈಬೀರಿಯಾದಲ್ಲಿ ಅಪಾರ ಸೇನೆಯನ್ನು ನಿಲಿಸಲಾಗಿದೆ.

ಅಟ್ಲಾಂಟಿಕ್ ಘೋಷಣೆ

ಹಿಂದೂಸ್ಥಾನಕ್ಕೆ ಅನ್ವಯಿಸುವುದೇ?

ಭಾರತದ ವಿಚಾರದಲ್ಲಿ ಬ್ರಿಟನ್ನಿನ ನೀತಿ ಕುರಿತು ಬೇಗನೆ ಪ್ರಕಟಣೆಯು ಹೊರಬೀಳಬಹುದೆಂದು ನಂಬಿಕೆಗರ್ಹವಾದ ಕಡೆಗಳಿಂದ ತಿಳಿದುಬಂದಿದೆ. ಅಟ್ಲಾಂಟಿಕ್ ಘೋಷಣೆಯು ಭಾರತಕ್ಕೆ ಸಹ ಅನ್ವಯಿಸುವುದೆಂದು ರೂಸ್ ವೆಲ್ಟರು ಅಮೇರಿಕೆದಲ್ಲಿರುವ ಭಾರತೀಯ ವೃಮುಖರೊಬ್ಬರಿಗೆ ತಿಳಿಸಿದರೆಂದು ತಿಳಿದು ಬಂದಿದೆ.

ಇತ್ತೀಚೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬಾರ್ಡೋಲಿಯಲ್ಲಿ ಮಾಡಿದ ನಿರ್ಣಯವನ್ನು ನೋಡಿದ ಮೇಲಂತೂ ಬ್ರಿಟಿಷರು ಮುಂಬೆ ಬರಲೇಬೇಕೆಂದು ವೈಸರಾಯರು ತಿಳಿಸಿರುವುನಾಗಿ ಗೊತ್ತಾಗಿದೆ. ಭರತಖಂಡದ ವಿಚಾರದಲ್ಲಿ ರೂಜ್ವೆಲ್ಟ್‌ರ್ಚರ್ಚಿಲ್ ಘೋಷಣೆಯು ಹೊರಬೀಳುವುದಾದರೆ ಅದೇನೂ ಆಶ್ಚರ್ಯವಲ್ಲ.

ಕಾಂಗ್ರೆಸು ಅದ್ಭುತನಾದ ಸೌಹಾರ್ದ ಭಾವನೆಯನ್ನು ತೋರಿಸಿದೆಯೆಂದು ವೈಸರಾಯರ ಮಂತ್ರಿಮಂಡಲದ ಭಾರತೀಯ ಸದಸ್ಯರು ಅರಿತಿದ್ದಾರೆ. ಅಂಗೀಕಾರಯೋಗ್ಯವಾದ ಒಂದು ತೀರ್ಮಾನವಾದರೆ, ಕಾಂಗ್ರೆಸು ಇತರ ಪಕ್ಷಗಳೊಡನೆ ಸೇರಿ ಆವಶ್ಯಕತೆದ ಅಧಿಕಾರ ವಹಿಸಲು ಗಾಂಧೀಜಿಯವರು ಅಡ್ಡಿಯಾಗಿ ನಿಲ್ಲಲಾರರು.

ವೈಸರಾಯರು ಜನವರಿಗಳ ತಾರೀಖಿನ ಹೆಳಲಿಗೆ ಹಿಂತಿರುಗಿದ ಮೇಲೆ ಪರಿಸ್ಥಿತಿಯು ಒಂದು ನಿರ್ಧಾರವಾದ ರೂಪಕ್ಕೆ ಬರಬಹುದು.

ಕಾಂಗ್ರೆಸ್ ಮುಸ್ಲಿಂ ಲೀಗ್ ಒಪ್ಪಂದ
ರಾಜಾಜೀಯವರ ವಿವರಣೆ

ಮುಸ್ಲಿಮರ ವಿಚಾರದಲ್ಲಿ ಕಾಂಗ್ರೆಸ್ ನೀತಿ ಕುರಿತು ಶ್ರೀ॥ ಸಿ. ರಾಜಗೋಪಾಲಾಚಾರ್ಯರು 'ಓರಿಯಂಟ್ ಪ್ರೆಸ್' ಪತ್ರಿಕೆಗೆ ಹೇಳಿಕೆಕೊಡುತ್ತ "ಮುಸ್ಲಿಂ ಪ್ರಶ್ನೆ ಕುರಿತು ಕಾಂಗ್ರೆಸ್ ನೀತಿಯನ್ನು ಹೀಗೆ ಸಂಗ್ರಹವಾಗಿ ತಿಳಿಸಬಹುದು. ಎರಡು ಕಡೆಯವರೂ ಒಪ್ಪಿ ಪ್ರಿಪ್ರಂದವಾದರೆ ಆಗಬಹುದು; ಇಲ್ಲವಾದರೆ ಪಂಚಾಯಿತಿಯೊಂದನ್ನು ನೇಮಿಸಿ, ಅದು ಕೊಡುವ ತೀರ್ಮಾನಕ್ಕೆ ಬದ್ಧರಾಗತಕ್ಕದ್ದು" ಎಂದರು. "ಮುಸ್ಲಿಂ ಲೀಗಿನೊಂದಿಗೆ ಸಂಧಾನ ನಡೆಸುವ ಮುನ್ನ ಸಂಗ್ರಾನು ವಿಚಾರದಲ್ಲಿ ಕಾಂಗ್ರೆಸಿನ ನೀತಿ ಮತ್ತು ಎಷ್ಟರಮಟ್ಟಿಗೆ ಅದು ಸಹಕರಿಸಬಹುದು ಎಂಬ ವಿಚಾರಗಳು ಇತ್ಯರ್ಥವಾಗಬೇಕೆಂದರು.

ರಾಯಲಸೀಮ ಬ್ಯಾಂಕು,
(ಲಿಮಿಟೆಡ್.)
ಮುಖ್ಯ ಕಾರ್ಯಾಲಯ, ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ.

ಡಿಪಾಜಿಟ್ಟುಗಳು.	31-10-1940	30-11-3941
ಫಿಕ್ಸೆಡ್	ರೂ. Nil	90,930
ಚಾಲ್ತಿ	,, 3,173	20,994
ಸೇವಿಂಗ್ಸ್	,, 1,231	18,368
ಇತರ	,, 40	781
ಸಾಲಗಳು.		
ಭಂಗಾರ	,, 520	27,478
ಮೂಲು	,, Nil	16,838
ಇತರ	,, Nil	6,181
ಇತರಆಸ್ತಿ.		
ಸರ್ಕಾರಿಪೆ ಬಾಂಡುಗಳು	,, 13,300	32,476
ಬ್ಯಾಂಕುಗಳಲ್ಲಿರುವ ಹಣ	,, 32,502	23,904
ಕೈಯ್ಯಲ್ಲಿ ನಗದು	,, 3770	45,338

ಒಟ್ಟು ವ್ಯವಹಾರದ ಸೊತ್ತ.

31 10 40.	30 11 41.
ರು. 1,14,774-0-0	ರು. 2,16,664-00

ಹಚ್. ವೀರಪ್ಪಯ್ಯ, ಬಿ. ಎ. ಬಿ. ಎಲ್.
ನಿರ್ದೇಶಕರುಗಳ ಜೋಡ್ರು ಅಧ್ಯಕ್ಷರು
ಬಿ. ವಿ. ಶೇಷಗಿರಿರಾವ್, ಬಿ ಕಾಂ ಕಾರ್ಯದರ್ಶಿ

ತೆಕ್ಕಲಕೋಟೆ ರೈತರ ಸಭೆ ಇಲ್ಲ

ತೆಕ್ಕಲಕೋಟೆ ಸಿಕ್ಕಾ ರೈತರು ತಮಗೆ ಒದಗಲಿರುವ ವಿಪತ್ತಿನ ನಿವಾರಣೆಗಾಗಿ ಪೂರ್ವಭಾವಿಯಾಗಿ, ಅಧಿಕಾರಿಗಳನ್ನು ಕಂಡು ತಮ್ಮ ಕುಂದುಕೊರತೆಗಳನ್ನು ರೈತರ ಸಭೆಯಲ್ಲಿ ತೀರ್ಮಾನಗಳ ಮೂಲಕ ಅರಿಕೆಮಾಡಲು ನಿಶ್ಚಯಿಸಿ ತಕ್ಕ ವಿರ್ಮಾಟಿಂಗಳನ್ನು ಮಾಡಿದರು. ಸದರೀ ಸಭೆಗೆ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ॥ ನಾಗನ ಗೌಡರು ಅಧ್ಯಕ್ಷರಾಗಲು ಒಪ್ಪಿದರು. ಆದರೆ ಶ್ರೀ॥ ನಾಗನ ಗೌಡರು ಕಲಿದಿನಗಳಲ್ಲಿಕೆಗೆ ತೆಕ್ಕಲಕೋಟೆಯ ಸ್ವಾಗತ ಸಮಿತಿಯವರನ್ನು ಕರೆಸಿ ಸದ್ಯದ ವರಿಸ್ಥಿತಿಯಲ್ಲಿ ಸಭೆಯು ಅನಾವಶ್ಯಕವೆಂದೂ ಸಲಹೆ ಕೊಟ್ಟಕಾರಣ ಅದು ನಿಲ್ಲಿಸಲಾಯಿತು.

[ಜಕರ ಕುಂದುಕೊರತೆಗಳ ನಿವಾರಣೆಯಾಗ ಬೇಕಾದರೆ ಇಂಥಾ ಅಂಶೋಭನವಾಗಿ ಸರಕಾರದವರು ಕಣ್ಣು ತೆರೆಯುವಂತಾಗಬೇಕು. ಇಲ್ಲವಾದರೆ ಜನರ ಕಷ್ಟಗಳು ಸರಕಾರಕ್ಕಾದರೂ ಹೇಗೆ ತಿಳಿಯಬೇಕು? ಅರ್ಜಿಗಳ ಮತ್ತು ವ್ಯಕ್ತಿಪ್ರಾತಿನಿಧಿಗಳ ಕಾಲ ಹಿಂದಾಯಿತು. ಸಂಘಶಕ್ತಿ ಕಲಿಯುಗ. ಎಂಬಂತೆ ಸಭೆಗಳ ವಿಕಸನಕಾಲ ಪ್ರಾಯದಿಂದಲೇ ಕಾರ್ಯಾರಂಭದಲ್ಲಿ ಶೀಘ್ರತೆಯಾಗುತ್ತಿದೆ. ಸರಕಾರದವರಾದರೂ, ಸಭೆಗಳ ತೀರ್ಮಾನಗಳಿಗೆ ಮನ್ನಣೆ ಕೊಡುವ ಸಾಧಿಕೆಯುಂಟು ಎಂಥಾ ಭಯಂಕರ ಯುದ್ಧವು ಸಾಗಿರಲಿ ರಾಷ್ಟ್ರದ ಆಂತರಪರಿಸ್ಥಿತಿಯು ಎಷ್ಟೇ ಕೆಟ್ಟ [illegible] ತಕ್ಕೆ ತಿಳಿಸಲು ಯಾವ [illegible] ಬಂಧಕವಿಲ್ಲ. ಸಭೆಯು ನಿಲ್ಲಿಸಲ್ಪಟ್ಟದ್ದು ಬಡ ರೈತರ ವೃಷ್ಟಿಯಿಂದ ಹೇಗಕರವೆಂದು ಇಲ್ಲಿ ಸೂಚಿಸಲಿಚ್ಛಿಸಿರೆವು. ಸಂಪಾದಕ ನವಭಾರತ]

ಜನರ ವಿಶ್ವಾಸವೇ

ಓರಿಯಂಟಲ್ ಕಂಪನಿಯನ್ನು

ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾಪರ್ಡಿಸಿದೆ.

ಜಾರಿಯಲ್ಲಿರುವ ವಿಮೆ 31 12 40 83 ಕೋಟಿಗಿಂತಲೂ ಹೆಚ್ಚು

ನಿಧಿಯ ದ್ರವ್ಯ . 27 ..

ವಾರ್ಷಿಕ ಆದಾಯ .. 4 .. ..

ಅತ್ಯಂತ ಆಕರ್ಷಣೀಯವಾದ ನಮ್ಮ ವಿಮಾ ಯೋಜನೆಗಳ

[illegible]

ಓರಿಯಂಟಲ್

[illegible]

ಆ॥ ಇನ್ಸ್‌ಪೆಕ್ಟರ್, ಓರಿಯಂಟಲ್ ಲೈಫ್ ಆಫೀಸು
312 ರೂಪರ್ಟಸ್ ಗೇಟ್ ಬ್ರಾ ಪೇಟ ಬಳ್ಳಾರಿ.

ಮುಖ್ಯ ಕಾರ್ಯಾಲಯ. ಹಿಂದೂಸ್ಥಾನದಲ್ಲಿ ಸ್ಥಾಪಿತ.
ಬೊಂಬಾಯಿ. 1874.

S. V. Setty & Bros., Bangalore Road, Bellary.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

[illegible]

ಬಳ್ಳಾರಿ ಪೇಟೆ ಧಾರಣೆ

9-1-42 ಶುಕ್ರವಾರ

ಭಂಗಾರ ತೊಲ 1 ಕ್ಕೆ	47-4-0
ಸಾವರಿನ್	32-8-9
ಜೆಳ್ಳಿ 100 ತೊಲಗಳಿಗೆ	70-0-0

ಆಹಾರಸಾಮಗ್ರಿಗಳು

ಅಕ್ಕಿ 1 ರೂ. ಗೆ	4½	ರಿಂದ 6 ಸೇರು
ಜೋಳ	,, 5	,, 6 ಸೇರು
ಜೋಳ	,, 13	,, 14 ಸೇರು
ಗೋಧಿ	...	6 ಸೇರು
ಉಪ್ಪು	...	13 ಸೇರು
ಮೆಣಸಿನಕಾಯಿ	9 ಮಣ	25 ರಿಂದ 30
ಬೆಲ್ಲ	....	12 ರಿಂದ 14 ರೂ.
ಸಕ್ಕರೆ (ಮುಂಬೈ)	9 ಮಣ	36 ರೂ.

ಹಿಂದೂಸ್ಥಾನ

ವೈಸ್ರಾಯಿ ಕಾರ್ಯಶೀಲ ಸದಸ್ಯರಾದ ಸರ್ ಅಕ್ಬರ್ ಹೈದರಿಯವರು ತಮ್ಮ ೭೨ ನೆಯ ವಯಸ್ಸಿನಲ್ಲಿ ನೈಸರ್ಗಿಕರಾದರು. ಅವರ ಸ್ಥಾನಕ್ಕೆ ಮೈಸೂರಿನ ಹಿಂದಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್‌ರವರು ನಿಯಮಿಸಲ್ಪಡಬಹುದೆಂದು ಒಂದು ವಾರ್ತೆಯು ತಿಳಿಸುತ್ತದೆ.

ಕರ್ನಾಟಕದಲ್ಲಿ ಶ್ರೀ ಗಂಗಾಧರರಾವ್ ದೇಶಪಾಂಡೆ ವಿಧಾನಕರೂ, ಮುಮ್ಬಾಸ್ ರಾಜ್ಯದಲ್ಲಿ ಮಾಜಿ ಮಂತ್ರಿಗಳಾದ ಶ್ರೀ॥ ಪ್ರಕಾರವರೂ ಪುಹಾತ್ಮ ಗಾಂಧಿಯವರ ತತ್ವಕ್ಕೇ ಬೆಂಬಲಕೊಟ್ಟು ಕಾಂಗ್ರೆಸ್ ವರ್ಕಿಂಗ್ ಕಮಿಟೀ ನಿರ್ಣಯವನ್ನು ಬೆಂಬಲಿಸಿರುವರು.

ಬಳ್ಳಾರಿ ಜಿಲ್ಲಾ ಬೋರ್ಡು ಸಭೆ

ಜಿಲ್ಲಾ ಬೋರ್ಡಿನ ಸಾಧಾರಣಸಭೆಯು ೨೦-೧-೪೨ ನೆಯ ಮಂಗಳವಾರ ಸಾಯಂಕಾಲ ೮-೩೦ ಘಂಟೆಗೆ ನಡೆಯಲಿರುವುದೆಂದು ಪ್ರಕಟನೆಯು ಹೊರಟಿದೆ.

ರಾಯಲಸೀಮೆ ಮಹಾಸಭೆ.

ತಾಡಿಪತ್ರಿಯಲ್ಲಿ 13 ಮತ್ತು 14-1-42 ನೇ ಮಂಗಳವಾರ ಮತ್ತು ಬುಧವಾರ ರಾಯಲಸೀಮೆ ಮಹಾಸಭೆಯು ನಡೆಯಲಿದೆ. ಎಲ್ಲರು ಬರಲು ಕಾರ್ಯದರ್ಶಿಗಳು ಕೋರುತ್ತಾರೆ.

ಭಾರತ ಮಂತ್ರಿಗಳಾದ ಅಮೆರಿಯನರು

ಹಿಂದೂ ದೇಶದಲ್ಲಿ ಒಕ್ಕಟ್ಟಿಲ್ಲವೆಂಬ ಒಂದೇ ಮಂತ್ರ

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತ ಮಂತ್ರಿಗಳಾದ ಅಮೆರಿಯವರು ಸದನಕ್ಕೆ ಪ್ರಶ್ನೆಗಳಿಗೆ ಉತ್ತರಕೊಡುತ್ತಾ ತಾವು ಹಿಂದೂಸ್ತಾನದ ರಾಜಕೀಯ ಪಕ್ಷ ನಿರ್ಣಯಗಳನ್ನು ನೋಡಿರುವುದಾಗಿಯೂ ಅವು ಸರಕಾರ ನಿರೋಧಕವಾಗಿರುವುದಾಗಿ, ಹೇಳಿದರು. ಭಾರತೀಯರ ಒಕ್ಕಟ್ಟು ಬರುವವರೆಗೂ ಯಾವ ಸುಧಾರಣೆಯಾಗಲಿಕ್ಕೂ ಸಿದ್ಧವಿಲ್ಲವೆಂದರು. ಬ್ರಿಟಿಷರು ತಾವೇ ಈ ಕಾರ್ಯವನ್ನಾರಂಭಿಸಲಾಗದೆಂದರು.

ಎಳ್ಳಿನ ಎಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾನುಲಕೋಟೆ.

ಇವರ A.S ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ಸಿರಿಕ್ಕಿ ತೊಳೆದು, ಆ ಸೂಲಕ ಮೊಟ್ಟೆಯನ್ನು ತೆಗೆದು ಪರಿಣಾಗಣಗಳಿಂದ ವೈಜ್ಞಾನಿಕವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ವೈದ್ಯಗಳಲ್ಲೂ ದೊರೆಯುತ್ತದೆ **A. S.** ಬೆಲನ್ನು ಗಮನಿಸಿ. ಕೊಳ್ಳಿರಿ. ನೋಡಬೇಗಬೇಡಿರಿ

ದೊರೆಯುವ ಸ್ಥಳ:- 1.) ಎಂ. ಪುಶೇಂಜಿರಾವು, ಎಂ ವೆಂಕೋಜಿರಾವು, ತೇರುಬೀದಿ. ಬಳ್ಳಾರಿ. ಮತ್ತು 2) ಪಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವನ್ನು ವಿವರಗಳನ್ನು ತಿಳಿಯಿರಿ. ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು ಪರೀಕ್ಷೆಯಲ್ಲಿ ಪಾಸ್ಯ ಪುಸ್ತಕಗಳು, ಕವಿ ಕಾವ್ಯಾದಿ ಸ್ವರ ದೊರೆಯುವುದಲ್ಲದೆ ನಿಮಗೆ ಉಪಯೋಗಿಸಾ ಮಾಹಿತಿಯೂ, ಉಚಿತವಾಗಿ ಹೇಳಲಾಗುವುದು

ಟಿ ಬಿ ಕೇಶವರಾವ್,
ಕ್ಲೈಸ್ಟ್‌ಜೂನಿಯರ್ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉತ್ತಮ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local 4— —
Mofussil 3—0—0

6 Months

Local 1—4—0
Mofussil 2—0—0

ಚಂದಾ ವಿವರ

ವರ್ಷಕ್ಕೆ

ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0

೬ ತಿಂಗಳಿಗೆ

ಬಳ್ಳಾರಿಯವರಿಗೆ 1-4 0
ಹೊರಗಿನವರಿಗೆ 2 0 0

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ ಯಾದ ಕ್ರೋಮ್ಸ್ ಕನ್ನಡಿಗಳು ಸರಿಯಾದ ಜೆಲಿಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ಸಮ್ಮಲ್ಲಿವೆ ಒಂಸಲ ಉಸಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುನು ವ್ಯಾಧಿ ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ಸ್ತ್ರೀಪ್ಯ ಮೈಗೆರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು ಆಯುರ್ವೇದ್ಯಾಯಾಗುವ ಈ ಲೇಹವನ್ನು ತಾವೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೦೦

ನ್ಯಾಶನಲ್ ಫೋರಣಗಲ್ಲು ಮರೆಪ್ಪ, ಬಳ್ಳಾರಿ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦	ಅಂಚೆ ವೆಚ್ಚವೀರೆ
ಕನ್ನಡ ದತೋಪದೇಸತ್ತುಗಳು	೦—೪—೦	ಪುಸ್ತಕ ವ್ಯಾಪಾರಿಗಳ
ಶಿವಾನುಭವ ದೋಪೆ	೦—೪—೦	ಸೂ ಹೆಚ್ಚು ಪುಸ್ತಕ
ಸುಮತಿ ಶತಕ	೦—೧—೦	ಕೊಳ್ಳುವರಿಗೆ ಧಾರಾ ವಾದ ಕಮೀಶನ್

ಕಾಲವ ಸುಬ್ಬಣ್ಣ, ಮಚ್ಚೇಟು, ಬಳ್ಳಾರಿ.

ದ್ವಿತೀಯ ಪಶುಪ್ರದರ್ಶನ ಬಳ್ಳಾರಿ.

ಫೆಬ್ರವರಿ 2, 3, 4ನೆಯ ತಾರೀಕು ಕೋಟೆ ಮಲ್ಲೇಶ್ವರ ದೇವಸ್ಥಾನದ ಬಯಲಿನಲ್ಲಿ ನಡೆಯಲಿದೆ. ವ್ಯವಸಾಯಗಾರರಿಗೆ ಕೃತರಿಗೆ ದನಗಳ ಉತ್ತಮ ತಳಿಯನ್ನು ಸ್ಫೂರ್ತಿ ತ್ಸಾಹಿಸಬೇಕೆನ್ನುವವರಿಗೆ ಸುವರ್ಣ ಸಂಧಿ ಬಂದು ನೋಡಿ ಆನಂದಿಸಿ ಕೊಂಡು ತೃಪ್ತಿಪಡಿರಿ.

ರ್ಯ. ತಾಳಿಕೆರಪ್ಪ ಟ್ರಸ್ಟಿ.

Nava Bharat, Bellary.

REG. No. 3337.

Sri _____

Printed at Vittal Press, Cross Street Edited & Published by T. B Keshava Rao, Bellary

ತಾಡಿಪತ್ರಿಯಲ್ಲಿ

ಮೂರನೆಯ ರಾಯಲಸೀಮ ಮಹಾಸಭೆ

ಜನವರೀ ೧೩-೧೪ನೆಯ ತಾ ಮಂಗಳವಾರ ಬುಧವಾರ ಅನಂತಪುರಜಿಲ್ಲಾ ತಾಡಿಪತ್ರಿಯಲ್ಲಿ ಪತ್ತೆಮಂಡಲದ ಆರ್ಧಿಕಾಭಿವೃದ್ಧಿಯ ಉದ್ದೇಶದಿಂದ ವರ್ಷ ವರ್ಷವೂ ನಡೆಯುತ್ತಿರುವ ಮೂರನೆಯ ರಾಯಲಸೀಮೆ ಮಹಾ ಸಭೆಯು ಕೂಡಿದ್ದಿತು. ಅನಂತಪುರ, ಕರ್ನೂಲು, ಕಡಪ, ಚಿತ್ತೂರು, ಬಳ್ಳಾರಿ ಜಿಲ್ಲೆಗಳಿಂದ ಸುಮಾರು ೫೦೦ ಜನ ಪ್ರತಿನಿಧಿಗಳು ಬಂದಿದ್ದರು. ಪ್ರಾರ್ಥನಾನಂತರ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀಯುತ ಮೂರಾ ಲಕ್ಷ್ಮೀನಾರಾಯಣ ಸ್ವಾಮಿಯವರು ಒಂದು ಚಿಕ್ಕ ಭಾಷಣದಿಂದ ತಮ್ಮೂರಿಗೆ ಎಲ್ಲರನ್ನೂ ಸ್ವಾಗತಿಸಿದರು ನಂತರ ಶ್ರೀ ಹೆಚ್. ಶೀತಾರಾಮರೆಡ್ಡಿ (ಎಂ. ಎಲ್. ಎ) ಯವರು ರಾಯಲಸೀಮೆ ಮಹಾ ಸಭೆಯ ಸ್ಥಾಪಕ ಶೀಲರನ್ನು ನೆನಪೇರಿಸುತ್ತ ಕೆಲ ಸೂಚ್ಯಾಕ್ಷರಗಳನ್ನು ಹೇಳಿದರು.

ಪ್ರಾರಂಭೋತ್ಸವವನ್ನು ನೆರವೇರಿಸಿದ
ಶ್ರೀ ಹೆಚ್. ಶೀತಾರಾಮರೆಡ್ಡಿ ಬಿ. ಎ. ಬಿ. ಎಲ್. (ಎಂ. ಎಲ್. ಎ)
ಬಳ್ಳಾರಿ.

ಶ್ರೀ ರೆಡ್ಡಿಯವರ ಭಾಷಣದ ಸಾರಾಂಶ.

ರಾಯಲಸೀಮೆಯು ಉಜ್ವಲಸ್ಥಿತಿಗೆ ಬರುವಾಗಿದೆ ಕುಬೇರನ ಆರ್ಥಿಕ ಸಮೃದ್ಧಿಯು ಮೇಲಿನ ಜವಾಬಿದಾರಿ ಸರಕಾರದವರು ಬಿಲ್ಲಿನ ಮೇರೆ ಸಮಸ್ಯೆಯ ಹಿಂದೆ ನಿರ್ಲಕ್ಷ್ಯದಿಂದ ಕುಂಡಿರುವರು ಇದು ಸಾಗಲಾರದು ಕರ್ನಾಟಕಕ್ಕೆ ತಕ್ಕ ಪಟ್ಟ ಸರಕಾರದವರು ತಮ್ಮ ಕರ್ತವ್ಯ ನಿರ್ವಾಹ ಮಾಡಲು ಕೆಲವೇ ಬಿಡಾಪರಿ ಕೆಲಸಗಳನ್ನು ಕೈಗೊಂಡು ಕ್ಷಾರ ಮಾಡಬೇಕು ಪ್ರತ್ಯೇಕವಾಗಿ ಒಂದಾಗಿ ಸಾಮರ್ಥ್ಯವಾಗಿ ಈ ಕಡೆ ಗಮನ ಕೊಡುವ ಕಾಲ ಪ್ರಾರಂಭವಾಗಿದೆ ಇದೇ ಸರ್ವರ ಹೃದಯದ ಆಶೆಯನ್ನು ಅನಸ್ಯ ಹೆಚ್. ಶೀತಾರಾಮರೆಡ್ಡಿ ಬಿ. ಎ. ಬಿ. ಎಲ್. (ಎಂ. ಎಲ್. ಎ) ಮಾತುಗಳಿಂದ ಕ್ಷಾಮ ಬಾಧೆಯು ಕಡಿಯು ಕರುಣಾಜನಕವಾಗಿದೆ ರೈತರು ಈ ೩೫ ವರ್ಷಗಳಿಂದ ಒಂದೆ ಕ್ಷಾರುಗಳಲ್ಲಿ ಮೊದಲು ಬಂಡಾಗಿ ನಿರ್ವೀರ್ಯರಾಗಿದ್ದಾರೆ ನಮಗೆ ನಿಜವಾಗಿಯೂ ಮುಕ್ತಿ ದೊರೆಯಬೇಕೆಂದರೆ ತುಂಗಭದ್ರಾ ನಿಕಾಕಿಸೀ ನಮ್ಮ ನದಿಗಳ ಮೂಲಕ ಕಾಲುವೆಗಳನ್ನು ಅಗದು ನೀರು ಪರಿಸಿ ಅದರ ಸಹಾಯದಿಂದ ವಿದ್ಯುಚ್ಛಕ್ತಿ ಉತ್ಪನ್ನವಾಗುವಂತೆಯೂ ಭಿವೃದ್ಧಿಗೆ ಅವಕಾಶ ದೊರಕಿಸಬೇಕು ನಮ್ಮ ಆರ್ಥಿಕ ಸಂಪದಾಭಿವೃದ್ಧಿಗಾಗಿ ಅರಣ್ಯ ಮತ್ತು ಪಶುಸಂವರ್ಧನೆಯ ಹೆಚ್ಚಿಸಬೇಕು ಕೊಪ್ಪರ ಉಣ್ಣೆಯ ಉತ್ಪೋಗವು ಮೈಸೂರು ದೇಶದಲ್ಲಿ ಅಭಿವೃದ್ಧಿಸ್ಥಿತಿಯಲ್ಲಿದೆ ಅದರ ಬೆಳವಣಿಗೆಯಾಗಬೇಕು ಕೊಯಂಬತ್ತೂರು ಭಾಗದಲ್ಲಿ 'ಮಿಲ್'ಸ್ಥಾಪನೆಯಾಗಿ ಆಭಾಗದ ರೈತರನ್ನು ಉದ್ಧಾರ ಮಾಡಿದಂತೆ ನಮ್ಮ ಭಾಗಗಳಲ್ಲಾದರೂ 'ಮಿಲ್'ಗಳ ಸ್ಥಾಪನೆಯಾಗಿ ಹತ್ತಿಗೆ ಒಳ್ಳೆಯ ಬೆಲೆ ಕೊಡಿಸಿ ರೈತರನ್ನು ಮುಂದಕ್ಕೆ ತರಬೇಕು. ಈ ಜಿಲ್ಲೆಗಳಲ್ಲಿ ೧೦ ಮಿಲ್‌ಗಳ ಸ್ಥಾಪನೆಗೆ ಅವಕಾಶವಿದೆ ನೆಲಗಡಲೆಯು ಹಿಂದೊಸ್ಥಾನದಲ್ಲಿ ೪೬ ಲಕ್ಷ ಟನ್‌ಗಳಷ್ಟು ಬೆಳೆಯುತ್ತಲಿದೆಯೆಂದು ಗೊತ್ತಾಗಿದೆ ಎಣ್ಣೆಯ ಬಳಕೆಯು ಪೆಟ್ರೋಲಿಯಂ ಕಾಲದಲ್ಲಿ ಈ ಬೆಳೆಯ ವಿಸ್ತರ್ಣವು ಆಗಬೇಕು. ಇದಕ್ಕೆ ಸರಿಯಾದ ದರವು ದೊರೆಯುವಂತೆ ರೈತರಿಗೆ ಸಹಾಯವುಂಟಾಗುತ್ತಲಿದೆ

ಹತ್ತಿ, ಸಿಮೆಂಟ್ ಬಣ್ಣಗಳ ಉತ್ಪತ್ತಿಗೆ, ಕಾಗದದ ತಯಾರಿ, ಮತ್ತು ಇತರ ವೃತ್ತೋದ್ಯೋಗಿಗಳ ಪ್ರಗತಿಗೆ ಸಹಾಯ ಸಹಕಾರಗಳು ದೊರೆಯಬೇಕು ಖಾದಿ ವ್ಯಾಪಾರೀ ಮತ್ತು ವ್ಯವಸಾಯ ಬ್ಯಾಂಕುಗಳ ಹೆಚ್ಚಳವಾಗಬೇಕು. ಮಹಾತ್ಮ ಗಾಂಧಿಯವರ ಸತ್ಯಾಗ್ರಹೋದ್ಯಮದಿಂದ ನಮ್ಮ ಭಾಗದಲ್ಲಿ ವೇಶಾಭಿಮಾನ ಸ್ವಾತಂತ್ರ್ಯಾಭಿಮಾನ ಮತ್ತು ಧೈರ್ಯ ಉತ್ಸಾಹಗಳು ಬಂದಿವೆಯೆಂಬುದನ್ನು ನಾವು ಒಪ್ಪಲೇಬೇಕು.

ಶ್ರೀ ಬಾಗ್ ಸಂಘಯೇನೋ ಆಯಿತು. ಆಗಿನಿಂದ ರಾಯಲಸೀಮೆಯವರಿಗೆ 'ಬ್ಲಾಂಕ ಚೆಕ್' ಕೊಟ್ಟಿರುವರು. ಆ ಮೇಲೆ ಮಂತ್ರಿಗಳಾದ ಪ್ರತ್ಯ ಬಂದಾಗ ಒಂದು ಸ್ಥಾನವನ್ನಾದರೂ ಈ ಭಾಗದ ಪರಿಗೆ ಕೊಡಲಿಲ್ಲ. ನೈಧಾ ಮಾತುಗಳಿಂದೇನು ಪ್ರಯೋಜನ? ನಮ್ಮ ಶಕ್ತಿಯನ್ನು ಬೆಳೆಸಬೇಕು.

ಶ್ರೀ ಶೀತಾರಾಮರೆಡ್ಡಿಯವರ ಪ್ರಾರಂಭೋತ್ಸವದ ಭಾಷಣಾನಂತರ ಶ್ರೀ ಬಿ. ಪಿ. ಶೇಷರೆಡ್ಡಿಯವರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸುವದಾಯಿತು.

ಶ್ರೀ ಡಿ. ಯಸ್. ಹನುಮಂತರಾಯರು ಒಂದು ಚಿಕ್ಕ ಭಾಷಣದಿಂದ ಅಧ್ಯಕ್ಷರನ್ನು ವಂದಿಸಿ ತಮ್ಮ ಅಧ್ಯಕ್ಷಪಟ್ಟವನ್ನು ಶ್ರೀ ರೆಡ್ಡಿಯವರಿಗೆ ಅರ್ಪಿಸಿದರು.

ಶ್ರೀ ಬಿ. ಪಿ. ಶೇಷರೆಡ್ಡಿಯವರ ಭಾಷಣದ ಸಾರಾಂಶ

ನಾವು ದುರ್ಭರವಾದ ಕಾಲದಲ್ಲಿ ಸಮಾವೇಶವಾಗಿದ್ದೇವೆ. ಯುದ್ಧದ ವರಣದಲ್ಲಿ ಅಮಾನುಷಕೃತ್ಯ, ಅನ್ಯಾಯ ನಡೆಯುವಕಾಲದಲ್ಲಿ ನಾವಿದ್ದೇವೆ. ಧರ್ಮ ಸ್ವಾತಂತ್ರ್ಯಗಳು ಸ್ಥಾಪಿಸಲ್ಪಡಬೇಕೆಂದು ಭಗವಂತನನ್ನು ಪ್ರಾರ್ಥಿಸೋಣ. (ಉಳಿದು ೫ನೇ ಪುಟ ಸಾ-೩)

ಸೈನ್ಯಾಧಿಕಾರಿಗಳಿಗೆ ಉಚ್ಚಾಟನೆ.

ಸಂಗ್ರಾಮದ ಫಲ.

ಅಮೇರಿಕಾದ ಅತ್ಯಂತ ಬಲಯುತವಾದ ರಕ್ಷಣಾಕೇಂದ್ರವೆನಿಸಿದ "ಪರ್ಲ್" ಬಂದರಿನ ರಕ್ಷಣೆಗಾಗಿ ನಿಯಮಿಸಲ್ಪಟ್ಟಿದ್ದ ಮೂರು ಮಂದಿ ಅಧಿಕಾರಿಗಳನ್ನು ಅಮೇರಿಕದ ಮುಖ್ಯಾಧಿಕಾರಿಗಳು 'ಡಿಸ್ ಮಿಸ್' ಮಾಡಿದ್ದಾರೆ.

ಆ ನೌಕಾಕ್ಷೇತ್ರವನ್ನು ಜಪಾನ್ ಸೈನ್ಯಗಳು ಆಕ್ರಮಿಸಿದಾಗ, ರಕ್ಷಿಸಲು ತಕ್ಕ ಸಿದ್ಧತೆಗಳನ್ನು ಮುಂಚೆಯೇ ಮಾಡಿಕೊಂಡಿರಲಿಲ್ಲವೆಂಬ ಕಾರಣದಿಂದ, ಫೆಸಿಫಿಕ್ ನೌಕಾಬಲದ ಕಮ್ಯಾಂಡರ್ ಇನ್ ಚೀಫ್‌ರವರಾದ ಅಡ್ಮಿರಲ್ ಕಿಮ್ಮೆಲ್‌ರವರನ್ನೂ ಹವಾಯ್ ವಿಮಾನಬಲದ ಮುಖ್ಯಾಧಿಕಾರಿಗಳಾದ ಮೇಜರ್ ಜನರಲ್ ಮಾರ್ಟಿನ್‌ರವರನ್ನು ಸೈನ್ಯಶಾಖೆಯ ಮುಖ್ಯಾಧಿಕಾರಿಗಳಾದ ಜನರಲ್ ಷಾರ್ಟ್‌ರವರನ್ನೂ ಡಿಸ್ ಮಿಸ್ ಮಾಡಬೇಕೆಂದು ಅಮೇರಿಕ ನೌಕಾ ಸಚಿವರಾದ ಕರ್ನಲ್ ನಾಕ್ಸ್‌ರವರು ಶಿಫಾರಸ್ ಮಾಡಿದರು. ಅದರಂತೆ ಆ ಮೂರು ಮಂದಿಯ ಡಿಸ್ ಮಿಸ್ ಆಯಿತು.

ಬ್ರಿಟನ್ನಿನಲ್ಲಿ

ಅಮೇರಿಕಾದಲ್ಲಿ ಮಾತ್ರವೇ ಈ ರೀತಿ ಸೈನ್ಯಾಧಿಕಾರಿಗಳನ್ನು 'ಡಿಸ್‌ಮಿಸ್' ಮಾಡಲಿಲ್ಲ. ಬ್ರಿಟನ್ನಿನಲ್ಲಿ ಕೂಡಾ ಇದಕ್ಕೆ ಬೇಕಾದಷ್ಟು ನಿದರ್ಶನಗಳಿವೆ ೧೯೩೯ ಸೆಪ್ಟೆಂಬರ್ ತಿಂಗಳಿನಲ್ಲಿ ಬ್ರಿಟನ್ನಿನಲ್ಲಿದ್ದ ಮುಖ್ಯ ಸೈನ್ಯಾಧಿಕಾರಿಗಳಿಗೆಲ್ಲ ಉಚ್ಚಾಟನೆಯಾಗಿದೆ. ಆಗ ಇದ್ದ ಅಧಿಕಾರಿಗಳ ಸೈಕಿ ಮುಖ್ಯರಾದವರು ಸರ್ ಎಡ್ಮಂಡ್ ಐರನ್ ಸೈಡ್ ಮತ್ತು ಜನರಲ್ ಲಾರ್ಡುಗೋರ್ಟ್. ಸೈನ್ಯಶಾಖೆಯ 'ಜನರಲ್ ಸ್ಟಾಫ್'ನ ಮುಖ್ಯಾಧಿಕಾರಿಗಳಾಗಿದ್ದ ಸರ್ ಎಡ್ಮಂಡ್ ಐರನ್ ಸೈಡ್‌ರವರು ಇದಕ್ಕಿಂತ ಮುಂಚೆಯೇ ಪ್ರಯೋಜನಕ್ಕೆ ಬಾರದವರೆಂದು ನಿರ್ಧರಿಸಲ್ಪಟ್ಟ ಜಬ್ಬಾಲ್ಪರ್ ಗವರ್ನರಾಗಿ ವರ್ಗಾಯಿಸಲ್ಪಟ್ಟರು. ಅಲ್ಲಿ ಅವರನ್ನು ಬ್ರಿಟನ್ನಿನ 'ಓವರ್‌ಸೀಸ್' ಪಡೆಗಳ ಮೇಲ್ವಿಚಾರಕರನ್ನಾಗಿ ನಿಯಮಿಸಲಾಯಿತು. ಮೊದಲು ಅವರು ಫ್ರೇಲೆಂಡಿಗೆ ಹೋಗಿ ಜನರಲ್ ಸ್ಕಿಗ್ಲಿರಿಡ್ಜ್‌ರವರನ್ನು ನೋಡಿ ಮಾತುಕತೆಗಳನ್ನು ನಡೆಸಿದರು. ಒಂದುವೇಳೆ ಜರ್ಮನಿಯು ಫೋಲೆಂಡಿನಮೇಲೆ ದಂಡಯಾತ್ರೆ ನಡೆಸಿದರೆ, ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ವಿಚಾರವನ್ನು ಚರ್ಚಿಸುವುದೇ ಅವರ ಆಗಮನದ ಮುಖ್ಯ ಉದ್ದಿಶ್ಯವಾಗಿತ್ತು. ಆದರೆ ಮಾತುಕತೆಗಳು ವಿಫಲವಾದವು ಜರ್ಮನಿಯು ಫೋಲೆಂಡಿನಮೇಲೆ ಮುತ್ತಿಗೆ ಹಾಕಿದಾಗ ಸ್ಕಿಗ್ಲಿರಿಡ್ಜ್‌ರವರು ಬಹುಕಾಲ ಯುದ್ಧ ಮಾಡಲಿಲ್ಲ. ರುಮೇನಿಯ ದೇಶಕ್ಕೆ ಓಡಿ ಹೋದರು.

೧೯೪೧ ರಲ್ಲಿ ಸಂಗ್ರಾಮ ಪ್ರಾರಂಭವಾದ ೨ ವಾರಗಳೊಳಗಾಗಿ, ಸರ್ ಎಡ್ಮಂಡ್ ಐರನ್ ಸೈಡ್‌ರವರನ್ನು ಇಂಪೀರಿಯಲ್ ಜನರಲ್ ಮುಖ್ಯಾಧಿಕಾರಿಗಳನ್ನಾಗಿ ನಿಯಮಿಸಲಾಯಿತು. ಅವರು ತನ್ನ ಮಗನಿಗೆ ರಜ ಕಾಲದಲ್ಲಿ ಫ್ರಾನ್ಸಿನಲ್ಲಿರುವ ಮ್ಯಾಜಿನಾಟ್ ಲೈನಿಗೆ ಹೋಗಿ ನೋಡಿಕೊಂಡು ಬರಲು ಕಳುಹಿಸಿದರು. ಇದರಿಂದ ವಾರ್ಲಿಮೆಂಟಿನಲ್ಲಿ ದೊಡ್ಡ ಗಲಭೆಯಾಯಿತು. ಇಂತಹ ಪರಿಸ್ಥಿತಿಯು ಮುಂದೆ ಸಂಭವಿಸುವುದಿಲ್ಲವೆಂದು ಆಗ ಸಂಗ್ರಾಮ ಸಚಿವರಾಗಿದ್ದ ಆಲಿನರ್ ಸ್ಟಾನ್ಲೆಯವರು ಕಾಮನ್ಸ್ ಸಭೆಯಲ್ಲಿ ಹೇಳಿಕೆ ಇತ್ತರು.

೧೯೪೦ ನೇ ಏಪ್ರಿಲ್ ತಿಂಗಳಲ್ಲಿ ಸರ್ ಐರನ್ ಸೈಡರವರು ಮಾತನಾಡುತ್ತ ಬ್ರಿಟನ್ನಿಗೆ ಇದ್ದ ವಿಪತ್ತು ಕಳೆಯಿತೆಂದೂ ಇನ್ನು ಮೇಲೆ ಸುರಕ್ಷಿತವಾಗಿರಬಹುದೆಂದೂ ಹೇಳಿಕೆ ಇತ್ತರು. ಅಲ್ಲದೆ ನಶ್ಚಿಮ ರಣರಂಗದಲ್ಲಿ ಬೇಕಾದರೆ ಹಿಟ್ಲರನನ್ನು ನುಟ್ಟ ಹಾಕುವುದಾಗಿ ಸವಾಲು ಹಾಕಿದರು ಹಿಟ್ಲರರು ಆ ಸವಾಲನ್ನು ಸ್ವೀಕರಿಸಿ ಮುತ್ತಿಗೆ ಹಾಕಿಯೇ ಹಾಕಿದರು ಇದರಪರ್ಯವಸಾನ ನೇನಾಯಿತೆಂಬುದು ಎಲ್ಲರಿಗೂ ಗೊತ್ತಿದೆ. ಡಂಕರ್ಕ್‌ನಿಂದ ಬ್ರಿಟಿಷ್ ಸೈನ್ಯವು ಹಿಂದಕ್ಕೆ ಬರಬೇಕಾಯಿತು. ಸರ್ ಐರನ್ ಸೈಡ್‌ರವರಿಗೆ ಸ್ಥಾನಪಲ್ಲಟವಾಯಿತು. ಕೆಳ ದರ್ಜೆಗೆ ಇಳಿಸಿ ಬ್ರಿಟನ್ನಿನ ಸೈನ್ಯ ಪಡೆಗಳ ದಂಡನಾಯಕರನ್ನಾಗಿ ಅವರನ್ನು ನಿಯಮಿಸಲಾಯಿತು. ಈಗ ಅವರ ನೆಲೆಯೇ ಇಲ್ಲವಾಗಿದೆ! ೩೦೦೦ ಪೌಂಡುಗಳ ಪೆನ್‌ಷನ್ ಪಡೆದು ಎಲ್ಲಿಯೋ ಒಂದು ಮೂಲೆಯಲ್ಲಿ ವಿಶ್ರಾಂತಿ ಸುಖವನ್ನು ಅನುಭವಿಸುತ್ತಿದ್ದಾರೆ.

ವೈಕೌಂಟ್ ಗೋರ್ಟ್‌ರವರ ಗತಿಯೂ ಕೂಡ ಹಾಗೆಯೇ ಆಗಿದೆ. ಈಗ ಅವರು ಜಿಬ್ರಾಲ್ಟರಿನ ಗವರ್ನರಾಗಿ ನೇಮಕ ಮಾಡಲ್ಪಟ್ಟಿದ್ದಾರೆ.

'ಇಂಪೀರಿಯಲ್ ಜನರಲ್ ಸ್ಟಾಫಿನ' ಇನ್ನೊಬ್ಬ ಮುಖ್ಯಾಧಿಕಾರಿಗಳ ಗತಿಯೂ ಕೂಡ ಹಾಗೆಯೇ ಆಗಿದೆ. ಅವರು ಮುಂಬೈ ಗವರ್ನರಾಗಿ ಈಗ ತಾನೆ ನಿಯಮಿಸಲ್ಪಟ್ಟಿರುವ ಸರ್ ಜಾನ್ ಡಿಲ್‌ರವರು. ೧೯೪೦ ನೇ ವರ್ಷದ ಮೇ ತಿಂಗಳಲ್ಲಿ ಜರ್ಮನರು ತಮ್ಮ ಮುತ್ತಿಗೆಯನ್ನು ಆರಂಭಿಸಿದುದಕ್ಕಿಂತ ಕೆಲವು ದಿನಗಳ ಮುಂಚಿತವಾಗಿ ಸರ್ ಜಾನ್ ಡಿಲ್‌ರವರನ್ನು ಇಂಪೀರಿಲ್ ಜನರಲ್ ಸ್ಟಾಫ್'ನ ಡೈರೆಕ್ಟೇ ಫೀಲ್ಡ್‌ರವರನ್ನಾಗಿ ನಿಯಮಿಸಲಾಯಿತು. ಅನಂತರ ಎರಡು ತಿಂಗಳ ತರುವಾಯ ಅವರು ಸರ ಎಡ್ಮಂಡ್ ಐರನ್ ಸೈಡರವರ ಸ್ಥಾನದಲ್ಲಿ 'ಇಂಪೀರಿಯಲ್ ಜನರಲ್ ಸ್ಟಾಫ್'ನ ಮುಖ್ಯಾಧಿಕಾರಿಗಳಾಗಿ ನಿಯಮಿಸಲ್ಪಟ್ಟರು. ಈಗ ೧೮ ತಿಂಗಳ ಕೆಳಗೆ ಅವರು ಎರಡನೇ ಸಾರಿ ವಿವಾಹಪಾದರು. ಮದುವೆಯಾಗಿ ಐದು ವಾರಗಳೊಳಗಾಗಿ ಅವರನ್ನು ಮನೆಗೆ ಕಳುಹಿಸಿ ಮುಂಬೈ ಗವರ್ನರ ಪದವಿಗೆ ಅವರನ್ನು ನಿಯಮಿಸಲಾಯಿತು. ಸರ್ ರೋಜರ್ ಲಮ್ಲೆಯವರು ಈ ವರ್ಷದ ಮಧ್ಯಭಾಗದಲ್ಲಿ ನಿವೃತ್ತರಾದಮೇಲೆ ಸರ್ ಜಾನ್ ಡಿಲ್‌ರವರು ಮುಂಬೈ ಗವರ್ನರಾಗಿ ಬರಬಹುದು.

ಆರ್. ಎ. ಎಫ್. ಬಲದಲ್ಲಿ

ಬ್ರಿಟನ್ನಿನ ಆರ್. ಎ. ಎಫ್ ಪಡೆಯಲ್ಲಿಯೂ ಕೂಡ, ಅನೇಕ ಮಂದಿ ಅಧಿಕಾರಿಗಳಿಗೆ ಈ ಸಂಗ್ರಾಮದ ಸಮಯದಲ್ಲಿ ಉಚ್ಚಾಟನೆಯಾಗಿದೆ. ಸಂಗ್ರಾಮದ

ಏರ್ ಫೀಲ್ಡ್ ಮಾರ್ಷಲ್'

ರಲ್ ನ್ಯೂವಲ್ ರವ

ರಿಗೆ ೧೯೪೦ ನೇ ವರ್ಷದಲ್ಲಿಯೇ ಸ್ಥಾನ ಪಲ್ಲಟವಾಯಿತು. ಅವರನ್ನು ನ್ಯೂಜಲೆಂಡಿನ ಗವರ್ನರ್ ಜನರಲ್‌ರವರನ್ನಾಗಿ

ಯುದ್ಧ ವಾರ್ತೆಗಳು.

ಪೆಸಿಫಿಕ್ ರಣರಂಗ—ಅಮೆರಿಕಾ—ಬ್ರಿಟಿಷ ಕಾಲೋನಿಗಳಮೇಲೆ

ಜಪಾನರ ದಾಳಿ

ನಿಯಮಿಸಲಾಯಿತು. ಫೈಟರ್ ಕಮ್ಯಾಂಡರ್ ಸರ್ ಹ್ಯೂಡೌಡಿಂಗ್‌ರವರಿಗೆ ಬದಲಾಗಿ ಏರ್ ಮಾರ್ಷಲ್ ಡೌಗ್ಲಾಸ್‌ರನ್ನು ನಿಯಮಿಸಲಾಯಿತು. ಮಧ್ಯ ಪೂರ್ವದಲ್ಲಿ ಬ್ರಿಟಿಷಿನ ವಿಮಾನ ಬಲದ ಸುಪ್ರೀಂಕಾಂಡಿಗಳಾಗಿದ್ದ ಏರ್ ಮಾರ್ಷಲ್ ಸರ್ ಆರ್ಚರ್ ಶ್ಯಾಂಗ್‌ಹೋಸ್‌ರವರನ್ನು ಕರೆದ ಜುಲೈ ತಿಂಗಳಲ್ಲಿ ಕೆಲಸದಿಂದ ವಿಶ್ರಾಂತಿನೀಡಲಾಯಿತು ಕ್ರೀಟೆಯಲ್ಲಿ ಆದ ಸೋಲಿಗೆ ಇವರೇ ಕಾರಣರೆಂದು ಹೇಳಲಾಗಿದೆ.

ಇತರ ದೇಶಗಳಲ್ಲಿ

ಇತರ ದೇಶಗಳಲ್ಲಿಕೂಡ ಈ ರೀತಿ ಸೈನ್ಯಾಧಿಕಾರಿಗಳನ್ನು ಮನೆಗೆ ಕಳುಹಿಸುವ ಕೆಲಸಗಳು ಬೇಕಾದಷ್ಟು ನಡೆದಿವೆ. ಫ್ರಾನ್ಸಿನ ಮಹಾ ದಂಡನಾಯಕರಾಗಿದ್ದ ಜನರಲ್ ಗ್ಯಾಮುಲಿನ್ ರವರನ್ನು ಮನೆಗೆ ಕಳುಹಿಸಿ ಅವರಿಗೆ ಬದಲಾಗಿ ಜನರಲ್ ವೇಗಾಂಡ್‌ರವರನ್ನು ನಿಯಮಿಸಲಾಯಿತು. ಮಾಸ್ಕೋ ರಣಾಂಗದಲ್ಲಿ ಜರ್ಮನಿಯ ದಂಡನಾಯಕರಾಗಿದ್ದ ಮಾರ್ಷಲ್ ಕ್ಲೀಸ್ಟರವರನ್ನು ಹಿಟ್ಲರನು 'ಡಿಸ್ ಮಿಸ್' ಮಾಡಿದರು ಅವೇರೀತಿ ಜರ್ಮನಿಯ ಮಹಾ ದಂಡನಾಯಕರಾದ ವಾನ್ ಬ್ರಾಚಿಸ್ಚ್‌ರವರನ್ನು ಹಿಟ್ಲರರು ಕೆಲಸ ಎಂದು ಇತ್ತೀಚೆಗೆ ತೆಗೆದು ತಾವೇ ದಂಡನಾಯಕ ಪದವಿಯನ್ನು ವಹಿಸಿಕೊಂಡಿದ್ದಾರೆ.

ಇಟಲಿಯಲ್ಲಿ ಮಹಾ ದಂಡನಾಯಕರೆಂದು ಹೆಸರುವಾಸಿಯಾಗಿದ್ದ ಮಾರ್ಷಲ್ ಬೊಡೊಗ್ಲಿಯೋ ಅವರು ಸೈಜಿಯಾ ನಿಯನರು ಈಗ ನಪತ್ತುತರಾಗಿದ್ದಾರೆ.

ರಷ್ಯದಲ್ಲಿ ದಕ್ಷಿಣ ರಣರಂಗದ ಮಹಾ ದಂಡನಾಯಕರಾಗಿದ್ದ ಮಾರ್ಷಲ್ ಬುಡ ನಿಯನರನ್ನು ಕೂಡ ಅವರ ಸ್ಥಾನದಿಂದ ಸ್ಟಾಲಿನ್‌ರವರು ಕದಲಿಸಿದರು.

ಜಪಾನ ಸಚಿವರೀನಗಳ ನಾಶ :—

ಪೆಸಿಫಿಕ್ ಸಾಗರದಲ್ಲಿ ಜಪಾನಿ ಸಚಿವೆರೀಸು ಮುಳುಗಿತೆಂದು ಜಪಾನು ಸರ ಕಾರವೇ ಒಪ್ಪಿಕೊಂಡಿದೆ. ಕಳೆದವಾರ ಜಪಾನಿನ ಕ್ರೂಯಿಸರ್ ಒಂದಕ್ಕೆ ನಷ್ಟ ಸಂಭವಿಸಿತೆಂದೂ, ಆದರೆ ಅದು ಯಾವ ಮಾಡಲು ಶಕ್ತವಾಗಿದೆಯೆಂದೂ ಹೇಳ ಲಾಗಿದೆ. ಅಮೇರಿಕಾದ ಪ್ರಕಟನೆಯ ಪ್ರಕಾರ ೧೦ ಸಾವಿರ ಟನ್ನಿನ ೩ ಜಪಾನಿ ಹಡಗುಗಳನ್ನು ಮುಳುಗಿಸಲಾಗಿದೆಯಂತೆ.

ಸರವಾಕ ಮತ್ತು ಉತ್ತರ ಬೋರ್ನಿಯೋ: —

ಸಾರವಾಕದಲ್ಲಿ ೧೦೦ ಜಪಾನೀಯರು ಇದ್ದರು. ಇವರು, ಜಪಾನೀ ಸೈನ್ಯಗಳು ಬರುವಮುಂಚೆ ಎಲ್ಲಾ ಅನುಕೂಲಪಡಿಸಿ ಸಂಚನ್ನು ಮಾಡಿದ ಕೆಲಸಮಾಡಿದ್ದರು. ಉತ್ತರ ಬೋರ್ನಿಯೋದಲ್ಲಿ ಸುಮಾರು ೩ ಸಾವಿರ ಜಪಾನಿಯರಿದ್ದರೂ ಅದು ಇನ್ನೂ ಸಂಪೂರ್ಣವಾಗಿ ವಶವಾಗಿಲ್ಲ. ಸಾರವಾಕದ ಬಿಳಿಯರಾಜರು ಹೇಳುವ ಪ್ರಕಾರ ಹಿಂದೂ ದೇಶದ ಸೈನ್ಯಗಳು ಕಲಿತನದಿಂದ ಕಾದಿದವೆಂದೂ, ಜಪಾನರು ಅಳಿಕ್ಕಿಯಿಸಿರುವ ಪೂರ್ವ ಸಾರವಾಕದಲ್ಲಿ ಬೆಳೆಯುಳ್ಳ ನಪ್ತುಗಳನ್ನೆಲ್ಲಾ ನಾಶ ಮಾಡಲಾಯ್ತೆಂದೂ ಸೊತ್ತಾಗಿದೆ.

ಸಿಂಗಪುರದಿಂದ ಭಾರತೀಯರು

ಸಿಂಗಪುರದಿಂದ ಭಾರತೆಯ ಅಧಿಕಾರಿಗಳ ಹೆಂಗಸರೂ, ನುಕ್ಕಳೂ ಹಿಂದೂ ಸ್ಥಾನಕ್ಕೆ ಹೊರಟರು.

ಮಲಯಾಕ್ಕೆ ವಿಮಾನ ಟಪಾಲು

ಹಿಂದೂಸ್ಥಾನದಿಂದ ಮಲಯ ದೇಶದ ಯಾವ ಭಾಗಕ್ಕಾದರೂ, ಆಸ್ಟ್ರೇಲಿಯಾ ಕ್ಕಾಗಲಿ ವಿಮಾನ ಟಪಾಲು ನಿರಾಟಾಗಿ ನುಟ್ಟಲು ಸಾಧ್ಯವಿಲ್ಲದಿದೆ. ಈ ಅಂಶ ವನ್ನು ಸರದೆಪಲಿಯಿಂದ ತಿಳಿಸಲಾಗಿದೆ.

ಆಸ್ಟ್ರೇಲಿಯಾ ಸೈನ್ಯ

ಆಸ್ಟ್ರೇಲಿಯಾ ಸೈನ್ಯವನ್ನು ತಮ್ಮ ಗಡಿ ಬಿಟ್ಟು ಕಳುಹಿಸಬಾರದೆಂದು ಆ ಪ್ರಜೆಯ ವಾಲ್ಲಿಯೆಂಟ್ ಸದಸ್ಯತನೇಕರು ಅಭಿಪ್ರಾಯಪಡುತ್ತಿರುವರು. ಈಗಿನ ಗಂಡಾಂತರ ಪರಿಸ್ಥಿತಿಯಲ್ಲಿ ಆಸ್ಟ್ರೇಲಿಯಾ ಸೈನಿಕರು ತಮ್ಮ ದೇಶರಕ್ಷಣೆಗಾಗಿರಬೇಕೆಂದು ಅವರ ಅಭಿಪ್ರಾಯ.

ಧ್ವಂಸಮಾಡಿ ಹಿಂದೆ ಸರಿಯುವೆವು ನೆದರ್‌ಲೆಂಡ್ ಗವರ್ನರರ ಹೇಳಿಕೆ

ಒಂದುವೇಳೆ ಹಿಂದೆ ಸರಿಯಬೇಕಾಗಿ ಬಂದಲ್ಲಿ ಎಲ್ಲವನ್ನೂ ಧ್ವಂಸಮಾಡಿ ಹೋಗಲು ನೆದರ್‌ಲೆಂಡ್ ಪೂರ್ವ ಇಂಡೀಸ್ ಜನರು ಈಗ ಹಲವು ವಾರಗಳ ಹಿಂದಿನಿಂದಲೂ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂದು ನೆದರ್‌ಲೆಂಡ್ ಪೂರ್ವ ಇಂಡೀಸ್ ದ್ವೀಪಗಳ ಹೊಸ ಲೆಫ್ಟಿನೆಂಟ್ ಗವರ್ನರಾದ ವಾನ್ ಮೂರ್‌ರವರು ತಿಳಿಸಿದರು.

ಎಣ್ಣೆ ಕೈಗಾರಿಕೆ ಯಂತ್ರಗಳು ಶತ್ರುಗಳ ಕೈಗೆ ಬೀಳದಂತೆ ಮಾಡಲು ಯಂತ್ರಗಳ ಸ್ಥೆಲ್ಲ ಬಿಚ್ಚುತ್ತಿರಲಾಗಿದೆಯೆಂದೂ, ಜಪಾನರು ಮುತ್ತಿಗೆ ಹಾಕುವ ಭಯವಿರುವ ಸ್ಥಳಗಳಿಂದ ಯಂತ್ರಗಳನ್ನು ಸಾಗಿಸುವ ಸ್ಥಳಕ್ಕೆ ನಡೆದಿರೆಯೆಂದೂ ಅವರು ತಿಳಿಸಿದರು. ಜಪಾನರೇನಾದರೂ ಬಂದರೆ ಎಣ್ಣೆ ಬಾವಿಗಳಿಗೆ ಬೆಂಕಿಯಿಡುವುದಾಗಿ ತಿಳಿಸಿದರು. "ಇದರಿಂದ ಜಪಾನರಿಗೆ ಎಂತೆಂದಿಗೂ ತೊಂದರೆಯಾಗುವಂತಿಲ್ಲ. ಎಣ್ಣೆ ಬಾವಿಗಳು ಎಲ್ಲಿವೆಯೆಂಬುದು ಜಪಾನರಿಗೆ ಗೊತ್ತು. ಅವರು ೬ ತಿಂಗಳೊಳಗಾಗಿ ಮತ್ತೆ ಎಣ್ಣೆ ತೆಗೆಯಲು ಶಕ್ತರಾಗುವರು" ಎಂದರು.

ತನ್ನನ್ನು ತಾನು ರಕ್ಷಿಸಿಕೊಳ್ಳುವುದರಲ್ಲಿ ಸಿಂಗಪುರಕ್ಕೆ ತಕ್ಕ ಶಕ್ತಿಯಿಲ್ಲೆಂದು ತಾವು ನಂಬಿರುವುದಾಗಿ ತಿಳಿಸಿದ್ದಾರೆ ಅದು ಒಂದು ಬೇರೆ ಪ್ರಶ್ನೆಕಿನಸ್ಟ್ಟಿರೆ ಆದರೆ ಪ್ರಾಮುಖ್ಯತೆಯು ಅಷ್ಟಾಗಿ ಇರುವುದಿಲ್ಲವೆಂದರು.

ನೆದರ್ಲೆಂಡ್ ಪೂರ್ವ ಇಂಡೀಸಿಗೆ ಆಸ್ಟ್ರೇಲಿಯವು ಸಹಾಯನಾಮುವ ವಿಚಾರವೆತ್ತಿ ಮುಲಯಾಬಿಟ್ಟರೆ ನೆದರ್‌ಲೆಂಡ್ ಪೂರ್ವ ಇಂಡೀಸ್ ದ್ವೀಪವೇ ಎರಡನೇ ರಕ್ಷಣೆ ಸ್ಥಾನ. ಆದ್ದರಿಂದ ಆಸ್ಟ್ರೇಲಿಯದ ಉತ್ತರದಲ್ಲಿ ಒಂದು ಮೂಹರಚಿಸಿ ಅವನ್ನು ಶತ್ರುಗಳು ಸೊ ಲಾಗದಂತೆ ಮಾಡಬೇಕೆಂದು ಆಸ್ಟ್ರೇಲಿಯಾದವರೂ ತೀರ್ಮಾನಿಸಿದ್ದಾವೆ. ಶತ್ರುಗಳನ್ನು ಇನ್ನೂ ಮುಂದೆ ಬಿಟ್ಟರೆ ಅವರನ್ನು ತಡೆಯಲು ಅಪಾರ ರಕ್ಷಣಾತ ನಡೆಸಬೇಕಾಗುತ್ತದೆ.

ಮುಲಯಾದಲ್ಲಿ ಜಪಾನರು ಹೇಗೆ ಬಂದಿಳಿಯುವರು

ಸೈನಿಕವರ್ಗದ ಟೀಕಾಕಾರರಾದ 'ಅನ್ಸಲಿಸ್ಟರು' ಹೀಗೆಬರೆಯುತ್ತಿದ್ದಾರೆ. ಮಧ್ಯ ಮುಲಯಾಪ್ರದೇಶದಲ್ಲಿ 'ನಂಬಲರ್ಹವಾದ' ಜಪಾನರ ಹತ್ಯೆಯಾಗ್ಗುತ್ತಿರುವುದೆಂದು ಹೇಳಬಹುದು. ಭೂಸ್ಟ್ರಾಂ ಮತ್ತು ಸ್ಲಿಂನದಿಗಳ ದಕ್ಷಿಣಕ್ಕೆ ಸ್ವಲ್ಪಪ್ರದೇಶದ ಗುಡ್ಡಗಾಡಿನಲ್ಲಿ ಬ್ರಿಟಿಷ್ ಸೈನ್ಯಗಳು ಜಪಾನೀ ದಾಳಿಗಳನ್ನು ತಡೆಯುತ್ತಿರುವವು ಜಪಾನಿಯರಿಗೆ ಅಧಿಕನಷ್ಟವಾಗುತ್ತಲಿದೆ. ಆದರೂ ಜಪಾನರು ಇರುವೆಗಳ ಸಾಲಿನಂತೆ ಎಲ್ಲಿಂದಲೋ ಬರುತ್ತಿರುವರು ಸಮುದ್ರದ ಕೆಳಭಾಗದಲ್ಲಿರುವ ಮೇಲಿರುವ ಬ್ರಿಟಿಷ್ ಸೈನ್ಯವನ್ನು ಹಿಂದಿನಿಂದ ಮುತ್ತುವ ಲಕ್ಷಣಗಳೂ ಇವೆ ಹಿಂದಿರುಗಿ ಬಂದವರು ಹೇಳುವ ಪ್ರಕಾರ "ಒಂದೇಸಲ ೫-೬ ಕಡೆಗಳಿಂದ ಗುಂಡಿನೇಟುಗಳನ್ನು ಎದುರಿಸುವ" ಸ್ಥಿತಿ ಸಂಗಡಿಸಿ ಬಂದಿವೆ ವಿಮಾನದಳವು ಸಮ್ಮಲಿ ಸಾಕಷ್ಟಿಲ್ಲ ನಿಶ್ಚವು ಇದರ ಕೊರತೆಯು ಹೆಚ್ಚಾಗುತ್ತಲಿದೆ ಪ್ರತಿಮು ಭಾಗದಲ್ಲಿ ಆಕಾಶವೆಲ್ಲಾ ಜಪಾನಿಯರ ಸ್ವಾಧೀನದಲ್ಲಿದೆ

ಮಲಯದ ಪೂರ್ವ ತೀರದಲ್ಲಿ

ಕಾಂಟನ್ ಆಕ್ರಮಣವಾದಮೇಲೆ ಇಂಹೋ ಚೀನಗಳಪಡೆಯಿಂದ ಜಪಾನಿಯರು ಸೈನ್ಯಗಳನ್ನು ತರುತ್ತಿರುವರು ಬ್ರಿಟಿಷ್ ವಿಮಾನಗಳೂ ಜಪಾನೀಯರ ಹಡಗುಗಳಮೇಲೆ ದಾಳಿಮಾಡಿಬಂದವು

ಕೌಲಾಲಾಂಪುರವು ಶತ್ರುಗಳ ವಶವಾಯಿತು

ಶತ್ರುಗಳು ಅಧಿಕ ಸಂಖ್ಯಾಕರಾಗಿ ಶ್ರೇಷ್ಠವರ್ಗದ ಶಸ್ತ್ರಾಸ್ತ್ರ ವಿಮಾನಗಳನ್ನು ಹೊಂದಿದ್ದ ಕಾರಣ ಬ್ರಿಟಿಷ್ ಸೈನ್ಯಗಳು ಕೌಲಾಲಾಂಪುರದ ದಕ್ಷಿಣಕ್ಕೆ ೫೦ ಮೈಲಿ ದೂರ ಹಿಂದೆಸರಿಯಬೇಕಾಯ್ತೆಂದು ಪ್ರಕಟವಾಗಿದೆ. ಇದರಿಂದ ಪಶ್ಚಿಮ ತೀರದ ಸೈಟನಹಾಂ ಎಂಬ ಬಂದರು ಕೂಡ ಶತ್ರುವಶವಾಯಿತು.

ಕೌಲಾಲಾಂಪುರ ಆಕ್ರಮಣಕ್ಕಾಗಿ ಭಯಂಕರ ಸಾಹಸ

ಗುತ್ತಿರುವರು ೧೦ ರಿಂದ ೧೨ ಟನ್ ತೂಕವುಳ್ಳ ಟ್ಯಾಂಕುಗಳನ್ನು ಜಪಾನೀಯರು ಉಪಯೋಗಿಸುತ್ತಲಿರುವರು ರೊಬ್ಬುದ್ದು ಅಧಿಕಾರಿಗಳ್ಳಾ ಈಗ ಧೃಡಪಟ್ಟಿದೆ. ಅವುಗಳಹಿಂದೆ ಲಾರಿಗಳಲ್ಲಿ ಸೈನ್ಯವು ಬರುತ್ತಲಿದೆ. ಮೊದಲು ಇಬ್ಬರು ಮನುಷ್ಯರ ಟ್ಯಾಂಕುಗಳನ್ನು ಉಪಯೋಗಿಸುತ್ತಿದ್ದರು.

ವಿಮಾನದಳವು ಸಾಕಷ್ಟಿಲ್ಲ

ಸಿಂಗಪುರ್ ಪ್ರಕಟನೆಯ ಪ್ರಕಾರ ಮಲಯಾ ದಂಡಯಾತ್ರೆಯಲ್ಲಿ ದೊಡ್ಡ ತೊಂದರೆಯೆಂದರೆ ಬ್ರಿಟಿಷ್ ಸೈನ್ಯಗಳಿಗೆ ಸಾಕಷ್ಟು ವಿಮಾನದಳದ ಸಹಾಯವಿಲ್ಲ. ಭೂಮಿಯಮೇಲೆ ಹೇಗೋ ಗೆದ್ದು ಬರಬಹುದು ಆದರೆ ಜಪಾನರ ವಿಮಾನದಳವು ಬಂತೆಂದರೆ ನಾವು ಹಿಂದಕ್ಕೆ ಸರಿಯಬೇಕಾಗುವುದು. ಶತ್ರು ಸೈನ್ಯಗಳು ಮುಂದೆ ಬರಬಹುದು.

ಫಿಲಿಪೈನ್‌ನಲ್ಲಿ

ನಿಂಡನಾವ್ ದ್ವೀಪದ ಸಮೀಪದಲ್ಲಿ ಶತ್ರುಗಳ ಅಧಿಕಸಂಖ್ಯಾಕ ಹಡಗುಗಳಿರುವುದರಿಂದ ಫಿಲಿಪೈನ್ ರಕ್ಷಾಂಗಕ್ಕಾಗಿ ಶತ್ರು ಸೈನ್ಯವು ಬಂದಿರಬಹುದೆಂದು ಊಹಿಸಲಾಗಿದೆ.

ಇಷ್ಟು ಆತುರತೆಯೇಕೆ?

ಜಪಾನರ ಸೈನ್ಯ ಬಲ 'ಅನ್ಸಲಿಸ್ಟ್' ಹೀಗೆ ಅಭಿಪ್ರಾಯಪಡುವರು

ಇಷ್ಟುವೇಗದ ದಾಳಿಯು ಮಿತ್ರವಕ್ಷದವರಿಗಿಂತಲೂ ಜಪಾನಿಗ್ಗೆ ಅಗತ್ಯವಿದೆ.

ಜಪಾನಿಗೆ ಸಿಂಗಪುರವೊಂದೇ ಅಲ್ಲ ನೆದರ್ಲೆಂಡ್ಸ್ ಇಂಡೀಸಿನ ಮುಖ್ಯ ಬಂದರುಗಳೂ ಬೇಕು. ಇದರಿಂದ ಮಿತ್ರವಕ್ಷದವರ ಹಡಗುಗಳು ನಿಲ್ಲಲಿಕ್ಕಾಗದಂತೆ ಮೂಡಬೇಕೆಂಬುದೇ ಜಪಾನರ ಉದ್ದೇಶವಿದೆಂದು ತೋರುತ್ತಿದೆ. ದಕ್ಷಿಣ ಫಿಲಿಪೈನಿನಲ್ಲಿ ಸಿಂಗಪುರಕ್ಕೆ ೧೫೦ ಮೈಲಿ ದೂರವಿರುವ 'ದಾವಾ' ಬಂದರನ್ನು ನಮ್ಮ ಬಂದರನ್ನಾಗಿ ಮಾಪಡಿಸಲು ಜಪಾನರು ಯತ್ನಿಸುತ್ತಿರುವರು.

ರಷ್ಯಾ ಫಿನ್‌ಲೆಂಡ

ಇವೆರಡು ದೇಶಗಳ ಮಧ್ಯ ಸಂಧಿಯೆಯತ್ನಗಳಾಗುತ್ತಲಿವೆ. ಆದರೆ ರಷ್ಯನರಿಗೆ ಜಯವು ಲಭಿಸುತ್ತಿರುವುದರಿಂದ ಫಿನ್ನೆ ತೊಡನೆ ಸಂಧಿಮಾಡಿಕೊಳ್ಳಲಿಕ್ಕಿಲ್ಲವೆಂದು ಊಹಿಸಲಾಗಿದೆ.

ಜನರ ವಿಶ್ವಾಸವೇ

ಓರಿಯಂಟಲ್ ಕಂಪನಿಯನ್ನು

ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾಪಡಿಸಿದೆ.

ಜಾರಿಯಲ್ಲಿರುವ ವಿಮೆ	31-12-40	83 ಕೋಟಿಗಿಂತಲು ಹೆಚ್ಚು
ನಿಧಿಯ ದ್ರವ್ಯ	,,	27½ ,,
ವಾರ್ಷಿಕ ಆದಾಯ	,,	4¾ ,,

ಅತ್ಯಂತ ಆಕರ್ಷಣೀಯವಾದ ನಮ್ಮ ವಿಮಾ ಯೋಜನೆಗಳ

ಪೂರ್ಣ ವಿವರಗಳನ್ನುಳ್ಳ ವಿಮಾ ವಿವರ ಪುಸ್ತಕ (Prospectus)ಕ್ಕಾಗಿ ಕೆಳಗಿನವರಿಗೆ ಬರೆಯಿರಿ.

ಬ್ರಿಟ್ಯಾಂಷ್ ಸಕ್ಟರ

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್...

ಆಶ್ಲೀನಿಯನ್ ಸ್ಟ್ರೀಟ್, ಮದ್ರಾಸು.

ಅಥವಾ ಇನ್ಸ್‌ಪೆಕ್ಟರ್ಸ್-ಓರಿಯಂಟಲ್ ಲೈಫ್ ಆಫೀಸು

[illegible] ಬಳ್ಳಾರಿ.

ಪಿತ.

ಬೊಂಬಾಯಿ. 1874.

ಉಪಾಧ್ಯಾಯರಿಗೆ ಪ್ರಾಥಮಿಕ ಪಾಠಪಟ್ಟಿಯ ಸೂಚನೆಗಳು.

(ಕಳೆದವಾರದಿಂದ ಮುಂದುವರಿದುದು.)

ಚಿತ್ರಗಳ ಉಪಯೋಗ ಸಂಭಾಷಣೆಗೆ, ಕಣ್ಣ ಹೇಳಿಕೆಗೆ, ಮತ್ತು ಶಬ್ದಗಳ ಕಾರ್ಡುಗಳೊಡನೆ ಉಪಯೋಗಿಸಿದರೆ ಓದನ್ನು ಕಲಿಸಲಿಕ್ಕೆ: ಬೇರೆ ಬೇರೆ ಉಪಯೋಗಕ್ಕೆಂದೇ ಬೇರೆ ಬೇರೆ ಚಿತ್ರಗಳನ್ನು ಆರಿಸಿ ವಿಂಗಡಿಸಿ ಇಡಬೇಕು. ಶಬ್ದಗಳ ಜೋಡಣೆಗೆ ಉಪಯೋಗಿಸುವಂಥವು ಸಾಮಾನ್ಯವಾಗಿ ಚಿಕ್ಕವಾಗಿರಬೇಕು. ಸಂಭಾಷಣೆಗೆಂದು ಉಪಯೋಗಿಸುವಂಥವು ದೊಡ್ಡವಾಗಿರಬೇಕು. ಚಿಕ್ಕವುಗಳನ್ನು ವಿಂಗಡಿಸಿ ಬೇರೆ ಬೇರೆ ಲಕೋಟೆಗಳಲ್ಲೋ ಪೆಟ್ಟಿಗೆಗಳಲ್ಲೋ ಇಟ್ಟುಕೊಳ್ಳಬಹುದು. ದೊಡ್ಡವುಗಳನ್ನು ಗೋಡೆಗೆ ತೂಗಿಸಬಹುದು. ಇವುಗಳ ಬೇರೆ ಬೇರೆ ಕಟ್ಟುಗಳನ್ನಾಗಿ ಕಾಗದದಲ್ಲಿ ಸುತ್ತಿ ಕಟ್ಟಿಬಹುದು. ಮಾವುಮಾಮ ಬಂದು ತರಗತಿಗೆ ನೇರವಿದ ಚಿತ್ರಗಳನ್ನು ಬೇರೆಯಾಗಿ ಇಟ್ಟುಕೊಂಡು ಅವುಗಳ ಸಂಖ್ಯೆಯು ಹೆಚ್ಚಾಗುತ್ತಲೆ ಅವನ್ನು ಸಹ ಬೇರೆ ಬೇರೆಯಾಗಿ ವಿಂಗಡಿಸಬಹುದು. ಹೀಗೆ ಮಾಡಬೇಕಾದರೆ ಚಿತ್ರಗಳನ್ನು ಪುಸ್ತಕಗಳ ಹಾಳೆಗಳಿಗೆ ಅಂಟಿಸಿ ಇಡದೆ ನಿರಳವಿರಳವಾಗಿ ಇರುವಂತೆ ಕಟ್ಟಬೇಕು.

ವಾರವಟ್ಟಿಯಲ್ಲಿ ಸೂಚಿಸಿದ ವಿವಿಧ ತರಗತಿಯ ಚಿತ್ರಗಳೆಂದರೆ ಕಛೇರಿಗೆ, ಮನೆಗೆ, ಕುಟುಂಬಕ್ಕೆ, ಜಿಪಿವಾಟಿಗೆಗೆ, ಶಾಲೆಗೆ, ದಾರಿ ವೇಟಗಳಿಗೆ, ಸ್ಯಗವಕ್ಕಿಗೆಳಿಗೆ, ಗಿಡಮರಗಳಿಗೆ, ಕಾಲಜೀವಿಗಳು ಮತ್ತು ವ್ರಕೃತಿಗೆ, ಕೈಗೆಲಸಗಳಿಗೆ ಸಂಬಂಧಪಟ್ಟ ಚಿತ್ರಗಳು ಚಿತ್ರಗಳನ್ನು ಬಾಯ್ದೆರೆ ವಾರದ ಮೂರು ಬೇರೆ ಬೇರೆ ಭಾಗಗಳಿಗೆ ಹೊಂದಿ ಉಪಯೋಗಿಸಬಹುದು:—ಗುರ್ತಿಸಿ ಹೆಸರು ಹೇಳುವುದು, ಲಕ್ಷಣಗಳನ್ನು ವಿವರಿಸುವುದು, ಅರ್ಥ ಹೇಳುವುದು. ಇವುಗಳಲ್ಲಿ ಕಡಮೆ ಎರಡು ತರದ ಭಾಗಗಳನ್ನು ಉಪಯೋಗಿಸಿ ಬಾಯ್ದೆರೆ ಪ್ರಬಂಧನನ್ನು ಕಟ್ಟಬಹುದು.

ಶಬ್ದಗಳನ್ನು ಸೂಚಿಸುವ ಚಿಕ್ಕ ಚಿತ್ರಗಳು ಮೂರು ರೀತಿಯವು:—**ಚಿತ್ರ ಮತ್ತು ಶಬ್ದ ಬೇರೆ ಬೇರೆ ಕಾರ್ಡುಗಳಲ್ಲಿರುವುದು; ಚಿತ್ರ ಮತ್ತು ಶಬ್ದ ಒಂದೇ ಕಾರ್ಡಿನ ಒಂದೇ ಬದಿಯಲ್ಲಿರುವುದು;** ಚಿತ್ರ ಮತ್ತು ಶಬ್ದ ಒಂದೇ ಕಾರ್ಡಿನ ಬೇರೆ ಬೇರೆ ಬದಿಯಲ್ಲಿರುವುದು.

ಕಾರ್ಡಿನ ಒಂದು ಮೂಲೆಯನ್ನು ಕತ್ತರಿಸಿದರೆ ಎಲ್ಲ ಕಾರ್ಡುಗಳನ್ನು ಒಂದೇ ಕ್ರಮದಲ್ಲಿ ಒಟ್ಟುಮಾಡಿ ಇಡುವುದು ಸುಲಭವಾಗುತ್ತದೆ. ಪೆಟ್ಟಿಗೆಗಳಿಗೆ ಉಪಯೋಗಿಸಲ್ಪಡುವ ಬಿಳಿ ರಟ್ಟು ಈ ಕಾರ್ಡುಗಳನ್ನು ತಯಾರಿಸಲು ಒಳ್ಳೆಯದಾಗುತ್ತದೆ ಪೆಟ್ಟಿಗೆಗಳಿಗೆ ಹೆಚ್ಚಾಗಿ ಹೊರಮೈಯಲ್ಲಿ ಮಾತ್ರ ಬರೆಹವಿರುವುದರಿಂದ ಅವನ್ನು ಕತ್ತರಿಸಿ ಎರಡು ತುಂಡುಗಳನ್ನು ಒಂದರ ಹಿಂದೊಂದು ಅಂಟಿಸಿದರೆ ಭಾವಾ ಅಕ್ಷರಗಳು ಕಾಣುವುದಿಲ್ಲ.

ಇಂಥ ರಟ್ಟಿನಿಂದ ಚಿತ್ರ ಮತ್ತು ಶಬ್ದ ಜೋಡಣೆಯ ಕಾರ್ಡುಗಳನ್ನೂ ಶಬ್ದ ಜೋಡಣೆಯ ಸಾಧನಗಳನ್ನೂ ತಯಾರಿಸಬಹುದು. ಮೊದ್ದ ಮೊದ್ದ ರಟ್ಟುಗಳು ಸಿಕ್ಕಿದರೆ ಶಬ್ದ ಜೋಡಣೆಗೂ ಶಬ್ದ ಚಿತ್ರ ಜೋಡಣೆಗೂ ಒಂದರ ಹೊರಗೆ ಇನ್ನೊಂದು ತಿರುಗುವ ಎರಡು ವೃತ್ತಾಕೃತಿಗಳನ್ನೂ ಒಂದರ ಬದಿಯಲ್ಲೊಂದು ಜಲಿಸುವ ಎರಡು ಪಟ್ಟಿಗಳನ್ನೂ ತಯಾರಿಸಬಹುದು. ಒಂದು ವೃತ್ತದಲ್ಲಿ ಅಥವಾ ಒಂದು ಪಟ್ಟಿಯಲ್ಲಿ ಒಂದು ಭಾಗವಿದ್ದು ಇನ್ನೊಂದರಲ್ಲಿ ಇನ್ನೊಂದು ಭಾಗವಿರುವಂತೆ ಮಾಡಬೇಕು. ಇದೇ ರೀತಿಯಲ್ಲಿ ಸಮಾನಾರ್ಥ ಶಬ್ದಗಳು, ವಿರುದ್ಧಾರ್ಥ ಶಬ್ದಗಳು, ಆಜ್ಞೆ ಆಖ್ಯಾತಗಳು, ವಿಶೇಷ್ಯ ವಿಶೇಷಣಗಳು, ಹೀಗೆ ಅನೇಕ ತರದ ಜೋಡಣೆಗಳನ್ನು ಮಾಡಬಹುದು. ಕಾರ್ಡಿನಲ್ಲಿ ಬರೆದುದನ್ನು "ಓದಿ ಉತ್ತರ ಬರೆಯಿರಿ", "ಓದಿ ಹೇಳಿದುದನ್ನು ಮಾಡಿರಿ" ಎಂದು ಹೇಳಬಹುದು. ಚಮಕಿಸುವ ಕಾರ್ಡುಗಳನ್ನು ಬಾಯ್ದೆರೆಯಾಗಿ ಓದಲಿಕ್ಕೆಂದು ಮತ್ತೆ ವುಪಯೋಗಿಸಬಹುದು; ಇತರಸಾಧನಗಳನ್ನು ಮೌನ ಓದಿನ ತರಬೇತಿಯ ಪ್ರಾರಂಭಕ್ಕಾಗಿ ವುಪಯೋಗಿಸಬಹುದು.

ಈ ಕಾರ್ಡುಗಳನ್ನು ತಯಾರಿಸುವುದರಲ್ಲೂ ಅವುಗಳಲ್ಲಿ ಹೊಸ ಹೊಸ ತರಹಗಳನ್ನು ರಚಿಸುವುದರಲ್ಲಿಯೂ ಅವುಗಳನ್ನು ಆಕರ್ಷಕವಾಗುವಂತೆ ಮಾಡುವುದರಲ್ಲಿಯೂ ನಿಪುಣತೆಯನ್ನು ತೋರಿಸಿದ ಉಪಾಧ್ಯಾಯರು ಇದ್ದಾರೆ. ಚಿತ್ರಗಳ ಸಂಗ್ರಹವನ್ನು ಮಾತ್ರ ಮಾಡುವ ಬದಲು ಒಂದು ಪೆಟ್ಟಿಗೆಯಲ್ಲಿ ಚಿತ್ರಗಳ ಸಾಲು ಸುರುಳಿಯಾಗಿದ್ದು ಒಂದೊಂದೇ ಚಿತ್ರವು ಕಾಣುವಂತೆ ಪೆಟ್ಟಿಗೆಗೆ ಕಿಟಕಿಯಂತೆ ಮಾಡಿದ್ದುಂಟು.

S. V. Setty & Bros., Bangalore Road, Bellary.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತವೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ಪೆಸ್ಟ್ ಎಂಡ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ರಾಯಲಸೀಮೆ ಮಹಾ ಸಭೆ.

(ಏನೆಯ ಪುಟದಿಂದ ಮುಂದುವರಿದಿದೆ.)

ಸೋಣ. ನಮ್ಮ ಭಾಗದಲ್ಲಿ ಆರ್ಥಿಕ ಪರಿಸ್ಥಿತಿಯು ತಾಂಡವವಾಡುತ್ತಲಿದೆ. ಸಂಘ, ಉದ್ಯೋಗ, ವಿದ್ಯಾಭಿವೃದ್ಧಿಗಳಿಗೆ ಆಕರವಾದ ಧನವೇ ನಮಗೆ ಅಭಾವವಾಗಿದೆ. ಕೃಷ್ಣ, ತುಂಗಭದ್ರ, ಪಿನಾಕಿನಿ ವಗೈರೇ ನದಿಗಳಿವೆ. ಅರಣ್ಯಸಂಪತ್ತಿದೆ. ನಮಗೆ ಸಹಾಯವು ದೊರೆಯಲಿಲ್ಲ. ಉತ್ತರ ಸರಕಾರ ಮತ್ತು ದಕ್ಷಿಣಭಾಗಗಳಲ್ಲಿ ಎಷ್ಟೋ ನೀರಾವರಿ ಕಾರ್ಯಗಳಾದವು.

ತುಂಗಭದ್ರಾ ಪ್ರಾಜೆಕ್ಟು

ಸದ್ಯದ ವರಿಸ್ಥಿತಿಯಲ್ಲಿ ಇಂಗ್ಲೆಂಡು, ಅಮೆರಿಕಾಗಳಿಗೆ ಅಟ್ಲಾಂಟಿಕ್ ಬಾರ್ಡರ್ ಎಷ್ಟು ಮುಖ್ಯವೋ ಹಾಗೆಯೇ ನಮಗೆ ತುಂಗಭದ್ರಾ ಅಷ್ಟು ಮುಖ್ಯವಾಗಿದೆ. ಕಂಬಳಿ ವೆರಿಶ್ರನು, ಕಾಗದಗಳ ತಯಾರಿ ಉದ್ಯೋಗ, ಖನಿಜಗಳ ಮತ್ತು ಇತರ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಬೇಕು ಎಲ್ಲರೂ ಪ್ರೋತ್ಸಾಹಿಸಬೇಕು ಸರಕಾರದವರ ಮೇಲೆಯೇ ಅವಲಂಬಿಸುವುದು ಯೋಗ್ಯವಲ್ಲ

ಆಂಧ್ರಪ್ರಾಂತ ಸಮಸ್ಯೆ

ಸಮುದ್ರತೀರದ ಆಂಧ್ರ ಜಿಲ್ಲಾಗಳ ವರಷ್ಟು ನಾವು ಐಶ್ವರ್ಯವಂತರಲ್ಲ ಈಗಿನ ಯುದ್ಧದ ಪ್ರತಿಫಲವಾಗಿ ಪ್ರಪಂಚ ನಿರ್ಮಾಣವು ಹೇಗಾಗುವ್ದೋ ಊಹಿಸುವುದೂ ಅಸಾಧ್ಯವಾಗಿದೆ ರಾಯಲಸೀಮೆಯ ಸಾಂಘಿಕ, ರಾಜಕೀಯ ಆರ್ಥಿಕ ವಿದ್ಯಾನ್ಯವನ್ನೆಯು ಸರಿಯಾಗಿ ನಿರ್ಣಯವಾಗುವವರೆಗೂ ಆಂಧ್ರ ಪ್ರಾಂತದ ನಿರ್ಮಾಣವು ನಿಲ್ಲಬೇಕು

ರಾಯಲಸೀಮೆ ಮಹಾಸಭೆಗೆ ಸಂದೇಶಗಳನ್ನು ಅನೇಕ ಮಹಾಶಯರು ಕಳುಹಿಸಿದ್ದನ್ನು ಶ್ರೀ ನರಸಿಂಹಾಚಾರ್ಯರು ಓದಿದರು

ನಂತರ ಕಾರ್ಯದರ್ಶಿಗಳಾದ ಶ್ರೀ ಹೆಚ್. ಲಿಂಗಾರೆಡ್ಡಿಯವರು ನರಸಿಯು ನ್ಯೋದಿ ಪಂಡಿತ ಜವಹರಲಾಲ ನೆಹರೂ ರವರು ಬ್ರಿಟಿಷರಿಗೆ ಉಪಯೋಗಿಸಿದ 'Get out' ಎಂಬುದನ್ನು ಉತ್ತರಾಂ [illegible] ಅನೇಕರು ಮಾಡಿರುವ ಅನೇಕರಿಂದ ಬಹಿರಂಗ ಅಧಿವೇಶನದಲ್ಲಿ ಬರಬಹುದಾದ ನಿರ್ಣಯಗಳ ವಿಮರ್ಶಿಯಾಗಿ ನಿಶ್ಚಯವಾಯಿತು.

ವಕೀಲರ ಸಭೆ

೧೩ ನೇ ತಾ. ರಾತ್ರಿ ಭೋಜನಾನಂತರ ಮದ್ರಾಸಿನ ಅಡ್ವೋಕೇಟರಾದ ಶ್ರೀ ವಿ. ಯಸ್. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಸನ ಸವರಣೆಗಳಿಗೆ ಸಂಬಂಧಿಸಿದ ಕೆಲ ತೀರ್ಮಾನಗಳು ಆದವು. ಸ್ವಾಗತ ಸಮಿತಿಯ ಪರವಾಗಿ ಬಳ್ಳಾರಿ ಶ್ರೀ ನರಸಿಂಹ ಶಾಸ್ತ್ರಿಯವರು ಸ್ವಾಗತಿಸಿದರು.

೧೩ ನೆಯ ತಾ ರಾತ್ರಿ ನೆನಗೊಂಡೆ ವಕೀಲರಾದ ಶ್ರೀ ರಾಮಸ್ವಾಮಿಯವರು ತಮ್ಮ ಸುಶ್ರಾವ್ಯವಾದ ಕಂಠದಲ್ಲಿ ವಿಜಯನಗರ ವೈಭವವನ್ನು ಕುರಿತು ಪದ್ಯಗಳನ್ನು ಹಾಡಿದರು.

೧೪ ನೆಯ ತಾ. ಕವಿಸಮ್ಮೇಳನ, ಕೋಪರೇಟಿವ್ ಕಾನ್ಫರೆನ್ಸು ನಡೆಯಿತು

ನಿರ್ಣಯಗಳು

೧ ರಾಯಲಸೀಮೆಯು ನಿರಂತರ ಕ್ಷಾನುಬಾನೆಗೆ ಗುರಿಯಾಗುತ್ತಿರುವುದರಿಂದ ಆಂಧ್ರ, ಕನ್ನಡಪ್ರಾಂತಗಳಾಗುವ ಮುಂಚೆ ತುಂಗಭದ್ರಾ, ಕುಮುದ್ವತಿ ಮುಂತಾದ ನೀರಾವರಿ ಕೆಲಸಗಳು ಸ್ವಾರಂಭವಾಗಿ ಮುಗಿಯಬೇಕು.

೨ ರೈತುವಾರಿ ಭೂಮಿ ಹೆಚ್ಚುತ್ತಿರುವದರಿಂದ ಇದು ವಿಚಾರಣೆಯಾಗಿ ತಗ್ಗಬೇಕು

೩ ಬಳ್ಳಾರಿ, ಅನಂತಪುರ, ಕರ್ನೂಲುಗಳಲ್ಲಿ ಮದ್ಯ ನಿಷೇಧವಾಗಬೇಕು.

೪ ರಾಯಲಸೀಮೆಯಲ್ಲಿನ ಸರಕಾರಿ ಉದ್ಯೋಗಗಳಿಗೆಲ್ಲಾ ಪರರು ಬರುತ್ತಿರುವುದನ್ನು ಈ ಸಭೆಯು ಖಂಡಿಸುತ್ತಾ, ಈ ವಿದ್ಯಮಾನ ತೊಲಗಬೇಕೆಂದು ನಿರ್ಣಯಿಸುತ್ತದೆ.

೫ ರಾಯಲಸೀಮೆಗೆ ಸ್ವತ್ಯೇಕ ಚರಾಸಂಪತ್ತು ಬೇಕು

೬ ಅಡವೀ ಪ್ರದೇಶಗಳ ರೈತರ ಕಷ್ಟಗಳನ್ನು ನಿವಾರಿಸುವ ಉದ್ದೇಶ ಕರಿಣ ನಿಬಂದನೆಗಳನ್ನು ತೆಗೆದುಹಾಕಲು ಸೂ

ಇದಾದಮೇಲೆ ವಿಷಯ ನಿರ್ಣಯಾತ್ಮಕ [illegible] ಎಲ್ಲಾ ಕಾಲೇಜುಗಳಲ್ಲಿ ಖಾಸ್ಥ ಸ್ಥಾನವೇ ಸೊರೆಯಬೇಕು

೪ ಗ್ರಾಮಗಳ ಆರ್ಥಿಕಾಭ್ಯುದ್ಧಿಗೆ ಸಹಕಾರ ಪದ್ಧತಿಯ ಏರ್ಪಾಟು.

೯ ಕೈಮಗ್ಗದವರ ದುರ್ಧರ ಕಷ್ಟಗಳನ್ನಾಲೋಚಿಸಿ, ನೂಲಿನ ದರಗಳನ್ನು ಮಿತಿಯಲ್ಲಿಟ್ಟು ಸಹಾಯ ಮಾಡಬೇಕು.

೧೦ ಅನಂತಪುರ ಕಾಲೇಜನ್ನು ರಾಯಲಸೀಮೆ ಕಾಲೇಜೆಂದು ಹೆಸರಿಡಬೇಕು.

೧೧ ಹತ್ತಿ, ನೆಲಗಡಲೆಗೆ ಸರಿಯಾದ ಬೆಲೆ ಕೊಡಿಸಿ, ಹತ್ತಿಗೆ ಸರಿಯಾದ ಮಾರ್ಕೆಟ್ ದೊರೆಯಲು ಅದಕ್ಕೆ ಯೋಗ್ಯ ಸ್ಥಾನವು ದೊರೆಯಬೇಕು

೧೨ ಅಸ್ಪೃಶ್ಯತಾ ನಿವಾರಣೆಯು ಹೆಚ್ಚಿನ ಶ್ರದ್ಧೆಯಿಂದಾಗಬೇಕು.

೧೩ ಆಂಧ್ರ ಪ್ರಾಂತ್ಯವು ಸ್ವಯಂ ಪೋಷಕವೆಂಬುದಕ್ಕೆ ಆಧಾರಭೂತವಾದ ಸಂಖೆಗಳನ್ನು ಒದಗಿಸಬೇಕು.

ಮೊದಲನೆಯ ನಿರ್ಣಯದ ಮೇಲೆ ಪಪ್ಪೂರು ರಾಮಾಚಾರ್ಯರು ಅಮೆಂಡ್ ಮೆಂಟ್ ಸೂಚಿಸಿದರು ಕಲ್ಲೂರು ಸುಬ್ಬರಾವ್' ದೇವತವಾಂಡೆ ಸುಬ್ಬರಾವ್ ವಗೈರೆ ಮಾತನಾಡಿದರು. ಪಕ್ಷ ಪ್ರತಿಪಕ್ಷಗಳವಾದವು ೩ ಪಂಟೆಗಳವರೆವಿಗೂ ನಡೆದು ಮೂಲ ನಿರ್ಣಯವೆ ಪಾಸಾಯಿತು.

ಜಪಾನರ ಅಮಾನುಷಕೃತ್ಯ

ಪ್ಲೇಗ್ ಕ್ರಿಮಿಗಳಿಂದ ಕೂಡಿದ ಅಕ್ಕಿ ಮತ್ತು ಗೋಧಿ ಚೀಲಗಳನ್ನು ಜಪಾನ್ ವಿಮಾನಗಳು ಚೀನಾದಲ್ಲಿ ವ್ಯಾರಾಚೂಟ್‌ಗಳ ಮೂಲಕ ನೆಲಕ್ಕೆ ಹಾಕಿದವೆಂದು ನಂಬಿಕೆಗೆ ಅರ್ಹವಾದ ಸುದ್ದಿ ಬಂದಿದೆ.

ಇದಕ್ಕೆ ಮುಂಚೆಯೇ ಜಪಾನರು ಈ ಕಾರ್ಯವನ್ನು ಮಾಡಿದ್ದರೆಂದು ನಂಬಲಾಗಿದೆ ಆದರೆ ಅದನ್ನು ಕಂಡು ಹಿಡಿದಿರಲಿಲ್ಲ ಈಗ ಅವರ ದುಷ್ಟ ವರ್ತನೆಗೆ ಆಧಾರ ಸಿಕ್ಕಿದೆ ವಿಷನ್ ಆಸ್ಪತ್ರೆಯ ಬಳಿ ಜವಾನರು ಹಾಕಿದ ಕೊಳೆತ ಆಹಾರ ವಸ್ತುವನ್ನು ಸರೀಕ್ಷಿಸಿದ್ದರಲ್ಲಿ ಅದರಲ್ಲಿ ಪ್ಲೇಗು ಕ್ರಿಮಿಗಳು ಇರುವುದು ಗೊತ್ತಾಯಿತು ಕೊಂಚ ಕಾಲದಲ್ಲಿಯೇ ಆಹಾರ ಬಿದ್ದ ಕ್ಷೇತ್ರದಲ್ಲಿ ಪ್ಲೇಗು ಆರಂಭವಾದುದಕ್ಕೆ ಇದೇ ಕಾರಣವೆಂದು ತಿಳಿಸಿದ್ದಾರೆ.

THE NAVA BHARAT
ನವಭಾರತ
ಸಂಪಾದಕ-ಟಿ.ಆರ್.ಕೇಶವರಾವ್

1942 ಜನವರಿ 18 ಭಾನುವಾರ.

ಆರ್ಥಿಕಾಭಿವೃದ್ಧಿಯ ವಿಷಯಕ್ಕೆ ಭಿನ್ನಾಭಿಪ್ರಾಯಗಳಿಲ್ಲ.

ಈ ತಿಂಗಳು ೧೩-೧೪ ನೆಯ ತಾ. ಗಳಲ್ಲಿ ತಾಡಪತ್ರಿಯಲ್ಲಿ ಕೂಡಿದ ರಾಯಲಸೀಮೆ ಮಹಾಸಭೆಯವರು, ಹಿಂದುಳಿದ ಬಳ್ಳಾರಿ, ಕಡಪ, ಕರ್ನೂಲು, ಅನಂತಪುರ, ಚಿತ್ತೂರುಗಳ ಆರ್ಥಿಕಾಭಿವೃದ್ಧಿಗೆ ಸಂಬಂಧಿಸಿದ ಸುಮಾರು ೧೪ ತೀರ್ಮಾನಗಳನ್ನು ಮಾಡಿದರು. ಆರ್ಥಿಕಾಭಿವೃದ್ಧಿಯಾಗುವವರೆಗೂ ವ್ಯಾಂತ ನಿರ್ಮಾಣವು ನಿಲ್ಲಬೇಕೆಂಬ ನಿರ್ಣಯವನ್ನು ವಿರೋಧಿಸಿದ ಅನಂತಪುರದ ಮುಖಂಡರಾದ ಶ್ರೀ ವಿಶ್ವೇಶ್ವರು ರಾವ್ ಜಾರ್ಯ, ಕಲ್ಲೂರು ಸುಬ್ಬರಾವ್ ಇವರು ಸಹ ಆರ್ಥಿಕಾಭ್ಯುದಯವು ಬಹಳ ಅನಶ್ಯಕವೆಂದು ತಮ್ಮ ಭಾಷಣಗಳಲ್ಲಿ ವಾಧಿಸಿದರು. ಕಡಪಾದ ರಾಜಸನಸಭ್ಯರಾದ ಶ್ರೀ ಕೋಟಿರೆಡ್ಡಿಯವರೂ ಸಹ ಆರ್ಥಿಕಾಭಿವೃದ್ಧಿಯನ್ನು ಒತ್ತಿಹೇಳಿದರು ಬಳ್ಳಾರಿಯ ಶಾಸನಸಭ್ಯರಾದ ಶ್ರೀ ವೀತಾರಾಮುರೆಡ್ಡಿಯವರೂ, ಅಧ್ಯಕ್ಷರಾದ ಶೇಷರೆಡ್ಡಿಯವರೂ ಈ ಜಿಲ್ಲೆಗಳ ಆರ್ಥಿಕ ಉದ್ಧಾರಕ್ಕೆ ಅ ಮೂ ಲ್ಯ ಸಲಹೆ ಸೂಚನೆಗಳನ್ನು ಕೊಟ್ಟಿರುವರು.

ಪ್ರತ್ಯೇಕ ವ್ಯಾಂತಗಳು ನಿರ್ಮಾಣವಾದರೆ ಆರ್ಥಿಕಾಭಿವೃದ್ಧಿಯು ತಡೆಯಲ್ಪಡುವುದು ಎಂದು ರಾಯಲಸೀಮೆಯ ಪರೂ: ವ್ಯಾಂತನಿರ್ಮಾಣಾದಿಗಳು, ಆಭಿವೃದ್ಧಿಗೆ ತಡೆಯಾಗುವುದಿಲ್ಲೆಂದೂ ವಾದಿಸಿದರು. ಈ ಭಿನ್ನಾಭಿಪ್ರಾಯಗಳು ಹೇಗೇ ಇರಲಿ, ಎಲ್ಲಾ ಬಣ್ಣದವರೂ ಹೊಟ್ಟೆ ತುಂಬುವ ಕೆಲಸಗಳ ವ್ಯಾಂಭವಾಗಬೇಕೆಂಬರೆ ವಾದಿಸುವುದಿಲ್ಲ, ನಿರೋಧಿಸುವುದಿಲ್ಲ. ಸರಕಾರದವರೂ ಸಹಾ ಕ್ಷಾಮ ನಿರ್ಮಾಣಕಾರ್ಯಗಳನ್ನು ಕೈಗೊಂಡು, ಲಕ್ಷಾಂತರ ಫಸಲ್ಸಾಯವನ್ನು ಸೂಮಾತ್ರ ಲಿರುವರು.

ತುಂಗಭದ್ರಾ, ಕುಮುಪ್ರತಿ. ಗಂಡಿಕೋಟೆ ಮತ್ತು ಇತರ ಆರ್ಥಿಕ ಯೋಜನೆಗಳನ್ನು ಸರಕಾರದವರು ವ್ಯಾಂಭಿಸಿ ಈ ಭಾಗದ ಕ್ಷಾಮವನ್ನು ಶಾಶ್ವತವಾಗಿ ನಿವಾರಿಸಬೇಕೆಂದೂ ಎಲ್ಲರೂ ಆಂದೋಳನ ಹೂಡಬೇಕೆಂದೂ ಸಾಪ್ತು ಕೂರುತ್ತೇನೆ

ರಾಯಲಸೀಮ ಬ್ಯಾಂಕು,
(ಲಿಮಿಟೆಡ್.)
ಮುಖ್ಯ ಕಾರ್ಯಾಲಯ, ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ.

ಡಿಪಾಜಿಟ್ಟುಗಳು.	31-10-1940	30-11-3941
ಫಿಕ್ಸೆಡ್	ರೂ. Nil	90,930
ಚಾಲ್ತಿ	,, 3,173	20,994
ಸೇವಿಂಗ್ಸು	,, 1,231	18,368
ಇತರ	,, 40	781
ಸಾಲಗಳು.		
ಭಂಗಾರ	,, 520	27,478
ಮೂಲು	,, Nil	16,838
ಇತರ	,, Nil	6,181
ಇತರಆಸ್ತಿ.		
ಸರ್ಕಾರದ ಬಾಂಡುಗಳು	,, 13,300	32,476
ಬ್ಯಾಂಕುಗಳಲ್ಲಿರುವ ಹಣ	,, 32,502	23,914
ಕೈಯ್ಯಲ್ಲಿ ನಗದು	,, 3770	+5,338

ಒಟ್ಟು ವ್ಯವಹಾರದ ಮೊತ್ತ.

31 10 40. 31 11 41
ರು. 1,14,774-0-0 ರು. 2,16,664-00

ಶಾಖೆಗಳು:—
1 ತಿಮ್ಮನಚರ್ಲ 2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ

ಹೆಚ್. ವೀತಾರಾಮರೆಡ್ಡಿ,, ಬಿ. ಎ. ಬಿ. ಎಲ್. (ಎಂ. ಎಲ್. ಎ)
ಡೈರೆಕ್ಟರುಗಳ ಜೋಸ್ಟ್ ಆಡ್ಯಕ್ಷರು.

ಬಿ. ನಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ರಷ್ಯಾ ರಣಾಂಗ
ಜರ್ಮನರು ಹಿಮ್ಮೆಟ್ಟುತ್ತಿರುವರು

ಎಲ್ಲಾ ಭಾಗಗಳಿಂದಲೂ ಜರ್ಮನರು ಹಿಮ್ಮೆಟ್ಟುತ್ತಿರುವರೆಂದೂ, ರಷ್ಯಾ ಸೈನ್ಯಗಳು ಜರ್ಮನರನ್ನು ಹಿಂಬಾಲಿಸಿವೆ ಯೆಂದೂ ಪ್ರಕಟನೆಗಳು ಹೇಳುತ್ತಲಿವೆ. ಕ್ರಿಮಿಯಾ ನುತ್ತು ಯುಕ್ರೇನದಲ್ಲೂ ಜರ್ಮನರಿಗೆ ಅಗಾಧ ಛಳಿಯಿಂದ ಕಷ್ಟವಾಗಿದೆ. ——

ದಕ್ಷಿಣ ಮಲಯಾದಲ್ಲಿ
ಜಪಾನರ ಒತ್ತಡ

ಕೌಲಾಲಾಂಪುರವು ಜಪಾನರ ವಶವಾದ ಮೇಲೆ ಜಪಾನರ ಒತ್ತಡವು ಹೆಚ್ಚಾಗುತ್ತಾ ನಡೆದಿದೆ. ಬ್ರಿಟಿಷ್ ಸೈನ್ಯಗಳು ಹಿಂದಕ್ಕೆ ಸರಿಯುತ್ತಲೇ ಇವೆಯೆಂದು ತಿಳಿದು ಬಂದಿದೆ. ಲಡಕೆ ಪಿಂಗ ಪೆರವು ಸೂವಾರು ಸೈನಿಗಳ ಮೂರವಣ್ಣಿದೆ

ಗಂಡಾಂತರ ಬರಲಿದೆ
ಪಂಡಿತ ಜವಹರಲಾಲರ ಉಪದೇಶ

ವಾರ್ಧಾದಲ್ಲಿ ರಾಷ್ಟ್ರೀಯಾಭಿನಂದನ ಮಾಡುತ್ತಾ, ಪಂಡಿತ ಜವಹರಲಾಲರು ನಡೆದ ಪರಿಸ್ಥಿತಿಯ ಮೇಲೆ ವಿವೇಚನೆ ಮಾಡುತ್ತಾ, "ನಮ್ಮ ಮೇಲೆ ಗಂಡಾಂತರ ಬರಲಿದೆ, ಎಲ್ಲಾ ಭಾರತೀಯರೂ ಜಾಗ್ರತರಾಗಿರಬೇಕು" ಎಂಬ ಆದೇಶವನ್ನು ಕೊಟ್ಟರು. ರಾಷ್ಟ್ರೀಯಜಕ್ತಾಗಿ ಸರ್ವತ್ಯಾಗಗಳನ್ನೂ ಮಾಡಲು ಸಿದ್ಧರಿರಬೇಕು ಎಂದರು.

ರಷ್ಯಾದಲ್ಲಿ ಜರ್ಮನರ ಛಜೀತಿ

ಜರ್ಮನರ ಮುಖ್ಯ ಸೈನ್ಯವು (ಒಂದು ಲಕ್ಷ) ಈಗ ರಷ್ಯನರ ಪ್ರಚಂಡ ದಾಳಿಗೆ ಗುರಿಯಾಗಿದೆ ಮೊಜಾಯ್ಸಕ ಮುಂದಿದ ಪಟ್ಟಣಗಳ ವತನವಾಗಿದೆ. ಜರ್ಮನರ ಸೈನ್ಯವು ಸಾರವಾಗಲಿಕ್ಕೆ ಪ್ರಸ್ತಿನೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿ.

ಸಾಧಾರಣ ಸಭೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ಸಭೆಯ ಸಾಧಾರಣ ಅಧಿವೇಶನವು ಒಂದು ವರ್ಷದ ನಂತರ ಇದೇ ಶನಿವಾರ ೧೭-೧-೧೯೪೨ ರಂದು ಧಾರವಾಡದಲ್ಲಿ ಪ್ರಾಂತೀಯ ಅಧ್ಯಕ್ಷರಾದ ಡಾ: ಆರ್. ಆರ್. ನಾಗನೂರ ಗೌಡರ ಅಧ್ಯಕ್ಷತೆಯಲ್ಲಿ ನೆರವಿದ್ದಿತು. ಆಮಂತ್ರಿತರೂ ಸೇರಿ ಸಭೆಯಲ್ಲಿ ೨೦೦ ಜನರು ಭಾಗವಹಿಸಿದ್ದರು. ಮುಂಬೈ ಇಲಾಖೆಯ ಮಾಜಿ ಪ್ರಧಾನ ಮಂತ್ರಿಗಳಾದ ನಾಮ್ಯ ಬಾಳೆ ಗಂಗಾಧರ ಜೇರರು ಸಭೆಗೆ ಆಗಮಿಸಿದ್ದರು. ಮೊದಲು ನಾಮ್ಯ ಜೇರರು ಸದ್ಯದ ಪರಿಸ್ಥಿತಿ, ಬಾಡೋಲಿ ನಿರ್ಣಯ ಮತ್ತು ಅದರಿಂದ ಎದ್ದ ಪ್ರಶ್ನೆಗಳನ್ನು ವಿವರಿಸಿ ತಿಳಿಸಿದರು. ಅತಿಥಿಗಳನ್ನು ಸತ್ಕರಿಸಿ ಬೀಳ್ಕೊಟ್ಟಮೇಲೆ ಪ್ರಾಂತೀಯ ಸಮಿತಿಯ ಕಾರ್ಯವು ಪ್ರಾರಂಭವಾಗಿ ಕೆಳಗಿನ ನಿರ್ಣಯಗಳು ಸ್ವೀಕೃತವಾದವು.

೧ ಶೋಕಪ್ರದರ್ಶನ – ಹಿಂದೀ ಸಾಹಿತ್ಯಕ್ಕೆ ಶೋಭೆ ಕೀರ್ತಿಗಳನ್ನು ಗಳಿಸಿಕೊಟ್ಟ ಜಗತ್ತಿನ ಸಂಸ್ಕೃತಿಯಲ್ಲಿ ಹಿಂದೂಸ್ಥಾನಕ್ಕೆ ಒಂದು ಚಿರಸ್ಥಾನವನ್ನು ಕಲ್ಪಿಸಿಕೊಟ್ಟ ಗುರುದೇವ ರವೀಂದ್ರನಾಥ ಟಾಗೂರರ ನಿಧನಕ್ಕಾಗಿ ಈ ಸಭೆಯು ತನ್ನ ಅಗಾಧ ಶೋಕವನ್ನು ವ್ಯಕ್ತಮಾಡುತ್ತದೆ

೨ ಅಭಿನಂದನೆ – ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿ ನರರಾತ್ನಗಳಲ್ಲಿ ಶ್ರೀಮತಿ ಕನುಲಾದೇವಿಯವರು ಉತ್ತಮ ರೀತಿಯಿಂದ ಮಾಡಿದ ಕಾರ್ಯಕ್ಕೆ ಈ ಸಭೆಯು ಹೃತ್ಪೂರ್ವಕ ಮೆಚ್ಚುಗೆಯನ್ನೀಯುತ್ತದೆ. ಹಾಗೂ ಯುದ್ಧದ ಕಠಿಣ ಪ್ರಸಂಗದಲ್ಲಿ ಪ್ರಚಾರಮಾಡಿ ಮಾತೃಭೂಮಿಗೆ ಮರಳಿದ ಅವರಿಗೆ ಸುಸ್ವಾಗತವೀಯುತ್ತದೆ

೩ ಆರಂಭ ಪ್ರದರ್ಶನ – ಸತ್ಯಾಗ್ರಹ ಸಮಯದಲ್ಲಿ ಶ್ರೀಮತಿ ಕೃಷ್ಣಾಬಾಯಿ ಪಂಜೀಕರ ಹಾಗೂ ಶ್ರೀಯುತ ದ ಪ. ಕರಂದೀಕರರು ಅನುಕರಣೀಯವಾಗಿ ಪ್ರಾಣವನ್ನು ಅರ್ಪಿಸಿದ್ದಕ್ಕಾಗಿ ಈ ಸಭೆಯು ಅವರನ್ನು ಅಭಿನಂದಿಸುತ್ತದೆ.

೪ ಸದ್ಯದ ಪರಿಸ್ಥಿತಿ – ವರ್ಕಿಂಗ ಕಮಿಟಿಯ ಬಾಡೋಲಿ ನಿರ್ಣಯವು ಬಹಳ ವಿಚಾರಪೂರ್ಣವಾಗಿದೆಯೆಂದು ಈ ಸಭೆಯು ಅಭಿಪ್ರಾಯ ಪಡಿಸುತ್ತದೆ.

೫ ಯುದ್ಧದಲ್ಲಿ ಹಿಂದೂಸ್ಥಾನ ಹಾಗೂ ಇಡೀ ಪ್ರಪಂಚಕ್ಕೆ ಒದಗಿರುವ ಕೆಡಕು ಆಪತ್ತುಗಳನ್ನು ನಿವಾರಿಸಲು ಅಹಿಂಸೆಯೇ ಪರಮೌಷಧವೆಂದು ಸ್ಪಷ್ಟವಾಗಿ ಸಾರಿ ಹೇಳುತ್ತೇವೆ. ಸದ್ಯದ ಪರಿಸ್ಥಿತಿಯಲ್ಲಿ ಈ ಯುದ್ಧದಲ್ಲಿ ಭಾಗವಹಿಸುವದು ಹಿಂದೂಸ್ಥಾನದ ದೃಷ್ಟಿಯಿಂದ ಹಿತಕರವಾಗುವದಿಲ್ಲವೆಂದು ನಮ್ಮ ಮತವಿದೆ. ಈ ಯುದ್ಧ ಅಥವಾ ಇನ್ನಾವುದೇ ಯುದ್ಧದಲ್ಲಿಯೂ ಭಾಗವಹಿಸಬೇಕೋ ಬೇಡವೋ ಎಂಬುದನ್ನು ಸ್ವತಂತ್ರ ಭಾರತವೇ ನಿರ್ಧರಿಸಬಲ್ಲದು.

ಮಹಾತ್ಮಾಗಾಂಧಿಯವರ ವಿಧಾಯಕ ಕಾರ್ಯಕ್ರಮದ ಯೋಜನೆಯನ್ನು ಅದರಲ್ಲೂ ಗ್ರಾಮೋದ್ಯೋಗ ಯೋಜನೆಯನ್ನು ಪ್ರಾಂತದಲ್ಲೆಲ್ಲಾ ಕಾರ್ಯರೂಪದಲ್ಲಿ ತಂದು ಜನತೆಯು ಅವರ ನಿತ್ಯದ ಪ್ರಶ್ನೆಗಳಲ್ಲಿ ಇದನ್ನು ಸಹಾಯ ಮಾಡಬೇಕೆಂದು ಈ ಸಭೆಯು ಎಲ್ಲ ಕಾಂಗ್ರೆಸ ಕಮಿಟಿಗಳಿಗೂ ಬಿನ್ನವಿಸಿಕೊಳ್ಳುತ್ತದೆ.

ಚಿನ್ನಬಸಪ್ಪ ಅಂಬಲಿ
ಪ್ರ. ಕಾರ್ಯದರ್ಶಿ

ರಂಗೂನ ಮತ್ತು ದಕ್ಷಿಣ ಬರ್ಮಾಗಳ ಮೇಲೆ ವಿಮಾನದಾಳಿ.

ಕಳೆದ ಶುಕ್ರವಾರ ರಂಗೂನಿನ ಮೇಲೂ ದಕ್ಷಿಣ ಬರ್ಮಾದ ಕೆಲವಪ್ಪಣಗಳ ಮೇಲೂ ವಿಸ್ತಾರವಾದ ದಾಳಿಯಾಯಿತು. ಅಧಿಕನಷ್ಟವಾಗಿಲ್ಲವೆಂದು ಸರಕಾರಿ ಪ್ರಕಟನೆಗಳು ಹೇಳುತ್ತಲಿವೆ. ೧೨ನೆಯ ತಾರೀಖು ರಂಗೂನಿನಲ್ಲಿ ಬಾಂಬುಗಳ ಸಿಡಿತದಿಂದ ಘಾಯಗೊಂಡ ೧೫೫ ಜನರು ಕೆಲ್ಲತ್ತೆಯಲ್ಲಿ ಭರ್ತಿಯಾಗಿದ್ದರು. ಅವರಲ್ಲಿ ೬೮ ಜನರು ಮರಣಿಸಿದವರಾಗಿದ್ದಾರೆ. ದೆಹಲಿ ರಕ್ಷಣಾಸಮಿತಿಯವರು ರಂಗೂನಿನ ನಿರಾಶ್ರಿತರಿಗೆ ೧೦ ಸಾವಿರ ರೂ. ಕೊಟ್ಟಿದ್ದಾರೆ. ಬಂಗಾಳದ ಗವರ್ನರರು ಯುದ್ಧನಿಧಿಯಿಂದ ಸಹಾಯನೂಡಲು ವಾಗ್ದಾನನಮಾಡಿದ್ದಾರೆ. ಹೆಂಗಸರು ಮಕ್ಕಳು ಕೂಡಿದ ೧೧೫೦ ಜನರು ಚಿತ್ತಾಂಗಿಗೆ ಕಳೆದವಾರ ಬಂದಿಳಿದರು.

ಚೀನಾ ರಣಾಂಗ

[redacted]

ಯಾಯಿತು. ಜಪಾನರ ೬೦ ಸಾವಿರ ಸೈನ್ಯವು ಬಹಳ ನಷ್ಟವಾಗಿರೆಯೆಂದು ಹೇಳಲಾಗಿದೆ

ಈ ವಿಷಯವನ್ನು ಶ್ರೀ ಮಂಬಲಸವ ಗೌಡರು ಮೇಲ್ಗಡಿಕಾರಿಗಳಿಗೆ ತಿಳಿಸಿ ಸ್ಥಾನ ಸೊತ್ತಾಯಿತು.

ಕುಟುಂಬದ ಯಜಮಾನನ ಹೆಸರು.	ಕುಟುಂಬದ ಜನಸಂಖ್ಯೆ
1 ಶಿಂಗೇರ ತಮ್ಮನಮುಖ್ಯ	7
2 ಸದಿಶೇರ ಮಲ್ಲ	5
3 ಶಿಂಗೇರ ಬಸ್ಸ	4
4 ಹಕೇಕೋಟೆ ಸಿದ್ಧ	5
5 ಕಲ್ಲೇಶ	3
6 ಶಿಂಗೇರ ದ್ಯಾವಗ	5
7 ಗ್ಯಾಸಪ್ಪ	4
8 ವೀರಭದ್ರ	4
9 ಮಲ್ಲ	6
10 ವಸ್ಮಾರಪ್ಪ	3
11 ತಿ. ವಸ್ಮಾರ	3
12 ಗ್ಯಾನ	2
13 ವಸ್ಮಾರಪ್ಪ ಮು	3
14 ಕಗ್ಗಲ್ಲು ಮಲ್ಲ	6
15 ಪಪ್ಪಿಟ್ಟ ವೀರಣ್ಣ	5
16 ಲ. ದ್ಯಾವಗ	5
17 ಕಗ್ಗಲ್ಲು ಲಿಂಗ	4
18 ಶಂಕರಪ್ಪ	5
19 ಅಂಬಿಗ	6
20 ಪೋಬಳಿ	4
21 ಸೂಳ್ಳ	6
22 ಬಾಳಪ್ಪ	4
23 ಹೊನಕ	4
24 ತಿಮ್ಮ	3
25 ರಾಮು	3
26 ಲಕ್ಕಪ್ಪ	3
	3
	4

14[2]

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟ.

ಇವರ A.S. ಬ್ರಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಸುಧಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆಯೆಲ್ಲಾ ವಿಧದ ಸೌಜುಗಳಲ್ಲೂ ಮೊರೆಯುತ್ತವೆ. **A. S.** ಸೀಲನ್ನು ಗಮನಿಸಿ. ಕೊಳ್ಳಿರಿ. ನೋಪಹೋಗಬೇಡಿರಿ

ಮೊರೆಯುವ ಸ್ಥಳ:- 1.) ಎಂ. ಪುಟ್ಟೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ ಮತ್ತು 2) ಎ ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ರಾಷ್ಟ್ರ ಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೊಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೊಡಲೆ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ. ನಿಮಗಿಷ್ಟವಾದ ತಿಕ್ಷಣಕ್ಕೆ ಪ್ರವೇಶ ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಛೇರಿ ಕಾದಂಬರಿ ಪುಸ್ತಕ ಮೊರೆಯುವ ವಳ್ಳಿವೆ. ನಿಮಗೆ ಸಲ್ಲಾವಿಧವಾದ ಮಾಹಿತಿಯೂ, ಉಚಿತವಾಗಿ ಹೇಳಲಾಗುವುದು

ಟಿ ಬಿ ಕೇಶವರಾವ್,
ಕೃಷ್ಣನಾಯರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉತ್ತಮ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local 2—0—0
Mofussil 3—0—0

6 Months

Local 1—1—0
Mofussil 2—0—0

ಚಂದಾ ವಿವರ

ವರ್ಷಕ್ಕೆ

ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0

6 ತಿಂಗಳಿಗೆ

ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಒಮ್ಮೆ ನಮ್ಮಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary.

ಸರಸ್ವತೀ ಲೇಹ್ಯ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ, ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ. ಪೈತ್ಯ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೪೦

ಸ್ವಾಕಿಸ್ವ- ಕೋರಣಗಲ್ಲು ಮರೆಪ್ಪ, ಬಳ್ಳಾರಿ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦	ಆಂಜೆ ವೆಚ್ಚದೇರೆ	
ಕನ್ನಡ ದಕೋಪನಿಷತ್ತುಗಳು	೦—೯—೦	ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವರಿಗೆ ಧಾರಾಳ ಕಮೀಶನ್	
ಶಿವಾನುಭವ ಚೋಪೆ	೦—೪—೦		
ಸುಮತಿ ಶತಕ	೦—೧—೦		

ಕಾಲವ ಸುಬ್ಬಣ್ಣ, ಮಜೀಂಟು, ಬಳ್ಳಾರಿ.

ದ್ವಿತೀಯ ಪಶುಪ್ರದರ್ಶನ ಬಳ್ಳಾರಿ.

ಫೆಬ್ರವರಿ 2, 3, 4ನೆಯ ತಾರೀಕು ಕೋಟೆ ಮಲ್ಲೇಶ್ವರ ದೇವಸ್ಥಾನದ ಬಯಲಿನಲ್ಲಿ ನಡೆಯಲಿದೆ. ವ್ಯವಸಾಯಗಾರರಿಗೆ ರೈತರಿಗೆ ಪಶುಗಳ ಉತ್ತಮ ತಳಿಯನ್ನು ಪ್ರೋತ್ಸಾಹಿಸಬೇಕೆನ್ನುವವರಿಗೆ ಸುವರ್ಣಸಂಧಿ ಬಂದು ನೋಡಿ ಆನಂದಿಸಿ ಕೊಂಡು ತೃಪ್ತಿಪಡಿರಿ

ಯಶ್. ತಾಳಿಕೆರಪ್ಪ ಟ್ರಸ್ಟಿ.

Nava Bharat, Bellary.

REG. No. 3937.

Sri _____

Printed at Vittal Press, Car Street Edited & Published by T. B. Keshava Rao, Bellary

Reg. - No. M.8937 'ವಂದೇ ಮಾತರಂ'

ನವಭಾರತ

ವರ್ಷ ೪ ಸಚಿತ್ರ ದಾಸ್ಯೇಯ ವಾದ ಪತ್ರಿಕೆ. ಸಂಪಾದಕರು: ಪಿ
ಸಂಚಿಕೆ ೧೯ ಎಳ್ಳಾರಿ ಜನವರಿ ವಿಜಯೇ ಭಾನುವಾರ ೧೯೪೫ ಪಿ. ಶೇಷಪಯ್ಯ-

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ
ಲೈಫ್ ಅಸ್ಯೂರೆನ್ಸು ಕಂಪನಿ ಲಿಮಿಟೆಡ್
ಆಸ್ತಿಪಾಸ್ತಿಗಳು 5,60,00,000 ರೂ.ಗಳಿಗೆ ಮೀರಿದೆ
ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ? ಎಷ್ಟು ವರ್ಷ ಕಟ್ಟಿಸುವುದರಿಂದ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ರೀತಿಯ ಬಗೆಯ ವಿಮೆಯನ್ನು ಕೇಳಿದರೂ ಚೆನ್ನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.
ಕೇಂದ್ರ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಕಚೇರಿ- ಡಿಸ್ಪ್ಯಾಚ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

ಯುದ್ಧದ ಬಿಸಿ ವಾರ್ತೆಗಳು.

ಮಲಯಾಲದಲ್ಲಿ-

ಸಿಂಗಪುರದಿಂದ ೬೦ ಮೈಲು ದೂರದಲ್ಲಿರುವ ಒಂದು ಪಾಹಾದಲ್ಲಿ ಆಸ್ಟ್ರೇಲಿಯಾ ಸೈನ್ಯವು ನಡೆದಿರುವದೆಂದು ಆಸ್ಟ್ರೇಲಿಯಾ ಸೈನ್ಯ ಖಾತೆಯ ಮಂತ್ರಿಗಳಾದ ಫ್ರೋಡ್ ಪಿ ಹೇಳಿದರು ಸಿಂಗಪುರದ ಮೇಲೆ ಜಪಾನಿಯರು ತಾವು ನಡೆಸಿದ ದಾಳಿಯಲ್ಲಿ ಸಮಾರು ೨೦ ಜನರು ಮರಣ ಹೊಂದಿದರೆಂದೂ ಮಿಲಿಟರಿ ಕಟ್ಟಡಗಳಿಗೂ ಜನವಸತಿ ಪ್ರದೇಶಗಳಿಗೂ ಅತಿಶಯ ಹಾನಿಯಾಯ್ತೆಂದೂ ರಾಜಧಾನಿ ಸಿಂಗಪುರದ ಮೇಲೆ ಬಾಂಬು ದಾಳಿಯು ಇಂದು ವಿಮಾನಗಳಿಂದ ಆಯಿತು. ಆಸ್ಟ್ರೇಲಿಯನರು ಆ ನಗರವನ್ನು ತ್ಯಜಿಸಿ ಹೊರಟರೆಂದೂ ಅವರ ಸಂಬಂಧವು ತಪ್ಪಿ ಹೋಗಿದೆಯೆಂದೂ ವಾರ್ತೆ ಬಂದಿದೆ. ವಿಮಾನವಾಹಕ ಹಡಗುಗಳೂ, ಇಗ ಸೈನಿಕರಿಂದ ತುಂಬಿದ ಹಡಗುಗಳೂ ರಾಬಾಲಕ್ಕೆ ಬಂದಿವೆಯಂತೆ

ಬರ್ಮಾದಲ್ಲಿ-

ದಕ್ಷಿಣಭಾಗದ ಟಿನಾಸರಿಂ ಜಿಲ್ಲೆ

ನ್ಯೂಗಿನಿಯನ್ನು ಮುತ್ತಲು ಜಪಾನರು ಅದ್ಭುತ ಸಾಹಸ ಮಾಡುತ್ತಿರುವರು. ನ್ಯೂ ಬ್ರಿಟನ್ ದ್ವೀಪದ ರಾಜಧಾನಿಯಾದ ಇತರ ವಾಹನಗಳು ಅಲ್ಲಿ ಹೋಗಲಿಕ್ಕೆ ಮಾರ್ಗವಿಲ್ಲ ಮೌಲ್ಮೈನದ ಮೇಲೆ ತಿಗಿನೇ ತಾ ವಿಮಾನದಾಳಿಯಾಯಿತು ಜಪಾನ ಸೈನ್ಯಗಳು ಮೌಲ್ಮೈನ್‌ಗೆ ೩೫ ಮೈಲಿಗ ದೂರದಲ್ಲಿವೆಯಂತೆ.

ಆಫ್ರಿಕಾ-

ಲಿಬಿಯಾದಲ್ಲಿ ಜರ್ಮನರು ಜೆದೆಬವನ್ನು ಪುನಃ ಆಕ್ರಮಿಸಿಕೊಂಡಿರುವರೆಂದ ಗೊತ್ತಾಗಿದೆ.

ಫಿಲಿಪ್ಪೈ-

ಪೆಬುಲದ ಮೇಲೆ ಜಪಾನರು ಬಾಂಬು ದಾಳಿ ಮಾಡಿದರು. ಫಿಲಿಪ್ಪೈ ದ್ವೀಪದಲ್ಲಿ ಜಪಾನರು ಎರಡು ಲಕ್ಷ ಸೈನ್ಯವಿದೆಯಂದು ಅಮೆರಿಕಾದ ಅಧಿಕಾರಿಗಳು ಅಭಿಪ್ರಾಯ ಮಾಡಿರುತ್ತಾರೆ

ಸಮುದ್ರ ಯುದ್ಧ

ಅಟ್ಲಾಂಟಿಕ್ ಸಾಗರದಲ್ಲಿ 'ಯು' ಬೋಟುಗಳ ಹಾವಳಿ ಹೆಚ್ಚಾಗುತ್ತಿರುವುದೆಂದು ನಾವಿಕಾಧಿಕಾರಿಯವರೇ ಒಪ್ಪಿಕೊಂಡಿದ್ದಾರೆ ನಾರ್ವೆನ್, ಕೊಯಿಂಬ್ರ ಆಲೆನ್, ಜಾಯ ಹಡಗುಗಳು ಈ ತ್ತೇದೊಡ್ಡ ಕಯಾಗುತ್ತಲಿದೆ ಮಡಿಟೆರೇನಿಯನ್ ಮತ್ತು ಅಟ್ಲಾಂಟಿಕ್ ಸಾಗರವಲ್ಲಿ ಉಗ್ರಸ್ವರೂಪವನ್ನು ಸಾಗಿಸಲು ಹಿಟ್ಲರನು ಯೋಜನೆಯನ್ನು ತಯಾರಿಸಿರುವನಂತೆ.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಪ್ರಕಟಣೆ.

ಸ್ವಾತಂತ್ರ್ಯ ದಿನಾಚರಣೆ. ಸೋಮವಾರ (ತಾ॥ ೨೬-೧-೪೨.

ಪ್ರತಿವರ್ಷ ಜನವರಿ ೨೬ ನೇ ತಾರೀಖನ್ನು ಸ್ವಾತಂತ್ರ್ಯ ದಿನವೆಂದು ಕಾಂಗ್ರೆಸ್ಸು ೧೯೩೦ ರಿಂದ ಆಚರಿಸುತ್ತಾ ಬಂದಿದೆ. ಈ ಸ್ವಾತಂತ್ರ್ಯ ದಿನಾಚರಣೆಯು ನಮ್ಮ ಹೋರಾಟದ ಒಂದು ಅಂಗವಾಗಿ ಪರಿಣಮಿಸಿದೆ. ಸ್ವಾತಂತ್ರ್ಯಕ್ಕೆ ಇರುವ ನಮ್ಮ ರಾಷ್ಟ್ರೀಯ ಅಭಿಲಾಷೆಯನ್ನು ಸಾರಿಹೇಳುವ ದಿನವಿದು.

ಅಂದು ಹಿಂದೂಸ್ಥಾನದ ಎಲ್ಲ ಸ್ತ್ರೀಪುರುಷರೂ, ಕಾಂಗ್ರೆಸ್ಸಿಗರಿರಲಿ ಇಲ್ಲದಿರಲಿ ದಿನಾಚರಣೆಯ ಮಹತ್ವವನ್ನರಿತು ಯೋಗ್ಯರೀತಿಯಿಂದ ದಿನವನ್ನು ಪಾಲಿಸುವರೆಂದು ನಂಬಲಾಗಿದೆ. ಸ್ವಾತಂತ್ರ್ಯದಿನವು ಸಹೋದರತೆಯನ್ನು ಬೆಳೆಸುವ ನಮ್ಮ ಹೃದಯದಿಂದ ಅಸ್ಪೃಶ್ಯತೆಯನ್ನು ಕಿತ್ತೊಗೆಯುವ, ಮದ್ಯಪಾನವನ್ನು ಬಿಡುವ, ನೂಲುವ ಹಾಗು ಖಾದಿ ಮತ್ತು ಗ್ರಾಮೋದ್ಯೋಗ ವಸ್ತುಗಳನ್ನು ಮಾರುವ ದಿನವಾಗಬೇಕು.

ಆದಿನ ಮುಂಜಾನೆ ಪ್ರಭಾತಫೇರಿ ಪ್ರಭಾತಭೇರಿ ಜನಜನಿತವಾಗಿರಬೇಕು. ಸಾರ್ವಜನಿಕ ಸಭೆಗಳೂ ಆಗಬೇಕು. ಸಾರ್ವಜನಿಕ ಸಭೆಯಲ್ಲಿ ಸಭಾಧ್ಯಕ್ಷರಿಂದ ಸ್ವಾತಂತ್ರ್ಯಪ್ರತಿಜ್ಞೆಯು ಪ್ರತಿವಾಕ್ಯವೂ ಸ್ಪಷ್ಟವಾಗಿ ಉಚ್ಚಾರವಾಗುವಂತೆ ಪ್ರತಿಜ್ಞೆಯು ಯುಕ್ತಗಾಂಭೀರ್ಯದಿಂದ ಸ್ವೀಕರಿಸಲ್ಪಡಬೇಕು.

ಪ್ರಾಂತ್ಯದ ಅದಷ್ಟು ಹೆಚ್ಚು ಸ್ಥಳಗಳಲ್ಲಿ ಅಂದಿನ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಾಗಿಸಲು ಈಗಿನಿಂದ ಕಾಂಗ್ರೆಸ್ ಕಾರ್ಯಕರ್ತರೂ ಕಾಂಗ್ರೆಸ್ ಸಮಿತಿಗಳೂ ಪ್ರಯತ್ನಿಸಬೇಕು. ಮುಂದಿನ ದಿನಾಚರಣೆಯ ವಿವರವಾದ ವರದಿಯನ್ನು ಈ ತಿಂಗಳ ಕೊನೆಯೊಳಗಾಗಿ ಪ್ರಾಂತೀಯ ಸಮಿತಿಗೆ ತಲುಪುವಂತೆ ಕಳಿಸಬೇಕು.

ಸ್ವಾತಂತ್ರ್ಯ ಪ್ರತಿಜ್ಞೆ

ಹಿಂದೀಯರ ಪ್ರಗತಿಗೆ ಪೂರ್ಣ ಅವಕಾಶ ದೊರೆಯುವುದಕ್ಕೋಸುಗ ಸ್ವಾತಂತ್ರ್ಯ ಪಡೆಯಲು ಮತ್ತು ಜೀವನದ ಅವಶ್ಯಕತೆಗಳು ಹಾಗು ಪರಿಶ್ರಮದ ಫಲಗಳನ್ನು ಅನುಭೋಗಿಸಲು ಇತರ ಜನಾಂಗಗಳಿಗಿರುವಂತ ಹಿಂದೀಯರಿಗೂ ಪೂರ್ಣ ಅಧಿಕಾರವಿರುವದೆಂದು ನಾವು ನಂಬುತ್ತೇವೆ. ಯಾವುದಾದರೊಂದು ಸರಕಾರವು ಪ್ರಜೆಗಳ ಈ ಜನ್ಮಸಿದ್ಧ ಹಕ್ಕನ್ನು ಕಸಿದುಕೊಂಡಲ್ಲಿ ಮತ್ತು ಅವರ ಮೇಲೆ ದಬ್ಬಾಳಿಕೆ ನಡಿಸಿದಲ್ಲಿ ಆ ಸರಕಾರವನ್ನು ಬದಲು ಮಾಡಲು ಅಥವಾ ರದ್ದು ಮಾಡರು ಪ್ರಜೆಗಳಿಗೆ ಅಧಿಕಾರವಿದೆಯೆಂದು ಸಹಾ ನಾವು ತಿಳಿಯುತ್ತೇವೆ. ಹಿಂದೂಸ್ಥಾನದಲ್ಲಿರುವ ಬ್ರಿಟಿಷ್ ಸರಕಾರವು ಹಿಂದೀಯರ ಸ್ವಾತಂತ್ರ್ಯವನ್ನು ಕಸಿದುಕೊಂಡಿದೆ. ಇಷ್ಟೇಅಲ್ಲ, ಹಿಂದೀ ಜನತೆಯ ಶೋಷಣೆಯನ್ನೆ ತಳಹದಿಯನ್ನಾಗಿಟ್ಟುಕೊಂಡು ಹಿಂದೂಸ್ತಾನವನ್ನು ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಹಾಗು ಆಧ್ಯಾತ್ಮಿಕ ರೀತಿಯಿಂದ ಹಾಳುಮಾಡಿದೆ. ಆದ್ದರಿಂದ ಹಿಂದೂಸ್ಥಾನವು ಬ್ರಿಟಿಶರ ಸಂಬಂಧವನ್ನು ಕಡಿದುಕೊಂಡು "ಪೂರ್ಣ ಸ್ವರಾಜ್ಯ"ವನ್ನು ಪಡೆಯಲೇಬೇಕೆಂದು ನಾವು ಅಭಿಪ್ರಾಯಪಡುತ್ತೇವೆ.

ನಮ್ಮ ಸ್ವಾತಂತ್ರ್ಯವನ್ನು ಪಡೆಯಲು ಉತ್ತಮ ಫಲಕಾರಿಯಾದ ಮಾರ್ಗವು ಹಿಂಸಾಮಾರ್ಗದಿಂದಲ್ಲವೆಂದು ನಾವು ತಿಳಿದಿದ್ದೇವೆ. ಶಾಂತ ಮತ್ತು ನ್ಯಾಯಮಾರ್ಗಗಳಿಂದಲೇ ದೇಶದ ಬಲವು ಮತ್ತು ಸ್ವಾವಲಂಬನ ವಕ್ತಿಯು ಹೆಚ್ಚಿ ಸ್ವರಾಜ್ಯಸಾಧನೆಯಲ್ಲಿ ಬಹಳ ಮುಂದುವರಿಯುತ್ತದೆ. ಆದರಿಂದ ಇನ್ನು ಮುಂದಾದರೂ ಈ ಮಾರ್ಗವನ್ನು ಅನುಸರಿಸುವದರಿಂದ ನೇರವು ಸ್ವಾತಂತ್ರ್ಯವನ್ನು ಪಡೆಯುವೆವು

ಹಿಂದೂ ಸ್ಥಾನದ ಸ್ವರಾಜ್ಯ ಸಾಧನೆಗಾಗಿ ನಾವು ಪೂರ್ಣ ಪ್ರಮಾಣ ಕೊಡುತ್ತೇವೆ. ಮತ್ತು ಪೂರ್ಣ ಸ್ವರಾಜ್ಯ ಸಿಗುವವರೆಗೆ ಸ್ವಾತಂತ್ರ್ಯ ಸಂಗ್ರಾಮವನ್ನು ಅಹಿಂಸಾತ್ಮಕರೀತಿಯಿಂದ ಸಾಗಿಸುವೆವೆಂದು ಧೃಢ ಪ್ರತಿಜ್ಞೆ ಮಾಡುತ್ತೇವೆ.

ಸಾಮಾನ್ಯತಃ ಅಹಿಂಸಾತ್ಮಕ ಕಾರ್ಯಕ್ರಮಗಳನ್ನು ಮುಖ್ಯವಾಗಿ ಅಹಿಂಸಾತ್ಮಕ ಪೋರಾಟಕ್ಕೆ ಖಾದೀ, ಜಾತೀಯ ಸೌಹಾರ್ದತೆ ಮತ್ತು ಅಸ್ಪೃಶ್ಯತಾನಿವಾರಣೆ. ಈ ರಚನಾತ್ಮಕ ಕಾರ್ಯಗಳನ್ನು ಯಶಸ್ವಿರೀತಿಯಿಂದ ನಡೆಸಿಸುವದು ಅವಶ್ಯವೆಂದು ನಾವು ನಂಬುತ್ತೇವೆ. ಜಾತಿ ಮತ ಭೇದಗಳನ್ನೆಣಿಸದೆ ನಮ್ಮ ಬಾಂಧವರಲ್ಲಿ ಸೌಹಾರ್ದತೆಯನ್ನು ಬೆಳಿಸಲು ಎಲ್ಲ ರೀತಿಯಿಂದ ಪ್ರಯತ್ನಿಸುವೆವು. ಮತ್ತು ಹಿಂದುಳಿದವರೆಂದೂ ಹಿರಿದಕ್ಕಟ್ಟಲ್ಪಟ್ಟವರೆಂದೂ ಗಣಿಸಲ್ಪಟ್ಟಿರುವ ಜನರ ಹಿತಸಾಧನೆಯನ್ನು ಪ್ರತಿನಿಧದಲ್ಲಿಯೂ ಮುಂದುವರಿಸುವೆವು. ನಾವು ಸಾಮ್ರಾಜ್ಯಶಾಹಿ ಪದ್ಧತಿಯನ್ನು ನಾಶವಾಗಲು ಹೊರಟಿರುವೆವೆಂದೂ ಇಂಗ್ಲೀಷ ಅಧಿಕಾರಿಗಳೊಡನಾಗಲೀ ಅಧಿಕಾರೇತರರೊಡನಾಗಲೀ ನಮ್ಮ ಜಗಳವಿಲ್ಲೆಂದೂ ನಾವು ಬಲ್ಲೆವು. ಸವರ್ಣ ಹಿಂದುಗಳು ಮತ್ತು ಹರಿಜನರೊಳಗಿನ ಭೇದ ಭಾವನೆಗಳು ಹೊಗಬೇಕೆಂದೂ, ಸವರ್ಣ ಹಿಂದುಗಳು ತಮ್ಮ ನಿತ್ಯ ವ್ಯವಹಾರದಲ್ಲಿ ಈ ಭೇದ ಭಾವನೆಗಳನ್ನು ಮರಿಯಬೇಕೆಂದೂ ನಾವು ಅಭಿಪ್ರಾಯಪಡುತ್ತೇವೆ. ಇಂಥ ಭೇದಭಾವನೆಗಳು ಅಹಿಂಸಾತ್ಮಕ ಆಚರಣೆಗೆ ಅಡ್ಡಿಯಾಗಿರುವವು. ನಮ್ಮ ಮತಗಳು ಬೇರೆ ಇದ್ದರೂ ನಾವು ಒಂದೇ, ರಾಷ್ಟ್ರ ಒಂದೇ ರಾಜಕೀಯ ಆರ್ಥಿಕ ಹಿತಸಂಬಂಧಗಳಿಂದ ಕೂಡಿರುವ ಭಾರತಮಾತೆಯ ಮಕ್ಕಳಂತೆ ನಾವು ವರ್ತಿಸುವೆವು.

"ಹಿಂದುಸ್ಥಾನದ ಎಲ್ಲ ಜಿಲ್ಲೆ ಪ್ರಾಂತಗಳನ್ನು ಪುನರುದ್ಧರಿಸಲು ಮತ್ತು ಜನತೆಯಲ್ಲಿನ ದರಿದ್ರತೆಯನ್ನು ಹೋಗಲಾಡಿಸಲು ಪ್ರಯತ್ನಿಸುವ ನವ ನಿರ್ಮಾಣ ಕಾರ್ಯಕ್ರಮದಲ್ಲಿ ಚರಕ ಖಾದಿಗಳು ಅತಿ ಮುಖ್ಯಭಾಗಗಳಾಗಿವೆ. ಆದುದರಿಂದ ನಾವು ನಿಯಮಿತವಾಗಿ ನೂಲುವುದರಲ್ಲಿ ನಮ್ಮ ಸಲುವಾಗಿ ಖಾದಿಯನ್ನು ಉಪಯೋಗಿಸುವೆವು. ಶಕ್ಯವಿದ್ದಷ್ಟು ಗ್ರಾಮಕೈಗಾರಿಕೆಯ ವಸ್ತುಗಳನ್ನು ಬಳಕೆಯಲ್ಲಿ ತರುವೆವು. ಮತ್ತು ಇತರರಾದರೂ ಈರೀತಿ ಮಾಡುವಂತೆ ಪ್ರಯತ್ನಿಸುವೆವು.

"ಕಾಂಗ್ರೆಸ್ ತತ್ವಶೋಧನಗಳನ್ನು ಶಿಸ್ತಿನಿಂದ ಪಾಲಿಸಲು ಮತ್ತು ಹಿಂದೀ ಸ್ವಾತಂತ್ರ್ಯ ಸಂಗ್ರಾಮವನ್ನು ಸಾಗಿಸಲು ಯಾವಾಗ ಕಾಂಗ್ರೆಸ್ಸಿನ ಕರೆಬಂದರೂ ಆಗ ಅದರಲ್ಲಿ ಸೇರಲು ಸಿದ್ಧರೆಂದು ನಾವು ಪ್ರತಿಜ್ಞೆ ಮಾಡುತ್ತೇವೆ.

ಮಿತ್ರ ಮತ್ತು ಶತ್ರು ರಾಷ್ಟ್ರಗಳು.

ಭೂ-ಜಲ-ವಾಯು ಬಲಗಳ ತುಲನಾತ್ಮಕ ವಿವೇಚನೆ.

ಡಿಶಂಬರ್ ತಿಂಗಳ ಕೊನೆಯಲ್ಲಿ ಮಿತ್ರ ಪಕ್ಷದ ಹಾಗು ಶತ್ರುಗಳ ಬಲಾಬಲಗಳ ಅಂಕೆಗಳಿದೀಗ ಪ್ರಸಿದ್ಧವಾಗಿವೆ. ಅವುಗಳನ್ನು ನೋಡಿದರೆ ಮಿತ್ರ ಪಕ್ಷದವರೂ ಭೂ-ಜಲವಾಯು ಬಲಗಳಲ್ಲಿ ಮೇಲುಗೈಯಾಗುವರೆಂಬುದು ಸ್ಪಷ್ಟವಾಗುವದು. ಆಯಾ ರಾಷ್ಟ್ರಗಳ ಬಲಾಬಲಗಳನ್ನು ನೋಡುವಾ.

ಭೂದಳ

ಬ್ರಿಟನ್	೨೫೦೦೦೦೦	ಸೈನ್ಯ
ಅಮೇರಿಕೆ	೧೫೦೦೦೦೦	,,
ರಸಿಯಾ	೪೦೦೦೦೦೦	,,
ನೆದರಲಂಡ್ಸ	೨೫೦೦೦೦	,,
ಚೀನ	೧೫೦೦೦೦೦೦	,,

ಇವುಗಳಲ್ಲಿ ಬ್ರಿಟನ್, ಅಮೆರಿಕೆ, ರಸಿಯಾಗಳ ದಳಗಳು ಒಳ್ಳೆ ಶಸ್ತ್ರಾಸ್ತ್ರಸುಸಜ್ಜಿತವಿರುವವು. ಡಜ್ ಈಸ್ಟ ಇಂಡೀಜಗಳಲ್ಲಿ ಬಹುತರ ಎಲ್ಲ ಸೈನಿಕರ ಹತ್ತರ ಆತ್ಮ ಸಂರಕ್ಷಣೆಯ ಶಸ್ತ್ರಾಸ್ತ್ರಗಳು ಸಾಕಷ್ಟಿರುವವು. ಚೀನಯು ತಮಗೆ ಬೇಕಾದ ಎಲ್ಲ ಸಣ್ಣ ಸಣ್ಣ ಯಂತ್ರಗಳನ್ನು ತಾವೇ ಸಿದ್ಧ ಮಾಡಿಕೊಳ್ಳಬಲ್ಲರು ಆದರೆ ಭಾರವಾದ ತೋಪ್ಪಗಳು, ಟ್ಯಾಂಕ ನಿರೋಧಕ ತೋಪ್ಪಗಳು, ಯುದ್ಧ ವಿಮಾನಗಳು ಮತ್ತು ಬಾಂಬರಗಳು ಬೇಕಾಗಿವೆ. ಬ್ರಿಟನವು ಇನ್ನೂ ೧೫೦೦೦೦೦ ತೋಳರನ್ನು ಕಲೆಹಾಕಬಹುದು ಅಮೆರಿಕೆಯು ಇನ್ನೂ ೫೦೦೦೦೦೦ ಜನ ಯೋದ್ಧರನ್ನು ಸಂಗ್ರಹಿಸಬಹುದು. ರಸಿಯವು ೪೦೦೦೦೦೦ ಕಾದಿಟ್ಟ ಸೈನಿಕರಿಗೆ ಶಿಕ್ಷಣ ಕೊಡುತ್ತಿದ್ದು ಮುಂದಳದಲ್ಲಿ ಹೋರಾಡಲು ಅವರನ್ನು ತರಬೇತು ಮಾಡುತ್ತಿರುವದು. ಚೀನದ ಯೋದ್ಧರ ಸಂಖ್ಯೆಗೆ ಲೆಗಂತೂ ಮಿತಿಯೆ ಇಲ್ಲ ಇದಲ್ಲದೆ ಬ್ರಿಟಿಷ್ ಸಾಮ್ರಾಜ್ಯದ ಕಾದಿಟ್ಟ ಭೂದಲವು ಬೇರೆ ಇರುವದು ಹಿಂದುಸ್ಥಾನದಲ್ಲಿ ೧೧ ಲಕ್ಷಕ್ಕಿಂತ ಹೆಚ್ಚು ಸೈನಿಕರಿರುವರು ಮಧ್ಯ ಪೂರ್ವದಲ್ಲಿ ೧೧ ಲಕ್ಷಕಿಂತ ಹೆಚ್ಚು ಸೈನ್ಯವಿದೆ. ಅಲ್ಲದೆ ಸಾಮ್ರಾಜ್ಯದ ಇತರ ಜಾಗಗಳಲ್ಲಿ ಇನ್ನು ೧೫ ಲಕ್ಷ ಇರುವದು ಇಟಲಿಯದು ೧೫ ಲಕ್ಷ ಮತ್ತು ಜಪಾನದ್ದು ೫೦ ಲಕ್ಷ ಇರುವದು

ವಾಯುಬಲ

ಬ್ರಿಟಿಷ ಅಮೇರಿಕನ್ ಮತ್ತು ರಸಿಯನ್ ವಾಯುಬಲಗಳನ್ನು ಕೂಡಿಸಿದರೆ ಮಿತ್ರ ರಾಷ್ಟ್ರಗಳ ಈಗ ಹೋರಾಡುತ್ತಿದ್ದ ವಿಮಾನಗಳು ಮತ್ತು ಕಾದಿಡಲ್ಪಟ್ಟ ವಿಮಾನಗಳಿಗಿಂತ ಹೆಚ್ಚು ಶಕ್ತಿ ಸಂಪನ್ನವಾಗುವದು. ಈ ಮೂರು ರಾಷ್ಟ್ರಗಳ ವೈಮಾನಿಕ ಬಲದ ಅಂಕಿಗಳನ್ನು ಗುಪ್ತ ಮಾಡಲಾಗಿದೆ. ಆದರೂ ಎಲ್ಲ ಬಗೆಯ ೬೦ ಸಾವಿರಕ್ಕಿಂತ ಹೆಚ್ಚು ವಿಮಾನಗಳಿವೆಂದು ಹೇಳಬಹುದು. ಆದರೆ ಜರ್ಮನರ ವಿಮಾನಗಳ ಸಂಖ್ಯೆ ೪೦ ಸಾವಿರದ ಮೇಲಿದೆಂದು ಹೇಳಬಹುದು. ಇಟಾಲಿಯನ್ನರ ಹತ್ತರ ೬ ಸಾವಿರಕ್ಕಿಂತ ಕಡಿಮೆ ವಿಮಾನಗಳಿದ್ದು ಜಪಾನರವು ಸುಮಾರು ೪ ಸಾವಿರ ಇವೆ.

ಮಿತ್ರ ರಾಷ್ಟ್ರಗಳಲ್ಲಿ ೪ ನೆಯ ರಾಷ್ಟ್ರವಾದ ಚೀನದ ಹತ್ತರ ಎಷ್ಟು ವಿಮಾನಗಳಿವೆಂಬುದು ಗೊತ್ತಿಲ್ಲ ಆದರೆ ಕಳೆದ ೨ ವರ್ಷಗಳಲಿ ಅಮೇರಿಯಿಂದ ಹೊಸ ಬಗೆಯ ವಿಮಾನಗಳು ಹೆಚ್ಚಿಗಾಗಿ ಬಂದಿವೆ. ಡಜ್ ಈಸ್ಟ ಇಂಡೀಜಗಳ ಹತ್ತರ ಕನಿಷ್ಠ ೧೦೦ ರಷ್ಟು, ಭೂ-ಜಲ ವಿಮಾನಗಳಿವೆ. ಬ್ರಿಟನ ಅಮೇರಿಕೆ ರಸಿಯಗಳಲ್ಲಿ ಕೂಡಿ ವೈತಿ ತಿಂಗಳು ೬ ಸಾವಿರದಷ್ಟು ವಿಮಾನಗಳು ಸಿದ್ಧವಾಗುತ್ತಿದ್ದರೆ ಅಚ್ಚಿನ ರಾಷ್ಟ್ರಗಳಲ್ಲಿ ಕೇವಲ ೩೫೦೦ ವಿಮಾನಗಳು ಮಾತ್ರ ತಯಾರಾಗುತ್ತಿರುವವು.

ನೌಕಾಬಲದಲ್ಲಿಯಂತೂ ಮಿತ್ರರು ಅಚ್ಚಿನ ರಾಷ್ಟ್ರಗಳಿಗಿಂತ ಬಹಳ ಮುಂದಿರುವರು ಆಯಾ ರಾಷ್ಟ್ರಗಳ ಬಲಗಳು ಈ ರೀತಿಯಿವೆಂದು ಹೇಳಲಾಗಿದೆ

ಬ್ರಿಟನ ಯುದ್ಧ ಹಡಗ ೧೫, ವಿಮಾನ ವಾಹಕಗಳು ೮, ೪ ಇಂಚು ತೋಪ್ಪ ಇದ್ದ ಕೈಯಿಜರ ೧೫, ಹಗರು ಕೈಯಿಜರು ೪೫, ವಿನಾಶಿಕೆಗಳು ೨೫೦ ಜಲಾಂತರ್ಗಾಮಿಗಳ ನಂಖ್ಯೆ ಗೊತ್ತಿದ್ದರೂ ೯೦ ತೋಪ್ಪಗಳುಳ್ಳ ಕೈಯಿಜರ ೧೫, ಹಗರ ಕೈಯಿಜರ ೧೯, ವಿನಾಶಿಕೆ ೨೧೫, ಜಲಾಂತರ್ಗಾಮಿ ೯೦ ರಿಂದ ೧೦೦

ರಶಿಯ-ಯುದ್ಧ ಹಡಗ ೩, ಮಧ್ಯಮ ಮತ್ತು ಹಗರು ಕೈಯಿಜರ ೧೦. ವಿನಾಶಿಕೆ ೬೦ ರಿಂದ ೮೦, ಜಲಾಂತರ್ಗಾಮಿಗಳು ೨೫೦.

ಡಜ್ ಈಸ್ಟ ಇಂಡೀಜ -ಮಧ್ಯಮ ತರಗತಿಯ ಕೈಯಿಜರ ೯, ವಿನಾಶಿಕೆಗಳು, ಜಲಾಂತರ್ಗಾಮಿ ೩

ಅಚ್ಚಿನ ರಾಷ್ಟ್ರಗಳ ಬಲ-ಜರ್ಮನಿಯ ಯುದ್ಧ ಹಡಗ ಒಂದರಲ್ಲು (ಬ್ರೆಸ್ಟ ದಲ್ಲಿ ನಿರ್ಬಂಧದಲ್ಲಿ ಸಿಕ್ಕಿ ಹಡಗು ಬಿಟ್ಟಿಲ್ಲ) ವಿಮಾನ ವಾಹಕ ೨, ೪ ಇಂಚು ತೋಪ್ಪುಗಳ ಕೈಯಿಜರ ೩೪, ಹಗರು ಕೈಯಿಜರ ೧೦ ೧೧, ವಿನಾಶಿಕೆ ೪೦ ೫೦, ಜಲಾಂತರ್ಗಾಮಿ ೨೫೦

ಇಟಲಿ-ಯುದ್ಧ ಹಡಗಗಳ ೫, ೪ ಇಂಚು ಕೈಯಿಜರ ೨೩, ಹಗರು ಕೈಯಿಜರ ೧೩ ೧೫, ವಿನಾಶಿಕೆಗಳು ೪೦ ೫೦, ಜಲಾಂತರ್ಗಾಮಿಗಳು ೪೦ ೫೦.

ಜಪಾನ-ಯುದ್ಧ ಹಡಗಗಳು ೧೧, ಪಾಕೆಟ್ ಬ್ಯಾಟ್ಲಶಿಪ್ಪುಗಳು ೪, ವಿಮಾನವಾಹಕಗಳು ೫, ೪ ಇಂಚು ತೋಪ್ಪಿನ ಕೈಯಿಜರ ೧೨, ಹಗರ ಕೈಯಿಜರ ೨೩, ವಿನಾಶಿಕೆಗಳು ೧೨೦, ಜಲಾಂತರ್ಗಾಮಿಗಳು ೭೦.

ಆದರೆ ಮಿತ್ರ ರಾಷ್ಟ್ರಗಳ ಹಡಗಗಳೆಲ್ಲ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಚೆಲ್ಲಿ ಬಿದ್ದಿವೆ. ಮಹತ್ವದ ಜಾಗ್ರತಿಕ ಮೂರೈಕೆ ಕೇಂದ್ರಗಳೆಲ್ಲ ಮಿತ್ರರಿಗೆ ಅವಶ್ಯಕವಾಗಿವೆ ಆಲ್ಲದೆ ಯುದ್ಧದ ಸಮಯದಲ್ಲಿ ಹಡಗಗಳ ನಿಜವಾದ ಅಂಕೆ ಸಂಖ್ಯೆಗಳು ಗೊತ್ತಾಗುವದಿಲ್ಲ. ಹೊಸದಾಗಿ ಎಷ್ಟು ಹಡಗಗಳು ಕಟ್ಟಲ್ಪಟ್ಟವು ಎಷ್ಟು ಹಡಗಗಳು ಮುಳುಗಿಸಲ್ಪಟ್ಟವು ನಾಶವಾದವೆಂಬುದೂ ಗೊತ್ತಾಗುವದಿಲ್ಲ. ಆದುದರಿಂದ ಮೇಲೆ ಕೊಟ್ಟ ಜಲದಳದ ಅಂಕೆಗಳು ನಿಶ್ಚಿತ ಅಂಕೆಗಳೆಂದು ಹೇಳಲಿಕ್ಕೆ ಬಾರದು.

ಒಟ್ಟು ಶತ್ರು ರಾಷ್ಟ್ರಗಳು ಬಲಗಳಿದ್ದು ಪಂಪ ಮಿತ್ರರ ಮೇಲುಗೈ ಈಗಲೂ ಇದೆಂದು ಹೇಳಬಹುದಾಗಿದೆ.(ಕೃ.ವೀ)

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಪ್ರಕಟಣೆ

ಸದ್ಯದ ಕಾರ್ಯಕ್ರಮ

ಅಖಿಲ ಭಾರತ ಕಾಂಗ್ರೆಸ ಕಮಿಟಿಯು ಗೊತ್ತುವಳಿಯನ್ವಯ ನಮ್ಮ ಪ್ರಾಂತ್ಯದ ಕಾಂಗ್ರೆಸ ಕಾರ್ಯವು ನಡೆಯಬೇಕಾಗಿದೆ. ಮಹಾತ್ಮ ಗಾಂಧಿಯವರು ತಾವು ಹೂಡಿದ ಸತ್ಯಾಗ್ರಹವನ್ನು ಸಂಪೂರ್ಣವಾಗಿ ಈಗ ನಿಲ್ಲಿಸಿರುತ್ತೇನೆಂದು ಜಾಹಿರು ಮಾಡಿರುವರು. ಇನ್ನು ಪ್ರಾಂತ್ಯದಲ್ಲಿ ಯಾರೂ ಸತ್ಯಾಗ್ರಹ ಮಾಡತಕ್ಕದ್ದಲ್ಲ. ಎಲ್ಲ ಕಾಂಗ್ರೆಸ ಕಾರ್ಯಕರ್ತರು ಈಗ ಅಖಿಲ ಭಾರತ ಕಾಂಗ್ರೆಸ ಕಮಿಟಿಯಲ್ಲಾದ ಗೊತ್ತುವಳಿಯನ್ನು ಜನತೆಗೆ ತಿಳಿಸಿಕೊಡಬೇಕು. ಮತ್ತು ಹಳ್ಳಿ ಹಳ್ಳಿಗಳಲ್ಲಿ ಮಹಾತ್ಮಜೀಯವರ ವಿಧಾಯಕ ಕಾರ್ಯಕ್ರಮವು ಜೋರಿನಿಂದ ಸಾಗುವಂತೆ ಪ್ರಯತ್ನಿಸಬೇಕು. ಜಿಲ್ಲಾ ಕಾಂಗ್ರೆಸ ಕಮಿಟಿಗಳಾದರೂ ಗಾಂಧಿಜೀಯವರ ವಿಧಾಯಕ ಕಾರ್ಯಕ್ರಮದ ಸಂದೇಶವನ್ನು ಸತ್ಯಾಗ್ರಹಿಗಳಿಗೆ ಹಾಗೂ ಅವರ ಸಮಿತಿಗಳಿಗೆ ತಲುಪುವಂತೆ ಮಾಡಬೇಕು.

ಸುಮಾರು ಹುಟ್ಟು ಹಬ್ಬದ ಸಲುವಾಗಿ ಪ್ರಾಂತೀಯ ಸಮಿತಿಯು ಮುಖ್ಯಾಂತರ ಸೂಲು ಅರ್ಪಿಸಿದವರಿಗೆ ಮಹಾತ್ಮರ ಪಸಾತ್ಕರದ ಪಂದೇರ ಪ್ರತಿಗಳನ್ನು ಜಿಲ್ಲಾ ಸಮಿತಿಗಳಕಡೆಗೆ ಕಳಿಸಿಕೊಡಲಾಗಿದೆ ಆಯಾ ಜಿಲ್ಲಾ ಸಮಿತಿಗಳಿಗೆ ಹೋಗಿ ಅವುಗಳನ್ನು ವಿಲೇವಾರಿ ಮಾಡಿಯಬೇಕು.

ಹಿಂದೂಸ್ಥಾನ, ಚರ್ಚಿಲರವರು

ಅಮೆರಿಕಾದಿಂದ ಬಂದಮೇಲೆ ನಮ್ಮ ನುಂತಾದ ಮುಖಂಡರ ಸೂಚನೆಗಳನ್ನು ಸೊಡಿರುತ್ತೇನೆ. ಆಲೋಚನೆ ಮಾಡುತ್ತಿರಲಾಗಿದೆ. ಆದರೆ ಹಿಂದೂಸ್ಥಾನದ ಬಾಗಿಲಿಗೆ ಯುದ್ಧವು ಬಂದಿರುವಕಾರಣ ಮೊತ್ತ ಬದಲಾವಣೆಯ ಘಟನಾತ್ಮಕ ಸೂಚನೆಗಳಿಗಿಂತ ಯುದ್ಧ ಸಹಾಯ ಯತ್ನಗಳಲ್ಲಿ ತೊಡಗುವದು ಮೇಲು ಎಂದು ಬ್ರಿಟಿಷ್ ಪ್ರಧಾನರಾದ ಚರ್ಚಿಲರು ಹೇಳಿದರು.

ಕಾಶಿಯಲ್ಲಿ ಮಹಾತ್ಮ ಗಾಂಧಿಯವರು

ಬನಾರಸ ಹಿಂದೂ ವಿಶ್ವ ವಿದ್ಯಾಲಯದ ರಜತಮಹೋತ್ಸವಕ್ಕಾಗಿ ನಂತಿತ ನಾಳವೀಯವರು ಅರ್ಧ ಶತಮಾನ ದೇಶಸೇವೆಯನ್ನು ಮಾಡಿದುದರ ಸ್ಮರಣೋತ್ಸವಕ್ಕಾಗಿ ಮಹಾತ್ಮ ಗಾಂಧಿಯವರು ಕಾಶಿಗೆ ಈ ವಾರ ಬಂದಿರುವರು.

ಯುದ್ಧ ರಂಗದ ವಾರ್ತೆಗಳು

ಸಿಂಗಪುರ

ಜಪಾನರ ಭಯಂಕರ ಧಾಳಿ.

ಮಲಯ ಪ್ರದೇಶದಲ್ಲಿ ದಕ್ಷಿಣ ಭಾಗಕ್ಕೆ ಜಪಾನಿಯರ ಒತ್ತಡವು ಬಹಳ ಹೆಚ್ಚಾಗಿದೆ. ಅವರು ಸಿಂಗಪುರ ಸಮೀಪದ ಜೋಹೋರ ಪ್ರಾಂತ್ಯಕ್ಕೆ ಬಂದಿದ್ದು ಅಲ್ಲಿ ನಡಾಕ್ರಮದಿಂದ ಹೋರಾಡುತ್ತಿರುವ ೨೦ ಸಾವಿರ ಆಸ್ಟ್ರೇಲಿಯಾ ಸೈನಿಕರನ್ನು ಸುತ್ತುಗಟ್ಟಿರುವರೆಂದೂ ವಾರ್ತೆಗಳು ತಿಳಿಸುತ್ತಲಿವೆ. ಡಚ್ ಈಸ್ಟ ಇಂಡೀಸಕಡೆಯಿಂದ ಸಿಂಗಪುರವನ್ನು ಸುತ್ತುಗಟ್ಟುವ ಸಾಹಸವನ್ನು ಜಪಾನರು ಮಾಡುತ್ತಿರುವಂತೆ ಗೊತ್ತಾಗಿದೆ. ಜವಾನರ ವಿಮಾನ ದಾಳಿಯಿಂದ ಸಿಂಗಪುರದಲ್ಲಿ ನಾಗರೀಕರ ಆಸ್ಪತ್ರೆಗೂ ಮಿಲಿಟರಿ ಕೇಂದ್ರಗಳಿಗೂ ಹಾನಿಯಾಗಿರುವಂತೆ ಗೊತ್ತಾಗಿದೆ.

ಮಲಯಾದಲ್ಲಿ ಆಸ್ಟ್ರೇಲಿಯದ ಸೈನಿಕರು

ಜಪಾನರ ವತ್ತಾಯ

ಮಲಯಾದಲ್ಲಿ ಆಸ್ಟ್ರೇಲಿಯನರು ಜವಾನರನ್ನು ಪ್ರಚಂಡ ರೀತಿಯಲ್ಲಿ ಎದುರಿಸಿ ಹೋರಾಡುತ್ತಿದ್ದಾರೆಂದು ಸುದ್ದಿ ಬಂದಿದೆ.

ಅಲ್ಲಿನ ಆಸ್ಟ್ರೇಲಿಯಾ ದಳದ ದಂಡನಾಯಕರಾದ ಮೇಜರ್ ಬೆನೆಟ್‌ರವರು ತನ್ನ ಸಂಗ್ರಾಮ ಶಾಖಾ ಮಂತ್ರಿಗಳಿಗೆ ಸುದ್ದಿ ಕಳಿಸುತ್ತ ಆಸ್ಟ್ರೇಲಿಯಾ ಮತ್ತು ಸಾಮ್ರಾಜ್ಯ ಸೇನೆಗಳು ತಮ್ಮ ಸ್ಥಾನಗಳಿಗೆ ಬಂದು ನಿಂತೊಡನೆಯೇ ಶತ್ರುಗಳು ಟ್ಯಾಂಕುಗಳೊಂದಿಗೆ ಉಗ್ರ ಮುತ್ತಿಗೆಗೆ ಆರಂಭಿಸಿದರು. ಆದರೆ ಅವರನ್ನು ಹಿಂದಕ್ಕೆ ಅಟ್ಟಲಾಯಿತು. ಶತ್ರುಗಳು ಎರಡನೇ ಸಾರಿ ಮೇಲೆ ಬಿದ್ದಾಗಲೂ ಹಿಂದಕ್ಕೆ ಓಡಿಸಲಾಯಿತು. ಎಲ್ಲ ಕಡೆಯೂ ಆಸ್ಟ್ರೇಲಿಯನರು ಭದ್ರವಾಗಿ ನಿಂತು ಹೊಡೆದಾಡುತ್ತಿದ್ದಾರೆ, ಎಂದು ತಿಳಿಸಿದ್ದಾರೆ.

ಪರಿಸ್ಥಿತಿ ಕ್ರೂರವಾಗಿದೆ

ಇತ್ತೀಚೆಗೆ ಬಂದಿರುವ ವರ್ತಮಾನ ಪ್ರಕಾರ ಮಲಯಾದಲ್ಲಿ ಪರಿಸ್ಥಿತಿಯು ಬಹಳ ಕ್ರೂರವಾಗಿದೆ. ಜೊಹೋರ್ ಪ್ರಾಂತ್ಯದ ಮಧ್ಯದಲ್ಲಿರುವ ಆಸ್ಟ್ರೇಲಿಯಾ ಸೇನೆಯನ್ನು ಜವಾನರು ಆವರಿಸಿ, ಹತ್ತಿರ ಬರುತ್ತಿದ್ದಾರೆ.

ಜವಾನರು ಸಿಂಗಪ್ಪೂರದಿಂದ ೨೫ ಮೈಲಿಗಳಿಳಿಗಿರುವ ಯಾವ ಪ್ರದೇಶವನ್ನೂ ಹಿಡಿದಿಲ್ಲವೆಂಬುದಾಗಿ ಸುದ್ದಿ ಬಂದಿದೆ. ಶತ್ರುಗಳು ಸಿಂಗಪುರಕ್ಕೆ ಇನ್ನೂ ಹತ್ತಿರದಲ್ಲಿ ಬಂದಿಳಿದಿದ್ದಾರೆಂಬ ವಾರ್ತೆ ನಿಜವಲ್ಲ. ಮಲಯಾದ ರೈಲ್ವೆ ಮಾರ್ಗದಲ್ಲಿರುವ ಗೇಮಾಸ್ ಕ್ಷೇತ್ರದಲ್ಲಾಗಲಿ ಪರಿಸ್ಥಿತಿಯು ಬದಲಾವಣೆ ಹೊಂದಿಲ್ಲ.

ಮಾರ್ ಕ್ಷೇತ್ರದಲ್ಲಿರುವ ಆಸ್ಟ್ರೇಲಿಯಾ ಸೇನೆಗೆ ಸಹಾಯನೀಡಲೋಸುಗ ಇಲ್ಲಿಂದ ಹೆಚ್ಚಿನ ಬಲವನ್ನು ಕಳಿಸಿಕೊಡಲಾಗಿದೆ. ಶತ್ರುಗಳ ಒತ್ತಾಯ

ಮಾರ್ ಮತ್ತು ಸೆಗವಾಟ್ ಕ್ಷೇತ್ರಗಳಿರಡರಲ್ಲಿಯೂ ಶತ್ರುಗಳ ಒತ್ತಾಯವು ಬಲವಾಗಿಯೇ ಇದೆ. ಮಾರ್ ಕ್ಷೇತ್ರದಲ್ಲಿ ಶತ್ರುಗಳು ಅನೇಕ ಮುಂದಿ ಯೋಧರನ್ನು ಇಳಿಸಿ, ಸಮುದ್ರತೀರದಲ್ಲಿಯೇ ದಕ್ಷಿಣದ ಕಡೆಗೆ (ಸಿಂಗಪುರ್ ಕಡೆಗೆ) ಕಳಿಸಲು ಸಮರ್ಥರಾದರು. ಈ ಪರಿಸ್ಥಿತಿಯನ್ನು ಎದುರಿಸಲು ಬ್ರಿಟಿಷ್ ಪಡೆಗಳನ್ನು ಕೊಂಚವಾಗಿ ಹಿಂದಕ್ಕೆ ಕರೆಸಬೇಕಾಯಿತು.

ಬ್ರಿಟಿಷ್ ವಿಮಾನಗಳ ಕಾರ್ಯಕ್ರಮ

ಗ್ರೆಮಾಸ್ ಬಳಿ ಜಪಾನರನ್ನು ತಡೆಯುವುದರಲ್ಲಿ ಬ್ರಿಟಿಷ್ ವಿಮಾನಗಳು ಬಹಳ ಮುಖ್ಯ ಪಾತ್ರವಹಿಸಿದ್ದವು. ಶತ್ರುಗಳ ಗುಂಪಿನಮೇಲೆ ಬಾಂಬುಗಳನ್ನು ಸುರಿಸಲಾಯಿತು. ಇದೇ ಈಗಿನ ವಿಪತ್ಕಾರಕ ಸ್ಥಾನವಾಗಿದೆ. ಯಾ ಕೆಂದರೆ ಮಾರ್ ನಿಂದ ಭೂಟುಪಹಾವ್‌ವರೆಗೆ ಅಂದರೆ ೫೦ ಮೈಲಿ ದೂರ ಸಮುದ್ರತೀರದಲ್ಲಿ ಶತ್ರುಗಳು ಎಲ್ಲಿ ಬೇಕಾದರೂ ಬಂದಿಳಿಯಲು ಸ್ಥಳವು ಅನುಕೂಲವಾಗಿದೆ. ಭೂಟುಪಹಾಟ್‌ದಿಂದ ಕೆಳಕ್ಕೆ ಸಿಂಗಪುರದವರೆಗೆ ಭೂಮಿಯು ಜೌಗಾಗಿದೆ. ಆದ್ದರಿಂದ ಮಾರ್ ಮತ್ತು ಬೂಟು ಪಹಾಟುಗಳ ನುಣ್ಣೆ ಇಳಿದು ಒಳ ಪ್ರದೇಶಕ್ಕೆ ನುಗ್ಗಿ ಕೇಂದ್ರ ಜೊಹೋರ್ ನಲ್ಲಿರುವ ಬ್ರಿಟಿಷ್ ಸ್ಥಾನಗಳನ್ನೂ ಹಿಡಿಯಲು ಶತ್ರುಗಳು ಯತ್ನಿಸುತ್ತಿದ್ದಾರೆಂದು ಕಾಣಬರುತ್ತಿವೆ.

ಜಪಾನರು ತಮ್ಮ ಸೇನೆಗಳನ್ನು ತಂದಿಳಿಸಲು ಇನ್ನೂ ಹಳೆಯ ಸಂಗ್ರಾಮ ನೌಕೆಗಳನ್ನೇ ಉಪಯೋಗಿಸುತ್ತಿದ್ದಾರೆ. ಮುಂದೆ ಅಮೇರಿಕಾ ಮತ್ತು ಬ್ರಿಟನ್ನುಗಳ ನೌಕಾಬಲಗಳೊಡನೆ ಹೋರಾಡಲು ಹೊಸ ನೌಕೆಗಳನ್ನೆಲ್ಲ ಜವಾನರು ಮೀಸಲಾಗಿರಿಸಿದ್ದಾರೆಂದು ತಿಳಿದುಬಂದಿದೆ. ಮುಳ್ಳಿ ಟೋಕಿಯೋ ಕೊ

ಅಮೇರಿಕ ಸಬಾಮೇರೀನು ೩ ಶತ್ರು ಹಡಗುಗಳನ್ನು ಮುಳುಗಿಸಿದುದನ್ನು ಕಂಡು ಜಪಾನರು ಆಶ್ಚರ್ಯಚಕಿತರಾಗಿರಬೇಕು.

ಜನರ ವಿಶ್ವಾಸವೇ ಛ

ಓರಿಯಂಟಲ್ ಕಂಪನಿಯನ್ನು

ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾರ್ಪಡಿಸಿದೆ.

ಜಾರಿಯಲ್ಲಿರುವ ವಿಮೆ 31-12-40 ಕ್ಕೆ ಕೋಟಿಗಿಂತಲು ಹೆಚ್ಚು.

ನಿಧಿಯ ಪ್ರಮಾಣ .... ,, 27½

ವಾರ್ಷಿಕ ಆದಾಯ ,, 4¾

ಅತ್ಯಂತ ಆಕರ್ಷಣೀಯವಾದ ನಮ್ಮ ವಿಮಾ ಯೋಜನೆಗಳ

ಪೂರ್ಣ ವಿವರಗಳನ್ನುಳ್ಳ ವಿಮಾ ವಿವರ ಪುಸ್ತಕ
(Prospectus)ಕ್ಕಾಗಿ ಕೆಳಗಿನವರಿಗೆ ಒರೆಯಿರಿ

ದಿ ಚ್ಯಾಂಚ್ ಸೆಕ್ರಟರಿ

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈವ್ ಅಶೂರೆನ್ಸ್ ಕಂಪನಿ ಲಿಮಿಟೆಡ್,
ಆರ್ಮೀನಿಯನ್ ಸ್ಟ್ರೀಟ್, ಮದ್ರಾಸು

ಅ॥ ಇನ್ಸೈಕ್ಟರ್, ಓರಿಯಂಟಲ್ ಲೈಫ್ ಆಫೀಸು
312 ರೂಪರ್ಟಸ್ ಗೇಟ್ ಬ್ರೂಸಪೇಟ ಬಳ್ಳಾರಿ.

ಮುಖ್ಯ ಕಾರ್ಯಾಲಯ, **ಹಿಂದೂಸ್ಥಾನದಲ್ಲಿ ಸ್ಥಾಪಿತ.**
ಬೊಂಬಾಯಿ. **1874.**

ಸ್ಯಾಗಿನಿ ಮತ್ತು ಶಬಾಂಗ್ ಮೇಲೆ ಮುತ್ತಿಗೆ:—

ಸ್ಯಾಗಿನಿ ದ್ವೀಪದಲ್ಲಿರುವ ರಬಾಲ ನಗರದ ಮೇಲೆ ಜಪಾನರು ಭಯಂಕರ ಮುತ್ತಿಗೆ ನಡೆಸಿದರು. ಶತ್ರುವಿಮಾನಗಳು ವಿಮಾನವಾಹಕ ಹಡಗಿನಮೇಲಿಂದ ಬಂದು ಅಲೆಗಳಲಿ ಮುತ್ತಿಗೆನಡೆಸಿದವು. ಮಿಲಿಟರಿ ಸ್ಥಾನಗಳಿಗೂಕೂಡ ನಷ್ಟವಾಗಿದೆಯೆಂದು ಹೊತ್ತಾಗಿದೆ ಡಚ್ ಇಂಡೀನ್ ಸರಕಾರದವರು ಹೊರಡಿಸಿರುವ ಪ್ರಕಟನೆಯ ಪ್ರಕಾರ ತಮಗೆ ಸೇರಿದ ಸಬಾಂಗ ಒಂದರಿನ ಮೇಲೆ ಬಾಂಬುಗಳನ್ನು ಶತ್ರುಗಳು ಒಗೆದರೆಂದು ಹೇಳಲಾಗಿದೆ ಉತ್ತರ ಸುಮಾತ್ರಾ ದ್ವೀಪದ ಪಶ್ಚಿಮತೀರದಲ್ಲಿನ ಸೀಬೂಲಾ ಎಂಬಲ್ಲಿ ಜಪಾನರು ಬಾಂಬುಗಳನ್ನು ಹಾಕಿ ಅಲ್ಲಿ ನೆಲೆಸ್ಥಾಪನೆ ಮಾಡಿದರು.

ಬರ್ಮಾದ ರಣಾಂಗ

'ಟೆನಾಯ' ನಗರವು ಶತ್ರುಗಳ

ವಶವಾಗಿರುವ ವಿಮಾನಗಳು ಬಂದಿದ್ದವಾಗಲಿ ವಿಮಾನಗಳು ಬೊಂಬಾಯಿಯಿಂದ ಬಾಂಬುಗಳ ದಾಳಿಯು ವಿಶೇಷವಾಗಿಲ್ಲದ ಕ್ಷಿಣ ಬರ್ಮಾದಲ್ಲಿನ ಸೈನ್ಯಗಳಿಗೆ ನಗರದ ಮೇಲೆ ಎರಡುಸಲ ಮುತ್ತಿಗೆಯಾಯಿತು ಮೊದಲನೆಯ ಮುತ್ತಿಗೆಯಲ್ಲಿ ೧೯ ಜನರು ಸತ್ತರು. ಎರಡನೆಯಸಲ ಬಹಳ ಅವಾಯವಾಗಲಿಲ್ಲ ರಂಗೂನಿನಿಂದ ಬಂದ ಸುದ್ದಿಯ ಪ್ರಕಾರ 'ಟೆನಾಯ' ದಿಂದ ಬ್ರಿಟಿಷ್ ಸೇನೆಗಳು ಹಿಂದೆಸರಿದವೆಂದು ಹೊತ್ತಾಗಿದೆ ಶತ್ರುಬಲವು ಅಧಿಕವಿದ್ದಕಾರಣ ಹಿಂದೆ ಸರಿಯಬೇಕಾಯ್ತೆಂದು ತಿಳಿದು ಬಂದಿದೆ ಅಂತೂ ಈ ನಗರದ ನರ್ತಮಾನ ಸಂಬಂಧವು ತಪ್ಪಿಹೋಯಿತು

ಟೆನಾಯ ಕ್ಷೇತ್ರದಲ್ಲಿರುವ ಟ್ರಿಮು ತ್ತು ಪ್ರಂಟ್ ಗಳಿಗೆ ಗತಿಯೇನಾಯಿತೋ ತಿಳಿಯದು ಆಬ್ಬೆಯಗಲಿಗಾಗಿಯೇ ಜವಾರು ಅಲ ಎಂಬಹಾಕಿರಬೇಕು ಟವಾಯ್‌ನಿಂದ ಬ್ರಿಟಿಷರು ಯಾನಸ್ಥಾನಕ್ಕೆ ಹಿಮ್ಮೆಟ್ಟಿರುವರೋ ಗೊತ್ತಿಲ್ಲ ಬಹುಶಃ ಉತ್ತರಕ್ಕೆ ಹಿಮ್ಮೆಟ್ಟಿರ ಬಹುದು ಟವಾಯ್ ಕ್ಷೇತ್ರದಲ್ಲಿ ಬ್ರಿಟಿಷರ ಬಲವು ಅಧಿಕವಾಗಿತ್ತು ಸಂಖ್ಯೆಗಿಂತ ಬಹಳ ಹತ್ತಿರದಲ್ಲಿ ಈ ಭಾರಿ ಪ್ರಮಾಣದ ದೌರ್ಬಲ್ಯಕ್ಕೆ ಕಾರಣವಾಯಿತು. ಮಿಟ್ಟೆಯಾದಲ್ಲಿ ಹೊಡೆದಾಟವಾಗುತ್ತಿದ್ದರೂ ಪರಿಸ್ಥಿತಿಯು ಸಮಗೆ ಅನುಕೂಲವಾಗಿದ್ದರೂ ಸಹ ಜಪಾನರು ಟೆಕಾಯ್ ಟವಾಯ್ ಮೇಲೆ ಬಿದ್ದು ಅದನ್ನು ಹಿಡಿದರು. ಫ್ಲೈಲಿಂಡ್ ಯೋಧರು ಇದರಲ್ಲಿ ಭಾಗವಹಿಸಿದ್ದರೆಂಬುದು ಈಗ ಗೊತ್ತಾಗಿದೆ.

ಮುದ್ರತೀರಕ್ಕೆ ಸುಗ್ಗಲು ಜಪಾನರ ಪ್ರಯತ್ನ

ಟೆನಾಸರಿಂ ಮಧ್ಯಭಾಗದಲ್ಲಿ ಛರ್ಚಣನಾಯಿತೆಂಬ ವಾರ್ತೆ ಬಂತಲ್ಲ. ಬರ್ಮಾದ ದಕ್ಷಿಣದ ಕೊನೆಯಲ್ಲಿರುವ ವಿಕ್ಟೋರಿಯಾ ಪಾಯಿಂಟನ್ನು ಶತ್ರುಗಳು ಹಿಡಿದ ಮೇಲೆ ಇಂತಹ ಹೊಡೆದಾಟವನ್ನು ಜಪಾನರು. ಬರ್ಮಾದಲ್ಲಿ ನಡೆಸಿರಲಿಲ್ಲ. ಮಿಟ್ಟೆಯಾ-ಟವಾಯ್ ರಸ್ತೆಯಲ್ಲಿ ಹೊಡೆದಾಟ ನಡೆಯುತ್ತಿರುವುದನ್ನು ನೋಡಿದರೆ ಸಮುದ್ರತೀರದಲ್ಲಿ ಮುಂದೆ ನುಗ್ಗಿ ಉತ್ತರ ಟೆನಾಸರಿಮ್ ಕ್ಷೇತ್ರವನ್ನು ದಕ್ಷಿಣಭಾಗದಿಂದ ಪ್ರತ್ಯೇಕಿಸಬೇಕೆಂದು ಜಪಾನರು ಆಲೋಚಿಸಿರುವಂತಿದೆ. ಉದ್ದವಾದ ಮತ್ತು ಇಕ್ಕಟ್ಟಾದ ಭೂಭಾಗದ ರಕ್ಷಣೆಗಾಗಿ ಶತ್ರುಪಡೆ ವಿಮಾನಬಲವಿತರಿಸಲಾಗಿದೆಯೆಂದು ತಿಳಿದು ಬಂದಿದೆ. ಶತ್ರುಸ್ಥಾನಗಳಿಗೆ ಈ ಭಾಗವು ಬಹಳ ಹತ್ತಿರದಲ್ಲಿದ್ದು ಕೆಲವು ಕಡೆ ೪೫ ಮೈಲಿಯಷ್ಟು ಕೂಡ ಅಗಲವಿಲ್ಲದೇ ಇರುವುದರಿಂದ ಕೆಳಭಾಗದ ಪ್ರದೇಶಗಳ ಮೇಲೆ ಶತ್ರುಗಳು ವಿಕಾವಿಕಿ ಬೀಳಲು ಅವಕಾಶವಿದೆ.

ಭಾರತೀಯ ಕೂಲಿಗಾರರು ರಂಗೂನ್ ಬಿಡುತ್ತಿದ್ದಾರೆಂದು ಭಾರತೀಯ ಏಜಂಟರು ಅವರನ್ನು ಪ್ರೋಮು ರಸ್ತೆಯ ಮೂಲಕ ಮೈಲಿ ದೂರದಲ್ಲಿ ನಿಲ್ಲಿಸಿ, ರಂಗೂನಿಗೆ ಹಿಂದಿರುಗಬೇಕೆಂದು ಬೋಧಿಸಿದರಂತೆ ಅವರಿಗೆ ಸರಕಾರದವರು ಆಹಾರವನ್ನು ಕಳುಹಿಸುತ್ತಿದ್ದಾರೆ.

ಬರ್ಮಾದ ಮಂತ್ರಿವರ್ಗ

ಬರ್ಮಾದ ಪ್ರಧಾನ ಮಂತ್ರಿಗಳಾಗಿದ್ದ ಯು ಸಾರವರನ್ನು ಅನರಿಗಿರುವ ಜಪಾನೀ ಸಂಬಂಧಕ್ಕಾಗಿ ಬಂಧಿಸಲಾಗಿದೆಯೆಂದು ಬ್ರಿಟಿಷ್ ಸರಕಾರದವರು ಪ್ರಕಟಿಸಿದರು ಈ ಕಾರಣ ಬರ್ಮಾ ಗವರ್ನರರು ಸರ್-ಪಾ-ಟೂನರವರನ್ನು ಮಂತ್ರಿ ಹೊಸ ಮಂತ್ರಿ ಇದಕ್ಕೆ ಕೆಲವು ಅಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ

142

ಬಳ್ಳಾರಿ
ಜಿಲ್ಲಾ ಬೋರ್ಡು ಸಭೆ

"ಜಿಲ್ಲಾ ಪಂಚಾಯ್ತಿ ಆಫೀಸರನ್ನು ಇಲ್ಲಿಂದ ತೊಲಗಿಸಿರಿ"

ಶ್ರೀ ಸಿ. ರಾಜಗೋಪಾಲಾಚಾರ್ಯರಿಗೆ ಮಾನಪತ್ರ

೨೦ ನೆಯ ತಾ|| ಮಂಗಳವಾರ ಸಾಯಂಕಾಲ ಜಿಲ್ಲಾ ಬೋರ್ಡು ಭವನದಲ್ಲಿ ಸಭೆಯು ಕಲೆತಿದ್ದಿತು. ಜಿಲ್ಲಾ ಪಂಚಾಯ್ತಿ ಆಫೀಸರ್‌ರವರ ಪ್ರಕರಣವೇ ಒಂದು ಘಂಟೆಗಿಂತ ಹೆಚ್ಚಿನ ಕಾಲವನ್ನು ಭಕ್ಷಿಸಿತು. ಬಳ್ಳಾರಿ ಜಿಲ್ಲಾ ಬೋರ್ಡು ಸಭೆ ತಮ್ಮ ಆ ತಿಂಗಳ ಸಭೆಯಲ್ಲಿ ಅನಫಯಲ್ಲಿ ೭ ಜನ ಪಂಚಾಯ್ತಿ ಬೋರ್ಡು ಅಧ್ಯಕ್ಷರನ್ನು ತೆಗೆದುಹಾಕಲು, ೧೨ ಪಂಚಾಯ್ತಿ ಬೋರ್ಡುಗಳನ್ನು ತಾತ್ಕಾಲಿಕವಾಗಿ ರದ್ದುಮಾಡಲು ಪಂಚಾಯ್ತಿ ಆಫೀಸರ್‌ರವರಾದ ಶ್ರೀ ಆರುಣಾಚಲಮುದಲಿಯಾರರು ಸಿಫಾರಸ್ಸು ಮಾಡಿದರೆಂದೂ, ಸರಕಾರದ G. O. ಇದ್ದಕೂಡಲೆ ಪೈಸ ಪೈಸಿಜೆಂಟರು ಥಾರ್ಜಿಸಲಾಗಿ ಕರೆಸಿದರೆ ಬರಲಿಲ್ಲವೆಂದೂ, ಇವರು ಅಧಿಕಾರದಲ್ಲಿ ಅಕ್ಷಮ್ಯವಾದ ತೋಷಗಾರರು, ನನೆಂದೂ, ಇವರು ಉದ್ಧಟತನದಿಂದ ವರ್ತಿಸಿದರೆಂದೂ, (Highhanded ness) ನವಸ್ಯರ ಪ್ರಶ್ನೆಗಳಿಗೆ ಸರಿಯುತ್ತರಗಳಿಂದ ನಕ್ಷತ್ರಪಟ್ಟಿ ಮಾಡಿಲ್ಲವೆಂದೂ, ಪೈಸಪೈಸಿ ತೆಂಟರ ಕರೆಯಿಂದ ತಮ್ಮ ಸಾ ಕರೆಯಲಿಕ್ಕೆಬಂದವನು 'ಜಂಗಿಕೋರ'ನಿದ್ದಂತೆ (Rowdy) ಇದ್ದನೆಂದೂ, ಪಂಚಾಯ್ತಿ ಆಫೀಸರನು ಉತ್ತರಕೊಡುವಾಗ, ಉರಿಯುವ ಬೆಂಕಿಯಲ್ಲಿ ಎಣ್ಣೆಹಾಕಿದಂತಾಗಿ ಬಿಡುವನೆಂದೂ ಎದ್ದರು. ಜಿಲ್ಲಾ ಬೋರ್ಡಿನ ಸರ್ವಿಸ್‌ನಲ್ಲಿ 'ರೌಡಿ' ಗಳ್ಯಾರೂ ಇಲ್ಲವೆಂಬ ಉತ್ತರವು ಸಾರಾಂಶದಲ್ಲಿ ಕೊಡಲಾಯಿತು. ಪೈಸ್‌ಪೈಸಿಜೆಂಟರನ್ನು ತಾವು ನೋಡಲೆ ಇದ್ದುದಕ್ಕಾಗಿ ಪಂಚಾಯ್ತಿ ಆಫೀಸರನು ನಿವಾಸನನ್ನು ಕಳಚಿಸಿದರು. ಪ್ರಶ್ನಾವಳಿಯಿಂದ ಬಹಿರ್ಗತವಾದ ಅನ್ಯಸನ್ನಿವೇಶವನ್ನು ಹೋಗಲಾಡಿಸಲು ಜಿಲ್ಲಾ ಪಂಚಾಯ್ತಿ ಆಫೀಸರನರನ್ನು ಈ ಜಿಲ್ಲೆಯಿಂದ ಬೇರೆ ಕಡೆ ವರ್ಗಾಯಿಸಲು ಜಿಲ್ಲಾ ಬೋರ್ಡು ಅಧ್ಯಕ್ಷರು ಸರಕಾರಕ್ಕೆ D. O. ಬರೆಯಬೇಕೆಂಬರ್ಥವುಳ್ಳ ತೀರ್ಮಾನವಾಯಿತು. ಈ ತೀರ್ಮಾನವಾದೊಡನೆಯೇ ಜಿಲ್ಲಾ ಪಂಚಾಯ್ತಿ ಆಫೀಸರರವರು ಅಧ್ಯಕ್ಷರ ಅಪ್ಪಣೆ ತೆಗೆದುಕೊಂಡು ಗಾಡಿಯಲ್ಲಿ ಕುಳಿತರು.

ಮದ್ರಾಸ ಪ್ರಾಂತ್ಯದ ಹಿಂದಿನ ಪ್ರಧಾನ ಮಂತ್ರಿಗಳಾದ ಶ್ರೀ|| ಸಿ. ರಾಜಗೋಪಾಲಾಚಾರಿಯವರು ೬-೨-೪೨ನೆ ತಾ|| ಬಳ್ಳಾರಿಗೆ ಬಂದಾಗ ಅವರಿಗೆ ಮಾನಪತ್ರವನ್ನರ್ಪಿಸಬೇಕೆಂದೂ, ಮಹಾತ್ಮ ಗಾಂಧಿಯವರ ಶಿಲಾ ಮೂರ್ತಿಯನ್ನು ಬೋರ್ಡು ಭವನದಲ್ಲಿ ರಾಜಾಜಿಯವರ ಹಸ್ತದಿಂದ ಅನಾವರಣಮಾಡಿಸಬೇಕೆಂದೂ ನಿಶ್ಚಿತವಾಯಿತು.

ಕಂಬಳದಿನ್ನೆ ಕ್ಷಾಮನಿಕೇಂದ್ರ

ಆದವಾನಿಯಿಂದ ಶ್ರೀ ಎಂ ಭೀಮಸೇನರಾಯರು ಹೀಗೆ ಬರೆಯುತ್ತಾರೆ.

"ಕ್ಷಾಮವು ಪ್ರಾರಂಭವಾದ ಮೊದಲನೆಯ ವಾರದಲ್ಲಿಯೇ ೩೨೦೦ ಜನರು ಕೆಲಸಗಳಿಗಾಗಿ ಬಂದರು. ೬-೧-೪೨ ನೆಯ ದಿನ ಅದು ೫೩೦೦ ಕ್ಕೆ ಏರಿತು. ೧೦ನೆಯ ತಾ. ನವರೀ ಸಂಖ್ಯೆಯು ೬೨೦೦ ಕ್ಕೆ ಬಂದಿತು. ಕೆಲಸಗಾರರು ೧೦ ರಿಂದ ೧೬ ಮೈಲಿಗಳವರೆಗೆ ಕೂಲಿಗಾಗಿ ಹೋಗಬೇಕೆಂದರೆ ಅದು ಹೇಗೆ ಸಾಧ್ಯ. ಈ ಕಾರಣ ಕ್ಯಾಮುಕೇಂದ್ರದ ಜನರು ದೂರ ದೂರ ಪ್ರದೇಶಗಳಿಗೆ ಜೀವನಾರ್ಥವಾಗಿ ಹೋಗುತ್ತಿರುವರು. ೧೨ ನೆಯ ತಾ. ನಿಂತ ಸಂಖ್ಯೆಯು ಕ್ಷೀಣವಾಗುತ್ತಾ, ೧೭ ನೆಯ ತಾ. ಅದು ೧೨೦೦ ಕ್ಕೆ ಇಳಿಯಿತು ನವಸ್ಯಾಸವರ ಅನಿವೇಳತೆಸದಿಂದ, ೧೦ ಮೈಲಿ ದೂರ ನಡೆದುಕೊಂಡು ಹೋಗಿ ನಿತ ಭರಣವನ್ನು ಸಾಗಿಸಬೇಕೆಂದರೆ ಸಾಧ್ಯವಾಗುವುದಿಲ್ಲ. ಕಂಬಳದಿನ್ನೆಯಿಂದ ಪೆದ್ದಕತುಮೂರು, ಕಪ್ಪಿ ಸಾರ್ಗವಾಗಿ ರಸ್ತೆ ಹಾಳಿನವರೆಗೂ, ನೂವನರ ಮತ್ತು ಕೋಳಿಗಿಯ ೬ ಮೈಲಿ ರಸ್ತೆ ಮತ್ತು ಪೆದ್ದತುಂಬಳ ಕೋಳಿಗಿ ರಸ್ತೆಗಳ ರಿಪೇರಿಯಿಂದ ಸಂಕಷ್ಟ ಜನರಿಗೆ ಸಹಾಯ ಮಾಡಿದಂತಾಗುತ್ತದೆ. ಈ ವಿಷಯಕ್ಕೆ ಸರಕಾರೀ ಅಧಿಕಾರಿಗಳು ತಕ್ಷಣ ಗಮನಕೊಡಬೇಕು."

ಉಪಾಧ್ಯಾಯ ಸಂಘಗಳಿಂದ ಲಾಭವಾಗಿಲ್ಲ

ಇನ್ನು ಮೇಲಾದರೂ ಜಾಗೃತರಾಗಿರಿ

'ನವಭಾರತ' ಸಂಪಾದಕರಿಗೆ

ಸರಕಾರವು ಪ್ರಜೆಗಳ ಹಿತಕ್ಕಾಗಿರುವುದರಿಂದ ಪ್ರಜಾವರ್ಗವು ಸರಕಾರದವರಿಗೆ ತಕ್ಕ ಸಲಹೆ ಸೂಚನೆಗಳನ್ನು ಕೊಡಬೇಕು. ಸಂಬಂಧನೆಗಳ ತಿಳುವಳಿಕೆಯು ಸಾಲದೆ, ಅಧಿಕಾರಿಗಳ ಭಯದಿಂದ ವಿದ್ಯಾ ವಿಷಯದಲ್ಲೂಕೂಡ ಸರಕಾರದವರಿಗೆ ಉಪಾಧ್ಯಾಯ ವರ್ಗವು ಸಲಹೆ ಕೊಡುತ್ತಿಲ್ಲ. ಪ್ರಜಾವರ್ಗದಲ್ಲಿ ಒಂದೊಂದು ಶಾಖೆಯವರು ಒಂದೊಂದು ಭಾಗದ ಲ್ಲೋಸ್ಕರ ೧ ಪಕ್ಷ ಗಳ ನಿವಾರಣೆಗಾಗಿ ಯತ್ನಿಸುತ್ತಿರುವರು. ನಾವು ವಿದ್ಯಾಖಾತೆಯಲ್ಲಿದ್ದು ತಕ್ಕ ಸೂಚನೆಕೊಡದಿದ್ದರೆ ಸರಕಾರವಾದರೂ ಏನು ಮಾಡೀತು? ಕೆಲ ಸಂದರ್ಭಗಳಲ್ಲಿ ಅನಾವಶ್ಯಕವಾದ ಅನಪೇಕ್ಷಿತವಾದ ನಿಯಮಗಳು ನನ್ನ ಮೇಲೆ ಹೇರಲ್ಪಟ್ಟು ನಾವು ಅವನ್ನೇ ಕಾರ್ಯರೂಪಕ್ಕೆ ತರಬೇಕಾಗುತ್ತದೆ.

ದತ್ತಮಂಡಲದ ಭಾಗದಲ್ಲಿ ನನ್ನ ಅನುಭವದ ಪ್ರಕಾರಕ್ಕೆ ವಿವಿಧ ಉಪಾಧ್ಯಾಯ ಸಂಘಗಳು ನಾಮ ಮಾತ್ರವಾಗಿವೆಯಾಗಲಿ ಅವುಗಳಿಂದ ಸರಕಾರಕ್ಕೆ ಉಪಯುಕ್ತ ಮತ್ತು ಬೆಲೆಯುಳ್ಳ ತೀರ್ಮಾನಗಳೇ ಹೋಗಿಲ್ಲ. ಸರಕಾರದವರು ಅವನ್ನು ಅನುಸರಿಸಬೇಕಾದ ಸಂದರ್ಭವೂ ಒದಗಿಲ್ಲ. ಮೇಲ್ಪಟ್ಟ ಅಧಿಕಾರಿಗಳ ಮತ್ತು ಸಿಯವರಗಳ ತೃಪ್ತಿಗೆ ಮಾತ್ರ ಇವು ವ್ಯರ್ಥ ಸಭೆಗಳನ್ನು ಕೂಡಿಸುತ್ತವೆ. ಈ ಭಯದಿಂದ ಏನು ಪ್ರಯೋಜನ? ಬಹಿರಂಗಸಭೆಯಲ್ಲಿ ತೀರ್ಮಾನಗಳಮೂಲಕ ಮೇಲಧಿಕಾರಿಗಳಿಗೆ ಸೂಚನೆಗಳನ್ನು ಕೊಡುವುದರಿಂದ ವಿದ್ಯಾಧಿಕಾರಿಗಳ ಅಪ್ರೀತಿಗೆ ಪಾತ್ರರಾಗುವರೆಂಬ ಭಯವನ್ನು ತೊರೆದು, ಇನ್ನುಮೇಲೆ ಉಪಾಧ್ಯಾಯಸಂಘಗಳು ಕಾರ್ಯರಂಗಕ್ಕಿಳಿಯಬೇಕೆಂದು ನನ್ನ ಕೋರಿಕೆ. ತಮ್ಮ

ರಾಮಜೀ ಹನುಮಂತರಾವ್
ಆದವಾನಿ.

ರಾಮಸಾಗರ

ರಾಜಕೀಯ ಸಭೆ

೧೯ ನೆಯ ತಾ|| ಸೋಮವಾರ ಸಾಯಂಕಾಲ ಈಶ್ವರ ದೇವಸ್ಥಾನದ ಬಯಲಿನಲ್ಲಿ ಶ್ರೀ ಬಿ. ವಿಶ್ವನಾಥಸಿಂಗರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿದ್ದಿತು. ಸುಮಾರು ೪೦೦ ಜನರು ಕೆಲೆತಿದ್ದರು. ಬಳ್ಳಾರಿಯಿಂದ ನವಭಾರತ ಪತ್ರಿಕೆಯ ಸಂಪಾದಕರಾದ ಶ್ರೀ ಕೇಶವರಾಯರು ಈಗ ನಡೆಯುತ್ತಿರುವ ಯುದ್ಧ ವಿಧಾನ ಮತ್ತು ಹಿಂದೂಸ್ಥಾನದ ನದ್ಯದ ರಾಜಕೀಯ ಪರಿಸ್ಥಿತಿಯನ್ನು ವಿಸ್ತಾರವಾಗಿ ಹೇಳಿ ಎಲ್ಲರೂ ಕಾಂಗ್ರೆಸ್ ವಿಧಾಯಕ ಕ್ರಮಕ್ಕೆ [illegible] ಲನವನ್ನು ಕೊಡಬೇಕೆಂದು ಹೇಳಿದರು. ನಂತರ ಸಾತರಂ ಪ್ರಾರ್ಥನೆಯಿಂತರ ಜಯಘೋಷದಿಂದ ಸಭೆಯು ಮುಕ್ತಾಯವಾಯಿತು.

ಹರಿಜನ ವಿದ್ಯಾರ್ಥಿ ನಿಲಯದ ಪೋಷಕರು.

ಶ್ರೀ ಪೊದ್ದಂ ವೆಂಕಟಿ ಸುಬ್ಬಯ್ಯ
ಶ್ರೇಷ್ಠಿ,
ಮರ್ಚೆಂಟ್, ಬಳ್ಳಾರಿ.

ಶ್ರೀ ಜೊನ್ನಗಡ್ಡೆ ವೀರಣ್ಣ
ಶ್ರೇಷ್ಠಿ,
ಮರ್ಚೆಂಟ್-ಬಳ್ಳಾರಿ.

ಮೇಲ್ಕಾಣಿಸಿದ ಮಹನೀಯರು ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘದಾಶ್ರಯದಲ್ಲಿ ನಡಯಿಸಲ್ಪಡುವ ಜಿಲ್ಲಾ ಹರಿಜನ ವಿದ್ಯಾರ್ಥಿ ನಿಲಯಕ್ಕೆ ರೂ. 50 – ದಾನ ಕೊಟ್ಟು ಪ್ರಧಾನ ಪೋಷಕರಾಗಿರುವರು.

ರಾಯಲಸೀಮ ಬ್ಯಾಂಕು,
(ಲಿಮಿಟೆಡ್.)
ಮುಖ್ಯ ಕಾರ್ಯಾಲಯ, **ಬಳ್ಳಾರಿ.**

ಇಲ್ಲಿಯವರೆಗೆ ಆದ ಪ್ರಗತಿ.

ಡಿಪಾಜಿಟ್ಟುಗಳು.	31-10-40	31-12-41
ಫಿಕ್ಸೆಡ್	ರೂ Nil	89,930
ಚಾಲ್ತಿ	,, 3,173	16,648
ಸೇವಿಂಗ್ಸು	,, 1,231	17,086
ಇತರ	,, 40	97
ಸಾಲಗಳು.		
ಭಂಗಾರ	,, 520	26,687
ಮೂಲು	,, Nil	29,316
ಇತರ	,, Nil	6,227
ಇತರಆಸ್ತಿ.		
ಸರ್ಕಾರದ ಬಾಂಡುಗಳು	,, 13 300	32 476
ಬ್ಯಾಂಕುಗಳಲ್ಲಿರುವ ಹಣ	,, 32,502	14,716
ಕೈಯ್ಯಲ್ಲಿ ನಗದು	,, 5770	30,802

ಒಟ್ಟು ವ್ಯವಹಾರದ ಮೊತ್ತ.

31—10 —40.	31 —12 —41.
ರು 1 14 77400	ರು. 2.24.113-0-0

1 ತಿಮ್ಮನಚರ್ಲ ೭ ಕೂಟ್ಟೂರು. ೨ ಉರವಕೊಂಡ. ೪ ಎತ್ತಿನಹಾಳ
ಹೆಚ್. ಶೇಷಾರಾಮರೆಡ್ಡಿ,, ಬಿ. ಎ ಬಿ ಎಲ್. (ಎಂ ಎಲ್ ಎ)
ಶೆಡ್ಯೂಲ್ಡ್ ಬ್ಯಾಂಕುಗಳ ಮೇನೇಜರ್ ಅಧ್ಯಕ್ಷರು
ಬಿ. ವಿ. ಶೇಷಗಿರಿರಾವ್, ಬಿ ಕಾಂ ಕಾರ್ಯದರ್ಶಿ

ಬಳ್ಳಾರಿ

ಭಗವದ್ಗೀತೋಪನ್ಯಾಸ

೨೧ ನೆಯ ಗುರುವಾರ ಸಾಯಂಕಾಲ ೫ ಘಂಟೆಗೆ ಅರ್ಯ ವೈಶ್ಯಯುವಜನಸಂಘಾಶ್ರಯದಲ್ಲಿ ಬನಗಾನಪಲ್ಲಿ ಶ್ರೀ ಹಂಸಾನಂದ ಸ್ವಾಮಿಗಳು 'ಭಗವದ್ಗೀತೆ' ಯನ್ನು ಕುರಿತು ಉಪನ್ಯಾಸಮಾಡಿದರು. ಭಾವಣವು ಶ್ರೀ ಸುಬ್ಬಾಶಾಸ್ತ್ರಿಗಳವರ ಮನೆಯಲ್ಲಿ ಕನ್ಯಕಾಪರಮೇಶ್ವರಿ ದೇವಾಲಯದಲ್ಲಿ ಏರ್ಪಾಟಾಗಿದ್ದಿತು. ಉಪನ್ಯಾಸಕರು ಮೂಢಭಕ್ತಿಯುತವಾದ ಪೂರ್ವಾಚಾರಗಳನ್ನೆಲ್ಲಾ ಖಂಡಿಸುತ್ತಾ ಈ ಊರಿನಲ್ಲಿ ನಡೆಯುತ್ತಿರುವ ಹುಲಿಗೆಮ್ಮನ ಉತ್ಸವವು ಮೋಸವೆಂದೂ, ವಿದ್ಯಾವಂತರಾದ ಸ್ತ್ರೀ ಪುರುಷರು ಇಂಥಹವುಗಳಿಗೆ ಪ್ರೋತ್ಸಾಹ ಕೊಡಬಾರದೆಂದೂ ಕೋರಿದರು. ಯುವಜನ ಸಂಘದವರು ಸ್ವಯಂಸೇವಿಕೆಯನ್ನು ಏರ್ಪಡಿಸಿ ಬಹುಜನ ಸ್ತ್ರೀಯರನ್ನು ಆಹ್ವಾನಿಸಿದರು.

ಸ್ವಾತಂತ್ರ್ಯ ದಿನಾಚರಣೆ

೨೬-೧-೪೨ ನೆಯ ಸೋಮವಾರ ಪ್ರಾ. ೪ ಘಂಟೆಗೆ ಸಾಂಬಮೂರ್ತಿ ಮೈದಾನದಲ್ಲಿ ಧ್ವಜವಂದನೆ. ಸಾಯಂಕಾಲ ಅಲ್ಲಿಯೇ ಸಭೆ ಕೂಡುತ್ತದೆ. ಎಲ್ಲರೂ ಸಕಾಲಕ್ಕೆ ಬರಲು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀಟಿ. ಸುಬ್ರಹ್ಮಣ್ಯಂರವರು ಕೋರುತ್ತಾರೆ.

ಶ್ರೀ ರಾಮಸ್ವಾಮಿ ನಾಯಿಡು ಇವರ ನಿಧನ

ಬೊಂಬಾಯಿ ಕೆಂಪನಿ ಏಜಂಟರಾಗಿಯೂ ಗಾಂಧಿನಗರ ಪ್ರಾಥಮಿಕ ಶಾಲೆಯ ಅಧ್ಯಕ್ಷರೂ ಆಗಿದ್ದ ಶ್ರೀ ರಾಮಸ್ವಾಮಿ ನಾಯಿಡುರವರು ೨೨ನೆಯ ತಾ. ರಾತ್ರಿ ೪ ಘಂಟೆಗೆ ಸ್ವರ್ಗಸ್ಥರಾದರೆಂದು ತಿಳುಹಿಸಲು ವಿಷಾದಿಸುತ್ತೇವೆ. ಇವರು ಶಾಲೆಗೆ ಆದಾರಭೂತವಾಗಿದ್ದ ಕಾರಣ ಶಾಲೆಯು ೨೪ ನೆಯ ತಾ. ದುಃಖಸೂಚಕವಾಗಿ ಮುಚ್ಚಲ್ಪಟ್ಟಿತ್ತು.

ದ್ವಿತೀಯ ಪಶು ಪ್ರದರ್ಶನ

ಸಬೂರು ಶ್ರೀ ರಾಣೆಸಾಹಬಾರವರು ದ್ವಿತೀಯ ಪಶು ಪ್ರದರ್ಶನದ ಆರಂಭೋತ್ಸವವನ್ನು ನಡೆಸುವರೆಂದು ಖಚಿತವಾಗಿ ಗೊತ್ತಾಗಿದೆ.

ರಾಜಗೋಪಾಲಾಚಾರ್ಯರು ಇಲ್ಲಿಗೆ ಬರುವರು

ಫೆಬ್ರವರಿ ೬ ನೆಯ ತಾ. ಬಳ್ಳಾರಿಯಲ್ಲೂ, ೭ನೆಯ ತಾ. ಹೊಸಪೇಟೆಯಲ್ಲೂ ಶ್ರೀಮಾ ಶಿ. ರಾಜಗೋಪಾಲಾಚಾರಿಯವರು ತಮ್ಮ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆ.

ಅಂಕಿಗಳ ಚಮತ್ಕೃತಿ

ದಿಲ್ಲಿಯ ದೀನ ದುಃಖಿಯಾ ಎಂಬ ಉರ್ದು ಪತ್ರಿಕೆಯಲ್ಲಿ ಕೆಳಗಿನ ಚಮತ್ಕೃತಿ ಪ್ರಕಟವಾಗಿದೆ

	ಜರ್ಮನಿಯ	ಫ್ರಾನ್ಸ್	ರಷ್ಯನೆಲ್ಲ	ಯುಸಲೊವಿ	ಒಟ್ಟಿಗೆ
ಜನ್ಮ ತಾರೀಖು	೧೮೮೯	೧೮೮೯	೧೮೮೯	೧೮೮೪	೧೮೮೪
ಪ್ರಾಬಲ್ಯಕ್ಕೆ ಬಂದದ್ದು	೧೯೩೩	೧೯೪೪	೧೯೨೪	೧೯೪೩	೧೯೪೩
ಈ ಸರಿಗಿನ ಅಧಿಕಾರದ ಅವಧಿ	೯	೫೨	೮	೧೯	೪
ಸಂಯಸ್ಸು	೫೪	೬೩	೩೯	೫೪	೫೨
ಪಟ್ಟು	೧೮೮೯	೧೮೮೯	೧೮೮೯	೧೮೮೪	೧೮೮೪

ಈ ೫೪೮೪ ನ್ನು ಎರಡರಿಂದ ಬಾಗಿಸಿದರೆ ೧೯೪೨ ಬರುವದು ಮತ್ತು ೧೯೪೨ ರಿಂದ ಈ ಐದೂ ರಾಷ್ಟ್ರಗಳು ಯುದ್ಧದಲ್ಲಿ ತೊಡಗಿರುವವ

ಆದರೆ ದೀನ ದುಃಖಿಯಾ ಪತ್ರಿಕೆಯು ಜಪಾನನನ್ನು ಈ ಚಮತ್ಕೃತಿಯಲ್ಲಿ ಸೇರಿಸದಿದ್ದರು ಜಪಾನದ ಅರಸರಾದ ಹಿರೋಹಿಟೋ ಇವರೂ ಈ ಚಮತ್ಕೃತಿ ಅನ್ವಯಿಸುವರು ಆದು ಹೇಗೆಂದರೆ, ಹಿರೋಹಿಟೋರವರು ೧೯೨೧ ರಲ್ಲಿ ಮೊಟ್ಟ ಮೊದಲಬಾರಿಗೆ ಪ್ರಾಬಲ್ಯಕ್ಕೆ ಬಂದರು ಆವರು ಅಧಿಕಾರಕ್ಕೆ ಬಂದು ೧೯೨೧ ವರ್ಷ ಆಗಿದ್ದು ೨೧ ವರ್ಷ ರಾಜ್ಯವನ್ನು ಆಳಿದರು ಈಗ ೪೦ ವರ್ಷ ಪೂರ್ತಿ ಆಗಿದೆ ಈ ಎಲ್ಲವೂ ಬೇರೆಯಾಗಿ ೧೯೪೧ ರಿಂದ ೧೯೪೨ ರಿಂದ ಆದರೆ ಒಟ್ಟಿಗೆ ೧೯೪೧ ರಿಂದ ೧೯೪೨ ಆಗುವದು (ಕರ್ಮವೀರ)

S. V. Setty & Bros., Bangalore Road, Bellary.

ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ವಿಶುದ್ಧವಾದ ಭಂಗಾರ ಮತ್ತು ಬಂಗಾರದ ವಸ್ತುಗಳು ಸಮ್ಮಲ್ಲಿ ದೊರಿಯುತ್ತವೆ ನಮ್ಮ ಹೆಸರಿನ ಶೀಲು ನ್ಯಾತಿಯೊಂದು ನಮ್ಮಲಿನ ನೋಲೆ ಇರುತ್ತದೆ ನಮ್ಮ ಹೆಸರಿನ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇನ್ಗಳು ಕೂಟ್ಟರ ಹೊಸ ವಸ್ತುಗಳನ್ನು ಕಾರಾಂತೆ ವಸ್ ಎಂಬ ವಾಚುಗಳು ಮೊತ್ತ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ ಒಂದು ನಲ ದಯವಿಟ್ಟು ಒಂದು ಸಲೀಕ್ಕಿರಿ

ಹೊಳಲಗುಂದಿ

ಈ ವರ್ಷ ರಥೋತ್ಸವವಿಲ್ಲ.

ಹೊಳಲಗುಂದಿ ಗ್ರಾಮದಲ್ಲಿ ವಪ್ಪತಿಯಂತೆ ಯಿದೇ ಮಾಸ ಪುಷ್ಯಂ ಕ್ಕೆ ನಡಿಯಬೇಕಾಗಿದ್ದ ಶ್ರೀ ಸಿದ್ದೇಶ್ವರ ಸ್ವಾಮಿಯ ರಥೋತ್ಸವ ಈ ಗ್ರಾಮದ ಆಜುಬಾಜು ಗ್ರಾಮಗಳಲ್ಲಿ ಕಾಲರಾ ಗಲಾಟೆಯಿರುವದರಿಂದ ರಥೋತ್ಸವ ನಡಿಸುವಾರದೆಂಬುದಾಗಿ ಸರಕಾರದವರು ತಿಳುಹಿಸಿದಮೇರೆಗೆ ಪ್ರಕೃತ ನಿಲ್ಲಿಸಲ್ಪಟ್ಟಿದೆ ಮುಂದೆ ನಡೆಯಿಸುವ ದಿನವನ್ನು ಪ್ರಕಟಿಸಲಾಗುವುದು.

ಸಿದ್ದಪ್ಪಜ್ಜನ ಗೌಡ
ಹೊಳಲಗುಂದಿ(ಆಜುಬಾ)

ಚಿಮನಹಳ್ಳಿ ಜಾತ್ರೆ

ಬಳ್ಳಾರಿ ಜಿಲ್ಲಾ ಹರಪನಹಳ್ಳಿ ತಾ|| ಚಿಮನಹಳ್ಳಿ ಮಜರಾ ಚುಮನಿಹಳ್ಳಿ ಶ್ರೀ ದುರ್ಗಮ್ಮ ಜಾತ್ರೆ ಅನಂತರ ದಿನಗಳ ನುಂತೆ ೨೬-೧-೪೨ ರಿಂದ ೨ ೯-೪೨ನರಿಗೂ ಬರುವುದು. ಸುಮಾರು ೬೦೦೦ ಜನರು ೨೦೦೦ ದನಗಳು ನೇರುವುದು ಒಂದು ಕಂಬಿಯಿಂದ ಚುನಾಯಿನಲ್ಲಿರುವ ಆಲೋಗ್ಯಕರವಾದ ಮತ್ತು ಒಳ್ಳೆ ವ್ಯವಾದ ಎತ್ತುಗಳು ಮತ್ತು ಆಕಳಗಳು ಬಳ್ಳಾರಿ ಜಿಲ್ಲಾ ಮೋರ್ಡಿನಿಂದ ಈ ಕೆಳಗೆ ಕಂಡ ಪ್ರಕಾರ ಬೆಳ್ಳಿ ಪದಕಗಳು ಬಹುಮಾನವಾಗಿ ೨-೨ ಳ್ಳಿ ನೇ ದಿವಸ ಹಂಚಲ್ಪಡುವವು ಆದ್ದರಿಂದ ಉತ್ತಮವಾದ ದನಗಳನ್ನು ಆ ದಿನಮುಂಕ್ಕೆ ಪ್ರದರ್ಶನಮಾಡಿ ಬಹುಮಾನ ಹೊಂದಬೇಕು. ಪ್ರಕಾರಮೋರಿಗೆ ಪ್ರಕಾರ ಆಕಳಿಗೆ ಜಾಗ ಹೋಲು ೨ ಜನವರಿ ಆಕಳಿಗೆ

ಆರ್. ನಾಗನ ಗೌಡ
ಕೈಸಿಂಟು

ಬಳ್ಳಾರಿ ಡಿಸ್ಟ್ರಿಕ್ಟ್ ಬೋರ್ಡ್

ಡಿಸೆಂಬರ್ ೨೩ ನೆಯ ತಾರೀಖಿನ ಸಿನಮೇಲೆ ನಡೆದ ದಾವಣಿಯಲ್ಲಿ ೧೯೦೨ ನುಂದಿ ಸತ್ತರೆಂದೂ, ೧೬೫೦ ನುಂದಿ ಸ್ವಾಯಗೊಂಡರೆಂದೂ ಹೇಳಲಾಗಿದೆ ಪರಸ್ಪರ ಭಿನ್ನಾಭಿಪ್ರಾಯ ಪ

ಮುಲಯಾದ ಯುದ್ಧ

ಪಶ್ಚಿಮ ಮುಲಯಾದಲ್ಲಿ ಶತ್ರುಗಳ ವತ್ತಾಯವು ಅಧಿಕವಾಗಿದೆ. ಮಿಲಿಟರಿ ವಿಮರ್ಶಕರು-ಪ್ರಕಾರ ಸಿಂಗಪುರಕ್ಕೆ ಸಮೀಪವಿರುವ ಜೋಹೋರ ಪ್ರಾಂತದ ಜವಾನರು ಬಂದಿಳಿದಿದ್ದಾರೆ.

ಸಿಂಗಪುರದಲ್ಲಿ ಜವಾನರು ಸಿಕ್ಕಾಪಟ್ಟೆ ಬಾಂಬು ಸುರಿಸಿದ ಕಾರಣ ನಿ ಲಿ ಟ ರಿ ಸ್ಥಾನಗಳಿಗೆನ ಪ್ಪನಾಗಿದೆ ೨೧ನೆಯ ತಾ ಜವಾನರ ೧೨ ವಿಮಾನಗಳನ್ನು ಕೆಡಸಲಾಯ್ತೆಂದು ವಾರ್ತೆಗಳು ಬಂದಿವೆ

ಸೈಗಾನ್ ರೇಡಿಯೋಪ್ರಸಾರಕ್ಕೆ ೩೦ ಸಾವಿರ ಟನ್ನಿನ ೩ ಹಡಗುಗಳು ಸಿಂಗಪುರಕ್ಕೆ ಬಂದಿರುವವೆಂದು ಸೈತ್ತಾಗಿನೆ ಅವು ಅಮೇರಿಕಾ ಯೆ-ಬ್ರಿಟ್ಟಿಗೆ ಸೇರಿರಬೇಕೆಂಬ ಊಹೆಯುಂಟು.

ರಷ್ಯಾ ಜರ್ಮನಿ

ರಷ್ಯಾ ಸೈನ್ಯಗಳು ಮೊಜಾಯ್ಸ್ಕ ನಗರವನ್ನು ಹಿಡಿದಿರುವರೆಂಬುದಾಗಿ ಸ್ಪಷ್ಟವಿಸಿಯೊಂದು ಹೊರಬಿದೆ. ಈ ನಗರವು ಮಾಸ್ಕೋನಿಗ ೬೦ ಮೈಲಿಗಳ ದೂರದಲ್ಲಿದೆ ನಾಜಿಗಳ ಬಂಧನದಿಂದ ಸುಮಾರು ೧೫೦ ಹಳ್ಳಿಗಳನ್ನು ರಷ್ಯನರು ಬಿಡಿಸಿಕೊಂಡಿದ್ದಾರೆ

ಜಪಾನರು ಪಶ್ಚಿಮ ಜೊಹೋರ ಪ್ರಾಂತದಲ್ಲಿ ನುಗ್ಗಿರುವರೆಂದೂ, ಸಿಂಗಪುರಕ್ಕೆ ಸುಮಾರು ೨೦ ಮೈಲಿ ದೂರದಲ್ಲಿರುವರೆಂದೂ ಒಂದು ವಾರ್ತೆಯು ಹೇಳುತ್ತದೆ

ಕಾನಡಾದವರು ಎಷ್ಟು ಜನರನ್ನು ಸೈನ್ಯದಲ್ಲಿ ನೇರಿಸಿಕೊಳ್ಳಬಹುದೆಂಬ ಅಧಿಕಾರಿಗಳು ಯೋಚಿಸುತ್ತಿರುವರು

ಬಳ್ಳಾರಿ ಪೇಟೆ ಧಾರಣೆ

16-1-42 ಶುಕ್ರವಾರ

ಭಂಗಾರ	ತೊಲ 1 ಕ್ಕೆ	46-0-0
ನಾವರಿನ್		33-4-0
ಬೆಳ್ಳಿ	100 ತೊಲಗಳಿಗೆ	70-0-0

ಆಹಾರ ಸಾಮಗ್ರಿಗಳು.

ಅಕ್ಕಿ	61ರು ನೆ	41½ ರಿಂದ ನೇರು
ಜೋಳ	,, 5 ,,	6 ,,
ಗೋಧಿ		6 ,,
ಜೋಳ	,, 12 ,,	15 ,,
ನವಣೆ	.	19 ,,
ಉಪ್ಪು	.	13 ,,

ಮೆಣಸಿನಕಾಯಿ 9 ಮಣ 25 ರಿಂದ 30
ಬೆ 8 ಮಣಕ್ಕೆ 12 ರಿಂದ 14 ರೂ
ನಕ್ಕರೆ (ಬೆಲ್ಲ) 9 ಮಣ 36 ರೂ

ಉಪಾಧ್ಯಾಯರಿಗೆ ಪ್ರಾಥಮಿಕ ಪಾಠಪಟ್ಟಿಯ ಸೂಚನೆಗಳು.

(ಕಳೆದವಾರದಿಂದ ಮುಂದುವರಿದುದು.)

ಈ ತರದ ವೈವಿಧ್ಯವನ್ನು ರಚಿಸಲು ಉಪಾಧ್ಯಾಯನಿಗೆ ಸಾಕಷ್ಟು ಸಮಯವೂ ಜಾಣ್ಮೆಯೂ ಇರಬೇಕು. ಮಕ್ಕಳಿಗೆ ತೋರಿಸುವ ವಸ್ತುಗಳು ಆಕರ್ಷಕವಾಗಿರಬೇಕೆಂಬ ತತ್ವವನ್ನು ಎಲ್ಲರೂ ಅರಿತು ಅನುಸರಿಸಬೇಕು.

ಮೇಲಿನ ತರಗತಿಗಳಲ್ಲಿ ಚಿತ್ರಗಳ ಉಪಯೋಗ ಕಡಿಮೆಯಾಗಿ ವ್ಯಾಕರಣ, ವಾಕ್ಯರಚನೆ ಮೊದಲಾದುವುಗಳನ್ನು ಕಲಿಸಲು ತಪ್ಪೆಗಳು ಉಪಯೋಗಿಸಲ್ಪಡುತ್ತವೆ. ವಾಚಕ್ಕೆ ಸಹಾಯಕಗಳಾಗುವ ಉಪಕರಣಗಳಲ್ಲದೆ ಭಾಷಾನಾವರಣ ಮೇಲೆ ಹೊಂದಿರುವ ಕೆಲಸವನ್ನು ಮಕ್ಕಳಿಗೆ ಕೊಡುವಲ್ಲಿ ಸಹಾಯಕವಾಗುವ ಉಪಕರಣಗಳನ್ನೂ ತಯಾರಿಸಬೇಕಾಗುವುದು. ಅಕ್ಷರ ಕ್ರಮ, ವ್ಯಾಕರಣ, ರಿವಾಯಿತಿ ಚೀಟಿ ಇವುಗಳನ್ನು ಹೊಂದಿ ಅಭ್ಯಾಸ ಕೊಡಲಿಕ್ಕೂ ನೌಕರಿಗೆ ತಕ್ಕುದಾದುದನ್ನು ಆರಿಸಿ ಅದನ್ನು ಹೊಂದಿ ಅಭ್ಯಾಸ ಕೊಡಲಿಕ್ಕೂ ಉಪಕರಣಗಳ ಅನಿವಾರ್ಯವಿದೆ ಈ ಅಭ್ಯಾಸಗಳನ್ನೂ ಪ್ರಶ್ನಾವಳಿಗಳನ್ನೂ ಜಾಗ್ರತೆಯಿಂದ ಮಾಡಿದರೇನೇ ಮೇಲಿನ ತರಗತಿಗಳಲ್ಲಿ ಭಾಷಾಬೋಧನೆಯು ಸಫಲವಾಗುವುದು.

ಸಾಮಾನ್ಯ ಗಣಿತ

a) **ಉದ್ದೇಶಗಳು, ರೀತಿಗಳು.** ಎಲ್ಲ ಜನರಿಗೆ ಬೇಕಾಗುವುದನ್ನು ಕಲಿಸುವುದೇ ಪ್ರಾಥಮಿಕ ಶಾಲೆಯ ಕೆಲಸವೆಂದು ಎಣಿಸಲ್ಪಡಬೇಕು. ಹೀಗಿರುವಾಗ ಅಂಕಗಣಿತದ ಅಂಶವೂ ಬಹಳ ಕಡಿಮೆಯಾಗಿರಬೇಕು. ನೂಲ ಶಾಲೆಯಲ್ಲಿ ಕಲಿಸುವ ಗಣಿತವು ನೂಲಾಭ್ಯಾಸವಾಗಿಯೇ ಇರಬೇಕು. ಇದಕ್ಕೆ ತರಗತಿಗಿಂತ ಮೇಲಿನ ತರಗತಿಗೆ ಹೋದವರು ಹೆಚ್ಚು ಗಣಿತವನ್ನು ಕಲಿಯಲಿ. ಮೇಲೆ ಹೋಗದವರಿಗೆ ಅತಿ ಸುಲಭದ ಕೆಲಸಗಳನ್ನು ಮಾತ್ರ ಮಾಡಲಿಕ್ಕೆ ಬರುವದು. ಮಾತ್ರವಲ್ಲ, ಅವರ ದಿನನಿತ್ಯದ ವ್ಯವಹಾರಕ್ಕೆ ನಿಕೇಪ ಗಣಿತಜ್ಞಾನವು ಅಗತ್ಯವಿರುವುದಿಲ್ಲ. ಆದುದರಿಂದ ಪ್ರಾಥಮಿಕ ಶಾಲೆಯ ಕೆಲಸವನ್ನು ಮಕ್ಕಳ ಮತ್ತು ಅವರ ಹೆತ್ತವರ ದಿನನಿತ್ಯದ ಕಾರ್ಯವಹಿವಾಟುಗಳನ್ನು ಹೊಂದಿರಬೇಕು. ಗಣಿತದಲ್ಲಿ ಅತಿ ಅಗತ್ಯವೆಂದಿರುವ ಬಹಳ ಸ್ವಲ್ಪ ಅಂಶವನ್ನು ಚೆನ್ನಾಗಿ ಮಂಡಿಟ್ಟಾಗುವಂತೆ ಕಲಿಸುವುದೇ ಪ್ರಾಥಮಿಕ ಶಾಲೆಯು ಉದ್ದೇಶ ಮೇಲಿನ ವಿದ್ಯಾಭ್ಯಾಸಕ್ಕಾಗಲಿ ದಿನನಿತ್ಯದ ವ್ಯವಹಾರಕ್ಕಾಗಲಿ ಇದಕ್ಕಿಂತ ಉಪಯುಕ್ತವಾದ ಬೇರೆ ತರ ಬೇಕಿಲ್ಲ

ಕ್ರಮಬದ್ಧ ಗಣಿತವನ್ನು ಕಲಿಸಿ ಸಿದ್ಧವಾಗಬೇಕಾದರೆ ಮಕ್ಕಳಿಗೆ ತಕ್ಕ ಮಾನಸಿಕ ಸಿದ್ಧತೆ ಇರಬೇಕು. ಈ ಸಿದ್ಧತೆ ಏಳು ವರ್ಷ ಪ್ರಾಯದವರಾಗುವ ತನಕ ಇರುವುದು ಅಸಂಭವ. ಈ ಸಿದ್ಧತೆಯು ಸ್ವಲ್ಪ ಕವಿಸಿಯಾದರೆ ಉಪಾಧ್ಯಾಯನು ಹೇಳಿಕೊಡುವ ವಿಷಯದ ಮಕ್ಕಳಿಗೆ ತಿಳಿಯದೆ ಬರೇ ಬಾಯಿಪಾಠ ಕಲಿಯುವುದೆ ಮಗುವಿನ ರೀತಿಯಾಗುತ್ತದೆ. ಇಷ್ಟು ಸ್ವಲ್ಪ ವಯಸ್ಸಿನ ವರೆಗೆ ಮಕ್ಕಳಿಗೆ ಸಾಧಾರಣ ರೀತಿಯ ಕೆಲಸ ಸಾಧ್ಯವಾಗಿ ಬಹುದು; ಆದರೆ ಮುಂದಿನ ಉಚ್ಚ ಶ್ರೇಣಿಯ ಕಾರ್ಯಕ್ಕೆ ಇಂಥ ತಳಪಾಯವು ಸಾಲದು. ಮಾನಸಿಕ ಸಿದ್ಧತೆಯೊಂದಿಗೆ ಮಗುವಿನ ವಯಸ್ಸಿಗೆ ತಕ್ಕ ವಿಷಯಗಳ ಪ್ರತ್ಯಕ್ಷ ಅನುಭವವೂ ಬೇಕು. ಇಂಥ ವಸ್ತುಗಳನ್ನು ತನ್ನ ಕೈಯಿಂದ ಮುಟ್ಟಿ ಹಿಡಿದು 3, 4, 9, ಎಂಬ 100 ರವರೆಗಿನ ಸಂಖ್ಯೆಗಳ ಪ್ರತ್ಯಕ್ಷ ಅನುಭವ ಬರಬೇಕು. ಮರದ ಚಿಕ್ಕೆ ಇಟ್ಟಿಗೆಗಳನ್ನೂ ಗೋಲಿಗಳನ್ನೂ ಉಪಯೋಗಿಸಿ ಆಡಿದುದರಿಂದ ಸಿಕ್ಕುವ ಅನುಭವನವನ್ನು ಚಿಕ್ಕ ಸಂಖ್ಯೆಗಳ ಜ್ಞಾನಕ್ಕಾಗಿ ಉಪಯೋಗಿಸಬಹುದು.

ಲೆಕ್ಕಗಳನ್ನು ಆರಂಭಿಸಬೇಕಾದರೆ ತಕ್ಕ ಮಾನಸಿಕ ಸಿದ್ಧತೆ ಇರಬೇಕು ಮಾತ್ರವಲ್ಲ, ಸಂಖ್ಯೆಗಳ ಹೆಸರುಗಳನ್ನು ಕ್ರಮಪ್ರಕಾರ ಹೇಳಿಕ್ಕೂ ತಿಳಿದಿರಬೇಕು. ಎಣಿಸುವುದನ್ನು ಕಲಿತರೆ ಮಗುವಿಗೆ ಸಂಖ್ಯಾಜ್ಞಾನ, ಸಂಖ್ಯೆಗಳೊಳಗಿರುವ ಸಂಬಂಧ, ಹತ್ತುಗಳು ತಿರುಗಿ ತಿರುಗಿ ಬರುವುದೆಂಬ ಜ್ಞಾನ-ಇವು ಸೋಜಿಗವಾಗುತ್ತವೆ. ಆದರೆ ಹೆಸರುಗಳ ಸಲ್ಲಿಯನ್ನು ಬರೇ ಬಾಯಿಪಾಠ ಮಾಡಿದ್ದರೆ ಏನೂ ಪ್ರಯೋಜನವಿಲ್ಲ. ಹೊಲಿನ ನಾಲ್ಕು ಸಂಖ್ಯೆಗಳ ಹೆಸರುಗಳು ಗೊತ್ತಿದ್ದು ನಾಲ್ಕು ವಸ್ತುಗಳನ್ನು ಎಣಿಸಲಿಕ್ಕೆ ಆಗದ ಮಕ್ಕಳೂ ಇರುವರು. ಆದುದರಿಂದ ಲೆಕ್ಕಗಳನ್ನು ಆರಂಭಿಸುವ ಮೊದಲು ಅಂದರೆ ಮೊದಲನೆ ವರ್ಷದಲ್ಲಿ ಸಂಖ್ಯೆಗಳ ಸಂಬಂಧಗಳನ್ನು ಸರಿಯಾಗಿ ತಿಳಿದುಕೊಳ್ಳಲಿಕ್ಕೂ ಎಣಿಕೆಮಾಡಲಿಕ್ಕೂ ಕಲಿಯಬೇಕು. ವಸ್ತುಗಳನ್ನು ಎಣಿಸುವುದು, ಸಂಖ್ಯೆಗಳನ್ನು ಉಪಯೋಗಿಸುವ ಆಟಗಳನ್ನು ಆಡುವುದು, ಇವನ್ನು ಹೆಚ್ಚಾಗಿ ಉಪಯೋಗಿಸಬೇಕು

'ರಾಯಲ್' ಸಿನೆಮಾ ಭವನದಲ್ಲಿ
ಕನ್ನಡ ಚಿತ್ರ—"ಸುಭದ್ರ"
ನೇ ವಾರ ಪ್ರಾರಂಭ.

ಕಣ್ಣಿಗೆ ಕಳೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ,
ಸಾಮಲಕೋಟೆ.

ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ
ಗೋದಾವರಿ ನದಿ ವಲಯದ ಫಲಕಾರಿ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ಸೀರಲ್ಲಿ ಕೊಳೆದು, ಆ ಮೂಲಕ ಹೊಸ್ಸನ್ನು ತೆಗೆದು ಮರದ ಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಪೈಜಗಳಲ್ಲಿ ದೊರೆಯುತ್ತದೆ. **A. S.** ಎಂಬುದನ್ನು ಗಮನಿಸಿ ಕೊಳ್ಳಿ ಮೋಸಹೋಗಬೇಡಿರಿ

ದೊರೆಯುವ ಸ್ಥಳಗಳು:- 1) ಎಂ. ಪುಟ್ಟೇಂಜಿರಾವು, ಎಂ. ವೆಂಕೋಜಿರಾವು, ಕೌಲ್‌ಬಜಾರ್ ಮತ್ತು 2) ಎ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಹಿರಿಯದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ರಕ್ಷಣೆಯಿಂದ ಕಾಪಾಡಿ ತಂಪಾಗಿಡಲು ತಿಳಿನೀಲಿಯ ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ ಗ್ಯಾರಂಟಿ ಯಾದ ಕ್ರೋಮ್ಯ್ ಕನ್ನಡಿಗಳು ಸಾಧಾರಣ ಪಿಂಗಾಣಿ ಜೊತೆಯನ್ನೂ ಒಡೆದರೆಗೂ, ಶೀಘ್ರಾಂತರಿಗೂ ಅನುಕೂಲವಾಗುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಒಮ್ಮೆ ಬಂದು ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary

ಸರಸ್ವತೀ ಲೇಹ.

ಧಾತು ನಷ್ಟ - ಮೂತ್ರ - ಪ್ರಮೇಹ, ಕುಷ್ಠ ಮುಂತಾದ ವ್ಯಾಧಿಗಳಿಂದ ಉಂಟಾದ ಕೃಶತೆ, ಕೆಮ್ಮು, ಕ್ಷಯ ಮತ್ತು ಉನ್ಮಾದ ಮುಂತಾದ ಅನೇಕ ಅಪಾಯಕರ ರೋಗಗಳನ್ನು ನಿವಾರಣೆ ಮಾಡಿ ನಿಶ್ಶಕ್ತರಾದವರಿಗೆ ಹೊಸ ಚೈತನ್ಯ ಕಾಂತಿಯನ್ನು ಕೊಡುವಲ್ಲಿ ಅಮೃತಸಮಾನವಾಗಿರುವ ಈ ಲೇಹವನ್ನು ಇಂದೇ ಉಪಯೋಗಿಸಿರಿ ವಿಷಯತೊಡನೆ ಉಚಿತವಾದ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆಗೆ ೩-೪-೦

ವಾ ಕಿವ್ಸ್ - ಕೋರಣಗಲ್ಲು ಮತ್ತೆಪ್ಪ, ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....
- ನಿಮಗೆ ಸಹಾಯವು ಬೇಕೂ ?

ಹಾಗಾದರೆ ಕೂಡಲೆ ಕೆಳಗಿನವರಲ್ಲಿ ವಿವರಗಳನ್ನು ಬರೆಸಿರಿ ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು ಪಠ್ಯ ಪುಸ್ತಕಗಳು, ಕಛೇರಿ ಬರಿ ವ್ಯವಹಾರ ಮುಂತಾದವುಗಳಲ್ಲಿ ನಿಮಗೆ ಎಲ್ಲಾವಿಧವಾದ ಮಾಹಿತಿಯನ್ನೂ, ಉಚಿತವಾಗಿ ಪತ್ರಾಂಕಿತರು

ಟಿ. ಬಿ. ಕೇಶವರಾವ್,
ಪೈಪ್ ಮಾರ್ಕೆಟ್ ಕಾಂಪೌಂಡು, ಬಳ್ಳಾರಿ

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦-೮-೦	ಆರ್ಯ ಶೆಟ್ಟಿಯರ	
ಕನ್ನಡ ಉಪನಿಷತ್ತುಗಳು	೦-೮-೦	ಪತ್ರಿಕಾ ವ್ಯಾಪಾರಿಗಳ	
ಬೃಹದ್ಭಜನೆ	೦-೮-೦	ಗ್ರಂಥಮಾಲಾ ಪತ್ರಿಕೆ	
ಸುಮಂತಕೆ	೦-೮-೦	ಕೈಪಟ್ಟಿಗಳಿಗಾಗಿ	
		ಸಾದಕವಿದೆ	

ಕಾಲುವೆ ಸುಬ್ಬಣ್ಣ, ಮುಚ್ಚಂಟು, ಬಳ್ಳಾರಿ.

ದ್ವಿತೀಯ ಪರಿಷ್ಕರ್ಷನ ಬಳ್ಳಾರಿ.

ಸೈಮನ್ ಎ. ಪಿ. ನೆನೆಸಿ ತಾಲಿ ಕೋಟೆ ಮಸ್ಲೀಶ್ವರ ಮಾರಾಟವಾದ ಬಯಲೆನ್ನಲ್ಲಿ ನಡೆಯಲಿದೆ. ವ್ಯವಸಾಯಗಾರರಿಗೆ ಕ್ರಿಷಿ ಗಣಿಗಳ ಉಂತಮ ತಳಿಯನ್ನು ಪ್ರೊತ್ಸಾಹಿಸಲೆಂಬ ಸದುದ್ದೇಶದಿಂದ ಸಂಘದವರು ಸೂಚಿಸಿರುವ ಅನುಕೂಲ ಸಂದರ್ಭವನ್ನು ಉಪಯೋಗಿಸಿಕೊಂಡು ಪ್ರದರ್ಶನಕ್ಕೆ ಪ್ರಾಣಿಗಳನ್ನು ತಪ್ಪದೆ ತರಿಸಿ ಸಹಕರಿಸಬೇಕೆಂದು ಪ್ರಾರ್ಥನೆ.

ಕಾರ್ಯದರ್ಶಿ, ಕೆ. ತಾಳಿಕೆರಪ್ಪ ಬ್ರದರ್ಸ್

NAVA BHARAT BELLARY.
With which is incorporated Congress Bulletin
THE LEADING NATIONAL WEEKLY.

ನವ ಭಾರತ ಬಳ್ಳಾರಿ.
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

The Rates of Subscription

Annual
Local 2—0—0
Moffusil 3—0—0

6 Months
Local 1—4—0
Moffusil 2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat. Bellary.

REG. No 3037.

Sri

Printed at Vittal Press, Car Street Edited & Published by T. B Keshava Rao, Bellary

Reg. No. M. 3937 'ವಂದೇ ಮಾತರಂ'

ನವ ಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೩೦ ಬಳ್ಳಾರಿ ಫೆಬ್ರವರಿ ೧ ನೇ ಭಾನುವಾರ ೧೯೪೨. ಟಿ. ಪಿ. ಕೇಶವರಾವ್.

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೯೪೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000 ರೂ. ಗಳಿಗೆ ಮಿಗಿರಿದೆ

ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ. ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಕಚೇರಿ. ಡಿಸ್ಪೆನ್ಸ್‌ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ. ಬೆಂಗಳೂರು ಸಿಟಿ.

STAR CINEMA,
BELLARY.

೨೪-೧-೪೨ನೆಯ ಬುಧವಾರದಿಂದ
ಪ್ರಾರಂಭವಾಗಿದೆ.
ಸ್ಟಾರ್ ಸಿನೆಮಾದಲ್ಲಿ
ನವರಸಭರಿತವಾದ ಮತ್ತು ಸುರಿತ ಚಿರಪರಿ
ಚಿತರಾದ ನಟಶ್ರೇಷ್ಠರಿಂದ
ಅಭಿನಯಿಸಲ್ಪಟ್ಟ
ವಸಂತಸೇನಾ
[ಕನ್ನಡ ಟಾಕ್ಪಟಿ]
ಮನಮೋಹಕವಾದ, ಸುಂದರದೃಶ್ಯಗಳು
ಬಳ್ಳಾರಿಗೆ ಅಲಭ್ಯವಾದ. ಈ ಸಂಧಿ
ಯನ್ನು ಕಳೆದುಕೊಳ್ಳಬೇಡಿರಿ.

VASANTASEENA
(Kanarese Film
Extraordinary hit in Casarere
Pitasem.
Don't miss the golden
opportunity.

Please Read
Vasantasena & Lagan
Criticism next week

ಬೆಂಗಾಜಿಯ ಪತನ?

ಉತ್ತರ ಆಫ್ರಿಕಾದಲ್ಲಿ ಜರ್ಮನರು ಬ್ರಿಟಿಶರ ವಶವಾಗಿದ್ದ ಬೆಂಗಾಜಿಯನ್ನು ಮತ್ತೆ ಆಕ್ರಮಿಸಿಕೊಂಡರೆಂದು ಸುದ್ದಿ ಬಂದಿದೆ.

ಸಿಂಗಪುರಕ್ಕೆ ಜಪ್ಪುಗಳು ೧೮ ಮೈಲು ದೂರದಲ್ಲಿ

ಜಪಾನರು ಸಿಂಗಪುರದ ಕಡೆ ೩ ಕಡೆ ಗಳಿಂದ ನುಗ್ಗುತ್ತಿರುವರು. ಒಂದು ಕಡೆ ಯಲ್ಲಿ ೧೮ ಮೈಲುಗಳ ದೂರದಲ್ಲಿ ಇವರ ಸೈನ್ಯಗಳು ಬಂದಿವೆಯಂತೆ.

ಚರ್ಚಿಲ್ಲ - ವಿಶ್ವಾಸ ನಿರ್ಣಯ

ಬ್ರಿಟಿಶ ಪ್ರಧಾನರಾದ ಚರ್ಚಿಲ್ಲರ ಮೇಲೆ ವಿಶ್ವಾಸವನ್ನು ವ್ಯಕ್ತಪಡಿಸುವ ನಿರ್ಣಯವು ಲಂಡನ್ನಿನ ವಿರುದ್ಧ ೫ ರಿಂದ ತೀರ್ಮಾನಿಸಲ್ಪಟ್ಟಿತು. 24 ಜನ ತಟಸ್ಥರುಳಿದರು.

ಕೃಷ್ಣಾ ಟಾಕೀಸಿನಲ್ಲಿ ಖಜಾಂಚಿ ಒನೇ ವಾರ
ನೋಡಿದರೆ ಖಾಲಿ, ಹೊಟ್ಟೆ ಹುಣ್ಣಾಗುವಂತೆ ನಗುವಿರಿ-

ಹರಿಜನ ಸಮಸ್ಯೆ

ಕೆಲವು ಸೂಚನೆಗಳು

ಲೇ: - ಶ್ರೀಧರ ಲಕ್ಷ್ಮಣ ಕಣ—ಶಿರ್ಸಿ

ಹರಿಜನರಿಗೆ ಸಾವಿರಾರು ವರ್ಷಗಳಿಂದ ಅನ್ಯಾಯ ಅವಮಾನಗಳು ನಡೆಯುತ್ತಾ ಬಂದಿವೆ. ಇವನ್ನು ದೂರೀಕರಿಸುವ ಕಾರ್ಯಕ್ಕೆ ಮಹಾತ್ಮ ಗಾಂಧೀಜಿಯವರು ಜಾಲ್ವರ್ತಕೊಟ್ಟಿದ್ದಾರೆ. ಅಂದಿನಿಂದ ಎಷ್ಟೋ ದೇವಾಲಯಗಳು ತೆರೆದವು ಶಾಲೆಗಳು ತೆರೆದವು. ಹರಿಜನಸ್ಥಾನಾಂಪವು ಸ್ಥಾಪನೆಯಾಯ್ತು. ಆದ್ದರಿಂದ ಇಷ್ಟೆಲ್ಲ ಕೆಲಸದಿಂದ ಸಾಕಷ್ಟು ಪ್ರಗತಿಯಾಗಿದೆಯೇ ಎಂದು ವಿಚಾರಿಸಬೇಕಾಗಿದೆ.

ಬಲವಾದ ಹಾಲ್ಗನ್ನೆಯಿಲ್ಲದೆ ಯಾವ ಅಂದೋಲನವೂ ಸುಗಂಧರಿಯುವಂತಿಲ್ಲ. ಹೃದಯಪರಿವರ್ತನೆಯಿಲ್ಲದೆ ಹರಿಜನರ ಸಮಸ್ಯೆ ಬಿಡುವರಿಲ್ಲವೆನ್ನುವದು ನಿಜವು. ಆದರೆ ಹೃದಯಪರಿವರ್ತನೆ ಆಗುವದು ಯಾವಾಗ? ಮತ್ತು ಹ್ಯಾಗೆ? ಯಾರದು? ತಾಳ್ಮೆಯಿಂದ ಕೆಲಸ ಸಾಗಬೇಕೆಂದು ಹೇಳುವದು ವಿಹಿತವೇ? ಅನ್ಯಾಯವೆಂದು ಕಂಡು ಬರುವವರಿಗೆ ಯಾವದಾವದೊರೂ ರೂಢಿಯಲ್ಲಿರುವ ಅನ್ಯಾಯವನ್ನು ಸಾಗಿಸಬಹುದು. ಆದರೆ ಅನ್ಯಾಯವೆಂದು ಕಂಡು ಬಂದ ಮೇಲೂ ಸಾವಧಾನವೇಕೆ? ಉಗ್ರ ಉಪಾಯವಿಲ್ಲದ್ದೆಯಾವ ಹೃದಯದಪರಿವರ್ತನೆಯೂ ಆದದ್ದಿಲ್ಲ. ಆಗುವಹಾಗೂ ಇಲ್ಲ. ಮಹಾತ್ಮಾ-ಗಾಂಧೀಜಿಯವರೆ ಉಪವಾಸವು ಉಗ್ರ ಉಪಾಯವಲ್ಲವೇ?

ಸಾವಿರಾರು ವರ್ಷಗಳಿಂದ ಹರಿಜನರು ಸವರ್ಣರ ಕೈಯಲ್ಲಿ ಅನ್ಯಾಯ ಅವಮಾನಗಳನ್ನು ಸಹಿಸುತ್ತ ಬಂದರೂ ಸವರ್ಣರ ಭಾವನೆಗೆ ಸೋವಾಗಬಾರದೆಂದು ಹರಿಜನರಾಗಲ್ಲಿ ಹರಿಜನಸೇವಕರಾಗಲಿ, ಉಗ್ರ ಉಪಾಯಮಾರ್ಗಗಳನ್ನು ಕೈಕೊಳ್ಳಬಾರದೆಂದು ಹೇಳುವದು ಎಷ್ಟು ಮಾತ್ರವೂ ಸರಿಯಾಗಲಾರದು. ಸವರ್ಣರಿಗಾಗಿ ಹರಿಜನರು ಮಾನವೀ ಅಧಿಕಾರಗಳನ್ನು ಕಳಕೊಳ್ಳುವದಕ್ಕಿಂತಲೂ ಹರಿಜನರಿಗಾಗಿ ಸವರ್ಣೀಯರು ಸ್ವಲ್ಪ ಅನುಕೂಲತೆ ಕಡಿಮೆ ಮಾಡಿಕೊಂಡರೆ ತಪ್ಪೇನು? ಆದು ಕಾರಣ, ಸವರ್ಣೀಯರ ಭಾವನೆಗೆ ಎಲ್ಲಿ ನೋವಾಗುತ್ತದೋ ಎಂಬ ಬಗ್ಗೆ ಹಿಂದೆ ಮುಂದೆನೋಡುತ್ತಾ ಕೂಡ್ರದೆ ಕಾರ್ಯಗಳನ್ನು ಸಾಗಿಸಬೇಕು.

ಇನ್ನು ಈ ಕಾರ್ಯಗಳನ್ನು ವಿಂಗಡಿಸಬಹುದು:- ೧) ಶೈಕ್ಷಣಿಕ, ೨) ಆರ್ಥಿಕ, ೩) ರಾಜಕೀಯ, ೪) ಸಾಮಾಜಿಕ, ೫) ದಾರ್ಮಿಕ ಹೀಗೆ ವಿಂಗಡಿಸಬಹುದು.

ಈ ಎಲ್ಲ ಅಂಗಗಳಲ್ಲಿಯೂ ಹರಿಜನರಿಗೆ ಅನ್ಯಾಯವಾಗುತ್ತಿದ್ದು, ಅದನ್ನು ನಿವಾರಿಸಿಕೊಟ್ಟಿನೆ ನಮ್ಮವರು ಹೆಣ್ಣಿಗನಂತೆ ಒಂದೊಂದೆನ್ನೇ ಆಯುಷ್ಯಾಗ್ರವಾಗಿ ನಿರ್ಣಯಕ್ಕೆ ತರುವಂತೆ ಮಾಡಿಸಬೇಕು.

ಮೊದಲನೇದಾಗಿ ನಾವು ಶೈಕ್ಷಣಿಕ ಅನ್ಯಾಯಗಳನ್ನೇ ತೆಗೆದುಕೊಳ್ಳಬೇಕಾಗುವದು. ಸರಕಾರದವರು ಹರಿಜನರ ಶಿಕ್ಷಣದ ಬಗ್ಗೆ ಕೆಲವು ವಿಶೇಷ ನಿಯಮಗಳನ್ನು ಕೂಟ್ಟಿರುವಾ ಶಾಲೆಗೂ ಹರಿಜನರಿಗೆ ಪ್ರವೇಶವಿಗದೆ ಇರಬಾರದೆಂದು ಎಂದು ನಿರ್ಣಯಿಸಿದ್ದಾಗ್ಯೂ ಇದರ ಲಾಭವು ಸಾಕಷ್ಟು ಆಗುತ್ತಿರುವದಿಲ್ಲ. ಎಷ್ಟೋ ಕಡೆಗಳಲ್ಲಿ ಹರಿಜನ ಹುಡುಗರು ಶಾಲೆಗೆ ಬಂದು ಸೇರಿದ್ದಾಕೆ ಅಸ್ಪೃಶ್ಯಕ್ಕೆ ಬೀತಿಯಿಂದ ಮೊಕ್ಕಿನುವುದೂ ಶಾಲೆಗೆ ಬಂದುಸ್ಥೀರಿದ್ದ ಹುಡುಗರನ್ನು ಸೇರಿಸಿಕೊಳ್ಳಲು ಪ್ರತ್ಯೇಕ ಕೊಠಡಿಸವಿಯೂ ಸವಲತ್ತಿಲ್ಲದೆ ಈ ವಿಷಯವಾಗಿ ಸಂಪೂರ್ಣವಲಕ್ಷ ಹ್ಹಾಕಬೇಕು. ಒಂದೆರಡು ಹರಿಜನ ಹುಡುಗರ ಪ್ರವೇಶದಿಂದ ಇಡೀ ಶಾಲೆಯೇ ಬಂದಾಗುತ್ತದಲ್ಲಾ ಎಂಬ ಬಗ್ಗೆ ಲಕ್ಷ ಕೊಡಕೂಡದು. ಹರಿಜನ ಹುಡುಗರು ಶಾಲೆಗೆ ಬಂದು ಸೇರಲಕ್ಕೆ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ಪಾಪ ಕೂಡದೆಗೆ ಪ್ರಯತ್ನಿಸುವದನ್ನು ಸೂಕ್ಷ್ಮ ದೃಷ್ಟಿಯಿಂದ ಗಮನಿಸಿಕೊಂಡು ಅವಶ್ಯ ಸಂಪೂರ್ಣ ಪ್ರಯತ್ನ ಮಾಡಬೇಕು. ಹಾಗೂ ಹೊಸ ಹುಡುಗರು ಶಾಲೆಗೆ ಬಂದು ಸೇರುವವರೆಗೆ ಬೇರೆ ಬೇರೆ ತರಗತಿಗಳ ಉತ್ತೀರ್ಣರಾದ ಹುಡುಗರನ್ನು ಕಳುಹಿಸಬೇಕು.

ಇನ್ನು ಸಾಮಾಜಿಕ ವಿಷಯ

ಸಾರ್ವಜನಿಕ ಕೆರೆ, ಭಾವಿಗಳಿಗೆ ನೀರಿಗೆ ಎಲ್ಲರಿಗೂ ಸಮಾನ ಹಕ್ಕು ಇರುತ್ತದೆ. ಎಂದು ಇರುತ್ತಿದ್ದಾಗ್ಯೂ ಸವರ್ಣ ಹಿಂದುಗಳು ಹರಿಜನರಿಗೆ ಹೆದರಿಕೆ, ಬೆದರಿಕೆ ಹಾಕಿ ಅವರಿಗೆ ಸೇರಿನ ಉಪಯೋಗಕ್ಕೆ ತೊಡರಿಕೆಯನ್ನುಂಟುಮಾಡಿ ಎಷ್ಟೋ ಕಡೆ ನಡೆದಿದೆ. ಈ ಸವರ್ಣ ಹಿಂದುಗಳ ವಿರುದ್ಧ ನಿಂತು ವಿರೋಧ ಮಾಡುವಷ್ಟು ಸಾಮರ್ಥ್ಯವು ಈ ಹೊತ್ತು ಹರಿಜನರಲ್ಲಿ ಇರುವದಿಲ್ಲ. ಆದಕಾರಣ ಹರಿಜನ ಸೇವಕರು ಈ ಅನ್ಯಾಯವು ಪೂರ್ಣ ದೂರವಾಗುವವರೆಗೆ ಎದುರಿಗೆ ನಿಲ್ಲಬೇಕಾಗುವದು. ಇನ್ನು ಈ ಅನ್ಯಾಯವು ಪೂರ್ಣ ದೂರವಾಗುವವರೆಗೆ ಹರಿಜನ ಸೇವಕರು ಎದುರಿಗೆ ನಿಲ್ಲುವದೆ ಹರಿಜನರಿಗೆ ನೀರು ತೆಗೆಯುವ ಲಕ್ಕೆ ಹುಟ್ಟಿ ಅನ್ಯಾಯವು ದೂರವಾಯಿತೆಂದು ತಿಳಿಕೊಂಡು ಹೊರಬಿ ಹೋದಮೇಲೆ ಹಿಂದುಗಡೆ ಸವರ್ಣ ಹಿಂದುಗಳು ಬೇರೆ ಜೋರಿ ವ್ಯಕ್ತಿಯಿಂದ ಹರಿಜನರನ್ನು ಗೊಳ್ಳಾಡಿಸುವರು.

ಇದೇ ಪ್ರಕಾರ ಎಷ್ಟೋ ಕತ್ತಗಳಲ್ಲಿ ಹರಿಜನ ನೌಕರರಿಗೆ ಸರ್ಕಾರದವರಾಗಲಿ ಇರಲಿಕ್ಕೆ ಬ್ಯಾರಿಗೆ ಮನೆ ಸಿಗದೆ ಬಹಳ ತೊಂದರೆಗಳಾಗುತ್ತವೆ. ಆಗ ಹರಿಜನ ಸೇವಕರು ತನ್ನ ಹೆಸರಿನಲ್ಲಿ ಇಲ್ಲವೇ ಸಹಾನುಭೂತಿಯುಳ್ಳ ಸವರ್ಣ ಹೆಸರಿನಲ್ಲಿ ಬಾಡಿಗೆ-ಮನೆ ಹಿಡಿಯಬೇಕು. ಮತ್ತು ಆ ಮನೆಯಲ್ಲಿ ಹರಿಜನರು [illegible] ತರದೆ ಪ್ರಯತ್ನದಿಂದ ಈ ಪ್ರಶ್ನೆ ಬಿಡಿಸಲಾಗುವದು. ಇಂಥ ಮನೆಗಳು [illegible]



[illegible] ಸಾರ್ವಜನಿಕ [illegible] ಹರಿಜನರಿಗೆ ಪ್ರವೇಶ [illegible] ಆದ ಪ್ರಕಾರ [illegible] ಇದ್ದ ಅಂಗಡಿಗಳಲ್ಲಿ ಮಾತ್ರ ಹರಿಜನರಿಗೆ ಪ್ರವೇಶವಿರುತ್ತದೆ. ಆದರೆ ಸರಕಾರದವರಿಗೆ ಇಷ್ಟದಿಕ್ಕಾದ ಅಂಗಡಿಗಳಲ್ಲಿ [illegible] ಇವುಗಳಲ್ಲಿ ಇಂಥ [illegible] ಮನೆಯಾಜಮಾನರು ಈ ಎಲ್ಲ [illegible] ದು ಸಾರ್ವಜನಿಕರು ಸಾಗಲು [illegible] ಎಲ್ಲ ಅಂಗಡಿಯವರಿಂದ ಟ್ಯಾಕ್ಸು ವಸೂಲು ಮಾಡುತ್ತಿರುವರು. ಹಾಗಾದರೆ [illegible] ಈ ಎಲ್ಲ ಅಂಗಡಿಗಳಲ್ಲಿಯೂ ಹರಿಜನರಿಗೆ ಪ್ರವೇಶವಿರುವಂತೆ ಮಾಡಿಸಿ ಅವುಗಳ ಮುಖ್ಯಾಂತರವಾಗಿಯೂ ಬೇ

(9ನೇ ಪುಟವನ್ನು ನೋಡಿ.)

ಬಳ್ಳಾರಿ — ಹೊಸಪೇಟೆಗಳಲ್ಲಿ
ಕಾಂಗ್ರೆಸ್ ಪ್ರಧಾನ ಮಂತ್ರಿಗಳಾಗಿದ್ದ
ಶ್ರೀ ಶಿ. ರಾಜಗೋಪಾಲಾಚಾರಿ
ಯವರ ಕಾರ್ಯಕ್ರಮ.

ಬಳ್ಳಾರಿಯಲ್ಲಿ

6-2-1942 ಶುಕ್ರವಾರ ಪ್ರಾತಃಕಾಲ 10 ಘಂಟೆಗೆ ಅನಂತಪುರ ಕಡೆಯಿಂದ ರೈಲಿನಿಂದ ಆಗಮನ.

„ 10 ರಿಂದ ಮಧ್ಯಾಹ್ನ 2ರ ವರೆಗೆ ಊಟ ಮತ್ತು ವಿಶ್ರಾಂತಿ.

ಮಧ್ಯಾಹ್ನ 2-15 ರಿಂದ 3ರ ವರೆಗೆ ಸಂಭಾಷಣೆಗೆ ಅವಕಾಶ.

„ 3-30 ರಿಂದ 4-30 ವರೆಗೆ ಕೋಟೆಯಲ್ಲಿ ಜಿಲ್ಲಾ ಬೋರ್ಡು ನೂತನ ಭವನದಲ್ಲಿ ಮಹಾತ್ಮ ಗಾಂಧಿಯವರ ಶಿಲಾಪ್ರತಿಮೆ ಅನಾವರಣೋತ್ಸವ.

ಸಾಯಂಕಾಲ 5-45 ರಿಂದ 7-45ರ ವರೆಗೆ ಸಾಂಬಮೂರ್ತಿ ಮೈದಾನದಲ್ಲಿ ಬಹಿರಂಗಸಭೆ.

7-3-42 ಶನಿವಾರ ಪ್ರಾತಃಕಾಲ 8 ರಿಂದ 9ರ ವರೆಗೆ. ವಾರ್ಡ್‌ನಂ 1 ಹೈಸ್ಕೂಲ್ ಭವನದಲ್ಲಿ ಜಿಲ್ಲಾ ಹಿಂದೀಸ್ಪೀಮೀ ಮಂಡಲದ ಆಶ್ರಯದಲ್ಲಿ ಭಾಷಣ. ಹಿಂದಿನ ಕಾಂಗ್ರೆಸ್ ಮಂತ್ರಿಗಳಾದ ಶ್ರೀ ಬಿ. ಗೋಪಾಲರೆಡ್ಡಿ ಯವರೂ ಭಾಷಣಮಾಡಬಹುದು.

„ 10 ಘಂಟೆಗೆ ರೈಲಿನಿಂದ ಹೊಸಪೇಟೆಗೆ ಪ್ರಯಾಣ.

ಹೊಸಪೇಟೆಯಲ್ಲಿ

7-2-1942 ಶನಿವಾರ 12-4ಕ್ಕೆ ರೈಲಿನಿಂದ ಆಗಮನ.

ಮಧ್ಯಾಹ್ನ 2ರ ವರೆಗೆ ವಿಶ್ರಾಂತಿ.

„ 2 ರಿಂದ ಸಾಯಂಕಾಲ 6ರ ವರೆಗೆ ಕಾರ್ಯಕರ್ತರ ಸಭೆ. ತುಂಗಭದ್ರಾ ಆಣೆಕಟ್ಟಿನ ಸ್ಥಳಕ್ಕೆ ಭೇಟಿ, ನಗ್ಯೆರೆ.

ಸಾಯಂಕಾಲ 6 ರಿಂದ 8ರ ವರೆಗೆ ಬಹಿರಂಗ ಸಭೆಯಲ್ಲಿ ಭಾಷಣ.

8-2-42 ಭಾನುವಾರ ಪ್ರಾತಃಕಾಲ ರೈಲಿನಿಂದ ಕರ್ನೂಲು ಕಡೆಗೆ ಪ್ರಯಾಣ ಬೆಳೆಸುವರು.

ವಿ. ಸೂ. — ಬಳ್ಳಾರಿ-ಹೊಸಪೇಟೆ ಬಹಿರಂಗ ಸಭೆಗಳಲ್ಲಿ ಧ್ವನಿವಾಹಕ ಯಂತ್ರ (Loud speakers)ದ ಏರ್ಪಾಟು ಮಾಡಿರುವರೆಂದು ತಿಳಿದುಬಂದಿದೆ. ಈಕಾರಣ ಎಷ್ಟು ಜನರು ಕೂಡಿದರೂ, ಚೆನ್ನಾಗಿ ಕೇಳಿಬರಲವಕಾಶವಾಗುವುದು.

ಹಿಂದೂದೇಶದಲ್ಲಿ
ಹತ್ತಿ ಬೆಳೆಯು ಅರ್ಧದಷ್ಟು ಕಡಮೆಯಾಗಬೇಕು

ಕೇಂದ್ರಸಮಿತಿಯ ನಿರ್ಣಯ

ಈಗ ಹತ್ತಿ ಬೆಳೆಯುತ್ತಿರುವದನ್ನು ಶೇಕಡ ಐವತ್ತು ಕಡಿಮೆಮಾಡಿ ಇತರ ವದಾರ್ಥಗಳನ್ನು ಬೆಳೆಯುವಂತೆ ರೈತರಿಗೆ ಸೂಚನೆ ಕೊಡಬೇಕೆಂದು ಆಯ ಪ್ರಾಂತ್ಯಗಳ ಸರಕಾರಗಳನ್ನು ಕೇಂದ್ರ ಸರಕಾರವು ಪ್ರಾರ್ಥಿಸಿಕೊಳ್ಳಬೇಕೆಂಬ ನಿರ್ಣಯವು ಮುಂಬೈಯಲ್ಲಿ ನಡೆದ ಕೇಂದ್ರ ಹತ್ತಿ ಸಮಿತಿಯ ಸಭೆಯಲ್ಲಿ ಅನುಮೋದಿಸಲ್ಪಟ್ಟಿತು.

ನಿರ್ಣಯವನ್ನು ಸರ್ ಪುರುಷೋತ್ತಮದಾಸ್ ಠಾಕೂರ್ ದಾಸ್‌ರವರು ಸಭೆಯ ಮುಂದಿಟ್ಟರು. ಈ ನಿರ್ಣಯವು ಪೂರ್ಣಸಮ್ಮತದಿಂದ ಅಂಗೀಕೃತವಾಯಿತು. ಭಾರತದ ಹತ್ತಿಯನ್ನು ಕೊಂಡುಕೊಳ್ಳುತ್ತಿದ್ದ ಹೊರಗಿನವರು ಈಗ ಹತ್ತಿಯನ್ನು ಕೊಂಡುಕೊಳ್ಳದಂತಾಗಿರುವುದರಿಂದಲೂ ಹೊರಗಡೆಗೆ ಹತ್ತಿಯನ್ನು ಕಳುಹಿಸಲು ಸಾಧ್ಯವಾಗದೆ ಇರುವುದರಿಂದಲೂ ಹತ್ತಿ ಬೆಳೆಯನ್ನು ಕಡಿಮೆ ಮಾಡಬೇಕೆಂದು ಈ ನಿರ್ಣಯದಲ್ಲಿ ಸೂಚಿಸಲಾಗಿದೆ. ಅಲ್ಲದೆ ಹತ್ತಿ ಬೆಳೆಯುವವರಿಗೆ ಸರಕಾರಗಳು ತಕ್ಕ ರೀತಿಯಲ್ಲಿ ಪ್ರೋತ್ಸಾಹ ನೀಡಬೇಕೆಂದೂ ದ್ರವ್ಯ ಸಹಾಯ ಮಾಡಬೇಳಂದೂ ಹತ್ತಿ ಬೀಜ ಮೊದಲಾದವುಗಳನ್ನು ಉಚಿತವಾಗಿ ಸರಬರಾಯಿ ಮಾಡಬೇಕೆಂದೂ ಪ್ರಾರ್ಥಿಸಿಕೊಳ್ಳುವ ನಿರ್ಣಯವಾಯಿತು.

ವೈಸರಾಯರ ಬಳಿಗೆ ನಿಯೋಗಗೋಷ್ಠಿ

ಈ ಅಂಶಗಳೆಲ್ಲವನ್ನೂ ವಿವರಿಸಿ ತಕ್ಷಣ ಪರಿಹಾರವನ್ನು ಹತ್ತಿ ಬೆಳೆಯುವವರಿಗೆ ಕೊಡಿಸಿಕೊಡುವ ಉದ್ದೇಶದಿಂದ ವೈಸರಾಯರ ಬಳಿಗೆ ಒಂದು ನಿಯೋಗಗೋಷ್ಠಿ ಹೋಗಬೇಕೆಂದು ನಿರ್ಧರಿಸಲಾಯಿತು.

ತಾಯಲೆಂಡ ಯುದ್ಧ ಸಾರಿತು

ಬ್ರಿಟಿಷರು ತಾಯಲೆಂಡ ರಾಜಧಾನಿಯಾದ ಬಾಂಕಾಕ್ ಮೇಲೆ ಬಾಂಬು ಸುರಿಸಿದ ಕಾರಣ ತಾಯಲೆಂಡ ಇಂಗ್ಲೆಂಡು ಅಮೇರಿಕಗಳ ಮೇಲೆ ಯುದ್ಧ ಸಾರಿರುವದೆಂದು ಹೇಳಲಾಗಿದೆ.

ಪೂರ್ವ ಏಶಿಯಾದಲ್ಲಿ

ಜಪಾನೀ ಆಕ್ರಮಣದ ಗುಟ್ಟು.

ಈ ದ್ವೀಪಗಳು ಜಪಾನರ ದೇಶದ ದಕ್ಷಿಣಕ್ಕೆ ವ್ಯಾಸಿಫಿಕ್ ಸಾಗರದಲ್ಲಿ ಇರುತ್ತವೆ. ಜಾವಾ, ಬೋರ್ನಿಯೋ, ಸುಮಾತ್ರ ಮುಂತಾದ ನಡುಗಡ್ಡೆಗಳ ಸಮೂಹದಲ್ಲಿ ಇದ್ದುದರಿಂದ ಮತ್ತು ಜಾವಾ, ಸುಮಾತ್ರಾ, ಬೋರ್ನಿಯೋ, ಸಮೂಹ ಇವು ಆರ್ಯ ಸಂಸ್ಕೃತಿಗೆ ಪೂರ್ಣ ನೇದ್ದರಿಂದ ಫಿಲಿವಾಯಿನ್ ನಡುಗಡ್ಡೆಗಳ ಬೇರೆಯಾದರೂ ಆರ್ಯಸಂಸ್ಕೃತಿಯ ವರ್ಣಾಮುವು ಸಂಪೂರ್ಣವಾಗಿತ್ತು. ಭಾರತೀಯರ ಕಥೆಗಳು ಮತ್ತು ಪುರಾಣಗಳು ಈ ನಡುಗಡ್ಡೆಯಲ್ಲಿ ಪ್ರಚಾರದಲ್ಲಿದ್ದವು. ಅವರ ಭಾಷೆಯಲ್ಲಿ ಸಂಸ್ಕೃತ ಶಬ್ದಗಳು ಬೆರೆತವು. ಅವರ ಕಲೆಗಳು ಸಹ ಹಿಂದೀ ಕಲೆಗಳನ್ನು ಅನುಸರಿಸಿದವು. ಅವರು ಹಿಂದೀ ಕಾಯಿದೆಗಳಂತೆ ನಡೆಯುತ್ತಿದ್ದರು. ಅವರ ಉಪಾಧ್ಯಗಳು ಮತ್ತು ಆಭರಣಗಳು ಸಹ ಹಿಂದೀ ಜನರಂತೆ ಇದ್ದವು ಈ ಪ್ರಕಾರ ಫಿಲಿವಾಯಿನ್ ಜನರು ಸಂಪೂರ್ಣವಾಗಿ ಹಿಂದೂ ಸಂಸ್ಕೃತಿಗೆ ಒಳಪಟ್ಟವರು ಇದ್ದರು.

ಫಿಲಿವಾಯಿನ್ ನಡುಗಡ್ಡೆಗಳಲ್ಲಿ ಐರೋಪ್ಯ ಕ್ರೈಸ್ತಧರ್ಮದ ನಡುಗಡ್ಡೆಗಳು ಇರುತ್ತವೆ. ಅವರು ಮುಂದೆ ಸೇವಾರ ಅವರಿಗೆ ಕ್ರಿಸ್ತಧರ್ಮದ ದೀಕ್ಷೆಯನ್ನು ಕೊಟ್ಟರು. ಆ ಮೇಲೆ ಆ ದ್ವೀಪಗಳು ಸ್ಪೇನ ದೇಶದ ಆಧೀನವಾದವು ಸ್ಪೇನದೇಶವು ಕ್ಯಾಥೋಲಿಕ್ ಧರ್ಮದ್ದು ಇದ್ದು ಅಲ್ಲಿ ಮಿಶನರಿ ಜನರ ಸ್ವಾಧಿಪತ್ಯವು ವಿಶೇಷವಿದ್ದಿತು ಅದೇಮಿಶನರಿ ಜನರು ಫಿಲಿವಾಯ್ನಕ್ಕೆ ಒಂದು ಅಲ್ಲಿ ಧರ್ಮ ಪ್ರಸಾರದ ನಲುವಾಗಿ ಬಹಳ ಜುಲುಮೆಯನ್ನು ಮಾಡಹತ್ತಿದರು. ಹಿಂದೀ ಸಂಸ್ಕೃತಿನಷ್ಟ ಮಾಡಿ ಅವರ ಸ್ಥಳದಲ್ಲಿ ಪಾಶ್ಚಾತ್ಯ ಸಂಸ್ಕೃತಿಯನ್ನು ನೆಲೆಗೊಳಿಸುವ ಸ್ರಯತ್ನಗಳು ಬಹಳ ವೇಗದಿಂದ ಸಾಗಿದವು. ಕೆಲವು ಚೀನಿ ಜನರು ಅಲ್ಲಿ ವ್ಯಾಪಾರದ ನಲುವಾಗಿ ಬಂದಾಗ ಅವರಿಗೆ ಕ್ರೈಸ್ತ ಧರ್ಮ ಸ್ವೀಕರಿಸಲಿಕ್ಕೆ ಒತ್ತಾಯಮಾಡಿದರು ಅದಕ್ಕೆ ಅವರು ಒಪ್ಪದ್ದರಿಂದ ಅನರ ಕೊಲೆ ಮಾಡಲ್ಪಟ್ಟರು. ಪ್ರೊಟೆಸ್ಟಂಟ ಪಂಥಿಯರಾದ ಬ್ರಿಟಿಷ್ ಮತ್ತು ಡಚ್ಚರಿಗೂ ಸಹ ಅಲ್ಲಿ ಪ್ರವೇಶವಿದ್ದಿಲ್ಲ. ಈ ಪ್ರಕಾರ ರಾಜ್ಯಕಾರಭಾರವು ಎಷ್ಟೋ ದಿವಸಗಳವರೆಗೆ ಸಾಗಿತು. ಆಗ ಫಿಲಿವಾಯಿನ ಜನರು ಸುಸ್ತ ಸಂಸ್ಥೆಯನ್ನು ಸ್ಥಾಪಿಸಿದರು. ಡಾ|| ಜೋತಿ ರಿಝಾಲ್, ಬೋನಿಫೇಸಿಯೋ, ಮ್ಯಾಬಿನಿ, ಲುನಾರಿ ಒರ, ಜ್ಯಾರಿನಾಲ್ಡಿ ಮುಂತಾದ ರಾಷ್ಟ್ರ ಭಕ್ತರು ಆ ದಳದಲ್ಲಿ ಭಾಗವಹಿಸಿದರು. ೧೮೯೭ ರಲ್ಲಿ ಪ್ರಜಾನತ್ತಾತ್ಮಕ ಸರಕಾರದ ಸ್ಥಾಪನೆಯನ್ನು ಮಾಡಿದರು. ಮತ್ತು ಅಗ್ಯಿನಾಲಿ ಇವನು ಅದರ ಪ್ರೆಸಿಡೆಂಟ ನಾದನು. ಈ ಎಲ್ಲ ದೇಶಭಕ್ತರಿಗೆ ಇತರ ದೇಶದ ದೇಶಭಕ್ತರಂತೆ ಬಹಳ ಕಷ್ಟ ಸಹಿಸಬೇಕಾಯಿತು. ಆದರೆ ಅವರಿಗೆ ದೇಶರಕ್ಷಣೆಯನ್ನು ಸ್ವತಂತ್ರ ಮಾಡಲಿಕ್ಕೆ ಅವಕಾಶ ಸಿಗಲಿಲ್ಲ. ಸ್ಪೇನದ ಜನರನ್ನು ಹಸ್ತಗತಮಾಡಿ ಸ್ವಾತಂತ್ರ್ಯಮಂದಿರದಲ್ಲಿ ಪ್ರವೇಶ ಪಡೆಯುವ ಕಾಲವು ಸಮೀಪಕ್ಕೆ ಬಂದಿತು. ಅಷ್ಟರಲ್ಲಿ ಸ್ಪೇನ ಮತ್ತು ಅಮೇರಿಕಾ ಇವುಗಳಲ್ಲಿ ಯುದ್ಧವು ಪ್ರಾರಂಭವಾಯಿತು. ಅದರಲ್ಲಿ ಸ್ಪೇನ ಸೋತು ಅಮೇರಿಕಾಕ್ಕೆ ವಿಜಯ ದೊರೆಯಿತು ಮತ್ತು ಸ್ಪೇನ ನವರಾದೆನರು ಅಮೇರಿಕದಿಂದ ಕೆಲವು ಹಣವನ್ನು ತಕ್ಕೊಂಡು ಫಿಲಿವಾಯಿನ್ ನಡುಗಡ್ಡೆಗಳನ್ನು ಅವರಿಗೆ ನಾಲಿಬಿಟ್ಟರು ಮತ್ತು ಫಿಲಿವಾಯಿನ್ ಜನರು ಯಾಯಿತನಕ ಒಬ್ಬ ಸ್ವಾತಂತ್ರ್ಯದ ತುತ್ತು ಬಾಯಿಯಲ್ಲ ಹೋಗದೇ ಮಣ್ಣಾಪಾಲಾಯಿತು. ಅಮೇರಿಕೆಯನವರು ಸ್ವಾತಂತ್ರ್ಯವನ್ನು ಕೊಡುತ್ತೇವೆಂದು ಹೇಳಿ ಅವರಲ್ಲಿ ಕೆಲವರನ್ನು ಒಲಿಸಿಕೊಂಡರು ಮತ್ತು ಕೆಲವರು ಸ್ವಾತಂತ್ರ್ಯ ಭಕ್ತರಾದ ಅಮೇರಿಕನ್ನರು ತಮಗೆ ಸ್ವಾತಂತ್ರ್ಯಕೊಡದೆ ಇರಲಿಕ್ಕಿಲ್ಲೆಂದು ತಿಳಿದು ಮೋಸಗೊಂಡರು ಅಮೇರಿಕೆಯು ಸಂಗಡಾದರೂ ೩೫ ವರ್ಷಗಳ ವರೆಗೆ ಕಾದಾಡಿದರು. ಆದರೆ ಬಲಾಢ್ಯರಾದ ಅಮೇರಿಕನ್ನರು ಈ ಸ್ವಾತಂತ್ರ್ಯ ಸಂಗ್ರಾಮವನ್ನು ನಂದಿಸಿಬಿಟ್ಟರು. ಮತ್ತು ಸ್ವಲ್ಪ ಅಧಿಕಾರಗಳನ್ನು ಕೊಟ್ಟರು. ೧೯೧೬ ರಲ್ಲಿ ಜೋನ್ಸಬಿಲ್ ಎಂಬ ಕಾಯ್ದೆಮಾಡಿ ಮತ್ತು ಕೆಲವು ಅಧಿಕಾರಿಗಳನ್ನು ಅವರ ಕೈಯಲ್ಲಿ ಕೊಟ್ಟರು. ಆದರೆ ಕೊನೆಯಸರ್ಣಯದ(Veto power)ಅಧಿಕಾರವನ್ನು ಗವ್ಹರ್ನರ ಜನರಲ್ ಇವರ ಕೈಯಲ್ಲಿ ಇಟ್ಟರು. ಈ ಮಿಲ್ಲನ್ನು ನಡ್ಡಿಸಿಯ (ಹಿಂದೂಸ್ಥಾನದ) ೧೯೧೯ ರ ಮಾಂಟೆಗ್ಯೂ ಚೇಮ್ಸ್‌ಫರ್ಡ ಕಾಯ್ದೆಗೆ ಹೋಲಿಸಬಹುದು. ಆದ್ದರಿಂದ ಸಮಾಧಾನ ಪಡದೆ ಅಲ್ಲಿಯ ಜನರು ತಮ್ಮ ಅಂದೋಲನವನ್ನು ಹಾಗೇ ಮುಂದೆ ಸಾಗಿಸಿದರು. ೧೯೩೫ ರಲ್ಲಿ ಇನ್ನು ೧೦ ವರ್ಷಗಳಮೇಲೆ ಫಿಲಿವಾಯಿನ್ ಜನರಿಗೆ ಸ್ವಾತಂತ್ರ್ಯ ಸಿಗುವದೆಂದು ಅಮೇರಿಕನ್ ಸರಕಾರದವರು ಒಂದು ಘೋಷಣೆಯನ್ನು ಮಾಡಿದರು. ಆ ಸ್ವಾತಂತ್ರ್ಯದಲ್ಲಿ ಸಹ ಕೆಲವೆ (Safegaurds) ರಕ್ಷಾಬಂಧಗಳು ಉಳಿಯುವುವಂತೆ.

ಈಗ್ಗೆ ಇದ್ದ ಪಾರ್ಲಿಮೆಂಟಿನ ಶಾಖೆಗಳು ಎರಡು ಇರುತ್ತವೆ. ಒಂದರಲ್ಲಿ ೨೬ ಸಭಾಸದರು ಇದ್ದು, ಅದಕ್ಕೆ ಸಿನೆಟ್ ಎಂದು ಅನ್ನುತ್ತಾರೆ. ಮತ್ತೊಂದರಲ್ಲಿ ೯೯ ಸಭಾಸದರು ಇದ್ದು ಅದಕ್ಕೆ ರಿಪ್ರೆಜಂಟೇಟಿವ ಅಸೆಂಬ್ಲಿ ಅನ್ನುತ್ತಾರೆ. ಇಲ್ಲಿ ೧೩೦೦ ಮ್ಯುನಿಸಿಪಾಲಿಟಿಗಳು, ೨೫೦ ಡಿಸ್ಟ್ರಿಕ್ಟ ಕೋಕಲ್ ಬೋರ್ಡುಗಳು, ೧೬೮೦೦ ಗ್ರಾಮ ಪಂಚಾಯ್ತಿಗಳು ಇರುತ್ತವೆ. ಇಲ್ಲಿಯ ಮುಖ್ಯ ನಾಣ್ಯಕ್ಕೆ ಪೈಸೋ ಅನ್ನುತ್ತಾರೆ. ಅವರ ಬೆಲೆಯು ಅರ್ಧ ಡಾಲರದಷ್ಟು ಇರುತ್ತದೆ.

ಈ ಪ್ರಕಾರ ೧೯೪೬ ರಲ್ಲಿ ಸ್ವಾತಂತ್ರ್ಯ ಸಿಗುವ ಪ್ರಸಂಗವು ಸಮೀಪದಲ್ಲಿ ಬಂದರೂ ಈ ದುರ್ದೈವಿ ನಡುಗಡ್ಡೆಗಳು ಈಗ ಜಪಾನಿ ಸಾಮ್ರಾಜ್ಯ ತೃಪೆಗೆ ಬರುತ್ತಿದ್ದನ್ನು ನೋಡಿ ಯಾವ ಸ್ವಾತಂತ್ರ್ಯ ಪ್ರೇಮಿ ಜನರಿಗೆ ದುಃಖವೆನಿಸಲಿಕ್ಕಿಲ್ಲ!!!

(ಕರ್ಮವೀರ)

ಪೆಸಿಫಿಕ್‌ನ ಇತರ ಕ್ಷೇತ್ರಗಳು.

ಆಸ್ಟ್ರೇಲಿಯಾಕ್ಕೆ ಸಮೀಪವಿರುವ ರಾಬೌಲ ದ್ವೀಪದಲ್ಲಿ ಜಪಾನರು ೧೫೦೦೦ ಯೋಧರನ್ನು ಇಳಿಸಿರುವರೆಂದು ತಿಳಿದು ಬಂದಿದೆ.

ಸೆಲಿಬಸ್ ದ್ವೀಪದ ಕೆಂಡಾರ್ಟ ಮತ್ತು ಜೋರ್ನಿಯೋದ ಬಾಲಕ ಪಾವಾನ ಒಂದೆರಡುಗಳಲ್ಲಿ ಜಪಾನರು ನುಗ್ಗಿರುವರೆಂದು ಹೇಳಲಾಗಿದೆ.

೬ ಶತ್ರು ಹಡಗಗಳು ಮುಳಿಗಿದವು.

ಮಸಾಕರ ಜಲಸಂಧಿಯ ಹತ್ತಿರ ಜಪಾನರ ೬ ಹಡಗುಗಳನ್ನು ಮುಳಿಗಿಸಲಾಯ್ತೆಂದೂ ಅದರ ಅನೇಕ ಹಡಗುಗಳಿಗೆ ಜಖಂ ಆಯ್ತೆಂದೂ ಪ್ರಕಟವಾಗಿದೆ.

ಯುದ್ಧ ರಂಗದ ವಾರ್ತೆಗಳು

ಜಪಾನಿನ ಉದ್ದೇಶ

ಪ್ರಧಾನ ಮಂತ್ರಿಗಳ ಭಾಷಣ

ಪರಸ್ಪರ ಸಂಪತ್ಸಾಧನೆಗೆ ಸಹಕರಿಸುವುದೇ ನಮ್ಮ ಗುರಿ

ಜಪಾನಿನ ಮಹಾ ಪ್ರಧಾನರಾದ ಜನಿ ಟೋಜೋರವರು ಈ ದಿನ ಶಾಸನಸಭೆಯಲ್ಲಿ ಮಾತನಾಡುತ್ತ ಜಪಾನು ತನ್ನ ಉದ್ದಿಶ್ಯವನ್ನು ಸಂಪೂರ್ಣವಾಗಿ ಸಾಧಿಸಿದ ಹೊರತು ಶಸ್ತ್ರವನ್ನು ಕೆಳಗಿಡುವದಿಲ್ಲವೆಂದು ತಿಳಿಸಿದರು.

ಯುದ್ಧವು ನಡೆಯುತ್ತಿರುವಾಗ, ಜಪಾನು ತನ್ನ ಸಂಗ್ರಾಮ ಶಕ್ತಿಯನ್ನು ಬಲಪಡಿಸಿಕೊಳ್ಳಲೋಸುಗ ಮುಖ್ಯವಾದ ಬಲ ಮೂಲಗಳನ್ನೂ ಮತ್ತು ಸಾಂವತ್ತಿಕ ಕ್ಷೇತ್ರಗಳನ್ನೂ ಹಿಡಿಯಲು ಪ್ರಯತ್ನಿಸುವುದೆಂದು ನುಡಿದರು. ಜರ್ಮನಿ ಮತ್ತು ಇಟಲಿಯೊಂದಿಗೆ ಸಹಕರಿಸಿ ಇನ್ನೂ ಹೆಚ್ಚು ಉಗ್ರವಾದ ಕಾರ್ಯಕ್ರಮಗಳನ್ನು ಕೈಕೊಳ್ಳುವುದಾಗಿ ತಿಳಿಸಿದರು.

ಜನಿ ಟೋಜೋರವರು ಪೂರ್ವ ಏಷ್ಯಾದಲ್ಲಿ ಜಪಾನಿನ ಉದ್ದಿಶ್ಯವನ್ನೂ ಮತ್ತು ವಿವರಿಸುತ್ತಾ ಪರಸ್ಪರ ಸಂಪತ್ಸಾಧನೆಗೆ ಸಹಕರಿಸುವಂತೆ ದೇಶಗಳ ಗುಂಪೊಂದನ್ನು ಸೃಷ್ಟಿಸುವುದೇ ಜಪಾನಿನ ಗುರಿಯೆಂದರು. ಈ ಕಾರ್ಯಕ್ರಮದಲ್ಲಿ ಸಹಕರಿಸುವವರಿಗೆ ಸ್ವಾತಂತ್ರ್ಯವನ್ನು ಕೊಡುವುದಾಗಿ ಅವರು ತಿಳಿಸಿದರು. ಮಂಚುಕೋ ಚೀಣಾ ರಾಷ್ಟ್ರೀಯ ಸರಕಾರ ಇಂಡೋ ಚೀಣಾ ಮತ್ತು ಥೈಲೆಂಡ ಸರಕಾರಗಳು ಇವೆಲ್ಲ ಜಪಾನಿನೊಂದಿಗೆ ಸಹಕರಿಸುತ್ತೇವೆಯೆಂದು ಅವರು ಹೇಳಿದರು.

ಎಲ್ಲರೂ ಸಂಪತ್ಸಮೃದ್ಧಿಯಿಂದ ಜೀವಿಸಬೇಕೆಂಬುದನ್ನು ಫಿಲಿಪೈನಿನವರು ಅರಿತು ಸಹಕರಿಸುವದಾದರೆ ಅವರ ಸ್ವಾತಂತ್ರ್ಯವನ್ನೂ ಆತ್ಮಗೌರವವನ್ನೂ ಉಳಿಸಲು ಜಪಾನು ಸಿದ್ಧವಾಗಿದೆಯೆಂದರು.

ಈ ಸಂಗ್ರಾಮದಲ್ಲಿ ಬ್ರಿಟನ್ನಿನ ಮತ್ತು ಅಮೆರಿಕದ ಸಾಧನ ಸಂಪತ್ತುಗಳ ಬಲವನ್ನು ಕಡೆಗಾಣಿಸುವುದು ಹುಚ್ಚುತನವೆಂದು ಜನಿ ಟೋಜೋರವರು ನುಡಿದರು.

ರಾಷ್ಟ್ರದ ಬಲವನ್ನು ಹೆಚ್ಚಿಸಿಕೊಳ್ಳಲು ಮತ್ತು ಈಗಿನ ಯುದ್ಧವನ್ನು ಕಟ್ಟ ಕಡೆಯವರೆಗೆ ನಡೆಸಲು ಜಪಾನ್ ಪಡಗಳಿಗೆ ಸಂಗ್ರಾಮ ವಸ್ತುಗಳನ್ನು ಸರಪರಾಜು ಮಾಡಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದೆಂದು ಅವರು ತಿಳಿಸಿದರು

ಆಸ್ಟ್ರೇಲಿಯಾ ಮಂತ್ರಿಗಳ ಬೇಡಿಕೆ

ಆಸ್ಟ್ರೇಲಿಯಾ ಯೋಧರು ಬಹಳ ಧೈರ್ಯದಿಂದ ರಕ್ತಕಣ್ಣೀರೊಡನೆ ಹೋರಾಡುತ್ತಿರುವರು ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ನಮಗೆ ಸ್ಥಾನವಿಲ್ಲ, ನಮಗೆ ವಿನಾಕಾರಣ ನಷ್ಟ ವಿಪತ್ತು ಹೆಚ್ಚುತ್ತಲಿದೆ. ಪೆಸಿಫಿಕ್ ನಲ್ಲಿ ಎಲ್ಲರೂ ಏಕೀಭವಿಸಿ ಶತ್ರುಗಳನ್ನು ಎದುರಿಸುವುದರಿಂದ ಶತ್ರುವನ್ನು ಸೋಲಿಸಲು ಸಾಧ್ಯವಾಗುತ್ತದೆ. ಪೆಸಿಫಿಕ್ ಕ್ಷೇತ್ರದಲ್ಲಿರುವ ೯೦ ಲಕ್ಷ ಪ್ರೌಢ ವರಿಗೆಯ ಯುದ್ಧ ವಿಚಾರದಲ್ಲಿ ಮಾತನಾಡುವ ಅಧಿಕಾರ ನೀಡು ಎಂದು ಆಸ್ಟ್ರೇಲಿಯಾದ ಪ್ರಧಾನ ಮಂತ್ರಿಗಳಾದ ಕರ್ಟಿನ್‌ರವರು ಹೇಳಿಕೆಯೊಂದನ್ನು ಕೊಟ್ಟರು. ವಿಮಾನಗಳನ್ನೂ ಯುದ್ಧ ಸಾಮಗ್ರಿಗಳನ್ನೂ ತೀವ್ರವಾಗಿ ಕಳುಹಿಸಬೇಕೆಂದು ಕರ್ಟಿನ್‌ರವರು ಅಮೆರಿಕಾದ ಅಧ್ಯಕ್ಷರಾದ ರೂಸವೆಲ್ಟರಿಗೆ ಪತ್ರ ಬರೆದಿರುವರೆಂದು ಗೊತ್ತಾಗಿದೆ.

ಸತ್ತವರು ಮಾತ್ರ ಸಹಕರಿಸಬಹುದು

ಆಸ್ಟ್ರೇಲಿಯಾದೊಡನೆ ಜಪಾನು ಸಹಕರಿಸುವ ಸಂಭವವಿದೆಯೆಂದು ಜಪಾನು ಮುಖ್ಯ ಮಂತ್ರಿ ಟೋಜೋರವರು ಹೇಳಿದವಿಚಾರಕ್ಕೆ ಸತ್ತ ಆಸ್ಟ್ರೇಲಿಯನರು ಜಪಾನಿನೊಡನೆ ಸಹಕರಿಸಬಹುದು ಎಂದು ಆಸ್ಟ್ರೇಲಿಯಾ ಮಂತ್ರಿಗಳು ಹೇಳಿದರು. ಕದನವನ್ನು ನಿಜಸುವುದೇ ಅಸಾಧ್ಯವೆಂದು ಕಂಡುಬಂದಾಗ ಮಾತ್ರ ಸಲ್ಲಿಸಲಾಗುವುದು.

ಮಲಯಾ-ಸಿಂಗಪುರಕ್ಕಾಗಿ ಹೋರಾಟ

ದಕ್ಷಿಣ ಭಾಗದಲ್ಲಿ ಜಪಾನರ ಒತ್ತಡವು ಹೆಚ್ಚುದಕಾರಣ ಬ್ರಿಟಿಷ್ ದಂಡುಗಳು ಹಿಂದಕ್ಕೆ ಸರಿಯುತ್ತಿರುವವೆಂದು ಲಂಡನ್ ಪ್ರೆಕಟನೆಯಿಂದ ಗೊತ್ತಾಗಿದೆ. ಜಪಾನದಳಗಳಿಂದ ಆವರಿಸಲ್ಪಟ್ಟ ಆಸ್ಟ್ರೇಲಿ ಸೈನ್ಯೆಗಳು ತಪ್ಪಿಸಿಕೊಂಡು ಬಂದು ತಮ್ಮ ಮೂಲ ಸೈನ್ಯವನ್ನು ಸೇರಲು ಸಾಕುಸಾಕಾಗಿ ಹೋಯಿತು. ನಾಲ್ಕು ರಾತ್ರಿಗಳ ಹೋರಾಟದನಂತರ ಅತಿಶಯ ನಷ್ಟವಾದಮೇಲೆ ಬೇರ್ಪಡಿಸಲ್ಪಟ್ಟ ಆಸ್ಟ್ರೇಲಿಯಾ ಸೈನಿಕರು ಮತ್ತೆ ತಮ್ಮ ಸೈನ್ಯಕ್ಕೆ ಬಂದರೆಂದು ಮೇಜರ್ ಜನರಲ್ ಬೆನೆಟರವರು ತಂತಿ ಕಳುಹಿಸಿದ್ದಾರೆ.

ಪಶ್ಚಿಮ ತೀರದಲ್ಲಿ ಜಪಾನರು ಬಂದಿಳಿಯುತ್ತಲೇ ಇದ್ದಾರೆ. ಅದೇ ಅಪಾಯಕರವಾದ ಸ್ಥಾನ. ೨೬ ನೆಯ ತಾ. ಜಪಾನರು ಬಾಟು ಪಹಾಟನನ್ನು ಆಕ್ರಮಿಸಿರುವರೆಂದು ಗೊತ್ತಾಗಿದೆ. ಇದು ಸಿಂಗಪುರಕ್ಕೆ ಸುಮಾರು ೫೦ ಮೈಲಿಗಳ ದೂರದಲ್ಲಿದೆ.

ಬರ್ಮಾದಲ್ಲಿ

ಶತ್ರುಗಳು ಮೌಲ್ಮೈನ್ ನಗರವನ್ನು ನಮೀಪಿಸುತ್ತಿರುವನೆಂದೂ, ಅವರು ಹೆಚ್ಚು ಸಂಖೆಯಲ್ಲಿದ್ದ ಕಾರಣ, ಪ್ರಬಲ ಸೈನ್ಯವು ಆಕ್ಷೇತ್ರದಿಂದ ಹಿಂದಕ್ಕೆ ಸರಿಯಬೇಕಾಯ್ತೆಂದೂ ವಾರ್ತೆಗಳು ಹೇಳುತ್ತವೆ. ಚೀನದಿಂದ ಸೈನ್ಯಗಳು ಬರುತ್ತಲಿವೆ. ಅವು ಜಪಾನನ್ನು ಎದುರಿಸಿ ಯುದ್ಧಮಾಡಲು ಬರ್ಮಾ ಭಾಗಕ್ಕೆ ಹೊರಟಿವೆ.

ಬಂಗಾಳ ಸಮುದ್ರದಲ್ಲಿ ಹಡಗುಗಳು ಮುಳುಗಿದವು

ಎರಡು ವರ್ತಕ ಹಡಗುಗಳು ಬಂಗಾಳಾಕೊಲ್ಲಿಯಲ್ಲಿ ಶತ್ರುಗಳ ಕಾರ್ಯದಿಂದ ಮುಳುಗಿದವೆಂದೂ, ಸಾಯದೇ ಉಳಿದವರು ಬರ್ಮಾದ ಒಂದು ಬಂದರನ್ನು ಸೇರಿದರೆಂದೂ ಉಳಿದ ವಿವರಗಳನ್ನು ಹಿಂದಿನಿಂದ ಕೊಡಲಾಗುವದೆಂದೂ ರಂಗೂನ ಬಾತ್ಮಿಯು ಹೇಳುತ್ತದೆ.

ಕಲ್ಕತ್ತಾ ನಗರವು ಅರ್ಧ ಖಾಲಿಯಾಗಿದೆ

ರೈಲ್ವೆ ಅಧಿಕಾರಿಗಳ ಹೇಳಿಕೆ

ಈಸ್ಟ್ ಇಂಡೀಸ್ ರೈಲ್ವೆಯ ಅಧಿಕಾರಿಗಳು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿಕೆಕೊಡುತ್ತ ಡಿಸೆಂಬರ್ ೧೩ ರಿಂದ ಜನವರಿ ೨೦ ರವರಿಗೆ ತಮ್ಮ ರೈಲ್ವೆಗಳಲ್ಲಿ ೫,೮೨,೫೭೦ ಮಂದಿ ಕಲ್ಕತ್ತ ನಗರವನ್ನು ಬಿಟ್ಟು ಬೇರೆ ಕಡೆಗೆ ಪ್ರಯಾಣಮಾಡಿರುವರೆಂದೂ ಸಾಮಾನ್ಯ ಪರಿಸ್ಥಿತಿಯಲ್ಲಿ ೨॥ ಲಕ್ಷ ಮಂದಿ ಪ್ರಯಾಣಮಾಡುತ್ತಿದ್ದರೆಂದೂ ಸೂಚಿಸಿದರು.

ಕಲ್ಕತ್ತ ನಗರದಿಂದ ಪ್ರಜೆಗಳನ್ನು ಸುರಕ್ಷಿತವಾದ ಸ್ಥಳಗಳಿಗೆ ಸಾಗಿಸುವ ಪ್ರಸಂಗಬಂದರೆ, ಅದಕ್ಕೆ ರೈಲ್ವೆಗಳವರು ತಕ್ಕ ಕಾರ್ಯಕ್ರಮವನ್ನು ಯೋಚಿಸಿದ್ದಾರೆಂದೂ ಕಲ್ಕತ್ತ ನಗರದಿಂದ ಮೂರು ರೈಲ್ವೆ ಕಂಪನಿಗಳೂ ಪ್ರತಿದಿನವೂ ೧ ಲಕ್ಷ ಪ್ರಜೆಗಳನ್ನು ಸಾಗಿಸಬಹುದೆಂದೂ ಸೂಚಿಸಿದರು.



ದಿವಂಗತ ಶ್ರೀ ಯಸ್. ಎಲ್. ರಾಮಸ್ವಾಮಿ ನಾಯಿಡು,

— ಚೀಫ್ ಏಜೆಂಟ್ —

ಜೊಂಜಾಯಿ ಕಂಪನಿ, **ಬಳ್ಳಾರಿ.**

ಈ ಮಹನೀಯರು ೨೨ ನೆಯ ಜನವರಿ ೧೯೪೨ ರ ದಿನದ ತಮ್ಮ ಸ್ವಗೃಹದಲ್ಲಿ ಸಾಯಂಕಾಲ ೬-೪೫ ಕ್ಕೆ ಹೃದಯ ವಿಕಾರದಿಂದ ವೈಕುಂಠವಾಸಿಗಳಾದರು. ೧೮೯೭ ರಲ್ಲಿ, ೧೬ ನೇ ಮಾಸಿಕ ವೇತನದ ಕೆಲಸಕ್ಕೆ ಸೇರಿ ೪೫ ವರ್ಷಗಳ ಅಪಾರ ಅನುಭವದಿಂದ ಚೀಫ್ ಏಜಂಟರಂಥ ಉನ್ನತ ಪದವಿಗೇರಿದ್ದರು. ಸದರಿ ಕಂಪನಿಯಲ್ಲಿ ಇಂಥಾ ಉನ್ನತ ಸ್ಥಾನಕ್ಕೇರಿದ ಪ್ರಥಮ ಭಾರತೀಯರು ಇವರೇ! ಇವರು ಜಿಲ್ಲಾ ಯುದ್ಧ ಸಮಿತಿ, ಸ್ಥಾನಿಕ ಆರಳಿ ಸಮಿತಿಯ ಸದಸ್ಯರಿದ್ದು (ಪಶ್ಚಿಮ ಭಾಗ) ಗವರ್ನಮೆಂಟ್ ಇಂಡಸ್ಟ್ರಿಯಲ್ ಶಾಲೆಯ ಅಧಿಕಾರೇತರ ನಿಂದರ್ಶಕರೂ ಗಾಂಧಿನಗರ ವ್ಯಾಧಿಮಿಕ ಶಾಲೆಯ ಅಧ್ಯಕ್ಷರಾಗಿಯೂ ಇದ್ದರು. ಗಾಂಧಿನಗರ ಶಾಲೆಯು ದುಃಖ ಸೂಚಕವಾಗಿ ಮುಚ್ಚಲ್ಪಟ್ಟಿದ್ದಲ್ಲದೆ ಕಾರ್ಯಕಾರಿಣೀ ಸಮಿತಿಯು ಶ್ರೀಬೆಲ್ಲೊಣಭೀಮರಾಯರ ಅಧ್ಯಕ್ಷತೆಯಲ್ಲಿ ನೇರಿ ದುಃಖ ಸೂಚಕ ನಿರ್ಣಯ ಮಾಡಿ ಹೆಡ್ಮಾಸ್ಟರ್ ಪಿ. ಆನಂದತೀರ್ಥಾಚಾರ್ ಮೂಲಕ ಕುಟುಂಬೀಕರಿಗೆ ಸಾನುಭೂತಿಯನ್ನು ವ್ಯಕ್ತಪಡಿಸಲಾಯಿತು. ಕಾಟಿನ್ ಮಾರ್ಕೆಟ್ ದಿನಂಗತರ ಗೌರವಕ್ಕಾಗಿ ಮುಚ್ಚಲ್ಪಟ್ಟಿತ್ತು. ಪತ್ನಿ, ಇಬ್ಬರು ಪುತ್ರರು, ಸಾಲ್ಕರು ಪುತ್ರಿಯರು ಮತ್ತು ಅನೇಕ ಬಂಧುಬಾಂಧವರನ್ನು ತ್ಯಜಿಸಿ ನರಂಧಾಮನನ್ನೈದಿದರು.

ಭಗವಂತನು ಇವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

ಸಿರುಗುಪ್ಪೆ ತಾಲೂಕು ಎಡೆಡ್ ಎಲಿಮೆಂಟರಿ ಶಾಲೋಪಾಧ್ಯಾಯರ ಸಂಘ

೨೪-೧-೪೨ ನೆಯ ತಾ. ತೆಕ್ಕಲಕೋಟೆ ಗ್ರಾಮದಲ್ಲಿ ಕರೆತು ಕೆಳಗೆ ಕಾಣಿಸಿದ ತೀರ್ಮಾನಗಳಾದವು.

೧ ಶೇ ೨೫ ರಷ್ಟು ಶಾಲಾಯೋಗ್ಯ ವಯಸ್ಸಿನ ಬಾಲೆಯರನ್ನು ಸುರಿಸಬೇಕೆಂಬ ಸರಕಾರದ ನಿಯಮಕ್ಕೆ ದಕ್ಷಿಣ ಇಂಡಿಯ ಉಪಾಧ್ಯಾಯರ ಸಂಘವು ಅದನ್ನು ಶೇಕಡ ೧೦ ಕ್ಕೆ ಇಳಿಸಬೇಕೆಂಬ ಸಲಹೆ ಕೊಟ್ಟಿರುವುದನ್ನು ಈ ಸಭೆಯು ಅನುಮೋದಿಸುತ್ತದೆ.

೨ ವ್ಯಾಧಿಮಿಕ ವಿದ್ಯಾಭ್ಯಾಸ ಸಿಬಂಧನೆಗಳ ಬದಲಾವಣೆಯಿಂದಲೇ ಕೃಷ್ಣಿ ಹೊಂದಲು ಬರುವಂತಿಲ್ಲ. ಇದರ ಪ್ರಚಾರವನ್ನು ಪೋಲೀಸಿನವರೂ, ಲೆ ವಿ ನ್ಯೂ ಖಾತೆಯವರೂ ಕೈಗೊಳ್ಳುವಂತೆ ಸರಕಾರದವರು ಮಾಡಿದರೆ ಪರಿಣಾಮಕಾರಿಯಾಗುವದೆಂಬುದನ್ನು ಈ ಸಭೆಯು ಸೂಚಿಸುತ್ತದೆ.

೩ ಶೇ ೨೫ ಸೇರಿಸಬೇಕೆಂಬ ನಿಯಮವನ್ನು ಜಾರಿಯಲ್ಲಿಡುವದಾದರೆ 5½ ರಿಂದ 8½ ವರೆಯಿನ ಬಾಲೆಯರ ವಿಷಯಕ್ಕೆ ಎಲಾತ್ಕಾರ ವಿದ್ಯಾಭ್ಯಾಸವನ್ನು ಜಾರಿಯಲ್ಲಿ ತರಲು ಈ ಸಭೆಯು ಕೋರುತ್ತದೆ.

೪ ಜಿಲ್ಲಾ ವಿದ್ಯಾಧಿಕಾರಿಗಳನ್ನು ಜಲ್ಲಾ ಬೋರ್ಡು ಅಧ್ಯಕ್ಷರನ್ನು ಭೇಟಿಯಾಗಿ ಈ ವಿಷಯಗಳನ್ನು ಹೇಳಿಕೊಳ್ಳಲು ಈ ಸಂಘವೂ ಮತ್ತು ಶಿರುಗುಪ್ಪ ತಾ. ಜಿಲ್ಲಾ ಬೋರ್ಡು ಉಪಾಧ್ಯಾಯರು ಸಂಘವೂ ಒಂದು ನಿಯೋಗಕ್ಕೆ ಶಿಯನ್ನು (Deputation) ಕಳುಹಿಸಲು ತೀರ್ಮಾನಿಸುತ್ತದೆ.

ಹನುಮಂತರಾವು ನಿಟ್ಟೂರು
ಕಾರ್ಯದರ್ಶಿ

ಬಳ್ಳಾರಿ

ಸ್ವಾತಂತ್ರ್ಯ ದಿನಾಚರಣೆ

೨೬ ನೆಯ ತಾ. ಪ್ರಾತಃಕಾಲ ಧ್ವಜವಂದನೆಯೂ ಸಾಯಂಕಾಲ ಸಾಂಬಮೂರ್ತಿ ಮೈದಾನದಲ್ಲಿ ಶ್ರೀ ಹಾ. ಸೀತಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೂ ನೆರವೇರಿದವು. ಶ್ರೀ ಟಿ. ಸುಬ್ರಹ್ಮಣ್ಯಂರವರು ಸ್ವಾತಂತ್ರ್ಯ ದಿನಾಚರಣೆಯ ಮಹತ್ವವನ್ನು ಹೇಳಿ ಪ್ರತಿಜ್ಞೆಯನ್ನು ಎಲ್ಲರಿಂದಲೂ ಸ್ವೀಕರಿಸಿದರು. 'ವಂದೇ ಮಾತರಂ' ರಾಷ್ಟ್ರಗೀತೆಯ ನಂತರ ಸಭೆಯು ಮುಗಿಯಿತು.

ಕುರುಗೋಡಿನಲ್ಲಿ

ಶ್ರೀ ಕೆ. ಆರ್. ಗುಪ್ತರು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಓದಿ ಹೇಳಿ ಅದರ ಮಹತ್ವದಬಗ್ಗೆ ಹರಿಜನ ಕೇರಿಯಲ್ಲಿ ಭಾಷಣ ಕೊಟ್ಟರು.

ಕನ್ನಡ ಹೈಸ್ಕೂಲ್

ಮದ್ರಾಸು ವೀರಶೈವ ವಿದ್ಯಾ ಸಂವರ್ಧಕ ಸಂಘದವರಿಂದ, ಬಳ್ಳಾರಿಯಲ್ಲಿ ಕನ್ನಡ ಹೈಸ್ಕೂಲ್ ಪ್ರಾರಂಭಿಸಲು ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್‌ರವರು ಆಜ್ಞೆ ಮಾಡಿದ ಪ್ರಕಾರಕ್ಕೆ ೨೫ ಸಾವಿರ ರೂ. ಮೂಲ ಧನವನ್ನಾಗಿ ಜೀರ್ಣವಿಸಲು ಸಂಘದವರು ೨೬-೧-೪೨ ನೆಯ ಜನರಲ್ ಬಾಡಿ ಮೀಟಿಂಗ್‌ನಲ್ಲಿ ನಿರ್ಧರಿಸಿರುತ್ತಾರೆ. ೩೧-೫-೪೧ ರ ನಳಿಗಾಗಿ ಸಂಘದಿಂದ ವಿದ್ಯಾಭ್ಯಾಸಕ್ಕಾಗಿ ಹಣವನ್ನು ಪಡೆದು ವಿದ್ಯಾರ್ಥಿಗಳು ೩೧-೫-೪೨ ರವಳಿಗಾಗಿ ಅರ್ಧದಷ್ಟು ಪಾಕ ಮುಗಿಸಿದರೆ ಉಳಿದರ್ಧ ಸೊತ್ತನ್ನು ಸಾಲ ಮಾಡುವುದಾಗಿಯೂ, ಪಾಕ ೧೦ ರವನ ವಿದ್ಯಾರ್ಥಿಗಳು ಸಂಘದ ಸುಹೃತ್ಕಾರ್ಯವನ್ನು ಗಮನಿಸಿ, ಋಣಮುಕ್ತರಾಗಬೇಕೆಂದೂ, ಕಾರ್ಯದರ್ಶಿಗಳಾದ ಶ್ರೀ ಶಿ ನಾಚನ್ನವಪ್ಪನವರು ಕೋರುತ್ತಾರೆ.

ಜಪಾನಿಯರು ಅನೇಕ ತರಹ ಆಟಗಳನ್ನು ಹೂಡುತ್ತಿದ್ದಾರೆ

ಭಾರತೀಯರಂತೆ ವೇಷ ಹಾಕಿ ಯುದ್ಧ ಮಾಡುತ್ತಿದ್ದಾರೆ

ಮಲಯಾದಲ್ಲಿ ಯುದ್ಧ ನಡಾಡುತ್ತಿರುವ ಜಪಾನ್ ಸೈನಿಕರು ಅನೇಕ ಬಗೆಗಳಪ ವೇಷಧರಿಸಿ ಬ್ರಿಟಿಷ್ ಸೈನಿಕರನ್ನು ಮೋಸಗೊಳಿಸಲು ಯತ್ನಿಸುತ್ತಿದ್ದಾರೆ. ಭಾರತೀಯರು, ಚೀನೀಯರು ಮಲಯ ಸೈನಿಕರಂತೆ ಅವರು ವೇಷಗಳನ್ನು ಧರಿಸಿಯುದ್ಧ ಮಾಡುತ್ತಿರುವುದಾಗಿ ಡೇಲಿ ಟೆಲಿಗ್ರಾಫ್ ಪತ್ರಿಕೆಯ ಸುದ್ದಿಗಾರರು ತಮ್ಮ ಪತ್ರಿಕೆಗೆ ಕೇಬಲ್ ಕಳುಹಿಸಿದ್ದಾರೆ. ಗೇಮಾಸ್ ರಣರಂಗದಲ್ಲಿ ಒಂದುಕಡೆ ಜಪಾನ್ ಸೈನಿಕರು ಭಾರತೀಯ ಯೂನಿಫಾರಂಗೆಳನ್ನು ಧರಿಸಿದ್ದುದು ಮಾತ್ರವಲ್ಲದೆ ಭಾರತೀಯರ ಹಾಗೆ ಮುಖಕ್ಕೆ ಬಣ್ಣ ಸಹ ಬಳಿದು ಕೊಂಡಿದೆಂದು ಹೇಳಲಾಗಿದೆ.

ಪಾರ್ಲಿಮೆಂಟ ಸಭೆಯಲ್ಲಿ
ಚರ್ಚಿಲರ ಭಾಷಣ

ಹಿಂದೂಸ್ಥಾನದ ಬಗ್ಗೆ ಒಂದೂ ಮಾತಿಲ್ಲ

———o:———

ಈ ದಿವಸ ಮಧ್ಯಾಹ್ನ ಬ್ರಿಟಿಷ್ ಮಹಾ ಪ್ರಧಾನರಾದ ಶ್ರೀ ವಿನ್ಸ್ಟನ್ ಚರ್ಚಿಲ್ ರವರು ಕಾಮನ್ಸ್ ಸಭೆಯಲ್ಲಿ ಭಾಷಣ ಮಾಡುತ್ತ "ಈ ಸಭೆಯು ನನ್ನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸುವುದರ ಮೂಲಕ ನನಗೆ ನೆರವಾಗಬೇಕೆಂದು ನಾನು ಕೇಳುತ್ತೇನೆ. ಪೆಸಿಫಿಕ್ ಸಾಗರ ಕ್ಷೇತ್ರದಿಂದ ನಾವು ಇನ್ನೂ ಅನೇಕ ಕೆಟ್ಟ ಸುದ್ದಿಗಳನ್ನು ಕೇಳಬೇಕಾಗಿ ಬರಬಹುದು ಮೊಕೆಂದರೆ ಅಲ್ಲಿನ ಘಟನೆಗಳು ನಮಗೆ ಪ್ರತಿಕೂಲವಾಗಿದೆ. ಮುಂದೆ ಇನ್ನು ಹೆಚ್ಚಿನ ಕಷ್ಟಗಳನ್ನು ನಾವು ಎದುರಿಸಬೇಕಾಗಿದೆ. ಆದ್ದರಿಂದ ಈ ಸಭೆಯು ನನ್ನಲ್ಲಿ ನಂಬಿಕೆಯನ್ನು ವ್ಯಕ್ತಗೊಳಿಸಬೇಕೆಂದು ಕೇಳುತ್ತೇನೆ" ಎಂದರು.

ಹೆಚ್ಚಿನ ಸೇನೆ ತೆರಳಿದೆ

ಮಲಯಾದಲ್ಲಿರುವ ಬ್ರಿಟಿಷ್ ಸೇನೆಗೆ ಸಹಾಯಕವಾಗಿ ಕಳೆದ ವಾರದಲ್ಲಿ ಅಪಾರ ಬಲವನ್ನು ಕಳಿಸಲಾಗಿದೆಯೆಂಬುದಾಗಿ ಅವರು ತಿಳಿಸಿದರು.

ರಷ್ಯಕ್ಕೆ ಕೊಟ್ಟ ಭರವಸೆ

"ಹವಾಗುಣವು ಚೆನ್ನಾಗಿಲ್ಲದೇ ಇರುವ ಪ್ರಯುಕ್ತ ನಾವು ಎಂ. ಸ್ಟಾಲಿನ್ರಿಗೆ ಕೊಟ್ಟ ಭರವಸೆಯನ್ನು ಸಂಪೂರ್ಣವಾಗಿ ಪಾಲಿಸಲಾಗಲಿಲ್ಲ. ಕೊಂಚ ಲೋಪವಾಗಿದೆ. ಫೆಬ್ರವರಿ ಆರಂಭದ ಹೊತ್ತಿಗೆ ಅದನ್ನು ಸರಿಪಡಿಸುವೆವು" ಎಂದರು.

ಮಂತ್ರಿ ಮಂಡಲದಲ್ಲಿ ಬದಲಾವಣೆಗಳೇನೂ ಇಲ್ಲ

ಮಂತ್ರಿ ಮಂಡಲದಲ್ಲಿ ಬದಲಾವಣೆ ಮಾಡಬೇಕೆಂಬ ಸಲಹೆಯನ್ನು ತಿರಸ್ಕರಿಸುತ್ತ ಶ್ರೀ ಚರ್ಚಿಲ್ರವರು "ಏನಾದರೂ ಲೋಪದೋಷಗಳು ಕಂಡುಬಂದಲ್ಲಿ ಅವರ ಜವಾಬ್ದಾರಿಯನ್ನು ಹೊರಲು ನಾನು ಸಿದ್ಧವಾಗಿದ್ದೇನೆ" ಎಂದರು.

ಆಸ್ಟ್ರೇಲಿಯಾ ಮತ್ತು ನ್ಯೂಜೀಲೆಂಡ್ ಗಳಿಗೆ ಹೆಚ್ಚಿನ ಸೇನೆಗಳನ್ನು ಕಳಿಸಲು ಬ್ರಿಟನ್ನು ಮತ್ತು ಅಮೆರಿಕವೂ ತಕ್ಕ ಸಿದ್ಧತೆಗಳನ್ನು ಮಾಡುತ್ತಿವೆಯೆಂದು ಶ್ರೀ ಚರ್ಚಿಲರು ತಿಳಿಸಿದರು. ಬ್ರಿಟಿಷ್ ದ್ವೀಪಗಳ ಸಂರಕ್ಷಣಾ ಕಾರ್ಯದಲ್ಲಿ ಅಮೆರಿಕ ಸಂಗ್ರಾಮ ವಿಮಾನಗಳು ಭಾಗವಹಿಸುವುದಲ್ಲದೆ ಜರ್ಮನಿಯ ಮೇಲೆ ನುಗ್ಗಿಗೆ ನಡೆಸುವ ಕಾರ್ಯದಲ್ಲಿ ಸಹ ಅವು ಭಾಗವಹಿಸುವುವೆಂದು ಸೂಚಿಸಿದರು. ಅಮೆರಿಕದಿಂದ ಅನಾರ ಸೇನೆಗಳು ಬ್ರಿಟಿಷ್ ದ್ವೀಪಗಳಿಗೆ ಬಂದಿಳಿಯುವುವೆಂದು ಹೇಳಿದರು. ಜರ್ಮ್ಯಾನಿಯವರು ಅಮೆರಿಕ ಸೇನೆಗಳ ದಂಡನಾಯಕರಾಗುವರೆಂದರು.

ಸಂಗ್ರಾಮ ಮಂತ್ರಿ ಮಂಡಲದಲ್ಲಿ ಡೊಮಿನಿಯನ್ಗಳಿಗೆ ಸ್ಥಾನ

ಬ್ರಿಟಿಷ್ ಸಂಗ್ರಾಮ ಮಂತ್ರಿಮಂಡಲದಲ್ಲಿ ಆಸ್ಟ್ರೇಲಿಯದ ಪ್ರತಿನಿಧಿಗೆ ಸ್ಥಾನ ಸಿಗಬೇಕೆಂದು ಆಸ್ಟ್ರೇಲಿಯವು ಕೇಳಿದೆ. ಇದೇ ಹಕ್ಕನ್ನು ಆಸ್ಟ್ರೇಲಿಯಾಕ್ಕೆ ಮಾತ್ರ ಸಲ್ಲದೆ ನ್ಯೂಜೀಲೆಂಡ್, ಕೆನಡಾ ಮತ್ತು ದಕ್ಷಿಣ ಆಫ್ರಿಕಗಳಿಗೆ ಸಹ ಕೊಡಲಾಗುತ್ತದೆ ಎಂದರು.

ಲಿಬಿಯಾದಲ್ಲಿ ೩೦,೫೦೦ ಶತ್ರುಗಳ ಸಾವು

ಲಿಬಿಯಾದಲ್ಲಿ ಬ್ರಿಟಿಷರಿಗಾದ ನಷ್ಟಕ್ಕೆ ಮೂರರಷ್ಟು ನಷ್ಟವು ಶತ್ರುಗಳಿಗೆ ಆಯಿತು. ಶತ್ರುಗಳ ಕಡೆ ೩೦,೫೦೦ ಮಂದಿ ಹತರಾದರು ೧೧,೫೦೦ ಮಂದಿ ಜರ್ಮನರೂ, ೧೪೦೦೦ ಇಟಾಲಿಯನ್ನರೂ ಸೆರೆಹಿಡಿಯಲ್ಪಟ್ಟಿದ್ದಾರೆ. ಶತ್ರುಗಳು ಅಲ್ಲಿ ೪೫೦ ವಿಮಾನಗಳನ್ನೂ ೩೮೬ ಟ್ಯಾಂಕುಗಳನ್ನೂ ಕಳೆದುಕೊಂಡರು.

ಲಿಬಿಯಾದಲ್ಲಿ ಬ್ರಿಟಿಷರ ಕಡೆ ೧೮ ಸಾವಿರ ಮಂದಿ ಸತ್ತರು, ಗಾಯಗೊಂಡರು ಮತ್ತು ಸೆರೆಹಿಡಿಯಲ್ಪಟ್ಟರು. ಇವರಲ್ಲಿ ಬಹು ಮಂದಿ ಬ್ರಿಟಿಷ್ ದ್ವೀಪದವರೆ. ಕದನದ ಕಾಲದಲ್ಲಿ ಯಾವಾಗಲೂ ನಮ್ಮ ಸೇನೆಯ ಬಲ ೪೫೦೦೦ ಮಂದಿಗಿಂತ ಹೆಚ್ಚಾಗಿರಲಿಲ್ಲ. ಅವರು ಅದಕ್ಕೆ ಎರಡರಷ್ಟಿದ್ದ ಶತ್ರು ಸೇನೆಯೊಂದಿಗೆ ಹೋರಾಡಿದರು. ಎಂದರು.

ಕಳೆದ ೬ ತಿಂಗಳಲ್ಲಿ ಬ್ರಿಟನ್ನಿನಲ್ಲಿ ಟ್ಯಾಂಕುಗಳ ರಚನಾ ಕಾರ್ಯವು ಎರಡರಷ್ಟಾಗಿದೆಯೆಂದು ತಿಳಿಸಿದರು.

ನಮಗೆ ಜಯವು ಖಂಡಿತ

"ಮಹಾ ಸಂಗ್ರಾಮವು ಆರಂಭವಾಗಿ ಎರಡು ವರ್ಷಗಳು ಉರುಳಿ ಹೋದವು. ನಾವು ನೀರಿನಿಂದ ಮೇಲೆ ತಲೆಯನ್ನು ಮಾತ್ರ ಉಳಿಸಿಕೊಳ್ಳಲು ಶಕ್ತರಾಗಿದ್ದೇವೆ. ಆದರೆ, ಈಗ ನಾವು ಮೆಲ್ಲಗೆ ನಮ್ಮ ವಿಜಯದ ಮಾರ್ಗದಲ್ಲಿ ಅಡಿಯಿಡುತ್ತಿದ್ದೇವೆ. ನಾವು ಜಯ ಪಡೆಯುವುವೆಂಬುದು ಎಂದಿಗಿಂತ ಇಂದು ಖಚಿತವಾಗಿದೆ" ಎಂಬುದಾಗಿ ಶ್ರೀ ಚರ್ಚಿಲ್ಲರು ನುಡಿದರು.

ಹರ್ ಹೆಸ್ ಪ್ರಕರಣ

ಅನಂತರ ಮಹಾ ಪ್ರಧಾನರು ಹರ್ ಹೆಸ್ರವರ ಪ್ರಕರಣವನ್ನೆತ್ತಿದರು. ನಾಜಿ ನಾಯಕರಲ್ಲಿ ಒಬ್ಬರಾದ ಹರ್ ಹೆಸ್ರವರು ಬ್ರಿಟನ್ನಿಗೆ ಬಂದುದಕ್ಕೆ ಇನ್ನೇನೂ ಅರ್ಥವಿಲ್ಲ. ಇಲ್ಲಿನ ಕೆಲವರೊಂದಿಗೆ ಸಂಬಂಧ ಬೆಳಿಸಿ, ನನ್ನನ್ನು ಮಹಾ ಪ್ರಧಾನ ಪದವಿಯಿಂದ ಇಳಿಸಿ ಓಡಿಸ ಬೇಕೆಂಬುದೇ ಅವರ ಉದ್ದೇಶ್ಯವಾಗಿತ್ತು. ಮಹಾ ಪ್ರಧಾನ ಪಟ್ಟದಲ್ಲಿ ಇಲ್ಲವಾದರೆ ಜರ್ಮನ್ ಬ್ರಿಟನ್ನಿಗೆ ಶಾಂತಿ ಶರತ್ತುಗಳನ್ನೂ "ಹೇಳಿ ಬರೆಯಿಸಬಹುದೆಂದು ನಾಜೀ ನಾಯಕರು ಭಾವಿಸಿದರು." ಎಂಬುದಾಗಿ ಸೂಚಿಸಿದರು.

S. V. Setty & Bros., Bangalore Road, Bellary.
ಎಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ. ನಮ್ಮ ಹೆಸರಿನ ಕೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ ಎಂಡ ವಾಚುಗಳೂ ಮೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ಬಳ್ಳಾರಿ ರಾಯಲ ಸೀಮಾಪಲ್ಲಿ "ಲಗನ್"

(ಈ ಥಿಯೇಟರಿನ ಕಂಪನಿ ವಾಕ್ಚಿ ಸೈಗಲ್ ಕನ್ನಡ ದೇವಿ ಅಭಿನಯಿಸಿದರು.

ರಾಯಲಸೀಮ ಬ್ಯಾಂಕು,
(ಲಿಮಿಟಿಡ್.)
ಮುಖ್ಯ ಕಾರ್ಯಾಲಯ, ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ.

ಡಿಪಾಜಿಟ್ಟುಗಳು.	31-10-40	31-12 41
ಸ್ಪೆಷಲ್	ರೂ. Nil	89,930
ಚಾಲ್ತಿ	,, 3,173	16,648
ಸೇವಿಂಗ್ಸ	,, 1,231	17,086
ಇತರ	,, 40	97
ಸಾಲಗಳು.		
ಭಂಗಾರ	,, 520	26,687
ಸಾಲು	,, Nil	29,316
ಇತರ	,, Nil	6,227
ಇತರಆಸ್ತಿ.		
ಸರ್ಕಾರದ ಬಾಂಡುಗಳು	,, 13,300	32,476
ಬ್ಯಾಂಕುಗಳಲ್ಲಿರುವ ಹಣ	,, 32,502	14,716
ಕೈಯ್ಯಲ್ಲಿ ನಗದು	,, 5770	30,802

ಒಟ್ಟು ವ್ಯವಹಾರದ ಮೊತ್ತ.

31 10 -40.	31 -12 -41.
ರು. 1,14,774-0-0	ರು. 2,24,113-0-0

ಶಾಖೆಗಳು:—
1 ತಿಮ್ಮನಚರ್ಲ 2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ

ಹೆಚ್. ಶೇಷಾದ್ರಿರೆಡ್ಡಿ,, ಬಿ. ಎ. ಬಿ. ಎಲ್. (ಎಂ. ಎಲ್. ಎ.)
ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಬಳ್ಳಾರಿ ಜಿಲ್ಲೆಯಲ್ಲಿ
ಕ್ಷಾಮನಿವಾರಣಾ ಕಾರ್ಯ

ಜಿಲ್ಲಾ ಬೋರ್ಡಿನಿಂದ ನಡೆಸಲ್ಪಡುವ ಹಚ್ಚೊಳ್ಳಿ ಕೇಂದ್ರ(ಸಿರುಗುಪ್ಪೆ-ತಾ.)

೨೪-೧-೪೨ ನೆಯ ತಾ. ಬಾ ಪು ರ ಮುರವಣಿ, ಹಚ್ಚೊಳ್ಳಿಗಳಲ್ಲಿ ಕೆಲಸಗಳಿಗ ಬರುತ್ತಿದ್ದ ಗಂಡಸು, ಹೆಂಗಸು, ಮಕ್ಕಳ ಸಂಖೆ ೭೪೯ ಇದ್ದಿತು. ನುತ್ತ ಮುತ್ತ ಕಾಲರಾ ಗಲಾಟೆ ನುತ್ತು ನೊ ಹ ರ ಂ ಹಬ್ಬದಕಾರಣ ಸಂಖೆಯು ಕಡಿಮೆಯಾ ಗಿದ್ದಿತು. ಬರುವನಾರ ಹೆಚ್ಚಬಹುದೆಂಬ ನೂಚನೆಗಳಿವೆ. ಕವುತಾಳ, ಹಚ್ಚೊಳ್ಳಿ ರ ಸ್ತೆಯ ಎರಡೂ ಭಾಗಗಳಲ್ಲಿ ಕಾಲುವೆ ತೆಗೆದು ರಸ್ತೆಗಾಗಿ ಸಣ್ಣ ಕಲ್ಲಿನ ಸಂಗ್ರಹ ನಾಗುತ್ತಲಿದೆ.

ಸರಕಾರದವರಿಂದ ನಡೆಸಲ್ಪಡುವ ಪರೀಕ್ಷಾ ಕೇಂದ್ರಗಳು
(Test works)

೧ ಕಂಬಳಿನಿಸ್ಸೆ (ಆದವಾನಿ) ೨೭ ನೆ ತಾ. ೩೪೧೬ ಜನರು ಕೆಲಸ ಮಾಡುತ್ತಿ ದ್ದರು.

೨ ನಂದನರಂ (ಆದವಾನಿ) ೨೭ ನೆ ತಾ. ೩೦೩೭ ಜನರು ಕೆಲಸ ಮಾಡುತ್ತಿ ದ್ದರು.

ಈ ಎರಡೂ ಕೇಂದ್ರಗಳಲ್ಲಿಯೂ ನದ್ಯಕ್ಕೆ ರಸ್ತೆಯ ಕೆಲಸ ಸಾಗಿದೆ. ಮೊಹರಂ ಸೂರ್ಯೋದಯದಲ್ಲಿ ೪ ಸಾವಿರದ ಮೇಲೆ ಇದ್ದದ್ದು ಸ್ವಲ್ಪ ಕಡಿಮೆಯಾಗಿದೆ. ನಂಜೆ ಹೆಚ್ಚುವ ಸೂಚನೆಗಳಿವೆ. ನಂದನರಿಗೆ ೦-೨-೦ ಹೆಂಗನರಿಗೆ ೦-೧-೬ ಮಕ್ಕಳಿಗೆ ೦-೧-೩ ನದ್ಯಕ್ಕೆ ಕೂಡುತ್ತಾರೆ. ಈ ಎರಡು ಪರೀಕ್ಷಾ ಕೇಂದ್ರಗಳೂ ಈ ವಾರ ನಿವಾರಣಾ ಕೇಂದ್ರಗಳಾಗಿ (Relief works) ಆಗಲಿವೆ.

ಬಳ್ಳಾರಿ ಪೇಟೆ ಧಾರಣೆ
30-1-42 ಶುಕ್ರವಾರ

ಭಂಗಾರ ತೊಲ 1 ಕ್ಕೆ 45-12-0
ಸಾನರಿನ್ 33-4-0
ಬೆಳ್ಳಿ 100 ತೊಲಗಳಿಗೆ 70-0-0

ಆಹಾರ ಸಾಮಗ್ರಿಗಳು.

ಜಿಕ್ಕಿ 1ರೂ. ಗೆ 4½ ರಿಂದ 6 ಸೇರು
ಬೇಳೆ ,, 5 ,, 6 ,,
ಗೋಧಿ .... 6 ,,
ಜೋಳ ,, 12 ,, 14¼ ,,
ನವಣೆ .... 19 ,,
ಉಪ್ಪು .... 13 ,,
ಸೀಣಸಿನಕಾಯಿ 9 ಮಣ 25 ರಿಂದ 30
ಬೆಲ್ಲ .... 12 ರಿಂದ 14 ರೂ.
ಸಕ್ಕರೆ(ಮುಂದ್ಯ) 9 ಮಣ 36 ರೂ.

ಹರಿಜನ ಸೇವೆಯ.

(2ನೇ ಪುಟದಿಂದ ಮುಂದು ನರಿದಿಡು)

ೀತಿಯಿಂದಲ್ಲೂ ಪ್ರಯತ್ನ ಮಾಡಬೇಕು. ಈ ಅಂಗಡಿಗಳಲ್ಲಿ ಪ್ರಾಣೇಶವಿಲ್ಲವೆಂಬು ದು ನಿತ್ಯ ಜೀವನದಲ್ಲಿ ಆವಶ್ಯಕವೆ ಅನೇಕ ಕೊಂದರಿ ತಾಪತ್ರಯಗಳೂ ಅವಮಾನಗಳೂ ಸದಾ ನಡೆದಿವೆ. ಈ ಕಾರಣದಿಂದ ಈ ಬಗ್ಗೆ ವಿಶೇಷ ಲಕ್ಷ ಹಾಕಿ ಪ್ರಯತ್ನ ಮಾಡಬೇಕು

ಹರಿಜನರ ಮೇಲಾಗುತ್ತಿರುವ ಅನ್ಯಾಯ, ಅವಮಾನಗಳು ದೂರವಾಗಿ ನ್ಯಾಯವಾದ ಹಕ್ಕುಗಳು ದೊರೆಯಲಿಕ್ಕೆ ಪ್ರಬಲವಾದ ಹೊರತು, ಅವರು ಜಾಗ್ರತಿ ಆಗಲಾರದು ಇದನ್ನು ಮಾಡಿಕೊಳ್ಳುವ ಸಾಮರ್ಥ್ಯ ಹರಿಜನರಲ್ಲಿ ಇಲ್ಲ ಆದಕಾರಣ ಹರಿಜನ ಸೇವಕರು, ಈ ಸಂಬಂಧ ಯೋಗ್ಯ ಎಲ್ಲ ಉಪಾಯಗಳನ್ನು ಕೈಕೊಳ್ಳಬೇಕು ನಿಂತ ಮರವು ಬೀಳಬೇಕಾದರೆ ಕೊಡಲಿಯ ಪೆಟ್ಟು ಬೀಳಬೇಕಾಗುವದು

ಇನ್ನು ಅನ್ಯಾಯಗಳನ್ನು ವಿರೋಧಿಸುವಾಗ ಸವರ್ಣೀಯರ ಮನಸ್ಸು ಎಲ್ಲಿ ನೋಯುತ್ತದೋ ಎಂದು ವಿಚಾರಿಸುತ್ತ ಕೂಡ್ರಾ ದರೆ ವಿಚಾರಿಸಹತ್ತಿದರೆ ಕಾರ್ಯವಾಗುವದಿಲ್ಲ.

ಆರ್ಥಿಕ ಪ್ರಶ್ನೆ

ಇನ್ನು ಆರ್ಥಿಕ ಪ್ರಶ್ನೆ. ಆರ್ಥಿಕ ಪ್ರಶ್ನೆಯನ್ನು ಬಿಡಿಸಲು ಸಹಕಾರಿ ಪದ್ಧತಿಯನ್ನು ಅನುಸರಿಸಬೇಕು ಸುಶಿಕ್ಷಿತರಿದ್ದ ಕೆಲವರನ್ನು ವಿವಿಧ ಉದ್ಯೋಗದಲ್ಲಿ ತೊಡಗಿಸಲು ಯತ್ನಿಸಬೇಕು. ಉದಾಹರಣೆಗಾಗಿ ಹರಿಜನ ಯುವಕನು-ಅಂಗಡಿಗಳನ್ನು ನಡೆಯಿಸುವಂತೆಯೂ, ಬೀಡಿ ಕಟ್ಟುವದು, ಹೊಲಿಗೆಯ ಕೆಲಸ, ಟೈಪಿಸ್ಟ್ ಕೆಲಸ, ಬಡಿಗತನ ಮೊದಲಾದ ಕೈಗಾರಿಕೆಯ ಕೆಲಸ ಕೈಕೊಳ್ಳುವಂತೆಯೂ, ಶಿಕ್ಷಣಕೊಡುವ ಪ್ರಯತ್ನವನ್ನು ಮಾಡಬೇಕು. ಇದಕ್ಕಾಗಿ ಹರಿಜನ ಸೇವಕರು, ಊರಲ್ಲಿ ಯಾವ ಯಾವ ಉದ್ಯೋಗಗಳಿವೆ. ಅವುಗಳಲ್ಲಿ, ಯಾವ ಯಾವ ಉದ್ಯೋಗಗಳನ್ನು ಹರಿಜನ ಯುವಕರು ಕೈಕೊಳ್ಳಬಹುದು ಮೊದಲಾದುವುಗಳನ್ನು ನಿರ್ಣಯಿಸಿ, ಅವರ ಶಿಕ್ಷಣ ವ್ಯವಸ್ಥೆ ಮಾಡಿಸಬೇಕು. ಕೇವಲ ಚರ್ಮದ ಶಿಕ್ಷಣ ಕೊಟ್ಟರೆ ಸಾಲದು. ಅದರ ಜೊತೆಗೆ ಬೇರೆ ಬೇರೆ ಉದ್ಯೋಗಗಳು ಬೆಳೆಯುತ್ತಾ ಹೋದರೆ ಹೀನನೈತ್ಯದ ಭಾವನೆಯು ಮಾಯವಾಗುವದು.

ಇನ್ನ ವಿಶ್ವಾಸವೇ
ಓರಿಯಂಟಲ್ ಕಂಪನಿಯನ್ನು
ಹಿಂದುಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ
ಮಾಡಿದೆ.
ಜಾರಿಯಲ್ಲಿರುವ ವಿಮೆ 31 12-40 83 ಕೋಟಿಗಿಂತಲು ಹೆಚ್ಚು
ನಿಧಿಯ ವೃದ್ಧಿ 27½
ವಾರ್ಷಿಕ ಆದಾಯ 1¾
ಅತ್ಯಂತ ಆಕರ್ಷಣೀಯವಾದ ನಮ್ಮ ವಿಮಾ ಯೋಜನೆಗಳ
ಪೂರ್ಣ ವಿವರಗಳನ್ನುಳ್ಳ ವಿಮಾ ವಿವರ ಪುಸ್ತಕ
(Prospectus)ಕ್ಕಾಗಿ ಕೆಳಗಿನವರಿಗೆ ಬರೆಯಿರಿ.
ವಿಶ್ವಾಸಿ ಸೆಕ್ರಟರಿ
ಓರಿಯಂಟಲ್
ಆರ್ಡಿನರಿ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್,
ಸ್ಟ್ಯಾಂಡರ್ಡ್ ಸ್ಟ್ರೀಟ್, ಮುಂಬಾಯಿ
ಆ॥ ಇಕ್ಸ್‌ಪೆಕ್ಟರ್, ಓರಿಯಂಟಲ್ ಲೈಫ್ ಆಫೀಸು
312 ಕೂಪರೇಜ್ ಗೇಟ್ ಟ್ರೂಪ್ ಸೇಟ್ ಬಿಲ್ಡಿಂಗ್
ಕಾರ್ಯಾಲಯ ಹಿಂದುಸ್ಥಾನದಲ್ಲಿ ಸ್ಥಾಪಿತ.
ಬೊಂಬಾಯಿ. 1874.

ಇನ್ನು ಹರಿಜನರಲ್ಲಿ ಸ್ವಚ್ಛತೆ, ಆಸ್ಪತ್ರೆ ಕಟ್ಟುವದು, ಕಲಿಸಬೇಕೆಂಬ ಸವರ್ಣೀಯರಿಂದ ಆಗತಕ್ಕ ಅನ್ಯಾಯ ಅವಮಾನಗಳನ್ನು ಅವರ ಲಕ್ಷಕ್ಕೆ ತಂದುಕೊಟ್ಟು ನಾವು ಮಾನವರು ಅನ್ಯಾಯ ಅವಮಾನಗಳನ್ನು ಸಹಿಸುತ್ತ ಸುಮ್ಮನೆ ಕೂಡ್ರಾ ದಾರದು ಎಂಬ ಭಾವನೆಯನ್ನು ಜಾಗ್ರತಪಡಿಸಬೇಕು. ಈ ರೀತಿ ಕಾರ್ಯಗಳು ಕ್ಷಿಪ್ರವಾಗಿ ಮುಂದುವರಿಯುತ್ತಿರಲು ಸ್ಥಳಿಕ ಯೋಗ್ಯ ಉಪಾಯಗಳು ಕಾಲಕಾಲಕ್ಕೆ ಸೂಚಿಸುವೆನು

ಆದರೆ ಒಂದು ಮಾತ್ರ ಲಕ್ಷದಲ್ಲಿಡಬೇಕು. ಅಂದರೆ ಇಲ್ಲದೆ ಯಾವದೂ ಸುಧಾರಣೆಯಾಗಿಲ್ಲ ಹರಿಜನ ಸೇವೆಯೂ ಅಂದರೆ ಇಲ್ಲದೆ ಮಾಡಲಾಗದು ಈ ರೀತಿಯಿಂದಲೇ ಕಾರ್ಯಕ್ರಮ ನಿಶ್ಚಿತಗೊಳಿಸಬೇಕು. ವ್ಯಾಧಿಯ ಮೂಲವಾದ ವಿನಂತಿಯಿಂದ ಹೃದಯಪರಿವರ್ತನೆಯಾಗಿ ಸವರ್ಣೀಯರು ತಾವು ಮಾಡತಕ್ಕ ಅನ್ಯಾಯ ಅಸ್ಪೃಶ್ಯತಾ ಆಚರಣೆಗಳನ್ನು ಬಿಡುವರು.

ಇನ್ನು ಹೃದಯ ಪರಿವರ್ತನೆಯಾಗಿ ಮಾಡತಕ್ಕ ಅನ್ಯಾಯ ಅವಮಾನಗಳನ್ನು ಬಿಟ್ಟುಕೊಡಬೇಕಾದರೆ ನಮ್ಮಲ್ಲಿಯು ಶಕ್ತಿಯಿದೆ, ಸ್ವಾಭಿಮಾನವಿದೆ, ಇನ್ನು ಮೇಲೆ ಅನ್ಯಾಯಗಳನ್ನು ಮಾಡಿದರೆ ಕ್ಷೇಮವಾಗದು, ಎಂದು ಹೃದಯದಲ್ಲಿ ಅನಿಸಿಕೊಡುವದೇ ಹೃದಯದ ಪರಿವರ್ತನೆಯನ್ನು ಸೂಚಿಸುವದು.

ಇದನ್ನನುಲಕ್ಷಿಸಿ ಹರಿಜನ ಸೇವಾಸಂಘದವರು ತಮ್ಮ ಕಾರ್ಯವನ್ನು ಮುಂದುವರಿಸಬೇಕು ಅಂದರೆ ಮಾತ್ರ ಹರಿಜನ ಸೇವಾಕಾರ್ಯವು ಫಲಕಾರಿಯಾಗಿ ಆಗುವದು ಈ ವರೆಗೆ ನಡೆದ ಕಾರ್ಯದ ಪರಿಣಾಮವನ್ನು ನೋಡಿದರೆ ಸಾಕಷ್ಟು ಪ್ರಗತಿ ಇಲ್ಲ ಇದಕ್ಕೆ ಮುಖ್ಯ ನವೆಗೆ ಹಿಡಿದ ಕಾರ್ಯಪದ್ಧತಿಯೇ ಕಾರಣವಾಗಿರುವದು. ಆದಕಾರಣ ಮೇಲೆ ಸೂಚಿಸಿದ ಪದ್ಧತಿಯಲ್ಲಿ ಹರಿಜನ ಸೇವಾಸಂಘದವರು ಕಾರ್ಯ ಸಾಗಿಸುವದು ವಿಹಿತವು

ಎಳ್ಳೆಣ್ಣೆ

ಅಂಬಾಟಿ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟೆ.

ಇವರ A.S. ಬ್ರಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **A. S.** ಬ್ರಾಂಡನ್ನು ಗಮನಿಸಿ, ಕೊಳ್ಳಿರಿ. ಮೋಸಹೋಗಬೇಡಿರಿ

ದೊರೆಯುವ ಸ್ಥಳ:- 1.) ಎಂ. ಹುಶೇಂಜಿರಾವ್, ಎಂ. ವೆಂಕೋಜಿರಾವ್, ತೇರುಬೀದಿ, ಬಳ್ಳಾರಿ. ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೆ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ. ನಿಮಗಮಕೂಲವಾದ ಶಿಕ್ಷಣಕ್ಕೆ ಏರ್ಪಾಡಿಲಾಗುವುದು ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಥೆ ಕಾದಂಬರಿ ವಗೈರೆ ದೊರೆಯುವುದಲ್ಲದೆ ನಿಮಗೆ ಎಲ್ಲಾವಿಧವಾದ ಮಾಹಿತಿಯೂ, ಉಚಿತವಾಗಿ ಹೇಳಲಾಗುವುದು

ಟಿ. ಬಿ. ಕೇಶವರಾವ್,
ಕೃಷ್ಣಮೂರ್ತಿ ಕಾಂಪೌಂಡು, ಬಳ್ಳಾರಿ.

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—0—0	ಬಳ್ಳಾರಿಯವರಿಗೆ 2-0-0
Moffusil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local 1—4—0	ಬಳ್ಳಾರಿಯವರಿಗೆ 1-4-0
Moffusil 2—0—0	ಹೊರಗಿನವರಿಗೆ 2-0-0

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary.

ಸರಸ್ವತೀ ಲೇಹ.

ಧಾತು ನಷ್ಟ - ಯಾ - ದೌರ್ಬಲ್ಯ, ಕುಸುಮ ವ್ಯಾಧಿ ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ಮತ್ತು ಉನ್ಮಾದ, ಪೈತ್ಯ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ರ.

೧ ಸೇರಿಗೆ ೧-೪-೦. ೨ ಸೇರಿನ ಸೀಸೆ ೩-೪೦

ಸ್ಟಾಕಿಸ್ಟ್- ತೋರಣಗಲ್ಲು ಮರೆಪ್ಪ, ಬಳ್ಳಾರಿ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦	ಅಂಚೆ ವೆಚ್ಚದಿಂದ
ಕನ್ನಡ ದಶೋಪನಿಷತ್ತುಗಳು	೦—೯—೦	ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ
ಶಿವಾನುಭವ ಬೋಧೆ	೦—೪—೦	ಕೊಳ್ಳುವರಿಗೆ ಧಾರಾಳ
ಸುಮತಿ ಶತಕ	೦—೧—೦	ವಾಡಿಕೆ ಕಮೀಶನ್

ಕಾಲವ ಸುಬ್ಬಣ್ಣ, ಮಣಿಂಯ್ಯ, ಬಳ್ಳಾರಿ.

ದ್ವಿತೀಯ ಪಶುಪ್ರದರ್ಶನ ಬಳ್ಳಾರಿ

ಫೆಬ್ರವರಿ 2, 3, 4ನೆಯ ತಾರೀಖು ಕೋಟೆ ಮಲ್ಲೇಶ್ವರ ದೇವಸ್ಥಾನದ ಬಯಲಿನಲ್ಲಿ ನಡೆಯಲಿದೆ. ವ್ಯವಸಾಯಗಾರರಿಗೆ ರೈತರಿಗೆ ಜನಗಳ ಉತ್ತಮ ತಳಿಯನ್ನು ಪ್ರೋತ್ಸಾಹಿಸಬೇಕೆನ್ನುವವರಿಗೆ ಸುವರ್ಣಸಂಧಿ ಬಂದು ನೋಡಿ ಆನಂದಿಸಿ ಕೊಂಡು ತೃಪ್ತಿಪಡಿರಿ.

ಯ್ಯ. ಶಾಳಿಕೆರಪ್ಪ ಟ್ರಸ್ಟಿ.

Nava Bharat, Bellary.

REG. No. 3937.

Sri _____

_____

Printed at Vittal Press, Car Street Edited & Published by T. B. Keshava Rao, Bellary

Reg.-No.-M. 3937 'ವಂದೇ-ಮಾತರಂ'

ನವ ಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೨೧ ಬಳ್ಳಾರಿ ಫೆಬ್ರವರಿ ೮ನೇ ಭಾನುವಾರ ೧೯೪೨. ಟಿ. ಬಿ. ಕೇಶವರಾವ್.

ಸ್ಥಾಪನೆ- **ಎಂಪೈರ್ ಆಫ್ ಇಂಡಿಯಾ** ೧೮೯೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000 ರೂ.ಗಳಿಗೆಮಿಾರಿದೆ

ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ನಿರ್ಮಿಸಿದ್ದಾರೆ ಎಂಬುದನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ. **ಎಂಪೈರ್ ಆಫ್ ಇಂಡಿಯಾ** ಲೈಫ್ ಬಿಲ್ಡಿಂಗ್, **ಬೊಂಬಾಯಿ.**
ಬ್ರಾಂಚ್ ಕಚೇರಿ- **ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.**

ಬಳ್ಳಾರಿ.

ದ್ವಿತೀಯ ಪಶುಪ್ರದರ್ಶನ—ಸ್ಥಳೀಯ ತಾ॥ ಸೋಮವಾರ ಕೋಟೆಯ ಮಲ್ಲೇಶ್ವರ ಗುಡಿಯ ವಿಶಾಲ ಬೈಲಿನಲ್ಲಿ ಸೂಮಾರು ೧೦ ಸಾವಿರ ಜನ ಸಮೂಹದ ಮಧ್ಯದಿ ಶ್ರೀ ತೀಕಾರಾಮರೆಡ್ಡಿಯವರು ಪಶು ಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಪ್ರಾರ್ಥನೆ-ಸ್ವಾಗತ ಹೋದ ವರ್ಷದ ವರದಿಯೆಲ್ಲಾ ಓದಲ್ಪಟ್ಟಿತು ಶ್ರೀ ಪಡೆಕ್ಟರ ಶಾಸ್ತ್ರಿಯವರು 'ವಕ್ತಲತನದ ತ್ರೀಕ್ಷತೆ' ಯ ಬಗ್ಗೆ ಉಪನ್ಯಾಸಿಸಿದರು. ಳಸೆಯ ಪ್ರಾ. ನಿಯುಕ್ತ ಮಹನೀಯರು ದನಗಳ ಪರೀಕ್ಷೆಯನ್ನು ನಡೆಸಿ 'ಜಾತ್ರೆಯೇ ಜನ ಜಾಗೃತೆಯು' ಎಂಬ ವಿಷಯದ ಮೇಲೆ ಬಾಷಣವು ಪಾಸ್ತಿಗಳಿಂದ ನಡೆದು ಶ್ರೀಮತಿ ಚಾರುಮತಿ ಸಾಕೆಯವರಿಂದ ಬಹುಮಾನಗಳನ್ನು ಹಂಚುವುದಾಯಿತು. ಈ ಎರಡು ದಿನಗಳೂ ಮಲ್ಲಸಜ್ಜನ ನವಜೀವನ ವ್ಯಾಯಾಮ ಶಾಲೆಯವರ ಪ್ರದರ್ಶನಗಳೇರ್ಪಟ್ಟಿದ್ದವು

ಕೊಟ್ಟೂರು.

ಶ್ರೀ ಕೊಟ್ಟೂರೇಶನ ರಥೋತ್ಸವವು ಇದೇ ಮಾಘ ಬ॥ ೧೧ (ತಾ ೧೧-೨ ೪೨) ಬುಧವಾರ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಹವಾ-ನೀರಿನ ಅನುಕೂಲತೆ ಚೆನ್ನಾಗಿರುವ ಕಾರಣ ಜನರು ಬಂದು ಉತ್ಸವದಲ್ಲಿ ಭಾಗಿಗಳಾಗಲು ಕೋರಿದೆ

ಎಮ್ಮಿಗನೂರು (ಆದವಾನಿ)

ಖಾಸಗಿ ಕ್ಷಾಮನಿವಾರಣಾಸಮಿತಿಯ ಸ್ಥಾಪನೆ

ಸ್ಥಳೀಯ ತಾ॥ ಶ್ರೀ ಮಾಮಿಡಿ ರಾಮಲಿಂಗಪ್ಪನವರ ಮನೆಯಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿ ಸಾರ್ವಜನಿಕರ ಪರವಾಗಿ ಕ್ಷಾಮನಿವಾರಣಾ ಸಮಿತಿಯೊಂದು ಸ್ಥಾಪಿಸಲ್ಪಟ್ಟಿತು. ೧೯೪೧ನೇ ಆಗಸ್ಟು, ಸೆಪ್ಟಂಬರ್-ಅಕ್ಟೋಬರ್ ತಿಂಗಳಲ್ಲಿ ಅನ್ನ ಹೀನರಿಗೆ ಅನ್ನ ಕೊಡಲು ಸರ್ಕಾರವಾದ ೪೪೯೦-೧-೧ ಪೈಕಿ ಉಳಿದ ೧೫೨೬-೭-೩ನ್ನು ಸಮಿತಿಯವರಿಗೆ ಒಪ್ಪಿಸಲು ತೀರ್ಮಾನಿಸಲ್ಪಟ್ಟಿತು. ಸಮಿತಿ ಅಧ್ಯಕ್ಷರು ರೆಡ್‌ಕ್ರಾಸ್ ಸಂಘಕ್ಕೆ ಬರೆದು ಕಾಡಲೀವರ ಎಣ್ಣೆ ಸಾಲಿನ ಪೂರೈಗೆ ಕೇಳಿಕೊಳ್ಳಬೇಕೆಂದೂ ಪತ್ರವ್ಯವಹಾರ ಹಾಲನ್ನು ಹಂಚುವ ವ್ಯವಸ್ಥೆಯ ಖರ್ಚನ್ನು ಸಮಿತಿಯವರೇ ಭರಿಸಬೇಕೆಂದೂ ನಿಶ್ಚಿತವಾಯಿತು- ಸಂಸ್ಥೆಗಳಿಂದಲೂ ಇತರ ಬೆಂಬಲಿಗರುಗಳಿಂದಲೂ ಹಣ ಸಂಗ್ರಹ ಮಾಡಲು ಶ್ರೀಗಳಾವ ಸೋಮಪ್ಪ ಮಾರ್ವಾಡಿ ಇಂದ್ರಚಂದ ವಜ್ರಗೆರೆ ಬಸಣ್ಣನವರು ಏರ್ಪಟ್ಟರು.

ಕ್ಷಾಮನಿವಾರಣಾ ಸಮಿತಿಯ ಅಧಿಕಾರ ವರ್ಗ

ಅಧ್ಯಕ್ಷರು— ಶ್ರೀ ಮಾಚಾನಿ ಸೋಮಪ್ಪ
ಉಪಾಧ್ಯಕ್ಷರು ,, ವೈ ಗಾದಿ ಲಿಂಗನಗೌಡು
ಕಾರ್ಯದರ್ಶಿಗಳು ,, ಜನಾಬ ಇಬ್ರಾಹಿಂ ಬೇಗ್ ,, ಡಾಕ್ಟರ್ ಕೃಷ್ಣಮೂರ್ತಿ
ಖಜಾಂಚಿ:- ,, ಮಾರ್ವಾಡಿ ಇಂದ್ರಚಂದ್

ಕಾರ್ಯಕಾರಿಣೀ ಸಮಿತಿಯಲ್ಲಿ ೧೨ ಜನರು ಇರುವರು.

ಹಿಂದೂ ದೇಶದಲ್ಲಿ ಐಕಮತ್ಯ

ಮಹಾತ್ಮ ಗಾಂಧಿಯವರ ಲೇಖನ

(ಹರಿಜನ ಪತ್ರಿಕೆಯಿಂದ)

ವಾರ್ಧಮೆಂಟರಿ ಚಟುವಟಿಕೆಗಳಿಂದ ಸ್ವಾತಂತ್ರ್ಯವು ಸಿಕ್ಕಲಾರದು. ಅದರಿಂದ ಜಾತೀಯ ಐಕ್ಯವು ಸಾಧಿಸಿದರೆ ಇನ್ನೂ ಚೆ. ಆದರೆ ಅದರ ಜೊತೆಯಲ್ಲಿಯೇ ಹೃದಯಗಳ ಐಕ್ಯವಾಗದಿದ್ದರೆ ದೇಶದಲ್ಲಿ ಶಾಂತಿಯುಂಟಾಗಲಾರದು. ಈ ಐಕ್ಯವಿಲ್ಲದಿದ್ದರೆ ಬಾಕಿಸ್ತಾನದಿಂದಲೂ ದೇಶದಲ್ಲಿ ಶಾಂತಿಯುಂಟಾಗಲಾರದು. ನಿಜವಾದ ಸೇವೆ ಮತ್ತು ಒಪ್ಪಿಗೆಯುಳ್ಳವರು ಕೂಡಿಕೊಂಡು ಕೆಲಸ ಮಾಡುವುದೆಂದರೆ ಈ ಐಕ್ಯವು ಸಾಧನವಾಗುವುದು.

ಪ್ರತ್ಯೇಕ ಮತದಾನ ಪದ್ಧತಿಯಿಂದ ನಮ್ಮ ಹೃದಯಗಳು ಪ್ರತ್ಯೇಕವಾಗಿವೆ. ಏಕೆಂದರೆ ಆ ಪದ್ಧತಿಯಿಂದ ನಿರ್ದಿಷ್ಟರಲ್ಲದ ಅನಿಶ್ಚಿತ ಮತ್ತು ತಿಳಿಯದ ಸಂಖ್ಯೆಯ ಮತದಾರರ ಮೆಚ್ಚುಗೆಯನ್ನು ಪಡೆಯಲು ಅಭ್ಯರ್ಥಿಗಳು ಪ್ರಯತ್ನಿಸಬೇಕಾಗುವುದು. ಇದರಿಂದ ಬಿಡುಗಡೆಯಾಗುವ ಬಗೆ ಯಾವುದೆಂಬುದು ನಮ್ಮ ಮುಂದಿನ ಸಮಸ್ಯೆಯಾಗಿದೆ. ನಾವೀಗ ಮುಸಲ್ಮಾನ ಬಹುಮತವಿದ್ದ ನಾಲ್ಕು ಪ್ರಾಂತಗಳ ಮಟ್ಟಿಗೆ ವಿಚಾರಮಾಡುವೆ ಅಲ್ಲಿ ಹಿಂದುಗಳು ಅಲ್ಪ ಸಂಖ್ಯಾಕರಿದ್ದು ಬಹುಸಂಖ್ಯಾಕರಾದ ಮುಸಲ್ಮಾನರ ಆಳುತ್ತಿರುವುದರಿಂದ ಒಂದು ಬಗೆಯ ವಾಕಿಸ್ತಾನವೆ ಅಲ್ಲಿರುವುದು. ಈ ರೀತಿ ಧರ್ಮದ ಆಧಾರದ ಮೇರೆ ಮನುಷ್ಯ ಸಮಷ್ಠಿಗಳನ್ನು ನಿಂಗೆಡಿಸುವುದು ಬಹಳ ಜಿನ್ನ ತತ್ವ. ಏಕೆಂದರೆ ಧರ್ಮವು ಜೀವಕಾಂಡ ಹಾಗೆ ಬದಲಾಗಬಲ್ಲದು. ಭೂಕಂದಾಯ, ನಗರದ ಆರೋಗ್ಯ, ಪೋಲೀಸಿನ ನ್ಯಾಯವಾತೆ ಇಲ್ಲವೆ ಸಾರ್ವಜನಿಕ ವಾಹನಗಳ ಸುಸೂತ್ರವಾಗಿ ನಡೆಯುವ ಮೊದಲಾದುವುಗಳಲ್ಲಿ ಹಿಂದು ಮುಸಲ್ಮಾನರಲ್ಲಿ ಹಿತಸಂಬಂಧವಿರುವುದಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಈ ಹಿತಸಂಬಂಧಗಳು ಪ್ರತ್ಯೇಕವಾಗಿವೆ. ಇಲ್ಲವೆ ವಿರೋಧಕವಾಗಿವೆಂದು ತಪ್ಪಾಗಿ ತಿಳಿದುಕೊಂಡು ಸಂಸ್ಥೆಗಳಲ್ಲಿ ಕಾಂಗ್ರೆಸ್ಸಿಗರು ಸೇರತಕ್ಕದ್ದಲ್ಲ. ಬಹುಸಂಖ್ಯಾಕರಲ್ಲಿ ಒಡಕು ಹುಟ್ಟಿಸಲು ಎಂದರೆ ಅಲ್ಲಿರುವ ಮುಸಲ್ಮಾನ ಪಕ್ಷಗಳಲ್ಲಿ ಯಾವದಾದರೊಂದು ಪಕ್ಷದಲಿ ಸೇರಿ ಅವರಲ್ಲಿ ಒಡಕು ಹುಟ್ಟಿಸಲು ಮಾತ್ರ ಹಿಂದುವು ಈಸಭೆಗಳನ್ನು ಸೇರಿದಂತಾಗುವುದು. ಎಲ್ಲ ಹಿಂದುಗಳನ್ನು ಕಾಂಗ್ರೆಸ್ ವೃತ್ತಿಯರನ್ನಾಗಿ ಮಾಡುವಲ್ಲಿ ನಾನು ಸಮರ್ಥನಾದರೆ ಹಿಂದುಗಳನ್ನೆಲ್ಲ ಈ ಸಂಸ್ಥೆಗಳಿಂದ ಹೊರದೆಗೆದು ಮುಸಲ್ಮಾನರ ಮೇಲೆಯೇ ಎಲ್ಲ ಹೊಣೆ ಹೊರಿಸುವೆ. ನಾನು ಈ ಸಂಸ್ಥೆಗಳಿಂದ ಹೊರಗಿಳಿದು ಅವರೊಡನೆ ಗೆಳೆತನ ಮಾಡಿ ನಿಃಸ್ವಾರ್ಥ ರೀತಿಯಿಂದ ಅವರ ಸೇವೆ ಮಾಡಿ ಅವರ ಮನವಲಿಸಲು ಪ್ರಯತ್ನಿಸುವೆ ಎಲ್ಲ ಸರಕಾರಿ ನವಕರಿಗಳಲ್ಲಿ ಅವರೇ ಇದ್ದರೂ ಆ ಬಗ್ಗೆ ನಾನು ಚಿಂತೆ ಮಾಡುವದಿಲ್ಲ. ಅವುಗಳಲ್ಲಿ ಸ್ವಲ್ಪಾದರೂ ಭಾಗವು ಕೆಲವರಿಗೆ ಸಿಕ್ಕಬಹುದು. ಮಾನವತೆ ಮತ್ತು ಮಾನವನ ಅಧಿಕಾರಿಗಳ ಜ್ಞಾನವಿದ್ದು ಅವುಗಳ ರಕ್ಷಣೆಯನ್ನು ಹೇಗೆ ಮಾಡಬೇಕೆಂಬುದು ಗೊತ್ತಿದ್ದವರ ಮೇಲೆ ಈ ನವಕರರು ಒತ್ತಾಯ ಮಾಡಬಹುದೆಂದು ಭಾವಿಸುವದು ಒಂದು ಬಗೆಯ ಮೂಢ ಭಾವನೆ. ಮುಸಲ್ಮಾನ ಬಹುಮತವಿದ್ದ ಮೂರು ಪ್ರಾಂತಗಳಲ್ಲಿಯಾದರೂ ಕಾಂಗ್ರೆಸ್ಸಿನಲ್ಲಿ ಬಹುಸಂಖ್ಯಾಕರು ಹಿಂದುಗಳೇ ಇದ್ದುದರಿಂದ ಅವರು ತನ್ನು ಅಹಿಂಸಾತ್ಮಕ ಶಕ್ತಿಯ ಪ್ರಭಾವನನ್ನು ಮತ್ತು ಸ್ವಾರ್ಥತ್ಯಾಗ ವೃತ್ತಿಯನ್ನು ಪ್ರದರ್ಶಿಸುವ ಸುಸಂಧಿ ಅವರಿಗೆ ಮೊರೆತಂತಾಗಿದೆ. ಅದೇ ರೀತಿಯಾಗಿ ಅವರು ತಾವು ಜಾತೀಯತೆಯಿಂದ ಎಷ್ಟೊಂದು ಅಲಿಪ್ತ ಇರುವೆನೆಂಬುದನ್ನು ಮುಸಲ್ಮಾನ ಬಾಂಧವರ ಅರಿಕೆಗೆ

(೯ ನೇ ಪುಟವನ್ನು ನೋಡಿರಿ)

ಜನರ ವಿಶ್ವಾಸವೇ ಬಂ

ಓರಿಯಂಟಲ್ ಕಂಪನಿಯನ್ನು

ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾರ್ಪಡಿಸಿದೆ.

ಜಾರಿಯಲ್ಲಿರುವ ವಿಮೆ 31-12-40 83 ಕೋಟಿಗಿಂತಲು ಹೆಚ್ಚು.
ನಿಧಿಯ ದ್ರವ್ಯ ... ,, 27½ ,,
ವಾರ್ಷಿಕ ಆದಾಯ ,, 4¾ ,,

ಅತ್ಯಂತ ಆಕರ್ಷಣೀಯವಾದ ನಮ್ಮ ವಿಮಾ ಯೋಜನೆಗಳ ಪೂರ್ಣ ವಿವರಗಳನ್ನುಳ್ಳ ವಿಮಾ ವಿವರ ಪುಸ್ತಕ (Prospectus)ಕ್ಕಾಗಿ ಕೆಳಗಿನವರಿಗೆ ಬರೆಯಿರಿ.

ವಿ ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.

ಆಸ್ಟಿನಿಯನ್ ಸ್ಟ್ರೀಟ್, ಸುಪ್ರಾ ಸು.

ಆಗಿ ಇನ್‌ಸ್ಪೆಕ್ಟರ್, ಓರಿಯಂಟಲ್ ಲೈಫ್ ಆಫೀಸು
312 ರೂಪರ್ಟಸ್ ಗೇಟ್ ಬ್ರೂಸಪೇಟೆ ಬಳ್ಳಾರಿ.

ಮುಖ್ಯ ಕಾರ್ಯಾಲಯ, ಬೊಂಬಾಯಿ.

ಹಿಂದೂಸ್ಥಾನದಲ್ಲಿ ಸ್ಥಾಪಿತ. 1874.

ಕಾಂಗ್ರೆಸ್ ಹಿಂದುಗಳು ಉಳಿದ ಹಿಂದುಗಳಲ್ಲಿ ಕೂಡಿಕೊಂಡು ತಮ್ಮ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಳ್ಳಲು ಬಯಸದಿದ್ದರೆ ಅವರು ಪ್ರತ್ಯೇಕ ಮತದಾರ ಸಂಘಗಳಿರುವ ಶಾಸನ ಸಭೆ ಅಲ್ಲವೆ ಸ್ಥಾನಿಕ ಸಂಸ್ಥೆಗಳ ಸದಸ್ಯತ್ವದಿಂದ ಸಂಪೂರ್ಣವಾಗಿ ಅಲಿಪ್ತರಾಗತಕ್ಕದ್ದು. ಈ ಪ್ರಾಂತಗಳಲ್ಲಿ ಹಿಂದುಗಳ ಬೇಡಿಕೆಗನುಸಾರವಾಗಿ ಮತ್ತು ಅವರ ಹಿತಸಂಬಂಧಗಳ ರಕ್ಷಣೆಗಂದು ಈ ಪ್ರತ್ಯೇಕ ಮತದಾರ ಸಂಘಗಳು ಏರ್ಪಡಿಸಪಟ್ಟಿವೆಯೆಂದು ಹೇಳಬೇಕಾಗುವದು. ಆದರೆ ಕಾಂಗ್ರೆಸ್ ಹಿಂದುವಿಗೆ ಮುಸಲ್ಮಾನ ಬಾಂಧವನ ಹಿತಸಂಬಂಧಗಳಿಗೆ ಭಿನ್ನವಾದ ಹಿತಸಂಬಂಧಗಳಿರುವದಿಲ್ಲ. ಆದುದರಿಂದ ಹಿಂದು ಮುಸಲ್ಮಾನರ ಹಿತಸಂಬಂಧಗಳು ಪ್ರತ್ಯೇಕವಾಗಿವೆ. ಇಲ್ಲವೆ ವಿರೋಧಕವಾಗಿವೆಂದು ತಪ್ಪಾಗಿ ತಿಳಿದುಕೊಂಡು ಸಂಸ್ಥೆಗಳಲ್ಲಿ ಕಾಂಗ್ರೆಸ್ಸಿಗರು ಸೇರತಕ್ಕದ್ದಲ್ಲ. ಬಹುಸಂಖ್ಯಾಕರಲ್ಲಿ ಒಡಕು ಹುಟ್ಟಿಸಲು ಎಂದರೆ ಅಲ್ಲಿರುವ ಮುಸಲ್ಮಾನ ಪಕ್ಷಗಳಲ್ಲಿ ಯಾವದಾದರೊಂದು ಪಕ್ಷದಲಿ ಸೇರಿ ಅವರಲ್ಲಿ ಒಡಕು ಹುಟ್ಟಿಸಲು ಮಾತ್ರ ಹಿಂದುವು ಈಸಭೆಗಳನ್ನು ಸೇರಿದಂತಾಗುವುದು. ಎಲ್ಲ ಹಿಂದುಗಳನ್ನು ಕಾಂಗ್ರೆಸ್ ವೃತ್ತಿಯರನ್ನಾಗಿ ಮಾಡುವಲ್ಲಿ ನಾನು ಸಮರ್ಥನಾದರೆ ಹಿಂದುಗಳನ್ನೆಲ್ಲ ಈ ಸಂಸ್ಥೆಗಳಿಂದ ಹೊರದೆಗೆದು ಮುಸಲ್ಮಾನರ ಮೇಲೆಯೇ ಎಲ್ಲ ಹೊಣೆ ಹೊರಿಸುವೆ. ನಾನು ಈ ಸಂಸ್ಥೆಗಳಿಂದ ಹೊರಗಿಳಿದು ಅವರೊಡನೆ ಗೆಳೆತನ ಮಾಡಿ ನಿಃಸ್ವಾರ್ಥ ರೀತಿಯಿಂದ ಅವರ ಸೇವೆ ಮಾಡಿ ಅವರ ಮನವಲಿಸಲು ಪ್ರಯತ್ನಿಸುವೆ ಎಲ್ಲ ಸರಕಾರಿ ನವಕರಿಗಳಲ್ಲಿ ಅವರೇ ಇದ್ದರೂ ಆ ಬಗ್ಗೆ ನಾನು ಚಿಂತೆ ಮಾಡುವದಿಲ್ಲ. ಅವುಗಳಲ್ಲಿ ಸ್ವಲ್ಪಾದರೂ ಭಾಗವು ಕೆಲವರಿಗೆ ಸಿಕ್ಕಬಹುದು. ಮಾನವತೆ ಮತ್ತು ಮಾನವನ ಅಧಿಕಾರಿಗಳ ಜ್ಞಾನವಿದ್ದು ಅವುಗಳ ರಕ್ಷಣೆಯನ್ನು ಹೇಗೆ ಮಾಡಬೇಕೆಂಬುದು ಗೊತ್ತಿದ್ದವರ ಮೇಲೆ ಈ ನವಕರರು ಒತ್ತಾಯ ಮಾಡಬಹುದೆಂದು ಭಾವಿಸುವದು ಒಂದು ಬಗೆಯ ಮೂಢ ಭಾವನೆ. ಮುಸಲ್ಮಾನ ಬಹುಮತವಿದ್ದ ಮೂರು ಪ್ರಾಂತಗಳಲ್ಲಿಯಾದರೂ ಕಾಂಗ್ರೆಸ್ಸಿನಲ್ಲಿ ಬಹುಸಂಖ್ಯಾಕರು ಹಿಂದುಗಳೇ ಇದ್ದುದರಿಂದ ಅವರು ತನ್ನು ಅಹಿಂಸಾತ್ಮಕ ಶಕ್ತಿಯ ಪ್ರಭಾವನನ್ನು ಮತ್ತು ಸ್ವಾರ್ಥತ್ಯಾಗ ವೃತ್ತಿಯನ್ನು ಪ್ರದರ್ಶಿಸುವ ಸುಸಂಧಿ ಅವರಿಗೆ ಮೊರೆತಂತಾಗಿದೆ. ಅದೇ ರೀತಿಯಾಗಿ ಅವರು ತಾವು ಜಾತೀಯತೆಯಿಂದ ಎಷ್ಟೊಂದು ಅಲಿಪ್ತ ಇರುವೆನೆಂಬುದನ್ನು ಮುಸಲ್ಮಾನ ಬಾಂಧವರ ಅರಿಕೆಗೆ

(೯ ನೇ ಪುಟವನ್ನು ನೋಡಿರಿ)

ವಾಹನ ಸೌಕರ್ಯ ಸಮಸ್ಯೆ

ಪೆಸಿಫಿಕ್ ಸಾಗರಕ್ಕೆ ಸಂಗ್ರಾಮವು ಹರಡಿದಂದಿನಿಂದ ಭರತಖಂಡದಲ್ಲಿ ವಾಹನ ಸೌಕರ್ಯ ಸಮಸ್ಯೆಯು ಉಗ್ರವಾಯಿತು. ಇದಕ್ಕೆ ಎರಡು ಕಾರಣಗಳಿವೆ. ಸಂಗ್ರಾಮ ಕಲಸಕ್ಕೆ ಹೆಚ್ಚಿನ ಪೆಟ್ರೋಲ್ ವಿನಿಯೋಗವಾಗುತ್ತಿರುವುದರಿಂದ ಮೋಟಾರು ವಾಹನಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಪೆಟ್ರೋಲನ್ನು ಒದಗಿಸಲು ಸಾಧ್ಯವಾಗದಿರುವುದು ಒಂದು; ರೈಲ್ವೆಗಳಲ್ಲಿ ಸೈನಿಕರ ಮತ್ತು ಸಂಗ್ರಾಮ ವಸ್ತುಗಳ ಓಡಾಟಕ್ಕೆ ಪ್ರಥಮ ಸ್ಥಾನವನ್ನು ಕೊಡಬೇಕಾಗಿ ಬಂದಿರುವುದು ಎರಡನೆಯದು. ಸಂಗ್ರಾಮ ಸಮಯದಲ್ಲಿ ಸರಕಾರಗಳು ಎದುರಿಸಬೇಕಾದ ಮುಖ್ಯ ಸಮಸ್ಯೆಗಳಲ್ಲಿ 'ಟ್ರಾಫಿಕ್' ಸಮಸ್ಯೆಯೂ ಒಂದೆಂದು ಹೇಳಬೇಕಾಗಿಲ್ಲ. ರಣರಂಗದಲ್ಲಿರುವ ನೇನೆಗಳಿಗೆ ಸಾಕಾದಷ್ಟು ಆಹಾರ ವಸ್ತುಗಳೂ ಸಂಗ್ರಾಮ ವಲಯಗಳಲ್ಲಿ ಕಾಲಕಾಲಕ್ಕೆ ಒದಗಬೇಕು. ಇಲ್ಲದಿದ್ದರೆ ಅವು ಏನೂ ಮಾಡುವಂತಿಲ್ಲ. ಈ ಭಾರವೆಲ್ಲ 'ಟ್ರಾಫಿಕ್' ವ್ಯವಸ್ಥೆಯ ಮೇಲೆ ಬಿದ್ದಿದೆ.

ಈ ಸಮಸ್ಯೆಯನ್ನು ಎದುರಿಸಲೋಸುಗ ಈಗ ಕೆಲವಿನಗಳ ಹಿಂದೆ ಪೆಟ್ರೋಲ್ ಬಳಕೆಗೆ ನಿರ್ಬಂಧ ಹಾಕಲಾಯಿತು. ಸಿವಿಲಿಯರ ರಾಜೆಗೆ ಬೇಕಾದಷ್ಟು ಎಣ್ಣೆಯನ್ನು ಸಂಗ್ರಹಿಸಿಟ್ಟು ಅನಂತರ ಉಳಿಯಬಹುದಾದ ಎಣ್ಣೆಯನ್ನು ಸಾರ್ವಜನಿಕರಿಗೆ ಕೊಡುವುದೇ ಇದರ ಉದ್ದೇಶ. ಇದಿಷ್ಟರಿಂದಲೇ 'ಟ್ರಾಫಿಕ್' ಸಮಸ್ಯೆಯನ್ನು ನಿವಾರಿಸಲು ಸಾಧ್ಯವಿಲ್ಲ. ಈಗ ರೈಲ್ವೆಗಳಲ್ಲಿ ಸಹ ಸಿವಿಲಿಯರಿಗೆ ಹೆಚ್ಚಿನ ಸೌಕರ್ಯವನ್ನು ಕಲ್ಪಿಸಿಕೊಡುವ ಪ್ರಯತ್ನ ನಡೆಯುತ್ತಿದೆ. ಹಲವು 'ಪ್ಯಾಸೆಂಜರ್' ಗಾಡಿಗಳನ್ನು ನಿಲ್ಲಿಸಿ, ಸಿವಿಲಿಯನರ ಓಡಾಟಕ್ಕೆ ಸಂಗ್ರಾಮ ವಸ್ತುಗಳ ಓಡಾಟಕ್ಕೆ ಅನಕಾಶ ಮಾಡಿಕೊಡುವ ವಿಚಾರವನ್ನು ನಾನಾ ರೈಲ್ವೆಗಳವರು ನಡೆಸುತ್ತಿದ್ದಾರೆ. ಇದುವರೆಗೆ 'ಪ್ಯಾಸೆಂಜರ್' ರೈಲುಗಳ ಸೌಕರ್ಯವನ್ನು ಶೇಕಡ ೧೦ ರಷ್ಟು ಮಾತ್ರ ಕಡಿತ ಮಾಡಲಾಗಿತ್ತು. ಕಳೆದ ಮಹಾ ಯುದ್ಧ ಕಾಲದಲ್ಲಿ ಶೇಕಡ ೨೫ ರಷ್ಟು ಮಟ್ಟಿಗೆ 'ಪ್ಯಾಸೆಂಜರ್' ಪ್ರಯಾಣ ಸೌಕರ್ಯವನ್ನು ಕಡಿತ ಮಾಡಲಾಗಿತ್ತು. ಈಗಿನದು ಹಿಂದಿನ ಯುದ್ಧಕ್ಕಿಂತ ಉಗ್ರವಾದುದು. ದುಷ್ಟ ಶಕ್ತಿಗಳು ಸಂಪೂರ್ಣವಾಗಿ ನಾಶವಾಗುವವರೆಗೆ ಅದು ನಿಲ್ಲುವಂತಿಲ್ಲ. ಆದ್ದರಿಂದ ಜನರು ಹೆಚ್ಚು ಹೆಚ್ಚಾಗಿ ಅಸೌಕರ್ಯವನ್ನೂ ಕೊಂಡೆಗಳನ್ನೂ ಎದುರಿಸಬೇಕಾಗಿದೆ.

ಕಳೆದ ೫ ತಿಂಗಳಿಂದ ಸಿವಿಲಿಯನರಿಗಾಗಿ ಗಿಕ್ಕಳಿ ಸೈಪಲ್ ರೈಲುಗಳನ್ನು ಬಿಡಲಾಯಿತು. ಜಪಾನು ರಂಗಕ್ಕೆ ಇಳಿದನಂತರ ಭರತಖಂಡದಲ್ಲಿ ಸೈನಿಕರ ಸುತ್ತು ಸಂಗ್ರಾಮ ವಸ್ತುಗಳ ಓಡಾಟ ಹೆಚ್ಚಾಗಿದೆ. ಭಾರತದ ವ್ಯಾಪ್ತಿಯಿಂದ ಬಂದರುಗಳು ಪೂರ್ವತೀರದ ಬಂದರುಗಳ ಮೂಲಕ ಜಲಮಾರ್ಗದ ಮೂಲಕ ಇದುವರೆಗೆ ವ್ಯವಹರಿಸುತ್ತಿದ್ದವು. ಈಗ ಜಲಮಾರ್ಗಗಳನ್ನು ಸಂಪೂರ್ಣ ಕೂರುವುದು ಅವಶ್ಯಾತ್ಯಾವಶ್ಯಕವಾದುದೆಂದು ಬೇರೆ ಹೇಳಬೇಕಾಗಿಲ್ಲ. ಈ ಗಾಗಲೇ ಬಂಗಾಳಾಕೊಲ್ಲಿಯಲ್ಲಿ ಶತ್ರು ಸಬ್ ಮೆರಿನ್ ಎರಡಾವಾರ ಹಡಗುಗಳನ್ನು ನುಂಗುಗಸಿ ಕೆಲಸ ವಾರ್ತೆಯನ್ನು ನೋಡಿದರಂತೂ ಒಳನೀರಿನ ರೈಲ್ವೆ ಮಾರ್ಗಗಳ ವ್ಯಾಪ್ತಿಯು ಸ್ಪಷ್ಟವಾಗದೆ ಇರದು. ಇವುಗಳಿಂದ ಸಿವಿಲಿಯನರಿಗೆ ರೈಲ್ವೆಗಳಿಂದ ಪೂರ್ಣ ಪ್ರಯೋಜನ ದೊರಕುವಂತೆ ವಿವರಿಸುವ ಪ್ರಯತ್ನ ನಡೆಯುತ್ತದೆ. ಇದು ಸಹಜವಾಗಿಯೇ ಇದೆ. ಅದರೆ ಹಾಗೆ ಮಾಡುವಾಗ ಸಿವಿಲಿಯನರ ಕನಿಷ್ಠ ಪ್ರಮಾಣದ ಅವಶ್ಯಕತೆಗಳನ್ನು ಅಧಿಕಾರಿಗಳು ಮನ್ನಿಸಬೇಕಾದೀತು. ಈಗಾಗಲೆ ಪೆಟ್ರೋಲ್ ನಿರ್ಬಂಧದಿಂದ ಏಕೀಕೃತ ಕೊಂದರೆಯಾಗಿದೆ. ರೈಲ್ವೆ ಸೌಕರ್ಯವಿಲ್ಲದ ಕಡಗಳಿಗೆ ಬಸ್ಸುಗಳೂ ಲಾರಿಗಳೂ ಹೋಗಲು ಅವಕಾಶ ಮಾಡಿಕೊಡಲಾಗಿದೆ. ಆಹಾರ ವಸ್ತುಗಳೂ ಇತರ ಅತ್ಯಾವಶ್ಯಕ ಸಾಮಗ್ರಿಗಳೂ ಜನರಿಗೆ ಸುಲಭವಾಗಿ ಒದಗಲು ಏನೇನೂ ಅಡಚಣೆ ಇರಬಾರದು. ಗೃಹರಂಗದಲ್ಲಿರುವ ಜನರಲ್ಲಿ ಪೂರ್ಣ ಸಮಾಧಾನವೂ ತೃಪ್ತಿಯೂ ನೆಲೆಸಿದರೆ ಆರ್ಥಮಟ್ಟಿನ ಜಯವನ್ನು ಸಂಪಾದಿಸಿದಂತೆ.

ಈಗ ಬಸ್ಸುಗಳವರೂ ಮತ್ತು ಲಾರಿಗಳವರೂ ಪೆಟ್ರೋಲ್‌ಗೆ 'ಚಾರ್‌ಕೋಲ್ ಗ್ಯಾಸ್' ಉಪಯೋಗಿಸುತ್ತಿದ್ದಾರೆ. 'ಗ್ಯಾಸ್' ಬಲದಿಂದ ಮೋಟಾರು ವಾಹನಗಳನ್ನು ಓಡಿಸುವುದು ಪೆಟ್ರೋಲಿನಲ್ಲಿ ಓಡಿಸುವುದಕ್ಕಿಂತ ಬಹಳ ಉಳಿತಾಯ. ಪೆಟ್ರೋಲಿಗೆ ಈಗ ಅಭಾವವೊದಗಿರುವುದರಿಂದ ಈ 'ಗ್ಯಾಸ್'ಗೆ ಪ್ರಾಮುಖ್ಯತೆ ಹೆಚ್ಚುತ್ತಿದೆ. ಇದ್ದಿಲಿಗೆ ಗಿರಾಕಿ ಹೆಚ್ಚುತ್ತಿದೆ. ಅದೇ ಪ್ರಮಾಣದಲ್ಲಿ ಇದ್ದಿಲಿನ ಬೆಲೆ ಹೆಚ್ಚುತ್ತಿದೆ. ಇದ್ದಿಲನ್ನು ಸಾಕಾದಷ್ಟು ಪ್ರಮಾಣದಲ್ಲಿ ತಯಾರಿಸಿ, ಸರಬರಾಜು ಮಾಡುವ ವಿಚಾರಕ್ಕೆ ನಮ್ಮ ಸರಕಾರದವರು ಗಮನಕೊಡಬಹುದು. ಇದ್ದಿಲನ್ನು ಮಾಡಲು ಒಂದು ಯಂತ್ರವನ್ನು ಸ್ಥಾಪಿಸುವ ವಿಚಾರ ಕುರಿತು ಸರಕಾರದವರು ಪರಿಶೀಲನೆ ನಡೆಸುತ್ತಿದ್ದಾರೆಂದು ಕೆಲವು ದಿನಗಳ ಹಿಂದೆ ಗೊತ್ತಾಗಿತ್ತು. ಅದರ ವಿಚಾರವೇನಾಯಿತೋ ತಿಳಿಯದು. ಇದರ ಮೇಲೆ ಗೃಹಗಳಿಬಳಕೆಗೆ ಬೇರೆ ಇದ್ದಿಲು ಬೇಕಾಗಿದೆ. ನಮ್ಮಲ್ಲಿ ಅರಣ್ಯ ಸಂಪತ್ತಿಗೇನೂ ಕೊರತೆಯಿಲ್ಲ. ಅದರ ಪೂರ್ಣ ಪ್ರಯೋಜನ ನಮ್ಮ ಈಗ ಪಡೆಯಲು ಸಕಾಲವಾಗಿದೆ. ಈಗ ಇದ್ದಿಲಿನಿಂದ 'ಗ್ಯಾಸ್' ಉತ್ಪತ್ತಿ ಮಾಡತಕ್ಕಂತ ಯಂತ್ರಗಳಿಗೆ ಬೆಲೆಯು ಹೆಚ್ಚುತ್ತಿದೆ. ಅವುಗಳನ್ನು ತಯಾರಿಸುವ ವಿಚಾರವನ್ನು ಕೂಡ ಸರಕಾರದವರು ಪರಿಶೀಲಿಸಬಹುದು. ಮನಸ್ಸು ಮಾಡಿದ ಪಕ್ಷದಲ್ಲಿ ಅತಿ ಕಾರ್ಯನೆಯಲ್ಲಿ ಅವುಗಳನ್ನು ತಯಾರಿಸುವುದು ಕಷ್ಟವಾಗಲಾರದು.

ಅದು ಏನೇ ಇರಲಿ, ಸಿವಿಲಿಯನರ ಅವಶ್ಯಕತೆಯನ್ನು ಸರಕಾರದವರು ಸದಾ ಗಮನದಲ್ಲಿಟ್ಟಿರುವರೆಂದು ನಾವು ನಿರೀಕ್ಷಿಸುತ್ತೇವೆ. ಈ ಸಮಸ್ಯೆಯನ್ನು ಸುಲಭಗೊಳಿಸುವ ಜವಾಬ್ದಾರಿ ಜನರ ಮೇಲೆ ಸಹ ಬಿದ್ದಿದೆ. ಕೇವಲ ದೀರ್ಘಪ್ರಯಾಣಗಳಿಗೆ ಹೊರತು ಅನತಿದೂರದ ಪ್ರಯಾಣಗಳಿಗೆಲ್ಲಾ ಎತ್ತಿನಗಾಡಿಗಳನ್ನೆ ಉಪಯೋಗಿಸಬಹುದು. ಮುಂದೆ ಎಂತಹ ಪರಿಸ್ಥಿತಿಯುಂಟಾಗುವುದೆಂಬುದನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಜನರು ತಮ್ಮ ಕಾಲು ಮೇಲೆಯೇ ತಾವು ನಿಲ್ಲಲು ಪ್ರಯತ್ನಿಸುವುದು ಕ್ಷೇಮ. (ವಿ. ಕ)

ಸಿಂಗಪುರಕ್ಕಾಗಿ ಘೋರ ಹೋರಾಟ.

ಕಳೆದ ೨೪ ಘಂಟೆಗಳಿಂದ ಸಿಂಗಪುರದಮೇಲೆ ಶತ್ರು ವಿಮಾನಗಳ ಚಟುವಟಿಕೆ ಅಸಾಧ್ಯವಾಗಿದೆ. ಬಹಳ ಎತ್ತರದಲ್ಲಿ ಶತ್ರು ವಿಮಾನಗಳು ಬಂದು 'ಡೈವ್ ಬಾಂಬಿಗ್' ಮುತ್ತಿಗೆ ನಡೆಸಿದವು ಕಲವು ಕಡೆ ಬೆಂಕಿ ಹತ್ತಿಕೊಂಡಿತ್ತು. ಮಿಲಿಟರಿಯವರಲ ಹೆಚ್ಚು ಮಂದಿ ಅಪಾಯಕ್ಕೆ ಒಳಗಾಗಲಿಲ್ಲ. ಭೂ ಮಾರ್ಗದಲ್ಲಿ ಶತ್ರುಗಳ ಚಟುವಟಿಕೆಯೇನೂ ಕಾಣಬರಲಿಲ್ಲ

ನಿನ್ನೆ ರಾತ್ರಿ ನಮ್ಮ ಬಾಂಬರುಗಳು ಫ್ಲೈಂಗ್ ವಿಮಾನ ನಿಲ್ದಾಣದ ಮೇಲೆ ಮುತ್ತಿಗೆ ನಡೆಸಿದವು. ಶತ್ರು ಲಾರಿಗಳ ವಡೆಯೊಂದರ ಮೇಲೆ ಸಹ ಬಹಳ ತಗ್ಗಿಗೆ ಬಂದು ವಿಮಾನಗಳು ಮುತ್ತಿಗೆ ನಡೆಸಿದವು. ನಮ್ಮ ವಿಮಾನಗಳೆಲ್ಲ ಹಿಂತಿರುಗಿದವು

ನೀರಿನ ಸಮಸ್ಯೆ

ಕಟ್ಟಕಡೆಯವರೆಗೆ ಸಿಂಗಪುರವನ್ನು ರಕ್ಷಿಸಿಕೊಳ್ಳಲಾಗುವುದೆಂದು ಅಧಿಕಾರಯುತ ಕ್ಷೇತ್ರಗಳಲ್ಲಿ ತಿಳಿದುಬಂದಿದೆ. ಜಪಾನರನ್ನು ಹಿಂದಕ್ಕೆ ಓಡಿಸಲು ಸಾಧ್ಯವಾಗುವವರೆಗೂ ಸಿಂಗಪುರವನ್ನು ರಕ್ಷಿಸಲಾಗುವುದು. ಇದುವರೆಗೆ ಮುಖ್ಯವಾ ಮೂಲಭೂಮಿಯಲ್ಲಿರುವ ನೀರಿನ ಬುಗ್ಗೆಗಳಿಂದ ಕೊಳಾಯಿಗಳ ಮೂಲಕ ಸಿಂಗಪುರಕ್ಕೆ ನೀರನ್ನು ತರಲಾಗುತ್ತಿತ್ತು. ಜೋಹೋರ್ ಸೇತುವೆಯ ಮೇಲೆ ನೀರಿನ ಕೊಳಾಯಿಗಳನ್ನು ತರಲಾಗಿತ್ತು. ಈಗ ಆ ಸೇತುವೆಯನ್ನು ನಾಶಪಡಿಸುವದರಿಂದ ನೀರಿನ ಸರಬರಾಜಿಗೆ ಉಂಟಾಗಿರುವ ಆತಂಕವನ್ನು ನಿವಾರಿಸಿಕೊಳ್ಳಲಾಗಿದೆ. ನೀರಿನ ಉಪಯೋಗವನ್ನು ಹದ್ದುಬಸ್ತಿನಲ್ಲಿರಿಸಿರುವುದರಿಂದ ಅಲ್ಲಿನ ನಿವಾಸಿಯನಿಗೂ ಅನಿಶ್ಚಿತಕಾಲದವರೆಗೆ ಸಾಕಾಗುವಷ್ಟು ಆಹಾರವೂ ನೀರೂ ಬದಗುವುದೆಂದು ಹೇಳಲಾಗಿದೆ.

ಇತ್ತೀಚೆಗೆ ಸಿಂಗಪುರದಲ್ಲಿ ಕೆಲಸಗಾರರಿಗೆ ಕೊರತೆಯಾಗಿತ್ತು. ಆದರೆ ಈಗ ಮಿಲಿಟರಿಯವರಿಗೆ ಕೆಲಸಗಾರರ ಅನಿಶ್ಚಿತತೆಯಿಲ್ಲದೇ ಇರುವುದರಿಂದ ಈ ಅತಂಕ ತಪ್ಪಿತು. ಜೋಹೋರ್ ತೀರದಲ್ಲಿರುವ ಗುಡ್ಡಗಳಿಂದ ಜಪಾನರು ಸಿಂಗಪುರ್ ದ್ವೀಪದ ಮೇಲೆ ಸುಲಭವಾಗಿ ಗುಂಡು ಹಾರಿಸಲು ಸಾಧ್ಯವಿರುವ ನೌಕಾಮೂಲಸ್ಥಾನವನ್ನು ಈಗ ಮಿತ್ರ ನೌಕಾದಳಗಳು ಉಪಯೋಗಿಸುತ್ತಿಲ್ಲ. ಇದೇರೀತಿ ಸಿಂಗಪುರದ ೨ ವಿಮಾನ ನಿಲ್ದಾಣಗಳು ಶತ್ರು ಫಿರಂಗಿಗಳ ಗುಂಡಿನೇಟಿಗೆ ಸಿಗುವಷ್ಟು ಹತ್ತಿರದಲ್ಲಿವೆ. ಆದ್ದರಿಂದ ಅವುಗಳನ್ನು ಉಪಯೋಗಕರವಾದ ರೀತಿಯಲ್ಲಿ ಇಟ್ಟಿರಲು ಕೂಲಿಗಾರರ ಅವಶ್ಯಕತೆಯಿಲ್ಲ. ಅನುಕೂಲವಾದ ಈ ವಿಮಾನ ನಿಲ್ದಾಣಗಳನ್ನು ಬ್ರಿಟಿಷರು ಈಗ ಬಿಟ್ಟು ಬಿಟ್ಟಿರುವುದರಿಂದ ಸಿಂಗಪುರದ ಮೇಲೆ ಬೀಳಲು ಜಪಾನರಿಗೆ ಬಹಳ ಅನುಕೂಲವಾಗಿದೆ. ಆದರೆ ದ್ವೀಪದ ರಕ್ಷಣೆಗಾಗಿ ಅವಾರ ಮಂದಿ ಸೈನಿಕರು ಇರುವುದರಿಂದ ಶತ್ರುಗಳಗನ್ನು ಎದುರಿಸಲು ಸಾಧ್ಯವಿದೆ. ಮಿಲಿಟರಿ ಬಲ, ಆಹಾರ, ನೀರು ಸರಬರಾಯಿ ಕೂಲಿಗಾತರ ಸಹಾಯ ಈ ದೃಷ್ಟಿಯಿಂದ ನೋಡುವುದಾದರೆ ಸಿಂಗಪುರವು ಬೀಳುವುದಿಲ್ಲವೆಂದೂ ಹೇಳಬಹುದು.

ಸಿವಿಲಿಯನರ ಪ್ರಶ್ನೆ

ಇನ್ನುಳಿದಿರುವುದು ಸಿವಿಲಿಯನರ ಪ್ರಶ್ನೆ. ಶತ್ರುಗಳು ಸಮರದ ಮುತ್ತಿಗೆಗಳನ್ನು ಸಿವಿಲಿಯನರು ತಡೆದುಕೊಳ್ಳುತ್ತಿರುವುದು ಸಿಂಗಪುರದ ಆರ್ಥಿಕ ರಚನೆಯು ಮುರಿದುಬೀಳದಂತೆ ನೋಡಿಕೊಳ್ಳಲು ಸಿವಿಲ ಅಧಿಕಾರಿಗಳು ಶಕ್ತರಾಗುವರೇ ಎಂಬ ಪ್ರಶ್ನೆ ಹೇಳುವವಾಗಿದೆ.

ಸಿಂಗಪುರವನ್ನು ಹಿಡಿದಿರಬೇಕಾದುದು ಏನನ್ನು ಮುಖ್ಯವೆಂಬುದನ್ನು ಎಲ್ಲರೂ ಅರಿತಿದ್ದಾರೆ. ಆದೇನಾದರೂ ಬಿದ್ದರೆ ಮಿತ್ರ ಸೇನೆಗಳ ಸಂಗ್ರಾನುವ್ಯೂಹಕ್ಕೆ ಎಂತಹ ಪೆಟ್ಟು ಬೀಳುವುದೆಂಬುದು ಎಲ್ಲರಿಗೂ ಸೊತ್ತು. ಸಿಂಗಪುರದ ವಿಮಾನ ನಿಲ್ದಾಣಗಳನ್ನೂ ಮತ್ತು ನೌಕಾ ಮೂಲಸ್ಥಾನವನ್ನೂ ಮಿತ್ರಸೇನೆಗಳು ಉಪಯೋಗಿಸಲು ಅನಕಾಶವಿಲ್ಲದಂತಾಗಿರುವುದು. ಆ ನೌಕಾ ಮೂಲಸ್ಥಾನದಿಂದ ತಕ್ಷಣ ಲಾಭವನೇನೋ ದೊರೆಯುವಂತಿಲ್ಲ. ಆದರೆ ಅದರ ನೌಕಾ ಮತ್ತು ವಿಮಾನ ಮೂಲಗಳು ಸಂಪೂರ್ಣವಾಗಿ ನಾಶವಾಗದಂತೆ ದೀರ್ಘಕಾಲ ಹಿಡಿದರೆ ಅನಂತರ ಶತ್ರುಗಳ ಮೇಲೆ ಬೀಳಲು ಅದೊಂದು ಕೇಂದ್ರವಾಗುತ್ತದೆ.

ಸಿಂಗಪುರವು ಬಿದ್ದರೆ

ಸಿಂಗಪುರವು ಜಪಾನರ ವಶವಾಗುವುದಾದರೆ, ಜಪಾನರಿಗೆ ಅದರಿಂದ ಬಹಳ ಪ್ರಯೋಜನವಾಗುತ್ತದೆ. ಕನಿಷ್ಟ ಪ್ರಮಾಣದ ಪ್ರಯೋಜನದಿಂದರೆ ಬರ್ಮಾದ ರೇಂಗೂನಿಗೆ, ಡಿಸ್ಯಾಯರುಗಳಿಗೂ ಬೇಕಾದ ಸಾಮಾನುಗಳನ್ನು ಸರಬರಾಜು ಮಾಡಲೋಸುಗ ಸಿಂಗಪುರವನ್ನು ಶತ್ರುಗಳು ಉಪಯೋಗಿಸಿಕೊಳ್ಳಬಹುದು. ಆಗ ಶತ್ರುನೌಕೆಗಳು ರಿಯೋ ಆರ್ಚಿಪಿಲಿಗೋವನ್ನು ಹತೋಟಿಯಲ್ಲಿ ಇಡಬಹುದು. ಇಲ್ಲದೇ ಉತ್ತರ ಸುಮಾತ್ರಾವನ್ನು ಮಿತ್ರ ಸೇನೆಗಳು ಉಳಿಸಿಕೊಳ್ಳುವುದು ಅಸಾಧ್ಯವಾಗಿದೆ. ಸಿಂಗಪುರಕ್ಕೂ ಮತ್ತು ಬಟಾವಿಯಕ್ಕೂ ನಡುವೆ ಸುಮಾತ್ರಾ ದ್ವೀಪದ ಪೂರ್ವದಲ್ಲಿರುವ ಪಾಲೆಂಬಾಗ್ ಎಂಬುವಕ್ಕೆ ಸಹ ವಿಪತ್ತೆದುರಾಗುತ್ತದೆ. ಮಿತ್ರನೌಕೆಗಳಿಗೆ ಸಾಮಾನುಗಳನ್ನು ಸರಬರಾಜುಮಾಡುವ ಮುಖ್ಯ ಕೇಂದ್ರವಿದು. ಈ ಸ್ಥಾನಗಳು ಕೈಬಿಟ್ಟರೆ ಅಥವಾ ಪ್ರಯೋಗಕ್ಕೆ ಬಾರದಂತಾದರೆ ಮಿತ್ರ ಸೇನೆಗಳು ಜಾವಾವರೆಗೆ ಹಿಂದೆ ಸರಿಯಬೇಕಾಗುತ್ತದೆ. ಆಗ ಜಾವಾ ದ್ವೀಪದ ಉತ್ತರತೀರದ ಬಂದರುಗಳ ಮೇಲೆ ಏಕನ್ಯಕಾರವಾಗಿ ಶತ್ರುಗಳು ಮುತ್ತಿಗೆಸಡೆಸುವರು. ಆಗ ಭಾರತ ಮತ್ತು ದಕ್ಷಿಣ ಆಫ್ರಿಕಗಳಿಂದ ಒಂದು ಕಡೆಯು ಆಸ್ಟ್ರೇಲಿಯಾ ಮತ್ತು ಅಮೇರಿಕೆಗಳಿಂದ ಇನ್ನೊಂದು ಕಡೆಯೂ ಬರುವ ನಮ್ಮ ಸೈನ್ಯಗಳನ್ನು ದಕ್ಷಿಣ ಜಾವಾದಲ್ಲಿರುವ ಬಂದರುಗಳ ಮೂಲಕ ಸಡೆಯಬೇಕಾಗಿ ಬರುತ್ತೆ.

ಬರ್ಮಾದಲ್ಲಿ ಜಪಾನರ ಮುನ್ನಡೆ.

ಬರ್ಮಾದಲ್ಲಿ ಜಪಾನರು ಸಾಲ್ವೀನ್ ನದಿಯನ್ನು ದಾಟಿರುವರೆಂದು ಈಗ ಗೊತ್ತಾಗಿದೆ.

ಸಾಲ್ವೀನ್ ನಗರವು ಶತ್ರು ವಶವಾದನಂತರ ಬರ್ಮಾ ರಸ್ತೆಯ ಕದನವು ಹೊಸ ಪಟ್ಟನನ್ನು ತಾಳಿದಂತಾಯಿತು. ಸಾಲ್ವೀನ್ ನದಿಪ್ರದೇಶದಲ್ಲಿ ಮಿತ್ರ ಸೇನೆಗಳು ಸ್ಥಾಪಿಸಿರುವ ವ್ಯೂಹವನ್ನು ಬಲವತ್ತಿಸಲು ಹೊಸ ಭಾರತೀಯ ಸಡೆಗಳನ್ನು ಅಲ್ಲಿಗೆ ಕಳಿಸಲಾಗಿದೆ. ಭಾರತೀಯ ಸಡೆಯಲ್ಲಿ ಜಾಟರು, ಸಿಕ್ಖರು, ಗೂರ್ಕರು, ರಜಪೂತರು., ಪಂಜಾಬಿಗಳು, ಮೊಗ್ರಾಗಳು ಮತ್ತು ಗುರಾರರು ಇದ್ದಾರೆ.

ಸಾಲ್ವೀನ್ ನದಿಯು ಈಗ ಮಿತ್ರ ಸೇನೆಗಳ ಹೊರಂಗವಾಗಿದೆ. ಸ್ಥಾಫಾ

ವಿಕವಾದ ಹಲವು ಅಡಚಣೆಗಳನ್ನು ನದಿಯು ಒಡ್ಡಿದೆ. ಅದು ಬಹಳ ಅಗಲವಿರುವುದರಿಂದ ಅಪಾರ ಸಂಖ್ಯೆಯಲ್ಲಿ ಶತ್ರುಗಳು ದಾಟುವುದು ಕಷ್ಟ. ಅಲ್ಲಲ್ಲಿ ಕೆಲವು ಕಡೆ ಸಣ್ಣ ಪುಟ್ಟ ಶತ್ರುಗುಂಪುಗಳು ನದಿಯನ್ನು ದಾಟಿ ಪಶ್ಚಿಮಕ್ಕೆ ಬಂದವೆಂದು ತಿಳಿದುಬಂದಿದೆ.

ಮೌಲ್ಮೀನಿಂದ ಮರ್ಟಬಾನ್‌ವರೆಗೆ ನದಿಯ ಎರಡು ಕಡೆಯಿಂದ ಫಿರಂಗಿಗಳ ಆರ್ಭಟ ಕೇಳಿಬರುತ್ತಿದೆ. ಜಪಾನರು ಈಗ ಬೇರೆ ಕಡೆಗೆ ತೀರ್ಥ ಕದನ ನಡೆಸುತ್ತಿರುವುದರಿಂದ ಸಾಲ್‌ವೀನ್ ನದಿ ದಾಟಲು ಸಾಕಾದಷ್ಟು ಸೈನ್ಯವನ್ನು ತಂದಿದ್ದಾರೆಯೇ ಎಂಬುದು ಅನುಮಾನಾಸ್ಪದವಾಗಿದೆ.

ಶತ್ರು ಸೈನಿಕರು ಜೋರಿಸುತ್ತಿರುವ ಅಪೂರ್ವ ಸಾಮರ್ಥ್ಯವನ್ನು ಕಂಡರೆ, ಅವರ ನಿಜವಾದ ಬಲವೇ ಗೊತ್ತಾಗುವದಿಲ್ಲ. ಸಾಲ್‌ವೀನ್ ನದಿಯನ್ನು ಅದರ ಪಶ್ಚಿಮದಲಿರುವ ಗುಡ್ಡಗಳನ್ನೂ ಜಪಾನರು ದಾಟಿದರೆ, ಮುಂದೆ ನುಗ್ಗಲು ಹಬ್ಬವಾನವು ಬಹಳ ಅನುಕೂಲವಾಗಿದೆ. ಅನಂತರ ಭೂಮಿಯು ಚಿಪ್ಪಟೆಯಾಗಿದೆ. ಮಳೆಗಾಲದಲ್ಲಿ ಈ ಪ್ರದೇಶವೆಲ್ಲ ಕೆಸರಿನಿಂದ ತುಂಬಿರುತ್ತದೆ. ಆದರೆ ಈಗ ಭೂಮಿ ಭದ್ರವಾಗಿದೆ. ಮಳೆಗಾಲವು ಮೇ ತಿಂಗಳಲ್ಲಿ ಆರಂಭವಾಗುತ್ತದೆ. ಅದರ ಪರಿಣಾಮವು ಮಿಲಿಟರಿ ಕಾರ್ಯಕ್ರಮಗಳಮೇಲೆ ಬಹಳ ಮಟ್ಟಿಗೆ ಆಗುತ್ತದೆ. ಆದರೆ, ಹವಮಾನವು ಸಹಾಯಕ್ಕೆ ಬರುವಮುನ್ನ ಮಿಲಿಟರಿ ಪರಿಸ್ಥಿತಿಯಲ್ಲಿ ಬಹಳ ಬದಲಾವಣೆಗಳಾಗುವುದು ಖಂಡಿತ.

ಸಿಂಗಪುರದ

ಕಾಳಗವಾರಂಭವಾಯಿತು

ಬ್ರಿಟಿಷ್ ಸೈನ್ಯಗಳು ಮಲಯಾದ ಜೋಹೋರ ಜಲ್ಲೆಯಿಂದ ಸಿಂಗಪುರ ದ್ವೀಪದ ಕೋಟೆಯೊಳಕ್ಕೆ ಸುರಕ್ಷಿತವಾಗಿ ನುಟ್ಟಿದವು. ಜೋಹೋರ ಭಾಗಕ್ಕೂ, ಸಿಂಗಪುರಕ್ಕೂ ಇದ್ದ ಕಲ್ಲು ನುತ್ತು ಸಿಮೆಂಟಿನ (೧ ಮೈಲಿ ಉದ್ದ + ೬೦ ಅಡಿ ಅಗಲ) ಸೇತುವೆಯನ್ನು ನಾಶಪಡಿಸಲಾಗಿದೆ. ಇನ್ನು ಮಲಯದ ಯುದ್ಧವು ಮುಗಿದು ಸಿಂಗಪುರದ ಕಾಳಗವು ಪ್ರಾರಂಭವಾಯ್ತೆಂದು ಮಿಲಿಟರಿ ಕ್ಷೇತ್ರಗಳಲ್ಲಿ ಹೇಳುತ್ತಿರುವರು. ಸೇತುವೆಯನ್ನು ಒಡೆಯಬೇಕಾದರೆ ಮುಖ್ಯವಾದ ನೀರಿನ ಕೊಳಾಯಿ ಯೂ ಹೋಗಿದೆ. ಇದರಿಂದ ದ್ವೀಪಕ್ಕೆ ಸಿಹಿನೀರಿನ ಕಷ್ಟವಾಗುವುದಾದರೂ ಈಚೆಗೆ ಬಂದ ದೊಡ್ಡ ಮಳೆಗಳಿಂದ ದ್ವೀಪದಲ್ಲಿ ನೀರಿಗೆ ಕೊರತೆ ಇಲ್ಲವಂತೆ ಜಪಾನಿಯರು ದ್ವೀಪವನ್ನು ಸುತ್ತುಗಟ್ಟುವ ಯತ್ನಗಳನ್ನು ಮಾಡುತ್ತಿರುವರು. ಪಶ್ಚಿಮ ದೋರ್ನಿಯೋದ ರಾಜಧಾನಿಯಾದ ಪಾಂಟಿಯಾನಕವನ್ನು ಆಕ್ರಮಿಸಿಕೊಂಡಿರುವುದು ಅಂಬಾಯ್ನ ಭಾಗದಲ್ಲಿ ಮುಂದುವರಿಯುತ್ತಿರುವುದೂ, ಇದಕ್ಕೆ ಸಾಕ್ಷಿಯಾಗಿವೆ. ಅಂದರೆ ಸಿಂಗಪುರ ಭಾಗಕ್ಕೆ ಶಿಲೋನ ಭಾಗದಿಂದ ಬಟೇವಿಯಾ ಮಾರ್ಗವಾಗಿ ಬರುತ್ತಿದ್ದ ಹಡಗ್ಗಮತ್ತು ಇತರ ಸಾಮಗ್ರಿಗಳನ್ನು ತಪ್ಪಿಸುವುದೇ ಇದರ ಉದ್ದೇಶವಿದ್ದಂತೆ ಕಾಣುತ್ತದೆ. ಮಲಯಾದ ಪೂರ್ವ ಪಶ್ಚಿಮ ತೀರಗಳು ಪೂರ್ಣವಾಗಿ ಜಪಾನಿನ ಸ್ವಾಧೀನದಲಿವೆ. ಫಿಲಿಪ್ಪೈನ್ ದ್ವೀಪಗಳು ಅವರ ಸ್ವಾಧೀನದಲ್ಲಿವೆ. ಹೀಗಾಗಿ ಸಿಂಗಪುರದ ರಕ್ಷಣೆಯು ಗಂಡಾಂತರದ ಪರಿಸ್ಥಿತಿಯಲ್ಲಿದೆ. ಬ್ರಿಟಿಷ್ ಮತ್ತು ಅಮರಿಕಾದ ಹಡಗುಗಳು ಪೆಸಿಫಿಕ್ ಭಾಗದಲ್ಲಿದ್ದು ಒಂದಲ್ಲ ಒಂದುಕಡೆಯಲ್ಲಿ ಶತ್ರು ಹಡಗುಗಳನ್ನು ಎದುರಿಸಬೇಕಾದ ಪ್ರಸಂಗ ಬಂದೇ ಬರುವುದು. ಸಮುದ್ರದಲ್ಲಿ ಪೂರ್ಣ ಸ್ವಾಮಿತ್ವವು ಬರುವವರೆಗೂ, ಮಿತ್ರ ರಾಷ್ಟ್ರಗಳಾದ ಅಮೆರಿಕಾ ಬ್ರಿಟನ್ನುಗಳು ಕಷ್ಟಪರಿಸ್ಥಿತಿಯನ್ನು ಎದುರಿಸಬೇಕಾಗುವುದು. ಸಿಂಗಪುರದ ಗವರ್ನರರಿಗೆ ಧೈರ್ಯ ಮತ್ತು ಶಾಂತಿಯ ಸಂದೇಶವನ್ನು ಪ್ರಜೆಗಳಿಗೆ ತಿಳಿಸಲು ಬ್ರಿಟಿಷ್ ಚಕ್ರವರ್ತಿಗಳು ಸಂದೇಶವನ್ನು ಕಳುಹಿಸಿರುವರು.

೬೮ ವರ್ಷ ವಯಸ್ಸಿನ ಜೋಹೋರಿನ ಸುಲ್ತಾನರು ಬ್ರಿಟಿಷ್ ಸೈನ್ಯಗಳು ಹಿಂದಕ್ಕೆ ಸರಿಯುವಕಾಲಕ್ಕೆ ಬರಲಿಲ್ಲ. ತಮ್ಮ ಪ್ರಜೆಗಳ ರಕ್ಷಣೆಗೆಂದು ಅವರು ತಮ್ಮ ಅರಮನೆಯಲ್ಲೇ ಉಳಿದರು.

ಬರ್ಮಾದಲ್ಲಿ

ದಕ್ಷಿಣ ಭಾಗದಲ್ಲಿ ಜಪಾನರು ಮೌಲ್ಮೈನ ನಗರವನ್ನು ಆಕ್ರಮಿಸಿಕೊಂಡಿರುವರು. ಬ್ರಿಟಿಷ್ ಸೈನ್ಯಗಳು ಸಾಲ್ವೀನ್ ನದಿಯನ್ನು ದಾಟಿ ಬಂದಿವೆ. ರಂಗೂನಿನ ಮೇಲೆ ಉಗ್ರ ದಾಳಿಯಾಗುತ್ತಲಿದೆ. ಅದರೂ ದಾಳಿಮಾಡಲಿಕ್ಕೆ ಬಂದ ಶತ್ರು ವಿಮಾನಗಳಿಗೇ ಅಧಿಕ ನಷ್ಟವಾಗುತ್ತಿರುವದೆಂದು ಹೇಳಲಾಗಿದೆ. ಬರ್ಮಾ, ಚೀನಾದ ರಸ್ತೆಯನ್ನು ಮುಚ್ಚಿ ಚೀನೀಯರಿಗೆ ಸಂಗ್ರಹಗಳು ಹೋಗದೆಂತೆ ಮಾಡುವುದೇ ಜಪಾನರ ಉದ್ದಿಶ್ಯ ವಿತ್ತೆಂದು ಕಾಣುತ್ತದೆ.

ಫಿಲಿಪ್ಪೈನ್ ದ್ವೀಪಗಳ ಭಾಗದಲ್ಲಿ

ಬಾಟಾನ ದ್ವೀಪದ ಭಾಗದಲ್ಲಿ ಮಾಳ ಆರ್ಥರ್‌ರವರ ಸೈನ್ಯಗಳನ್ನು ಚದರಿಸಲು ಜಪಾನಿಯರಿಗೆ ಇನ್ನೂ ಸಾಧ್ಯವಾಗಿಲ್ಲ. ಬ್ರಿಟಿಷ್ ಅಧೀನದಲ್ಲಿರುವ ಸೈನ್ಯಗಳು ಜಪಾನೀ ಧಾಳಿಗಳನ್ನು ಯಶಸ್ವಿಯಾಗಿ ನಿರೋಧಿಸಿವೆ.

ಆಫ್ರಿಕಾದಲ್ಲಿ

ಜರ್ಮನ ಸೈನ್ಯಾಧಿಕಾರಿಯಾದ ಜನರಲ್ ರೊಮೆಲನು ಬ್ರಿಟಿಷರ ಅಧೀನದಲ್ಲಿದ್ದ ಬೆಂಗಾಜಿ ಬಂದರನ್ನು ಆಕ್ರಮಿಸಿಕೊಂಡದ್ದರಿಂದ ಬ್ರಿಟಿಷರು ಇಷ್ಟುದಿವಸ ಶ್ರಮಪಟ್ಟದ್ದು ವ್ಯರ್ಥವಾಗುವಂತೆ ತೋರಿಬರುತ್ತಲಿದೆ.

ರಷ್ಯಾ—ಜರ್ಮನಿ

ರಷ್ಯಾದಲ್ಲಿ ಜರ್ಮನಿಯರು ಹಿಂದಿರುಗುತ್ತಲೇ ಇರುವರು. ಕಳೆದ ವಾರದ ೪ ದಿನಗಳಲ್ಲಿ ೪೯೦೦ ಜರ್ಮನರು ಕೊಲ್ಲಲ್ಪಟ್ಟರೆಂದು ರಷ್ಯನ ರಂಗದ ವಾರ್ತೆಗಳು ಹೇಳುತ್ತವೆ. ೬೮ ನೇ ಡಿವಿಜನ್ ಸೈನ್ಯದ ಜರ್ಮನ್ ಕಮಾಂಡರ್ ಜನರಲ್ ಬ್ರಾನ್‌ರವರು ಕೊಲ್ಲಲ್ಪಟ್ಟರೆಂದು ಗೊತ್ತಾಗಿದೆ. ಟಾಗನರಾಗ ನಗರಕ್ಕೆ ೧೦೦ ಮೈಲಿ ದೂರದಲ್ಲಿನ ನಗರವು ರಷ್ಯನರಿಂದ ಆಕ್ರಮಿಸಲಾಗಿದೆ.

ಡಚ್ಚ ನಾವಿಕಾ ಕೇಂದ್ರವಾದ ಸೌರಬಾಯ ಎಂಬ ಬಂದರ ಮೇಲೆ ಜಪಾನರು ಕಳೆದ ಮಂಗಳವಾರ ಬಾಂಬುಗಳನ್ನು ಸುರಿಸಿರುವರು.

ಅಟ್ಲಾಂಟಿಕ್ ಸಮುದ್ರದಲ್ಲಿ ಶತ್ರುಗಳ ಜಲಾಂತರ್ಗಾಮಿಯೊಂದು ಮುಳುಗಿಸಲ್ಪಟ್ಟಿತು.

ಹತ್ತಿ ಬೆಳೆ.

ಬಳ್ಳಾರಿ ಜಿಲ್ಲೆಯವರು ಕಡಮೆ ಮಾಡಬಾರದು

ಶಾಸನ ಸಭ್ಯರಾದ ಶ್ರೀ ಹೆಚ್. ತೀರಾರಾಮಚೆಟ್ಟಿಯವರು ಹೀಗೆ ತಿಳಿಸುತ್ತಾರೆ.

ಹತ್ತಿಯ ಬೆಳೆಯನ್ನು ಕಡಮೆ ಮಾಡುವ ವಿಷಯದಲ್ಲಿ ಅಖಿಲ ಭಾರತ ಕೇಂದ್ರ ಅರಳೆ ಸಂಘದವರು ಮಾಡಿದ ನಿರ್ಣ

(೭ ನೆಯ ಪುಟವನ್ನು ನೋಡಿರಿ.)

ಜಪಾನಿನ ಸಾಮ್ರಾಜ್ಯನೀತಿ

ಶ್ರೀಮತಿ ಕಮಲಾದೇವಿಯವರ ಲೇಖನ

ಏಶ್ವಿ ಪರ್ಯಟನಮಾಡಿ ಜಗತ್ತಿನ ನಾನಾ ದೇಶಗಳಲ್ಲಿಯೂ ಜಪಾನಿನಲ್ಲಿಯೂ ಸಂಚರಿಸಿ ಭಾರತಕ್ಕೆ ಬಂದಿರುವ ಶ್ರೀಮತಿ ಕಮಲದೇವಿ ಚಟ್ಟೋಪಾಧ್ಯಾಯರವರು ಜಪಾನಿನ ಸಾಮ್ರಾಜ್ಯದಾಹ ನೀತಿಯ ವಿಷಯವಾಗಿ ಒಂದು ಉಪಯುಕ್ತವಾದ ಲೇಖನವನ್ನು ಬರೆದಿದ್ದಾರೆ. ಆ ಲೇಖನದ ಸಾರಾಂಶವನ್ನು ಈ ಕೆಳಗೆ ಕೊಡಲಾಗಿದೆ.

"ಕೋಬ್ ನಗರಕ್ಕೆ ನಾನು ಮೊದಲು ಹಡಗಿನಲ್ಲಿ ಹೋದಾಗ ನನಗೆ ನೃತ್ತಪತ್ರಿಕಾ ಪ್ರತಿನಿಧಿಗಳು ಹಾಕಿದ ಪ್ರಶ್ನೆಯು ಬಹಳ ಸ್ವಾರಸ್ಯವಾಗಿತ್ತು. 'ಜಪಾನ್ ಈಗ ಏ ರೃಢಿಸುತ್ತಿರುವ ಹೊಸ ವ್ಯವಸ್ಥೆಯ ವಿಚಾರವಾಗಿ ನಿಮ್ಮ ಅಭಿಪ್ರಾಯವೇನು?' ಎಂಬುದೇ ಆದರು ಹಾಕಿದ ಪ್ರಶ್ನೆ. 'ಪೂರ್ವದ ಹೊಸ ವ್ಯವಸ್ಥೆ'ಯ ವಿಷಯವಾಗಿ ನಾನು ಆ-ಟ ಪಿಂಗಳಿಂದಲೂ ಅಲ್ಲಲ್ಲಿ ಕೇಳುತ್ತ ಬಂದಿದ್ದೂ ನನಗೆ ಅದರ ನಿಜವಾದ ಅರ್ಥವೇ ಆಗಿರಲಿಲ್ಲ. ಜಪಾನ್ ಕಟ್ಟಬೇಕೆಂದಿರುವ ಇನ್ನೊಂದು ಸಾಮ್ರಾಜ್ಯಕ್ಕೆ ಈ ಅರ್ಥ ಕೊಡಬಾಗಿದೆಯೆಂದು. ಆಗ ನಾನು ಭಾವಿಸಿದ್ದೆ ನೇರವಾಗಿ ನೃತ್ತಪತ್ರಿಕಾ ಪ್ರತಿನಿಧಿಗಳು ಪ್ರಶ್ನೆಹಾಕಿದ್ದು, ಸರಿಯಾದ ಉತ್ತರವನ್ನು ಕೊಡಲು ಅನರ್ಹಳಾಗಿ ತಪ್ಪಿಸಿಕೊಂಡು ಬೆಲ್ಲನೆ ಜಾರಿ ಕೊಂಡೆ 'ಸಾಮ್ರಾಜ್ಯ ಕಟ್ಟುವುದು' ಎಂಬುವಾಗಿ ಅರ್ಥಮಾಡುವುದರಿಂದ ಜಪಾನಿನ ಹೊಸವ್ಯವಸ್ಥೆಗೆ ಸರಿಯಾದ ಅರ್ಥವನ್ನು ಕೊಟ್ಟಂತಾಗುವದಿಲ್ಲವೆಂದು ಆಮೇಲೆ ನನಗೆ ಚೆನ್ನಾಗಿ ವ್ಯಕ್ತವಾಯಿತು. ಅದರ ನಿಜವಾದ ಅರ್ಥವನ್ನೇನೆಂಬುದನ್ನು ಅರಿತು ಕೊಳ್ಳುವ ಕುತೂಹಲವು ನನಸ್ಸಿನಲ್ಲಿ ಅಂಕುರಿಸಿತು.

ಪಾಶ್ಚಿಮಾತ್ಯ ದೇಶಗಳಲ್ಲಿ ಜಪಾನಿಯರೊಡನೆ ದೋಣಿಗಳಲ್ಲಿ ಸಂಚರಿಸುತ್ತಿದ್ದುದಕ್ಕೂ, ಈಗ ಜಪಾನಿನಲ್ಲಿ ಜಪಾನ್ ಹಡಗುಗಳಲ್ಲಿ ಅವರೊಡನೆ ಸಂಚರಿಸುತ್ತಿದ್ದುದಕ್ಕೂ ಅಜಗಜಾಂತರ ವ್ಯತ್ಯಾಸವಿದ್ದುದು ನನ್ನ ಗಮನಕ್ಕೆ ಬಂತು. ಪಾಶ್ಚಿಮಾತ್ಯ ದೇಶಗಳಲ್ಲಿ ಜಪಾನೀಯರು ಭಾರತೀಯರೊಡನೆ ಸಂಚರಿಸುತ್ತಿದ್ದಾಗ ಅವರು ಪಾಶ್ಚಿಮಾತ್ಯರೊಡನೆ ಸರಿಸಮಾನಸ್ಕಂಧರಂತೆ ವರ್ತಿಸಿ ಭಾರತೀಯರನ್ನು ನಿಕೃಷ್ಟ ಭಾವನೆಯಿಂದ ಕಾಣುತ್ತಿದ್ದರು, ತಾವು ಏಷ್ಯನರೆಂಬ ಭಾವನೆಯನ್ನೇ ಪಾಶ್ಚಿಮಾತ್ಯರಿಗೆ ತೋರಿಸಿಕೊಡದಂತೆ ಅವರು ವರ್ತಿಸುತ್ತಿದ್ದರು. ಆದರೆ ನಾನು ಕೋಬ್‌ನಗರಕ್ಕೆ ಹೋದಾಗ ಪರಿಸ್ಥಿತಿಯೇ ಬೇರೆಯಾಗಿತ್ತು. ಅಮೇರಿಕ ಪ್ರಜೆಗಳ ವಿಚಾರದಲ್ಲಿ ಜಪಾನಿನ ಅಧಿಕಾರಿಗಳು ನಡೆದುಕೊಂಡ ನರ್ತನೆಯು ಬಹಳ ಆಶ್ಚರ್ಯಕರವಾಗಿತ್ತು. ಅನಾದಿಯಿಂದ ಕಿಮ್ಮೋಟೊ ಗೌರ್ನರ್‌ಭಾವನೆಯಿಂದ ಕೂಡಿ ನಡೆದುಕೊಳ್ಳುತ್ತಿದ್ದರು. ಅನೇಕಮಂದಿ ಅಮೆರಿಕನ್ನರು ಹಡಗಿನಲ್ಲಿ ಜಪಾನೀಯರ ಈ ಅಹಂಕಾರದಿಂದ ಕೂಡಿದ ನಡತೆಯ ವಿಚಾರವಾಗಿ ಅಸಂತೋಷಗಳನ್ನು ಸೂಚಿಸಿದ್ದುದು ನನ್ನ ಕಿವಿಗೆ ಬಿದ್ದಿತು. ನನ್ನ ವಿಚಾರದಲ್ಲಿ ಜಪಾನಿನ ಅಧಿಕಾರಿಗಳು ಬಹಳ ಸಭ್ಯತೆಯಿಂದ ನಡೆದುಕೊಂಡರು ಪಾಶ್ಚಾತ್ಯರ ವಿಷಯದಲ್ಲಿ ಪಾಶ್ಚಿಮಾತ್ಯರು ಬಹಳ ಕ್ರೂರ ರೀತಿಯಲ್ಲಿ ನಡೆದುಕೊಂಡುದುದರ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಈ ರೀತಿ ಜಪಾನಿಯರು ವರ್ತಿಸುತ್ತಿದ್ದಾರೆಯೇ ಎಂಬ ಸಂಶಯವು ನನಗೆ ಉಂಟಾಯಿತು. ಜಪಾನೀಯರು ತೋರಿಸುತ್ತಿದ್ದ ನೃತಿಯೊಂದು ಕಾರ್ಯಾಚರಣೆಯಲ್ಲಿಯೂ "ಇಗೋ ನೋಡಿ, ನೀವು ನಮ್ಮನ್ನು ಹಿಂದೆ ತುಚ್ಛ ಭಾವನೆಯಿಂದ ಕಂಡಿರಿ. ಈಗ ನಾವು ಅದೇರೀತಿ ನಿಮ್ಮನ್ನು ಕಾಣುತ್ತೇವೆ". ಎಂಬ ಭಾವನೆಯು ವ್ಯಕ್ತಪಡಿಸುವಂತೆ ಕಾಣಬರುತ್ತಿತ್ತು. ಪಾಶ್ಚಿಮಾತ್ಯರಿಗೆ ತಾವು ಯಾವ ವಿಧದಲ್ಲಿಯೂ ಕಡಿಮೆಯಲ್ಲವೆಂಬ ಭಾವನೆಯನ್ನು ಜಪಾನೀಯರು ತಮ್ಮ ನಡವಳಿಕೆಯಲ್ಲಿ ಸ್ಪಷ್ಟವಾಗಿ ತೋರಿಸಿಕೊಡುತ್ತಿದ್ದರು.

ಜಪಾನ್ ಇಂದು ಅತ್ಯುನ್ನತ ರಾಷ್ಟ್ರಗಳಲ್ಲೊಂದಾಗಿದೆ. ಶಿಕ್ಷಣ, ಜಪಾನೀಯ್ಯ, ಕೈಗಾರಿಕೆ, ನ್ಯಾಯಾಶೋದ್ಯಮಗಳು, ಇನ್ನೇ ನೊವರಿಂದ ನೃತಿಯೊಂದು ವಿಷಯದಲ್ಲಿಯೂ ಜಪಾನ್ ಮುಂದುವರಿದಿಯೂ ಇದೆ. ಆದರೆ ಜಪಾನಿನ ಸಾಮಾಜಿಕ ರಚನೆಯಲ್ಲಿ ಕೆಲವು ವೈಚಿತ್ರ್ಯಗಳು ಈಗಲೂ ಕಾಣಬರುತ್ತವೆ ಅಷ್ಟೇ ಏಕೆ ಅವುಗಳಲ್ಲಿ ಕೆಲವನ್ನು ಈಗಲೂ ಉದ್ವಿಶ್ಯಪೂರ್ವಕವಾಗಿ ಪರಿಪೋಷಿಸಿಕೊಂಡು ಬರುತ್ತಿರಲಾಗಿದೆ. ಚಕ್ರವರ್ತಿಗಳು ದೇವತಾಂಶ ಸಂಭೂತರೆಂಬ ಭಾವನೆಯಿಂದ ನಮ್ಮಿಂದ ದೂರವಾಗಿ, ನಮಗಿಂತ ಪೂರ್ಣವಾಗಿ ಪವಿತ್ರರೆಂಬ ಭಾವನೆಯಿಂದ ಸಾಮಾನ್ಯ ಸ್ತ್ರೀಯರಿಗಿಂತ ಪುರುಷರು ಹೆಚ್ಚಿಂಬ ಭಾವನೆಯವರಿಗೂ ಅನೇಕ ಸಂಪ್ರದಾಯ ನಿಷ್ಠ ಭಾವನೆಗಳು ಬೆಳೆದುಬಂದಿವೆ. ಸ್ತ್ರೀಯರಿಗೆ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳನ್ನು ಕೊಡಬೇಕಾದುದ ಲ್ಲವೆಂಬ ಭಾವನೆಯೂ ಕೂಡ ಚನ್ನಾಗಿ ಬೇರೂರಿದೆ.

ಈ ವಿಚಿತ್ರ ಭಾವನೆಗಳನ್ನು ದೇಶದ ಪ್ರಗತಿಯೊಡನೆ ಹೋಲಿಸಿದರೆ ಜಪಾನಿನಲ್ಲಿ ಎಂತಹ ಅಸ್ವಭಾವಿಕ ಪರಿಸ್ಥಿತಿ ಇರುವುದೆಂಬುದು ವ್ಯಕ್ತಪಡುವುದು. ಜಪಾನ್ ಇಂದು ಕೈಗಾರಿಕೆಗಳಲ್ಲಿ ಬಹಳ ಪ್ರಗತಿ ಸ್ಥಾನವನ್ನು ಪಡೆದಿದೆ. ಕೈಗಾರಿಕೆಗಳು ವ್ಯಕ್ತಿಗಳ ಪ್ರಯತ್ನದ ಫಲವಾಗಿಯೇ ಉಳಿದುಬರಿದಿವೆ. ಸರ್ಕಾರದ ಪ್ರಯತ್ನಗಳ ಫಲವಾಗಿಯೂ ಮುಂದುವರಿದಿವೆ.

ಜಪಾನಿನಲ್ಲಿ ನಾನು ಸಂಚರಿಸಿದಾಗ ನನಗೆ ಕಂಡು ಬಂದುದು ಜರ್ಮನ್ ಪ್ರಜೆಗಳು ಅಮೆರಿಕ ನುತ್ತು ಬ್ರಿಟಿಷ್ ಪ್ರಜೆಗಳ ವಿಚಾರದಲ್ಲಿ ಇಟ್ಟುಕೊಂಡಿದ್ದ ದ್ವೇಷ ಅಮೆರಿಕ ನುತ್ತು ಬ್ರಿಟನ್ ದೇಶಗಳ ವಿಚಾರವಾಗಿ ಜಪಾನಿನ ಪತ್ರಿಕೆಗಳಲ್ಲಿ ದ್ವೇಷಭಾವನೆಯಿಂದ ಕೂಡಿದ ಲೇಖನಗಳು ಎಡಬಿಡದೆ ಪ್ರಕಟವಾಗುತ್ತಿದ್ದುದು ಜನರ ಮನಸ್ಸನ್ನು ಕೆರಳಿಬಿಟ್ಟಿದೆ. ಜಪಾನಿನ ಪೂರ್ವದಲ್ಲಿರುವ ಬ್ರಿಟಿಷ್ಸಿನ ವಸಾಹತು ದೇಶಗಳ ಮೇಲೆ ಜಪಾನಿನ ಕಣ್ಣು ಇರುವುದೆಂದ ಬ್ರಿಟಿಷ್ಸಿನ ಪ್ರಜೆಗಳ ವಿಚಾರದಲ್ಲಿ ಜಪಾನೀಯರು ದ್ವೇಷಭಾವನೆಯಿಂದ ಕೂಡಿದ್ದಾರೆಂಬುದು ನನಗರ್ಥವಾಯಿತು ಜಪಾನಿನಲ್ಲಿ ಇಂಗ್ಲೀಷ್ ಮೂಲ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ರದ್ದುಗೊಳಿಸುವ ಪ್ರಯತ್ನ ಕಾಣಬರುತ್ತಿದೆ. ಇಂದಿನ ಯುದ್ಧಕ್ಕೆ ಜಪಾನೀಯರ ಈ ದ್ವೇಷ ಮನೋಭಾವನೆಯೇ ಕಾರಣ.

ಹತ್ತಿ ಬೆಳೆ.

(ಜನೆ ಪುಟದಿಂದ ಮುಂದುವರಿದುದು.)

ಯವನ್ನು ಕುರಿತು ನೀವು ನವಭಾರತ ೧-೨-೪೨ ರಲ್ಲಿ ಪ್ರಕಟಿಸಿದ ಲೇಖನಗಳಿಂದ ತಪ್ಪು ಅಭಿಪ್ರಾಯ ಉಂಟಾಗುವ ಕಾರಣ ತೀರ್ಮಾನದ ನಿಶ್ಚಿತಾರ್ಥವನ್ನು ನಿಮಗೆ ತಿಳುಹಿಸಬೇಕಾದುದು ಅಗತ್ಯವಾಗಿದೆ.

ಕೇಂದ್ರ ಅರಳೆ ಸಂಘದವರು ಮಾಡಿರುವ ನಿರ್ಣಯದಂತೆ ಚಿಕ್ಕ ಮತ್ತು ನಯವಾದ ಎಳೆಯ ಹತ್ತಿಯ ಕ್ಷೇತ್ರ ವಿಸ್ತಾರದಲ್ಲಿ (Short & fair staple) ದಲ್ಲಿ ಶೇಕಡ ಅರ್ಧ ಮಾಡಬೇಕಾಗಿದೆ. ಮಧ್ಯಮ ತರಗತಿಯ ಮತ್ತು ಉದ್ದವಾದ ಎಳೆಗಳುಳ್ಳ ಹತ್ತಿ(Medium and long staple) ಯನ್ನು ಬೆಳೆಯುವ ಕ್ಷೇತ್ರಕ್ಕೆ ಈ ನಿರ್ಣಯವು ಅನ್ವಯಿಸುವದಿಲ್ಲ ಈ ಹತ್ತಿಯನ್ನು ಬೆಳೆಯುವುದು ಅವಶ್ಯವೆನಿಸಿದೆ. ಸೆಸಿಫಿಕ್‌ನಲ್ಲಿ ಯುದ್ಧದ ಕಾರಣ ರಫ್ತಾಗುವದು ಕಷ್ಟವಾಗಿದ್ದರೂ ಅಮೆರಿಕಾದ ವ್ಯವಸಾಯ ಖಾತೆಯವರು ಈ ತರದ ಹತ್ತಿಯನ್ನು ಬೆಳೆಸಲು ಕ್ಷೇತ್ರವನ್ನು ಸ್ಥಿರಿಸುವ ನಿಶ್ಚಯ ಮಾಡಿರುವರೇ.

ಬಳ್ಳಾರಿ ಜಿಲ್ಲೆಯಲ್ಲಿ ಬೆಳೆಯುವ ಹತ್ತಿಯು ಬಹುವಾಟ್ಟಿಗೆ ಮಧ್ಯಮ ತರಗತಿಯದಾಗಿದೆ. (Medium variey) **ಬಳ್ಳಾರಿ ಜಿಲ್ಲೆಯವರು ತಮ್ಮ ಹತ್ತಿ ಬೆಳೆಯುವ ಭೂಮಿಯಲ್ಲಿ ಶೇಖಡಾಭಾಗ ಕಡಮೆ ಮಾಡುವುದು ಬೇಡ,** ನಮ್ಮಲ್ಲಿ ಬೆಳೆಯುವ ಸಣ್ಣ ಎಳೆಯ ಹತ್ತಿಯೆಂದರೆ, ಮುಂಗಾರಿ ಹತ್ತಿ, ಅದಕ್ಕೆರುವ ಇತರ ಉತ್ತಮ ಗುಣಗಳಿಂದ ನಾರ್ಕಟ್‌ನಲ್ಲಿ ಮುಂಗಾರಿ ಹತ್ತಿಗೆ ಫಾರಂ ಹತ್ತಿಯ ಬೆಲೆಗಿಂತ ಕಡಮೆಯಾದರೂ ಒಳ್ಳೆಯ ಬೆಲೆ ಸಿಕ್ಕುತ್ತದೆ. ಈ ಕಾರಣ ಕೇಂದ್ರ ಸಂಘದವರ ನಿರ್ಣಯವು ನನಗೆ ಅನ್ವಯಿಸುವದಿಲ್ಲ.

ಬಳ್ಳಾರಿಯಲ್ಲಿ
ರಾಜಾಜಿಯವರು

೬ ನೆಯ ತಾ. ಹೊಸಪೇಟೆಯಲ್ಲೂ, ೭ ನೆಯ ತಾ. ಬಳ್ಳಾರಿಯಲ್ಲೂ, ಶ್ರೀ ರಾಜಾಜಿಯವರ ಕಾರ್ಯಕ್ರಮವಿದ್ದಿತು. ಅನೇಕ ಸಂಘಗಳು ಅವರನ್ನು ಗೌರವಿಸಿದವು. ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ರಾಜಾಜಿಯವರು ಹೊಸಪೇಟೆಯಲ್ಲಿ ಸೂಕ್ತ ಸಲಹೆಗಳನ್ನು ಕೊಟ್ಟರು. ಅವರ ಜೊತೆಯಲ್ಲಿ ಬಂದ ಹಿಂದಿನ ಮಂತ್ರಿಗಳಾದ ಶ್ರೀ ಗೋಪಾಲರೆಡ್ಡಿಯವರೂ, ಪಾಲ್ಗಿಸೆಂಟಿರಿ ಕಾರ್ಯದರ್ಶಿಗಳಾದ ಕಾಳೇಶ್ವರರಾಯರೂ, ಕಲ್ಲೂರು ಸುಬ್ಬರಾಯರೂ ಭಾಷಣಕೊಟ್ಟರು. ರಾಜಾಜಿಯವರ ಭಾಷಣದ ಸಾರಾಂಶವನ್ನು ಬರುವವಾರ ಕೊಡಲಾಗುವದೆ .

ರಾಯಲಸೀಮ ಬ್ಯಾಂಕು,
(ಲಿಮಿಟೆಡ್.)
ಮುಖ್ಯ ಕಾರ್ಯಾಲಯ, ಬಳ್ಳಾರಿ.

ಇಷ್ಟಿಯವರೆಗೆ ಆದ ಪ್ರಗತಿ.

ವಿವರಗಳು.	31-10-40	31-12-41
ಡಿಪಾಜಿಟ್ಟುಗಳು.		
ಫಿಕ್ಸೆಡ್	ರೂ. Nil	89,930
ಚಾಲ್ತಿ	,, 3,173	16,648
ಸೇವಿಂಗ್ಸು	,, 1,231	17,086
ಇತರ	,, 40	97
ಶಾಲಗಳು.		
ಭಂಗಾರ	,, 520	26,687
ಮಾಲು	,, Nil	29,316
ಇತರ	,, Nil	6,227
ಇತರಆಸ್ತಿ.		
ಸರ್ಕಾರದ ಬಾಂಡುಗಳು	,, 13,300	32,476
ಬ್ಯಾಂಕುಗಳಲ್ಲಿರುವ ಹಣ	,, 32,502	14,716
ಕೈಯ್ಯಲ್ಲಿ ನಗದು	,, 5770	30,842

ಒಟ್ಟು ವ್ಯವಹಾರದ ಸೊಕ್ಕ.

31-10-40.	31-12-41.
ರು. 1,14,774-0-0	ರು. 2,24,113-0-0

ಶಾಖೆಗಳು:—
1 ತಿಮ್ಮಸಮುದ್ರ 2 ಕೊಟ್ಟೂರು. 3 ಉರವಕೊಂಡ. 4 ಹತ್ತಿಕೊಂಡ

ಹೆಚ್. ತಿಪ್ಪಾರಾಮರೆಡ್ಡಿ,, ಬಿ. ಎ. ಬಿ. ಎಲ್. (ಎಂ. ಎಲ್. ಎ.) ಚೈರಿಕ್ಟಮನಗಳ ಜೋಡ್ಯ ಅಧ್ಯಕ್ಷರು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಕೊಟ್ಟೂರು

ಶ್ರೀ ಬಿ. ಹೆಚ್. ದೊಡ್ಡನಗೌಡರು ಚಡುಗುಡು ಕಾರ್ಯದರ್ಶಿಗಳು ಈ ಪ್ರಕಾರ ತಿಳಿಸುತ್ತಾರೆ

ಜಾತ್ರೆಯ ಕಾಲಕ್ಕೆ ಈ ತಿಂಗಳು ೧೨-೧೧-೧೨ ನೆಯ ತಾರೀಖು ಕೊಟ್ಟೂರೇಶ್ವರ ಚಡುಗುಡು ಪಂಪ್ಯದಾಟಗಳು ಜರುಗುವುವು. ಬಳ್ಳಾರಿ, ಹೊಸಪೇಟೆ, ನಾರಾಯಣದೇವರಕೆರೆ, ಕೂಡ್ಲಿಗಿ, ಹರಪನಹಳ್ಳಿ ಭಾಗಗಳಿಂದ ೧೧ ಗುಂಪುಗಳು ಸಂಪ್ಯದಾಟದಲ್ಲಿ ಭಾಗವಹಿಸಲಿವೆ. ದೇಶೀಯ ಆಟಗಳಾದ ಖೊ, ಖೊ, ನಗ್ಗ ಸ್ವಾತಂತ್ರ್ಯವಿನೋದ ಇವುಗಳ ಪ್ರದರ್ಶನವಿದ್ದು ಎಲ್ಲರೂ ಬರಲು ಕೋರಿದೆ.

ಭಾಗಲ್ಪುರದಲ್ಲಿ ಹಿಂದೂ ಮುಸ್ಲಿಂ ದಂಗೆಯ ಪರಿಣಾಮವಾಗಿ ಇಲ್ಲಿಯವರೆಗೆ ೧೨ ಜನರು ಸತ್ತಿರುವರು. ಪರಿಸ್ಥಿತಿಯು ಹದಕ್ಕೆ ಬಂದಿದೆ.

ಬಳ್ಳಾರಿ ಪೇಟೆ ಧಾರಣೆ
6-2-42 ಶುಕ್ರವಾರ

ಭಂಗಾರ ತೊಲ	1 ಕ್ಕೆ 46-8-0
ಸಾವರಿನ್	33-12-0
ಬೆಳ್ಳಿ 100 ತೊಲ	ರೂ, 65 ರಿಂದ 71
ಹತ್ತಿ ಮುಂಗಾರಿ	22-8-0 23-0-0
ಹತ್ತಿ ಫಾರಂ	31-0-0

ಆಹಾರ ಸಾಮಗ್ರಿಗಳು.

ಅಕ್ಕಿ	1ರೂ.	ಗೆ	4½ ರಿಂದ 6	ಸೇರು
ಬೇಳೆ	,,	5	,, 6	,,
ಗೋಧಿ	....		6	,,
ಜೋಳ	,,	13	,, 14	,,
ಸಜ್ಜೆ	....		19	,,
ಉಪ್ಪು	...		13	,,
ಸೆಣಸಿನಕಾಯಿ	9 ಮಣ		25 ರಿಂದ 30	
ಬೆಲ್ಲ	....	12	ರಿಂದ 14	ರೂ
ಸಕ್ಕರೆ(ಮುಂಜ್ಯ)	9 ಮಣ		36	ರೂ.

ಸ್ಟಾರ್ ಸಿನಿಮಾದಲ್ಲಿ 'ವಸಂತಸೇನಾ'
ಕನ್ನಡ ವಾಕ್ಚಿತ್ರ— ನಿರ್ಮಾಣ ಕಾರ್ಯ.

ಶ್ರೀ ಸುಬ್ಬಯ್ಯ ನಾಯಿಡು



ಶ್ರೀಮತಿ ಲಕ್ಷ್ಮೀಬಾಯಿ

"VASANTHASENA"

(S R. VATTAM)

If art, as is generally believed, is the mirror of the national mind, can be safely said without fear of contradiction that progress of the Kannada film industry faithfully represents the present condition of the Kannada speaking people in the dismembered Karnataka In fact it is a matter for serious question if the industry has really made any beginning at all worth the note. While Hindi, and even Andhra, though in a few instances, have stolen a long march over Kannada not a little due to the initial advantage of homogeniety and unification of the peoples, Kannada production has remained content at its sputtering start much to the disappointment and even despair, not unmixed with a sense of shame, of its own people.

In such circumstances it should be a matter for justifiable pride that out of the dark clouds of the Kannada film sky, a bright ray of hope for the progress of the industry has emerged out on the screen in the latest production under the joint auspices of the Pragati Pictures of Madras and the S S. S. Nataka Mandali of Mysore, reassuring it with thrice 'Yes'. The very attempt deserves encouragement. The picture by itself may not go all the way in satisfying film critics. I am not blind to its faults some of which lie glaringly on the surface, but such lapses need not prove insurmountable with proper direction and organisation and a higher and wider sense of production art which must urge all true attempts There are some good points in the picture It is a bold attempt fairly well sustained to have harnessed into modern service the theme of an old classical play in Sanskrit. The acting and music need no comment as represented by the veteran artists, Subbiah Naidu, Nagendra Rao, & Srimathi Lakshmi Bai, to mention a few.

It should however be noted that generally speaking the bane of all such productions, not excluding Hindi, proves to be the desire of influential persons among the actors, organisers or patrons to dominate the art with the inevitable result that more often than not the true purpose of higher and nobler production is sacrificed to the overwhelming ambitions, gratification, and personal interests of the influentia No wonder the productions prove short lived and sometimes still born. Very often they prove the ruin of capital and a death blow to further enterprise.

It is the fervent hope of the writer, while heartily felicitating the producers of "Vasantasena" that they will try in their future attempts at producing really good pictures steering clear of the alluring eddies and whirlpools, for there is no lack of talent, enterprise, capital, creative genius, and all the qualities which should serve in the making of good pictures in Karnataka, and it is the firm belief of the writer of this short note that Karnataka, if properly organised, cannot only hold its own with the rest of India, but may rise higher in every field of National progress

173

2ನೇ ಪುಟದಿಂದ ಮುಂದುವರಿದುದು.

ಒಳಪಟ್ಟರಲು ಸಿದ್ಧರಿರುವರೆಂಬುದನ್ನು ತೋರಿಸುವ ಸುಸಂದಿ ಅವರಿಗಿದೆ. ನಿಜ ರಾಷ್ಟ್ರೀಯ ವೃತ್ತಿಯಿಂದ ವ್ಯಾಪಾರ್ಯಾಕವಾಗಿ ಮತ್ತು ಮುಸಲ್ಮಾನರ ಮಿತ್ರರೆಂದು ಅವರು ಹೀಗೆ ಮಾಡಬೇಕಲ್ಲವೆ-ಅಲ್ಲಿ ನುನಸ್ಸಿನಿಂದ ಮಾಡಕೂಡದು. ಶಾಸನ ಸಭೆ ಇಲ್ಲವೆ ಸ್ಥಾನಿಕ ಸಂಸ್ಥೆಗಳ ಮೊಕ ಗುಳಿಯುವದರಿಂದ ಅವರು ಕದಾಚಿತ್ ಹಿಂದುಗಳ ನಾಗರಿಕಹಕ್ಕುಗಳ ಹಿತಸಂಬಂಧ ಗಳನ್ನು ಹೆಚ್ಚು ಉತ್ತಮ ರೀತಿಯಿಂದ ರಕ್ಷಿಸಲು ಸಮರ್ಥರಾಗಬಲ್ಲರು ಕಾಂ ಗ್ರೆಸ್ ಹಿಂದುಗಳು ತನ್ನ ಧರ್ಮವನ್ನು ಪಾಲಿಸುತ್ತ ಬೇರೆ ಧರ್ಮಗಳ ಪ್ರತಿನಿಧಿ ಗಳಾಗಿರುವದರಿಂದ ಕಡಮೆ ತರಗತಿಯ ಹಿಂದುಗಳಾಗಲಾರರು. ಈ ಮೊದಲು ನಾನು ಹೇಳಿದಂತೆ ಸರಕಾರದವರು ಎಲ್ಲ ಜಾತಿಯ ಜನರಿಗೆ ನವಕರಿ ಗಳನ್ನು ಕೊ ಡಲಾರರು ಏಕೆಂದರೆ ನವಕರಿಯ ಅಷ್ಟು ಸ್ಥಳಗಳೇ ಇರುವದಿಲ್ಲ. ಮತ್ತು ಎಲ್ಲ ಧ ರ್ಮಗಳ ರಕ್ಷಣೆಯನ್ನು ಅವರು ಸಮಾ ನಬಾವನೆಯಿಂದ ಮಾಡಬೇಕಾಗುವದು. ಆದುದರಿಂದ ಈ ಪ್ರಾಂತಗಳಲ್ಲಿ ಕಾಂಗ್ರೆ ಸ್ಸಿಗರಿಗೆ ವಿರುದ್ಧ ರಾಷ್ಟ್ರೀಯತೆಯನ್ನು ವ್ಯಕ್ತಪಡಿಸುವ ಒಳ್ಳೆ ಸಂಧಿಯಿದೀಗ ದೊರೆತಿದೆ ನಿಜವಾದ ಮಾರ್ಗವು ಗೊ ತ್ತಿದ್ದರೆ ಬಹುಸಂಖ್ಯಾಕರಿಗೆ ಅಂಜುವ ಕಾರಣವಿಲ್ಲೆಂಬದನ್ನು ಉಳಿದ ಅಲ್ಪ ಸಂಖ್ಯಾಕರಿಗೂ ಅವರು ತೋರಿಸಬಲ್ಲರು. ಈ ಸಾಂಪ್ರದಾಯಿಕ ಬಹುಮತ ಮತ್ತು ಅಲ್ಪಮತಗಳ ಉಪಾಧಿಯಿಂದ ನಾವು ಮುಕ್ತರಾಗತಕ್ಕದ್ದು ರಾಜಕೀಯ ದೃಷ್ಟಿ ಯಿಂದ ವಿಚಾರಮಾಡಿದರೆ ಹಿಂದು ಮ ತ್ತು ಮುಸಲ್ಮಾನರ ಹಿತಸಂಬಂಧಗಳು ಪ್ರತ್ಯೇಕ ಹೇಗಾಗಬಲ್ಲವು? ದಾದಾ ಭಾಯಿ ಮತ್ತು ಫಿರೋಜಶಹಾರವರು ಇರುವಾಗ ಕಾಂಗ್ರೆಸ್ ಸಂಸ್ಥೆಯನ್ನು ಅವರು ನಡೆಯಿಸಲಿಲ್ಲವೆ? ಯಾರೊಬ್ಬ ರ ಕೃಪೆಯಿಂದ ಇಲ್ಲವೇ ಮೆಹರಬಾನಗಿ ಯಿಂದ ಅವರು ಅಧಿಕಾರನಡೆಸಲಿಲ್ಲ ಆ ದರೆ ಕೇವಲ ತನ್ನ ಸೇವೆ ಮತ್ತು ಯೋ ಗ್ಯತೆಯ ಬಲದಿಂದ ಅವರು ರಾಜ್ಯವ ನ್ನಾಳಿದರು ಅವರ ಆಳಿಕೆಯಿಂದ ಹಿಂದುಗಳಿಗೆ ಇಲ್ಲವೆ ಮುಸಲ್ಮಾನರಿಗೆ ಹಾನಿಯಾಯಿತೊ? ಕಾಂಗ್ರೆಸ್ ವೆ ದಿಕೆಯಲ್ಲಿ ಈ ಹಿತಸಂಬಂಧಗಳ ಬಗೆಗೆ ಎಂದಾದರೂ ಕಲಹವುಂಟಾಗಿದೆಯೋ? ಮತ್ತು ಕಾಂಗ್ರೆಸ್ಸು ಒಂದು ಬಗೆಯ ಸ್ವಯಂನಿರ್ಮಿತ ಸಂಸ್ಥೆಯಾಗಿರುವ ದಿಲ್ಲವೇ?

ಪ್ರಶ್ನೆಗಳಿಗೆ

ಮಹಾತ್ಮಾ ಗಾಂಧಿಯವರ ಉತ್ತರ

(ಹರಿಜನ ಪತ್ರಿಕೆಯಿಂದ)

ಕಾಂಗ್ರೆಸ್ ಮತ್ತು ಎ. ಆರ್. ಪಿ ಸಂಬಂಧದಲ್ಲಿ ಕೇಳಲಾದ ಪ್ರಶ್ನೆಗಳಿಗೆ ಗಾಂಧಿಜಿಯವರು ಈ ರೀತಿ ಉತ್ತರ ಕೊಟ್ಟಿರುವರು.

ಪ್ರಶ್ನೆ:— ಕಾಂಗ್ರೆಸ್ಸಿಗರು ಏ. ಆರ್. ಪಿ. ಮತ್ತು ಯುದ್ಧಕ್ಕೆ ಸಂಬಂಧಿ ಸಿದ ಉಳಿದ ಕಮಿಟಿಗಳ ಸದಸ್ಯರಾಗ ಬಹುದೇ?

ಉತ್ತರ:—ಆಗಬಾರದೆಂದು ನನಗ ನಿಸುತ್ತದೆ ಬಾಂಬುಗಳಿಂದ ಇಲ್ಲವೆ ಬೇ ರೆ ಪ್ರತಿರೋಧದಾರರೂ ಗಾಯಗೊಂಡವರ ಬಗ್ಗೆ ಯಾವದೇ ಬಗೆಯ ಸಹಾಯ ಮಾಡಬಾರದೆಂದು ಇದರ ಅರ್ಥವಲ್ಲ. ತದ್ವಿರುದ್ಧವಾಗಿ ಅಂಥವರಿಗೆ ಹೆಚ್ಚು ಸಹಾಯ ಮಾಡಲು ಪ್ರಯತ್ನಿಸಬೇಕು.

ಆರ್ಥಿಕ ಸಮಾನತೆ.

ಪ್ರಶ್ನೆ:—ವಿಧಾಯಕ ಕಾರ್ಯಕ್ರಮ ವನ್ನು ಕೈಕೊಂಡಾಗ ಕಾಂಗ್ರೆಸ್ಸಿಗರು ಆರ್ಥಿಕ ಸಮಾನತೆಯ ಬಗ್ಗೆ ಪ್ರಚಾರ ಮಾಡಬಲ್ಲರೋ? ಸವಿನಯ ಕಾಯಿ ದೆಭಂಗದ ಮುಖಾಂತರ ಆರ್ಥಿಕ ಸಮಾ ನತೆಯನ್ನು ಹೇಗೆ ತಂದು ಮಾಡ ಬಹುದು?

ಉತ್ತರ:— ಸಂಪೂರ್ಣ ಅಹಿಂಸಾ ತ್ಮಕ ಭಾಷೆಯಿಂದ ಆರ್ಥಿಕ ಸಮಾನ ತೆಯ ಪ್ರಚಾರ ಮಾಡಬಹುದು. ಆದರೆ ಹಲವರು ಒತ್ತಾಯದಿಂದ ಜಮೀನದಾ ರರ ಹೊಲಗಳನ್ನು ಕಸಿದುಕೊಳ್ಳಬೇಕು ಮತ್ತು ಬಂಡವಾಳದಾರರಿಂದ ಹಣವ ನ್ನು ಸೆಳೆದುಕೊಳ್ಳಬೇಕೆಂದು ಪ್ರಚಾರ ಮಾಡಿದ್ದು ನನಗೆ ಗೊತ್ತಿದೆ ಈ ರೀತಿ ಯ ಪ್ರಚಾರ ಮಾತ್ರ ಮಾಡಬಾರದು. ಆದರೆ ಈ ರೀತಿ ಪ್ರಚಾರ ಕಾರ್ಯಕ್ರಿಂ ತ ನಾನು ಬೇರೆ ಮಾರ್ಗವನ್ನು ತೋರಿಸಿ ಕೊಟ್ಟಿದ್ದೇನೆ. ವಿಧಾಯಕ ಕಾರ್ಯ ಕ್ರಮದಿಂದ ಈ ಧ್ಯೇಯದತ್ತ ನಾವು ಮುಂದಡಿ ಇಡಬಲ್ಲೆವು. ಆ ಕಾರ್ಯ ಕ್ಕೆ ಇದೊಳ್ಳೆ ಸಮಯವು; ಚರಕ ಮತ್ತು ಅದಕ್ಕೆ ಸಂಬಂಧಿಸಿದ ಉಳಿದ ಉದ್ಯೋ ಗ ಧಂದೆಗಳು ಒಳ್ಳೆ ಯಶಸ್ವಿಯಾದರೆ ಈ ಆರ್ಥಿಕ ಅಸಮಾನತೆಯೂ ಸಾಮಾ ಜಿಕ ಅಸಮಾನತೆಯೂ ಹೋಗಬಲ್ಲವು. ಅಹಿಂಸೆಯ ಪ್ರಭಾವದಿಂದ ಜನತೆಯು ಲ್ಲಿ ಜಾಗೃತಿ ಮತ್ತು ಶಕ್ತಿ ದಿನದಿನಕ್ಕೆ ಹೆಚ್ಚುತ್ತಲಿವೆ. ತನ್ನ ದಾಸ್ಯವನ್ನು ಬೆಳೆ ಸುತ್ತಿರುವ ಕಾರ್ಯದಲ್ಲಿ ಅವರು ಬುದ್ಧಿ ಪೂರ್ವಕವಾಗಿ ಸಹಕರಿಸುತ್ತಿರುವದನ್ನು ನಿರಾಕರಿಸಹತ್ತಿದರೆ ಆರ್ಥಿಕ ಸಮಾನತೆ ಯು ತಂತಾನೆ ಬಂದಾಗುವದು.

ಕಾಂಗ್ರೆಸ್ಸಿನ ಸಂಘಟನೆ.

ಪ್ರಶ್ನೆ:— ಕಾಂಗ್ರೆಸ್ಸಿನ ಸಂಘಟನೆ ಯ ಅರ್ಥವೇನು?

ಉತ್ತರ:— ಶಾಂತ ಮತ್ತು ಯೋಗ್ಯ ಉಪಾಯಗಳಿಂದ ಸ್ವರಾಜ್ಯ ಪ್ರಾಪ್ತ ನೂಡಿಕೊಳ್ಳುವದೇ ಕಾಂಗ್ರೆಸ್ಸಿನ ಧ್ಯೇ ಯವೆಂಬುದರ ಮರ್ಮವನ್ನು ಚೆನ್ನಾಗಿ ತಿಳಿದುಕೊಂಡ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವದರಿಂದ ಕಾಂಗ್ರೆಸ್ಸಿನ ಶಕ್ತಿ ಯನ್ನು ಸಂವರ್ಧಿಸಬಹುದು. ಅಧಿಕಾ ರವಹಿಸ್ತಿಯ ಸ್ಥಳುವಾಗಿ ಸದಸ್ಯರಾಗುವ ವರನ್ನು ಹಾಗು ಸುಳ್ಳು ಇಲ್ಲವೇ ಮೋಸ ಸದಸ್ಯರನ್ನು ಹೆಚ್ಚಿಸುವದು ದೂಷಿತ ಹಾಗು ಹಾನಿಕಾರಕವಾದುದು. ಜನತೆ ಯನ್ನು ಇಂದು ಹತ್ತಿಕ್ಕುತ್ತಿರುವ ಅಧಿ ಕಾರವನ್ನು ಇಲ್ಲವೆ ಶಕ್ತಿಯನ್ನು ಕೊನೆ ಗೊಸಿ ತಾನು ಆ ಅಧಿಕಾರವನ್ನು ನಡೆ ಯಲು ಕಾಂಗ್ರೆಸ್ಸು ಇಂದು ಹೋರಾಡು ತ್ತದೆ ಹೀಗಿರುವಾಗ ಕಾಂಗ್ರೆಸ್ಸಿನಲ್ಲಿ ಅಧಿಕಾರಲೋಲುಪತೆಗೆ ಅವಕಾಶವೇ ಇರುವದಿಲ್ಲ. ಆದುದರಿಂದ ಕಾಂಗ್ರೆಸ್ಸಿನ ನಿಜವಾದ ಸಂಘಟನೆ ಮಾಡುವದೆಂದರೆ ವಿಧಾಯಕ ಕಾರ್ಯಕ್ರಮವನ್ನು ಶಕ್ತಿ ಮೀರಿ ಯಶಸ್ವಿಮಾಡುವದೇ ಆಗಿದೆ. ನಿಜವಾದ ಕಾಂಗ್ರೆಸ್ ಸದಸ್ಯರನ್ನು ಮಾಡುವದಕ್ಕೆ ಬಹಳ ಪ್ರಯತ್ನಮಾಡು ವ ಆವಶ್ಯಕತೆ ಇರಕೂಡದು ಮತ್ತು ಈ ಕೆಲಸವನ್ನು ಯೋಗ್ಯ ರೀತಿಯಿಂದ ಮಾ ಡಿದರೆ ಇದರಿಂದ ಕಾಂಗ್ರೆಸ್ಸಿನ ಸಾಮಾ ನ್ಯ ವೆಚ್ಚವೂ ಹೊರಟು ಹೋಗುವದು. ಆದರೆ ಸದಸ್ಯರನ್ನು ಮಾಡುವ ವೆಚ್ಚವೇ ಸದಸ್ಯತ್ವದ ಎಲ್ಲ ಹಣವನ್ನು ನುಂಗಕೂ ಡದು.

ಜಪಾನಿನವರ ಸ್ವಾಧೀನದಲ್ಲಿರುವ ಮಾರ್ಷಲ್ ಮತ್ತು ಗಿಲ್ಬರ್ಟ್ ದ್ವೀಪಗಳ ಮೇಲೆ ಅಮೇರಿಕನರು ಯಶಶ್ವಿಯಾಗಿ ದಾಳಿನಡಿಸಿ ಶತ್ರುಗಳಿಗೆ ವಿಶೇಷ ನಷ್ಟ ಉಂಟು ಮಾಡಿರುವರೆಂಕೆ



ಎಳ್ಳೆಣ್ಣೆ

ಅಂಬಾಟೆ ಸುಬ್ಬಣ್ಣ ಅಂಡ್ ಕಂಪನಿ, ಸಾಮಲಕೋಟೆ.

ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **A. S.** ಸೀಲನ್ನು ಗಮನಿಸಿ, ಕೊಳ್ಳಿರಿ. ಮೋಸಹೋಗಬೇಡಿರಿ.

ದೊರೆಯುವ ಸ್ಥಳ:- 1.) ಎಂ. ಪುಟ್ಟೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ. ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ ಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦	ಅಂಚೆ ವೆಚ್ಚವೇರೆ
ಕನ್ನಡ ದಸೋಪಸಿಷತ್ತುಗಳು	೦—೯—೦	ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವರಿಗೆ ಧಾರಾಳವಾದ ಕಮೀಶನ್
ಶಿವಾನುಭವ ಬೋಧೆ	೦—೮—೦	
ಸುಮತಿ ರತಕ	೦—೧—೦	

ಕಾಲವ ಸುಬ್ಬಣ್ಣ, ಮುಚ್ಚಂಟು, ಬಳ್ಳಾರಿ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಪಳಿಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ನೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಚಿನ್ನದ ಒಡವೆಗಳನ್ನು ಮಾಡಿಸಲು ಇದೇ ಸರಿಯಾದ ಸಮಯ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription		ಚಂದಾ ವಿವರ ನರ್ಮಕ್ಕೆ	
Annual			
Local	2—0—0	ಬಳ್ಳಾರಿಯವರಿಗೆ	2-0-0
Moffusil	3—0—0	ಹೊರಗಿನವರಿಗೆ	3-0-0
6 Months		**೬ ತಿಂಗಳಿಗೆ**	
Local	1—4—0	ಬಳ್ಳಾರಿಯವರಿಗೆ	1-4-0
Moffusil	2—0—0	ಹೊರಗಿನವರಿಗೆ	2-0-0

Nava Bharat, Bellary.

REG. No. 3937.

Sri _____

_____

_____

Printed at Vittal Press, Car Street Edited & Published by T. B Keshava Rao, Bellary

Reg. No. M. 3937 'ವಂದೇ ಮಾತರಂ'

ನವ ಭಾರತ

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೩೪ ಬಳ್ಳಾರಿ ಮಾರ್ಚ್ ೧೧ನೇ ಭಾನುವಾರ ೧೯೪೨. ಟಿ. ಪಿ. ಕೇಶವಣ್ಣ

ಎಂಪೈರ್ ಆಫ್ ಇಂಡಿಯಾ

ಸ್ಥಾಪನೆ- ೧೯೮೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000, ರೂ ಗಳಿಗೆಮೀರಿದೆ

ಈ ಕಂಪನಿಯನ್ನು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಜಾರಿಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಕಚೇರಿ. ಡಿಸ್ಪೆನ್ಸ್‌ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

Royal Picture Palace, Bellary.

BANDHAN

A Popular Picture

Bombay Talkies - From 4-3-1942.

ರಾಯಲ ಸಿನಿಮಾ ಮಂದಿರ

ಬ ಳ್ಳಾ ರಿ.

ಲೋಕಪ್ರಸಿದ್ಧವಾದ ಮುಂಬೈ ಟಾಕೀಸ್ ನವರ

'ಬಂಧನ್' ವಾಕ್ಪಟ

೪—೩—೧೯೪೨ ಬುಧವಾರದಿಂದ.

ಸೂ ಚ ನೆ.

೧೭-೩-೪೨ ದಿನ ಹೆಚ್ಚು ಪುಟಗಳಿಂದ ಉಗಾದಿ ಸಂಚಿಕೆಯು ಹೊರಡುವದಾದ ಕಾರಣ 'ನವ ಭಾರತ' ದ ೮-೩-೪೨ ನೆಯ ಸಂಚಿಕೆಯು ಹೊರಡುವುದಿಲ್ಲ.

ವ್ಯವಸ್ಥಾಪಕ- ನವ ಭಾರತ.

ಬರ್ಮಾ ರಸ್ತೆ

ಲೇಖಕರು— ಶ್ರೀ ಎಸ್. ಎಸ್. ಕಾರಂತ.

ಮೂರು ವರ್ಷಗಳ ಹಿಂದಿನ ಮಾತು. ಆಗ ಜಪಾನೀಯರು ಬ್ರಿಟಿಷ ಸರಕಾರದ ಪ್ರಧಾನ ಮಂತ್ರಿಗಳಾದ ಚೇಂಬರ್ಲೇನರನ್ನು ಬರ್ಮಾ ರಸ್ತೆಯನ್ನು ಮುಚ್ಚುವಂತೆ ಕೇಳಿಕೊಂಡರು. ಚೇಂಬರ್ಲೇನರು ಜಪಾನೀಯರ ಈ ಸೂಚನೆಯನ್ನು ಅಂಗೀಕರಿಸಿ ಬರ್ಮಾ ರಸ್ತೆಯನ್ನು ಮೂರು ತಿಂಗಳುಗಳವರೆಗೆ ಮುಚ್ಚಿದರು. ಅಂದಿನಿಂದ ಬರ್ಮಾ ರಸ್ತೆಯು ಕೂತು ಜನಂಗದ ದೃಷ್ಟಿಯು ಹೊರಳಿತು. ಈಗ ಪುನಃ ಬರ್ಮಾ ರಸ್ತೆಯ ವಿಚಾರವು ಜಗತ್ತಿನಲ್ಲಿ ಮುಂದೆ ಬರುವಂತೆ ಎರಡು ಘಟನೆಗಳು ನಡೆದುಹೋದವು. ಈಗಾಗಲೇ ಸಿಂಗಪುರದ ಅಭೇದ್ಯ ಕೋಟೆಯನ್ನು ನಾಶಪಡಿಸಿ ಜಪಾನೀಯರು ತಮ್ಮ ವಿಜಯೋತ್ಸಾಹದಿಂದ ಇನ್ನಷ್ಟು ಹುರುಪುಗೊಂಡು ಬ್ರಹ್ಮ ದೇಶದ ದಾಳಿಯನ್ನು ತೀವ್ರವಾಗಿ ಸಾಗಿಸಿ ತ್ತಿರುವುದು ಒಂದು ಘಟನೆ. ಇನ್ನೊಂದು ಘಟನೆಯೆಂದರೆ ಚಿಟಿಂಗ್ ಕೈಶೆಕ್ ದಂಪತಿಗಳು ಹಿಂದುಸ್ಥಾನಕ್ಕೆ ಅನಿರೀಕ್ಷಿತ ಮತ್ತು ಅನಪೇಕ್ಷಿತವಾಗಿ ಬಂದುದು. ಚಿಟಿಂಗ್ ಕೈಶೇಕರು ಸ್ವೆಸರಾಯರೊಡನೆ ನಡೆಸಿದ ಮಾತು ಕತೆಗಳ ಅಧಿಕೃತ ಸುದ್ದಿಯು ನಮಗೆ ದೊರೆಯದಿದ್ದರೂ ಇವರ ಆಗಮನವು ಬರ್ಮಾ ರಸ್ತೆಯ ಸುರಕ್ಷಿತತೆಯ ಬಗ್ಗೆ ವಿಚಾರ ವಿನಿಮಯ ಮಾಡಲೆಂದು ನಮಗನಿಸುತ್ತದೆ. ಕೇವಲ ಮೂರು ವರ್ಷಗಳ ಹಿಂದೆ ಜಪಾನೀಯರ ಆರಿಕೆಗೆ ಮನ್ನಣೆಯನ್ನಿತ್ತು ಬರ್ಮಾ ರಸ್ತೆಯನ್ನು ಮುಚ್ಚಿ ಚೀನೀಯರಿಗೆ ತೊಂದರೆಯನ್ನುಂಟುಮಾಡಿದ ಬ್ರಿಟಿಷ ಸರಕಾರವು ಇಂದು ಚೀನೀಯರ ಪಕ್ಷವನ್ನು ಹಿಡಿದು ಅದೇ ಬರ್ಮಾ ರಸ್ತೆಯ ಸುರಕ್ಷತೆಯ ಬಗ್ಗೆ ಜವಾಬ್ದಾರಿಯನ್ನೊಪ್ಪಿಕೊಂಡಿದೆ. ಅಲ್ಲದೆ ಚೀನೀಯರಿಗೆ ತಮ್ಮ ಸಂಪೂರ್ಣ ಸಹಾಯವನ್ನು ಕೊಡುವ ಆಶ್ವಾಸನೆಯನ್ನಿತ್ತಿದೆ. ಮತ್ತು ಕೊಡುತ್ತಲಿದೆ. ಇದರ ಸುರಕ್ಷತೆಯ ಬಗ್ಗೆ ಇಷ್ಟು ಕಾತುರ ಪಡುವನೇಕೆ? ಇದಕ್ಕೆ ಇಷ್ಟು ಮಹತ್ವ ನೇಕೆ? ಈ ರಸ್ತೆಯ ಮೇಲೆ ಜಪಾನೀಯರು ದಾಳಿ ಮಾಡುವದರಿಂದ ಏನಾಗುವದು? ಇದಕ್ಕೂ ಜಗತ್ತಿನ ಇತರ ರಣರಂಗಗಳಿಗೂ ಯಾವ ಸಂಬಂಧವಿದೆ ಎಂಬುದನ್ನು ಜನತೆಯ ಮುಂದಿಡಬಯಸಿ ಈ ಬರಹವನ್ನು ಬರೆದಿದ್ದಾಗಿರುತ್ತದೆ.

ರಂಗೂನಿನಿಂದ ಹೊರಟ ರೈಲು ನೂರ್ಗಾವು ನೇರವಾಗಿ ಉತ್ತರ ದಿಕ್ಕನ್ನು ಹಿಡಿದು ಲಾಷಿಯೋವನ್ನು ಮುಟ್ಟುವುದು. ಲಾಷಿಯೋ ನಗರವು ಬ್ರಹ್ಮ ದೇಶದ ಪೂರ್ವ ದಿಕ್ಕಿನಲ್ಲಿರುವುದು. ಲಾಷಿಯೋದಿಂದ ಚೀನದ ಈಗಿನ ರಾಜಧಾನಿಯಾದ ಚಂಕಿಂಗದವರೆಗಿರುವ ೧೩೦೦ ಮೈಲು ಉದ್ದದ ಜಗತ್ ಪ್ರಸಿದ್ಧ ಮಾರ್ಗವೇ ಬರ್ಮಾ ರಸ್ತೆ.

ಈ ಯುದ್ಧದ ಪೂರ್ವದಲ್ಲಿ ಲಾಷಿಯೋ ನಗರದ ಜನಸಂಖ್ಯೆಯು ಬಹಳ ಕಡಿಮೆಯಿದ್ದಿತು. ಆದರೆ ಯುದ್ಧದ ಪ್ರಗತಿ ತೊಂದಿನಂತೆ ಈ ಪಟ್ಟಣದ ಜನಸಂಖ್ಯೆಯೂ ಮನೆಗಳೂ ಸುಪಾರು ಪಟ್ಟು ಹೆಚ್ಚಿದವು ಲಾಷಿಯೋ ನಗರವು ಈಗ ವ್ಯಾಪಾರಗಳಿಂದಲೂ, ಚೀನಿ, ಅಧಿಕಾರಿಗಳಿಂದಲೂ, ಅಮೇರಿಕೆಯ ಸಾಲಕೊಡುವ ವ್ಯಾಪಾರಸ್ಥರಿಂದಲೂ, ವೃತ್ತಪತ್ರಿಕಾ ವರ್ತಮಿಳಿಗಳಿಂದಲೂ ತುಂಬಿಕಿಕ್ಕಿರಿದಿರುವುದು. ವಾಂಟಿಂಗ ನಗರವು ಲಾಷಿಯೋದಿಂದ ೧೩೦ ಮೈಲು ದೂರದಲ್ಲಿದೆ. ಮತ್ತು ಈ ಪ್ರದೇಶದ ನಡುವಿರುವ ಮಾರ್ಗವು ಪ್ರಯಾಣಕ್ಕೆ ಅಷ್ಟೊಂದು ಕಷ್ಟದ್ದಿರುವುದಿಲ್ಲ. ವಾಂಟಿಂಗದಿಂದ ಹೊರಟ ಮೋಟಾರ್ ವಾಹನಗಳು ತಮ್ಮ ಪ್ರಥಮ ದಿವಸದ ಪ್ರಯಾಣವನ್ನು ಕೇವಲ ೬೦ ಮೈಲುಗಳ ಮಾರ್ಗಕ್ರಮಣದಿಂದ ನೂಕೈಸಬೇಕಾಗುವುದು ಈ ಅಲ್ಪ ಮಾರ್ಗ ಕ್ರಮಣಕ್ಕೆ ವಾಂಟಿಂಗದಿಂದ ಲುಂಗಲಿಂಗವ ವರೆಗಿರುವ ರಸ್ತೆಯ ಪರಿಸ್ಥಿತಿಯೇ ಕಾರಣವಾಗಿದೆ. ಲುಂಗಲಿಂಗ ಪ್ರದೇಶವು ಸಮುದ್ರ ಮಟ್ಟಕ್ಕಿಂತ ೬,೦೦೦ ಅಡಿಗಳಷ್ಟು ಎತ್ತರದಲ್ಲಿದೆ. ಅಲ್ಲಿ ನಮ್ಮಲ್ಲಿರುವಂತೆ ಪ್ರಯಾಣಿಕರ ಸೌಕರ್ಯಕ್ಕಾಗಿ ಪ್ರಯಾಣಿಕರ ವಸತಿಸ್ಥಾನಗಳ ಏರ್ಪಾಡಿರುವುದಿಲ್ಲ. ಪ್ರಯಾಣಿಕರು ಚೀನೀಯರ ಹೋಟೆಲುಗಳಲ್ಲಾಗಲೀ ಇಲ್ಲವೆ ಇನ್ನಿತರ ನಿವಾಸಿಕರ ಮನೆಯ ಬದಿಯ ಜಾಗಲೀ ವಿನ್ಯಮಿಸಿಕೊಳ್ಳಬೇಕಾಗುವುದು. ಲುಂಗಲಿಂಗದಿಂದ ಸಾಲವೀನ ಎಂಬ ಪಟ್ಟಣವು ೧೫೦ ಮೈಲುಗಳಷ್ಟು ದೂರದಲ್ಲಿದೆ. ಹಿಂದಿನ ದಿನದಲ್ಲಿ ಕೇವಲ ೬೦ ಮೈಲುಗಳಷ್ಟು ಮಾರ್ಗಕ್ರಮಣವನ್ನು ಮಾಡಿದ ಮೋಟಾರ್ ವಾಹನಗಳು ಈ ೧೫೦ ಮೈಲುಗಳನ್ನು ಒಂದೇ ದಿವಸದಲ್ಲಿ ಪೂರೈಸುವವು. ಲುಂಗಲಿಂಗದಿಂದ ಪೌರ್ವಾತ್ಯ ಮಾರ್ಗದ ನಡುವೆ ಸಾಲವೀನ ನದಿಯು ಸೇತುವೆಯಿರುವುದು. ವೈರಿ ವಿಮಾನಗಳು ಇದರ ನಾಶಕ್ಕಾಗಿ ಅನೇಕ ವೇಳೆ ಪ್ರಯತ್ನಿಸಿದ್ದವು. ಆದರೆ ಯಶಸ್ವಿಯಾಗಲಿಲ್ಲ. ಒಂದುವೇಳೆ ಆ ಸೇತುವೆಗೆ ಯಾವ ಹಾನಿ ಬಂದೊದಗಿದರೂ ಚೀನೀಯರು ಎದೆಗುಂದರು. ಒದಗಬಹುದಾದ ಹಾನಿಯನ್ನು ತಡೆಗಟ್ಟಲು ಮತ್ತು ಆದ ಹಾನಿಯನ್ನು ಸರಿಪಡಿಸಲು ಅವರು ಸರ್ವಸನ್ನಾಹವನ್ನು ಈಗಾಗಲೇ ಮಾಡಿಟ್ಟಿರುವರು. ಅವರ ಈ ಮುನ್ನೋಟದ ದೆಸೆಯಿಂದ ಈ ಸೇತುವೆಯ ಮೇಲೆ ಉಂಟಾಗಬಹುದಾದ ಯಾವ ಹಾನಿಯನ್ನಾದರೂ ಕೇವಲ ೨೪ ತಾಸುಗಳೊಳಗಾಗಿ ಸರಿಪಡಿಸಲು ಶಕ್ಯವಿದೆ. ಸಾಲವೀನ ಸೇತುವೆಯ ಈ ಪ್ರದೇಶವು ಸಮುದ್ರ ಮಟ್ಟದಿಂದ ೭,೦೦೦ ಅಡಿಗಳಷ್ಟು ಎತ್ತರದಲ್ಲಿದೆ.

ಬರ್ಮಾರಸ್ತೆಯ ಇನ್ನುಳಿದ ಮಾರ್ಗವು ಅಷ್ಟೊಂದು ಕಷ್ಟತರದ್ದಿರುವದಿಲ್ಲ ಆದರೆ ಕೆಲವೆಡೆ ರಸ್ತೆಯ ಇಕ್ಕೆಲೆಗಳಲ್ಲಿ ೪,೦೦೦ ದಿಂದ ೫,೦೦೦ ಅಡಿಗಳಷ್ಟು ಆಳದ ಕಂದಕಗಳಿದ್ದು ಪ್ರಯಾಣಿಕರನ್ನು ಬೆದರಿಸುವವು. ಅಮೇರಿಕೆಯವರು ಕೆಲವು ದಿನಗಳ ಹಿಂದೆ ಚೀನೀ ಸೈನಿಕರ ಉಪಯೋಗಾರ್ಥವಾಗಿ ೧೦ ಚಕ್ರಗಳಿರುವ ೫೦೦ ಮೋಟಾರ ಬಂಡಿಗಳನ್ನು ಸಹಾಯವಾಗಿ ಕೊಟ್ಟರು. ಆ ವಾಹನಗಳ ಚಾಲಕರು ಈ ರಸ್ತೆಯನ್ನು ಸಾಗಿ ಚಂಕಿಂಗವನ್ನು ಮುಟ್ಟಬೇಕಾದರೆ ಬಹು ಪ್ರಯಾಸ ಪಟ್ಟಿರುವರು. ಈ ರಸ್ತೆಯ ಭಯಾನಕ ಪರಿಸ್ಥಿತಿಗೆ ಇದೊಂದು ಉದಾಹರಣೆಯಾಗಿರುವುದು. ಆದರೆ ಚೀನೀ, ಬರ್ಮೀ ಮತ್ತು ಹಿಂದೀ ವಾಹನ ಚಾಲಕರಿಗೆ ಈ ರಸ್ತೆಯ ಪರಿಚಯವು ಚೆನ್ನಾಗಿರುವುದರಿಂದ ಅವರಿಗೆ ಈ ಪ್ರಯಾಣವು ಕಷ್ಟವೆನಿಸುವುದಿಲ್ಲ.

ಈ ರಸ್ತೆಯಲ್ಲಿ ೧೫,೦೦೦ ಮೋಟಾರು ವಾಹನಗಳು ವ್ಯವಹರಿಸುತ್ತಿವೆ. ಇವುಗಳಿಂದ ೩ ಟನ್ನಿಗಿಂತಲೂ ಹೆಚ್ಚಿನ ಆಹಾರ ಸಾಮಗ್ರಿಗಳನ್ನು ಹೊತ್ತುಕೊಂಡು ಅಹೋರಾತ್ರಿ ಪ್ರಯಾಣವನ್ನು ಸಾಗಿಸುತ್ತಲಿವೆ ಪ್ರತಿಯೊಂದು ತಿಂಗಳಿಗೆ ೩೦,೦೦೦ ಟನ್ನಿಗಿಂತಲೂ ಹೆಚ್ಚಿನ ಸಾಮಗ್ರಿಯು ಈ ಮಾರ್ಗವಾಗಿ ಚಂಕಿಂಗವನ್ನು ಸೇರುವುದು. ಇವರ ಹೊರತು ಚೀನೀಯ ಯುದ್ಧಪಡೆಗೆ ಸಂಬಂಧಿಸಿದ ಮತ್ತು ಇತರ ಸರಕಾರಗಳಿಗೆ ಸಂಬಂಧಪಟ್ಟ ವಾಹನಗಳ ಓಡಾಟವೂ ಎಂದೇಸವನೆ ನಡೆದಿದೆ. ಪ್ರತಿದಿನವೆಂಬಂತೆ ೫,೦೦೦ ಕ್ಕೂ ಹೆಚ್ಚಿನ ಮೋಟಾರ ಲಾರಿಗಳು ಪ್ರಯಾಣವನ್ನು ಮಾಡುತ್ತಲೇ ಇವೆ ಮತ್ತು ೩೦೦ ರಿಂದ

9ನೇ ಪುಟವನ್ನು ನೋಡಿರಿ

ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳ ಮೇಲೆ ಬ್ರಹ್ಮಾಸ್ತ್ರ

"೧೦ ಶಾಲೆಗಳ ಮುಂಜೂರಾತಿಯನ್ನು ತೆಗೆಯಲಾಯಿತು. ಏಪ್ರಿಲ್ ೧೯೪೨ ರ ವರ್ಷಕ್ಕಾಗಿ ಅಯೋಗ್ಯ ಶಾಲೆಗಳು ಸುಧಾರಿಸದಿದ್ದರೆ, ಜಿಲ್ಲಾ ಬೋರ್ಡಿಗೆ ಸೇರಿದ ೧೫ ಶಾಲೆಗಳಿಗೆ ಮುಂಜೂರಾತಿಯನ್ನು ಹಿಂಪಡೆದುಕೊಳ್ಳುವುದು. ಅಂದರೆ ಈ ೩ ವರ್ಷಗಳೊಳಗಾಗಿ ಬೋರ್ಡಿನ ಸರ್ವೀಸಿನಲ್ಲಿ ಸೇರಿದವರೆಲ್ಲಾ ಶರಣು ಹೊಡೆದು ಮನೆ ಸೇರಬೇಕಾಗುವುದು.

ಕಳೆದವರ್ಷದಿಂದ ಆದುದೇನು?

೧೯೪೧ನೆಯ ವರ್ಷದ ಕೊನೆಯ ಅರ್ಧದಲ್ಲಿ ಜಿಲ್ಲಾ ಬೋರ್ಡಿನಿಂದ ಮತ್ತು ಇತರ ವ್ಯವಸ್ಥಾಪಕರಿಂದ ನಡೆಸಲ್ಪಡುವ ಶಾಲೆಗಳಿಗೆ ಕಟ್ಟುನಿಟ್ಟಾದ ಆಜ್ಞೆಯು ಬಂದಿತು. ಸರಕಾರದವರು ನಿರ್ಪಡಿಸಿದ ನಿಬಂಧನೆಗಳಲ್ಲಿ ಯಾವುದೊಂದರಲ್ಲೇ ಉತ್ತೀರ್ಣವಾಗದ ಶಾಲೆಯು ಅಯೋಗ್ಯವೆಂತ ಭಾವಿಸಲ್ಪಡುವುದೆಂದೂ ಮುಂಜೂರಾತಿಯನ್ನು (Recognition) ಹಿಂತೆಗೆದುಕೊಳ್ಳಲಾಗುವುದೆಂದೂ ಮದ್ರಾಸ ವಿದ್ಯಾಖಾತೆಯು ಮುಖ್ಯರಾದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ರವರು ವ್ಯವಸ್ಥಾಪಕರಿಗೆ ತಿಳಿಸಿಬಿಟ್ಟರು. ಜಿಲ್ಲಾ ಬೋರ್ಡು ಮತ್ತು ಇತರ ವ್ಯವಸ್ಥಾಪಕರು, ಸರ್ಕಾರದ ನಿಯಮಗಳನ್ನು ಪೂರ್ತಿ ಮಾಡಿದ ಮತ್ತು ಲೋಪಗಳುಳ್ಳ ಶಾಲೆಗಳನ್ನು ಯೋಗ್ಯವಾಗಿ ಮಾಡಬೇಕೆಂದು ಸಂಬಂಧಿಸಿದ ಉಪಾಧ್ಯಾಯರುಗಳನ್ನು ಚಬುಕಿನಿಂದಹೊಡೆದು ಎಚ್ಚರಿಸಿದರು.

ಉಪಾಧ್ಯಾಯರು ಮಾಡಬೇಕಾದ್ದನ್ನೆಲ್ಲಾ ಮಾಡಿದರೂ ಎರಡು ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದು ಕಠಿಣವಾಯಿತು. ಶಾಲಾಯೋಗ್ಯ ಬಾಲೆಯರ ಸಂಖ್ಯೆಯಲ್ಲಿ ತೇರ್ಗಡೆ ಬಾಲೆಯರಿರಬೇಕೆಂಬುವ ನಿಯಮವು. ಒಂದನೆಯ ತರಗತಿಯ ನಾಲ್ಕರಲ್ಲೊಂದುಭಾಗ ೪ನೆಯ ತರಗತಿಗಳಲ್ಲಿರಬೇಕೆಂಬ ನಿಯಮ. ಈ ಎರಡು ನಿಯಮಗಳಲ್ಲೇ ಅನೇಕರು ಲಾಗಾ ಹೊಡೆದರು. ಶಾಲಾ ಹಾಜರಿಯಲ್ಲಿ ಕಡಮೆ ಇದ್ದುದನ್ನು ಭರ್ತಿಮಾಡಲು ಒಂದನೆಯ ತರಗತಿಗೆ ಹೆಚ್ಚಿನ ಬಾಲಕರನ್ನು ಸೇರಿಸಲು ಸಾಧ್ಯವಿದೆಯಾಗಲಿ ೪ನೆಯ ತರಗತಿಗೆ ಸಾಧ್ಯವಿಲ್ಲ ಮೊದಲನೆಯ ತರಗತಿಗೆ ಸೇರಿದೆಂತಿಲ್ಲಿ ನಾಲ್ಕರಲ್ಲೊಂದು ಭಾಗದ ನಿಯಮವು ಪಾಲಿಸಲ್ಪಡುತ್ತಿದೆ. ಸರ್ಕಾರದವರು ದೂರದೃಷ್ಟಿಯಿಂದ ಈ ನಿಯಮವನ್ನು ತೆಗೆದರು.

ಸಭೆ, ವೃತ್ತ ಪತ್ರಗಳ ಮೂಲಕ ಉಪಾಧ್ಯಾಯ ಸಂಘಗಳು ಬಹಳಷ್ಟು ಪ್ರಚಾರ ನಡೆಸಿದವು. ಅವರಿಗೆ ಬೇಕಾದವರು ವಿದ್ಯಾ ಮುಖ್ಯರನ್ನು ಕಂಡು ಕೇಳಿಕೊಂಡರು. "ನಮ್ಮದು ಕ್ಷಾಮ ಪ್ರದೇಶ ಸುಗ್ಗಿ ಬಂದರೆ ಬಡುವರು ಮಕ್ಕಳನ್ನು ಕಳುಹಿಸುವುದಿಲ್ಲ. ಸೊದಲು ಹೊಟ್ಟೆಯ ಪ್ರಶ್ನೆಯನ್ನು ಬಗೆಹರಿಸಿಕೊಂಡು ನಂತರ ವಿದ್ಯೆಗಾರಂಭ ನಮ್ಮಲ್ಲಿ. ನಾವಿಗೆ ಹೆಚ್ಚಿನ ಸೌಕರ್ಯ ಸೌಲಭ್ಯ ಕೊಡಿ." ನಿದ್ಯಾ ಮುಖ್ಯರು ಹೆಚ್ಚಿನ ಅವಧಿ ಕೊಟ್ಟರಾಗಲಿ ಹೆಚ್ಚಿನ ಸೌಲಭ್ಯ ಕೊಡಲಿಲ್ಲ. ನಿಯಮಗಳ ಕಾಠಿಣ್ಯತೆಯನ್ನು ಸಡಿಲುಮಾಡಲಿಲ್ಲ. ಇಲ್ಲಿಯವರೆಗೆ ೩೩ ಅವಧಿ ಕೊಟ್ಟಾಯಿತು. ಇನ್ನು ಮೇಲೆ ಕೊಡಲಾರದೆಂದು ತೋರುತ್ತದೆ.

'ಅಯೋಗ್ಯ' ಶಾಲೆಗಳ ಉಪಾಧ್ಯಾಯರಿಗೆ ಎಚ್ಚರಿಕೆ:—

ಸರಕಾರದವರ ದೃಷ್ಟಿಯ ಪ್ರಕಾರ ಇರುವ ಅಯೋಗ್ಯ ಶಾಲೆಗಳ ಉಪಾಧ್ಯಾಯರು ಇದೇ ಕೊನೆಯ ಎಚ್ಚರಿಕೆಯೆಂದು ಭಾವಿಸಿ ಶಾಲೆಗಳನ್ನು ಸರಕಾರದ ನಿಯಮಗಳ ಪ್ರಕಾರ ವೃದ್ಧಿಮಾಡದೆ ಗತ್ಯಂತರವಿಲ್ಲ ನಮಗೆ ತಿಳಿಯುವ ಪ್ರಕಾರ ಶಾಲೆಗಳ ಮುಂಜೂರಾತಿ ತೆಗೆದಮೇಲೆ ಶಾಲೆಗಳನ್ನು ಮುಚ್ಚಬೇಕಾಗುವುದು. ಆಗ ಕೊನೆಯ ಪಕ್ಷ ಮೂರು ವರ್ಷಗಳೊಳಗಾಗಿ ಸೇರಿದ ಅಕ್ಟೋಗ ಉಪಾಧ್ಯಾಯರೆಲ್ಲಾ ಗಂಟು ಮೂಟೆ ಕಟ್ಟಬೇಕಾಗುವುದು.

ಇಲ್ಲಿಯವರೆವಿಗೆ ಮುಂಜೂರಾತಿಯನ್ನು ತೆಗೆದಶಾಲೆಗಳು:—

೧-೪-೪೧ರಿಂದ ಜಾನಿಮಂಟಿ.ಹ.ವೀರಾಪುರ, ಸಿರಿವಾರ-೨ ಪಿಡಬ್ಲ್ಯೂಡಿ ಶಾಲೆಗಳು, ೧೫-೪-೪೧ರಿಂದ ಕಾರಿಕಲ ಸಂಚಾಯ್ತಿ ಶಾಲೆಯು, ೨೪-೪೧-೪೧ರಿಂದ ವೈ-ಬುಖಿದಿ ಹಾಳು, ಹಿಂದೀ ಬಾಯ್ಸಸ್ಕೂಲ್, ಮುನಿಸಿಪಲ ಮುಹಮ್ಮದನ್ ಸ್ಕೂಟಸ್ಕೂಲ್, ಹಲಿಗೆರಿ ಬಾಯ್ಸಸ್ಕೂಲ, ಮಂದವಾಗಲಿ ಬಾಯ್ಸಸ್ಕೂಲ್, ಆಲೂರು ಬೋರ್ಡು ಆದಿ ಆಂಧ್ರಶಾಲೆ, ಧನಾಪುರ, ಚಿನ್ನ ಹರಿವಾಣಂ ಹೊಳಲಗುಂದಿ ಲೇಬರ್ ಶಾಲೆಗಳು, ಚಿಲಕನಹಟ್ಟಿ ಬೋರ್ಡು ಹಿಂದೂಶಾಲೆ ಇವುಗಳ ಮುಂಜೂರಾತಿ ತೆಗೆಯಲಾಗಿದೆ. ಆದರೆ ಆಲೂರು ಧನಾಪುರ, ಹೊಳಲಗುಂದಿ ಹರಿಜನ ಶಾಲೆಗಳು ಸುಧಾರಿಸಿದಕಾರಣ ಅವುಗಳ ಮುಂಜೂರಾತಿಯನ್ನು ಪುನಃ ಕೊಡಲಾಗಿದೆ.

ತೆಗೆಯಲ್ಪಡಬಹುದಾದ ಬೋರ್ಡು ಶಾಲೆಗಳು

ರಾಯದುರ್ಗ ತಾಲೂಕಿನಲ್ಲಿ ೧೩, ಕೂಡ್ಲಿಗಿ ತಾಲೂಕಿನಲ್ಲಿ ೭, ಹರಪನಹಳ್ಳಿ ತಾಲೂಕಿನಲ್ಲಿ ೮, ಬಳ್ಳಾರಿ ತಾಲೂಕಿನಲ್ಲಿ ೧೪, ಹೊಸಪೇಟೆ ತಾ. ೧, ಆಲೂರು ತಾ. ೭, ಸಿರುಗುಪ್ಪ ೧೯, ಇವು ಜಿಲ್ಲೆದ ಜಿಲ್ಲೆಯಲ್ಲಿನ ೫೫ ಮುಸ್ಲಿಂ ಶಾಲೆಗಳು ಇನ್ನೆರಡು ತಿಂಗಳುಗಳೊಳಗಾಗಿ ಸುಧಾರಿಸದಿದ್ದರೆ ಮುಂಜೂರಾತಿಯು ಹಿಂತೆಗೆಮ ಕೊಳ್ಳಲಾಗುವುದು.

ಈ ಕಾರಣ ಎಲ್ಲಾ ಉಪಾಧ್ಯಾಯರೂ ಎಚ್ಚತ್ತು ತಮಗೆ ಸಂಬಂಧಿಸಿದ ಶಾಲೆಗಳನ್ನು ಪ್ರತಿಯೊಂದು ನಿಯಮ (Test) ದಲ್ಲಿಯೂ ಅಭಿವೃದ್ಧಿಗೆ ತರಬೇಕೆಂದು ಕೋರಲಾಗಿದೆ.

ಬಳ್ಳಾರಿ ಜಿಲ್ಲಾ ಕ್ಷಾಮನಿವಾರಣ ಕೇಂದ್ರಗಳು

ಬಿಸಿಲಿನ ಬೇಗೆ ಹೆಚ್ಚುತ್ತಲಿದೆ. ೭ ಘಂಟೆಗಿಂತ ಹೆಚ್ಚಿಗೆ ಕೆಲಸ ಮಾಡಿಸಬಾರದು.

ಕಂಬಳದಿನ್ನೆ, ನಂದವರಂ ಮತ್ತು ತಿಮ್ಮಲಾಪುರ (ಆದವಾನಿ ತಾಲೂಕು) ಕೇಂದ್ರಗಳಲ್ಲಿ ಸಂಖ್ಯೆಯು ೧೩೩ ಸಾವಿರದ ವರೆಗೂ ಬಂದಿದೆ. ಸಂಖ್ಯೆಯು ದಿನ ದಿನ ಕ್ಕೂ ಹೆಚ್ಚುತ್ತಲಿದ್ದು ಕ್ಷಾಮಪರಿಹಾರ್ಯತೆಯು ಅಧಿಕವಾಗುತ್ತಲಿದೆ. ದಿನಕ್ಕೆ ೮ ಘಂಟೆ ಕೆಲಸಮಾಡಬೇಕೆಂದಿದ್ದರೂ ಈ ಶ್ರಾಂತಿಕಾಲದ ಹೊರತು ೯ ಘಂಟೆಗಳಾಗುತ್ತಲಿದೆ. ೯-೧೧-೯ ಪುರುಷ, ೯-೧೧-೬ ಸ್ತ್ರೀಯ ದಿನ ಕೂಲಿಗೆ ಇದು ಅಧಿಕವೆನ್ನಬೇಕು. ರಸ್ತೆಯ ಭಾಗವಲ್ಲಾಗಲಿ, ವಿಶಾಲ ಪ್ರದೇಶದಲ್ಲಾಗಲಿ ನೆರಳನ್ನು ಕೊಡುವ ವೃಕ್ಷಾದಿಗಳಲ್ಲಿ ಸರ್ಕಾರದವರಾದರೂ, ಸಾಕಾದಷ್ಟು ತಟ್ಟಿಯ 'ಮರೆ'ಗಳನ್ನು ಏರ್ಪಡಿಸಿಲ್ಲ. ಇದರಿಂದ ಹಳ್ಳಿಗಳಿಗೆ ಬಿಸಿಲ

8ನೇ ಪುಟವನ್ನು ನೋಡಿರಿ

ಹಿಂದೂಸ್ಥಾನಕ್ಕೆ ಚೀನದ ಸರ್ವಾಧಿಕಾರಿಗಳಾದ

ಜನರಲ ಚಿಯಾಂಗ-ಕೈ-ಶೇಕರ ಸಂದೇಶ.

"ಚೀನಕ್ಕಾಗಲಿ ಭಾರತಕ್ಕಾಗಲಿ ಸ್ವಾತಂತ್ರ್ಯವನ್ನು ಕೊಡದೇ ಹೋದರೆ ಈ ಜಗತ್ತಿನಲ್ಲಿ ಶಾಂತಿಯೇ ಇರುವುದಿಲ್ಲ.

'ಭಾರತದ ಜನರು ತಮ್ಮ ಬೇಡಿಕೆಗಳನ್ನು ಮುಂದಿಡಲೆಂದು ನಮ್ಮ ಮಿತ್ರ ದೇಶವಾದ ಬ್ರಿಟನ್ನು ಕಾದು ಕೂಡದೆ, ಅವರಿಗೆ ನಿಜವಾದ ಆಡಳಿತಾಧಿಕಾರವನ್ನು ಏಪಿಸಿಕೊಡುವು ದೆಂದು ನಾನು ಹೃತ್ಪೂರ್ವಕವಾಗಿ ಆಶಿಸುತ್ತೇನೆ. ಮತ್ತು ದೃಢವಾಗಿ ನಂಬಿದ್ದೇನೆ. ಹೀಗೆ ಮಾಡುವುದ ರಿಂದ ಭರತ ಖಂಡವು ತನ್ನ ನೈತಿಕ ಮತ್ತು ಸಾಂಪತ್ತಿಕ ಬಲವನ್ನು ವೃದ್ಧಿಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಸಂಗ್ರಾಮದಲ್ಲಿ ಭಾಗವಹಿಸು ವುದರಿಂದ ದುಷ್ಟಜನಾಂಗಗಳನ್ನು ಎದುರಿಸುತ್ತಿರುವ ದೇಶಗಳಿಗೆ ಜಯ ದೊರಕಿಸಲು ಸಹಾಯವಾಗುವುದು ಮಾತ್ರವಲ್ಲದೆ, ತಮ್ಮ ಸ್ವಾತಂತ್ರ್ಯದ ನವೋದಯಕ್ಕೆದು ಕಾರಣವಾಗುತ್ತದೆಂಬುದನ್ನು ಅವರು ಗ್ರಹಿಸುವಂತಾಗುತ್ತದೆ ಕಾರ್ಯಸಾಧನೆಯ ದೃಷ್ಟಿಯಿಂದ ನೋಡುವುದಾದರೆ ಬ್ರಿಟಿಷ್ ಅನುಸರಿಸಬೇಕಾದ ಅತ್ಯಂತ ವಿವೇಕಯುತವಾದ ನೀತಿಯೆಂದರೆ ಇದೇ. ಬ್ರಿಟಿಷ್ ಸಾಮ್ರಾಜ್ಯದ ಕೀರ್ತಿಯನ್ನು ಉಳಿಸುವ ನೀತಿಯೆಂದರೆ ಅದೊಂದೇ'

ಚೀನದ ಮಹಾದಂಡನಾಯಕರಾದ ಮಾರ್ಷಲ್ ಚಿಯಾಂಗ್ ಕೈಷೇಕ್‌ರವರು ಭಾರತದ ಜನರಿಗೆ ಕೊಟ್ಟಿರುವ ಸಂದೇಶ ದಲ್ಲಿ ಮೇಲ್ಕಂಡಂತೆ ತಿಳಿಸಿದ್ದಾರೆ.

ಚೀನಾಭಾಷೆಯಲ್ಲಿ ಚಿಯಾಂಗ್‌ರವರಿತ್ತ ಆ ಸಂದೇಶವನ್ನು ಮತ್ತು ಸತಿ ಚಿಯಾಂಗ್‌ರವರು ನಾಡಿದ ಅದರ ಇಂಗ್ಲೀಷ್ ಭಾಷಾಂತರವನ್ನೂ ಕಲಿಕತ್ತ ರೇಡಿಯೋನಿನಿಂದ ಬ್ರಾಡ್‌ಕಾಸ್ಟ್ ಮಾಡಲಾಯಿತು.

ಮಾ|| ಚಿಯಾಂಗ್‌ರವರ ಸಂದೇಶವಿದು:-

"ನಾನು ಭಾರತಕ್ಕೆ ಬಂದು ಎರಡು ವಾರಗಳಾದವು. ದುಷ್ಟ ಪರ್ತನವನ್ನು ಎದುರಿಸುವ ವಿಚಾರವಲ್ಲಿ ನಮ್ಮೀ ದೇಶಗಳು ಜಂಟಿಯಾಗಿ ಕಾರ್ಯಕ್ರಮ ಕೈಗೊಳ್ಳುವ, ವಿಚಾರದಲ್ಲಿಯೂ ಮತ್ತು ಎರಡು ದೇಶಗಳ ಗುರಿ ಕುರಿತು ನಾನು ಅತ್ಯಂತ ಹೊಡ್ಡ ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳೊಂದಿಗೂ ನನ್ನೀ ಭಾರತೀಯ ಮಿತ್ರರೊಂದಿಗೆ ಮಾತನಾಡಿದೆ. ನಮ್ಮಲ್ಲಿ ಪೂರ್ಣ ಸಹಾನುಭೂತಿಯೂ ಮತ್ತು ಪರಸ್ಪರ ಸಹಾಯವಾದ ಅಭಿವ್ಯಾಯವೂ ಕಾಣಬಂದದಕ್ಕಾಗಿ ನಾನು ಹರ್ಷಿಸುತ್ತೇನೆ ನನ್ನ ಕಾರ್ಯವೀಗ ಮುಗಿಯುತ್ತ ಬಂದಿದೆ. ನಾನು ಇಲ್ಲಿಂದ ಪ್ರಯಾಣಮಾಡುವ ಮುನ್ನ, ನನ್ನ ಮತ್ತು ಸತೀ ಚಿಯಾಂಗ್‌ರವರ ವಿಚಾರದಲ್ಲಿ ನನ್ನ ಭಾರತೀಯ ಮಿತ್ರರು ತೋರಿಸಿದ ಅಪೂರ್ವ ಪ್ರೇಮಕ್ಕಾಗಿ ಅವರನ್ನೂ ಅಭಿನಂದಿಸುತ್ತೇನೆ. ನಾನು ಭಾರತದಲ್ಲಿ ಅತ್ಯಲ್ಪಕಾಲ ಮಾತ್ರ ಇರಲು ಸಾಧ್ಯವಾಯಿತಾದರಿಂದ, ನಾನು ಭಾರತೀಯರಿಗೆ ಹೇಳಬೇಕೆಂದಿದ್ದು ದನ್ನೆಲ್ಲ ಹೇಳಲಾಗಲಿಲ್ಲ. ನಾನವರಿಗೆ ಕೆಳಗೆ ಕಾಣಿಸಿರುವ ಸಂದೇಶವನ್ನು ಕೊಡಲು ಇಚ್ಛಿಸುತ್ತೇನೆ. ನಾನು ಭಾರತದ ವಿಚಾರದಲ್ಲಿ ಇಟ್ಟುಕೊಂಡಿರುವ ಉಚ್ಚಭಾವನೆಯನ್ನು ಮತ್ತು ಅದರ ಸ್ಥಾನ ಕುರಿತು ನಾನು ದೀರ್ಘಕಾಲದಿಂದ ಇಟ್ಟುಕೊಂಡಿರುವ ಬಯಕೆಯನ್ನು ಅದು ವ್ಯಕ್ತಪಡಿಸುವುದಾಗಿದೆ

"ನಾನು ಭಾರತಕ್ಕೆ ಬಂದಂದಿನಿಂದ ದುಷ್ಟವೃತ್ತಿಯನ್ನು ಎದುರಿಸುವ ವಿಚಾರದಲ್ಲಿ ಭಾರತೀಯರೆಲ್ಲ ಒಂದೇ ಸಂಕಲ್ಪವು ಳ್ಳವರಾಗಿದ್ದಾರೆಂಬುದನ್ನು ಮನಗಂಡು ಬಹಳ ತೃಪ್ತಿಪಟ್ಟುಕೊಂಡೆ.

ಚೀನಾ-ಭಾರತದ ಸಂಬಂಧ

ಚೀನ ಮತ್ತು ಭಾರತದ ಜನಸಂಖ್ಯೆಯನ್ನು ಸೇರಿಸಿದರೆ ಈ ವಿಶ್ವದ ಜನಸಂಖ್ಯೆಯಲ್ಲಿ ಅರ್ಧವಾಗುತ್ತದೆ. ಇವೆರಡು ದೇಶಗಳಿಗೂ ಅನ್ವಯಿಸುವ ಗಡಿಯು ಸುಮಾರು ಹತ್ತೂವರೆ ಸಾವಿರ ಮೈಲುಗಳಷ್ಟು ದೂರವಿದೆ. ಸುಮಾರು ವರ್ಷಗಳಿಂದ ಇವೆರಡು ದೇಶಗಳು ಕೇವಲ ಸಾಂಸ್ಕೃತಿಕ ಮತ್ತು ವ್ಯಾಪಾರ ಸಂಬಂಧವನ್ನು ಬೆಳೆಸಿಕೊಂಡು ಬಂದಿವೆ. ಯಾವಾಗಲೂ ಪರಸ್ಪರ ಘರ್ಷಣವಾಗಿಲ್ಲ. ಇಷ್ಟು ದೀರ್ಘಕಾಲ ನೆರೆಹೊರೆಯ, ಎರಡು ದೇಶಗಳು ಶಾಂತಿಯಿಂದಿರುವ ಉದಾಹರಣೆಯು ಮತ್ತೆಲ್ಲೂ ಕಾಣಬರುವುದಿಲ್ಲ ನಮ್ಮ ಜನರುಸ್ವಭಾವತಃ ಶಾಂತಿಪ್ರಿಯರೆಂಬುದಕ್ಕೆ ಇದು ಘನವಾದ ನಿದರ್ಶನ. ಇಂದು ಇವೆರಡು ದೇಶಗಳ ಹಿತವು ಒಂದೇಆಗಿದೆ; ಅಲ್ಲದೆ ಅವುಗಳ ಭವಿಷ್ಯ ಸಹ ಒಂದೇಕಾರಣದಿಂದ ದುಷ್ಟರನ್ನೆದುರಿಸುವ ದೇಶಗಳಿಗೆ ಬೇಬಲವಾಗಿ ನಿಲ್ಲುವುದು ಮತ್ತು ವಿಶ್ವದಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸಲು ಭುಜ ಕೊಟ್ಟು ಜೊಡಿದಾಡುವಾದು ಅವುಗಳ ಕರ್ತವ್ಯವಾಗಿದೆ.

ತ್ಯಾಗ ಶೀಲರು

"ಇದೂ ಅಲ್ಲದೆ ನಮ್ಮ ಎರಡು ದೇಶಗಳ ಜನರಲ್ಲಿ ಅಪೂರ್ವವಾದ ಒಂದು ಗುಣವಿದೆ. ನ್ಯಾಯಕ್ಕಾಗಿ, ಸತ್ಯಕ್ಕಾಗಿ ತ್ಯಾಗಮಾಡುವ ಅಮೋಘವಾದ ಗುಣವೇ ಅದು ಸಾರ್ವಪ್ರದಾಯಿಕವಾದ ಈ ಶೀಲವೇ ಮಾನವ ಉದ್ಧಾರಕ್ಕಾಗಿ ಅನೇಕರು ದೇಶಗಳನ್ನು ಹೆಚ್ಚಿನ ತ್ಯಾಗಕ್ಕೆ ತಳ್ಳುವುದಾಗಿದೆ. ಮೊಟ್ಟ ಮೊದಲು ಶಸ್ತ್ರ ಹಿಡಿದು ದುಷ್ಟ ವರ್ತನವನ್ನು ಎದುರಿಸುವಂತೆ ಚೀನರನ್ನು ಪ್ರೇರೇಪಿಸಿದ್ದು ಈ ಶೀಲವೇ. ತನಗೆ ಮಾತ್ರವಲ್ಲ ಇಡೀ ಮಾನವ ಕೋಟಿಗೆ ನ್ಯಾಯವನ್ನೂ, ಸ್ವಾತಂತ್ರ್ಯವನ್ನೂ ದೊರಕಿಸಿ ಕೊಡಲು ಈಗಿನ ಕದನದಲ್ಲಿ ಮಿತ್ರ ರಾಷ್ಟ್ರಗಳ ಕಡೆ ಸೇರುವಂತೆ ಚೀನವನ್ನು ಪ್ರೇರೇಪಿಸಿದ್ದು ಸಹ ಈ ಶೀಲವೇ.

ಇವೆರಡು ದೇಶಗಳ ಸ್ವಾತಂತ್ರ್ಯ ಅತ್ಯವಶ್ಯಕ

"ನಾಗರೀಕತೆಯ ಇತಿಹಾಸದಲ್ಲಿ ಬಹಳ ಕಠಿಣವಾದ ಸಮಯವಿದು. ಎಲ್ಲ ಮಾನವರ ಸ್ವಾತಂತ್ರ್ಯಕ್ಕಾಗಿ ನಮ್ಮೀ ಎರಡು ದೇಶಗಳ ಜನರು ತಮ್ಮ ಶಕ್ತಿಮೀರಿ ಕೆಲಸಮಾಡಬೇಕೆಂಬುದು ನನ್ನ ಅಭಿಪ್ರಾಯ. ಏಕೆಂದರೆ, ಸ್ವಾತಂತ್ರ್ಯ ವಿಶ್ವದಲ್ಲಿ ನೂತ್ರವೇ ಭಾರತ ಮತ್ತು ಚೀನಾಗಳು ಸ್ವತಂತ್ರವಾಗಿ ಇರಬಲ್ಲವು ಇದಲ್ಲದೆ. ಚೀನಾಕ್ಕಾಗಲಿ, ಭಾರತಕ್ಕಾಗಲಿ ಸ್ವಾತಂತ್ರ್ಯವನ್ನು ಕೊಡದೆ ಹೋದರೆ ಈ ಜಗತ್ತಿನಲ್ಲಿ ಶಾಂತಿಯೇ ಇರುವುದಿಲ್ಲ

"ಈಗಿನ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಜಗತ್ತು ೨ ಗುಂಪುಗಳಾಗಿ ವಿಭಾಗಿಸಲ್ಪಟ್ಟಿದೆ. ಒಂದು ದುಷ್ಟರ ಗುಂಪು; ಇನ್ನೊಂದು ದುಷ್ಟರನ್ನು ಎದುರಿಸುತ್ತಿರುವ ಗುಂಪು ದುಷ್ಟವರ್ತನವನ್ನು ಎದುರಿಸು

7ನೇ ಪುಟವನ್ನು ನೋಡಿರಿ

ಜುಲುಮೆಯಿಂದ ಸೈನ್ಯಕ್ಕೆ ಸೇರಿಸಿಕೊಳ್ಳುವುದಿಲ್ಲ

ಬಳ್ಳಾರಿ ಕಲೆಕ್ಟರವರ ಎಚ್ಚರಿಕೆ.

ಜಿಲ್ಲೆಯ ಭಾಗಗಳಲ್ಲಿ ಸೈನ್ಯಕ್ಕೆ ಜುಲುಮೆಯಿಂದ ಭರ್ತಿಮಾಡುತ್ತಿರುವರೆಂದು ಸುಳ್ಳುಸುದ್ದಿಗಳನ್ನು ಹಬ್ಬಿಸಿರುವರು. ಇದಕ್ಕೆ ಯಾವ ಆಧಾರವೂ ಇಲ್ಲ. ಸ್ವಸಂತೋಷದಿಂದ, ತಮ್ಮ ಇಷ್ಟದಿಂದ ಬಂದರೆ ಮಾತ್ರ ಸೇರಿಸಿಕೊಳ್ಳಲಾಗುವದೆಂತಲೂ ಇದರಲ್ಲಿ ಯಾವ ತರಹೆ ಒತ್ತಾಯವೂ ಇಲ್ಲವೆಂತಲೂ ಇಂಥ ಸುಳ್ಳುಸುದ್ದಿ ಹರಡುವವರನ್ನು ಇಂಡಿಯಾ ರಕ್ಷಣೆ ಶಾಸನದ ನ್ವಯ ಶಿಕ್ಷಿಸಲಾಗುವದೆಂತಲೂ ಬಳ್ಳಾರಿ ಕಲೆಕ್ಟರವರು ಎಚ್ಚರಿಸಿದ್ದಾರೆ.

ಜಗತ್ತಿನ ನೌಕಾಬಲ

ಯುದ್ಧಾರಂಭವಪೂರ್ವ–ಸಧ್ಯ

ಯುದ್ಧ ಪೂರ್ವದಲ್ಲಿ ಪ್ರಪಂಚದ ಎಲ್ಲಾ ರಾಷ್ಟ್ರಗಳ ನಾವಿಕಾಬಲವು ೬೫೦ ಲಕ್ಷ ಟನ್‌ಗಳಷ್ಟಿದ್ದಿತು. ಯುದ್ಧಾರಂಭವಾದಮೇಲೆ ಮಿತ್ರರಾಷ್ಟ್ರಗಳ ೧೩ ಲಕ್ಷ ಟನ್‌ಗಳಷ್ಟು ಮತ್ತು ಶತ್ರು ರಾಷ್ಟ್ರಗಳ ಅರಿಂದ ೫೦ ಲಕ್ಷ ಟನ್‌ಗಳಷ್ಟು ಹಡಗುಗಳು ನಾಶವಾಗಿದ್ದೇ ಕೆಂದೂ ಬ್ರಿಟಿಷ್ ನೌಕಾಸಂಘದ ವಾರ್ಷಿಕ ವರದಿಯಿಂದ ವ್ಯಕ್ತವಾಗುವದೆ.

ಬಳ್ಳಾರಿ ಪೇಟೆ ಧಾರಣೆ

27-2-42 ಶುಕ್ರವಾರ.

ಭಂಗಾರ ತೊಲ 1ಕ್ಕೆ	50-0-0
ಸಾವರ್ನ್	40-0-0
ಬೆಳ್ಳಿ100 ತೊಲ ರೂ.	70-0-0
ಹತ್ತಿ ಮುಂಗಾರಿ 12 ಮಣಕ್ಕೆ	20-0-0
ಹತ್ತಿ ಫಾಂ	30-4-0

ಆಹಾರ ಸಾಮಗ್ರಿಗಳು

ಅಕ್ಕಿ 1 ರೂ. ಗೆ	4½	ಯಿಂದ	6	ಸೇರು
ಜೋಳ	,, 5	,,	6	,,
ಗೋಧಿ	,, ...		6	,,
ಹೋಳಿ	,, 15	,,	16	,,
ಪಡಿ	,, 19	,,	20	,,
ಸಜ್ಜಿ	,, 15	,,	16	,,
ಉಪ್ಪು	,, ...	,,	13	,,
ಶೇಂಗಾಬೆ	...	...	1-0	6
ಕಣಾಸಿಪತಾಯಿ	9 ಮಣ	25 ರಿಂದ	30	ರೂ
ಸಕ್ಕರೆ(ಮುದ್ದ)	9 ಮಣ	36	ರೂ	
ಬೆಲ್ಲ	12	ರಿಂದ	14	ರೂ

ರಾಯಲಸೀಮ ಬ್ಯಾಂಕು ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಆಡಿಯವರಿಗೆ ಇದ ಪ್ರಗತಿ

	31 10-40	31.1.42
ಶಿಕಾಸಿಟ್ಟುಗಳು.		
ಫಿಕ್ಸೆಡ್	ರೂ, Nil	1,07,130
ಚಾಲ್ತಿ	,, 3,173	14,107
ಸೇವಿಂಗ್ಸು	,, 1,231	18,026
ಇತರ	,, 40	863
ಸಾಲಗಳು		
ಭಂಗಾರ	,, 520	29,590
ಮಾಲು	,, Nil	34,611
ಇತರ	,, Nil	34,676
ಇತರ ಆಸ್ತಿ		
ಸರ್ಕಾರದ ಪಾಂಡುಗಳು	,,13,320	32,476
ಬ್ಯಾಂಕುಗಳಲ್ಲಿರುವ ಹಣ	,,32,502	9,239
ಕೈಯ್ಯಲ್ಲಿ ನಗದು	,, 5770	18,429

ಒಟ್ಟು ವ್ಯವಹಾರದ ಹೊತ್ತು:

31—10—40.	31—1—42.
ರು. 1,14,774-0-0	ರು. 2,37,304-0-0

ಶಾಖೆಗಳು:—

1 ತಿಮ್ಮಸಮುದ್ರ 2 ಕೊಟ್ಟೂರು. 3 ಉರವಕೊಂಡ 4 ಹತ್ತಿಕೊಂಡ

ಜೆ. ತೀರ್ಥಾರಾಮರೆಡ್ಡಿ,, ಬಿ. ಎ ಬಿ. ಎಲ್. (ಎಂ. ಎಲ್. ಎ.)
ಡೈರೆಕ್ಟರುಗಳ ಮೊದಲ ಅಧ್ಯಕ್ಷರು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಜಪಾನ ಹಡಗುಗಳು ಮುಳುಗಿದವು

ಜಾವಾ ದ್ವೀಪದಮೇಲೆ ಮುತ್ತಿಗೆ ನಡೆಸಿದಾಗ ಮತ್ತು ಪೆಸಿಫಿಕ್ ಸಾಗರದಲ್ಲಿ ಜಪಾನರ ೧೩ ಯುದ್ಧ ನೌಕೆಗಳು, ೨೫ ಬಾಂಬರುಗಳು, ೪೮ ಇತರ ವಿಮಾನಗಳು ನಾಶವಾದವಂತೆ.

ರಷ್ಯಾ-ಜರ್ಮನಿ

ರಷ್ಯಾದವರ ಮುನ್ನಡೆಯಲ್ಲಿ ಜರ್ಮನರು ಪ್ರತಿ ಘಟಿಸಿದ ಕಾರಣ ೧೪ ಸಾವಿರ ಜರ್ಮನರು ನಾಶವಾದರಂತೆ. ರಷ್ಯನರು ಬಹಳ ಊರುಗಳನ್ನು ಹಿಡಿದಿರುವರು.

ಅಮೆರಿಕಾಕ್ಕೆ ಹೊಡೆತ

ಶತ್ರುಗಳ ಸಬ್‌ಮೀನು ಅಮೆರಿಕಾದ ಕ್ಯಾಲಿಫೋರ್ನಿಯಾ ತೀರದಲ್ಲಿನ ಒಂದು ಸ್ಥಾನದಮೇಲೆ ಡಜನ್ ಬೆಲಗಳನ್ನೆ ಹಾರಿಸಿದ್ದು ನಷ್ಟವೇನೂ ಆಗಲಿಲ್ಲ.

ಬರ್ಮಾದಲ್ಲಿ ೬ ವಿಜಯ ಸೈನ್ಯ

ಬರ್ಮಾದ ಸುದ್ದಿಗಳು ಅತ್ಯೇನೂ ಆಶಾವಹವಾಗಿಲ್ಲ. ಸೀಗಪುರವು ಜಪಾನರ ಕೈವಶವಾಗಿದೆ. ಈ ಕಾರಣ ೬ ವಿಜಿಜನ್ ಸೈನ್ಯಗಳನ್ನು ಈಕಡೆ ತಿರುಗಿಸಲು ಸಾಧ್ಯವಾಗಿದೆ

ರೂಸವೆಲ್ಟರ ಭಾಷಣ

ನಾವು ಯುದ್ಧ ಸಾಮಗ್ರಿಗಳನ್ನು ಹೆಚ್ಚು ಹೆಚ್ಚಾಗಿ ತಯಾರಿಸಬೇಕು. ನಮ್ಮಲ್ಲಿ ವಡಕು ಹುಟ್ಟಿಸಲು ನಾವು ಬ್ರಿಟನ್ ರಷ್ಯಾಗಳಿಗೆ ಸಹಾಯ ಒದಗಿಸದಿರಲು ಶತ್ರುಗಳು ಯತ್ನಿಸುತ್ತಿರುವರು. ನಾವು ಕಟ್ಟು ಕಡೆಯಲ್ಲಿ ಜಯ ಹೊಂದುವುದು ಖಂಡಿತ.

ಬಾಲಿ ದ್ವೀಪದಲ್ಲಿ

—ಜಪಾನರು ಬಾಲಿದ್ವೀಪದಲ್ಲಿ ವಿಮಾನ ನಿಲ್ದಾಣವನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆಂದು ಸುದ್ದಿ ಬಂದಿದೆ.

ಜನರ ವಿಶ್ವಾಸವೇ

ಓರಿಯೆಂಟಲ್ ಕಂಪನಿಯನ್ನು

ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾಡಿದೆ.

ಜಾರಿಯಲ್ಲಿರುವ ವಿಮೆ 31—12—40 83 ಕೋಟಿಗಿಂತಲೂ ಹೆಚ್ಚು.
ನಿಧಿಯ ದ್ರವ್ಯ ... „ 27½ „
ವಾರ್ಷಿಕ ಆದಾಯ „ 4¾ „

ಅತ್ಯಂತ ಆಕರ್ಷಣೀಯವಾದ ನಮ್ಮ ವಿವಿಧ ಯೋಜನೆಗಳ

ಪೂರ್ಣ ವಿವರಗಳನ್ನೊಳಗೊಂಡ ವಿಮಾ ಪುಸ್ತಕ
[Prospectus]ಕ್ಕಾಗಿ ಕೆಳಗಿನವರಿಗೆ ಬರೆಯಿರಿ.

ದಿ. ಬ್ರಾಂಚ್ ಮ್ಯಾನೇಜರ

ಓರಿಯೆಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.,
ಆರ್ಮೀನಿಯನ್ ಸ್ಟ್ರೀಟ್, ಮದ್ರಾಸ್.

ಆಲ್ ಇನ್‌ಸ್ಪೆಕ್ಟರು, ಓರಿಯೆಂಟಲ್ ಲೈಫ್ ಆಫೀಸು
312 ರೂಪರ್ಟ್‌ಸನ್ ಗೇಟ್ ಬ್ಯೂಸಪೇಟೆ ಬಳ್ಳಾರಿ.

ಮುಖ್ಯ ಕಾರ್ಯಾಲಯ, ಬೊಂಬಾಯಿ. ಹಿಂದೂಸ್ಥಾನದಲ್ಲಿ ಸ್ಥಾಪಿತ 1874.

ಬಂಗಾಳ ಕೊಲ್ಲಿಯಲ್ಲಿ ಜಪಾನ ಹಡಗುಗಳು:—

—ಜಪಾನ್ ಹಡಗುಗಳು ಈಗಾಗಲೇ ಬರಗಾಲಾ ಕೊಲ್ಲಿಗೆ ಬಂದಿವೆಯೆಂಬುದಾಗಿ ದೆಹಲಿಯಿಂದ ಸುದ್ದಿ ಬಂದಿದೆ. ಇದನ್ನು ನೋಡಿದರೆ, ಡಚ್ ಪೂರ್ವ ಇಂಡೀಸ್ ಮಾಗಸವನ್ನು ಶತ್ರುಗಳು ಆಕ್ರಮಿಸುವವರೆಗೆ ಹಿಂದೂಸ್ಥಾನದವರು ಅವರು ಚಟುವಟಿಕೆ ಶೋರಿಸಲು ಶಕ್ಯವಿಲ್ಲವೆಂಬ ಒನರ ನಂಬುಗೆಯು ಸುಳ್ಳೆಂಬುದು ವ್ಯಕ್ತವಾಗುತ್ತದೆ ಇದೇ ವಾದವನ್ನೇ 'ಟೈಮ್ಸ್' ಪತ್ರಿಕೆಯು ಎತ್ತಿ ಹಿಡಿದಿದೆ. ೨೦ ಮೈಲಿ ಅಗಲ ವಿರುವ ಹೋರ್ಮಜ್ ಜಲಸಂಧಿಯಲ್ಲಿ ನಾಜಿ ನೌಕೆಗಳು ತಪ್ಪಿಸಿಕೊಂಡು ಹೋಗಲು ಶಕ್ತವಾಗಿರುವಾಗ ಜಪಾನರು ಹಿಂದೂ ಸಾಗರವನ್ನು ನುಟ್ಟಲಾರರೆಂದು ಹೇಳುವುದು ಹುಚ್ಚುತನ.

ಸಿಂಗಪುರ

—ಜಪಾನಿಯ ಯುದ್ಧನೌಕೆಗಳು ಸಿಂಗಪುರ ಪ್ರದೇಶಕ್ಕೆ ಬಂದಿರುವರೆಂದೂ ಬಂದವಂತೆ.

ಮಲಯಾ

—ದ್ವೀಪದಲ್ಲಿ ಚೀನಾಯೋಧರು ತೆರುಕುಳ ಕೊಡುತ್ತಿರುವರು ಸೇತುವೆಗಳನ್ನು ವೈಮಾನಿಕದಳಗಳು ಧ್ವಂಸಮಾಡುತ್ತಿರುವರು ಇದರಿಂದ ಜಪಾನೀಸ ಇಂಜನಿಯರುಗಳಿಗೆ ಒಹಳ ತೊಂದರೆಯಾಗಿದೆ.

—ರಷ್ಯನರು ಹೆಚ್ಚು ತ್ಯಾಗಶೀಲರಾದೇಕೆಂದೂ ಇನ್ನೂ ಭಯಂಕರವಾದ ಕದನಕ್ಕೆ ತಯಾರಿರಬೇಕೆಂದೂ ಕೆಂಪು ಸೇನೆಯ ೨೪ನೆಯ ವಾರ್ಷಿಕೋತ್ಸವದಿನ ರಷ್ಯನ ಸರ್ವಾಧಿಕಾರಿಗಳಾದ ಸ್ಟಾಲಿನರವರು ಒನತೆಗೆ ತಿಳಿಸಿದರು.

ಕೆರೇಬಿಯನ್ ಸಮುದ್ರದಲ್ಲಿ ಹಡಗು ಮುಳುಗಿತು

ಜಮೈಕಾ ಟಿನ್ ತೂಕದ ಅನೆ ರಿಕ್ಷಾ ಸಾಮಾನು ಹಡಗೊಂದನ್ನು ಶುಕ್ರವಾರ ಹಗಲಲ್ಲಿಯೇ ಮುಳುಗಿಸಲಾಯಿತೆಂದು ಪ್ರಕಟಿಸಲಾಗಿದೆ. ಅದರೊಳಗಿದ್ದ ಪರರಲ್ಲಿ ೫೪ ಮಂದಿ ಪದಸ್ಥರನ್ನು ರಕ್ಷಿಸಲಾಯಿತು.

ಬ್ರಿಟಿಷ್ ಹಡಗುಗಳಿಗೆ ಭಯಂಕರ ನಷ್ಟ

ಕಳೆದ ೨ ತಿಂಗಳಲ್ಲಿ ಬ್ರಿಟಿಷ್ ಹಡಗುಗಳು ಬಹಳ ಮುಳುಗುತ್ತಿರುವುದಾಗಿಯೂ, ನಷ್ಟವು ಅತ್ಯಧಿಕವಾಗಿರುವುದೆಂದೂ ಬ್ರಿಟಿಷ್ ಪ್ರಧಾನಮಂತ್ರಿಗಳಾದ ಚರ್ಚಿಲರು ತಿಳಿಸಿದರು.

ಬರ್ಮಾ ರೈಲ್ವೆ ಕತ್ತರಿಸುವ ಸಾಹಸ.

ರಂಗೂನ-ಮಾಂಡಲೇ ರೈಲ್ವೆ ಕತ್ತರಿಸಲು ಜಪಾನೀಯರು ಯತ್ನಿಸುತ್ತಿರುವರು. ಸಯಾಮದ ಕಡೆಯಿಂದ ಜಪಾನೀಯರ ೭೦ ಸಾವಿರ ಸೈನ್ಯಗಳು ಉತ್ತರ ಬರ್ಮಾವನ್ನು ಮುತ್ತುವದಕ್ಕೆ ಸಾಹಸ ಪಡುತ್ತಿವೆಯೆಂದು ಗೊತ್ತಾಗಿದೆ. ಅಂತೂ ಬರ್ಮಾದಲ್ಲಿನ ಪರಿಸ್ಥಿತಿಯು ಗಂಭೀರವಾಗಿದೆ. ಬರ್ಮಾದೇಶಕ್ಕೆ ಕಾಗದ ರಿಜಿಸ್ಟ್ರಿ ಮಾಡಿಸಿ ಆರ್ಡರು ಕಳುಹಿಸುವದನ್ನು ಬಂದು ಮಾಡಿದ್ದಾರೆ ಕೇಂದ್ರೀಕೃತ ಮನಿಆರ್ಡರು ಕಳುಹಿಸುವ ವ್ಯವಸ್ಥೆ ಇದೆ.

ಜನರಲ್ ವೆಲ್ಲರ ಕೈಮುರಿಯಿತು.

ಪೆಸಿಫಿಕ್ ಸಾಗರದ ಬ್ರಿಟಿಷ್ ಅಮೆರಿಕಾದಳಗಳ ಸೇನಾಧಿಕಾರಿಯಾದ ಜನರಲ್ ವಾವೆಲ್ಲರು ಸಿಂಗಪುರಕ್ಕೆ ಹೋದಾಗ ವಿಮಾನದಿಂದ ಇಳಿಯುತ್ತಿರಬೇಕಾದರೆ ಕೈಮುರಿಯಿತೆಂದು ಹೇಳಲಾಗಿದೆ ಆದರೆ ಈ ಕಾರಣ ಅವರ ಕೆಲಸಕ್ಕೇನೂ ಅಡಚಣೆಯಾಗಲಿಲ್ಲವಂತೆ.

ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರಗಳು.

ಹೊಸದಾಗಿ ಮಂತ್ರಿಗಳಾಗಿರುವ ಸರ ಸ್ಟ್ಯಾಫರ್ಡ ಕ್ರಿಪ್ಸರು - ಪ್ರಶ್ನೋತ್ತರಗಳಿಗೆ ಜವಾಬು ಕೊಡುತ್ತಾ ಹಿಂದೂಸ್ಥಾನದ ರಾಜಕೀಯ ಬದಲಾವಣೆಗಳನ್ನು ಕುರಿತು ಸರಕಾರದವರು ತಮ್ಮ ನಿಶ್ಚಯನಿರ್ಣಯವನ್ನು ಕೊಡಲಿರವರೆಂದು ಹೇಳಿದರು.

ಮೈಸೂರು ಆಕಾಶವಾಣಿ ರೇಡಿಯೋ ಕೇಂದ್ರದಿಂದ ಕನ್ನಡ

ಮಾರ್ಚ್ ೧೫ನೆಯ ತಾರೀಖಿನಿಂದ ಮೈಸೂರು ಆಕಾಶವಾಣಿಯಿಂದ ಈಕೆಳಗಿನಂತೆ ಕನ್ನಡದ ಸುದ್ದಿಗಳು ಹೇಳಲ್ಪಡುವುವು ಬೆಳಿಗ್ಗೆ ೭—೩೦ ಸಾಯಂಕಾಲ ೬.೫೦ಕ್ಕೆ ಮತ್ತು ರಾತ್ರಿ ೯.೫೦ಕ್ಕೆ ೪೫ ಮತ್ತು ೩೧೦ ಮೀಟರ್‌ಗಳ ಮೇಲೆ ಸುದ್ದಿಗಳು ಕೇಳಬರುತ್ತವೆ.

ಹಿಂಮೊಸ್ಥಾನಕ್ಕೆ ಚೀನದ ಸರ್ವಾಧಿಕಾರಿಗಳಾದ ಚಿಯಾಂಗ-ಕೈ-ಷೇಕರ ಸಂದೇಶ.

4ನೇ ಪುಟದಿಂದ ಬಂದದ್ದು.

ತ್ರಿರುವವರೆಲ್ಲ ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವವರೆಲ್ಲ ದುಷ್ಟ ವಿರುದ್ಧ ಗುಂಪಿಗೆ ಸೇರಬೇಕು. ಇದಕ್ಕೆ ವ್ಯತ್ಯಸ್ತವರ್ತಿಯಾದ ಮಾರ್ಗವೇ ಇಲ್ಲ ಮುಂದಿಗುವ ಘಟನೆಗಳನ್ನು ನಿರೀಕ್ಷಿಸುತ್ತ ಕೂಡುವ ಕಾಲವಿದಲ್ಲ. ಮಾನವ ಕುಲದ ಭವಿಷ್ಯವನ್ನೇ ತಲೆಕೆಳಕು ಮಾಡುವಂತಹ ಪರ್ವ ಸಮಯವಿದು ನಮ್ಮ ಮುಂದಿರುವ ಈಗಿನ ಸಮಸ್ಯೆಯು ಯಾವುದೇ ಒಂದು ವ್ಯಕ್ತಿಯ ಅಥವಾ ದೇಶದ ಜಗಳಕ್ಕೆ ಸಂಬಂಧಿಸಿಲ್ಲ. ಅಲ್ಲದೆ, ಒಂದು ದೇಶದ ಜನರಿಗೂ ಇನ್ನೊಂದು ದೇಶದ ಜನರಿಗೂ ಇನ್ನೂ ತೀರ್ಮಾನವಾಗದೆ ಉಳಿದಿರುವ ಪ್ರಶ್ನೆಗೆ ಕೂಡ ಈಗಿನ ಸಮಸ್ಯೆಯು ಸಂಬಂಧಿಸಿಲ್ಲ ಇವ್ವರಿಂದ ದುಷ್ಟವಿರುದ್ಧ ಗುಂಪಿಗೆ ಸೇರುವ ಯಾವುದೇ ದೇಶವೂ ಯಾವುದೇ ಮತ್ತೊಂದು ದೇಶದೊಡನೆ ಸಕಲಕಾರಿಸಿನುತಾಗುವುದಿಲ್ಲ; ಇತೀಗುಂಪಿನೊಂದಿಗೆ ಸಹಕರಿಸಿವಂತಾಗುತ್ತದೆ ರಾಷ್ಟ್ರೀಯತ್ವದ ಇತಿಹಾಸದಲ್ಲಿ ಪೆಸಿಫಿಕ್ ಮಹಾ ಘಟನೆಯಾಗಿದೆಯೆಂದು ನಾವು ನಂಬಬೇಕು. ಈ ಜಗತ್ತಿನ ಜನರು ಇನ್ನು ನಮಂದೆ ಸ್ವಾತಂತ್ರ್ಯ ಪಡೆಯುವ ವಿಧಾನವು ಹಿಂದಿನಮಕ್ಕಿಂತ ಭಿನ್ನವಾಗಿರಬಹುದು. ಈ ಹೊಸ ಯುಗದಲ್ಲಿ ಭಾರತೀಯರು ಸ್ವಯಿಚ್ಛೆಯಿಂದ ಮುಂದೆ ಬಂದು ಸ್ವತಂತ್ರಜಗತ್ತಿನ ಸ್ಥಾಪನೆಯಲ್ಲಿ ತನ್ನ ಪಾಲ್ಗೊಳ್ಳಿಸಬೇಕೆಂದು ದುಷ್ಟವಿರುದ್ಧ ದೇಶಗಳು ಬಯಸುತ್ತಿವೆ. ಸ್ವಾತಂತ್ರ್ಯ ಪಡೆಯಬೇಕೆಂಬ ಭಾರತದ ಆದರ್ಶ ಕುರಿತು ವಿಶ್ವದ ಬಹು ಮಂದಿ ಸಹಾನುಭೂತಿಯನ್ನು ಸೃಷ್ಟಪಡಿಸುತ್ತಿದ್ದಾರೆ. ಈ ಸಹಾನುಭೂತಿಯು ಅಮೂಲ್ಯವಾದುದು ಮತ್ತು ಪಡೆಯಲು ಬಹಳ ಕಷ್ಟವಾದುದು ಅದಕ್ಕೆ ಹಣದಲ್ಲಿ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಅವ್ವರಿಂದ ಈ ಸಹಾನುಭೂತಿಯನ್ನೂ ನಿನೇ ಅಗಲಿ ಉಳಿಸಿಕೊಳ್ಳಬೇ ಜೆ.ಕು.

ಜಪಾನಿನ ದುಷ್ಟವರ್ತನೆ

"ಈಗಿನಮ ಗುಲಾಮಗಿರಿಗೆ ಸ್ವಾತಂತ್ರ್ಯಕ್ಕೆ ಬೆಳಕಿಗೆ ಅಂಧಕಾರಕ್ಕೆ ಒಳ್ಳೆಯದಕ್ಕೆ ಕೆಟ್ಟದಕ್ಕೆ ನಡೆಯುತ್ತಿರುವ ಕದನ. ಜಪಾನರು ಫಾರ್ಮೋಸಾ ಮತ್ತು ಕೊರಿಯಗಳನ್ನು ಆಕ್ರಮಿಸಿದಂದಿನಿಂದ ಅಲ್ಲಿನ ಜನರು ಅನುಭವಿಸುತ್ತಿರುವ ಕಷ್ಟನಷ್ಟಗಳೂ ದಬ್ಬಾಳಿಕೆಯೂ ಇತರರಿಗೆ ಒಂದು ಎಚ್ಚರಿಕೆ ಯಾಗಬೇಕು. ಚೀನಾ-ಜಪಾನ್ ಕದನವು ಆರಂಭವಾದಂದಿನಿಂದ ಜಪಾನರು ನಡೆಸುತ್ತಿರುವ ಅಮಾನುಷ ಕೃತ್ಯಕ್ಕೆ ನಾನ್‌ಕಿಂಗಿನ ಉದಾಹರಣೆ ಕೊಡಬಹುದು ೧೯೩೭ ನೇ ಡಿಸೆಂಬರ್‌ನಲ್ಲಿ ಜಪಾನರು, ಅದನ್ನು ಹಿಡಿದರು. ಒಂದುವಾರದೊಳಗಾಗಿ ೩ ಲಕ್ಷಕ್ಕೆ ಮಿಗಿ ಸಿ ವಿ ಲಿ ಯ ನ ರ ನ್ನು ಕೊಂದರು. ಕಳೆದ ೫ ವರ್ಷಗಳಿಂದ ಸ್ವತಂತ್ರ ಚೀನಾದಲ್ಲಿರುವ ಜನರ ಮೇಲೆ ಜಪಾನರು ಬಾಂಬಿನ ವರ್ಷವನ್ನು ಸುರಿಸುತ್ತಿದ್ದಾರೆ ಭಿರಂಗಿಗಳಿಂದ ಗುಂಡುಹಾರಿಸುತ್ತಿದ್ದಾರೆ. ಜಪಾನರು ಮುತ್ತಿಗೆ ಹಾಕಿದ ಪ್ರತಿಸ್ಥಳದಲ್ಲಿಯೂ ಪುರುಷರು ಸ್ತ್ರೀಯರು ಮತ್ತು ಮಕ್ಕಳು ಇವರ ಪ್ರಹಾರಕ್ಕೆ ಒಳಗಾದರು ಅಥವ ಸತ್ತರು ತರುಣರನ್ನೇಲಾ ನುತ್ತ ಪದಧವೀರರನ್ನೇ ಜಪಾನರು ವಿಶೇಷವಾಗಿ ಕಣ್ಣಿಟ್ಟರು ಬುದ್ಧಿವಂತರಾದವರು ಮತ್ತು ಆಲೋಚನಾಪರರು ಬಹಳ ಕಷ್ಟವನ್ನು ಅನುಭವಿಸಬೇಕಾಯಿತು. ಇದಿಷ್ಟೇ ಅಲ್ಲ ಸಾಂಸ್ಕೃತಿಕ ಕೇಂದ್ರಗಳು ಇತಿಹಾಸ ಪ್ರಸಿದ್ಧವಾದ ವಸ್ತುಗಳು ಇವುಗಳನ್ನೆಲ್ಲ ನಾಶಮಾಡಲಾಯಿತು. ಅತಿಗೆ ಸಾಧಾನುಗಳು ನೇಗಿಲುಗಳು ವ್ಯವಸಾಯದ ಉಪಕರಣಗಳು, ಸಾಕಿದ ಪ್ರಾಣಿಗಳು ಮುಂತಾದುವನ್ನು ಸಹ ಬಲವಂತದಿಂದ ಕಿತ್ತುಕೊಂಡರು ಜಪಾನರು ಆಕ್ರಮಿಸಿರುವ ಕ್ಷೇತ್ರಗಳಲ್ಲಂತೂ ಸ್ತ್ರೀಯರ ಮೇಲೆ ಅತ್ಯಾಚಾರ, ಮನೆಮಠಗಳಿಗೆ ಬೆಂಕಿಯಿಡುವುದು. ದರೋಡೆ ಕೊಲೆ ಇವು ಆಗುತ್ತಲೇ ಇವೆ. ಜನರ ಶಕ್ತಿಯನ್ನು ಹಿರಿ, ಅವರ ಭಾವನಾಶಕ್ತಿಯನ್ನೇ ನಿರ್ಮೂಲಗೊಳಿಸಲೋಸುಗ ಜಪಾನರು ಅಲ್ಲಲ್ಲಿ ಅಫೀಮು ಅಂಗಡಿಗಳನ್ನೂ, ಜೂಜಿನ ಕಟ್ಟೆಗಳನ್ನೂ ಮತ್ತು ವ್ಯಭಿಚಾರ ಗೃಹಗಳನ್ನೂ ತೆರೆದಿದ್ದಾರೆ. ಜಪಾನರು ಮಾಡುತ್ತಿರುವ ಅಮಾನುಷ ಕಾರಕ ಕೃತ್ಯಗಳವು ಇತರ ದುಷ್ಟ ರಾಷ್ಟ್ರಗಳು ಮುತ್ತಿಗೆ ಹಾಕಿರುವ ಭೀಕರಗಳಲ್ಲಿ ಈ ದುರ್ವರ್ತನೆಯು ಕಾಣಬರುವುದಿಲ್ಲ.

"ಪಶುವೃತ್ತಿಯೂ, ದುಷ್ಟಶಕ್ತಿಯೂ ತಾನೇ ತಾನಾಗಿ ನುರಿಯುತ್ತಿರುವ ಈ ಭಯಂಕರ ಸಮಯದಲ್ಲಿ ಚೀನಾ ಜನರೂ ಮತ್ತು ಅವರ ಸಹೋದರರಾದ ಭಾರತೀಯರೂ ನಾಗರಿಕತೆಯನ್ನೂ ಮತ್ತು ಮಾನವ ಸ್ವಾತಂತ್ರ್ಯವನ್ನೂ ಉಳಿಸಲೋಸುಗ ಅಟ್ಲಾಂಟಿಕ್ ಪ್ರಣೋಷಣೆಯಲ್ಲಿಯೂ ಮತ್ತು ೩೬ ಜನತಾಂಗಗಳು ಜಂಟಿಯಾಗಿ ಹೊಡಿಸಿರುವ ಘೋಷಣೆಯಲ್ಲಿಯೂ ಅಡಗಿರುವ ತತ್ವಗಳಿಗೆ ಕೊಂಡವೂ ಹಿಂದುಮುಂದು ನೋಡದೆ ಬೆಂಬಲ ನೀಡಬೇಕು. ಅವರು ಮಿತ್ರರಾಷ್ಟ್ರಗಳೊಡನೆ, ಅಂದರೆ, ಚೀನಾ, ಬ್ರಿಟನ್, ಅಮೆರಿಕೆ ಮತ್ತು ರಷ್ಯಾ ಗಳೊಡನೆ ಹೃತ್ಪೂರ್ವಕವಾಗಿ ಸೇರಿ ಸಂಪೂರ್ಣ ಜಯವು ಲಭ್ಯವಾಗುವವರೆಗೆ ಭುಜಕ್ಕೆ ಭುಜ ಕೊಟ್ಟು ಹೋಡಿದಾದುವರೆಂದು ನಂಬಿದ್ದೇನೆ"

ಸಂದೇಶದ ಕೊನೆಯಲ್ಲಿ ಮಾರ್ಷಲ್ ರವರು ಮೊದಲೇ ತಿಳಿಸಿದ ರೀತಿಯಲ್ಲಿ ಬ್ರಿಟನ್ನಿಗೆ ಬುದ್ಧಿವಾದವನಿತ್ತಿದ್ದಾರೆ.

ಬಾಲಿ ದ್ವೀಪದ ಸ್ವಾಮುಖ್ಯತೆ

ನೆದರ್‌ಲೆಂಡ್ ಪೂರ್ವ ಇಂಡೀಸ್‌ಗುಂಪಿನಲ್ಲಿ ಬಾಲಿ ಎಂಬುದು ಪ್ರಸಿದ್ಧ ದ್ವೀಪ ಅದು ನೃತ್ಯಕಾರರಿಗೂ ಮತ್ತು ಕೆತ್ತನೆ ಕೆಲಸಗಳಿಗೂ ಹೆಸರು ಪಡೆದಿದೆ. ಚಿಕ್ಕ ಮೈಲಿ ಒಂದಕ್ಕೆ ಇಷ್ಟಿರುವಷ್ಟು ದೇವಾಲಯಗಳೂ ವಿಶ್ವದ ಮತ್ತಾವ ಕಡೆಯೂ ಇಲ್ಲ. ಇತ್ತೀಚೆನವರೆಗೆ ಒಮ್ಮ ಪ್ರವಾಸಿಗಳಿಗೂ, ಕಲಾವಿದರಿಗೂ ಮೆಕ್ಕಾದಂತಿತ್ತು. ಯುದ್ಧದ ದೆಸೆಯಿಂದ ಪ್ರವಾಸಿಗಳೀಗ ಬರುತ್ತಿಲ್ಲ. ಸ್ಥಳೀಯ ಕಲಾವಿದರೆಲ್ಲ ಸೈನ್ಯಕ್ಕೆ ಸೇರಿದ್ದಾರೆ.

ದ್ವೀಪದಲ್ಲಿ ಜನನಿಬಿಡತೆ ಹೆಚ್ಚಾಗಿದೆ. ಒಳ್ಳೆಯ ವ್ಯವಸಾಯ ನಡೆಯುತ್ತಿದೆ. ಅಪಾರವಾಗಿ ಭತ್ತ ಬೆಳೆಯುತ್ತಿದೆ. ಜಾವಾ ದ್ವೀಪಕ್ಕೂ ಬಾಲಿಗೂ ಮಧ್ಯೆ ಸಣ್ಣ ಜಲಸಂಧಿಯಿದೆ ಜಾವಾ ತೀರದಲ್ಲಿರುವ ಪ್ರಮುಖ ಸ್ಥಾನಗಳಲ್ಲಿ ಒಂದಾದ ಬಂಜೋವಾಂಗಿ ಎಂಬುದರಿಂದ ಬಾಲಿದ್ವೀಪಕ್ಕೆ ೧೫ ಮೈಲಿಕೂಡ ಆಗುವುದಿಲ್ಲ.

ದಕ್ಷಿಣ ಬಾಲಿಯಲ್ಲಿ ಒಳ್ಳೆ ವಿಮಾನ ನಿಲ್ದಾಣವೊಂದಿದೆ. ಅಲ್ಲಿಂದ ವಿಮಾನಗಳು ಹಾರಿ ಸೌರಬಾಯಾ ಮೇಲೆ ಮುತ್ತಿಗೆ ನಡೆಸಬಹುದು ಜಪಾನರು ಬಾಲಿ ದ್ವೀಪದಲ್ಲಿ ಬಂದಿಳಿದಿರುವುದನ್ನು ನೋಡಿದರೆ ಪೂರ್ವ ಜಾವಾ ಮತ್ತು ಸೌರಬಾಯಾಗಳನ್ನು ಮುತ್ತಲು ಅವರು ಕಟ್ಟಕಡೇಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂದು ಹೇಳಬಹುದು.

ಪಶ್ಚಿಮ ಜಾವಾ ಮತ್ತು ಬಟೇವಿಯಾಗಳನ್ನು ಮುತ್ತಲು ಸುಮಾತ್ರಾದಲ್ಲಿ ಜಪಾನರು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂದು ಊಹಿಸಲಾಗಿದೆ. ಆದ್ದರಿಂದ ಪಶ್ಚಿಮ ಮತ್ತು ಪೂರ್ವ ಜಾವಾಗಳನ್ನು ಜಪಾನರು ಯಾವ ಕ್ಷಣದಲ್ಲಿ ಬೇಕಾದರೂ ಮುತ್ತಬಹುದು.

ಬಳ್ಳಾರಿ ಕ್ಷಾಮ ಕೇಂದ್ರಗಳು.

3ನೇ ಪುಟದಿಂದ ಬಂದದ್ದು

ಕಾಲದಲ್ಲಿ ಅಸಹ್ಯವಾದ ಶ್ರಮೆಯಾಗುತ್ತದೆ. ದೂರದಿಂದ ಬರುವ ಕೂಲಿಗಳಿಗೆ ಕೆಲಸ ತಗ್ಗಿಸುತ್ತೇವೆಂದು ಸರ್ಕಾರದವರು ಹೇಳಿದರಾಗಲಿ ಅದು ಅಮಲಿನೆಲ್ಲಿ ಬರಲಿಲ್ಲ. ಅವರು ತಮ್ಮ ಗ್ರಾಮಗಳಿಂದ ಬರಬೇಕೆಂದರೆ ಬೆಳಿಗಿನ ಜಾವ ಏಳಬೇಕು. ಮತ್ತೆ ಹೋಗಬೇಕೆಂದರೆ ಬಹಳ ಹೊತ್ತಾದ ನಂತರ ರಾತ್ರಿ ಹೋಗಬೇಕಾಗಿದೆ.

ನಂದವರಂ ಕೇಂದ್ರವಲ್ಲಿ ೩೨-೩೩-೩೪-೩೬-೧೦ನೆಯ ಗ್ಯಾಂಗುಗಳವರಿಗೆ ಕೆಲ ದಿನಗಳು ಬಹಳ ಕಡಮೆ ಕೂಲಿ ದೊರೆಯಿತೆಂಬ ಆಪಾದನೆಗಳಿವೆ. ಬಹಳ ದೂರದಿಂದ ಕಲ್ಲು-ಮಣ್ಣು-ತರಬೇಕು. ಅಗೆಯಬೇಕಾದ ಸ್ಥಳ ಬಹಳ ಳಿಟ್ಟು ಇದ್ದರೆ ಬಹಳ ಕಷ್ಟವಾಗುತ್ತದೆ. ಇಂಥಾ ಸಂದರ್ಭಗಳಲ್ಲಿ ಉದಾರಹೃದಯರಿದ್ದರೆ ಒಳ್ಳೆಯದು.

ಸ್ತ್ರೀಯರು ಪ್ರಸವಿಸಿದ ನಂತರ ಒಂದು ತಿಂಗಳ ರಜಾ ಸಾಲದು. ಕೊನೆಗೆ ೩ ತಿಂಗಳಾದರೂ ಬೇಕು. ತಿಂಗಳ ಚಿಕ್ಕ ಕೂಸನ್ನು ಮನೆಯಲ್ಲಿ ಬಿಟ್ಟು ದಿನವೆಲ್ಲಾ ಹೊರಗಿರುವುದು ದುಸ್ಸಾಧ್ಯವಾದ ಮಾತು. ತಟ್ಟೇಗಳನ್ನು ೩೦ ಮೈಲಿ ದೂರವಿರುವ ಬಳ್ಳಾರಿಯಿಂದ ತರುವುದಕ್ಕಿಂತಲೂ, ಎಮ್ಮಿಗನೂರು ಆವಾನಿ ಮೇದಾರರಿಗೇ ಈ ಕೆಲಸ ಕೊಟ್ಟರೆ ಸುಲಭವಾತ್ತದೆ.

ಮಕ್ಕಳಿಗೆ ಕೊಡುವ, ಜೋಳದ ಮುದ್ದೆ ಹುಳಿ ತೃಪ್ತಿಕರವಾಗಿದೆಯೆನ್ನಬಹುದು. ಮಕ್ಕಳಿಗೆ ಪಾಠಶಾಲೆ ಏರ್ಪಡಿಸುವುದು ಅವಶ್ಯಕ. ಕ್ಷಾಮನು ನಿವಾರಣಾ ಕಾರ್ಯದಲ್ಲಿ **ಶ್ರೀ ಮಾಚಾನಿ ಸೋಮಪ್ಪನವರು** ಅತ್ಯಂತ ಪ್ರಶಂಸನೀಯವಾದ ಕಾರ್ಯಮಾಡುತ್ತಿರುವರು. ಇವರಿಗೆ ಕೃತಜ್ಞತೆಯನ್ನರ್ಪಿಸಬೇಕಾಗಿದೆ.

ಶಿ. ಬಾಲರೆಡ್ಡಿ, ಕಾರ್ಯದರ್ಶಿ, ಆಂಧ್ರಕೃತ ಸಂಘ.

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ

೨೬-೨-೪೨ ನೆಯ ಆದಿತ್ಯವಾರ ೩ ಘಂಟೆಗೆ ಶ್ರೀ ವಸು.ಸಾಲಪ್ಪನವರ ಅಧ್ಯಕ್ಷತೆಯಲ್ಲಿ ಹೊಸಪೇಟೆಯಲ್ಲಿ ಕೂಡಿದ್ದಿತು. ಶ್ರೀ ನಿವಾಸಯ್ಯಂಗಾರ, ರವೀಂದ್ರನಾಥ ಟಾಗೂರ, ಜವಾಹರಲಾಲಬಜಾರ ನಿಧನ ಕ್ಕಾಗಿ ದುಃಖಪ್ರದರ್ಶನವಾದನಂತರ ನಿರ್ಣಯಗಳಾದುವು. ಜಿಲ್ಲೆಯಲ್ಲಿ ಶಾಂತಿದಳಗಳನ್ನು ಸ್ಥಾಪಿಸುವಕಾರ್ಯಕ್ಕೆ ಶ್ರೀ ಸುಬ್ರಹ್ಮಣ್ಯಂರವರೂ, ಖಾದಿ ಗ್ರಾಮೋದ್ಯೋಗಗಳ ಉತ್ತೇಜನಕ್ಕೆ ಶ್ರೀ ಅನಂತಾಚಾರ್ಯರೂ, ನಿಯಮಿಸಲ್ಪಟ್ಟರು. ಸತ್ಯಾಗ್ರಹ ವಾಚರಿಸಿದ ಒಳ್ಳೆಯ ಕಾಂಗ್ರೆಸಕಾರ್ಯಕರ್ತರಿದ್ದ ಕೆಲವರನ್ನು ಸಮಿತಿಯಲ್ಲಿರಿಸಲು ಕರ್ನಾಟಕ ಪ್ರಾಂತೀಕ ಕಾಂಗ್ರೆಸ ಸಮಿತಿಯನ್ನು ಕೇಳಿಕೊಳ್ಳಲಾಯಿತು. ಕೂಡಲೇ ಸಕಾಲ ತಾಲೂಕು ಹಳ್ಳಿ ಸಮಿತಿಗಳನ್ನು ಸ್ಥಾಪಿಸಲು ಕೋರಲಾಯಿತು

1942-43ರ ಅಧಿಕಾರ ವರ್ಗ.

ಅಧ್ಯಕ್ಷ- ಶ್ರೀ ಇಜಾರಿ ವಸುಸಾಲಪ್ಪ
ಉಪಾಧ್ಯಕ್ಷರು- ,, ಬೆಲ್ಲದ ಚೆನ್ನಪ್ಪ
,, ಎ. ವಿರಾಸ್ವಾಮಿ
ಕಾರ್ಯದರ್ಶಿಗಳು ,, ಕೆ ರಾಮಚಂದ್ರಗುಪ್ತ
,,ಅಗುಂಡಿತಿರುಮಲರಾವು
ಖಜಾಂಚಿ- ,, ಸತ್ಯನಾಲ ಭದ್ರಪ್ಪಶೆಟ್ಟಿ

ಕಾರ್ಯಕಾರೀ ಸಮಿತಿ.

1 ಶ್ರೀ ಎಸ್. ಬಿ. ಮುಕ್ಕಣ್ಣ
2. ,, ಟಿ ಯಸ್. ಗುರುಲಿಂಗಪ್ಪ
3. ,, ಬಿ. ರಾಮನಗೌಡ
4. ,, ಕಲ್ಲಣಿ ಶಿವರುದ್ರಪ್ಪ
5 ,, ಡಾಕ್ಟರ ನಾಗನಗೌಡ
6. ,, ಮತ್ತಿಹಳ್ಳಿ ರಾಘವೇಂದ್ರರಾವು
7. ,, ಟಿ. ಬಿ. ಕೇಶವರಾವು

ಸರಕಾರೀ ಹಣ ವಾಪಸಿ ಮಾಡಿರಿ

ಫಿಬ್ರವರಿ - ಮಾರ್ಚ ಕಿಸ್ತ ಹಣದ ವಸೂಲಿ ಮುಂದಕ್ಕೆ ಹಾಕಿರಿ

ಹಚ್ಚೊಳ್ಳಿ ಕ್ಷಾಮಭಾಗದ ರೈತರ ಸಭೆಗಳು

ಹಚ್ಚೊಳ್ಳಿ—ಶ್ರೀ ದುರುದುಂಡಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿದ್ದಿತು. ಹೊನ್ನರಳಿ, ಚಿನ್ನಬಳ್ಳಾರಿ, ಬೀರಹಳ್ಳಿ, ಬಸರಹಳ್ಳಿ ಕಲ್ಲುಕುಟಿಗನಹಾಳು ರೈತರು ನೂರಾರು ಜನ ಬಂದಿದ್ದರು. ಈ ಸಭೆಯು ೧೩-೨-೪೨ನೆಯ ತಾ॥ ಸೋಮವಾರ ಸಾಯಂಕಾಲ ಸೇರಿದ್ದಿತು.

ಕೊತ್ತಲಚಿಂತದಲ್ಲಿ ಶ್ರೀ ಜಂಗಂ ಪೂಜೆಯ್ಯನವರ ಅಧ್ಯಕ್ಷತೆಯಲ್ಲಿ ೧೩-೨ ೪೨ ಮಂಗಳವಾರ ರೈತರ ಸಭೆಯು ಸೇರಿದ್ದಿತು ಅಲ್ಲಿ ಭೈರಗಾದಿ, ಗುಬ್ಬಹಾಳು, ರಾರಾಹಾಳು, ರೈತರು ಬಂದಿದ್ದರು. ಈ ಎರಡು ಸಭೆಗಳಲ್ಲಿ ಕ್ಷಾಮದಿಂದ ರೈತರಿಗುಂಟಾಗಿರುವ ಕಷ್ಟವು ಹೇಳಲ್ಪಟ್ಟಿತು. ಕ್ಷಾಮ ಪೀಡಿತ ಹಳ್ಳಿಗಳಲ್ಲಿ ಗ್ರಾಮಾಧಿಕಾರಿಗಳಾದ ಗೌಡರ್ಯಾನುಭೋಗರು ಲ್ಯಾಂಡ ರೆವಿನ್ಯೂ ಸರಕಾರಿ ಹಣದ ವಸೂಲಿಯನ್ನು ಜೋರಿನಿಂದ ಮಾಡುತ್ತಿರುವಾಗಿ ಸೂಚಿಸಲ್ಪಟ್ಟಿತು. ಕಲೆಕ್ಟರು, ಡೆಪ್ಯೂಟಿ ಕಲೆಕ್ಟರು ರವರಿಗೆ ಮಹಜರು ಮತ್ತು ತಾರುಗಳು ಹೋದವು. ಲ್ಯಾಂಡ ರೆವಿನ್ಯೂ ಹಣವನ್ನು ಸಂಪೂರ್ಣವಾಗಿ ವಾಪಸಿನಾಡದೇ ಕೆಂದೂ, ಈ ಪ್ರಶ್ನೆಯು ಇತ್ಯರ್ಥವಾಗುವರೆಗೂ, ಫಿಬ್ರವರಿ, ಮಾರ್ಚ ಹಣದ ವಸೂಲಿ ಮುಂದಕ್ಕೆ ಹಾಕಬೇಕೆಂದು ಕೇಳಲಾಯಿತು. ಸದರಿ ವೈತರ ಪರವಾಗಿ ಕಲೆಕ್ಟರು ಮತ್ತು ಡೆಪ್ಯೂಟಿ ಕಲೆಕ್ಟರನ್ನು ನೋಡಲಾಗಿದೆ ಶೀಘ್ರದಲ್ಲೇ ಅನುಕೂಲವಾಗಬಹುದು.

ರಂಗೂನ ಕಡೆ ಜಪಾನರ ಓಟ

ಸಿಂಗಪುರವ ಮುತ್ತಿಗೆಗಾಗಿ ಉಪಯೋಗಿಸಿದ ಸೈನ್ಯವನ್ನೆಲ್ಲಾ ಬರ್ಮಾದಲ್ಲಿ ಜಪಾನರು ಉಪಯೋಗಿಸುತ್ತಿರುವರೆಂದು ಗೊತ್ತಾಗಿದೆ. ರಂಗೂನ ಬಂದರದ ಉಪಯೋಗವನ್ನು ತಪ್ಪಿಸಲಾಗಿದೆ ಬಂದರಿನ ದ್ವಾರಕ್ಕೆ ಬರುವ ಮಾರ್ಗಗಳಲ್ಲೆಲ್ಲಾ -ಮೈನ್ (ಸಿಡಿಯುವ ಮದ್ದು) ಹಾಕಲಾಗಿದೆ ಜಪಾನರು. ಪೆಗೂ ನಗರವನ್ನು ಹಿಡಿದಿರುವುದು ಸುಳ್ಳೆಂದು ಗೊತ್ತಾಗಿದೆ. ಬರ್ಮಾದಲ್ಲಿ ಕೆಲ ನಗರಗಳ ಮೇಲೆ ಬಾಂಬು ಮುತ್ತಿಗೆಯಾಯಿತು.

—ಸುಮಾತ್ರಾ-ಜಾವಾ-ಬಾಲಿದ್ವೀಪಗಳಲ್ಲಿ ಡಚ ಸೈನ್ಯಗಳು ಜಪಾನನ್ನು ಉಗ್ರವಾಗಿ ಪ್ರತಿಭಟಿಸುತ್ತಿರುವರೆಂದು ತಿಳಿದು ಬಂದಿದೆ.

ಉಗ್ರವಾದ ನೌಕಾ ಕದನ:—

ಅಮೆರಿಕಾ ಡಚರಾಷ್ಟ್ರಗಳಿಗಾಗಿ ಮತ್ತು ಜಪಾನದ ನಾವಿಕಾದಳದೊಡನೆ ಬಾಲಿದ್ವೀಪದಹತ್ತರ ನೌಕಾ ಕದನವಾಯಿತ. ಶತ್ರುಗಳ ಅನೇಕ ಹಡಗುಗಳು ಮುಳುಗಿದವು.

ಟಿನುರ ದ್ವೀಪವ ಆಕ್ರಮಣ

ಪೆಸಿಫಿಕ ಸಾಗರದಲ್ಲಿ ನೋರ್ಮುಗಲಾ ದೇಶಕ್ಕೆ ಸೇರಿದ ಟಿನುರ ದ್ವೀಪವನ್ನು ನೊದಲು ಬ್ರಿಟಿಷರು ಮುತ್ತಿದ್ದರು ಈಗ ಅವರನ್ನು ಹೊರಡಿಸಿ ಜಪಾನರು ಆಕ್ರಮಿಸಿಕೊಂಡಿದ್ದಾರೆ.

ಮೋಟಾರ ಕೈಗಾರಿಕೆ-ವಿಶ್ವೇಶ್ವರಯ್ಯನವರಿಗೆ ಉತ್ತರ

ಈ ಯುದ್ಧಕಾಲದಲ್ಲಿ ಮೋಟಾರ ಕೈಗಾರಿಕೆಯನ್ನು ಹಿಂದೂಸ್ಥಾನದಲ್ಲಿ ಸ್ಥಾಪಿಸುವುದು ಸಾಧ್ಯವಿಲ್ಲೆಂದು ಇಂಡಿಯಾ ಸರಕಾರ ದೊಡನೆ ಪತ್ರವ್ಯವಹಾರ ನಡೆಸುತ್ತಿದ್ದ ಸರ್. ಎಂ ವಿಶ್ವೇಶ್ವರಯ್ಯನವರಿಗೆ ಸರಕಾರದವರು ಪತ್ರಬರೆದಿದ್ದಾರೆ.

S. V. Setty & Bros, Bellary.
ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.



ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿನ ಕೂಲಿ ನೇಸ್ಸೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ಬೆಸ್ಟ್ ಎಂಡ ವಾಚುಗಳೂ ದೊರೆ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

2ನೇ ಪುಟದಿಂದ ಬಂದದ್ದು

೫೦೦ ರಷ್ಯಾ ಲಾರಿಗಳು ತಮ್ಮ ಹೊರೆಯನ್ನು ಚೀನೀಯ ಗಡಿಯಾದ ಕುನಮಿಂಗದಲ್ಲಿ ಇಳಿಸುತ್ತಲಿವೆ. ಸರಕಾರೀ ತರ ವಾಹನಗಳು ಚೀನೀಯರಿಗೆ ಬೇಕಾದ ಯುದ್ಧ ಸಲಕರಣೆಗಳನ್ನು ಒಯ್ಯಬೇಕೆಂದು ಖುತ್ಮಾಯದ ನಿಯಂತ್ರಣವೂ ಇದೆ. ಪಾಂಟಿಂಗದಲ್ಲಿರುವ ಪೆಟ್ರೋಲೆಣ್ಣೆಯ ಅಂಗಡಿಯೊಂದರಲ್ಲಿ ದಿನ ೨೦೦ ಕ್ಕೆ ೧೫,೫೦೦ ಗ್ಯಾಲನ್ನು ಪೆಟ್ರೋಲೆಣ್ಣೆಯು ವಿಕ್ರಯವಾಗುವುದು. ಇಷ್ಟು ಹೆಚ್ಚಿನ ವ್ಯಾಪಾರವು ಜಗತ್ತಿನ ಬೇರೆ ಯಾವ ಅಂಗಡಿಯಲ್ಲಿಯೂ ಆಗುವುದಿಲ್ಲ. ಈ ಸಂಖ್ಯೆಯಿಂದ ಈ ರಸ್ತೆಯ ಆವುದು ರಫ್ತಿನ ಪರಿಚಯವು ನಮಗಾಗುವುದು.

ಬರ್ಮಾ ರಸ್ತೆಯನ್ನು ನಿರ್ಮಾಣ ಮಾಡಿದವರಲ್ಲಿ ಅವರ ಕಾರ್ಯಕರ್ತರು ಬಹಳ ಶ್ರಮವನ್ನು ವಹಿಸಿರುವರು. ಜಗತ್ತಿನ ಅತಿ ಭಯಂಕರ ಪ್ರದೇಶಗಳಲ್ಲೊಂದಾದ ಚೀನೀ ಸರ್ಕಾರದ 'ಶಾನ್' ಪ್ರದೇಶವನ್ನು ಈ ರಸ್ತೆಯು ಹಾದು ಹೋಗುವುದು. ಪ್ರತಿದಿನವೆಂಬಂತೆ ೨,೫೦,೦೦೦ ರಿಂದ ೬೦,೦೦೦ ಜನ ಚೀನೀಯರು ಈ ರಸ್ತೆಯ ನಿರ್ಮಾಣಕ್ಕಾಗಿ ದುಡಿದಿರುವರು. ಪರ್ವತಪ್ರದೇಶಗಳನ್ನೂ, ಗಿರಿ ಕಂದರಗಳನ್ನೂ ಈ ರಸ್ತೆಯು ಹಾದು ಹೋಗುವ ದಿದ್ದಾಗ್ಯೂ ಈ ರಸ್ತೆಯ ನಿರ್ಮಾಣಕರು ಇದರಲ್ಲಿ ದೊಡ್ಡ ಏರುತಗ್ಗುಗಳಿರದಂತೆ ಆಸನ್ನು ಸಮತಟ್ಟಾಗಿ ಮಾಡಿರುವುದು ಅವರ ಕಾರ್ಯಕುಶಲತೆಯನ್ನು ತೋರಿಸುತ್ತವೆ. ಜಗತ್ತಿನ ಪ್ರಖ್ಯಾತ ಚಮತ್ಕಾರಗಳ ಸಾಲಿನಲ್ಲಿ ಇದನ್ನು ಅನಿಯಂತಾಗಿ ಇಡಲು ಯೋಗ್ಯವಿರುವುದು. ಪೆಟ್ರೋಲಿಯಂ ಈ ರಸ್ತೆಯ ಜೀವಾಳವಾಗಿದೆಯು ದು. ಈ ಕಷ್ಟಕಾಲದಲ್ಲಿಯೂ ಪೆಟ್ರೋಲೆಣ್ಣೆಯ ಕೊರತೆಯು ಈ ರಸ್ತೆ ಯಲ್ಲಿ ಒಡಾಡುವ ವಾಹನಗಳಿಗೆ ಉಂಟಾಗದಿರುವುದು ನಿಜವಾಗಿಯೂ ಚೀನೀಯರ ಮುಂಜಾಗ್ರತೆಯನ್ನು ಸೂಚಿಸುವುದು.

ಪಾಶ್ಚಾತ್ಯ ನಗರವೆ ಈ ಹಿಂದೆ ಹಲವು ಬಾರಿ ಜಪಾನರ ವಿಮಾನವಾಳಿಗೆ ಗುರಿಯಾಗಿರುವುದೆಂದು ಈ ಮೊದಲೇ ಹೇಳಿದೆ. ಆದರೆ ಇದರಿಂದಾಗಿ ಚೀನೀಯರು ಹತಾಶರಾಗಲಿಲ್ಲ. ಬದಲಾಗಿ ಇನ್ನೂ ಹೆಚ್ಚು ಹೆಚ್ಚಾಗಿ ಕಾರ್ಯತತ್ಪರರಾಗಲು ಕಲಿತರು. ಈ ಬರ್ಮಾ ರಸ್ತೆಯು ಚೀನೀಯರಿಗುಳಿದ ಏಕಮಾತ್ರ ಸಹಾಯದ ದಾರಿಯಾಗಿದೆ. ಚೀನೀಯರು ಯುದ್ಧೋತ್ಸಾಹವು ಕೊನೆಯದಾಗಿ ಜಯವೂ ಈ ರಸ್ತೆಯ ಸುರಕ್ಷಿತತೆಯನ್ನವಲಂಬಿಸಿರುವುದು. ಬರ್ಮಾರಸ್ತೆಯ ಹಲವಾರು ಪ್ರದೇಶಗಳಲ್ಲಿ ವಿಮಾನ ದಾಳಿಯು ನಡೆದಿದೆ ಎಂದು ಅಧಿಕೃತ ಸುದ್ದಿಯಿಂದ ತಿಳಿದುಬರುತ್ತದೆ. ಒಮ್ಮೊ ರಸ್ತೆಯ ಕೊನೆಗಿರುವ ಯೂನ್ನಾನ ಪ್ರದೇಶದ ಪರಿಸ್ಥಿತಿಯು ಬಹಳ ಕಷ್ಟದ್ದಿದೆ. ಚೀನೀಯರು ಪ್ರತಿಯೊಂದು ಸಲಕರಣೆಗೂ ಬ್ರಿಟಿಷರನ್ನು ಮತ್ತು ಅಮೇರಿಕೆಯನರ ಕೈಗೆ ಕಾಯಬೇಕಾದ ಪ್ರಸಂಗವೀಗ ಬಂದೊದಗಿರುವುದ. ಮಿತ್ರರಾಷ್ಟ್ರವರು ತಕ್ಕ ಸಮಯವಲ್ಲಿ ಚೀನಕ್ಕೆ ಸಹಾಯವನ್ನು ಮಾಡದಿದ್ದರೆ ಪರಿಸ್ಥಿತಿಯು ಕಠಿಣವಾಗದಿರದು. ಪ್ರಸಿದ್ಧ ಆಂಗ್ಲ ಪತ್ರಿಕಾ ಪ್ರತಿನಿಧಿಯಾದ ಮೌರರ ನು ಜಪಾನೀಯ ಯುದ್ಧ ಧೋರಣವನ್ನು ಕುರಿತು ಹೀಗೆ ಬರೆದಿರುವನು "China in Japanes eyes, was to become another Korea, a sort of second British India conceivably independent in name, but practically subject to Japan, with hired Chinese officials and corrupt 'warlords' playing the role of Indian Maharajas" ಹೀಗಾಗದಂತೆ ನೋಡಲು ಮಿತ್ರರಾಷ್ಟ್ರಗಳ ಸಂಪೂರ್ಣ ಸಹಾಯವು ಸಕಾಲಕ್ಕೆ ದೊರತರೆ ಮಾತ್ರ ಚೀನೀಯರಿಗೆ ರಕ್ಷಣವಿರುವುದು. ಇಲ್ಲವಾದರೆ ಇನ್ನಿತರ ರಣಭೂಮಿಗಳಲ್ಲಾದಂತೆ ಪರಿಸ್ಥಿತಿಯು ನಿರಾಶಾಜನಕವಾಗಲೂ ಬಹುದು. ಬ್ರಹ್ಮದೇಶದಲ್ಲಿ ಪೆಟ್ರೋಲ ಎಣ್ಣೆಯು ವಿಪುಲವಾಗಿ ದೊರೆಯುವುದು ಮತ್ತು ಈ ಪೆಟ್ರೋಲ ಎಣ್ಣೆಯು ಸ್ಮುಖ ಯುದ್ಧೋಪಕರಣಗಳಲ್ಲಿ ಒಂದಾಗಿರುವುದು. ಇದರ ಪ್ರಾಪ್ತಿಗಾಗಿ ಜಪಾನೀಯರು ಜೀವನದ ಹೆಂಗುದೊರೆದು ಕಾದುವುದು ಸಹಜವಾಗಿದೆ. ಜಪಾನೀಯರು ಬಹುದೇಶದ ಮೇಲೆ ದಾಳಿಯನ್ನಾಚರಿಸುವು ಇದೊಂದೇ ಕಾರಣದಿಂದಲ್ಲ ಬರ್ಮಾ ರಸ್ತೆಯ ಸರ್ವನಾಶ, ಆದರಿಂದಾಗಿ ಚೀನೀಯರನ್ನು ನಿಸ್ಸಾಹಯರನ್ನಾಗಿ ಮಾಡುವ ಯೋಜನೆ, ಇವೆರಡೂ ಇವರ ಈಗಿನ ಯುದ್ಧ ಧೋರಣೆಯಲ್ಲಿ ಅಡಕವಾಗಿದೆ. ಇದನ್ನು ಮಿತ್ರರಾಷ್ಟ್ರಧವರು ಚನ್ನಾಗಿ ಅರಿತಿರುವರು, ಮತ್ತು ಚೀನೀಯರಿಗೆ ಸಹಾಯ ನೂಡಲು ಉಳಿದಿರುವ ಏಕ ಮಾತ್ರ ಮಾರ್ಗವಾದ ಬರ್ಮಾ ರಸ್ತೆಯನ್ನು ಕಾಪಾಡದಿರರು. ಪೂರ್ವ ರಂಗದ ಜಯಾಪಜಯವು ಈಗ ಬರ್ಮಾ ರಸ್ತೆಯನ್ನವಲಂಬಿಸಿದೆ (ಹುಬಳಿ ಗೆಜಟ್)

ಯುದ್ಧ ವಾರ್ತೆಗಳು

ಬರ್ಮಾದಲ್ಲಿ

ಬಿಲಿನ ನದಿಯ ಕ್ಷೇತ್ರದಲ್ಲಿ ಮಿತ್ರ ಸೈನಿಕರೂ ಶತ್ರು ಸೈನಿಕರಿಗೂ ಬಲವಾದ ಯುದ್ಧ ವಾಗುತ್ತಿರುವುದಾಗಿ ತಿಳಿದು ಬಂದಿದೆ. ರಂಗೂನಿನ ಉತ್ತರಭಾಗದಲ್ಲಿ ಪೆಗೂ ನಗರವನ್ನು ತಾವು ಹಿಡಿದಿರುವುದಾಗಿ ಜಪಾನೀ ರೇಡಿಯೋ ವಾರ್ತೆಯು ತಿಳಿಸಿರುವುದು ಆರ್ಡ ಕ್ಷೇತ್ರಗಳಲ್ಲಿ ಧೃಡವಪಟ್ಟಿಲ್ಲ. ಚೀನದ ಯೋಧರು ತಾಯತಂಡನ್ನು ಹೊಕ್ಕಿರುವರೆಂದು ಗೊತ್ತಾಗಿದೆ.

ಜಾವಾಮುತ್ತಿಗೆ:—

ಜಾವಾದಲ್ಲಿ ಜಪಾನರು ಇನ್ನೂ ಇಳಿದಿಲ್ಲ. ಆದರೆ ಸೌರಬಾಯ ಮೇಲೆ ವಿಮಾನ ಮುತ್ತಿಗೆಯು ನಡದೇ ಇದೆ. ಅನೇಕ ಶತ್ರು ಬಾಂಬುಗಳನ್ನಿಳಿಸಲಾಯಿತು. ಜಾವಾದಪೂರ್ವ ಭಾಗದಲ್ಲಿರುವ ಬಾಲ್ಟಿ ಎಂಬದ್ವೀಪಕ್ಕೆ ಜಪಾನರು ಇಂದಳಿದಿವಾರೆಂದು ತಿಳಿದು ಬಂದಿದೆ.

ಎಳ್ಳೆಣ್ಣೆ

ಅಂಬಾಟೆ ಸುಬ್ಬಣ್ಣ ಅಂಡ್ ಕಂಪನಿ,
ಸಾಮಲಕೋಟೆ.

ಇವರ A.S. ಬ್ರಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಗೋದಾವರಿ ನದಿ ಪ್ರದೇಶದ ಫಲವತ್ತಾದ ಭಾಗಗಳಲ್ಲಿ ಬೆಳೆದ ಎಳ್ಳನ್ನು ಸ್ವಚ್ಛ ನೀರಲ್ಲಿ ತೊಳೆದು, ಆ ಮೂಲಕ ಹೊಟ್ಟನ್ನು ತೆಗೆದು ಮರದಗಾಣಗಳಿಂದ ಶಾಸ್ತ್ರೀಯವಾಗಿ ತೆಗೆದ 100% ಪರಿಶುದ್ಧವಾದ ಎಳ್ಳೆಣ್ಣೆ ಎಲ್ಲಾ ವಿಧದ ಸೈಜುಗಳಲ್ಲೂ ದೊರೆಯುತ್ತದೆ. **A. S.** ಲೇಬಲನ್ನು ಗಮನಿಸಿ. ಕೊಳ್ಳಿರಿ.

ನೋಸಹೋಗಬೇಡಿರಿ

ದೊರೆಯುವ ಸ್ಥಳ:- 1.) ಎಂ. ಹುಶೇಂಜಿರಾವು.
ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ವಿ ಯಂ. ಗಿರಿ ಅಂಡ್ ಸನ್ಸ್.
ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ಮೂರದೃಷ್ಟಿಗೂ, ಕನ್ನಡಿಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂವಾಗಿಡಲು ಅನುವಾಗುವ ತಂಪು ಕನ್ನಡಿಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು(ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦	ಅಂಚೆ ವೆಚ್ಚ ಬೇರೆ
ಕನ್ನಡ ಪರೋಪಕಾರಪತ್ತಗಳು	೦—೯—೦	ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವವರಿಗೂ ಧಾರಾಳವಾದ ಕಮೀಶನ್
ಶಿವಾನುಭವ ಬೋಧೆ	೦—೮—೦	
ಸುಮತಿ ಶತಕ	೦—೯—೦	

ಕಾಲನ ಸುಬ್ಬಣ್ಣ, ಮರ್ಚೆಂಟು, ಬಳ್ಳಾರಿ.

BAND HINGOOL.

Aphrodisiac, impotency can be completly cured by its confirmed use of 40 days. Also it is efficacious for Rheumatism, Lumbago, Bronchitis, Asthma, Paralysis etc. Dose one to three grains daily Write for other particulars.

Agent:- **Calcutta Ayurvedic Pharmacy, Bellary.**

ಬಂಡ ಹಿಂಗೂಲ.

40 ದಿನದ ಸೇವನೆಯಿಂದ ಪುಷ್ಟಿಯೂ, ಧಾತು ಪುಷ್ಟಿಯೂ ಆಗಿ, ನಪುಂಸಕತ್ವವು ನಿವಾರಣೆಯಾಗುತ್ತದೆ. ಉಷ್ಣವಾಯು, ಟೊಂಕ ನೋವು, ಕೆಮ್ಮು-ಉಬ್ಬಸ-ಪಾರ್ಶ್ವವಾಯು ಇವುಗಳಿಗೆ ಅತ್ಯಂತ ಶ್ರೇಷ್ಠ ಮತ್ತು ಗುಣಕಾರಿ ಔಷಧ. ದಿನಕ್ಕೆ ಒಂದರಿಂದ ಮೂರು ಗ್ರೇನುಗಳು ತೆಗೆದುಕೊಳ್ಳಬೇಕು. ಇತರ ವಿವರಗಳಿಗೆ ಬರೆಯಿರಿ.

ಏಜಂಟು:—**ಕಲ್ಕತ್ತಾ ಆಯುರ್ವೇದಿಕ ಫಾರ್ಮಸಿ,**
ಬಳ್ಳಾರಿ

೧೯೪೨ನೇ ವರ್ಷದ ಪ್ರಪಂಚಭವಿಷ್ಯ

ಕನ್ನಡದಲ್ಲಿಯೂ, ತೆಲುಗಿನಲ್ಲಿಯೂ ಮುದ್ರಣವಾಗಿದೆ.

ಈ ಪುಸ್ತಕದಲ್ಲಿ ಯಾವಯಾವದೇಶಗಳು, ಯಾವಯಾವತಿಂಗಳಲ್ಲಿ, ಯಾವಯಾವ ಸ್ಥಿತಿಗೆ ಬರುವನೆಂಬುದು ಸ್ಪಷ್ಟವಾಗಿ ವಿವೇಚಿಸಲ್ಪಟ್ಟಿದೆ. ಈ ಚಿಕ್ಕಗ್ರಂಥವು ರಾಜ್ಯವೈದ್ಯ ಜೀವಾರಾಂ-ಕಾಳಿದಾಸ ಶಾಸ್ತ್ರಿ ಕಥಿಯಾವಾರ್, ಗೊಂಡಾಲ ಎಂಬವರಿಂದ ಇಂಗ್ಲೀಷ್‌ನಲ್ಲಿ ಬರೆಯಲ್ಪಟ್ಟು, "ವಿದ್ವಾನ್" ಕೆ ಯಂ ಕೆ ಶಾಸ್ತ್ರಿಗಳಿಂದ ಅನುವಾದಿಸಲ್ಪಟ್ಟಿದೆ. ಎಲ್ಲರೂ ಓದಿ ತಿಳಿದುಕೊಳ್ಳತಕ್ಕ ಮುಪತ್ಯ ವಿಷಯಗಳಿವೆ.

ಬೆಲೆ 0-4-0.

ಪುಸ್ತಕ - ಶಿಕ್ಷಣಸ್ಥಲ
ಯೂನಿಯನ್ ಅಂಡ್ ಬ್ರದರ್ಸ್, ಬಳ್ಳಾರಿ.

NAVA BHARAT BELLARY.

With which is incorporated Congress Bulletin
THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local	2—0—0
Moffusil	3—0—0

6 Months

Local	1—4—0
Moffusil	2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri _____

Printed at Vittal Press, Car Street Edited & Published by T. B Keshava Rao, Bellary

Reg. No. M. 3937 'ವಂದೇ ಮಾತರಂ' ೮ ಪುಟಗಳು.

THE ಪ್ರಭಾತ ಭಾರತ

ನವ ಸಂದೇಶ

ಉತ್ತಿಷ್ಠತ! ಜಾಗೃತ!! ಪ್ರಾಪ್ಯವರಾನ್ನಿ ಭೋಧತ.

ವರ್ಷ ೪ ಉಜ್ವಲ ದಾಸ್ಯೈಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೩೫ ಬಳ್ಳಾರಿ ಮಾರ್ಚ್ ೧೭ ನೇ ಮಂಗಳವಾರ ೧೯೪೨. ಟಿ. ಪಿ. ಕೇಶವರಾವ್

ರಾಯಲ ಸಿನಿಮಾ ಮಂದಿರದಲ್ಲಿ

★ ನಯಾ-ಸಂಸಾರ್. ★

ಬೇ ಡಿ ಕೆ.

ಹೇ ದೇವ! ನೀನೆನ್ನ ಜೀವನದ
ಕೊಡರೆಡರು ಕಷ್ಟಗಳ ಪರಿಹರಿಸಿ,
ದುಃಖವನು ತೊಲಗಿಸುತ, ಸುಖವನೀ
ದೆಂದು ನಾಂ ನಿನ್ನ ಬೇಡುವದಿಲ್ಲವಯ್ಯ;
ಅವುಗಳನು ಧೈರ್ಯದಿಂದೆದಿರ್ಗೊಟ್ಟು
ಎದುರಿಸುತ ಸಹಿಸುವಾ ಶಕ್ತಿಯನು
ಕರುಣಿಸೆನಗೆಂದೆನುತ. ದೈನ್ಯದಿಂ
ಪಾರ್ಥಿಸುವೆ ನಿನ್ನಡಿಯೊಳತಿ ಭಕ್ತಿಯಿಂದ.
ಜೀವನದ ರಣರಂಗಮೊಳಗೆನ್ನ
ಬೆಂಬಲಕೆ ಕೂಡಿರನೊದಗಿಸೆಂ
ದೆನುತ, ನಿನ್ನಡಿವಿಡಿದು ನಾಂ ಬೇಡಿ
ಕೊಳ್ಳಲಾರೆ; ಜೀವನದ ಹೋರಾಟದಲ್ಲಿ
ಹಿಂಜರಿಯದಂತೆನಗೆ ನೀನೊಲವಿ
ನಿಂದಾತ್ಮ ಶಕ್ತಿಯನು ಕೊಟ್ಟು, ಕೃಪೆ
ಗೈರಬೇಕೆಂದು ಪೆರಗೊಡ್ಡಿ, ಶಿರ
ಬಾಗಿ, ಬೇಡುವ ಚರಣ ತಲವಿ ಸಮ್ಮುರು
ವೆ.
ನಿನ ಬಯಸುತಿರುವ ಸುಖ ಸಂಪದನ
ನೀಡೆಂದು ನಾನಾಸೆಯಿಂದ ಬೇ
ಡುವದಿಲ್ಲ! ಕೊಡಲು ನಿನ್ನೊಳಗಿರುವು
ದೇನು! ಅದನೆಲ್ಲ ನಾಂ ಬಲ್ಲೆ ಗುರು
ದೇವ! ನೀನೆನಗೆ ಸನ್ಮತಿ ಇತ್ತು
ನೋಲು ಗೆಲವಿನೊಳೊಂದೆ ಕೆರದಿಂದ
ನಿನ್ನ ನಾಂ ನೆನವಂತೆ ಮಾಡೀಯೋ ಸ
ದಯಾ!!

(ಪಿ. ಶಂಕರನಾರಾಯಣರಾವ್)

ಉಗಾದಿ ಸಂಚಿಕೆ. ಚಿತ್ರಭಾನು ಸಂವತ್ಸರದಲ್ಲಿ ದಯಾಮಯನಾದ ಭಗವಂತನು ಎಲ್ಲರಿಗೂ ಸುಖಸಮೃದ್ಧಿಗಳನ್ನೀಯಲೆಂದೂ ಜಗತ್ತಿನಲ್ಲೇ ಶಾಂತಿಯು ವಿರಾಜಮಾನವಾಗಲೆಂದೂ ಕೋರಿಕೆ. ೦-೨-೦ ಆಣೆ

ಎಂಪೈರ್ ಆಫ್ ಇಂಡಿಯಾ

ಸ್ಥಾಪನೆ- ೧೯೯೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000, ರೂ.ಗಳಿಗೆಮೀರಿದೆ

ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಿಂದ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅನಕಾಶನಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ಏಮೆ ಮಾಡಿರಿ.

ಕೇಂದ್ರ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, **ಬೊಂಬಾಯಿ.**

ಬ್ರಾಂಚ್ ಕಚೇರಿ. **ವಿಕ್ಟ್ರಿಕ್ವೀನ್ಸ್‌ರೋಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.**



MYSORE STOVE

(Saves 50% Fuel)

Help yourself in these days of dire economic distress, by using Mysore Stove manufactured by Mysore Government at Hassan. Both coal & firewood can be used. Try & be convinced

T. Mareppa, Bellary.

ಮೈಸೂರು ಸ್ಟೌವ್ [ಅರ್ಧದಷ್ಟು ಕಟ್ಟಿಗೆ-ಯೂ-ಇದ್ದಲು ಉಳಿತಾಯ]

ಮೈಸೂರು ಸರ್ಕಾರದವರಿಂದ ಹಾಸನದಲ್ಲಿ ತಯಾರಿಸಲ್ಪಟ್ಟಿದೆ. ಈ ಅರ್ಥಿಕ ದುಸ್ಥಿತಿಯ ಕಾಲದಲ್ಲಿ ದುಬಾರಿ ಖರ್ಚನ್ನು ಉಳಿಸಿರಿ. ಈ ಕಬ್ಬಿಣದ ಬಲೆಯೊಂದು ನಿಮ್ಮ ಮನೆಯಲ್ಲಿದ್ದರೆ ನಿನುಗೆ ಕಟ್ಟಿಗೆ - ಯೂ - ಇದ್ದಲಿಯ ಉಳಿತಾಯವು ಈಗ ಬಳಸುವ ಅರ್ಧಪಾಗುವುದು. ನೀವು ಅದಕ್ಕೆ ಕೊಡುವ ಬೆಲೆಯು ಗಿಂತಿಂ ರಷ್ಟು ಹಣವು ಒಂದೆರಡು ವರ್ಷಗಳಲ್ಲಿಯೇ ದೊರೆಯುತ್ತದೆ. ಇಂದೇ ಕೊಳ್ಳಿರಿ. ನಂತರ ಪ್ರಚಾರಕ್ಕೆ ನೂಡಿಕೊಳ್ಳಿರಿ.

ತೋರಣಗಲ್ಲು ಮರೆಪ್ಪ,

ಕರ್ನಾಟಕ ಖಾದಿ ವಸ್ತ್ರಾಲಯ, ಲಕ್ಷ್ಮೀನಾರಾಯಣ ಬೀದಿ, ಬಳ್ಳಾರಿ

ಆಲೂರಿನ ಹರಿಜನ ವಿದ್ಯಾರ್ಥಿ ನಿಲಯ

ಎಲ್ಲರೂ ಸಹಾಯ ಒದಗಿಸಿರಿ.

ಶ್ರೀ ಡಿ. ಗೋವಿಂದದಾಸ್-ಎಂ.ಎಲ್-ಎ ರವರ ಫಲ ಸ್ವರೂಪವಾಗಿ ಗತಿಸಿದೆಯು ಜೂನ್ ತಿಂಗಳಲ್ಲಿ ಒಂದು ಚಿಕ್ಕ ಗುಡಿಸಲಲ್ಲಿ ೫-೬ ವಿದ್ಯಾರ್ಥಿಗಳಿಂದ ಹಾಸ್ಟೆಲ್ ಪ್ರಾರಂಭವಾಯಿತು. ಈ ೯ ವರ್ಷಗಳಲ್ಲಿ ಸಾರ್ವಜನಿಕರ ಸರಕಾರದ ಪ್ರೋತ್ಸಾಹದಿಂದ ಹಾಸ್ಟೆಲ್ ಅಭಿವೃದ್ಧಿಗೆ ಬರುತ್ತಲಿದೆ. ಹಾಸ್ಟೆಲನಲ್ಲಿ ೩೦ ಹುಡುಗರಿದ್ದಾರೆ. ಹಾಸ್ಟೆಲಿಗಾಗಿ ಸ್ವಂತ ಕಟ್ಟಡವು ತಯಾರಾಯಿತು, ಮಿಡಲಸ್ಕೂಲ್ ಹೆ ಮಾ. ಅದ ಶೀ ಟೀಕೂರು ಕೃಷ್ಣಮೂರ್ತಿಯವರು ತಮ್ಮ ಸಹೋಪಾಧ್ಯಾಯರೊಡನೆ ಹರಿಜನ ಬಾಲರನ್ನು ವಿದ್ಯಾವಿಷಯಗಳಲ್ಲೇ ಅಲ್ಲದೆ ಇತರ ಎಲ್ಲಾ ದೃಷ್ಟಿಗಳಿಂದಲೂ ಪ್ರಗತಿ ಮಾರ್ಗಕ್ಕೆ ತರಲುಸ್ತುತ್ಯಯತ್ನಗಳನ್ನು ಮಾಡುತ್ತಿರುವರು. ಹಾಸ್ಟೆಲು ಸ್ಥಾಪನಕಾಲದಿಂದ ಹರಿಜನಸೇವಕ ಸಂಘದ ಶಾಖಾ ಸಂಸ್ಥೆಯಾಗಿದೆ ಹಾಸ್ಟೆಲಿಗಿರುವ ಆಸ್ತಿಯೆಲ್ಲಾ ಹರಿಜನ ಸೇವಕ ಸಂಘಕ್ಕೆ ಸೇರಿದೆ. ನಮ್ಮ ಬೇಕ್ಕಗಳನ್ನು ಸಂಘದ ಮತ್ತು ಸರಕಾರದ ಅಡಿಟರುಗಳು ತನಿಖೆನಾಡುತ್ತಲಿರುವರು. ಇವುಗಳನ್ನು ವ್ರತಿವರ್ಷವೂ ಪ್ರಶಿಸ್ತಿಸುತ್ತಿರುವೆವು.

ಈಗ ಕೆಲ ವರ್ಷಗಳಿಂದ ಸರಕಾರದವರ ದ್ರವ್ಯ ಸಹಾಯವು ಬರುತ್ತಲಿದೆ, ಆದ ಸಾಕಷ್ಟಿರುವುದಿಲ್ಲ, ಸಾರ್ವಜನಿಕರ ಸಹಾಯವಿಲ್ಲದೆ ಹಾಸ್ಟೆಲ್ ನಡೆಯುವಂತೆಯೆ ಇಲ್ಲ, ಈ ಕಾರ್ಯವು ಪತಿತರನ್ನು ಉದ್ಧಾರ ಮಾಡುವ ಹಿಂದೂ ಧರ್ಮದ ಕಳಂಕವನ್ನು ತೊಳೆಯುವ ಪವಿತ್ರಕಾರ್ಯ ಇದಕ್ಕೂ, ರಾಜಕೀಯಕ್ಕೂ ಏನೂ ಸಂಬಂಧವಿಲ್ಲ, ಆ ಕಾರಣ ಮಹಾಜನರೆಲ್ಲಾ ಈ ಹಾಸ್ಟೆಲಿಗೆ ಧನ – ಧಾನ್ಯದಿಂದ ಸಹಾಯಮಾಡಲು ಕೋರುತ್ತೇನೆ,

ಡಿ. ವೇಣುಗೋಪಾಲಾಚಾರಿ,

ಬಿ. ಎ. ಬಿ. ಎಲ್

ಅಧ್ಯಕ್ಷ

ಯುದ್ಧಕಾಲದ

ನಿರುದ್ಯೋಗ ನಿವಾರಣೆ

ವಿತ್ತ ಜೀವಿತಗಳ ಸಂರಕ್ಷಣೆಯ ಅವಶ್ಯಕತೆ

ಲೇ:- ಡಾ. ನಾ. ಸು. ಹರ್ಡೀಕರ.

ಯುದ್ಧದ ಪರಿಣಾಮ

ಯುದ್ಧದ ಮೂಲಕ ದೇಶದಲ್ಲೆಲ್ಲ ಭಯವುಂಟಾಗಿದೆ. ಬಾಂಬುಗಳ ದಾಳಿ, ಪ್ರತ್ಯಕ್ಷ ಯುದ್ಧಗಳೇ ಮೊದಲಾದ ಘಟನೆಗಳಿಂದ ತಮ್ಮ ಪ್ರಾಣ ಆಸ್ತಿಗಳನ್ನು ಉಳಿಸಿಕೊಳ್ಳಲು ಜನರ ಸ್ಥಳಾಂತರಕ್ಕೆ ಪ್ರಾರಂಭವಾಗಿದೆ. ಕಲಕತ್ತೆ ನುಂಜಿಯ ಮದ್ರಾಸಗಳಿಂದಂತೂ ಈ ರೀತಿ ಜನರು ಬಹಳವಾಗಿ ಹೊರ ಹೊರಡಹತ್ತಿದ್ದಾರೆ. ಉಳಿದೆಡೆಗೆ ಯುದ್ಧದ ಒಳವು ಇನ್ನೂ ಪ್ರಾರಂಭವಾಗದ್ದರಿಂದ ಅಲ್ಲಿರುವವರು ಇದು ನರಕ ಕಾಲ್ದಗೆಯುಹುದರ ದರೂ ಅಂತಹ ಸ್ಥಿತಿಯು ಇಂದಿಲ್ಲ ನಾಳೆ ಬರಬಹುದೆಂದು ಊಹಿಸಿ ಅವಕ್ಕೆ ಸಂಬಂಧಪಟ್ಟ ಸಿದ್ಧತೆಯನ್ನು ಮಾಡಿ ಇಳಿಸ್ತಿದ್ದಾರೆ.

ಜನರ ಸ್ಥಳಾಂತರದ ಮೂಲಕ ಬೇರೆ ಬೇರೆ ಸ್ಥಳಗಳ ದಟ್ಟಣೆಯು ಬೆಳೆಯುತ್ತಿದೆ. ಬೆಳೆದ ಜನಸಂಖ್ಯೆಯ ಕಾರಣದಿಂದ ಆಯಾ ಸ್ಥಳಗಳಲ್ಲಿ ಜನರಿಗೆ ಕಾಳು ಕಡಿ ಮೊದಲಾದ ಜೀವನ ಸಾಮಗ್ರಿಗಳ ಪೂರೈಕೆಯು ಸಾಕಷ್ಟು ಆಗದಾಗಿದೆ. ಪೆಟ್ರೋಲು ಕಲ್ಲಿದ್ದಲಿಗಳಅಭಾವವಾಗಿದೆ. ರೇಲ್ವೆ ಗಾಡಿಗಳಿಗೆ ಯುದ್ಧದ ಸಂಬಂಧವಾದ ಕಾರ್ಯವು ಬಹಳವಾದುದು. ಇವೇ ಮೊದಲಾದ ಕಾರಣಗಳ ಮೂಲಕ ಗಿರಣಿಗಳೇ ಮುಂತಾದ ಔದ್ಯೋಗಿಕ ಸಂಸ್ಥೆಗಳಲ್ಲಿ ವಸ್ತುಗಳು ಉತ್ಪನ್ನವಾಗುವುದು, ಸುಸ್ತು ಉತ್ಪನ್ನವಾಗುವುದು ಹೊರಗೆ ಹೋಗುವುದು ದುಸ್ತರವಾದ್ದರಿಂದ ಅವು ತಮ್ಮ ಕಾರ್ಯವನ್ನು ಸ್ಥಗಿತಗೊಳಿಸುತ್ತಿವೆ.

ನಮ್ಮಲ್ಲಿ ಮೊದಲೇ ಹೆಚ್ಚು ಪ್ರಮಾಣದಲ್ಲಿದ್ದ ನಿರುದ್ಯೋಗತನವು ಇವರಿಂದ ಮೆಲ್ಲನೆ ಬೆಳೆಯಹತ್ತಿದೆ. ಇದೇ ಪರಿಸ್ಥಿತಿಯು ಮುಂದೆ ಹಾಗಿದಲ್ಲಿ ಈ ನಿರುದ್ಯೋಗತನವು ದೇಶವನ್ನು ಘೋರ ಗಂಡಾಂತರದಲ್ಲಿ ಒಯ್ದು ಒಗೆಯದೆ ಇರಲಾರದು.

ಸರಕಾರದ ಕರ್ತವ್ಯಚ್ಯುತಿ

ಇಂತಹ ಸ್ಥಿತಿಯು ಉತ್ಪನ್ನವಾಗದಂತೆ ನೋಡುವುದಕ್ಕಾಗಿ ಸರಕಾರದವರು ಇದುವರೆಗೆ ಏನನ್ನೂ ಮಾಡಿಲ್ಲ. ಮುಂದಾದರೂ ಮಾಡುವರೋ ಇಲ್ಲವೋ ಎಂಬುದನ್ನು ಹೇಳಲು ಬರುವಂತಿಲ್ಲ. ಮಿಂಚಿನ ವೇಗದ ಈಗಿನ ಕಾಲದಲ್ಲಿ ಜಪಾನರು ಮಾಡುತ್ತಿರುವ ವೇಗದಿಂದ ಅವರು ಕಾರ್ಯಮಾಡುತ್ತಿರುವುದನ್ನು ನೋಡಿದರೆ ಆಶ್ಚರ್ಯವಾಗುವುದು. ಇದರಿಂದ ಅವರು ಇಂದಿನ ಪರಿಸ್ಥಿತಿಯಲ್ಲಿ ಎಷ್ಟರಮಟ್ಟಿಗೆ ಮುಂದೆ ಸಾಗಬಹುದೆಂಬ ಪ್ರಶ್ನೆಯು ಜನರೆದುರಿಗೆ ಬಂದು ನಿಲ್ಲುತ್ತದೆ. ಇದುವರೆಗಿನ ಅನುಭವದಿಂದ ಹೇಳುವುದಾದರೆ ಅವರು ತಮ್ಮ ಮುಂದಿರುವ ಕಾರ್ಯವನ್ನು ಸಾಗಿಸಲು ದೃಢವಾಗಿದ್ದಾರೆಂದೇ ಅಭಿಪ್ರಾಯ ಪಡಬೇಕಾಗಿದೆ.

ಸದ್ಯದ ಯುದ್ಧದಲ್ಲಿ ಜಯವನ್ನು ದೊರಕಿಸಲು ಇಚ್ಛಿಸುವಂತಹ ಅವರು ಮಿಂಚಿನ ಸೇನೆಯೇ ಆದ ಚಟುವಟಿಕೆಗಳನ್ನು ತೋರಿಬೆ ಕಾಗಿತ್ತು. ಯುದ್ಧದ ಸಮಯದಲ್ಲಿ ಹಿಂದುಸ್ಥಾನದ ಜನರು ಎಂತಹ ಗಂಡಾಂತರಗಳನ್ನು ಎದುರಿಸಬೇಕಾಗುವದು ಮುತ್ತು ಯಾವ ಹಾನಿಗಳಿಗೆ ಗುರಿಯಾಗಬೇಕಾಗುವದು ಎಂಬ ಬಗ್ಗೆ ಅವರು ವಿಚಾರಿಸಬೇಕಾಗಿತ್ತಲ್ಲದೆ, ಬಂದ ಪರಿಸ್ಥಿತಿಯನ್ನು ಎದುರಿಸುವಂತಹ ಶಕ್ತಿಯನ್ನು ಅವರು ಜನರಲ್ಲಿ ಉತ್ಪನ್ನಮಾಡಬೇಕಾಗಿತ್ತು. ಇತ್ತಕಡೆಗೆ ದುರ್ಲಕ್ಷಮಾಡಿದ್ದರಿಂದ ಅವರು ಒಂದು ಅಗಾಧವಾದ ತಪ್ಪನ್ನು ಮಾಡಿರುವರೆಂದೇ ಹೇಳಬೇಕಾಗಿದೆ ಅವರ ಈ ತಪ್ಪಿಗಾಗಿ ಇಂದು ನಾವಿನ ದವಪೆಯಲ್ಲಿ ನಾವು ನುರಿಯಬೇಕಾಗಿದೆ.

ನಮ್ಮ ಕರ್ತವ್ಯ

ಕಾಯುವನನಿಗೆ ತಪ್ಪಿದರೆ ಕಟ್ಟುವವನಿಗೆ ತಪ್ಪೀತೇ? ಎಂಬ ನಾಣ್ಣುಡಿಯಂತೆ ಸರಕಾರದವರು ಈ ಸಂಬಂಧದಲ್ಲಿ ತಮ್ಮ ಕರ್ತವ್ಯಕ್ಕೆ ತಪ್ಪಿದರೆಂದು ಹೇಳುತ್ತ ನಾವು ಸುಮ್ಮನೆ ಕೂಡ್ರಲು ಎಲ್ಲಿ ಬಿಡುತ್ತದೆ? ನಾವು ಪೌರುಷದಿಂದ ಬಾಳಿ ಬದುಕಬೇಕಾದರೆ ಬರಬಹುದಾದ ವೈಕಾದಂತಹ ಕಷ್ಟನಷ್ಟಗಳನ್ನು ಎದುರಿಸಬೇಕಾಗುವದು. ನಿರುದ್ಯೋಗತನವು ಹೆಚ್ಚಿದಂತೆ ಮತ್ತು ಅದುಹಚ್ಚಿನದೇ ಆದರೆ ಅವನ್ನು ನಿವಾರಿಸಲು ಯತ್ನಿಸದೆ ನಮಗೆ ಗತ್ಯಂತರವಿಲ್ಲದಾಗಿದೆ

ನಿರುದ್ಯೋಗದ ಘೋರತೆ

ನಿರುದ್ಯೋಗದ ಸಮಸ್ಯೆಯು ಬಹು ಬಿಕ್ಕಟ್ಟಿನದಾಗಿದೆ. ಅದನ್ನು ಬಿಡಿಸಲು ನಮ್ಮ ದೇಶದಲ್ಲಿ ಶಾಂತವಾತಾವರಣದಲ್ಲಿ ಕೂಡ ಸಾಧ್ಯವಾಗಿಲ್ಲ. ನಿರುದ್ಯೋಗಿಗಳು ಉಂಟಾಗುವುದೆಂದರೆ ಅವರು ಸಮಾಜಕ್ಕೆ ಕಂಟಕ ಸ್ವರೂಪರೇ ಆಗುವರೆಂಬುದನ್ನು ಬೇರೆ ಹೇಳಬೇಕಾಗಿಲ್ಲ ಕೆಲಸವಿಲ್ಲದೆ ನಿರುದ್ಯೋಗಿಗಳಾದವರು. ಪ್ರತ್ಯಕ್ಷ ಯುದ್ಧದ ದಾಳಿಯ ಮೂಲಕ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡು ಹೊಟ್ಟಿಗಿಲ್ಲದೆ, ಶಿರುಗುವವರು ಹೀಗೆ ಎರಡು ತರಹದ ನಿರಾಶ್ರಿತ ಜನರು ಸಮಾಜದಿಂದ ಪೋಷಿಸಲ್ಪಡದಿದ್ದರೆ ಯಾರಿಗೂ ನಿಶ್ಚಿಂತೆಯಿಂದ ಜೀವಿಸಲು ಆಗಲಿಕ್ಕಿಲ್ಲ.

ನಿವಾರಣಾ ಯೋಜನೆ

ಪೋಷಣೆಯ ಅರ್ಥವು ಅನ್ನವನ್ನು ಕೊಡಬೇಕೆಂದು ಆಗಬಹುದು ಅದು ಸದ್ಯಕ್ಕೆ ನಮ್ಮ ಮುಂದಿರುವ ಪ್ರಶ್ನೆಯಲ್ಲ. ನಾವು ಈಗ ಆಲೋಚಿಸಬೇಕಾದ ವಿಷಯವೆಂದರೆ ನಿರುದ್ಯೋಗಿಗಳಿಗೆ ಹೊಸ ಉದ್ಯೋಗವನ್ನು ಒದಗಿಸಿ ಅವರ ಬದುಕಿನ ನಿರ್ವಾಹದ ಮಾರ್ಗ ಮಾಡಿಕೊಡುವದೇ ಆಗಿದೆ

ವೈಯಕ್ತಿಕವಾಗಿಯೂ ಈ ಕೆಲಸವು ಅಲ್ಪಮಟ್ಟಿಗೆ ಸಾಗಬಹುದಾಗಿದೆ. ಆದರೆ ಇದು ಶಿರ ಅಲ್ಪ ಪ್ರಮಾಣದಲ್ಲಿ ನಡೆಯುವ ಬಹುದಾದ ಕಾರ್ಯವಾಗಿದೆ. ಅದು ತಕ್ಕ ಪ್ರಮಾಣದಲ್ಲಿ ಸಾಗಬೇಕಾದರೆ ಮತ್ತು ಎಲ್ಲ ನಿರುದ್ಯೋಗಿಗಳಿಗೆ ಉದ್ಯೋಗವು ದೊರೆತು ಅವರಿಂದ ಸಮಾಜಕ್ಕೆ ಉಂಟಾಗಬಹುದಾದ ತೊಂದರೆಯು ತಪ್ಪಬೇಕಾದರೆ ಸರಕಾರ, ಲೋಕಲ ಬೋರ್ಡ್, ಮ್ಯುನಿಸಿಪಾಲಿಟಗಳು ಮತ್ತು ಜನತೆಯು ಇವರೆಲ್ಲರೂ ಮುಂದೆ ಬರುವುದು ಅವಶ್ಯವಾಗಿದೆ. ಇಂದು ಕಣ್ಣಿಗೆ ಕಾಣುತ್ತಿರುವ ಕೆಲಸಗಳನ್ನೆಲ್ಲವೇ ಯುದ್ಧದ ಮೂಲಕ ಉಂಟಾಗುವ ನಿರುದ್ಯೋಗಿಗಳಿಗೆ ಕೆಲ್ಸಗಳಿಗಾಗಿ ಈಗಾಗಲೇ ಕೆಲಸ ಮಾಡುತ್ತಿರುವವರು ಇದ್ದೇ ಇದ್ದಾರೆ ಅವೇ ಕೆಲಸಗಳನ್ನು ಮೇಲಿನ ಪರಿಸ್ಥಿತಿಯ ಮೂಲಕ ಉಂಟಾದ ನಿರುದ್ಯೋಗಿಗಳಿಗೆ ಕೊಡುವುದಾದರೆ ಮೊದಲು ಕೆಲಸಮಾಡುತ್ತಿದ್ದವರಿಗೆ ನಿರುದ್ಯೋಗದ ಸಿಡುಗನ್ನು ಪೆಚ್ಚಿದಹಾಗಾದೀತು. ಆದ್ದರಿಂದ ಸರ್ವತೊ ವಿಶೇಷತಃ ಆಯಾಪಟ್ಟಣದ ಮ್ಯುನಿಸಿಪಾಲಿಟಗಳು ಮತ್ತು ಆಯಾ ಜಿಲ್ಲೆಯ ಲೂ ಕಲ ಬೋರ್ಡುಗಳುಕೂಡಲೆ ಸರಕಾರದ ಸಹಾಯವನ್ನು ಪಡೆದು ಹೊಸ ಹೊಸ ಉದ್ಯೋಗಗಳನ್ನು ಈ ಪ್ರಸಂಗಕ್ಕಾಗಿಯೇ ಕಲ್ಪಿಸಿ ಕೆಲವು ಹೊಟ್ಟೆಗಾಗಿ ಆಗಿ ಬಹುದಾದ ಸುಲಿಗೆಗಳನ್ನು ತಪ್ಪಿಸುವುದು ಅನಿವಾರ್ಯವಾಗಿದೆ.

ಉ ಗಾ ದಿ - ಸಂ ಚಿ ಕೆ.

ಅಚ್ಚುರಾಷ್ಟ್ರಗಳ ಪ್ರಾಬಲ್ಯಬೆಳೆದುದೇಕೆ?

ಮಿತ್ರರಾಷ್ಟ್ರಗಳ ಧೋರಣವೇ ಕಾರಣವು.

ಇಂದಿನ ಯುದ್ಧಾರಂಭದ ಬೀಜಗಳು. ವರ್ಸಾಯ ಒಪ್ಪಂದದಲ್ಲಿಯೇ ಹೇಗೆ ಬಿತ್ತಲ್ಪಟ್ಟವೆಂಬುದನ್ನು ಆ ಒಪ್ಪಂದದ ಮುಖ್ಯ ಕಲಮುಗಳನ್ನೂ ಅವುಗಳ ಉಗ್ರತೆಯನ್ನೂ ಅದರಿಂದುಟಾದ ಜರ್ಮನರ ಮನಸ್ಸಿನಲ್ಲಿಯ ಪ್ರತಿಕ್ರಿಯೆಯನ್ನೂ ವಿವರಿಸುವೆವು. ವರ್ಸೆಲ್ಸ ಒಪ್ಪಂದದಲ್ಲಿ ಆ ಗಿನ ಫ್ರೆಂಚ ಮುಖ್ಯ ಪ್ರಧಾನರಾದ ಕ್ಲೆಮೆಂಸೋ ಇವರದೇ ಮೇಲುಗೈಯಾಗಿತ್ತು. ಅನ್ಯರು ಅಷ್ಟು ಉಗ್ರ ಕಲಮುಗಳು ಬೇಡವೆಂದು ಹೇಳಿದರೂ ಅವರೇ ಕೊನೆತನಕ ತಮ್ಮ ಹಟಹಿಡಿದು ಅದನ್ನು ಜರ್ಮನಿಯ ಮೇಲೆ ಒತ್ತಾಯವಾಗಿ ಹೇರಿದರು. ಕೆಲಕಾಲ ಜರ್ಮನಿಯು ನಿಬಂಧನೆಗಳನ್ನು ವಾಲಿಸುವ ಮತ್ತು ಯುದ್ಧ ಹಾನಿಯನ್ನು ತುಂಬಿ ಕೊಡುವ ಪ್ರಯತ್ನ ಮಾಡಿತು. ಆದರೆ ಮುಂದೆ ಜರ್ಮನರಿಗಿಂತ ರಶಿಯದ ರಾಜಕೀಯ ತತ್ವಜ್ಞಾನವೇ ಬ್ರಿಟಿಷರಿಗೆ ಘೋರವೆಂದು ಅನಿಸಿದ್ದರಿಂದ ರಶಿಯಕ್ಕೆ ಜರ್ಮನಿಯ ಸದೈವ ಹೆದರಿಕೆಯಿರಬೇಕೆಂಬ ಉದ್ದೇಶದಿಂದ ಬ್ರಿಟನ್ನವು ಜರ್ಮನಿಯನ್ನು ಸಡಲು ಬಿಟ್ಟಿತು. ಅಂದಿನಿಂದ ಜರ್ಮನಿಯು ವರ್ಸೆಲ್ಸ ಒಪ್ಪಂದದ ಒಂದೊಂದು ಕಲಮನ್ನು ಕ್ರಮೇಣ ಮುರಿಯುತ್ತ ಬಂತು. ಫ್ರಾನ್ಸವು ಮಾತ್ರ ಹಲವು ವರುಷಗಳ ವರೆಗೆ ಜರ್ಮನಿಯನ್ನು ಬೆದರಿಸಲೂ ಒಪ್ಪಂದದ ಕಲಮುಗಳನ್ನು ಜರ್ಮನಿಯು ವಾಲಿಸುವಂತೆ ಮಾಡಲೂ ಯತ್ನಿಸಿತು.

ಜರ್ಮನಿಯಲ್ಲಿ ಗಾಂಧೀ ದಿನ

೧೯೨೩ ಜನವರಿಯಲ್ಲಿ ಜರ್ಮನಿಯಿಂದ ಬರಬೇಕಾದ ಹಾನಿತುಂಬಿ ಕೊಡುವ ಹಣ ಬಾರದ್ದರಿಂದ ಫ್ರೆಂಚರು ಜರ್ಮನರನ್ನು ಬೆದರಿಸಲು ತಮ್ಮ ಸೇನೆಯನ್ನು ಜರ್ಮನ ಭೂಮಿಯ ಮೇಲೆ ಒಯ್ದರು. ಆದರೆ ಆಗ ಅಸಮರ್ಥರಾದ ಜರ್ಮನರು ಆದದ್ದಾಗಲಿ ಫ್ರೆಂಚರು ನನ್ನನ್ನು ಕೊಂದರೂ ಅಡ್ಡಿಯಿಲ್ಲ. ನಾವು ಅವರನ್ನು ಎದುರಿಸದೆ ಸ್ವಸ್ಥರಾಗಿ ಕುಳಿತುಕೊಳ್ಳುವೆವು. ಅವರ ಕೂಡ ಅಸಹಕಾರವನ್ನಾಡುವೆವು ಎಂದು ಹೇಳಿ ನಿಜವಾಗಿ ಗಾಂಧೀಜಿಯವರು ಹಿಂದೂಸ್ಥಾನಕ್ಕೆ ಅಗತಾನೇ ಕಲಿಸಿದ್ದ ಪಾಠವನ್ನು ಜರ್ಮನರು ಕಾರ್ಯಕಾರೀ ನಾಮಿದರು. ಹಲವು ತಿಂಗಳುಗಳವರೆಗೆ ಫ್ರೆಂಚ ಸೈನಿಕರು ತಳವೂರಿ ತಮ್ಮ ಖರ್ಚು ತಾವೇ ಮಾಡಿಕೊಂಡು ಮುಂದೇನಾಗಬಹುದೆಂಬುದನ್ನು ನೋಡುತ್ತ ಕಾಲಕಳೆದರು. ಜರ್ಮನಿಯನ್ನು ನಿಜವಾಗಿ ಆಕ್ರಮಿಸಿ ತನ್ನ ಗೆಂಬಲದಲ್ಲಿ ಹಾಕಿಕೊಳ್ಳಲು ಮಾರ್ಗವಿರಲಿಲ್ಲ. ಶಸ್ತ್ರರಹಿತ ಅಸಹಕಾರ ಮಾಡುವ ಜರ್ಮನರ ಮೇಲೆ ಖಡ್ಗವನ್ನೆತ್ತುವ ಬಗೆಯೂ ಉಳಿಯಲಿಲ್ಲ. ರಾಷ್ಟ್ರ ಸಂಘದ ಅನ್ಯಸದಸ್ಯರು ಇದರಲ್ಲಿ ಫ್ರೆಂಚರಿಗೆ ಏನೂ ಸಹಾಯ ಮಾಡದ್ದರಿಂದ ಈ ಪ್ರಶ್ನೆಯು ಕೆಲತಿಂಗಳವರೆಗೆ ಹಾಗೇ ನೆನೆಗುದಿಗೆ ಬಿದ್ದಿತು. ಕೊನೆಗೆ ಎರಡೂ ಪಕ್ಷದವರು ಬೇಸರಪಟ್ಟು ಹಾವೇರೀ ನ್ಯಾಯಮಾಡಿಕೊಂಡತು. ಆದಷ್ಟು ಬರಲಿ. ಒತ್ತಾಯವಿಲ್ಲವೆಂದು ಫ್ರೆಂಚರು ಅಂದರು. ಆದಷ್ಟು ಕೊಡುತ್ತೇವೆಂದು ಸ್ವಲ್ಪ ಕೊಟ್ಟಂತೆ ನೂಡಿ ಜರ್ಮನರು ಆ ಪ್ರಸಂಗದಿಂದ ಪಾರಾದರು. ಗಾಂಧೀಜಿಯವರ ಅಸಹಕಾರ ಸಾತ ಈವರೆ ಜರ್ಮನರಿಗೂ ಅಂದು ಉಪಯುಕ್ತವಾಯಿತೆಂದು ಹಲವು ಜರ್ಮನರೇ ಆಗೊಪ್ಪಿಕೊಂಡರು. ಆ ಪ್ರಸಂಗದ ಸ್ಮರಣಾರ್ಥವಾಗಿ ಆ ವರುಷ ಒಂದು ಗಾಂಧೀ ದಿನವೆಂದು ಜರ್ಮನಿಯಲ್ಲಿ ಕೆಲವರು ಆಚರಿಸಿದ್ದುಂಟು. ಆಗ ಗಾಂಧೀಜಿಯವರು ಮಾತ್ರ ತಮ್ಮ ೬ ವರ್ಷದ ಶಿಕ್ಷೆಯನ್ನನುಭೋಗಿಸುತ್ತ ಎರವಾಡದಲ್ಲಿದ್ದರು.

ಮುಂದಿನ ಸಿದ್ಧತೆ

ಈ ರೀತಿ ಒಪ್ಪಂದದ ಒಂದೊಂದು ಕಲಮನ್ನು ಮುರಿಯಬಾರಂಭಿಸಿದಾಗಲೆ ಹಿಟ್ಲರನ ನಾಯಿೀಪಕ್ಷದ ಸ್ಥಾಪನೆಯಾಯಿತು. ಹಿಟ್ಲರನು ನಾಯಿೀಪಕ್ಷದ ಏಳಿಗೆ ಸಭಾಸದನು. ಅನಂತರ ವಕ್ಷಕ್ಕೆ ಸಾಮರ್ಥ್ಯ ಬಂತು. ಸ್ವಲ್ಪೇ ಕಾಲದಲ್ಲಿ ಲಕ್ಷಾಸುಲಕ್ಷ ಸಭಾಸದರಾದರು. ೧೯೩೩ ರಲ್ಲಿ ಚಾನ್ಸಲರಸಾಗುವವರೆಗಾಗಿ ಹಿಟ್ಲರನು ತನ್ನ ಪಕ್ಷವನ್ನು ಅತ್ಯಂತ ಬಲಗೊಳಿಸಿದನು. ಸಾಕಷ್ಟು ಧನ ಸಂಗ್ರಹವಾಯಿತು. ನುಂಗುವ ಕಾರ್ಯಕ್ಕೆ ಅನುಕೂಲವಿದ್ದ ಪ್ರಚಾರ ನಡೆಯಿತು, ಯೋಜನೆಗಳಾದವು. ತರುಣರ ಸಂಘಟನೆ, ರಾಷ್ಟ್ರದ ಸೈನೀಕೀಕರಣ ಶಸ್ತ್ರಾಸ್ತ್ರಗಳ ಉತ್ಪತ್ತಿ ಮೊದಲಾದವುಗಳ ವಿಚಾರವು ಈ ಪೂರ್ವದಲ್ಲಿಯೇ ನಡೆಯಿತು. ಇವೆಲ್ಲ ಸಿದ್ಧವಿರುವದರಿಂದ ಅಧಿಕಾರಾರೂಢವಾದ ಬಳಿಕ ೩-೪ ವರ್ಷಗಳಲ್ಲಿಯೇ ಹಿಟ್ಲರನು ಜರ್ಮನಿಯನ್ನು ಸರ್ವಥಾ ಬಲಶಾಲಿಯನ್ನಾಗಿ ಮಾಡಲು ಸಮರ್ಥನಾದನು. ಇದನ್ನೆಲ್ಲ ನೋಡುತ್ತಿದ್ದರೂ ಮೇಲೆ ಹೇಳಿದಂತೆ ಇಂಗ್ಲಂಡವು ಸ್ವಸ್ಥಕುಳಿತಿದ್ದರಿಂದ ಜರ್ಮನಿಗೆ ಯಾರ ಆತಂಕವು ಉಳಿಯಲಿಲ್ಲ. ಕೊನೆಗೆ ರ್ಹ್ಯಾನಲಂಡನ್ನು ಸಸೈನ್ಯ ಪ್ರವೇಶಿಸಿ ಕೊನೆಯದಾದ ವರ್ಸೆಲ್ಸ ಕಲಮನ್ನು ೧೯೩೬ ರಲ್ಲಿ ಮುರಿದುಬಿಟ್ಟನು. ಮುಂದೆ ಆಸ್ಟ್ರಿಯಾ, ಝೆಕೊಸ್ಲೊವೀಕಿಯಾ ಮೊದಲಾದ ರಾಷ್ಟ್ರಗಳು ರಕ್ತದ ಒಂದು ಹನಿಯನ್ನು ಸುರಿಸದೆ ಹೇಗೆ ಅವನ ಕೈವಶವಾದವೆಂಬುದನ್ನು ಕೋರಿಸಿಕೊಟ್ಟು ವ್ಯಾಖ್ಯಾತರು ಪೋಲೆಂಡ ಯುದ್ಧಾರಂಭದವರೆಗೆ ಜರ್ಮನಿಯು ಮುತ್ಸದ್ದಿಯ ಬಲಗೊಳ್ಳುತ್ತಹೋಗಲು ಮಿತ್ರರಾಷ್ಟ್ರಗಳ ಧೋರಣೆ ಹೇಗೆ ಕಾರಣವಾಯಿತೆಂಬುದನ್ನು ವಿವರಿಸಿದರು. ಇಂಗ್ಲಂಡವು ಯುದ್ಧವನ್ನು ತಪ್ಪಿಸಲು ಆದಷ್ಟು ಶ್ರಮಪಟ್ಟಿತು. ಯುದ್ಧಾರಂಭದ ಐದೇ ದಿವಸ ಪೂರ್ವದಲ್ಲಿ ಅಂದರೆ ೨೫-೮-೩೯ ನೆಯ ದಿನಸ ಚೇಂಬರಲೀನರು ನೆವಿಲ್ ಹೆಂಡರಸನ್‌ರ ಮುಖಾಂತರ ಹಿಟ್ಲರನಿಗೆ ಸಾಮ್ರಾಜ್ಯ ಬೆಳಿಸುವ ದುರಾಶೆ ಬಿಡಲು ಹೇಳಿ ಕಳುಹಿಸಿದರು. ಅದಕ್ಕೆ ಹಿಟ್ಲರನು 'ಬ್ರಿಟಿಶರ ೪೫ ದಶಲಕ್ಷ ಚದುರ ಮೈಲು ಸಾಮ್ರಾಜ್ಯ ವಿದ್ದು ಜರ್ಮನಿಯದು ಕೇವಲ ೬ ಲಕ್ಷ ವಿರುವಾಗ ಸಾಮ್ರಾಜ್ಯದಾಶೆ ಯಾರಿಗಿದೆಂಬುದನ್ನು ಚೇಂಬರಲೀನರಿಗೇ ಕೇಳಿರಿ' ಎಂದು ಹೇಳಿಕಳಿಸಿದುದು ಗಮನಾರ್ಹವಿದೆ. ಈ ಪರಿ ಮಿತ್ರರಾಷ್ಟ್ರಗಳ ಅದರಲ್ಲಿಯೂ ಬ್ರಿಟನದ ಧೋರಣವೇ ಜರ್ಮನಿಯನ್ನು ಪ್ರಬಲಗೊಳಿಸಿತೆನ್ನಬಹುದಲ್ಲವೇ? ಸಕಾಲಕ್ಕೆ ಶಾಸನವಾಗಿದ್ದರೆ ಜರ್ಮನಿಯು ತಲೆ ಮೇಲೆ ನೂಪುತ್ತಿರಲಿಲ್ಲ.

ಮುಸೊಲೊನಿಯ ಪ್ರಾಬಲ್ಯ

ಕಳೆದ ಮಹಾಯುದ್ಧದಲ್ಲಿ ಇಟಲಿಯು ಮಿತ್ರರಾಷ್ಟ್ರವಾಗಿದ್ದರೂ ಯುದ್ಧದ ತರುವಾಯ ಅನೇಕ್ಷಿಸಿದಷ್ಟು ತನಗೆ ಲಾಭವಾಗಲಿಲ್ಲವೆಂದು ೧೯೨೦ ರಿಂದ ಇಟಲಿಯು ಸದಾ ಅಸಂತುಷ್ಟ ಉಳಿಯಿತು. ೧೯೨೨ ರಲ್ಲಿ ಮುಸಲೋನಿಯೇ

(ತಿರುವೇ ಪುಟ ನೋಡಿರಿ.)

೧೯೪೧ ರಲ್ಲಿ ಚಿತ್ರಪಟ ನಿರ್ಮಾಣ.

೧೯೪೧ ನೇ ಇಸ್ವಿಯಲ್ಲಿ ಹಿಂದುಸ್ತಾನದಲ್ಲಿ ಸಿನೇಮಾ ವ್ಯವಸಾಯದ ಪರಿಸ್ಥಿತಿಯು ಅಷ್ಟೊಂದು ಸಂತೋಷ ಪ್ರದವಾಗಿರುವದಿಲ್ಲ. ೧೯೪೧ ರಲ್ಲಿ ೧೬೨ ಸಿನೇಮಾಗಳು ಸಿದ್ಧವಾಗಿದ್ದರೆ ೧೯೪೧ ರಲ್ಲಿ ೧೩೭ ಕ್ಕಿಂತ ಹೆಚ್ಚು ಸಿನೇಮಾಗಳು ಸಿದ್ಧವಾಗಲಿಲ್ಲ; ಎಂದರೆ ೨೫ ಕಡಿಮೆ ಚಿತ್ರಪಟಗಳು ಈ ವರ್ಷ ಸಿದ್ಧವಾದವು. ೧೯೩೬ ರಿಂದಲೆ ಸುರುವಾದ ಈ ಇಳಿಕೆಯು ೧೯೪೧ ರವರಿಗೆ ಹಾಗೆಯೇ ನಡೆದು ಆ ವರ್ಷ ಚಿತ್ರಪಟಗಳ ಸಂಖ್ಯೆ ೧೦೦ಕ್ಕೆ ೧೪ ರಷ್ಟು ಕಡಮೆಯಾಯಿತು. ಆದರೆ ೧೯೪೧ ರಲ್ಲಿ ಜಗತ್ತಿನಲ್ಲಿ ಯುದ್ಧ ಸುರುವಾಗಿದ್ದರೂ ಸಿನೇಮಾ ಸೃಷ್ಟಿಯಲ್ಲಿ ಪ್ರಗತಿಯಾಗಿ ೧೦೦ ಕ್ಕೆ ೪ ರಷ್ಟು ಹೆಚ್ಚು ಚಿತ್ರಪಟಗಳು ಸಿದ್ಧವಾದವು. ಆದರೆ ಈ ಹೆಚ್ಚಳವು ಕೃತ್ರಿಮ ವಿದ್ವಿತೀಯ ಬುದ್ಧಿ ಮರುವರ್ಷದ ಅಂಕಿಗಳನ್ನು ನೋಡಿದರೆ ಗೊತ್ತಾಗುವದು. ೧೯೪೧ ರಲ್ಲಿ ೧೯೪೨ ರಲ್ಲಿಗಿಂತ ೧೦೦ ಕ್ಕೆ ೨೧ ರಷ್ಟು ಕಡಮೆ ಚಿತ್ರಪಟಗಳು ಸಿದ್ಧವಾದವೆಂಬದನ್ನು ನೋಡಿದರೆ ೧೯೪೧ ರಲ್ಲಿಯ ಅಂಕಿಯು ಕೃತ್ರಿಮದಾಗಿ ತ್ತೆಂಬುದು ಗೊತ್ತಾಗುವದು. ಈ ವರ್ಷವಂತೂ ಹಿಂದುಸ್ತಾನದ ಬಾಗಿಲಿನಲ್ಲಿ ಯುದ್ಧ ನಡೆದದ್ದರಿಂದ ಸಿನೇಮಾ ಸೃಷ್ಟಿಯು ಮತ್ತಷ್ಟು ಇಳಿತರ ಕ್ಕೆ ಬೀಳುವದೆಂಬುದು ನಿಶ್ಚಿತ.

೧೯೪೧ ರಲ್ಲಿ ಹಿಂದೀ ಚಿತ್ರಪಟಗಳು ೧೦೦ಕ್ಕೆ ೫೬ ರಷ್ಟು ಕಡಿಮೆ ತಯಾರಾದವೆಂಬದನ್ನು ಲಕ್ಷಿಸಿದರೆ ಮತ್ತಷ್ಟು ಆಶ್ಚರ್ಯವೆನಿಸುವದು. ಹಿಂದುಸ್ತಾನದಲ್ಲಿ ಎಲ್ಲ ಭಾಷೆಗಳಿಗಿಂತ ಹಿಂದಿ ತಿಳಿಯುವ ಹೆಚ್ಚು ಜನರಿರುವರು. ಹಿಂದೀ ಚಿತ್ರಪಟಗಳಿಗೆ ಈ ಬಗೆಯ ದುರ್ಗತಿಯುಂಟಾದುದು ನುತ್ತಷ್ಟು ಆಶ್ಚರ್ಯಕರ. ಇದಲ್ಲದೆ ಹಿಂದೀ ಸಿನೇಮಾಗಳೇ ಹೆಚ್ಚು ಯಶಸ್ವಿಯಾಗಿ ಲೋಕಪ್ರಿಯವಾಗಿವೆಂಬದು ಸರ್ವಶ್ರುತ. ಹೀಗಿದ್ದರೂ ಹಿಂದೀ ಚಿತ್ರಪಟಗಳಿಗೆ ಈ ಬಗೆಯ ದುರ್ಗತಿ ಏಕೆ ವ್ಯಾಪ್ತವಾಯಿತೋ ಇಷ್ಟು ಕಡಮೆ ಹಿಂದೀ ಚಿತ್ರಪಟಗಳು ಏಕೆ ಈ ವರ್ಷ ಸಿದ್ಧವಾದವೋ ತಿಳಿಯದಂತಾಗಿದೆ. ಅದೇ ವರ್ಷ ಹಿಂದೀ ಚಿತ್ರಪಟಕ್ಕೆ ದೊರೆತ ಮರ್ಯಾದೆ ಗೌರವ ಮೊದಲಾದ್ದನ್ನು ಬೇರೆ ಯಾವ ಭಾಷೆಯ ಚಿತ್ರಪಟಗಳೂ ಸಂಪಾದಿಸಿಲ್ಲ ನೆಂಬುದನ್ನೂ ನೋಡಬಹುದು ಹೀಗಿದ್ದರೂ ಒಟ್ಟು ಚಿತ್ರಪಟ ನಿರ್ಮಾಣದಲ್ಲಿ ಹಿಂದಿಗೆ ಇಷ್ಟೊಂದು ಕಡಮೆದೆರ್ಜೆ ಸಿಕ್ಕಿದ್ದು ಒಡೆಯುಲಾರದ ಒಗಟದಂತಿದೆ! ಆದರೂ ಎಲ್ಲ ದೃಷ್ಟಿಯಿಂದ ವಿಚಾರ ಮಾಡಿದರೆ ಹಿಂದಿ ಚಿತ್ರಪಟ ಹೊರಡಿಸುವದೇ ಲಾಭದಾಯಕವೆಂದು ಚಿತ್ರಪಟ ನಿರ್ಮಾಣಕರಿಗೆ ಹೊಳೆಯದಿರದು. ಹಿಂದುಸ್ತಾನದಲ್ಲಿ ಸಿನೆಮಾ ವ್ಯವಸಾಯದ ಉನ್ನತಿಯಾಗಬೇಕಾದರೆ ಹಿಂದೀ ಚಿತ್ರಪಟಗಳು ಜಾಸ್ತಿಗ ಬೇಕೆಂದು ನಿರ್ವಿವಾದವಾಗಿದೆ.

ಆಯಾ ದೇಶಭಾಷೆಗಳಲ್ಲಿ ಮತ್ತು ಹಿಂದಿಯಲ್ಲಿ ೧೯೩೬ ರಿಂದ ೪೧ ರವರಿಗೆ ತಯಾರಾದ ಚಿತ್ರಪಟಗಳನ್ನು ನೋಡುವಾ. ೧೯೩೬ರಲ್ಲಿ ಎಲ್ಲ ಭಾಷೆಗಳಲ್ಲಿ ಕೂಡಿ ೮೨ ಚಿತ್ರಪಟ ತಯಾರಾದರೆ ಕೇವಲ ಹಿಂದಿಯಲ್ಲಿ ೯೦ ಪಟಗಳು; ೧೯೩೭ ರಲ್ಲಿ ಇತರ ಭಾಷೆಗಳಲ್ಲಿ ೭೬ ಸಿದ್ಧವಾದರೆ ಹಿಂದಿಯಲ್ಲಿ ೯೦, ೧೯೩೮ ರಲ್ಲಿ ಇತರ ಭಾಷೆಗಳಲ್ಲಿ ೪೬ ಚಿತ್ರಪಟ ಸಿದ್ಧವಾದರೆ ಹಿಂದಿಯಲ್ಲಿ ೭೭ ಪಟಗಳು ಸಿದ್ಧವಾದವು ಮುಂದಿನ ಮೂರು ವರ್ಷಗಳಲ್ಲಿ ಆಯಾ ಭಾಷೆಗಳಲ್ಲಿ ತಯಾರಾದ ಚಿತ್ರಪಟಗಳನ್ನು ನೋಡುವಾ.

ಭಾಷೆ	೧೯೩೯	೧೯೪೦	೧೯೪೧
ತಮಿಳು	೨೪	೩೫	೩೦
ಬಂಗಾಲಿ	೧೩	೧೪	೨೦
ತೆಲಗು	೧೫	೧೨	೧೩
ಮರಾಠಿ	೭	೧೦	೧೦
ಪಂಜಾಬಿ	೭	೪	೪
ಉರ್ದು	—	೧	—
ಮಲಯಾಳಂ	—	೧	೧
ಗುಜರಾಥಿ	೧	—	೧
ಇಂಗ್ಲೀಶ	೧	—	೧
ಕನ್ನಡ	—	—	೨
ಹಿಂದಿ	೭೬	೭೭	೫೧

೧೯೩೯ ರಿಂದ ಬಂಗಾಲಿ ಚಿತ್ರಪಟಗಳು ಸ್ವಲ್ಪ ಹೆಚ್ಚು ಚಟುವಟಿಕೆಗಳನ್ನು ತೋರುತ್ತಿದ್ದರೂ ಅದರ ಪೇಟೆ ದಕ್ಷಿಣ ಹಿಂದುಸ್ತಾನದಲ್ಲಿಯ ಪೇಟೆಗಿಂತ ಹೆಚ್ಚು ವಿಸ್ತಾರವಿದ್ದರೂ ಬಂಗಾಲಿ ಚಿತ್ರಪಟಗಳ ವ್ಯವಸಾಯದ ಪರಿಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲ. ಮರಾಠಿ ಚಿತ್ರಪಟ ವ್ಯವಸಾಯದ ಸ್ಥಿತಿಯೂ ಅಷ್ಟೊಂದು ಚೆನ್ನಾಗಿಲ್ಲ. ಈ ಚಿತ್ರಪಟಗಳಿಗೆ ನಿರ್ಮಾಣಕರು ಹೆಚ್ಚು ಜನರಿಲ್ಲದ್ದರಿಂದ ಇದ್ದ ಒಬ್ಬಿಬ್ಬರು ಹಿಂದಿ ಚಿತ್ರಪಟ ವ್ಯವಸಾಯದಲ್ಲಿ ಪ್ರಾರಂಭಕ್ಕಿದ್ದವರಷ್ಟು ತರುವೇತ ಹೊಂದಿದವರಿದ್ದುದರಿಂದ ಚಿತ್ರಪಟಗಳೂ ಅಷ್ಟೊಂದು ಪ್ರಗತಿ ಹೊಂದಿರುವದಿಲ್ಲ.

ಪ್ರಾಂತಿಕ ಭಾಷೆಗಳ ಸಿಲ್ಮುಗಳನ್ನು ಪ್ರದರ್ಶಿಸುವವರು ಸಾಕಷ್ಟು ಜನರಿಲ್ಲದ್ದಕ್ಕಾಗಿ ಪ್ರಾಂತೀಯ ಭಾಷೆಗಳ ಚಿತ್ರಪಟಗಳು ಅಷ್ಟೊಂದು ಮುಂದುವರಿಯವದಿಲ್ಲೆಂದು ಹೇಳುವಲ್ಲಿ ಅರ್ಥವಿಲ್ಲ. ನಿಜವಾಗಿಯೂ ಸಿನೇಮಾ ವ್ಯವಸಾಯದಲ್ಲಿ ಪ್ರಗತಿಯಾಗಬೇಕಾದರೆ ಪ್ರಾಂತೀಯ ಭಾಷೆಗಳಲ್ಲಿ ಚಿತ್ರಪಟಗಳನ್ನು ತಯಾರಿಸುವವರು ಅವುಗಳ ಹಿಂದೀಪಟಿಗಳನ್ನೂ ಸಿದ್ಧಪಡಿಸಬೇಕಾದುದು ಅತ್ಯವಶ್ಯ. ರಶಿಯದಲ್ಲಿ ವಾಕ್ಪಟಗಳು ಹೆಚ್ಚಾಗಿ ಸಿದ್ಧವಾಗುತ್ತಿದ್ದರೂ ಮೂಕ ಚಿತ್ರಪಟಗಳೂ ಹೆಚ್ಚಾಗಿ ಸಿದ್ಧವಾಗುತ್ತಿರುವವು. ಮೂಕ ಚಿತ್ರಪಟಗಳನ್ನು ತಯಾರ ಮಾಡುವದರಿಂದ ಖರ್ಚು ಕಡಮೆ ನೆಚ್ಚಾಗುವದು. ಆದರೆ ಉತ್ಪನ್ನ ಮಾತ್ರ ವಾಕ್ಪಟಗಳಷ್ಟೇ ಬರುವದು. ಬೇರೆ ಬೇರೆ ಭಾಷೆಗಳಲ್ಲಿ ಈ ಮೂಕ ಪಟಗಳ ಸ್ಥೇ ವಾಕ್ಪಟಗಳನ್ನಾಗಿ ಪರಿವರ್ತಿಸಿಕೊಳ್ಳಬಹುದು. ಇದಲ್ಲದೆ ಯಾವದೇ ಭಾಷೆಯಲ್ಲಿಯ ವಾಕ್ಚಾಟವನ್ನು ಬೇರೆ ಪ್ರಾಂತೀಯ ಭಾಷೆಯಲ್ಲಿಯೂ ಪರಿವರ್ತಿಸಬಹುದು. ಇದರಿಂದಲೂ ಲಾಭವಾಗಬಹುದು ಇರಲಿ.

ಮುಂಬಯಿ ನಗರವು ಚಿತ್ರಪಟ ಸೃಷ್ಟಿಯಲ್ಲಿ ಎಲ್ಲಕ್ಕೂ ಮುಂದುವರಿದಿದ್ದರೂ ನೂರಕ್ಕೆ ೪೪ ರಷ್ಟು ಚಿತ್ರಪಟಗಳು ಇಲ್ಲಿಯೇ ಸಿದ್ಧವಾಗುತ್ತಿದ್ದರೂ ೧೯೪೧ ರಲ್ಲಿ ಮಾತ್ರ ಮುಂಬಯಿ ನಗರವು ಚಿತ್ರಪಟ ನಿರ್ಮಾಣದಲ್ಲಿ ಹಿಂದೆ ಬಿದ್ದಿತು. ಪಂಜಾಬ ಬಂಗಾಲ ಮತ್ತು ದಕ್ಷಿಣ ಹಿಂದುಸ್ತಾನಗಳಲ್ಲಿಯೇ ೧೦೦ ಕ್ಕೆ ೫೬ ರಷ್ಟು ಚಿತ್ರಪಟಗಳು ಹುಟ್ಟಿದವೆ. ಈ ವ್ಯಾಪಕತೆಗಳಲ್ಲಿ ಅಷ್ಟೊಂದು ಚಟುವಟಿಕೆ ಹೆಚ್ಚಾಕೆಂದು ಮಾತ್ರ ಇದರ ಅರ್ಥವಲ್ಲ ಅದರೆ ಮುಂಬಯಿ ನಗರವೆ ಚಿತ್ರಪಟ ಸೃಷ್ಟಿಯಲ್ಲಿ ಬಹಳ ಹಿಂದೆ ಬಿದ್ದಿತೆಂದು ಹೇಳಬಹುದು. ಇದಕ್ಕೆ ಮುಖ್ಯಕಾರಣವೆಂದರೆ ಕಳೆದ ಮೇ, ಜೂನ, ಜುಲೈ ತಿಂಗಳಲ್ಲಿ ಮುಂಬಯಿಯಲ್ಲಿ ನಡೆದ ಜಾತೀಯ ದೊಂಬಿಯೆ ಎಂದು ಹೇಳಬಹುದು. ಈ ಅವಧಿಯಲ್ಲಿ ೧೧ ಹಿಂದಿ ಮತ್ತು ೪ ಮರಾಠಿ ಚಿತ್ರಪಟಗಳು ಪೂರ್ಣ ಸಿದ್ಧವಾಗಿದ್ದರೂ ಪ್ರದರ್ಶಿಸಲ್ಪಡದೆ ಹಾಗೆಯೆ ಉಳಿದವು. ಜಾತೀಯದೊಂದಿ

(೨೨ ನೇ ಪುಟವನ್ನು ನೋಡಿರಿ.)

ಅಲ್ಪ ಸಂಬಳದ ಬಡನೌಕರರಿಗೆ ಹಿಂಸೆ.

ಒಂದು ಕಥೆ—ಲೇಖಕರು: ವಿಟ್ಠ ಪ್ರಾಣೇಶರಾವ್, ಬಳ್ಳಾರಿ.

ಕೊಟ್ರಯ್ಯನೆಂದರೆ ನಮ್ಮ ಊರಿನಲ್ಲಿ ಬಹಳ ಗೌರವ. ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆಹೋಗಿ, ಹಿಂತಿರುಗಿ, ಜೀವನಕ್ಕೆ ಹಳ್ಳಿಯ ಕೂಲಿಕೆಲಸವೇ ಲೇಸೆಂದು ಬಂದಿದ್ದರಿಂದ, ಆತನಲ್ಲಿ ಹಳ್ಳಿಯವರು ಒಂದು ಅಭಿಮಾನ ಇಟ್ಟಿದ್ದರು. ಪಟ್ಟಣದ ಜೀವನ ಕಷ್ಟವೆನ್ನುತ್ತಿದ್ದರು.

ಕೊಟ್ರಯ್ಯನು 18 ನರ್ಷಕ್ಕೆ ಮೆಟ್ರಿಕ್ಯು ಲೇರ್ಷ ಪ್ಯಾಸ್ ಆದನು. ಓದಿದವನು ಕೂಲಿಕೆಸುಬಾದ ಬೇಸಾಯಮಾಡಬಾರದೆಂದು ದೊಡ್ಡ ನಟ್ಟಣದಲ್ಲಿ ನೌಕರಿಗೆಂದು ಬೆಂಗಳೂರಿಗೆ ಬಂದನು. ಬಿಳೆತಾಗದ ಕನ್ಪ್ಯೂಮಾಡುವುದು ಮಾತ್ರ ಬರುತ್ತಿತ್ತು ಅಂದರೆ ಗುಮಾಸ್ತನ ಕೆಲಸ. ಬಸವನಗುಡಿ ಕೊನೆಯ ಬೀದಿಯಲ್ಲಿ ಬಹಳ ಹುಡುಕಿ ಏದು ರೂಪಾಯಿ ಬಾಡಿಗೆ ಮನೆಮಾಡಿದನು. ಸಂಸಾರ ದೊಡ್ಡದು. ಮನೆಯಲ್ಲಿ ದುಡಿಯುವನನೆಂದರೆ ಈತನೊಬ್ಬನೇ, ತಿನ್ನುವನರೆಂದರೆ ಎಂಟು ಜನರಿದ್ದರು.

ಬೆಂಗಳೂರಿನಲ್ಲಿ ಎಲ್ಲಿ ಕೇಳಿದರೂ ನೌಕರಿ ಸಿಗುವುದು ಕಷ್ಟವಾಯಿತು. ಕಡೆಗೆ ಒಂದು ಸಂಸ್ಥೆಯಲ್ಲಿ (Limited Concern) ಒಂದು ಕಾಯಿದೆ ಇದ್ದಿತು. ಯಾವ ಗುಮಾಸ್ತನೇ ಆಗಲಿ ಕೆಲಸಕ್ಕೆ ಬರಲಿ ಒಂದು ವರ್ಷ (Unpaid Probationer) ಸಂಬಳವಿಲ್ಲದೆ ದುಡಿಯಬೇಕು. ತರುವಾಯ ಕೆಲಸ ಖಾಲಿ ಇದ್ದರೆ ಕೊಡುತ್ತೇವೆ ಎಂದು ಬರೆದಿದ್ದರು. ಕೊಟ್ರಯ್ಯ ಅದಕ್ಕೆ ಸೇರಿ ಒಂದು ವರ್ಷವಾದನಂತರ ೨೦ ರೂಪಾಯಿಗಳು ತಿಂಗಳಿಗೆ ಗೊತ್ತುಮಾಡಿದರು. ಮುಂದಿನ ಕಾನೂನಿನಲ್ಲಿ ಕಾಯಂ ಗುಮಾಸ್ತರಿಗೆ ವರ್ಷಕ್ಕೆ ೨ ರೂಪಾಯಿಯಂತೆ ಜಾಸ್ತಿಮಾಡುತ್ತೇವೆಂದು ಬರೆದಿದ್ದರು. ಕಾಲ ಕಷ್ಟವಾದ್ದರಿಂದಲೂ ಯುದ್ಧವು ಪ್ರಾರಂಭವಾದ್ದರಿಂದಲೂ ಸಂಬಳ ಜಾಸ್ತಿಯಾದಲಿಲ್ಲ. ಬಡತನದ ಜೀವನವನ್ನು ತಡೆಯಲಾರದೆ ಬಹಳ ಸಲೆದು ಹೋಗಿದ್ದನು.

ಕಾಲಕ್ಕೆ ತಕ್ಕಂತೆ ಆದಾಯವು ಕಮ್ಮಿಯಾಗಿದ್ದರೂ ದೇವರು ಮಾತ್ರ ವರ್ಷಕ್ಕೊಂದು ಮಕ್ಕಳನ್ನು ಕೊಡುತ್ತಿದ್ದನು. ಕೆಲಸಕ್ಕೆ ಸೇರಿ ನಾಲ್ಕು ವರ್ಷಗಳಾದರೂ, ಎಷ್ಟುಕೇಳಿದರೂ ಸಂಬಳ ಜಾಸ್ತಿ ಮಾಡಲಿಲ್ಲ. ಒತ್ತಿ ಕೇಳಿದರೆ ಎಲ್ಲಿ ತನ್ನ ಕೆಲಸಕ್ಕೆ ಹಾನಿ ವುಂಟಾಗುವುದೆಂದು ಮನಸ್ಸಿನಲ್ಲಿ ಕೊರಗುತ್ತಾ. ಊರಿನವರಿಗೆ ಬ್ಲಾ ಬರುವುದು 20 ರೂ, ಆದರೂ ಕಾಲಕ್ಕೆ ತಕ್ಕಂತೆ ಗುಂಭವಾಗಿ 30 ರೂ. ಸಂಬಳವೆಂದು ಹೇಳಿಕೊಳ್ಳುತ್ತಿದ್ದನು. ದೇವರು ಬಡವರನ್ನು ಹುಟ್ಟಿಸಬಾರದಾಗಿತ್ತು ಎಂದು ವ್ಯಥೆಪಡುತ್ತಿದ್ದನು. ಕಷ್ಟ ಕಾಲಕ್ಕೆ ಯಾರೂ ಸಹಾಯಕರಾಗಲಿಲ್ಲ. ಸಂಸ್ಥೆಯ ಕಾಯಿದೆಯಲ್ಲಿ ಸಂಬಳ ಕೊಟ್ಟು ರಜಾ ಇರಲಿಲ್ಲ. ಖಾಯಿದೆಯಲ್ಲಿದ್ದ 15ದಿನವೂ ಸಂಬಳವಿಲ್ಲದೆ ರಜಾ ಮುಂಜೂರುಮಾಡಿದರು. ಯತ್ನವಿಲ್ಲದೆ ಬೆಳೆಯುತ್ತಿರುವ ಸಂಸಾರಕ್ಕೆ, ಸಾಲಮಾಡಲು ಪ್ರಯತ್ನಪಟ್ಟನು. ಸಾಲವು ಬೆಟ್ಟವು ಬೆಳೆಯನಂತೆ ಒಂದುಸಾವಿರ ರೂಪಾಯಿತನಕ ಬೆಳೆಯಿತು. ಸಾಲಗಾರನು ಸಂಸ್ಥೆಯ ಗುಮಾಸ್ತನು ಸಂಬಳ ಹೇಳುವುದೆಲ್ಲಿ ಮೋಸಮಾಡಿದನೆಂದು ತಿಳಿದು ಆಫೀಸಿನ ಬಾಗಿಲಲ್ಲಿ ಇದ್ದು ಕೆಲಸ ಮುಗಿಸಿಕೊಂಡು ಬಂದ ಕೊಟ್ರಯ್ಯನನ್ನು ಕುರಿತು ಇನ್ನು ಮೂರು ದಿನದಲ್ಲಿ ಸಾಲ ತೀರಿಸಬೇಕು ಇಲ್ಲದಿದ್ದಲ್ಲಿ ಜಪ್ತಿ ಮಾಡಿಸಿ, ಕೋರ್ಟಿಗೆ ಎಳೆಯುವುದಾಗಿ ಹೆದರಿಸಿದನು.

ಕೊಟ್ರಯ್ಯನಿಗೆ ಕಷ್ಟವು ಜಾಸ್ತಿಯಾಗಲು, ಯೋಚನೆ ಮಾಡಲು ಯತ್ನವಾಡಿದನು. ಅದರಲ್ಲಿಯೂ ಕೆಲವು ಸಂಸ್ಥೆಗಳು ಸ್ವಪ್ರಯೋಜನಕ್ಕಾಗಿ ಗುಮಾಸ್ತರನ್ನು ಚನ್ನಾಗಿ ದುಡಿಸಿ, ಕಷ್ಟತರವಾದ ಕೆಲಸ ಕೊಟ್ಟು ಹೊಟ್ಟೆಗೆ ಸರಿಯಾಗಿ, ಕೆಲಸಕ್ಕೆ ತಕ್ಕಂತೆ ಸಂಬಳಕೊಡದೆ, ಸ್ವಸ್ಥಕಗಳಲ್ಲಿ ಮಾತ್ರ ತಮ್ಮ ಸಮಾನ ಗುಮಾಸ್ತರಿಗೆ ಸಂಬಳ ಜಾಸ್ತಿ ಮಾಡುವ ಸಂಸ್ಥೆಗಳಿಲ್ಲವೆಂದು ನ್ಯಾಯ ಮಾಡಿರುತ್ತಾರೆ. ಕಾರ್ಯತಹ ಜಾರಿಯಲ್ಲಿರುವುದಿಲ್ಲ. ನೌಕರರು ಜಾಸ್ತಿ ಮಾತನಾಡಿದಲ್ಲಿ ಕೆಲಸದಿಂದ ಹೊರಗೆ ಅಟ್ಟುತ್ತಾರೆ. ಸಂಸ್ಥೆಯ ಅಧಿಕಾರಿಯನ್ನು ಎಷ್ಟು ಬೇಡಿಕೊಂಡರೂ ಬಿದದೆ, 20 ರೂ ಸಂಬಳ ಬರುವ ಕೊಟ್ರಯ್ಯನಿಗೆ, ಬಟನಾಡಿ ಮಾಡುವುದು, ಹಣ ತೆಗೆದುಕೊಳ್ಳುವ ಕೆಲಸಕ್ಕೆ ಹಾಕಿದನು. ಸಾವಿರಾರು ರೂಪಾಯಿ ಲೇವಾದೇವಿ ಮಾಡುವಾಗ್ಗೆ ! ನೂರು ಲೆಕ್ಕಕ್ಕೆತಡಿಮೆ ಬಂದಿತು. ದುಡ್ಡು ಕೊಟ್ಟ ಹೊರತು ಕೆಲಸಮಾಡಬಾರದೆಂದು ಅಟ್ಟಿದನು. ದುರಾದೃಷ್ಟವಶದಿಂದ ಸಾಲಗಾರನು ಬಂದು ಮುನಿಜಪ್ತಿಮಾಡಿ, ಉಳಿದ ಹಣಕ್ಕೆ ಕೋರ್ಟಿಗೆ ಹೊರಟನು. ಕೋರ್ಟಿನಿಂದ ಬಂದ ನೋಟೀಸನ್ನು ಕೊಟ್ರಯ್ಯನು ತೆಗೆದು ಕೊಂಡು ಕೋರ್ಟಿಗೆ ಖಾಯಿದೆಯದಿನ ಹೊರಟನು.

ಕೊಟ್ರಯ್ಯನು ಹೆಂಡರು ಮಕ್ಕಳನ್ನು ಕರೆದುಕೊಂಡು ಕೋರ್ಟಿಗೆ ಬಂದನು. ಜನರೆಲ್ಲಾ ನೆರೆದಿದ್ದರು. ವೇವರು ಕುರುಡನೆಂದೂ, ಕಾಲ ಕಷ್ಟವೆಂದೂ, ಕೆಲಸದವರಿಗೆ ಹೊಟ್ಟತುಂಬಾ ಸಂಬಳ ಕೊಡದಿರುವ ಸಂಸ್ಥೆಗಳು ಇರಬಾರದೆಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಿದ್ದನು.

ಜಡ್ಜಿಯು ಕೊಟ್ರಯ್ಯನನ್ನು ಕುರಿತು ತನ್ನ ವೃತ್ತಾಂತವನ್ನು ಹೇಳುವಂತೆ ಆಜ್ಞೆ ಮಾಡಿದನು.

ಕೊಟ್ರಯ್ಯನು "ನಾನು ದೊಡ್ಡಜಮೀನುದಾರರ ಮಗನು, ಮೆಟ್ರಿಕ್ಯುಲೇರ್ಷ ಆದನಂತರ, ನವೀನ ವಿದ್ಯಾಭ್ಯಾಸದಿಂದ ದೊಡ್ಡ ನೌಕರಿಮಾಡಬೇಕೆಂದು, ದೊಡ್ಡ ಬೋರ್ಡು ಹಾಕಿರುವ, ಈಸಂಸ್ಥೆಗೆ ಸೇರಿದೆ. ಪ್ರಾರಂಭದಲ್ಲಿ ಸ್ವಲ್ಪ ಕೊಟ್ಟರೂ, ಮುಂದೆ ಸಂಬಳ ಜಾಸ್ತಿಯಾಗುವುದಲ್ಲಾ ಎಂಬ ಆಶೆಯಿಂದ ಕೆಲಸಕ್ಕೆ ಸೇರಿದೆ. ಅಂದುಕೊಂಡ ಆಶೆಯು ನಿರಾಶೆಯಾಯಿತು. ಹೆಸರಿಗೆ ಮಾತ್ರ ಸಂಸ್ಥೆಗಳನ್ನು ತೆಗೆದು ಗುಮಾಸ್ತರಿಗೆ ಮಾತ್ರ ಹೊಟ್ಟೆ ಬಟ್ಟೆಗೆ ಸಾಕಾದಷ್ಟು ಸಂಬಳ ಕೊಡದೆ, ಒತ್ತಾಯಮಾಡಿ ಕೇಳಿದಲ್ಲಿ ಕೆಲಸಕ್ಕೆ ಬೇಡವೆನ್ನುವರು. ಸಂಬಳ ಕಡಿಮೆಯಾದ್ದರಿಂದ ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು, ಜಾಸ್ತಿಸಂಬಳ ಬರುತ್ತದೆಂದು ಸುಳ್ಳುಹೇಳುತ್ತಾ ಹೆಂಡರು ಮಕ್ಕಳನ್ನು ಸಾಕಲು ಸಾಲಮಾಡಿದೆ. ಸಂಬಳಕ್ಕೆ ಮಿತಿಮೀರಿದ ಜವಾಬ್ದಾರಿ ಕೆಲಸ ಕೊಟ್ಟು, ನನ್ನ ಹೊಟ್ಟೆಯಮೇಲೆ ಕೆಲಸಕ್ಕೆ ಕೆಲ್ಲುಹಾಕಿದರು." ಇದೇ ನನ್ನ ಚರಿತ್ರೆ ಎಂದನು.

ದಯಾಳುವಾದ ನ್ಯಾಯಾಧೀಶನು "ಈ ನವೀನಕಾಲದ ಮಹಿಮೆ ಇದು ನಿರುದ್ಯೋಗವೆಂಬ ಬೇನೆಯಿಂದ ಬಳಲುವ ಜೀವನಕ್ಕೆ ಬಂದ ಜನರನ್ನು ಕೆಲವು ಸಂಸ್ಥೆಗಳು ತಮ್ಮ ಸ್ವಪ್ರಯತ್ನಕ್ಕಾಗಿ ದುಡಿಸಿ, ಗುಮಾಸ್ತರನ್ನು ಚಿತ್ರಹಿಂಸೆ ಪಡಿಸುತ್ತಾರೆ. ಗೌರ್ನಮೆಂಟಿನವರು ಸ್ವಪ್ರಯತ್ನಕ್ಕಾಗಿ ಕೆಲಸಮಾಡುವ ಸಂಸ್ಥೆಗಳಲ್ಲಿ ಲೆಕ್ಕಸತ್ಯಗಳನ್ನು ತನಿಖೆಮಾಡಲು ಸರಿಯಾದ ಆಡಿಟರ್‌ಗಳನ್ನು ಇಟ್ಟು, ಬಂದಲಾಭದಲ್ಲಿ ಸ್ವಲ್ಪ ಭಾಗವನ್ನು ಸಂಸ್ಥೆಯ ಬೆಳವಣಿಗೆ ಕಾರಣರಾದ ಗುಮಾಸ್ತರಿಗೆ ಕೊಡಬೇಕು, ಕಾಲಕ್ಕೆ ತಕ್ಕಂತೆ ಮನುಷ್ಯನ ಜೀವನಕ್ಕೆ ತಕ್ಕ ಸಂಬಳ ಕೊಟ್ಟಲ್ಲಿ ಪೆಟ್ಟು ಕೆಲಸ ಮಾಡುವವರ

ಮೂಲಕ ಸಂಸ್ಥೆಯಲಾಭವು ಹೆಚ್ಚುತ್ತದೆ ಕೆಲಸಕ್ಕೆ ತಕ್ಕಂತೆ ಸಂಬಳ ಕೊಡದಲ್ಲಿ ಸಂಸ್ಥೆಗೆ ಕೇಡನ್ನು ಕೋರುತ್ತಾರೆ. ಕೊಟ್ರಯ್ಯನ ಕಷ್ಟಕ್ಕೆ ಕಾನೂನನ್ನು ಸರಿಯಾಗಿ ಪ್ರಿಂಟು ಮಾಡಿದಂತೆ ಜಾರಿಯಲ್ಲಿ ತರದೆ ಇದ್ದುದರಿಂದ ಕೊಟ್ರಯ್ಯನ ಸಾಲಕ್ಕೂ ಕಡಿಮೆ ಬಂದ ಹಣಕ್ಕೂ ಸಂಸ್ಥೆಯೇ ಕಾರಣ. ಸಂಸ್ಥೆಯೇ ಈ ಹಣ ಕೊಡಬೇಕು" ಎಂದು ತೀರ್ಮಾನ ಕೊಟ್ಟನು.

ಕೊಟ್ರಯ್ಯನಿಗೆ ತಿಂಗಳಿಗೆ 30 ರೂ. ಸಂಬಳವಾಯಿತು. ಹೆತ್ತುಂಬ ಸಂಬಳದಿಂದ, ಮನೆಯತುಂಬ ಇರುವ ಹೆಂಡರು ಮಕ್ಕಳಿಗೆ, ಹೊಟ್ಟೆ ತುಂಬ ಜೀವನಕ್ಕೆ ಸಾಕಾಗಿತ್ತು. ಕಡೆಗೆ ತಾನು ಸ್ಥಯತ್ನೆ ನೂಡಿದ ಕಾನೂನು, ನುಂದಿನವರಿಗೆ ಅನುಕೂಲವಾಗಲೆಂದೂ, ಹಳ್ಳಿಯನರಿಗೆ ಸಟ್ಟಣದವಾನ ಬೇಡ ವೆಂದೂ, ತಾವೇ ದಾವಿ ಕಷ್ಟವೆಂದೂ ಚಿಕ್ಕಂದಿನ ಸ್ನಗ್ರಾಮ ಸೇರಿದನು. ——

ಸ್ವಾಧ್ಯಮಿಕೋಪಾಧ್ಯಾಯರು
ವಿಷಯಗಳಿಗೆ ಕೊಡಬಹುದಾದ ಸಮಯ.

ವಾರದಲ್ಲಿ ೪೦ ಮಿನಿಟಿನ ೩೫ ಸಿರಿಯಡುಗಳೆಯೆಂದು ಎಣಿಸಿದರೆ ಪ್ರತಿ ವಿಷಯಕ್ಕೆ ಅವನ್ನು ಈ ರೀತಿಯಲ್ಲಿ ಹಂಚ ಬಹುದು.

೧ ರಿಂದ ೫ ನೆ ತರಗತಿಗಳಿಗೆ-ಮಾತೃ ಭಾಷೆ ೮, ಗಣಿತ ೫, ಪ್ರಕೃತಿ ಶಾಸ್ತ್ರ ೨, ವ್ಯಾಯಾಮ ೨, ಚರಿತ್ರೆ-ಭೂವಿವರ ೩, ಸಿವಿಕ್ಸ್ ಮತ್ತು ಆರೋಗ್ಯ ೩, ಗಾಯನ ೨, ಕೈಗೆಲಸ ೫, ಐಚ್ಛಿಕ ೫.

೬ ರಿಂದ ೮ ನೇ ತರಗತಿಗಳಿಗೆ - ಮಾತೃಭಾಷೆ ೬, ಗಣಿತ ೫, ವಿಜ್ಞಾನ (ಗೃಹವಿಜ್ಞಾನ) ೩, ಚರಿತ್ರೆ ೨, ಭೂವಿವರ ೨, ಸಿವಿಕ್ಸು ೨, ವ್ಯಾಯಾಮ ೨, ನೈತ್ತಿಪರ ೬, ಐಚ್ಛಿಕ ೬.

ಕಡ್ಡಾಯದ ವಿಷಯಗಳಲ್ಲಿ ಸಾಕಷ್ಟು ಪರಿಶ್ರಮವಿಲ್ಲದವರು ಐಚ್ಛಿಕ ವಿಷಯಗಳನ್ನು ಕಲಿಸಕೂಡದು; ಅಂಥವರು ಐಚ್ಛಿಕಕ್ಕೆಂದು ಇಟ್ಟ ಸಿರಿಯಡುಗಳನ್ನು ಕಡ್ಡಾಯದ ಕೈಗೆ ಉಪಯೋಗಿಸಬೇಕು. ಐಚ್ಛಿಕ ವಿಷಯಗಳು ಒಂದಕ್ಕಿಂತ ಹೆಚ್ಚಿರಬಹುದು; ಆದರೆ ಎಲ್ಲವುಗಳಿಗೆ ಒಟ್ಟಿನೀಲೆ ಕೊಟ್ಟ ಸಿರಿಯಡುಗಳನ್ನು ಉಪಯೋಗಿಸಬೇಕು. ಕಾಲ ನಿಯಾಮಕ ಸಟ್ಟಿಯನ್ನು ತಯಾರಿಸುವುದರಲ್ಲಿ ಹೆಚ್ಚಿನ ಅನುಭವವನ್ನು ನೆ ನ್ಯೂ ವ ಲಿ ನಲ್ಲಿ ಕೊಟ್ಟಿದೆ. ಪ್ರೊಜೆಕ್ಟಾ ಕ್ರನುವನ್ನು ಅಲ್ಲಲ್ಲಿ ಉಪಯೋಗಿಸಬೇಕೆಂದು ಹಿಂದೆ ಹೇಳಿಯಡೆ; ಅನೇಕ ಉಪಾಧ್ಯಾಯರು ಅದರಲ್ಲಿ ತರಬೇತಿ ಹೊಂದುತ್ತಿದ್ದಾರೆ. ಅವರ ಸ್ರಯೋಜನಕ್ಕಾಗಿ ನು ಂ ದೆ ಅದರ ವಿಷಯ ಬರೆಯುತ್ತೇವೆ.

ಜರ್ಮನಿಯು ಗೆದ್ದರೆ:—

[ಲೇ—ಮಹಾತ್ಮಾ ಗಾಂಧಿ]

"ಹಿಂದುಸ್ಥಾನವು ಯುದ್ಧದಲ್ಲಿ ಸೇರದೆ ಜರ್ಮನಿಯು ಗೆದ್ದಿತೆಂದು ತಿಳಿಯುವಾ. ಹಿಟ್ಲರು ಹಿಂದುಸ್ಥಾನವನ್ನು ಹಾಗೇ ಬಿಡುವನೇ? ನಿಜವಾಗಿಯೂ ಇಲ್ಲ. ನನ್ನ ಪ್ರೀಯ ಗಾಂಧಿಯವರೇ ಬ್ರಿಟನ್ನಿಗೆ ಈಗ ಇದ್ದುದಕ್ಕಿಂತಲೂ ಹೆಚ್ಚಿನ ತನ್ನ ಅಧಿಕಾರವಾಣಿಯನ್ನು ಹಿಂದುಸ್ಥಾನದಲ್ಲಿ ಅ ತ ನು ನೆಲಿಗೊಳಿಸುವನು. ನೀವು ಆಂಗ್ಲೇಯನ ಕೂಡ ಹೋರಾಡಬಹುದು. ಆದರೆ ಭರತಖಂಡದ ನೆಲದ ಮೇಲೆ ಜರ್ಮನನು ಒಮ್ಮೆ ತನ್ನ ಕಾಲೂರಿದರೆ ನೀವು ಆತನ ಕೂಡ ಹೋರಾಡಲಾರಿರಿ. ಸವಿನಯ ಶಾಸನ ಭಂಗವು ಆಂಗ್ಲೇಯನಿಗೆ ಭೀತಿಪ್ರದವಾಗಿದೆ. ಅದು ನಾಝಿಯ ನಿತ್ಯ ಆಹಾರವಾಗಿದೆ".

ದಕ್ಷಿಣ ಆಫ್ರಿಕೆಯಲ್ಲಿಯ ಏರ್ಪ ಸತ್ರವ್ಯವಹಾರಕನ ದೀರ್ಘ ಮತ್ತು ಕಳಕಳಿಯ ಸತ್ರದಿಂದ ಆಯ್ದ ಒಂದು ಪ್ರಶ್ನೆಯಿದು. ಕಾಂಗ್ರೆಸ್ಸಿನ ಪ್ರಬಲ ನಿಷೇಧವನ್ನು ಲೆಕ್ಕಿಸದೆ ಹಿಂದುಸ್ಥಾನವು ಸ್ಯಸಹಾರತಃ ಯುದ್ಧದಲ್ಲಿ ನೂಕಲ್ಪಟ್ಟಿದ್ದರೂ ಅದು ಯುದ್ಧಪ್ರವಿಷ್ಟವಾಗಿಲ್ಲೆಂದು ಗ್ರಹಿಸುವದು ಮೊದಲನೇ ವಿಚಾರದೋಷ. ಗ್ರೇಟ ಬ್ರಿಟನದ ಸೇನಾನಾಯಕನು ನಿರ್ಮಿಸಿದ ಹಾಗೂ ತರಬೇತು ಗೊಳಿಸಿದ ಎಲ್ಲ ಸಾಧ್ಯವಾದ ಯುದ್ಧೋಪಕರಣಗಳನ್ನು ಪ್ರಧಾನಶಾಲಿಯಾಗಿ ಉಪಯೋಗಿಸುವಷ್ಟರ ಮಟ್ಟಿಗೆ ಮತ್ತು ಶಕ್ಯವಿಷ್ಟೆಲ್ಲ ಹಣವನ್ನು ಸೆಳೆದುಕೊಳ್ಳುವ ಮಟ್ಟಿಗೆ ಭರತಖಂಡವು ಯುದ್ಧದಲ್ಲಿ ಸಿಕ್ಕು ಬಿದ್ದಿದೆ. ರಾಜಕೀಯ ವಿಚಾರನಂತ ಹಿಂದೀಯರಿಗೆ ಕೇವಲ ಅಳುವರ ಕಾರಕೂನಿಯ ಕೆಲಸವನ್ನು ಮಾಡುವದನ್ನುಳಿದು ಬೇರೆ ಯಾವ ಶಿಕ್ಷಣವೂ ಕೊಡಲ್ಪಟ್ಟಿಲ್ಲ. ಕೆಲವು ಸುಸ್ಪಷ್ಟವಾದ ಶರ್ತುಗಳು ಪೂರೈಸಲ್ಪಡುವವರೆಗೆ ಅಂತಹವರು ನಿಜವಾಗಿಯೂ ಅಲಿಪ್ತರಾಗಿರುವರು. ಮಿತ್ರರಾಷ್ಟ್ರಗಳು ಯಾವ ಸ್ವಾತಂತ್ರ್ಯದ ರಕ್ಷಣೆಗಾಗಿ ಇಂದು ಹೋರಾಡುತ್ತಿರುವವೋ ಅವೇ ಸ್ವಾತಂತ್ರ್ಯವನ್ನು ಅವರು ಬೇರಿಸಿದರೆ ಅವರು ದೋಷಿಗಳು ಹೇಗಾಗುವರೋ ನಾನು ಅರಿಯೆ. ತಮ್ಮ ಬೇಡಿಕೆಯು ಮನ್ನಿಸಲ್ಪಟ್ಟರೆ ಹಿಂದೀಯರು ಮಾಡುವದೇನೆಂದರೆ ಯುದ್ಧ ಕ್ಕೆ ತಮ್ಮ ಸ್ವೈಕಿಕ ಬೆಂಬಲವನ್ನು ಕೊಡುವರು ಅಳುವನರಿಗೆ ಇದು ಬೇಕಾಗಿಲ್ಲೆಂಬುದು ಸ್ಪಷ್ಟವಾಗಿದೆ. ವಿಜಯದ ದಂವಿನೆಯನ್ನು ತನ್ಮೈಡೆಗೆ ಅದು ಒಲಿಸವೆಂದು ಅವರ ಅಭಿಪ್ರಾಯವಿದೆ. ಪ್ರತಿಯೊಂದು ಪಕ್ಷವೂ ತನ್ನ ಭೌತಿಕ ಹಾಗೂ ಶಾರೀರಿಕ ಸಾಧನ ಸಂಪತ್ತಿನ ಜಂಭವನ್ನು ಕೊಚ್ಚಿಕೊಳ್ಳುವಾಗ ನೈತಿಕ ಬೆಲೆಯು ಲೆಕ್ಕಕ್ಕೆ ಬರುವದೇ ಇಲ್ಲ. ನಾಝಿಯಾದ ವನ್ನು ಸದೆಬಡಿಯುವ ಇಚ್ಛೆಯು ಬೇಕಾದಷ್ಟಿದ್ದರೂ ಗ್ರೇಟ ಬ್ರಿಟನ್ನಿಗೆ ಸ್ಪಷ್ಟವಾಗಿ ಬೇಡವಾದ ಅಧವಾ ಗ್ರೇಟಬ್ರಿಟನ್ನವು ಕನಿಷ್ಟ ಪಕ್ಷ ಆ ಬಗ್ಗೆ ಉದಾಸೀನವಾಗಿರುವಾಗ ಕಾಂಗ್ರೆಸ್ಸು ಸಹಾಯವನ್ನು ಗ್ರೇಟಬ್ರಿಟನ್ನದ ಮೇಲೆ ಬಲುಮೆಯಿಂದ ಹೇರಲಾರದು. ಆದುದರಿಂದ ಗ್ರೇಟ ಬ್ರಿಟನ್ನವು ಸೋತರೆ, ಕಾಂಗ್ರೆಸ್ಸಿನ ಸಹಕಾರದ ಇಲ್ಲದಿಯು (ಅಭಾವವು) ಅದರ ಕಾರಣವಾಗುವದಿಲ್ಲ. ಆದರೆ ಕಾಂಗ್ರೆಸ್ಸಿನ ನಿಯಂತ್ರಣಾತೀತ ಕಾರಣಗಳ ಮೂಲಕವೇ ಅದು ಸಂಭವಿಸಬಹುದು.

ನಾಝಿಗಳು ಹಿಂದುಸ್ಥಾನಕ್ಕೆ ಬಂದರೆ ಕಾಂಗ್ರೆಸ್ಸು ಗ್ರೇಟ ಬ್ರಿಟನ್ನವನ್ನು ಎದುರಿಸಿದಂತೆ ಅವರನ್ನೂ ಎದುರಿಸುವದು. ಪ್ರಶ್ನೆ ಕೇಳಿದವನು ಮಾಡಿದಂತೆ ಸತ್ಯಾಗ್ರಹದ ಸಾಮರ್ಥ್ಯವನ್ನು ನಾನು ಕೀಳ್ಗಣಿಸುವದಿಲ್ಲ. ಆದರೆ ಅದೆಲ್ಲ ಈಗ ಬರೀ ಊಹೆ. ೧೫೦ ವರ್ಷಗಳಿಗಿಂತ ಹೆಚ್ಚು ಕಾಲ ಸಾಮ್ರಾಜ್ಯಶಾಹಿತ್ವವು ಹಿಂದುಸ್ಥಾನದ ಮೇಲೆ ತನ್ನ ಏಡಿಯ ಹಿಡಿತವನ್ನಿಟ್ಟಿದೆ. ಅದು ನೀಚತಮವಾದ ಆಳಿಕೆಯಿಂದ ಉಧ್ವಸ್ತವಾದರೆ ಇತರ ಯಾವುದೇ ಪೂ ಹಿಂದುಸ್ತಾನದಲ್ಲಿ ಕಾಲಿಟ್ಟರೂ ಕೆಲವು ವರ್ಷಗಳಿಗಿಂತ ಹೆಚ್ಚಿಗೆ ಇಲ್ಲಿ ಬಾಳಲಾರದೆಂದು ತಿಳಿದುಕೊಳ್ಳುವ ಅಭಾವ ಪೃಷ್ಟಿಯು ಕಾಂಗ್ರೆಸ್ಸಿಗೆ ಲಭಿಸುವದು. ನಾನು ಎಲ್ಲಂತೆ ಅದು ಕಾಂಗ್ರೆಸ್ಸಿನ ಮನ. ವೈಯಕ್ತಿಕವಾಗಿ ಈ ಘೋರ ಸಂಗ್ರಾಮದ ಕೊನೆಯು ಪುರಾಣಪ್ರಸಿದ್ಧ ಮಹಾಭಾರತ ಯುದ್ಧದ ಅಂತ್ಯದಂತೆಯೇ ಆಗುವದೆಂದು ನನಗೆ ತೋರುತ್ತದೆ. ಮಹಾಭಾರತವು ಮಾನವನ ಶಾಶ್ವತ ಇತಿಹಾಸವೆಂದು ತ್ರಾವಣಕೋರದವನೊಬ್ಬರು ಯಥಾರ್ಥವಾಗಿ ಹೇಳಿರುವರು. ಆ ವೀರ ಕಾವ್ಯದಲ್ಲಿ ಬಣ್ಣಿಸಿದ್ದುದೆಲ್ಲ ಇಂದು ನನ್ನು ಕಣ್ಮುಂದೆಯೇ ಸಂಭವಿಸುತ್ತಲಿದೆ. ಯುದ್ಧ ಮಾಡುತ್ತಿರುವ ರಾಷ್ಟ್ರಗಳು ಅತ್ಯಂತ ಕ್ರೂರತನ ಎಂದಲೂ ಕ್ರೋಧಾತಿರೇಕದಿಂದಲೂ ಪರಸ್ಪರ ನಾಶಗೊಳಿಸುತ್ತಿರುವವು. ಇಬ್ಬಣಗಳೂ ಈ ಹೋರಾಟದಲ್ಲಿ ಕೈ ಹೋಲಿಗೆ ಬರುವದೇ ಕೊನೆಯ ಪರಿಣಾಮ. ಮಹಾಭಾರತ ಯುದ್ಧದ ನಂತರ ಬದುಕಿದ ಪಾಂಡವರಿಗಾದ ಗತಿಯೇ ಈ ಯುದ್ಧದಲ್ಲಿ ಗೆದ್ದವರಿಗೂ ಆಗುವದು.

(ಪೈಸೆ ಸುಳಿವಲ್ಲಿ ನೋಡಿರಿ.)

ಬಳ್ಳಾರಿ ಜಿಲ್ಲೆಯ

ಪ್ರಾಥಮಿಕ ಶಾಲೆಗಳಿಗೆ ಗದಾಪ್ರಹಾರ.

"೧೯೪೨ ನೂತನ ಶಾಲಾ ವರ್ಷವು ಪ್ರಾರಂಭವಾಗುವ ವೇಳೆಗೆ ಶಾಲೆಗಳು ನಿಯಮಗಳನ್ನು ಪೂರೈಸದಿದ್ದರೆ ಮುಂಜೂರಾತಿಯು ಹಿಂದೆಗೆದುಕೊಳ್ಳಲಾಗುವುದು."

ಬಳ್ಳಾರಿ ಜಿಲ್ಲೆಯಲ್ಲಿ-೨೧ ಮುನಿಸಿಪಾಲಿಟಿ, ೨೩-ಲೇಬರ್, ೧೪-ಪಂಚಾಯ್ತಿ, ಮತ್ತು ೧೨೦-ಜಿಲ್ಲಾ ಬೋರ್ಡು ಪ್ರಾಥಮಿಕ ಶಾಲೆಗಳು ಸರಕಾರದವರು ವಿಧಿಸಿದ ನಾಲ್ಕು ನಿಯಮಗಳನ್ನು ಪೂರ್ತಿ ಮಾಡಿಲ್ಲವೆಂಬ ಕಾರಣದಿಂದ ಅಯೋಗ್ಯ ಶಾಲೆಗಳೆಂದು (Un economic schools) ಮುಂಜೂರಾತಿ (Recognition) ಹಿಂದೆಗೆದುಕೊಳ್ಳುವಕಾಲವು ಸಮೀಪಿಸುತ್ತಿರುವಂತೆ ತೋರಿಬರುತ್ತಲಿದೆ.

ಸಾರ್ಥಕ ಮತ್ತು ಯೋಗ್ಯ ಪಾಠಶಾಲೆಗಳ ೪ ಪರೀಕ್ಷೆಗಳು

೧ ಬಾಲಿಕಾ ಪಾಠಶಾಲೆಗಳಿಲ್ಲದ ಕಡೆ ಬಾಲಕರ ಶಾಲೆಗಳಲ್ಲಿ ೪ ಊರಿನ ಶಾಲಾಯೋಗ್ಯವಯಸ್ಸಿನ ಬಾಲೆಯರ ಸಂಖ್ಯೆಯಲ್ಲಿ ಕನಿಷ್ಟ ೬೫ ಜನರೂ ಇರಬೇಕು.

೨ ಉಪಾಧ್ಯಾಯರೊಬ್ಬರಿಗೆ ೨೦ ಹುಡುಗರಿರಬೇಕು.

೩ ೫ ತರಗತಿಗಳೂ ಪೂರ್ಣವಿರಬೇಕು.

೪ ೧ ನೆಯ ತರಗತಿಯ ದಾಖಲು ಸಂಖ್ಯೆಯ ನಾಲ್ಕರಲ್ಲೊಂದುಭಾಗ ೪-೫ ನೆಯ ತರಗತಿಗಳಲ್ಲಿರಬೇಕು.
(ನಾಲ್ಕನೆಯ ನಿಯಮವನ್ನು ಸದ್ಯಕ್ಕೆ ರದ್ದುಮಾಡಿರುತ್ತಾರೆ.)

ಇದು ಕಳೆದ ೭-೮ ತಿಂಗಳಿಂದಲೂ ಸಮಸ್ಯೆಯಾಗಿದ್ದು ನಿರ್ವಾಹಕತೆಯವರು ಗಲ್ಲಿಗೇರಿಸುವ ಅವಧಿಯನ್ನು ಬೆಳೆಸುತ್ತಿರುವರು. ಸರಕಾರದವರ ವಿಮರ್ಶೆಯಪ್ರಕಾರ, ಮುನಿಸಿಪಾಲಿಟಿ ಮತ್ತು ಪಾಸಗಿ ಜನರಿಂದ ನಡೆಸಲ್ಪಡುವ ಅಯೋಗ್ಯಶಾಲೆಗಳು ೨೬ ಮಾತ್ರವಿವೆ. ಜಿಲ್ಲಾ ಬೋರ್ಡಿನಲ್ಲಿ ಕೆಳಗೆ ಕಾಣಿಸಿದ ೧೨೦ ಶಾಲೆಗಳು ಅಯೋಗ್ಯವಿರುವವೆಂದು ನೊತ್ತಾಗಿದೆ: ಅವು ಬಹುಮಟ್ಟಿಗೆ ಬಾಲಕರ ಶಾಲೆಗಳೇ ಆಗಿವೆ.

ಕಾಯದುರ್ಗ ತಾಲೂಕು ೧೩

೧ ಕೋಗನಹಳ್ಳಿ
೨ ಸಿಂಗಲಾಪುರ
೩ ಅಂತಕಲ್
೪ ಜೊನ್ನಿಹಳ್ಳಿ
೫ ಕಲ್ಲುಗೊಟ್ಲ
೬ ಸೋವಿಂದವಾಡ
೭ ಸೀದರಗಡ್ಡ
೮ ಗಾಣಿಗೆರೆ
೯ ಯಶ್ವಗುಂಟ
೧೦ ವ್ಯಾಸಾಪುರ
೧೧ ಗೋನಭಾವಿ
೧೨ ತಾಳ್ಳಕೆರ

ಕೊಡ್ಲಿಗಿ ತಾಲೂಕು ೬.

೧ ಕೊಡ್ಲಿಗಿ ಹೈಯ್ಯರ್
೨ ಹೂಡೆಂ
೩ ಹುಲಿಕೇರಿ
೪ ಹೊಸಳ್ಳಿ
೫ ಜೋರನೂರು
೬ ಬಂಡ್ರಿ
೭ ಉಜ್ಜಿನಿ

ಹೊಸಪೇಟೆ ತಾಲೂಕು ೧

೧ ಗಾದಿಗನೂರು

ಹರಪನಹಳ್ಳಿ ೯

೧ ಚಿಗಟೇರಿ
೨ ಕತ್ತಿಬೆನ್ನೂರು
೩ ತೌದೂರು
೪ ಕುಂಚೂರು
೫ ತೆಲಿಗಿ
೬ ನೀಲಗುಂದ
೭ ಅರಸೀಕೆರೆ
೮ ಕುರುವತ್ತಿ

ಬಳ್ಳಾರಿ ತಾಲೂಕು ೧೪

೧ ವೋಕ
೨ ರೂಪನಗುಡಿ
೩ ಕುಡುತಿನಿ
೪ ದಮ್ಮೂರು
೫ ಗಾಣಿಕೆಹಾಳು
೬ ಸೀದರಗಟ್ಟಿ
೭ ಸಿಡಿಗಿನಮೊಳೆ
೮ ಸಿದ್ದಮ್ಮನಹಳ್ಳಿ
೯ ಪದ್ದಟ್ಟಿ
೧೦ ವೇಣಿವೀರಾಪುರ
೧೧ ಹರಗಿನಡೋಣ
೧೨ ಬೈಲೂರು
೧೩ ಅಸುಂಡಿ
೧೪ ಸಿಂದಿಗೆರೆ

ಆಲೂರು ೨೫

೧ ಆಲೂರು
೨ ಅರಕೆರೆ
೩ ಚಿಂತಕುಂಟಿ
೪ ಗುಮ್ಮನೂರು
೫ ನಂಜೆರ್ಲ
೬ ಮಲ್ಲಿಕಾರ್ಜುನಹಾಳು
೭ ಸುಳುವಾಯಿ
೮ ಸೇವಿನಹಾಳು
೯ ಹೊಲಗದೇಲಿ
೧೦ ಗೆಜ್ಜಿಹಳ್ಳಿ
೧೧ ಹೆಬ್ಬಟಂ
೧೨ ಕುರುಕುಂದ
೧೩ ನೇರನ್ಕಿ
೧೪ ಯೆಲ್ಲಟ್ಕಿ
೧೫ ಆಸ್ಕಾರಿ
೧೬ ಬನಿಸೆರೆ
೧೭ ತಂಗಡೋಣ
೧೮ ನಗರೂರು
೧೯ ಸಿರಗಾಪುರ
೨೦ ಬಾಪುರಂ
೨೧ ಹತ್ತಿಬೆಳಗಲ್ಲು
೨೨ ಯೇರೂರು ಆದಿಆಂಧ್ರ
೨೩ ಚಿನ್ನಿಗೇರಿ
೨೪ ಹೊಲಗದೇಲಿ ಆಂಜನೇಯ
೨೫ ಗೂಳ್ಯಂ

ಆದವಾನಿ ೨೯

೧ ಬಿ. ಬೆಳಗಲ್ಲು
೨ ಚಿಲಕನಡೋಣ
೩ ಜೊಡ್ಡಿಮೇಕ್ಲ

(ಮುಂದಿನ ಪುಟವನ್ನು ನೋಡಿರಿ.)

(ಹಿಂದಿನ ಪುಟದಿಂದ ಮುಂದುವರಿದಿದೆ)

ಜರ್ಮನಿಯು ಗೆದ್ದರೆ:—

ಅಂತು ಇಂತು ಕುಂತೀಪುತ್ರರಿಗೆ ರಾಜ್ಯವಿಲ್ಲ ಅರ್ಜುನನಂತಹ ಜಗನ್ಮೇಕ ವೀರನನ್ನು ಯಃಕ್ಷಿತಿಪ ಬಭ್ರುವಿನ ಕೈಲಿನ ಹಗಲು ಹೊತ್ತಿನಲ್ಲಿಯೇ ಲೂಟಿಮಾಡಿದ್ದು ಮತ್ತು ಪರರಿಂದ ಸುಲಿಯಲ್ಪಟ್ಟ ಕೋಟ್ಯಾಂತರ ಶ್ರಮಜೀವಿಗಳು ಬಹು ದಿವಸಗಳವರೆಗೆ ತವಕಿಸುತ್ತಿದ್ದ ನೂತನ ಜಗದ್ವ್ಯವಸ್ಥೆಯು ಈ ಮಹಾ ಪ್ರಳಯದಿಂದ ಉದ್ಭವಿಸುವದು ಖಂಡಿತ. ಶಾಂತತಾಪ್ರಿಯರ ಪ್ರಾರ್ಥನೆಯು ನಿರರ್ಥಕವಾಗಲಾರದು. ಸತ್ಯಾಗ್ರಹವೇ ಸ್ವತಃ ಅರ್ತ ಹೃದಯದ ಒಂದು ಮೂಕ ಹಾಗೂ ಅಪ್ರಮಾಣ್ಯ ಪ್ರಾರ್ಥನೆಯಾಗಿದೆ.

(ಹಿಂದಿನ ಪುಟದಿಂದ ಮುಂದುವರಿದಿದೆ)

೪ ಹೆಚ್. ಬಾಪೂರ
೫ ಹಾನವಾಲ
೬ ಹರಿವಾಣಂ ಹೈಯ್ಯರ್
೭ ಹಗಲೂರು
೮ ಕಲ್ಲುಬಾವಿ ಆದಿಆಂಧ್ರ
೯ ಕೋಟೆಕಲ್ಲು
೧೦ ಕನಕವೀಡು
೧೧ ಕಲ್ಲುದೇವನಕುಂಟೆ
೧೨ ಕಲ್ಲುಗೊಟ್ಲು
೧೩ ಕಂಬಳದಿನ್ನೆ
೧೪ ಕಂದುಕೂರು
೧೫ ಮಾಚಾನೂರ
೧೬ ಮಾಧವರಂ
೧೭ ನಂದವರಂ
೧೮ ನಾಗಲದಿನ್ನೆ
೧೯ ನಾರ್ಲಗಲ್ಲಿ
೨೦ ರಾಚಮುನ್ರಿ
೨೧ ರಾಂಪುರ
೨೨ ಸೂಗೂರು
೨೩ ಸುಂಕೇಶ್ವರಿ
೨೪ ಸಾತನೂರು
೨೫ ಯಮ್ಮಿಗನೂರು
೨೬ ಬದನೆಹಾಳು
೨೭ ಕೌತಾಳ
೨೮ ಮೈಕಡೊನ
೨೯ ನೆದ್ದಕಡಬೂರು.

ಸಿರುಗುಪ್ಪೆ ೧೯

೧ ಬಾಗುವಾಡಿ
೨ ಬಲಕುಂದಿ
೩ ಬಂಧ್ರಹಾಳು
೪ ಕೆ. ಬೆಳಗಲ್ಲು
೫ ಬೀರವಳ್ಳಿ
೬ ಚಿನ್ನ ಬೆಳ್ಳಾರಿ
೭ ದೇವನೂರು
೮ ಹಾಗಲೂರು
೯ ಹಳೇಕೋಟೆ
೧೦ ಹಾವಿನಹಾಳು
೧೧ ಕೆಂಚನಗುಡ್ಡ
೧೨ ಕೊತ್ತಲಚಿಂತೆ
೧೩ ಕುಡದರಹಾಳು
೧೪ ಕುರುವಳ್ಳಿ
೧೫ ಮುದ್ದಟನೂರು
೧೬ ರಾರಾವಿ
೧೭ ರಾವಿಹಾಳು
೧೮ ಸಿರುಗುಪ್ಪೆ ಹೈಯ್ಯರ್

ಜೋಡು ಮುಸ್ಲಿಂ ಶಾಲೆಗಳು

೧ ಕುಮುತಿನಿ
೨ ನೋಕ
೩ ಸಿರುಗುಪ್ಪೆ
೪ ತೆಕ್ಕಲಕೋಟೆ
೫ ಹರಿವಾಣಂ

ಶಾಲೆಗಳ ದುಸ್ಥಿತಿಗೆ ಕಾರಣ :—

ದಕ್ಷಿಣಮಂಡಲದಲ್ಲಿ ಅದರಲ್ಲಿಯೂ ಬಳ್ಳಾರಿ ಜಿಲ್ಲೆಯಲ್ಲಿ ಆರ್ಥಿಕ ಪ್ರಶ್ನೆಯು ಕಠಿಣವಿದೆ. ೩ ವರ್ಷಕ್ಕೊಂದುಸಲ ತಪ್ಪದೆ ಕ್ಷಾಮವು ಬರುತ್ತಲಿದೆ. ಜಿಲ್ಲೆಯ11 ಲಕ್ಷ ಜನರಲ್ಲಿ 10 ಲಕ್ಷ ಜನರು ನಿತ್ಯ ಜೀವನಕ್ಕೆ ದುಡಿಯಬೇಕಾಗಿದೆ. ಕೂಲಿ ಕೆಲಸ ಹೊಲಗೆಲಸ ಇತರ ಸಂವಾದನಾ ವೃತ್ತಿಯಲ್ಲಿ ತೊಳಲಿ ಬಳಲುತ್ತಿರುವ ತಂದೆ-ತಾಯಿಗಳು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಅಷ್ಟೊಂದು ಮಹತ್ವ ಕೊಡುವದಿಲ್ಲ. ತಮ್ಮ ಗೈರುಹಾಜರಿಯಲ್ಲಿ ಅವರು ವಿದ್ಯಾಲಯಕ್ಕೆ ಹೋದರೇ ಎಂಬುದರ ವಿಚಾರಕ್ಕೆ ಅವರ ದೃಷ್ಟಿ ಹೋಗುವುದಿಲ್ಲ.

ಅಲ್ಲಲ್ಲಿ ಹರಿಗಳಲ್ಲಿ ಸುಗ್ಗಿಕಾಲ ಪಸ್ಸೆರೆ ಬಂದರೆ ಮಕ್ಕಳು ಹೊಲಗಳಿಗೆ ಹೋಗುವರು. ಅಪವಾ ಮನೆಗಳಲ್ಲಿ ಚಿಲ್ಲರೇ ಕೆಲಸಗಳಿಗಾಗಿ ಉಳಿಯುವರು. ಹೀಗಾಗಿ

ಆರ್ಥಿಕ ಕಷ್ಟವೇ ಬಡವರ ವಿದ್ಯಾನ್ಯೂನತೆಗೆ ಕಾರಣವಾಗಿದೆ.

ಸರಕಾರದವರ ಕರ್ತವ್ಯ

ಸರಕಾರದವರು ನಿಯಮಗಳನ್ನು ಮಾಡುವ ಮುಂಚೆ ಬಡವರ ಆರ್ಥಿಕ ಕಷ್ಟಗಳನ್ನು ಸ್ವಲ್ಪ ಮಟ್ಟಿಗಾದರೂ ನಿವಾರಣೆ ಮಾಡಿದ್ದರೆ ಶಾಲೆಗಳು ಅಭಿವೃದ್ಧಿಗೆ ಬರುತ್ತಿದ್ದವು. ಇದು ಹೆಂಡತಿಯ ಬಾಣಂತನದ ಕಾಲಕ್ಕೆ ಗಂಡನು ಕಾರ ತಿಂದಂತಿದೆ. ಕೆಲ ಜಿಲ್ಲೆಗಳಲ್ಲಿ ಬಡ ಮಕ್ಕಳಿಗೆ ಮಧ್ಯಾಹ್ನ ಆಹಾರ ಕೊಡುವರು (Midday meal centres) ಅದನ್ನು ಈ ಜಿಲ್ಲೆಯಲ್ಲಿಯೂ ಏರ್ಪಡಿಸಿದರೆ ಒಳ್ಳೆಯದು. ಬಡಮಕ್ಕಳಿಗೆ ಒಂದು ಹೊತ್ತಿನ ಊಟಕ್ಕೇರ್ಪಡಿಸಿ ಬಲಾತ್ಕಾರ ವಿದ್ಯಾಭ್ಯಾಸನನ್ನು ಜಾರಿಯಲ್ಲಿ ತಂದರೆ ಶಾಲೆಗಳು ಬಹಳಅಭಿವೃದ್ಧಿಗೆ ಬರುವವು

ಉಪಾಧ್ಯಾಯರ ಕರ್ತವ್ಯ :—

ಗ್ರಾಥವಿಕ ಶಾಲೆಗಳ ಉಪಾಧ್ಯಾಯರಲ್ಲಿ ಬಹು ಸಂಖ್ಯಾಕರು ತಮ್ಮ ಕರ್ತವ್ಯಗಳನ್ನು ಚನ್ನಾಗಿ ಅರಿತಿಲ್ಲವೆಂದು ದುಃಖದಿಂದ ಹೇಳಬೇಕಾಗಿದೆ. ಇದಕ್ಕೆ ಸದರಿ ಹಳ್ಳಿಯ ಪಾರ್ಟಿ ವ್ಯಾಜ್ಯಗಳೂ ಕಾರಣವಿರಬಹುದು. ಪೋಷಕ ಸಂಘಗಳು ನಾಮಮಾತ್ರವಿರುವವಾಗಲಿ ಉಪಾಧ್ಯಾಯರಿಗೂ ಮಕ್ಕಳ ತಂದೆತಾಯಿಗಳಿಗೂ ಸಂಬಂಧವಿಲ್ಲವೆ. ಅಲ್ಲದೆ ಉಪಾಧ್ಯಾಯರು ಬಡವರ ಕೇರಿಗಳಿಗೆ ಆಗಾಗ್ಗೆ ಹೋಗುವುದೂ ಅಪರೂಪ. ಈ ಸಂಬಂಧವನ್ನು ಛಿನಿಷ್ಟ ಮಾಡಲು ನಮ್ಮ ವಿನಂತಿ.

ಶಾಲೆಗಳ ಅಭಿವೃದ್ಧಿಗೆ ಬಡ ಉಪಾಧ್ಯಾಯರನ್ನೇ ಜವಾಬ್ದಾರೀ ಮಾಡದೆ ಸರಕಾರದವರೂ ಶಾಲೆಗಳ ವ್ಯವಸ್ಥಾಪಕರೂ ತಮ್ಮ ತಮ್ಮ ಕರ್ತವ್ಯಗಳನ್ನು ನೆರವೇರಿಸಬೇಕೆಂದು ನಂಬಲಾಗಿದೆ.

ಭಾರತದ ಸುಪ್ರಸಿದ್ಧ ಕವೀಶ್ವರರಾದ

ರವೀಂದ್ರನಾಥ ಟಾಗೋರರು.

ಶ್ರೀಪ್ರಮಥನಾಥ ಬೌದರಿಯವರ ಲೇಖಾನುವಾದ.

ಫ್ರಾನ್ಸಿನಲ್ಲಿ ಬಹುಕಾಲದಿಂದ ಒಂದು ಸದ್ಭಾತಿಯು ಆಚರಣೆಯಲ್ಲಿದೆ. ಅಧವಾ ಮೊನ್ನೆಮೊನ್ನೆಯವರೆಗೆ ಇತ್ತು. ಯಾರಾದರೊಬ್ಬ ಮಹಾಕವಿಯಾಗಲಿ ವಿಖ್ಯಾತ ಲೇಖಕನಾಗಲಿ ಮೃತನಾದರೆ ಅವನ ಶವವನ್ನು ಸಮಾಧಿಯೊಳಕ್ಕೆ ಇಳಿಸುವ ಮುಂಚೆ ಮತ್ತೊಬ್ಬ ಪ್ರಸಿದ್ಧ ಲೇಖಕನು ಮೃತನ ವಿಷಯವಾಗಿ ಉಪನ್ಯಾಸ ಕೊಡುವನು.

ಈ ಉಪನ್ಯಾಸಗಳೆಲ್ಲವೂ ಚಮತ್ಕಾರಯುತವಾದವು. ಇವುಗಳಲ್ಲಿ ಹಲವು ಫ್ರಾನ್ಸಿನ ಸಾಹಿತ್ಯದ ಉಜ್ವಲ ರತ್ನಗಳು ಈ ಎಲ್ಲ ಉಪನ್ಯಾಸಗಳಲ್ಲಿ ಮೃತರ ಗುಣಗಾನಮಾಡುವರು. ಉಪನ್ಯಾಸಕರು ಬುದ್ಧಿಬಲದಿಂದ ಆ ವೃಗಳಲ್ಲಿ ತಮ್ಮ ವೈಶಿಷ್ಟ್ಯವನ್ನು ತೋರಿಸುವರು. ಆದರೆ ಅವರು ಹೊರವಡಿಸಿರುವ Emotion ವ್ಯಕ್ತಿಗತವಾದ Emotion ಅಲ್ಲ.

Emotion ನಲ್ಲಿ ಎರಡು ಬಗೆಯವು ಇವೆ. ಇವುಗಳ ಮುಖ್ಯ ಭೇದಗಳು ಹೀಗಿವೆ. ಸಾಮಾಜಿಕ Emotion ಎಷ್ಟು ಉದಾರತೆಯನ್ನು ಹೊಂದಿರುವುದೋ ಅಷ್ಟು ಗಂಭೀರತೆಯನ್ನು ಹೊಂದಿರದು. ವೈಯಕ್ತಿಕ Emotion ಗಭೀರತೆಯನ್ನು ಉದಾರತೆಯನ್ನು ಪಡೆದಿರದು.

ಶೋಕವು ಒಂದು ವಿಧವಾದ Emotion ಈ ಶಬ್ದದ ಸರಿಯಾದ ದೇಶೀಯ ಪರ್ಯಾಯ ಶಬ್ದವನ್ನರಿಯದು ದರಿಂದಲೇ ನಾನು ಇಂಗ್ಲಿಷ್ ಶಬ್ದವನ್ನೇ ಉಪಯೋಗಿಸಿರುವೆನು.

(ಇನ್ನೂ ಪುಟವನ್ನು ನೋಡಿರಿ.)

ಶಾಂತಿ ಸಂರಕ್ಷಕರ ಕರ್ತವ್ಯ.

(ಟೀ ಟೀಕೂರು ಸುಬ್ರಹ್ಮಣ್ಯಂ.)

ಯುದ್ಧವು ನಮ್ಮ ಬಾಗಿಲಿಗೆ ಬಂದಿದೆ ಇಂಥ ಕಠಿನ ಪರಿಸ್ಥಿತಿಯಲ್ಲಿ ಸಹಾ ಬ್ರಿಟಿಷು ರಾಜನೀತಿಜ್ಞರು ನಮ್ಮ ದೇಶದ ಬಗ್ಗೆ ತಮ್ಮ ಸಾಮ್ರಾಜ್ಯಮಹಾತ್ವಾಕಾಂಕ್ಷೆಯನ್ನು ಬಿಡಲಿಲ್ಲ. ಈ ಯುದ್ಧವು ಪ್ರಜರದು, ಮತ್ತು ಸ್ವಾತಂತ್ರ್ಯರಕ್ಷಣೆಗಾಗಿ ಹೂಡಲ್ಪಟ್ಟ ಯುದ್ಧವೆಂಬ ಭಾವನೆಯನ್ನು ಜನತೆಯಲ್ಲಿ ಹುಟ್ಟಲಿಲ್ಲ. ಜವಾನರಾಷ್ಟ್ರವು ಯುದ್ಧ ಹೂಡಿದ ಮೇಲೇ ಪೂರ್ವ ದಿಕ್ಕಿನಲ್ಲಿ ಬ್ರಿಟಿಷು ಸಾಮ್ರಾಜ್ಯಕ್ಕೆ ಒಂದರ ಹಿಂದೆ ಒಂದು ಪೆಟ್ಟುಗಳು ಬಿದ್ದವು. ಹಾಂಕಾಂಗು, ಮಲಯಾ, ಸಿಂಗಪೂರು, ಮತ್ತು ಬರ್ಮಾದೇಶದಲ್ಲಿ ಕೆಲವು ಮುಖ್ಯ ಪ್ರದೇಶಗಳು ಜವಾನರ ವಶವಾದವು. ಪ್ಯಾಸಿಫಿಕ್ ಮತ್ತು ಹಿಂದೂಮಹಾಸಾಗರಗಳಲ್ಲಿ ಫಿಲಿಪೈನ್, ಡಚ್ಚ ದ್ವೀಪಗಳ ಅಧಿಕಾಂಶ ಭಾಗವು ಜವಾನರ ಹತ್ತಾದವು. ಹಿಂದೂಮಹಾಸಾಗರದಲ್ಲಿಯು, ಮತ್ತು ಬಂಗಾಳಾಕೊಲ್ಲಿಯಲ್ಲೂ ಜವಾನಿ ಹಡಗುಗಳು ಜಲಾಂತರ್ಗಾಮಿಗಳು ಇರಲಿಕ್ಕೆ ಸಾಕು.

ನಮ್ಮ ದೇಶದ ಪೂರ್ವದಿಕ್ಕಿನ ಸಮುದ್ರತೀರದಲ್ಲಿರುವ ಮದ್ರಾಸ್ ಪಗ್ಗೆರಾವಟ್ಟಣಗಳ ಬಂದರುಗಳ ನೌಕಾ ಶತ್ರುಗಳ ದಾಳಿಯಾಗುವ ಸಂಭವವಿದೆ. ಯುದ್ಧವು ನಮೀಪಕ್ಕೆ ಬಂದಂತೆಲ್ಲ ವಿಚಾರದಿಂದ ಆ ಪಟ್ಟಣಗಳ ಕೆಲವು ಜನರು ಬೇರೆ ಪ್ರದೇಶಗಳಿಗೆ ನಿವಾಸಕ್ಕಾಗಿ ಹೋಗುತ್ತಿರುವರು. ಯುದ್ಧದ ಇನ್ನೊಂದು ಪರಿಣಾಮವೆಂದರೆ, ಆಹಾರ ವಸ್ತುಗಳ ಅವಶ್ಯವಾದ ಸದಾರ್ಥಗಳ ಬೆಲೆ ಹೆಚ್ಚುವದು.

ಇನ್ನುಮುಂದೆ ಎರಡು ವಿಧವಾದ ಅವಾಂತರಗಳನ್ನು ನಾವು ಎದುರಿಸಬೇಕಾಗುವದು. ಜವಾನರು ವಿಮಾನಗಳಿಂದ ಬಂದು ಅವರು ನಮ್ಮ ಮೇಲೆ ಬಾಂಬುಗಳನ್ನು ಹಾತಿದರೆ ಪ್ರಾಣಗಳಿಗೆ ಅಪಾಯವಾಗಿ ನಷ್ಟವಾಗುವದು. ಈ ಘಟನೆಯು ಮಧ್ಯಭಾಗದಲ್ಲಿರುವ ನಮ್ಮ ಜಿಲ್ಲೆಗೆ ಸಂಭವಿಸಲಿಕ್ಕಿಲ್ಲ

ಇನ್ನೊಂದು ಅವಾಂತರವು ಬರಬಹುದು. ಯುದ್ಧಕ್ಕಾಗಿ ಲೊರಿಗಾಡಿಗಳು ಹೆಚ್ಚಾಗಿ ವಿನಿಯೋಗವಾಗುವದರಿಂದ ಮಾಮೂಲು ರೀತಿಯಲ್ಲಿ ಮಾಲು ಅಥವಾ ಪ್ರಯಾಣಿಕರ ಗಾಡಿಗಳು ಕಡಮೆಯಾಗಬಹುದು. ಆದ್ದರಿಂದ ಆಹಾರ ವಸ್ತುಗಳೇ ಅನಶ್ಯಕ ಸದಾರ್ಥಗಳು, ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ಹೋಗುವದು ಕಷ್ಟಸಾಧ್ಯವಾಗುವದು. ಸರಕುಗಳ ಬೆಲೆ ಹೆಚ್ಚಿ ಪ್ರಜರಲ್ಲಿ ಅಶಾಂತಿ ನ್ಯಾಪಿಸಬಹುದು. ಆ ವಾತಾವರಣದಲ್ಲಿ ಕೆಲ ದುರ್ಮಾರ್ಗರು, ಪುಂಡರು, ಲೂಟಿ ವಗೈರೆ ಅಕ್ರಮ ಅತ್ಯಾಚಾರಗಳನ್ನು ಮಾಡಲು ಯತ್ನಿಸಬಹುದು. ಪ್ರಭುತ್ವದ ಪೋಲೀಸು ಅಧಿಕಾರಿಸ್ತರು ಎಲ್ಲಾಕಡೆ ಯಾವಾಗಲೂ ತಮ್ಮ ಕೆಲಸ ಮಾಡುವದು ಅಸಾಧ್ಯವಾದ ಮಾತು. ಲೂಟಿ ಅಥವಾ ಇತರ ಅತ್ಯಾಚಾರಗಳಾದನಂತರ ಅವರು ಸಾಧಾರಣವಾಗಿ ವಿಚಾರಣೆ ಮಾಡಿ ಕೇಸುಗಳನ್ನು ನಡೆಸಿ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಬಹುದು. ಇಂಥಾ ಕಷ್ಟಪರಿಸ್ಥಿತಿಯಲ್ಲಿ ಶಾಂತಿಯನ್ನು ಸಂರಕ್ಷಿಸುವದು ಪ್ರಜರ ಕರ್ತವ್ಯ. ಇದರಲ್ಲಿ ವಿದ್ಯಾವಂತರ ಮತ್ತು ಶ್ರೀಮಂತರ ಜವಾಬ್ದಾರಿ ಹೆಚ್ಚಿದೆ. **ಪ್ರಜರಲ್ಲಿ ಅಂಜಿಕೆ, ಬುಗುಲು (Fear & Panic) ಆಗದಂತೆ, ವ್ಯಾಪಿಸದಂತೆ ನೋಡುವದು ಪ್ರಥಮ ಕರ್ತವ್ಯ.** ಪಟ್ಟಣಗಳಲ್ಲಿ ಪ್ರತಿ ಬೀದಿಗೆ, ಪ್ರತಿ ಪಲ್ಲಿಗೆ ಶಾಂತಿ ಸಂರಕ್ಷಕ ಸಮಿತಿಗಳಿರಬೇಕು. ಅವರು ಆಗಾಗ್ಗೆ ಕ್ರಮಪ್ರಕಾರ ಒಂದು ನಿರ್ದಿಷ್ಟ ಸ್ಥಳದಲ್ಲಿ ಸಮೂಹೇತರವಾಗಿ ಜನರಿಗೆ ರಾಷ್ಟ್ರೀಯ ಪರಿಸ್ಥಿತಿಯನ್ನು ತಿಳಿಸಿ ಅಂಜದಂತೆ ಪ್ರಚಾರ ಮಾಡಬೇಕು. ಆಹಾರ ವಗೈರೆ ಅವಶ್ಯಕ ಪದಾರ್ಥಗಳ ಬೆಲೆ ಹೆಚ್ಚಾಗದಂತೆ, ವ್ಯಾಪಾರಸ್ಥರಿಗೆ, ಪ್ರಭುತ್ವದವರಿಗೆ ಹೇಳಿ ಅನುಕೂಲತೆಗಳನ್ನು ಮಾಡಿ ಕಮ್ಮಿ ಧಾರಣೆಗೆ ಮಾರಾಟಮಾಡುವಂತೆ ಯತ್ನಿಸಬೇಕು. ಈ ಕಾರ್ಯಕ್ಕೆ ಜಾತಿ, ಮತ, ಕುಲ, ಪಂಗಡಗಳ ಭೇದವಿಲ್ಲದೇ ಎಲ್ಲರ ಸಹಕಾರ ಸಹಾನುಭೂತಿಗಳು ಅವಶ್ಯಕ. ಈ ಕಾರ್ಯಕ್ರಮವು ಪ್ರಭುತ್ವದವರಿಗೆ ಅನುಕೂಲವಾದದ್ದು. ಈ ಅಸಾಧಾರಣ ಪರಿಸ್ಥಿತಿಯಲ್ಲಿ ಕ್ಯಾಂಗ್ರೆಸು ನಿಧಾಯಕ ಕಾರ್ಯಕ್ರಮವು ಮಹತ್ವವು ಹೆಚ್ಚಾಗಿರುವದು. ಮೇಲೆ ಹೇಳಿದಂತೆ ದೊಡ್ಡ ವ್ಯಾಕ್ಟರಿಗಳ ಸರಕುಗಳು ಬಟ್ಟೇ ವಗೈರೆ ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಹೋಗುವದು ಕಷ್ಟಸಾಧ್ಯ. ಅಲ್ಲದೆ ಸೈನಿಕರ ಉದ್ದೇಶಗಳಿಗಾಗಿ ಆ ವ್ಯಾಕ್ಟರೀಗಳ ಸಾಮಾನನ್ನು ವಿನಿಯೋಗಿಸಬಹುದು. ದೇಶದಲ್ಲಿ ಮುಂದೆ ಉದ್ಭವವಾಗುವ ಪರಿಸ್ಥಿತಿಯಿಂದ ದೊಡ್ಡ ದೊಡ್ಡ ಯಂತ್ರಾಲಯಗಳಿಂದ ನಮಗೆ ಹೆಚ್ಚಿನ ಉಪಯೋಗವಾಗಲಿಕ್ಕಿಲ್ಲ. ಅವು ಮುಚ್ಚಿದರೂ ಮುಚ್ಚಬಹುದು. ಆಗ ಗ್ರಾಮೋದ್ಯೋಗಗಳೆಲ್ಲ ವಿದ್ಯರೆ ಪ್ರಜರಲ್ಲಿ ಕಷ್ಟಗಳು ಅಶಾಂತಿಯು ಹುಟ್ಟುವದು. ಆದಕಾರಣ ಖಾದಿ, ಗ್ರಾಮೋದ್ಯೋಗಗಳಿಗೆ ಎಲ್ಲಾ ಕಡೆಗೆ ಉತ್ತೇಜನಕೊಡುವದು ಪರಿಸ್ಥಿತಿಗೆ ಹಿತವು. ಶ್ರೀಮಂತರಿಗೆ ರಕ್ಷಣೋಪಾಯವು. ಪ್ರಜಾ ಸೇವಾವಿಧಾನವು.

ಅಖಿಲಭಾರತ ಚರಖಾ ಸಂಘದ

—ಖಾ ದಿ.—

KHADI Certified by A. I. S. A.

ಖಾದಿಯೇ ಸುಖಜೀವನದ ಸ್ವರಾಜ್ಯದ ಮುಖ್ಯಹಾದಿ.

(ಮಹಾತ್ಮ ಗಾಂಧಿ)

ನಮ್ಮ ಅಂಗಡಿಯು ಅಖಿಲಭಾರತ ಚರಖಾ ಸಂಘದ ಕರ್ನಾಟಕ ಶಾಖೆಯಿಂದ ನುಂಬುರಾಶಯನ್ನು ಪಡೆದಿದೆ. ಪ್ರಮಾಣಿತವಲ್ಲದ ಬೇರೊಂದು ಖಾದಿಯನ್ನು ನಾವಿಡಲು ಬರುವಂತೆಯೇ ಇಲ್ಲ. ಶುದ್ಧ ಖಾದಿಯ ಧೋತ್ರ, ಶರ್ಟಿಂಗ, ಕೋಟಿಂಗ್, ಶಲ್ಯ ಉತ್ತರೀಯ, ಕುಪ್ಪಸದ ಬಟ್ಟೆ, ಸೀರೆ, ವಿವಾಹಯೋಗ್ಯವಾದ, ಶ್ರೀಮಂತರಿಗೆ ಸಲ್ಲುವ, ದೇಶ್ಕಿ ಬಟ್ಟೆಗಳು **ನಿಯಮಿತ ಬೆಲೆಗೆ** ದೊರೆಯುತ್ತವೆ. ಬಳ್ಳಾರಿಯಲ್ಲಿ ಚರಖಾ ಸಂಘದ ಪ್ರಮಾಣಪತ್ರ ಪಡೆದ ಅಂಗಡಿಯು ಇದೊಂದೇ!! ನಮ್ಮಲ್ಲೇ ಕೊಳ್ಳಿರಿ.

ಡಿ. ಹೆಚ್. ರಾಘವೇಂದ್ರರಾವು,

ಖಾದೀ ವಸ್ತ್ರಾಲಯ ಬ್ರಾಹ್ಮಣಬೀದಿ, **ಬಳ್ಳಾರಿ.**

ಬ್ರಿಟಿಷ ಪ್ರಧಾನರಾದ ಚರ್ಚಿಲ್ಲರವರು ಬರುವವಾರ ಹಿಂದೂ ಸ್ಥಾನದ ಬಗ್ಗೆ ಹೇಳಿಕೆ ಕೊಡುವರೆಂದು ಗೊತ್ತಾಗಿದೆ.

ವಿಶೇಷ ವಿಜ್ಞಾನಭಾಗಗಳ

ಸಂಗೀತ ಸಮಾಚಾರಗಳು ನಮಗೆ ಹೇಗೆ ಕೇಳಬರುತ್ತವೆ?

ರೇಡಿಯೋ (ಬಾನುಲಿ) ಆವಿಷ್ಕಾರ.

(ಲೇ:- ವಿ. ಜಗನ್ನಾಥ, ಬಿ. ಎ, ಬಿ. ಎಲ್.,)

ತಂತಿ ಇಲ್ಲದೆ ಸಮಾಚಾರಗಳನ್ನು ಕಳುಹಿಸುವ ಪದ್ಧತಿಯು ಇಪ್ಪತ್ತನೆಯ ಶತಮಾನದ ಅವಿಷ್ಕಾರಗಳಲ್ಲಿ ಬಹಳ ಆಶ್ಚರ್ಯಕರವಾದ ಸಂಗತಿಯಾಗಿದೆ. ಇದಕ್ಕೆ ಸಂಬಂಧಿಸಿದ ವೈಜ್ಞಾನಿಕಪರೀಕ್ಷೆಗಳು ಮೊದಲೇ ಆಗಿದ್ದರೂ ತಂತಿಇಲ್ಲದೆ ಸುದ್ದಿಗಳನ್ನು ಕಳುಹಿಸುವ ವಿಧಾನವು ಮತ್ತು ಅದರ ಚರಿತ್ರೆಯ ವಿಕಾಸವು ೨೦ನೆಯ ಶತಮಾನವ ಆದಿಯಿಂದ ಪ್ರಾರಂಭವಾಯ್ತೆಂದು ಹೇಳಬಹುದು. ೧೯೨೦ರಲ್ಲಿ ಮೊಟ್ಟ ಮೊದಲನೆಯ ಸಲ ಆ್ಯ. ಎ. ಫೆಸೆನ್ಡನರವರು ಒಂದು ಮೈಲಿದೂರದಂತರ್ಯ ವಿದ್ಯುತ ಅಲೆಗಳ ಸಹಾಯದಿಂದ ಸ್ಪಷ್ಟ ಭಾಷಣವನ್ನು ನಡೆಸಿದರು ಫೆಸೆಂಡನರವರು ಇಷ್ಟಕ್ಕೇ ಸುಮ್ಮನಾಗಲಿಲ್ಲ. ಅವರು ತಮ್ಮ ಪರೀಕ್ಷೆಯ ವ್ಯವಸಾಯನವನ್ನು ಮುಂದುವರಿಸಿ ೧೯೧೮ರಲ್ಲಿ ಒಂದು ಸೆಕಂಡಿಗೆ ೩೦ ಸಾವಿರ ಆಂಶ [Cycles per] ವೇಗವನ್ನು ಹೊಂದಿ ಬಹಳ ಸಫಲತೆಯನ್ನು ಪಡೆದರು.

೧೯೨೧ರಲ್ಲಿ ಮೆಸೂಯಲ್‌ರವರು ೨೩ ಮೈಲಿಗಳ ದೂರದಂತರದಿಯ ಬರ್ಮಿನ ಮತ್ತು ನ್ಯೂನನಗರಗಳ ಮಧ್ಯೆ ಸಮಾಚಾರ ಕಳುಹಿಸಲು ಜನರೇಟರ್‌ಗೆ ಬದಲಾಗಿ ಗಾಜಿನ ಕೊಳವೆಯನ್ನು (Valve) ಉಪಯೋಗಿಸಿದರು. ಮುಂದೆ ೨ ವರ್ಷಗಳಲ್ಲಿ ಅಮೆರಿಕಾದ ಕಂಪನಿಯವರು ೩೦೦ ಕೊಳವೆಗಳುಳ್ಳ ಸಮಾಚಾರ ಕಳುಹಿಸುವ ಯಂತ್ರವನ್ನು [Transmitter] ಕಟ್ಟಿ ೩೮೦೦ ಮೈಲಿ ಅಂತರದ ಪ್ಯಾರಿಸ್‌ನಗರಕ್ಕೆ ಅರ್ಲಿಂಗ್‌ಟನ್ ನಗರದಿಂದ ಸಮಾಚಾರ ಕಳುಹಿಸಿದರು.

ಮತ್ತೆ ಕೆಲ ವರ್ಷಗಳಲ್ಲಿ ಮಾರ್ಕೋನಿ ಮತ್ತು ಬೆಲ್ ಟೆಲಿಫೋನ್ ಕಂಪನಿಯವರು ಹೆಚ್ಚಿನ ಪರಿಶೋಧನೆಗಳನ್ನು ನಡೆಸಿದರು. ದಶವರ್ಷಗಳೊಳಗಾಗಿ ಪರೀಕ್ಷಾ ಅವಧಿಯು ಮುಗಿದು ಈ ಹೊಸ ಅವಿಷ್ಕಾರವು ವ್ಯಾಪಾರೀ ದೃಷ್ಟಿಯಿಂದ ಯಶಸ್ವಿಯಾಯಿತು. ಈ ಹೊಸ ಪರಿಶೋಧನೆಯ ಉಪಯೋಗವು ಸಾರ್ವತ್ರಿಕವಾಗಿ ಯಶಸ್ವಿಯಾಗಲ್ಪಟ್ಟಿದೆ. ನಿರಕ್ಷರತೆಯ ನಿರ್ಮೂಲಕ್ಕೆ ಇದು ಬಲವಾದ ಶಸ್ತ್ರವಾಗಿ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಇದರ ಸ್ಥಾನವು ಮಹತ್ವದ್ದಾಗಿದೆ

ಹಿಂದೂಸ್ಥಾನದಲ್ಲಿ ರೇಡಿಯೋಗಳ ವ್ಯಾಪಕವನ್ನು ನೋಡಿದರೆ ಜನರಂಜನೆಗಾಗಿ ಇದು ಅತ್ಯಧಿಕ ಪ್ರಮಾಣದಲ್ಲಿ ಬಳಸಲ್ಪಡುತ್ತಿರುವುದು ವೇದ್ಯವಾಗುತ್ತದೆ. ಇದನ್ನು ಬಳಸುವವರು ತಮ್ಮ ಮನರಂಜನೆಗೆ ಕಾರಣವಾದ ಈ ಸೂಕ್ಷ್ಮಯಂತ್ರವು ಹೇಗೆ ತಯಾರಾಗಿದೆಯೆಂಬುದನ್ನೂ, ಯಾವ ವಿಧಾನದಿಂದ ಇದು ಸಾಧ್ಯವಾಗಿದ್ದಿಯೆಂಬುದನ್ನೂ ಅರಿಯದೆ ಕಾರ್ಯಕ್ರಮ ಪಟ್ಟಿಯನ್ನಿಟ್ಟುಕೊಂಡು ತಿರುಗಿಸುವರು.

ಒಂದು ನಿಯಮಿತ ಸ್ಥಳದಲ್ಲಿ ಸುದ್ದಿ ಸಂಗೀತ ವ್ಯಾಖ್ಯಾನಗಳನ್ನು ಕಳುಹಿಸುವ ಕೇಂದ್ರ ವಿರುತ್ತದೆ. ಶಬ್ದವು ಭೇದವಾನದಂತೆಭೇದ್ಯವಾಗಿ ಮುಚ್ಚಿದ ಕೊಠಡಿಯಲ್ಲಿ ಮೈಕ್ರಾಫೋನ್‌ಎಂಬ ಯಂತ್ರದಮುಂದೆ ಹಾಡಬೇಕು. ಯಾ ಓದಬೇಕು. ಇಲ್ಲವೇ ಮಾತಾಡಬೇಕು.

ಮೈಕ್ರಾಫೋನಿನಿಂದ ಶಬ್ದವು ವಿದ್ಯುತ್ತಾರಕವಾಗುತ್ತದೆ. ಆ ಶಬ್ದವು ತಂತಿಗಳ ಮೂಲಕ ಧ್ವನಿವಾಹಕ ಸ್ಥಳಕ್ಕೆಹೋಗಿ ಅಲ್ಲಿಂದ ಅಂತರಿಕ್ಷದಮೂಲಕ ಪ್ರಪಂಚದ ವಾಯುಮಂಡಲದಲ್ಲೆಲ್ಲಾ ಪಸರಿಸುತ್ತದೆ. ವಿದ್ಯುತ ಅಲೆಗಳು ಸೆಕಂಡಿಗೆ ೧ ಲಕ್ಷ ೮೬ ಸಾವಿರ ಮೈಲಿ (ನಿಮಿಷದ ೬೦ ರಲ್ಲೊಂದು ಭಾಗ) ಆದರೆ ಶಬ್ದಗಳ ಸಂಚಾರದ ವೇಗವು ಸೆಕಂಡಿಗೆ ೧೧೦೦ ಅಡಿಗಳು ಮಾತ್ರ ವಿದೆ. ಶಬ್ದ ಮತ್ತು ವಿದ್ಯುತ್ ಕ್ಷಿಕ್ ವಾಗ್ನೆಟಿಕ್ ವೇಗಗಳ ವೇಗವನ್ನು ಸಮನಾಡಿ ಜೊತೆಯಲ್ಲಿಯೇ ಒಂದೇ ವೇಗದಿಂದ ಕಳುಹಿಸುವ ವೈಚಿತ್ರ್ಯವು ಪರಿಶೋಧನೆಯ ಪ್ರಪಂಚದಲ್ಲಿ ಅಸಾಧಾರಣ

16ನೇ ಪುಟವನ್ನು ನೋಡಿರಿ

ಜನರ ವಿಶ್ವಾಸವೇ ?

ಓರಿಯೆಂಟಲ್ ಕಂಪನಿಯನ್ನು

ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾಡಿದೆ.

ಜಾರಿಯಲ್ಲಿರುವ ವಿಮೆ 31—12—40 ೫೩ ಕೋಟಿಗಿಂತಲುಹೆಚ್ಚು.
ನಿಧಿಯ ದ್ರವ್ಯ .... „ 27½ „
ವಾರ್ಷಿಕ ಆದಾಯ „ 4¾ „

ಅತ್ಯಂತ ಆಕರ್ಷಣೀಯವಾದ ನಮ್ಮ ವಿಮಾ ಯೋಜನೆಗಳ

ಪೂರ್ಣ ವಿವರಗಳನ್ನುಳ್ಳ ವಿಮಾ ಪುಸ್ತಕ
[Prospectus]ಕ್ಕಾಗಿ ಕೇಳಿನವರಿಗೆ ಬರೆಯಿರಿ.

ದಿ ಬ್ರಾಂಚ್ ಬ್ರಾಂಚ್ ಸೆಕ್ರೆಟರಿ

ಓರಿಯೆಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.,
ಆ್ಯಸೀಯಲ್ ಸ್ಟೇಟ್, ಮದ್ರಾಸ್.

ಆಫೀ ಇಂಜಿನೈರ್ಸ್, ಓರಿಯೆಂಟಲ್ ಲೈಫ್ ಆಫೀಸು
312 ರೂಪರ್ಟ್ಸ್ ಗೇಟ್ ಬ್ಯೂಸಹೇಟ್ ಬಳ್ಳಾರಿ.

ಮುಖ್ಯ ಕಾರ್ಯಾಲಯ, ಹಿಂದೂಸ್ಥಾನದಲ್ಲಿ ಸ್ಥಾಪಿತ
ಬೊಂಬಾಯಿ. 1874

ಈಗ ನಡೆಯುತ್ತಿರುವ ಮಹಾಯುದ್ಧದ ಸಿಂಹಾವಲೋಕನ

ಯೂರೋಪ ಖಂಡದಲ್ಲಿ $2\frac{1}{2}$ ವರ್ಷಗಳ ಕೆಳಗೆ ಪ್ರಾರಂಭವಾದ ಮಹಾಯುದ್ಧವು ಪ್ರಪಂಚದ ಎಲ್ಲಾ ಭಾಗಗಳಲ್ಲೂ ವ್ಯಾಪ್ತವಾಗಿದೆ. ವಿವಿಧ ರಂಗಗಳಲ್ಲಿ ಸಂಭವಿಸಿದ ಘಟನೆಗಳ ಸಂಕ್ಷಿಪ್ತ ವಿವರಣೆಯನ್ನು ಈ ಕೆಳಗೆ ಕೊಡಲಾಗಿದೆ.

(ಲೇ:— ಟಿ. ಬಿ. ಕೇ.)

ಯೂರೋಪ ರಣರಂಗ

ಯುದ್ಧ ಪ್ರಾರಂಭವಾದ ಒಂದು ವರ್ಷದಲ್ಲಿಯೇ ಯೂರೋಪಿನ ಸಣ್ಣ ಸಣ್ಣ ದೇಶಗಳೆಲ್ಲವೂ ಜರ್ಮನಿಯ ಸರ್ವಾಧಿಕಾರಿಯಾದ ಹಿಟ್ಲರನಿಗೆ ಶರಣಾಗತವಾದವು. ಆಹುತಿಯಾದ ಮುಖ್ಯದೇಶಗಳೆಂದರೆ- ಆಸ್ಟ್ರಿಯಾ - ಜೆಕೋಸ್ಲೋವೇಕಿಯ – ಹಾಲೆಂಡ್-ಡೆನ್ಮಾರ್ಕ್-ನಾರ್ವೆ--ಬೆಲ್ಜಿಯಂ-ಹಾಲೆಂಡ್-ಫ್ರಾನ್ಸು ಯುಗೋಸ್ಲೇನಿಯ-ಮತ್ತು ಗ್ರೀಸ್ ಆಲ್ಬೇನಿಯಾ ವಗೈರೆ-ಯುರೋಪ ಖಂಡದಲ್ಲಿ ಇನ್ನು ಶತ್ರು ವಶವಾಗದೆ ಉಳಿದಿರುವ ರಾಷ್ಟ್ರಗಳೆಂದರೆ ಸ್ವೀಡನ್ ಸ್ವಿಟ್ಸರ್ಲೆಂಡ್ ತುರ್ಕಿ ಐರ್ಲೆಂಡ್ ಸ್ಪೇನ್ ಪೋರ್ಚುಗಲ್ ಮೊದಲಿನ ನಾಲ್ಕು ರಾಷ್ಟ್ರಗಳು ಯಾರಕಡೆಗೂ ಸೇರದೆ ತಟಸ್ಥವಾಗಿ ಉಳಿದಿವೆ. ಸ್ಪೇನದೇಶವು ಇಟಲೀ ಜರ್ಮನಿಗಳಿಗೆ ಸ್ನೇಹ ಸಂಬಂಧವನ್ನಿಟ್ಟುಕೊಂಡಿದೆ. ಪೋರ್ಚುಗಲದೇಶವಾದರೂ ಸ್ಪೇನಿನ ಮಾರ್ಗದರ್ಶನತ್ವವನ್ನು ತ್ಯಾಜ್ಯಮಾಡಲಿಕ್ಕಿಲ್ಲೆಂದು ಕೆಲವರ ವಿಶ್ವಾಸ. ಯೂರೋಪ ಖಂಡದಲ್ಲಿ ಅಚ್ಚಿನ ರಾಷ್ಟ್ರಗಳಾದ ಜರ್ಮನಿ ಇಟಲಿಗಳೊಂದಿಗೆ ಇಂಗ್ಲೆಂಡು ದೇಶವು ಒಂದೇ ಸಮನಾಗಿ ತನ್ನ ಶಕ್ತಿ ಸಾಮರ್ಥ್ಯಗಳಿಂದ ಹೋರಾಡುತ್ತಿದೆ. ಅನೇಕವರ್ಷ ಬ್ರಿಟಿಷ್ ಸೈನ್ಯಗಳಿಗೆ ಸೋಲುಎಂದರೂ ಬ್ರಿಟನ್ ದೇಶವು ಎದೆಗುಂದಿಲ್ಲ. ತನ್ನ ದೇಶದ ಹದ್ದಿನೊಳಗೇ ಇದ್ದು ಸ್ವಸಂರಕ್ಷಣೆಯ ಹೋರಾಟವನ್ನು ಸಾಗಿಸಿದೆ.

ಜರ್ಮನಿ-ರಷ್ಯಾ ಯುದ್ಧ ಪ್ರಾರಂಭವಾಗಿ ೯ ತಿಂಗಳಾಗುತ್ತಾ ಬಂತು. ಮೊದಲು ಜರ್ಮನಿಗೆ ವಿಜಯವಾಯಿತು. ರಷ್ಯಾದೇಶದ ಸುಮಾರು ಮೈಲುಗಳ ಪ್ರದೇಶವೂ, ಸಂಪದ್ಭರಿತ ಭೂಮಿಗಳೂ ಅದರ ವಶವಾದವು. ರಷ್ಯಾದಲ್ಲಿ ಛಳಿಗಾಲವು ಪ್ರಾಪ್ತವಾದ ಮೇಲೆ ಜರ್ಮನಿಯ ಮುಂದೋಟವು ನಿಂತಿತು. ಇತ್ತೀಚಿಲ್ಲಿ ರಷ್ಯನರು ತಾವು ಕಳೆದುಕೊಂಡ ಸಾವಿರಾರು ಹಳ್ಳಿಗಳನ್ನು ಮಹಾ ಭೂಪ್ರದೇಶವನ್ನು ಮತ್ತೆ ಆಕ್ರಮಿಸಿದರು. ಪ್ರಪಂಚದಲ್ಲೇ ಇತಿಹಾಸ ಪ್ರಸಿದ್ಧವಾದ ಹೋರಾಟವನ್ನು ರಷ್ಯನರು ಹೂಡಿರುವರು. ತಮ್ಮ ಸ್ವಾತಂತ್ರ್ಯವನ್ನುಳಿಸಿಕೊಳ್ಳಲು ಬೀದಿಬೀದಿ ಮನೆ ಮನೆಗೂ ಹೋರಾಡುತ್ತಾ ಕೊನೆಗೆ ಕೈಕೈ ಯುದ್ಧಕ್ಕೆ ನಿಂತು ಸಂಪೂರ್ಣ ಬಲಿದಾನವಾಡಿ ವೀರ ಸ್ವರ್ಗವನ್ನೇರುವ ಶೂರರವರು!! ರಷ್ಯನರ ಸ್ವಾತಂತ್ರ್ಯ ಸಂಗ್ರಾಮವು ಇಡೀ ಜಗತ್ತಿಗೇ ಉದಾಹರಣಪ್ರಾಯವಾಗಿದೆ. ಗ್ರೀಕರೂಕೂಡ ಕಲಿತನದಿಂದ ಕಾದಿ ತನುಗಿಂತಲೂ ಹೆಚ್ಚು ಸಂಖ್ಯೆಯಲ್ಲಿದ್ದ ಅಧಿಕ ಮತ್ತು ಶ್ರೇಷ್ಠ ಯುದ್ಧ ಸಾಮಗ್ರಿಗಳನ್ನು ಹೊಂದಿದ ಜರ್ಮನಿಗೆ ಬಗ್ಗಬೇಕಾಯಿತು. ಅಂತೂ ಯೋರೋಪ್ ಖಂಡದಲ್ಲಿ ಗ್ರೀಕರನ್ನು ಬಿಟ್ಟಮೇಲೆ ರಷ್ಯನರೇ ಶ್ರೇಷ್ಠ ಯೋಧರೆಂದು ಹೇಳಬೇಕಾಗಿದೆ.

ಆಫ್ರಿಕಾದಲ್ಲಿ:—ಇಟಲಿಯು ಯುದ್ಧದಲ್ಲಿ ಸೇರಿದ ಕಾರಣ ಆಫ್ರಿಕಾದಲ್ಲಿ ಇಟಲಿಯ ಸಾಮ್ರಾಜ್ಯವು ಪುಣ್ಣಾಸಾಲಾಯಿತು. ಅಬಿಸೀನಿಯಾ ದೇಶವನ್ನು ಆಕ್ರಮಿಸಿಕೊಂಡು ಅಲ್ಲಿನ ರಾಜರಾದ ಹೇಲೆ ಸೆಲಸ್ಸಿಯನವರು ಲಂಡನ್ನಿಗೆ ಪಲಾಯನವಾಗುವಂತೆಮಾಡಿದ ಇಟಲೀದೇಶಕ್ಕೆ ಪಾಠ ಕಲಿಸಿದಂತಾಯಿತು. ಬ್ರಿಟಿಷ ಸೈನ್ಯಗಳ ಸಹಾಯದಿಂದ ಅಬಸೀನಿಯಾ ದೇಶದಲ್ಲಿ ಮತ್ತೆ ಹೇಲೆಸೆಲಸಿಯವರು ಸಿಂಹಾಸನಾರೂಢರಾದರು. ಬ್ರಿಟಿಷ್ ಸೋಮಾಲಿಲ್ಯಾಂಡದಲ್ಲಿ ಇಂಗ್ಲೀಷರಿಗೆ ಅಪಜಯವಾಯಿತು. ಅತ್ತ ಉತ್ತರಭಾಗದಲ್ಲಿ ಬ್ರಿಟಿಷರು ಜರ್ಮನರನ್ನು ಸೋಲಿಸುವುದೂ ಜರ್ಮನರು ಬ್ರಿಟಿಷರನ್ನು ಸೋಲಿಸುವುದೂ ನಡೆದೇಇದೆ. ಜರ್ಮನ ಸೇನಾಧಿಪತಿಯಾದ ಜನರಲ ರೋಮೆಲನು ಯುದ್ಧ ಕೌಶಲ್ಯ ಚತುರನೆಂದು ಬ್ರಿಟಿಷರೇ ಒಪ್ಪಿಕೊಂಡಿರುವರು. ಆಫ್ರಿಕಾ ಖಂಡದ ಉತ್ತರ ಭಾಗದ ಲಿಬ್ಯಾ ಪ್ರದೇಶದಲ್ಲಿ ಈಗ ಜರ್ಮನರು ಸುಮಾರು ಇನ್ನೂರು ಮೈಲಿಗಳ ಸಮುದ್ರ ತೀರ ಪ್ರದೇಶವನ್ನು ಆಕ್ರಮಿಸಿಕೊಂಡಿರುವರು. ಅವರು ಬೆಂಗಾಜಿ-ಗಾಜಾಲಗಳಿಂದ ಮುಂದುವರಿದರೆ ಈಜಿಪ್ಟ ದೇಶಕ್ಕೆ ಅಪಾಯ ತಟ್ಟುವದು. ಈಚಿನ ಯುದ್ಧದಲ್ಲಿ ಹಿಟ್ಲರನು ಜನರಲ್ ರೋಮೆಲನನ್ನು ಸನ್ಮಾನಿಸಿರುವನು. ಅವನಿಗೆ ಜರುಬಾವಳಿಗಳನ್ನು ದಯಪಾಲಿಸಿರುವನು.

ಏಶಿಯಾದಲ್ಲಿ:— ಜರ್ಮನರು ಕಾರಸ್ಥಾನ ವನ್ನರಿತು. ಇರಾಕನ ಸುಲ್ತಾನರಾದ ರಶೀದ ಅಲಿಯವರನ್ನು ಜರ್ಮನಿಗೆ ಓಡಿಸಿ ಇರಾಕನ್ನು ಬ್ರಿಟಿಷರು ಆಕ್ರಮಿಸಿಕೊಂಡು ಅಲ್ಲಿ ಸಾಕಾದಷ್ಟು ಮಿತ್ರ ಸೈನ್ಯಗಳನ್ನಿಟ್ಟಿರುವರು. ಜರ್ಮನಿ ರಷ್ಯಾ ಯುದ್ಧವಾರಂಭವಾದಮೇಲೆ ಇರಾನಿನ ಮುಖ್ಯಸ್ಥಾನ ಬಲವನ್ನು ಗುರ್ತಿಸಿ ರಷ್ಯಾ ಮತ್ತು ಬ್ರಿಟನ್ ಸೈನ್ಯಗಳು ಇರಾನದಲ್ಲಿ ಪ್ರವೇಶಿಸಿದವು. ಈಗ ಇರಾನ್ ಇರಾಕುಗಳಲ್ಲಿ ಜರ್ಮನ ಪ್ರಾಬಲ್ಯವೂ ಇಲ್ಲ. ಅಲ್ಲಿನ ಪ್ರಜೆಗಳಿಗೆ ಶಾಂತಿ ಇರುವದೆಂತಲೂ ರಕ್ಷಣೆ ಇರುವದೆಂತಲೂ ಹೇಳಲಾಗಿದೆ.

ಜಪಾನು:—ದೇಶವು ಅತಿ ಪೂರ್ವ ಭಾಗದಲ್ಲಿ ಬ್ರಿಟನ್ ಅಮೆರಿಕಾಗಳನ್ನೇ ಯುದ್ಧ ಸಾರಿದಾಗ ಒಂದೆರಡು ವಾರಗಳಲ್ಲಿ ಅದರ ತಂತ್ಯವಾಗುವದೆಂಬ ಜನರು ಭಾವಿಸ್ಸಿದ್ದರು. ಆದರೆ ಅನಕ್ಕೆ ಬದಲು ಜಗತ್ತಿಗೇ ಆಶ್ಚರ್ಯವಾಗುವ ರೀತಿಯಲ್ಲಿ ಜಪಾನರು ಹೋರಾಟಹೂಡಿ ಎಲ್ಲಾ ಮುಖ್ಯ ಭಾಗಗಳಲ್ಲಿಯೂ ಮಿತ್ರ ಪಕ್ಷದವರಿಗೆ ಬಲವಾದ ಹೊಡೆತವನ್ನು ಕೊಟ್ಟರು ಜಪಾನು ಯುದ್ಧ ಸಾರಿದ ಎರಡು ತಿಂಗಳುಗಳೊಳಗೇ

1ನೇ ಪುಟವನ್ನು ನೋಡಿರಿ

ಫ್ಯಾಕ್ಟರಿ ಮಾಲಿಕರಿಗೆ ಮುಖ್ಯ ಸೂಚನೆ.

ಜಿನ್ನಿಂಗು-ಪ್ರೆಸಿಂಗ-ಆಯಿಲ್ ನೆಲಗಡಲೆ ಫ್ಯಾಕ್ಟರಿ ವಗೈರೆ ೧೦ ಜನರಿಗಿಂತ ಹೆಚ್ಚಿಗೆಕೆಲಸ ಮಾಡುವ ಫ್ಯಾಕ್ಟರಿ–ಯಾ–ಕಾರ್ಯಾಲಯಗಳವರು ಸರ್ಕಾರದವರು ಏರ್ಪಡಿಸಿದ ನಿಯಮಗಳ ಪ್ರಕಾರ ಪಾಪಲು **ರಿಜಿಸ್ಟರು – ಕೂಲಿ ರಿಜಿಸ್ಟರು- ತನಿಖೆ ಪುಸ್ತಕ** ಮತ್ತು ಇತರ **ಫಾರಂಗಳು** ವಗೈರೆ ಸಾಹಿತ್ಯವೆಲ್ಲಾ ನಮ್ಮಲ್ಲಿ ಸಿದ್ಧವಾದ ಬೆಲೆಗೆ ದೊರೆಯುತ್ತವೆ.

ಹೆಚ್. ಎಸ್. ಅಂಡ ಸನ್ಸ್,
ಬಳ್ಳಾರಿ.

ORIENTAL

Govt. Security Life Assurance Co. Ltd.,
BOMBAY.

Policies continue to be issued to Civilians in India without payment of any extra premium to cover War Risk.

Civilian Policyholders of the Company in India are hereby informed taht they are fully insured against all War Risks under their Policies, and in the event of their death due to aerial, naval or other attacks by the enemy, the amount due will be paid to their heirs. This also applies to persons engaged in A.R.P. Services.

Head-Office:- **Oriental Building, Fort, BOMBAY.**

Branch-Office:- **Oriental Buildings, Armenian Street, G. T. MADRAS.**

Inspector's-Office:- **No 312, Raper's Gate, Brucepeta, BELLARY.**

ಓರಿಯಂಟಲ್

ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕೊ. ಲಿ., ಬೊಂಬಾಯಿ

ಮುಖ್ಯ ಸೂಚನೆ.

ಯುದ್ಧ ಭಯದ ಕಾರಣದಿಂದ ಹೆಚ್ಚಿನ ಪ್ರೀಮಿಯಂ ಹಣವನ್ನು ಕೇಳದೆ ಹಿಂದೂಸ್ಥಾನದಲ್ಲಿರುವ ನಾಗರೀಕರಿಗೆ [civilians] ವಿಮಾ ಪತ್ರಗಳನ್ನು ಕೊಡಲಾಗುತ್ತದೆ.

ಈಗಾಗಲೇ ನಮ್ಮ ಕಂಪನಿಯ ವಿಮಾಪತ್ರಗಳನ್ನು (ಪಾಲಿಸಿಗಳನ್ನು) ಪಡೆದಿರುವವರು ಯುದ್ಧಕಾರಣದಿಂದ ಉಂಟಾಗುವಂತಹ ಅಪಘಾತಗಳಿಂದ ಪೂರ್ಣವಾಗಿ ರಕ್ಷಿಸಲ್ಪಟ್ಟಿರುವರು. ಶತ್ರುವಿನ ಭೂಮ್ಯಾಕಾಶ - ಸಮುದ್ರ ಅಥವಾ ಯಾವ ದಾಳಿಗಳಿಂದಾಗಲಿ, ಪಾಲಿಸಿದಾರರು ಮರಣ ಹೊಂದುವುದಾದರೆ ಹಕ್ಕಿನ ಹಣವು ವಾರಸುದಾರರಿಗೆ ಕೊಡಲಾಗುವುದು. ವಿಮಾನದಾಳಿಗಳಿಂದ ಜನರನ್ನು ರಕ್ಷಿಸುವ ಕಾರ್ಯದಲ್ಲಿ (A. R. P. Services) ತೊಡಗಿರುವ ಜನರಿಗೂ ಇದು ಅನ್ವಯವಾಗುತ್ತದೆ.

ಮುಖ್ಯ ಕಛೇರಿ:- ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಶಾಖೆ:- ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಸ್ಟ್ರೀಟ್, ಜಿ. ಟಿ. ಮದ್ರಾಸ್.

ಇನ್ಸ್‌ಪೆಕ್ಟರರ ಆಫೀಸು:- ನಂ ೩೧೨, ರೂಪರ್ಸ್ ಗೇಟ್, ಬ್ರೂಸಪೇಟೆ, ಬಳ್ಳಾರಿ.

ರಾಯಲ್‌ನಲ್ಲಿ ನಯಾಸಂಸಾರ

ಪತ್ರಿಕೋದ್ಯಮದ ಪ್ರತಿಬಿಂಬ ಜನತೆಯ ಜೀವನಜ್ಯೋತಿ

**'ನಯಾಸಂಸಾರ' ಪತ್ರಿಕೆಯ ಸಂಪಾದಕರು 'ಸತ್ಯವನ್ನು ಬಿಡಬಾರದು ಸಳ್ಳಿಗೆಂದಿಗೂ ತಪ್ಪಿಸಗಬಾರದು' ಎಂಬ ಧ್ಯೇಯವನ್ನು ಮನಸಾ-ವಾಚಾ ತನ್ನ ಪತ್ರಿಕಾ ಜೀವನದಲ್ಲಿ ಅಳವಡಿಸಿಕೊಂಡಿದ್ದರು. 'ಸಂಸಾರ' ಪತ್ರಿಕೆಯ ಮುಖ್ಯ ಸುದ್ದಿಗಾರ ಪೂರ್ಣ ಚಂದ್ರನೂ ಈ ಧ್ಯೇಯದಿಂದಿದ್ದನು ಸಂಪಾದಕರ ತಾಯಿಯಂದ ಪೋಷಿಸಲ್ಪಟ್ಟು ಬಿ ಎ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣಳಾದ ಆಶಾ ದೇವಿಯ ಭಾವ ಚಿತ್ರವೂ ಪ್ರಕಂಪನೆಯೂ ಅಂದಿನ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಇದು ಪತ್ರಿಕಾ ಕಾರ್ಯಾಲಯದಲ್ಲೇ ಚರ್ಚೆಗೆ ಗುರಿಯಾಗಿತ್ತು ಪುರಸಭಾಧ್ಯಕ್ಷಧೀರಾಂಧ್ರ ಪ್ರಸೆಂಸೆ ಮಾಡುವುದರಿಂದ ಪತ್ರಿಕೆಯ ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುವುದೆಂದು ಪತ್ರಿಕಾ ವ್ಯವಸ್ಥಾಪಕನ ಆಕೆ ಪತ್ರಿಕಾ ಕಾರ್ಯಾಲಯದಲ್ಲಿ ಕರ್ಮನ ಹೊರತಾಗಿ ಉಳಿದವರೆಲ್ಲಾ ಪುರಸಭಾಧ್ಯಕ್ಷರ ಯೋಜನೆಗಳಿಗೆ ವಿರುದ್ಧವಿದ್ದರು

ಆಶಾದೇವಿಯನ್ನು ಸಂಪಾದಕನಾದ ಪ್ರೇಮಚಂದನು ಪ್ರೀತಿಸುತ್ತಿದ್ದುದು ಉಪಸಂಪಾದಕನಾದ ಚಾಣಾಗೆ ತಿಳಿದಿದ್ದಿತು ಪ್ರೇಮಚಂದನ ತಾಯಿಯು ಸತ್ತಿದ್ದರಿಂದ ಆಶಾದೇವಿಯು ಕಾಲೇಜಿಗೆ ಹೋಗಿದ್ದಾಗ ಚಾಣಾ ಮನೆಯಲ್ಲಿದ್ದಳು. ಧನಿಕರಾದ ಆಶಾದೇವಿಯನ್ನು ಮದ್ವೆಯಾಗಿ ಧ್ಯಯನಿಯಾಗಿಸಾಡುವ ಪತ್ರಿಕೆಗೆ ಧನ ಸಹಾಯ ಮಾಡುವ ಸೂಚನೆಯು ತಿರಸ್ಕೃತವಾಯಿತು. ಈ ತನ್ಮಧ್ಯೆ ಪ್ರೇಮಚಂದ ಆಶಾದೇವಿಯ ಪ್ರೇಮ ಪತ್ರಗಳು ಹೆಚ್ಚುತ್ತಿದ್ದವು. ಆದರೆ ಆಶಾದೇವಿಗೆ ಕೃತಜ್ಞತಾಬುದ್ಧಿ ಇದ್ದಿತಾಗಲಿ ಪ್ರೇಮಚಂದನಮೆ ಲೆ ಕಾ-ತನ ಅನುರಾಗ ವಿರಲಿಲ್ಲ. ಒಂದುದಿನ ನೈಸರ್ಗಿಕ ಪ್ರದರ್ಶನದ ಕಾಲದಲ್ಲಿ ಆಶಾದೇವಿ ವೈಧವ್ಯದಲ್ಲಿ ಪೂರ್ಣ ಚಂದನಿಗೂ ಅಕಸ್ಮಾತ್ತಾಗಿ ಭೇಟಿಯಾಗಿ ಅನುರಾಗವು ಬೆಳೆಯಿತು. ಇತ್ತ ಸಂಪಾದಕನಾದ ಪ್ರೇಮಚಂದನು ಆಶಾದೇವಿಯನ್ನು ಮದುವೆಯಾಗುವ ಇಚ್ಛೆಯಿಂದ ಏರ್ಪಾಟುಗಳನ್ನು ಮಾಡುತ್ತಾ ತನ್ನ ಹಣದ ಪರಿಸ್ಥಿತಿಯನ್ನು ಸುಧಾರಿಸುವುದರಲ್ಲಿದ್ದನು ನೈಸರ್ಗಿಕ ಜರೀನಾಳ ಮೂಲಕ ಧನಿಕನಾದ ಪಂಜೇರವನ್ನು ತನ್ನ ಕಡೆ ಮಾಡಿಕೊಂಡು ಧನಿರಾಮನನ್ನು ತನ್ನ ಪಾರವಲ್ಲಿ ಕೆಡವಲು ಯೋಚಿಸಿ ಮಾಡಿದ್ದನು. ಕೇವಲ ಧನದಾಹಿಗೆಬಿದ್ದು ಪತ್ರಿಕಾ ಸಂಪಾದಕರು ತಮ್ಮ ಧ್ಯೇಯಗಳನ್ನು ಮೂಲೆಗೊತ್ತಿ ಧನಿಕರಾದ ಪಂಜೇರ ಮತ್ತು ಧನಿರಾಮನ ವಜ್ರಮುಷ್ಟಿಗೆ ಸಿಕ್ಕಿರುವುದು ಮುಖ್ಯ ಸುದ್ದಿಗಾರನಾದ ಪೂರನನಿಗೆ ತಿಳಿದು ವಿವೇಕೋದಯವಾಯಿತು ಪೂರನನು 'ನಯಾಸಂಸಾರ' ಎಂಬ ಹೊಸ ಪತ್ರಿಕೆಯನ್ನು ಆಶಾದೇವಿಯುಕೊಟ್ಟ ಮುದ್ರಣಯಂತ್ರಗಳಿಂದ ಆರಂಭಿಸಿ ಧನಿಕರ ಮೋಸಗಳನ್ನೆಲ್ಲಾ ಬಯಲಿಗೆಳೆದನು ಮೋಸಗಾರರು ಹೂಡಿದ ಬಲೆಯಲ್ಲಿ ತಾನೇ ಸಿಕ್ಕುಬಿದ್ದರು ಆಶಾ – ಪೂರನರ ಪ್ರೇಮದಲ್ಲಿ – ಪ್ರೇಮಚಂದನು ಕಾಣಿಕೆಯಾಗಲಿಲ್ಲ ಸಂಸಾರ ಪತ್ರಿಕೆಯ ಸ್ಥಾನವನ್ನು ನಯಾಸಂಸಾರ ಪತ್ರಿಕೆಯು ಒಕ್ಕಮಿಸಿ ಎದರ ಆದರ್ಶವು ಹೊಸಸ್ಫೂರ್ತಿಯಿಂದ ಪ್ರಜ್ವಲಿಸಿತು**

ವಿದ್ಯಾಭ್ಯಾಸ ಮತ್ತು ಗ್ರಾಮಪುನರುಜ್ಜೀವನ

ನಮ್ಮ ಗ್ರಾಮಗಳ ಅವನತಿಯ ಕಾರಣಗಳಲ್ಲಿ ಅವಿದ್ಯೆಯೇ ಮುಖ್ಯವಾದುದು—ಗ್ರಾಮೋದ್ಧಾರಕ್ಕೆ ಮೊದಲು ವಿದ್ಯಾಪ್ರಸಾರದ ಅತಿಗಿಲ್ಲು ಹಾಕಬೇಕು; ಮೇಲೆ ಉದ್ಯೋಗ ವ್ಯವಸಾಯಾದಿಗಳ ಮಂದಿರ ಕಟ್ಟಬೇಕು. ಇದನ್ನು ನಾನಾ ದೇಶಗಳು ಹೇಗೆ ಸಾಧಿಸುತ್ತಿವೆ? ನಾವು ಹೇಗೆ ನಡೆಯಬೇಕು?

ಲೇಖಕರು: ಶ್ರೀ ಡಿ. ಕೃಷ್ಣಯ್ಯಂಗಾರ್, ಎಂ. ಎ, ಎಫ್ ಆರ್. ಇ. ಎಸ್., ಕೃಷ್ಣರಾಜನಗರ.

ವಿದ್ಯಾಭ್ಯಾಸವು ಪ್ರಪಂಚದಲ್ಲಿ ಪ್ರತಿಯೊಬ್ಬ ಮಾನವ ವ್ಯಕ್ತಿಯನ್ನು ಸುಶಿಕ್ಷಿತ, ಉಪಯುಕ್ತ ಮತ್ತು ಉತ್ತಮ ಸಾಮಾಜಿಕನನ್ನಾಗಿ ಮಾಡುವುದು. ಮಾನವನ ಜೀವಿತ ಕಾಲವಲ್ಲಿ ಉಂಟಾಗುವ ಎಲ್ಲ ಅವಸ್ಥೆಗಳೂ, ಎಲ್ಲ ಅಂತಸ್ತುಗಳೂ ವಿದ್ಯಾಭ್ಯಾಸಕ್ಕೆ ಒಳಪಡುತ್ತವೆ. ಜ್ಞಾನ ಮತ್ತು ಜೀವನ ಇವು ಇದರ ಬಹು ಮುಖ್ಯ ವಿಷಯಗಳು. ನಿಜವಾದ ಜ್ಞಾನವು ಮಾನವ ಜೀವನದ ಸ್ಥಿತಿಯನ್ನು ಉತ್ತಮಪಡಿಸುವುದು. ಜ್ಞಾನಕ್ಕೆ ಸಮಾನವಾದ ಮತ್ತೊಂದು ವಸ್ತುವು ಪ್ರಪಂಚದಲ್ಲಿ ಸಿಕ್ಕುವುದಿಲ್ಲ. ಇಂತಹ ಜ್ಞಾನಸಂಪಾದನೆಗೆ ವಿದ್ಯಾಭ್ಯಾಸವು ಒಂದು ದೊಡ್ಡ ಸಾಧನ. ಹಳ್ಳಿಗಳ ಬೀಡಾದ ನಮ್ಮ ದೇಶದಲ್ಲಿ, ವಿದ್ಯಾಭ್ಯಾಸದ ಆನುಕೂಲ್ಯಗಳು ಹೆಚ್ಚು, ಹಳ್ಳಿಹಳ್ಳಿಯಲ್ಲಿಯೂ ವಿದ್ಯಾವಂತರ ಸಂಖ್ಯೆ ಬೇಕಾದಷ್ಟಿದ್ದರೆ, ದೇಶವು ಏಳಿಗೆಯ ದಾರಿಯನ್ನು ಹಿಡಿದಿದೆ ಎಂದು ಹೇಳಬಹುದು.

ನಮ್ಮ ದೇಶವು ರೈತರ ನಾಡು. ಸೂರರಲ್ಲಿ ಹೊಂಬತ್ತು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಇನ್ನು ಹೆಚ್ಚಿನ ಜನಸಂಖ್ಯೆ ಇರುವ ಹಳ್ಳಿಗಳು ಬಹಳ ಹೀನಾವಸ್ಥೆಯಲ್ಲಿವೆ. ಬದತನದ ತೌರುಮನೆಗಳೆಂದರೆ ಹಳ್ಳಿಗಳು; ಸಮಾನಜೀವನವು ಕಷ್ಟವಾಗುತ್ತಿರುವ ಸ್ಥಳಗಳೆಂದರೆ ಹಳ್ಳಿಗಳು; ನಿರುತ್ಸಾಹ ನಿರುದ್ಯೋಗ ಹೆಚ್ಚಾಗಿ ಹಬ್ಬಿರುವ ಭಾಗಗಳೆಂದರೆ ಹಳ್ಳಿಗಳು. ಒಟ್ಟನಲ್ಲಿ ಹಳ್ಳಿಯ ರೈತರಿಗೆ ಸಾಕಷ್ಟು ಆಹಾರವಿಲ್ಲ, ರುಚಿಯಾದ ಬಟ್ಟೆಗಳಿಲ್ಲ ನಿರ್ಮಲವಾದ ಮನೆಗಳಲ್ಲ. ಪ್ರಾಯಶಃ ಎಲ್ಲರೂ ಋಣದಲ್ಲಿಯೇ ಹುಟ್ಟಿ, ಋಣದಲ್ಲಿಯೇ ಬೆಳೆದು ಋಣದಲ್ಲಿಯೇ ಮಡಿಯುತ್ತಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯಿಂದ ಬೆರಗಾದ ಹಳ್ಳಿಯ ತರುಣರು ತಮ್ಮ ಜನ್ಮಸ್ಥಳಗಳನ್ನು ಬಿಡುತ್ತಿದ್ದಾರೆ. ಅವಿದ್ಯೆ, ಅಜ್ಞಾನ, ಅಹಂಕಾರ ಇವೆಲ್ಲವೂ ಹಳ್ಳಿಗಳಲ್ಲಿ ವೃದ್ಧಿಯಾಗುತ್ತಿವೆ ಹೀಗೆಯೇ ಕೆಲವುಕಾಲ ಹಳ್ಳಿಗಳನ್ನು ಬಿಟ್ಟು ಬಿಟ್ಟರೆ, ಅವುಗಳು ನಿರ್ನಾಮವಾಗುವುದೇನು ತಿಳಿದು, ಆರ್ಥಶಾಸ್ತ್ರಜ್ಞರೂ, ಆಧುನಿಕವಿಚಾರಪರರೂ, ಶಿಕ್ಷಣವೇತ್ತರೂ ತಮ್ಮ ದಿವ್ಯದೃಷ್ಟಿಯನ್ನು ಹಳ್ಳಿಯ ಪುನರುದ್ಧಾರದ ಕಡೆಗೆ ತಿರುಗಿಸಿದ್ದಾರೆ.

ಹಳ್ಳಿಗಳನ್ನು ಹೀನಾವಸ್ಥೆಗೆ ತಳ್ಳಿದ ಅತಿಮುಖ್ಯವಾದ ಸಾಮಾನ್ಯರಿ ಎಂದರೆ ರೈತರ ಅಜ್ಞಾನ ಈ ಅಜ್ಞಾನವೇ ಅವರ ಎಲ್ಲ ವಿಧವಾದ ಕಷ್ಟಗಳಿಗೂ ಮುಖ್ಯ ಕಾರಣವಾಗಿದೆ ಈ ಗಾಢಾಂಧಕಾರವನ್ನು ಹೋಗಲಾಡಿಸಿ ರೈತರ ಜೀವನವನ್ನು ಶುಚಿಯಾದನ್ನಾಗಿಯೂ, ಪವಿತ್ರವಾಗುದನ್ನಾಗಿಯೂ ಮಾಡಬೇಕಾದರೆ ವಿದ್ಯಾಭ್ಯಾಸವೇ ಮೂಲಮಂತ್ರವಾಗಬೇಕು ರೈತರಲ್ಲಿ ತಿಳಿವಿನ ಬೆಳಕನ್ನು ಹರಡಬೆ ಕಾದರೆ ವಿದ್ಯಾಭ್ಯಾಸಕ್ರಮವು ಸರಿಯಾಗಬೇಕು. ಹಳ್ಳಿಗಳಲ್ಲಿ ಉಂಟಾಗುತ್ತಿರುವ ದ್ವೇಷ, ಒಡಕು, ಅಕಾಂತತೆ ಇವುಗಳೆಲ್ಲಾ ಮಾಯವಾಗಬೇಕಾದರೆ ಅಲ್ಲಿಯ ನಿರಕ್ಷರತೆಯು ನಿರ್ಮೂಲನವಾಗಬೇಕು. ಇಲ್ಲಿಯ ಹಾಗು ಇತರ ದೇಶಗಳ ಅಕ್ಷರಸ್ಥರ ಸಂಖ್ಯೆಯಲ್ಲಿಯೂ ವಿದ್ಯಾಭ್ಯಾಸಕ್ಕೆ ವ್ಯಯವಾಗುತ್ತಿರುವ ಹಣವಲಗಿನಲ್ಲಿಯೂ ಕಂಡುಬರುವ ಅಜಗಜಾಂತರವನ್ನು ನೋಡಿದರೆ, ನಮ್ಮ ದೇಶದ ದೀನ ಹೀನಸ್ಥಿತಿಯು ಕಣ್ಮುಂಜೆ ಕಟ್ಟುವಂತಿದೆ.

ಮಿಕ್ಕಿದ ಭಾಗವನ್ನು ನೋಡಿರಿ

Radio-lectric House Bellary.

Radio Dealers & Engineers.



Radio Sets. Sales, Service and repairs of all makes of Radio undertaken Radio valves and spares always held in stock. Rewinding Armaturers - Car generators, Fans etc; and repairs of anything electrical undertaken. Battery charging and reconditioning a speciality. Try and be convinced.

ರೇಡಿಯೋ-ಲೆಕ್ಟ್ರಿಕ್ ಹೌಸ್ ಬಳ್ಳಾರಿ.

ರೇಡಿಯೋ ವ್ಯಾಪಾರಿಗಳು ಮತ್ತು ಎಂಜಿನಿಯರ್ಸ್.

ನಮ್ಮಲ್ಲಿ ರೇಡಿಯೋಗಳ ಸೂಕ್ಷ್ಮ - ರಿಪೇರಿ ವಗೈರೆ ನಡೆಯುವುದಲ್ಲದೆ ಅದಕ್ಕೆ ಸಂಬಂಧಿಸಿದ ಪಾರ್ಟ್ಸ್ ಮತ್ತು ಇತರೆ ಜೆಲ್ಲರಿ ಸಾಮಗ್ರಿಗಳೆಲ್ಲಾ ದೊರೆಯುತ್ತವೆ. ಬ್ಯಾಟರಿ ಮತ್ತು ಕಾರುಗಳ ಬ್ಯಾಟರಿ ಛಾರ್ಜು ಮಾಡುವುದು ಮತ್ತು ಎಲೆಕ್ಟ್ರಿಕ್ ಸಹಾಯದಿಂದ ನಡೆಯುವ ಪಂಖಾ ವಗೈರೆ ಎಲ್ಲಾ ವಸ್ತುಗಳನ್ನೂ ರಿಪೇರಿ ಮಾಡಿಕೊಡುತ್ತೇವೆ. ಒಂದು ಸಲ ಪರೀಕ್ಷಿಸಿಲ್ಲಿ ಕಾರ್ಯ ಕೌಶಲ್ಯವು ನಿಮ್ಮ ಅನುಭವಕ್ಕೆ ಬರುತ್ತದೆ.

ಸರಸ್ವತೀ ಲೇಹ್ಯ.

ಧಾತು ನಷ್ಟ-ಯೂ-ದೌರ್ಬಲ್ಯ, ಕುಸುಮ ವ್ಯಾಧಿ ಎದೆಯುರಿ, ಉಬ್ಬಸ, ಕೆಮ್ಮು, ಕ್ಷಯ ವಸ್ತು ಉನ್ಮಾದ, ಪೈತ್ಯ ವಗೈರೆ ಅನೇಕ ರೋಗಗಳನ್ನು ನಿವಾರಣೆ ಮಾಡಿ ರಕ್ತ ಶುದ್ಧಿಮಾಡಿ ದೇಹಕ್ಕೆ ಅಪರಿಮಿತ ಬಲವನ್ನು ಕಾಂತಿಯನ್ನು ಕೊಡುವುದು. ಆಯುರಭಿವೃದ್ಧಿಯಾಗುವ ಈ ಲೇಹವನ್ನು ಇಂದೇ ಉಪಯೋಗಿಸಿರಿ. ಔಷಧದೊಡನೆ ಅನುಪಾನ ಪತ್ಯ.

೧ ಸೇರಿಗೆ ೧-೪-೦

೨ ಸೇರಿನ ಟೀಸೆ ೨-೪-೦

ಸ್ಟಾಕಿಸ್ಟ್-ತೋರಣಗಲ್ಲು ಮರಿಸ್ವಾಮಿ ಬಳ್ಳಾರಿ.

NEO-MADRAS CAFE, BELLARY.

ಬಳ್ಳಾರಿಯ ಪ್ರಸಿದ್ಧ ಬೋರ್ಡಿಂಗ್ ಹೌಸ್.

Best boarding & Lodging House
Palatial & enviable quarters. Well ventilated rooms with electric lights.
Pure Ghee preparations.
Tea-party & Dinner arrangements undertaken at short notice.
Satisfaction guaranteed.
Service our speciality.

★

ಮನೋಹರ ಮತ್ತು ಆಕರ್ಷಣೀಯ ವಾಸಸ್ಥಾನ.
ಗಾಳಿ ಬೆಳಕುಗಳಿಂದ ಕೂಡಿದ ವಿಶಾಲ ಕೋಣೆಗಳು.
ರೈಲ್ವೆ ಸ್ಟೇಷನ್-ಬಸ್‌ಸ್ಟಾಂಡ್ ಸಮೀಪ.
ಸಕಲ ವ್ಯವಹಾರಗಳ ಕೇಂದ್ರ ಸ್ಥಳ.
ಶುದ್ಧ ತುಪ್ಪದಲ್ಲೇ ಮಾಡಿದ ಫಲಹಾರ ಸಾಮಗ್ರಿಗಳು.
ಸ್ವಲ್ಪಾವಧಿಯ ಸೂಚನೆಯಿಂದ ಬೋಜನ-ಟೀಪಾರ್ಟಿ ಏರ್ಪಡಿಸುತ್ತೇವೆ
ವಿನಯಶೀಲರಾದ ಸೇವಕ ವರ್ಗ.

When you visit Bellary
Do go to
NEO MADRAS CAFE
the best Boarding & Lodging house

ಬಳ್ಳಾರಿಗೆ ಬಂದಾಗ ಇಲ್ಲಿಳಿಯಲು ಮರೆಯಬೇಡಿರಿ.

ವಿದ್ಯಾಭ್ಯಾಸ ಮತ್ತು ಗಾಮ ಪುನರುಜ್ಜೀವನ

ಗಿನೀ ಪಟದಿಂದ ಬಂದದ್ದು

ದೇಶ ನೂರಕ್ಕೆ ಅಕ್ಷರಸ್ಥರ ತಲೆಯೊಂದಕ್ಕೆ ಪ್ರವಾಣ ಆಗುತ್ತಿರುವನೆಜ್ಜ

ಇಂಗ್ಲೆಂಡು	೯೨-೫	೧೭೨ ರೂ
ಜರ್ಮನಿ	೯೯-೬	
ಅಮೆರಿಕಾ	೯೫-೬	೨೭೫ ,,
ಜಪಾನ್	೯೬-೦	೮೮ ,,
ಕಾನಡಾ	೯೪-೯	೧೯೯ ,,
ಹಿಂದುಸ್ಥಾನ	೮-೦	೨೨ ,,

ಹೀಗಿರುವಾಗ ಇಲ್ಲಿಯ ವಿದ್ಯಾಭ್ಯಾಸವನ್ನು ಉತ್ತಮಪಡಿಸಬೇಕು. ಇದರಿಂದ ಕಾಲಾನುಕ್ರಮದಲ್ಲಿ ಹಳ್ಳಿಯ ಪುನರುದ್ಧಾರವು ತನಾಗಿಯೇ ಆಗುವುದು. ಆದುದರಿಂದ ವಿದ್ಯಾಭ್ಯಾಸವು ಗ್ರಾಮಪುನರುಜ್ಜೀವನವನ್ನು ಬಹುಮುಖ್ಯವಾದ ಅಂಗವಾಗುವುದರಲ್ಲಿ ಸಂಶಯವಿಲ್ಲ.

ಈಗಿನ ಶಿಕ್ಷಣವು - ಶಿಕ್ಷಣಕ್ರಮವು ದೋಷಯುಕ್ತವೂ ನಿಷ್ಫಲವೂ ಆಗಿದೆಂದು ಅನೇಕ ತಜ್ಞರು ಅಧಿಕಾರವಾಣಿಯಿಂದ ಹೇಳಿದ್ದಾರೆ. ಈಗಿನ ವಿದ್ಯಾಭ್ಯಾಸಕ್ರಮವು ಸ್ವತಃ ನೈತಿಕಧಾರ್ಮಿಕ ತಳಹದಿಯಿಲ್ಲದ್ದು. ಇಂತಹ ಜ್ಞಾನವು ಪ್ರಯೋಜನಕಾರಿಯಲ್ಲವೆಂದೂ, ಇಂತಹುದು ಅಜ್ಞಾನಕ್ಕಿಂತ ಅಪಾಯಕರವಾಗುವುದೆಂದೂ ಅಭಿಪ್ರಾಯಪಡಲಾಗಿದೆ. ಒಟ್ಟಿನಲ್ಲಿ ನಮ್ಮ ದೇಶದ ಈ ಪರಿಸ್ಥಿತಿಯನ್ನು ಪಲ್ಲಟಿಸುವುದು ಅತ್ಯಗತ್ಯವಾಗಿದೆ.

ಈಗ್ಗೆ ೩೦ ವರ್ಷಗಳ ಹಿಂದೆ ಇಟಲಿದೇಶದ ವಿದ್ಯಾಭ್ಯಾಸಕ್ರಮವು ಬಹಳ ಹೀನಸ್ಥಿತಿಯಲ್ಲಿತ್ತು. ಕಳೆದ ಮಹಾಯುದ್ಧಸಮಯದಲ್ಲಿ ಕೂಡ ಇಟಲಿಗೆ ಅಷ್ಟು ಗಣ್ಯಸ್ಥಾನವಿರಲಿಲ್ಲ. ಯುದ್ಧವಾದಮೇಲೆ ತನಗೆ ಹೆಚ್ಚು ಲಾಭದಾಯಕ ಪ್ರದೇಶ ಸಿಕ್ಕಲಿಲ್ಲವೆಂಬ ಆಕಾಂಕ್ಷಭಂಗವು ಇಟಲಿಗುಂಟಾಯಿತು. ಯುದ್ಧದಷ್ಟೇ ಡಾಡಿಗಾಯಿಸಬ್ಬ ಮುಸಲಿನಿಯು ಮುಂದೆ ಬಂದು ಅವನು ತಾನಾತಿ, ಆಪಮಾಧಾನಗಳಿಂದ ಕೂಡಿದ ಇಟಲಿ ದೇಶದ ಜನಗಳ ಮನಸ್ಸಿಗೆ ಚೆನ್ನಾಗಿ ಹಿಡಿಯುವಂತೆ ಅವರಲ್ಲಿ ದೇಶವಾತ್ಸಲ್ಯ ಮತ್ತು ದೇಶಪ್ರೇಮವನ್ನುಂಟುಮಾಡಲು ಉಪಾಯವನ್ನು ಹುಡುಕಿದ. ಇದಕ್ಕಾಗಿ ಮೊದಲು ದೇಶದ ವಿದ್ಯಾಭ್ಯಾಸಕ್ರಮವನ್ನು ಸರಿಪಡಿಸಿದ. ಬಂದನಲ ಅವನು ಹೀಗೆ ಹೇಳಿದ್ದಾನೆ.— The Government demands that the school shall derive its inspiration from Facism; it demands that every school in every grade and in all its instructions train Italian youth to understand Facism, to enable itself through Faciam & in the historical atmosphere created by the Facist revolution'

ಇಂದು ಇಟಲಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ೮ ರಿಂದ ೧೪ ವರ್ಷದವರೆಗೆ 'ಬ್ಯಾಲಿಲ್ಲಾ' ಎಂಬ ಸ್ಥಳೀಯ ಸಂಸ್ಥೆಯಲ್ಲಿ ಶಿಕ್ಷಣಹೊಂದಿ, ಅನಂತರ ೧೪ ವರುಷದವರಿಗೆ 'ಅವಾಂಗಾರ್ಡಿಯ ಬ್ಯಾಟಿಸ್ಟ' ಎಂಬ ಸಂಸ್ಥೆಯಲ್ಲಿ ಹೆಚ್ಚಿನ ಶಿಕ್ಷಣ ಪಡೆಯುತ್ತಾನೆ. ಇಲ್ಲಿರುವಾಗಲೆ ಮಿಲಿಟರಿ ಶಿಕ್ಷಣವು ಪ್ರಾರಂಭವಾಗುವುದು. ೨೧ ವಯಸ್ಸಿನ ವೇಳೆಗೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ದೇಶಪ್ರೇಮ, ಧೈರ್ಯ, ಭ್ರಾತೃಭಾವನೆ, ಸ್ಥೈರ್ಯ ಮುಂತಾದ ಗುಣಗಳು ಚೆನ್ನಾಗಿ ಬೇರೂರುವಂತೆ ಮಾಡಲಾಗಿದೆ. ವಿದ್ಯಾಭ್ಯಾಸದ ಉನ್ನತಿಗೆ ಮುಖ್ಯವಾದ ಉತ್ತ

ಮ ಉಪಾಧ್ಯಾಯರು, ಸರಿಯಾದ ಮತ್ತು ಉತ್ತಮ ಪಠ್ಯಪುಸ್ತಕಗಳು, ಮತ್ತು ಶಿಕ್ಷಣಕ್ರಮದಲ್ಲಿ ಒಂದುವಿಧವಾದ ಸ್ವಾತಂತ್ರ್ಯ ಇವು ಮೂರು ವಿಷಯಗಳಿಗೂ ಇಟಲಿಯು ಮೊನ್ನಾಗಿ ಗಮನ ಕೊಟ್ಟಿದೆ. ಸಾಧಾರಣವಾಗಿ, ದೇಶಪ್ರೇಮವನ್ನು ಹೆಚ್ಚಿಸಿ ಈಗಿರುವ ಸ್ವತಂತ್ರಾಧಿಕಾರರಾಜ್ಯಭಾರವಲ್ಲಿ ಉತ್ಕೃಷ್ಟವಾತ್ಸಲ್ಯವನ್ನುಂಟುಮಾಡತಕ್ಕ ಪಠ್ಯಪುಸ್ತಕಗಳನ್ನೇ ಆರಿಸಲಾಗುತ್ತಿದೆ. ಚೆನ್ನಾಗಿ ತರಬೇತಾದ ವಿಶ್ವವಿದ್ಯಾನಿಲಯದ ಪದವೀಧರರನ್ನೇ ಉಪಾಧ್ಯಾಯರನ್ನಾಗಿ ಆರಿಸಲಾಗುತ್ತಿದೆ ಅವರಿಗೆ ವೇತನವನ್ನು ಹೆಚ್ಚಿಸಿರುವುದಲ್ಲದೆ, ಸಮಾಜದಲ್ಲಿ ಗಣ್ಯಸ್ಥಾನವನ್ನು ಕಲ್ಪಿಸಲಾಗಿದೆ. ಇಲ್ಲಿಯ ಶಿಕ್ಷಣಕ್ರಮದಲ್ಲಿ ಒಂದು ವಿಧವಾದ ಸ್ವತಂತ್ರತೆ ಇದೆ. ಚಿಕ್ಕಮಕ್ಕಳ ಶಿಕ್ಷಣದ ಹೊಸ ಪದ್ಧತಿಯನ್ನು ಕಂಡುಹಿಡಿದ ಮ್ಯಾಡಾಂ, ಮಾಂಟಸೋರಿ ಅವರು ಇಟಲಿ ದೇಶದವರು.

ಹೀಗೆ ಇಟಲಿದೇಶವು ತನ್ನ ವಿದ್ಯಾಭ್ಯಾಸಕ್ರಮವನ್ನು ಮೊದಲು ಉತ್ತಮಪಡಿಸಿ, ಅನಂತರ ಗ್ರಾಮವುನರುದ್ಧಾರ ಕಾರ್ಯಗಳನ್ನು ಕೈಕೊಂಡಿದೆ. ಶ್ರೀತರು ಪಟ್ಟಣದಲ್ಲಿ ಬಂದು ವಾಸಿಸುವುದಕ್ಕೆ ಅಲ್ಲಿ ಅವಕಾಶವನ್ನೀಯುತ್ತಿಲ್ಲ. ಅವರು ಹಳ್ಳಿಯಲ್ಲಿಯೇ ನಿಂತು, ವ್ಯವಸಾಯವನ್ನೂ ಇತರ ಕೈಗಾರಿಕೆಗಳನ್ನೂ ಉತ್ತಮಪಡಿಸುವುದಕ್ಕೆ ಅನುಕೂಲ್ಯಗಳನ್ನು ಕಲ್ಪಿಸಲಾಗುತ್ತಿದೆ. ಶ್ರೀತರು ಆರೋಗ್ಯಕರವಾದ ಮನೆಗಳಲ್ಲಿ ವಾಸಿಸುವುದಕ್ಕೂ, ಅವರ ಜೀವನವು ಚೆನ್ನಾಗಿ ನಡೆಯುವುದಕ್ಕೂ ಬೇಕಾದ ಎಲ್ಲ ಸೌಕರ್ಯಗಳನ್ನು ಒದಗಿಸಲಾಗಿದೆ 'ಇಟಲಿಸೀಕರದ ಸ್ವಜಾಸುಖ್ಯವೂ, ಐಶ್ವರ್ಯವೂ ಅಭಿವೃದ್ಧಿಯಾಗಬೇಕಾದರೆ ಮೊದಲು ಅಲ್ಲಿಯ ಗ್ರಾಮಗಳು ಅಭಿವೃದ್ಧಿ ಹೊಂದಬೇಕು. ಎಂಬುದೇ ಮುಸಲಿನಿಯ ಪಕ್ಷ.

ಇನ್ನು ಜರ್ಮನಿಯ ಕಡೆ ನೋಡೋಣ. ಹಿಂದಿನ ಮಹಾಯುದ್ಧವಾದಮೇಲೆ, ಜರ್ಮನಿಗೆ ದುರ್ದಸೆಪ್ರಾಪ್ತವಾಯಿತು; ರಾಜ್ಯಭೋಯಿಸು ಜನಗಳು ಸತ್ತರು; ಸಾಲಕೊಟ್ಟವರು ನಾಲ್ಕಾರು ಕಡೆಗಳಿಂದ ಪೀಡಿಸಲಾರಂಭಿಸಿದರು ದೇಶವು ಈ ಸ್ಥಿತಿಯಲ್ಲಿದ್ದಾಗ ಹಿಟ್ಲರ್ ಮಹಾಶಯನು ಬಂದು 'Thoroughness submissiveness, inexhaustible patience and excessive patriotism.' ಪೂರ್ಣತೆ, ಅತಿನಮ್ರತೆ ಸಾಂಗೋಪಾಂಗವಾದ ಸಹನಶೀಲತೆ, ಸ್ವದೇಶಸ್ತ್ರೀತಿ. ಮುಂತಾದವು ಜರ್ಮನ್ ದೇಶೀಯರ ಮುಖ್ಯ ಗುಣಗಳು. ಈ ಗುಣಗಳಿಗೆ ತಕ್ಕ ಹಾಗೆ, ಹಿಟ್ಲರನು ವಿದ್ಯಭ್ಯಾಸವನ್ನು ಮೊದಲು ಸಂಪಡಿಸಿದ. ಅವನ ಒಡ್ಡೂಲು ಹೀಗೆ ಪ್ರಕಟವಾಗಿದೆ.—'The true National State must make it, its duty to develop a suitable system of education for its youth, so that it may maintain a race of men prepared for the last and greatest decisions of this globe No boy and no girl shall be permitted to leave school, unless he or she has been initiated into the deepest knowledge about then inner necessity and essence of blood purity'

ಮೊದಲು ಜರ್ಮನಿಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಎಲ್ಲರಿಗೂ ಅನ್ವಯಿಸುವಂತೆಯೂ, ಪ್ರೌಢಶಿಕ್ಷಣವು ಕೆಲವರಿಗೆ ಮಾತ್ರ ಅನ್ವಯಿಸುವಂತೆಯೂ ಭೇದವಿತ್ತು ಹಿಟ್ಲರನ ಕಾಲವನ್ನು ಎಲ್ಲಾ ಮಕ್ಕಳಿಗೂ ಒಂದೇ ರೀತಿಯಾದ ಶಿಕ್ಷಣಕ್ರಮವನ್ನೇರ್ಪಡಿಸಿ ನೂತನ ರೀತಿಯಲ್ಲಿ ಶಾಲೆಗಳನ್ನು ಸ್ಥಾಪಿಸಿ, ಅಲ್ಲಿಯ ಶಿಕ್ಷಕ ಕ್ರಮವನ್ನಲ್ಲಿ ಜರ್ಮನ ಸಂಸ್ಕೃತಿ, ಸ್ವದೇಶಸಂಸ್ಥೆ ಮುಂತಾದ ಗುಣಗಳಿಗೆ ಪ್ರಾಮುಖ್ಯತೆಯನ್ನು ಕಲ್ಪಿಸಿದ್ದಾನೆ. ಇವರಿಂದ ಜನಗಳಲ್ಲಿ ಏಕವ್ಯತ್ವ ದೇಶಪ್ರೇಮ ಹೆಚ್ಚಾಯಿತು

ಇವನಾದರೂ ಕೇವಲ ವ್ಯಾಪಕಮಿಕ ವಿದ್ಯಾಭ್ಯಾಸವನ್ನು ಮುಗಿಸಿದವರು ಪ್ರಾಥಮಿಕ ಶಾಲಾಧ್ಯಾಪಕರಾಗಿರುತ್ತಿದ್ದ ಮುಂಚಿನ ರೂಢಿಯನ್ನು ನುರಿಸಿ ವಿಶ್ವವಿದ್ಯಾನಿಲಯದ ಪದವೀಧರರನ್ನು ನಿಯಮಿಸಿ, ಪ್ರಾಥಮಿಕ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಿದ. ದೇಶದ ಅನೇಕ ಭಾಗಗಳಲ್ಲಿ ಸಾರ್ವಜನಿಕಗ್ರಂಥಾಲಯಗಳನ್ನು ಸ್ಥಾಪಿಸಿ, ಉಪಾಧ್ಯಾಯರ ಶಿಕ್ಷಣಕ್ಕೆ ಹೆಚ್ಚು ಸೌಕರ್ಯವನ್ನು ಕಲ್ಪಿಸಿದ್ದಾನೆ. ಹೀಗೆಯೇ ಸ್ತ್ರೀವಿದ್ಯಾಭ್ಯಾಸವನ್ನೂ ಉತ್ತಮಪಡಿಸಲಾಗಿದೆ. ಇಂದು ಜರ್ಮನಿದೇಶದ ಪ್ರತಿಯೊಂದು ಹಳ್ಳಿಯಲ್ಲಿಯೂ ವಿದ್ಯಾಭ್ಯಾಸ ಸೌಕರ್ಯಗಳನ್ನು ಸಮರ್ಪಕವಾಗಿ ಏರ್ಪಡಿಸಲಾಗಿದೆ. ಇಂದು ಜರ್ಮನ್ ಶಿಕ್ಷಣಕ್ರಮದಲ್ಲಿ ಪ್ರತ್ಯಕ್ಷ ರಾಷ್ಟ್ರನಿರ್ಮಾಣಕ್ಕೆ ಸಾಧಕವಾದ ವಿಷಯಗಳನ್ನು ಸಮಾವೇಶಗೊಳಿಸಲಾಗಿದೆ. ಶಿಕ್ಷಣಹೊಂದುತ್ತಿರುವಾಗಲೆ ನಮ್ಮಲ್ಲಿ ದೇಶಾಭಿಮಾನವೂ ಸ್ವರಾಷ್ಟ್ರಜ್ಞಾನವೂ ಬೆಳೆಯಬೇಕು. ಜರ್ಮನ್ ಸಂಸ್ಕೃತಿಯ ಬಸ್ಸೆ ಜೆಮ್ಮೆ, ಜರ್ಮನ್ ಸರ್ವತೋಮುಖತೆಯಲ್ಲಿ ಶ್ರದ್ಧೆ, ಜರ್ಮನಿಗಾಗಿ ಬಲಿದಾನಮಾಡುವ ಸಿದ್ಧತೆ - ಮುಂತಾದ ಉತ್ತಮ ಗುಣಗಳೆ ಅಲ್ಲಿ, ಯಲ್ಲಾ ವಿದ್ಯಾಭ್ಯಾಸದ ಮೂಲಕ ಚೆನ್ನಾಗಿ ಬೆಳೆಯುವಂತೆ ಮಾಡಲಾಗಿದೆ.

ಇದೇ ರೀತಿಯಲ್ಲಿ ಫ್ರಾನ್ಸು ದೇಶದಲ್ಲಿಯೂ ವಿದ್ಯಾಭ್ಯಾಸಕ್ರಮವನ್ನು ಸರಿಪಡಿಸಲಾಗಿದೆ ಅಲ್ಲಿಯ ಶಿಕ್ಷಣದ ಮುಖ್ಯ ಧ್ಯೇಯವು, ವಿದ್ಯಾವಂತರಾಗುವುದು ಮಾತ್ರವೇ ವಿನಾ ಪದವಿಯನ್ನು ಸಂಪಾದಿಸುವುದಷ್ಟೆ ಹೆಚ್ಚಿನ ವಿಷಯವೇ ಅಲ್ಲಿಯ ವಿದ್ಯಾರ್ಥಿಗಳ ತಲೆಗೆ ಹತ್ತುವುದಿಲ್ಲ.

ಜಯಕರ್ನಾಟಕ.

ಬೊಂಬಾಯಿ ಸ್ವಾಸ್ತಿಕ್ ಆಯಿಲ್ ಮಿಲ್ಸಿನಿಂದ ತಯಾರಿಸಲ್ಪಟ್ಟ

"ಕಾಂತಿ"

ಎಂಬ ನ್ಯೂಗೆ ಪಟ್ಟಿ ಕೊಳ್ಳುವ ಸಾಬೂನು

ಅತ್ಯಂತ ಮನೋಹರವಾದ, ಸುವಾಸನಾಯುಕ್ತವಾದ ಈ ಸಾಬೂನಿನ ನಿತ್ಯ ಉಪಯೋಗದಿಂದ ದೇಹದ ವರ್ಣವು ಪರಿಶುಭ್ರವಾಗಿ ಕಾಂತಿಯು ಹೆಚ್ಚುವುದು. ಇದರಲ್ಲಿ ಕೊಬ್ಬು - ಯಾ - ವಿಷಯಗಳು ಎಂದಾರ್ಥಗಳು ಸೇರಿಲ್ಲ ಈ ಕಾರಣ ಎಲ್ಲರೂ ಇದನ್ನು ಧಾರಾಳವಾಗಿ ಬಳಸಬಹುದು.

ಚೆಲೆ ದೊಡ್ಡ ಸೈಜು ೦—೩—೬ ಚಿಕ್ಕ ಸೈಜು ೦—೧—೬

ಕಬ್ಬಣ - ಹಿತ್ತಾಳೆ - ಅಲ್ಯೂಮಿನಂ - ಕಟ್ಲರಿ - ಸ್ಟೋವ್ಸ್ ಮತ್ತು ಔಷಧ ಪದಾರ್ಥಗಳಿಗೆ ಬಳ್ಳಾರಿಯಲ್ಲಿ ಸುಪ್ರಸಿದ್ಧ ಅಂಗಡಿ ಜಾಲ ವ್ಯವಹಾರ ಎಲ್ಲರೂ ನ್ಯಾಯವಾದ ಮತ್ತು ಸುಲಭವಿಧರಗಳು ಹೇಳಿಸಿ ತೃಪ್ತಿಪಡಿಸಿದರು.

ಎಸ್. ಎಂ. ಗುರಪ್ಪ ಅಂಡ್ ಸನ್ಸ್, ಬಳ್ಳಾರಿ.

ಈಗ ನಡೆಯುತ್ತಿರುವ ಮಹಾಯುದ್ಧದ ಸಿಂಹಾವಲೋಕನ

10ನೇ ಪುಟದಿಂದ ಬಂದದ್ದು.

ಗಾಗಿ ತಾಯಲೆಂಡ್, ಮಲಯಾ, ಪೆನಾಂಗ ಸಿಂಗಪುರ ಭಾಗಗಳ ಸಂಪೂರ್ಣವಾಗಿ ಅಕ್ಕ ಮಿಸಿಕೊಂಡು ಫಿಲಿಪೈನ್-ಸಮಾತ್ರ-ಜಾವಾಬಲಿ ದ್ವೀಪಗಳಲ್ಲೂ ಪೆಸಿಫಿಕ್ ಸಾಗರದ ಇತರ ಮುಖ್ಯ ದ್ವೀಪಗಳಲ್ಲೂ ತನ್ನ ಪ್ರಭುತ್ವವನ್ನು ಸ್ಥಾಪಿಸಹೊರಟಿದೆ. ಬ್ರಿಟನ್ನಿನ ಅತಿದೊಡ್ಡ ಮತ್ತು ಶ್ರೇಷ್ಠವಾದ ಪ್ರಿನ್ಸ್ ಆಫ್ ವೇಲ್ಸ್ ರಿಪಲ್ಸ್ ಎಂಬ ಹಡಗುಗಳೂ ಅಮೆರಿಕಾದ ಬಹು ಮುಖ್ಯ ಹಡಗುಗಳೂ ಸಿಂಗಪುರ ಮತ್ತ ಪೆರ್ಲ್‌ಹಾರ್ಬರಿನ ದಾಳಿಯಲ್ಲಿ ಬಾಂಬಿನ ಹೊಡೆತಗಳಿಂದ ನಮುಜ್ಜ ತಳ ಕಂಡವು.

ಜಪಾನು ಹೂಡಿರುವ ಯುದ್ಧವು ಬಹಳ ಭಯಂಕರ ಸ್ವರೂಪವನ್ನಿದೆ ಎರಡು ಪಕ್ಷಗಳ ಸರಿ ಜೀವನ ಪಂಗು ತೊರೆದು ಕಾದುತ್ತಿದ್ದರೂ ಮಿತ್ರಪಕ್ಷದವರಿಗೇ ಕೋಲಾಗುತ್ತಿರುವುದು ಅವರ ದುರ್ದೈವವೆನ್ನಬೇಕು. ಬ್ರಿಟಿಷ ಪ್ರಮುಖರು ಹೇಳುತ್ತಿರುವ ಪ್ರಕಾರಕ್ಕೆ ಭೂ,ಜಲ, ವಾಯುಮಂಡಲಗಳಲ್ಲಿ ಮಿತ್ರರು ಶತ್ರುಗಳಿಗಿಂತಲೂ ಅತ್ಯಧಿಕ ಪ್ರಮಾಣದಲ್ಲಿ ಹಿಂದುಳಿದಿರುವುದೇ ಈ ಸೋಲುಗಳಿಗೆ ಕಾರಣವೆನ್ನಬೇಕು. ಸಾವಿರಾರು ಮೈಲುಗಳ ದೂರ ಪ್ರದೇಶದಲ್ಲಿ ಸಾಮ್ರಾಜ್ಯವನ್ನು ಕಟ್ಟಿ ಎಲ್ಲಾಕಡೆಗೂ ಸಮನಾದ ರಕ್ಷಣೆಯನ್ನೊದಗಿಸದಿರುವ ಈ ಪರಿಸ್ಥಿತಿಯು ಬ್ರಿಟಿಷರ ದೃಷ್ಟಿಯಿಂದ ಕರುಣಾ ಜನಕವಾಗಿದೆ.

ಅಮೆರಿಕಾ ಬ್ರಿಟನ್ನುಗಳಿಗಿರುವ ಜನ ಧನ ಸಂಪತ್ತು ಅಪಾರವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಆದರೆ ಹಿಂದಿನಿಂದಲೂ ತಯಾರಾಗಿ ಅನಿರೀಕ್ಷಿತವೇಳೆಯಲ್ಲಿ ವಾಳಮಾಡಿಸಿ ಕಾರಣ ಜಪಾನಿನ ಶೀಘ್ರ ಜಯಕ್ಕೆ ಕಾರಣವಾಯಿತು ಬ್ರಿಟನ್ನು ಅಮೆರಿಕಾ ಸಂಪೂರ್ಣ ತಯಾರಿಯಿಂದ ಮತ್ತು ಅತ್ಯಂತ ಆಧುನಿಕ ಶಸ್ತ್ರಾಸ್ತ್ರಗಳಿಂದ ರಂಗದಲ್ಲಿಳಿದಾಗ ಏನಾಗುತ್ತೆಂಬುದನ್ನು ಈಗಲೇ ಹೇಳಬರುವಂತಿಲ್ಲ.

ಈಗ ಜಪಾನಿನವರುಹೂಡಿದ ಯುದ್ಧವು ಇಂಡಿಯಾದ ಬಾಗಿಲಿಗೆ ಬಂದಿದೆ. ಅಡಚ್ಚೀ ಸಮುದ್ರ ತೀರಕ್ಕೆ ಹೊಂದಿಕೊಂಡಿರುವ ಪಟ್ಟಣಗಳಿಂದ ಜನರು ಖಾಲಿ ಮಾಡಿ ಮಧ್ಯ ಪ್ರದೇಶಗಳಿಗೆ ಹೋಗುತ್ತಿರುವರು. ಬರ್ಮಾದ ಕೆಲ ಭಾಗವು ಈಗಾಗಲೇ ಜಪಾನರ ವಶವಾಗಿದೆ. ಬರ್ಮಾದೇಶದ ರಾಜಧಾನಿಯಾದ ಮತ್ತು ಸುಸ್ಸಜ್ಜಿತ ಬಂದರಾದ ರಂಗೂನ ನಗರವು ಬ್ರಿಟಿಷರ ಕೈಬಿಡುವಂತಿಲ್ಲ. ಜಪಾನರು ಚೀನ ಬರ್ಮಾದ ರಸ್ತೆಯನ್ನು ಕತ್ತರಿಸಿ ಚೈನೀಯರಿಗೆ ಹಿಂದೂಸ್ಥಾನದ ಮೂಲಕ ಯಾವ ಸಾಮಗ್ರಿಗಳೂ ಹೋಗದಂತೆ ತಡೆದಿರುವರು. ಆದರೂ ಚೀನದ ಜನರಲ ಚಿಯಾಂಗ ಕೇಶೇಕರು ಹಿಂದೂಸ್ಥಾನಕ್ಕೆ ಬಂದು ಸಾಮಗ್ರಿಗಳ ಸೂರೈಕೆಯ ವ್ಯವಸ್ಥೆಯನ್ನು ಸರಿಮಾಡಿ ಹೋಗಿರಬೇಕೆಂಬುದನ್ನು ನಂಬಲು ಆಧಾರಗಳಿವೆ.

ಸದ್ಯದ ಪರಿಸ್ಥಿತಿಯಲ್ಲಿ ಮಿತ್ರರಾಷ್ಟ್ರಗಳಾದ ಬ್ರಿಟ್ ಅಮೆರಿಕಾ ಅನುಕೂಲ ವ್ಯವಸ್ಥೆಯನ್ನುಂಟಾಗಿಲ್ಲ. ಇದಕ್ಕೆ ಅವರ ಅಧೀನಸ್ಥ ದೇಶಗಳಲ್ಲಿ ಜವರು ಅವಲಂಬಿಸಿದ ನೀತಿಯೇ ಪ್ರಧಾನ ಕಾರಣವಿರಬಹುದು ಹಿಂದೂದೇಶದಲ್ಲಿ ಅವರು ಸನ್ನು ಮಾಡಿದ್ದರೆ ಕೋಟ್ಯಂತರ ಶಸ್ತ್ರಸುಸಜ್ಜಿತ ಸೈನ್ಯನೇರ್ಪಡಬಹುದಾಗಿದ್ದಿತು. ಇಲ್ಲಿ ಎಂಥಾ ಯುದ್ಧ ಸಾಮಗ್ರಿಗಳನ್ನು ಬೇಕಾದರೂ ತಯಾರಿಸಲು ಅನುಕೂಲವಿದೆ.

ಅಂತೂ ಯುದ್ಧದ ಫಲ ಸ್ವರೂಪನಾಗಿ ಭಾರತದಲ್ಲೇ ಏಕೆ-ಇಡೀ ಪ್ರಪಂಚದ ರಾಜ್ಯಾಂಗ ವ್ಯವಸ್ಥೆಯಲ್ಲಿಯೇ ಮಾರ್ಪಾಟುಗಳಾಗಬಹುದು. ತಗ್ಗುದಿನ್ನೆಗಳಿಲ್ಲಾ ಸಮನಾಗಿ ಬಡವ ಬಲ್ಲಿದ ಎಂಬ ಭೇದವೂ ದೇಶದ ದಾರಿದ್ರ್ಯವೂ ನಾಶವಾಗಿ ಸಮ್ಮ ಸ್ವಾತಂತ್ರ್ಯವು ನಮಗುಳಿದರೆ ಯುದ್ಧವಲ್ಲಾದ ಬಲಿದಾನವು ಸಾರ್ಥಕವಾಯಿತೆನ್ನಬಹುದು.

ಜನರಲ್ ವಾವೆಲ

ಜನರಲ್ ವಾವೆಲರವರು ಹಿಂದೂಸ್ಥಾನದ ಸೈನ್ಯಾಧಿಕಾರಿಗಳೆಂದು ಸರ್ಕಾರವು ಸಾರಿದೆ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ

ಡಿಪಾಜಿಟ್ಟುಗಳು.	31-10-40	31.1.42
ಫಿಕ್ಸೆಡ್	ರೂ, Nil	1,07,130
ಚಾಲ್ತಿ	,, 3,173	14,107
ಸೇವಿಂಗ್ಸು	,, 1,231	18,026
ಇತರ	,, 40	863
ಸಾಲಗಳು		
ಭಂಗಾರ	,, 520	29,590
ಮೂಲು	,, Nil	34,611
ಇತರ	,, Nil	34,676
ಇತರ ಆಸ್ತಿ.		
ಸರ್ಕಾರದ ಬಾಂಡುಗಳು	,,13,320	32,476
ಬ್ಯಾಂಕುಗಳಲ್ಲಿರುವ ಹಣ	,,32,502	9,239
ಕೈಯ್ಯಲ್ಲಿ ನಗದು	,, 5770	18,429

ಒಟ್ಟು ವ್ಯವಹಾರದ ಮೊತ್ತ.

31—10—40.	31—1—42.
ರು. 1,14,774-0-0	ರು. 2,37,304-0-0

ಶಾಖೆಗಳು:—

1 ತಿಮ್ಮನಚರ್ಲ 2 ಕೊಟ್ಟೂರು. 3 ಉರವಕೊಂಡ 4 ಪತ್ತಿಕೊಂಡ

ಹೆಚ್. ಶೀತಾರಾಮರೆಡ್ಡಿ,, ಬಿ. ಎ. ಬಿ. ಎಲ್. (ಎಂ. ಎಲ್. ಎ.)
ಡೈರೆಕ್ಟರುಗಳ ಬೋರ್ಡು ಅಧ್ಯಕ್ಷರು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ನೈಟ್ ಕ್ವೀನ್ ಹೇರಾಯಿಲ್

ಕೂದಲಿನ ಸೌಂದರ್ಯ-ಮೃದುತ್ವವನ್ನು ಕಾಪಾಡಿ - ಮೆದುಳನ್ನು ತಂಪು ಮಾಡುವುದು. ನಿತ್ಯದ ಉಪಯೋಗದಿಂದ ಪಟುತ್ವವು ಹೆಚ್ಚುವುದು. ಕೇಶ ತೈಲಗಳೆಲ್ಲಾ ಇದು ರಾಣಿ ಎಂದೇ ಕೊಂಡು ಉಪಯೋಗಿಸಿ ಇದರ ಸದ್ಗುಣಗಳನ್ನು ಅರಿಯಿರಿ.

ಹೆಚ್. ಎಸ್. & ಸನ್ಸ್,
ಬಳ್ಳಾರಿ

ಸಂಗೀತ ಸಮಾಚಾರಗಳು ನಮಗೆ ಹೇಗೆ ಕೇಳಬರುತ್ತವೆ
9ನೇ ಪುಟದಿಂದ ಬಂದದ್ದು.

ನಾಗಿದೆ. ಹೀಗೆ ಕಳುಹಿಸಲ್ಪಟ್ಟ ಸಮಾಚಾರ ಸಂಗೀತ ಯಾ ಸುದ್ದಿಯು ಜಗತ್ತಿನ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸೆಕಂಡಿನಲ್ಲಾಂಶದಲ್ಲಿ ಸ್ವಾಗತಿಸುವ ಯಂತ್ರದಿಂದ [ರೇಡಿಯೋದಿಂದ] ಕೇಳಬರುತ್ತದೆ.

ಹಿಂದೂಸ್ಥಾನದಲ್ಲಿಯೇ ೧೨೨೦೦೦ ರೇಡಿಯೋ ಯಂತ್ರಗಳಿವೆ. ಸರಕಾರಕ್ಕೆ ವಾರ್ಷಿಕವಾಗಿ ೧೨ ಲಕ್ಷರೂ ಆದಾಯವಿದೆ. ಅಲ್ಲದೆ ಪರದೇಶದಿಂದ ಬರುವ ರೇಡಿಯೋ ಯಂತ್ರಗಳಮೇಲೆ ಹಾಕಿದ ಸುಂಕದ ಲಾಭವೂ ಸರಕಾರಕ್ಕುಂಟು; ಧ್ವನಿಯನ್ನು ಪ್ರಪಂಚದ ಮೂಲೆ ಮೂಲೆಗೆ ಮುಟ್ಟಿಸುವ ವಿಧಾನವು ಇಷ್ಟು ಸುಲಭವಿದ್ದರೂ, ನೂರಾರು ಜನರು ಇವಕ್ಕೆ ದುಡಿಯ ಬೇಕಾಗುತ್ತದೆ. ಧ್ವನಿಯನ್ನು ಕಳುಹಿಸಲು ವಿದ್ಯುಶ್ಶಕ್ತಿಯ ಸಹಾಯವು ಹೇಗೆ ಬೇಕೋ ಹಾಗೆಯೇ ಅದನ್ನು ಸ್ವಾಗತಿಸಲು ಕೂಡ ವಿದ್ಯುತ್ಸಹಾಯವು ಬೇಕು. ಅಂದರೆ ರೇಡಿಯೋ ಯಂತ್ರವು ಕೆಲಸಮಾಡಲು ವಿದ್ಯುಶ್ಶಕ್ತಿ ಬೇಕು. ಹಳ್ಳಿಗಳಲ್ಲಿ ಭಾರ್ಜವಾಡಿದ ಬ್ಯಾಟರಿಗಳನ್ನಿಟ್ಟುಕೊಂಡು ಕೆಲಸ ನೆರವೇರಿಸಿಕೊಳ್ಳಬಹುದು.

ಮಿತ್ರ ಹಡಗುಗಳ ನಷ್ಟ

ಜಪಾನರು ಪೆಸಿಫಿಕ್ ಯುದ್ಧ ವನ್ನಾರಂಭಿಸಿದಮೇಲೆ ಮಿತ್ರಪಕ್ಷದ ಹಡಗುಗಳ ನಷ್ಟವು ಬಹಳ ಅಧಿಕವಾಗಿದೆಯೆಂದು ಪ್ರಧಾನ ಮಂತ್ರಿಗಳಾದ ಚರ್ಚಿಲರು ತಿಳಿಸಿದರು.

ಸ್ವೀಕಾರ-ವಿಮರ್ಶೆ:-

ಪ್ರಪಂಚ ಭವಿಷ್ಯ

[ಗ್ರಂಥ-ಳಗಿರಿಂದ ೨೫-೧೦-೪೨ ರ ವರೆಗೆ] ಕನ್ನಡ ಹಿತೈಲುಗು ಭಾಷೆಗಳಲ್ಲಿ ವಿದ್ವಾ ಶ್ರೀ ಕೆ. ಕರಿಬಸವಶಾಸ್ತ್ರಿಯವರು ಅನುವಾದಿಸಿ ಪ್ರಕಟಿಸಿರುವರು. ಮೂಲಗ್ರಂಥಕರ್ತರು (ಇಂಗ್ಲೀಷಿನವರು) ರಾಜವೈದ್ಯ ಜೀವಾರಾಂ ಕಾಳಿದಾಸ ಶಾಸ್ತ್ರಿ-ರಸಾಲ, ಔಷಧಾಶ್ರಮ. ಗೋಡಾಲ.(ಕಥಿಯವಾರ)

ಕನ್ನಡ-ತೆಲುಗು ಪ್ರತಿಗಳು ದೊರೆಯುವಸ್ಥಳ
ಯುಜರ್ಸ್ ಅಂಡ್ ಬ್ರದರ್ಸ್
ಬಳ್ಳಾರಿ.

ಕ್ರಯ ೦—೪—೦

ಅನುವಾದಿತ ಗ್ರಂಥವು ಶ್ರಕಟವಾಗುವ ಸಮಯಕ್ಕೆ ಸಾರ್ವಜನಿಕರು ೬ ತಿಂಗಳ ಭವಿಷ್ಯದ ಸತ್ಯಾಸತ್ಯ ಅಂಶಗಳ ವಿಮರ್ಶೆಯನ್ನು ಮಾಡಲಪೂರ್ಣವಾಗಿದೆ.

ಹಿಂದೂ ಮಹಾ ಸಭೆಯವರು ಸರ್ಕಾರದೊಂದಿಗೆ ಸಹಕರಿಸುವರು. ಗಾಂಧೀಜಿಯವರು ನಾಯಕತ್ವವನ್ನು ತ್ಯಾಜ್ಯಮಾಡುವದು ವೈಶ್ಯಾಯರು ಹಿಂದೂದೇಶ ಬಿಟ್ಟು ಹೋಗುವದು. ಇಂಗ್ಲೀಂಡಿನಂದ ಜೂನ್ ತಿಂಗಳೊಳಗಾಗಿ ಶಿಷ್ಟ ಮಂಡಲವು ರಾಜಕೀಯ ಸಮಸ್ಯೆ ಬಗೆ ಹರಿಸಲು ಬರುವದು. ನೇಪಾಳ ದೇಶವು ಯುದ್ಧಾಗ್ನಿಗೊಳಗಾಗುವುದು ಅಧಿಕ ಮಳೆ-ಪ್ರವಾಹ-ವರ್ತಕರಿಗೆ ನಷ್ಟ ವಗೈರೆ ಕೌತೂಹಲ ಮತ್ತು ಚಿಂತೆಯನ್ನುಂಟುಮಾಡುವ ಹಿಂದೂದೇಶದ ರಾಜಕೀಯ ಬದಲಾವಣೆಗಳು ಇದರಲ್ಲಿ ಉಲ್ಲೇಖಿಸಲ್ಪಟ್ಟಿವೆ. ಬರ್ಮಾ-ಚೈನಾ-ಆಸ್ಟ್ರೇಲಿಯಾ-ವ್ಯಾಸಿಫಿಕ್ ದ್ವೀಪಗಳು-ಸಿಲೋನ್-ಅಫ್ಘಾನ್-ಇರಾನ್ - ಇರಾಕ್-ಈಜಿಪ್ಟ್-ಅಬಸೀನಿಯಾ-ಆಫ್ರಿಕಾ-ರಷ್ಯಾ-ಜರ್ಮನಿ-ಫ್ರಾನ್ಸು-ಸ್ಪೇನ್-ಇಟಲಿ-ಬಲ್ಗೇರಿಯಾ ಇಂಗ್ಲೆಂಡು ವಗೈರೆ ಅನೇಕ ದೇಶಗಳ ಭವಿಷ್ಯವೂ ಇದರಲ್ಲಿದೆ.

ಮೂಲಲೇಖಕರು ಜ್ಯೋತಿಷಿಗಳಷ್ಟೇ ಅಲ್ಲದೆ ರಾಜಕೀಯ ತಜ್ಞರೂ ಇರುವರು ರಾಜಕೀಯ ಮಾರ್ಪಾಟುಗಳ ವಿವರಣೆಯನ್ನು ಸೂಕ್ಷ್ಮ ದೃಷ್ಟಿಯಿಂದ ವಿವೇಚಿಯುತವಾಗಿ ವಿಮರ್ಶೆಮಾಡಿರುವರು ಇತರ ಅನೇಕ ಜ್ಯೋತಿಷಿಗಳಂತೆ ಭವಿಷ್ಯಕಥನ ಮಾಡುವುದರಲ್ಲಿ ಸತ್ಯಾಂಶಗಳ ಜೊತೆಯಲ್ಲಿ ಅಸತ್ಯಘಟನೆಗಳ ಉಲ್ಲೇಖನ ವಿರುವುದೂ ಇವರ ದೊಡ್ಡ ದೋಷವಲ್ಲವೆಂದು ಹೇಳಬಹುದು. ಇಂಗ್ಲೆಂಡಿನ ವಿಷಯಕ್ಕೆ ಮೊದಲನೇ ಪ್ಯಾರಾದಲ್ಲಿರುವ ಅಂಶಗಳು ಸ್ತೋತ್ರರೂಪವಾಗಿದ್ದು ಸರಕಾರದ ಆದರವನ್ನು ಪಡೆಯಲು ಉದ್ದೇಶಪೂರ್ವಕವಾಗಿ ಸೇರಿಸಲ್ಪಟ್ಟಿರುವವೆಂದು ನಮ್ಮ ಅಭಿಪ್ರಾಯ.

ಅಂತೂ ಒಟ್ಟಿನಲ್ಲಿ ಪುಸ್ತಕವು ಸಂಗ್ರಹಯೋಗ್ಯವಾಗಿದೆಯೆನ್ನಬಹುದು.

ಮಲಯಾದಲ್ಲಿ ಸೋಲಾಗಲು ಕಾರಣ

ಆಸ್ಟ್ರೇಲಿಯಾ ಸೈನ್ಯದ ಅಧಿಕಾರಿಗಳಾದ ಮೇಜರಗಾರ್ಡ್ನರ್ ಬೆನೆಟರವರು ಮಲಯಾ ಸಿಂಗಪುರಗಳಲ್ಲಿ ಸೋಲಾಗಲು ಕಾರಣಗಳನ್ನು ಸೂಚಿಸಿರುತ್ತಾರೆ.

ಜಪಾನರು ಅತ್ಯಂತ ಸಾದಾರೀತಿಯಿಂದ ವಿಶೇಷ ಆಡಂಬರವಿಲ್ಲದೆ ಯುದ್ಧ ಮಾಡುವರೆಂದು ಹೇಳಿದ್ದಾರೆ. ಗಾಳಿಯು ಹೊಗದ ಡಬ್ಬಿಗಳಲ್ಲಿ ಕೆಡದಂತೆ ಅನ್ನವನ್ನಿಟ್ಟುಕೊಂಡು ಸೈನ್ಯದಿಂದ ಸಮುದಾಯಕ ರೀತಿಯಲ್ಲಿ ಒದಗಿಸಲ್ಪಡುವ ಆಹಾರದ ಮೇಲೆ ಅವಲಂಬಿಸದೆ ಅವರು ಇರುತ್ತಾರೆ. ಅಲ್ಲದೆ ಮಲಯಾದಲ್ಲಿರುವ ಸೈಕಲಗಳ ಮೇಲೆ ಯೋಧರು ಬರಕೊಡಗಿದರು. ಅವರಲ್ಲಿ ವಿಮಾನ ಬಲ-ಸೈನ್ಯದ ಸಂಖೆ ಹೆಚ್ಚಿದ ಕಾರಣ, ಮಿತ್ರ ಸೈನ್ಯಗಳು ಹಿಂದಿರುಗದೇ ಕಾಯ್ತೆಂದೂ ಸೋಲಾಯ್ತೆಂದೂ ಬೆನೆಟರವರು ತಿಳಿಸಿದರು. ಈಗ ಬೆನೆಟರವರು ಆಸ್ಟ್ರೇಲಿಯಾಕ್ಕೆ ಕಪ್ಪಸಿಕೊಂಡು ಬಂದಿರುವರು.

ಸದ್ಯದ ಪರಿಸ್ಥಿತಿಯಲ್ಲಿ ಶಾಂತಿಯು ಹೇಗೆ ಲಭಿಸುವದು?

ಲೇಖಕ :— ಬಿ. ಮಾಧವಾಚಾರ್, ಕುಂದಾಪುರ.

ಜಗತ್ತು ಇಂದು ಮಾರಿಗುಡಿಯ ಅಂಗಣದಂತಿದೆ. ಎಲ್ಲೆಲ್ಲೂ ಕೊಲೆ! ಸಾವು ನೋವುಗಳು! ಸರ್ವನಾಶ! ಬೆವರುಸುರಿಸಿ ದುಡಿಯುವ ಶ್ರಮಜೀವಿಗಳ ಗೋಳು ಒಂದೆಡೆ ಸುಲಿದುತಿನ್ನುವ ಬಂಡವಾಳದಾರನ ಶೀನಿ ಮತ್ತೊಂದೆಡೆ. ನೀಲ್ಗಾತಿಯಿ ನಿಸಿಕೊಂಡವರು ಕಳಚಾತಿಯವರನ್ನು ತಿರಸ್ಕರಿಸುವಿಕೆ. ದೀನಜನಕೋಟಿಯು ಆಹಾರವಿಲ್ಲದೆ ಆರ್ಥಿಕ ಮುಗ್ಗಟ್ಟಿನಿಂದ ಮುಂಗಾಣದಿರುವಾಗ ಪ್ರಪಂಚನಷ್ಟೇ ನಾಶಮಾಡಲು ಬೇಕಷ್ಟು ಸೈನ್ಯ ಶಸ್ತ್ರಗಳ ಸಂಗ್ರಹದ ನೋಟ. ಈ ಅವ್ಯವಸ್ಥೆಯನ್ನು ಕಂಡು ಯಾರ ಮನಸ್ಸುತಾನೆ ತಲ್ಲಣಿಸವಿರದು? ಜಿಜ್ಞಾಸಾಸಾಮರ್ಥ್ಯವುಳ್ಳವರಾದ ಅವ್ಯವಸ್ಥಾದಿಗಳುಮಾತ್ರ ದೈನೇಜಿ ಗ್ರಹಚಾರ ಇವೇ ಮೊದಲಾದ ಅರ್ಥರಹಿತ ರೂಢಿಯ ಶಬ್ದಗಳ ಉಚ್ಚಾರಣೆಯಿಂದಲೇ ತೃಪ್ತರಾದಾರು. ಆದರೆ ಇವುಗಳ ಯಥಾರ್ಥಕಾರಣಗಳನ್ನು ನಿವಾರಣಾಮಾರ್ಗವನ್ನು ಕಂಡುಹಿಡಿಮಾ ಜನತೆಯ ಮುಂದಿಡುವುದು ಸ್ವಾತಂತ್ರ್ಯಪ್ರಿಯರ ಕರ್ತವ್ಯ.

ಈ ಸೃಷ್ಟಿಯಲ್ಲೆಲ್ಲಾ ಮನುಷ್ಯನೇ ಅತ್ಯುತ್ಕೃಷ್ಟಜೀವಿಯಾಗಿರುವನು. ಕಾರಣ ಆಹಾರ, ನಿದ್ರೆ, ಭಯ, ಮೈಥುನಾದಿಗಳಿಗೆ ಸಂಬಂಧಪಟ್ಟ ನಿಮಿತ್ತವಾದ ಜ್ಞಾನವೆಲ್ಲ ಪ್ರಾಣಿಗಳಿಗೂ ಸಾಮಾನ್ಯವಾಗಿರುವುದಾದರೂ ಮಾನವನಂತೆ ಅಮಿತ ಜ್ಞಾನಶಕ್ತಿಯು ಮನುಷ್ಯೇತರಪ್ರಾಣಿಗಳಿಗಿಲ್ಲ. ಈ ಶ್ರೇಷ್ಠಜ್ಞಾನದ ದುರ್ವಿನಿಯೋಗವೇ ಇಂದಿನ ಅಶಾಂತಿಗೆ ಕಾರಣ ವಿಶ್ವದಲ್ಲಿ ಶಾಂತಿಯು ನೆಲಸಬೇಕಾದರೆ ಮಾನವರು ತಮ್ಮೊಳಗಿನ ಭಿನ್ನಭಾವವನ್ನು ತೊರೆದು ಸಹೋದರರಂತೆ ಬಾಳುವುದನ್ನು ಕಲಿಯಬೇಕು. ಇದು ಋಷಿದೇಶನವಾತಾಯಿತು ಇದನ್ನು ಕಾರ್ಯರೂಪಕ್ಕಿಳಿಸುವ ದಾರಿಯನ್ನು ಕುರಿತು ಯೋಚಿಸುವ.

ಮನುಷ್ಯನು ಸಮಾಜದಲ್ಲಿ ಕೂಡಿಕೊಂಡು ಬೆಳೆದು ಬಂದ ವ್ಯಾಪಿ. ಸಮಾಜ ಜೀವನವೆಂದರೆ ನಿಯಮು ಕಟ್ಟುಪಾಡುಗಳಿಗೊಳಗಾಗಿ ಬೆಳೆಯುವಿಕೆ. ಈ ನಿಯಮಕಟ್ಟುಪಾಡುಗಳನ್ನು ಆಚರಣೆಯಲ್ಲಿ ತರುವಂತೆ ನೋಡಿಕೊಳ್ಳುವ ಪ್ರಧಾನ ಅಧಿಕೃತ ಸಂಸ್ಥೆಯೇ ರಾಜಸತ್ತೆ (State) ಇಂದು, ನಮ್ಮನ್ನು ಪೀಡಿಸುತ್ತಿರುವ ಯುದ್ಧವು ಗಗನದಿಂದ ಭೂಮಿಗೆ ಧುಮುಕಿದ್ದಲ್ಲ ವಪ್ಪೆ. ಅಂದಬಳಿಕ ಈ ಯುದ್ಧವನ್ನು ಎತ್ತಿಹಾಕಿದ ಶಕ್ತಿಗಳು ನಮ್ಮ ಸಮಾಜದಲ್ಲಿ ಅಡಕವಾಗಿವೆಯೆಂದಾಯಿತು. ಈ ದುಷ್ಟ ಶಕ್ತಿಗಳನ್ನು ಸದೆಬಡಿದು ಸಮಾಜವನ್ನು ಪುನಃ ರಚನೆಮಾಡಿದವಿನಹ ಶಾಂತಿಯು ಕನಸಿನ ಗಂಟು. ಈರೀತಿ ಪುನರಚಿಸಲ್ಪಟ್ಟ ಸಮಾಜದಲ್ಲಿ ವರಸ್ಪರ ವಿರುದ್ಧ ಹಿತಗಳುಳ್ಳ ವರ್ಗಗಳನ್ನುವಜಾ ಮಾಡಿ ವರ್ಗರಹಿತವಾದದ್ದನ್ನಾಗಿ ಮಾಡಬೇಕು. ಜೀವನಯಾತ್ರೆಗೆ ಸಾಧಕವಾದ ಸಾಮಗ್ರಿಗಳು ಎಲ್ಲರಿಗೂ ಅವಶ್ಯವಾಗಿ ಹಕ್ಕಿನರೂಪದಲ್ಲಿ ದೊರೆಯುವಂತಾಗಬೇಕು. ಆಗಮಾತ್ರ ಸಮಾಜವು ಗತಿಯ ಹಾದಿಯಲ್ಲಿ ಹೆಜ್ಜೆ ಇಡುವಂತಾಗುವದು. ಸಮಾಜವನ್ನು ಪುನರಚಿಸಲು ನಮ್ಮ ನುಂದಿರುವ ತೊಡಕೆಂದರೆ ವಿಶೇಷರೀತಿಯಲ್ಲಿ ಮದ್ದು ಗುಂಡುಗಳಿಂದಲೂ ಪೋಲೀಸು ವಸ್ತೆರೆ ಸಿಬ್ಬಂದಿಗಳಿಂದಲೂ ಕೂಡಿದ ರಾಜಸತ್ತೆ. ಯಾವುದೇ ಸರಕಾರವು ಹೊಸ ಜೀವನದ ಅಂಕುರಗಳು ಎದ್ದು ತನ್ನಲ್ಲಿ ಬದಲಾವಣೆ ಮಾಡುವದನ್ನು ಕುಳಿತು ನೋಡುತ್ತಿರುವದಿಲ್ಲ. ಹೀಗಾಗಿ ರಾಜಸತ್ತೆಯನ್ನು ವರದಲ್ಲಿಟ್ಟುಕೊಂಡಿರುವ ವಂಗದಕ್ಕೂ ನವಜೀವನದ ನವವಿಧಾನವನ್ನು ಜೀವನದ ಸಂಗಡಕ್ಕೂ ಘರ್ಷಣೆಯು ನಡೆಯುವುದು. ನವಜೀವನ ಶಕ್ತಿಯು ಪ್ರಬಲವಾದಾಗಲೆಲ್ಲ ರಾಜಶಕ್ತಿಯು ಶಕ್ತಿಯನ್ನು ಕದಮೆಮಾಡುತ್ತಾ ಬಂದು ಕಡೆಗೆ ಅದನ್ನು ನಾಶಮಾಡಿ ಹೊಸ ಜೀವನಕ್ಕೆ ಅನುಗುಣವಾದ ರಾಜಸತ್ತೆಯನ್ನು ಸ್ಥಾಪಿಸುತ್ತದೆ. ಈ ರೂಪಾಂತರಕ್ಕೆ ಸಮಾಜ ಕ್ರಾಂತಿಎಂದು ಹೆಸರು. ಈ ಕಾರ್ಯವು ಭೂಗ್ರಹದ ಅರಸೇ ಒಂದು ಭಾಗವಾದ ರಷ್ಯದಲ್ಲಿ ಮಾತ್ರ ಒಯಶಸ್ವಿಯಾಗಿ ನಡೆದಿದೆ. ಪ್ರಪಚದ ಇತರಕಡೆಗಳಲ್ಲಿ ಕೂಡ ಈ ಸಮಾಜ ಕ್ರಾಂತಿಯು ಘಟಿಸಲು ತಕ್ಕ ಪರಿಸ್ಥಿತಿಯು ಈಗೀನ ಒದಗುತ್ತಲಿದೆ. ಕ್ರಾಂತಿಶಕ್ತಿಗಳು ಇಂದಿನ ಯುದ್ಧದಲ್ಲಿ ಹೋರಾಡಿ ನೆದ್ದಲ್ಲಿ ಸಮಾಜ ಕ್ರಾಂತಿಯು ಸುಲಭಸಾಧ್ಯವಾಗುವುದು.

TATA PRODUCTS

[WHOLE-SALE & RETAIL SALE.]

ತಾ ತಾ ಕಂಪನಿಯ ಸಾಮಗ್ರಿಗಳು.

ಬೆಲೆ ಸುಲಭ. ಗುಣವಧಿಕ. ಪರಿಶುದ್ಧ.

501 ಬಟ್ಟೆಗಳನ್ನು ತೊಳೆಯುವ ಬಾರ್ ಮತ್ತು ಸ್ಪೆಶಲ್ ಸೋಪ, ಹಮೂಮ್, ಜಯ ಸೋಪ ಪಗೈರೆ ಸುವಾಸನಾಕಾರಿ ಮತ್ತು ಚರ್ಮದ ಕಾಂತಿಯನ್ನು ಪೆಚ್ಚಿಸುವ ಮೈ ತೊಳೆಯುವ ಸಬ್ಬು, ಕಜ್ಜಿ ಮತ್ತು ಚರ್ಮ ರೋಗಗಳಿಗೆ ಕಾರ್ಬಾಲಿಕ್ ಸೋಪ. ಬ್ರಾಂಡೆಗಳ ಕೊಬ್ಬು ಎಳ್ಳೆಣ್ಣೆ ಸೇರಿರುವುದಿಲ್ಲ.

ತಲೆಯನ್ನು ಸ್ವಚ್ಛಗೊಳಿಸುವ 'ಶಾಂಪೂ' ವಿವಿಧ ಸುಗಂಧಯುಕ್ತ ಕೊಬ್ಬರಿ ಎಣ್ಣೆ, ಜಯ ಹೇರ್ ಆಯಿಲ್, ಲೈಸ್ ಅಂಡ್ ಗ್ಲಿಸರಿನ್, ಜಯ ಮತ್ತು ಡೈಮಂಡ್ ಬ್ರಿಲಿಯಂಟೈನ್ ವಸ್ತೆರೆ ಕೇಶತೈಲಗಳು (ಕೂದಲು ಬೆಳ್ಳಗಾಗುವದಿಲ್ಲ.) 'ಕೇಜ' ಬೂಟ್ ಪಾಲಿಷ್

ನಮ್ಮ ವಸ್ತುಗಳಂದ ಸಮ್ಮೆಲ್ನೇ ತಯಾರಾದ ಶ್ರೇಷ್ಠವಾದ ಬೊಂಬಾಯಿ ವಾಸ್ಲೆ ಗ್ಲೂಕೊ ಬಿಸ್ಕತ್ತುಗಳು, ಚಲ್ಲರೇ ವಸ್ತುಗಳಲ್ಲಿ, ಟಿನ್ನುಗಳಲ್ಲಿ-ನಿವಿಧರುಚಿ, ಗುಣಗಳಿಂದ ಕೂಡಿದ ಶ್ರೀಷ್ಮ ಜಾತಿ ಪೆಪ್ಪರ್‌ಮೆಂಟುಗಳು. ಸ್ವದೇಶಿ ವಸ್ತುಗಳನ್ನೇ ಕೊಳ್ಳಿರಿ.

D. H R. RAO,
Distributors:-
TATA PRODUCTS and
PARLY BISCUITS,
BELLARY.

ಡಿ. ಹೆಚ್. ರಾಘವೇಂದ್ರರಾವ್,
ತಾತಾ ವಸ್ತುಗಳ, ವಾರ್ಲಿ
ಬಿಸ್ಕತ್ತುಗಳ ಮುಖ್ಯ ವಿಜಂಟರು,
ಬಳ್ಳಾರಿ.

ರಬೀಂದ್ರನಾಥ ಟಾಗೋರರು.

(೬ನೇ ಪುಟದಿಂದ ಮುಂದುವರಿದಿದೆ.)

ವೈಯಕ್ತಿಕ ದುಃಖವು ಪೂರ್ತಿಯಾಗಿ ಪ್ರಕಾಶವಡಿಸಲು ಸಾಧ್ಯವಾದ ವಸ್ತು ವಲ್ಲ. ಯಾಕೆಂದರೆ ವ್ಯಕ್ತಿಯ ಜ್ಞಾಪಕದಲ್ಲಿ ಮೃತರ ಸಂಬಂಧವಾದ ಹಲವು ಸಣ್ಣ ಸಣ್ಣ ಆತ್ಮೀಯ ವಿಷಯಗಳಿರುವವು. ಅವುಗಳನ್ನು ಪ್ರಕಾಶಪಡಿಸಲು ಮನುಷ್ಯನ ಪ್ರವೃತ್ತಿಗೆ ಸಾಧ್ಯವಾಗುವದಿಲ್ಲ. ಅಲ್ಲದೇ ಅಂತಹ ಆತ್ಮೀಯ ವಿಷಯಗಳೇ ವ್ಯಕ್ತಿಯ ಮುಖ್ಯ ಅವಲಂಬನ. ಈ ದುಃಖದ ಯಥಾರ್ಥ ಪ್ರಕಾರನದ ಏಕಮಾತ್ರ ಉಪಾಯನೇನೆಂದರೆ–ನೀರವತೆ.

ಸಾಮಾಜಿಕ ದುಃಖವೇ ನಿಜವಾಗಿ ಪ್ರಕಾಶವಡಿಸುವ ವಿಷಯ. ಆ ದುಃಖವನ್ನು ವಿಶದವಾಗಿ ವ್ಯಕ್ತಪಡಿಸಲು ಶೋಕವು ಶ್ಲೋಕರೂಪವಾಗಿ ಪರಿಣತವಾಗುವ ಹೃದಯವುಳ್ಳ ಮಹಾನ್ ಸಾಹಿತಿಗಳಿಗೆ ಮಾತ್ರವೇ ಸಾಧ್ಯ. ನನ್ನ ವಿಷಯದಲ್ಲಿ ಅದು ಅಸಂಭವ. ಯಾಕೆಂದರೆ ನಾನು ಸಾಹಿತಿಯಾದರೂ 'ನಗಣ್ಯ' ಸಾಹಿತಿ.

ಮೇಲೆ ಹೇಳಿದಂತೆ ವ್ಯಕ್ತಿಗತ ಶೋಕವನ್ನು ವ್ಯಕ್ತಪಡಿಸುವುದು. ನನಗೆ ಎಷ್ಟು ಸಹಜವೊ ಸಾಮಾಜಿಕ ದುಃಖವನ್ನು ವ್ಯಕ್ತಪಡಿಸುವುದು ಅಷ್ಟು ಸಹಜವಲ್ಲ.

ನಾನು ರವೀಂದ್ರರೊಡನೆ ಆಜೀವನ ಪ್ರೀತಿ ಭಕ್ತಿಗಳೆರಡರ ಬಂಧನದಿಂದ ಬಿಗಿಯಲ್ಪಟ್ಟವನು. ನನ್ನ ಮನಸ್ಸಿನಲ್ಲಿ ಸಂಪೂರ್ಣವಾಗಿ ವ್ಯಕ್ತಿಗತ ಸ್ಮೃತಿಯೇ ತುಂಬಿರುವುದು.

'ನಸ್ಮದು ಬಂಧಿತವಾದ ಮುಕ್ತ ಜೀವವು' ಎಂದು ರಾಮಾನುಜರು ಹೇಳಿರುವರು. ಈ ಮಾತು ಎಷ್ಟು ಚಮತ್ಕಾರಯುತವೋ ಅಷ್ಟೇ ಸತ್ಯವೂ ಆಗಿದೆ. ಮುಕ್ತಿಯಿಂದ ಆನಂದ ಮತ್ತು ಬಂಧನದಿಂದ ಕ್ಲೇಶ.

ಲೋಕೋತ್ತರ ಪುರುಷರು ನಾವು ಮುಕ್ತಿಯ ಸಥದಲ್ಲಿ ಮುಂಮುನ್ನಡೆಯುವಂತೆ ಮಾಡುವರು. ಮಹಾ ಕವಿಗಳೆ ನಮಗೆ ಆನಂದ ಲೋಕಕ್ಕೆ ಆಮಂತ್ರಣವನ್ನು ಕೊಡುವವರು.

ರವೀಂದ್ರನಾಥರು ಮಹಾಕವಿಗಳು. ಆದುದರಿಂದಲೇ ಅವರ ವಾಣಿಯು ನಮ್ಮ ಮನಸ್ಸಿನ ಮೂಲೆ ಮೂಲೆಗಳಲ್ಲಿ ಜೊಕ್ಕು ಚಿಂತೆಯ ಛಾಯೆಯನ್ನು ಅತಿಕ್ರಮಿಸಿ ನಮ್ಮನ್ನು ಆನಂದಕಾಯದಲ್ಲಿ ಮುಳುಗೇಳಿಸುವುದು. ಆದುದರಿಂದಲೇ ಅವರ ಮರಣದಿಂದ ಇಷ್ಟು ಜನರು ದುಃಖಿಸುವುದು.

ಮಹಾಕವಿಯ ವಾಣಿಯು ಕೇವಲ ಅವರ ಸಮಕಾಲೀನರ ಉಪಯೋಗಕ್ಕೆ ಮಾತ್ರವೇ ಬರೆಯಲ್ಪಟ್ಟುದಲ್ಲ. ಅವರ ಜೀವನದ ಅನೇಕ ಮಹತ್ತಾಂಶಗಳು ಭವಿಷ್ಯತ್ತಿನ ಬಹುಜನರ ಹೃದಯದಲ್ಲಿ ಅಡಗುವವು. ಅವರ ವಾಣಿಯು ಚಿರಸುಂದರವಾಗಿಯೂ ಚಿರಸತ್ಯವಾಗಿಯೂ ಇದ್ದುದೇ ಅವುಗಳ ವೈಶಿಷ್ಟ್ಯ.

ಯಾವುದು ಸುಂದರ, ಯಾವುದು ಸತ್ಯವೆಂಬುದರ ಜ್ಞಾನವನ್ನು ಇನ್ನು ಮುಂದೆ ಬಯಕಾಲದನರೆಗೆ ಬಂಗಾಲಿಗಳು ಪೋಷಿಸುವರು. ಕಾವ್ಯ ಮತ್ತು ದರ್ಶನವು ಮಾನವ ಮನಸ್ಸಿನ ಚಿರ ಆಕಾಂಕ್ಷೆಯ ಸಂಪತ್ತು. ನಮ್ಮ ದೇಶದ ಉಪನಿಷತ್ತುಗಳೇ ಅದಕ್ಕೆ ಪ್ರಮಾಣ. ಯಾರು ನಮ್ಮನ್ನು ನಾನಾವಿಧದ ಬಂಧನಗಳಿಂದ ಮುಕ್ತರನ್ನಾಗಿ ಮಾಡಲು ಪ್ರಯಾಸ ಪಡುವರೋ ಅವರನ್ನೇ ನಾವು ಮಹಾಪುರುಷರೆಂದು ಎಣಿಸುವೆವು.

ನಮ್ಮ ರಾಷ್ಟ್ರ, ಸಮಾಜ, ಶಿಕ್ಷಣಕ್ಷೇತ್ರ ಇವೆಲ್ಲವೂ ಅಸಂಖ್ಯ ಬಂಧನಗಳಿಂದ ಬಂಧಿತವಾಗಿವೆ. ಅದರ ಫಲವಾಗಿ ನಮ್ಮ ಸಾಮಾನ್ಯ ಮಾನವನ ಜೀವನವು ಸ್ಫೂರ್ತಿಯನ್ನು ಹೊಂದಲು ಅವಕಾಶವೇ ಇಲ್ಲವಾಗಿದೆ. ನಾವು ಏಕಾಂತದಲ್ಲಿ, ನಿರ್ಜೀವಿಗಳಾಗಿ ಜೀವನಯಾಪನೆ ಮಾಡುತ್ತಿರುವೆವು. ರವೀಂದ್ರನಾಥರು ಈ ಕ್ಲೇಶಕರ ಬಂಧನದಿಂದ ಸ್ವಜನರನ್ನು ಮುಕ್ತರನ್ನಾಗಿ ಮಾಡಲು ಅಜನ್ಮವೂ ಯತ್ನಿಸುತ್ತಿದ್ದರು. ಆದುದರಿಂದಲೇ ಅವರು ನಿಜವಾದ ದೇಶಭಕ್ತರು, ಸಮಾಜಸಂಸ್ಕಾರಕರು ಮತ್ತು ಶಿಕ್ಷಾಗುರು.

ಈ ಎಲ್ಲ ಬಂಧನಗಳಿಗೂ ನಮ್ಮ ಮನಸ್ಸು ಮತ್ತು ಜೀವನದಲ್ಲಿ ಜಡತೆಯನ್ನು ತಂದಿರುವವು. ಈ ಜಡತ್ವಕ್ಕೆ ಜೀವನವನ್ನು ಕೊಡುವುದು ಅತಿ ಕಠಿನಸಾಧ್ಯ. ಆದರೂ ರವೀಂದ್ರರು ಸ್ವಜಾತಿಯಲ್ಲಿಯ ಅಪಾರ ಪ್ರೇಮದಿಂದ ಅವರಲ್ಲಿಯ ಜಡತೆಯನ್ನು ದೂರುಮಾಡಲು ಎಲ್ಲ ಪ್ರಕಾರಗಳಲ್ಲಿಯೂ ಕಾರ್ಯೋನ್ಮುಖರಾಗಿ ಮನಸಾ ಯತ್ನಿಸಿರುವರು. ಈ ಕೆಲಸದಲ್ಲಿ ವೀರಸಂತೆ ವರ್ತಿಸಿರುವರು. ಅದಕಾರಣದೇ ಅವರು ಕೇವಲ ಮಹಾಕವಿಗಳೇ ಅಲ್ಲ, ಮಹಾಪುರುಷರೂ ಸರಿ. ಈ ಸತ್ಯವನ್ನು ಅವರ ಮರಣದಿಂದ ಸಮಗ್ರ ಭಾರತದ ಜನತೆ ಅರಿತಿದೆ.

ಆಂಗ್ಲ ಶಾಸನದ ಮತ್ತು ಆಂಗ್ಲ ವಿದ್ಯಾಭ್ಯಾಸದ ಫಲವಾಗಿ ಈ ಯುಗದ ಭಾರತವಾಸಿಗಳಲ್ಲಿ ನಾನಾರೀತಿಯ ನೂತನ ಮನೋಭಾವಗಳು ಅಂಕುರಿತವಾಗಿವೆ. ಅದರ ಫಲವಾಗಿಯೇ ನಾವು ದೇಶಾಭಿಮಾನಿಗಳಾಗಿದ್ದೇವೆ. ಸಮಾಜ ಸುಧಾರಕರಾಗಿದ್ದೇವೆ. ವಿದ್ಯಾಭ್ಯಾಸದ ಬೆಲೆಯನ್ನು ಅರಿಯಲು ಕಲಿತಿರುವೆವು. ರವೀಂದ್ರರು ಈ ಎಲ್ಲ ನನ ಮನೋಭಾವಗಳ ಅಸೀಮ ಶಕ್ತಿಶಾಲಿಗಳಾದ ಪ್ರಚಾರಕರಾಗಿದ್ದರು. ಆದರೆ ಆ ಕಾರಣದಿಂದ ಅವರು ನಮ್ಮ ಭಾರತೀಯ ಸಂಸ್ಕೃತಿಯ ಮಹತ್ಪನ್ನು ಎಂದೂ ಮರೆತಿರಲಿಲ್ಲ.

ಅವರ ದೇಶಾಭಿಮಾನವು ಆಂಗ್ಲೇಯರ ಶಾಸನಯಂತ್ರವನ್ನು ಸರಿಪಡಿಸುವ ದೇಶಾಭಿಮಾನವಾಗಿರಲಿಲ್ಲ. ಅವರದು ದಾಸತ್ವದಿಂದ ಮುಕ್ತರನ್ನಾಗಿ ಮಾಡಲೆತ್ನಿಸಿದ ದೇಶಾಭಿಮಾನ. ಅದರಲ್ಲಿ ಪ್ರಾಣವಿತ್ತು, ವೀರ್ಯವಿತ್ತು.

ಅವರು ಮನಃಪೂರ್ವಕವಾಗಿ ಪ್ರಚಾರಮಾಡಲೆತ್ನಿಸಿದ ವಿದ್ಯಾಭ್ಯಾಸವು ಹಿಂದೂ ಜಾತಿಯ ಸನಾತನ ವಿದ್ಯಾಭ್ಯಾಸಕ್ಕೆ ಅನುರೂಪವಾದುದು. ಅವರು ಮಹಾಪ್ರಭು ಬುದ್ಧನಂತೆ ಸಮಾಜಸುಧಾರಕರು, ವಾಲ್ಮೀಕಿ, ಕಾಳಿದಾಸರಂತಹ ಮಹಾ ಕವಿಗಳು ಮತ್ತು ಅವರ ರಚನೆಗಳು ವಾಲ್ಮೀಕಿ, ಕಾಳಿದಾಸರ ರಚನೆಗಳ ಸಮೋತ್ಕರ್ಷವು. ಅವರ ಧರ್ಮವು ಉಪನಿಷತ್ತಿನ ಏಕಸ್ವರೂಪದ ಧರ್ಮ.

ಒಂದು ಸಂಗತಿ–ರವೀಂದ್ರರ ಮನೋರಚನೆಯಲ್ಲಿ ಭಾರತವರ್ಷದ 'ನೂತನ ಮತ್ತು ಪುರಾತನ' ಈ ಎರಡರ ಸಂಪೂರ್ಣ ನಿಲುವು ಸಂಭವಿಸಿತ್ತು. ನೂತನದ ಮೋಹದಲ್ಲಿ ಅವರು ಪುರಾತನವನ್ನು ಅಲ್ಲಗೆಳೆಯಲಿಲ್ಲ. ಮತ್ತು ಪುರಾತನದ ನಾಮೆಯಲ್ಲಿ ನಿಶ್ಚ ಅವರು ಹೊಸದನ್ನು ತಿರಸ್ಕಾರದಿಂದ ಕಾಣಲಿಲ್ಲ. ಆದುದರಿಂದಲೇ ಅವರು ಹಿಂದೂ ಸಂಸ್ಕೃತಿಯ ಸರ್ವಾಂಗಸುಂದರ ಬಿಂಬವಾಗಿದ್ದರು.

ದತ್ತ ಮಂಡಲದಲ್ಲಿ ಕ್ಷಾಮ

1939 ರಿಂದ 1940 ರವರೆಗಾಗಿ ಬಂದ ದತ್ತಮಂಡಲದಲ್ಲಿ ಬಳ್ಳಾರಿ, ಅಸಂತಪುರ ಜಿಲ್ಲೆಗಳಲ್ಲಿ ಅನೇಕ ಕೋಟಿ ರೂಪಾಯಿಗಳ ನ್ಯೂನವಾಗಿದೆ. 1938-39 ರಲ್ಲಿ ಈ ಎರಡು ಜಿಲ್ಲೆಗಳಲ್ಲಿ 35 ಲಕ್ಷ ರೂ. ಸುಲುಜಾಯಿತು.

MYSORE COFFEE
(GUARANTEED 100% PURE)

We always manufacture and sell fresh Coffee Powder made out of best and selected Coffee seeds well-known for flavour, taste and aroma. The seeds are uniformly roasted and powdered in our presence. This is so for the best and cheapest in the market. Please try our extra quality powder. Good seeds also are available. Save time, save worry.

M. S. RAO & BROTHERS,
THE MYSORE COFFEE WORKS.
(ESTD: 1936)
Goldsmith Street BELLARY.

ಮೈಸೂರು ಕಾಫಿಪುಡಿ
(ಬೇರೆ ಯಾವ ಭಾಗ ಕುಡಿದಿದ್ದರೂ)
ಗುಣ ಹೆಚ್ಚು ! ಬೆಲೆ ಕಡಮೆ !!
ವಾಸನೆ ರುಚಿ – ರುಚಿಗರಿಗೆ ಹೆಸರಾದ, ವಿಶ್ವವಿಖ್ಯಾತ ಶ್ರೇಷ್ಠ ಕಾಫಿ ಬೀಜಗಳಿಂದ ತಯಾರಿಸಿದ ಕಾಫಿಪುಡಿಯು ನಮ್ಮಲ್ಲಿ ಯಾವಾಗಲೂ ದೊರೆಯುತ್ತದೆ. ನಮ್ಮ ಕಣ್ಣೆದುರಲ್ಲಿಯೇ ಬೀಜಗಳನ್ನು, ಸಮನಾಗಿ ಹುರಿದು – ಪುಡಿ ಮಾಡಲಾಗುತ್ತದೆ. ಹುರಿಸಿ – ಹುರಿಯದ ಬೀಜಗಳಿಗೂ, ಪಸನಾದ-ಪುಡಿಗೂ – ಒಳ್ಳೆಯ ಅಂಗಡಿ. ಇಂದೇಬಂದು ಕೊಂಡು ಕೃಪ್ತಿಪಟ್ಟು ಪ್ರೋತ್ಸಾಹ ಕೊಡಿರಿ.
ಯಂ. ಯಸ್. ರಾವ್ ಅಂಡ್ ಬ್ರದರ್ಸ್
ಮೈಸೂರು ಕಾಫಿ ವರ್ಕ್ಸ್., (ಸ್ಥಾಪನೆ 1936)
ಕಂಸಲ ಬಜಾರು, ಬಳ್ಳಾರಿ.

ಬತ್ತಲೆ ಶಾಲೆ

ದಕ್ಷಿಣ ಆಫ್ರೀಕಾದ ಒಂದು ನೂಲೆಯಲ್ಲಿ ಒಂದು ವಿಚಿತ್ರ ಶಾಲೆಯಿದೆ. ಅಲ್ಲಿಯ ಸಿಟಿಯೊಂದಿ ಜಾರಾ ಎಂಬ ನಸ್ಯ ಜನರ ಹುಡುಗರಿಗಾಗಿ ಈ ಶಾಲೆ ತೆರೆಯಲ್ಪಟ್ಟಿರುವದು. ಹುಡುಗರು ಬಟ್ಟೆಗಳನ್ನೇನೂ ಧರಿಸುವದಿಲ್ಲ. ಹಾಗೆಯೇ ಶಾಲೆಗೆ ಬರುವರು. ಶಾಲೆಯು ಹೊರಟು ಇನ್ನೂ ಒಂದು ವರ್ಷವಾಗಿರುವದಿಲ್ಲ. ಆದರೆ 100 ಹುಡುಗರಿರುವರು. ದಿನದ ಹಾಜರಿ ಪ್ರಮಾಣ 40 ಇರುವದು. ಲೆಖನ, ವಾಚನ, ಗಣಿತ ಮೊದಲಾದವುಗಳು ಅವರ ಭಾಷೆಯಲ್ಲಿಯೇ ಕಲಿಸಲ್ಪಡುವವು. ಪ್ರತಿದಿನದ ಮೊದಲು ಹುಡುಗರಿಗೆ ಸ್ನಾನ ಮಾಡಿಸಲಾಗುವದು. ಶಾಲೆಯು ಬಿಟ್ಟ ಕೂಡಲೆ ಹುಡುಗರು ತಮ್ಮ ತಂದೆ ತಾಯಿಗಳಲ್ಲಿ ಹೋಗಿ ಗಡ್ಡೆ ಗೆಣಸುಗಳನ್ನು ತಿಂದು ಎರಡು ಕಡೆಗೆ ಬೆಂಕಿ ಹೊತ್ತಿಸಿ, ಅವುಗಳ ನಡುವೆ ಜೈಲಲ್ಲಿ ನುಲಗಿಕೊಳ್ಳುವರು. ಸಾಧಾರಣವಾಗಿ ಹುಡುಗರು ಆರೋಗ್ಯವಂತರೂ ರೋಗಗಳಿಂದ ಮುಕ್ತರೂ ಇರುವರು.

೫೦೦೦ ವರ್ಷಗಳ ಹಿಂದಿನ

ಮನುಷ್ಯರ ಹೆಜ್ಜೆಗಳು

5000 ವರ್ಷಗಳ ಹಿಂದೆ ಮಧ್ಯ ಅಮೇರಿಕೆಯಲ್ಲಿಯ ನಿಕಾರಗುವಾ ಜ್ವಾಲಾಮುಖಿ ಸ್ಫೋಟವಾಗಿತ್ತು. ಅದರಿಂದ ಪ್ರಾಣಹಾನಿ ಎಷ್ಟು ಸಂಭವಿಸಿತೆಂಬುದು ತಿಳಿದು ಬಂದಿರದಿದ್ದರೂ ಇಪ್ಪರು ಮನುಷ್ಯರು ಸಮೀಪದ ಕೆರೆಗೆ ಓಡಿ ಹೋಗಿ ಜೀವದಿಂದ ಪಾರಾದದ್ದು ನಾತ್ರ ಸೊತ್ತಾಗುತ್ತದೆ. ಅವರು ಜ್ವಾಲಾಮುಖಿಯ ಹತ್ತರ ಹರಿಯುತ್ತಿದ್ದ ಕೆಸರಿನ ಗುಂಟ ಹೋಗಿ ಪಾರಾದರು. ಕೆಸರಿನಲ್ಲಿ ಅವರ ಹೆಜ್ಜೆಗಳು ಮೂಡಿದ್ದವು. ಕೆಲ ತಾಸುಗಳ ಮೇಲೆ ಕೆಸರು ಗಟ್ಟಿಯಾಗಿ ಕಲ್ಲಿನ ರೂಪ ಹೊಂದಿತು. ಆ ಕಲ್ಲುಗಳು ಇವೀಗ ದೊರತಿದ್ದು ಅವುಗಳ ಪರೀಕ್ಷೆ ಮಾಡಲಾಗಿ 5000 ವರ್ಷಗಳ ಹಿಂದೆ ಇಂಥ ಕಲ್ಲುಗಳಿದ್ದವೆಂದು ಕಂಡು ಬಂದಿದೆ.

ಯುದ್ಧ ದಲ್ಲಿಯಪ್ರಾಣ ರಕ್ಷಣೋಪಾಯಗಳು

ಸಧ್ಯದ ಯುದ್ಧದಲ್ಲಿ ಸೈನಿಕರ ಪ್ರಾಣ ರಕ್ಷಣೆಯ ಬಗ್ಗೆ ಅನೇಕ ಉಪಾಯಗಳು ಶೋಧಿಸಲ್ಪಟ್ಟಿವೆ. ಈ ಸಂಶೋಧನೆಗಳು ಯುದ್ಧಾನಂತರ ಶಾಂತತೆಯ ಕಾಲದಲ್ಲಿ ಬೇರೆ ತರಗಳಿಗೂ ಉಪಯೋಗ ಬೀಳುವವು. ಉದಾಹರಣಾರ್ಥ ಯುದ್ಧದಲ್ಲಿ ಗಾಯ ಹೊಂದಿದವರಿಗೆ ಈಗ ಮಾಡಲಾಗುತ್ತಿರುವ ಚಿಕಿತ್ಸೆಯು ಬೀದಿಗಳಲ್ಲಿ ಅಪಘಾತಗಳಿಗೊಳಗಾದವರಿಗೆ ಉಪಯೋಗ ಬೀಳಬಹುದು.

ಲಂಡನ್‌ನ ಮೇಲೆ ಒಮ್ಮೆ ಭಾರಿ ವಿಮಾನದಾಳಿಯಾದಾಗ ೬೫ ಜನರು ಭಯಂಕರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದ್ದರು. ಅವರಲ್ಲಿ ಕಾಲು ಎಲುಬು ಮುರಿದು ಹೋದವರೂ ಕೈ ಎಲುಬು ಮುರಿದು ಹೋದವರೂ ಇದ್ದರು. ಕಳೆದ ಯುದ್ಧದಲ್ಲಿ ಇಂಥ ಗಾಯ ಹೊಂದಿದ ನರ ಕೈಕಾಲುಗಳನ್ನೇ ಕತ್ತರಿಸಿ ತೆಗೆಯುವ ಬೇಕಾಯಿತು. ಆದರೆ ಈ ಯುದ್ಧದಲ್ಲಿ ಅಂಥ ಪ್ರಸಂಗ ಬಂದಿಲ್ಲ. ಸಲ್ಫೋನಾಮಾಯಿಡ ಎಂಬ ಹೊಸ ಔಷಧದಿಂದ ಹಾಗೆಯೇ ಅವರೆಲ್ಲ ಸಾಸಿಯಾಗಿರುವರು

ಒಬ್ಬ ಮನುಷ್ಯನು ಬಾಂಬಿನ ಚೂರುಗಳ ಆಘಾತದಿಂದ ಗಾಯಗೊಂಡಿದ್ದನು. ೩ ದಿನಗಳವರೆಗೂ ಅವನಿಗೆ ಆಸ್ಪತ್ರೆಯಲ್ಲಿ ಸ್ಥಳ ಸಿಗಲ್ಲಿಲ್ಲ. ಅವನ ಎಡಗಾಲಿನ ಎಲುಬುಗಳು ಮುರಿದು ಹೋಗಿದ್ದವು. ಕಳೆದ ಯುದ್ಧದಲ್ಲಿ ಹೀಗೆ ಗಾಯಗೊಂಡಿದ್ದರೆ, ಅವನು ಬದುಕುತ್ತಿರಲೇ ಇಲ್ಲ. ಆದರೆ ಈ ಯುದ್ಧದಲ್ಲಿ ಗಾಯಮೊಂದಿದ ೨೪ ತಾಸಿನಲ್ಲಿ ಸಲ್ಫೋನಾಯಿಡ ಹಚ್ಚಿದ್ದರಿಂದ ಅವನು ಕುತ್ತಿನಿಂದ ಪಾರಾದನು.

ಹುಲ್ಲು ತಿನ್ನಲು ಸಿದ್ಧತೆ

ಯುದ್ಧನಿಮಿತ್ಯ ಆಹಾರ ಸಾಮಗ್ರಿಗಳು ದುರ್ಲಭವಾಗಬಹುದು. ಅಂತಹ ಸಂದರ್ಭದಲ್ಲಿ ಹುಲ್ಲನ್ನು ತಿನ್ನಲೂ ಸಹ ಇಂಗ್ಲಂಡು ಈಗಾಗಲೇ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿನೆಯೆಂದು ಕಾರ್ನೆಲ್ ವಿಶ್ವವಿದ್ಯಾಲಯದ ಪ್ರೊ. ವಿ. ಬಿ. ಚಾನ್‌ಸ್ಟನ್ ವ್ಯಾಲಿಸ್‌ರವರು ತಿಳಿಸಿದ್ದಾರೆ. ಒಣ ಹುಲ್ಲಿನ ಪುಡಿಯನ್ನು ತಯಾರುಮಾಡಲು, ಈಗಾಗಲೇ ದೊಡ್ಡ ದೊಡ್ಡ ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಜನರು ಜಾಣರಾದರೆ ಅವರೂ ಸಹ ಇವನ್ನು ತಿನ್ನಬೇಕಾಗುತ್ತದೆಂದು ಆ ಪ್ರೊಫೆಸರು ತಿಳಿಸಿ, ತಾವೂ ಸಹ ಅವನ್ನು ತಿಂದಿರುವುದಾಗಿಯೂ, ಅರ್ಧ ಕೈ ಅರ್ಧ ಹಿಟ್ಟಿನೊಡನೆ ಸೇರಿಸಿತಿಂದರೆ ಬಹು ರುಚಿಕರವಾದ ಊಟವಾಗುವುದೆಂದು ಅವರು ಅಭಿಪ್ರಾಯ ಪಟ್ಟಿರುವರು.

ಹರಿಜನ ಪತ್ರಿಕೆಯಲ್ಲಿ

ಮಹಾತ್ಮಾ ಗಾಂಧಿಯವರ ಲೇಖನಗಳು.

—[ಗೋ ಸಂರಕ್ಷಣೆ.]—

ಶ್ರೀ ಜಮನಾಲಾಲರು ಗೋ ಸೇವೆಯ ದೊಡ್ಡ ಭಾರವನ್ನು ತಮ್ಮ ತಲೆಯ ಮೇಲೆ ಹೊತ್ತಿರುವರು. (ಜಮನಾಲಾಲರು ನಿಧನ ಹೊಂದುವ ಮೊದಲು ಬರೆದ ಬರೆಹವಿದು) ಗೋಪಾಲನವು ವೈಯಕ್ತಿಕವಾಗಿ ನಾಗಬೇಕೋ ಇಲ್ಲವೇ ಸಾಮುದಾಯಿಕವಿರಬೇಕೊ ಎಂಬ ಒಗ್ಗೆ ಗೋ ಸೇವಾ ಸಂಘದ ಸಭೆಯಲ್ಲಿ ಚರ್ಚಿಸಲಾಯಿತು. ಸಾಮುದಾಯಿಕವಾಗಿ ಗೋಪಾಲನವು ನಡೆಯದಿದ್ದರೆ ಆಕಳುಗಳು ಬದುಕುವದಿಲ್ಲೆಂಬ ಬಗ್ಗೆ ನನಗೆ ಸಂದೇಹವಿರಲಿಲ್ಲ. ಪ್ರತಿಯೊಬ್ಬ ಒಕ್ಕಲಿಗನು ತನ್ನ ಮನೆಯಲ್ಲಿ ದನಗಳನ್ನು ಸಾಕಿಯೋಗ್ಯ ಮತ್ತು ಶಾಸ್ತ್ರೀಯ ಪದ್ಧತಿಯಿಂದ ಅವುಗಳ ರಕ್ಷಣೆಮಾಡುವದು ಶಕ್ಯವಿಲ್ಲ. ಈ ಸಾಮುದಾಯಿಕ ಪದ್ಧತಿಯಿಂದ ಗೋಪಾಲನವು ನಡೆಯದಿದ್ದು ಹು ಸದ್ಯಕ್ಕೆ ದನಗಳ ನಾಶಕ್ಕೆ ಒಂದು ಕಾರಣವಾಗಿದೆ.

ಜೀವನದ ಪ್ರತಿಯೊಂದು ವಿಷಯದಲ್ಲಿ ಸಾಮುದಾಯಿಕವಾಗಿ ಶಕ್ತಿಯ ಸಂಘಟನೆಮಾಡುವ ಸಮಯವೀಗ ಪ್ರಾಪ್ತವಾಗಿದೆಂದು ನಾನು ಹೇಳಬಯಸುತ್ತೇನೆ. ಈ ಸಂಘಟನೆಗೆ ಸಹಕಾರ ಸಹಯೋಗವೆಂದು ಹೆಸರು. ಅನೇಕ ಸಂಗತಿಗಳಿಗೆ ಹೀಗೆಯೇ ನಡೆದಿದೆ. ನನ್ನ ದೇಶದಲ್ಲಿಯೂ ಈ ಸಹಯೋಗವು ಸಹಕಾರವು ಬರಹತ್ತಿದೆ. ಆದರೆ ಅದು ಅತ್ಯಂತ ವಿಕೃತ ಸ್ವರೂಪದಲ್ಲಿ ಬಂದುದರಿಂದ ಅದರ ಲಾಭವು ಬಡವರಿಗೆ ಸ್ವಲ್ಪವೂ ಸಿಕ್ಕದಂತಾಗಿದೆ.

ನನ್ನ ಜನಸಂಖ್ಯೆ ದಿನ ದಿನಕ್ಕೆ ಬೆಳೆಯಹತ್ತಿದೆ. ಅದು ಬೆಳೆಯುತ್ತ ನಡೆದಂತೆ ಒಕ್ಕಲಿಗರ ಭೂಮಿಗಳಲ್ಲಿ ತುಂಡುಗವಾಗಿ ಪ್ರತಿಯೊಬ್ಬನಿಗೆ ಬಹಳ ಸ್ವಲ್ಪ ಭೂಮಿಗಳು ಬಂದಿವೆ.

ಇಂಥ ಒಕ್ಕಲಿಗರಿಗೆ ದನಕರುಗಳನ್ನು ಸಾಕುವದು ಅತ್ಯಹಾತಕವೆನಿಸುವದು ಆದರೆ ಸದ್ಯದ ಅವರ ಪರಿಸ್ಥಿತಿ ಹೀಗಿದೆ. ಹಿಂದುಸ್ಥಾನದಲ್ಲಿಯ ಲಕ್ಷಾನುಲಕ್ಷ ಪಶುಗಳು ಈಗ ಮನುಷ್ಯನ ನರ್ದಸ್ಸನ್ನು ತಿನ್ನಹತ್ತಿರುವನೆಂದು ಧರ್ಮದಯೆ ಇಲ್ಲದೆ ನೀತಿಯನ್ನು ಲೆಕ್ಕಿಸದಿದ್ದ ಅರ್ಥಶಾಸ್ತ್ರವು ಸಾರಿ ಸಾರಿ ಹೇಳಹತ್ತಿದೆ. ಏಕೆಂದರೆ ಅವುಗಳಿಂದ ಸಾಕಷ್ಟು ಲಾಭ ಬಾರದಿದ್ದರೂ ಅವುಗಳ ಹೊಟ್ಟೆಗೆ ಹಾಕಬೇಕಾಗುತ್ತಿದೆ. ಆದುದರಿಂದ ಬರುವವೋಗಿಯಾದ ಎಲ್ಲ ದನಕರುಗಳನ್ನು ಕೊಂದು ಹಾಕಿರುವದು ಮೂರ್ಖತನವೆಂದು ಅವರು ಪ್ರತಿವಾದಿಸುವರು.

ಈ ವರಿಸ್ಥಿತಿಯಲ್ಲಿ ಏನು ಮಾಡಬೇಕೆಂಬುದು ಮುಖ್ಯ ಪ್ರಶ್ನೆ. ದನಗಳು ಬದುಕಿರಬೇಕು; ಅದನ್ನು ಸಾಕುವವರ ಮೇಲೆಯೂ ಹೆಚ್ಚು ಭಾರ ಬಿದ್ದಿರಬಾರದು ಇಂಥ ಮಾರ್ಗವನ್ನು ನಮಗೆ ಹುಡುಕಬೇಕಾಗಿದೆ. ಈ ಪ್ರಯತ್ನದಲ್ಲಿ ಸಾಂಘಿಕ ಪ್ರಯತ್ನವು ಒಳ್ಳೆ ಪರಿಣಾಮಕಾರಕವಾದುದು.

ಸಾಂಘಿಕ ಇಲ್ಲವೆ ಸಾಮುದಾಯಿಕ ರೀತಿಯಿಂದ ಗೋ-ಪಾಲನೆ ಮಾಡುವದರಿಂದ ಕೆಳಗಿನ ಲಾಭಗಳಾಗುವವು.

೧ ಒಕ್ಕಲಿಗನಿಗೆ ತನ್ನ ಮನೆಯಲ್ಲಿ ದನಕರುಗಳನ್ನಿಡಬೇಕಾಗಿಲ್ಲ. ದನಕರುಗಳು ಮನೆಯಲ್ಲಿರುವದರಿಂದ ಹನೆಯೆಲ್ಲ ಕೆಟ್ಟು ಹೋಗುವದು. ಸುತ್ತಲೆಲ್ಲ ಹೊಲಸು ಬೀಳುವದು. ಮನುಷ್ಯನು ದನಗಳ ಜೊತೆಯಲ್ಲಿಯೆ ಜೀವನ ಸಾಗಿಸಲು ಹುಟ್ಟಿರುವದಿಲ್ಲ. ಹೀಗೆ ಮಾಡುವದರಲ್ಲಿ ಯಾವದೇ ಬಗೆಯ ದಯೆ ಇಲ್ಲವೆ ಜ್ಞಾನವಿಲ್ಲ. ದನಕರುಗಳು ಬೇರೆ ಕಡೆಗೆ ಹೋಗುವದರಿಂದ ಒಕ್ಕಲಿಗನ ಮನೆಯಲ್ಲಿ ಬೇಕಾದಷ್ಟು ಸ್ಥಳ ಖಾಲಿಯಾಗುವದು.

೨ ದನಕರುಗಳ ಸಂಖ್ಯೆ ಹೆಚ್ಚಿದಂತೆ ಸ್ಥಳದ ಅಭಾವವೆನಿಸಹತ್ತುವದು. ಅದರ್ತಾಗಿ ಕರುಗಳನ್ನು ಮಾರಿ ಕೋಣಗಳನ್ನು ಕೊಂದುಹಾಕುವರು ಇಲ್ಲವೇ ಅವು ಉಪವಾನ ಸಾಯುವಂತೆ ಬಿಟ್ಟುಬಿಡುವರು. ಸಾಮುದಾಯಿಕರೀತಿಯಿಂದ ಈ ಕಲಸ ನಡೆದರೆ ಇದೆಲ್ಲ ನಿರ್ದಯೆ ಕೃತ್ಯ ಸಂಭವಿಸುವದಿಲ್ಲ.

೩ ದನಗಳಿಗೆ ಬೇಸೆ ಬಂದರೆ ಒಕ್ಕಲಿಗನು ಅವುಗಳ ಉಪಚಾರ ಯೋಗ್ಯರೀತಿಯಿಂದ ಮಾಡಲಾರನು. ಸಾಂಘಿಕ ರೀತಿಯಿಂದ ಅವುಗಳ ಉಪಚಾರ ಚೆನ್ನಾಗಿ ಆಗುವದು.

೪ ಪ್ರತಿಯೊಬ್ಬ ಒಕ್ಕಲಿಗನು ಬೀಜದ ಹೋರಿಯನ್ನಿಡಲಾರನು. ಆದರೆ ಸಾಂಘಿಕ ಪದ್ಧತಿಯಿಂದ ಎಲ್ಲ ದನಗಳಿಗಾಗಿ ಒಂದು ಒಳ್ಳೆ ಬೀಜದ ಹೋರಿಯನ್ನು ಇಡಬಹುದಾಗಿದೆ.

೫ ಅದೇ ರೀತಿಯಾಗಿ ಪ್ರತಿಯೊಬ್ಬ ಒಕ್ಕಲಿಗನು ತನ್ನ ದನಕರುಗಳಿಗಾಗಿ ಮೇಯಲಿಕ್ಕೆ ಸ್ವತಂತ್ರ ಹುಲ್ಲುಗಾವಲುಗಳನ್ನು ಬಿಡಲಾರನು. ಆದರೆ ಸಾಂಘಿಕ ಪದ್ಧತಿಯಲ್ಲಿ ಇದು ಶಕ್ಯವಿದೆ.

೬ ಮೇವಿನ ಬೆಲೆಯು ಬಹಳ ಕಡಮೆ ಬರುವದು.

೭ ಹಾಲು ಮೊಸರು ಅವನಿಗೆ ತೊಂದರೆಯಾಗುವದಿಲ್ಲ. ಸಾಂಘಿಕ ಪದ್ಧತಿಯಲ್ಲಿ ಹಾಲಿಗೂ ಹೆಚ್ಚು ಬೆಲೆ ಬರುವದು ಅದರಲ್ಲಿ ನೀರು ಕೂಡಿಸುವ ದುಷ್ಪವೃತ್ತಿಯು ಉಂಟಾಗುವದಿಲ್ಲ.

೮ ದನಗಳ ಪರೀಕ್ಷೆ ಮಾಡುವದು ಪ್ರತಿಯೊಬ್ಬನಿಗೆ ಶಕ್ಯವಿಲ್ಲ. ಆದರೆ ಸಾಮುದಾಯಿಕ ಪದ್ಧತಿಯಲ್ಲಿ ದನಗಳ ಪರೀಕ್ಷೆಮಾಡಿ ಅವುಗಳ ಬೀಳಿಗೆ ಸುಧಾರಿಸುವ ಉಪಾಯಗಳನ್ನು ಕೈಕೊಳ್ಳಬೇಕು

೯ ಸಾಮುದಾಯಿಕ ಪದ್ಧತಿಯಿಂದ ಆಗುವ ಲಾಭಗಳು ಮೇಲಿನ ವಿವೇಚನೆಯಿಂದ ಸ್ಪಷ್ಟವಾಗುವವು. ವೈಯಕ್ತಿಕ ಪದ್ಧತಿಯಿಂದ ನಮ್ಮ ಮತ್ತು ನಮ್ಮ ದನಗಳ ಪರಿಸ್ಥಿತಿ ಇಂದು ಇಷ್ಟೊಂದು ಅನುಕಂಪನೀಯವಾಗಿದೆಂದು ಹೇಳಬಹುದಾಗಿದೆ. ಅದು ಬದಲಾದರೆ ನಾವು ಬದುಕುವೆವು ನಮ್ಮ ದನಕರುಗಳೂ ಬದುಕುವವು.

ನಾವು ನಮ್ಮ ಹೊಲಗಳೆನ್ನೂ ಸಾಮುದಾಯಿಕ ಪದ್ಧತಿಯಿಂದ ಉಳಹತ್ತಿದರೆ ಅವುಗಳಿಂದ ಹೆಚ್ಚಿಗೆ ಲಾಭ ಸಿಕ್ಕುವದೆಂದು ನನಗೆ ವಿಶ್ವಾಸವಿದೆ.

ಹಳ್ಳಿಯಲ್ಲಿ ೧೦೦ ಹೊಲಗಳನ್ನು ತುಂಡು ತುಂಡಾಗಿ ಹಂಚಿಕೊಳ್ಳುವದಕ್ಕಿಂತ ನೂರು ಕುಟುಂಬಗಳು ಕೂಡಿಯೆ ಎಲ್ಲ ಹೊಲಗಳನ್ನು ಮಾಡಿ ಬಂದ ಉತ್ಪನ್ನವನ್ನು ಹಂಚಿಕೊಳ್ಳುವದು ಹೆಚ್ಚು ಒಳಿತಲ್ಲವೆ? ಹೊಲಗಳಂತೆ ಸಕುಗಳ ವಿಷಯದಲ್ಲಿಯೂ ಮಾಡಬಹುದು.

ಆದರೆ ವ್ಯಕ್ತಿಗಳು ಈ ಸಾಮುದಾಯಿಕ ಪದ್ಧತಿಯನ್ನು ಸ್ವೀಕರಿಸುವದು ಸ್ವಲ್ಪ ಕಠಿನವೆಂಬುದು ಎರಡನೇ ಮಾತು. ಎಲ್ಲ ಕಲಸಗಳೂ ಈ ಬಗೆಯಾಗಿ ಕಠಿನವಿರುವವು. ಗೋ ಸೇವೆಯ ಪ್ರತಿಯೊಂದು ಅಂಗವು ಕಠಿನವಿರುವದು. ಇವೆಲ್ಲ ತೊಂದರೆಗಳನ್ನು ನಿವಾರಿಸುವದರಿಂದ ಮಾರ್ಗವು ಸುಗಮವಾಗುವದು. ಸಾಮುದಾಯಿಕ ಪದ್ಧತಿಯೆಂದರೇನು, ವೈಯಕ್ತಿಕ ಪದ್ಧತಿಗಿಂತ ಅದು ಹೇಗೆ ಶ್ರೇಷ್ಠವಿರುವದೆಂಬುದನ್ನು ನನಗೆ ತೋರಿಸಬೇಕೆಂದಿತ್ತು. ಈ ಸಾಂಪ್ರದಾಯಿಕ ಪದ್ಧತಿಯೆ ಯೋಗ್ಯವಾದುದೆಂದು ನನ್ನ ಅಭಿಪ್ರಾಯ. ವ್ಯಕ್ತಿಗಳು ಸಹಕಾರದಿಂದಿದ್ದರೂ ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬಲ್ಲರು. ಆತಪವ ಈ ಸಾಮುದಾಯಿಕ ಪದ್ಧತಿಯು ಅಹಿಂಸಾತ್ಮಕವಾಗಿದೆ; ವೈಯಕ್ತಿಕವು ಹಿಂಸಾತ್ಮಕವಾಗಿದೆ.

ಪ್ರಾಥಮಿಕೋಪಾಧ್ಯಾಯರಿಗೆ ಸೂಚನೆಗಳು.

ಕೈಗೆಲಸಗಳು ಮತ್ತು ವೃತ್ತಿಪರ ಕೆಲಸ.

ಲೋವರ್ ಎಲಿಮೆಂಟರಿ ಶಾಲೆಗಳ ಪಾಠಸಟ್ಟಿಯಲ್ಲಿ ಕೈಗೆಲಸವನ್ನೂ, ಹಾಯರ್ ಎಲಿಮೆಂಟರಿ ಕ್ಲಾಸುಗಳ ಪಾಠಸಟ್ಟಿಯಲ್ಲಿ ವೃತ್ತಿಪರ ಕೆಲಸಗಳನ್ನೂ ಕಡ್ಡಾಯವಾಗಿ ಕಲಿಸಬೇಕೆಂಬ ವಿರ್ಣಾಪು ಮಾಡಲ್ಪಟ್ಟಿದೆ.

"ವೃತ್ತಿಪರ ಕೆಲಸದ ತರಬೇತು ಸಾರ್ವಜನಿಕ ವಿದ್ಯಾಭ್ಯಾಸದ ಅಂಗವಾಗಿದೆ. ಈ ತರಬೇತು ಮಕ್ಕಳ ವಿದ್ಯಾಭ್ಯಾಸಕ್ಕೆ ನಿಶ್ಚಿತವಾದ ಒಂದು ಕಳೆಯನ್ನು ಕೊಟ್ಟು ವಿದ್ಯಾರ್ಥಿಯ ಉದ್ಯೋಗ ಲಕ್ಷಣಗಳನ್ನು ಹೊರತಂದು ಅವರಿಗೆ ಮುಂದಿನ ವೃತ್ತಿಯ ಹಾದಿಯನ್ನು ತೋರಿಸುವುದು. ವಿದ್ಯಾರ್ಥಿಗೆ ಯಾವ ವೃತ್ತಿಯಲ್ಲಿ ಕುಶಲತೆ ಇದೆ ಎಂದು ಅವನಿಗೆ ತೋರಿಸಿ ಕೊಟ್ಟಂತಾಗುವದು."

ಈ ಉದ್ದೇಶದಿಂದ ವಿದ್ಯಾಪೀಠೆಯವರು ಶಾಲೆಗಳಿಗೆ ಇದೇ ವೃತ್ತಿಪರ ಕೆಲಸ ಇಡಬೇಕೆಂದು ಒತ್ತಾಯಮಾಡದೆ, ಸೂಚಿಸಿದ ಅನೇಕ ವೃತ್ತಿಕೆಲಸಗಳಲ್ಲಿ ಆಯಾ ಶಾಲೆಗಳ ಮತ್ತು ಸ್ಥಳಗಳ ಅನುಕೂಲತೆ ಮತ್ತು ಆವಶ್ಯಕತೆಗಳನ್ನು ಗಮನಿಸಿ ಬೇಕಾದ ವೃತ್ತಿಕೆಲಸ ಇಲ್ಲವೇ ಕೈಗೆಲಸಗಳನ್ನು ಶಾಲೆಯಲ್ಲಿ ಇಡುವ ಸ್ವಾತಂತ್ರವನ್ನು ಶಾಲೆಗಳಿಗೆ ಕೊಟ್ಟಿರುತ್ತಾರೆ, ಸೂತ್ರವನಲ್ಲದೆ, ಅವುಗಳನ್ನು ಕಲಿಸುವ ಉಪಾಧ್ಯಾಯರು ಇಂತಿಷ್ಟೆ ಕಲಿತಿರಬೇಕು. ಯಾ ತಮ್ಮ ವೃತ್ತಿಯ ಸರ್ಟಿಫಿಕೇಟನ್ನು ಪಡೆದಿರಬೇಕು ಎಂಬ ನಿಯಮಗಳನ್ನು, ಮಾಡಿಲ್ಲ. ಆದ್ದರಿಂದ ಪ್ರತಿಯೊಂದು ಶಾಲೆಯು ತನ್ನ ವಾತಾವರಣಕ್ಕನುಗುಣವಾಗಿ ಒಂದಲ್ಲ ಒಂದು ವೃತ್ತಿಕೆಲಸವನ್ನು ಕೈಕೊಂಡು ಅದನ್ನು ವಿದ್ಯಾರ್ಥಿಗಳಿಗೆ ಕಲಿಸತಕ್ಕದ್ದು. ಈ ಕೆಳಗೆ ಸಂಕ್ಷಿಪ್ತವಾಗಿ ಕೊಟ್ಟ ಆಯಾ ವೃತ್ತಿಕೆಲಸದ ವಿವರವನ್ನು ಶಾಲೆಗಳಿಗೆ ಸಹಾಯವಾಗಬಹುದು. ಆದರೆ ಇದನ್ನೆ ಕಲಿಸಬೇಕೆಂಬ ನಿಯಮವಿಲ್ಲ; ಇವುಗಳಲ್ಲಿ ತಮ್ಮ ಅನುಕೂಲತೆಯನ್ನು ನೋಡಿ ಅನುಭವದ ಮೇರೆಗೆ ಬದಲಾಯಿಸಿ ಕಲಿಸಬಹುದು. ಈ ವಿಭಾಗದ ಕುರಿತು ಎರಡು ಮುಖ್ಯ ನಿಯಮಗಳನ್ನು ಗಮನಿಸಬೇಕು. (೧) ವೃತ್ತಿಕೆಲಸದ ಉಪಾಧ್ಯಾಯರು ಇಂತಿಷ್ಟೇ ಕಲಿತಿರಬೇಕು. ಅವರಿಗೆ ವೃತ್ತಿಕೆಲಸದ ಸರ್ಟಿಫಿಕೇಟು ಇರಬೇಕೆಂದು ನಿಯಮ ಮಾಡಿಲ್ಲ; ಉದಾಹರಣೆಗಾಗಿ ಹಳ್ಳಿಯ ನಿಪುಣನಾದ ಬಡಗಿಯನ್ನು ಮರಕೆಲಸದ ವೃತ್ತಿಯನ್ನು ಕಲಿಸಲು ನಿಯಮಿಸಿ ಅವನ ಕೆಲಸದ ಮೇಲ್ವಿಚಾರಣೆಯನ್ನು ಒಬ್ಬ ಉಪಾಧ್ಯಾಯನಿಂದ ಮಾಡಿಸಬಹುದು.

(೨) ಎಲಿಮೆಂಟರಿ ಶಾಲೆಗಳಲ್ಲಿದ್ದ ಈ ವೃತ್ತಿವಿಭಾಗ (Department) ದ ಮೇಲ್ವಿಚಾರಣೆ ಮತ್ತು ತನಿಖೆಯನ್ನು ಶಾಲೆಯ ಇನ್‌ಸ್ಪೆಕ್ಟಿಂಗ್ ಆಫೀಸರರೇ ಮಾಡುವರಲ್ಲದೆ ಸರಕಾರದ ಮೆನ್ಯುವಲ್ ಟ್ರೈನಿಂಗ್ ಎಡ್ಜೈಸರರಿಗಾಗಲೀ ಇನ್ನಿ ತರ ಪಿಡ್ಯೋಗಿಕ ಕುಶಲರಾದ ಸರಕಾರಿ ಆಫೀಸರರಿಗಾಗಲೀ ಅದರ ಮೇಲೆ ಯಾವ ತರದ ಅಧಿಕಾರವು ಇರುವುದಿಲ್ಲ.

I. ಕೈಗೆಲಸ.

೧. ಅವೆಮಣ್ಣಿನ ಕೆಲಸ. ೨. ಕಾಗದ ಮತ್ತು ಕಾಗದದ ಹಿಟ್ಟಿನ ಕೆಲಸ. ೩. ರಟ್ಟಿನ ಕೆಲಸ ಮತ್ತು ಬೈಂಡಿಂಗ್. ೪. ನಾರು, ಹುಲ್ಲುಗಳ ಕೃತಿಗಳು. ೫. ಚಾಪೆ ಮಾಡುವದು. ೬. ಬುಟ್ಟಿ, ಪೆಡಿಗೆಗಳನ್ನು ಹಾಡುವದು. ೭. ಪ್ಲಾಯ್ ವುಡ್ ಕೆಲಸ. ೮. ಅತ್ಯುಗಳ ಉಪಯೋಗ. ೯. ಕೊಂಕಿನ ಹಾಳೆ ಮೊದಲಾದುವುಗಳ ಮೇಲೆ ಕೆತ್ತನೆ ಅಚ್ಚು. ೧೦. ಚರ್ಮದ ಕೆಲಸ. ೧೧. ಮಣಿಗಳ ಕೆಲಸ. ೧೨. ಕಚ್ಚಿನ ಮಗ್ಗ, ರಟ್ಟಿನ ಮಗ್ಗ, ಚಿಕ್ಕಮಗ್ಗ. ೧೩. ಹೊಲಿಗೆ. ೧೪. ಬಳ್ಳಿ, ಬೆತ್ತಗಳ ಕೆಲಸ. ೧೫. ಗೊಂಬೆಗಳ ತಯಾರಿ. ೧೬ ಮಿದುವಾದ ಮರದ ಕೆತ್ತನೆ. ೧೭. ನೂಲು ಮಾಡುವುದು.

II. ವೃತ್ತಿಪರ.

೧. ಕೃಷಿ. ೨. ತೋಟಗಾರಿಕೆ. ೩. ಕಮ್ಮಾರನ ಕೆಲಸ. ೪. ದರ್ಜಿಯ ಕೆಲಸ. ೫. ನೂಲುವದು, ನೇಯುವದು. ೬. ಅಡಿಗಸ ಕೆಲಸ. ೭. ಬಡಗಿಯ ಕೆಲಸ. ೮. ಚರ್ಮದ ಕೆಲಸ. ೯. ಕೋಳಿ ಸಾಕುವುದು. ೧೦. ಜೇನು ಸಾಕುವುದು. ೧೧. ಪಣ್ಣು ಹಂಪಲುಗಳನ್ನು ಕಾಯಿದುವುದು. ೧೨. ಛಾಸಿಸುವುದು. ೧೩. ಲೋಹದ ಕೆಲಸ. ೧೪. ಟೊಪ್ಪಿಗೆಗಳನ್ನು ಮಾಡುವದು. ೧೫. ಸಾಬೂನು ಮಾಡುವುದು. ೧೬. ಕಾಗದದ ತಯಾರಿ. ೧೭. ಚಿತ್ರಗಳಿಗೆ ಚೌಕಟ್ಟು. ೧೮. ಬಲೆ ಮತ್ತು ಹಗ್ಗಗಳ ಕೆಲಸ. ೧೯. ಕಸೂತಿ.

BAND HINGOOL.

Aphrodisiac, impotency can be completly cured by its confirmed use of 40 days. Also it is efficacious for Rheumatism, Lumbago, Bronchitis, Asthma, Paralysis etc., Dose one to threee grains daily. Write for other Particulars.

Agent :—**CALCUTTA AYURVEDIC PHARMACY, BELLARY.**

ಬಂದ ಹಿಂಗೂಲ.

40 ದಿನದ ಸೇವನೆಯಿಂದ ನಪುಂಸಕತ್ವವು ನಿವಾರಣೆಯಾಗುವುದು. ಉಷ್ಣವಾಯು, ಟೊಂಕ ಶೂಲೆ, ಕೆಮ್ಮು – ಉಬ್ಬಸ – ಪಾರ್ಶ್ವವಾಯು ಇವುಗಳಿಗೆ ಅತ್ಯಂತ ಶ್ರೇಷ್ಠ ಮತ್ತು ಗುಣಕಾರೀ ಔಷಧ. ದಿನಕ್ಕೆ ಒಂದರಿಂದ ಮೂರು ಗ್ರೇನುಗಳು ಕೆಗೆದು ಕೊಳ್ಳಬೇಕು. ಇತರ ವಿವರಗಳಿಗೆ ಬರೆಯಿರಿ.

ನಿಜಂಟ್ :—**ಕಲ್ಕತ್ತಾ ಆಯುರ್ವೇದಿಕ ಫಾರ್ಮಸಿ, ಬಳ್ಳಾರಿ.**

ಗಂಡ-ಹೆಂಡಿರ ಒಪ್ಪಂದ.

(ಶ್ರೀ ಎಂ. ಜಿ. ವೆಂಕಟೇಶಯ್ಯ, ಎಂ. ಎ.ಬಳ್ಳಾರಿ.)

ಸಂಸಾರವನ್ನು ಸಾಗಿಸುವುದಕ್ಕೆ ಗಂಡ ಒಂದು ಎತ್ತು, ಹೆಂಡತಿ ಒಂದು ಎತ್ತು, ಇವೆರಡೂ ಒಂದೇ ರೀತಿ ಮುಂದರಿದರೆ ಸಂಸಾರದ ಬಂಡಿ ಸರಿಯಾದ ದಾರಿಯಲ್ಲಿ ಸಾಗುತ್ತೆ. ಒಂದೊಂದೆತ್ತು ಒಂದೊಂದು ದಿಕ್ಕಿಗೆ ಎಳೆದರೆ.....!

ನಲವತ್ತು ವರ್ಷದವರೆನಿಗೂ ಗಂಡನಿಗೂ ಹೆಂಡತಿಗೂ ಸಾಮಾನ್ಯವಾಗಿ ಸಂಸಾರ ಒಡೆಯುವಷ್ಟು ಕಲಹ ಬರುವದಿಲ್ಲ ಇದಕ್ಕೆ ಕಾರಣಗಳು ಅನೇಕ. ಹಾಗೇ ಒಡೆದು ಹೋಗುವುದಕ್ಕೆ ಕಾರಣಗಳು ಅನೇಕ. ಇಲ್ಲಿ ಕಾರಣಗಳ ಚರ್ಚೆ ಅನಾವಶ್ಯಕ. ಆದರೆ ಗಂಡ ಹೆಂಡರಿಗೆ ಕಲಹ ಬಂದು ಅವರ ಜೊತೆ ಕೆಡದೆ ಇರುವದಕ್ಕೆ ಹೌದಿನಿ ಎಂತಹ ಒಪ್ಪಂದವನ್ನು ಮಾಡಿಕೊಂಡಿದ್ದನೋ ನೋಡೋಣ.

ಹೌದಿನಿ ಎಷ್ಟು ಮುಂಗೋಪಿಯೋ ಬಿಯಟ್ರಿಸ್ (Beatrice) ಳೂ ಅಷ್ಟು ಮುಂಗೋಪಿ. ಆವಳು ಬಹಳ ವಾಚಾಳಿ. ಇದು ಹೌದಿನಿಗೆ ಸರಿಬೀಳುತ್ತಿರಲಿಲ್ಲ. ಅವಳ ಮಾತನ್ನು ನಿಲ್ಲಿಸಬೇಕೆಂದು ಇವನಿಗೆ ಇಷ್ಟವಿದ್ದರೆ ಇವನು ತನ್ನ ಬಲಹುಬ್ಬನ್ನು ಮೂರು ಸಲ ಹಾರಿಸಬೇಕು. ಇದನ್ನು ತಿಳಿದು ಹೆಂಡತಿಯು ಮಾತನ್ನು ನಿಲ್ಲಿಸಿಬಿಡಬೇಕು. ಹೌದಿನಿಯು ಎಷ್ಟು ಹುಷಾರಾಗಿದ್ದನೋ ಇವಳೂ ಅಷ್ಟು ಹುಷಾರಾಗಿದ್ದುದರಿಂದ ಸರ್ಕಸ್ಸಿನಲ್ಲಿ ಇಬ್ಬರೂ ಕೆಲಸ ಮಾಡುತ್ತಿದ್ದರೂ ಒಬ್ಬರಿಗೊಬ್ಬರು ತೊಂದರೆ ಕೊಡುತ್ತಿರಲಿಲ್ಲ.

ಕೈಲಿ ಹಣವಿಲ್ಲ! ಏನೋ ಸ್ವಲ್ಪ ಗಳಿಸಿದ ಹಣವನ್ನು ಯಾವುದಕ್ಕೋ ಹಾಕಿಕಳೆದುಕೊಂಡ ಇಂತಹ ಸಂದರ್ಭದಲ್ಲಿ ದಿನವಕ್ಕೆ ಇಪ್ಪತ್ತು ಸಲ ತನ್ನವಿದ್ಯೆಯನ್ನು ತೋರಿಸಿದರೆ ಆ ಸರ್ಕಸ್ಸಿನ ಯಜಮಾನನು ಇನ್ನೂರಿಬ್ಬರಿಗೆ ತಿಂಗಳಿಗೆ ತೊಂಭತ್ತು ರೂಪಾಯಿ ಸಂಬಳಕೊಡುತ್ತಿದ್ದ. ಇಂತಹಸ್ಥಿತಿಯಲ್ಲಿ ಗಂಡ ಹೆಂಡರಿಗೆ ಕಲಹ ಬರುವುದೇನತಿಶಯ!

ಗಂಡಸಿಗೆಕೋಪ ಬಂದರೆ ಹೆಂಡತಿ ಹೆದರಿಕೊಂಡು ನಡೆಯಬೇಕು. ಹೆಂಡತಿಗೆ ಕೋಪಬಂದರೆ ಗಂಡನೇನು ಮಾಡಬೇಕು? ಈ ಸೃಷ್ಟಿಗೆ ಹೌದಿನಿ ಒಂದು ಉಪಾಯನನ್ನು ಕಂಡು ಹಿಡಿದಿದ್ದ. ತನ್ನ ಹೆಂಡತಿ ಕೋಪಮಾಡಿಕೊಂಡ ಕೂಡಲೇ ಇವನು ಮನೆಯಿಂದಾಚೆಗೆ ಪಲಾಯನ ಸೂತ್ರವನ್ನು ಹೇಳುತ್ತಿದ್ದ. ಹೆದರಿ ಓಡಿ ಹೋಗುತ್ತಿದ್ದನೆಂದು ನಮ್ಮ ಗಂಡಸರು ಹೇಳಬಹುದು. ಆದರೆ ಅವನ ನೃತ್ತಿಗೆ ಅವನ ತಲೆ ಯಾವರೀತಿಯಲ್ಲಿರಬೇಕೆಂಬುದನ್ನು ಸ್ವಲ್ಪ ಯೋಚಿಸಿದರೆ ಇದರ ತತ್ವ ತಿಳಿಯುತ್ತೆ. ನಮ್ಮಂತೆ ವ್ಯಾಜ್ಯಕ್ಕೆ ನಿಂತು ತಲೆ ಕೆಡಿಸಿಕೊಂಡು ಬಿಟ್ಟರೆ ಸರ್ಕಸ್ಸಿನಲ್ಲಿ ತನ್ನ ವಿದ್ಯೆಯನ್ನು ತೋರಿಸುವುದಕ್ಕೆ ಬೇಕಾದ ಮನಸ್ಸಿನ ಶಾಂತಿ, ಧೈರ್ಯ ಸ್ಥೈರ್ಯಗಳು ಅವನಿಗೆಲ್ಲಿಂದ ಬರಬೇಕು? ಕೆಲವು ಸಂದರ್ಭಗಳಲ್ಲಿ ಮನಸ್ಸು ಸರಿಯಾಗಿಲ್ಲದೆ ಒಂದು ನಿಮಿಷ ಹೆಚ್ಚು ಕಡಿಮೆಯಾದರೆ ಹೌದಿನಿಯು ಬದುಕುವ ಸಂಭವವೇ ಇಲ್ಲ. ಇದನ್ನೆಲ್ಲಾ ಚೆನ್ನಾಗಿ ತಿಳಿದುಹೆಂಡತಿಗೆ ಕೋಪ ಬಂದರೆ ಕೂಡಲೆ ಅವನು ಮನೆಯಿಂದಾಚೆಗೆ ಹೋಗಿಬಿಡುತ್ತಿದ್ದುದು.

ಮತ್ತೆ ಮನೆಗೆ ಬಂದಕೂಡಲೇ ಆಚೆ ನಿಂತು ತನ್ನ ಟೋಪಿಯನ್ನು ಒಳಕ್ಕೆ ಎಸೆಯುತ್ತಿದ್ದ. ಆ ಟೋಪಿಯನ್ನು ಪುನಃ ಮನೆಯಿಂದಾಚೆಗೆ ಎಸೆದರೆ, ಹೆಂಡತಿಗೆ ಕೋಪವು ಇನ್ನು ಇಳಿಯಲಿಲ್ಲವೆಂದು ಪುನಃ ಹಾಗೇ ಸುತ್ತಾಡಿ ಬರುತ್ತಿದ್ದ. ಹಾಕಿದ ಟೋಪಿ ಮನೆಯೊಳಗಿದ್ದರೆ ಹೆಂಡತಿಯಕೋಪವು ಶಾಂತವಾದುದಕ್ಕೆಗುರುತು. ಆಗ ಒಳಕ್ಕೆ ಬರುತ್ತಿದ್ದ. ಗಂಡ ಹೆಂಡಿರ ಈ ಒಪ್ಪಂದವು ಒಳ್ಳೆಯದಲ್ಲವೇ?

೧೯೪೧ ರಲ್ಲಿ ಚಿತ್ರಪಟ ನಿರ್ಮಾಣ.

(3 ನೆಯ ಪುಟದಿಂದ ಮುಂದುವರಿದಿದೆ.)

ಗಳಿಂದ ಉಳಿದ ಅನೇಕ ದೃಷ್ಟಿಯಿಂದ ಹಾನಿಯಾಗುತ್ತಿದ್ದರೂ ನಿನೇಮಾ ವ್ಯಸಾಯಕ್ಕೆ ಇದರಿಂದ ಎಷ್ಟೊಂದು ಹಾನಿಯಾಗುತ್ತಿದೆಂಬದು ಇದರಿಂದ ಗೊತ್ತಾಗುವದು. ಮುಂಬಯಿಯಲ್ಲಿ ಮೊದಲು ಪ್ರದರ್ಶಿಸಲ್ಪಟ್ಟ ಚಿತ್ರಪಟಗಳು ಹೆಚ್ಚು ಲಾಭಕರವಾಗುತ್ತವೆಂಬದು ಸಿದ್ಧವಾಗಿದೆ. ಚಿತ್ರಪಟ ನಿರ್ಮಾಣಕರಲ್ಲಿ ಇನ್ನಷ್ಟು ಸೌಹಾರ್ದ ಭಾವವು ಮತ್ತು ಸಂಯುಕ್ತ ಪರಿಶ್ರಮವು ನಡೆದರೆ ವ್ಯವಸಾಯಕ್ಕೆ ಹೆಚ್ಚು ಕಳಿಬಂದು ಅದು ಲಾಭದಾಯಕವಾಗಿ ಪ್ರಗತಿ ಹೊಂದುವದೆಂದು ಹೇಳಬಹುದಾಗಿದೆ.

ಸಂಗೀತಜ್ಞಾ—(ಹಾಸ್ಯವನ್ನು ಕುರಿತು) ನಾವ್ಯಗಳಲ್ಲೆಲ್ಲಾ ಉತ್ತಮವಾದ ನಾವ್ಯ ಯಾವುದು ಹೇಳಿ?

ಹಾಸ್ಯಗಾರ —ಹೇಳುವುದೇನು ತಂಕಣ್ಣಾ, ಹೇ ಉತ್ತಮವಲ್ಲವೆ.

ಬಿಕನಾಸಿ

ಪಂಡಿತ ಪೈಡಾಲಂ L. A. N. ಶರ್ಮ,ಲಳ್ಳೂರು

ನುಡಿ ಮಡಿ ಎಂದು ಹೊರೆ ಹೊರೆಗುಟ್ಟುವೆ:—
ಏತರ ಮಡಿ! ಬಿಡು ಬಿಕನಾಸಿ!
ಪಂಚೇಂದ್ರಿಯಗಳ ಕಾವಲಿ ಸೋತು ಕೊಳೆಯುತಲಿರುವೆ ಬಿಕನಾಸಿ?
ಜನನದ ಸುರಣದ ಸೂತಕ ನಿನಗೆ ನುಡಿಯೆಂ ತಮದೋ ಬಿಕನಾಸಿ?
ಹೆಜ್ಜೆ ಹೆಜ್ಜೆಗೂ ನೀರ್ ಹಾಕುತ ನಡೆದರೆ ಅದರಲಿ ಇಮವುದೇ ನುಡಿ ಬಿಕನಾಸಿ!
ಕಾನೇರಿಯ ಬಳಿಯಲಿ ಮುಳುಗೆದ್ದರೆ ನೀ ಪಡಿಯೆಂದರಿವೆಯ ಬಿಕನಾಸಿ?
ನಿನ್ನೊಳು ಅಕ್ಕನ ಜ್ಞಾನದಿ ತೊಳೆದರೆ ಎಂದಿಗು ಅದೆನುಡಿ, ಬಿಕನಾಸಿ!

ವಿನೋದ

A—7 ಮಂದಿ ಕನ್ನೆಯರ ತಂದೆ ಮತ್ತು ಲಕ್ಷಾಧಿಪತಿ ಇವರಲ್ಲಿ ಹೆಚ್ಚಿನ ಪುಣ್ಯವಂತರು ಯಾರು?

B—ಮೊದಲನೆಯವನು

A—ಅದು ಹೇಗೆ?

B—ಲಕ್ಷಾಧಿಪತಿಗೆ ತೃಪ್ತಿಯೆಂಬುದಿಲ್ಲ. ಕನ್ನೆಯರ ತಂದೆಗೆ ಅಳಿಯೇ ಉಳಿಯುವುದಿಲ್ಲ.

ಉಪಾಧ್ಯಾಯ—ರಾಮು! ನಿನ್ನ ತಂದೆಯು ಶೇಕಡ 12 ರಂತೆ 100 ರೂ. ಬಡ್ಡಿಗೆ ತೆಗೆದುಕೊಂಡರೆ 8 ತಿಂಗಳಿಗೆ ಎಷ್ಟು ಬಡ್ಡಿ ಕೊಡಬೇಕಾಗುತ್ತದೆ.

ರಾಮು—ಒಂದು ಕಾಸು ಕೂಡ ಇಲ್ಲಸಾರ್.

ಉಪಾಧ್ಯಾಯ — ಹುಟ್ಟುಸುಯಂತೇ, ಆದು ಹೇಗೋ!

ರಾಮು—ನಮ್ಮ ತಂದೆಯು ಅಸಲು ಕೊಟ್ಟರಲ್ಲವೇ? ಬಡ್ಡಿಯ ಮಾತು.

ಓರ್ವನು ಸೈನ್ಯದಲ್ಲಿ ಸೇರಬೇಕೆಂದು ರಿಕ್ರೂಟಿಂಗ್ ಕಚೇರಿಗೆ ಬಂದಿದ್ದನು. ಆದರೆ ರಿಕ್ರೂಟಿಂಗ್ ಆಫೀಸರನು ಕಾಲು ಸರಿಯಾಗಿಲ್ಲವೆಂದು ಅವನನ್ನು ನಿರಾಕರಿಸಿದನು. ಆದರೂ ಮರುದಿವಸ ಪುನಃ ಅವನು ಬಂದು ತನ್ನನ್ನು ತೆಗೆದುಕೊಳ್ಳಲು ಬೇಡಿಕೊಂಡನು.

ರಿಕ್ರೂಟಿಂಗ್ ಆಫೀಸರನು ಡಾಕ್ಟರರಲ್ಲಿ ಅವನನ್ನು ಕರೆದೊಯ್ದನು. ಡಾಕ್ಟರರು ಅವನಕಾಲು ತಪಾಸಮಾಡಿ ಮಾರ್ಚ್ ಮಾಡಲು ಇವನಿಗೆ ಸಾಧ್ಯವಾಗುವದಿಲ್ಲ ತೆಗೆದುಕೊಂಡು ಮಾಡುವದೇನು ಎಂದರು.

ರಿಕ್ರೂಟಿಂಗ್ ಆಫೀಸರನು ತೆಗೆದುಕೊಳ್ಳಲೇ ಬೇಕೆಂದು ಆಗ್ರಹ ಹಿಡಿಯಲು ಕಾರಣವೇನೆಂದು ವಿಚಾರಿಸಿದನು.

ಶ್ರಮಪಟ್ಟು ನೂರಿನ್ನೂರು ಮೈಲು ನಡೆದು ಬಂದಿರುವೆನು. ತಿರುಗಿ ಹೋಗುವದು ಆಗುವದಿಲ್ಲ ಎಂದು ಅವನು ಉತ್ತರ ಕೊಟ್ಟನು.

(೨ನೇ ಪುಟದಿಂದ)

ಅಚ್ಚು ರಾಷ್ಟ್ರಗಳ ಪ್ರಾಬಲ್ಯ ಬೆಳೆದುದೇಕೆ?

ರಾಜ್ಯಸೂತ್ರ ವಹಿಸಿದಂದಿನಿಂದ ಆ ಅ ಸಂತೋಷವು ಮತ್ತಷ್ಟು ಬೆಳೆಯಿತು. ಇ ಟಲಿಯು ತನ್ನ ಹಿಂದಿನ ರೋಮ ಸಾ ಮ್ರಾಜ್ಯವನ್ನು ಮತ್ತೊಮ್ಮೆ ಕಟ್ಟುವ ಆ ಕಾಂಕ್ಷೆ ಹಿಡಿದು ಕಾರ್ಯತತ್ಪರವಾಗ ಬೇಕೆಂದು ಪ್ರಚಾರಾರಂಭವಾಯಿತು. ಎಲ್ಲೆಲ್ಲಿಯೂ ಯುದ್ಧಸನ್ನಾಹ, ಸೈನಿಕೀ ಕರಣ ಮೊದಲಾದವುಗಳೇ ನಡೆದವು. ಹಿಟ್ಲರನ ಹೆಸರು ಕೇಳಬರುವ ಪೂರ್ವ ದಲ್ಲಿಯೇ ಮುಸೋಲಿನಿಯು ಖ್ಯಾತಿ ಗೊಂಡಿದ್ದನು. ಇಟಲಿಯ ಯುದ್ಧಸಾ ಮರ್ಥ್ಯವು ಬಹಳ ಬೆಳೆದಿದೆಂಬ ಕಲ್ಪನೆ ಯು ಎಲ್ಲೆಡೆ ಹರಡಿತ್ತು. ಮುಸೋಲಿನಿ ಯು ಅಲೌಕಿಕ ರಾಜಕಾರಣಪಟುವೆಂ ದೂ ಅನಿಸಿಕೊಂಡನು. ಇದೆಲ್ಲದರ ಸತ್ಯಾ ಸತ್ಯತೆಯು ಕಳೆದ ನವುಷ ಗ್ರೀಕ ಯುದ್ಧ ದಲ್ಲಿ ಬಯಲಿಗೆ ಬಂತು. ಅಲ್ಲಿಯವರೆಗೆ ಮುಸೋಲಿನಿಯು ಹಿಟ್ಲರನಂತೆಯೇ ಎ ಲ್ಲರನ್ನು ಹೆದರಿಸಿ ನಡೆದನು. ೧೯೩೫-೩೬ ರಲ್ಲಿ ನಿಷ್ಕಾರಣವಾಗಿ ಅಬಿಸಿನಿಯದ ಮೇಲೆ ದಾಳಿ ಮಾಡಿ ಅದನ್ನು ಸುಂಗಿದ ನು. ಆಗ ಬ್ರಿಟನ ಫ್ರಾನ್ಸ್ ಮೊದಲಾದ ರಾಷ್ಟ್ರಸಂಘದ ಸದಸ್ಯರು ಅವನಿಗೆ ಯೋ ಗ್ಯ ಶಾಸನ ಮಾಡಿದ್ದರೆ ಅದರಿಂದ ಮಾತ್ರ ಕಲಿತು ಉಳಿದ ಅಚ್ಚು ರಾಷ್ಟ್ರಗಳ ಸದ್ದು ಅಡಗಬಹುದಾಗಿತ್ತು. ಆದರೆ ಆ ಸಮರ್ಥ ಅಬಿಸಿನಿಯ ಆಹುತಿಯಾಗು ತ್ತಿರುವಾಗ ಯಾರೂ ಏನೂ ಮಾಡದ್ದ ರಿಂದ ಮುಸೋಲಿನಿಯು ಮತ್ತಷ್ಟು ಬಲ ಸೊಂತನು. ರಾಷ್ಟ್ರಸಂಘದ ಜೊಳ್ಳುತನ ವು ಮತ್ತೊಮ್ಮೆ ಹೊರಬಿತ್ತು. ಮುಂದೆ ಹಿಟ್ಲರನ ಕೂಡೆ ಮುಸೊಲಿನಿಯ ಸಂ ಬಂಧ ಬೆಳೆದು ಇಬ್ಬರೂ ಘನಮಿತ್ರರಾ ದರು. ಸ್ಪೇನದಲ್ಲಿ ಲೋಕಶಾಹಿಯ ಕೊ ಲೆಯಾಗುತ್ತಿರುವಾಗ, ಅದಕ್ಕೆ ಹಿಟ್ಲರ, ಮುಸೊಲಿನಿಗಳೆ ಕಾರಣರಾಗುತ್ತಿರುವಾ ಗ, ಇಂಗ್ಲಂಡ ಫ್ರಾನ್ಸ್‌ಗಳು ಕೈಕೊಳ್ಳಬೇ ಕಾದ ಉಪಾಯನೇನೂ ಮಾಡದ್ದರಿಂದ ಅವರೀರ್ವರ ಆಟವು ನಿರ್ವಿಘ್ನ ಮುಂದೆ ಸಾಗಲಸುವಾಯಿತು. ಈ ಪರಿ ಜರ್ಮ ನಿಯಂತೆ ಇಟಲಿಯು ಕ್ರಮೇಣ ಯೂ ರೋಪಕ್ಕಷ್ಟೇ ಅಲ್ಲದೆ ಅನ್ಯ ರಾಷ್ಟ್ರಗಳಿ ಗೂ ತಲೆ ಭಾರವಾಗಲು. ಬೆದರಿಕೆಯುಂ ಟುಮಾಡಲು ಕಾರಣವಾಗಿ ಅಚ್ಚಿನ ರಾ ಷ್ಟ್ರಗಳ ಕೂಟವು ಬಲಗೊಳ್ಳಲು ಯಾ ರು ಕಾರಣೀಭೂತರಾದರೆಂಬುದು ಇದ ರಿಂದ ಸಹಜವಾಗಿ ತಿಳಿಯುವುದಾಗಿದೆ

ಅತಿ ಪೂರ್ವದಲ್ಲಿಯ ಹಾವಳಿ

ಅತಿ ಪೂರ್ವದಲ್ಲಿ ಕಳೆದ ಡಿಸೆಂಬರ ೭ ನೇ ತಾರೀಕಿಗೆ ಪ್ರಾರಂಭವಾದ ಹಾ ವಳಿಯ ಬೀಜಗಳು ೧೯೩೭ ರಲ್ಲಿಯೇ ಬಿತ್ತಲ್ಪಟ್ಟಿದ್ದವು. ಚೀನದ ಮಂಚೂರಿ ಯವನ್ನು ನಿಷ್ಕಾರಣವಾಗಿ ಜಪಾನವು ನುಂಗಿದಾಗ ರಾಷ್ಟ್ರಸಂಘವು ಅದರಲ್ಲಿ ಯೂ ಬ್ರಿಟನವು ಏನೂ ಮಾಡದ್ದರಿಂದ ಜಪಾನರು ಮನಸ್ಸಿ ಆಚರಣೆಯನ್ನಾರಂ ಭಿಸಿದರು. ವಿಹ್ಕ್ಟೋರಿಯಾ ಮಹಾರಾಣಿ ಯ ಕಾಲದಿಂದ ಮೊನ್ನೆಯ ವರೆಗೆ ಬ್ರಿ ಟಿಷರು ಜಪಾನರನ್ನು ಯಾವಾಗಲೂ ಸಂಕುಷ್ಟವಾಗಿಡಲು ಹೆಣಗಾಡಿದರು. ಜಪಾನರಾಷ್ಟ್ರವು ಜಗತ್ತಿನ ನೌಕಾಸಾಮ ರ್ಥ್ಯದಲ್ಲಿ ನೇಲ್ತರಗತಿಯನ್ನು ಸಡೆಯ ಲು ಅನಿದ್ಯೆಯಲ್ಲಿ ಅದನ್ನು ಮುಂದೆ ತ ರಲು ಕಾರಣರಾದವರೂ ಬ್ರಿಟಿಶರೇ. ೧೯೩೭ ರಲ್ಲಿ ಹೊಸ ನಾವರಿಯ ಒಂದು ಯುದ್ಧನೌಕೆಯನ್ನು ಕಾಣಿಕೆಯಾಗಿ ಕೊಟ್ಟು ಮುಂದೆ ೧೯೩೨ ರಲ್ಲಿ ಬ್ರಿಟಿಶ ನಾವಿಕ ಯುದ್ಧ ತಜ್ಞರನ್ನು ಜಪಾನಕ್ಕೆ ಕಳಿಸಿ ನೌಕಾಯುದ್ಧ ಶಾಲೆಯನ್ನು ತೆರೆ ಯುವವರಲ್ಲಿ ಜಪಾನಕ್ಕೆ ಅನುಕೂಲವಾ ದವರೂ ಬ್ರಿಟಿಶರೇ ಇದರಿಂದ ಫಲಹೊಂ ದಿದ ಜಪಾನು ೧೯೬೫ ರಲ್ಲಿ ಚೀನದ ನ್ಯಾ ೧೯೦೫ ರಲ್ಲಿ ರಶಿಯವನ್ನು ಸೋಲಿಸಿ ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲೊಂದಾ ಯಿತು. ಅಂದಿನಿಂದ ಅತಿ ಪೂರ್ವದಲ್ಲಿ ಯ ತನ್ನ ಹಿತಸಂಬಂಧಗಳ ರಕ್ಷಣೆಗಾ ಗಿ ಬ್ರಿಟನವು ಸದಾ ಜಪಾನರ ಪೋರೆ ನೊಡುತ್ತ ಬಂದಿತು. ರಶಿಯಕ್ಕೆ ಸ್ವೀಡ ದಲ್ಲಿ ಜರ್ಮನಿಯ ಅಂಜಿಕೆ ಪೂರ್ವದಲ್ಲಿ ಅದಕ್ಕೆ ಜಪಾನದ ಅಂಜಿಕೆಯಿರಬೇಕೆಂ ಬ ಬ್ರಿಟಿಶರ ಉದ್ದೇಶವಾಗಿತ್ತು.

ಜಪಾನಕ್ಕಾದ ಲಾಭ

ಕಳೆದ ಮಹಾ ಯುದ್ಧದಲ್ಲಿ ನಿಜವಾದ ಲಾಭ ಯಾರಾದರೂ ಪಡೆದಿದ್ದರೆ ಅದು ಜಪಾನವು. ನಾಮ ಮಾತ್ರಕ್ಕೆ ಮಿತ್ರರಾ ಷ್ಟ್ರಗಳಿಗೆ ಕೂಡಿಕೊಂಡು ಯುದ್ಧದಲ್ಲಿ ಯಾವುದೇ ಭಾಗವಹಿಸದೆಯಲ್ಲರೂ ಯುದ್ಧದಲ್ಲಿ ತೊಡಗಿರುವಾಗ ಅವರ ಉ ದ್ಯೋಗ ವ್ಯಾಪಾರವನ್ನೆಲ್ಲ ಜಪಾನವು ತನ್ನ ವಶಮಾಡಿಕೊಂಡಿತು. ಯುದ್ಧ ಪೂ ರ್ವ ೧೯೧೩ ರಲ್ಲಿದ್ದ ಅದರ ವಿದೇಶಿ ವ್ಯಾ ಪಾರವು ೧೩೪೨ ದಶಲಕ್ಷದಿಂದ ಯುದ್ಧಾ ನಂತರ ೧೯೨೦ ರಲ್ಲಿ ೪೨೬೪ ದಶಲಕ್ಷ ಯೆನ್ ಅಂದರೆ ಸುಮಾರು ೩೫ ಪಟ್ಟು ಬೆಳೆಯಿತು. ಹೀಗೆ ವ್ಯಾಪಾರದಿಂದ ಗಳಿ ಸಿದ ಧನದ ಸುಬಕ ಮತ್ತು ೧೯೩೭ ರಲ್ಲಿ ಮಾಂಚೂರಿಯ ಕಾಲಕ್ಕೆ ರಾಷ್ಟ್ರಸಂ ಘದಿಂದ ತನಗಾವದೂ ಹೆದರಿಕೆಯಿಲ್ಲ ವೆಂದು ಕಂಡದ್ದರಿಂದ ಜಪಾನವು ದಿನ ದಿನಕ್ಕೆ ಪ್ರಬಲವಾಗಿ ೧೯೩೭ ರಲ್ಲಿ ಚೀನ ದ ವಿರುದ್ಧ ಯುದ್ಧ ಹೂಡಿತು. ಆಗಲೂ ಮಿತ್ರರಾಷ್ಟ್ರಗಳು ಪ್ರಸಂಗವನ್ನು ಹಿಡಿತ ದಲ್ಲಿ ತರಲು ಯತ್ನಿಸಲಿಲ್ಲ. ಅಮೇರಿಕೆ ಯಂತೂ ಆ ಯುದ್ಧದ ಅಸ್ತಿತ್ವವನ್ನೇ ಗಮನಿಸಲಿಲ್ಲ. ಹೀಗಾಗಿ ಕಳೆದ ಆಗಿವರು ಷಗಳಿಂದ ಜಪಾನರಿಂದ ಚೀನದಲ್ಲಿ ಹಾ ಹಾಕಾರವೆದ್ದಿರುವದು. ಏತನ್ಮಧ್ಯೇ ಜಪಾನವು ಇಟಲಿ-ಜರ್ಮನಿಗಳ ಕೂಡ ಸ್ನೇಹ ಬೆಳಿಸಿತು. ಮೂರೂ ಕೂಡಿ ಅಚ್ಚಿನ ರಾಷ್ಟ್ರಗಳೆಂದು (Axis Powers) ಹೆಸರುಗೊಂಡವು. ೧೯೩೯ರ ಯುದ್ಧಾ ರಂಭವಾದ ತರುವಾಯದಲ್ಲಿಯೂ ಬ್ರಿಟ ನವು ಜಪಾನರನ್ನು ಪ್ರಸನ್ನವಡಿಸಲು ಪ್ರ ಯತ್ನಿಸುವದನ್ನು ಬಿಡಲಿಲ್ಲ. ಬರ್ಮಾ ಮಾರ್ಗವು ಚೀನಕ್ಕೆ ಮುಚ್ಚಿದ್ದರ ಉ ದ್ದೇಶ್ಯವಾದರೂ ಏನು? ಆದರೆ ಜಪಾನ ವು ಎಂದೂ ಪ್ರಸನ್ನತೆ ಹೊಂದಿರಲಿಲ್ಲ. ಕೊನೆಗೆ ೧೯೪೦ ಸಪ್ಟೆಂಬರದಲ್ಲಿ ಜರ್ಮನಿ ಇಟಲಿ ಜಪಾನಗಳ ತ್ರಿರಾಷ್ಟ್ರಗಳ ಒಪ್ಪಂ ದವಾಯಿತು. ಅಂದು ಅತಿ ಪೂರ್ವದಲ್ಲಿ ತನಗೆ ಗಂಡಾಂತರ ಒದಗುವದು ನಿಶ್ಚ ಯವೆಂದು ಬ್ರಿಟನದ ಮನನರಿಕೆಯಾ ಯಿತು. ಸಿಂಗಪೂರ ಮೊದಲಾದ ಪ್ರದೇ ಶದಲ್ಲಿ ಹೆಚ್ಚಿನ ಸಂರಕ್ಷಣ ಸಿದ್ಧತೆ ನಡೆ ಯಿತು. ಆದರೆ ಪರಿಸ್ಥಿತಿಯುಕ್ಕೈಮೀರಿತ್ತು.

ಜಪಾನದ ಪ್ರಾಬಲ್ಯವು ಬಹಳ ಹೆಚ್ಚಿದ್ದರಿಂದ ಅದನ್ನಡಗಿಸುವದು ಅಥ ವಾ ನಿಯಂತ್ರಿಸುವದು ಕೂಡ ಸಾಧ್ಯವಾ ಗಲಿಲ್ಲ. ಅವರ ನಿರಾಶಾಮನೇ ಇಂದು ವ್ಯಾಸಿಫಿಕದಲ್ಲಿ ನಡೆದ ಕೋಲಾಹಲವು ಜಪಾನದ ವಾರಿಪತ್ಯವು ೧೯೩೨ ರಲ್ಲಿಯೆ ಆಗಿದ್ದರೇ ಆಗ ಇಂದಿನಷ್ಟು ಆರಾಷ್ಟ್ರವು ಸುಸಮರ್ಥ ಸುಸಂಘಟಿತ, ಸಂಸದ್ಯುಕ್ತ ವಿದ್ದಿರಲಿಲ್ಲವಾದ್ದರಿಂದ ಮುಂದಿನ ಆನಾ ಪತ್ತವು ತಪ್ಪಬಹುದಾಗಿತ್ತು. ಆದರೆ ದೂರದೃಷ್ಟಿಯಿಲ್ಲದೆ ನಡೆಯುವ ಮಿತ್ರ ರಾಷ್ಟ್ರಗಳ ಘೋರಣವು ಇದಕ್ಕೂ ಹೆಚ್ಚೇ ನು ಮಾಡಬಹುದಾಗಿತ್ತು? ಇಂದು ಇಂ ಥಾ ಸರಿಸ್ಥಿತಿಯಲ್ಲಿದ್ದರೂ ಅವುಗಳು ತ ಮ್ಮ ಹಿಂದಿನ ಮಾತುಗಳಿಗೆ ಅಂಟಿಕೊಂ ಡಿರುವವು. ಅಂದ ಬಳಿಕ ಇಂದಿನ ಪ್ರಸಂ ಗವೊದಗಿದಲ್ಲಿ ಆಶ್ಚರ್ಯವೇನು?

ರೇಡಿಯೋ.

೧೯೪೧ ನೆಯ ವರ್ಷದ ಕೊನೆಯ ೬ ತಿಂಗಳಲ್ಲಿ ಲಾಭಸರ್ಕಸು ಇಲ್ಲದೆ ರೇಡಿ ಯೋಗಳನ್ನಿಟ್ಟುಕೊಂಡಿದ್ದ ೨೫೦ ಜನರಿ ಗೆ ಹಿಂಮುಸ್ಕಾನದಲ್ಲಿ ಶಿಕ್ಷೆವಾಯಿತು.

ಅಖಿಲಭಾರತ ಮಹಿಳಾ ಸಭೆ—ಬಳ್ಳಾರಿ ಶಾಖೆ

ಇದು ಬಡವರ ಸಂಸ್ಥೆಯಲ್ಲ. ಬಡವರ ಹಿತಕ್ಕಾಗಿ ಇದುವರಿಗೆ ದುಡಿದಿಲ್ಲ.

ಅಖಿಲ ಭಾರತ ಮಹಿಳಾ ಸಭೆಯು ಬಳ್ಳಾರಿ ಶಾಖೆಯು ಸ್ಥಾಪಿತವಾಗಿ ೫ ವರ್ಷಗಳ ಮೇಲಾಯಿತು. ಇದು ಸ್ಥಾಪಿತವಾದಮೇಲೆ ವರ್ಷಕ್ಕೊಂದೆರಡು ಬಾರಿ ಸಭೆ ಸೇರಿ ನಿರ್ಣಯಗಳನ್ನು ಮಾತ್ರ ಮಾಡಿದೆ. ನಿರ್ಣಯಗಳೊಂದೂ ಬಳ್ಳಾರಿಯಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ. ಈ ೫-೬ ವರ್ಷಗಳಲ್ಲಿ ಕೂಡಿದ ಕೆಲವು ಸಭೆಗಳಲ್ಲಾದರೂ ಇಂಗ್ಲೀಷ್ ಭಾಷೆಗಷ್ಟಾ ಶಸ್ತ್ರ ಇಂಗ್ಲೀಷ್ ತಿಳಿದವರಿಗೆ ಗೌರವ. ಕನ್ನಡ-ತೆಲುಗು ತಿಳಿಯದ ಅನಾಗರೀಕ ಸ್ತ್ರೀಯರು ಯಾವ ಮೂಲೆಯಲ್ಲಿರುವರೋ ಅಂತಹ ವಿಷಯದ ಪ್ರಸ್ತಾಪವೇ ಇಲ್ಲ.

ಈ ಸಭೆಯಲ್ಲಿ ಮತ್ತೊಂದು ವೈಶಿಷ್ಟ್ಯವುಂಟು. ದೊಡ್ಡ ದೊಡ್ಡ ಅಧಿಕಾರಿಗಳ ಪ್ರೀಮಂತರ, ಸುಪ್ರಸಿದ್ಧ ವಕೀಲರ ಪತ್ನಿಯರು, ಅಮೂಲ್ಯ ಆಭರಣ ಉಡುಪುಗಳಿಂದ ಅಲಂಕೃತರಾಗಿ ಬರುವ ವಿದ್ಯಾವಂತ ಸ್ತ್ರೀಯರಿಗೇ ಹೆಚ್ಚಿನ ಗೌರವವುಂಟು ಸಂಡೂರಿನ ರಾಣಿಯವರು ಮುಂಬೈನ ಮೇಧಾವಿಗಳು ಅಥವಾ ಇತರ ನಿಮಂತ್ರಿತ ಯಾವ ಮಾನ್ಯ ವ್ಯಕ್ತಿಗಳು ಬಂದರೂ ಅವರಿಗೆ ಬಡಸ್ತ್ರೀಯರ ದರ್ಶನ ಸಂಭಾಷಣೆಗಳ ಅವಕಾಶವೇ ಇಲ್ಲ. ಅವರ ಪರಿಚಯವು ಮೇಲ್ಕಾಣಿಸಿದ ಮುಖ್ಯ ಸ್ತ್ರೀಯರಿಗೆ ಮಾತ್ರ ನೂಡಲಾಗುತ್ತದೆ.

ಅಧಿಕಾರೀವರ್ಗದಲ್ಲಿರುವ ಸ್ತ್ರೀಯರಿಗೆ ಬಡಸ್ತ್ರೀಯರ ಮೇಲೆ ಏನೂ ಅಭಿಮಾನವಿಲ್ಲೆಂದು ಧಾರಾಳವಾಗಿ ಹೇಳಬಹುದು. ಕೂಲಿಕಾಲೊನಿಗಳಲ್ಲಿರುವ ಸ್ತ್ರೀಯರು ಎಂಥಾ ವಾತಾವರಣದಲ್ಲಿರುವರು? ಜಿ-ಸ್ಪೆಸ್ ವಗೈರೆ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ಸ್ತ್ರೀಯರು ಪಕ್ಕಳನು ಮನೆಯಲ್ಲಿ ಬಿಟ್ಟು ಎಷ್ಟು ಘಂಟೆ ಹೊಟ್ಟೆಗಾಗಿ ದುಡಿಯಬೇಕು? ಹರಿಜನ ಕೇರಿಗಳಲ್ಲಿ ಕಸಗುಡಿಸುವ ಪಾಯಿಖಾನೆ ಬಳಿಯುವ ಸ್ತ್ರೀಯರು ಎಂಥಾ ಕಷ್ಟ ದೆಸೆಯಲ್ಲಿರುವರು? ಮನೆ-ಮಾರು-ಹೊಟ್ಟೆ ಬಟ್ಟೆಗಳಲ್ಲದೆ ಎಷ್ಟು ಜನ ಸ್ತ್ರೀಯರು ಅಲೆಯುತ್ತಿರುವರು? ಬಸವಿಗಳಾಗಿ, ದೇವದಾಸಿಗಳಾಗಿ ಎಷ್ಟು ಜನ ಅಧಃಪತನ ಜೀವನವನ್ನು ಸಾಗಿಸಿರುವರು? ಅಸಾಧ್ಯ ಕುಡಿದು ತಮ್ಮ ಹೆಂಡಿರನ್ನು ನಿತ್ಯವೂ ಚೆತ್ರ ಹಿಂಸೆಗೆ ಗುರಿ ಮಾಡುವುದಕ್ಕೆ ಎಷ್ಟು ಜನರು ಆಹುತಿಯಾಗಿದಾರರು? ಇಷ್ಟೇ ಅಲ್ಲ. ಇಂಥಾ ನೂರಾರು ಕಷ್ಟಗೊಳಗಾಗಿರುವ ಸ್ತ್ರೀಯರು ಎಷ್ಟೋ ಇರುವರು.

ಇವರ ವಿಚಾರ ತೆಗೆದುಕೊಳ್ಳುವುದು ಹಾಗಿರಲಿ. ನಮ್ಮ ಮಹಿಳಾ ಸಭೆಯವರಿಗೆ ಇವರು ಎಲ್ಲಿರುವರೆಂಬುದೂ ಕೂಡ ಗೊತ್ತಿಲ್ಲ. ಕೊಸೆಗೆ ಈ ೫-೬ ವರ್ಷಗಳಲ್ಲಿ ತಿಂಗಳುಗಟ್ಟಲೆ ತಲಗೆ ಎಣ್ಣೆ ಕಾಣದೆ ಬಡ ಸ್ತ್ರೀಯರಿಗೆ ತಿಂಗಳೆಗೊಂದು ಸಲವಾದರೂ ಶಕ್ತ್ಯಾನುಸಾರ ಕೊಬ್ಬರಿ ಎಣ್ಣೆಯಾದರೂ ಕೊಟ್ಟಿದ್ದರೆ ಮಹೋಪಕಾರವಾಗುತ್ತಿತ್ತು.

ಶ್ರೀಮಂತ ಮತ್ತು ವಿದ್ಯಾವಂತ ಸ್ತ್ರೀಯಂಗೆ ಹಕ್ಕುಗಳ Rights ಪ್ರಶ್ನೆಯೇ ಉಳಿದಿರುವುದಿಲ್ಲ. ಶ್ರೀಮಂತರೂ, ವಿದ್ಯಾವಂತರೂ ಆದ ಸ್ತ್ರೀಯರು ತಮಗಿಂತಲೂ ನೀಚದೆಶೆಯಲ್ಲಿರುವ ಸ್ತ್ರೀಯರ ಎಲ್ಲಾ ವಿಧದ ಅಭಿವೃದ್ಧಿಗಾಗಿ ಯತ್ನಿಸಬೇಕು. ಅದು ಅವರ ಧಾರ್ಮಿಕ ಕರ್ತವ್ಯವಾಗಿದೆ.

ಈ ಕೆಲಸವು ಸಾಧ್ಯವಾಗದಿನ್ನರ ಸಭೆಯನ್ನು ಮುಕ್ತಾಯಗೊಳಿಸು (Wind up) ವದು ಉತ್ತಮ. ಶ್ರೀಮಂತರಿಂದ ಸದಸ್ಯತ್ವದ ಮತ್ತು ಇತರ ವಿಧದ ಚಂದಾ ಹಣವನ್ನು ಬಡವರಿಗಾಗಿ ಅವರ ಏಳಿಗೆಗಾಗಿ ಬೆಚ್ಚನೂಡಿದಾಗಲೇ ಅದು ಸಾರ್ಥಕ.

ಯನ್. ವಿಶಾಲಾಕ್ಷಿಬಾಯಿ
ಕೆ. ರಾಜ್ಯಲಕ್ಷ್ಮಿಬಾಯಿ
ಕೆ. ಪದ್ಮಾಬಾಯಿ
(ಸದಸ್ಯರು.)

(ತಾವು ಇದುವರೆಗೆ ಬಡಸ್ತ್ರೀಯರಿಗಾಗಿ ಸಲ್ಲಿಸಿರುವ ಸೇವೆ-ಮತ್ತು ಕೆಲಸದ ವರದಿಯನ್ನು ಅಧ್ಯಕ್ಷರಾಗಲಿ - ಕಾರ್ಯದರ್ಶಿಗಳಾಗಲಿ ಪ್ರಕಟಿಸುವುದುತ್ತಮ.

ಸಂಪಾದಕ.)

ಬಳ್ಳಾರಿ ಜಿಲ್ಲಾ
ಹರಿಜನ ವಿದ್ಯಾರ್ಥಿ ನಿಲಯ

ಜಿಲ್ಲಾ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ಬಳ್ಳಾರಿನಗರದ ಕೋಟೆಯ ಭವ್ಯ ಬಂಗಲೆಯಲ್ಲಿ ಜಿಲ್ಲಾ ಹರಿಜನ ವಿದ್ಯಾರ್ಥಿನಿಲಯವು ಸ್ಥಾಪಿತವಾಗಿ ೯ ತಿಂಗಳಾಯಿತು. ಉನ್ನತ ವಿದ್ಯಾಭ್ಯಾಸಕ್ಕೆ ಅವರಿಗಿದ್ದ ಕೊರತೆಯು ಈಗ ನಿವಾರಣೆಯಾಗಿದೆ. ಹರಿಜನ ಸೇವಕ ಸಂಘವು ರಿಜಿಸ್ಟರ್ ಇದ್ದು ಇಡೀ ಭಾರತ ದೇಶವಲ್ಲಿ ಆದು ಮಾಡಿದ ಮತ್ತು ಮಾಡುತ್ತಿರುವ ಕೆಸವು ಎಲ್ಲರಿಗೂ ವೇದ್ಯವಿದೆ. ಲೆಕ್ಕಗಳು ಸಂಘದ ಆಡಿಟರುಗಳಿಂದ ವಿಮರ್ಶಿತವಾಗಿ ಪ್ರತಿವರ್ಷವೂ ಪ್ರಸಿದ್ಧಿಸಲ್ಪಡುತ್ತವೆ. ಹಿಂದೂ ಜನಾಂಗದ ಈ ಉದ್ಧಾರ ಕಾರ್ಯದ ಮಹತ್ವವು ಎಲ್ಲರಿಗೂ ತಿಳಿದಿರಲಿಕ್ಕೆ ಸಾಕು. ಮಹಾತ್ಮ ಗಾಂಧಿಯವರು ಹರಿಜನರ ಉದ್ಧಾರಕ್ಕಾಗಿ ಸರ್ವಶಕ್ತಿಗಳನ್ನು ವಿನಿಯೋಗಿಸುತ್ತಿರುವರು. ಈ ಕಾರಣ ಎಲ್ಲರೂ ಈ ಸಂಸ್ಥೆಯಕ್ಕೆ ತನು-ಮನ-ಧನಗಳಿಂದ ಸಹಾಯ ಮಾಡಬೇಕು ಕೋರಿಕೆ.

೩೧-೧-೪೨ಕ್ಕೆ ಆಯ್ಯರಾಗುವ ೭ ತಿಂಗಳ ಲೆಕ್ಕಗಳು

ಜಮಾ-

ಚಂದಾ ಮತ್ತು ವಿದ್ಯಾರ್ಥಿವೇತನ	೪೨೫-೬-೬
ಕಟ್ಟಡಕ್ಕಾಗಿ ದ್ರವ್ಯ ಸೇಖರಣಾದ್ದು	೨೩೦ -೦-೦
ಇತರ ವಿಧಗಳಲ್ಲಿ	೧೪೦-೧೧-೪
	೭೩೪-೩-೧೦

ಖರ್ಚು-

ಸಾಸ್ಟಲ್ ವಿದ್ಯಾರ್ಥಿಗಳ ಭೋಜನ ಸಿಬ್ಬಂದಿ	೨೩೮ -೪-೧
ವಿದ್ಯಾರ್ಥಿಗಳಿಗೆ ಬಟ್ಟೆ	೪೨-೧೦-೯
,, ಪ್ರಯಾಣ ಖರ್ಚು	೪೯-೧೦-೯
,, ಪುಸ್ತಕಗಳಿಗೆ	೫೦- ೪-೩
,, ಆಟದ ಸಾಮಾನು	೪- ೪-೦
,, ಸೈಗಡ	೨೨-೧೩-೬
ಇತರ ಖರ್ಚುಗಳು	೧೩೬-೪-೬
	೭೩೪- -೩-೧೦

ಟಿ ಬಿ ಕೇಶವದಾಸ್,
ಕಾರ್ಯದರ್ಶಿ
ಜಿಲ್ಲಾ ಹರಿಜನ ಸೇವಕ ಸಂಘ.

ಡಿ ಯಲ್ ಗಂಗಾಧರಶೆಟ್ಟಿ,
ಬಿ. ಎ. ಬಿ. ಯಲ್.
ಹಾಸ್ಟಲ್ ಕಮಿಟಿ ಕಾರ್ಯದರ್ಶಿ.

S. V. Setty & Bros, Bellary.
ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.



ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿಸ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಭಾರತದಲ್ಲಿ ಯಂತ್ರಾಲಯಗಳನ್ನು ಹಾಳುಮಾಡಬೇಡಿರಿ.

ರಷ್ಯಾ ಮಲಯ ಸುಂತಾಪ ಪ್ರದೇಶಗಳಲ್ಲಿ ರತ್ನುಗಳಿಗೆ ಏನೂ ಸಿಗದಂತೆ ಬೆಂಕಿಹಚ್ಚಿ ಧ್ವಂಸಮಾಡಿದ ಪದ್ಧತಿಯನ್ನು ಭಾರತದಲ್ಲಿ ಆಚರಣೆಗೆ ತರಬೇಡಿರಿ. ಇದಕ್ಕೆ ವರ್ತಕವರ್ಗವು ಏರುಗ್ಗವಿದೆಯೆಂದು ಭಾರತವರ್ತಕ ಮಂಡಳಿಯಲ್ಲಿ ಸರ್ ಪುರುಷೋತ್ತಮದಾಸ ಠಾಕುರ್ದಾಸರು ಹೇಳಿದರು. ಇದೇ ಅಭಿಪ್ರಾಯವನ್ನು ಮೊದಲು ಜಿ. ಡಿ. ಬಿರ್ಲಾ ಮುಂತಾದ ವರ್ತಕ ಪ್ರಮುಖರು ಕಲ್ಕತ್ತೆಯಲ್ಲಿ ವ್ಯಕ್ತಪಡಿಸಿದ್ದರು.

ಸರ್ದಾರ ಸರ್ದೂಲಸಿಂಹರು ಇಂಡಿಯಾ ರಕ್ಷಣೆ ಕಾಯ್ದೆಯನ್ವಯ ಲಾಹೋರಿನಲ್ಲಿ ಬಂಧಿಸಲ್ಪಟ್ಟರು

ನೆಪ್ಕಾರರಿಗೆ ಸಹಾಯ:—ಹೈದರಾಬಾದ ಪತ್ರಾರದವರು ನಿರುದ್ಯೋಗಿಗಳಾದ ನೆಯ್ತಾರರಿಗೆ ಸಹಾಯಮಾಡಲು ಲಕ್ಷ ರೂಪಾಯಿ ಮುಂಜೂರು ಮಾಡಿರುತ್ತಾರೆ.

ಅಮೆರಿಕಾದ ಶಿಷ್ಟಮಂಡಲ:—ಹಿಂದೂ ಸ್ಥಾನದಲ್ಲಿ ಯುದ್ಧ ಕ್ಕಾಗಿ ಉಸಕರಣಗಳ ನೆನ್ನಿಧಗಸುವ ಕಖರ್ಖಾನೆಗಳ ಸ್ಥಾಪನೆ ಅಭಿವೃದ್ಧಿ ವಿಷಯವನ್ನು ಕುರಿತು ವಿಮರ್ಶಿಸಲು ಅಮೆರಿಕಾದ ಶಿಷ್ಟಮಂಡಲವೊಂದು ಬರಲಿದೆ.

ಜೊಂಡಾಯಲ್ಲಿ ಸೈನಿಕರ ದುರ್ವರ್ತನೆ.

ಜೊಂಬಾಯಿಯಲ್ಲಿ ಸಂಚರಿಸುತ್ತಿರುವ ಸೈನಿಕರು ಮರ್ಯಾದೆಯ ಅಪಾಮಾನೆಗಳ ಬಗ್ಗೆ ಜೊಂಬಾಮಿ ಕಾರ್ಪೋರೇಷದವರು ಸರ್ಕಾರಕ್ಕೆ ಒಂದು ನಿರ್ಣಯವನ್ನು ಸರ್ಕಾರಕ್ಕೆ ಕಳುಹಿಸಿ ಸಾರ್ವಜನಿಕರ ಭಯ ನಿವಾರಣೆ ಮಾಡಬೇಕೆಂದು ಕೇಳಿದ್ದಾರೆ ಸ್ತ್ರೀಯರ ಮಾನದಮೇಲೆ ಆಗುತ್ತಿರುವ ಹಲ್ಲೆಗಳನ್ನು ತಪ್ಪಿಸಲು ಮುಖ್ಯಮಂತ್ರಿಗಾಂಧಿಯವರು ಕೆಲಸೂಚನೆಗಳನ್ನು ತಮ್ಮ 'ಹರಿಜನ' ಪತ್ರಿಕೆಯಲ್ಲಿ ಕೊಟ್ಟಿರುವರು.

ಸರ್ಪಿಕೆಂದರರ ಸೂಚನೆ.—ಶ್ರೀ ಶಿ. ರಾಜ ಗೋಪಾಲಾಚಾರ್ಯರೂ ಜಿನ್ನಾರವರೂ ವೈಸ್ರಾಯರ್ ಕೌನ್ಸಿಲಿದಲ್ಲಿ ಸೇರುವುದಾದರೆ ದೇಶಕ್ಕೆ ಹಿತವಾಗುವದೆಂದೂ ಲೀಗ ಅಪ್ಪವಾಕಾಂಗ್ರೆಸ್ಸಿನ ಸ್ಥಾನಮಾನಗಳನ್ನು ಕಡಮೆ ಮಾಡುವಂತ್ನಗಳನ್ನು ಮಾಡಬಾರದೆಂದೂ ಪಂಜಾಬಿನ ಪ್ರಧಾನರಾದ ಸರ್ ಸಿಕಂದರ ಹಯಾತಖಾನರು ಸೂಚಿಸಿರುವರು.

ಢಾಕಾನಗರದಲ್ಲಿ ಲೀಗ್ ತಾ ನಜೀಮ ಫ್ಯಾಸಿಸ್ಟ ವಿರೋಧಿಗಳ ಸಮ್ಮೇಳನದಲ್ಲಿ ಗದ್ದಲವಾಗಿ ಇಬ್ಬರು ಮರಣಹೊಂದಿದರು. ಅನೇಕರಿಗೆ ಘಾಯಗಳಾದವು.

ಯುದ್ಧದ ಸಂಕ್ಷಿಪ್ತ ವಾರ್ತೆಗಳು.

ಜಾವಾ ದ್ವೀಪವು ಜಪಾನರ ವಶವಾಯಿತು.

ಸಿಂಗಪುರ - ಸುಮಾತ್ರಾ ದ್ವೀಪಗಳಿಗೆ ಪೂರ್ವ ಭಾಗವಲ್ಲಿದ್ದ ಫಲವತ್ತಾದ ಜಾವಾ ದ್ವೀಪವು ಜಪಾನರ ವಶವಾಯಿತು. ಜಲ್ಲಿಯ ಜನ ಸಂಖ್ಯೆ ನಾಲ್ಕು ಕೋಟಿಗಳಿಗಿಂತಲೂ ಹೆಚ್ಚಿನ ಎಲ್ಲಾ ಸಂಪತ್ತಿನಿಂದಲೂ ಕೂಡಿದ್ದಿತು ಇಷ್ಟರಿಂದ ಆತ್ಯಧಿಕ ಪ್ರಮಾಣದಲ್ಲಿ ಸಕ್ಕರೆಯು ದೊರದೇಶಗಳಿಗೆ ಕಳುಹಿಸಲಾಗುತ್ತಿತ್ತು ಅಲ್ಲಿನ ಸೈನ್ಯಾಧಿಕಾರಿಗಳೆಲ್ಲಾ ಆಸ್ಟ್ರೇಲಿಯಾಕ್ಕೆ ಹೋಗಿರುವರು.

ರಂಗೂನ ಪತನವೇ? ಟೋಕಿಯೋ ರೇಡಿಯೋದವರು ರಂಗೂನ ಪತನವಾಯ್ತೆಂದೂ ಜಪಾನಿ ಸೈನ್ಯಗಳು ರಂಗೂನನ್ನು ಉತ್ಸಾಹದಿಂದ ಪ್ರವೇಶಿಸಿದವೆಂದೂ ಹೇಳಿದ ವಾರ್ತೆಗಳನ್ನು ಲಂಡನ್ನಿನಲ್ಲಿ ನಿರಾಕರಿಸಲಾಗಿದೆ. ರಂಗೂನಿಗೆ ೫೦ ಮೈಲಿಯೂರ ವಲ್ಲಿ ಭಯಂಕರಯುದ್ಧವು ನಡೆಯುತ್ತಿದೆ. ಜೀವವನ್ನುಳಿಸಲು ಶಕ್ಯವಿದ್ದಷ್ಟು ಸೈನ್ಯವನ್ನೆಲ್ಲಾ ಮಾಡಬೇಕೆಂದು ಗವರ್ನರರು ಸಾರಿರುತ್ತಾರೆ. ಈಚೆಗೆಬಂದ ವರ್ತಮಾನಗಳಂದ ರಂಗೂನನ್ನು ಯಶಸ್ವಿಯಾಗಿ ಖಾಲಿ ಮಾಡಲಾಯ್ತೆಂದೂ ಅಲ್ಲಿನ ಕಾರ್ಖಾನೆ ಮುಖ್ಯಕಟ್ಟಡಗಳನ್ನೆಲ್ಲಾ ಸುಡಲಾಯ್ತೆಂದು ಹೇಳಲಾಗಿದೆ.

ರಷ್ಯನ ರಣರಂಗ:—ಜರ್ಮನರಿಗೆ ಸೋಲಾಗುವ ವಾರ್ತೆಗಳೇ ವಿಶೇಷವಾಗಿ ಬರುತ್ತಲಿವೆ. ಜರ್ಮನರ ಒಂದು ವಿಭಾಗ ಸೈನ್ಯವು ಸಿಕ್ಕುಬಿದ್ದಿರುವುದೆಂದೂ ಒಳ್ಳಾಂತರ ಜರ್ಮನರು ಸಂಹರಿಸಲ್ಪಟ್ಟಿರುವರೆಂದೂ ರಷ್ಯನರು ಕ್ರಿಮಿಯಾದಕಡೆ ನುಗ್ಗುತ್ತಿರುವರೆಂದೂ ರಷ್ಯನ ವಾರ್ತಾಸಂಸ್ಥೆಯು ತಿಳಿಸುತ್ತದೆ.

ಫಿಲಿಪೈನ ದ್ವೀಪಗಳಲ್ಲಿ:—ಕರ್ನಲ್ ಮಾಕ ಆರ್ಥರರು ವಿಚಿತ್ರ ಸಾಹಸದಿಂದ ಜಪಾನೀ ಸೈನ್ಯಗಳನ್ನೆದುರಿಸಿ ಅವರಿಗೆ ನಷ್ಟವುಂಟು ಮಾಡುತ್ತಿರುವರು. ಅವರನ್ನು ಸೋಲಿಸಲಾಗದ ಕಾರಣ ಮಾಷಾಧು ಹೊಮ್ಮಿ ಎಂಬ ಜಪಾನೀ ಸೈನ್ಯಾಧಿಕಾರಿಗಳು ಆತ್ಮಹತ್ಯ ಮಾಡಿಕೊಂಡರಂತೆ.

ಮಾಲ್ಟಾದಲ್ಲಿ:—ಭೂಮಧ್ಯ ಸಮುದ್ರದಲ್ಲಿನ ದ್ವೀಪವಾದ ಮಾಲ್ಟಾದಮೇಲೆ ನಿರಂತರ ದಾಳಿಯು ನಡದೇ ಇದೆ. ಕಳೆದ ತಿಂಗಳ ದಾಳಿಯಲ್ಲಿ ಗಿಟಿ ಜನರು ಸತ್ತಿರುವರೆಂಬುದಾಗಿ ಪ್ರಕಟವಾಗಿದೆ.

ಬಳ್ಳಾರಿಯಲ್ಲಿ ಬಿ. ಯಂ. ಶ್ರೀಯವರು

ಕನ್ನಡ ಸಾಹಿತ್ಯಪಾರಿಜಾತದ ಜಾಲ ಕರಲ್ಲೊಬ್ಬರಾದ ಶ್ರೀ ಬಿ ಯಂ. ಶ್ರೀಕಂಠಯ್ಯನವರು ೧೮-೩-೪೨ನೆಯ ಮಂಗಳವಾರ ಇಲ್ಲಿಗೆ ಆಗಮಿಸಿದರು. ಆಮಂತ್ರಿತ ಕಾರ್ಯಕರ್ತರ ಸಭೆಯಲ್ಲಿ 'ಶ್ರೀ' ಯವರು ಉಚಿತೋಪದೇಶವನ್ನು ಕೊಟ್ಟರು ವಾರ್ಡಲಾ ಹಿಂದೂ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವವು ಮಂಗಳವಾರ ಸಾಯಂಕಾಲ ವಾರ್ಡಲಾಭವನದಲ್ಲಿ ಬ್ರಾಹ್ಮಣರ ಅಧ್ಯಕ್ಷತೆಯಲ್ಲಿ ವೈಭವವಾಗಿ ನೆರವೇರಿತು. ಪ್ರತಿಭಾಶಾಲಿಗಳಾದ ಯೋಗ್ಯ ಬಾಲಕರಿಗೆ ಪುಸ್ತಕರೂಪ ಬಹುಮಾನಗಳು ಕೊಡಲ್ಪಟ್ಟ ನಂತರ ಶ್ರೀಯವರು ಸರಳ ಆಂಗ್ಲ ಭಾಷಣದಲ್ಲಿ **ಸಂಸ್ಕೃತಿ ಮತ್ತು ಸಮಾಜ** ಎಂಬ ವಿಷಯದ ಮೇಲೆ ಶ್ರೇಷ್ಠ ಭಾಷಣವನ್ನು ಕೊಟ್ಟರು.

COORG HONEY
ಕೊಡಗಿನ ಜೇನುತುಪ್ಪ.

ವೀರರಾಜೇಂದ್ರ ಜೇಟ್ ಕೋ-ಆಪರೇಟಿವ್ ಸೊಸೈಟಿಯವರಿಂದ ತಯಾರಿಸಲ್ಪಟ್ಟ ಶುದ್ಧ ಜೇನುತುಪ್ಪವು 1/4, 1/2, 1 ಸೌಂಡು ಬಾಟಲುಗಳಲ್ಲೂ ಚಿಲ್ಲರೆಯಾಗಿಯೂ ದೊರೆಯುತ್ತದೆ. ಮಿಶ್ರವಾದ್ದು ಕೊಂಡು ಆರೋಗ್ಯ ಕೆಡಿಸಿಕೊಳ್ಳಬೇಡಿರಿ.

Sri Vijaya Stores, Car St. Bellary.
ಶ್ರೀ ವಿಜಯ ಸ್ಟೋರ್ಸ್,
ತೇರು ಬೀದಿ, ಬಳ್ಳಾರಿ.

2/0

Canara Industrial & Banking Syndicate Ltd.

(Incorporated in British India Liability of Share-Holders Limited.)

Statement of affiars as at 31st December, 1941.

LIABILITIES.				ASSETS.			
Paid up capital	6,10,230	0	0	Cash on hand and with Bankers	5,92,149	12	10
Reserve Funds	2,10,000	0	0	Investments on Govt Securities	14,54,167	15	6
Deposits	33,82,235	7	7	Investments on shares of other Banks & Companies.	1,00,334	8	0
Due to Banks	5,98,329	1	1	Fully Secured advances	14,82,290	0	6
Bills for collection	5,63,515	0	10	Other advances, Bills discounted etc.,	11,87,638	4	1
Sundries including Branch adjustments	4,29,834	14	5	Landed properties etc., Office Premises Sales Furniture fittings	3,24,074	14	0
Net Profits for the year	52,418	15	9	Bills for collection(as per contra)	5,63,515	0	10
				Sundries etc.	1,42,392	15	1
Total Rs	**58,46,563**	**7**	**8**	**Total Rs**	**58,46,563**	**7**	**8**

"NUKUND NIVAS"
UDIPI
29th January '42

T. M. A. PAI
Managing Director.

IMPRESSIVE PROGRESS.

" The Canara Mutual Assurance Company was founded only seven years ago. Nevertheless it has carved out for itself a financial position strong enough to meet whatever contingencies may arise in future. The Company says in its prospectus " Utmost economy consistent with progressive policy is exercised in the conduct of the business of the Company and the ratio of expenses of management to premium income is and has always been maintained at a very low figure." A review of the Company's working from year to year since its very inception amply bears out the truth of the above remarks. This policy of economy is of decided advantage to the policyholders in as much as they alone share the entire profits of the Company, a feature which has contributed a great deal towards the steadily growing popularity of the institution."

Insurance Herald,
Calcutta, 21-2 1942.

The Canara Mutual Assurance Company, Limited.
Head-Office: UDIPI.

ದಿ ಕ್ಯಾನರಾ ಮ್ಯೂಚಯಲ್ ಅಶೂರೆನ್ಸ್ ಕಂ. ಲಿಮಿಟೆಡ್,

ಈ ವರ್ಷ ಹೊಸದಾಗಿ ೧೪,೬೧,೫೦೦ ರೂ. ಗಳ ವಿಮೆಯ ಸೂಚನೆಗಳು ಬಂದವು, ೧೧,೭೧,೫೦೦ ರೂಪಾಯಿಗಳ ವಿಮಾಪತ್ರಗಳನ್ನು ಕೊಡಲಾದವು, ಹಿಂದಿನ ವರ್ಷದ ಕಾರ್ಯನಿರ್ವಹಣೆಗೆ ಇದನ್ನು ಹೋಲಿಸಿದರೆ ಈ ವರ್ಷವು ಕಾರ್ಯವು ಶೇಕಡ ೪೬ ರಷ್ಟು ಅಧಿಕವಾಗಿ ಬೆಳೆದಿದೆ. ಯುದ್ಧ ಪರಿಸ್ಥಿತಿಯ ಇಂದಿನ ಅಂಬಾದ ಕಷ್ಟಕಾಲದಲ್ಲಿಯೂ ಕೂಡ ಇಂಥಾ ಅಭಿವೃದ್ಧಿಯನ್ನು ಪರಿಶೀಲಿಸಿದರೆ ಜನತೆಯು ಈ ಕಂಪನಿಯಲ್ಲಿಟ್ಟಿ ನಂಬಿಕೆಯು ಗೊತ್ತಾಗುತ್ತದೆ.

ಪ್ರೀಮಿಯಂ ಆದಾಯವು ೨,೦೬,೭೭೧ ರೂ ಗಳಷ್ಟಿದ್ದು ನೋಡಲನಯ ವರ್ಷದ ಸ್ಟೇಸಿಯು ಹಣವು ೫೭,೪೫೬ ಗಳಷ್ಟಾಗುತ್ತದೆ. ಬಡ್ಡಿ ಮತ್ತು ಇತರ ಭಾಗಗಳಿಂದ ೧೧,೬೨೧ ರೂ. ಗಳ ಆದಾಯವಾಗಿದ್ದು ಇದರಲ್ಲಿಯೂ ಪ್ರಗತಿಯಾಗುತ್ತಲಿದೆ. ಮರಣದಿಂದ ವಾರಸ್ದಾರರಿಗೆ ಕೊಟ್ಟ ಹಣವು ೩೪,೯೭೪ ರೂ. ಗಳು ಸರೆಂಡರ ೪೭೫ ರೂ. ಮತ್ತು ವ್ಯವಸ್ಥಾಪಕ ವರ್ಗದ ಖರ್ಚು ೭,೧೭೦ ರೂ. ಗಳು ಆಗಿದೆ ವಾರಸ್ದಾರರಿಂದ ಮತ್ತು ಇತರರಿಂದ ಹಕ್ಕಿನ ಹಣವ ಬೇಡಿಕೆಯಲ್ಲಿ ದಾವಾಪವು ಕಡಮೆ ಇದ್ದು ವಿಮಾವಾಡುವ ಕಾರ್ಯದಲ್ಲಿ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿರುವಂಶವು ತಿಳಿದುಬರುತ್ತದೆ. ಖರ್ಚಿನ ಅಂಶವು ಶೇಕಡ ೩೪.೩ ಇದ್ದು ಹಿಡಿತದಲ್ಲಿದೆ. ಎಲ್ಲಾ ಖರ್ಚುಗಳನ್ನೂ ಭರಿಸಿದಮೇಲೆ ಶಾಶ್ವತ ನಿಧಿಯು (Life Fund) ವರ್ಷದ ಆದಿಯಲ್ಲಿ ೨,೭೩,೫೫೫ ರೂಪಾಯಿಗಳಿದ್ದು ವರ್ಷಾಂತ್ಯದಲ್ಲಿ ೩,೮೪,೯೨೬ ರೂ. ಆಂದರೆ ಶೇ ೪೧ ರಷ್ಟು ಅಂಶ ಹೆಚ್ಚಾಗಿರುವುದು ಸ್ತುತ್ಯವಾಗಿದೆ.

ಕಂಪನಿಯ ಒಟ್ಟಾಸ್ತಿಗಳು ೪,೧೬,೬೯೦ ರೂ. ಇದ್ದು ಒಳ್ಳೆಯ ಭದ್ರವಾದ ರೀತಿಯಲ್ಲಿ ವಿನಿಯೋಗಿಸಲ್ಪಟ್ಟಿವೆ. ಗವರ್ನಮೆಂಟ್ ಆಫ್ ಇಂಡಿಯಾ ಸೆಕ್ಯೂರಿಟಿಗಳಲ್ಲಿ ೨,೬೩,೭೬೫ ರೂ. ಸ್ಟೇಂತೀಯ ಸ್ತ್ರ ಸಂಸ್ಥಾಪಗಳ ಸೆಕ್ಯೂರಿಟಿಗಳಲ್ಲಿ ೫೯,೧೫೯ ರೂ. ಇಂಡಿಯಾ ಸಂಸ್ಥೆಗಳ ಡೈರಂಟೇಡ್ ಪ್ರಿಫರೆನ್ಸ್ ಷೇರುಗಳಲ್ಲಿ ೩,೩೩೦, ಪಾಲಿಸಿ ಸಾಲಗಳು ೧೪,೭೫೧ ಡವು ೬,೨೦೦, ಹಿಂದೂಸ್ಥಾನದ ಭೂಮತ್ತು ಮನೆಯ ಆಸ್ತಿಗಳಲ್ಲಿ ೧೯,೫೫೫ರೂ.

ಈ ಕಂಪನಿಯ ವ್ಯವಹಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ಮ್ಯಾನೇಜರವರಾದ ಶ್ರೀ ಟಿ. ಆರ್. ಎ. ಪೈರವರು ಇವರ ಶೀಘ್ರ ಪ್ರಗತಿಗಾಗಿ ಎಷ್ಟು ಶ್ರಮಿಸಿರುವರೆಂದು ಗೊತ್ತಾಗುತ್ತದೆ. ಎಚ್ಚರಿಕೆ ಮತ್ತು ಮಿತವ್ಯಯದ ಜೊತೆಗಿನ ನೀತಿಯಿಂದ ಕಂಪನಿಯ ಅಭಿವೃದ್ಧಿಯು ಅಡಿಗಳು ಬಲವತ್ತರವಾಗುವದರಲ್ಲಿ ಸಂಶಯವಿಲ್ಲ.

ದಿ ಕ್ಯಾನರಾ ಇಂಡಸ್ಟ್ರಿಯಲ್ ಅಂಡ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಈ ಪತ್ರಿಕೆಯ ಜೇರೋವೆಡೆಯಲ್ಲಿ ಪ್ರಕಟವಾದ ೩೧ ಡಿಸಂಬರ್ ೧೯೪೧ ಕ್ಕೆ ಆಲ್ಪೈರಾಗುವ ಲೆಕ್ಕದ ಪಟ್ಟಿಯಿಂದ ಬ್ಯಾಂಕಿನ ಶೃಷ್ಟಿಕರಣವು ಮತ್ತು ಭದ್ರವ್ಯವಸ್ಥೆಯ ಸ್ಥಾನವು ವ್ಯಕ್ತಪಡುತ್ತದೆ. ಯುದ್ಧದ ಅನಿಶ್ಚಿತ್ತ ಪರಿಸ್ಥಿತಿಯಿಂದ ವಾತಾವರಣವು ಕೆಲ್ಲದ್ದರೂ ಸಿಂಡಿಕೇಟಿನ ಬೆಳವಣಿಗೆಯು ಯಥಾವತ್ತಾಗಿ ಸಾಗಿದೆ. ಈ ವರ್ಷ ಜಂಬಾರೂಪದಿಂದ ಬಂದ ಬಂಡವಲವು (Subscribed Capital) ೧೫,೪೪,೮೮೦ ರೂಗಳಿಂದ ೧೫,೯೯,೫೭೦ ರೂಗಳಿಗೆ ಏರಿತು. ಪೇಡ್ ಅಪ್ ಕ್ಯಾಪಿಟಲ ಹಣದ ಹೆಚ್ಚುವಳಿದಿಂದ ಬ್ಯಾಂಕಿನ ಡಿಪಾಜಿಟ್ ಹಣವು ೩೩,೧೪,೩೩೦ ರೂಗಳಿಂದ ೩೩,೮೭,೩೩೦ ರೂಗಳಿಗೆ ಆಂದರೆ ೧೦ ಲಕ್ಷ ರೂಗಳು ಹೆಚ್ಚಿತು. ತಮ್ಮಲ್ಲಿದ್ದ ಹೆಚ್ಚು ಹಣವನ್ನು ಈ ಬ್ಯಾಂಕಿನಲ್ಲಿ ಇಂಥಾಕಾಲದಲ್ಲಿಡಬೇಕೆಂದರೆ ಸಾರ್ವಜನಿಕರು ಇವರ ಮೇಲೆ ಇಟ್ಟಿರುವ ವಿಶ್ವಾಸವೂ ನಂಬಿಕೆಯೂ ಸ್ಪಷ್ಟವಾಗಿ ಒಡೆದು ಕಾಣುತ್ತದೆ.

ಇನ್ನೊಂದು ಗಮನಿಸತಕ್ಕ ಮುಖ್ಯ ಅಂಶವೆಂದರೆ ಸರಕಾರದ ಸೆಕ್ಯೂರಿಟೀ ಹಣವು ವರ್ಷ ಪ್ರಾರಂಭದಲ್ಲಿ ೬,೪೫,೭೫೫ ರೂಗಳಿದ್ದು ಈಗ ೧೪,೫೪,೧೫೫ ರೂಗಳಾಗಿದೆ. ನಗದು ಮತ್ತು ಬ್ಯಾಂಕಿನ ಬ್ಯಾಲನ್ಸು ಹಣವು ೩,೮೩,೬೦೦ ರೂಗಳಿಂದ ೫,೮೩,೦೦೦ ರೂಗಳಿಗೆ ಏರಿದೆ. ಈ ವರ್ಷ ಬ್ಯಾಂಕಿನ ಮೂಲಕ ಹಣ ಸಂಗ್ರಹಿಸಲು ಹೋದ ವರ್ಷದ ೧೩,೬೦,೪೦೦ ರೂ ಬಿಲ್ಲುಗಳಿಗಿಂತ ೪ ಲಕ್ಷ ರೂ ಗಳು ಹೆಚ್ಚಿಗೆ ಆಂದರೆ ೫೭,೬೩,೫೫೫ ರೂ ಗಳ ಬಿಲ್ಲುಗಳು ಬಂದವು. ವರ್ತಕರ ಮತ್ತು ಇತರ ಬ್ಯಾಂಕುಗಳ ಸಹಾಯ ಸಹಕಾರಗಳಿಂದ ಬ್ಯಾಂಕಿನಲ್ಲಿ ಜನಾನುರಾಗವು ಬೆಳೆಯುತ್ತಿರುವುದು ಕಳೆದ ವರ್ಷ ೭ ಹೊಸ ಶಾಖೆಗಳನ್ನು ತೆರೆಯಲಾಯ್ತಾದರೂ ಅದರ ಖರ್ಚುಗಳು ಸ್ವಾವಲಂಬಿಯಾಗಿವೆ. ಶಾಖೆಯ ಖರ್ಚಿಂದು ಮುಖ್ಯಕಚೇರಿಯ ಲೆಕ್ಕಗಳಲ್ಲಿ ತೋರಿಸಲಾಗಿಲ್ಲ.

ಕಳೆದ ವರ್ಷ ಲೆಕ್ಕದ ವಿಮರ್ಶೆಯನ್ನು ನೋಡಿದಲ್ಲಿ ಎಲ್ಲೆಲ್ಲಿಯೂ ಅಭಿವೃದ್ಧಿಯಾಗಿದೆ. ಈ ವಿಷಯವು ಬ್ಯಾಂಕಿನ ಪುರೋಭವೃದ್ಧಿಗೆ ಶುಭಲಕ್ಷಣವೆಂದು ಭಾವಿಸಬೇಕಾಗಿದೆ. ಬ್ಯಾಂಕನ್ನು ಇಷ್ಟು ಅಭಿವೃದ್ಧಿಗೆ ತಂದ ಮತ್ತು ತರಲು ನಿರಂತರ ಶ್ರಮಿಸುತ್ತಿರುವ ಚಾಲಕರು [Directors] ಅಭಿನಂದನೆಗೆ ಅರ್ಹರು.

ದಿವಂಗತ

ಶ್ರೀ ಕೆ. ರಂಗರಾವ ಶಾನುಭೋಗ.

ಬಳ್ಳಾರಿ ನಗರದಲ್ಲಿ ದಿ ಕ್ಯಾನರಾ ಇಂಡಸ್ಟ್ರಿಯಲ್ ಅಂಡ ಬ್ಯಾಂಕಿಂಗ್ ಸಿಂಡಿಕೇಟು ಲಿಮಿಟೆಡ್‌ನ ಶಾಖೆಯು ೧೯೩೫ ನೆಯ ಡಿಸಂಬರ್‌ದಲ್ಲಿ ಸ್ಥಾಪಿತವಾಯಿತು. ಒಂದು ವರ್ಷದನಂತರ ನಿಷ್ಕಳಂಕ ಸೇವೆಯನ್ನು ಸಲ್ಲಿಸಿದ ಶ್ರೀಯುತ ಕೆ. ರಂಗರಾವ ಶಾನುಭೋಗರು ವ್ಯವಸ್ಥಾಪಕರಾಗಿ ಸೇರಿದರು. ಕಾಲೇಜ ವಿದ್ಯಾರ್ಥಿಯಂತಿದ್ದ ಇವರು ಅನುಭವಿಯನ್ನು ಸ್ಥಾನಾರೋಹಣ ಮಾಡಿಸಿ ಬ್ಯಾಂಕಿನ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದರು. ಇವರಿಗೆ ಬ್ಯಾಂಕಿನ ಜವಾಬ್ದಾರೀ ಸ್ಥಾನವನ್ನು ಅಲಂಕರಿಸಲು ಸಹಾಯಕರಾಗಿ ಶ್ರೀಯುತ ಕೆ. ಸುಬ್ಬರಾವ ಮತ್ತು ಶ್ರೀಯುತ ಎಂ. ಸುಬ್ಬರಾವ ಇವರು ಸೇರಿದರು. ಇವರಿಬ್ಬರೂ ಇಂದಿಗೂ ಬ್ಯಾಂಕಿನ ಸೇವೆಯಲ್ಲಿ ನಿರತರಾಗಿದ್ದಾರೆ

ಬಳಕೆಯಿಂದಿರುವ ಸದ್ಗುಣಗಳಿಂದ. ಪರಿ ಪೂರಿತನಾಗಿ ಸಂಸ್ಥೆಯನ್ನು ಜನಾನುರಾಗಿ ಯಾಗಿ ಮಾಡಿದ ಶ್ರೀ ಕೆ. ಆರ್. ಶಾನು ಭೋಗರು ತಮ್ಮ ಅಲ್ಪ ವಯಸ್ಸಿನಲ್ಲಿ (ಸುಮಾರು ೩೦ ಇರಬಹುದು.) ಹೈವರಿಂ ಬಾದಿನಲ್ಲಿ ದಿನಂಗತರಾದುದು ಕಂಪನಿಗೆ ಅತ್ಯಂತ ಸ್ವಾಮಿಭಕ್ತನೂ, ಕಾರ್ಯದ ಕ್ಷನೂ ಆದ ಅಧಿಕಾರಿಯ ನಷ್ಟವಾಪ್ತಾ ಯಿತು ಹಣ ಪ್ರಪಂಚಕ್ಕೆ ಯೋಗ್ಯವ್ಯವ ಸ್ಥಾಪಕನ ನಷ್ಟವಾಯಿತು.

ಪೀವರು ಇವರ ಆತ್ಮಕ್ಕೆ ಶಾಂತಿಯಾಯಲಿ

ದಿ ಕೆನರಾ ಇಂಡ್ರೈಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಉಡುಪಿ.

ಅಪೀಲಿನಲ್ಲಿ ಜಯ.

ಶ್ರೀ ಎ. ಎನ್. ಮುಲ್ಲಾಪುರ ಎಂಬವರು, ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಇವರನ್ನೇಲೆ ಹುಬ್ಬಳ್ಳಿ ಸಬಜಡ್ಜ ಕೋರ್ಟಿನಲ್ಲಿ ನಡೆಸಿದ L. C. ನಂಬ್ರ ೨೫೭-೧೯೩೯ ನೇ ವ್ಯಾಜ್ಯದ ರೀಟ್ರಿನ ಮೇಲೆ ಸಿಂಡಿಕೇಟಿನವರು ಮಾಡಿದ ಅಪಿಲನಲ್ಲಿ ಸಿಂಡಿಕೇಟಿನವರಿಗೆ ಪೂರ್ಣಜಯ ವಾಗಿದೆಯಂತಲೂ, ಮೂಲ ಕೋರ್ಟಿನ ಜಪ್ತಿರ್ ಸಂಪೂರ್ಣ ರದ್ದುಮಾಡಿ ಎರಡೂ ಕೋರ್ಟಿನಲ್ಲಿ ಈ ಸಂಬಂಧವಾಗಿ ನಡೆದ ವ್ಯವಹರಣೆಗಳ ಕೋರ್ಟ ಖರ್ಚಿಕೂಡಾ ವೆಂಕಿನವರಿಗೆ ಕೊಡುವಂತೆ ಧಾರವಾಡ ೧-ನೇ ಕ್ಲಾಸ ಸಬ್‌ಜಡ್ಜ ಕೋರ್ಟಿನಲ್ಲಿ ತಾ|| ೨೫-೨-೧೯೪೨ ರಲ್ಲಿ ಪೀರ್ಮಾನ ಪಾಗಿದ್ದರಿಯಾಗಿಯೂ ನನಗೆ ತಿಳಿದುಬಂ ದಿದೆ.

ಬಳ್ಳಾರಿ ಜಿಲ್ಲಾ ಬೋರ್ಡು ಸಭೆ.

ಬೋರ್ಡು ಭವನದಲ್ಲಿ ೨೨-೩-೪೨ ದಿಯ ಶುಕ್ರವಾರ ಸಾಯಂಕಾಲ ೪-೩೦ ಘಂಟೆಗೆ ಕೂಡಲಿದೆ.

ಶ್ರೀ ಬಸವನೆಪ್ಪ ಮುನವಳ್ಳಿ ವಕೀಲರ ಸನ್ಮಾನ್ಯ ನಿಧಿ

ರಾಮದುರ್ಗ ಸಂಸ್ಥಾನದ ಪ್ರಕರಣದಲ್ಲಿ ಕಷ್ಟನಷ್ಟಗಳಿಗೆ ಗುರಿಯಾಗಿ ಸ್ವ ಜಿಗಳಗೋಸ್ಕರ ಸರ್ವಸ್ವವನ್ನೂ ತ್ಯಾಗ

PRABHAKAR SNOW

(Regd.)

Delightfully refreshing & skin vitalising cream with charming perfume. Increases and preserves beauty.

ಪ್ರ ಭಾ ಕ ರ ಸ್ನೋ

ಮುಖದ ಕಾಂತಿಯನ್ನು ಹೆಚ್ಚಿಸಿ, ಉತ್ಕೃಷ್ಟವಾದ ಸುವಾಸನೆಯನ್ನುಂಟುಮಾಡುತ್ತದೆ. ಸೌಂದರ್ಯವನ್ನು ಅಧಿಕಮಾಡುವುದಲ್ಲದೆ ಅದನ್ನು ಉಳಿಸುವುದು.

ಕೆ. ವೀರಭದ್ರಪ್ಪ ಅಂಡ್ ಸನ್ಸ್, ಬಳ್ಳಾರಿ.

ಮಾಡಿ ಕಾಲಾಗೃಹವಾಸಕ್ಕೆ ಸರ್ವಾಗಲ್ಲು ಗುರಿಯಾದ ಶ್ರೀ ಬಸವನೆಪ್ಪ ಮುನವಳ್ಳಿ ವಕೀಲರಿಗೆ ಯೋಗ್ಯಸಿದ್ಧಿಯನ್ನು ಆರ್ಸಿ ಸಿ ಗೌರವಿಸುವುದು ಆಗತ್ಯವಾಗಿದೆ ಎಲ್ಲ ರೂ ನಿಧಿಗೆ ಸಹಾಯ ಮಾಡಲು ಯಜಮಾನ ಶಾಂತರುದ್ರಪ್ಪನವರು ಕೋರುತ್ತಾರೆ.

ಹಿಂದೂಸ್ಥಾನದ ಒಕ್ಕಲಿಗರ ಸಾಲ

ಪ್ರಾಂತ	ಕೋಟಿ ರೂಪಾಯಿಗಳು
ಮುಂಬಯಿ	೮೧
ಮದ್ರಾಸು	೧೫೦
ಬಂಗಾಲ	೧೦೦
ಸಂಯುಕ್ತ ಪ್ರಾಂತ	೮೨೪
ಪಂಜಾಬ	೧೮೫
ಮಧ್ಯಪ್ರಾಂತ ಮತ್ತು ಬಿಹಾರ	೫೬॥
ಬಿಹಾರ ಮತ್ತು ಓಡಿಸಾ	೧೫೫
ಅಸಾಮ	೨೬
ಬರ್ಮಾ	೬೦
ಮಧ್ಯಭಾಗ	೧೮
ಕೊಡಗು	೫೫

ಹಿಂದೂಸ್ಥಾನದ ವಾರ್ತೆಗಳು

ಶ್ರೀಮತಿ ಇಂದಿರಾ ನೆಹರೂರವರ ವಿವಾಹ:- ಪಂಡಿತ ಜವಾಹರಲಾಲ ನೆಹರೂರವರ ಏಕಮಾತ್ರ ಪುತ್ರಿಯಾದ ಶ್ರೀಮತಿ ಇಂದಿರಾನೆಹರೂರವರ ವಿವಾಹವು ಪಾರ್ಸಿಜಾತಿಗೆ ಸೇರಿದ ಪೈತ್ರಪುತ್ರಿಕೋದ್ಯಮಗಳಾದ ಫಿರೋಜ ಗಾಂಧಿಯವರೊಂದಿಗೆ ಈ ತಿಂಗಳ ಅಂತ್ಯದಲ್ಲಿ ನಡೆಯುವುವೆಂದು ಗೊತ್ತಾಗಿದೆ. ಫಿರೋಜ ಗಾಂಧಿಯವರು ಯೂರೋಪದೇಶದಲ್ಲಿ 6 ವರ್ಷಗಳವರೆಗೆ ಇದ್ದರು. ಇಂದಿರಾನೆಹರೂಯವರ ಕಾಯಿಲೆಕಾಲಕ್ಕೆ ಸ್ಕಿಟ್ಸರ್ಲೆಂಟದಲ್ಲಿ ಅವರಿಗೆ ಶುಶ್ರೂಷೆಮಾಡಿದ್ದರು.

ಎಲ್ಲರಾಜಕೀಯ ಕೈದಿಗಳನ್ನೂ ಬಿಡಿರಿ:.... ಹಿಂದೂಸ್ಥಾನದ ವಿವಿಧ ಜೈಲುಗಳಲ್ಲಿ ಇನ್ನೂ ೧೦೦೦ ರಾಜಕೀಯ ಕೈದಿಗಳಿದ್ದಾರೆ ಇವರಲ್ಲನೇಕರು ಸಮಾಜಸಮತಾವಾದ ತತ್ವಧಾರಿಗಳಾಗಿದ್ದು ರಷ್ಯಾಕ್ಕೆ ಸಹಾನುಭೂತಿಯುಳ್ಳವರಾಗಿರುತ್ತಾರೆ. ರಷ್ಯಾದೇಶವು ಸದ್ಯದ ಪರಿಸ್ಥಿತಿಯಲ್ಲಿ ನಿತ್ರಸಕ್ತಕ್ಕೆ ಸೇರಿರುವ ಕಾರಣ ಇವರನ್ನೆಲ್ಲಾ ಬಿಡುಗಡೆಮಾಡಿ ಯುದ್ಧದ ವಿಷಯಕ್ಕೆ ಇವರ ಬೆಂಬಲಪಡೆಯಬೇಕೆಂದು ಕೇಂದ್ರ ಅಸೆಂಬ್ಲಿಸದ್ಯರಾದ ಶ್ರೀ ಎಂ ಎಂ ಜೋಶಿಯವರು ಸಂಸ್ಥಾನದ ತಿವಿಲ ಲಿಬರ್ಟೀ ಯೂನಿಯನ್ ಅಧ್ಯಕ್ಷಸ್ಥಾನದಿಂದ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳನ್ನು ಬೇಡಿರುವರು.

ಕಾಂಗ್ರೆಸ್ ಕಾರ್ಯಕಾರಿಣೀ ಸಮಿತಿ:—

೧೭ ನೇ ಆಗಸ್ಟಿನೆಯ ಉಗಾದಿ ಹಬ್ಬದದಿನ ವಾರ್ಧಾದಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಸೇರಲಿದೆ ಡಾಕ್ಟರಪಟ್ಟಾಭಿ, ಆಚಾರ್ಯ ನರೇಂದ್ರದೇವರಿಗೆ ಪ್ರತ್ಯೇಕ ನಿಮಂತ್ರಣ ಹೋಗಿದೆ.

ಎಣ್ಣೆ

ನಿಮ್ಮ ಉಪ್ಪಿನಕಾಯಿಯು ಚೆನ್ನಾಗಿರಬೇ[illegible]
ಇವರ A.S. ಬ್ರಾಂಡ್ ಎಳ್ಳೆಣ್ಣೆಯನ್ನೇ ಉಪ[illegible]
ಉಪ್ಪಿನಕಾಯಿಯು ಮೆತ್ತಗಾಗುವುದಿಲ್ಲ
,, ನೊಣಗ್ಳು ಯಾ ಬೂಜು ಹಿಡಿಯುವುದಿಲ್ಲ
,, ಹುಳುಮನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಇಲ್ಲವೆ ತ
ಮಿತವಾದ ರುಚಿಯ ನ್ನುಂಟು ಮಾಡುವುದು.

A. S. ಬಿ ಲನ್ನು ಗಮನಿಸಿ. ಕೊಳ್ಳಿರಿ. ಮೋಸ ಹೋಗ
ಬೇಡಿರಿ.

ಮಾರಾಟಕ್ಕೆ ಇರುವ ಸ್ಥಳ. 1) ಎಂ. ಹುಚೇಂಜಿರಾವ್,
ಎಂ. ವೆಂಕೋಜಿರಾವ್, ತೇರುಬೀದಿ, ಬಳ್ಳಾರಿ.
ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ. ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾ ರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾ ದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಒಂ ದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦	ಅಂಚೆ ವೆಚ್ಚ ಬೇರೆ
ಕನ್ನಡ ವಶೋಪನಿಷತ್ತುಗಳು	೦—೯—೦	ಪುಸ್ತಕ ವ್ಯಾಪಾರಿಗಳಿ
ವಿವಾಹಪದ್ಧತಿ	೦—೮—೦	ಗೂ ಹೆಚ್ಚು ಪುಸ್ತಕ
ಸುಮತಿ ಶತಕ	೦—೧—೦	ಕೊಳ್ಳುವವರಿಗೂ ಧಾರಾ

ಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮರ್ಚೆಂಟ್ಸ್, ಬಳ್ಳಾರಿ.

ಮೀನಾಕ್ಷಿ ಭವನ (ರಿಜಿಸ್ಟರ್ಡ್)

ಬೋರ್ಡಿಂಗ್ - ಲಾಡ್ಜಿಂಗ್.

ಬ್ರಾಹ್ಮಣ ಬೀದಿ ಬಳ್ಳಾರಿ

ಮನೋಹರ ವಾದ ಸ್ಥಾನ. ಹೊಸದಾಗಿ ಆಧುನಿಕ ಮಾದರಿಯ ಮೇಲೆ ಕಟ್ಟಲ್ಪಟ್ಟ ಪ್ರಶಾಂತ 20 ಕೋಣೆಗಳು.

ಸಕಲ ನ್ಯಮಪಾದಗಳ ಕೇಂದ್ರಸ್ಥಳ ಅತ್ಯಂತ ವಿನಯಶೀಲರಾದ ಸೇವಕವರ್ಗ ಸ್ವಾದಿಷ್ಟ ಮತ್ತು ರುಚಿಕರ ವಾದ ಭೋಜನ

ಶುದ್ಧ ತುಪ್ಪದಲ್ಲೇ ಮಾಡಿದ ಫಲಹಾರ.

ಆರ್ಡರ್ ಕೊಟ್ಟಲ್ಲಿ ಟೀಪಾರ್ಟಿ ಗಳಿಗೂ, ಔತಣಗಳಿಗೂ ಹೇಳಿದ ಕಾಲಕ್ಕೆ ಸರಿಯಾಗಿ ಸಾಮಾನ್ಯ ವರಗಳಿಂದ ಭೋಜನ ಫಲಹಾರ ಗಳನ್ನು ಒದಗಿಸುತ್ತೇವೆ.

ರೈಲ್ವೆ ಸ್ಟೇಷನ್ನಿನಿಂದ ಬಹಳ ಸಮೀಪದಲ್ಲಿದೆ

While at Bellary

Go to MEENAKSHI BHAVAN

The Best Boarding-Lodging House.

20 Well-furnished Rooms.

ಬಳ್ಳಾರಿ ಜಿಲ್ಲಾ ವಿದ್ಯಾಧಿಕಾರಿಗಳಿಗೆ ಸತ್ಕಾರ

ಜಿಲ್ಲಾ ಡಿ. ಇ. ಒ. ರವರಾದ ಶ್ರೀ ಯು. ಕೆನ್ನಪ್ಪನವರು ನೌಕರಿಯಿಂದ ನಿವೃತ್ತಿ ಪಡೆದಕಾರಣ ಇಲ್ಲಿಯ ತನಕ ಅವರು ಮಾಡಿದ ಕಾರ್ಯಗೌರವಕ್ಕಾಗಿ ಅವರನ್ನು ಟ್ರೇನಿಂಗ್ ಶಾಲೆಯಲ್ಲಿ ಉಪಾ ಹಾರದಿಂದ ಸತ್ಕರಿಸಲಾಯಿತು.

ಗಾಂಧೀನಗರ ಹ್ರಾಥಮಿಕ ಶಾಲೆ ಯಲ್ಲಿ ಶ್ರೀ ಯ.ಸ್. ಯಲ್. ನಾರಾಯಣ ರಾಯರೂ, ಶ್ರೀ ಡಿ ಯಸ್. ಹನುಮಂ ತರಾಯರೂ ಅವರನ್ನೂ ಪ್ರಶಂಸಿಸಿ ದೀ ರ್ಘಾಯುರಾರೋಗ್ಯವನ್ನು ಕೋರಿದರು. ಆನಂದತೀರ್ಥಾಚಾರ್ಯರು 3 ಕವನಗಳನ್ನು ಓದಿ ಡಿ. ಇ. ಒ. ರ ಗುಣಗಾನ ಮಾಡಿದರು. ಟೀಪಾರ್ಟಿಯ ನಂತರ ಸಭಾವಿಸ ರ್ಜನೆ ಯಾಯಿತು. ದಿವಂಗತ ರಾಮು ಸ್ವಾಮಿನಾಯಿಡುರವರ ಸ್ಥಾನದಲ್ಲಿ ಶ್ರೀ ನಿ ನಾರಾಯಣಶೆಟ್ಟರು ಶಾಲೆಯ ಸಮಿತಿ ಗೆ ಅಧ್ಯಕ್ಷರಾದರು.

ಜೀನ ದಿನಾಚರಣೆ-ಶ್ರೀ ಡಿ. ರಾವ್ಜಿ ಸಾಹೇಬರಧ್ಯಕ್ಷತೆಯಲ್ಲಿ ವಾರ್ಡಲಾ ಕಾಂ ಪೌಂಡಲ್ಲಿ 7ನೇ ತಾರೀ ಕನ್ನಡ, ಉರ್ದು, ತೆಲುಗು ಇಂಗ್ಲೀಷ್ ಭಾಷಣಗಳಾದವು.

ನಿಮಗ ಶಾಂತಿ ದೊರೆವುದೆಲ್ಲಿ?

ಯುದ್ಧದ ಘೋರ ವಾತಾವರಣದಲ್ಲಿ ಎಲ್ಲೆಲ್ಲಿಯೂ ಅನಿಶ್ಚಿತ ಪರಿಸ್ಥಿತಿ, ಜೀವನದ ಆವಶ್ಯಕ ಸಾಮಗ್ರಿಗಳ ಏರಾಟ, ಸ್ವಾರ್ಥಸಾಧನೆಗಾಗಿ, ಮಾನವನನ್ನು ಕೊಲ್ಲುವ ಮೃಗತೃಷ್ಣೆ, ಸಂಸಾರಿಕ ತಾಪತ್ರಯಗಳ ಹೊಯ್ಲಿನಲ್ಲಿ ಬಿದ್ದು ಮುಗ್ಗರಿಸುವ ಬಿದ್ದೇಳುವ ಪರಿಸ್ಥಿತಿ ಸಾಹುಕಾರನಿಗೆ ಸರಕಾರದ ಚಿಂತೆ ಸಾಲಗಾರನಿಗೆ ಹಣದ ಚಿಂತೆ **ಹೀಗಿರುವಾಗ ನಿಮಗೆ ಶಾಂತಿಯಿಲ್ಲಿ?**

ನಯನ ಮನೋಹರ ಸುವಾಸನಾಯುಕ್ತ ಪುಷ್ಪಗಳಿಂದಲೂ, ರಸಭರಿತವಾದ ಪುಷ್ಟಿಯುಕ್ತ ಫಲಗಳಿಂದಲೂ ಕೂಡಿದ ವಿಶಾಲ ತೋಟಗಳಲ್ಲೇ ನಿಮಗೆ ಶಾಂತಿ ದೊರೆಯುವುದು ಅಲ್ಪ ಖರ್ಚಿನಿಂದ ಆಗಾಧ ಶಾಂತಿಯ ಮತ್ತು ಒಳ್ಳೆಯ ಸಂಪಾದನೆಯ ಮಾರ್ಗವನ್ನು ತೋರಿಸುತ್ತೇವೆ. ಇಂಗ್ಲೀಷು, ತೆಲುಗು, **ಕನ್ನಡ** ಈ ಮೂರು ಭಾಷೆಗಳಲ್ಲಿ ಕ್ರಯದ ಪಟ್ಟಿ ಕಳುಹಿಸುತ್ತೇವೆ. ಇಂದೇ ಬರೆಯಿರಿ.

ಸುಪ್ರಸಿದ್ಧ ಪಾನ್ಯಂ ಕಸೀಗಿಡಗಳು

ನಮ್ಮ ತೋಟವು ವಿವಿಧ ಜಾತಿಯ ಮಾವು ಕಿತ್ತಳೆ - ಬಾಳೆ ಮತ್ತು ಬೇನಿಶಾನ, ನೂರಹಾನ, ಜಹಂಗೀರ್. ದಿಲ್ಕುಶ್ - ಮೊದಲಾದ ಕಸಿಗಿಡಗಳಿಗೆ ತವರ್ಮನೆಯಾಗಿದೆ. ಚೈನಾ ಮೋಸಂಬಿ, ಕಮಲಾ, ನಾಗಪೂರ ಸಂತ್ರಾ ಇವುಗಳನ್ನು ಯೋಗ್ಯವಾದ ಗಿಡಗಳಿಗೆ ಕಸಿಮಾಡಿನೆವು. ನಮ್ಮಲ್ಲಿ ವಿವಿಧ ಜಾತಿಯ ಹೂವಿನ ಗಿಡ, ಬೀಜ, ತೋಟದ ಕೆಲಸಕ್ಕೆ ಬೇಕಾಗುವ ಉಪಕರಣ - ಗೊಬ್ಬರ - ಕ್ರಿಮಿನಾಶಕ ಔಷಧಗಳು ದೊರೆಯುತ್ತವೆ.

ನಮ್ಮ ತೋಟದಲ್ಲೇ ಬೆಳೆದ ಹಣ್ಣುಗಳಿಂದ ತಯಾರಾದ 'ಆರೆಂಜ - ಮರ್ಮಲೇಡ್' ಲೆಮನಸ್ಕೋಶ್, ಟೊಮಟೊಕಚ್ಚಪ್ಪಾ - ವಗೈರೆ ಆಬಾಲವೃದ್ಧರಿಗೆ ಪುಷ್ಟಿಕರವಾದ, ವರ್ಷವೆಲ್ಲವೂ ಇಡಬಹುದಾದ - ಹಣ್ಣುಗಳ ರಸಾಯನವು ಮಾರಾಟಕ್ಕೆ ಇರುತ್ತದೆ-

ವಿ. ವಿ. ಹನುಮಂತರಾವು,
ಪಾಣ್ಯಂ (ಕರ್ನೂಲು ಜಿಲ್ಲೆ)
(ವಿ. ವಿ. ಮಾಧವರಾವ್ ಅಂಡ ಬ್ರದರ್ಸ್.)

೧೯೪೨ನೇ ವರ್ಷದ ಪ್ರಪಂಚಭವಿಷ್ಯ

ಕನ್ನಡದಲ್ಲಿಯೂ, ತೆಲುಗಿನಲ್ಲಿಯೂ ಮುದ್ರಣವಾಗಿದೆ.

ಈ ಪುಸ್ತಕದಲ್ಲಿ ಯಾವಯಾವದೇಶಗಳು, ಯಾವಯಾವತಿಂಗಳಲ್ಲಿ, ಯಾವಯಾವ ಸ್ಥಿತಿಗೆ ಬರುವವೆಂಬುದು ಸ್ಪಷ್ಟವಾಗಿ ವಿವೇಚಿಸಲ್ಪಟ್ಟಿದೆ. ಈ ಚಿಕ್ಕಗ್ರಂಥವು ರಾಜ್ಯವೈದ್ಯ ಜೀವಾರಾಂ-ಕಾಳಿದಾಸ ಶಾಸ್ತ್ರಿ ಕಥಿಯಾವಾರ್, ಗೊಂಡಾಲ ಎಂಬವರಿಂದ ಇಂಗ್ಲೀಷ್‌ನಲ್ಲಿ ಬರೆಯಲ್ಪಟ್ಟು, "ನಿರ್ಣಯ" ಕೆ. ಯಂ ಕೆ ಶಾಸ್ತ್ರಿಗಳಿಂದ ಅನುವಾದಿಸಲ್ಪಟ್ಟಿದೆ. ಎಲ್ಲರೂ ಓದಿ ತಿಳಿದುಕೊಳ್ಳತಕ್ಕ **ಮಹತ್ವ** ನಿಷಯಗಳಿವೆ. **ಬೆಲೆ 0-4-0.**

ಪುಸ್ತಕ - ಶಿಕ್ಷಣವಸ್ಥಲ
ಯಜಮಾನ್ ಅಂಡ್ ಬ್ರದರ್ಸ್, ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- **ಪರೀಕ್ಷೆಗಳಿಗೆ ಕೂಡಲು,.....**
- **ವ್ಯವಹಾರದ ಭಾಷೆಯನ್ನು ಕಲಿಯಲು,.....**
- **ಮಾತಾಡುವುದನ್ನು ಕಲಿಯಲು,.....**
- **ನಿಮಗೆ ಸಹಾಯವು ಬೇಕೋ?**

ಹಾಗಾದರೆ ಕೂಡಲೇ ಳಗನಿನವರಲ್ಲಿ ವಿವರಗಳನ್ನು ತಿಳಿಯಿರಿ
ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಕಗಳು ಕಛೇರಿಯಲ್ಲಿ ದೊರೆಯುವುದಲ್ಲದೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ಉಚಿತವಾಗಿ ಹೇಳಲಾಗುವುದು

ಟಿ. ಬಿ. ಕೇಶವರಾವ್,
ಕೃಷ್ಣಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.
With which is incorporated Congress Bulletin
THE LEADING NATIONAL WEEKLY.
ನವ ಭಾರತ ಬಳ್ಳಾರಿ.
ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local	3—0—0
Moffusil	3—0—0

6 Months

Local	1—4—0
Moffusil	2—0—0

ಚಂದಾ ನಿಯಮ
ವರ್ಷಕ್ಕೆ
ಬಳ್ಳಾರಿಯವರಿಗೆ 2.0-0
ಹೊರಗಿನವರಿಗೆ 3.0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1.4-0
ಹೊರಗಿನವರಿಗೆ 2-0-0

Nava Bharat, Bellary.

REG. No. M. 3357.

*Sri*_____

Printed at Vimal Press, Car Street Edited & Published by T. B. Keshava Rao, Bellary

Reg. No. M. 3937 'ವಂದೇ ಮಾತರಂ'

ನವ ಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೨೭ ಬಳ್ಳಾರಿ ಮಾರ್ಚ್ ೨೯ನೇ ಆದಿವಾರ ೧೯೪೨. ಟಿ. ಬಿ. ಕೇಶವರಾವ್

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೯೯೬.

ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000, ರೂ. ಗಳಿಗೆಮೀರಿದೆ

ಈ ಕಂಪನಿಯನ್ನರು ಯಾವಯಾವ ಕರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಿಂದ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ನಿಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಸೆಂಟ್ರಲ್ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಕಚೇರಿ- ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

ಭಕ್ತ ಪ್ರಹ್ಲಾದ

ತೆಲುಗು ಪಾರ್ಲಟಿ

★

ಸ್ಟಾರ್ ಸಿನೆಮಾದಲ್ಲಿ

25-3-42 ಬುಧವಾರದಿಂದ ಪ್ರಾರಂಭವಾಗಿದೆ

★

ಗಗ್ಗಯ್ಯ, ರಾಜೇಶ್ವರಿ, ರಾಮಕೃಷ್ಣಶಾಸ್ತ್ರಿ, ಕುಂಚಪ್ಪ, ವರಲಕ್ಷ್ಮಿ ಮುಂತಾದ ಸುಪ್ರಸಿದ್ಧ ನಟಿಯರು ಪಾತ್ರಧಾರಣೆ ಮಾಡಿರುವರು.

★

ಭಕ್ತಿ ಮುಕ್ತಿದಾಯಕವಾದ ಭಾಗವತ ತಿರುಳಾಗಿರುವ ಶ್ರೀಮನ್ನಾರಾಯಣ ಕಥೆ

★

ಮೃದುಮಧುರ ಗಾನ, ಶೃಂಗಾರ ನೃತ್ಯ, ಸುಂದರ ದೃಶ್ಯಗಳು

ಈ ಅಮೂಲ್ಯ ಸಂಧಿಯನ್ನು ಕಳೆದುಕೊಳ್ಳಬಾರದು.

ಬರ್ಮಾದೇಶದ ಸಂಪತ್ತು

ಜಪಾನ ಆಕ್ರಮಣದ ರಹಸ್ಯ

[ಕರ್ಮವೀರ]

ಕಳೆದ ಸಂಚಿಕೆಯಿಂದ ಬಂದದ್ದು.

ಬ್ರಾಹ್ಮೀಯರು ಸುಖ ಜೀವನಿಗಳೆಂದೇ ಹೇಳಬಹುದು. ಹೆಂಗಳೆಯರ ವೇಲೆ ಸಂಸಾರದ ಹೊರೆಯನ್ನು ಹಾಕಿ ಹಾಯಾಗಿರಬೇಕೆಂದರೆ ಬ್ರಾಹ್ಮೀ ಪುರುಷರಿಗೆ ಬಹು ಇಷ್ಟವಂತೆ ಆದರೆ ಕಾಲ ಬದಲಾದಂತೆ ಇಂದಿನ ಯುವಕರು ಇತರರ ಮೇಲೆ ಭಾರವಾಗಿರಲಪೇಕ್ಷಿಸದೇ ತಾವೂ ಶ್ರಮ ಪಟ್ಟು ಸುಖ ಪಡೆಯಬೇಕೆನ್ನುತ್ತಿರುವರು. ಬಣ್ಣ ಬಣ್ಣದ ವೇಷ ಭೂಷಣಗಳೆಂದರೆ, ಅಲ್ಲಿಯ ಮಹಿಳೆಯರಿಗೆ ಬಹುಪ್ರೀತಿ, ಕುಲಾಭಿಮಾನಕ್ಕೇನೂ ಕಡಿಮೆ ಇಲ್ಲದಿದ್ದರೂ ಪೌರ್ವಾತ್ಯರಿಗೆ ಸ್ವಾಭಾವಿಕವಾದ ನಯವಿನಯ ಶೀಲ ಸೌಜನ್ಯಗಳಲ್ಲಿ ಅವರೇನೂ ಹಿಂದಿಲ್ಲ.

ಬ್ರಹ್ಮದೇಶದ ಸ್ತ್ರೀಯರು ಅನುಭವಿಸುವ ಸ್ವಾತಂತ್ರ್ಯದ ವೈಶಿಷ್ಟ್ಯವು ಅನೇಕರಿಗೆ ಆಶ್ಚರ್ಯವನ್ನುಂಟು ಮಾಡಬಹುದು. ತಮಗಿಷ್ಟ ಬಂದ ಗಂಡನನ್ನು ಆಯ್ದುಕೊಳ್ಳುವ ಹಕ್ಕು ಅವರಿಗಿದೆ. ಆವರೇ ಮನೆಯ ಯಜಮಾನಿಯರು. ಗಂಡನೊಡನೆ ಬಾಳುವೆ ನಡೆಸುವದು ಅಸಾಧ್ಯ ಕಂಡರೆ, 'ನಮ್ಮೀವಿವಾಹ ಬಂಧನವು ಮುರಿಯಿತೆ'ಂದರೆ ಶೀಘ್ರ ವಿಚ್ಛೇದನ ಪಡೆದು ಬೇರೆ ವಿವಾಹ ಮಾಡಿಕೊಳ್ಳಬಹುದು ಅಷ್ಟೇ ಅಲ್ಲ ಅವರವರ ಜೀವನದಲ್ಲಿ ಮನಸ್ಸಿಗೆ ಬಂದಷ್ಟು ಬೇರೆ ಗಂಡಂದಿರನ್ನು ಕಟ್ಟಿಕೊಳ್ಳುವ ಹಕ್ಕೂ ಆ ಹೆಂಗಸರಿಗಿದೆ, ಇದ್ದರೂ ಪಾಶ್ಚಾತ್ಯದೇಶಗಳಿಗೆ ವಿರುದ್ಧವಾಗಿ ಅಲ್ಲಿ ವಿವಾಹ ವಿಚ್ಛೇದನಗಳಾಗುವದೇ ಬಹು ವಿರಳ, ಭಾರತೀಯರಂತೆ ಅವರೂ ವಿವಾಹ ಬಾಂಧವ್ಯವನ್ನು ಒಂದು ಪವಿತ್ರ ಘಟನೆಯೆಂದು ಭಾವಿಸುವರು.

ಬ್ರಹ್ಮದೇಶದ ಯುವಕರು ಸಹ ಸ್ವಾಭಾವಿಕವಾಗಿ ಶ್ರಮರಹಿತ ಸುಖಾಪೇಕ್ಷಿಗಳಾದರೂ ಕಾರ್ಯನಿರತರಾದರೆಂದರೆ ಊಟೋಪಚಾರಗಳಿಗೆ ಸಹ ಗಮನ ಕೊಡುವದಿಲ್ಲ ಅನೇಕ ಯುವಕರು ಸ್ವದೇಶ ರಕ್ಷಣೆಗಾಗಿ ಸೈನ್ಯಕ್ಕೆ ಸೇರುತ್ತಿರುವರು. ಅವರ ಸಮರ ಶಕ್ತಿಯೇನೂ ತೆಗೆದು ಹಾಕುವಂತಹದಲ್ಲ ಆದರ ಮುಖ್ಯ ಬೆಳೆ ಭತ್ತ. ಜಗತ್ತಿನ ಭತ್ತ ಬೆಳೆಯುವ ಮುಖ್ಯ ದೇಶಗಳಲ್ಲಿ ಬ್ರಹ್ಮದೇಶವೂ ಒಂದು. ಅಲ್ಲಿ ಒಂದು ಕೋಟಿ ಎಕರೆ ಜಮೀನುಗಳಲ್ಲಿ ಭತ್ತ ಬೆಳೆಯುತ್ತಾರೆ. ವರ್ಷಕ್ಕೊಂದೇ ಬೆಳೆ ಬಂದರೂ ಹೊರದೇಶಗಳಿಗೆ ಹೇರಳವಾಗಿ ಅಕ್ಕಿಯನ್ನು ರಫ್ತು ಮಾಡಲಾಗುತ್ತದೆ, ಈ ವಸ್ತುಗಳನ್ನು ಹೊರ ಸಾಗಿಸುವ ಮುಖ್ಯ ಬಂದರ ರಂಗೂನ

ಬ್ರಹ್ಮದೇಶದ ಅರಣ್ಯ ಸಂಪತ್ತು ಅಪಾರವಾಗಿದೆ. ಖನಿಜ ಸಂಪತ್ತು ಬೇಕಾವಷ್ಟಿದೆ. ತೇಗಿನ ಗಿಡಗಳು ಈ ದೇಶದ ಮುಖ್ಯ ಅರಣ್ಯ ವಸ್ತುಗಳಲ್ಲೊಂದಾದರೂ ಎಣ್ಣೆಯ ಮರಗಳು, ರಬ್ಬರು, ಅಂಜೂರ ಇವೇ ಮುಂತಾದ ಅಮೂಲ್ಯ ವೃಕ್ಷಗಳು ಅಲ್ಲಿ ಬೆಳೆಯುತ್ತವೆ, ಭಾರತಕ್ಕೆ ಬೇಕಾಗುವ ಚಿನ್ನ ಎಣ್ಣೆ ಪೆಟ್ರೋಲು, ತೇಗು ಮೊದಲಾದವನ್ನು ಬ್ರಹ್ಮ ದೇಶವೇ ಹೆಚ್ಚಾಗಿ ಒದಗಿಸುತ್ತದೆ.

ಬ್ರಹ್ಮದೇಶದ ಕೈಗಾರಿಕೆಗಳಲ್ಲಿ ಅಲ್ಲಿಯ ಅರಣ್ಯಗಳು ಬಹು ಮುಖ್ಯ ಪಾತ್ರವಹಿಸಿವೆ. 7 ಕೋಟಿ ಎಕರೆಗಳಷ್ಟು ಅರಣ್ಯ ಸಂಪತ್ತು ಅಲ್ಲಿ ಇವೆಯೆಂಡು ಲೆಕ್ಕ ಹಾಕಲಾಗಿದೆ.

ತವರ, ಬೆಲ್ಲ, ಚಿನ್ನ, ಹಿತ್ತಾಳಿ, ತಾಮ್ರ ನಿಕಲು ಇವೇ ಮುಂತಾದ ಖನಿಜಗಳೂ ಇಲ್ಲಿ ದೊರೆಯುತ್ತವೆ ನಜ್ರ, ಕೆಂಪು ಮುಂತಾದ ರತ್ನಗಳೂ ಇಲ್ಲಿ ಸಿಗುತ್ತವೆ. 1939ನೇ ವರ್ಷ 27 ಕೋಟಿ ಗ್ಯಾಲನ್ನುಗಳಷ್ಟು ಪೆಟ್ರೋಲು ಎಣ್ಣೆಯನ್ನು ಇಲ್ಲಿ ಹೊರ ತೆಗೆಯಲಾಯಿತು

ಮಾಗ್ವೆ ಜಿಲ್ಲೆಯ ಎನಾಂಗಯಾಂಗ್ ಎಂಬಲ್ಲಿ ಬಹು ಹಳೆಯ ಮತ್ತು ದೊಡ್ಡ ಎಣ್ಣೆ ಭಾವಿಗಳಿವೆ. 1939ರಲ್ಲಿ ಒಂದು ಲಕ್ಷ ಎಕರೆ ರಬ್ಬರು ತೋಟಗಳಿದ್ದವು. ೧೦೭೭ ಕಾರ್ಖಾನೆಗಳು ಇಲ್ಲಿ ಕೆಲಸ ಮಾಡುತ್ತಿವೆ. ಅವುಗಳಲ್ಲಿ ಅಕ್ಕಿ ಮತ್ತು ಗರಗಸದ ಗಿರಣಿಗಳೇ ಹೆಚ್ಚು.

ಇತ್ತೀಚೆಗೆ ಬ್ರಹ್ಮದೇಶೀಯರಿಗೆ ಸ್ವದೇಶಿ ವಸ್ತುಗಳಲ್ಲಿ ಅಭಿಮಾನ ಹೆಚ್ಚಿದೆ ಆದರಿಂದ ಅನೇಕ ಗೃಹ ಕೈಗಾರಿಕೆಗಳೂ ಹೆಚ್ಚಿವೆ ಪಗಾನಿನ ಅರಗಿನ ಕೆಲಸವಂದರೆ ಅಸದೃಶವಾದದ್ದು. ರಂಗೂನ, ಮಂಡಾಲೆ, ಮೌಲ್ಮೀನ ಮುಂತಾದ ಕಡೆಗಳಲ್ಲಿ ಸಿಗರೇಟು ಗಳನ್ನು ತಯಾರುಮಾಡುತ್ತಾರೆ ಬರ್ಮಾದ ಆಟದ ಸಾಮಾನುಗಳ ಕೈಗಾರಿಕೆಯು ದಿನದಿನಕ್ಕೆ ಅಭಿವೃದ್ಧಿ ಹೊಂದುತ್ತಿದೆ. ಬ್ರಹ್ಮದೇಶದ ಖನಿಜಸಂಪತ್ತು ಯಾವ ಬಂಡವಾಳವಾದಿಯ ಕಣ್ಣನ್ನಾದರೂ ಕೆರಳಿಸುವಂತಹದಿದೆ. ವಿವಿಧ ಕೈಗಾರಿಕೆಗಳ ಅಭಿವೃದ್ಧಿಗೆ ಅಪಾರ ಅವಕಾಶವಿದೆಯೆಂದು ಆರ್ಥಿಕ ತಜ್ಞರು ಅಭಿಪ್ರಾಯಪಡುತ್ತಾರೆ.

ಬ್ರಹ್ಮದೇಶವು ಅಷ್ಟು ವಿಸ್ತಾರವಾಗಿದ್ದರೂ ಅಲ್ಲಿರುವ ನಗರಗಳಾದರೂ ಬಹಳ ಕಡಿಮೆ. ರಂಗೂನ ಬ್ರಹ್ಮದೇಶದ ಇಂದಿನ ರಾಜಧಾನಿ. ಚೋಳರ ಕಾಲದಲ್ಲಿ ಪೇಗು ಪಟ್ಟಣವು ಬ್ರಹ್ಮದೇಶದ ರಾಜಧಾನಿಯಾಗಿತ್ತು. ಅನಂತರ ಕೆಲವು ಕಾಲ ಸಗಯಿಂಗ, ಮಂಡಾಲೆಗಳು ರಾಜಧಾನಿಗಳಾಗಿದ್ದು ಬ್ರಿಟಿಶರ ಕಾಲದಲ್ಲಿ ರಂಗೂನ ರಾಜಧಾನಿಯಾಯಿತು. ರಂಗೂನ ರಾಜಧಾನಿ ಮಾತ್ರನೇ ಅಲ್ಲ, ಬಹು ಮುಖ್ಯ ಬಂದರು.

ಕೆಳಗಿನ ಬ್ರಹ್ಮದೇಶದಲ್ಲಿರುವ ಮುಖ್ಯ ಪಟ್ಟಣ ಮೌಲ್ಮೀನ ಬಹು ರಮಣೀಯವಾದ ನಗರ. ಬಾಸ್ಸಿನ್, ಪ್ರೋ ಮತ್ತು ಅಕ್ಯಾಬ್ ಪಟ್ಟಣಗಳು ಇತ್ತೀಚೆಗೆ ಅಭಿವೃದ್ಧಿಗೆ ಬರುತ್ತಿರುವ ಊರುಗಳು.

ಪೇಗು ಬ್ರಹ್ಮದೇಶದ ಬಹು ಪುರಾತನ ನಗರ. ಬ್ರಹ್ಮದೇಶದ ಎಲ್ಲ ಮುಖ್ಯ ಮೂಲೆಗಳಿಗೆ ಹೋಗುವ ರಸ್ತೆಗಳು ಇಲ್ಲಿ ಸೇರುತ್ತವೆ. ಈ ದೇಶದ ಜನರಿಗೆ ಪೇಗು ಪಟ್ಟಣ ಬಹು ಶ್ರೇಷ್ಠ ಪುಣ್ಯಕ್ಷೇತ್ರ. ಪ್ರಪಂಚದಲ್ಲೆ ಅತ್ಯಂತ ದೊಡ್ಡದೆನಿಸಿದ ಪವಡಿಸಿದ ಬುದ್ಧನ ವಿಗ್ರಹವಿರುವದೂ ಇಲ್ಲಿಯೆ. ಪೇಗುವು ಬ್ರಿಟಿಶರ ವಶಕ್ಕೆ ಬಂದು 90 ವರ್ಷಗಳಾದವು.

ಮನೆತನಕೊಬ್ಬ ಸನ್ಯಾಸಿಯಾಗಬೇಕೆಂದು ಬ್ರಹ್ಮೀಯರ ಒಂದು ವಿಲಕ್ಷಣ ಪದ್ಧತಿ ಸಣ್ಣ ಸಣ್ಣ ಹುಡುಗರಿಗೇ ಸನ್ಯಾಸಾಶ್ರಮವನ್ನು ಕೊಡಿಸಿಬಿಡುವರು.

ಒಟ್ಟಿನಲ್ಲಿ ಶಾಂತಸ್ವಭಾವದಿಂದ ಕೂಡಿದ ಸಕಲ ಸಂಪದ್ಯುಕ್ತವಾದ ಬ್ರಹ್ಮದೇಶದ ಮೇಲೆ ಜಪಾನಿಯರು ಬಿದ್ದಿದ್ದಾರೆ. ಕಳೆದ 5 ವರ್ಷಗಳಿಂದ ಅನ್ಯಾಕ್ರಮಣವಾಗಿ ರಾಷ್ಟ್ರರಕ್ಷಣೆ ಮಾಡಿಕೊಳ್ಳುತ್ತಿರುವ ಚೀನಿಯರಿಗೆ ಸಂಗ್ರಾಮ ಸಲಕರಣೆಗಳು ಒದಗುತ್ತಿದ್ದುದು ಬ್ರಹ್ಮದೇಶದ ರಸ್ತೆಯ ಮೂಲಕವೇ ಇತ್ತು. ಬ್ರಹ್ಮದೇಶವನ್ನು ಆಕ್ರಮಿಸಿಕೊಂಡು ಚೀನಕ್ಕೆ ದೊರೆಯುತ್ತಿದ್ದ ಸಹಾಯವು ತಪ್ಪುವಂತೆ ಮಾಡಿದರೆ ಚೀನರು ಹಣ್ಣಾಗುವರೆಂದೂ ಭಾವಿಸಿ ಬ್ರಹ್ಮದೇಶದ ಪೆಟ್ರೋಲ್ ಮುಂತಾದ ಸಂಪತ್ತುಗಳ ಸಹಾಯದಿಂದ ತನ್ನ ಬಲವು ಅಧಿಕವಾಗಿ ಏಶಿಯದಲ್ಲಿ ಹೊಸ ಸಾಮ್ರಾಜ್ಯಂತರವನ್ನು ಸ್ಥಾಪಿಸಲು ಸುಲಭವಾಗುವದೆಂದೂ ಭಾವಿಸಿ ಜಪಾನ ಇಂದು ಮುನ್ನುಗ್ಗುತ್ತಿದೆ. ಇಷ್ಟೊಂದು ಸಂಕಟಯುಕ್ತವಾದ ದೇಶವನ್ನು ಬೈಕೆ ಪಡಿಸಿಕೊಂಡರೆ ತನ್ನ ರಾಕ್ಷಸೀ ಮಹತ್ವಾಕಾಂಕ್ಷೆಯನ್ನೀಡೇರಿಸಿಕೊಳ್ಳಲು ಸಾಧ್ಯವಾಗುವದೆಂಬುದು ಜಪಾನನ ಹಿರಿಯಾಸೆ! ಆ ಹಿರಿಯಾಸೆಯನ್ನು ಮಣ್ಣುಗೂಡಿಸಬೇಕೆಂದು ಮಿತ್ರ ಪಕ್ಷದವರು ಒಳ್ಳೆಸಿಕರದಿಂದ ಹೋರಾಡುತ್ತಿರುವರು.

ಮಾ। ಗಾಂಧಿಯವರ ಲೇಖನಗಳು

ಪಟ್ಟಣಗಳನ್ನು ಬಿಟ್ಟು ಹಳ್ಳಿ ಸೇರಿದವರ ಕರ್ತವ್ಯ.

ನಗರಗಳಲ್ಲಿ ಅವಶ್ಯಕತೆ ಇಲ್ಲದವರು, ಅಲ್ಲಿರಲು ಯೋಗ್ಯರಿಲ್ಲದವರು ಇಲ್ಲವೆ ಇರಬಯಸದವರು ಅವನ್ನು ಬಿಟ್ಟು ಹೋಗಬೇಕೆಂದು ನಾನು ಈ ಮೊದಲು ಹೇಳಿರುವೆ. ಈ ಬಗ್ಗೆ ನನ್ನ ಅಭಿಪ್ರಾಯಗಳನ್ನು ಇನ್ನಷ್ಟು ವಿಸ್ತೃತವಾಗಿ ವಿವರಿಸಬೇಕೆಂದು ಸನಾತನಿ ಒಬ್ಬರು ಪತ್ರ ಬರೆದಿರುವರು. ತಮ್ಮ ಮನಸ್ಸಿನ ವಿರುದ್ಧ ಯಾರೂ ಒತ್ತಾಯದಿಂದ ನಗರಗಳಲ್ಲಿರುಕೂಡದು ನಗರಗಳಲ್ಲಿ ಬಾಂಬ ದಾಳಿಯಾದರೆ ಯೋಧರಲ್ಲದವರೆ ಎಲ್ಲ ದೃಷ್ಟಿಯಿಂದ ಭಾರವಾಗಿ ಪರಿಣಮಿಸುವರೆಂಬುದು ಸುಸ್ಪಷ್ಟವಿದೆ. ಬಲಿಷ್ಠ ಶತ್ರುಗಳಿಂದ ಯಶಸ್ವಿಯಾಗಿ ನನ್ನ ರಕ್ಷಣೆ ಮಾಡಿಕೊಳ್ಳಬೇಕಾದರೆ ಏಕಾಗ್ರತೆಯಿಂದ ನಮ್ಮವರನ್ನು ಎದುರಿಸಿ ಅವರ ಮುನ್ನಡೆಯನ್ನು ತಡೆಯಲಿಕ್ಕೆ ಬೇಕಾಗುವುದು ಆತ್ಮರಕ್ಷಣೆ ಮಾಡಿಕೊಳ್ಳುವವರ ಲಕ್ಷ್ಯ ಬೇರೆ ಕಡೆ ಹೋಗತಕ್ಕದ್ದಲ್ಲ. ಸೈನಿಕ ದೃಷ್ಟಿಯಿಂದ ಇದರ ವಿಚಾರವಾಯಿತು.

ಆದರೆ ಮಾನವತೆಯ ದೃಷ್ಟಿಯಿಂದ ಇಲ್ಲವೆ ರಾಜನೀತಿಯ ದೃಷ್ಟಿಯಿಂದ ಯುದ್ಧವನ್ನು ವಿರೋಧಿಸುವ ಜನರೂ ನಮ್ಮಲ್ಲಿರುವರು. ತೊಂದರೆ ಕೊಡದಿದ್ದರೆ ಸಾಕಾಗಿದ್ದರೆ ಅವರಾರೂ ನಗರಗಳಲ್ಲಿರಲಾರರು. ಅಂಥ ಜನವಿರಲಿಕ್ಕೆಲ್ಲಿಂದು ನನ್ನ ಆಸೆ. ಆದುದರಿಂದ ಅಂಥವರು ನಗರಗಳನ್ನು ಬಿಟ್ಟು ಹೋಗಬೇಕು. ಬಾಂಬಿನ ದಾಳಿ ನಡೆದಾಗ ಏನುನಾಡಬೇಕೆಂಬುದನ್ನು ಅರಿಯದವರು ಅನೇಕ ಜನ ಇರುತ್ತಾರೆ. ಅವರೆಲ್ಲ ನಗರಬಿಟ್ಟು ಹೋಗಬೇಕು ಈ ಸಂದರ್ಭದಲ್ಲಿ ನಾನು ಪಡುವ ಅಭಿಪ್ರಾಯ ಮತ್ತು ಯುದ್ಧವಿರೋಧದ ನನ್ನ ವಿಚಾರಗಳಿಗೆ ಯಾವುದೇ ಬಗೆಯ ಸಂಬಂಧವಿಲ್ಲ ಏಕೆಂದರೆ ಈ ಸಂದರ್ಭದಲ್ಲಿ ಕೆಲವೊಂದು ಮಟ್ಟಿಗೆ ಸೈನಿಕ ಅವಶ್ಯಕತೆ ಮತ್ತು ಯುದ್ಧ ವಿರೋಧಿಗಳ ಕರ್ತವ್ಯ ಒಂದೇ ಬಗೆಯ ಕಾರ್ಯವನ್ನು ಸೇಕ್ಷಿಸುವುವು.

ಯಾವುದೊಂದು ನಗರವನ್ನು ಇಲ್ಲವೆ ಎಲ್ಲ ನಗರಗಳ ಜನರನ್ನು, ನಿಸ್ಸೇವರೆಗೆ ಯುದ್ಧಾಸಕ್ತರಾದ ಜನರನ್ನು ಕೂಡ ನನ್ನ ಅಭಿಪ್ರಾಯಕ್ಕೆ ತಲೆಬಾಗಿಸಲಾದರೆ ದಾಳಿಗಾರನನ್ನು ಕೂಡ ನಾನು ಸ್ವಾಗತಿಸಿ ಅವನ ಮನವೊಲಿಸಲೂ ಪ್ರಯತ್ನ ಮಾಡುವೆನು. ಇಲ್ಲವೆ ಯಾವುದೆ ಬಗೆಯ ಪ್ರತಿಕಾರ ಮಾಡದೆ ಬೇಕಾದರ್ಚ್ಚದರ್ತನ ಮಾಡಲು ಅವನಿಗೆ ಅವ್ಹಾನ ಕೊಡುವೆನು. ಆದರೆ ಅಂಥ ಸುಸ್ಥಿತಿ ನನ್ನದಿಲ್ಲ ನಗರವಾಸಿಗಳ ಹೃದಯ ಪರಿವರ್ತನವಾದರೆ ಆಡಳಿತಗಾರರ ಸಹಿತ ಇಡೀ ಹಿಂದೂಸ್ತಾನದ ಜನತೆಯ ಹೃದಯ ಪರಿವರ್ತನವಾಗುವುದು. ಅದರಿಂದ ಹಿಂದುಸ್ತಾನದಲ್ಲಿ ಶಾಂತಿಯುಂಟಾಗುವುದು. ಇಡೀ ಜಗತ್ತಿನಲ್ಲಿ ಶಾಂತಿ ನಲೆಸುವುದು. ಆದರೆ ಇವೆಲ್ಲ ಈ ಸಮಯದಲ್ಲಿ ಹಗಲುಗನಸೆ ಆಗುಳಿಯುವುದು. ಜಪಾನರು ಇಲ್ಲವೆ ನಾಝಿಗಳು ಇಂಗ್ಲಿಶರಂತೆಯೇ ಇರುವುದಿಲ್ಲವೆಂದು ಹೇಳುವವರ ಅಭಿಪ್ರಾಯಕ್ಕೆ ಮಾತ್ರ ನಾನು ಒಪ್ಪಲಾರೆನು ಮನುಷ್ಯ ಮನುಷ್ಯರಲ್ಲಿ ನಾನೀರೀತಿ ಭೇದ ಭಾವನೆ ಇನ್ನು ಕಲ್ಪಿಸುವವಿಲ್ಲ. ಆದರೆ ನನ್ನ ಮುಂದೆ ಈಗಿರುವ ಮುಖ್ಯ ಪ್ರಶ್ನೆಯನ್ನು ಬಿಟ್ಟು ನಾನು ವಾಚಕರನ್ನು ಬೇರೆ ಕಲ್ಪನಾವಿಹಾರದಲ್ಲಿ ಒತ್ತಾಯಪೂರ್ವಕ ತೊಡಗಿಸಬಯಸುವುದಿಲ್ಲ.

ನಗರಗಳನ್ನು ಬಿಟ್ಟು ಹೋಗುವವರೆಲ್ಲ ಇಲ್ಲವೆ ಅವರಲ್ಲಿ ಕೆಲ ಜನ ನಗರಗಳನ್ನು ಬಿಟ್ಟು ಹಳ್ಳಿಗಳಿಗೆ ಹೋಗಿದ್ದಾರೆಂದು ಭಾವಿಸುವಾ ಇಲ್ಲವೆ ಕೋಗುವ ಸಿದ್ಧತೆಯಲ್ಲಿದ್ದಾರೆಂದು ತಿಳಿಯುವ, ಅಂಥವರೇನು ಮಾಡಬೇಕು? ಹಳ್ಳಿಗಳಲ್ಲಿ ರಕ್ಷಣವಿದ್ದಷ್ಟು ಹಳ್ಳಿಗರಂತೆಯೆ ಸಂಸಾರ ಮಾಡಬೇಕೆಂಬ ಬುದ್ಧಿಯಿಂದ ಅವರಲ್ಲಿಗೆ ಹೊರಡಬೇಕು. ನಗರಗಳಲ್ಲಿನ ವಾತಾವರಣವನ್ನು ಅಲ್ಲಿ ಕಲ್ಪಿಸಿ ದೊಡ್ಡ ದೊಡ್ಡ ತಾತ್ಕಾಲಿಕ ಅರಮನೆಗಳನ್ನು ಅವರು ಕಟ್ಟಿಸಕೂಡದು. ಸೇವಾಭಾವನೆಯಿಂದ, ಹಳ್ಳಿಗರ ಆರ್ಥಿಕ ಮತ್ತು ಉಳಿದ ಜೀವನದ ಅಭ್ಯಾಸಮಾಡುವದಕ್ಕಾಗಿ ಅವರು ಹಳ್ಳಿಗಳಿಗೆ ಹೋಗಬೇಕು. ಹಳ್ಳಿಗರಿಗೆ ಭಿಕ್ಷೆ ಕೊಟ್ಟು ಅವರ ಕಷ್ಟಗಳನ್ನು ಹಿಂಗಿಸಲು ಪ್ರಯತ್ನಿಸಬಾರದು ಕಾಯಂಸ್ವರೂಪದ ಕೆಲಸವನ್ನು ಅವರಿಗೆ ಕೊಟ್ಟು ಸಹಾಯ ಮಾಡಬೇಕು ಎಂದರೆ ಹಳ್ಳಿಗರಲ್ಲಿ ಬೆರತು ಅವರೊಡನೆ ನವು ರಚನಾತ್ಮಕ ಕಾರ್ಯವನ್ನು ಮಾಡಬೇಕು ಆರ್ಥಿಕ ಸಾಮಾಜಿಕ, ಆರೋಗ್ಯ ನಿಸರ್ಗಿಕ ಮತ್ತು ರಾಜಕೀಯ ಪುನರ್ರಚನೆಯ ಒಂದು ಸುವ್ಯವಸ್ಥಿತ ಕಾರ್ಯವನ್ನಿಟ್ಟುಕೊಂಡು ನಾವು ಅವರೊಡನೆ ಒಂದು ಬಗೆಯ ಸಹಕಾರ ಸಂಸ್ಥೆಯಂತೆಯೆ ಕೆಲಸ ಮಾಡಬೇಕು

ನಗರಗಳಿಂದ ಹಳ್ಳಿಗಳಿಗೆ ಹೋಗುವವರ ಅತಿ ಮುಖ್ಯ ಕೆಲಸವೆಂದರೆ ಕಳ್ಳಕಾಕರು ಮತ್ತು ಸುಲಿಗೆಗಾರರನ್ನೆದುರಿಸುವುದು. ಈ ಕಾರ್ಯದಲ್ಲಿ ಅವರ ಎಲ್ಲ ಕೌಶಲ್ಯದ ಪರೀಕ್ಷೆಯಾಗುವುದು. ಅಹಿಂಸಾತ್ಮಕವಾಗಿ ಅವರನ್ನು ಹೇಗೆ ಎದುರಿಸಬೇಕಾಂಬುದನ್ನು ಈ ಮೊದಲು ನಾನು ವಿವರಿಸಿರುವೆನು. ಆ ಮಾರ್ಗದ ಸೃಷ್ಟಿ ಕಲ್ಪನೆ ಅವರಿಗೆ ಬಂದಿರದಿದ್ದರೆ ಈ ಕಳ್ಳಕಾಕರನ್ನು ಸಶಸ್ತ್ರರೀತಿಯಿಂದ ಅವರು ಎದುರಿಸಬೇಕು, ನವ್ಯ ಸಲುವಾಗಿ ಈ ಕಾರ್ಯವನ್ನು ಮಾಡಲು ಸರಕಾರದ ದಾರಿಯನ್ನು ನಾವು ಬಹಳ ದಿನ ನೋಡಿದೆವು, ಕ್ರಿಮಿನಲ್ ಟ್ರಾಯಿಬ್ಸ ಜನರ ಸುಧಾರಣೆಯ ಮೊಣೆಯನ್ನೂ ನಾವು ಅವರ ಕೈಗೆ ಒಪ್ಪಿಸಿದೆವು. ಇಂಥ ಕಠಿಣ ಪರಿಸ್ಥಿತಿಯಲ್ಲಿಯೂ ಸರಕಾರದವರು ಹೆಚ್ಚು ಯಾವ ಕೆಲಸವನ್ನೂ ಮಾಡಲಿಲ್ಲರು ಆದುದರಿಂದ ಈ ಕಾರ್ಯವನ್ನು ನಗರಗಳನ್ನು ಬಿಟ್ಟುಹೋದವರು ಅಹಿಂಸಾತ್ಮಕವಾಗಿ, ಅಹಿಂಸಾತ್ಮಕವಾಗಿ ಇಲ್ಲವೆ ಎರಡೂ ಮಾರ್ಗಗಳಿಂದ ಮಾಡಲಿಕ್ಕೆ ಬೇಕಾಗಿದೆ,

---

ಇರಾನಿನಿಂದ ಸೈನ್ಯ. ಇರಾನಿನಲ್ಲಿರುವ ರಷ್ಯಾದ್ಯಕ್ಕೆ ಯುದ್ಧ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಲು 2 ಸಾವಿರ ಮೈಲು ರಸ್ತೆಯನ್ನು ಬೇಗಬೇಗನೆ ನಿರ್ಮಿಸಲಾಗುತ್ತಿದೆ. ಸಾವಿರಾರು ಮಂದಿ ಮಹಿಳೆಯರೂ ಕೂಡ ರಸ್ತೆಯ ನಿರ್ಮಾಣದಲ್ಲಿ ನಿರತರಾಗಿದ್ದಾರೆ.



ಮಾರ್ಚ್ ೨೯, ೧೯೪೨.

ಕ್ರಿಪ್ಸ್‌ರ-ರಾಯಭಾರ.

ಬ್ರಿಟಿಷ ಮಂತ್ರಿಮಂಡಲದ ಪರವಾಗಿ ಸರ್‌ಸ್ಟಾಫರ್ಡ್ ಕ್ರಿಪ್ಸರು ಹಿಂದೂಸ್ಥಾನಕ್ಕೆ ಬಂದು ಒಂದು ವಾರವಾಯಿತು. ಅವರು ದೆಹಲಿಯಲ್ಲಿ ವೈಸ್‌ರಾಯಿ, ಮುಖ್ಯ ಸೇನಾಧಿಪತಿ, ವೈಸ್‌ರಾಯಿ ಕೌನ್ಸಿಲ ಸದಸ್ಯರೊಡನೆ ಕಲೆತು ಸಂಭಾಷಿಸಿದನಂತರ ಈಗ ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಡನೆ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಚರ್ಚಿಸುತ್ತಲಿರುವರು. ಬ್ರಿಟಿಷ್ ಮಂತ್ರಿಮಂಡಲದವರು ಏಕಾಭಿಪ್ರಾಯವಾಗಿ ಹಿಂದೂಸ್ಥಾನದ ಭವಿತವ್ಯದ ಬಗ್ಗೆ ತೀರ್ಮಾನಿಸಿದ ಯೋಜನೆಗೆ ಸರ್ವ ಪಕ್ಷಗಳ ಒಪ್ಪಿಗೆಯನ್ನು ಪಡೆಯಲಿಕ್ಕಾಗಿಯೇ ಅವರು ಈ ರಾಯಭಾರದ ಹೊಣೆಯನ್ನು ಹೊತ್ತಿರುವರು.

ಬ್ರಿಟಿಷರ ಯೋಜನೆಯೇನೆಂಬುದು ಇಲ್ಲಿಯವರಿಗೂ ತಿಳಿದುಬಂದಿಲ್ಲ. ಇದು ಅತ್ಯಂತ ಗುಪ್ತವಾಗಿಡಲ್ಪಟ್ಟಿದೆ. 23-ನಯ ತಾರೀಖು ಸಾಯಂಕಾಲ ವೃತ್ತಪತ್ರಿಕೋದ್ಯೋಗಿಗಳ ಸಭೆಯಲ್ಲಿ ಅವರು ಹೇಳಿದ ಪ್ರಕಾರ ತಾವು ತಂದಿರುವ ಯೋಜನೆಯಲ್ಲಿ ಮುಖ್ಯ ಬದಲಾವಣೆ ಕೂಡುವುದಿಲ್ಲವೆಂದೂ ಅಲ್ಲಲ್ಲಿ ಸಾಧಾರಣ ಬದಲಾವಣೆಯನ್ನು ಮುಖ್ಯ ಮುಖಂಡರೊಡನೆ ಮಾತನಾಡಿದ ನಂತರ ಯೋಚಿಸಲಾಗುವುದೆಂತಲೂ ಕ್ರಿಪ್ಸರು ಅಪ್ಪಣೆಕೊಡಿಸಿದರು.

ಯುದ್ಧವು ಪ್ರಾರಂಭವಾದನಂತರ ಕಾಂಗ್ರೆಸ್ ಕಾರ್ಯಕಾರೀ ಸಭೆಯು ಅನೇಕ ಸಲ ಕೂಡಿ ತನ್ನ ಧ್ಯೇಯವನ್ನು, ಯುದ್ಧ ನೀತಿಯನ್ನು ನಿರ್ಣಯಗಳ ಮೂಲಕ ವ್ಯಕ್ತಪಡಿಸಿದೆ, ತನ್ನ ಧ್ಯೇಯಕ್ಕೆ ಕುಂದು ಬರದೆ ಕೇಂದ್ರದಲ್ಲಿ ಯುದ್ಧಕಾಲಕ್ಕೆ ಪೂರಕವಾಗಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ ರಾಜ್ಯಭಾರವನ್ನು ನಡೆಸಲು ಕಾಂಗ್ರೆಸ್ ಸಂಸಿದ್ಧವಿದೆ. ಆದರೆ ಬ್ರಿಟಿಷ್ ಸರಕಾರವು ಈಗ ೨½ ವರ್ಷಗಳಿಂದಲೂ ತನ್ನ ಪೂರ್ವ ಧೋರಣವನ್ನು ಬಿಟ್ಟಿಲ್ಲ. ಆಧಿಕಾರವನ್ನು ಬಿಟ್ಟುಕೊಡಲು ಒಪ್ಪುವಂತಿಲ್ಲ.

ಮುಸ್ಲಿಂಲೀಗು ಹಿಂದೂಮಹಾ ಸಭೆ ಖಾಲ್ಸಾಸಂಘ, ಅಂಬೇಡ್ಕರರ ಪಕ್ಷ ಮತ್ತೆರೆ ಅನೇಕ ಸಂಸ್ಥೆಗಳ ಪ್ರತಿನಿಧಿಗಳೂ ಸಹ ಆಹ್ವಾನಿಸಲ್ಪಟ್ಟಿದ್ದಾರೆ. ಇವರಿಗೆಲ್ಲಾ ತಮ್ಮ ಜಾತಿಯ ಹಿತ ಹಕ್ಕುಗಳು ಪ್ರಾಧಾನ್ಯವಾಗಲಿ ಇಡೀ ದೇಶದ ಸ್ವತಂತ್ರ್ಯ ಪ್ರಶ್ನೆಯು ಗಣ್ಯವಿಲ್ಲವೆಂದು ಮುಖದಿಂದ ಹೇಳಬೇಕಾಗಿದೆ. ಅನೇಕ ಸಂಸ್ಥೆಗಳು ಅಧಿಕಾರಿಗಳ ಭೇದನೀತಿಯ ಪ್ರಭಾವದಿಂದ ಜೀವಿಸಿವೆ. ಕಾಂಗ್ರೆಸ್ಸಿನ ರಾಷ್ಟ್ರೀಯ ಶಕ್ತಿಯನ್ನು ಅಂಕೆಯಲ್ಲಿಡಲು ವಿರೋಧೀ ಸಂಸ್ಥೆಗಳಿಗೆ ಕೃತಕ ಜೀವನವನ್ನು ಕೊಡಲಾಯಿತು.

ಹಿಂದೂವೇತರಲ್ಲಿ ಪ್ರಜೆಗಳ ನ್ಯಾಯವಾದ ಬೇಡಿಕೆಗಳನ್ನು ಮುಂದಿಡಲು ಸರ್ವಯೋಗ್ಯತೆಯನ್ನು ಪ್ರಚಂಡ ಬಲಿದಾನದಿಂದ ಹೊಂದಿರುವ ಸಂಸ್ಥೆಯೆಂದರೆ ಕಾಂಗ್ರೆಸ್. ಕಾಂಗ್ರೆಸ್‌ನ ವಾಣಿಯೇ ಪ್ರಜಾವಾಣಿ. ಈ ಅಂಶವು ಬ್ರಿಟಿಷ್ ಸರಕಾರಕ್ಕೆ ಚನ್ನಾಗಿ ತಿಳಿದಿದೆ. ಬ್ರಿಟಿಷ್ ಸರ್ಕಾರದಿಂದ ರಾಯಭಾರಿಗಳಾಗಿ ಬಂದಿರುವ ಕ್ರಿಪ್ಸರು ಕಾಂಗ್ರೆಸ್ ಸಂಸ್ಥೆಯ ರೀತಿ ನೀತಿ ಧ್ಯೇಯಗಳನ್ನು ಚನ್ನಾಗಿ ಬಲ್ಲವರಿದ್ದಾರೆ.

ರಷ್ಯಾದ ರಾಜಕಾರಣದಲ್ಲಿ ಯಶಶ್ವಿಗಳಾದ ಕ್ರಿಪ್ಸರು ಹಿಂದೂಸ್ತಾನದ ರಾಜಕಾರಣದಲ್ಲೂ ಯಶಶ್ವಿಗಳಾಗಿ ಕಾಂತಿಯನ್ನು ಸ್ಥಾಪಿಸಿ ಶತ್ರುಗಳ ಕಾರ್ಯಾನ್ವಯಕ್ಕೆ ಡೆಗೊಡದಂತೆ ಮಾಡಿ ಹಿಂದೂದೇಶವನ್ನು ಸ್ವತಂತ್ರವಾಗಿ ಉಳಿಸಲು ಆಕರಮಾಡುವರೆಂದು ನನ್ನ ಕೋರಿಕೆ.

ಕೇದಾರನಾಥ ಸ್ಮಾರಕದ ಅಟಪಾಟಗಳು.

13-ನೆಯವ ಸಿಕ್ಕ ಆಟಗಳು ಬಳ್ಳಾರಿ ಗಾಂಧಿನಗರದ ನೀರಡ್ಕೆಯ ಸಮ್ಯಾರ್ಥಿ ನಿಲಯದ ಮೈದಾನದಲ್ಲಿ ಜರುಗುತ್ತವೆ. ಎಲ್ಲರೂ ಬರಲು ಕಾರ್ಯದರ್ಶಿಗಳು ಕೋರುತ್ತಾರೆ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ

ಡಿಪಾಜಿಟ್ಟುಗಳು.	31-10-40	28-2-42
	ಫಿಕ್ಸೆಡ್	ರೂ, Nil	108020.0-0
	ಚಾಲ್ತಿ	,, 3,173	11394.0 0
	ಸೇವಿಂಗ್ಸು	,, 1,231	17492.0-0
	ಇತರ	,, 40	914-0-0
ಸಾಲಗಳು			
	ಭಂಗಾರ	,, 520	32469.0.0
	ಮೂಲು	,, Nil	42520.0.0
	ಇತರ	,, Nil	37011-0 0
ಇತರ ಆಸ್ತಿ.			
	ಸರ್ಕಾರದ ಬಾಂಡುಗಳು	,,13,320	32476-0-0
	ಬ್ಯಾಂಕುಗಳಲ್ಲಿರುವ ಹಣ	,,32,502	5954-0-0
	ಕೈಯ್ಯಲ್ಲಿ ನಗದು	,, 5770	14011-0-0

ಒಟ್ಟು ವ್ಯವಹಾರದ ಮೊತ್ತ.

31—10—40.	28—2—42.
ರೂ. 1,14,774-0-0	ರೂ. 2,37,062-0-0

ಶಾಖೆಗಳು:—

1 ತಿಮ್ಮನಚರ್ಲ 2 ಕೊಟ್ಟೂರು 3 ಹುರವಕೊಂಡ 4 ಪತ್ತಿಕೊಂಡ

ಹೆಚ್. ಸೀತಾರಾಮರೆಡ್ಡಿ,, ಬಿ. ಎ. ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ವಾಕರಿಕೆ

ಶ್ರೇಷ್ಠ ಮತ್ತು ಶೀಘ್ರಗುಣಕಾರಿ
ಬಿಡವರಿಗೆ ಉಚಿತವಾಗಿ
ಕೊಡಲಾಗುವುದು.

ನನ್ನ "ಕಾಮೀರ ಆರಕ್" ವನ್ನು ಪ್ರತಿನಿತ್ಯ ಎರಡುಸಲ ಸೇವನೆ ಮಾಡುವುದರಿಂದ ಕಾಲರಾ ರೋಗವು ಹತ್ತಿರ ಬರುವುದಿಲ್ಲ ಇಂತಿ ಭೇದಿಗಳನ್ನು ತಕ್ಷಣ ನಿಲ್ಲಿಸಿ ಜೀರ್ಣ ಶಕ್ತಿಯನ್ನು ಹೆಚ್ಚಿಸುವುದು

ಪೆಚ್. ಎನ್. ಅಂಡ್ ಸನ್ಸ್,
ಬಳ್ಳಾರಿ.

ಬಳ್ಳಾರಿ.

ಕಲಂಬ:— ಬಳ್ಳಾರಿ ತಾಲ್ಲೂಕಿನ 17 ಜನರಿಗೆ ಕಾಲರಾತಂಡಲಿ 6 ಜನರು ಮತ್ತು ರತ್ತಾರೆ ಆದರೆ ನಗರದಲ್ಲಿ ಕಾಲರಾ ಸಂಕ್ರಮಿಸಿರುವುದು ನಿಜವಾಗಿದೆ ಬೀದಿಗಳಲ್ಲಿ ನಗರದ ನೊಣಗಳು ಕೂಡುವ ಆಹಾರ ವಸ್ತುಗಳನ್ನು ತಿನ್ನಬಾರದು ಮಿತವಾದ ವಸ್ತು ಬಿಸಿ ಇರುವ ಆಹಾರವನ್ನೇ ಸೇವಿಸಬೇಕು ಮುನಿಸಿಪಾಲಿಟಿಯವರು ಆಗಲಿ, ದಕ್ಷರನರಿಂದಾಗಲಿ ಇನಾಕುಲೇಷನ್ ಮಾಡಿಸಿಕೊಳ್ಳಬೇಕು ಇನ್ನಿತರ ಸೂಚನೆಗಳನ್ನು ಮುನಿಸಿಪಲ್ ಹೆಲ್ತ್ ಆಫೀಸರರು ಪ್ರಕಟಿಸಿರುವರು.

ಪಂಪಿ ಜಾತ್ರೆಯು ನಿಲಿಸಲ್ಪಟ್ಟಿದೆ.

ಐದಕ್ಕಿಂತ ಹೆಚ್ಚಿನ ಜನರು ಸೇರಬಾರದು.

ಹೊಸಪೇಟೆ ತಾಲ್ಲೂಕಿನಲ್ಲಿಯೂ, ಬಳ್ಳಾರಿ ಜಿಲ್ಲೆಯ ಇತರ ಭಾಗಗಳಲ್ಲಿಯೂ, ಕಾಲರಾ ರೋಗವು ಹಬ್ಬಿರುವ ಕಾರಣ ಜಿಲ್ಲಾ ಆರೋಗ್ಯ ಶಾಖಾಧಿಕಾರಿಗಳ ಸಲಹೆ ಮೇರೆಗೆ ಬಳ್ಳಾರಿ ಜಿಲ್ಲಾ ಮ್ಯಾಜಿಸ್ಟ್ರೇಟರು 1939ನೆಯ ಪಬ್ಲಿಕ್ ಪೆಸ್ಟ್ ಆಕ್ಟ್ 75ನೆಯ ಕಲಂ ಮೇರೆಗ ಹಂಪಯಲ್ಲಿ 50 ಜನರಿಗಿಂತ ಹೆಚ್ಚು ಸಂಖ್ಯೆಯು 28 3 42 ರಿಂದ 11 4-42ರ ವರೆಗೆ ಸೇರಬಾರದೆಂದು ವಿಧಿಸಿದ್ದಾರೆ. ಈ ಕಾರಣ ಜಿಲ್ಲೆಗೆ ಜನರು ಹೋಗಬಾರದೆಂದು ಸೂಚಿಸಲಾಗಿದೆ.

ಆಲೂರು ತಾಲೂಕು ಗ್ರಾಮೋದ್ಯೋಗಿಗಳ ಸಭೆ.

ಈ ಸಭೆಯು 22ನೆಯ ತಾರೀಖ್ಯಿನ್ನ 3 ಘಂಟೆಗೆ ಬೋರ್ಡುಶಾಲಾವಟ್ಟಡದಲ್ಲಿ 'ಆಂಧ್ರ ಗ್ರಾಮ ಪರಿಷತ್' ಸಂಪಾದಕರಾದ ಶ್ರೀ ಲಕ್ಷ್ಮೀನರಸಿಂಹರವರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಯಲಸೀಮ ಗ್ರಾಮೋದ್ಯೋಗ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ. ಕೆರಣಂ ವೆಂಕಟ ಶೇಷಗಿರಿ ರಾಯರ ಸಭೆಯ ಪ್ರಾರಂಭೋತ್ಸವನ್ನು ನೇರವೇರಿಸಿದರು ಸ್ವಾಗತಾಧ್ಯಕ್ಷರಾದ ಅರಕೆರೆ ರಾಮಯ್ಯಡ್ಡಿಯವರು ಬಂದ ಅತಿಥಿಗಳನ್ನು ಸ್ವಾಗತಿಸಿದರು.

ಜೆಮ್ಮಿಟ ಇಂಜಿನೀಯರ್ ರಾಮಕೃಷ್ಣ ರಾಯರು, ಲೋಕಜಂದ್ರನೌಕರಿಯವರು, ಸಿಟ್ಟೂರು ಪಣ್ಣನಗೌಡರು ಎ. ಪ್ರಹ್ಲಾದ ರಾವ್ ರಾಮಮೂರ್ತಿ ಮತ್ತು ಹನುಮಂತರಾಯರು ಸಕ್ರಿಯವಾಗಿ ಪ್ರಧಾನಿಕ ವಿದ್ಯಾ ಗ್ರಾಮೋದ್ಯೋಗಿಗಳು ಬಾಬ್ಬರಿ ಗ್ರಾಮೋದ್ಯೋಗಿಗಳ ಬಂದಿನ. ಇದಿನ ಸರ್ಥಿತಿ. ಗ್ರಾಮೋದ್ಯೋಗಿಗಳ ಕರ್ತವ್ಯ ಮತ್ತು ಗ್ರಾಮೊದ್ಯೋಗಿಗಳ ಹಿತವನ್ನು ಕುರಿತು ಭಾಷಣ ಮಾಡಿದರು ಅಧ್ಯಕ್ಷತೆ ವಹಿಸಿದ ನರಸಿಂಹಂದರವರು ಅಧ್ಯಕ್ಷ ಭಾಷಣದಲ್ಲಿ ಒಳ್ಳೆಯ ಸಲಹೆಗಳನ್ನು ಕೊಟ್ಟರು.

ಆಲೂರು ಸರ್ಕಾರಿ ಶಾಲೆಯಲ್ಲಿ ಬಳ್ಳಾರಿ ಜಿಲ್ಲಾನ ವಾಸ್ತವಸ್ಥಿತಿಯನ್ನರಿತು ಜೋಳದ ಕರಣ್ಣಾಗಿಯಾದಿ ಉತ್ತೀರ್ಣರಾಗಲು ಈ ಗಿರುವ ಪ್ರತಿ ಒಂದನ್ನು ಹೋಗಲಾಡಿಸುವುದು ನಿರ್ಧಾರತೆಯ ಹೆಚ್ಚಿಗಿರುವ ನವ್ಯ ಜಲ್ಲೆಯಲ್ಲಿ ನಾಲ್ಕು ನಿಯಮಗಳನ್ನು ಪೂರೈಸಲೇಬೇಕೆಂದು ಅಯೋಗ್ಯ ಶಾರೆಗಳನ್ನು ಮುಚ್ಚುವ ವಿದ್ಯಾಶಾಖೆಯ ಆಜ್ಞೆಯನ್ನು ಸಭೆಯು ಒಪ್ಪುವ ಮೊದಲು ಸಭೆಗೆ ವರ್ಷ ವಯಸ್ಕರಾಗಲು ಡೈರೆಕ್ಟರ್ ಕೋರುವುದು ಗ್ರಾಮೋದ್ಯೋಗಿಗಳು ತಮ್ಮ ತಮ್ಮ ಗ್ರಾಮಗಳಲ್ಲಿ ವಿದ್ಯಾಭಿವೃದ್ಧಿಯ ವಿಷಯಕ್ಕೆ ಹಚ್ಚು ಶ್ರದ್ಧೆ ವಹಿಸುವ ವಿಷಯ ಆವಶ್ಯಕ ಕರ್ತವ್ಯಕ್ಷರಸನಲ್ಲಿ ಆದ ತೀರ್ಮಾನಗಳಿಗೆ ಸರಕಾರದವರು ಸಮ್ಮತಿ ಕೊಡಬೇಕೆಂಬ ವಿಷಯ ವಗೈರೆ ತೀರ್ಮಾನಗಳು ಇವು

ಆಲೂರು ತಾ ಗ್ರಾಮೋದ್ಯೋಗಿಗಳ ಸಭೆಗೆ ಶ್ರೀ ನೆಮಕಲ್ಲು ರಾಳವರೆಡ್ಡಿಯವರು ಅಧ್ಯಕ್ಷರಾಗಿಯೂ, ಹಾಲರವಿ ಕರಣಂ ನಾಗಿ ರಾಯರು ಕಾರ್ಯದರ್ಶಿಗಳಾಗಿಯೂ ಏರ್ಪಟ್ಟರು.

ಈ ಸಭೆಯನ್ನು ಯಶಸ್ವಿಯಾಗಿಮಾಡಲು ಶ್ರೀ ಭೀಮಾರೆಡ್ಡಿ ಆರಕೆರೆ, ಯೇರೂರು ಸಂಜೀವಪ್ಪ ಕರಣಂ ನ ಸೇಶರಾಯರು ಪಕ್ಕೇರಿ ಯವರು ದುಡಿದರ. ಸಭೆಗೆ ತಾಲೂಕಿನ ಎಲ್ಲಾ ಭಾಗಗಳಿಂದ ಗ್ರಾಮೋದ್ಯೋಗಿಗಳು ಬಂದಿದ್ದರು

ಬಳ್ಳಾರಿ.

ಪಾಕಿಸ್ತಾನ ಸಭೆ- ಜಿಲ್ಲಾ ಮುಸ್ಲಿಂ ಲೀಗಿನ ಆಶ್ರಯದಲ್ಲಿ ಸೇರಿದ ಎರಡು ಸಭೆ [ಕೌಲು ಬಜಾರು-ಬ್ರೂಸಪೇಟೆ] ಗಳಲ್ಲಿ ಅಧ್ಯಕ್ಷರಾದ ಜನಾಬ ರಾಫುಫ್ ಸಾಹೇಬರು ಹಿಂದೂಗಳಿಗೆ ಪ್ರತ್ಯೇಕ ಸ್ವಾತಂತ್ರ್ಯಗಳು ಬೇಕಾದಂತೆ ಮುಸಲ್ಮಾನರಿಗೂ ಪ್ರತ್ಯೇಕ ಸ್ವಾತಂತ್ರ ಬೇಕೆಂಬುದನ್ನು ಸ್ಪಷ್ಟಪಡಿಸಿದರು.

ಹಿಂದೂ ಮಹಾಸಭೆ- ಶ್ರೀ ನಮ್ಮ ಮೂರು ತಿಮ್ಮಪ್ಪನವರ ಅಧ್ಯಕ್ಷತೆಯಲ್ಲಿ 27ನೆಯ ತಾ. ಸಾಯಂಕಾಲ ಮೈದಾನದಲ್ಲಿ ಸಭೆಯುಸೇರಿ ಆಂಧ್ರಪ್ರಾಂತ್ಯ ಹಿಂದೂ ಮಹಾಸಭಾಧ್ಯಕ್ಷರಾದ ಶ್ರೀ ವೈಪಾ ಸುಬ್ಬರಾಮಶೆಟ್ಟರು ಹಿಂದೂಗಳ ಐಕಮತ್ಯ ಅಸ್ಪೃಶ್ಯತಾ ನಿವಾರಣೆ ಕುರಿತು ಉಪನ್ಯಾಸ ಮಾಡಿ ಪಾಕಿಸ್ತಾನವನ್ನು ಖಂಡಿಸಿದರು.

ಬಳ್ಳಾರಿ ಪೇಟೆ ಧಾರಣೆ

27-3-42 ಶುಕ್ರವಾರ.

ಭಂಗಾರ ತೊಲ 1ಕ್ಕೆ	52-8-0
ಸಾವರಿನ್	37-0 0
ಬೆಳ್ಳಿ100 ತೊಲ ರೂ.	89-4-0
ಹತ್ತಿಮುಂಗರಿ 12 ಮಣಕ್ಕೆ	16-0-0
ಹತ್ತಿ ಘಾರಂ	24-0-0

ಆಹಾರ ಸಾಮಗ್ರಿಗಳು

ಅಕ್ಕಿ 1 ರೂ. ಗೆ 5 ಯಿಂದ 5½ ಸೇರು
ಬೆಳೆ ,, 5 ,, 6 ,,
ಗೋಧಿ ,, ... 6 ,,
ಜೊಳ ,, 12 ,, 16 ,,
ನವಣೆ ,, 19 ,, 20 ,,
ಸಜ್ಜೆ ,, 15 ,, 16 ,,
ನಲ್ಲಿ ಡಲೆ 1-0-6
ಎಣಸಿನಕಾಯಿ 9 ಮಣ 25 ರಿಂದ 30
ಸಕ್ಕರೆ(ಮಡ್ಡಿ) 9 ಮಣ 36 ರೂ
ಬೆಲ್ಲ 12 ರಿಂದ 14 ರೂ
ಚುಮ್ಮಿ ಎಣ್ಣೆ ಡಬ್ಬಿ 5-4-0

ಓರಿಯಂಟಲ್

ಗೌರ್ನಮೆಂಟು ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂ. ಲಿ, ಬೊಂಬಾಯಿ.

ಮುಖ್ಯ ಸೂಚನೆ.

ಯುದ್ಧ ಭಯದ ಕಾರಣದಿಂದ ಹೆಚ್ಚಿನ ಪ್ರೀಮಿಯಂ ಹಣವನ್ನು ಕೇಳದೆ ಹಿಂದೂಸ್ಥಾನದಲ್ಲಿರುವ ನಾಗರೀಕರಿಗೆ (civilians) ವಿಮಾ ಪತ್ರಗಳನ್ನು ಕೂಡ ಲಾಗುತ್ತದೆ. ವಿಮಾನವಾಳಿಗಳಿಂದ ಜನರನ್ನು ರಕ್ಷಿಸುವ ಕಾರ್ಯದಲ್ಲಿ (A. R. P. Services) ತೊಡಗಿರುವ ಜನರಿಗೂ ಸಹ ಇದು ಅನ್ವಯವಾಗುತ್ತದೆ

ಈಗಾಗಲೇ ನಮ್ಮ ಕಂಪನಿಯ ವಿಮಾಪತ್ರಗಳನ್ನು [ಪಾಲಿಸಿಗಳನ್ನು] ಪಡೆದಿರುವವರು ಯುದ್ಧಕಾರಣದಿಂದ ಸಂಭವಿಸಬಹುದಾದ ಆಪತ್ತುಗಳಿಂದ ಪೂರ್ಣವಾಗಿ ರಕ್ಷಿಸಲ್ಪಟ್ಟಿರುವರು. **ಶತ್ರುವಿನ ಭೂಮ್ಯಾಕಾಶ - ಸಮುದ್ರ ಅಥವಾ ಯಾವ ದಾಳಿಗಳಿಂದಾಗಲಿ - ಪಾಲಿಸಿದಾರರು ಮರಣಹೊಂದುವುದಾದರೆ ಹಕ್ಕಿನ ಹಣವು ವಾರಸದಾರರಿಗೆ ಕೊಡಲಾಗುವುದು.**

ಮುಖ್ಯಕಚೇರಿ—ಓರಿಯಂಟಲ್ ಬಿಲ್ಡಿಂಗ್ಸ್, ಫ್ಲೋರ್ಸ್ ಜೋಂಬಾಯಿ.

ಶಾಖೆ— ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಸ್ಟ್ರೀಟು, ಜಿ. ಟಿ. ಮದರಾಸು.

ಇನ್ಸ್ಪೆಕ್ಟರವರ ವಿಳಾಸ— ನಂ ೩೧೨ ರೂಪರ್ಟಸ್ ಗೇಟ್, ಬ್ರೂಸುಪೇಟೆ, ಬಳ್ಳಾರಿ.

ಹಬ್ಬೊಳ್ಳಿ .

ಇಲ್ಲಿಯ ಕ್ಷಾಮಕೇಂದ್ರದಲ್ಲಿ ಸುಮಾರು 2500 ಸಂಖ್ಯೆಯನ್ನು ದಿನದಿನಕ್ಕೂ ಹೆಚ್ಚುತ್ತಲಿದೆ, ಸಂಖ್ಯೆಯು 2000 ಆಗುವವರೆಗೂ ಜಿಲ್ಲಾಬೋರ್ಡಿನವರು ಜವಾಬ್ದಾರಿ ಹೊರಬೇಕೆಂದು ಸರಕಾರವು ಅಜ್ಞಾಪಿಸಿದ್ದಿತು. ಅಲ್ಲದೆ 31ನೆಯ ಮಾರ್ಚವರೆಗೆ ಮಾತ್ರ ಆಗುವ ಖರ್ಚು ಬೇರ್ಪಡಿಸಲ್ಪಟ್ಟಿದ್ದಿತು. ಜೀವನಕ್ಕೆಪಾಟಿಲ್ಲದೆ ಮನೆ ಮಾರುಗಳನ್ನು ಕಳೆದುಕೊಂಡ ಕೂಲಿಜನರಿಗೆ ಕಷ್ಟವಾಗುತ್ತದೆಂದು ಸರಕಾರದವರಿಂದ ಬೇರೊಂದು ಉತ್ತರ ಬರುವ ನಿರೀಕ್ಷೆಯಿಂದ ಏಪ್ರಿಲ್ 15ರವರೆಗೆ ಹೆಚ್ಚಿಸಿ ಆವರಾನಿಯಲ್ಲಿನ ಅ. ಎಂಜಿನೀರ್ ಸಾಹೆಬರು ಹಬ್ಬೊಳ್ಳಿ ಓವರ್ಸಿಯರವರಿಗೆ ತಿಳುಹಿಸಿರುತ್ತಾರೆಂದು ಜಿಲ್ಲಾಬೋರ್ಡಿನಿಂದ ತಿಳಿಸಿ ಬಂದಿವೆ. ಡೆಪ್ಯುಟಿ ಕಲೆಕ್ಟರವರು ಇವನ್ನು ಟಿಸ್ಪಿನರ್ಕಾಗಿ ತೆಗೆದುಕೊಳ್ಳಲು ನಿರಾಕರಿಸಿದ್ದಾರೆಂದು ಗೊತ್ತಾಗಿದೆ.

ಚಿಕ್ಕ ಜೋಗಿಹಳ್ಳಿ

29ನೆಯ ತಾರೀಖು ಇಲ್ಲಿ ಕೂಡುವ ನಾರಾಯಣಸ್ವಾಮಿ ಜಾತ್ರೆ ವೇಳೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ರಾಮಚಂದ್ರಗುಪ್ತರು ಲಂಬಾಣಿ ಸಭೆಯಲ್ಲಿ 'ದುರಾಚಾರ ಮತ್ತು ದುಷ್ಟ ಪದ್ಧತಿಗಳ ನಿರ್ಮೂಲನವನ್ನು ಕುರಿತು ಭಾಷಣ ಮಾಡುವರೆಂದು ಸುದ್ದಿ ಬಂದಿವೆ. ಸಾಕ್ರಾನಾಯ್ಕರು ಶಪ್ಪೆಹಾಕಿ ಈ ಸಭೆಯನ್ನು ವಿಸರ್ಜಿಸಿರುವರು.

ಕ್ರೈಸ್ತರ ಸಂಧಾನ

ಮಹಾತ್ಮಾ ಗಾಂಧಿಯವರು 27.3-42ನೆಯ ದಿನ ಬೆಳಿಗ್ಗೆ ಸರ್ ಸ್ಟಾಫರ್ಡ್ ಕ್ರಿಪ್ಸರನ್ನು ಭೇಟಿಯಾಗಿ ಸಂಭಾಷಣೆ ನಡೆಸಿದರು. ಬ್ರಿಟಿಷ್ ಸರ್ಕಾರವು ಯೋಜನೆಯಲ್ಲಿ ಕಾಂಗ್ರೆಸಿನ ಪ್ರತಿನಿಧಿಗಳ ಕಾರಣ ಏನಾದರಿಗೆ ಬಹಳ ಸಂತೋಷವಾಗಿದೆಯೆಂತೆ. ಮುಸ್ಲಿಂಲೀಗ್ ಮತ್ತು ಕಾಂಗ್ರೆಸ್ ಕಾರ್ಯಕಾರಿಣೀ ಸಮಿತಿಗಳು ಕೂಡಿದ ಮೇಲೆಯೇ ಯಾತ್ರೆಯಾವುದೂ ನಿಶ್ಚಿತವಾಗಿ ನಿರ್ಣಯಿಸಲ್ಪಡುವುದು. ಶ್ರೀ ರಾಜಗೋಪಾಲಾಚಾರಿಯವರೂ ಸಹ ಕ್ರಿಪ್ಸರೊಡನೆ ಸಂಭಾಷಣೆ ನಡೆಸಿದರು. ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಮುಖ್ಯ ಮಂತ್ರಿಗಳಾಗಿದ್ದವರೂ ಆಹ್ವಾನಿಸಲ್ಪಟ್ಟಿರುವರು

ಯುದ್ಧದ ಇತ್ತೀಚಿನ ಸಮಾಚಾರಗಳು.

ಜಪಾನರ ಚಟುವಟಿಕೆ:—

ಆಸ್ಟ್ರೇಲಿಯಾಕ್ಕೆ ಸಮೀಪವಿರುವ ಪೋರ್ಟ್‌ಮೋರ್ಸಬಿ ದ್ವೀಪದಮೇಲೆ ಉಗ್ರ ಮುತ್ತಿಗೆಯಾಯಿತು, ಅನೇಕ ಶತ್ರು ವಿಮಾನಗಳು ಕೆಡವಲ್ಪಟ್ಟವೆಂದು ಗೊತ್ತಾಗಿದೆ. ಆಸ್ಟ್ರೇಲಿಯಾಕ್ಕೆ ಸಮೀಪವಿರುವ ಸಾಲೊರ್ಮನ್ ದ್ವೀಪಗಳನ್ನು ಜಪಾನರು ಹಿಡಿದಿರುವರೆಂದು ಪ್ರಕಟವಾಗಿದೆ. ಆಸ್ಟ್ರೇಲಿಯಾವನ್ನು ಆಕ್ರಮಿಸಿಕೊಳ್ಳಲು ಮುಖ್ಯವಾದ ಬಲ ಮೂಲಗಳನ್ನು ಸ್ಥಾಪಿಸಬೇಕೆಂದು ಜಪಾನರು ಆಶಿಸಿದ್ದಾರೆ.

ಬರ್ಮಾದಲ್ಲಿ ಟಂಗೂ ನಗರಕ್ಕೆ ೩೦ ಮೈಲಿ ದೂರದಲ್ಲಿ ಜಪಾನರು ಇದ್ದಾರೆಂದು ಗೊತ್ತಾಗಿದೆ, ಲಂಡನ್ನಿನ ಮಿಲಿಟರಿ ಟೀಕಾಕಾರರ ಪ್ರಕಾರ ಟಂಗೂನಗರಭಾಗದಲ್ಲಿ ಪರಿಸ್ಥಿತಿಯು ಗಂಭೀರವಾಗುತ್ತಿರುವುದು. ಧರವಾಡಿ ಕ್ಷೇತ್ರದಲ್ಲಿ ಜಪಾನರು ಕೊಡೆ ವೈಮಾನೀಕರನ್ನು ಇಳಿಸುತ್ತಿರುವರು. ಜಪಾನರಿಗೆ ಅನುಕೂಲರಾದ ಬರ್ಮಾ ಜನರನ್ನು ಸಂಘಟಿಸಲು ಹೀಗೆ ಮಾಡುತ್ತಿರುವರೆಂದು ಊಹಿಸುತ್ತಿರಲಾಗಿದೆ.

ಬಾರ್ಟ ಕ್ಷೇತ್ರದಲ್ಲಿಕೂಡ ಜಪಾನರು ಅವರ್ಕರ್ ಸೈನ್ಯಗಳಮೇಲೆ ಮುತ್ತಿಗೆಯಾರಂಭಿಸಿರುವರು.

ಅಮೆರಿಕಾ ವಿಮಾನಗಳು ಜಪಾನರ ಅಧೀನದಲ್ಲಿರುವ ವೇಕ ಮತ್ತು ವಾಕ ದ್ವೀಪಗಳಮೇಲೆ ವಿಮಾನ ಮುತ್ತಿಗೆ ನಡೆಸಿದವು.

ಚಾವಾ ದ್ವೀಪದಲ್ಲಿ ಜಪಾನರಮೇಲೆ ಇನ್ನೂ ಪ್ರತಿ ಭಟನೆಯು ಸಾಗಿದೆಯೆಂದು ಗೊತ್ತಾಗಿದೆ.

ಕುಮಾರಿ ಇಂದಿರಾ-ಫಿರೋಜ ವಿವಾಹ.

ಪಂಡಿತ ಜವಹರ ಲಾಲರ ಏಕಮಾತ್ರ ಪುತ್ರಿಯಾದ ಕುಮಾರಿ ಇಂದಿರಾರವರ ವಿವಾಹವು ಪಾರ್ಸಿ ಕುಟುಂಬಕ್ಕೆ ಸೇರಿದ ಫಿರೋಜ ಗಾಂಧಿಯವರೊಡನೆ 26-3-42ನೆಯ ಗುರುವಾರ ಆಪ್ತಮಂತ್ರವೈಭವದಿಂದ ಅಲಹಾಬಾದಿನಲ್ಲಿ ನೆರವೇರಿತು. ಮಹಾತ್ಮಾ ಗಾಂಧಿ, ಶ್ರೀಮತಿ ಚೆಂಗೈಕೇಕ ವ್ಯಸೆ ಅನೇಕ ಮುಖಂಡರು ಅಭಿನಂದನ ವರಸಂದೇಶಗಳನ್ನು ಕಳುಹಿಸಿದ್ದರು.

ಅಂದಮಾನ ದ್ವೀಪವು ಜಪಾನರ ವಶವಾಯಿತು.

ಹಿಂದೂಸ್ಥಾನದಿಂದ ಗಡೀಪಾರು ಶಿಕ್ಷೆಯಾದವರು ಕಳುಹಿಸಲ್ಪಡುತ್ತಿದ್ದ ಅಂದಮಾನ ದ್ವೀಪವು ಜಪಾನರ ವಶವಾಯಿತೆಂದು ಅಧಿಕೃತವಾಗಿ ಸಾರಲಾಗಿದೆ. ಅಲ್ಲಿದ್ದ ಬ್ರಿಟಿಷ್ ಸೈನ್ಯವನ್ನೂ, ಕೈದಿಗಳನ್ನೂ ಮುಖ್ಯ ಜನರನ್ನೂ ಮೊದಲೇ ಸ್ಥಳಾಂತರಿಸಲಾಗಿದೆ.

ಕ್ರಿಪ್ಸರ ಭೇಟಿ

ರಾಜಾಜಿಯವರ ಅಭಿಪ್ರಾಯ.

ತ್ಯಾಗಕ್ಕೆ ಸೂರ್ಫ್ತಿಯು ಬೇಕು

"ಈಗ ನಾವೆಲ್ಲ ಹುಡುಕಬೇಕಾಗಿರುವುದೇನು? ಭಾರತ ರಾಷ್ಟ್ರವು ತನ್ನ ಸಂಪೂರ್ಣ ಶಕ್ತಿ ಸಂಪತ್ತನ್ನು ಸಂಗ್ರಾಮಕ್ಕಾಗಿ ವಿನಿಯೋಗಿಸುವಂತೆ ಮತ್ತು ಮಹಾ ತ್ಯಾಗಕ್ಕೆ ಸಿದ್ಧವಾಗುವಂತೆ ಹುರುಪುಗೊಳಿಸುವಂತಹ ಸ್ಫೂರ್ತಿಯೊಂದನ್ನು ನಾವು ಕಂಡು ಹಿಡಿಯಬೇಕು. ಜನರ ಪ್ರೀತಿ ವಿಶ್ವಾಸ ಮತ್ತು ನಂಬಿಕೆಯನ್ನು ಗಳಿಸಿ ಮುಷ್ಟರಿಂದ ಜನಾಂಗವನ್ನು ರಕ್ಷಿಸಲು ಕಂಕಣ ಕಟ್ಟಿರತಕ್ಕಂತಹ ತಾತ್ಕಾಲಿಕ ಕೇಂದ್ರ ಸರಕಾರವನ್ನು ಸ್ಥಾಪಿಸಬೇಕು."

ಬ್ರಿಟ್ಟಿನ ರಾಯಭಾರಿಗಳೀಗ ಭಾರತಕ್ಕೆ ಬಂದಿರುವದು ಹೊರಗೆ ನೋಡಲಿಕ್ಕೆ ರಾಜಕೀಯ ಕಾರ್ಯಸಾಧನೆಗೆಂದು ಕಂತುಬಂದರೂ, ಅವರ ಭೇಟಿಯ ಮುಖ್ಯ ಗುರಿಯು ಮಿಲಿಟರಿಗೆ ಸಂಬಂಧಿಸಿದ್ದು; ಸಂಗ್ರಾಮ ಕಾರ್ಯಕ್ರಮವು ಯಶಸ್ವಿಯಾಗುವಂತೆ ಮಾಡುವುದಕ್ಕೆ ಸಂಬಂಧಿಸಿದ್ದು. ಸಂಗ್ರಾಮದಲ್ಲೀಗ ಅತ್ಯುಗ್ರವಾದ ಪರಿಸ್ಥಿತಿಯುಂಟಾಗಿದೆ. ಇಂತಹ ಸಮಯದಲ್ಲಿ ಭಾರತದ ರಕ್ಷಣೆಯಲ್ಲಿ ಮುಖ್ಯವಾದ ಬದಲಾವಣೆಯುಂಟಾಗುವಂತೆ ಮಾಡಲಿಕ್ಕಾಗಿಯೇ ಸರ್ ಕ್ರಿಪ್ಸರವರು ಬಂದಿರುವುದು. ಭರತಖಂಡವಲ್ಲಿ ಪ್ರಜಾತ್ರಭುತ್ವ ಸ್ಥಾಪನೆಯಾಗದೇ ಇರುವುದರಿಂದ ಸಿವಿಲ್ ಆಡಳಿತವು ಕಟ್ಟು ಹೋಗುತ್ತಿರುವೆಯೆಂದು ಶ್ರೀ ಚರ್ಚಿಲ್ಲರು ಮನಗಂಡಿರುವದರಿಂದ ಸರ್ ಕ್ರಿಪ್ಸರವರನ್ನು ಕಳಿಸಿದರೆಂದು ಭಾವಿಸಬಾರದು. ಭರತಖಂಡಕ್ಕೆ ಉಂಟಾಗಿರುವ ವಿಪತ್ತನ್ನು ಕಡಮೆಮಾಡಿ ಮಲಯಾ ಬರ್ಮಾಗಳಂತೆ ಸುಲಭವಾಗಿ ಜಪಾನಿನ ಬಾಯಿಗೆ ಬೀಳದಂತೆ ಮಾಡುವುದೇ ಅವರ ಭೇಟಿಯಉದ್ದಿಶ್ಯ.

ಈಗಿನ ಪ್ರಶ್ನೆ ಯೇನು?

"ನ್ಯಾಯವಾದ ರಾಜಕೀಯ ಒಪ್ಪಂದಕ್ಕೆ ಬರುವ ದೃಷ್ಟಿಯಿಂದ ಈಗ ಎಷ್ಟು ಕೇಳಬೇಕು? ಎಷ್ಟನ್ನು ತೆಗೆದುಕೊಳ್ಳಬೇಕು? ಎಂಬುದು ಈಗಿನ ಪ್ರಶ್ನೆಯಲ್ಲವೇ ಅಲ್ಲ. ಬ್ರಿಟ್ಟಿನ ವಿಚಾರದಲ್ಲಿ ಭಾರತೀಯರಿಗಿರುವ ದ್ವೇಷ ಭಾವನೆಯನ್ನು ಅವರು ಮರೆಯುವಂತೆ ಮಾಡುವುದು ಹೇಗೆ? ಮಿಲಿಟರಿ ಪರಿಸ್ಥಿತಿಯ ವಿಚಾರದಲ್ಲಿ ಅನರಲ್ಲಿ ಉಂಟಾಗಿರುವ ಬಿರಿದಾಸೀನ್ಯವನ್ನು ಹೋಡೆದಟ್ಟುವುವೆಂತು? ಇದೇ ಈಗಿನ ಪ್ರಶ್ನೆ. ಈಗ ಸಂಭವಿಸಿರುವ ವಿಪತ್ತನ್ನು ನಿವಾರಿಸಬೇಕಾಗಿದ್ದರೆ ಹಳೆಯ ಸಾಮ್ರಾಜ್ಯ ಪ್ರಾಹಿಭಾವನೆ ಹೋಗಬೇಕೆಂಬುದನ್ನು ಬ್ರಿಟ್ಟನ್ನು ತಿಳಿಯುವಂತೆ ಮಾಡುವುದು ಹೇಗೆ? ಮತ್ತು ಆತ್ಮರಕ್ಷಣೆಯ ಜನಾಬ್ದಾರಿಯನ್ನು ಹೊರಲು ಈಗ ಹಿಂದುಮುಂದು ನೋಡಲಾಗದೆಂಬುದನ್ನು ಭಾರತೀಯರು ತಿಳಿಯುವಂತೆ ಮಾಡುವುದು ಹೇಗೆ? ಕೋಮುವಾರು ಕಿತ್ತಾಟಗಳನ್ನೂ ಮತ್ತು ಭಯಸಂಶಯಗಳನ್ನೂ ಶಾಂತಿ ಸ್ಥಾಪನೆಯಾಗುವವರೆಗೆ ಒತ್ತಟ್ಟಿಗಿಟ್ಟಿರಬಹುದು. ದುಷ್ಪಶಕ್ತಿಯು ಕಾದು ನೋಡುವುದಿಲ್ಲ; ನಮ್ಮ ಭಿನ್ನಾಭಿಪ್ರಾಯಗಳಿಂದ ಅದು ಲಾಭ ಹೊಂದುತ್ತದೆ.

ಸರ್ ಕ್ರಿಪ್ಸರವರು ಇಲ್ಲಿಗೆ ಬಂದಿರುವುದರ ಉದ್ದಿಶ್ಯ ಕುರಿತು ನನಗೆ ತೋಚಿದುದನ್ನು ವಿವರಿಸಿದ್ದೇನೆ. ಜನರಲ್ಲಿರುವ ದೇಶಾಭಿಮಾನವನ್ನು ಕೆರಳಿಸದೇ ಹೋದರೆ ಎಲ್ಲ ವಿಫಲವಾದಂತೆಯೆ. ಚಿರಸ್ಥಾಯಿಯಾದ ಆಡಳಿತ ವ್ಯವಸ್ಥೆಯೊಂದನ್ನು ನೆಲೆಗೊಳಿಸುವಾಗ ವಿಮರ್ಶಿಸಬೇಕಾದುದನ್ನೆಲ್ಲ ಈಗಿನ ಸಮಯದಲ್ಲಿ ಗಮನಕ್ಕೆ ತೆಗೆದುಕೊಳ್ಳಲು ಅಸಾಧ್ಯ.

ಸಮಯಬಂದರೆ ಎರ್ಡೆಂಡು ಮಿತ್ರರಾಷ್ಟ್ರಗಳನವೊಡನೆ ಸೇರಿಕೊಳ್ಳುವುದೆಂದೂ ಡೆವೆಲರಾರನಾ ಜವರ್ನಿಯು ಮಿತ್ರರಲ್ಲವೆಂದೂ ಕಾನಡಾದೇಶದ ಪತ್ರಿಕೆಯೊಂದು ಹೇಳುತ್ತದೆ.

ರಷ್ಯಾದೇಶದಲ್ಲಿ ಜಪಾನಿನ ರಾಯಭಾರಿಗಳಾದ ಟಾಟೆಕಾರವರು ರಷ್ಯಾದ ವಿದೇಶಾಂಗ ಸಚಿವರನ್ನು ಕಾಣಲು ಕುಬಷೀವ ನಗರದಿಂದ ಮಾಸ್ಕೋಕ್ಕೆ ತೆರಳಿದ್ದಾರೆ.

NEO-MADRAS CAFE, BELLARY.

ನಿಯೋ ಮದ್ರಾಸ್ ಕೆಫೆ, ಬಳ್ಳಾರಿ.

Best boarding & Lodging House
Palatial & enviable quarters, Well ventilated rooms with electric lights.
Pure Ghee preparations.
Tea-party & Dinner arrangements undertaken at short notice.
Satisfaction guaranteed.
Service our speciality.

★

ಮನೋಹರ ಮತ್ತು ಆಕರ್ಷಣೀಯ ವಾಸಸ್ಥಾನ.
ಗಾಳಿ ಬೆಳಕುಗಳಿಂದ ಕೂಡಿದ ವಿಶಾಲ ಕೋಣೆಗಳು.
ರೈಲ್ವೆ ಸ್ಟೇಷನ್-ಬಸ್‌ಸ್ಟಾಂಡ್ ಸಮೀಪ.
ಸಕಲ ವ್ಯವಹಾರಗಳ ಕೇಂದ್ರ ಸ್ಥಳ.
ಶುದ್ಧ ತುಪ್ಪದಲ್ಲೇ ಮಾಡಿದ ಫಲಹಾರ ಸಾಮಗ್ರಿಗಳು.
ಸ್ವಲ್ಪಾವಧಿಯ ಸೂಚನೆಯಿಂದ ಭೋಜನ-ಟೀಪಾರ್ಟಿ ಏರ್ಪಡಿಸುತ್ತೇವೆ.
ವಿನಯಶೀಲರಾದ ಸೇವಕ ವರ್ಗ.

When you visit Bellary Do go to NEO MADRAS CAFE the best Boarding & Lodging house

ಬಳ್ಳಾರಿಗೆ ಬಂದಾಗ ಇಲ್ಲಿಳಿಯಲು ಮರೆಯ ಬೇಡಿರಿ.

222

ಭಾರತದ ಆಸ್ತಿ—ಪಾಸ್ತಿಗಳನ್ನು

ಸುಡಬೇಡಿರಿ—ನಾಶಮಾಡಬೇಡಿರಿ.

ಸರಕಾರಕ್ಕೆ ಗಾಂಧೀಜೀಯವರ ಸೂಚನೆ.

ಒಂದುವೇಳೆ ಅಂತಹ ಸಮಯವೊ ದಗಿದರೂ ಕೂಡ ಶತ್ರುಗಳ ಕೈಗೆ ಯಾವ ವಸ್ತುವೂ ಬೀಳದಂತೆ ನಾಶಗೊಳಿಸುವ ನೀತಿಯನ್ನು ಭರತಖಂಡಕ್ಕೆ ಅನ್ವಯಿಸ ಆಗುವುದಿಲ್ಲವೆಂಬುದಾಗಿ ಇಂಡಿಯಾ ಸರ್ಕಾರದವರು ಸ್ಪಷ್ಟವಾಗಿ ಹೇಳುವುದಾ ದರೆ ಜನರಲ್ಲಿ ಉಂಟಾಗಿರುವ ಭಯಸಂಶ ಯಗಳು ಬಹಳ ಮಟ್ಟಿಗೆ ನಿವಾರಣೆಯಾ ಗುವುವೆಂದು ಗಾಂಧೀಜಿಯವರು ಹರಿಜನ್ ಪತ್ರಿಕೆಯಲ್ಲಿ ಲೇಖನ ಬರೆದಿದ್ದಾರೆ. ಭಾರ ತದ ವಿಚಿತ್ರ ಪರಿಸ್ಥಿತಿಯು ದೆಸೆಯಿಂದ ಈ ವಸ್ತುವಿನಾಶದ ನೀತಿಯನ್ನು ಇಲ್ಲಿ ಆಚರಿ ಸಿಕೆಗೆ ತರಲಾಗದೆಂದು ಅವರು ಹೇಳುತ್ತಾ ರೆ. ಈ ನೀತಿಗೆ ವಿರುದ್ಧವಾಗಿ ಭಾರತದ ಲ್ಲಿ ಸಾರ್ವಜನಿಕಾಭಿಪ್ರಾಯವು ವ್ಯಕ್ತಪ ಡುತ್ತಿರುವುದನ್ನು ಕಂಡು ಮಹಾತ್ಮರು ತೃಪ್ತಿಯನ್ನು ಸೂಚಿಸಿದ್ದಾರೆ.

ಸನವೂ ಇದರ ವಿಚಾರಣೆ ನಡೆಸಲಾರದು, ಅಸಮರ್ಥನೀಯವಾದ ಬುದ್ಧಿಪೂರ್ವಕ ವಲ್ಲದ ಅಪರಾಧಕ್ಕಾಗಿ ಒಬ್ಬ ತರುಣನನ್ನು ಗಲ್ಲಿಗೇರಿಸುವದು ನ್ಯಾಯದೇವತೆಯ ವಿ ಡಂಬನವೆ ಸರಿ, ಆದುದರಿಂದ ಸಾರ್ವ ಜನಿಕರು ವತ್ತು ಪತ್ರಿಕೆಗಳು ಈ ಶಿಕ್ಷೆ ಯನ್ನು ಕಡಿಮೆ ಮಾಡಿಸುವದಕ್ಕಾಗಿ ಪ್ರಯ ತ್ನಿಸುತ್ತಿರುವದಕ್ಕಾಗಿ ನನಗೆ ಸಂತೋಷ ವೆನಿಸುತ್ತದೆ ಸಾರ್ವಜನಿಕರ ಈ ಬಿನ್ನ ಹಕ್ಕೆ ಸರಕಾರದವರು ಮನ್ನಣೆ ಕೊಡುವ ರೆಂದು ನಂಬಲಿಗಿವೆ ಮ ಗಾಂಧಿ. [ಮದ್ರಾಸ್ ಗವರ್ನರರು ಗೋಪಾಲನರ ಶಿಕ್ಷೆಯನ್ನು ಕಡಿಮೆ ಮಾಡಿದರು.]

ಶ್ರೀ ಗೋಪಾಲನ್ ನಾಂಬಿಯಾರನ್ನು ಗಲ್ಲಿಗೇರಿಸುವುದು ನ್ಯಾಯವಲ್ಲ.

ಶ್ರೀ ಗೋಪಾಲನ್ ನಾಂಬಿಯಾರನು ಒಬ್ಬ ದೇಶಭಕ್ತ ಯುವಕನು ಸಿಟ್ಟಿನ ಭರ ದಲ್ಲಿ, ಆವನು ಮಲಬಾರದಲ್ಲಿ ಒಂದು ಸಭೆ ಯಲ್ಲಿ ಸಬ್ ಇನಸ್ಪೆಕ್ಟರೊಬ್ಬರ ಮೇಲೆ ನಿರಿಹೋಗಲು ಜನ ಸಮೂಹವನ್ನು ಉದ್ರೇಕಿಸಿದನೆಂದು ಅವನಮೇಲೆ ಆರೋ ಪಿಸಲಾಗಿತ್ತು. ದೈವವಶದಿಂದ ಆ ಸಬ್ ಇನಸ್ಪೆಕ್ಟರು ಮರಣ ಹೊಂದಿದರು, ಮದ್ರಾಸ ಹಾಯ ಕೋರ್ಟಿನವರು ನಾಂಬಿಯಾರಿಗೆ ದೇ ಹಾಂತ ಶಿಕ್ಷೆ ವಿಧಿಸಿರುವರು, ಹಾಯ ಕೋರ್ಟಿನ ಮುಂದೆ ಬಂದಸಾಕ್ಷಿ ಪುರಾವೆ ಗಳಿಂದ ಅವರು ಕೊಟ್ಟ ನಿರ್ಣಯವು ನ್ಯಾಯವಾಗಿರಬಹುದು ಆದರೆ ಸರಕಾರ ದವರು ಈ ದೇಹಾಂತ ಶಿಕ್ಷೆಯನ್ನು ತಮ್ಮ ಅಧಿಕಾರವನ್ನಿ ರದ್ದುಪಡಿಸುವಂಥ ಒಂದು ಸಂದರ್ಭವಿದು, ಬುದ್ಧಿಪೂರ್ವಕವಾಗಿ ನಾಡಿದ ಕೊಲೆ ಇದಲ್ಲ, ನಾವೀಗ ನಮ್ಮ ಸುತ್ತು ಮುತ್ತಲೂ ನರಮೇಧದ ದೃಶ್ಯವನ್ನು ನೋಡುತ್ತಿರುವೆವು, ಯಾವ ನ್ಯಾಯಾ

ಕರ್ನಾಟಕದಲ್ಲಿ ಶಾಂತಿದಳಗಳ ಸ್ಥಾಪನೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಪರವಾಗಿ ಪ್ರಾಂತೀಯ ಸ್ವಯಂಸೇವಕ ಉಪಸಮಿತಿ ಯವರು ಶಾಂತಿದಳಗಳ ಘಟನೆಯನ್ನು ತಯಾರಿಸಿ ನಗರ ಮತ್ತು ಗ್ರಾಮಗಳಲ್ಲಿ ಎಂಥಾ ದಳಗಳಿರಬೇಕೆಂಬುದನ್ನು ಸ್ಪಷ್ಟ ಪಡಿಸಿರುತ್ತಾರೆ ಕಾಂಗ್ರೆಸ್ ಕಾರ್ಯ ಕರ್ತರು ಧಾರ್ವಾಡದ ಕಾ. ಪ್ರಾಂತೀಯ ಕಾಂಗ್ರೆಸ ಸಭೆಯವರೊಡನೆ ಪತ್ರವ್ಯವ ಹಾರ ನಡೆಸಿ ಮಾಹಿತಿಯನ್ನು ತರಿಸಿ ಕೊಳ್ಳಲು ಸೂಚಿಸಲಾಗಿದೆ.

ತಿರುಗುಪ್ಪ.

ಇದೇ ಚಿತ್ರಭಾನು ಸಂವತ್ಸರದ ನವಯುಗಾರಂಭದಲ್ಲಿ 17.3.42 ಇಲ್ಲಿಯ ಪ್ರಜಾಜನರು "ಶ್ರೀ ವೆಂಕಟೇಶ್ವರವಾಚನಾ ಲಯ" ಎಂಬ ಹೆಸರಿನಿಂದ ಚಿಕ್ಕ ಪುಸ್ತಕ ಭಂಡಾರದಿಂದೊಡಗೂಡಿದ ಒಂದು ವಾಚ ನಾಲಯವನ್ನು ತೆರೆದರು.

ಇಲ್ಲಿಯ ತಹಸೀಲ್ದಾರರಾದ E.S. ನಾಗೇಶನ್‌ರವರು ಉದ್ಘಾಟನಾಸಮಾರಂಭ ದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಡಾಕ್ಟರ್ ಮಾರ್ಕಂಡು, ಸ್ಪೆಷಲ್ ಆಫೀಸರು ಪಿ. ರಾಜಾರಾಯರು, ಸಬ್ ರಿಜಿಸ್ಟ್ರಾರ್ ಸೂರ್ಯನಾರಾಯಣರಾಜು, ಸರ್ಕಲ್ ಇನಸ್ಪೆಕ್ಟರು ಶ್ರೀನಿವಾಸಾಯರು, ದೇಶ ನೂರು ರಾಮರೆಡ್ಡಿಯವರು, ಬಲಕಂದಿ ಓಬಳ ಶಾಸ್ತ್ರಿಯವರು, ಮುಂತಾಗಿ ಅನೇಕ ಮಹನೀಯರು ವಾಚನಾಲಯದ ಅವಶ್ಯ ಕತೆಯ ಬಗ್ಗೆ ಯೆಥೋಚಿತ ಭಾಷಣಗಳನ್ನು ಮಾಡಿದರು.

ಶ್ರೀ ವಿರೂಪಾಕ್ಷುರವರ ವೀರಣ್ಣನವರು ವಾಚನಾಲಯಕ್ಕಾಗಿ ಯೋಗ್ಯ ವಸತಿ ಗೃಹ ವನ್ನು ಧರ್ಮಾರ್ಥವಾಗಿ ಒದಗಿಸಿದರು. ಊರೊಳಗಿನ ಅನೇಕ ಮಂದಿ ಮಹನೀಯರು ಸದಸ್ಯರಾಗಿ ಸೇರಿದ್ದಲ್ಲದೆ ಈ ಕೆಳಗಿನ ಒಂದು ಕಾರ್ಯಕಾರಿಣಿಮಂಡಲವು ಸ್ಥಾಪಿತವಾಯಿತು.

ಜತೆ ಕಾರ್ಯದರ್ಶಿಗಳು:-

ಯಂ. ಹನುಮಂತಪ್ಪ, ಕೆ. ವೀರಣ್ಣ

ಅಧ್ಯಕ್ಷರು:-ಬಿ. ಕೆ. ಮಾರ್ಕಂಡು.

ಉಪಾಧ್ಯಕ್ಷರು:-ವೀರನರಸಿಂಹರೆಡ್ಡಿ,

ಕೋಶಾಧಿಕಾರಿ:-ತಿರ್ಥಾಲ್ ತೇಟರು,

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.



ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿ ಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವ ಸ್ತುವಿನ ಮೇಲೆ ಇರುತ್ತವೆ. ನಮ್ಮ ಹೆಸರಿ ರುವ ಹಳೆಯ ವಸ್ತುಗಳನ್ನು ಕೊಟ್ಟು ನೂ ತನ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ಬರ್ಮಾದಲ್ಲಿ - ಈಚನ

ಜಪಾನರು ಒಂದು ಅಂತಜಲ್ಲಿ ಬ್ರಿಟಿಷ್ ಮತ್ತು ಭಾರತೀಯ ಯೋಧರಿಗಿಂತ ಮೇಲೆನಿಸಿರುವುದು ವ್ಯಕ್ತಪಟ್ಟಿದೆ. ಅವರು ಆಹಾರಕ್ಕಾಗಿ ಹೆಚ್ಚು ತಪಶ್ಚರ್ಯ ಪಡದೆ ಎಲ್ಲೆಂದರೆ ಅಲ್ಲಿದ್ದು ಹೋರಾಡಬಲ್ಲರು. ನಮ್ಮ ಸೇನೆಗಳಿಗಾದರೋ ಅಪಾರ ವಸ್ತುಗಳು ಸರಪರಾಜಾಗಬೇಕು. ಆದ್ದರಿಂದ ಜಪಾನ್ ಪಡೆಗಳು ಎಲ್ಲಿಬೇಕಾದರೂ ಸುಲಭವಾಗಿ ಚಲಿಸಬಲ್ಲವು. ಈ ವಿಚಾರದಲ್ಲಿ ಚೀನರು ಜಪಾನರಿಗೆ ಸಮಾನರು. ಶತ್ರುಗಳಿಗೆ ಎಟುಹಾಕಲು ಕಾತುರರಾಗಿರುವ ಮತ್ತು ಮಾರ್ಷಲ್ ಚಿಯಾಂಗ್ ಕೈಷೇಕ್ ರವರು ತನ್ನ್ಮಲ್ಲಿಟ್ಟಿರುವ ನಂಬಿಕೆಯನ್ನು ಸಾರ್ಥಕಪಡಿಸಬೇಕೆಂದು ದೃಢಸಂಕಲ್ಪ ಮಾಡಿರುವ ಚೀನರು ಈಗ ಜಾಪಾನರಿಗೆ ಬಿಸಿ ತೋರಿಸಲಾರಂಭಿಸಿದ್ದಾರೆ. ಜಪಾನರೀಗ ಮುಖ್ಯವಾಗಿಟಂಗೂ ಕ್ಷೇತ್ರದ ಮೇಲೆಯೇ ತಮ್ಮ ಗಮನವನ್ನೆಲ್ಲ ಕೇಂದ್ರೀಕರಿಸುವಂತಿದೆ. ಅಂದರೆ ಇದೇ ಸಮಯದಲ್ಲಿ ಅವರು ಪ್ರೋಂ ಉತ್ತರಕ್ಕೆರುವ ಎಣ್ಣೆ ಗಣಿಗಳನ್ನು ಹಿಡಿಯುವ ಉದ್ದಿಶ್ಯದಿಂದ ಪ್ರೋಂ ಕಡೆಗೆ ನುಗ್ಗುವ ಸಂಭವವೂ ಉಂಟು. ಕೇಂದ್ರ ಬರ್ಮಾದ ಒಂದು ಕಡೆ ಜಪಾನರು ಉಗ್ರಮುತ್ತಿಗೆ ನಡೆಸಿದ ಕಾರಣ ಬ್ರಿಟಿಷ್ ಆಸ್ತಿಗೆ ಕೊಂಚ ನಷ್ಟವಾಗಿದೆ. ಮಾಂಡಲೆಗೆ ಹೋಗುವ ರಸ್ತೆಯಲ್ಲಿ ಚೀನರು ಶತ್ರುಗಳು ೩ ಶಸ್ತ್ರಬಂಡಿಗಳನ್ನು ನಾಶ ಪಡಿಸಿ 100 ಜನರನ್ನು ಛಾಯಗೊಳಿಸಿ ಕೊಂದರು.

ಟಂಗೂ ಪಟ್ಟಣವು ಆಕ್ರಮಿಸಲ್ಪಟ್ಟಿತೇ ?

ವಾಯುವ್ಯ ಸಯಾಮಿನಲ್ಲಿ ಜಪಾನು ಅಪಾರ ಸೈನ್ಯ ಬಲವನ್ನು ಕೇಂದ್ರೀಕರಿಸಿದೆ ರಸ್ತೆಯೂ ರೈಲ್ವೆ ಮಾರ್ಗವೂ ಬಂದು ಸೇರುವ ಚೀಂಗ್‌ಮೈ ಎಂಬ ನಗರವೇ ಜಪಾನರ ಮುಖ್ಯಮೂಲವಾಗಿದೆ. ಬ್ಯಾಂಗಡಿಯವರೆಗೆ ಜಪಾನರು ರಸ್ತೆಗಳನ್ನು ರಚಿಸಿದ್ದಾರೆ. ದಕ್ಷಿಣದಿಂದ ಜಪಾನರೀಗ ಟಂಗೂ ಕಡೆಗೆ ನುಗ್ಗುತ್ತಿದ್ದಾರೆ ಇದೆಷ್ಟೇ ಕಾಲದಲ್ಲಿ ಆ ನಗರವ ಕಡೆಗೆ ಪೂರ್ವದ ಕಡೆಯಿಂದ ಸಹ ನುಗ್ಗಬೇಕೆಂಬುದು ಅವರ ಉದ್ದಿಶ್ಯವಾಗಿರುವಂತಿದೆ. ಮಾಂಡಲೆಯಲ್ಲಿ ಜಪಾನರನ್ನು ಎದುರಿಸುವುದೇ ಅಲ್ಲದೆ ಪೂರ್ವದ ಕಡೆಯಿಂದ ನುಗ್ಗಲಿರುವ ಶತ್ರುಗಳನ್ನು ಸಹ ಚೀನರು ಎದುರಿಸಬೇಕಾಗಬಹುದು. ಹೀಗಾಗಲೇ ಟಂಗೂ ಪಟ್ಟಣವು ಆಕ್ರಮಿಸಲ್ಪಟ್ಟಿರುವದೆಂದು ಜಪಾನರು ಹೇಳುತ್ತಾರೆ, ಆದರೆ ಲಂಡನ್ ಕ್ಷೇತ್ರಗಳಲ್ಲಿ ಇದು ದೃಢಪಟ್ಟಿಲ್ಲ.

ಬರ್ಮದಲ್ಲೀಗ ಸಾಮ್ರಾಜ್ಯ ಸೇನೆಗಿಂತ ಶತ್ರುಬಲವು ಅಧಿಕವಾಗಿದೆಯೆಂದು ಒಪ್ಪಿಕೊಳ್ಳಲಾಗಿದೆ. ಆದರೆ ಚೀನಾ ಯೋಧರು ಬರ್ಮಕ್ಕೆ ಬಂದಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಲಾಗಿದೆ. ಚೀನಾ ಯೋಧರೆಲ್ಲ ಅಲಸಲ್ಪಟ್ಟ ಹುರಿಯಾಳುಗಳು ದೀರ್ಘಕಾಲ ಜಪಾನರೊಂದಿಗೆ ಹೋರಾಡಿ ಅನುಭವ ಪಡೆದಿಂತಕ್ಕಂತಹವರು.

ಚೀನ—ಜಪಾನು ಶಾಂತಿಯಾದೀತೇ?

ಜಪಾನು ಚೀನದ ಮುಂದೆ ಖಚಿತವಾದ ಶಾಂತಿ ಸಲಹೆಗಳನ್ನು ಇಡಬಹುದೆಂದು ಲಂಡನ್ನಿನ ರಾಜಕೀಯ ಕ್ಷೇತ್ರಗಳಿಗೆ ಸುದ್ದಿ ಬಂದಿದೆ. ಈ ಸಲಹೆಯ ವಿವರಗಳನ್ನು ಈರೀತಿ ಸಂಗ್ರಹಿಸಲಾಗಿದೆ

1 ವ್ಯಾಪ್ತಿಯಲ್ಲಿ ಜಪಾನು ಸ್ಥಾಪಿಸಲಿರುವ ಹೊಸ ವ್ಯವಸ್ಥೆಯೊಂದಿಗೆ ಮಾರ್ಷಲ್ ಚಿಯಾಂಗ್ ಕೈಷೇಕರು ಸಹಕರಿಸತಕ್ಕದ್ದು. ಜಪಾನು ಚಿಯಾಂಗ್‌ರವರ ಸರಕಾರವನ್ನು ಅಂಗೀಕರಿಸತಕ್ಕದ್ದು.

2 ಈಗ ಜಪಾನರು ಆಕ್ರಮಿಸಿರುವ ಪ್ರದೇಶಗಳನ್ನು ಕೆಲವು ಬಂದರುಗಳು ಹೊರತು ಹಿಂದಕ್ಕೆ ಬಿಟ್ಟುಕೊಡಬೇಕು.

3 ಎಲ್ಲ ಬಂದಿಗಳನ್ನೂ ಜಪಾನು ಬಿಡಗಡೆ ಮಾಡಬೇಕು.

4 ಯಾವ ಕಡೆಯವರೂ ನಷ್ಟ ಪರಿಹಾರಾರ್ಥವಾಗಿ ಹಣಕೊಡಬೇಕಾಗಿಲ್ಲ.

5 ಈ ಎರಡು ದೇಶಗಳಿಗೂ ತಿರಿಗೆ ಸಂಬಂಧವೇರ್ಪಡಬೇಕು.

5 ಚೀನಾ - ಬರ್ಮಾ ಫೆಡರೇಷನ್ ಸ್ಥಾಪನೆಯಾಗಬೇಕು. ಚೀನಾದಲ್ಲಿ ಜಪಾನು ಹಿಡಿಯುವ ಬಂದರುಗಳಿಗೆ ಪ್ರತಿಯಾಗಿ ಚೀನವು ರಂಗೂನ್ ಬಂದರವನ್ನು ಉಪಯೋಗಿಸಿಕೊಳ್ಳತಕ್ಕದ್ದು.

ಇದಕ್ಕೆ ಪ್ರತಿಯಾಗಿ ಚೀನವು ಮಿತ್ರ ಜನಾಂಗಗಳಿಂದ ದೂರ ಸರಿಯಬೇಕು. ರಷ್ಯದೊಂದಿಗೆ ಜಪಾನು ಸಂಗ್ರಾಮವಾರಂಭಿಸಿದರೆ ಚೀನವು ತಟಸ್ಥವಾಗಿರಬೇಕು. ನಾಕಿಂಗ್‌ನಲ್ಲಿ ಸ್ಥಾಪಿತವಾಗಿರುವ ಜಪಾನ್ ಕೈಗೊಂಬೆ ಸರಕಾರಕ್ಕೆ ಅವಮಾನವಾಗದಂತೆ ಮಾತೆಲು 'ಫೆಡರೇಟೆಡ್ ಚೀನಾ' ವ್ಯವಸ್ಥೆಗೆ ಚಿಯಾಂಗ್‌ರವರು ಒಪ್ಪಬೇಕು.

ಈಗ ಶಾಂತಿ ಷರತ್ತುಗಳನ್ನು ಚೀನವು ಏಮರ್ತಿಗೆ ಕೂಡ ತೆಗೆದುಕೊಳ್ಳುವುದಿಲ್ಲವೆಂದು ತಿಳಿಲಾಗಿದೆ.

ಕಾಂಗ್ರೆಸ್ ಸ್ವಯಂಸೇವಕ ದಳಗಳ ಸ್ಥಾಪನೆ

ಹೊಸಪೇಟೆ ಭಾಗದಲ್ಲಿ ಶ್ರೀ ದಳವಾಯಿ ಅಂಬಣ್ಣನವರು ಮಲಪನಗುಡಿ, ಅನಂತಶಯನಗುಡಿ, ಸಂಕಲಾಪುರ, ಇಂಗಳಗಿ ಈ 4 ಊರುಗಳಲ್ಲಿ ಶಾಂತಿಸ್ವಯಂಸೇವಕ ದಳಗಳನ್ನು ಸ್ಥಾಪಿಸಿರುವರು. ಮಲಪನಗುಡಿಯಲ್ಲಿ ಶ್ರೀ ಹನುಮಂತರಾಯರೂ, ಅನಂತಶಯನಗುಡಿಯಲ್ಲಿ ಶ್ರೀ ವೆಂಕೋಬರಾಯರೂ ದಳಾಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ.

ಬಳ್ಳಾರಿ ಜಿಲ್ಲಾ ಜೋಡೀಸ ಸ್ತುತ್ಯಕಾರ್ಯ

ಹಡಗಲಿ ತಾಲೂಕು ಮುತ್ತಳೂರು ಹರಗೋಲು ಘಾಟನಲ್ಲಿ ಕಾಲು ಹೊಳೆ ಆಡಾಗ ಕಾಯಿದೆ ವಿರುದ್ಧ ಸುಂಕ ವಸೂಲ್ಮಾಡುವ ವಿಷಯ ಗೌರವ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಶಿ. ವೆ ದೇಶಾಯಿಯವರು ಜೋಡಿಸಿನವರ ಮತ್ತು ಪೋಲೀಸಿನವರ ಆವಗಾಹನೆಗೆ ತರಲು ಸದ್ರಿ ಅಪಾದನೆಯ ಮೇಲೆ ಈ ಒಳಗಾಗಿ ಭಾಗವಹಿಸಿದ್ದ ಗುತ್ತೆಯನ್ನು ರದ್ದು ಮಾಡಿ ಪುನಃ ಯಾಲಾಂ ಹಾಕಬೇಕೆಂದೂ ತಾ॥ 20-3-42ರಲ್ಲಿ ಜರುಗಿದ ಮಾಸಿಂಗಿನಲ್ಲಿ ಸರ್ವಾನುಮತದಿಂದ ತೀರ್ಮಾನಿಸಿರುತ್ತಾರೆ.

ಗಾಂಧಿನಗರದ ಪ್ರಾಥಮಿಕ ಪಾಠಶಾಲೆ ಕೋರ್ಟು ವ್ಯವಹಾರ

ಈ ಶಾಲೆಯಲ್ಲಿ ಕೆಲಸಮಾಹುತ್ತಿದ್ದ ಶ್ರೀ ರಾಮಸ್ವಾಮಿ ಎಂಬ ಸಹೋಪಾಧ್ಯಾಯರು ಮುಖ್ಯೋಪಾಧ್ಯಾಯ ಮತ್ತು ನೇನೇಜರಾದ ಅನಂದ ತೀರ್ಥಾಚಾರ್ಯರ ಮೇಲೆ ತಮಗೆ ಸಲ್ಲಬೇಕಾದ ಗ್ರಾಂಟು ಹಣ ಬಂದಿಲ್ಲವೆಂದು ಕೋರ್ಟು ವ್ಯವಹಾರ ಹೂಡಿದ್ದರು. ಅಡಿಷನಲ್ ಡಿಸ್ಟ್ರಿಕ್ಟ್ ಮುನ್ಸೀಫರು ಇದನ್ನು ಹೊಡೆದು ಹಾಕಿ (Dismiss) 1-1-41 ರಿಂದ 6 1-41 ರ ವರೆಗೆ ಕೆಲಸ ಮಾಡಿದ ಬಾಬ್ತು 2 11 6 ಕೊಡತಕ್ಕದ್ದೆಂದು ತೀರ್ಪು ಕೊಟ್ಟರು. ಪ್ರತಿವಾದಿಗಳಿಗೆ ನಾವಿಗಳು ಕೋರ್ಟು ಖರ್ಚು ಕೊಡಬೇಕು.

—ಪಂಜಾಬಿನ ಪ್ರಧಾನರಾದ ಸರ ಸಿಕಂದರರು ಕಾಂಗ್ರೆಸ್ ಅಧ್ಯಕ್ಷರೊಡನೆ ಹಿಂದೂ-ಮುಸ್ಲಿಂ ಸಮಸ್ಯೆ ಕುರಿತು ಚರ್ಚೆ ನಡೆಸುತ್ತಿರುವರು.

224



ನಿಮ್ಮ ಉಪ್ಪಿನಕಾಯಿಯು ಚೆನ್ನಾಗಿರಬೇಕೆಂದರೆ
ಇವರ A.S. ಬ್ರಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಉಪ್ಪಿನಕಾಯಿಯು ಮೆತ್ತಗಾಗುವುದಿಲ್ಲ
,, ಮುಗ್ಗು ಯಾ ಬೂಜು ಹಿಡಿಯುವುದಿಲ್ಲ
,, ಹುಳಿವಾಸನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಏಳದೆ
ಅಮಿತವಾದ ರುಚಿಯನ್ನುಂಟು ಮಾಡುವುದು.

A. S. ಟೀಲನ್ನು ಗಮನಿಸಿ, ಕೊಳ್ಳಿರಿ. ಮೋಸಹೋಗ ಬೇಡಿರಿ

ದೊರೆಯುವ ಸ್ಥಳ- 1) ಎಂ ಪುಟ್ಟೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ಏ ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

Visit Royal Cafe
Near Royal Picture Palace
Royal Cafe is ROYAL.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ಕಂಪಾಗಿಡಲು ಅನುವಾಗುವ ಕಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೋಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮ ಪ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦
ಕನ್ನಡ ದಶೋಪನಿಷತ್ತುಗಳು	೦—೯—೦
ವಿವಾಹವಿಧಿ ಬೋಧೆ	೦—೪—೦
ಸುಮತಿ ಶತಕ	೦—೧—೦

ಅಂಚೆ ವೆಚ್ಚ ಪ್ರತಿಕ ವ್ಯಾಪಾರಗಳಿಗೂ ಹೆಚ್ಚು ಪುಸ್ತಕ ಕೊಳ್ಳುವವರಿಗೂ ಧಾರಾಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮಜ್ಜೆಂಟು, ಬಳ್ಳಾರಿ.

BAND HINGOOL.

Aphrodisiac, impotency can be completly cured by its confirmed use of 40 days. Also it is efficacious for Rheumatism, Lumbago, Bronchitis, Asthma, Paralysis etc., Dose one to three grains daily, Write for other Particulars

Agent:- **Calcutta Ayurvedic Pharmacy, Bellary.**

ಬಂದ ಹಿಂಗೂಲ.

ಈ ದಿನದ ಸೇವನೆಯಿಂದ ಪುಷ್ಟಿಯಂ, ಧಾತು ವೃದ್ಧಿಯೂ ಆಗಿ, ನಪುಂಸಕತ್ವವು ನಿವಾರಣೆಯಾಗುವುದು. ಉಷ್ಣವಾಯು, ಬೊಂಕೆ ಬೊಕ್ಕೆ ಕೆವ್ಮ - ಉಬ್ಬಸ - ಪಾರ್ಶ್ವವಾಯು ಇವುಗಳಿಗೆ ಅತ್ಯಂತ ಶ್ರೇಷ್ಠ ಮತ್ತು ಗುಣಕಾರಿ ಔಷಧ. ದಿನಕ್ಕೆ ಒಂದರಿಂದ ಮೂರು ಗ್ರೇನುಗಳು ತೆಗೆದುಕೊಳ್ಳಬೇಕು. ಇತರ ವಿವರಗಳಿಗೆ ಬರೆಯಿರಿ.

ವಿಜಂಟ್ಸ್:-
ಕಲ್ಕತ್ತಾ ಆಯುರ್ವೇದಿಕ ಫಾರ್ಮಸಿ, ಬಳ್ಳಾರಿ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....
- ನಿಮಗೆ ಸಮಾಯವು ಬೇಕೋ?

ಹಾಗಾದಲ್ಲಿ ಕೂಡಲೇ ಕೆಳಗಿನವರಲ್ಲಿ ನವಂಗಳನ್ನು ಕಲಿಯಿರಿ ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯಲ್ಲಿ ಪಾಸ್ ಆಗುವ ಪುಸ್ತಕಗಳು. ಕಛೇರಿ ಕಾರ್ಯಂಬರಿ ವಗೈರೆ ಸೊಗಯಿಸಲ್ಪಡುವವು. ನಿಮಗೆ ಎಲ್ಲಾ ವಿಧವಾದ ಮಾಹಿತಿಯು, ವೃತ್ತಾಂತವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್.
ಪ್ರೈಸ್ಮಾಜಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉತ್ತರ ಗಾಂಧೀರಾಷ್ಟ್ರೀಯ ಪತ್ರಿಕೆ.

The Rates of Subscription

Annual
Local 5—0—0
Moffusil 6—0—0

6 Months
Local 1—4—0
Moffusil 2—0—0

ಚಂದಾ ನವರ ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0

೬ ತಿಂಗಳಿಗೆ
ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri _____

_____

_____

Printed at Vittal Press, Car Street Edited & Published by T. B. Keshava Rao. Bellary

Regd. No. M. 3937 ನಂದಿ ಮಾಸದಂ'

ನವಚೈತನ್ಯ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ವರ್ಷ ೧ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೨೮ ಬಳ್ಳಾರಿ ಏಪ್ರೆಲ ೫ನೇ ಆದಿವಾರ ೧೯೪೨. ಟಿ. ಪಿ. ಕೈಲಾಸಂ



226

ಮಹಾತ್ಮ ಗಾಂಧಿಯವರ ಲೇಖನಗಳು. ★

೧. ಆಂಧ್ರ ಪ್ರಾಂತ ನಿರ್ಮಾಣ ಪ್ರಶ್ನೆ:-

ಭಾಷಾವಾರು ಪ್ರಾಂತಗಳ ರಚನೆಗೆ ಕಾಂಗ್ರೆಸ ಮಾನ್ಯತೆ ದೊರಕಿಸ್ಬೇನೆ.

ವಿಜಯನಗರಂ ಮಹಾರಾಜ ಕುಮಾರ ವಿಜಯ ಆನಂದರವರು ಕೆಳಗಿನ ಪತ್ರವನ್ನು ನನಗೆ ಕಳಿಸಿರುವರು.

'ನನ್ನ ವಿಷಯವಾಗಿ ನಿಮ್ಮಲ್ಲಿ ಆದರ ಇಲ್ಲವೆಂದೂ ನೀವು ಪ್ರತ್ಯೇಕ ಪ್ರಾಂತದ ರಚನೆಯಾಗು ಸ್ಥಾಪನೆಗೆ ವಿರುದ್ಧ ಇರುವಿರೆಂದೂ ನನ್ನಲ್ಲಿ ಆಂಧ್ರರಲ್ಲಿ ಬಲವಾದ ಭಾವನೆ ಬೇರೂರಿದೆ. ಆಂಧ್ರ ದೇಶವು ಸಂಪೂರ್ಣವಾಗಿ ಕಾಂಗ್ರೆಸ್ ನಿಷ್ಠ ಪ್ರಾಂತವಾಗಿದ್ದರೂ ಅದಕ್ಕೆ ಎಂದೂ ನಿಮ್ಮ ಆಭೀರ್ವಾದ ದೊರಕಿರುವುದಿಲ್ಲ ಇಕೋಟಿ ಹಲವು ಜನರು ಪ್ರತ್ಯೇಕ ಪ್ರಾಂತ ಕೇಳುತ್ತಿದ್ದರೆ ನೀವು ಅವರಿಗೆ ದಿವಂಗತ ಟಿಳಕ ಮಹಾರಾಜರು ಒಮ್ಮೆ ನುಡಿದಂತೆ 'ಆ ತಪ್ಪು ಮಾಡುವ ಅಧಿಕಾರ' ಕೊಡುವದಿಲ್ಲವೇ ಹೇಗೆ? ನೀವು ಆಂಧ್ರರ ಬಗ್ಗೆ ಆವರುವುಳ್ಳವರಾಗಿಲ್ಲವೆಂಬ ಬಗ್ಗೆ ನನ್ನ ವೇಷದ ಜನರು ಖಂಡಿತ ಅಭಿಪ್ರಾಯ ಮಾಡಿಕೊಂಡಿರುವರು. ನೀವು ಇತ್ತೀಚೆಗೆ ಬನಾರಸ್ಸಿಗೆ ಹೋದ ವ್ಯಕ್ತಿಯನ್ನೂ ಅವರು ನನಗೆ ನೀವು ಆಂಧ್ರ ಚಳವಳಿ ಬಿಟ್ಟುಬಿಡಲು ಆಜ್ಞೆ ಮಾಡಲು ಹೋಗಿದ್ದರೆಂದು ಭಾವಿಸಿರುವರು. ಆಂಧ್ರರ ಸಂಬಂಧದಲ್ಲಿ ನೀವು ತಮಿಳುನಾಡಿನವರಿಗೆ ಎಂದಾದರೂ ಸಲಹೆ ಕೊಟ್ಟಿರುವಿರೋ ಹೇಗೆಂಬುದನ್ನು ಮತ್ತು ಕಳೆದ ಮಂತ್ರಿಮಂಡಳ ಕಾಲದಲ್ಲಿ ಆಂಧ್ರ ಪ್ರಶ್ನೆಯು ನಿಮ್ಮ ಕಡೆಗೆ ವಿಚಾರಕ್ಕೆ ಕಳಿಸಲ್ಪಟ್ಟಿತ್ತೋ ಹೇಗೆಂಬುದನ್ನು ಆಂಧ್ರರು ತಿಳಿಯಬಯಸುತ್ತಾರೆ. ನಿಮ್ಮ ಸಲಹೆ ಕೇಳಲ್ಪಟ್ಟಿದ್ದರೆ ನೀವು ಅವರಿಗೆ ನಿನು ಸಲಹೆ ಕೊಟ್ಟಿರಿ? ಕರ್ನಾಟಕ ಮತ್ತು ಕೇರಳಗಳು ಪ್ರತ್ಯೇಕ ಪ್ರಾಂತಗಳಾಗಲು ಸಾಕಷ್ಟು ಉತ್ಸನ್ನವುಳ್ಳವುಗಳು ಇರಬಹುದು. ಆಂಧ್ರ ಪ್ರಾಂತ ಪ್ರಶ್ನೆಯನ್ನೂ ನೀವು ಅವುಗಳೊಂದಿಗೇ ಕೂಡಿಸಿರೋ ಹೇಗೆ? ಆಂಧ್ರ ದೇಶವು ಸ್ವಾತಂತ್ರ್ಯವಾಗಿರುವದೆಂಬ ವಿಷಯದಲ್ಲಿ ನಿಮ್ಮ ಅಭಿಪ್ರಾಯವು ಏನಿರುವುದು? ಆಂಧ್ರರು ಕಾಂಗ್ರೆಸ್ ಚಳವಳಿಗೆ ಏಕನಿಷ್ಠರಾಗಿ ತಂಟೆ ಕೊಂಡಿದ್ದರಿಂದಲೇ ಟಿಳಕ್‌ರಿಗೆ ಲಭ್ಯವಾದ ಮನ್ನಣೆ ಅವರಿಗೆ ಲಭ್ಯವಾಗಿಲ್ಲವೆಂಬುದು ನಿಜವಿರುವದಿಲ್ಲವೇ? ಸಾಯಮನ್ ಕಮೀಟಿಯವರು ಹಿಂದೆ ಸ್ವಾತಂತ್ರ್ಯಕ್ಕೆ ಒಂದಾಗಿ ಆಂಧ್ರರು ಬೇರೆ ಪ್ರೊತಿನಿಧಿಗಳನ್ನು ಕಳಿಸಿದ್ದರೆ ಅವರ ಇಷ್ಟಾರ್ಥವು ಕೈಗೂಡಬಹುದಾಗಿತ್ತು ಎಂದು ನಿಮಗೆ ಅನಿಸಿರಬಹುದೆ"

ಮಹಾರಾಜ ಕುಮಾರರು ತಪ್ಪು ಜನರ ಕೈಯಲ್ಲಿ ಸಿಗಿಬಿದ್ದಿರುವರೆಂದು ನಾನು ಹೇಳಬಲ್ಲೆ. ಸಾರ್ವಜನಿಕರನ್ನು ನಡಿಸಿಕೊಂಡು ಹೋಗುವ ರೀತಿಯಲ್ಲಿ ಅವರು ತೊಡಗಿರುವುದರಿಂದ ಅವರು ತಮಗೆ ಈ ಎಲ್ಲವನ್ನು ತಿಳಿಸಿದವರ ಜೊತೆಗ್ಯಾಯೋಗ್ಯತೆ ವಿಚಾರ ಮಾಡುವ ತೊಡಗಿಕೆಗೆ ಹೋಗಿಲ್ಲ. ನನಗೆ ಕಂಡಿರುವ ಈ ವಿಷಯಗಳನ್ನು ಯಾವ ಆಂಧ್ರರು ತಿಳಿಸಿದ್ದಾರೆಂಬುದನ್ನು ನಾನು ತಿಳಿಯ ಬಯಸುತ್ತೇನೆ. ನಾನು ಸ್ವತಃ ಆಂಧ್ರ ದೇಶಕ್ಕೆ ಪರಕೀಯನಲ್ಲ. ಶ್ರೀ. ಭ. ಕೊಂಡಾ ವೆಂಕಟಪ್ಪಯ್ಯ, ಶ್ರೀ ಪ್ರಕಾಶಮ್, ಡಾ. ಪಟ್ಟಾಭಿಸೀತಾರಾಮಯ್ಯ, ಶ್ರೀ ಕಾಳೇಶ್ವರರಾವ್ ಮತ್ತು ಶ್ರೀ ಸೀತಾರಾಮಶಾಸ್ತ್ರಿ ಇವರನ್ನು ಮಹಾರಾಜ ಕುಮಾರರು ವಿಚಾರಿಸಲಿ ಕಾಂಗ್ರೆಸ ಮಟ್ಟಿಗೆ ಪ್ರಾಂತಗಳನ್ನು ಭಾಷಾನುಗುಣವಾಗಿ ವಿಭಾಗಿಸುವದಕ್ಕೆ ಕಾಂಗ್ರೆಸದ ಮಾನ್ಯತೆ ಪಡೆದುಕೊಳ್ಳುವಲ್ಲಿ ನಾನು ಪ್ರಮುಖ ಸಹಾಯಕನಾಗಿದ್ದೆನೆಂದು ಅವರು ಹೇಳದಿರಲಾರರು ಸರಕಾರಪರೂ ಈ ಭಾಷಾನುಗುಣ ಪ್ರಾಂತಗಳನ್ನು ಮಾನ್ಯ ಮಾಡದಿರುವದು ಸಾಧ್ಯವಾಗಲೂ ಚಳವಳಿ ನಾಯಕತ್ವವನ್ನು ಬಿಟ್ಟುಬಿಡುವಿರೆನು ತಮಿಳ ನಾಡಿನವರಿಗೆ ಸಲಹೆಯ ಅನ್ಯವಿದ್ದಾಗ ನಾನು ಅವರಿಗೆ ಆಂಧ್ರ ಬೇಡಿಕೆಯನ್ನು ನಿರೋಧಿಸಿರಿಲು ಸಲಹೆ ಕೊಟ್ಟಿದ್ದೇನೆ. ಶ್ರೀ ಸಿ. ರಾಜಗೋಪಾಲಾಚಾರ್ಯರ ನೇತೃತ್ವದಲ್ಲಿ ಕಾಂಗ್ರೆಸ್ ಮಂತ್ರಿಮಂಡಳವು ಆಂಧ್ರವನ್ನು ಪ್ರತ್ಯೇಕ ಪ್ರಾಂತ ಮಾಡಲು ಶಕ್ಯವಿದ್ದಷ್ಟು ಯತ್ನ ಮಾಡಿದ್ದುದು ನನಗೆ ಗೊತ್ತಿದೆ ಮತ್ತೆ ಆಂಧ್ರವು ಇನ್ನೂ ಪ್ರತ್ಯೇಕವಾಗಿರದಿದ್ದರೆ ಅವರ ತಪ್ಪು ಆ ಮಂತ್ರಿಮಂಡಳದ್ದಿರುವದಿಲ್ಲ. ಕರ್ನಾಟಕ, ಕೇರಳ ಮತ್ತು ಆಂಧ್ರ ಇವೆಲ್ಲ ಏಕೆ, ಕಾಂಗ್ರೆಸದಿಂದ ಪ್ರತ್ಯೇಕ ಪ್ರಾಂತವೆಂದು ಮಾನ್ಯವಾದ ಯಾವದೇ ಇತರ ಪ್ರಾಂತಗಳನ್ನೂ ನನಗೆ ವ್ಯತ್ಯಾಸ ಕಾಣಿಸುವದಿಲ್ಲ. ಪ್ರತ್ಯೇಕ ಪ್ರಾಂತವೇನು ನೂನ್ಯಮಾಡಲ್ಪಟ್ಟರೆ ಯಾವುದು ಸ್ವಾವಲಂಬಿಯಾಗಬಲ್ಲದು ಎಂಬುದನ್ನು ಹೇಳುವಷ್ಟು ಯಾವದೇ ಪ್ರಾಂತದ ನಿವರ ನನಗೆ ಸಾಕಷ್ಟು ಇರುವದಿಲ್ಲ. ಬನಾರಸ್ಸಿಗೆ ನಾನು ಹೋಗಿದ್ದರ ಉದ್ದೇಶವು ಯಾವತ್ತೂ ಗೊತ್ತೇ ಇರುವದು. ಅದನ್ನು ಸ್ಪಷ್ಟೀಕರಿಸುವ ಆವಶ್ಯಕತೆ ಇಲ್ಲ. ಮಹಾರಾಜ ಕುಮಾರರು ಕ್ರೀಡಾಪಟುಗಳಿದ್ದು ತನ್ನ ವಿಷಯವಾಗಿ ನಿರಾಧಾರವಾಗಿ ಸೂಚಿಸಲ್ಪಟ್ಟ ಸೂಚನೆಗಳನ್ನು ಅವರು ಗಮನಿಸಿಲ್ಲ ಪಕ್ಷಿಕೊಳ್ಳಕೂಡದು ತಪ್ಪು ಕಾರ್ಯದಿಂದ ವಿರಾವೃತ್ತನಾಗುವುದು - ಪರಾವೃತ್ತಗೊಳಿಸುವದನ್ನು ಗುಣಾತ್ಮಕವಾಗಿ ಮುಖಂಡ ಸಾಗಲು ಯೋಗ್ಯನಾಗಿರುವದಿಲ್ಲ ಮಹಾರಾಜ ಕುಮಾರರಿಗೆ ಈ ಪ್ರಶ್ನೆಗಳನ್ನು ಹಾಕಲು ಪ್ರೇರೇಪಿಸಿದವರು ಈ ಉತ್ತರದಿಂದ ಸಮಾಧಾನ ಹೊಂದುವೆ ಹೋದರೂ ಅವರು ಸಮಾಧಾನ ಹೊಂದುವರೆಂದು ನಾನು ಅಪೇಕ್ಷಿಸಿಲ್ಲ.

೨ ಅಸ್ಪೃಶ್ಯತಾ ಕಳಂಕ.

ಹರಿಜನ ಸೇವಕರೊಬ್ಬರು ಹೀಗೆ ಬರೆಯುತ್ತಾರೆ.

(೧) ಹರಿಜನರನ್ನು ಪ್ರತಿಬಂಧಿಸುವ ಭೋಜನಾಲಯಗಳು ಆಯುರ್ವೇದಾಲಯಗಳು Hair Cutting Saloon ನುಂತಾದವುಗಳು ನನ್ನ ದೇಶದಲ್ಲಿವೆ, ರಾಷ್ಟ್ರೀಯ ಕಾರ್ಯಕರ್ತರು, ಖಾದಿ, ಹಿಂದೀ, ಕಾಂಗ್ರೆಸ್ ಪ್ರಚಾರಕರು ಇಂಥವುಗಳ ಮೇಲೆ ಬಹಿಷ್ಕಾರ ಹಾಕಿ ಹರಿಜನರ ಸಂಕಷ್ಟಗಳನ್ನು ನಿವಾರಿಸಲು ನಿಮ್ಮ ವರ್ಜಸ್ಸನ್ನು ಉಪಯೋಗಿಸಬೇಕೆಂದು ಆಪೇಕ್ಷಿಸಬಹುದಲ್ಲವೇ?

[೨] ಅಖಿಲ ಭಾರತ ಚರಕ ಸಂಘವಲ್ಲಿ ನೇಮಿಸಲ್ಪಟ್ಟ ಅಗಸರಿರುವರು, ತಮ್ಮ ಉದ್ಯೋಗದಲ್ಲಿ ಇವರಲ್ಲಿ ಕೆಲವರು ಅಸ್ಪೃಶ್ಯತೆಯನ್ನು ಪಾಲಿಸುತ್ತಿರುವರು, ಬ್ರಾಹ್ಮಣರು ಮತ್ತು ಸಾಯರರ ಹೊರತು ಉಳಿದವರ ಬಟ್ಟೆಗಳನ್ನು ಒಗೆಯಲು ಒಪ್ಪುವದಿಲ್ಲ, ಕೂಡಿಯನ ಅಗಸರನ್ನು ಅಖಿಲಭಾರತ ಚರಕ ಸಂಘದವರು ತೆಗೆಯವರು, ತಮ್ಮ ಉದ್ಯೋಗದಲ್ಲಿ ಅಸ್ಪೃಶ್ಯತೆಯನ್ನು ಪಾಲಿಸುತ್ತಿರುವ ಅಗಸರನ್ನು ಅಖಿಲ ಭಾರತ ಚರಕ ಸಂಘದವರು ತೆಗೆಯಬಾರದೇಕೆ?

[೯ನೇ ಪುಟವನ್ನು ನೋಡಿರಿ]

ಅಮೆರಿಕಾ ಎಂಜಿಕಂಪನಿಗಳು ಶತ್ರುಗಳೊಡನೆ ರಹಸ್ಯ ಒಪ್ಪಂದವೇ ?

[ಲಂಡನ್ ಸುದ್ದಿ]

ಕೋಟ್ಯಾಂತರ ಅಮೆರಿಕನರು ದಿನ ನಹಿ ತಮ್ಮ ಸ್ವಂತ ಕಾರುಗಳಲ್ಲಿ ಕೂತು ಸಂಗ್ರಾಮ ವಸ್ತು ಕಾರ್ಖಾನೆಗಳಿಗೆ ಕೆಲಸ ಕ್ಕಾಗಿ ತೆರಳುತ್ತಾರೆ. ಈಗ ರಬ್ಬರಿಗೆ ಕೊರ ತೆಯೊದಗಿರುವುದರಿಂದ, ಮೋಟಾರುಟೈರು ಗಳಿಗೆ ಅಭಾವವಾಗಿ ಈ ಕೆಲಸಗಾರರ ಪ್ರಯಾಣಕ್ಕೆ ತೊಂದರೆಯಾಗಿದೆ. ಆ ಮೂಲಕ ಸಂಗ್ರಾಮ ವಸ್ತು ನಿರ್ಮಾಣಕ್ಕೇ ಅಡಚಣೆಯುಂಟಾಗಿದೆ. ಸ್ಟಾಂಡರ್ಡ್ ಎಣ್ಣೆ ಕಾರ್ಖಾನೆಯವರು ಎಣ್ಣೆಯಿಂದ ಕೃತಕ ರಬ್ಬರನ್ನು ಮಾಡುವ ವಿದಾನವನ್ನು ಅಮೆರಿಕನ ಸೈನ್ಯಶಾಖೆಯವರಿಗೆ ತಿಳಿಸದೆ ರಹಸ್ಯವಾಗಿ ಅಮೆರಿಕದ ಶತ್ರುಗಳಾದ ಜರ್ಮನ್, ಇಟಲಿಯನ್ ಮತ್ತು ಜಪಾನ್ ಕಂಪೆನಿಗಳಿಗೆ ತಿಳಿಸಿಬಿಟ್ಟರೆಂಬುದು ಗೊತ್ತಾಯಿತು. ಜನರು ಕೋಪಗೊಳ್ಳಲು ಇದೇ ಕಾರಣ ಸ್ಟಾಂಡರ್ಡ್ ಎಂಜಿ ಕಂಪೆನಿಯವರು 1939 ರಲ್ಲಿಯೇ ಶ್ರೀಮತ್ ಸುಯ್ಯೆರವರಿಗೆ ತಂತಿ ಕಳಿಸಿ, ಅಮೆರಿಕವು ಸಂಗ್ರಾಮದಲ್ಲಿ ಭಾಗವಹಿಸುವ ಸಂಭವನೀಯರುವುದರಿಂದ ಆಗಲೇ ಒಪ್ಪಂದಕ್ಕೆ ಬರುವುದು ಅವಶ್ಯಕನೆಂದು ಹೇಳಿದರು.

ಈ ಅಂಶಗಳನ್ನೆಲ್ಲ ಹೊರಗೆಡಹುತ್ತ ಶ್ರೀ ಥರ್ಮನ್ ಅರ್ನಾಲ್ಡ್‌ರವರು ಸ್ಟಾಂಡರ್ಡ್ ಎಣ್ಣೆ ಕಂಪನಿಯಂತೆಯೇ ಇತರ ಕಂಪೆನಿಗಳು ಸಹಮ್ಯಾಗ್ನೀಸಿಯಂ, ಅಲ್ಯುಮಿನಿಯಂ, ಟಂಗ್‌ಸ್ಟನ್ ಮುಂತಾದ ಸಂಗ್ರಾಮ ವಸ್ತುಗಳ ಸೃಷ್ಟಿಯನ್ನು ಕಡಿಮೆನಾಡಿವೆಯೆಂಬುದಾಗಿ ತಿಳಿಸಿದರು.

ಅಂತೂ ಈ ಎಣ್ಣೆಕಂಪನಿಗಳು ಮಾಡುತ್ತಿರುವ ನಂಜನೆಯ ಕೃತ್ಯಗಳು ಈಗ ಬಯಲಿಗೆ ಬಂದಿವೆ. ಕೂಲಿನಾಕರ ರಲ್ಲಿ ಉಂಟಾಗಿರುವ ತೊಂದರೆಗಳೇ ಈಗಿನ ವಸ್ತು ಸೃಷ್ಟಿಗೆ ಮುಖ್ಯ ಅಡಚಣೆಯಲ್ಲ ನೆಂಬುದನ್ನು ಅಮೆರಿಕನರು ಅರಿಯುತ್ತಿದ್ದಾರೆ.

ಅಮೆರಿಕಾದಲ್ಲಿ ಯುದ್ಧ ಕಾರ್ಯಕ್ಕೆ ಸ್ತ್ರೀಯರು

ಇಷ್ಟರಲ್ಲಿಯೇ ಅಮೆರಿಕದಲ್ಲಿ ಸ್ತ್ರೀಯರನ್ನು ನಿರ್ಬಂಧವಾಗಿ ಸಂಗ್ರಾಮ ಕೆಲಸಕ್ಕೆ ಸೇರಿಸಿಕೊಳ್ಳಬಹುದೆಂದು ಕಾಣಬರುತ್ತಿದೆ. ಆದರೆ ಈ ವಿಚಾರದಲ್ಲಿ ಇಲ್ಲಿನ ಪುರುಷರು ಉತ್ಸಾಹಿಗಳಾಗಿಲ್ಲ. ನಿರ್ಬಂಧವಾಗಿ ಮಿಲಿಟರಿ ಸೇವೆಯನ್ನು ಸ್ತ್ರೀಯರಿಗೆ ಅನ್ವಯಿಸದೆಯೇ ಅನೇಕ ಮಂದಿ ಸ್ತ್ರೀಯರು ಸಂಗ್ರಾಮ ಕಾರ್ಯದಲ್ಲಿ ತೊಡಗಿದ್ದಾರೆ.

ಸಂಗ್ರಾಮ ಶಾಖೆಯಲ್ಲಿ 2,000 ಸ್ತ್ರೀಯರು ಕೆಲಸ ಮಾಡುತ್ತಿದ್ದಾರೆ. ನೌಕಾ ಶಾಖೆಯಲ್ಲಿ 25,000 ಮಂದಿ ಸ್ತ್ರೀಯರಿದ್ದಾರೆ. ಕೈಗಾರಿಕೆ ಕಾರ್ಖಾನೆಗಳಲ್ಲಿರುವ 55 ಲಕ್ಷ ಕೆಲಸಗಾರರಲ್ಲಿ ಹತ್ತನೇ ಭಾಗ ದಷ್ಟು ಸ್ತ್ರೀಯರು ಕಳೆದ ಜನವರಿಯಲ್ಲಿ ಇದ್ದರು. ಕೆಲವು ಕಾರ್ಖಾನೆಗಳಲ್ಲಿ ಶೇಕಡ 50ರಷ್ಟು ಸ್ತ್ರೀಯರೇ ಇದ್ದಾರೆ.

ನ್ಯೂಗಿನಿಯಾದಲ್ಲಿ ಪ್ರವಾಹದ ತೊಂದರೆ

ಜಪಾನರು ಹಿಂದೆ ಸರಿದರು.

ಮೆಲ್‌ಬೋರ್ನ್ ಮಾ 31

ನ್ಯೂಗಿನಿಯಾ ಮತ್ತು ನ್ಯೂಬ್ರಿಟನ್ ಗಳಲ್ಲಿ ಮಿತ್ರವಿಮಾನ ಬಲದ ಕೈಮೇಲಾಗಿದೆ. ಇದು ತಾತ್ಕಾಲಿಕವೇ ಜಪಾನರ ಸಂಗ್ರಾಮ ಕಾರ್ಯಕ್ಕೆ ಬಹಳ ಅಡಚಣೆಯುಂಟಾಗಿದೆಯೆಂದೂ, ಇಲ್ಲಿ ಅದ ನಷ್ಟವನ್ನು ತುಂಬಲು ಜಪಾನರು ಬೇರೆ ಪ್ರೇತ್ರಗಳಿಂದ ವಿಮಾನಗಳನ್ನು ಕರತರಬೇಕಾಯಿತೆಂದೂ ಹೇಳಿದರು. ಆಸ್ಟ್ರೇಲಿಯದ ವಿಮಾನಧ್ವಂಸಕ ಫಿರಂಗಿಗಳು ಹೆಚ್ಚು ಯಶಸ್ವಿಯಾಗಿ ಕೆಲಸಮಾಡುತ್ತಿರುವುದು ಶತ್ರು ಬಾಂಬರುಗಳು ಬಹಳ ಎತ್ತರದಲ್ಲಿ ಹಾರಾಡಬೇಕಾಗಿದೆಯೆಂದೂ ಆದ್ದರಿಂದ ಅವು ಗುರಿಹಿಡಿದು ಬಾಂಬುಗಳನ್ನು ಸುರಿಸುವಂತಿಲ್ಲವೆಂದೂ ತಿಳಿಸಿದರು.

ಲಿಯೋ ಮೇಲೆ ಮುತ್ತಿಗೆ

30ನೇ ತಾ|| ದಿನ ಲಿಯೋ ಮತ್ತು ರಾಮ್ಮುಮೇಲೆ (ನ್ಯೂಗಿನಿಯಾ) ಆಸ್ಟ್ರೇಲಿಯಾ ವಿಮಾನಗಳು ಮುತ್ತಿಗೆ ನಡೆಸಿ, ೨೬೦೦ ಅಡಿ ಎತ್ತರದಿಂದ ಬಾಂಬುಗಳನ್ನು ಪಾಕಿದವು. ಹ್ಯಾಂಗರುಗಳ ಮೇಲೆ ನೇರವಾಗಿ ಬಾಂಬುಗಳು ಬಿದ್ದವು. ಭವನಗಳು ಉರಿಯಲಾರಂಭಿಸಿದವು.

೭ ಶತ್ರು ಬಾಂಬರುಗಳು ಡಾವಿರ್ನ್ ವಿಮಾನ ನಿಲ್ದಾಣವನ್ನು ದಾಟುತ್ತ ಇಂದೇ ತಾ|| ೨೫ ಬಾಂಬುಗಳನ್ನು ಕಾಕಿದವು. ನಷ್ಟವೇನೂ ಆಗಲಿಲ್ಲ.

೯೪ ಮಿತ್ರ ಹಡಗುಗಳು ನೀರುಪಾಲಾದವು.

ನಾಲ್ಕು ತಿಂಗಳಲ್ಲಿ ಆದ ನಷ್ಟ

ವಾಷಿಂಗ್‌ಟನ್ ಮಾ ೩೦

ಡಿಶಂಬರು ೫ ರಿಂದೀಚೆಗೆ ಮಿತ್ರರಾಷ್ಟ್ರಗಳಿಗೆ ಸೇರಿದ ೯೪ ಹಡಗುಗಳನ್ನು ಅಟ್ಲಾಂಟಿಕ್‌ನಲ್ಲಿ ಮುಳುಗಿಸಲಾಗಿದೆ ಅವುಗಳಲ್ಲಿ ೫೧ ಅಮೆರಿಕ ಪೂರ್ವತೀರದಾಚೆ ಮುಳುಗಿದವು.

ಶತ್ರು ಸಬ್‌ಮೆರೀನ್‌ಗಳನ್ನು ನಾಶಮಾಡಲು ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆಯೆಂಬುದನ್ನು ವಿವರಿಸಲು ಸೆನೆಟ್‌ಸಭೆಯ ನೌಕಾವಿಚಾರ ಸಮಿತಿಯವರು ನೌಕಾದಿಪತಿಗಳಾದ ಆ|| ಕಿಂಗ್‌ರವರನ್ನು ಕರೆಸಿದ್ದಾರೆ.

ಮತ್ತೆರಡು ಹಡಗುಗಳ ನಾಶ

ಒಂದು ಅಮೆರಿಕ ಮತ್ತು ಒಂದು ಬ್ರಿಟಿಷು ಸಾಮಾನು ಹಡಗುಗಳನ್ನು ಅಟ್ಲಾಂಟಿಕ್ ತೀರದಲ್ಲಿ ಟಾರ್ಪೆಡೋ ಮಾಡಲಾಯಿತೆಂದು ತಿಳಿಸಲಾಗಿದೆ

ಬಳ್ಳಾರಿ ಪೇಟೆ ಧಾರಣೆ

3-4-42 ಶುಕ್ರವಾರ.

ಭಂಗಾರ ತೊಲ 1ಕ್ಕೆ	52-12-0
ಸಾವರಿನ್	29-0 0
ಬೆಳ್ಳಿ100 ತೊಲ ರೂ.	83-0-0
ಹತ್ತಿ ಮುಂಗಾರಿ 12 ಮಣಕ್ಕೆ	16-0-0
ಹತ್ತಿ ಸ್ಥಾರಂ	25-0-0

ಆಹಾರ ಸಾಮಗ್ರಿಗಳು

ಅಕ್ಕಿ 1 ರೂ. ಗೆ		5½	ಸೇರು
ಬೇಳೆ ,,		5	,,
ಗೋಧಿ ,, ...		6	,,
ಜೋಳ ,,	12 ,,	16	,,
ನವಣೆ ,,		19	,,
ಸಜ್ಜೆ ,,		14	,,
ನೆಲಗಡಲೆ ...		... 1-1.6	
ಮೆಣಸಿನಕಾಯಿ 9 ಮಣ	25 ರಿಂದ	30	ರೂ
ಸಕ್ಕರೆ(ಮಂಡ್ಯ) 9 ಮಣ		36	ರೂ
ಬೆಲ್ಲ ... 12	ರಿಂದ	14	ರೂ
ಚುಮ್ಮಿ ಎಂಣೆ ಡಬ್ಬಿ		4-3-0	

ಜಿಲ್ಲಾಬೋರ್ಡಿನ ಪ್ರಾಥಮಿಕ ಶಾಲೋಪಾಧ್ಯಾಯರ ಇಂಕ್ರಿಮೆಂಟ್

ಒಂದು ಸೂಚನೆ

ಬಳ್ಳಾರಿ ಜಿಲ್ಲಾಬೋರ್ಡಿನಲ್ಲಿ ಅನೇಕ ವರ್ಷಗಳಿಂದಲೂ ದುಡಿಯುತ್ತಿದ್ದು ಸಂಬಳದ ಹೆಚ್ಚಳಕ್ಕೆ (Increment) ಅರ್ಹರಾಗಿರುವ ಉಪಾಧ್ಯಾಯರು ಅನೇಕರಿದ್ದಾರೆ ತಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲವೆಂಬ ಕಾರಣದಿಂದ ಬೋರ್ಡಿನವರು ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಿಗೆ ಇಂಕ್ರಿಮೆಂಟ್ ಕೊಟ್ಟಿಲ್ಲವೆನ್ನುವರು, ಆದರೆ ಹೆಚ್ಚು ಸಂಬಳ ಬಂದು ಹೆಚ್ಚು ಸುಖವಿಲ್ಲದಿರುವ ಸ್ಥಳಗಳಲ್ಲಿ ಉಪಾಧ್ಯಾಯರುಗಳಿಗೆ ಕೊಟ್ಟಿರುವ ಉದಾಹರಣೆಗಳೂ ಇವೆ. ಆಗಬೇಕಾದ ಯಾವ ಖರ್ಚುಗಳನ್ನು ಬೋರ್ಡಿನವರು ತಪ್ಪಿದಿರುತ್ತಾರೆ? ಯುದ್ಧದ ಕಾರಣ ಆಹಾರ ಸಾಮಗ್ರಿಗಳ ಮತ್ತು ಇತರ ಜೀವನಕ್ಕವಶ್ಯಕವಾದ ವಸ್ತುಗಳ ಬೆಲೆಯು ಅತ್ಯಧಿಕವಾಗಿ ಹೆಚ್ಚಿ ಪ್ರಾಥಮಿಕ ಶಾಲೋಪಾಧ್ಯಾಯರಿಗೆ ಒಬ್ಬಬ್ಬರೂ ಕುಟುಂಬ ಸಂಖ್ಯೆ ಹೆಚ್ಚಿನವರಿಗೆ ಸಂಕಟ ಪರಿಸ್ಥಿತಿಯು ಪ್ರಾಪ್ತವಾಗಿದೆ ಉಪಾಧ್ಯಾಯರ ಪರವಾಗಿ ಶ್ರೀಯುತರಿಂದ ನಾವಿನುತ ಜಿ. ಬೋ. ಸದಸ್ಯರೂ ಕಡಪೆ. ಪೊನ್ನಿನ ಸಭೆಯಲ್ಲಿ ಶ್ರೀ ಚಕ್ಕಿ ಚನ್ನಪ್ಪನವರು, ಪ್ರಾ. ಉಪಾಧ್ಯಾಯರಿಗೆ ಚಾರ ಅಲೋಯನ್ಸು ಮತ್ತು ಇಂಕ್ರಿಮೆಂಟ್ ಕೊಡಬೇಕೆಂಬ ಸೂಚನೆ ತಂದು ನಮ್ಮ ಮರ್ಜಿವದಿಂದ ಹಿಂದಿಕೆಗೆದು ಕೊಂಡರು. ಅಸಹಾಯ ಮತ್ತು ಸಾಧು ಎತ್ತುಗಳಂತಿರುವ ಉಪಾಧ್ಯಾಯರಿಗುಳಿದಿರುವ ಸಾಧನವಾದರೂ ಏನು? ಎಲ್ಲರೂ ಏಕಮತ್ಯವಾಗಿ ಇಂಥಾ ನ್ಯಾಯವಾದ ಬೇಡಿಕೆಯನ್ನು ಜೋರಿನಿಂದ ಮುಂದಿಟ್ಟು ಪ್ರಚಾರ ಮಾಡುವುದೊಂದೇ ನಮಗೆ ಉಳಿದಿರುವ ಸುಧನ.

'ನವಭಾರತ' ಸಂವಾದಕರಾದ ಶ್ರೀ ಟಿ. ಬಿ. ಕೇಶವರಾಯರು ಎಮ್ಮಿಗನೂರು ಪ್ರಾಂತ್ಯ ಬಂದಾಗ ಅಲ್ಲಿನ ಉಪಾಧ್ಯಾಯರೆಲ್ಲಾ ಕಲೆತು - ಅವರ ಸಲಹೆ - ಸಹಕಾರಗಳನ್ನು ಕೋರಿದರು. ಉಪಾಧ್ಯಾಯ ಸಂಘಗಳನ್ನು ; ತಮ್ಮ ಸಭೆಗಳಲ್ಲಿ ತೀರ್ಮಾನಗಳನ್ನು ಮಾಡಿ ಅಧ್ಯಕ್ಷರಿಗೂ, ಡಿ. ಇ. ಒರವರಿಗೂ ಕಳುಹಿಸಬೇಕು. ಒಂದೊಂದು ಉಪಾಧ್ಯಾಯ ಕೇಂದ್ರಕ್ಕೆ ಒಬ್ಬರಂತೆ ಪ್ರತಿನಿಧಿಗಳು ಬಳ್ಳಾರಿಗೆ ಬಂದು ಸಂಬಂಧಿಸಿದ ಅಧಿಕಾರಿಗಳನ್ನು ಕಂಡು ಹೇಳಿಕೊಳ್ಳಬೇಕು ಒಂದು ಮೆಮೋ ರಾಂಡಂ ತಯಾರುಮಾಡಿ ಜಿಲ್ಲಾ ಬೋರ್ಡು ಮೀಟಿಂಗಿನ ದಿನ ಬಂದು ಎಲ್ಲಾ ಮೆಂಬರ್ಸಿಗೂ ಕೊಟ್ಟು ಅವರ ಸಹಾನುಭೂತಿಯನ್ನು ಈ ಸೂಚನೆಗೆ ದೊರಕಿಸಿಕೊಳ್ಳಬೇಕು. ಈ ಪ್ರಕಾರ ಐಕಮತ್ಯದಿಂದ ವಿನಯ ರೀತಿಯಲ್ಲಿ ಪ್ರಚಾರವನ್ನು ಕೈಗೊಂಡರೆ ಶೀಘ್ರವಾಗಿ ನಮ್ಮ ನ್ಯಾಯವಾದ ಬೇಡಿಕೆಯು ಈಡೇರಬಹುದೆಂದು ಅವರು ಸಲಹೆ ಕೊಟ್ಟಿರುತ್ತಾರೆ.

ಈ ಕಾರಣ ಎಲ್ಲಾ ಉಪಾಧ್ಯಾಯ ಸಂಘಗಳವರೂ, ಇಂಕ್ರಿಮೆಂಟ್ ಗಾಗಿ ತೀರ್ಮಾನಮಾಡಿ ಅಧಿಕಾರಿಗಳಿಗೆ ಕಳುಹಿಸಿ 'ನವಭಾರತ'ಕ್ಕೂ ಕಳುಹಿಸಿರಿ. ಬರುವ ತಿಂಗಳು ಒಂದು ದಿನವನ್ನು ನಿಶ್ಚಯಿಸಿ ಅಧಿಕಾರಿಗಳೊಡನೆ ಮಾತಾಡಲು (Deputation) ನಿಯೋಗವನ್ನು ತೆಗೆದುಕೊಂಡು ಹೋಗೋಣ.

ಉಪಾಧ್ಯಾಯ ಬಂಧು
ಎಮ್ಮಿಗನೂರು [ಆದವಾನಿ]

ರಾಷ್ಟ್ರೀಯ ಸಪ್ತಾಹವನ್ನಾಚರಿಸಿರಿ.

ಪ್ರತಿ ವರ್ಷದಂತೆ ಈ ವರ್ಷವಾದರೂ 6-4-42 ರಿಂದ 13-4-42ರ ವರೆಗೆ ಎಲ್ಲಾ ಕಡೆಯಲ್ಲೂ ರಾಷ್ಟ್ರೀಯ ಸಪ್ತಾಹವನ್ನಾಚರಿಸಿ ನಮ್ಮ ಆತ್ಮ ಶುದ್ಧಿಯನ್ನು ಮಾಡಿಕೊಂಡು ಸಂಪೂರ್ಣ ಸ್ವರಾಜ್ಯದ ಧ್ಯೇಯವನ್ನು ಧೃಢೀಕರಿಸಬೇಕು. ಪ್ರತಿ ಪ್ರಾತಃಕಾಲ ಪ್ರಭಾತಫೇರಿ ಧ್ವಜವಂದನೆಗಳಿಂದ ದಿನದ ಉತ್ಸವವನ್ನು ಪ್ರಾರಂಭಿಸಿ ಖಾದಿ ಅಸ್ಪೃಶ್ಯತಾನಿವಾರಣೆ ಗ್ರಾಮೋದ್ಧಾರಕಾರ್ಯ ಹಿಂದೂ ಮುಸ್ಲಿಂ ಐಕ್ಯತೆ ಮದ್ಯನಿಷೇಧ ವಿಷಯಗಳ ಬಗ್ಗೆ ಒಂದೊಂದು ದಿನ ಸಾಯಂಕಾಲ ಸಭೆಗಳನ್ನು ಏರ್ಪಡಿಸಬೇಕು ಎಂದು ಹಾಗಿ ಕರ್ನಾಟಕ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯದರ್ಶಿಗಳು ಕೋರುತ್ತಾರೆ.

NEO-MADRAS CAFE, BELLARY.

ಬಳ್ಳಾರಿಯಲ್ಲಿ ಸರ್ವಸಮೃದ್ಧಿಯ ನಿಯೋ ಮದ್ರಾಸ್ ಕೆಫೆ

Best boarding & Lodging House
Palatial & enviable quarters, Well ventilated rooms with electric lights.
Pure Ghee preparations.
Tea-party & Dinner arrangements undertaken at short notice.
Satisfaction guaranteed.
Service our speciality.

★

ನುನೋಪೆರ ಮತ್ತು ಆಕರ್ಷಣೀಯ ವಾಸಸ್ಥಾನ.
ಗಾಳಿ ಬೆಳಕುಗಳಿಂದ ಕೂಡಿದ ವಿಶಾಲ ಕೋಣೆಗಳು.
ರೈಲ್ವೆ ಸ್ಟೇಷನ್-ಬಸ್‌ಸ್ಟಾಂಡ್ ಸಮೀಪ.
ನಕಲ ವ್ಯವಹಾರಗಳ ಕೇಂದ್ರ ಸ್ಥಳ.
ಮನೆ ತುಪ್ಪದಲ್ಲೇ ನೂಡಿದ ಫಲಹಾರ ಸಾಮಗ್ರಿಗಳು.
ಸ್ವಲ್ಪಾವಧಿಯ ಸೂಚನೆಯಿಂದ ಭೋಜನ-ಟೀಪಾರ್ಟಿ ವಿಸ್ತರಣ ಸುತ್ತೇವೆ.
ವಿನಯಶೀಲರಾದ ಸೇವಕ ವರ್ಗ.

When you visit Bellary
Do go to
NEO MADRAS CAFE
the best Boarding & Lodging house

ಬಳ್ಳಾರಿಗೆ ಬಂದಾಗ
ಇಲ್ಲಿಳಿಯಲು ಮರೆಯ ಬೇಡಿರಿ.

ಬ್ರಿಟಿಷು ಸರಕಾರವು ಹಿಂದೂಸ್ತಾನಕ್ಕೆ ಕೊಡಬಯಸಿದ ಸುಧಾರಣಾ—ಯೋಜನೆ.

ಬ್ರಿಟಿಷ್ ಸರಕಾರದವರು ಕೊಡಮಾಡಿದ ಹೊಸ ಯೋಜನೆ ಕೆಳಗಿನಂತಿದೆ:—

೧) ಯುದ್ಧಾನಂತರ ಹಿಂದುಸ್ತಾನಕ್ಕೆ ಸಂಪೂರ್ಣ ಸಾಮಂತ ಸ್ವರಾಜ್ಯ ಕೊಡಲಾಗುವದು.

೨) ಹೊಸಘಟನೆಯನ್ನು ಸಿದ್ಧಪಡಿಸುವದಕ್ಕಾಗಿ ಯುದ್ಧ ಮುಗಿದ ಬಳಿಕ ಘಟನಾ ಸಮಿತಿಯು ಸ್ಥಾಪಿಸಲ್ಪಡುವದು. ಪ್ರಾಂತಿಕ ಅಸೆಂಬ್ಲಿಗಳ ಹೊಸ ಚುನಾವಣೆ ಹಿಡಿದು ಆ ಹೊಸ ಪ್ರತಿನಿಧಿಗಳು ತಮ್ಮ ಸಂಖ್ಯಾಬಲದ ಒಂದು ಹಸ್ತಾಂತರ ಜನರನ್ನು ಈ ಘಟನಾ ಸಮಿತಿಗೆ ಆರಿಸಿ ಕಳಿಸಬೇಕು. ಸಂಸ್ಥಾನಿಕರು ತಮ್ಮ ಜನಸಂಖ್ಯಾಪ್ರಮಾಣದಲ್ಲಿ ಪ್ರತಿನಿಧಿಗಳನ್ನು ಕಳಿಸಬಲ್ಲರು.

೩) ಈ ಹೊಸ ಘಟನೆಯಲ್ಲಿ ಸೇರಲು ಯಾವದೊಂದು ಪ್ರಾಂತವು ಒಪ್ಪದಿದ್ದರೆ ಅದೊಂದು ಪ್ರತ್ಯೇಕ ಸ್ವಾಯತ್ತ ಪ್ರಾಂತವಾಗಿಯೆ ಉಳಿಯಬಲ್ಲದು.

೪) ಆದರೆ ಯುದ್ಧ ನಡೆದ ಈ ಮಧ್ಯಂತರ ಕಾಲದಲ್ಲಿ ಹಿಂದುಸ್ತಾನದ ರಕ್ಷಣೆಯನ್ನು ಬ್ರಿಟಿಷ್ ಸರಕಾರದವರೇ ಮಾಡುವರು. ಎಲ್ಲ ಪಕ್ಷಗಳ ಹಿಂದೀ ಮುಖಂಡರು ಈ ಯುದ್ಧದಲ್ಲಿ ಸರ್ವ ರೀತಿಯಿಂದ ಸಹಾಯ ಮಾಡಬೇಕೆಂದು ವಿನ್ನವಿಸಲಾಗುತ್ತದೆ.

ಕ್ರಿಪ್ಸರ ವಿನ್ನಹ

ಬ್ರಿಟಿಶ ಸರಕಾರದವರು ಹಿಂದೂಸ್ತಾನದ ರಾಜಕೀಯ ಬಿಕ್ಕಟ್ಟಿನ ಪರಿಹಾರಕ್ಕಾಗಿ ತಯಾರಿಸಿದ ಸೂಚನೆಗಳನ್ನು ಸರ್ ಸ್ಟಾಫೋರ್ಡ್ ಕ್ರಿಪ್ಸರು ಸಿನ್ಹೆ ಪತ್ರಿಕಾಪ್ರತಿನಿಧಿಗಳಿಗೆ ಕೊಡುತ್ತ ಪ್ರಾಸ್ತಾವಿಕವಾಗಿ ಕೆಳಗಿನಂತೆ ಹೇಳಿದರು:—

ಹಿಂದೂಸ್ತಾನ ಸಮಸ್ಯೆಯು ಬಹಳ ಬಿಕ್ಕಟ್ಟಿನದಾಗಿರುವದು. ಅದನ್ನು ಬಿಡಿಸಲು ಬ್ರಿಟಿಶ ಸರಕಾರವು ಈ ಸೂಚನೆಗಳನ್ನು ತಯಾರಿಸಿದ್ದ ಅವುಗಳನ್ನು ಪ್ರಕಟಿಸಲು ಕೊಡುತ್ತೇನೆ. ಹಿಂದೂಸ್ತಾನದ ಪತ್ರಿಕೆಗಳು ಇವನ್ನು ಸಹಾನುಭೂತಿಯಿಂದ ವಿಚಾರಿಸಿ ಒಕ್ಕಟ್ಟನ್ನುಂಟುಮಾಡಲು ಪ್ರಯತ್ನಿಸಬೇಕಲ್ಲವೆ ಭಿನ್ನಾಭಿಪ್ರಾಯವನ್ನು ಹುಟ್ಟಿಸಲು ಪ್ರಯತ್ನಿಸಬಾರದೆಂದು ನಾನು ವಿನ್ನವಿಸುತ್ತೇನೆ. ಈ ಸೂಚನೆಗಳ ಪ್ರಕಟಣೆಯು ಘೋಷಣೆಯಲ್ಲ. ಆದರೆ ಹಿಂದೀ ಧುರೀಣರು ಒಪ್ಪಿದರೆ ಇದನ್ನೇ ಘೋಷಣೆಯನ್ನಾಗಿ ಜಾಹೀರು ಮಾಡಬಹುದು ಯೆಂದು ಅವರು ಹೇಳಿದರು.

ಯೋಜನೆಯ ಸರಜಮು.

ಸರ್ ಸ್ಟಾಫರ್ಡ್ ಕ್ರಿಪ್ಸರು ಹಿಂದೀ ಮುಖಂಡರೊಡನೆ ಚರ್ಚೆಮಾಡುವದಕ್ಕಾಗಿ ತಂದ ಬ್ರಿಟಿಶ ಸರಕಾರದ ಯೋಜನೆಯ ಕರಡು ಈ ರೀತಿಯಾಗಿದೆ. ಇದು ಜಾರಿಯಲ್ಲಿ ಬರುವದೊ ಇಲ್ಲವೋ ಎಂಬುದು ಈಗ ನಡೆವ ಚರ್ಚೆಯನ್ನೆ ಅವಲಂಬಿಸುವದು.

ಹಿಂದೂಸ್ತಾನದಭವಿತವ್ಯದಬಗ್ಗೆ ಬ್ರಿಟಿಷ ಸರಕಾರದವರು ಕೊಟ್ಟವಚನದ ಸಂಬಂಧದಲ್ಲಿ ಬ್ರಿಟನ್‌ದಲ್ಲಿ ಮತ್ತು ಹಿಂದೂಸ್ತಾನದಲ್ಲಿ ಒಂದುಬಗೆಯ ವಿವಂಚನೆಯುಂಟಾಗಿದ್ದರಿಂದ ಬ್ರಿಟಿಶ್ ಸರಕಾರದವರು ಸ್ಪಷ್ಟ ಶಬ್ದಗಳಲ್ಲಿ ಅದನ್ನು ಸಾರಲು ಬಯಸುತ್ತಾರೆ. ಹಿಂದುಸ್ತಾನದಲ್ಲಿ ಆದಷ್ಟು ಬೇಗ ಸ್ವರಾಜ್ಯವು ಸ್ಥಾಪಿತವಾಗುವಂತೆ ಯಾವ ಉಪಾಯಗಳನ್ನು ಯೋಜಿಸುವರೆಂಬುದನ್ನು ಈಗ ಸಾರ ಬಯಸುತ್ತಾರೆ. ಯುನಾಯಿಟೆಡ್ ಕಿಂಗ್ಡಂ ಮತ್ತು ಉಳಿದ ಸಾಮಂತ ರಾಜ್ಯಗಳಂತೆ ಪ್ರತಿಯೊಂದು ವಿಷಯದಲ್ಲಿ ಅಕ್ಕೆಸಮಾನವಾಗಿ ಯಾವರೀತಿಯಲ್ಲಿಯೂ ಆಂತರಿಕ ಇಚ್ಛೆಯ ಬಾಹ್ಯ ಅಡಚಣೆಯಲ್ಲಿ ಅಧೀನವಾಗದೆ ಸಾಮಂತ ರಾಜ್ಯವಾಗಿ ಉಳಿಯುವಂತೆ ಹೊಸ ಹಿಂದೀ ಯೂನಿಯನ್‌ವನ್ನು ಜಾರಿಯಲ್ಲಿ ತರುವವೇ ಇದರ ಉದ್ದೇಶವಾಗಿದೆ.

ಅದರಿಂದ ಬ್ರಿಟಿಶ ಸರಕಾರದವರು ಕೆಳಗಿನ ಸೂಚನೆಗಳನ್ನು ಮಾಡುತ್ತಾರೆ

(ಅ) ಯುದ್ಧವು ಮುಗಿದನಂತರ ಮುಂದೆ ಹೇಳಿದರೀತಿಯಲ್ಲಿ ಹಿಂದೂಸ್ಥಾನದ ಹೊಸ ಸಘಟನೆಯನ್ನು ಸಿದ್ಧಪಡಿಸಲು ಆರಿಸಲ್ಪಟ್ಟಹಿಂದು ಸಮಿತಿಯನ್ನು ನಿರ್ಮಿಸಲಾಗುವದು.

(ಬ) ಹಿಂದುಸ್ತಾನವ ಈ ಘಟನೆಯನ್ನು ಸಿದ್ಧಪಡಿಸುವಲ್ಲಿ ಸಂಸ್ಥಾನಗಳಿಗೂ ಅವಕಾಶ ಸಿಕ್ಕುವುದಕ್ಕಾಗಿ ಕೆಳಗೆ ತೋರಿಸಿದ ರೀತಿಯಲ್ಲಿ ವ್ಯವಸ್ಥೆ ಮಾಡಲಾಗುವದು.

(ಕ) ಸಮಿತಿಯವರು ಸಿದ್ಧಪಡಿಸಿದ ಈ ಘಟನೆಯನ್ನು ಕೂಡಲೆ ಸ್ವೀಕರಿಸಿ ಜಾರಿಯಲ್ಲಿ ತರಲಾಗುವದು. ಆದರೆ ಅದಕ್ಕೆ ಕೆಲವು ಕರಾರುಗಳಿವೆ.

1) ಯಾವದೊಂದು ಪ್ರಾಂತವು ಈ ಹೊಸ ಘಟನೆಯನ್ನು ಸ್ವೀಕರಿಸಲು ಸಿದ್ಧವಿಲ್ಲವಿದ್ದರೆ ಅದು ಅದರಲ್ಲಿ ಸೇರದೆ ಈಗಿದ್ದ ಘಟನೆಯಂತೆಯೇ ಅಡಳಿತೆಯನ್ನು ಸಾಗಿಸಬಹುದು. ಆದರೆ ಮುಂದೆ ಎಂದಾದರೂ ಅದು ಈ ಹೊಸ ಯೂನಿಯನ್‌ದಲ್ಲಿ ಸೇರಬಯಸಿದರೆ ಹಾಗೆನಾಡಲು ಅದಕ್ಕೆ ಅಧಿಕಾರವಿರುವದು. ಈ ರೀತಿ ಹೊಸ ಯೂನಿಯನ್‌ದಲ್ಲಿ ಸೇರದಿದ್ದ ಪ್ರಾಂತಗಳ್ಳು ಇದೇ ಮಾದರಿಯ ಘಟನೆಯು ತಮಗೆಬೇಕೆಂದು ಕೇಳಿಕೊಂಡರೆ ಅವಕ್ಕಾದರೂ ಹಿಂದೀಯೂನಿಯನ್‌ದಂತೆ ಪೂರ್ಣಸ್ವಾಯತ್ತತೆಯನ್ನು ಕೊಡಲು ಸರಕಾರದವರು ಸಿದ್ಧರಿರುವರು.

2) ಬ್ರಿಟಿಶ ಸರಕಾರದವರು ಮತ್ತು ಈ ಘಟನಾ ಸಮಿತಿಯಲ್ಲಿ ಒಪ್ಪಂದವಬಗ್ಗೆ ವಿಚಾರ ವಿನಿಮಯವಾಗಿ ಸಹಿ ಮಾಡಲ್ಪಡುವದು. ಬ್ರಿಟಿಷ್‌ರಿಂದ ಹಿಂದೂಸ್ಥಾನದ ಕೈಯಲ್ಲಿ ಎಲ್ಲ ಹೊಣೆಗಾರಿಕೆಯು ಒಪ್ಪಿಸಲ್ಪಡುವದನ್ನು ಲಕ್ಷಿಸಿ ಈ ಒಪ್ಪಂದವನ್ನು ಮಾಡಲಾಗುವದು. ಬ್ರಿಟಿಶ ಸರಕಾರದವರು ಜಾತೀಯ ಮತ್ತು ಧಾರ್ಮಿಕ ಅಲ್ಪ ಸಂಖ್ಯಾಕರಿಗೆ ಕೊಟ್ಟ ರಕ್ಷಣೆಯ ಅಶ್ವಾಸನಕ್ಕನುಸಾರವಾಗಿ ಅವಶ್ಯಕ ಏರ್ಪಾಡು ಮಾಡಲಾಗುವದು. ಜಪರ ಬ್ರಿಟಿಶ್‌ಕಾಮನ್ ವೆಲ್ತ್‌ದಲ್ಲಿಯ ಉಳಿದ ರಾಷ್ಟ್ರಗಳೊಡನೆ ತಮ್ಮ ಭಾವೀ ಸಂಬಂಧವನ್ನು ನಿರ್ಧರಿಸಿಕೊಳ್ಳುವದಕ್ಕಾಗಿ ಇಂಡಿಯನ್ ಯೂನಿಯನ್ನಿಗಿದ್ದ ಅಧಿಕಾರದಲ್ಲಿ ಯಾವದೇ ಒಗೆ

ಯ ನಿರ್ಬಂಧಹಾಕಲು ಸರಕಾರದವರು ಬಯಸುವದಿಲ್ಲ. ಸಂಸ್ಥಾನಗಳು ಈ ಹೊಸ ಘಟನೆಯಲ್ಲಿ ಸೇರಲು, ಹೊಸ ಪರಿಸ್ಥಿತಿಯ ನ್ಯಯ ಆವುಗಳ ಒಪ್ಪಂದದ ಪುನರ್ವಿಚಾರಣೆಗಾಗಿ ಅವಶ್ಯಕ ಏರ್ಪಾಡು ಮಾಡಲಾಗುವದು.

(ಪ) ಯುದ್ಧ ಮುಗಿಯುವದರೊಳಗಾಗಿ ಹಿಂದುಸ್ಥಾನದಲ್ಲಿಯ ಬೇರೆ ಬೇರೆ ಜಾತಿಗಳ ಮುಖಂಡರು ಕೂಡಿಕೊಂಡು ಹಿಂದುಸ್ಥಾನದ ಒಂದು ಘಟನೆಯನ್ನು ಸಿದ್ಧಮಾಡಿದ್ದರೆ ಕೆಳಗಿನಂತೆ ಘಟನಾ ಸಮಿತಿಯು ನೇಮಿಸಲ್ಪಡುವದು.

ಯುದ್ಧ ಮುಗಿದಬಳಿಕ ಹಿಂದೂಸ್ಥಾನದಲ್ಲಿ ಪ್ರಾಂತಿಕ ಕಾಯದೆ ಪ್ರಕಾರ ಆಯಿಸಲ್ಪಟ್ಟ ಪ್ರಾಂತಿಕ ಅಸೆಂಬ್ಲಿಗಳ ಸದಸ್ಯರು ಪ್ರಮಾಣ ಮತದಾನ ವರ್ಗಣೆಯಂತೆ (Proportional Representation) ಘಟನಾ ಸಮಿತಿಯನ್ನು ಆರಿಸತಕ್ಕದ್ದು. ಈ ಘಟನಾ ಸಮಿತಿಗೆ ಪ್ರಾಂತಿಕ ಅಸೆಂಬ್ಲಿಗಳು ತಮ್ಮ ಸದಸ್ಯರನ್ನಾರಿಸಬೇಕು. ಈ ಘಟನಾ ಸಮಿತಿಯಲ್ಲಿ ಸಂಸ್ಥಾನಗಳಿಗೂ ಪ್ರತಿನಿಧ್ಯವಿರುವದು. ಬ್ರಿಟಿಷ್ ಹಿಂದುಸ್ಥಾನದಲ್ಲಿಯ ಜನಸಂಖ್ಯೆಗನುಸಾರವಾಗಿ ಘಟನಾ ಸಮಿತಿಯಲ್ಲಿ ಸಿಕ್ಕತಕ್ಕ ಪ್ರಾತಿನಿಧ್ಯವು ಸಂಸ್ಥಾನಗಳಿಗೆ ಆವುಗಳ ಜನಸಂಖ್ಯೆಯ ಪ್ರಮಾಣದಲ್ಲಿ ಸಿಕ್ಕುವದು. ಈ ಸಂಸ್ಥಾನ ಪ್ರತಿನಿಧಿಗಳಿಗೆ ಬ್ರಿಟೀಷ್ ಹಿಂದೀ ಸದಸ್ಯರನ್ನೇ ಆರಿಸುವ ಅಧಿಕಾರವಿರುವದು. ಈ ಸಂಸ್ಥಾನ ಪ್ರತಿನಿಧಿಗಳನ್ನು ಸಂಸ್ಥಾನೀಕರೇ ನೇಮಿಸತಕ್ಕದ್ದು.

(ಈ) ಹಿಂದೂಸ್ಥಾನದ ಸದ್ಯದ ಗಂಡಾಂತರ ಪರಿಸ್ಥಿತಿಯಲ್ಲಿ ಹೊಸಘಟನೆಯು ಸಿದ್ಧಪಡಿಸಲ್ಪಡುವವರೆಗೆ ಬ್ರಿಟಿಶ್ ಸರಕಾರದವರೆ ಹಿಂದುಸ್ಥಾನದ ಸಂರಕ್ಷಣೆಯಹೊಣೆಯನ್ನು ಹೊತ್ತು ಕೊಳ್ಳುವರು. ಅವರೆ ಹಿಂದೂಸ್ಥಾನದಸಂಪೂರ್ಣ ನೈನಿಕ, ನೈತಿಕ ಮತ್ತು ಜನಧನ ಸಹಾಯಗಳನ್ನೆಲ್ಲ ಪಡೆಯುವುದುಹಿಂದೀಜನತೆಯ ಸಹಕಾರದಿಂದ ಹಿಂದುಸ್ಥಾನ ಸರಕಾರದವರೇ ಮಾಡತಕ್ಕದ್ದು. ಬ್ರಿಟಿಶ್ ಕಾಮನವೆಲ್ತ ಮತ್ತು ಉಳಿದ ಮಿತ್ರರಾಷ್ಟ್ರಗಳಂತೆ ಹಿಂದೂಸ್ಥಾನದಲ್ಲಿಯ ಎಲ್ಲಪ್ರಮುಖ ಜಾತಿಗಳ ಮುಖಂಡರು ಕೂಡಲೆ ಮತ್ತು ಪರಿಣಾಮಕಾರಕವಾಗಿ ಇವರಲ್ಲಿ ಭಾಗವಹಿಸಬೇಕೆಂಬ ಸರಕಾರದ ಇಚ್ಛೆಯಿದೆ. ಮತ್ತು ಹಾಗೆಮಾಡಲು ಅವರಿಗೆ ಬೆನ್ನವಿಸುವದೆ ಹಿಂದೂಸ್ಥಾನದ ಭಾವೀ ಸ್ವಾತಂತ್ರ್ಯ ಕೈಲಿತ್ಯನಶ್ಯವಾದ ಪ್ರತ್ಯಕ್ಷಪ್ರಾಣೂ ವಿಘಾಯಕ ಸಹಾಯವನ್ನು ನೀಡಲು ಮುಖಂಡರು ಸಮರ್ಥರಾಗುವರೆಂದು ತಿಳಿಸಲಾಗಿದೆ.

ಭದ್ರಾವತಿ

ಪೌರ ಸಭಾಸದಸ್ಯರ ಅಸಮ್ಮತಿ

ಪುರಸಭೆಯಲ್ಲಿರುವ ಕಾಂಗ್ರೆಸ್ ಸದಸ್ಯರು. ಸ್ವತಂತ್ರ ಪಕ್ಷದ 3 ಸದಸ್ಯರು ಕಾಂಗ್ರೆಸ್ ಅಧ್ಯಕ್ಷರಿಗೆ ಮಾನಪತ್ರವನ್ನರ್ಪಿಸಬೇಕೆಂಬ ಸೂಚನೆಯನ್ನು 27-3-42 ನೆಯ ತಾಗಿ ಸಭೆಯಲ್ಲಿ ತಂದರು. ಆದರೆ ಅದನ್ನು ಅಧಿಕಾರೀ ಅಧ್ಯಕ್ಷರು ನಿರಾಕರಿಸಿದರು. ಮಾರನೆಯ ದಿನದ ಸಭೆಯಲ್ಲಿ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಲೋಸ್ಕರ ಆ ದಿನ ಹಾಜರಿದ್ದ 8 ಕಾಂಗ್ರೆಸ್ ಮತ್ತು 2 ಸ್ವತಂತ್ರ ಸದಸ್ಯರು ಸಭೆಯನ್ನು ತ್ಯಾಜ್ಯಮಾಡಿದರು.

(ಮಾದರಿಯ ಮೈಸೂರಲ್ಲಿ ಬಹುಮತದ ಜೇಡಿಕೆಗೆ ಮನ್ನಣೆ ಇಲ್ಲದಿರುವುದು ಪೀಡದಾಯಕವಾಗಿದೆ. ಬ್ರಿಟಿಷ್ ಇಂಡಿಯದಲ್ಲಿ ಕಾಂಗ್ರೆಸ್ ಮುಖಂಡರಿಗೆ ಸಾನಪತ್ರಗಳನ್ನು ಕೊಡುವುದು ವಾಡಿಕೆಯಾಗಿರುವ ವಿಷಯ. ಅಲ್ಲಿ ಹೆಚ್ಚೆಂದರೆ ಸರಕಾರದವರು ಸದಸ್ಯರೇ ಖರ್ಚನ್ನು ಭರಿಸತಕ್ಕದ್ದೆಂದು ವಿಧಿಸುವರು. ಎಲ್ಲಾ ವಿಷಯಗಳಲ್ಲೂ ಬ್ರಿಟಿಷ್ ಇಂಡಿಯಾವನ್ನು ಹಿಂಬಾಲಿಸುತ್ತಿರುವ ಮೈಸೂರಿನ ಸರ್ಕಾರಕ್ಕೆ ಕಾಂಗ್ರೆಸ್ಸಿಂದರೆ ಇಷ್ಟು ವಿದ್ವೇಷವೇಕೊ ಊಹಿಸಲಶಕ್ಯವಾಗಿದೆ. ಸಮ್ಮದಯುಕ್ತ ಪರಿಸ್ಥಿತಿಯಲ್ಲಿ, ನಿತ್ಯ ನಿತ್ಯ ಪೂರಾಜ್ಯದಾಜಳಿತಗಳು ಬದಲಾಗುತ್ತಿರುವ ಈ ನಾತಾವರಣದಲ್ಲಿ. ಇಂಥಾ ಸಂಕುಚಿತ ಧೋರಣೆಯು ತಕ್ಕುದಲ್ಲ.

ಶಿಸ್ತನ್ನು ಪಾಲಿಸಿದ ಕಾಂಗ್ರೆಸ್ ಸದಸ್ಯರನ್ನು. ಕಾಂಗ್ರೆಸ್ಸೊದನೆ ಸಹಕರಿಸಿ ತಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಂಡ ಇತರ ಸ್ವತಂತ್ರ ಸದಸ್ಯರನ್ನೂ ಅಭಿನಂದಿಸದಿರಲಾರೆವು. ಸಂಪಾದಕ-ನವಭಾರತ]

ಜಪಾನರ ೨೬ ಜಲಾಂತರ್ಗಾಮಿಗಳನ್ನು ಅಮೆರಿಕಾ ನೌಕಾಶ್ರಯವರು ಮುಳುಗಿಸಿದ್ದಾರೆಂದು ವಾಷಿಂಗಟನ ವಾರ್ತೆಯು ಹೇಳುತ್ತಿದೆ

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೯೯೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000, ರೂ.ಗಳಿಗೆಮೀರಿದೆ

ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಜುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಕಚೇರಿ- ಡಿಸ್ಪೆನ್ಸ್‌ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

ಸುಧಾರಣಾ ಯೋಜನೆ

ವೃತ್ತಪತ್ರಿಕೋದ್ಯೋಗಿಗಳ ಸಭೆಯಲ್ಲಿ ಕ್ರಿಪ್ಸರ ಸ್ಪಷ್ಟೀಕರಣ

ನೆಯ ತಾ|| ಭಾನುವಾರ ಸಾಯಂಕಾಲ ಸುಮಾರು ೫೦೦ ವೃತ್ತಪತ್ರಿಕೋದ್ಯೋಗಿಗಳು ನೇರಿದ ಸಭೆಯಲ್ಲಿ ಕ್ರಿಪ್ಸರು ಬ್ರಿಟಿಷ್ ಸುಧಾರಣಾಯೋಜನೆಗಳನ್ನು ಕುರಿತು ಪ್ರಶ್ನೆಗಳಿಗೆ ಉತ್ತರಕೊಟ್ಟರು. ಹೋರಾಟವು ಮುಗಿದಕೂಡಲೇ ಹಿಂದೂಸ್ಥಾನದ ರಾಜ್ಯಘಟನೆಯನ್ನು ತಯಾರಿಸಲು ಒಂದು ಸಮಿತಿಯನ್ನು ಸ್ಥಾಪಿಸಲಾಗುವುದು ಪ್ರಾಂತಗಳಿಂದ ಮತ್ತು ದೇಶೀ ಸಂಸ್ಥಾನಗಳಿಂದ ಈ ಸಮಿತಿಗೆ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕಾಗುವುದು. ಈ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯು ಹಿಂದೂಸ್ತಾನಕ್ಕಾಗಿ ರಾಜ್ಯ ಘಟನೆಯನ್ನು ತಯಾರಿಸಿದಮೇಲೆ ಬ್ರಿಟಿಷ್ ಸರಕಾರವು ಆ ಘಟನಾಸಮಿತಿಯೊಡನೆ ಒಪ್ಪಂದ ಮಾಡಿಕೊಂಡು ಸಂರಕ್ಷಣೆಯ ಜವಾಬ್ದಾರಿಯನ್ನು ಬಿಟ್ಟು ಭಾರತೀಯರಿಗೆ ಎಲ್ಲಾ ಅಧಿಕಾರಗಳನ್ನು ಒಪ್ಪಿಸುವುದು. ಯಾವ ಪ್ರಾಂತಗಳೇ ಆಗಲಿ, ಸಂಸ್ಥಾನಗಳೇ ಆಗಲಿ ಇಂಥಾ ರಾಜ್ಯಘಟನೆಯನ್ನು ಒಪ್ಪದೆ ಕೂಡ ಇರಬಹುದು. ಆಂಥವು ಇತರ ಪ್ರಾಂತಗಳೊಂದಿಗೆ ಕೂಡಿಕೊಂಡು ಪ್ರತ್ಯೇಕ ಯೂನಿಯನ್ ಮಾಡಿಕೊಳ್ಳಬಹುದು.

ಈ ಯೋಜನೆಯನ್ನು ಮತ್ತೆ ವಿವರಿಸುತ್ತಾ ಉಳಿದ ಸಾಮಂತ ರಾಷ್ಟ್ರಗಳಿಗಿರುವಂತೆ ಇವಕ್ಕೆ ಸಮಾನಸ್ಥಾನಮಾನಗಳಿರುವವೆಂತಲೂ, ಬೇಕಾದರೆ ಹಿಂದೂಸ್ಥಾನವು ಬ್ರಿಟಿಷ್ ಸಾಮ್ರಾಜ್ಯವನ್ನು ಬಿಟ್ಟುಹೋಗಬಹುದೆಂಬ ಕ್ರಿಪ್ಸರು ಹೇಳಿದರು. ಈ ಯೋಜನೆಯನ್ನು ಸ್ವೀಕರಿಸಬೇಕು ಸ್ವಲ್ಪ ಸ್ವೀಕರಿಸಿ ಉಳಿದುದನ್ನು ತ್ಯಾಜ್ಯಮಾಡಲು ಬರುವಂತಿಲ್ಲವೆಂದರು. ಪ್ರಾಂತೀಕ ಶಾಸನ ಸಭೆಗಳಲ್ಲಿ ಶೇಕಡ 60 ಸದಸ್ಯರು ಭಾರತ ಘಟನೆಯಲ್ಲಿ ನೇರಬಾರದೆಂದು ನಿರ್ಣಯಿಸಬಹುದು. ಅಲ್ಪ ಸಂಖ್ಯಾಕರು ಇದಕ್ಕೊಪ್ಪದೆಇದ್ದರೆ ಸಾರ್ವತ್ರಿಕ ಜನಾನಣಯಾಗಬಹುದು. ಅದರಲ್ಲಿ ಸಾಧಾರಣ ಮೆಜಾರಟಿ ಬಂದರೂಸಾಕು ಆ ಪ್ರಕಾರ ಅಂತಿಮ ನಿರ್ಣಯವಾಗುವುದು.

ಶ್ರೀಸುಭಾಷಚಂದ್ರಬೋಸರು.

ಶ್ರೀ ಸುಭಾಷಚಂದ್ರಬೋಸರು ವಿಮಾನದಲ್ಲಿ ಟೋಕಿಯೋಕ್ಕೆ ಹೊರಟಾಗ ಆಫಘಾತವಾಗಿ ನ್ಯುತನಪಟ್ಟರೆಂದು ಕಳೆದವಾರ ದೇಶದ ಎಲ್ಲಾ ಕಡೆಗಳಲ್ಲೂ ಸುದ್ದಿಯು ಹಬ್ಬಿದ್ದಿತು. ಬ್ರಿಟಿಷವಾರ್ತಾ ಸಂಸ್ಥೆಯ ಈ ಸಂಸ್ಥೆಯ ಈ ಸಮಾಚಾರವನ್ನು ನಿಜವೆಂದುನಂಬಿ ಮಹಾತ್ಮಗಾಂಧಿ ಕಾಂಗ್ರೆಸ್ ಅಧ್ಯಕ್ಷ ಶಬುಲಕಲಾಂ ಆಜಾದ ವಗೈರೆ ಮುಖಂಡರು ದುಃಖಸೂಚಕತಂತಿಯನ್ನು ಅವರ ತಾಯಿಯವರಿಗೆ ಕೊಟ್ಟಿದ್ದರು. 30ನೆಯ ತಾ ಲಂಡನ್ನಿನಿಂದ ಬಂದ ಮತ್ತೊಂದು ಸುದ್ದಿಯಪ್ರಕಾರ ಅವರು ಸತ್ತಸುದ್ದಿಯು ಸುಳ್ಳುಜೇಕೆಂದು ಟೋಕಿಯೋದವರ ಪ್ರಕಟಿಸಿದ ವಿಮಾನ ಅಪಘಾತದ ಸುದ್ದಿಯಲ್ಲಿ ಬೋಸರ ಹೆಸರಾಗಲಿ ರಾತಬಿಹಾರಿ ಬೋಸರ ಹೆಸರಾಗಲಿ ಇಲ್ಲವೆಂದು ಗೊತ್ತಾದೆ ಅಂತೂ ಶತ್ರು ಮಿತ್ರ ರಾಷ್ಟ್ರಗಳ ಕಡೆಯಿಂದ ಬಂದ ಸುದ್ದಿಗಳನ್ನು ಪರಿಶೀಲಿಸಲಿಕ್ಕಾಗಿ ಶ್ರೀ ಬೋಸರು ಸುರಕ್ಷಿತವಾಗಿರುವರೆಂಬುದು ಧೃಢಪಟ್ಟಿದೆ

.....

ಲಂಬಾಣೀ ಜನರ ಸಭೆ

ಕೂಡ್ಲಿಗಿ ತಾಲೂಕು ಚಿಕ್ಕಜೋಗಿಹಳ್ಳಿಯಲ್ಲಿ ಲಂಬಾಣೀ ಜನರ ಸಭೆಯೊಂದು ಕುರುಗೋಡಿನ ಶ್ರೀ ರಾಮಚಂದ್ರಗುಪ್ತರ ಅಧ್ಯಕ್ಷತೆಯಲ್ಲಿ ಉತ್ಸಾಹ ಪೂರ್ವಕವಾಗಿ ನೆರವೇರಿತು. ಮೋಯಿಬಾಯಿ ಮತ್ತು ಸೋನಿಬಾಯಿ ಎಂಬ ಇಬ್ಬರು ಬಾಲಿಕೆಯರ ಪ್ರಾರ್ಥನಾನಂತರ ಶ್ರೀ ಕೆ. ವೀರಾನಾಯ್ಕ ಎಲ್. ಸಾಕ್ಯಾನಾಯ್ಕ ಮತ್ತು ಬಿ. ಬಸಪ್ಪನಾಯ್ಕರು ಸಂಘದ ಅವಶ್ಯಕತೆ ಉಡುಪಿನ ಸುಧಾರಣೆ ಒಗ್ಗಟ್ಟನ್ನು ಕುರಿತು ಭಾಷಣ ಮಾಡಿದರು. ಅಧ್ಯಕ್ಷರಾದ ಗುರ್ತರು ಲಂಬಾಣಿ ಜನರಲ್ಲಿ ಹಬ್ಬಿರುವ ದುರಾಚಾರಗಳನ್ನು ನಿರ್ಮೂಲಮಾಡಲು ಹೇಳಿ ಜಿಲ್ಲೆಯ ಲಂಬಾಣಿಗಳೆಲ್ಲಾ ಏಕಮುಖ್ಯದಿಂದ ಕೂಡ್ಲಿಗಿಯಲ್ಲಿ ಮಹಾಸಭೆಯೊಂದನ್ನು ಮಾಡಿ ತಮ್ಮ ಸಂಘವನ್ನು ಬಲಪಡಿಸಿಕೊಳ್ಳಬೇಕೆಂದರು. ಮಂಗಳವಂದನಾರ್ಪಣೆಯ ನಂತರ ಸಭೆಯುಮುಗಿಯಿತು.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ

	31-10-40	28-2-42
ದಿವಾಜಿಟ್ಟುಗಳು.		
ಫಿಕ್ಸೆಡ್	ರೂ, Nil	108020-0-0
ಜಾಲ್ತಿ	,, 3,173	11394-0 0
ಸೇವಿಂಗ್ಸು	,, 1,231	17492-0-0
ಇತರ	,, 40	914-0-0
ಸಾಲಗಳು		
ಭಂಗಾರ	,, 520	32469-0.0
ಮೊಲು	,, Nil	42520-0.0
ಇತರ	,, Nil	37011-0-0
ಇತರ ಆಸ್ತಿ.		
ಸರ್ಕಾರದ ಬಾಂಡುಗಳು	,,13,320	32476-0-0
ಬ್ಯಾಂಕುಗಳಲ್ಲಿಮವ ಹಣ	,,32,502	5954-0-0
ಕೈಯ್ಯಲ್ಲಿ ನಗದು	,, 5770	14011-0-0

ಒಟ್ಟು ವ್ಯವಹಾರದ ಮೊತ್ತ.

31—10—40.	28—2—42.
ರು. 1,14,774-0-0	ರು 2,37,062-0-0

ಷೇರುದಾರರು:—

1 ತಿಮ್ಮನಚರ್ಲ 2 ಕೊಟ್ಟೂರು. 3 ಉರವಕೊಂಡ 4 ಪತ್ತಿಕೊಂಡ

ಹೆಚ್. ಶೀತಾರಾಮರೆಡ್ಡಿ,, ಬಿ. ಎ. ಬಿ. ಎಲ್. (ಎಂ ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಕ್ಷಾಮಭಾಗದ ರೈತರಿಗೆ ಪರಿಹಾರ

ಸರಕಾರಿ ಹಣದ ವಸೂಲಿ ಮುಂದಕ್ಕೆ ಹಾಕಿರಿ

ಒಂದು ಕಣ್ಣಲ್ಲಿ ಬೆಣ್ಣೆ-ಒಂದು ಕಣ್ಣಲ್ಲಿ ಸುಣ್ಣ ವೆಂಬಂತೆ ಸರಕಾರದವರ ನೀತಿಯು ಇದೆ ಆದವಾನಿ ತಾಲೂಕಿನ ಕ್ಷಾಮಭಾಗಗಳಲ್ಲಿ ರೈ ನಿ ಷ ಕ್ಷ ಪ್ರಶ್ನೆಯು ಇತ್ಯರ್ಥವಾಗುವವರೆಗೂ ಸರಕಾರಿ ಹಣದ Land Revenue] ವಸೂಲಿಯನ್ನು ಮುಂದಕ್ಕೆ ಹಾಕಿ ಆಜ್ಞೆಯನ್ನು ತೀಫ್ರವಾಗಿ ಕಳುಹಿಸಿಬಿಟ್ಟರು ಆದರೆ ಸಿರುಗುಪ್ಪೆ ಭಾಗದಲ್ಲಿ ಹಾಗೆ ಮಾಡಲಿಲ್ಲ ರೈತರೆಲ್ಲಾ ಸಭೆಕೂಡಿ ನೊರೆ ಇಟ್ಟಾಗ ಆಗಲಿ ಮಾಡಿದೆವೆಂದರು ಕೆಳಸ್ತರದಾರಿಗಳು ಆರ್ಡರನ್ನು ಜಾರಿಮಾಡಲು ತಡಮಾಡಿಬಿಟ್ಟರು ಅದು ಹೋಗುವುದರೊಳಗೆ ಗೌಪ-ಶಾನುಭೋಗರು ತಮ್ಮ ಕಾರ್ಯವನ್ನು ಒತ್ತಾಯದಿಂದ ಬಹು ಸಂಖ್ಯಾಕ ಹಳ್ಳಿಗಳಲ್ಲಿ ಜಾರಿಮಾಡಿಬಿಟ್ಟರು

ಈಗ ಮತ್ತೆ ಎಪ್ರಿಲ ಕಿಸ್ತುವಸೂಲಿ ಬಂದಿದೆ- ಪೀಡಿತ ಪ್ರದೇಶಗಳಲ್ಲಿನ ರೈತರು ಈಗಾಗಲೇ ಬೊರೆ ಇಡಲು ಸ್ಸಾರಂಭಿಸಿದ್ದಾರೆ. ಸರಕಾರಿ ಹಣದ ಮಾಫಿ 0-12-0 ನಿಷಾರ್ಸಾಗಿರುವುದು ಕೆ ಲ ಹಳ್ಳಿಗಳಿಗೇ ಎಂದು ಊಹಿಸುವುವಾದರೂ ಅಂಥಾ ಊರುಗಳ ರೈತರಿಗೆ ಏನು ಅನುಕೂಲ ಮಾಡಿದಂತಾಗುವುದು? ಕೆನಿಷ್ಠ ಯಾವಾಗ ಬರುವುದೋ ದೇವರೇ ಬಲ್ಲ. ಈಗಾಗಲೇ 0-4-0 ಭಾಗ ವಸೂಲಿಯಾಗಿದೆ- 4 ಆಣೆ 8 ಆಣೆ ಭಾಗ ರಿಮಿಷ್ಟ್ ಹೊಂದಲಿರುವ ಪ್ರದೇಶಗಳಿಗೇನೋ ಸರಿಯಾದೀತು. ಇದು ಏನೇ ಇರಲಿ ರೈತರು ಕ್ಷಾಮ ಬಾಧೆಯಿಂದ ತತ್ತರಿಸಿಹೋಗಿದ್ದಾರೆ- ಪಚ್ಚೊಳ್ಳಿ-ಕವು ತಾಳಂ ರಸ್ತೆಯ ಕಾರ್ಯಕ್ಕೆ 3 ಸಾವಿರ ಕ್ಕಿಂತಲೂ ಹೆಚ್ಚಾಗಿ ಕೂಲಿಕಾರರು ಬರುತ್ತಲಿರುವರು- ಈ ಕಾರಣ ಕಲೆಕ್ಟರವರು ತಕ್ಷಣ ಸಿರುಗುಪ್ಪೆ ಭಾಗದ ಹಣ್ಣೊಳ್ಳಿ ಸ್ಪೆಶಲ್ಲಿ ಸರಕಾರಿ ಹಣದ ವಸೂಲಿ ಮುಂದಕ್ಕೆ ಹಾಕುವರೆಂದು ಆಶಿಸುತ್ತೇನೆ.

ಕೊಲಂಬೋ ನಗರದಲ್ಲಿ ವಿಮಾನ ನುಶ್ಚಿಗೆಯ ಸೂಜನೆ ಕೊಡಲಾಗಿತ್ತು. ಆಸ್ಟ್ರೇಲಿಯಾಕ್ಕೆ ಅಮೆರಿಕಾವ ಬಾಂಬರ್‌ಗಳು ಕಳುಹಿಸಲಾಗುತ್ತಿರುವವೆಂದು ಗೊತ್ತಾಗಿದೆ

ಕೂಡ್ಲಿಗಿ.

ಶ್ರೀ ಹನುಮಾನ್ ವ್ಯಾಯಾಮಶಾಲೆಯ 3ನೇ ವಾರ್ಷಿಕ "ಚಡುಗುಡುಸಂದ್ಯಾಟ"ವು 1942ನೇ ಸಂವತ್ಸರ ಏಪ್ರಿಲ್ ತಿಂಗಳು 19 20 21 (ಮೂರು ದಿನಸಗಳು ಜರುಗುವವು. ಪ್ರವೇಶ ಧನ ರೂಪಾಯಿ ನಾಲ್ಕು [ರೂ ೪-೦-೦] ಪ್ರವೇಶ ಧನ ಕಳುಹಿಸಲಿಕ್ಕೆ ಕೊನೆಯ ತಾರೀಖು 6-4-42 ಶ್ರೀ ನರಹರೀಚಾರ್ಯ ಕಾರ್ಯದರ್ಶಿ ಕೂಡ್ಲಿಗಿ ಇವರಿಗೆ ಮೇಲ್ಕಂಡ ಪ್ರವೇಶ ಧನವನ್ನು ಕಳುಹಿಸತಕ್ಕದ್ದು ಜಿಲ್ಲೆಯ ಲ್ಲಿಯ ಎಲ್ಲಾತರದ ಗುಂಪಿನವರಿಗೂ ದೇಶೀಯ ಆಟದಲ್ಲಿ ಭಾಗವಹಿಸಲು ಬರುತ್ತದೆ ಪ್ರೋತ್ಸಾಹನಬೇಕಾಗಿ ವಿನ್ಸಪ

ಎಮ್ಮಿಗನೂರು (ಆದವಾನಿ)

4-4-42ನೆಯ ಶನಿವಾರ ಸಾಯಂಕಾಲ 3 ಘಂಟೆಗೆ ಬೋರ್ಡು ಹೈಸ್ಕೂಲಿನ ವಾರ್ಷಿಕೋತ್ಸವವು ಬಿ. ಭೀಮರಾವ್ ಬಿ. ಎ. ಬಿ. ಎಲ್. (ಎಂ. ಎಲ್. ಬಿ.) ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾಲೆಯ ಪರಿಸ್ಥಿತಿ ವಾರ್ಷಿಕ ಪ್ರಗತಿ ವರ್ಷರೆ ವರದಿಯಲ್ಲಿ ನವೇಚಿಸಲಾಗಿದ್ದಿತು. ಅಧ್ಯಕ್ಷರು ತಮ್ಮನ್ನು ಆಹ್ವಾನಿಸಿದ್ದಕ್ಕಾಗಿ ವಂದಿಸಿ ವಿದ್ಯಾಭ್ಯಾಸ ನಿಷಯವಲ್ಲಿ ಉತ್ತಮ ಸಲಹೆಗಳನ್ನು ಕೊಟ್ಟರು. ನಂದ ನಾರ್ಪಣೆಯಾದನಂತರ ಸಭೆಯು ನುಗಿಯಿತು. ಮುಸಲ್ಮಾನ ಬಡ ವಿದ್ಯಾರ್ಥಿಗಳ ಸಲುವಾಗಿ ರಾತ್ರಿ ನಾಟಕವು ಏರ್ಪಟ್ಟಿದ್ದಿತು.

ಬರ್ಮಾದಲ್ಲಿ ಯುದ್ಧ.

ಅಕ್ಯಾಬದಲ್ಲಿ ಜಪಾನರು ಇಳಿದಿಲ್ಲ.

ಉತ್ತರ ಬರ್ಮಾದಲ್ಲಿ ಚೀನೀಯರಿಗೂ ಜಪಾನರಿಗೂ ಭಯಂಕರ ಕದನವು ಸಾಗಿದೆ ಉತ್ತರದ ಕಡೆಯಿಂದ ಜಪಾನೀ ವಂದುಗಳು ಟೂಂಗೂನಗರವನ್ನು ಪ್ರವೇಶಿಸಿದೆಂದೂ ನಗರದ ಕೆಲ ಭಾಗವು ಚೈನೀಯರ ಕೈಯ್ಯಲ್ಲಿದೆ ಯೆಂತಲೂ ಗೊತ್ತಾಗಿದೆ. ಈ ಯುದ್ಧದಲ್ಲಿ ಜಪಾನರ 9 ಸಾವಿರ ಜನರು ಬರ್ಮಾದಲ್ಲಿನ ಪಂಚಮವಳೆದವರನ್ನು ಕೂಡಿಕೊಂಡು ಹೋರಾಟ ನಡೆಸುತ್ತಿರುವರಂತೆ.

ಬ್ರಿಟಿಷು ಸೈನ್ಯಗಳು ಬರ್ಮಾದಲ್ಲಿ ಪ್ರೋಂಭಾಗದಿಂದ ಹಿಂದಕ್ಕೆ ಬಂದು ದೃಢವಾಗಿರುವ ಸ್ಥಾನಗಳನ್ನು ಆಕ್ರಮಿಸಿನೆಯೆಂದು ಇತ್ತೀಚಿನ ಸುದ್ದಿಗಳಿಂದ ಗೊತ್ತಾಗಿದೆ ಅಕ್ಯಾಬ್‌ಬಂದರನ್ನು ಜಪಾನಿ ಸೈನ್ಯಗಳು ಪ್ರವೇಶಿಸಿವೆಯೆಂದು ಜಂಕಿಂಗ್ ಸರ್ಕಾರಿಯು ಹೇಳುತ್ತದೆ ಇದು ನಿಜವಿದ್ದಲ್ಲಿ ಹಿಂದೂಸ್ತಾನಕ್ಕೆ ಬಹಳ ಸಮೀಪದಲ್ಲಿ ಜಪಾನರು ಬಂದಂತಾಯಿತು ಕಲ್ಕತ್ತಾದಿಂದ ತಕ್ಕಾಬ್‌ಗೆ ೩೬೦ ಮೈಲಿಮಾತ್ರ ದೂರವಿದೆ

ಸಮುದ್ರದ ಮೂಲಕ ಜಪಾನ ಸೇನೆಯು ಬರುತ್ತಿರುವದೆಂದೂ, ಚೀನರನ್ನು ಹಿಮ್ಮೆಟ್ಟಿಸಲು ಜಪಾನರು ನಿಷವಾಯುನಿನ ಪ್ರಯೋಗವನ್ನು ಮಾಡಿದರೆಂದೂ ಜಂಕಿಂಗಬಾಯು ತಿಳಿಸುತ್ತದೆ

ಕಲ್ಕತ್ತೆಗೆ ೩೬೦ಮೈಲಿ ದೂರವಿರುವ ಬರ್ಮಾದ ಬಂದರ ಆಕ್ಯಾಬದಲ್ಲಿ ಜಪಾನರು ಇಳಿದಿರುವ ವಾರ್ತೆಯು ನಿಜವಲ್ಲವೆಂದು ದೆಹಲಿ ವಾರ್ತೆಯು ಸಾರಿದೆ

ಆಸ್ಟ್ರೇಲಿಯಾದಲ್ಲಿ ಜಪಾನರು.

ಆಸ್ಟ್ರೇಲಿಯಾದ ಉತ್ತರಕ್ಕೆರುವ ಡಾರ್ವಿನ್ ಬಂದರದ ಮೇಲೆ ಎಂಟನೆಯ ಸಲ ದಾಳಿಯಾಯಿತು. ಆಸ್ಪತ್ರೆಯಾನಿಯು ಆಗಿರುವುದಿಲ್ಲವೆಂತ ಪ್ರಕಟಿಸಲಾಗಿದೆ. ೨

ರಷ್ಯ-ಜರ್ಮನಿ

ರಷ್ಯಾವಲ್ಲಿ ಜರ್ಮನರ ಪ್ರತಿದಾಳಿಯು ಒಂದೇಸಲ ಹೆಚ್ಚಾಗಿದೆ. ಲೆನಿನ್‌ಗ್ರಾದ ಪ್ರದೇಶದಲ್ಲಿ ಒಂದುಕಡೆ ಜರ್ಮನರು ರಷ್ಯನರ ಪ್ರಾಬಲ್ಯವನ್ನು ನುರಿದಿರುವರೆಂದು ಪ್ರಕಟವಾಗಿದೆ ಕ್ಯಾಲಿನಿನ ಭಾಗದಲ್ಲಿಯೂ ಘೋರ ಕಾಳಗ ಸಾಗಿದೆ ಅಸಂಖ್ಯಾತ ಟ್ಯಾಂಕುಗಳ ಸಹಾಯದಿಂದ ಜರ್ಮನರು ದಾಳಿಮಾಡುತ್ತಿದ್ದು ಅವರ ಬಲವು ಹೆಚ್ಚಿದ್ದಕಾರಣ ರಷ್ಯನರು ಹಿಂದಕ್ಕೆ ಸರಿಯಬೇಕಾಯಿತಂತೆ

ಕ್ರಿಪ್ಸರ ಸೂಚನೆಗಳು:- ಹಿಂದೂ ಮಹಾಸಭೆ ಮತ್ತು ಸಿಕ್ಖರವರಿಂದ ತಿರಸ್ಕೃತವಾಗಿವೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರ ನಿರ್ಣಯವನ್ನು ಅಧ್ಯಕ್ಷರಾದ ಆಜಾದರೂ ಸಹರೂರವರೂ, ಸರ್‌ಸ್ವಾಮಿಯವರಿಗೆ ಒಪ್ಪಿವರು. ಜಿನ್ನಾರವರು ತಮ್ಮ ನಿರ್ಣಯವನ್ನು ಕೊಟ್ಟಿಲ್ಲ.

ಮಹಾತ್ಮ ಗಾಂಧಿಯವರ ಲೇಖನಿಗಳು.

(ತನೆಯ ಪುಟದಿಂದ)

ಈ ಪ್ರಶ್ನೆಗಳು ಸರಿಯಷ್ಟೆ, ಎರಡೂ ಪ್ರಶ್ನೆಗಳಿಗೆ ಒಂದೇ ಬಗೆಯ ಉತ್ತರವನ್ನು ಹೇಳಬೇಕಾಗುವದು, ಹಿಂದೂ ಧರ್ಮವು ಬಾಳಬೇಕಾದರೆ, ಅದರ ಸಲುವಾಗಿ ಜನರು ತ್ಯಾಗವನ್ನು ಆರಿಸಲು ಸಿದ್ಧರಾಗಬೇಕಾದರೆ, ಅಸ್ಪೃಶ್ಯತೆಯ ಕಲಂಕವನ್ನು ಕಿತ್ತೊಗೆಯಬೇಕೆಂದು ಅನಿಸುತ್ತಿರುವವರೆಲ್ಲರೂ ಅನರು ಕಾಂಗ್ರೆಸ್‌ದವರೇ ಇರಲಿ ಬೇರೆಯವರೇ ಇರಲಿ ಹರಿಜನರಿಗೆ ಪ್ರವೇಶ ವಿಲ್ಲದ ಸ್ಥಳಗಳನ್ನು ಬಹಿಷ್ಕರಿಸಬೇಕು, ಸೇವಕನು ಕೇಳಿದ ಪ್ರಶ್ನೆಗಳು ಕಲವು ಸಂದರ್ಭಗಳಲ್ಲಿ ಬಹಳ ಕಠಿಣವಾಗಿರುವವು, ಆದರೆ ಕಠಿಣ ಪರಿಸ್ಥಿತಿಯನ್ನು ಉಗ್ರರಿತಿಯಿಂದಲೇ ಬಡಿಸಿ ದಾಟುವವರೆಗೆ ಯಾವ ಉದ್ಧೇಶವೂ ಪೂರ್ತಿಗೊಳ್ಳಲಾರದು.

ಕೆಲವು ಸಂದರ್ಭಗಳಲ್ಲಿ ಈ ಪ್ರಶ್ನೆಯು ದಿಗಿಲಿನದಾಗುವದು, ಇತರ ಕಸಬುಗಾರರಂತೆ ಅಗಸರನ್ನೂ ಅವಿಲ ಭಾರತ ಚರಕ ಸಂಘದವರು ಪ್ರೋತ್ಸಾಹಿಸಿ ತ್ರಿರವರು, ಈ ಕಲಂಕದಲ್ಲಿ ಅಸ್ಪೃಶ್ಯತೆಯೆಂಬ ಎಂಬವನ್ನು ತಿಳಿಸಿಕೊಡಲು ಸಾಧ್ಯವಾಗವನ್ನು ಅಸ್ಪೃಶ್ಯತೆಗೆ ಇನರು ಅಂಟಿಕೊಂಡಿರುವರು, ಅಸ್ಪೃಶ್ಯತೆಯನ್ನು ಪಾಲಿಸುವ ಎಲ್ಲ ಕಸಬುಗಾರರನ್ನೂ ಬಹಿಷ್ಕರಿಸಬೇಕೆಂದು ಒಮ್ಮೆಲೇ ಅಖಿಲಭಾರತ ಚರಖ ಸಂಘಕ್ಕೆ ಹೇಳಲಾರೆನಾದರೂ ಈ ಸಂದರ್ಭಗಳ ಬಗ್ಗೆ ಇಂದಿನವರೆಗಿಂತ ಹೆಚ್ಚು ಆತ್ಮೆಯನ್ನು ತಾಳಿಸಬೇಕೆಂಬಲ್ಲಿ ಸಂದೇಹವಿಲ್ಲ, ಮೂಢ ಭಕ್ತಿಯನ್ನು ಬಿಟ್ಟು ಕೊಟ್ಟವರಿಗೆ ಮೊದಲು ಪ್ರಾಶಸ್ತ್ಯ ಕೊಡುವದು ಅಸ್ಪೃಶ್ಯತೆಯ ವಿಷದಿಂದ ಮೂಷಿತರಾದವನ್ನು ಕಾಣುವ ಬಗೆಯನ್ನೇ ಹೆಚ್ಚು ಅನಲಂಬಿಸಿದೆ.

ಬಳ್ಳಾರಿಯಲ್ಲಿ ಆರ್ಯವೈಶ್ಯರ ಚಟುವಟಿಕೆಗಳು.

ಆರ್ಯವೈಶ್ಯಯುವಜನ ಸಂಘವು ಪರವಾಗಿ ಶ್ರೀ ನಗರೇಶ್ವರ ದೇವಾಲಯದಲ್ಲಿ ಶ್ರೀರಾಮ ನವರಾತ್ರಿ ಮಹೋತ್ಸವಗಳು 18.3.42 ರಿಂದ 26.3.42 ರ ವರೆಗೆ 9 ದಿನಗಳು ವೈಭವವಾಗಿ ನಡೆದವು. ನಕ್ತೆ ಮವ ಗಿ ಐನ್ಯಹಾರಾಧನೆ ಒಂದೂ ವಿಷಾವ ಧರ್ಮ, ಸ್ಥಪಕಲಸ-ನಿರುದ್ಯೋಗ-ಆಯುರ್ವೇದ-ವ್ಯಾಯಾಮ-ಪತಿಭಕ್ತಿ- ಪತ್ನಿಸೇವ ಧಾನ ಸ್ತ್ರೀಸ್ವಾತಂತ್ರ್ಯ. ಹಿಂದೂಮತ ಈ ವಿಷಯಗಳ ಬಗ್ಗೆ ಸುಮಾರು 40 ಭಾಷಣಕಾರರು ಈ ದಿನಗಳಲ್ಲಿ ಉಪನ್ಯಾಸ ಕೊಟ್ಟರು. ಪ್ರತಿನಿತ್ಯವೂ ಕೇರ್ತಿಶೇಷ ಅಗಡಿಸಿದ್ದಪ್ಪನವರ ಧರ್ಮನಿಧಿಯಿಂದ ಪ್ರಸಾದ ವಿನಿಯೋಗವು ಗುತ್ತಲಿತ್ತು. 4.5 ಜನ ವೈಶ್ಯಮಹಿಳೆಯರೂ ಕೂಡ ಭಾಷಣ ಕೊಟ್ಟರು. ಎಲ್ಲಾ ಭಾಷಣಗಳಲ್ಲೂ ರಾಷ್ಟ್ರೀಯತೆಯು Nationalism ತುಂಬಿತುಳುಕುತ್ತಲಿತ್ತು. ಅಗಡಿ ಹಾಸ್ಪಿಲ್ 'ರಾಯಲ ಬಾಲ ವೈಶ್ಯ ಸಾರಸ್ವತ ಸಂಘ'ದ ಸ್ಥಳವು ವಾಷಿಕೋತ್ಸವವು ಆಂಧ್ರ ಮಹಾಭಾಕಾರ್ಯದರ್ಶಿ ಶ್ರೀ ಖಾಪನ್ನಗುಪ್ತರವರ ಆಧಿಪತ್ಯದಲ್ಲಿ 28.ನೆ ಸಾ. ನತೆಯಿತು ಶ್ರೀ ಗು. ತಿಮ್ಮಪ್ಪನವರು ಸಾರಸ್ವತ ವಿಷಯವಾಗಿ ಮಾತಾಡಿದರು, ಶ್ರೀಮತಿ ವರಲಕ್ಷ್ಮಮ್ಮನವರು ಬಹುಮಾನಗಳನ್ನು ಹಂಚಿದರು.

ಶ್ರೀ ಸತ್ಯಧ್ಯಾನತೀರ್ಥ ಶ್ರೀ ಪಾದಂಗಳವರು.

ಶ್ರೀಗಳು ಸಂಧಿಗ್ಧಪರಿಸ್ಥಿತಿಯಲ್ಲಿ ಸ್ಯಂಯಾಸವನ್ನು ಸ್ವೀಕರಿಸಿದ ಬಗ್ಗೆ ವಿವಾದವನ್ನು ವ್ಯಕ್ತಪಡಿಸಿ ಸರು ಬಳ್ಳಾರಿ ಪುರಸಭೆಯು ಶ್ರೀ ಸ್ಯೂಮಾರು ಸುಬ್ಬಣ್ಣಾಚಾರ್ಯರ ಅಧ್ಯಕ್ಷತೆಯಲ್ಲಿ ಬಳ್ಳಾರಿ ನಗರದ ಲಕ್ಷ್ಮೀನಾರಾಯಣದೇವಸ್ಥಾನದಲ್ಲಿ 27-3-42 ನೆಯ ತಾ. ಬುಧವಾರ ನಡೆಯಿತು. ಶ್ರೀಗಳ ದಿವ್ಯ ಭೂಮಾಚಾರ್ಯ, ಬಿ. ಭೀಮರಾವ್, ಗೋವಿಂದರಾವು, ಕೃಷ್ಣಮೂರ್ತಿ ಆಚಾರ್ಯರು ಶ್ರೀಗಳು ದೈವೀಕತೆಗೆ ತಕ್ಕಾಗಿ ಮಾಡಿದ ಮಹೋಪಕಾರ ಅವರ ಅಗಾಧ ಪಾಂಡಿತ್ಯವನ್ನು ಕುರಿತು ಗುಣಗಾನಮಾಡಿದರು. ವಿಷಾದಪೂರಿತ ನಿರ್ಣಯವಾಗಿ ಶ್ರೀಗಳ ಛಾಯಾ ಚಿತ್ರಕ್ಕೆ ಪೂಜೆಯು ನಡೆಯಿತು.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.



ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮೂಡಿಸಿ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇನೆ. ಬೆಸ್ಟ್ ಎಂಡ್ ಮಾಜುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ವಯವಿಟ್ಟು ಬಂದು ಪರೀಕ್ಷಿಸಿರಿ.

ಸಿಂಗಪುರ-ಜಾನಾಪತನ ಹಿಂದೂಸ್ಥಾನಕ್ಕಾದ ನಷ್ಟ.

ಹಿಂದೂಸ್ಥಾನದಲ್ಲಿ 5 ಕೋಟಿ ರೂಪಾಯಿ ಬೆಲೆಯ 50 ಲಕ್ಷ ಮಣ ಅಡಿಕೆಯು ಚಿಲೆಯುತ್ತದೆ. ಪ್ರತಿವರ್ಷ 6 ಕೋಟಿ ರೂಪಾಯಿ ಬೆಲೆಯ 60 ಲಕ್ಷ ಮಣ ಅಡಿಕೆಯನ್ನು ನಾವು ಸಿಂಗಾಪುರದಿಂದ ತರಿಸಿಕೊಳ್ಳುತ್ತಿದ್ದೆವು.

ಜಗತ್ತಿನಲ್ಲಿ ಪ್ರತಿವರ್ಷ ವೆಚ್ಚವಾಗುವ ಮೆಣಸಿನ ಅರ್ಧಭಾಗವನ್ನು ಸಿಂಗಾಪುರವು ಪೂರೈಸುತ್ತ ಬಂದಿದೆ

ಹಿಂದೂಸ್ಥಾನಕ್ಕೆ ಪ್ರತಿವರ್ಷ ಬೇಕಾಗುವ ಸಕ್ಕರೆಯ ಅರ್ಧಭಾಗವನ್ನು ಜಾನಾದ್ವೀಪವು ಪೂರೈಸುತ್ತಬಂದಿದೆ.

ಉತ್ತರಬರ್ಮಾದಲ್ಲಿ ಟಂಗೂ ಪಟ್ಟಣವನ್ನು ಪಾಲಿಮಾಡಲಾಯ್ತೆಂದೂ ಜಪಾನರು ಪ್ರೋಮ ನಗರವನ್ನು ಪಾಟ ಮಾಂಡಲೆಕಡೆ ನುಗ್ಗುತ್ತಲಿರುವರೆಂದೂ ಸುದ್ದಿ ಬಂದಿದೆ. ಜಪಾನೀಯರಿಗೆ ವಿಮಾನದಳದಲ್ಲಿ ಶ್ರೇಷ್ಠತೆ ಇರುವದೆಂಬುದನ್ನು ಒಂದು ವಾರ್ತಾಸಂಸ್ಥೆಯು ಒಪ್ಪಿಕೊಂಡಿದೆ.

ರಷ್ಯಾದಲ್ಲಿ ಕಾಮೋ ವ ನಗರವನ್ನು ಹಿಡಿಯಲು ರಷ್ಯನರು ಮುನ್ನುಗ್ಗುತ್ತಿರುವರು. ಬಲ್ಗೇರಿಯಾ ದೇಶವು ರಷ್ಯಾವೇಳೆಯುದ್ಧಮಾಡಿ ತನ್ನ ಸೈನ್ಯಗಳನ್ನು ಜಪಾನ ಸಹಾಯಕ್ಕೆ ಕಳುಹಿಸಲಿರುವದೆಂದೂ ಈ ಕಾರಣ ತುರ್ಕಿಯಲ್ಲಿ ಗಡಿಬಿಡಿ ಎದ್ದಿರುವದೆಂದೂ ಸುದ್ದಿಯಿದೆ. ಬಲ್ಗೇರಿಯಾ ರಾಜರಾದ ಬೋರಿಸ್‌ರವರು ಹಿಟ್ಲರನನ್ನು ಕಾಣಲು ಕೆಲದಿನಗಳ ಕೆಳಗೆ ಬರ್ಲಿನ್ ನಗರಕ್ಕೆ ಹೋಗಿದ್ದರು.



ಎಣ್ಣೆ ಕಳಿ

ನಿಮ್ಮ ಉಪ್ಪಿನಕಾಯಿಯು ಚೆನ್ನಾಗಿರಬೇಕೆಂದರೆ
ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ
ಉಪ್ಪಿನಕಾಯಿಯು ಮೆತ್ತಗಾಗುವುದಿಲ್ಲ.
,, ಮುಗ್ಗು ಯಾ ಬೂಜು ಹಿಡಿಯುವುದಿಲ್ಲ
,, ಹುಳಿವಾಸನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಬಲ್ಲದೆ
ಅಮಿತವಾದ ರುಚಿಯನ್ನುಂಟು ಮಾಡುವುದು.
A. S. ಸೀಲನ್ನು ಗಮನಿಸಿ. ಕೊಳ್ಳರಿ. ಮೋಸಹೋಗಿ ಬೇಡಿರಿ

ದೊರೆಯುವ ಸ್ಥಳ. 1) ಎಂ. ಹುಶೇಂಜಿರಾವು,
ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ವಿ. ಯಂ. ಗಿರಿ ಆಂಡ್ ಸನ್ಸ್, ಬಳ್ಳಾರಿ.

Visit Royal Cafe
Near Royal Picture Palace
Royal Cafe is ROYAL.

ನಾವು ಕಣ್ಣುಗಳನ್ನು ಉಚಿತವಾಗಿ
ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಿಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಿಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮ ಷಿಪ್ ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons. Bellary

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦	ಅಂಚೆ ವೆಚ್ಚ ಬೇರೆ	
ಕನ್ನಡ ದಶೋಪನಿಷತ್ತುಗಳು	೦—೪—೦	ಪ್ರತಿಕ ವ್ಯಾಪಾರಿಗಳಿ	
ವಿವಾಹವನ ಬೋಧೆ	೦—೨—೦	ದ ಹೊಸ ಪುಸ್ತಕ	
ಸುಮನ ಲತೆ	೦—೧—೦	ಕೊಳ್ಳುವವರಿಗೂ ಧಾರಾ	
		ವಾದ ಕಮೀಶನ್	

ಕಾಲನ ಸುಬ್ಬಣ್ಣ, ಮುಚ್ಚಂಟು, ಬಳ್ಳಾರಿ.

ಜಾಹೀರಾತಿಗಾಗಿ

ಕಾದಿಡಲ್ಪಟ್ಟಿದೆ.

ರಾಷ್ಟ್ರಭಾಷೆಯಾದ ಹಿಂದಿ - ಹಿಂದೂಸ್ಥಾನಿ
ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,.....
- ವ್ಯವಹಾರದ ಭಾಷೆಯನ್ನು ಕಲಿಯಲು,.....
- ಮಾತಾಡುವುದನ್ನು ಕಲಿಯಲು,.....
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರಿಲ್ಲಿ ನಿವೇದಿಸಿರಿ ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಸಾಧ್ಯ ಪುಸ್ತಕಗಳು, ಕಛೇರಿ ವಾತಾವರಿ ಮೊದಲಾದವುಗಳ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ. ಪುಟಿಕವಾಗಿ ಹೇಳಲಾಗುವುದು

ಟಿ. ಬಿ. ಕೇಶವರಾವ್,
ಕೃಷ್ಣ ಸಾಹುಕಾರ ಕಾಂಪೌಂಡು, ಬಳ್ಳಾರಿ.

NAVA BHARAT BELLARY.
With which is incorporated Congress Bulletin
THE LEADING NATIONAL WEEKLY.
ನವ ಭಾರತ ಬಳ್ಳಾರಿ.
ಜನಪ್ರಿಯ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription
Annual
Local 2—0—0
Moffusil 3—0—0
6 Months
Local 1—4—0
Moffusil 2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri _____

Printed at Vital Press, Car Street Edited & Published by T. B. Keshava Rao, Bellary

Reg. No. M. 3937 ನಂದೇ ಮಾತರಂ'

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಭೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೩೯ ಬಳ್ಳಾರಿ ಏಪ್ರೆಲ್ ೧೨ ನೇ ಭಾನುವಾರ ೧೯೪೨. ಟಿ. ವಿ. ಕೇಶವರಾವ್



★ ರಕ್ಷಣೆಯೊಂದಿಗೆ ಹಡಗಿನ ಪ್ರಯಾಣ ★

ಈಗ ಪ್ರಪಂಚದಲ್ಲಿ ಸಮುದ್ರಗಳಲ್ಲಿ ಜಲಾಂತರ್ಗಾಮಿಗಳ ಹಾವಳಿಯು ವಿಶೇಷವಾಗಿದೆ. ರಕ್ಷಣೆಯಿಲ್ಲದೆ ವರ್ತಕ ಹಡಗುಗಳು ಪ್ರಯಾಣಮಾಡುವಂತಿಲ್ಲ. ಪ್ರಯಾಣಕ್ಕೆ ಮುಂಚೆ ಸರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಮೇಲ್ಕಾಣಿಸಿದ ಚಿತ್ರವು ಪ್ರಯಾಣಕ್ಕೆ ಪೂರ್ವ ನಡೆಯುವ ಏರ್ಪಾಟುಗಳನ್ನು ಸೂಚಿಸುತ್ತದೆ.

೧ ಮತ್ತು ೨ನೆಯಗಳು:- ಬ್ರಿಟಿಷ್ ವರ್ತಕ ಹಡಗುಗಳ ಮಾಲೀಕರು - ಚಾಲಕರೂ ತಕ್ಕ ಸಲಹೆ ಸೂಚನೆಗಳನ್ನು ಹೊಂದಲು ಸಭೆಗಾಗಿ ತೆರಳುತ್ತಿರುವುದು.

೩ನೇ ಚಿತ್ರ:— ಸಭೆಯಲ್ಲಿ ಸೂಚನೆಗಳನ್ನು ಹೇಳುವುದು.

೪ನೇ ಚಿತ್ರ:— ಬ್ರಿಟಿಷ ನಾವಿಕಾ ಖಾತೆಯ ರಕ್ಷಣೆಯಲ್ಲಿ ವರ್ತಕ ಹಡಗುಗಳ ಪ್ರಯಾಣ.

ಯುರೋಪಿನ ಛಳಿಗಾಲವು ಮುಗಿಯಿತು. 3 ತಿಂಗಳಿಂದ ರಷ್ಯದ ಅಸಾಧ್ಯ ಛಳಿ ನಾಜಿಗಳಿಗೆ ಮೃತ್ಯುವೆನಿಸಿತು. ಮಿಲಿಟರಿ ಚಟುವಟಿಕೆಗೆ ಅನುಕೂಲವಾದ ವಾತಾವರಣವೀಗ ಮತ್ತೆ ತಲೆ ಹಾಕಿದೆ. ಈಗ ಎಲ್ಲರ ಕಣ್ಣೂ ನಾಜಿಗಳ ಮೇಲೆ ಕೇಂದ್ರೀಕೃತವಾಗಿದೆ. ಎಲ್ಲಿ ನೋಡಿದರೂ ಅವರು ಮುಂದೆ ಯಾವ ಕಡೆ ಏಟುಹಾಕುವರೆಂಬ ಊಹಾಪೋಹನೆ!

ರಷ್ಯಾರಣರಂಗ

ಈಗ ಮೂರು ತಿಂಗಳಿಂದ ರಷ್ಯನರು ಜರ್ಮನ್ ಸೇನೆಯನ್ನು ಸದೆಬಡೆದರು: ಅಪೂರ್ವ ಪೌರುಷದಿಂದ ಶತ್ರುಗಳನ್ನು ಹಿಂದಕ್ಕೆ ಅಟ್ಟಿದರು. ನೂರಾರು ಹಳ್ಳಿಗಳನ್ನು ನಾಜಿಗಳ ಬಂಧನದಿಂದ ಬಿಡಿಸಿದರು. ಜರ್ಮನರಿಗೆ ಅಪಾರ ನಷ್ಟವಾಗಿ ಹೊಸ ಹೊಸ ಪಡೆಗಳನ್ನು ಅವರು ಪಶ್ಚಿಮ ಯೂರೋಪಿನಿಂದ ರಷ್ಯಾ ರಂಗಕ್ಕೆ ಕರೆತರಬೇಕಾಯಿತು. ಆದರೂ ರಷ್ಯನರ ಮುಂದೋಟವನ್ನು ನಾಜಿಗಳು ತಡೆಯಲಾರದೆ ಹೋದರು. ಇಂದಿಗೂ ನಾಜಿಗಳು ಹಿಂಜೇಟು ಹಾಕುತ್ತಲೇ ಇದ್ದಾರೆ.

ಇಷ್ಟು ಕಷ್ಟವಾಗಿದ್ದರೂ ನಾಜಿಗಳ ಸಂಗ್ರಾಮಶಕ್ತಿ ಬಹುವಾಗಿ ಕುಂದಿದೆಯೆಂದು ಭಾವಿಸಲಾಗಿದೆ. ನಾಜಿ ಸಂಗ್ರಾಮ ಯಂತ್ರವು ಸಾಮಾನ್ಯವಾದುದಲ್ಲ. ಅದನ್ನು ಧ್ವಂಸ ಮಾಡಬೇಕಾದರೆ ಮಿತ್ರರಾಷ್ಟ್ರಗಳು ಅಪೂರ್ವ ತ್ಯಾಗಕ್ಕೆ ಸಿದ್ಧರಾಗಬೇಕಾಗಿದೆ. ನಾಜಿಗಳೀಗ ರಷ್ಯಾದಲ್ಲಿ ಮುಖ್ಯವಾಗಿ ದಕ್ಷಿಣ ರಂಗಕ್ಕೆ ಗಮನಕೊಡುವರೆಂಬ ಊಹೆ ಬಲವಾಗಿದೆ. ಕಾಕಸಸ್ ಕ್ಷೇತ್ರದನೇಲೆ ಹಿಟ್ಲರನಿಗೆ ಮೊದಲಿನಿಂದಲೂ ಕಣ್ಣು. ನಾಜಿ ಯಂತ್ರವು ಕಾಕಸಸ್ ಎಣ್ಣೆ ಕುಡಿದು ಬಲಯುತವಾಗಬೇಕೆಂಬು ಅವನ ಹಂಬಲ. ದಕ್ಷಿಣದಿಂದ ಕಾಕಸ್ ಮುತ್ತಲು ಈಗ ತುರ್ಕಿಯು ಅಡಚಣೆಯಾಗಿ ಕೂತಿದೆ. ಆದ್ದರಿಂದ ತುರ್ಕಿಯನ್ನು ಮುಗಿಸಿದರೆ ಕಾಕಸಸ್ ಮೇಲೆ ಬೀಳಲು ಸುತ್ತು ಇಲ್ಲಿಂದ ಇಜೆ ಇರುವ ಇರಾಕ್ ಮತ್ತು ಇರಾನ್‌ಗಳನ್ನು ಮುತ್ತಲು ಅನುಕೂಲವಾಗುವುದೆಂದು ನಾಜಿಗಳು ಆಲೋಚನೆ ಮಾಡಿರುವಂತಿದೆ. ನಾಜಿಗಳಾಗಲೇ ತುರ್ಕಿಯ ಮುಂದೆ ಹಲವು ಬೇಡಿಕೆಗಳನ್ನು ಸಹ ಇಡುವುದರಲ್ಲಿದ್ದಾರೆಂದು ತಿಳಿದುಬಂದಿದೆ. ಈ ಕಾರ್ಯಕ್ಕಾಗಿ ಹರ್ ಹಿಟ್ಲರನು ಬಲ್ಗೇರಿಯಾವನ್ನು ಎತ್ತಿ ಕಟ್ಟಿದ್ದಾನೆ. ಇತ್ತೀಚೆಗೆ ಬೋರಿಸ್



(ಶ್ರೀ ತಿರುನುಲೆ ತಾತಾಚಾರ್ಯಶರ್ಮ.)

ಅರಸರ ಮತ್ತು ಹರ್ ಹಿಟ್ಲರನ ಭೇಟಿಯೂ ಆಯಿತು. ಬಲ್ಗೇರಿಯಾ ಸಹಕಾರವನ್ನು ಗಳಿಸಿದರೆ ತುರ್ಕಿಯನ್ನು ಸುಲಭವಾಗಿ ನಾಜಿಗಳು ಮುತ್ತಬಹುದು. ಈಗಾಗಲೇ ರ್ಹೋಡ್ಸ್ ಮತ್ತು ಡೊಲಕನೀಸ್ ದ್ವೀಪಗಳಲ್ಲಿ ನಾಜಿಗಳ ಸಿದ್ಧತೆ ಆಪಾರವಾಗಿದೆಯೆಂದು ತಿಳಿದುಬಂದಿದೆ. ಕಪ್ಪುಕಡಲಿನ ಬಂದರುಗಳಾದ ವರ್ನ ಮತ್ತು ಕಾನ್ಸ್‌ಟಾಂಜಾ ಬಂದರುಗಳಲ್ಲಿ ಅಪಾರ ನಾಜಿ ನೌಕೆಗಳು ನಿಂತಿವೆ. ಜಪಾನ್ ಬ್ರಾಚಿಟ್ಸ್‌ರವರು ಇತ್ತೀಚೆಗೆ ಈ ಸಂಬಂಧದಲ್ಲಿ ಗ್ರೀಸಿಗೆ ಭೇಟಿಕೊಟ್ಟಿದ್ದರೆಂದು ವದಂತಿ. ಅಂತೂ ನಾಜಿಗಳು ರಷ್ಯವ ದಕ್ಷಿಣದಲ್ಲಿ ಏಟುಹಾಕುವದೇನೋ ಖಂಡಿತ. ಮಧ್ಯಪೂರ್ವದಲ್ಲಿ ಜಪಾನಿನೊಡನೆ ಸೇರಬೇಕೆಂಬ ಒಯಕೆ ಬೇರೆ ಹಿಟ್ಲರನನ್ನು ಮುಂದೆ ತಳ್ಳುತ್ತಿದೆಯೆಂದು ಹಲವರು ಊಹೆ ಮಾಡುತ್ತಿದ್ದಾರೆ.

ಮಾಲ್ಟಾ ಮೇಲೆ ಮುತ್ತಿಗೆ

ಜರ್ಮನಿಯು ತನ್ನ ಬಲಯುತ ಬಾಂಬರು ಪಡೆಗಳನ್ನೆಲ್ಲ ಈಗ ಸಿಸಿಲಿಗೂ ಮತ್ತು ಪೂರ್ವರಂಗಕ್ಕೂ ಕಳಿಸಿಬಿಟ್ಟಿದೆ. ಸಿಸಿಲಿಯಿಂದ ನಾಜಿ ವಿಮಾನಗಳು ಪೊರಟು ಮಾಲ್ಟಾ ದ್ವೀಪದ ಮೇಲೆ ಉಗ್ರಮುತ್ತಿಗೆಗಳನ್ನು ನಡೆಸುತ್ತಿವೆ. ಸಿಸಿಲಿಗೆ ಅತಿ ಸಮೀಪವಲ್ಲಿದ್ದರೂ ಅದು ಇದುವರೆಗೆ ಅತ್ಯ ರಕ್ಷಣೆ ಮಾಡಿಕೊಳ್ಳಲು ಶಕ್ತವಾಗಿದೆ. ಮಾಲ್ಟಾ ದ್ವೀಪವು ಬ್ರಿಟಿಷರ ಕೈಲಿರುವವರೆಗೆ ಹಿಟ್ಲರನು ಲಿಬಿಯಾದಲ್ಲಿರುವ ನಾಜಿ ಸೇನೆಗಳಿಗೆ ಹೆಚ್ಚಿನ ಬಲವನ್ನು ಕಳಿಸುವಂತಿಲ್ಲ. ಆದ್ದರಿಂದ ಮಾಲ್ಟಾವನ್ನು ಧ್ವಂಸಮಾಡಬೇಕೆಂದು ನಾಜಿಗಳೀಗ ಉದ್ದಿಶ್ಯಪಟ್ಟಿರುವಂತಿದೆ. ಈಜಿಪ್ಷಿನ ಮುತ್ತಿಗೆಯು ಜಪಾನೀಯರ ಗಮನದಲ್ಲಿ ಇದ್ದೇ ಇದೆ. ಈ ಕಾರ್ಯಸಾಧನೆಯಾಗಬೇಕಾಗಿದ್ದರೆ ಮೆಡಿಟೇರೇನಿಯನ್ನಿನಲ್ಲಿ ನಾಜಿಗಳು ನಿರಾತಂಕವಾಗಿ ಸೈನಿಕರನ್ನೂ ಸಂಗ್ರಾಮ ವಸ್ತುಗಳನ್ನೂ ಕಳಸುವಂತಾಗಬೇಕು. ಅದಕ್ಕೀಗ ಸಿದ್ಧತೆಗಳನ್ನು ಮಾಡಿಕೊಡಲಾಗುತ್ತಿದೆ.

ಪೆಸಿಫಿಕ್ ಪರಿಸ್ಥಿತಿ

ಪೆಸಿಫಿಕ್ ಕದನದ ಪ್ರಥಮ ಛಟ್ಟವು ಮುಗಿಯಿತು. ಎರಡನೇ ಛಟ್ಟವೀಗ ಆರಂಭವಾಗಬೇಕಾಗಿದೆ. ಜಪಾನರು ಆಸ್ಟ್ರೇಲಿಯಾವನ್ನು ಮುತ್ತುವರೆಂದ ಹಲವರೂ ಭಾರತವನ್ನು ಮುತ್ತುವುದೆಂದು ಮತ್ತೆ ಹಲವರೂ ಹೇಳುತ್ತಿದ್ದಾರೆ. ಈ ಎರಡು ಕಾರ್ಯವನ್ನೂ ಅದು ಒಂದೇ ಸಲ ಮಾಡಬಹುದೆಂದು ಇನ್ನು ಕೆಲವರು ಭವಿಷ್ಯ ನುಡಿಯುತ್ತಿದ್ದಾರೆ. ಜರ್ಮನಿ ನಿಜವಾಗಿ ಏನು ಮಾಡುವುದೋ ನೋಡಬೇಕಾಗಿದೆ. ಅತ್ತ ಜಾವಾದಲ್ಲಿಯೂ, ಇತ್ತ ಸಿಂಗಪುರದಲ್ಲಿಯೂ ಸುಮಾರು ಒಂದೂವರೆ ಲಕ್ಷ ಜಪಾನಿ ಯೋಧರು ನೆನೆದಿದ್ದಾರೆ. ಆಸ್ಟ್ರೇಲಿಯದಿಂದ ಸುತ್ತನುತ್ತ ಇರುವ ದ್ವೀಪ ಮೂಲಗಳನ್ನೆಲ್ಲ ಶತ್ರುಗಳು ಹಿಡಿಯುತ್ತಿದ್ದಾರೆ. ನ್ಯೂಗಿನಿಯಾದಲ್ಲಿರುವ ಮೋರ್ಸ್‌ಬಿಬಂದರಿನ ಮೇಲೆ ಶತ್ರುಗಳು ಇಸ್ಪರಲ್ಲಿಯೇ ದಂಡಯಾತ್ರೆ ಹೊರಡುವರೆಂದು ಆಸ್ಟ್ರೇಲಿಯಾ ಪತ್ರಿಕೆಗಳು ಬರೆಯುತ್ತಿವೆ. ಅಂತೂ ಆಸ್ಟ್ರೇಲಿಯಾಕ್ಕೆ ವಿಪತ್ತುಂಟಾಗಿರುವುದೇನೋ ಖಂಡಿತ.

ಬರ್ಮದಲ್ಲಿ ಕೂಡ ಜಪಾನರ ಕೈಮೇಲಾಗಿದೆ. ಬಹಳಮಟ್ಟಿಗೆ ಅವರು ದಕ್ಷಿಣ ಬರ್ಮಾದಲ್ಲಿ ತಮ್ಮ ಹತೋಟೆಯನ್ನು ನೆಲೆಗೊಳಿಸಿದ್ದಾರೆ ಈಗ ಕೇಂದ್ರಬರ್ಮದಲ್ಲಿ ಕದನ ನಡೆಯುತ್ತಿದೆ. ಸಂಖ್ಯೆಯಲ್ಲಿಯೂ ಸಂಗ್ರಾಮ ಸಾಧನಗಳಲ್ಲಿಯೂ ಶತ್ರುಗಳು ಬಲಯುತರಾಗಿದ್ದಾರೆ. ಚೀನರೂ ಮತ್ತು ಮಿತ್ರಸೇನೆಗಳೂ ಅಪೂರ್ವ ಶೌರ್ಯದಿಂದ ಹೋರಾಡುತ್ತಿದ್ದಾರೆ. ಅವರೂ ಇದುವರೆಗೆ ಜಪಾನರನ್ನು ಹಿಂದಕ್ಕಟ್ಟಲು ಅವರು ಸಮರ್ಥರಾಗಿಲ್ಲ. ಇತ್ತ ಬಂಗಾಳಾಕೊಲ್ಲಿಯಲ್ಲಿ ಅಂಡಮಾನ್ ದ್ವೀಪಗಳನ್ನು ಬೇರೆ ಜಪಾನರು ಆಕ್ರಮಿಸಿದ್ದಾರೆ. ಆದರೆ ಬಂಗಾಳಾಕೊಲ್ಲಿಯಲ್ಲಿ ಶತ್ರು ನೌಕೆಗಳು ಚಲಿಸುತ್ತಿವೆಯೆಂದು ಹೇಳಬಹುದು. ಶತ್ರುಭಯವು ಈಗ ಭಾರತಕ್ಕೆ ಹೆಚ್ಚಾಗಿದೆ. ದೆಹಲಿಯಲ್ಲಿ ನಡೆಯುತ್ತಿರುವ ತ್ವರಿತವಾದ ಸಂಧಾನಗಳೇ ಇದನ್ನು ಸಾರುತ್ತಿವೆ.

ಮಿತ್ರರಾಷ್ಟ್ರಗಳ ಕೆಲಸ

ಈ ಮಧ್ಯೆ ಮಿತ್ರರಾಷ್ಟ್ರಗಳು ತೆಪ್ಪಗೆ ಕುಳಿತಿವೆಯೆಂದು ಯಾರೂ ಭಾವಿಸಬಾರದು. ಮಿತ್ರರಾಷ್ಟ್ರಗಳೆಲ್ಲ ಅಂತ್ಯದಲ್ಲಿ ತಮಗೇ ಜಯವೆಂದು ದೃಢಸಂಕಲ್ಪದಿಂದ ಕೂಡಿ, ತಾತ್ಕಾಲಿಕವಾಗಿ ಆಗುವ ಸೋಲನ್ನು ಲೆಕ್ಕಿಸದೆ ಕಾದುತ್ತಿವೆ. ಮುಂದೆ ಸಾವು ಇನ್ನೂ ಉಗ್ರವಾದ ಘಟನಾವಳಿಗಳನ್ನು ಎದುರಿಸಬೇಕಾಗುವುದೆಂಬುದು ಖಂಡಿತ.

ORDER.

It has come to the notice of the Collector that exhorbitant rents are being charged in Adoni and Bellary towns. The collector hereby warns landlords and house owners in the three Municipal towns of Hospet-Bellary and Adoni in particular, against taking an unfair advantage of the influx of people from Madras or elsewhere to demand high rents than are usual and against forcing existing tenants to pay enchanced rents or to vacate the houses so that they may let these at extravagant rentals. If the land lords and house owners resort to practies of this kind, the Collector will be constrained to take action under the Defence of India Rules to control rents and to prevent unneccssary and unreasonable eviction of tenants.

I. M. Fraser,
Collector and District Magistrate, Bellary.

ಮನೆ ಬಾಡಿಗೆಗಳನ್ನು ಪೆಚ್ಚಿಸಬೇಡಿರಿ.

ಆದವಾನಿ - ಬಳ್ಳಾರಿ ಮತ್ತು ಹೊಸಪೇಟೆಯರಿಗೆ ಕಲೆಕ್ಟರವರ ಎಚ್ಚರಿಕೆ.

ಆದವಾನಿ - ಬಳ್ಳಾರಿ ನಗರಗಳಲ್ಲಿ ಅನಾವ್ಯ ಮನೆಬಾಡಿಗೆಗಳನ್ನು ವಿಧಿಸುತ್ತಿರುವುದು ಕಲೆಕ್ಟರವರ ಗಮನಕ್ಕೆ ಬಂದಿದೆ. ಮದ್ರಾಸು ಮುಂತಾದ ಭಾಗಗಳಿಂದ ಜನರು ಈ ವ್ಯಾಂತ್ಯ ಬರುತ್ತಿರುವ ಸಂಭರ್ಭವನ್ನು ಮುರುಸಯೋಗಮಾಡಿ ಹೆಚ್ಚು ಮನೆಬಾಡಿಗೆ ಕೇಳಬಾರದೆಂದೂ ಇದ್ದವರನ್ನು ಬಿಡಿಸಿ ಸದರ ಮನೆಗಳನ್ನು ಹೆಚ್ಚು ಬಾಡಿಗೆ ಕೊಡಬಾರದೆಂದೂ ಬಳ್ಳಾರಿ - ಆದವಾನಿ ಮೊದಲಾದ ನಗರಗಳ ಮನೆಮಾಲೀಕರಿಗೆ ಮುಖ್ಯವಾಗಿ ಎಚ್ಚರಿಕೆ ಕೊಡಲಾಗಿದೆ. ಮನೆಗಳ ಒಪ್ಪಿಸುವ ಇಂಥ ಪದ್ಧತಿಗಳನ್ನು ಅವಲಂಬಿಸುವುದಾದರೆ ಇಂಡಿಯಾ ರಕ್ಷಣೆ ಶಾಸನದಸ್ಸಯ ಬಾಡಿಗೆಗಳನ್ನು ಹಿಡಿತದಲ್ಲಿಟ್ಟು ಇದ್ದವರನ್ನು ಅನ್ಯಯವಾಗಿ, ಅನಾವ್ಯಕವಾಗಿ, ಬಿಡಿಸದಂತೆ ವಿಚಾರಿಸಿ ಮಾಡುವುದರಲ್ಲಿ ಬರುವುದು.

ಬಳ್ಳಾರಿ
7-4-42

ಐ. ಎಂ. ಫ್ರೇಜರ್,
ಕಲೆಕ್ಟರ್ ಮತ್ತು ಡಿಸ್ಟ್ರಿಕ್ಟು ಮ್ಯಾಜಸ್ಟ್ರೇಟ್

ಜಪಾನರ - ಧರ್ಮ.

ಕೇವಲ ಧಾರ್ಮಿಕ ವಿಚಾರದಿಂದಮೇಲೆ ಜಪಾನ ದೇಶದ ಆಡಳಿತವು ನಡೆದಿದೆ. ಆ ದೇಶದ ರಾಜನಿಗೆ ಮಿಕ್ಯಾಡೋ ಎನ್ನುತ್ತಾರೆ. ಆ ರಾಜನು ಮನುಷ್ಯರೂಪದಲ್ಲಿ ಕಾಣುತ್ತಿರುವ ದೇವರೇ ಎಂದು ಅಲ್ಲಿಯ ಜನಭಾವನೆಯಿದೆ. ಮತ್ತು ಅವನು ಜಪಾನ ಸಾಮ್ರಾಜ್ಯವ ಒಡೆಯನೆಂದು ಅವರು ತಿಳಿಯುತ್ತಾರೆ. ಅವನ ಮಾತುಗಳನ್ನು ಮತ್ತು ಅವನ ಪ್ರತಿನಿಧಿಗಳಾಗಿರುವ ಅಧಿಕಾರಿಗಳ ವಚನಗಳನ್ನು ಜಪಾನಿಯರು ಮರುಮಾತಾಡದೆ ದೇವರ ವಾಕ್ಯವೆಂದೇ ಭಾವಿಸಿ ಪಾಲಿಸುತ್ತಾರೆ. ಬೇಕಾದ ಕೆಲಸವನ್ನು ಸ್ವಲ್ಪವೂ ಸಂಕೋಚಪಟ್ಟುಕೊಳ್ಳದೆ ತಮ್ಮ ರಾಜನಿಗಾಗಿ ಮಾಡುವದರಲ್ಲಿಯೇ ಅವರು ಹೆಮ್ಮೆ ಪಡುತ್ತಾರೆ. ಜಪಾನಿಯರ ಧರ್ಮದ ಹೆಸರು "ಷಿಂಟೋ"

ಕೆಲವು ವರ್ಷಗಳ ಹಿಂದೆ ಟೋಕಿಯೋದ ಸರಕಾರೀ ಕಾಲೇಜಿನ ಪ್ರೊ. ಷಿಯೋಮ್ ಎಂಬವರು ಒಂದು ಲೇಖನವನ್ನು ಬರೆದರು. ಅದರಲ್ಲಿ "ಯುರೋಪ ದೊಳಗಿನ ಇತರ ದೇಶಗಳ ರಾಜರಂತೆ ಮಿಕ್ಯಾಡೋನು ಜಪಾನರಾಜ್ಯದ ಪ್ರಮುಖನಾಗಿದ್ದಾನೆ." ಎಂದು ಹೇಳಿದ್ದರು. ಇದಕ್ಕಾಗಿ ಅಲ್ಲಿಯ ಸರಕಾರೀ ವಿಭಾಗದಲ್ಲಿ ವಿಶೇಷ ಗಲಭೆಯುಂಟಾಯಿತಲ್ಲದೆ, ದೇವರ ವಂಶಜನಾದ ಮಿಕ್ಯಾಡೋನನ್ನು ಇತರ ದೇಶಗಳ ಮನುಷ್ಯರಾದ ರಾಜರಿಗೆ ಸರಿಹೋಲಿಸಿದ್ದಕ್ಕಾಗಿ ಆ ಪ್ರೊಫೆಸರನಿಗೆ ಯೋಗ್ಯಶಿಕ್ಷೆಯಾಗಬೇಕೆಂದು ಕೂಗಿದರು. ಪ್ರೊಫೆಸರನನ್ನು ಇದರ ಪರಿಣಾಮದಿಂದ ಕೆಲಸದಿಂದ ಶಾಶ್ವತವಾಗಿ ತೆಗೆದು ಹಾಕಿದರು ಇದರಮೇಲಿಂದ ಅಲ್ಲಿ ಧಾರ್ಮಿಕ ಭಾವನೆಗೆ ಎಷ್ಟು ಮಹತ್ವವು ಕೊಡಲ್ಪಡುತ್ತದೆ ಎಂಬುದು ತಿಳಿಯದೆ ಇರದು. ಅಲ್ಲಿಯ ರಾಜನಿಗಿರುವ ದೈವೀ ಸ್ವರೂಪವನ್ನು ಅವರು ಎಳ್ಳಷ್ಟು ಬಿಡದೆ ಕಾಯ್ದುಕೊಂಡಿರುವರು. ಈ ಸರಿಸ್ಥಿತಿಯಿಂದಲೇ ಇಂದು ಜಪಾನೀಯರು ಒಕ್ಕೆಟ್ಟಿನಿಂದ ಹೋರಾಡಲು ಸಮರ್ಥರಾಗಿದ್ದಾರೆ.

ಈ ದೇಶದಲ್ಲಿ ಸಂಪ್ರದಾಯವು ಹಳೇ ಕಾಲದ್ದೇ ಇದೆ. ಉದ್ಯೋಗ, ವ್ಯಾಪಾರ, ಕಲೆಗಳ ವಿಷಯದಲ್ಲಿಯ ಪ್ರಗತಿಯು ಮಾತ್ರ ಪಾಶ್ಚಾತ್ಯ ಪದ್ಧತಿಯ ಮೇಲೆ ಆಗಿದೆ. ಹಳೇ ಕಾಲದ ಸಾದಾತನ, ಕಡಿಮೆ ಬೆಚ್ಚು, ಕಷ್ಟ ಸಹಿಷ್ಣುತೆ, ಸ್ವಾರ್ಥತ್ಯಾಗ ಬುದ್ಧಿ, ಅಭಿಮಾನ, ಭಕ್ತಿಗಳೇ ಮೊದಲಾದ ಗುಣಗಳಿಂದ ಕೂಡಿದ ಜಪಾನಿಯರು ಹೊಸಕಾಲದ ಯಾಂತ್ರಿಕ ಅಭ್ಯಾಸವನ್ನು ಮಾಡಿರುವದರಿಂದ ಅವರು ಇಂದು ಕಡಿಮೆ ನೆಚ್ಚಿದಿಂದ, ಕಡಿಮೆ ಮಾನಿಯಿಂದ ಹೆಚ್ಚು ಘೋರ ವಾದ ಯುದ್ಧಗಳನ್ನು ಮಾಡುತ್ತಿದ್ದಾರೆ. ಜಪಾನವು ತೀರ ಚಿಕ್ಕ ದೇಶವಾದರೂ ಇಷ್ಟೊಂದು ಪ್ರಖ್ಯಾತಿಯನ್ನು ಪಡೆಯುವದಕ್ಕೆ ಇದೇ ಮೂಲಕಾರಣವಾಗಿದೆ. ಅವರೊಡನೆ ಹೋರಾಡಿ ಸೋಲಿಸಬೇಕೆನ್ನುವವರು ಅವರಲ್ಲಿಯ ಈ ಗುಣಗಳನ್ನು ಸಂಪಾದಿಸದೆ ನಿರ್ವಾಹವಿಲ್ಲ. [ಪ್ರ. ಕೆ.]

ಮದ್ರಾಸ್ ಪರಿಸ್ಥಿತಿ.

ಮದ್ರಾಸಿನಿಂದ ಜನರು ಬೇರೆಕಡೆ ತೆರಳುತ್ತಿದ್ದಾರೆ. 7 ನೆಯ ತಾ ಒಂದೇ ದಿನ ಅರ್ಧಲಕ್ಷ ರೂ. ಟಿಕೆಟ್‌ಗಳ ವ್ಯಾಪಾರವಾಗಿದೆ.

ಬೋರ್ಡುಶಾಲೆಗಳ ತಿರುಗುಪ್ಪೆ ತಾಲೂಕು ಉಪಾಧ್ಯಾಯರ ಸಂಘ.

1) ಹಿಂದಿನ ಮೂರು ಸಭೆಗಳಲ್ಲಿ ಉಪಾಧ್ಯಾಯರಿಗೆ ಸಲ್ಲಬೇಕಾದ ಇಂಕ್ರಿಮೆಂಟು ಕೊಡಲು ಜಿಲ್ಲಾ ಬೋರ್ಡು ಅಧ್ಯಕ್ಷರನ್ನು ವ್ಯಾಧಿಸಲಾಗಿತ್ತು. ಇಲ್ಲಿಯವರೆವಿಗೂ ಯಾವ ವಿಧವಾದ ನಿವಾರಣೆ ಇಲ್ಲದಿರುವುದು ವಿಷಾದಾಸ್ಪದವಾಗಿದೆ. ತಕ್ಷಣವೇ ಅಧ್ಯಕ್ಷರು ಉಪಾಧ್ಯಾಯರಿಗೆ ಇಂಕ್ರಿಮೆಂಟು ದಯವಾಲಿಸಲು ಬೇಡುತ್ತದೆ.

2) ಯುದ್ಧದ ಕಾರಣ ಆಹಾರ ಸಾಮಗ್ರಿಗಳ ಬೆಲೆಯು ಅಧಿಕವಾಗಿರುವ ಕಾರಣ ಉಪಾಧ್ಯಾಯರಿಗೆ ತುಟ್ಟಿಭತ್ಯವನ್ನು ಕೊಡಲು ಜಿಲ್ಲಾಬೋರ್ಡು ಅಧ್ಯಕ್ಷರನ್ನು ಕೋರಲಾಗಿದೆ.

3) ವಿದ್ಯಾಸ್ಪರ್ಧಾ ಕಾರ್ಯವನ್ನು ರೆವಿನ್ಯೂ ಮತ್ತು ಪೋಲೀಸು ಅಧಿಕಾರಿಗಳಿಂದ ಮಾಡಿಸುವುದಾದರೆ ಪರಿಣಾಮ ಕಾರಿಯಾಗುವುದೆಂದು ಈ ಸಭೆಯು ಅಭಿಪ್ರಾಯವಿದೆ.

4) ತಾಲೂಕು ಏಡೆಡ ಶಾಲೋನಾಧ್ಯಾಯರ ಸಂಘದ ನಿರ್ಣಯಕ್ಕನುಸಾರವಾಗಿ ಶೇಕಡ 10 ಶಾಲಾಯೋಗ್ಯವಯಸ್ಸಿನ ಬಾಲೆಯರನ್ನು ಸೇರಿಸುವುದು ಸಾಧ್ಯವೆಂದು ಈ ಸಭೆಯ ನಿರ್ಣಯವಿದೆ.

5) ಹಳ್ಳಿಯ ಭಾಗಗಳಲ್ಲಿ ಶಾಲೆಗಳು ಪ್ರಾತಃಕಾಲ 7 ರಿಂದ 9 ರ ವರೆಗೂ ಮಧ್ಯಾಹ್ನ 3 30 ಯಿಂದ 5-30 ವರಿಗೂ ನಡೆಯಲು ಏರ್ಪಡೆಕೊಡಬೇಕೆಂದು ಈ ಸಭೆಯು ಕೋರುತ್ತದೆ.

(ಈ ನಿರ್ಣಯಗಳನ್ನು ಜಿಲ್ಲಾಬೋರ್ಡು ಅಧ್ಯಕ್ಷರು, ಜಿಲ್ಲಾ ಎಡುಕೇಶನಲ್ ಆಫೀಸರ್, ಡೆಪ್ಯುಟಿ ಇನ್ಸ್‌ಪೆಕ್ಟರರಿಗೆ ಕಳುಹಿಸಿವೆ.)

ಎ. ಅಂಜಾನೀರಾವು,
ಕಾರ್ಯದರ್ಶಿ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ

		31-10-40	28-2-42
ವಿವಾಜಿಟ್ಟುಗಳು.			
	ಫಿಕ್ಸೆಡ್	ರೂ, Nil	108020-0-0
	ಚಾಲ್ತಿ	,, 3,173	11394-0-0
	ಸೇವಿಂಗ್ಸು	,, 1,231	17492-0-0
	ಇತರ	,, 40	914-0-0
ಸಾಲಗಳು			
	ಭಂಗಾರ	,, 520	32469-0-0
	ಮೂಲು	,, Nil	42520-0-0
	ಇತರ	,, Nil	37011-0-0
ಇತರ ಆಸ್ತಿ.			
	ಸರ್ಕಾರದ ಬಾಂಡುಗಳು	,,13,320	32476-0-0
	ಬ್ಯಾಂಕುಗಳಲ್ಲಿರುವ ಹಣ	,,32,502	5954-0-0
	ಕೈಯ್ಯಲ್ಲಿ ನಗದು	,, 5770	14011-0-0

ಒಟ್ಟು ವ್ಯವಹಾರದ ಮೊತ್ತ.

31—10—40.	28—2—42.
ರು. 1,14,774-0-0	ರು. 2,37,062-0-0

ಶಾಖೆಗಳು:—

1 ತಿಮ್ಮನಚರ್ಲ 2 ಕೊಟ್ಟೂರು. 3 ಉರವಕೊಂಡ 4 ಪತ್ತಿಕೊಂಡ

ಹೆಚ್. ಶೀತಾರಾಮರೆಡ್ಡಿ,, ಬಿ. ಎ. ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು.

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಆಲೂರು ತಾ|| ಎಳ್ಳರ್ತಿಚಾತ್ರೆ ನಿಲ್ಲಿಸಲಾಗಿದೆ.

ಯಾರೂ ಹೋಗಬೇಡಿರಿ.

ಆಲೂರು ತಾ|| ಎಳ್ಳರ್ತಿಯಲ್ಲಿ 12-4-42 ರಿಂದ 14-4-42 ರ ವರಿಗೆ 50 ಜನರಿಗಿಂತಲೂ ಹೆಚ್ಚಿಗೆ ಸೇರಬಾರದೆಂದು ಜಿಲ್ಲಾ ಆರೋಗ್ಯಶಾಖಾಧಿಕಾರಿಗಳ ಸಿಫಾರಸ್ಸಿನನ್ವಯ-ಕಲೆಕ್ಟರವರು ಆಜ್ಞೆಮಾಡಿರುತ್ತಾರಾದ ಕಾರಣ ಎಳ್ಳರ್ತಿಯಲ್ಲಿ ನಡೆಯುವ ಪೇಕ ಸಾಹೇಬರ ಉರ್ಸಿಗೆ ಯಾರೂ ಹೋಗಬಾರದೆಂದು ಪ್ರಕಟವಾಗಿದೆ.

ಹಚ್ಚೊಳ್ಳಿ ಕ್ಷಾಮಕೇಂದ್ರ

ಈ ತಿಂಗಳು 20-4-42ನೆಯ ತಾ|| ನ ಸುಮಾರಿಗೆ ಹಚ್ಚೊಳ್ಳಿ ಕ್ಷಾಮಕೇಂದ್ರವನ್ನು ಸರಕಾರವರು ಸರೀಕ್ಷಾರ್ಥವಾಗಿ ತೆಗೆದುಕೊಳ್ಳುವರೆಂದು(Test work) ತಿಳಿದು ಬಂದಿದೆ.

ಓರಿಯಂಟಲ ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ ಕಂಪನಿ ಲಿ.

ಯುದ್ಧ ಪರಿಸ್ಥಿತಿ ಇದ್ದು ಎಷ್ಟೊ ಕಡೆಯಲ್ಲೂ ಅನಿಶ್ಚಿತತಾವರಣವಿದ್ದರೂ, ಕಳೆದ ವರ್ಷ ಅಂದರೆ 1941 ರಲ್ಲಿ ಈ ಕಂಪನಿಯು 37,067 ವಿಮಾಪತ್ರಗಳನ್ನು ಕೊಟ್ಟು 8,16,19,725 ರೂ ಮೊತ್ತವನ್ನು ಮಾಡಿಸಿರುವುದು ಸ್ತುತ್ಯವಾಗಿದೆ.

ಏಪ್ರಿಲ್ 6 ನೆಯ ತಾ|| ವಿಜಯವಾಡ ಪಟ್ಟಣವಲ್ಲಿ 3 ಮಂದಿ ಸತ್ತರು. 40 ಜನರು ಘಾಯಗೊಂಡರು ಕಾಕಿನಾಡಿನಲ್ಲಿ ಒಬ್ಬನು ಸತ್ತನು. 5 ಮಂದಿ ಘಾಯಗೊಂಡರು. ಕಾಕಿನಾಡವು ಮುಕ್ಕಾಲು ಪಾಲಿನಷ್ಟು ಖಾಲಿಯಾಗಿದೆಯೆಂತ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಕಾಂಗ್ರೆಸ-ಕ್ರಿಪ್ಸ ಸಂಧಾನ:- ಕಾಂಗ್ರೆಸ ವರ್ಕಿಂಗ್ ಕಮಿಟಿಯ ನಿರ್ಣಯವು ಇನ್ನೂ ಹೊರಬಿದ್ದಿಲ್ಲ. ಕ್ರಿಪ್ಸ ಮತ್ತು ಅಮೆರಿಕನ ರಾಯಭಾರಿ ಜಾರ್ಸನರವರು ಕಾಂಗ್ರೆಸ್ ಅಧ್ಯಕ್ಷರು ಮತ್ತು ಜವಹರಲಾಲರೊಡನೆ ಚರ್ಚಿಸುತ್ತಲೇ ಇರುವರು ಇದರ ಪರಿಣಾಮವನ್ನು ಈಗಲೇ ಹೇಳಲು ಬರುವಂತಿಲ್ಲ.

ಮಾದಕ ಪದಾರ್ಥಗಳ ಮಹಾಧಿವೇಶನ.

(ವೀರಯ್ಯ, ಉಪ್ಪರಿಗಿಮಠ ಕುರುಗೋಡು)

ಈಗ ನನ್ನ ಮಾತೃಭೂಮಿಯಲ್ಲಿ ಎಲ್ಲಿ ನೋಡಿದರೂ ಯಾವುದಾದರೊಂದು ವಿಧವಾದ ಕ್ರಾಂತಿಯನ್ನೇ ಕಾಣುತ್ತೇನೆ ಸಾಹಿತ್ಯಸಮ್ಮೇಲನ, ವೀರಶೈವ ಮಹಾಧಿವೇಶನ, ಸಂಗೀತ ಸಮ್ಮೇಲನ, ರಸಾಯನ ಶಾಸ್ತ್ರಜ್ಞರ ಸಮ್ಮೇಲನ ಮುಂತಾದವುಗಳು ಬಹಳವಾಗಿ ನಡೆಯುತ್ತಿವೆ. ಕಾಂಗ್ರೆಸ್ ಸಂಸ್ಥೆಯವರು ಸುದ್ಯವಾನ ನಿಷೇಧದ ಚಳವಳಿಯನ್ನು ಪ್ರಾರಂಭಿಸಿರುತ್ತಾರೆ. ಅವರು ತಮ್ಮ ಬುದ್ಧಿಚಾತುರ್ಯದಿಂದ ಈ ಮಾದಕ ಪದಾರ್ಥಗಳನ್ನು ಮೂಲೆಗೊತ್ತಲು ಯತ್ನಿಸುತ್ತಿದ್ದಾರೆ ಅತ್ತ ಮಾದಕ ಪದಾರ್ಥಗಳು ತನ್ನ ಅಭಿವೃದ್ಧಿಗಾಗಿ, ತಮ್ಮದೊಂದು ಸಭೆಯನ್ನು ನಡೆಸಿವೆ. ಈ ಸಭೆಯ ಸ್ವಾಗತಾಧ್ಯಕ್ಷರಾದ ಬೀಡಿಸ್ಪನವರು ಎದ್ದು ನಿಂತು:— "ನಾನ್ಯಸಭಿಕರೆ! ಇಂದಿನ ಸಭೆಗೆ ದಿವಾನ ಬಹದ್ದೂರ್ ಪ್ರಾಕ್ಷಾಸವ ಇವರು ಅಧ್ಯಕ್ಷಸ್ಥಾನವನ್ನು ವಹಿಸಲು ನಿಮ್ಮೆಲ್ಲರ ಪರವಾಗಿ ನಾನು ಪ್ರಾರ್ಥಿಸುತ್ತೇನೆ.

ಸಾರಾಯಿಪ್ಪನವರು ಇದನ್ನು ಅನುಮೋದಿಸಿದರು. (ಅಧ್ಯಕ್ಷರು ಮಲ್ಲಿಗೆಯ ದಂಡೆಯಿಂದ ಅಲಂಕರಿಸಲ್ಪಟ್ಟು ಪೀಠವನ್ನು ಹೊಂದಿದರು). ಅನೇಕ ಅವರು ಎದ್ದು, ನಾನು ಇಂದಿನ ಸಭೆಗೆ ನೀವೆಲ್ಲರೂ ನನ್ನನ್ನು ಅಧ್ಯಕ್ಷಸ್ಥಾನಕ್ಕೆ ಆರಿಸಿದ್ದಕ್ಕಾಗಿ ತುಂಬಾ ಕೃತಜ್ಞನಾಗಿದ್ದೇನೆ ಎಂದು ಹೇಳುತ್ತ ಕಾರ್ಯಕ್ರಮ ಪಟ್ಟಿಯನ್ನು ನೋಡಿ "ಪ್ರಾರ್ಥನೆ", ಶ್ರೀಮತೀ ಕಾಫಿ ದೇವಿಯರಿಂದ ಎಂದು ಓದಿದರು. ಪ್ರಾರ್ಥನೆ ಆದ ತರುವಾಯ ಅಧ್ಯಕ್ಷರು ತಮ್ಮ ಭಾಷಣವನ್ನು ಪ್ರಾರಂಭಮಾಡಿದರು.

ಅಧ್ಯಕ್ಷರು:— "ನನ್ನ ಪ್ರಿಯ ಬಂಧುಗಳೆ! ಈ ನವನಾಗರಿಕತೆಯ ದಿನಸಗಳಲ್ಲಿ ನಮ್ಮ ಅಭ್ಯುದಯವು ದಿನೇದಿನೇ ಅಭಿವೃದ್ಧಿಹೊಂದದೆ ಕ್ಷೀಣವಾಗುತ್ತಿದೆ. ಇದು ವಿಷಾದಕರವಾದ ವಿಷಯ ಏನೇಇರಲಿ ಪರದೇಶಗಳಿಂತಲೂ ಈ ದೇಶದಲ್ಲಿ ನಮ್ಮ ಸ್ಥಿತಿಯು ಬಹಳ ಉತ್ತಮವಿರುತ್ತದೆ. ದೇವರ ಕೃಪೆ ಕಟಾಕ್ಷದಿಂದ ನಾವು ಕೈಕೊಂಡ ಕಾರ್ಯಗಳೆಲ್ಲವೂ ಯಶಸ್ವಿಯಾಗಿ ನಡೆಯಬೇಕು. ಆದರೆ ಈಗ ಹಿಂದೂದೇಶದಲ್ಲಿ ಎಲ್ಲಿ ನೋಡಿದರೂ ಜನರು ಅಜ್ಞಾನವೆಂಬ ಅಂಧಕಾರದಿಂದ ಎಚ್ಚರಗೊಂಡಿದ್ದಾರೆ. ಈಗ ನನಗೆ ಬಹಳ ಅತ್ಯಂತ ಶತ್ರುಗಳೆಂದರೆ ಕಾಂಗ್ರೆಸ್‌ನವರು. ಇವರು ನನ್ನನ್ನು ಹೊಳಿಯಲು ಪ್ರಯತ್ನಿಸುತ್ತಿದ್ದಾರೆ. ನಾವು ಅನೇಕ ಪರ್ಸೆಗಳಿಂದ ಬಾಳಿ, ಬದುಕಿ ಯಶಸ್ಸನ್ನು ಪಡೆದು ಈಗ ಹೆಸರಿಲ್ಲದೆ ಅಳಿದು ಹೋಗುವ ಕಾಲ ಬಂದಿದೆ. ನಾವು ಇಂತಹ ಕಠಿಣ ಪ್ರಸಂಗದಲ್ಲಿಯೂ ಕೂಡ ಸುಮ್ಮನೆ ಕೂಡುವದು ಒಳಿತಲ್ಲ.

ಬಳಿಕ :— ಹೆಂಡಪ್ಪನವರ ಮೇಜಿನ ಬಳಿ ನಿಂತು, "ನಾನ್ಯಅಧ್ಯಕ್ಷರೆ ಮತ್ತು ಸಭಿಕರೆ! ನಾನು ಹಿಂದೂದೇಶದಲ್ಲೆಲ್ಲಾ ನನ್ನ ಪ್ರಭಾವನನ್ನು ಬೀರಿ ಮೆರೆಯುತ್ತಿದ್ದೇನೆಂಬುದು ನಿಮ್ಮೆಲ್ಲರಿಗೆ ಗೊತ್ತಿರುವ ಸಂಗತಿಯೇ ಇದೆ. ಜನರೆಲ್ಲರೂ ನನಗೆ ದಾಸಾನುದಾಸರಾಗಿದ್ದಾರೆ, ಅವರೆಲ್ಲ ನನ್ನ ಆರಾಧಕರೇ. ನಾನು ಜನ್ಮವೆತ್ತಿದ ಕಾರಣವನ್ನು ಸಂಪೂರ್ಣವಾಗಿ ಸಾಧಿಸಿ, ಜನರಲ್ಲಿ ದುರ್ಬಲತೆ, ಅಜ್ಞಾನ ಮಾನಹಾನಿ, ಧನಹಾನಿ ಮುಂತಾದವುಗಳು ದಿನದಿನಕ್ಕೆ ಪ್ರಬಲನಾಗುವಂತೆ ಮಾಡಿ ಬಹಳ ಜಾಗರೂಕನಾಗಿದ್ದೇನೆ. ನನಗೆ ಜನ್ಮಪ್ರದರಾದ, ಆಂಗ್ಲ ಪ್ರಭುಗಳ ಅದರಣೆಯಾದರೂ ಸಂಪೂರ್ಣವಾಗಿದೆ. ನಾನು ಆಂಗ್ಲಪ್ರಭುಗಳ ಪ್ರತ್ಯುಪಕಾರಕ್ಕಾಗಿ ಹಿಂದೀಯರನ್ನು ಅನರಿಗೆ ದಾಸರನ್ನಾಗಿ ಮಾಡಿ ಅವರ ಬಲವನ್ನು ಕುಗ್ಗಿಸುತ್ತಿದ್ದೇನೆ.

ನನ್ನ ವೈಭವವು ಇಷ್ಟು ಇದಾಗ್ಯೂ ನೀಲೆ (ಅಧ್ಯಕ್ಷರು) ಹೇಳಿದಂತೆ ನನ್ನ ಶತ್ರುಗಳು ಬಲಿಯುತ್ತಿದ್ದಾರೆ. ಬಾಹ್ಮಣರು, ವೀರಶೈವರು ಮತ್ತು ವೈಶ್ಯರೇ ಮುಂತಾದ ಅನೇಕ ಜಾತಿಯವರು ಸೊದಲಿನಿಂದಲೂ ನನ್ನಮೇಲೆ ಹಗೆ ತೀರಿಸಿಕೊಳ್ಳುತ್ತಿದ್ದಾರೆ. ಇವರ ಉಪದೇಶದಿಂದ ಇನ್ನು ಅನೇಕ ನಾಗರಿಕರು ನನ್ನ ಮಾಯಾಜಾಲದಿಂದ ವಾರಾಗುತ್ತಿದ್ದಾರೆ. ನಾನು ಎಷ್ಟು ಪ್ರಯತ್ನಿಸಿದರೂ ಮೇಲೆ ಹೇಳಿದವರು ನನ್ನ ಜಾಲಕ್ಕೆ ಒಳಗಾಗಿಲ್ಲ. ನನ್ನ ಅದೃಷ್ಟವು ಈರೀತಿ ಇರುವಾಗ ಮುದರಾಸಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ರಾಜಗೋಪಾಲಾಚಾರ್ಯರು ಎಡೆಬಿಡದೆ ಆಲೋಚಿಸಿ, ಸೇಲಂ, ಚಿತ್ತೂರು, ಉತ್ತರಾರ್ಕಾಟ್ ಮತ್ತು ಕಡಪ ಜಿಲ್ಲೆಗಳಲ್ಲಿ ನಾನು ಪ್ರವೇಶಿಸಕೂಡದೆಂದು ಕಟ್ಟಾಜ್ಞೆ ಮಾಡಿರುವರು. ಮುಂದೆ ನನ್ನಪಾಡು ಏನಾಗುವುದೋ ತಿಳಿಯದು.

ಬಳಿಕ ಚಹ ಹೊದಲಾದವರ ಪರವಾಗಿ ಕಾಫಿ ದೇವಿಯು ಎದ್ದು, "ಅಧ್ಯಕ್ಷರೆ! ಬಂಧುಗಳೇ! ನಾನು ಮೊಟ್ಟಮೊದಲು ಈ ದೇಶವನ್ನು ಕಂಡುದು ಪಾಶ್ಚಿಮಾತ್ಯರ ಸಹಾಯದಿಂದ. ಮೊದಲು ನಾನು ಹಿಂದೂದೇಶದಲ್ಲಿ ಅತಿ ಇತ್ತೀಚಿಗೆ ಇಲ್ಲಿಯ ಶೀತೋಷ್ಣಸ್ಥಿತಿ ಮತ್ತು ಜನರ ನಡೆ ನುಡಿಯನ್ನು ಕಂಡು, ಇಲ್ಲಿನೆಲೆಸುವುದು ಅಸಾಧ್ಯವೆಂದುಕೊಂಡಿದ್ದೆ. ಆದರೆ ಹಿಂದೀಯರು ಕನಿಷ್ಠನಸ್ಥಿತಿಯ ಸಂಬಿಗೆಯ ಸ್ವಭಾವದವರು. ಅವರು ಏನೂ ತಿಳಿಯದಲೆ ಪಾಶ್ಚಿಮಾತ್ಯರು ನನಗೆ ನೂಕುತ್ತಿದ್ದ ಮಿನ್ನಿಕೆಯನ್ನು ಕಂತು ಸುರುಳಾಗಿ ನನ್ನನ್ನು ಗೌರವಿಸಿದರು. ಇವರಲ್ಲಿ ಅನುಕರಣಗುಣವು ವಿಶೇಷವಾಗಿದ್ದುದರಿಂದಲೇ ಈಗೀಗ ಪಟ್ಟಣಿಗರು ನಾತ್ರವಲ್ಲದೆ ಹೆಚ್ಚಾಗಿ ಹಳ್ಳಿಪಳ್ಳಿಗಳ ಜನರೂ ಸಹ ನನ್ನನ್ನು ಸೇವಿಸಕೊಡಗಿರುವರು. ಇಂತಹ ಅಂಧಶ್ರದ್ಧೆಯುಳ್ಳ ಧರ್ಮಿಷ್ಠಜನರನ್ನು ಬೇರೆ ಯಾವದೇಶದಲ್ಲಿಯೂ ನಾನು ಕಾಣೆ.

ಭಾರತೀಯರು ಮದುವೆ, ಮುಂಜಿಗಳಲ್ಲಿಯೂ, ಹೆಣ್ಣಕನ್ಯಗಳಲ್ಲಿಯೂಕೂಡ, ಯಾವ ಮನೆಯ ಭೇಧಭಾವವಿಲ್ಲದೆ ಆ ಬಾಲಷಡ್ಡರೂ ನನ್ನನ್ನು ಗೌರವಿಸತೊಡಗಿದ್ದಾರೆ. ಅಂತು ನನ್ನ ಅಭ್ಯುದಯಕ್ಕೆ ಕುಂದು ಬೀಗನೆ ಬರುವುದೆಂಬ ಭಯವಿಲ್ಲ. ನಮ್ಮ ಹೆಸರು ಕೇಳಿದರೆ ಉರಿದುಬೀಳುತ್ತಿದ್ದ ಸನಾತನಿಗಳು ಕೂಡ ಕಾಲಕ್ರಮವಾಗಿ ತಮ್ಮ ಮನೆಗೆ ಳಲ್ಲಿಯೇ ನನಗೆ ಅನಕಾಶವನ್ನುಂಟು ಮಾಡಿಕೊಡುತ್ತಿದ್ದಾರೆ. ಇದೊಂದು ಶುಭನಸಾಚನೆ. ನೂತ್ತದನೇಲೆ ಭಾರತೀಯರ ದೇಹಬಲವನ್ನು, ಆತ್ಮಿಕ ಸಂಪತ್ತಿಯನ್ನೂ ಮಾನಸಶಕ್ತಿಯನ್ನೂ ದಿನದಿನಕ್ಕೂ ಕುಗ್ಗಿಸಿ, ಆಂಗ್ಲೇಯರ ಅತಿ ಜಾಳುಗಳಾಗಿ ಸರ್ವವಿಧದಲ್ಲಿಯೂ ಅವರನ್ನೇ ಅನುಕರಿಸುವಂತೆ ಮಾಡಲು ನಾನಾಮಾತ್ರನಲ್ಲದೆ ನನ್ನ ಬಂಧು ಭಗಿನಿಯರೆಲ್ಲರೂ ಬದ್ಧಕಂಕಣರಾಗಿದ್ದೇನೆ. ಆದಕಾರಣ ಈ ಮಹಾ ಸಭೆಯಲ್ಲಿ ನಿಮ್ಮೆಲ್ಲರ ಹೀನಸ್ಥಿತಿಯನ್ನು ಕಂತು ಮನಸುರುಗಿ ನೀವು ನನ್ನಂತೆಯೇ ಸರ್ವಜನರ ಆದರಣೆಗೆ ಪಾತ್ರರಾಗುವಂತೆ ಪ್ರಯತ್ನಿಸಬೇಕೆಂದು ಸೂಚಿಸಿ ಮುಗಿಸುತ್ತೇನೆ.

ತರುವಾಯ ಗಂಜಾ ಮಹರಾಜರು ಅನೀನುದೇವಿಯವರ ಪರವಾಗಿ ಮಾತನಾಡತೊಡಗಿದರು, "ನನ್ನಧರ್ಮವು ಬಹಳ ಪುರಾತನವಾದದ್ದು. ನಾನು ಭಾ

(೪ ನೆಯ ಪುಟವನ್ನು ನೋಡಿರಿ)

BELLARY MUNICIPALITY.

VI WARD - Town Planning Scheme (T. S. Block 1 to 4 and 7 to 9.)

NOTICE OF PUBLICATION OF NOTIFICATION No. 1.
(Rule 34 (a) of M. T. P. Rules 1933.)

The following notification was published on the 31st March 1942, on the Notice Board of the office of the Bellary Municipal Council.

BELLARY MUNICIPALITY.
VI WARD Town Planning Scheme (T. S. Block 1 to 4 and 7 to 9)

NOTIFICATION under Section 10 of the Town Planning Act
(Form No. 4)

It is hereby notified under Section 10 of Madras Town Planning Act 1920 (Madras Act VII of 1920) that the Town Planning Committee of the Municipal Council, Bellary exercising the delegated powers of the Council passed under Section (1) of Section 9, the following resolution at its meeting held on 4- 1 1941.

Resolution No. 7 dated 4- 1 1941.

Under Section 9 (1) of the Madras Town Planning Act 1920 (Madras Act VII of 1920) the Town Planning Committee of the Municipal Council, Bellary exercising the delegated powers of the Council decides to prepare a Town Planning Scheme in respect of the area described hereunder :- -

VI WARD Town Survey block No. 1, 2, 3, 4, 7, 8 and 9.

BOUNDARIES.

North :- From the South West corner of S. No. 481 along the Northern boundary of VI Ward. Along the slaughter house road till its meeting with the junction of Mullangi Sanjeevappa Street.

East :- From the above junction due South along the Cart track to meet the North East survey stone of field No. 468.

South :- Southern boundary of T. S. Block No. 9, 8, 7, 4 and 1.

West :- - From the South West corner survey stone of field No. 494 due North to meet VI ward boundary stone abutting the Tank bund and along the Eastern side of Trunk Road meeting South West stone of field No. 481 in the North.

A copy of the plan of the area included in the scheme (Map No. 1) will be kept for inspection during office hours at the Municipal Office.

Under Section 17 of the Madras Town Planning Act no person may erect or proceed with any building or work on or enter into or carry out a contract in respect of land within the area included in the scheme without applying for and obtaining permission from the Council or the responsible authority.

Municipal Office, Bellary.
Dated 29—3 1942.

A. RAGHAVA REDDY,
Commissioner.

ಕಾಗದದ ಮಹೋಪಯೋಗ.

(ಕರ್ಮವೀರ)

ಸಂಗ್ರಾಮ ಸಲಕರಣೆಗಳೊಡನೆ ಇದು ತನ್ನ ಸ್ಥಾನವನ್ನು ಸ್ಥಾಪಿಸಿದೆ. ಹಳೆಯ ಕಾಗದವಾಗಲಿ ಬಿಳಿಯ ಕಾಗದವಾಗಲಿ ಬರೆದು ಬಿಸಾಡಿದ್ದಾಗಲಿ ಬಿಸಾಡದ್ದಾಗಲಿ ಯಾವದನ್ನೂ ನಷ್ಟಮಾಡುವಹಾಗಿಲ್ಲ.

ಯಾವ ವಸ್ತುವನ್ನೂ ನಷ್ಟ ಮಾಡಕೂಡದು. ಯಾವದೂ ನಿರುಪಯೋಗಿ ಅಲ್ಲ, ಈ ಯುದ್ಧದ ಕಾಲದಲ್ಲಿ, ಹರಕ ಕಾಗದ, ತಗಡು ಕಬ್ಬಿಣಗಳ ಚೂರು ಇವೇ ಮೊದಲಾದ ಎಲ್ಲ [ಹಿಂದೆ] ನಿರುಪಯೋಗವಿದ್ದ ವಸ್ತುಗಳಿಗೂ ಈಗ ಮೆಚ್ಚು ಆವಶ್ಯಕತೆಯೊದಗಿದೆ. ಇರ್ಮಾಸಿ, ಬ್ರಿಟಿಷ್ ದೇಶಗಳೆಲ್ಲಿಂತೂ ಈಗ ಏನನ್ನೂ ಕಸವೆಂದು ಎಸೆಯುವದಿಲ್ಲ. ಭಾರತದಲ್ಲಿ ಸಹ ಕಬ್ಬಿಣ, ಕಾಗದಗಳಿಗೆ ಮೆಚ್ಚು ಬೇಡಿಕೆಯೊದಗಿದೆ. ಕಾಗದದ ಧಾರಣೆ ವಿಪರೀತ ಹೆಚ್ಚಿ ಹೋಗಿದೆ. ಹಿಂದೆ ಕಸದ ಬುಟ್ಟಿಗೆ ಎಸೆಯುತ್ತಿದ್ದ, ಹೋಟಿಲುಗಳಲ್ಲಿ ಕೈವನ್ನಿಸಿಕೊಳ್ಳಲು ಕೊಡುತ್ತಿದ್ದ ಅಂಗಡಿಗಳಲ್ಲಿ ನಟ್ಟಣ ಕಟ್ಟಲು ಉಪಯೋಗಿಸುತ್ತಿದ್ದ ಕಾಗದಗಳೂ ಈಗ ಮಣಕ್ಕೆ ೬-೭ ರೂಪಾಯಿಗಳಂತೆ ಮಾರಲಾಗುತ್ತವೆ. ಅಂದಮೇಲೆ ಕಾಗದದ ಮಹತ್ವವು ಎಷ್ಟು ಹೆಚ್ಚಿದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇಂತಹ ನಿರುಪಯೋಗಿ ಕಾಗದಗಳಿಂದಲೂ ಮತ್ತು ಗುಂಡಾಗಳಿಸ್ಥಿಯಾದ ಉಪಕರಣಗಳಿಂದ ತಯಾರು ಮಾಡುತ್ತಾರೆಂದೆ ಯಾರಿಗೆ ತಾನೇ ಆಶ್ಚರ್ಯವಾಗುವದಿಲ್ಲ? ನಿರುಪಯುಕ್ತ ವಸ್ತುಗಳಾದ ಹಳೆಯಕಾಗದಗಳು, ಹಳೆಪತ್ರಿಕೆಗಳು, ಹಳೆಪುಸ್ತಕಗಳು ಇವೆಲ್ಲವೂ ಆಧುನಿಕ ಶಸ್ತ್ರ ತಯಾರಿಕೆಯ ಕಾರಖಾನೆಗಳನ್ನು ಪ್ರವೇಶಿಸಿದನೆಂದರೆ ಹೊರಗೆ ಬರುವಾಗ ಭಯಂಕರ ಯುದ್ಧ ಸಾಮಾಗ್ರಿಗಳಿಗೆ ಸಹಾಯಕವಾಗುವ ವಸ್ತುಗಳಾಗಿ ಬಿಡುತ್ತವೆ. ಇದು ಯಂತ್ರ ಯುಗದ ಒಂದು ವೈವಿಧ್ಯ.

ಎಲ್ಲಿಯೋ ಒಂದು ಕಾರಖಾನೆ, ಬೊಡ್ಡ ಬೊಜ್ಜ ಯಂತ್ರಗಳು ಬೆಟ್ಟದಷ್ಟು ಎತ್ತರ ಬಿದ್ದಿರುವ ಈ ರದ್ದಿಕಾಗದ (waste paper) ಗಳನ್ನು ಸ್ವಾಹಾ ಮಾಡುತ್ತಿವೆ. ಸಾವಿರಾರು ಜನ ಕೆಲಸಗಾರರು ಈ ಯಂತ್ರರಾಕ್ಷಸನ ಬಾಯಿಗೆ ಹಳೆಯ ಕಾಗದ, ಪುಸ್ತಕಗಳನ್ನು ತುರುಕುತಿದ್ದಾರೆ. ದಪ್ಪನೆಯ ರಟ್ಟುಗಳು, ಉಕ್ಕಿನ ಹಿಂಗಲು, ನಾಚಣಿಗೆಗಳು ಎಲ್ಲವೂ ಆ ರಾಕ್ಷಸನ ಬಾಯಿಗೆ ರುಚಿಯಾದ ಆಹಾರ. ಶತಸಾವಿರಗಟ್ಟಲೆ ಕಾಣಿಟ್ಟು ಪ್ರಯಾತನ ಪುಸ್ತಕಗಳು, ಆ ಪುಸ್ತಕಾಗ್ರಂಧಗಳು ಎಲ್ಲವೂ ಆ ರಾಕ್ಷಸನಿಗೆ ಉಸ್ಸಿನಕಾಯಿ ಸಮಾನ.

ಇಂತಹ ದೃಶ್ಯವೊಂದನ್ನು ನೊಡ್ಡ ಕಾರ್ಖಾನೆಯೊಂದರಲ್ಲಿ ನಾನು ನೋಡುತ್ತಿ ನಿಂತಿದ್ದೆ. ಈ ಯಂತ್ರಗಳ ವಿನಾಶಪು ಸನ್ನಿವೇಶವನ್ನು ವಿಸ್ಮಯಪೊಸಿತು. ನಷ್ಟಕಾಗದ ಪುಸ್ತಕಗಳೆಲ್ಲವು ಸ್ವಲ್ಪ ಗಟ್ಟಿಯಾದ ವಾಯುಸಮಂತಾನವು ಅವು ಪೊಡ್ಡ ಪೊಡ್ಡ ಕೊಳವೆಗಳ ಮೂಲಕ ಪರಿದು ಪೋರನೆ ಬರುವಾಗ ಗಟ್ಟಿ ಚಟ್ಟಿಯಂತಾಗಿ ಬರುತ್ತಿದ್ದನ್ನು. ಮುಂದೆ ನುದು ಮತ್ತೊಂದು ಯಂತ್ರವನ್ನು ಪ್ರವೇಶಿಸಿ ಅಲ್ಲಿ ಶುಷ್ಕಕರಣವನ್ನು ಪೊಂದಿಪೊಡಗಿನವು ಕಾಗದದ ಮುದ್ದೆಯಲ್ಲಿದ್ದ ಯಕ್ಕಿನ ಚೂರು ಚೂರುಗಳೆಲ್ಲ ಬೇರೆಯಾಪವು. ಹೀಗೆ ರೂಪಾಂತರ ಪೊಂದಿನ ಆ ರದ್ದಿಕಾಗದಗಳು ತಮ್ಮ ಪಥವನ್ನು ನುಂದುವರಿಸಿ ನುತ್ತ ಹಲ ಕೆಲವು ಬದಲಾವಣೆಯನ್ನು ಪೊಂದವನ್ನವಾದ ಹಲಗೆಯ ತುಂಡುಗಳಾಗಿ ಪೊರಗೆ ಬೀಳತೊಡಗಿದವು. ಇದು ಮುಂದೆ ನುದ್ದು ಗುಂಡಾಗಳಿಸ್ಥಿಯಾವ. ಪೆಟ್ಟಿಗೆಗಳಾಗಿಯಾಗಲೀ, ಬಾಂಬುಗಳ ಸ್ಥಿಪಾವ ಪೆಟ್ಟಿಗೆಯಾಗಿಯಾಗಲೀ, ಯೋಧನಗಳ ಬೆಲ್ಟುಗಳಾಗಿ ಆಗುವವಾಗಲೀ ಕೀಪಿಯೋಂನಿ ಕೆಲವು ಭಾಗಗಳಾಗಿ ಯಾಗಲೀ ಇವೇ ಮೊದಲಾದ ಬಹು ಉಪಯುಕ್ತ ಯುದ್ಧಾವಶ್ಯಕ ವಸ್ತುಗಳಾಗಿ ಪರಿಣಮಿಸುತ್ತದೆಂದು ಕೇಳಿ ಆ ಕಾರ್ಖಾನೆಯನ್ನು ನಿರುಪಯೋಗಿಯೆಂದು ಮೂಲೆಯಲ್ಲಿ ಬಿದ್ದ ಅಥವಾ ಒಂದೆರಡು ಕಬ್ಬಿಣ ಚಹಾ ಪೇಯಸಲಿ ಕ್ಯಾಗುತ್ತಿದ್ದ ಕಾಗದದ ಚೂರುಗಳು ಕತ್ತುಗಳಿಗೆ ಚಳ್ಳೆಪಣ್ಣು ತಿನ್ನಿಸುವ ಮಹತ್ಸಾಧನಗಳಾಗುವನೆಂದು ಕೇಳಿ ಆನಂದವಾಯಿತು. ಪೈಸ್ತಿಯಾಯಿತು.

ನಾವೀಗ ಏನನ್ನು ವ್ಯರ್ಥವೆನ್ನುವಂತಿಲ್ಲ. ಕಾಗದವಂತೂ ಬಹು ಅಮೂಲ್ಯ ವಸ್ತುವಾಗಿದೆ. ನಾವು ಭಾವಿಸುವದಕ್ಕಿಂತ ಹೆಚ್ಚು ಬೆಲೆಯುಳ್ಳದ್ದಾಗಿದೆ. ಅದು ಬರೆಯುವ ಕಾಗದ, ಏರ್ಪನ್ನು ಕಡಿಮೆ ಮಾಡಿರೆಂದು ಎಲ್ಲ ಸರಕಾರಗಳ ಆಜ್ಞೆಯಾಗಿದೆ. ಪೋಸ್ಟಾಫೀಸಿನವರು ತಮ್ಮ ಕಚೇರಿಯಿಂದ ಕಳುಹಿಸುವ ಪತ್ರಗಳನ್ನು [ಒಳಗಿನ ವರ್ತಮಾನಗಳನ್ನು ಕೊಟ್ಟನಂತರ] ಹಿಂದಕ್ಕೆ ತೆಗೆದುಕೊಂಡು ಹೋಗುತ್ತಿರುತ್ತಾರೆ. ಒಬ್ಬನಿಗೆ ಬರೆದ ಪತ್ರಕ್ಕೆ ಬರೆದ ಪತ್ರದ ಮೇಲೆ ಮತ್ತೊಂದು ವಿಳಾಸದ ಚೀಟಿಯನ್ನಂಟಿಸಿ ಅದೇ ಪತ್ರವನ್ನು ಬೇರೆಯವರಿಗೆ ಕಳುಹಿಸುವ ವ್ಯವಸ್ಥೆಯಾಗಿದ್ದಾರೆ. ಪೊಡ್ಡ ಪೊಡ್ಡ ವ್ಯಾಪಾರ ವಾಣಿಜ್ಯ ಸಂಸ್ಥೆಗಳಲ್ಲಿಯೂ ಸರಕಾರವು ವಿವಿಧ ಕಚೇರಿಗಳಲ್ಲಿಯೂ ಕಾಗದವನ್ನು ಉಳಿಸುವ ವಿಧಾನವು ಅನೇಕ ಮಾರ್ಗಗಳಲ್ಲಿ ಸಾಗಿದೆ. ಹಿಂದೆ ಮನೇಜ್ಜೆಗೆ ಕೂತಾಗ ಕಾಗದದ ಒಂದೆ ಮುಗ್ಗಲಿನಲ್ಲಿ ಬರೆಯಬೇಕೆಂದು ನಿಗದಿ ಮಾಡುತ್ತಿದ್ದರು ಈಗ ಎರಡು ಕಡೆಗಳಲ್ಲಿಯೂ ಬರೆಯಲು ಅನುಮತಿ ಕೊಟ್ಟಿದ್ದಾರೆ. ಸರಕಾರದವರು ಅಧಿಕಾ ವ್ಯಾಪಾರಸ್ಥರು ಸರ್ತ್ರಿಸ್ಥಸಕಾರಗಳನ್ನು ಮಾಡುವಾಗ ಚಂದ ಕಾಣಲೆಂದು ಒಂದು ಸಾಲಿಗೂ ಮತ್ತೊಂದು ಸಾಲಿಗೂ ಹೆಚ್ಚು ಜಾಗ ಬಿಡುತ್ತಿದ್ದರು. ಈಗ ಹಾಗೆ ಮಾಡುತ್ತಿಲ್ಲ. ಒಂದು ಸಾಲಿಗೂ ಮತ್ತೊಂದು ಸಾಲಿಗೂ ಸತ್ತಿರವತ್ತಿರ ಅಂತರ ಬಿಡುತ್ತಾರೆ. ಒಂದು ಸ್ತುತಿಯನ್ನು ತೆಗೆಯುವಾಗ ಬೇರೆ ಕಾಗದವನ್ನು ಉಪಯೋಗಿಸದೆ ಇನ್ನು ಕಕ್ಕಗಳಿಂದ ಬಂದ ಪತ್ರದ ಹಿಂಬರಿಯಲ್ಲಿಯೇ ಪ್ರತಿಯನ್ನು ತೆಗೆಯುತ್ತಾರೆ ಬರೆಯುವ ವಿಷಯಗಳನ್ನೂ ದೀರ್ಘವಾಗಿ ಬರೆಯದೆ ಆವಶ್ಯಕತೆ ಕಡಿಮೆ ವಾಕ್ಯಗಳಲ್ಲಿ ಬೇಕಾದಷ್ಟೆಲ್ಲ ಹೇಳಿ ಮುಗಿಸಲು ಪ್ರಯತ್ನವಾಡುತ್ತಾರೆ ವೃಥಾಪವ್ಯಯಕ್ಕೆ ಎಡೆಯಾಡುವದಿಲ್ಲ.

ವೃತ್ತಪತ್ರಿಕೆಗಳನ್ನೆಲ್ಲ ಕಾಗದದ ಉಳಿತಾಯವನ್ನು ಮಾಡಲೇಬೇಕಾಗಿದೆ. ಯಾಕೆಂದರೆ ವೃತ್ತಪತ್ರಿಕೆಗೆ ಬೇಕಾದ ಕಾಗದ ಭಾರತದಲ್ಲಿ ತಯಾರಾಗುವದಿಲ್ಲ. ನರಪೇರವಿಂದ ಬರುವದು ಕಡಿಮೆಯಾಗಹತ್ತಿದೆ. ಸರಕಾರದವರೂ ಈ ದೃಷ್ಟಿಯಿಂದ ವೃತ್ತಪತ್ರಿಕೆಗಳವರ ಮೇಲೆ ಒಂದು ರೀತಿಯ ಬಲಾತ್ಕಾರವನ್ನೇ ಹಾಕುತ್ತಿದ್ದಾರೆ. ಇನ್ನು ಹಣಕ್ಕೆ ಇನ್ನೇ ಚಡಪಡಿಸುವ ವೃತ್ತ ಪತ್ರಿಕೆಯನ್ನು ಮೂರ ಬೇಕೆಂದು ಕಾಯದೆ ಮಾಡಿದ್ದಾರೆ. ಖರ್ಚಾಗದ ವೃತ್ತಪತ್ರಿಕೆಗಳನ್ನು ವ್ಯಾಪಾರಿಗಳಿಂದ ತಿರುಗಿ ತೆಗೆದುಕೊಳ್ಳಕೂಡ

ದೆಂದು ತಿಳಿಸಿದ್ದಾರೆ. ಅನಿವಾರ್ಯವಾಗಿ ಎಲ್ಲ ವೃತ್ತಪತ್ರಿಕೆಗಳವರೂ ಪುಟಸಂಖ್ಯೆಯನ್ನು ಇಳಿಸಬೇಕಾಗಿದೆ. ವಿದೇಶಗಳಲ್ಲಿ ಎಷ್ಟೋ ವೃತ್ತಪತ್ರಿಕೆಗಳೀಗ ೨ ಪುಟ, ೪ ಪುಟಕ್ಕಿಳಿದಿವೆ. ಯುದ್ಧವು ಇದೇ ರೀತಿ ಮುಂದುವರಿದಲ್ಲಿ ಭಾರತದ ವೃತ್ತಪತ್ರಿಕೆಗಳೂ ಹಾಗೆ ಮಾಡಬೇಕಾಗೀತು.

ಶಾಲೆ ಕಾಲೇಜುಗಳಲ್ಲಿಯೂ ಕಾಗದದ ಬಳಕೆಯನ್ನು ಕಡಿಮೆ ಮಾಡಬೇಕಾಗಿದೆ. ಹಲವೆ ಬಳಪವನ್ನು ಹಿಡಿದು ಹುಡುಗರು ಹೆಚ್ಚು ಕೆಲಸ ಮಾಡುವದರಿಂದ ಕಾಗದದ ಉಳಿತಾಯ ಹೆಚ್ಚುತ್ತದೆ. ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಬಿಳಿಯ ಹಾಳೆಯ ಪುಸ್ತಕಗಳ ಅವಶ್ಯಕತೆಯೇ ಕಂಡುಬರುವದಿಲ್ಲ.

ಒಟ್ಟಿನಲ್ಲಿ ಕಾಗದ ಬಹು ಅಮೂಲ್ಯ ವಸ್ತು ಅದನ್ನು ಯಾವ ರೀತಿಯಿಂದಲೂ ಹಾಳುಮಾಡುವಂತಿಲ್ಲ. ಅದನ್ನು ಉಳಿಸುವದರಿಂದ ನಿಮ್ಮ ಪ್ರಾಣ ಸಂರಕ್ಷಣೆಯನ್ನು ಮಾಡಿಕೊಳ್ಳಲು ಸಹಾಯ ಮಾಡಿದಂತಾಗುತ್ತದೆ.

ಯುದ್ಧರಂಗದ ವಾರ್ತೆಗಳು.

ಅಮೆರಿಕನ ಹಡಗುಗಳು ಮುಳುಗಿದವು :

ವಿಮಾನವಾಹಕ ಹಡಗಾದ ಲಾಂಗ್ಲೆ ಎಸ್ಸೆಕ್ಸ್, ವಿಸಾಶಕೆ ಹಡಗಾದ ಸಿಯರಿ ದಕ್ಷಿಣ ಜಾವಾಸಮುದ್ರದಲ್ಲಿ ಶತ್ರುಗಳಿಂದ ಮುಳುಗಿಸಲ್ಪಟ್ಟಿವೆಂದು ಅಮೆರಿಕನ ಸೌಕಾಖಾತೆಯವರು ಪ್ರಕಟಿಸುತ್ತಾರೆ. ಎರಡು ಹಡಗುಗಳಿಂದಲೇ ಸುಮಾರು ೭೦೦ ಜನರಿಗಿಂತ ಹೆಚ್ಚಾಗಿ ಸತ್ತಿರಬೇಕೆಂದು ಕ್ಯಾಪ್ಟನ್ ಸ್ಟಂಪರು ಹೇಳಿದ್ದಾರೆ. ಅಟ್ಲಾಂಟಿಕ್‌ದಲ್ಲಿ ಅಮೆರಿಕಾದ ೪ ವರ್ತಕ ಹಡಗುಗಳು ಮುಳುಗಿಸಲ್ಪಟ್ಟಿರಬೇಕೆಂದು ಸೌಕಾಖಾತೆಯವರು ಸುತ್ತು ಸ್ರಕಟಿಸಿದ್ದಾರೆ.

ಬ್ರಿಟಿಷ್ ಹಡಗು ಮುಳುಗಿತು :—

ಬ್ರಿಟಿಷ್ ವಿಸಾಶಕೆಯಾದ ಹಿತ್ರಾವ ಎಂಬ ಹಡಗು ಬರಾಂತರ್ಗಾಮಿಯಿಂದ ಮುಳುಗಿರಬೇಕೆಂದು ಅಧಿಕಾರಿ ರೀತ್ಯಾ ಸ್ರಕಟಿಸಲಾಗಿದೆ. ಕಳೆದ ೩-೪ ತಿಂಗಳಿಂದ ಹಡಗುಗಳ ನಷ್ಟವು ಅಧಿಕವಾಗಿದೆಯೆಂದು ಸುಖ್ಯ ಮಂತ್ರಿಗಳಾದ ಚರ್ಚಿಲರು ಕೆಲದಿನಗಳಕೆಳಗೆ ಹೇಳಿದರು.

ಹಿಂದೂಸ್ತಾನದಿಂದ ಅಂದಮಾನದ ಮೇಲೆ ದಾಳಿ :—

ಹಿಂದೂಸ್ತಾನದ ಒಂದು ಕೇಂದ್ರದಿಂದ ಕಳೆದ ಶುಕ್ರವಾರ ಸಾಯಂಕಾಲ ಅಮೆರಿಕಾ ವಿಮಾನಗಳು ಅಂದಮಾನದ್ವೀಪದ ಮೇಲೆ ಹೋಗಿ ಜಪಾನೀ ಹಡಗುಗಳಿಗೆ ಬಾಂಬು ಹಾಕಿ ನಷ್ಟಮಾಡಿಬಂದವೆಂದು ಸ್ರಕಟಿಸಲಾಗಿದೆ.

ಕೊಲಂಬೋ ಮೇಲೆ ದಾಳಿ :—

ಸಿಂಹಳದ್ವೀಪದ ರಾಜಧಾನಿಯಾದ ಕೊಲಂಬೋ ನಗರದಮೇಲೆ ಜಪಾನೀಯರ ದಾಳಿಯಾಯಿತು. ಜಪಾನೀಯರ ೨೫ ವಿಮಾನಗಳು ಕೆಳಗಿಳಿಸಲ್ಪಟ್ಟವೆಂದು ಸುಮಾರು ೭೦ ವಿಮಾನಗಳಿಗೆ ಧಕ್ಕೆತಗಲಿರಬೇಕೆಂದೂ ಊಹಿಸಲಾಗಿದೆ. ನಷ್ಟದ ವಿವರಗಳು ಇನ್ನೂ ಪ್ರಕಟವಾಗಿಲ್ಲ

ಹೊಸಬಾಂಬುಗಳು :—

ನೆಪಿಸಿಕ್ ನಾಗರದ ಬಾಟನ್ ದ್ವೀಪದಮೇಲೆ ಜಪಾನೀಯರು ಈ ರಿಯುವ ಹೊಸ ಬಾಂಬುಗಳನ್ನು ಹಾಕುತ್ತಿರುವರೆಂದು ಪ್ರಕಟವಾಗಿದೆ.

ಜಪಾನರ ಹಡಗು ಮುಳುಗಿದವು :—

೨ ಜಪಾನೀ ಹಡಗುಗಳನ್ನು ಮುಳುಗಿಸಲಾಯಿತೆಂತಲೂ ೫ ಹಡಗುಗಳಿಗೆ ಜಖಂ ಮಾಡಲಾಗಿದೆಯೆಂತಲೂ(ಜಾವಾ ಸಮುದ್ರದ ಅಮೆರಿಕನ ಸೌಕಾಖಾತೆಯವರು ಪ್ರಕಟಿಸುತ್ತಾರೆ.

ಇಂಗ್ಲೆಂಡಿನಮೇಲೆ ವಿಮಾನಮುತ್ತಿಗೆ

ಜರ್ಮನ ವಿಮಾನಗಳು ಕಳೆದವಾರ ೨-೩ ಸಲ ಇಂಗ್ಲೆಂಡಿನಮೇಲೆ ಬಂದು ಕೆಲ ಪಟ್ಟಣಗಳಮೇಲೆ ಬಾಂಬುಗಳನ್ನು ಸುರಿಸಿದವು ಕೆಲಸರು ಸತ್ತರು. ಅಲ್ಪಸ್ವಲ್ಪ ನಷ್ಟವಾಗಿರಬೇಕೆಂದು ವಿಮಾನಯಾತೆಯ ಅಧಿಕಾರಿಗಳು ಪ್ರಕಟಿಸುತ್ತಾರೆ.

ನಾಜಿಗಳ ಭಾರಿ ಸಿದ್ಧತೆ :—

ಸುಮಾರು ೭೦ ಲಕ್ಷ ಜರ್ಮನ ಸೈನ್ಯವು ನಾಸ್ತ್ರೋಫಾಗದಲ್ಲಿ ತಯಾರಾಗಿ ನಿಂತಿದೆಯಂತೆ. ಅಲ್ಲಿ ಅಪಜಯವಾದರೆ ಸಿನಿಯಾಡಸುಖಾಂತರ ಹಿಟ್ಲರನು ನುಗ್ಗುನನಂತೆ.

ಮಾದಕ ಪದಾರ್ಥಗಳ ಮಹಾಧಿನೇತನ.

(೫ ನೆಯ ಪುಟದಿಂದ ಮುಂದುವರಿದುದು)

ರಕ್ಷಿಯರನ್ನು ನನ್ನ ಪ್ರೇಷಕರಿಗೆ (ಆಂಗ್ಲೇಯರಿಗೆ) ದಾಸರಾಗಿರಲು ನಾ ಹಾಯ ಮಾಡುತ್ತಿಹೆನೆಂದೆ. ಇದುವರೆಗೂ ನನ್ನ ವಿಷಯವಾದ ತೆರಿಗೆಯಿಂದ ದೇಶದ ಕೋಶವನ್ನೇ ತುಂಬಿದ್ದೇನೆ. ನನಗೂ ಮುಂದೆ ಏನು ಸಂಭವಿಸುವುದೋ ಯಾರುಬಲ್ಲರು! ಪ್ರಕೃತದಲ್ಲಿ ಯಾವ ಚ್ಯುತಿಯೂ ಕಂಡುಬಂದಿಲ್ಲ. ಮುಂದೆ ನೋಡಬೇಕು.

ಆಗ ಜಹಗೀರ್‌ದಾರ್ ಸಾರಾಯಪ್ಪನವರು ತನ್ನ ಪ್ರಿಯಪತ್ನಿಯಾದ ಬ್ರಾಂದಿ ಇವರ ಪರವಾಗಿ, "ನಾವು ಜನರಲ್ಲಿ ಅಂತಃಕಲಹಗಳನ್ನು ನಿರ್ಮಿಸಿ ಏಕ್ಯತೆ ಇಲ್ಲದಂತೆ ಮಾಡಿಬಿಟ್ಟಿದ್ದೇವೆ. ಕೆಲವರು ಓ ಎಂದರೆ ಹಲವರು ಛೋ ಎನ್ನುವಹಾಗೆ ಮಾಡಿದ್ದೇವೆ. ಆದ್ದರಿಂದ ಆಂಗ್ಲೇಯರು ನಮ್ಮ ಭಾರತೀಯರನ್ನು ಸುಲಭವಾಗಿ ಸ್ವಾಧೀನಪಡಿಸಿಕೊಂಡರು ನಾನು ಹೇಳಬೇಕೆಂದಿದ್ದ ಎಷ್ಟೋ ವಿಷಯಗಳನ್ನು ನನ್ನ ಪ್ರಿಯ ಮಿತ್ರರಾದ ಹೆಂಡವ್ಯನವರು ಹೇಳಿಬಿಟ್ಟಿದ್ದಾರೆ ಎಂದರು.

ಕೊನೆಗೆ ಅಧ್ಯಕ್ಷರು ಎದ್ದು "ಸಭಿಕರೆ! ನನ್ನನ್ನು ಶ್ರೀಮಂತರೂ, ಮತ್ತು ವಿದ್ಯಾವಂತರೂ ಆದರಿಸುವುದು ಹೆಚ್ಚು. ಹಿಂದಕ್ಕೆ ಈ ದೇಶದಲ್ಲಿ ಎಷ್ಟುಮಂದಿ ಸಾಹಸಿಗಳು ಇದ್ದರೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಭಾರತೀಯರು ತಮ್ಮ ಸರ್ವಸ್ವವನ್ನು ಹಾಳುಮಾಡಿಕೊಂಡು ಈಗ ಅಂಧಕಾರವೆಂಬ ಕಗ್ಗತ್ತಲೆಯಿಂದ ಈಗೀಗ ಎದ್ದೇಳಲೆತ್ನಿಸುತ್ತಿದ್ದಾರೆ. ಆದರೆ ಇಷ್ಟುಕಾಲ ನಾವು ಇಲ್ಲಿ ಬದುಕಿ, ಬಾಳಿ ಇದ್ದಕ್ಕೆದ್ದಹಾಗೆ ಈ ದೇಶವನ್ನು ಬಿಟ್ಟು ಓಡಿಹೋಗುವುದು ತರವಲ್ಲವಾಗಿ, ನನ್ನ ಶಕ್ತ್ಯಾನುಸಾರ ನನ್ನಿಲೆಗೆ ಸಾಪೆಲ್ಲರು ಒಮ್ಮನದಿಂದ ಪ್ರಯತ್ನಿಸಬೇಕು.

ಬಳ್ಳಾರಿ.

೬ ನೆಯ ತಾ. ಸ್ವಾತಂತ್ರ್ಯಕಾಲ ಸಾಂಬಮೂರ್ತಿ ನ್ಯೂದಾನದಲ್ಲಿ ಕರ್ನಾಲ ಕಾಂಗ್ರೆಸ ಸಮಿತಿ ಅಧ್ಯಕ್ಷರಾದ ಶ್ರೀ ಯಸ್. ವಿ. ಕಿಟ್ಟಿಯವರು ರಾಷ್ಟ್ರಧ್ವಜಾರೋಹಣಮಾಡಿದರು. ಸಾಯಂಕಾಲ ಶ್ರೀ ತೀರಾರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಟಿ. ಸುಬ್ರಹ್ಮಣ್ಯಂ ಮತ್ತು ವೀರಸ್ವಾಮಿಯವರು ರಾಷ್ಟ್ರೀಯ ಸಾರದ ಮಹತ್ವವನ್ನೂ ಸದ್ಯದಪರಿಸ್ಥಿತಿಯನ್ನೂ ವಿವರಿಸಿ ಕಾಂಗ್ರೆಸ ಶಾಂತಿ ಸೈನ್ಯಕ್ಕೆ ಸೇರಲು ಜನರನ್ನು ಸ್ವಾರ್ಥಿಸಿದರು.

ಬೆಂಕಿಯ ಹಾವಳಿ.

ಹಡಗಲಿತಾ –ನುಗಿಮಾನಿಸಹಳ್ಳಿಗ್ರಾಮದಲ್ಲಿ ತಾ. ೨೫-೩-೪೨ ರಲ್ಲಿ ಅಕಸ್ಮಾತ್ ಬೆಂಕಿಬಿದ್ದು ೬೭ ಮನೆಗಳು ನಾಶವಾಗಿ ೩೩೫ ಜನರು ನಿರಾಶ್ರಿತರಾಗಿದ್ದಾರೆ. ಸುಮಾರು ೧೫ ಸಾವಿರ ರೂ. ಲುಕ್ಸಾನ ಆಗಿದೆ. ಸರಕಾರದವರೂ ಭೂತದಯಾ ವರೂ ಸಹಾಯಮಾಡಬೇಕಾಗಿ ವಿನಂತಿ. ಹೊಟ್ಟು ಸೊಪ್ಪೆಯಬಣವಿಗಳುಸಹಾ ಸುಟ್ಟಿವೆ.

ತಿ. ನೆ. ದೇಸಾಯಿ

ಹಡಗಲಿತಾ. ರೈ. ಗೌ. ಕಾ. ಕ.

NEO-MADRAS CAFE, BELLARY.

ನಿಯೊ ಮದ್ರಾಸ್ ಕೆಫೆ, ಬಳ್ಳಾರಿ.

Best boarding & Lodging House
Palatial & enviable quarters, Well ventilated rooms with electric lights.
Pure Ghee preparations.
Tea-party & Dinner arrangements undertaken at short notice.
Satisfaction guaranteed.
Service our speciality.

★

ಮನೋಹರ ಮತ್ತು ಆಕರ್ಷಣೀಯ ವಾಸಸ್ಥಾನ.
ಗಾಳಿ ಬೆಳಕುಗಳಿಂದ ಕೂಡಿದ ವಿಶಾಲ ಕೋಣೆಗಳು.
ರೈಲ್ವೆ ಸ್ಟೇಷನ್-ಬಸ್‌ಸ್ಟಾಂಡ್ ಸಮೀಪ.
ಸಕಲ ವ್ಯವಹಾರಗಳ ಕೇಂದ್ರ ಸ್ಥಳ.
ಶುದ್ಧ ತುಪ್ಪದಲ್ಲೇ ಮಾಡಿದ ಫಲಹಾರ ಸಾಮಗ್ರಿಗಳು.
ಸ್ವಲ್ಪಾವಧಿಯ ಸೂಚನೆಯಿಂದ ಭೋಜನ-ಟೀಪಾರ್ಟಿ ಏರ್ಪಡಿಸುತ್ತೇವೆ.
ವಿನಯಶೀಲರಾದ ಸೇವಕ ವರ್ಗ.

When you visit Bellary
Do go to
NEO MADRAS CAFE
the best Boarding & Lodging house

ಬಳ್ಳಾರಿಗೆ ಬಂದಾಗ
ಇಲ್ಲಿಳಿಯಲು ಮರೆಯ
ಬೇಡಿರಿ.

ತುಂಗಭದ್ರಾ ಯೋಜನೆ

ಕಾಗದದಲ್ಲೇನೋ ತಯಾರಾಯಿತು ಕಾರ್ಯರೂಪಕ್ಕೆಂದು ಬರುವುದು ?

ಹೊಸಪೇಟೆಯ ಬಳಿ ಹೊಡ್ಡ ಜಲಾಶಯವನ್ನು ಕಟ್ಟಿ ಅಲ್ಲಿಂದ ಕಾಲುವೆಗಳ ಮೂಲಕ ಲಕ್ಷಾಂತರ ಎಕರೆಗಳಿಗೆ ನೀರು ಹಾಯಿಸಿ ದತ್ತಮಂಡಲ ಕ್ಷಾಮವನ್ನು ಶಾಶ್ವತವಾಗಿ ನಿವಾರಣೆಮಾಡುವ ಯೋಜನೆಯು ಸುಮಾರು ಅರ್ಧಶತಮಾನದಿಂದಲೂ ಸರಕಾರದ ಯೋಜನೆಯಲ್ಲಿದೆ

ಕಾಂಗ್ರೆಸ್ ಸರಕಾರವು ಬಂದಮೇಲೆ ಈ ವಿಷಯದಲ್ಲಿ ಆಸ್ಥೆಯನ್ನು ವಹಿಸಿ ಮದರಾಸಲವಾಗಿ ಇದರ ಯೋಜನೆಗಳನ್ನು ತಯಾರಿಸಲು ಸ್ಪೆಶಲ್ ಎಂಜನಿಯರರವರನ್ನು ನಿಯಮಿಸಿ ಅವರಿಗೆ ಪ್ರತ್ಯೇಕವಾಗಿ ಸಿಬ್ಬಂದಿಯೊಂದನ್ನೇ ಮುಂಜಾಗರುಮಾಡಿದರು. ಅವರು ನಿರಂತರವಾಗಿ ಎರಡು ವರ್ಷಗಳು ಕೆಲಸ ಮಾಡಿ ಮೂರು ಯೋಜನೆಗಳನ್ನು ತಯಾರಿಸಿರುವಂತೆ ಗೊತ್ತಾಗಿದೆ. 10 ಲಕ್ಷ ಎಕರೆ + ಲಕ್ಷ ಎಕರೆ ಮತ್ತು 3 ಲಕ್ಷ ಎಕರೆಗಳಿಗೆ ನೀರು ಹಾಯಿಸಲುವಾದ ಮೂರು ಯೋಜನೆಗಳು ಸಿದ್ಧವಾಗಿವೆ

ಕಟ್ಟುವ ಕೆರೆಯೇನೋ ಪೂರ್ಣವಾಗಿದ್ದು 44 ಹಳ್ಳಿಗಳನ್ನೂ 130 ಸ್ಕ್ವೇರ್ ಮೈಲಿ ಚದರ ಭೂಮಿಯನ್ನೂ ನೀರಿನಿಂದ ಮುಚ್ಚುತ್ತವೆ. ಎತ್ತರದ ಕಾಲುವೆ (High Level Scheme) ಕೆಳಕಾಲುವೆ (Low Level Scheme) ಗಳಲ್ಲಿ ಸರಕಾರದವರು ಸದ್ಯಕ್ಕೆ ಎರಡನೆಯದನ್ನು ತೆಗೆದುಕೊಂಡಿರೆ ಒಳ್ಳೆಯದೆಂದು ಅಧಿಕಾರೀ ಕ್ಷೇತ್ರಗಳಲ್ಲಿ ಅಭಿಪ್ರಾಯವಿದೆ. ಈ ಎರಡೂ ಯೋಜನೆಗಳಲ್ಲಿ ವಿದ್ಯುತ್‌ಶಕ್ತಿಯ ಉತ್ಪನ್ನವಿದ್ದು ಅದರಿಂದ ಆದಾಯವುಂಟು. ಬಳ್ಳಾರಿ ಜಲ್ಲೆಯಲ್ಲಿ ಹೊಸಪೇಟೆ, ಬಳ್ಳಾರಿ, ಸಿರುಗುಪ್ಪ, ಆದವಾನಿ ತಾಲೂಕುಗಳಲ್ಲದೆ ಕರ್ನೂಲು ಜಿಲ್ಲೆಯಲ್ಲಿ ಕರ್ನೂಲು ತಾಲೂಕಿಗೆ ನೀರಾವರಿಯ ಕಾರ್ಯವಾಗುವುದು. ಆಲ್ಪ ನೀರಿನ ಸಹಾಯದಿಂದ ಬೆಳೆಯುವ ಮತ್ತು ಹೆಚ್ಚು ನೀರಿನಿಂದ ಬೆಳೆಯುವ ಪೈರುಗಳಿಗೆ (Dry & wet crops) ನೀರಿನ ಹಂಚಿಕೆಯ ವ್ಯವಸ್ಥೆಯನ್ನು ಮಾಡಿರುವ ಹಾಗಿದೆ.

ಭೂಮಿಯನ್ನು ಆಕ್ರಮಿಸಿ ವ್ಯವಸ್ಥೆಮಲೇರಿಯಾ ಹಾವಳಿಯನ್ನು ತಡೆಯುವ ಯೋಜನೆ ಕೂಲಿ ಕಾರರ ನಿವೇಶನಗಳ ಏರ್ಪಾಟು ನಗೈರೆ ಅನೇಕ ಅಂಶಗಳು ಯೋಜನೆಯಲ್ಲಿ ಅಡಕವಾಗಿವೆ

ಈ ಭಾಗದಲ್ಲಿ ಸರಾಸರಿಯಾಗಿ ಸರಕಾರವು ಕ್ಷಾಮನಿವಾರಣೆಗಾಗಿ ವರ್ಷಕ್ಕೆ ೫ಲಕ್ಷ ರೂಪಾಯಿ ಖರ್ಚುಮಾಡುತ್ತಿರುವದೆಂದು ಅಂದಾಜು ಮಾಡಲಾಗಿದೆ. ಅಲ್ಲದೆ ವಿಶೇಷ ಖರ್ಚಿಲ್ಲದೆ ಉತ್ಪನ್ನವಾಗುವ ವಿದ್ಯುಚ್ಛಕ್ತಿಯಿಂದ ನೀರಾವರಿ ಕೆಲಸಗಳೂ, ಇತರೇ ಔದ್ಯೋಗಿಕ ಕಾರ್ಯಗಳೂ ಹೆಚ್ಚಬಹುದು. ಈ ದೃಷ್ಟಿಯಿಂದ ತುಂಗಭದ್ರಾ ಯೋಜನೆಯು ಸರಕಾರಕ್ಕೆ ಲಾಭಕಾರಿಯಾಗುವುದರಲ್ಲಿ ಸಂದೇಹವಿಲ್ಲವೆಂದು ಭಾವಿಸಲಾಗಿದೆ.

ಈ ಯೋಜನೆಗಳ ತಯಾರಿಯ ಉದ್ದೇಶದಿಂದ ಬಂದ ಸ್ಪೆಶಲ್ ಎಂಜನಿಯರ್ ಶ್ರೀ ತಿರುಮಲಯ್ಯಂಗಾರ್ಯರು ತಮ್ಮ ಪೂರ್ವವೃತ್ತಿಗೆ ಚಂಗಲ್ಪಟ್ಟಿಗೆ ವರ್ಗಾಯಿಸಲ್ಪಟ್ಟರು. ಇವರಿಗೆ ಅನೇಕ ಮಿತ್ರರು ಸನ್ಮಾನಕೂಟಗಳನ್ನೇರ್ಪಡಿಸಿದ್ದರು

ಕಾಗದದಲ್ಲೇನೋ ಯೋಜನೆಗಳ ತಯಾರಿಯಾಯಿತು ಆದರೆ ಈಗಿನ ಯುದ್ಧಪರಿಸ್ಥಿತಿಯಲ್ಲಿ ಬೇಕಾದ ಸಾಮಗ್ರಿಗಳ ಅಭಾವ ವಾತಾವರಣದಲ್ಲಿ ಕೋಟಿಗಟ್ಟಲೆ ಖರ್ಚಿನಿಂದ ಈ ಯೋಜನೆಯು ಕಾರ್ಯರೂಪಕ್ಕೆ ಬರುವುದು ಸಾಧ್ಯವಿಲ್ಲ. ಶಾಂತಿಯ ಕಾಲವು ಬೇಗಬಂದೀತೆಂತಲೂ ಆರೋಷವಾಗುವ ಸರಕಾರವು ಈ ಯೋಜನೆಯನ್ನು ಕೈಗೊಂಡು ಕ್ಷಾಮವನ್ನು ಶಾಶ್ವತವಾಗಿ ನಿವಾರಿಸುವುದೆಂದೂ ಆಶಿಸುತ್ತೇವೆ.

ತ್ರಿಂಕೋಮಾಲಿಯನೇಲೆ ದಾಳಿ

ಬ್ರಿಟಿಶ ವಿಮಾನನಾಶಕೆವು ಮುಳುಗಿತು.

ಜಪಾನರ ಅಸಂಖ್ಯಾತವಿಮಾನಗಳು ಸಿಂಹಳದ್ವೀಪದ ಪೂರ್ವತೀರವಲ್ಲಿನ ತ್ರಿಂಕೋಮಾಲಿ ಬಂದರಮೇಲೆ ದಾಳಿಮಾಡಿದವು ನಷ್ಟದ ವಿವರಗಳು ಗೊತ್ತಾಗಿಲ್ಲ ಇದೇ ಕರಾವಳಿಯ ಸಮೀಪದಲ್ಲಿ ಬ್ರಿಟಿಷ ವಿಮಾನವಾಹಕ 'ಹರ್ಮಿಸ್' ಎಂಬ ಹಡಗು ಶತ್ರುಗಳಿಂದ ಮುಳುಗಿಸಲ್ಪಟ್ಟಿದೆ

ವಿಶಾಖಪಟ್ಟಣ ಕಾಕಿನಾಡಗಳಮೇಲೆ ದಾಳಿ.

6ನೆಯ ತಾ|| ಬೆಳಿಗ್ಗೆ ವಿಶಾಖಪಟ್ಟಣ ಕಾಕಿನಾಡಗಳಮೇಲೆ ವಿಮಾನಮುತ್ತಿಗೆಯಾಯಿತು. ಸ್ವಲ್ಪ ವಿಮಾನಗಳುಮಾತ್ರ ಬಂದಿದ್ದವು – ಎರಡು ಸ್ಥಳಗಳಮೇಲೂ ಬಂದರುಗಳಮೇಲೆ ದಾಳಿಯಾಯಿತು. ಪಟ್ಟಣದ ಪ್ರದೇಶಗಳಲ್ಲಿ ಬಾಂಬುಗಳು ಬೀಳಲಿಲ್ಲ. ಕಾಕಿನಾಡದಲ್ಲಿ ಎಣ್ಣೆಕಾರ್ಖಾನೆಗೆ ಸ್ವಲ್ಪ ನಷ್ಟವಾಗಿದೆ. ರಾಜಮಂಡ್ರಿಯಲ್ಲೂ ವಿಮಾನ ಮುತ್ತಿಗೆ ಸೂಚನೆ ಕೊಡಲಾಗಿತ್ತು.

ಮದರಾಸು ಸರಕಾರದ ಪ್ರಕಟನೆ.

ಮದರಾಸು ಸರಕಾರದ ಪ್ರಕಟನೆಯೊಂದು ಈ ರೀತಿ ತಿಳಿಸುವುದು.

'ಕೋಕನಾಡದ ಮೇಲೂ ವಿಶಾಖಪಟ್ಟಣದಮೇಲೂ 6 ನೆಯ ತಾ. ನಡೆದ ವಿಮಾನ ಮುತ್ತಿಗೆ ಸಂಬಂಧವಾಗಿ ಇನ್ನೂ ಪೂರ್ಣ ವಿವರಗಳು ಬಂದಿಲ್ಲವಾದರೂ ಇದುವರೆವಿಗೂ ಕೊಟ್ಟಿರುವುದಕ್ಕಿಂತ ಇನ್ನು ಕೆಂಚ ಹೆಚ್ಚಾಗಿ ವಿವರಗಳನ್ನು ಕೊಡಬಹುದಾಗಿದೆ. ವಿಶಾಖಪಟ್ಟಣದಮೇಲೆ ಮೊದಲು ಮುತ್ತಿಗೆ ನಡೆದುದು 6 ನೆಯ ತಾ|| ಪ್ರಾತಃಕಾಲ ಬಂದರಿಗೆ ಬರುತ್ತಿದ್ದ ಹಡಗುಗಳಮೇಲೆ ಮೊದಲು ಮುತ್ತಿಗೆ ನಡೆಸಲಾಯಿತು. ಈ ಮುತ್ತಿಗೆ ಕಾಲದಲ್ಲಿ ಬಂದರಿನ ಈಚಿನ ಪ್ರದೇಶಗಳಮೇಲೆಯೂ ಪಡದಮೇಲೆಯೂ ಮುತ್ತಿಗೆಗಳೇನೂ ನಡೆಯಲಿಲ್ಲ. 'ಡಾಕ್' ಪ್ರದೇಶಗಳಮೇಲೆ ಮಧ್ಯಾಹ್ನ 1.30 ಘಂಟೆ ಹೊತ್ತಿನಲ್ಲಿಯೂ, ಪುನಃ ಸಾಯಂಕಾಲ 5 ಘಂಟೆಗೆ ವಿಮಾನಮುತ್ತಿಗೆಗಳನ್ನು ನಡೆಸಲಾಯಿತು ಈ ಎರಡು ವಿಮಾನಮುತ್ತಿಗೆಗಳ ಕಾಲದಲ್ಲಿಯೂ 10ಕ್ಕಿಂತ ಹೆಚ್ಚಾಗಿ ವಿಮಾನಗಳನ್ನು ರತ್ನಗಳು ಉಪಯೋಗಿಸಲಿಲ್ಲ. ಬಿದ್ದ 20 ಬಾಂಬುಗಳಲ್ಲಿ ಎಲ್ಲವೂ 'ಡಾಕ್' ಪ್ರದೇಶದಲ್ಲಿಯೇ ಬಿದ್ದವು. ಬಂದರಿನ ಕೆಲವು ಪ್ರದೇಶಗಳಿಗೆ ಕೊಂಚ ನಷ್ಟವಾಯಿತು. ಜನರಿಗೆ ಕೂಡ ಹೆಚ್ಚು ವಿಪತ್ತು ಸಂಭವಿಸಲಿಲ್ಲ. ಊರಿನ ಮಧ್ಯದಲ್ಲಿ ಬಾಂಬುಗಳೇನೂ ಬೀಳಲಿಲ್ಲ

ಕೋಕನಾಡದಮೇಲೆ ಮುತ್ತಿಗೆ.

ಕೋಕನಾಡದಮೇಲೆ ಬೆಳಿಗ್ಗೆ 7 ಘಂಟೆ ಹೊತ್ತಿನಲ್ಲಿ ಒಂದೇ ಒಂದು ವಿಮಾನವು ಮೊದಲು ವಿಮಾನಮುತ್ತಿಗೆ ನಡೆಸಿತು. ಆಗ ಕೋರಮಂಡಲದ ಕಂಪೆನಿಯ ಒಂದು ಹಡಗು ಬಂದರಿನಲ್ಲಿ ಇನ್ನೊಂದು ಹಡಗಿನಿಂದಕ್ಕೆ ಹೋಗುತ್ತಿತ್ತು. ಈ ಎರಡು ಹಡಗುಗಳನ್ನು ಆವಿಮಾನವು ಮುತ್ತಿ, ಮಿಷಿನ್‌ಗನ್‌ಗಳಿಂದ ಗುಂಡುಗಳನ್ನು ಹಾರಿಸಿತು. ಒಂದು ಹಡಗಿನ ನಾವಿಕನೊಬ್ಬನು ಪ್ರಾಣಬಿಟ್ಟನು. ಇನ್ನೊಬ್ಬನಿಗೆ ಗಾಯಗಳಾದವು

1–45 ಘಂಟೆ ಹೊತ್ತಿನಲ್ಲಿ ಜಪಾನಿನ 5 ವಿಮಾನಗಳು ಪುನಃ ಬಂದು ಕೋಕನಾಡದಮೇಲೆ ಮುತ್ತಿಗೆ ನಡೆಸಿದವು. ಎಂಜಿನ್ ಕಾರ್ಖಾನೆಗಳಮೇಲೆ ಮುತ್ತಿಗೆ ನಡೆಸಿದವು ಎಂಜಿನ್‌ಕಾರ್ಖಾನೆಗಳಮೇಲೆ ಮುತ್ತಿಗೆ ನಡೆದುದರ ಫಲವಾಗಿ ಕೊಂಚ ನಷ್ಟವಾಯಿತು ಆದರೆ ಯಾರಿಗೂ ಗಾಯಗಳಾಗಲಿಲ್ಲ ವಿಶಾಖಪಟ್ಟಣದಂತೆ ಇಲ್ಲಿಯೂ ಪೂರಿನ ಮಧ್ಯಭಾಗದಲ್ಲಿ ಬಾಂಬುಗಳೇನೂ ಬೀಳಲಿಲ್ಲ ಮಧ್ಯಾಹ್ನ 4 ಘಂಟೆ ಹೊತ್ತಿನಲ್ಲಿಕೂಡ ಪುನಃ ಕೋಕನಾಡದಮೇಲೆ ವಿಮಾನ ಮುತ್ತಿಗೆ ನಡೆಯುವುದೆಂಬ ಸೂಚನೆಯನ್ನು ಕೊಡಲಾಯಿತು. ಆದರೆ ವಿಮಾನ ಮುತ್ತಿಗೆಯೇನೂ ನಡೆಯಲಿಲ್ಲ

ಈ ಎರಡು ಪೂರಿಗಳಲ್ಲಿಯೂ ನಡೆದ ಮುತ್ತಿಗೆಗಳ ಕಾಲದಲ್ಲಿ ಜನರು ಬಹಳ ಧೈರ್ಯದಿಂದ ವರ್ತಿಸಿದರು. ಹೆಚ್ಚು ಗಾಬರಿಯೇನನ್ನೂ ತೋರ್ಪಡಿಸಲಿಲ್ಲ ವಿವರಗಳು ಗೊತ್ತಾದಕೂಡಲೆ ಸರ್ಕಾರದವರು ಅವುಗಳನ್ನು ಪ್ರಕಟಿಸುವರು.

ಇಲ್ಲಿಯವರೆವಿಗೆ ಅಮೆರಿಕಾದ ೧೧೬ ಹಡಗುಗಳು ಮುಳುಗಿವೆ

ಅಮೆರಿಕಾದ ನೌಕಾಖಾತೆಯ ಕಾರ್ಯದರ್ಶಿಗಳಾದ ಕರ್ನಲ್ ನಾಕ್ಸ್‌ರವರು ಏಪ್ರಿಲ್ 7ನೆಯ ತಾ|| ಒಂದು ಹೇಳಿಕೆಯನ್ನು ಕೊಡುತ್ತ ಅಮೆರಿಕಾವು ಯುದ್ಧಕ್ಕೆ ಪ್ರವೇಶಿಸಿದ ದಿನಂಬರು 7ನೆಯ ತಾರೀಖಿಂದ 4 ತಿಂಗಳೊಳಗಾಗಿ ಅಟ್ಲಾಂಟಿಕ್ ತೀರದಲ್ಲಿ 116 ಅಮೆರಿಕನ ಹಡಗುಗಳು ಮುಳುಗಿರುವವೆಂದು ವ್ಯಕ್ತಪಡಿಸಿದರು

ಬಾಟನ ದ್ವೀಪದಲ್ಲಿಯು ಧ್ವನಿ ನಿಂತಿತು.

ಪೆಸಿಫಿಕ್ ಸಾಗರದ ಫಿಲಿಪ್ಪೈನ ಭಾಗದ ಬಾಟನ್‌ದ್ವೀಪದಲ್ಲಿ ಕರ್ನಲ್ ಮಾಕ್ ಆರ್ಥರರವರು ಜಪಾನರ ವಿರುದ್ಧ ಪ್ರತಿಭಟನೆಯನ್ನು ಕಳೆದ 4 ತಿಂಗಳಿಂದಲೂ ಸಾಗಿಸಿದರು. ಮಾಕ್ ಆರ್ಥರರು ಆಸ್ಟ್ರೇಲಿಯಾಕ್ಕೆ ಹೋದಮೇಲೆ ಮತ್ತೊಬ್ಬರು ಸೇನಾಧಿಪತಿಗಳಾಗಿ ನಿಯಮಿಸಲ್ಪಟ್ಟಿದ್ದರು

ಅಲ್ಲಿ ಜಪಾನರು ಅಮೆರಿಕಾದ 20 ಸಾವಿರ ಸೈನಿಕರಮೇಲೆ ಎರಡು ಲಕ್ಷ ಸೈನಿಕರನ್ನೂ, ಅಧಿಕಸಂಖ್ಯೆಯಿಂದ ಟ್ಯಾಂಕು ವಿಮಾನಗಳನ್ನೂ ಉಪಯೋಗಿಸಿದ ಕಾರಣ ಅಮೆರಿಕನ ಸೈನ್ಯವು ಹಿಂದೆ ಸರಿಯಬೇಕಾಯ್ತೆಂದೂ ಅಲ್ಲಿನ ಯುದ್ಧವು ನಿಂತಿತೆಂದೂ ಹೇಳಲಾಗಿದೆ. ಕೆಲವು ದಿನಗಳ ಅನಾಹಾರಕ್ಕಪ್ರವಾಹದನಂತರ ಯುದ್ಧವು ನಿಂತಿತು

ಮದ್ರಾಸು ಪ್ರಾಂತದ ವಿಲೇಜ ಪಂಚಾಯ್ತಿ ಬಿಲ್.

ಮದ್ರಾಸು ಪ್ರಾಂತದ ವಿಲೇಜ ಪಂಚಾಯ್ತಿಬಿಲ್ ಸಾರ್ವಜನಿಕ ಟೀಕೆಗಳಿಗಾಗಿ 16ನೆಯ ಸೆಪ್ಟಂಬರು 1941ರ ಫೋರ್ಟ್‌ಸೆಂಟ್ ಜಾರ್ಜಿ ಗೆಜೆಟದಲ್ಲಿ ಪ್ರಕಟವಾಗಿತ್ತು. ಸಾರ್ವಜನಿಕರಿಂದ ಎಷ್ಟೋ ಟೀಕೆಗಳು ಬಂದಿವೆ. ಸರ್ಕಾರದವರು ಈ ಟೀಕೆಗಳನ್ನು ವೈಶ್ಯಯಷ್ಟಿಟ್ಟು ಬಿಲ್‌ನಲ್ಲಿ ತಕ್ಕ ಸುಧಾರಣೆಗಳನ್ನು ಮಾಡಲು ಸುಮಾರು 15 ಸದಸ್ಯರ ಸಮಿತಿಯನ್ನು ರಚಿಸಿವಾರೆ ಸಮಿತಿಯ ಅಧ್ಯಕ್ಷರು ಮದ್ರಾಸು ಸರಕಾರವ ನಲಜೆಗಾರರಾದ ರೂ ಪರ ಫರ್ದರು ವಿದ್ಯಾಭ್ಯಾಸ ಮತ್ತು ಆರೋಗ್ಯ ವಿಷಯಗಳ ಪ್ರಶ್ನೆಯು ಬಂದಾಗ ತಕ್ಕ ಸೂಚನೆಗಳನ್ನು ಕೊಡಲು ಪಬ್ಲಿಕ್ ಲೆಲ್ತ್ ಡೈರೆಕ್ಟರರು ವಿದ್ಯಾವಾತೆಯ ಡೈರೆಕ್ಟರರು ಅಧಿಕಾರೀ ಸದಸ್ಯರಾಗಿ ಸೇರಿಸಲ್ಪಟ್ಟಿರುವರು.

ಬಳ್ಳಾರಿ ಪೇಟೆ ಧಾರಣೆ

10-4-42 ಶುಕ್ರವಾರ.

ಭಂಗಾರ ತೊಲ 1ಕ್ಕೆ			48-8-0
ಸಾವರನ್			38-8 0
ಬೆಳ್ಳಿ 100 ತೊಲ ರೂ.			80-0-0
ಪತ್ತಿ ಮುಂಗಾರಿ 12 ಮಣಕ್ಕೆ			15-0-0
ಪತ್ತಿ ಫಾರಂ			25-0-0
ಅಕ್ಕಿ 1 ರೂ. ಗೆ	4 ರಿಂದ	5½	ಸೇರು
ಜೋಳ ,,		4½	,,
ಗೋಧಿ ,, ...		4½	,,
ಹೊಸ ,,	12 ,,	14	,,
ನವಣೆ ,,		18	,,
ಸಜ್ಜೆ ,,		14	,,
ನೆಲಗಡಲೆ ...	...	1-1-0	
ಹೆಸರುಕಾಯಿ 9 ಮಣ	25 ರಿಂದ	30	
ಸಕ್ಕರೆ(ಮುದ್ದೆ) 9 ಮಣ	36	ರೂ	
ಬೆಲ್ಲ ...	12 ರಿಂದ	14	ರೂ
ಚುಮ್ಮಿ ಎಂಣೆ ಪಟ್ಟಿ		4-4-0	

೯೨ ಜಪಾನ್ ವಿಮಾನಗಳ ನಾಶ

ಮಾರ್ಚ್ 10, ರಿಂದೀಚೆಗೆ ಆಸ್ಟ್ರೇಲಿಯನ್ ಮತ್ತು ಅಮೆರಿಕನ್ ವಿಮಾನ ವಿಮಾನ ಪಡೆಗಳು 96 ಜಪಾನ್ ವಿಮಾನಗಳನ್ನು ನಾಶ ಮಾಡಿವೆ. ಆಸ್ಟ್ರೇಲಿಯಾ ಸಂರಕ್ಷಣೆಗಾಗಿ ಅಮೆರಿಕವು ಅಪಾರಬಲವನ್ನು ಕಳಿಸುತ್ತಿದೆ. ಅಮೆರಿಕ ನೌಕಾಬಲವು ಶತ್ರುಗಳನ್ನು ತಡೆಯಲು ಸಿದ್ಧವಾಗಿದೆ.

ಆಸ್ಟ್ರೇಲಿಯಾಕ್ಕೆ ವಿಪತ್ತು

ಜಪಾನಿನ ಅಗಾಧಸೈನ್ಯ

1,20,000 ಸೈನಿಕರಿಂದ 1,50,000 ಸೈನಿಕಂಪರೆಗಿರುವ ೮ ಜಪಾನೀಸ್ ಡಿವಿಜನ್ನುಗಳನ್ನು ಜಾವಾ ಮತ್ತು ಸಿಂಗಪ್ಪೂರಗಳಲ್ಲಿ ಸಿದ್ಧವಾಗಿಡಲಾಗಿದೆ. ಅವುಗಳಿಗೆ ಬೇಕಾದ ಸಂಗ್ರಾಮ ಸಲಕರಣೆಗಳನ್ನೆಲ್ಲ ಒದಗಿಸಲಾಗಿದೆ. ಮುಂದಿನ ಕದನಕ್ಕಾಗಿ ಜಪಾನು ಇಷ್ಟು ಅಗಾಧವಾದ ಸಿದ್ಧತೆಗಳನ್ನು ಮಾಡಿಕೊಂಡಿದೆಯೆಂದು "ಸಿಡ್ನಿ ಸನ್" ಎಂಬ ಪತ್ರಿಕೆಯ ಸುದ್ದಿಗಾರರು ಬರೆಯುತ್ತಾರೆ.

ಆಸ್ಟ್ರೇಲಿಯಾದಲ್ಲಿ ಮಿತ್ರ ಸೇನೆಗಳು ಹೋರಾಟದ ಪ್ರದೇಶಗಳಿಗೆ ಹೋಗುನಿಂತಿನೆ. ನರಿಶೀಲನೆಗಾಗಿ ವಿಮಾನಗಳು ಬಹಳ ದೂರದವರೆಗೆ ಹೋಗುತ್ತಿವೆ.

ರಷ್ಯಾ

ರಷ್ಯರಂಗವು ಬಹಳ ಮುಖ್ಯವೆಂದು ಮಿತ್ರರಾಷ್ಟ್ರಗಳು ಪರಿಗಣಿಸಿ ಅಲ್ಲಿಗೆ ಸಂಗ್ರಾಮ ವಸ್ತುಗಳನ್ನು ಕಳಿಸುತ್ತಲೇ ಇವೆ.

ಜರ್ಮನಿ ಮೇಲೆ ದಾಳಿ

ಆತ್ಯ ಬ್ರಿಟಿಷ್ ವಿಮಾನಗಳು ಜರ್ಮನಿಯ ಮೇಲೂ ಮತ್ತು ಅಕ್ರಮಿಸಿರುವ ರಾಷ್ಟ್ರಗಳ ಮೇಲೂ ನುತ್ತಿಗೆನಡೆಸುತ್ತ ಸಂಗ್ರಾಮವಸ್ತು ನಿರ್ಮಾಣ ಕಾರ್ಯಕ್ಕೆ ಬಹು ಅಡಚಣೆ ಯುಂಟುಮಾಡುತ್ತಿವೆ.

ಯುದ್ಧ ಕಾರ್ಖಾನೆಗಳಿಗೆ ೫೦,೦೦೦ ಕೂಲಿಗಾರರು

ಸಂಗ್ರಾಮ ವಸ್ತುನಿರ್ಮಾಣ ಕಾರ್ಖಾನೆಗಳಿಗೆ ೫೦,೦೦೦ ಕೂಲಿಗಾರರುಬೇಕೆಂದು ಸೈನ್ಯಶಾಖೆಯ ಸಚಿವರಾದ ಶ್ರೀ ಪೋರ್ಡ್ ರವರನ್ನು ಕೇಳಲಾಗಿದೆ. ಇವರ ಫಲವಾಗಿ 45 ರಿಂದ 60 ವರ್ಷಗಳವರೆಗಿನ ಪುರುಸರನ್ನೆಲ್ಲ ಕೆಲಸಕ್ಕೆ ತೆಗೆದುಕೊಳ್ಳಲಾಗುವುದೆಂದು ತಿಳಿದುಬಂದಿದೆ.

ಮೋರ್ಸ್‌ಬಿ ಬಂದರಿಗೆ ಮುತ್ತಿಗೆಯು ಸಂಭವ

ಶತ್ರು ನೌಕೆಗಳ ಇತ್ತೀಚಿನ ಚಲನವಲನಗಳನ್ನು ನೋಡಿದ್ದಾದರೆ ಮೋರ್ಸ್‌ಬಿ ಬಂದರಿನಮೇಲೆ ಜಪಾನರು ಬೇಗನೆ ಬೀಳುವ ಸಂಭವವಿದೆ ಎಂಬುದಾಗಿ "ಸಿಡ್ನಿ ಸನ್" ಎಂಬ ಪತ್ರಿಕೆಯು ಬರೆಯುತ್ತದೆ. "ಲಿಯೋ ಮತ್ತು ಸಾಲ ಮಾವಾಗಳಲ್ಲಿರುವ ಶತ್ರು ಹಡಗುಗಳ ಮೇಲೆ ಮಿತ್ರ ವಿಮಾನಗಳು ಮುತ್ತಿಗೆ ನಡೆಸುತ್ತಲೇ ಇವೆ. ಕಳೆದ 3 ವಾರಗಳ ಕಾರ್ಯಕ್ರಮದ ಫಲವಾಗಿ ವಿಮಾನ ಬಲದಲ್ಲಿ ನಮ್ಮ ಕೈ ಮೇಲಾಗಿದ್ದರೂ ಈಗ ಜಪಾನರಿಗೆ ಅಪಾರ ವಿಮಾನಗಳು ಬರುತ್ತಿವೆ.

ಆದ್ದರಿಂದ ಶೀಘ್ರದಲ್ಲಿಯೇ ಶತ್ರು ವಿಮಾನ ಬಲದ ಕೈಮೇಲಾಗುವುದು ಖಂಡಿತ. ಆದ್ದರಿಂದ ಶತ್ರುಗಳ ಕಾರ್ಯಮಾರ್ಗಕ್ಕೆ ನಮ್ಮಿಂದ ಇದುವರೆಗೆ ಕೊಂಚ ಅಡಚಣೆಯುಂಟಾಗಿದ್ದರೂ ಆವರದನ್ನು ಬಿಟ್ಟುಬಡುವಂತೆ ಮಾಡಲು ನಾವು ಸಮರ್ಥರಾಗಿಲ್ಲ ಎಂದು ತಿಳಿಸಿದೆ.

ಸಿಂಹಳ ದ್ವೀಪದಮೇಲೆ ಜಪಾನರ ದಾಳಿ.

ಸಿಂಹಳದ್ವೀಪದಲ್ಲಿ ಕೊಲಂಬೋ ನಗರದಮೇಲೆ ಕಳೆದ ಭಾನುವಾರ ಭಯಂಕರ ದಾಳಿಯಾಯಿತು. ಜಪಾನರ 75 ವಿಮಾನಗಳು ಬಂದಿದ್ದವೆಂದು ಈಗ ಹೇಳಲಾಗಿದೆ. ಎಷ್ಟು ಜನರು ಸತ್ತಿರಬಹುದೆಂಬುದು ಗೊತ್ತಾಗದಿದ್ದರೂ ಅನೇಕ ನಾಗರೀಕರು ಸತ್ತಿರಬಹುದೆಂದೂ ಆಸ್ತಿಪಾಸ್ತಿಗೆ ಹಾನಿಯಾಗಿರಬೇಕೆಂದೂ ಗೊತ್ತಾಗಿದೆ. ಶತ್ರುಗಳ 27 ವಿಮಾನಗಳನ್ನು ಕೆಳಗಿಳಿಸಲಾಗಿದೆ. ಶತ್ರುಗಳು ತೀರ ಕೆಳಗೆ ಹಾರಿಬಂದು ಓಡಾಡುತ್ತಿದ್ದ ಜನರಮೇಲೆ ಗುಂಡು ಹಾರಿಸಿದರು. ವಿಮಾನ ಧ್ವಂಸಕ ಫಿರಂಗಿಗಳು ಚೆನ್ನಾಗಿ ಕೆಲಸಮಾಡಿದವು.

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೯೯೭.

ಲೈಫ್ ಅಷ್ಯೂರೆನ್ಸು ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000, ರೂ.ಗಳಿಗೆಮಿಾರಿದೆ

ಈ ಕಂಪನಿಯನವರು ಯಾವಾಯವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಲ್ಲಿ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ನಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಕಚೇರಿ- ಡಿಸ್ಪೆನ್ಸರಿ ರೋಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

ಎಣ್ಣೆ ಎಲ್ಲ

ನಿಮ್ಮ ಉಪ್ಪಿನಕಾಯಿಯು ಚೆನ್ನಾಗಿರಬೇಕೆಂದರೆ ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ.

ಉಪ್ಪಿನಕಾಯಿಯು ಪೆತ್ತಗಾಗುವುದಿಲ್ಲ.
,, ಮುಗ್ಗು ಯಾ ಬೂಜು ಹಿಡಿಯುವುದಿಲ್ಲ
,, ಹುಳವಾಸನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಇಲ್ಲದೆ ಅಮಿತವಾದ ರುಚಿಯನ್ನುಂಟು ಮಾಡುವುದು.

A. S. ಸೀಲನ್ನು ಗಮನಿಸಿ, ಕೊಳ್ಳಿರಿ. ಮೋಸಹೋಗಬೇಡಿರಿ

ದೊರೆಯುವ ಸ್ಥಳ- 1) ಎಂ. ಪುಟ್ಟೇಂಜೀರಾವು, ಎಂ. ವೆಂಕೋಜೀರಾವು, ತೇರುಬೀದಿ, ಬಳ್ಳಾರಿ.
ಮತ್ತು, 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

Visit Royal Café
Near Royal Picture Palace
Royal Cafe is ROYAL.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬೆಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೊಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು(ಫ್ರೇಂ) ನಮ್ಮಲ್ಲಿವೆ. ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦	ಅಂಚೆ ವೆಚ್ಚ ಬೇರೆ
ಕನ್ನಡ ಪಠ್ಯಪುಸ್ತಕಗಳು	೦—೯—೦	ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚಿನ ಪುಸ್ತಕ ಕೊಳ್ಳುವರಿಗೂ ದಾರಾಳ ಕಮೀಶನ್
ವಿವಾಹದ ಶೋಧೆ	೦—೮—೦	
ಸುಮತಿ ರತಿಕಳೆ	೦—೯—೦	

ಕಾಲನ ಸುಬ್ಬಣ್ಣ, ಮುರ್ಚಂಟು, ಬಳ್ಳಾರಿ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮೂಡಿದ ಕೂಲಿ ನೆಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ಪೆಸ್ಟ್ ಎಂಡ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ.

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರನ್ನು ಏನಂಗಳನ್ನು ತಿಳಿಯಿರಿ

ನಿಮಗೆಸುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಛೇರಿ ಕಾದಂಬರಿ ವಗೈರೆ ಮೊದಲಾಯಾವುದಿದ್ದಲ್ಲಿ ನಿಮಗೆ ಎಲ್ಲಾ ನಿರ್ಧಾವಣೆ ಮಾಹಿತಿಯೂ, ಸುಖಕರವಾಗಿ ಹೇಳಲಾಗುವುದು.

ಟಿ. ಜಿ. ಕೇಶವರಾವ್,
ಕೃಷ್ಣ ನೂಜಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—0—0	ಬಳ್ಳಾರಿಯವರಿಗೆ 2-0-0
Mofussil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local 1—4—0	ಬಳ್ಳಾರಿಯವರಿಗೆ 1-4-0
Mofussil 2—0—0	ಹೊರಗಿನವರಿಗೆ 2-0-0

Nava Bharat, Bellary.

REG. No. M. 3037.

Sri _____

Printed at Vittal Press, Car Street Edited & Published by T. B. Keshava Rao, Bellary

Reg. No. M. 3937

ವಂದೇ ಮಾತರಂ

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಭೋಧತ.

ವರ್ಷ ೪ | ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. | ಸಂಪಾದಕ:—

ಸಂಚಿಕೆ ೩೦ | ಬಳ್ಳಾರಿ ಏಪ್ರಿಲ್ ೧೯ ನೇ ಭಾನುವಾರ ೧೯೪೨. | ಟಿ. ಬಿ. ಕೇಶವರಾವ್

Royal Picture Palace

WOMAN.

(National Studio)

From 17-4-1942.

ರಾಯಲ್ ಟಿನೆಮಾ ಮಂದಿರವಲ್ಲಿ

ಸ್ತ್ರೀ

(ನ್ಯಾಷನಲ್ ಸ್ಟೂಡಿಯೋ)

೧೭-೪-೧೯೪೨ನೆಯ ಶುಕ್ರವಾರದಿಂದ,

Visit Royal Cafe
Near Royal Picture Palace
Royal Cafe is ROYAL.

ಬರ್ಮಾದ - ಪರಿಸ್ಥಿತಿ

ನ್ಯಾಗಮಾಂಗ ಎಂಬ ಕಡೆಯಿಂದ ಬ್ರಿಟಿಷ್ ಸೈನಿಕರು ಹಿಂದೆಸರಿದಿರುವರೆಂದು ಪ್ರಕಟವಾಗಿದೆ. ಬರ್ಮಾದಲ್ಲಿ ಹೋರಾಡುತ್ತಿರುವ ಬ್ರಿಟಿಷ ಸೈನಿಕರು ಜಪಾನರ ಕಡೆ ಸೇರುತ್ತಿದ್ದಾರೆಂಬ ವಾರ್ತೆಗೆ ಆ ಫಾರ ವಿಲ್ಲೆಂದು ಭಾರತ ಕಾರ್ಯದರ್ಶಿಗಳಾದ ಅಮೆರಿಯವರು ಹೇಳಿಕೆ ಕೊಟ್ಟರು.

ಜಪಾನರು ಎಣ್ಣೆ ಭಾವಿಗಳ ಕಡೆ ವೇಗವಾಗಿ ಧಾವಿಸಿ ನಡೆದಿರುವರೆಂದು ಒಂದು ಯುದ್ಧ ಪ್ರಕಟನೆಯು ಹೇಳುತ್ತದೆ. ಆಭಾಗದಲ್ಲಿ ಭಯಂಕರ ಹೋರಾಟವು ಸಾಗಿದೆ.

ಫ್ರಾನ್ಸು ಸರಕಾರದಲ್ಲಿ ಬದಲಾವಣೆ

ಜರ್ಮನಿಗೆ ಸ್ನೇಹಿತರಾದ ಎಂ. ಲವಾಲರು ಉಪಮಂತ್ರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ ಅಡ್ಮಿರಲ ಡಾರ್ಲಾನರಿಗೆ ನಾವಿಕಾಪಡೆಯ ಆಧಿಪತ್ಯವನ್ನು ಕೊಡಲಾಗಿದೆ. ಹೊಸ ತಳವಣಿಯು ನೇರವೆ ಸರ್ಕಾರವನ್ನು ಸ್ಥಾಪಿಸಲಾಗುವುದೆಂದು ಪ್ರಕಟನೆ ಹೊರಟಿದೆ. ಸಾರ್ವಜನಿಕ ಪಟೆನ್ಸ್, ಆಡಳಿತಾರ್ಹತೆ ಮತ್ತು ಬೇರೆ ಲಕ್ಷಣಗಳು ಇವರು ಸಚಿವರಾಗಿ ನೇಮಕವಾಗಲು ಸರಿ ಚರ್ಚಿಸಿದವರ ಹೆಸರಿದು.

ಇದರಿಂದ ಲಂಡನ ಅಮೆರಿಕಾಗಳಲ್ಲಿ ಬಹಳ ವಿಸಂಚಿನೆಗೆ ಕಾರಣವಾಗಿದೆ. ಫ್ರಾನ್ಸಿನ ಅನಾಕ್ರಮಿತ ಪ್ರದೇಶದಿಂದ ಅಮೆರಿಕನ್ನರನ್ನು ಹಿಂದಕ್ಕೆ ಕರೆಸಲಾಗುತ್ತಿರುವನೆಂದು ಲಂಡನ ಸುದ್ದಿಗಳಿಂದ ಗೊತ್ತಾಗಿದೆ.

ಕಾಂಗ್ರೆಸ ನಿರ್ಣಯ-ಬ್ರಿಟಿಷ ಸಲಹೆಗಳ ತಿರಸ್ಕಾರ

ನಮಗೆ ಸ್ವತಂತ್ರ ಸರಕಾರ ಬೇಕು.

ಬ್ರಿಟೀಷ್ ಸಂಗ್ರಾಮ ಮಂತ್ರಿಮಂಡಲದವರ ಸಲಹೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಯಿತು. ಸಂಗ್ರಾಮ ಪರಿಸ್ಥಿತಿಯಿಂದ ಕಟ್ಟಕಡೇನಿಮಿಷದಲ್ಲಿ ಮುಂದಿಡಲ್ಪಟ್ಟ ಈ ಸಲಹೆಗಳನ್ನು ಭಾರತ ಸ್ವಾತಂತ್ರ್ಯದ ದೃಷ್ಟಿಯಿಂದ ಮಾತ್ರವಲ್ಲದೇ ಭಾರತಕ್ಕೊದಗಿರುವ ಉಗ್ರ ವಿಪತ್ತನ್ನು ಎದುರಿಸುವ ದೃಷ್ಟಿಯಿಂದ ಸಹ ನಿರ್ಮಿಸಬೇಕಾಗಿದೆ.

ವಿಶ್ವದ ಪ್ರಗತಿದಾಯಕಬಲಗಳೊಡನೆ ಸೇರುವುದಾಗಿ ಕಾಂಗ್ರೆಸ್ 1939ರಲ್ಲಿಯೇ ತಿಳಿಸಿತು. ಆ ರೀತಿ ನಡೆಯಲು ಅವಶ್ಯಕವಾದ ವಾತಾವರಣವುಂಟುಮಾಡಬೇಕೆಂದು ಅದು ಕೇಳಿತು. ಭಾರತಕ್ಕೆ ಸ್ವಾತಂತ್ರ್ಯ ಕೊಡುವುದು ಅತ್ಯಾವಶ್ಯಕವಾಗಿತ್ತು. ಯಾಕೆಂದರೆ ಸ್ವಾತಂತ್ರ್ಯ ಕೊಟ್ಟ ಹೊರತು ಭಾರತದ ಕೋಟ್ಯಾವಧಿಜನರ ಹೃದಯಗಳನ್ನು ಬೆಳಗಿ ಅವರನ್ನು ಕಾರ್ಯೋನ್ಮುಖರಾಗುವಂತೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಲಾಯಿತು. ಸ್ವಾತಂತ್ರ್ಯ ಭಾರತವು ಸಾತ್ರ ದೇಶದ ರಕ್ಷಣೆ ಭಾರತನ್ನು ಮಾಂಬ. ದನು ಖರ್ಚಾಗುವುದೆಂದು ತಿಳಿಸಲಾಯಿತು.

ಸಲಹೆಗಳು ಆಕ್ಷೇಪಣೆಗಳು

ಬ್ರಿಟೀಷ್ ಸರಕಾರದ ಸಲಹೆಗಳು ಮುಖ್ಯವಾಗಿ ಭವಿಷ್ಯದ ಸ್ಥಿತಿಗೆ ಸಂಬಂಧ ಪಟ್ಟವು ಈ ಅನಿಶ್ಚಿತವಾದ ಭವಿಷ್ಯದಲ್ಲಿ ಭಾರತೀಯರಿಗೆ ಸ್ವಯಂನಿರ್ಣಯಾಧಿಕಾರ ಕೊಡುವ ತತ್ವವನ್ನು ಸಲಹೆಗಳಲ್ಲಿ ಅಂಗೀಕರಿಸಲಾಗಿದ್ದರೂ, ಆದರಲ್ಲಿ ಪ್ರಾಂಬುವ ವಿಧಿನಿಯಮಗಳ ಮೂಲಕ ಭಾರತದಲ್ಲಿ ಸ್ವತಂತ್ರ ಸರಕಾರ ವ್ಯವಸ್ಥೆಯೂ ಐಕಮತ್ಯವೂ ಏರ್ಪಡಲು ಅವಕಾಶವಿಲ್ಲವಾಗಿದೆ. ಪ್ರಸ್ತುತ ರಾಜ್ಯಾಂಗವನ್ನು ರೂಪಗೊಳಿಸುವ ನಿಜವಾದ ಪ್ರತಿನಿಧಿಗಳಲ್ಲಿದವರು ಸದಸ್ಯರಾಗಿರಲು ಅವಕಾಶ ಕಲ್ಪಿಸಲಾಗಿರುವುದರಿಂದ ಜನರ ಸ್ವಯಂ ನಿರ್ಣಯಾಧಿಕಾರಕ್ಕೆ ಧಕ್ಕೆ ತಗುಲುವುದಾಗಿದೆ ಭಾರತಜನರು ಸಂಪೂರ್ಣ ಸ್ವಾತಂತ್ರ್ಯ ಬೇಕೆಂದು ಕೇಳಿದ್ದಾರೆ. ಇಡೀ ಭರತಖಂಡಕ್ಕೆ ಸ್ವಾತಂತ್ರ್ಯ ಕೊಡೆಯುವ ಹಕ್ಕಿಗಿಂತ ಕಡಿಮೆಯಾದುದನ್ನು ಈಗಿನ ಪರಿಸ್ಥಿತಿಯಲ್ಲಿ ಅಂಗೀಕರಿಸಲು ಸಾಧ್ಯವಿಲ್ಲ.

ಸಂಸ್ಥಾನ ಪ್ರಜೆಗಳ ಹಿತ

ಸಲಹೆಗಳಲ್ಲಿ ಹಾಕಿರುವ ವಿಧಿನಿಯಮನುಗಳಂತೆ ನಿಜವಾದ ಸ್ವಾತಂತ್ರ್ಯವು ಕನಸಿನ ಮಾತಾಗಬಹುದು. ೯ ಕೋಟಿ ಸಂಸ್ಥಾನ ಪ್ರಜೆಗಳನ್ನು ಸಂಪೂರ್ಣವಾಗಿ ಅವರು, ಅವರೂ ಅವರ ಅರಸರು ಮನಸ್ಸಿಗೆ ಬಂದಾಗೆ ಉಪಯೋಗಿಸಿಕೊಳ್ಳಬಹುದಾದ ವಸ್ತುಗಳೆಂದು ಭಾವಿಸಿರುವಾಗಸ್ವತಾಪ್ರಭುತ್ವವೂ ಸ್ವಯಂ ನಿರ್ಣಯಾಧಿಕಾರವೂ ಇರಲು ಹೇಗೆ ಸಾಧ್ಯ? ಆಡಳಿತ ವ್ಯವಸ್ಥೆಯನ್ನು ರೂಪಗೊಳಿಸುವ ಸಂಸ್ಥೆಗೆ ಪ್ರತಿನಿಧಿಗಳನ್ನಾರಿಸಲು ಸಂಸ್ಥಾನ ಪ್ರಜೆಗಳಿಗೆ ಅಧಿಕಾರವಿಲ್ಲ. ಅಂತಹ ಸಂಸ್ಥಾನಗಳು ಭಾರತ ಸ್ವಾತಂತ್ರ್ಯದ ಬೆನ್ನಹಣೆಗೆ ಅಂಕವಾಗಿ ಕೂರಬಹುದು. ವಿದೇಶಿ ಪ್ರಭುತ್ವವು ನೆಲೆಸಿರುವ ಸ್ಥಾನಗಳಿಗಿಂತಲಹುದು. ಆ ಸಂಸ್ಥಾನಗಳಲ್ಲಿ ವಿದೇಶಿ ಸೇನೆಯನ್ನಿಡುವ ಸಂಭವವಿದ್ದೇ ಇದೆಯೆಂದೂ ಹೇಳಲಾಗಿದೆ.

(7ನೇ ಪುಟದನ್ನು ನೋಡಿರಿ)

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ

	31-3-42	
ವಿಹಾಚಿಟ್ಟುಗಳು.		
ಫಿಕ್ಸೆಡ್	ರೂ. Nil	108450-0-0
ಚಾಲ್ತಿ	,, 3,173	11150-0-0
ಸೇವಿಂಗ್ಸು	,, 1,232	17489-0-0
ಇತರ	,, 40	2241-0-0
ಸಾಲಗಳು		
ಭಂಗಾರ	,, 520	33546-0-0
ಮೂಲು	,, Nil	40552-0-0
ಇತರ	,, Nil	37196-0-0
ಇತರ ಆಸ್ತಿ.		
ಸರ್ಕಾರದ ಬಾಂಡುಗಳು	,,13,320	30476-0-0
ಬ್ಯಾಂಕುಗಳಲ್ಲಿರುವ ಹಣ	,,32,502	24951-0-0
ಕೈಯ್ಯಲ್ಲಿ ನಗದು	,, 5770	18819-0-0

ಒಟ್ಟು ವ್ಯವಹಾರದ ಹೊತ್ತ.

31—10—40.	31—3—42.
ರೂ. 1,14,774-0-0	ರೂ. 2,40,412-0-0

ಶಾಖೆಗಳು:—

1 ಹಿಂದುಪುರ 2 ಕೊಟ್ಟೂರು. 3 ಆದವಾನಿ ಕೊಂಡ. 4 ಪತ್ತಿಕೊಂಡ

ಹೆಚ್. ಶೇಷಾಚಾಮರೆಡ್ಡಿ, ಬಿ. ಎ. ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಏಪ್ರೆಲ್ ೧೯, ೧೯೪೨.

ಕಾಂಗ್ರೆಸ್-ಸರಕಾರದ ಒಪ್ಪಂದವು ವಿಫಲನಾಯಿತು.

ಬ್ರಿಟಿಷಸರಕಾರದ ಕಡೆಯಿಂದ ಪ್ರತಿನಿಧಿಯಾಗಿ ಬಂದಿದ್ದ ಸರ್ ಸ್ಟಾಫರ್ಡ್ ಕ್ರಿಪ್ಸ್ ಮತ್ತು ಕಾಂಗ್ರೆಸ್ ಮುಖಂಡರೊಡನೆ ಕಳೆದ ೩ ವಾರಗಳಿಂದ ಸಂಧಾನದಬಗ್ಗೆ ಚರ್ಚೆಯು ನಡೆದು ಕೊನೆಗೆ ವಿಫಲವಾಯಿತೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ ಬ್ರಿಟಿಷ ಸರಕಾರದ ಯೋಜನೆಗಳನ್ನು ಕಾಂಗ್ರೆಸ್ ಮುಸ್ಲಿಂಲೀಗುಗಳೇ ಅಲ್ಲದೆ ಹಿಂದೂಮಹಾಸಭೆ, ಸಿಕ್ಖರು, ಅಂಬೇಡ್ಕರ ಪಕ್ಷದವರು ಸಹ ತಿರಸ್ಕರಿಸಿದರು.

ನೀನೆಲ್ಲರೂ ಮಡಿಯಿರಿ, ಈಯುವ್ ಕಾಲಕ್ಕೆ ಜನ ಧನಗಳನ್ನು ಕೊಡಿರಿ, ರಕ್ಷಣೆಯಭಾರವನೆಲ್ಲಾ ನನ್ಮುದು" ಎಂಬ ಪಟ್ಟನ್ನು ಸರಕಾರವು ಹಿಡಿದು ತನ್ನ ಕಪಿಮುಷ್ಟಿಯನ್ನು ಪ್ರದರ್ಶಿಸಿ ಅಧಿಕಾರಬಿಟ್ಟುಕೊಡುವುದಿಲ್ಲೆಂಬುದನ್ನು ಸ್ಪಷ್ಟಪಡಿಸಿ ಒಂದು ಸುವರ್ಣಸಂಧಿಯನ್ನು ಕಳೆದುಕೊಂಡಿತು. ರಕ್ಷಣೆಯ ವಿಷಾಟುಗಳನ್ನು ಯುದ್ಧಕಾಲದಲ್ಲಿ ಕೆಡಿಸಬಾರದೆಂದು ಭಾರತ ಸೇನಾನಾಯಕರಿಗೇ ಹೋರಾಟದ ಭಾವನೆಯಿಲ್ಲಾಬಿಟ್ಟು ಹಿಂದೂಸ್ಥಾನದ ಒಳ ರಕ್ಷಣೆಯ ಜವಾಬ್ದಾರಿಯನ್ನು ಮಾತ್ರ ಕೊಡಿರೆಂದು ಕೇಳಿದರೂ ಸರಕಾರವು ಅದಕ್ಕೆ ಒಪ್ಪಲಿಲ್ಲ.

ಪ್ರಾಪ್ರಭುತ್ವ ತತ್ವವಿರೋಧಿಗಳಾದ ಅಚ್ಚುರಾಷ್ಟ್ರವದವರು ಪ್ರಪಂಚ ಶಾಂತಿಯನ್ನು ಕೆಡಿಸಲುದ್ಯುಕ್ತವಾಗಿರುವಾಗ ಪ್ರಜಾಪ್ರಭುತ್ವದ ಅಲ್ಪಸ್ವಲ್ಪಸಂರಕ್ಷಣೆಗಳನ್ನು ಳ್ಳ ಬ್ರಿಟಿಷ ಅಮೆರಿಕಾದವರಿಗಾದರೂ ಸಹಾಯ ಮಾಡೋಣವೆಂದು ಕಾಂಗ್ರೆಸ್ ನವರು 2 ವರ್ಷಗಳಿಂದ ಪ್ರಯತ್ನಿಸಿದರೂ ಅದು ಸಾಧ್ಯವಾಗಲಿಲ್ಲ, ಇಂಥಾ ಗಂಡಾಂತರ ಸಮಯದಲ್ಲಿಯೂ ಬ್ರಿಟಿಷರು ಅಧಿಕಾರ ಬಿಟ್ಟುಕೊಡುವ ಪ್ರವೃತ್ತಿಯುಳ್ಳವರಾಗಿರುವುದಿಲ್ಲ ಅವರು ತಮ್ಮ ಕಾರ್ಯದ ಸಲವನ್ನು ಉಳ್ಳಲೇದೇಕಾಗುವುದೆಂದು ಬೇರೆ ಹೇಳಬೇಕಾಗಿಲ್ಲ.

ಸರ್ - ಸ್ಟಾಫರ್ಡ್ ಕ್ರಿಪ್ಸರು ಮತ್ತೆ ಬರುವರೇ ?

ಭಾರದ ದೇಶಕ್ಕೆ ಬ್ರಿಟಿಷ ಸರಕಾರದ ಪರವಾಗಿ ಸಂಧಾನಕ್ಕಾಗಿ ಬಂದಿದ್ದ ಸರ್ ಸ್ಟಾಫರ್ಡ್ ಕ್ರಿಪ್ಸರು ಸಂಧಾನವು ಮುರಿದದ್ದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿ ಚರ್ಚೆಗಳೆಲ್ಲಾ ಅತ್ಯಂತ ಸೌಹಾರ್ದಭಾವನೆಯಿಂದ ನಡೆದವೆಂಬುದನ್ನು ವೃತ್ತ ವರ್ತಿಕೋದ್ಯೋಗಿಗಳ ಸಭೆಯಲ್ಲಿ ಹೇಳಿದರು. ಅಲ್ಲದೆ ತಾವು ಮತ್ತೆ ಹಿಂದೂಸ್ಥಾನಕ್ಕೆ ಬರುವ ಸಂದರ್ಭ ಬೇಳಬಹುದೆಂದೂ ಆದರೆ ತಾವು ಯಾವ ಅಧಿಕಾರದಿಂದ ಬರುವರೆಂಬುದು ಗೊತ್ತಿಲ್ಲ ನೆಂದೂ ಸೂಚಿಸಿದರು.

ಆಕಾಶವಾಣಿ ಭಾಷಣ ಮಾಡುತ್ತ ಭಾರತೀಯರೆಲ್ಲ ಯುದ್ಧ ಪ್ರಯತ್ನಗಳಿಗೆ ಸಹಾಯಮಾಡಬೇಕೆಂದು ವಿನಂತಿಮಾಡಿಕೊಂಡರು. ಕ್ರಿಪ್ಸರು - ತಮ್ಮ ದೇಶಕ್ಕೆ ವಿಮಾನ ಮೂಲಕ ಪ್ರಯಾಣ ಬೆಳೆಸಿದರು.

ಬಳ್ಳಾರಿ ಜಿಲ್ಲಾ ಬೋರ್ಡುಶಾಲೆಗಳ

ಉಪಾಧ್ಯಾಯ ಸಂಘಗಳು.

ಕಾರ್ಯದರ್ಶಿಗಳಿಗೆ ಮಹತ್ವ ಸೂಚನೆ

ಬಳ್ಳಾರಿ ಜಿಲ್ಲಾ ಬೋರ್ಡು ಶಾಲೆಗಳಲ್ಲಿ ಅನೇಕ ವರ್ಷಗಳಿಂದ ನನಕರಿಮಾಡುತ್ತಿದ್ದು ಸಂಬಳದ ಹೆಚ್ಚಳಕ್ಕೆ (Increment) ಅರ್ಹರಾದ ಉಪಾಧ್ಯಾಯರಿಗೆ ಬೋರ್ಡಿನಿಂದ ಇಕ್ರಿಮೆಂಟು ದೊರೆತಿರುವುದಿಲ್ಲ ಅಲ್ಲದೆ ಯುದ್ಧವಾರಂಭವಾದ ಮೇಲೆ ಆಹಾರಪದಾರ್ಥಗಳೆಲ್ಲ ತುಟ್ಟಿಯಾಗಿ ಕುಟುಂಬೀಕರಾದ ಬಡ ಉಪಾಧ್ಯಾಯರಿಗೆ ನರ್ನಿಸಲಸದಳವಾದ ಕಷ್ಟಗಳು ಪ್ರಾಪ್ತವಾಗಿವೆ. ಈ ಗಾಗಲೇ ಅನೇಕ ಉಪಾಧ್ಯಾಯ ಸಂಘಗಳವರು ನಿರ್ಣಯಗಳನ್ನು ಮಾಡಿ ಮೇಲ್ಪಟ್ಟ ಅಧಿಕಾರಿಗಳಿಗೆ ಹೇಳಿಕೊಂಡಿಪತ್ತಾರೆ ಉಪಾಧ್ಯಾಯರ ಹಿತದ ದೃಷ್ಟಿಯಿಂದ ಎಲ್ಲಾ ಉಪಾಧ್ಯಾಯ ಸಂಘಗಳವರೂ ಇಕ್ರಿಮೆಂಟು ಮತ್ತು ವಾರ ಆಲೋರ್ಯಸುಗಾಗಿ ನಿರ್ಣಯಗಳನ್ನು ಮಾಡಿ ಜಿಲ್ಲಾಬೋರ್ಡು ಅಧ್ಯಕ್ಷರು ಡೆಪ್ಯುಟಿ ಇನ್‌ಸ್ಪೆಕ್ಟರವರು, ಮತ್ತು ಡಿ ಇ. ಓ. ರವರಿಗೆ ಕಳುಹಿಸಲು ಪ್ರಾರ್ಥನೆ

ಅನೇಕ ಉಪಾಧ್ಯಾಯ ಸಂಘಗಳ ಸಮ್ಮತಿಯನ್ನು ಪಡೆದು ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರು ಮತ್ತು ಡಿ. ಇ ಓ. ರವರನ್ನು ಕಂಡು ಹೇಳಿಕೊಳ್ಳುವುದಕ್ಕಾಗಿ ಒಂದು ಶಿಷ್ಟಮಂಡಲವನ್ನೇರ್ಪಡಿಸಲು (Deputation) ನಿಶ್ಚಿತವಾಗಿದೆ 1942 ನೆಯ ಮೇ ತಿಂಗಳ 3 ನೆಯ ವಾರದಲ್ಲಿ ಜಿಲ್ಲಾಬೋರ್ಡು ಸಭೆಯು ಸೇರುವ ದಿನ (—5—1942 ವಾರ) ಜಿಲ್ಲೆಯಲ್ಲಿನ ಎಲ್ಲಾ ಭಾಗಗಳಿಂದಲೂ ಉಪಾಧ್ಯಾಯ ಸಂಘಗಳ ಪ್ರತಿನಿಧಿಗಳು ಬಳ್ಳಾರಿಗೆ ಬರಬೇಕು ತಾಲೂಕು ಸಂಘಗಳಲ್ಲಿ ತಾಲೂಕಿನಿಂದ ಇಬ್ಬರು ಪ್ರತಿನಿಧಿಗಳು ಬಂದರೆ ಸಾಕು ತಾಲೂಕು ಸಂಘಗಳು. ಇಷ್ಟಿದ್ದರೆ, ಅವು ಸರಿಯಾಗಿ ಕಲಸಮಾಡುತ್ತಿರುವುದು ಇಷ್ಟವಾದರೆ, ಉಪಾಧ್ಯಾಯ ಸಂಘಗಳವರೇ ಪ್ರತಿನಿಧಿಗಳನ್ನು ಕಳುಹಿಸಬೇಕು ಸಂಘಗಳವರು ಸದರಿ ಪ್ರತಿನಿಧಿಗಳ ಎಲ್ಲಾ ಖರ್ಚುಗಳನ್ನೂ ಭರಿಸಬೇಕು ಬೋರ್ಡು ಮೀಟಿಂಗಿನ ತೀರ್ಮಾನವು ನಿಶ್ಚಿತವಾಮೊಡನೆಯೇ 'ನವಭಾರತ'ದಲ್ಲಿ ತಿಳಿಸಲಾಗುತ್ತದೆ

ಅಧ್ಯಕ್ಷರು: ಜಿಲ್ಲಾಬೋರ್ಡು ಸದಸ್ಯರು ಮತ್ತು ಇತರ ಅಧಿಕಾರಿಗಳಿಗೆ ಅರ್ಪಿಸಲು ಒಂದು ಬಿನ್ನವತ್ತಳೆ (Memorandum)ಯನ್ನು ಇಂಗ್ಲೀಷ್, ಕನ್ನಡ, ತೆಲುಗು ಭಾಷೆಗಳಲ್ಲಿ ತಯಾರಿಸಲು 'ನವಭಾರತ'ದ ಸಂಪಾದಕರಾದ ಶ್ರೀ ಟಿ. ಬಿ ಕೇಶವರಾಯರನ್ನು ಕೇಳಿಕೊಳ್ಳಲಾಗಿದೆ ಬಿನ್ನವತ್ತಳೆ ವಗೈರೆ ಖರ್ಚುಗಳಿಗಾಗಿ ಎಲ್ಲಾ ಉಪಾಧ್ಯಾಯ ಸಂಘಗಳವರೂ ಒಂದೊಂದು ರೂಪಾಯಿ "ನವಭಾರತ" ಸಂಪಾದಕರಿಗೆ ಮನಿಆರ್ಡರು ಮಾಡಬೇಕು

ಮದ್ರಾಸು ಪ್ರಾಂತದ ಇತರ ಜಿಲ್ಲೆಗಳಲ್ಲಿರುವಂತೆ ನಮ್ಮ ಜಿಲ್ಲೆಯಲ್ಲೂ ಒಂದು ಜಿಲ್ಲಾ ಉಪಾಧ್ಯಾಯರ ಸಂಘವನ್ನು ಸ್ಥಾಪಿಸಬೇಕಾಗಿದೆ ಈ ಕಾರಣ ಸಂಘಕ್ಕೊಬ್ಬರಂತೆ ಪ್ರತಿನಿಧಿಗಳು ಬರಲೇಬೇಕೆಂದೂ ಬರುವಮುಂಚೆ ಸಂಪಾದಕರಿಗೆ ರೂ 1-0-0 ಕಳುಹಿಸಬೇಕೆಂದೂ ಆಗ್ರಹದ ಪ್ರಾರ್ಥನೆ.

ನ್ಯವಸ್ಥಾಪಕರು,
(ಬಳ್ಳಾರಿ ಜಿಲ್ಲಾ ಬೋರ್ಡು ಉಪಾಧ್ಯಾಯರ ಪರವಾಗಿ)

ಜಪಾನರ ದಾಳಿಯನ್ನೆದುರಿಸಲು ಮ. ಗಾಂಧಿಯವರ ಸಲಹೆ

ನೀರು ಕೂಡಾ ಕೊಡಬೇಡಿರಿ - ಪ್ರಾಣವನ್ನರ್ಪಿಸಲು ಸಿದ್ಧರಾಗಿರಿ

(ಮ. ಗಾಂಧಿಯವರು ಈ ವಾರದ ತಮ್ಮ 'ಹರಿಜನ' ಪತ್ರಿಕೆಯಲ್ಲಿ ಹೀಗೆ ಬರೆದಿರುವರು.)

ಜಪಾನರು ನಮ್ಮ ಬಗಿಲವನ್ನೇ ಬಡಿಯ ಹೆಜ್ಜಿದ್ದಾರೆ ಅಹಿಂಸಾತ್ಮಕ ಮಾರ್ಗದಿಂದ ನಾನೇನು ಮಾಡಬೇಕು? ನಮ್ಮದು ಸ್ವತಂತ್ರ ರಾಷ್ಟ್ರವಾಗಿದ್ದರೆ, ಜಪಾನರು ಈ ದೇಶದಲ್ಲಿ ಪ್ರವೇಶಮಾಡದಂತೆ ಅಹಿಂಸಾತ್ಮಕವಾಗಿಯೇ ಪ್ರತಿಬಂಧಿಸುತ್ತಿದ್ದೆವು ಸಶ್ಯಾದ ಪರಿಸ್ಥಿತಿಯಲ್ಲಿ. ಜಪಾನರು ನಮ್ಮ ದೇಶದಲ್ಲೀದ ಕೂಡಲೆ, ಅಹಿಂಸಾತ್ಮಕ ಪ್ರತಿಕಾರವು ಪ್ರಾರಂಭವಾಗುವದು ಅಹಿಂಸಾತ್ಮಕ ಪ್ರತಿಕಾರ ಮಾಡುವವರು ಪರಿಗೆ ಯಾವ ರೀತಿಯಿಂದಲೂ ಸಹಾಯ ಮಾಡತಕ್ಕದ್ದಲ್ಲ, ನೀರು ಕೂಡ ಕೊಡ ತಕ್ಕದ್ದಲ್ಲ. ದೇಶವನ್ನು ಸುರಿಯ ಬಂಧ ವರಿಗೆ ಸಹಾಯನಾಡುವದು ಅವರ ಕರ್ತವ್ಯವಲ್ಲ ಒಂದು ವೇಳೆ ಜಪಾನರು ದಾರಿ ತಪ್ಪಿ ಬಂದು ನೀರಡಿಕೆಯಿಂದ ಬಳಲುತಿದ್ದು ಸಾಮಾನ್ಯ ನುಷ್ಯರಂತೆ ಸಹಾಯ ಬೇಡಿದ್ದರೆ, ಯಾರೂ ದ್ವೇಷಿಗಳಲ್ಲೆಂದು ತಿಳಿಯುವ ಅಹಿಂಸಾತ್ಮಕ ಪ್ರತಿಕಾರಿಯು ಅವರಿಗೆ ನೀರು ಕೊಡಬಲ್ಲರು. ಒಂದು ವೇಳೆ ಜಪಾನಿಗಳು ನೀರು ಕೊಡಲು ಒತ್ತಾಯಪಡಿಸಿದರೆಂದು ತಿಳಿಯುವಾ ಆಗಸ್ತ್ರತಿಕಾರಮಾಡುವರು ತಮ್ಮ ಪ್ರತೀಕಾರದ ಕರ್ತವ್ಯವಲ್ಲಿ ಮರಣ ಕೂಡ ಹೊಂದಲು ಸಿದ್ಧರಾಗಬೇಕ. ಈ ರೀತಿ ಪ್ರತಿಕಾರ ಮಾಡುವವರನ್ನೆಲ್ಲ ಜಪಾನರು ಕೊಂದು ಬಿಡಬಲ್ಲರು ಆದರೆ ಅಂಥ ದಾರಿಗಾರನು ಕೆಲ ಸಮಯದ ನಂತರ ನುಸ್ಸಿನಿಂದ ಕಾಗು ಕರಿಂದಿಂದ ಕೂಡ ನಡೆದ ಬಿದುವನು ಮತ್ತು ಅಹಿಂಸಾತ್ಮಕ ಪ್ರತೀಕಾರಿಗೂ ಕೆಲವೆಯನ್ನು ನಿಲ್ಲಿಸುವನು. ಆ ರೀತಿಯ ಪ್ರತಿಕಾರ ಶಕ್ತಿಯ ತಿರು ಣಾ ರಾಜನೀತಿಯಿಂದ ಗಾಯ ಗೊ ಸಹಾಯ ಸಹಕಾರಗಳನ್ನು ನಿ ಲ್ಲಿಸುವನು ಈ ನೀತಿ (ಅಸಹಿಸಿ) ಶಕ್ತಿಯು ರಾಜನೀತಿಜ್ಞನು ಅವನು ಹುದು ಕಹತ್ತುಸಹ, ಮತ್ತು ಬಹುತೇವಾಗಿ ನಂತೆ ಆ ಹತ್ಯೆಯಿಂದ ಪಾಪಾತ್ಮನಾಗು ವನು ಆದರೆ ಜಪಾನರು ಆತ್ಯಂತ ಸಿದ್ಧ ಯೋಗಿಂದೂ ಎಷ್ಟೋ ಜನರ ಕೂತಿ ನಾಡುವನೆಂಬುದರ ಪರಿವೆ ಕೂಡ ಅವರಿಗಿಲ್ಲಂದೂ. ಈ ಪ್ರತಿಕಾರಿಗಳಿಗೆನಿಸಬಹುದು ಆದರೆ ದಬ್ಬಾಳಿಕೆಗೆ ಶರಣು ಹೋಗದೆ ಸಾಯಲು ಕೂಡ ಸಿದ್ಧರಾಗಿರುವ ದಿನವೆ ಅವರು ವಿಜಯಿಗಳಾಗಿರುವರು.

ಆದರೆ ನಾನು ಒರೆಯಂತೆಯೆ ಸರ್ವ ಸಾಗಿ ಫಿಟನ್ ಸಂಭವಿಸುವದಿಲ್ಲ ದೇಶದಲ್ಲಿ ಕನಿಷ್ಠ ನಾಲ್ಕು ರ್ಷಗಳಾದರೂ ನೊದಲನಯದೆಂದರೆ ಬ್ರಿಟಿಶರು ಸುತ್ತು ಅವರು ಸಂಘಟಿಸಿದ ಸೈನ್ಯ ಹಿಂದುಸ್ಥಾನದ ಒಳ್ಳೆ ತನ್ಮದನ್ನೂ ಶ್ಲೇಷಿಲ್ಲೆಂದು ಜಪಾನಿಗರು ನಿರ್ಧರಿಸಿರುವರು ಪ್ರಿಟಿಶ್ ತೊರ್ಡಿಯೆ ಅವರ ಬಗ್ಗೆ ಅವರಿಗೆ ದ್ವೇಷವಿಲ್ಲ. ಜಪಾನರ ಬಗ್ಗೆ ಪ್ರೇಮವಿಲ್ಲ ಉಳಿದವರಂತೆ ತಾಯಿನಲ್ಲಿ ಜಪಾನದಲ್ಲಿದ್ದ ಹಲವು ಹಿಂದಿಯರು ಸಹಾಯ ಪಡಿಸಿರುವರು ಇಂದ ಜನ ಅಲ್ಲಿ ಎಸ್ಟಿರುವರೆಂದು ಹೇಳುವದು ಕಸ್ಟವಾದರೂ ಅನೇಕ ಜನರಿರುವರು ಜಪಾನರ ಈ ಹೇಳಿಕೆಯಲ್ಲಿ ತಾರತಮ್ಯ ಕೆಯಿದ್ದು ಬ್ರಿಟಿಶರ ದಾಸ್ಯದಿಂದ ಜನರು ಹಿಂದುಸ್ತಾನವನ್ನು ಮುಕ್ತಮಾಡಿ ತಾವು ಹೊರಟು ಹೋಗುವರೆಂದು ಅವರ ಅಭಿಪ್ರಾಯ ಂತಿವರೆ ಎಣಿಸಿದಂತೆ ಜಪಾನರು ಹೋಗದಿದ್ದರೂ ಬ್ರಿಟಿಶರ ದಾಸ್ಯದಿಂದ ಸಂಪೂರ್ಣರಾದ ಅನಂತರ ಜಪಾನಿಗಳ ದಾಸ್ಯವನ್ನು ಸ್ವಾಗತಿಸಲುಕೂಡ ಸಿದ್ಧರಿವೆ ದಾನ್ಯದಲ್ಲಿಯೂ ಒಂದು ಬಗೆಯ ಬಯಲಾಟಕೆಯಾಗಲೆಂದು ಅವರ ಅಭಿಪ್ರಾಯ ಇದು ಎರಡನೆಯ ಪಕ್ಷವಾಯಿದು ಮೊದಲನೆಯ ಸಾಧ್ಯತೆಯಂದರೆ ತಟಸ್ಥ ವೃತ್ತಿಯವರದು ಅನರು ಅಹಿಂಸ ವಾದಿಗಳಾಗಿದ್ದರೂ ಪ್ರಿಟಿಶರಿಗಾಗಲಿ ಇಲ್ಲವೆ ಜಪಾನಿಗೆಯಾಗಲಿ ಸಹಾಯ ನೊಪಲಾರದು

ಸಾಲ್ವನೆಯ ನುಕ್ಕು ಕೊನೆಯ ಎಷ್ಟೆ ದವರೆಂದರೆ ಅಹಿಂಸಾತ್ಮಕ ಪ್ರತಿಕಾರಿಗಳು ಆದರು ಸ್ವಲ್ಪೇ ಜನರಿದ್ದರೆ ಅವರ ಪ್ರತಿ ಕಾರವು ಸ್ವಲ್ಪೆಂದು ಪರಿಣಾಮಕಾರಕವಾಗದು. ಆದರೆ ನಂದೆ ಮಾತ್ರ ಅದೊಂದು ಬಗೆಯ ಉದಾತ್ತಶಕ್ತಿಯಾಗಿರುವದು ಇಂಥ ಪ್ರತಿಕಾರಿಗಳು ಎಲ್ಲಿಯು ಇದ್ದರೂ ಶಾಂತರೀತಿಯಿಂದ ಮರಣ ಹೊಂದುವರು, ಆದರೆ ದಾಳಿಗಾರರಿಗೆ ಶರಣು ಹೋಗರು, ನಚನ ಆಕ್ರಾಸನೆಗಳಿಂದ ಅವರು ಹೋಗ ಹೋಗರು, ಸೋಲಿಸುವರ ಸಹಾಯ ದಿಂದ ಸ್ವಿಶ್ವರಿ ದಾಸ್ಯಿಂದ ಮಕ್ತರಾಗ ಬೇಕೆಂಬ ಆಶೆಕ್ಕ ಅವರಿಗಿರುವದಿಲ್ಲ, ತನ್ಮ ಹೋರಾಟದ ಮಾರ್ಗದಲ್ಲಿ ಆನ ರಿಗೆ ಬಹುಪ್ರಶ್ನೆ ಉಂಡಾಗಲಾಗಿ ನ್ನಿ ವಿಶ್ವಾಸವಲ್ಲಿ ಅವ್ಯಾಹತ ಸ್ಫೂರ್ತಿ ಪ್ರಾಣಕ್ಕೆ ಸುಪ್ತಿ ಎಂದೆ ಕೊನೆಯ ಕಣಾಚಿತ ಸೊಕ್ತಿಸಿದ್ದಿ ಕೋಂಗ್ರೆಸ್ ನಿಜ ಧೀರತೀಯರ ನಲ ಪಾಗಿ ಒಸಗಿ ಪ್ರಾಣಪಡುತ್ತಿರುವರು ಪ್ರಿ ಟಿಶರ ಒಳ್ಳೆ ಅವರಿಗೆ ದ್ವೇಷವಿಲ್ಲ. ಜಪಾನರ ಬಗ್ಗೆ ಪ್ರೇಮವಿಲ್ಲ ಉಳಿದವರಂತೆ ತಾಯಿನಲ್ಲಿ ಜಪಾನದಲ್ಲಿದ್ದ ಹಲವು ಹಿಂದಿಯರು ಸಹಾಯ ಪಡಿಸಿರುವರು ಇಂದ ಜನ ಅಲ್ಲಿ ಎಸ್ಟಿರುವರೆಂದು ಹೇಳುವದು ಕಸ್ಟವಾದರೂ ಅನೇಕ ಜನರಿರುವರು ಜಪಾನರ ಈ ಹೇಳಿಕೆಯಲ್ಲಿ ತಾರತಮ್ಯ ಕೆಯಿದ್ದು ಬ್ರಿಟಿಶರ ದಾಸ್ಯದಿಂದ ಜನರು ಹಿಂದುಸ್ತಾನವನ್ನು ಮುಕ್ತಮಾಡಿ ತಾವು ಹೊರಟು ಹೋಗುವರೆಂದು ಅವರ ಅಭಿಪ್ರಾಯ ಂತಿವರೆ ಎಣಿಸಿದಂತೆ ಜಪಾನರು ಹೋಗದಿದ್ದರೂ ಬ್ರಿಟಿಶರ ದಾಸ್ಯದಿಂದ ಸಂಪೂರ್ಣರಾದ ಅನಂತರ ಜಪಾನಿಗಳ ದಾಸ್ಯವನ್ನು ಸ್ವಾಗತಿಸಲುಕೂಡ ಸಿದ್ಧರಿವೆ ದಾನ್ಯದಲ್ಲಿಯೂ ಒಂದು ಬಗೆಯ ಬಯಲಾಟಕೆಯಾಗಲೆಂದು ಅವರ ಅಭಿಪ್ರಾಯ ಇದು ಎರಡನೆಯ ಪಕ್ಷವಾಯಿದು ಮೊದಲನೆಯ ಸಾಧ್ಯತೆಯಂದರೆ ತಟಸ್ಥ ವೃತ್ತಿಯವರದು ಅನರು ಅಹಿಂಸ ವಾದಿಗಳಾಗಿದ್ದರೂ ಪ್ರಿಟಿಶರಿಗಾಗಲಿ ಇಲ್ಲವೆ ಜಪಾನಿಗೆಯಾಗಲಿ ಸಹಾಯ ನೊಪಲಾರದು

ಅಹಿಂಸಾವಾದಿಗಳ ಕರ್ತವ್ಯ ಬಹಳ ಕಠಿನವಾಗಿರುವದು, ಆದರೆ ತನ್ಮ ಧ್ಯೇಯದಲ್ಲಿ ನಿಷ್ಠಾವಿದ್ದ ಯಾವ ಮನುಷ್ಯನು ಎಂದೆ ಸಂಕಟಗಳಿಂದಲೂ ಎದೆಗುಂದನು

ಬಹಳ ದಿನಗಳ ವರೆಗೆ ನದೆಯ ಬಹುವಾದ ಇದೊಂದು ಕಷ್ಟಸಂಪರೆ ಅಹಿಂಸಾತ್ಮಕ ಪ್ರತಿಕಾರಿಗಳು ಅಶಕ್ಯ ವಾದ ಸ್ಥಿರತೆಗನ್ನು ನೂಡಬಾರದು ಆವಗ ಶ್ರ ಸಾಮರ್ಥ್ಯ ಮಿತವಾಗಿವೆ. ಇವಿಗಿ ಗಂಭಾತರದಲ್ಲಿರುವ ಆಸಾವದ ರಕ್ಷಣೆಗೆ ಕಾರ-ದಲ್ಲಿಯ ಒಬ್ಬ ಸತ್ಯಿಕಾರಿಯ ಪೆಂಗಾರನಾಗಲಿಕಾನು ತನ್ನ ದೇಹಶಕ್ತಿಯಿಂದ ಅವನು ಸಹಾಯಮಾಡಲಾನು ಅಸಾನವು ಅಹಿಂಸಾತ್ಮಕ ಪ್ರತಿಕಾರದ ಅತ್ಯುತ್ತಮ ಸಿದ್ಧತೆ ಇಲ್ಲನೆ. ಪ್ರದರ್ಶನವಿದೆ ನಿಘಾಯಕ ಕಾರ್ಯಕ್ರಮದ ತಕಪಡಿಯಿಲ್ಲದೆ ಅಹಿಂಸಾತ್ಮಕ ಶಕ್ತಿಯ ಗಳ ನಾಶ ನೂಡುವಲ್ಲಿ ಯಾವದೇ ಬಗೆಯ ನ್ನು ಸ್ರದರ್ಶಿಸಲ್ಲೆನೆಂದು ವಿಶ್ವಾಸವಿಲ್ಲ ಸಮರ ಕರಿಕ್ಷಯ ಕಾಲ ಒಂಗಿ ಬಹ ನುಟ್ಟಿಗೆ ಆಯಶ್ಚಿಯಾಗುವರು ಒಟ್ಟಿ ಸೂಪ್ತಿದ ಸಶಸ್ತ್ರ ಸೈನಿಕನ ಗೂಡೆ ರಸಿನೆ ಯಿಂದ ಬಲಿವನ ನಿಸ್ತ್ರ ನುಸುಷ್ಯನು ತನ್ನ ಶರ್ಯ ಪ್ರದರ್ಶನಮಾಡಲು ಪ್ರ ಯತ್ನಿಸಿದಂತೆಯು ಇವರ ಹಾಡಾಗುವದು ಮತ್ತು ಇವರು ಅಸಂಬದ್ಧವಾಗುವರು ಎಂಬುದಾಗಿ ಸ್ಪಷ್ಟ ಜಪಾನ ಸೈನ್ಯವು ಕಾಲಿ ಸ್ಪಿತೆಂದರೆ ಅದು ಆಸಾಮೆದಲ್ಲಿಯೆ ಉಳಿ ಯಲಾರದು ಬ್ರಿಟಿಶರನ್ನು ನೋಲಿಸು ವಂತೆ ಆಕ್ರಸೈನ್ಯವು ಇಡೀ ದೇಶವನ್ನೆ ಪಾದಾಕ್ರಾಂತ ನೂಡಬೇಕಾಗುವದು ಬ್ರಿಟಿಶರು ಕೊನೆಯವರೆಗೆ ಹೋರಾಡುವರು ಹಿಂದುಸ್ತಾನವನ್ನು ಅವರು ಕಳಿಮಕೊಳ್ಳುವೆಂದರೆ ಸಂಪೂರ್ಣ ಸೋಲನ್ನೆ ಅವರು ಒಪ್ಪಿಕೊಂಡಂತೆ ಎಂದು ಹೇಳಬಹು ದು. ಆದರೆ ಹಾಗಿರಲಿ, ಇಲ್ಲಿದಿರಲಿ, ಹಿಂದುಸ್ತಾನವು ಸಂಪೂರ್ಣವಾಗಿ ತನ್ನ ವಶವಾಗುವ ವರೆಗೆ ಜಪಾನವು ಮಾತ್ರ ನಿಲ್ಲಲಾರದು ಆದುದರಿಂದ ಅಹಿಂಸಾತ್ಮಕ ಪ್ರತಿಕಾರಿಗಳು ತಾವಿದ್ದಲ್ಲಿಯೇ ಉಳಿಯಬೇಕು

ಒಂದು ಮಾತನ್ನು ಸ್ಪಷ್ಟಗೊಳಿಸಿಬಿಟ್ಟು ಬ್ರಿಟಿಶ ಸೈನ್ಯವು ಪ್ರತ್ಯಕ್ಷವಾಗಿ 'ಶತ್ರು' ವಿನೋದನೆ ಹೋರಾಟ ನಡೆಸಿದಾಗ ಪ್ರತ್ಯಕ್ಷ ಪ್ರತಿಕಾರ ಮಾಡುವದು ಕಣಾಚಿತ ಸರಿಯಾಗಲಾರದು. ಎಂಸೆಯಿಂದ ಕೂಡಿದ ಇಲ್ಲನೆ ಹಿಂಸೆಗೆ ಸಹಾಯ ಮಾಡುವ ಅಹಿಂಸಾತ್ಮಕ ಪ್ರತಿಕಾರವು ನಿಜವಾದ ಅಹಿಂಸಾತ್ಮಕ ಪ್ರತಿಕಾರವಾಗಲಾರದು

ನಾನು ಈ ಮೊದಲು ಅನೇಕ ಸಲ ಹೇಳಿಮದನ್ನೆ ಮತ್ತೆ ಇಲ್ಲಿ ಒತ್ತಿ ಹೇಳಬಯಸುತ್ತೇನೆ. ವಿಧಾಯಕ ಕಾರ್ಯಕ್ರಮವಿಲ್ಲದೆ ಅಹಿಂಸಾತ್ಮಕ ಪ್ರತಿಕಾರವು ಅಸಾಧ್ಯವಾದುದು. ಅಹಿಂಸಾತ್ಮಕ ಪ್ರತಿಕಾರಿಯು ಕರ್ತವ್ಯನೆಂದು ನನಗನಿಸುತ್ತದೆ ದಾಳಿಗಾರರಿಗೆ ಅಹಿಂಸಾತ್ಮಕ ರೀತಿಯಿಂದ ಹೇಗೆ ಪ್ರತಿಕಾರ ಮಾಡಬೇಕೆಂಬುದು ಜನರಿಗೆ ತಿಳಿಯುವದಕ್ಕಿಂತ ಮೊದಲೆ ಅವನು ಅದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಅಹಿಂಸಾತ್ಮಕ ಪ್ರತಿಕಾರಿಯು ಅವರಿಗೆ ಹೇಗೆ ಸಹಾಯ ಮಾಡಬೇಕೆಂದು ಇವರ ಮನೀಲೆ ಅಹಿಂಸೆಯಿಂದಲೆ ಎಲ್ಲ ಪರಿಸ್ಥಿತಿಗಳಲ್ಲಿ ನೂಡಿ ನನು ಸತ್ಯವನ್ನು ನ್ಯಾಯವನ್ನು ಚರಿಗೆ ಬ್ಯಸುವೆನು ಅವರ ನಂಬಿಕೆ ಆದುದರಿಂದ ಸಾಕಷ್ಟು ಸಹಾಯ ಕರ ಆಭಾವನಿಂದ ತಹಿಂಸಾತ್ಮಕ ಪ್ರತಿಕಾರಿಗಳು ಧೈರ್ಯ ನೆನ್ನು ಸಾಧಿಸಿದ್ದರೆ ಆ ನಾರ್ಗವನ್ನು ಬಿಟ್ಟುಗೊಡುವುದಿಲ್ಲ ಮರಣ ಹೊಂದಿನ ವರೆಗೆ ಅದನ್ನೇ ಅನುಸರಿಸುವರು

"ಯುದ್ಧ ವಿರೋಧಿಯಾದ ನನ್ನದು ಇದಕ್ಕೆ ಒಂದೇ ಉತ್ತರ ಮನ್ನುಗ್ಗುವದ ಕ್ಕಾಗಿ ಇಲ್ಲವೆ ಸಂರಕ್ಷಣೆಗಾಗಿ ವಿತ್ತ ಜೀವಿತ ಗಳ ನಾಶ ನೂಡುವಲ್ಲಿ ಯಾವದೇ ಬಗೆಯ ನ್ನು ಸ್ರದರ್ಶಿಸಲ್ಲೆನೆಂದು ವಿಶ್ವಾಸವಿಲ್ಲ ಸಮರ ಕರಿಕ್ಷಯ ಕಾಲ ಒಂಗಿ ಬಹ ನುಟ್ಟಿಗೆ ಆಯಶ್ಚಿಯಾಗುವರು ಒಟ್ಟಿ ಸೂಪ್ತಿದ ಸಶಸ್ತ್ರ ಸೈನಿಕನ ಗೂಡೆ ರಸಿನೆ ಯಿಂದ ಬಲಿವನ ನಿಸ್ತ್ರ ನುಸುಷ್ಯನು ತನ್ನ ಶರ್ಯ ಪ್ರದರ್ಶನಮಾಡಲು ಪ್ರ ಯತ್ನಿಸಿದಂತೆಯು ಇವರ ಹಾಡಾಗುವದು ಮತ್ತು ಇವರು ಅಸಂಬದ್ಧವಾಗುವರು ಎಂಬುದಾಗಿ ಸ್ಪಷ್ಟ ಜಪಾನ ಸೈನ್ಯವು ಕಾಲಿ ಸ್ಪಿತೆಂದರೆ ಅದು ಆಸಾಮೆದಲ್ಲಿಯೆ ಉಳಿ ಯಲಾರದು ಬ್ರಿಟಿಶರನ್ನು ನೋಲಿಸು ವಂತೆ ಆಕ್ರಸೈನ್ಯವು ಇಡೀ ದೇಶವನ್ನೆ ಪಾದಾಕ್ರಾಂತ ನೂಡಬೇಕ

ಜಪಾನರ ದಾಳಿಯನ್ನೆದುರಿಸೇ

ನೀರು ಕೂಡಾ ಕೊಡಬೇಡಿರಿ-

(ನಾ ಗಾಂಧಿಯವರು ಈ ವಾರದ ತನ್ನ [illegible])

ಜಪಾನರು ನನ್ನ ಬಾಗಿಲನ್ನೇ ಬಡಿಯ ಹತ್ತಿದ್ದಾರೆ ಅಹಿಂಸಾತ್ಮಕ ಮಾರ್ಗದಿಂದ ನಾನೇನು ಮಾಡಬೇಕು? ನನ್ನದು ಸ್ವತಂತ್ರ ರಾಷ್ಟ್ರವಾಗಿದ್ದರೆ, ಜಪಾನರು ಈ ದೇಶದಲ್ಲಿ ಪ್ರವೇಶಮಾಡದಂತೆ ಅಹಿಂಸಾತ್ಮಕವಾಗಿಯೇ ಪ್ರತಿಬಂಧಿಸುತ್ತಿದ್ದೆನ್ನ ಸದ್ಯದ ಪರಿಸ್ಥಿತಿಯಲ್ಲಿ, ಜಪಾನರು ನಮ್ಮ ದೇಶದಲ್ಲೀದ ಕೂಡಲೆ, ಅಹಿಂಸಾತ್ಮಕ ಪ್ರತಿಕಾರವು ಪ್ರಾರಂಭವಾಗುವದು ಅಹಿಂಸಾತ್ಮಕ ಪ್ರತಿಕಾರ ಮಾಡುವವರು ಇವರಿಗೆ ಯಾವ ರೀತಿಯಿಂದಲೂ ಸಹಾಯ ಮಾಡತಕ್ಕವ್ದೆಲ್ಲ, ನೀರು ಕೂಡ ಕೊಡತಕ್ಕದ್ದಲ್ಲ. ದೇಶವನ್ನು ಸುಲಿಯಂದನಟಿಗೆ ಸಹಾಯಮಾಡುವದು ಅವರ ಕರ್ತವ್ಯವಲ್ಲ. ಒಂದು ವೇಳೆ ಜಪಾನರು ದಾಂಡಿ ತಪ್ಪಿ ಬಂದು ನೀರಡಿಕೆಯಿಂದ ಒಳಲುತಿದ್ದು ಸಾಮಾನ್ಯ ಮನುಷ್ಯರಂತೆ ಸಹಾಯ ಬೇಡಿದ್ದರೆ, ಯಾರೂ ವೈಷಿಗಳ ಬ್ಲೆಂದು ತಿಳಿಯುವ ಅಹಿಂಸಾತ್ಮಕ ಪ್ರತಿಕಾರಿಯು ಅವರಿಗೆ ನೀರು ಕೊಡಬಲ್ಲದು ಒಂದು ವೇಳೆ ಜಪಾನಿಗರು ನೀರು ಕೊಡಲು ಒತ್ತಾಯಪಡಿಸಿದರೆಂದು ತಿಳಿಯುವಾ, ಅಗಸ್ರತಿಕಾರಮಾಡುವವರು ತಮ್ಮ ಪ್ರತೀಕಾರದ ಕರ್ತವ್ಯದಲ್ಲಿ ಮರಣ ಕೂಡ ಹೊಂದಲು ಸಿದ್ಧರಾಗಬೇಕು. ಈ ರೀತಿ ಪ್ರತಿಕಾರ ಮಾಡುವವರನ್ನೆಲ್ಲ ಜಪಾನರು ಕೊಂದು ಬಿಡಬಹುದು ಆದರೆ ಅಂಥ ಸಾಳಗಾರನು ಕೆಲ ಸಮಯದ ನಂತರ ಮನಸ್ಸಿನಿಂದ ಪಾಪ ಶರೀರದಿಂದ ಕೂಡ ದಣಿದು ಬಿಡುವನು ಮತ್ತು ಅಹಿಂಸಾತ್ಮಕ ಪ್ರತೀಕಾರಿಗೂ ಕೊಲೆಯನ್ನು ಸಲ್ಲಿಸುವನು. ಅಹಿಂಸಾತ್ಮಕ ಪ್ರತಿಕಾರ ಶಕ್ತಿಯ ತಿರುಳು [illegible] ಸಹಾಯ ಸಹಕಾರಗಳನ್ನು ನಿರಾಕರಿಸುವ ಈ ಹೊಸ (ಆವನಿಗೆ) ಶಕ್ತಿಯು ಯಾವದೆಂಬುವನ್ನು ಅವನು ಹುಡುಕಹತ್ತುವನು, ಮತ್ತು ಬಹುಶಃವಾಗಿ ನುಂದೆ ಆ ಹತ್ಯೆಯಿಂದ ಶುದ್ಧಾತ್ಮತ್ಯಾಗವನು ಆದರೆ ಒಬ್ಬರು ಆತ್ಮತ್ಯಾಗ ಸಿದ್ಧರಾಗುವದಕ್ಕಿಂತ ಮುಂಚೆ ಲಕ್ಷಾಂತರ ಜನರು ಕೊಲೆಯಾಗಿಬಿಡಬಹುದು ಆದರೆ ಅಂಥ ಸಂದರ್ಭದಲ್ಲಿ ಅಹಿಂಸಾತ್ಮಕ ಪ್ರತಿಕಾರಿಗಳು ಎಲ್ಲಿಯೆ ಇದ್ದರೂ ಪಾಂತರೀತಿಯಿಂದ ಮರಣ ಹೊಂದುವರು, ಆದರೆ ನಾಳಿಗಾರರಿಗೆ ರಣಾ ಹೋಗರೆ, ನಚೆನ್ನ ಆತ್ಮಾವನಗಳಂದ ಅವರು ಮೋಸ ಹೋಗರು, ಮೋಸಿಹೋಗುವರು ಸಹಾಯ ಕಿಂದ ಸ್ರಿಸ್ಟರ ದಾಸ್ಯಿಂದ ಮುಕ್ತರಾಗ ಬೇಕೆಂಬ ಆಕಾಕ್ಷೆ ಅವರಿಗಿರುವುದಿಲ್ಲ, ತನ್ನ ಹೋರಾಟದ ಮಾ ದಲ್ಲಿ ಅವರಿಗೆ ಬಹಳ ಪ್ರಯೆ ಉಂದ ನಿರ್ಣಾಗಳನ್ನಿ ನಿಸ್ಪೃಹ ಸ್ವಾರ್ಥತ್ಯಾಗ ಮುತ್ತಾ ಬೆಂದೆಯೆ ಕೂಡ ಕದಾಚಿತ್ ಸೋತ್ತಿದ್ದರೆ ಕೋಟ್ಯಾನುಕೋಟಿ ಜನರಿಗೆ ಸ್ಫೂರ್ತಿಯನ್ನು ಇನ್ನು ಬಿಡುವರು ಪ್ರತಿ ಬೆರ್ಡ ಒಬ್ಬೆ ಅವರಿಗೆ ದ್ವೇಷವಿಲ್ಲ ಜಪಾನರ ಬಗ್ಗೆ ಪ್ರೇಮವಿಲ್ಲ ಉಳಿದವರಂತೆ ತವರಿಬ್ಬರ ಕ್ಷೀಣವನ್ನೂ ಇವರು ಬಯಸುವರು ನ್ಯಾಯವಾದುದ್ದನ್ನೇ ಅವರಿಬ್ಬರೂ ಮಾಡಬೇಕೆಂದು ಇವರ ಮನೀಷೆ ಅಹಿಂಸೆಯಿಂದಲೆ ಎಲ್ಲ ಪರಿಸ್ಥಿತಿಗಳಲ್ಲ ನಾಸ ಕೆಯಿದ್ದು ಬ್ರಿಟಿಶರ ದಾಸ್ಯದಿಂದ ಜಾ ನರು ಹಿಂರ್ಮುತ್ತನನ್ನು ಮುಕ್ತಮಾಡಿ ತಾವು ಹೊರಟು ಹೋಗುವರೆಂದು ಅವರ ಅಭಿಪ್ರಾಯ. ಅವರು ಎಣಿಸಿದಂತೆ ಜಪಾ ನರು ಮೇಗಾದಿದ್ದರೂ ಬ್ರಿಟಿಶರ ದಾಸ್ಯ ದಿಂದ ಸಂರಕ್ಷಣಾದ ಪರು ಜಪಾನಿಗಳ ದಾಸ್ಯವನ್ನು ಸ್ವಾಗತಿಸಲುಕೂಡ ಸಿದ್ಧರಾ ಡಾಸ್ಯದಲ್ಲಿರ್ಯೂ ಒಂದು ಬಗೆಯ ಬನೆಲಾ ನಷ್ಟಯಾಗಲೆಂದು ಅವರ ಅಭಿಪ್ರಾಯ ಇದು ಎರಡನೆಯ ಪಕ್ಷವಾಯಿತು ಮೂರ ನೆಯ ಸ್ಥಿತಿಯೆಂದರೆ ತಟಸ್ಥ ನ್ಯಸ್ಥಿತಿ, ಅವರು ಅಹಿಂಸಾವಾದಿಗಳಾಗಿದ್ದರೂ ಪ್ರಿ ಪಿರಿಗಾಗಲಿ ಇಲ್ಲವೆ ಜಪಾನಿಗೆಳಾಗಲಿ ಸಹಾಯ ಮಾಡಲಾರರು

ಸಾಲ್ಟನೆಯ ಮತ್ತು ಕೊನೆಯ ಪಕ್ಷ ದವರಾದರೆ ಅಹಿಂಸಾತ್ಮಕ ಪ್ರತಿಕಾರಿಗಳು ಆರು ಸೈನ್ಯ ಜನರಿದ್ದರೆ ಅವರ ಸ್ಥಿತಿ ಕಾರವು ಅಸಾಧ್ಯವೂ ಪರಾಜಯಕಾರಕವಾ ಗದು. ಆದರೆ ವಂಜಿ ನಾತ್ರ ಅದೊಂ ದು ಬಗೆಯ ಉಪಾಕರಣೆಯಾಗಬಹುದು ಯಿಗಳಂದೂ ಎಷ್ಟೋ ಜನರ ಕೊಲೆ ನಾಡುವಂಬುದರ ಪರಿವೆ ಕೂಡ ಇವರಿಗಿಲ್ಲದೂ ಈ ಪ್ರತಿಕಾರಿಗಳಿಗಿರುವ ಹುದು ಆದರೆ ದಬ್ಬಾಳಿಕೆಗೆ ಶರಣಾ ಹೋಗದೆ ಸಾಯಲು ಕೂಡ ಸಿದ್ಧರಾ ದಿನವೆ ಅವರು ವಿಜಯಗಳಂತೆ

ಆದರೆ ನಾನು ಒಕೆನಂತೆಯೆ ಸರಿ ವಾಗಿ ಫೆಬ್ರವರಿ ಸಂಭವಿಸಬಹುದು ನೇಶ ವಲ್ಲಿ ಕನಿಷ್ಟ ಸಾಲ್ಕು ಸ್ವಯಂಸೇವಕರನ್ನು ನೊದಲನೆಯದೆಂದರೆ ಬ್ರಿಟಿಶರು ಮತ್ತು ಅವರು ಸಂಘಟಿಸಿದ ಸೈನ್ಯ ಹಿಂದುಸ್ಥಾ ನದ ಒಳ್ಳೆ ತನ್ನುವುದನ್ನೂ ದ್ವೇಷವಿಲ್ಲೆಂದು ಜಪಾನಿಗಳು ಸಾರುತ್ತಿರುವರು ಬ್ರಿಟಿಶ್ ರೊಡನೆಯೆ ಅವರ ಜಗಳವಂತೆ ಅವರೀ ಕಾರ್ಯದಲ್ಲಿ ಜಪಾನದಲ್ಲಿದ್ದ ಹಲವು ಹಿಂ ದೀಯರು ಸಹಾಯ ಮಾಡುತ್ತಿರುವರು ಇಂದ ಜನ ಅಲ್ಲಿ ಎಬ್ಬಿರುವರೆಂದು ಹೇಳ ವದು ಕನ್ಪಷ್ಟವೂ ಅನೇಕ ಜನರಿರುವರು ಜಪಾನರ ಈ ಹೇಳಿಕೆಯಲ್ಲಿ ಲವಲೇಶ ಯಿಂದಲೆ ಎಲ್ಲ ಪರಿಸ್ಥಿತಿಗಳಲ್ಲ ನಾಸ ಕೆಯಿದ್ದು ಬ್ರಿಟಿಶರ ದಾಸ್ಯದಿಂದ ಜಾ ನರು ಹಿಂರ್ಮುತ್ತನನ್ನು ಮುಕ್ತಮಾಡಿ ತಾವು ಹೊರಟು ಹೋಗುವರೆಂದು ಅವರ ಅಭಿಪ್ರಾಯ. ಅವರು ಎಣಿಸಿದಂತೆ ಜಪಾ ನರು ಮೇಗಾದಿದ್ದರೂ ಬ್ರಿಟಿಶರ ದಾಸ್ಯ ದಿಂದ ಸಂರಕ್ಷಣಾದ ಪರು ಜಪಾನಿಗಳ ದಾಸ್ಯವನ್ನು ಸ್ವಾಗತಿಸಲುಕೂಡ ಸಿದ್ಧರಾ ಡಾಸ್ಯದಲ್ಲಿರ್ಯೂ ಒಂದು ಬಗೆಯ ಬನೆಲಾ ನಷ್ಟಯಾಗಲೆಂದು ಅವರ ಅಭಿಪ್ರಾಯ ಇದು ಎರಡನೆಯ ಪಕ್ಷವಾಯಿತು ಮೂರ ನೆಯ ಸ್ಥಿತಿಯೆಂದರೆ ತಟಸ್ಥ ನ್ಯಸ್ಥಿತಿ, ಅವರು ಅಹಿಂಸಾವಾದಿಗಳಾಗಿದ್ದರೂ ಪ್ರಿ ಪಿರಿಗಾಗಲಿ ಇಲ್ಲವೆ ಜಪಾನಿಗೆಳಾಗಲಿ ಸಹಾಯ ಮಾಡಲಾರರು

ಅಹಿಂಸಾವಾದಿಗಳ ಕರ್ತವ್ಯವು ಬ ಹಳ ಕಠಿನವಾಗಿರುವದು, ಆದರೆ ತನ್ನ ಧ್ಯೇಯದತ್ತಿ ನಿಶ್ಚಾಸನಿಸ್ಥ ಯಾವ ಮನುಷ್ಯನು ಎಂಥ ಸಂಕಟಗಳಿಂದಲೂ ಎಗೆಯುವುದನು

ಒಂಭತ್ತು ದಿನಗಳ ವರೆಗೆ ನಡೆಯ ಬಹುದಾದ ಇದೊಂದು ಕಸ್ಪಷ್ಟಪಂಥರೆ ಅಹಿಂಸಾತ್ಮಕ ಪ್ರತಿಕಾರಿಗಳು ಅಥಕ್ಕ ನಾದ ಸೈನ್ಯಕ್ಕೆಗಳನ್ನು ನಾಡಬಾರದು ಅವರ ಶಕ್ತಿ ಸಾಮರ್ಥ್ಯ ಮಿತವಾಗಿವೆ. ಇದೀಗ ಗಂಡಾಂತರದಲ್ಲಿರುವ ಅಸಾಮದ ರಕ್ಷಣೆಗೆ ಸಿದ್ಧವಿದ್ದಲ್ಲಿಯ ಒಬ್ಬ ಪತ್ರಿಕಾ ಕಾರಿಯು ಹೋಗಿರಾನಾಗಬಾರದು ತನ್ನ ದೇಹಶಕ್ತಿಯಿಂದ ಅ ಆಸಾಮ ಕಾರವಲ್ಲಿ ಪ್ರತ್ಯೆಯು ಯ ನ್ನು ನಾಡಿಕೊ ನಾಗ ಮು ಆನು ಹಾ ದಿದ್ದರೆ ವಹಿಂಸಾತ್ಮಕ ಪ್ರ ಗಲಿ ಇಲ್ಲಿಕ್ಕೆ ಸೇರಿ ರಿ ಲಿ ಸಾ ನಾ ಮಾ ತಂಸಾತ್ಮಕ ಪ್ರತಿ ಸಿ ಕಾರವು ಸ್ವಾತಂತ್ರಾಗ ಸಜ್ಜ ರಂಸಾತ್ಮಸನ್ನ ಪ್ರ ತಿಂದೆಯೆ ಅದು ಯಲಾರದು ಬ್ರಿ ನಕ್ಕಾಗಿ ಆ ಸನ್ನ ವಾಪಕಾಂತ ಬ್ರಿಟಿಶರು ಕೊನೆ ದರು ಹಿಂದೂ ಕಳಿದುಕೊಳ್ಳುವುದೆ ಲನ್ನೆ ಅವರು ಒ ಹೇಳಬ ಕಿ ಇಲ್ಲದಿರಲಿ, ಹಿಂದ ವಾಗಿ ತನ್ನ ವಶ ನವು ಮಾತ್ರ ನಿಜ ಅಹಿಂಸಾತ್ಮಕ ಪ್ರ ಲ್ಲಿಯೇ ಉಳಿಯಬೇಕು

ಒಂದು ಮಾತನ್ನು ನೈಪ್ಟಗೊಳಿ ಲಿಕ್ಕೆ ಬೇಕು ಬ್ರಿಟಿಶ್ ಸೈನ್ಯವು ಪ್ರತ್ಯಕ್ಷ ವಾಗಿ 'ಶತ್ರು' ವಿನೊಡನೆ ಹೋರಾಟ ನಡೆಸಿದಾಗ ಸ್ವತ್ಯಕ್ಷ ಪ್ರತಿಕಾರ ಮಾಡು ವದು ಕದಾಚಿತ್ ಸಯೋಗಾಚಾರವು ಹಿಂಸೆಯಿಂದ ಕೂಡಿದ ಇಲ್ಲವೆ ಹಿಂಸೆಗೆ ಸಹಾಯ ಮಾಡುವ ಅಂಸಾತ್ಮಕ ಪ್ರತಿ ಕಾರವು ನಿಜವಾದ ಅಹಿಂಸಾತ್ಮಕ ಪ್ರತಿ ಕಾರವಾಗಲಾರದು

ನಾನು ಈ ಮೊದಲು ಅನೇಕ ಸಲ ಹೇಳಿದಷ್ಟೆ ಮತ್ತೆ ಇಲ್ಲಿ ಒತ್ತಿ ಹೇಳ ಬಯಸುತ್ತೇನೆ. ವಿಧಾಯಕ ಕಾರ್ಯ

ಸಿರುಗುಪ್ಪೆ ತಾ|| ಗ್ರಾಮೋದ್ಯೋಗಸ್ಥರ ಸಂಘ

ಈ ಸಂಘದ ಸಾಧಾರಣಸಭೆಯು 8ನೇ ತಾರೀಖು ಶ್ರೀ ರಂಗರಾವ್ ಇವರ ಅಧ್ಯಕ್ಷತೆಯಲ್ಲಿ ನಡೆದು ಸಂಘದ ಲೆಕ್ಕ ಪತ್ರಗಳು ಮಂಜೂರಾದವು.

ಈ ತಾಲ್ಲೂಕು ಪಕ್ಕಾಕನ್ನಡ ಪ್ರಾಂತವಾದ ಕಾರಣ, ಗ್ರಾಮೋದ್ಯೋಗಿಗಳಿಗೆ ತೆಲುಗು ಭಾಷಾ ಪರಿಚಯವಿಲ್ಲದಕಾರಣ, ಕನ್ನಡ ಫಾರಂ ಮತ್ತು ಕನ್ನಡ ಲೆಕ್ಕಗಳಿಗೆ ಏರ್ಪಾಟುಮಾಡಬೇಕು. ಗ್ರಾ ಮೋ ದ್ಯೋ ಗಿ ಗಳು ಅಧಿಕಾರಿವರ್ಗಕ್ಕೆ ಸ ರಿರುವುದರಿಂದ ಜಮಾ ಬಂದಿಕಾಲದಲ್ಲಿ ತ ಕ್ಕ ಆಸನವನ್ನು ಕೊಡಬೇಕು. ಜಮಾ ಬಂದಿ ಲೆಕ್ಕಗಳಿಗೆ 8 ದಿನಗಳಿಗಿಂತ ಹೆಚ್ಚಿ ಗೆ ಅನುಭೋಗರಿಗೆ ಸಮನು ಮಾಡಬಾರ ದು ಗ್ರಾಮೋದ್ಯೋಗಿಗಳನ್ನು ಪದೇ ಪ ದೇ ತಾಲ್ಲೂಕು ಆಫೀಸಿಗೆ ಕರೆಸಿ ವೃಥಾ ನೆಚ್ಚಕ್ಕೆ ಗುರಿಸಾಡಬಾರದು. ತಾಲ್ಲೂಕು ವಿದ್ಯಾಸಮಿತಿಗಳಲ್ಲಿ ಗ್ರಾಮೋದ್ಯೋಗಿಗಳಿಗೆ ಸ್ಥಾನವಿರಬೇಕು. ಗೌಡ, ಶಾನುಭೋಗರಲ್ಲಿ ಅಂತಃ ಕಲಹಪರಿಹಾರ್ಥಕ್ಕೆ ಮತ್ತು ನಳಮತ್ಯ ಸ್ಥಾಪನೆಗೆ ಸಿರುಗುಪ್ಪೆ ತಾಲೂಕಿ ನ ಪರವಾಗಿ ಈ ಕೆಳಗಿನ 5 ಜನರು ರಾಜಿ ಳಮಟಿಯಲ್ಲಿರಬೇಕು.

1 ವಿರೂ.ವಾಕ್ಷಗೌಡ, ಸಣ್ಣಬಳ್ಳಾರಿ
2 [illegible]ಸೂರಪ್ಪ, ಅಲಬನೂರು

ಸ್ವಸಂಪತ್ತಿನ ಹೋಳಿ

ನಾನು ಪರಿಜನವಲ್ಲಿ ಸ್ವಸಂಪತ್ತಿನ ಹೋಳಿಯ ಬಗ್ಗೆ ಒರೆದ ಲೇಖನದ ಸಂಬಂಧ ದಲ್ಲಿ ಓರ್ವರು ಈ ರೀತಿ ಬರೆಯುತ್ತಾರೆ

ಶ್ರೀ —ವೀನೇ ನಾರ್ಯರ ಹರಿಜನ ದಲ್ಲಿ ನೀವು ಸ್ವಸಂಪತ್ತಿನ ಹೋಳಿಯ ಸಂಬಂಧದಲ್ಲಿ ಒರೆದ ಲೇಖನದಲ್ಲಿ ಏಗೆ ಒರೆದಿರುವಿರಿ

ಎಮ್ಮಿಗನೂರು ನಗರ ರಕ್ಷಣಾ ಸಮಿತಿ

ಶ್ರೀ ಎಂ. ಭೀಮಸೇನರಾಯರ ಅಧ್ಯಕ್ಷತೆಯಲ್ಲಿ ಜಲ್ಲಾ ಕಾಂಗ್ರೆಸ್ ಆಕ್ಷಯದ ಕೆಳಗೆ 16ನೆಯ ತಾ. ಒಂದು ಸಭೆ ಕೂಡಿ ನಗರ ರಕ್ಷಣಾ ಸಮಿತಿಯು ಸ್ಥಾಪಿತನಾಯಿತು ಡಾ. ಕೃಷ್ಣವರ್ಮಾರವರು ಅಧ್ಯಕ್ಷರಾಗಿಯೂ, ಶ್ರೀ ಎಂ. ವೈ ಸೋಮಪ್ಪ ನವರೂ, ಕಾರ್ಯದರ್ಶಿಗಳಾಗಿಯೂ, ಎಂ. ನೆಂಕಟೇಶಪ್ಪನವರು ಖಜಾ ಚಿಗಾರಿಯು ಏರ್ಪಾಟಾದರು ಶ್ರೀ ಬರ್ಲಿಯನ್ರು ಸ್ಥಾನಿಕ ವ್ಯಾಯಾಮಶಾಲೆಯಲ್ಲಿ ಶಾಂತಿ ದಳದ ಸೈನಿಕರಿಗೆ ಶಿಕ್ಷಣ ಕೊಡುವರು. ಸಮಿತಿಯಲ್ಲಿ ಮುಖ್ಯವಾಗಿ 15 ಜನರಿರುವರು

ಹಂಪ್ಕೊಳ್ಳಿ (ಸಿರುಗುಪ್ಪ)

ಈ ಕೇಂದ್ರದ ಉಪಾಧ್ಯಾಯ ಸಂಘದ ಅಧ್ಯಕ್ಷರಾದ ಶ್ರೀ ವೈ. ಪ್ರಹ್ಲಾದ ರಾಯರು ಈ ರೀತಿ ಬರೆಯುತ್ತಾರೆ.

ಜಲ್ಲಾ ಬೋರ್ಡಿನವರು 1939 ರಲ್ಲಿ ಪ್ರಾಥಮಿಕ ಶಾಲೆಯ ಕೆಲವು ಉಪಾಧ್ಯಾಯರಿಗೆಳಿಗೆ ಇನ್‌ಕ್ರಿಮೆಂಟ್ ಕೊಟ್ಟು, ಉಳಿದವರಿಗೆ ಮುಂದೆ ಕೊಡಲಾಗುವುದೆಂದು ತಿಳಿಸಿದರು ಆದರೆ ಈಗಿನ ದುಡ್ಡಿನ ಅಡ ಕೆಲ ಆಫೀಸುಗಳವರು ಬಂದಿಯವ ಕಾರ ಣವೂ ಮನೆಬಾಡಿಗೆ ಆಹಾರ ಧಾನ್ಯಗಳ ತುಟ್ಟಿಯಾಗಿವೆ ಕಾಯಿ ಪಲ್ಯಕ್ಕೂ ಒರ ಬಂದಂತಾಗಿದೆ. ಇನ್ನೂ ಇದರ ಪರಿಣಾಮ ವೇನಾಗುತ್ತೋ ಹೇಳಲುರುವಂತಿಲ್ಲ. ಹೋ ಟೆಲಿಗಳವರಿಗೆ ಮಾತ್ರ ವ್ಯಾಪಾರ ಹೆಚ್ಚುತ್ತ ಲಿದೆ.

ಇತರ ಸಭೆಗಳು.

13ನೆಯ ತಾ|| ಶ್ರೀ ಬಿ ಭೀಮರಾಯರ ಧ್ಯಕ್ಷತೆಯಲ್ಲಿ ರಾಷ್ಟ್ರೀಯವಾರದ ಕೊನೆಯ ದಿನವು ಆಚರಿಸಲ್ಪಟ್ಟಿತು. ಶ್ರೀ ಸುಬ್ರಹ್ಮ ಣ್ಯಂರವರು ಆರವ ನುಷತ್ವವನ್ನು ಹೇ ದರು

ಶ್ರೀ ನಂಗಾದರಕ್ಕಿಪ್ಪೆಯನರಧ್ಯಕ್ಷತೆಯಲ್ಲಿ ನಗರ ರಕ್ಷಣಾ ಸಮಿತಿಯ ಸಭೆಯು ಸೇರಿ ಶ್ರೀಗಳಾದ ವೀರಾನ್ಸಾನಿಯಸ್ ವಿ. ಲೆಟ್ಟಿ ಗೋಪಾಲಶೆಟ್ಟಿ-ನೆಂಕೋಬರಾಯ ಒಪ್ಪಣ ಗಳಾದವು

ಹುಷ್ಟ ಮೃಗಗಳನ್ನು ಕೊಲ್ಲಲಾಯಿತು.

ನುದಂಡಿನ "ಜೂ"ನಲ್ಲಿದ್ದ 5ಹುಲಿ ಗಳನ್ನು, ಮೂರು ಸಿಂಹಗಳನ್ನು ಮತ್ತು ಇತರೆ ವಿಷ ಸರ್ಪಗಳನ್ನು ಗುಂಡಿನಿಂದ ಹೊಡೆದು ಕೊಂದರೆಂದು ತಿಳಿದುಬಂದಿರು ನದರಿಂದ ಅವನು ಅಂಬಿ [illegible] ಮಾಡಿಕೊಂಡು ನನ್ನ ಮೇಲೆಯೆ ವಿರಿ ಬರುವ ಭೀತಿದ್ದರೂ ಹಾಗೆ ಮಾಡುವಲ್ಲಿ ಕಾರ್ಯ ಮತ್ತು ಸ್ವಾರ್ಥತ್ಯಾಗವಿರುವ ನೆಂದೆ. ನಾನು ಹೇಳಬೆಕ್ಕೆ ತತ್ಪಾವಿಗೆ ಕೆಲ ವನ್ನಾದರೂ ಬಿಟ್ಟು ಕೊಟ್ಟೆನೆಂಬ ಭಾವನೆ ಯಲ್ಲಿ ಸ್ವಾರ್ಥತ್ಯಾಗವಿದೆ. ಆದರಿಂದ ನನ್ನ ಆತ್ಮಬುದ್ಧಿಯಾಗಿ ನಾನು ಆ ಕೃ ಸ್ಯ ಹೊಂದುವೆನು.

'ನಾನು ಹಾಗೆ ನಾಡಲಿಕ್ಕೇ ಬೇಕಾದರೆ' ಎಂಬದರ ನುರ್ನುವನ್ನು ಈ ಸುದ್ದಿ ಗಾರನು

(9ನೇ ಸುಟನನ್ನು ನೋಡಿರಿ)

ಸ್ವಸಂಪತ್ತಿನ ಹೋಳಿ.

(5ನೇ ಪುಟದಿಂದ)

ತಿಳಿದುಕೊಂಡಿರ ವದಿಲ್ಲ ಈಗಲೆ ಸಾಯಲು ಸಿದ್ಧನಾಗದಿದ್ದ ಒಂದು ಬಗೆಯ ಪರಿಸ್ಥಿತಿಯ ಕಲ್ಪನೆಯನ್ನು ನಾನು ಕಟ್ಟಿಕೊಂಡಿರುವೆ ಆದುದರಿಂದ ಬೇರ ಯೋಗ್ಯ ಪರಿಸ್ಥಿತಿಯಲ್ಲಿ ಪ್ರತೀಕಾರ ಮಾಡಬೇಕೆಂಬ ಆಸೆಯಿಂದ, ಈಗ ಸುವ್ಯವಸ್ಥಿತವಾಗಿ ಹಿಂದೆ ಸರಿಯಲು ನಾನು ಬಯಸುವೆ ಈಗ ನಾವು ವಿಚಾರ ಮಾ ಡ ತ ಕ್ಕ ದ್ದು ಪ್ರತಿಕಾರದಬ್ಗೆಯಲ್ಲ ಆದರೆ ಆಹಾರ ಪದಾರ್ಥ ಸೊವಲಾವುಗಳ ನಾ ಶ ತಪ್ಪಿಸುವ ಒಗ್ಗೆ ಹಿಂಸಾತ್ಮಕ ಇಲ್ಲವೆ ಅ ಹಿಂಸಾತ್ಮಕ ಪ್ರತಿಕಾರದಬ್ಗೆ ಸಂಪೂರ್ಣ ವಿಚಾರ ಮಾಡಲಿಕ್ಕೆ ಬೇ ಕಾ ಗು ವ ದು ವಿಚಾರವಿಲ್ಲದ ಪ್ರತಿಕಾರವು ಸೃಷ್ಟಿಕರ್ತನ ಸೃಷ್ಟಿಯಿಂದ ಶೌರ್ಯವ್ದೆನಿಸಿದರೂ ಅಹಿಂಸೆ ಪೃಷ್ಟಿಯಿಂದ ಹಿಂಸೆ ಇಲ್ಲದೆ ಕಾರಣವನು ಹಿಂದೆ ಸರಿಯುವುದು ಅಸಾಧ್ಯ ಎಂದು ತಿಳಿದು ಬಂದಿದೆ

ಜನರ ವಿಶ್ವಾಸವೇ

ಓರಿಯೆಂಟಲ್ ಕಂಪನಿಯನ್ನು

ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾಪರ್ಡಿಸಿದೆ.

ಒಂದು ವೇಳೆ ಜಪಾನಿಗಳು ನೀರು ಕೊಡಲು ಒತ್ತಾಯಪಡಿಸಿದರೆಂದು ತಿಳಿಯುವಾ. ಅಗಸ್ತ್ಯಪ್ರತೀಕಾರಮಾಡ ನವರು ತಮ್ಮ ಪ್ರತೀಕಾರದ ಕರ್ತವ್ಯದಲ್ಲಿ ಮರಣ ಕೂಡ ಹೊಂದಲು ಸಿದ್ಧರಾಗಬೇಕು. ಈ ರೀತಿ ಪ್ರತೀಕಾರ ಮಾಡಿದರೆನ್ನೆಲ್ಲ ಜಪಾನರು ಕೊಂದು ಬಿಡಬಹುದು ಆದರೆ ಅಂಥ ದಾಳಿಗಾರನು ಕೆಲ ಸಮಯದ ನಂತರ ನನ್ನನ್ನಿಂದ ಸಾಗು ಶೀರದಿಂದ ಕೂಡಿ ಪಡೆಗಳು ಬಿಡುವನು ಮತ್ತು ಅಹಿಂಸಾತ್ಮಕ ಪ್ರತೀಕಾರಿಗಳ ಕೆಲಸವನ್ನು ನಿಲ್ಲಿಸುವನು. ಆ ರೀತಿಯ ಪ್ರತೀಕಾರ ಶಕ್ತಿಯು ತಿರು ಗಿ ಬಾರದೆ ಇರುವುದೇ ಸಾಯಲು ಸಹಕಾರಗಳನ್ನು ನಿ ಲಿಕರಿಸುವ ಈ ಹೊಸ (ಜೀವನಿಗೆ) ಶಕ್ತಿಯು ಮಾನವಕುಲವನ್ನು ಜನನು ಹುಡು ಕಹತ್ತುವನು. ಮತ್ತು ಬಹುಶಕವಾಗಿ ನಂತರ ಆ ಹತ್ಯೆಯಿಂದ ಸೋಜ್ಞತ್ತನಾಗುವನು ಆದರೆ ಪಾಪರು ಅತ್ಯಂತ ನಿರ್ಬಲರು ಹಿಂದುಸ್ಥಾನವನ್ನು ಮುಕ್ತಮಾಡಿಲು ಒತ್ತಾಯಪಡಿಸಿದರೆಂದು ತಿಳಿಯುವಾ. ಅಗಸ್ತ್ಯಪ್ರತೀಕಾರಮಾಡ ನವರು ತಮ್ಮ ಪ್ರತೀಕಾರದ ಕರ್ತವ್ಯದಲ್ಲಿ ಮರಣ ಕೂಡ ಹೊಂದಲು ಸಿದ್ಧರಾಗಬೇಕು. ಈ ರೀತಿ ಪ್ರತೀಕಾರ ಮಾಡಿದರೆನ್ನೆಲ್ಲ ಜಪಾನರು ಕೊಂದು ಬಿಡಬಹುದು ಆದರೆ ಅಂಥ ದಾಳಿಗಾರನು ಕೆಲ ಸಮಯದ ನಂತರ ನನ್ನನ್ನಿಂದ ಸಾಗು ಶೀರದಿಂದ ಕೂಡಿ ಪಡೆಗಳು ಬಿಡುವನು ಮತ್ತು ಅಹಿಂಸಾತ್ಮಕ ಪ್ರತೀಕಾರಿಗಳ ಕೆಲಸವನ್ನು ನಿಲ್ಲಿಸುವನು. ಆ ರೀತಿಯ ಪ್ರತೀಕಾರ ಶಕ್ತಿಯು ತಿರು ಗಿ ಬಾರದೆ ಇರುವುದೇ ಸಾಯಲು ಸಹಕಾರಗಳನ್ನು ನಿ ಲಿಕರಿಸುವ ಈ ಹೊಸ (ಜೀವನಿಗೆ) ಶಕ್ತಿಯು ಮಾನವಕುಲವನ್ನು ಜನನು ಹುಡು ಕಹತ್ತುವನು. ಮತ್ತು ಬಹುಶಕವಾಗಿ ನಂತರ ಆ ಹತ್ಯೆಯಿಂದ ಸೋಜ್ಞತ್ತನಾಗುವನು ಆದರೆ ಪಾಪರು ಅತ್ಯಂತ ನಿರ್ಬಲರು ಹಿಂದುಸ್ಥಾನವನ್ನು ಮುಕ್ತಮಾಡಿಲು ಒತ್ತಾಯಪಡಿಸಿದರೆಂದು ತಿಳಿಯುವಾ. ಅಗಸ್ತ್ಯಪ್ರತೀಕಾರಮಾಡ ನವರು ತಮ್ಮ ಪ್ರತೀಕಾರದ ಕರ್ತವ್ಯದಲ್ಲಿ ಮರಣ ಕೂಡ ಹೊಂದಲು ಸಿದ್ಧರಾಗಬೇಕು. ಈ ರೀತಿ ಪ್ರತೀಕಾರ ಮಾಡಿದರೆನ್ನೆಲ್ಲ ಜಪಾನರು ಕೊಂದು ಬಿಡಬಹುದು ಆದರೆ ಅಂಥ ದಾಳಿಗಾರನು ಕೆಲ ಸಮಯದ ನಂತರ ನನ್ನನ್ನಿಂದ ಸಾಗು ಶೀರದಿಂದ ಕೂಡಿ ಪಡೆಗಳು ಬಿಡುವನು ಮತ್ತು ಅಹಿಂಸಾತ್ಮಕ ಪ್ರತೀಕಾರಿಗಳ ಕೆಲಸವನ್ನು ನಿಲ್ಲಿಸುವನು. ಆ ರೀತಿಯ ಪ್ರತೀಕಾರ ಶಕ್ತಿಯು ತಿರು ಗಿ ಬಾರದೆ ಇರುವುದೇ ಸಾಯಲು ಸಹಕಾರಗಳನ್ನು ನಿ ಲಿಕರಿಸುವ ಈ ಹೊಸ (ಜೀವನಿಗೆ) ಶಕ್ತಿಯು ಮಾನವಕುಲವನ್ನು ಜನನು ಹುಡು ಕಹತ್ತುವನು. ಮತ್ತು ಬಹುಶಕವಾಗಿ ನಂತರ ಆ ಹತ್ಯೆಯಿಂದ ಸೋಜ್ಞತ್ತನಾಗುವನು ಆದರೆ ಪಾಪರು ಅತ್ಯಂತ ನಿರ್ಬಲರು

ಸಲ ಪ್ರತಿಕಾರದ ಯೋಜನೆಯಾಗುವದು. ಅದರಿಂದ ಮುಂದೆ ಒಳ್ಳೆ ಶೌರ್ಯ ಇಲ್ಲವೆ ಸ್ವಾರ್ಥತ್ಯಾಗದ ಕಾರ್ಯಗಳಾಗಬಹುದು. ಹಿಂದೆ ಸರಿಯುವದು ಹೇಡಿತನವಲ್ಲ; ಸಾಯಲಿಕ್ಕೆ ಹೆವರಿದಂತಲ್ಲ. ದಾ ಳಿ ಗಾ ರ ನು ಆಸ್ತಿ ವಿತ್ತಗಳನ್ನು ಕಸಿದುಕೊಳ್ಳಲಿಕ್ಕೆ ಬಂದಾಗ ಶೂರನು ಹಿಂಸೆಯಿಂದ ಇಲ್ಲವೆ ಅಹಿಂಸೆಯಿಂದ ಅವನನ್ನೆದುರಿಸಿ ಅನೇಕ ಸಲ ಮರಣಕೂಡ ಹೊಂದುವನು ಆದರೆ ಅವನ ಸದ್ಬುದ್ಧಿಯು ಪರಾವೃತನಾಗಲು ಪ್ರೇರೇಪಿಸದೆ ಅವನೇನು ಕಡಿಮೆ ಶೂರನಾಗಲಾರನು

(ಕರ್ಮವೀರ)

ನರ್ಕಿಂಗ್ ಕನ್ವಿಕ್ಷನ್ ನಿರ್ಣಯಕ್ಕೆ ಒಪ್ಪಿಗೆ ಕೊಡಲು ಏಪ್ರಿಲ್ 29 ನೇ ತಾರಿ ದಿನ ಅಖಿಲಭಾರತ ಕಾಂಗ್ರೆಸ್ ಸಮಿತಿ ಸಭೆಯನ್ನು ಅಲಹಾ ಬಾದಿನಲ್ಲಿ ಕರೆಯಲಾಗಿದೆಯೆಂದು ತಿಳಿದು ಬಂದಿದೆ

ಸರ್ಕಾರದ ಶಾಪೆಗಳು ಬೇರೆಕಡೆಗೆ

ಸೆಕ್ರೆಟರಿಯೇಟ್ಸಿನ ಕೆಲವು ಭಾಗ ಮುದನಸಲ್ಲಿಗೂ - ಉವಕಮಂಡಲಕ್ಕೂ, ನರ್ಸಾಯಿಸಪ್ಪಟ್ಟನೆ ಪೋಲೀಸು ಇಸ್ಪೆಕ್ಟರು ಜನರಲ್ಲರ ಕಚೇರಿಯು ವೆಲ್ಲೂರಿಗೆ ಹೋಯಿತು ರಿಸರ್ವ್ಯೂಬ್ಯಾಂಕ್ ಕಚೇರಿ ಸೇಲಮ್ಮಿಗೆ ತೆರಳಿತು ಸರ್ಜ-ಜನರಲ್ಲರ ಮತ್ತು ಶಿಕ್ಷಣ ಶಾಖಾಧಿಕಾರಿಗಳ ಕಚೇರಿಗಳು ಆನಂತಪುರದಲ್ಲಿರುವವು ಸರಕಾರದ ಶ್ರೇಷ್ಠಕಾರ್ಯದರ್ಶಿಗಳು, ಗೃಹ ಶಾಖಾ ಕಾರ್ಯದರ್ಶಿಗಳು ಮತ್ತು ಇತರ ಒಬ್ಬಿಬ್ಬರು ಕಾರ್ಯದರ್ಶಿಗಳು ಮದರಾಸಿನಲ್ಲಿಯೇ ಇರಲಿರುವರು.

ನಾದ್ರಾಸಿಗೆ ಹೆಚ್ಚಿನ ವಿಪತ್ತು.

ಮದ್ರಾಸಿಗೆ ಈಗ ವಿಪತ್ತು ಹೆಚ್ಚಾಗಿದೆಯೆಂದು ಸರ್ಕಾರದವರಿಗೆ ತಿಳಿದು ಬಂದಿರುವುದರಿಂದ ನಗರದಲ್ಲಿ ಇರಬೇಕಾದ ಅಗತ್ಯವಿಲ್ಲದ ಪ್ರಜೆಗಳು ಬಿಟ್ಟುಹೋಗಬೇಕೆಂದು ಸರ್ಕಾರದವರು ಸೂಚನೆ ಕೊಟ್ಟಿರುತ್ತಾರೆ. ಬಂಧುಮಿತ್ರರಿಲ್ಲದವರಿಗೆ ಮದ್ರಾಸಿನ ಸಮಾಪ ೨-೬ ಹಳ್ಳಿಗಳನ್ನು ವಿಪರ್ಡಿಸಿರುತ್ತಾರೆ.

ಕಳೆದ ವಾರದ ೬ ದಿವಸಗಳಲ್ಲಿ 3 ಲಕ್ಷ ಮಂದಿ ಮದ್ರಾಸನ್ನು ಬಿಟ್ಟಿರು ಮದ್ರಾಸಿನ ಸೆರೆಮನೆಯಲ್ಲಿದ್ದ ಖೈದಿಗಳನ್ನೆಲ್ಲಾ ಬಳ್ಳಾರಿಗೆ ತರಲಾಗಿದೆ

ಶ್ರೀಮತಿ ಮ. ಗಾಂಧಿಯವರ ಸಲಹೆ

ಪ್ರಾಣವನ್ನರ್ಪಿಸಲು ಸಿದ್ಧರಾಗಿರಿ

(ಹರಿಜನ' ಸಪ್ತಿಕೆಯಲ್ಲಿ ಹೀಗೆ ಬರೆದಿರುವರು.)

ವನು ಸಹಾಯಮಾಡ
ವು ಅಹಿಂಸಾತ್ಮಕ ಪ್ರತಿ
ಳಿದವರಿಗೆ ತನ್ನ ರಕ್ಷಣೆ
ಲು ಆಮ ಸಮರ್ಥ

ರಿಕೇರ್ಪಡಿಸಿಯೆ ಯಾ
ತಿಕಾರವೊ ಅವಶ್ಯಾ
ಯಾನದೇಸ್ಯಾಂತಕಕ್ಕಾಗಿ
ನ ನಾನು ಕೇರಿಂದಲ್ಲಿ
ಪ್ರತಿಕಾರವನ್ನು ಪ್ರದ
ಆನಾನು ನೆಂದಲೇವ
ಭಾಯ ಸಲ್ಲಿಸಬಹುದು
ಜಪಾನ ಸೈನ್ಯವು ಕಾಲಿ
ಆಸಾಮೆದಲ್ಲಿರುವೆ ಉಳಿ
ಬ್ರಿಟರನ್ನು ಸೋಲಿಸು
ನೈವು ಇಡೀ ದೇಶವನ್ನೆ
ಮಾಡಬೇಕಾಗಿರುವು
ನಿಯವರೆಗೆ ಹೋರಾಡು
ಸ್ಥಾನವನ್ನು ಅವರು
ದೆಂದರೆ ಸಂಪೂರ್ಣ ಸೋ
ಬಚ್ಚಿನೆಂದು ಅವರ ನಂಬಿಕೆ ಆದುದರಿಂದ
ಸಾಕಷ್ಟು ಸಹಾಯಕರ ಅಭಾವದಿಂದ
ಅಹಿಂಸಾತ್ಮಕ ಸ್ವಪ್ರತೀಕಾರಿಗಳು ಧೈರ್ಯವು
ನನ್ನು ಸಾಧಿಸದಿದ್ದರೆ ಆ ಮಾರ್ಗವನ್ನು
ಬಿಟ್ಟುಗೊಡುವುದಿಲ್ಲ ಮರಣ ಹೊಂದುವ
ನರಿಗೆ ಅವನ್ನೇ ಆಸೆಸರಿಸುವರು.

ಅಹಿಂಸಾವಾದಿಗಳ ಕರ್ತವ್ಯವು ಬ
ಹಳ ಕಠಿನವಾಗಿರುವದು. ಅವರು ತನ್ನ
ದ್ಯೇಯದಲ್ಲಿ ವಿಶ್ವಾಸವಿದ್ದ ಯಾವ
ಮನುಷ್ಯನು ಎಂಥ ಸಂಕಟಗಳಿಂದಲೂ
ಎಗೆಯುವನು.

ಬಹಳ ದಿವಸಗಳ ವರೆಗೆ ನಾಜಿಯ
ಬಹುದಾದ ಇದೊಂದು ಕಪ್ಪವರಿಪರಿ
ಅಹಿಂಸಾತ್ಮಕ ಪ್ರತೀಕಾರಿಗಳು ಅಶಕ್ಯ
ನಾದ ಕೃಯತ್ನಗಳನ್ನು ಮಾಡಬಾರದು
ಅವರ ಶ್ರ ಸಾಮರ್ಥ್ಯ ಮಿತವಾಗಿವೆ.
ಇದೀಗ ಗಂಡಾಂತರದಲ್ಲಿರುವ ಆಸಾಮದ
ರಕ್ಷಣೆಗೆ ಕಾರಣವಲ್ಲಿರುವ ಒಬ್ಬ ಪತ್ರಿಕಾ
ಕಾರಿಯು ಹೊಸೆಗಾರನಾಗಲಾರನು ತನ್ನ
ಬಯಸುತ್ತೀನೆ ವಿಧಾಯಕ ಕಾರ್ಯ

ಕ್ರಮನುಷ್ಠೆಯೆ ಈ ಅಹಿಂಸಾತ್ಮಕ ಪ್ರತಿಕಾರದ ಆತ್ಯುತ್ತಮ ಸಿದ್ಧತೆ ಇಷ್ಟಿನೆ. ಪ್ರದರ್ಶನವಿದೆ ನಿಧಾಯಕ ಕಾರ್ಯಕ್ರಮದ ತಳಹದಿಯಿಲ್ಲದೆ ಅಹಿಂಸಾತ್ಮಕ ಕತ್ತಯನ್ನ ಸ್ವದರ್ಶಿಸಲ್ಲೆನೆಂದು ವಿಶ್ವಾಸವು ವಮ ಪರೀಕ್ಷಯ ಕಾಲ ಒಂದಾಗಿ ಬಹ ಗುಟ್ಟಿಗೆ ಅಯೆಸ್ಕಯಾಗುವರು ಒಳ್ಳೆ ಊಬ್ಬದೆ ಸಶಸ್ತ್ರ ಸೈನಿಕನ ಗೂಡೆ ಇನಿಸಿ ಯೆಂದು ಬಳಲುವ ನಿಶ್ಯಸ್ತ್ರ ನುಸುಮ್ಮನು ತನ್ನ ಶಕ್ತಿಯ ಪ್ರದರ್ಶನಮಾಡಲು ಪ್ರಯತ್ನಿಸಿದೆಂತೆಯೆ ಇವರ ಹಾಡಾಗುವನು ಮತ್ತು ಇವರು ಅಸಂಶ್ಯಜಾಗರೂರು ವಿಧಾಯಕ ಕಾರ್ಯಕ್ರಮದಲ್ಲಿ ವಿಶ್ವಾಸ ಒಟ್ಟಿದವ್ದನವರಿಗೆ ಹಸಿಸೆಯಿಂದ ಒಳಬುನ ಕೆಟ್ಟೂಸಧಿ ಜನರ ಸಲುವಾಗಿ ಯಾವ ದೇ ವಾಸ್ತವಿಕ ಭಾವನೆಯಿರುವದಿಲ್ಲಿ ದು ನನ್ನ ಕಟಿವ್ಯಾಯ ಆ ಒಗೆಯ ಭಾವನೆ ಯಿಲ್ಲದಿದ್ದವನು ತರ್ಕಶಾಸ್ತ್ರಕಾರಿಗಾಗಿ ನೋ ಡಲಾರನು. ಹಸಿವಿನಿಂದ ಬಳಲುವ ಮಾನವ ಜನಾಂಗಮೊಡನೆ ತಾದಾತ್ಮ್ಯ ಹೊಂದುವದರಲ್ಲಿಯೆ ನನ್ನ ಅಹಿಂಸಾಚರಣೆಯ ಪೂರ್ಣತ್ವವಿದೆಯೆಂದು ನನ್ನ ಭಾವನೆ ಆ ಬಗೆಯ ತಾದಾತ್ಮ್ಯ ಭಾವನೆಯಿನ್ನೂ ನನ್ನಲ್ಲಿ ಉಂಟಾಗದಿದ್ದದರಿಂದ ನನ್ನ ಕಲ್ಪನೆಯ ಅಹಿಂಸೆಯ ಮಟ್ಟಿಕ್ಕೆ ನಾನಿನ್ನೂ ಮು ಟ್ಟಿರುವದಿಲ್ಲ.

♠

ಸ್ವಸಂಪತ್ತಿನ ಹೋಳಿ

ನಾನು ಹರಿಜನದಲ್ಲಿ ಸ್ವ ಸಂ ಪ ತ್ತಿ ನ ಹೋಳಿಯ ಬಗ್ಗೆ ಬರೆದ ಲೇಖದ ಸಂಬಂಧದಲ್ಲಿ ಓರ್ವರು ಈ ರೀತಿ ಒರೆಯುತ್ತಾರೆ

ಪ್ರಶ್ನೆ:—೨೭ನೇ ಮಾರ್ಚ್‌ನ ಹರಿಜನದಲ್ಲಿ ನೀವು ಸ್ವಸಂಪತ್ತಿನ ಹೋ ಳಿ ಯ ಸಂಬಂಧದಲ್ಲಿ ಬರೆದ ಲೇಖನದಲ್ಲಿ ಒಗೆ ಬರೆದಿರುವಿರಿ.

"ಯುದ್ಧ ವಿರೋಧಿಯಾದ ನನ್ನದು ಇದಕ್ಕೆ ಒಂದೇ ಉತ್ತರ. ಮನುಷ್ಯನವದ ಕ್ಕಾಗಿ ಇಷ್ಟನೆ ಸಂರಕ್ಷಣೆಗಾಗಿ ವಿತ್ತ ಜೀವಿತ ಗಳೆ ನಾಶ ಮಾಡುವಲ್ಲಿ ಯಾವದೇ ಒಗೆಯ ಶೌರ್ಯ ಇಲ್ಲವೆ ಸ್ವಾರ್ಥತ್ಯಾಗ ನನಗೆ ಕಾಣುವದಿಲ್ಲ

ಶತ್ರುಗಳಿಗೆ ಉಪಯೋಗವಾಗಬಾರ ದೆಂದು ನನ್ನ ಬೆಳೆ ಮನೆಮಾಠುಗಳನ್ನು ನಾಶ ಮಾಡುವದಕ್ಕಿಂತ ನನಗೆ ಹಾಗೆ ಮಾಡುವ್ಕೆ ಬೇಕಾದರೆ ಅವನ್ನು ನಾನು ಹಾಗೆಯೆ ಬಿಟ್ಟು ಬಿಡುವೆನು ಹೀಗೆ ಮಾ ಡುವದು ವಿವೇಕಯುಕ್ತವಾದುದಿದ್ದು ಅದರಲ್ಲಿ ಸ್ವಾರ್ಥತ್ಯಾಗ ನುತ್ತು ಶೌರ್ಯಕೂಡ ಅಡಕವಾಗಿವೆ ಆದರೆ ಹೀಗೆ ಮಾಡುವಾಗ ಶತ್ರುವಿಗೆ ಅಂಜಿ ಕಳ್ಳ ಆದರೆ, ಯಾರೂ ನನ್ನ ದ್ವೇಷಿಗಳಲ್ಲೆಂದು ನಾನು ತಿಳಿಯುವದರಿಂದ ನೂನವತೆಯೆ ಉದ್ದೇಶದಿಂದ ಲೆ ಹಾಗೆ ಹೇಳುತ್ತಿರುವೆನು"

ಮೊದಲನೆಯವಾಗಿ ರೀತಿಯದ ಪ್ರತಿ ಕಾರವೆಲ್ಲಡಕವಾದ ಹಿಂಸೆಗೆ ನನ್ನ ಒಪ್ಪಿಗೆ ಯಿಲ್ಲದಿದ್ದರೂ ದಾಳಿಗಾರನನ್ನು ತಡೆಯುವದಕ್ಕಾಗಿ ಸ್ವೀಕರಿಸುವ ಸ್ವ ಸಂ ಪ ತ್ತಿ ನ ಹೋಳಿಯ ನೋರಣದಲ್ಲಿ ಅಪ್ರತಿಮ ಶೌರ್ಯ ಮತ್ತು ಅನುಸಮ ಸ್ವಾರ್ಥತ್ಯಾಗವಿವೆಂದು ನನ್ನ ಅಭಿಪ್ರಾಯ ಆದುದರಿಂದ ಆತ್ಮರಕ್ಷಣೆ ನಾಗಿ ನಿತ್ತ ನಾಶಮಾಡುವಲ್ಲಿ ಶೌರ್ಯವಿಲ್ಲ ಸ್ವಾರ್ಥತ್ಯಾಗವಿಲ್ಲೆಂದು ನೀವು ಹೇಳುವದರ ಮನುವು ನನಗೆ ತಿಳಿಯದಂತಾಗಿದೆ ಎರ ಜನೆಯ ದಾಗಿ ದಾಳಿಗಾರನ್ನೆ ಹಾರಿಸಬೇ ಕೆಂದು ನೀವು ಜನರಿಗೆ ಬೋಧಿಸುತ್ತಿರು ವಿದಾದರೂ ಬೆಳೆ ಮನೆಮಾರುಗಳನ್ನೆಲ್ಲ ಆ ಜಿಕೆಯಿಂದಲ್ಲದಿದ್ದರೂ ಮಾನವತೆಯ ದೃಷ್ಟಿಯಿಂದ ಅವರ ಉಪಯೋಗಕ್ಕೆ ಬಿಟ್ಟು ಗೊಡಿರೆಂದು ಉಪದೇಶಿಸುತ್ತಿರುವಿರಿ ಮನುಷ್ಯ ರನ್ನು ವಿರೋಧಿಸಬೇಕೆಂಬ ನಿಮ್ಮ ಉಪ ದೇಶಕ್ಕೆ ಇದು ಹೇಗೆ ಸಾಮರ್ಥ್ಯವಿದೆಂಬು ದು ನನಗೆ ತಿಳಿಯದಂತಾಗಿದೆ ತನ್ನ ಜೀವ ಕೊಟ್ಟಾದರೂ ಶತ್ರುಗಳಿಗೆ ಬೆಳೆ ಮನೆ ನೂರುಗಳು ಸಿಕ್ಕದಂತೆ ನೋಡಿಕೊಳ್ಳುವನು ಅಹಿಂಸಾತ್ಮಕ ಪ್ರತಿಕಾರಿಯು ಕರ್ತವ್ಯವೆಂದು ನನಗನಿಸುತ್ತದೆ ದಾಳಿಗಾರರಿಗೆ ಅಹಿಂಸಾತ್ಮಕ ರೀತಿಯಿಂದ ಹೇಗೆ ಪ್ರತಿಕಾರ ಮಾಡಬೇಕೆಂಬುದು ಜನರಿಗೆ ತಿಳಿಯುವದಕ್ಕಾಗಿ ವಿದ್ದುದರಿಂದ ಈ ವಿಷಯದ ಬಗ್ಗೆ ಸೃಷ್ಟೀಕರಣ ಮಾಡಬೇಕೆಂದು ನಾನು ಬಿನ್ನವಿಸುತ್ತೇನೆ.

ಉತ್ತರ—ನಿಜವಾಗಿ ಇದರ ಅರ್ಥವು ಸುಸ್ಪಷ್ಟವಿದೆ. ನನ್ನೊಡನೆ ಯುದ್ಧ ಹೂಡಿದ ನನ್ನ ಒಂಧವಿಗೆ ಉಪಯೋಗವಾಗ ಬಾರದೆಂದು ನನ್ನ ಛಾವಿಯಲ್ಲಿ ವಿಷಹಾಕುವೆಮ ಇಲ್ಲಂತೆ ಅದನ್ನು ಮುಚ್ಚಿ ಬಿಸುವದರಲ್ಲಿ ಯಾವದೇ ಬಗೆಯ ಶೌರ್ಯವಲ್ಲ ಅವನೊಡನೆ ನಾನು ಹಳೆಯ ಪದ್ಧತಿಯಿಂದ ಹೋರಾಡುತ್ತಿರುವೆನೆಂದು ತಿಳಿಯುವಾ ಆತ್ಮಪುದ್ಧಿಯೇ ಸ್ವಾರ್ಥತ್ಯಾಗದ ಬೀಜ ಮಂತ್ರ ವಾಗಿದ್ದರಿಂದ ನನ್ನನ್ನು ಪರಿಶುದ್ಧ ನೂಡದಿದ್ದ ಈ ಕಾರ್ಯದಲ್ಲಿ ಯಾವ ಬಗೆಯ ಸ್ವಾರ್ಥತ್ಯಾಗವಿದೆ? ಒಬ್ಬನ ಮೇರೆ ಸೇಡುತೀರಿಸಿಕೊಳ್ಳುವದಕ್ಕಾಗಿ ಆ ವ ನ ಮೊಗು ಕೊಯ್ದಂತೆಯೆ ಇದರ ಹಾಡಾಗು ವದು ಹಿಂದಿನ ಯೋಧ್ಧರು ಯುದ್ಧದಲ್ಲಿ ಕೆಲ ವೊಂದ ವಳ್ಳೆ ನಿಯಮಗಳನ್ನು ಪಾಲಿಸುತ್ತಿದ್ದರು ಬಾವಿಯಲ್ಲಿ ವಿಷಹಾಕಲು ಇಲ್ಲವೆ ಬೆಳೆಗಳನ್ನು ನಾಶಮಾಡಲು ಆಗ ಆಡ್ಡಿಯಿದ್ದಿತು. ನನ್ನ ಬಾವಿಯನ್ನು ಬೆಳೆ ಮಂತ ದವುಗಳನ್ನು ಶತ್ರು ಉಪಯೋಗಕ್ಕೆ ಬಿಡುವದರಿಂದ ಅವನು ಅದರ ಉಪಯೋಗ ಮಾಡಿಕೊಂಡು ನನ್ನ ನೇಲೆಯೆ ಏರಿ ಬರುವ ಭೀತಿದ್ದರೂ ಹಾಗೆ ಮಾಡುವಲ್ಲಿ ಕಾರ್ಯ ಮತ್ತು ಸ್ವಾರ್ಥತ್ಯಾಗವಿರುವ ದೆಂದ. ನಾನು ಹೇಳಿಬ್ಬೆ. ತೆಪ್ಪಿಗೆ ಕೆಲ ವೆನ್ನಾದರೂ ಬಿಟ್ಟು ಗೊಟ್ಟೆನೆಂಬ ಭಾವನೆ ಯಲ್ಲಿ ಸ್ವಾರ್ಥತ್ಯಾಗವಿದೆ. ಅದರಿಂದ ನವ್ವ ಆತ್ಮಪುದ್ಧಿಯಾಗಿ ನಾನು ಉತ್ತ ಪ್ಪ ಕೊಡುವೆನು

'ನಾನು ಮಾಗೆ ನಾಡಲಿಕ್ಕೇ ಬೇಕಾದೆಲೆ' ಎಂಬುದರ ನಿರ್ಣಯವನ್ನು ಈ ಸುದ್ದಿ ಗಾರನು

(9ನೇ ಪುಟವನ್ನು ನೋಡಿರಿ)

254

ಪ್ರಜೆಗಳಿಗೆ ಅಧಿಕಾರ ಕೊಡಿರಿ—ಕಾಂಗ್ರೆಸ್ಸಿಗೆ ಬೇಡ.

ಅಜಾದ-ಕ್ರಿಪ್ಸ ಪತ್ರವ್ಯವಹಾರ.

ಕಾಂಗ್ರೆಸ್ ನಿರ್ಣಯವನ್ನು ವಿವರಿಸುತ್ತ ಮೌಲಾನಾ ಅಜಾದರು ಸರ್ ಕ್ರಿಪ್ಸ್‌ರವರ ಗೊಂದು ಪತ್ರ ಬರೆದಿದ್ದರು. ಅದಕ್ಕೆ ಸರ್ ಕ್ರಿಪ್ಸ್‌ರವರು ಉತ್ತರವೀಯುತ್ತ 'ಭಾರತದ ರಕ್ಷಣೆ ಕಾರ್ಯಕ್ಕೆ ವಿಘ್ನವಾರದೆ ಭಾರತೀಯ ಪ್ರತಿನಿಧಿಗೆ ಹೆಚ್ಚಿನ ರಕ್ಷಣೆ ಅಧಿಕಾರ ಕೊಡಲು ಸಾಧ್ಯವೇ ಇಲ್ಲ. ಈ ರಕ್ಷಣೆಯು ಸಮ್ರಾಟ್ ಸರಕಾರದ ದೊಡ್ಡ ಜವಾಬ್ದಾರಿಯಾಗಿದೆಯೆಂಬುದನ್ನು ನೀವು ಬಲ್ಲಿರಿ' ಎಂದು ತಿಳಿಸಿದ್ದಾರೆ.

"ಆಡಳಿತ ಕಾನನವನ್ನು ಬದಲಾಯಿಸುವಂತೆ ನಿನ್ನೆರಾತ್ರಿ ಸಲಹೆ ಮಾಡಿದಿರಿ ಇತರ ಯಾವ ಪ್ರತಿನಿಧಿಗಳೂ ಈ ಸಲಹೆ ಮಾಡಲಿಲ್ಲ. ಸಂಗ್ರಾಮದ ಮುಖ್ಯಭಾಗದಲ್ಲಿ ಈ ಬದಲಾವಣೆ ಅಸಾಧ್ಯವೆಂದು ಉಳಿದವರೆಲ್ಲ ಒಪ್ಪಿದ್ದಾರೆ. ನಿಜವಾದ ರಾಷ್ಟ್ರೀಯ ಸರಕಾರ ಪೂರ್ಣಾಧಿಕಾರವುಳ್ಳ ಕ್ಯಾಬಿನೆಟ್ ಸರಕಾರ ಸ್ಥಾಪಿಸಬೇಕೆಂದು ಸಹ ಸಲಹೆ ಮಾಡಿದ್ದೀರಿ. ಆಡಳಿತ ವ್ಯವಸ್ಥೆಯನ್ನೇ ಬದಲಾಯಿಸದೆ ಇದು ಸಾಧ್ಯವಿಲ್ಲ. ಈಗಿನ ಸ್ಥಿತಿಯಲ್ಲಿ ಅಂತಹ ಮಂತ್ರಿಮಂಡಲವು ನೇಮಕವಾದರೆ – ಈಗಿನ ವ್ಯವಸ್ಥೆಯಂತೆ ದೊಡ್ಡ ರಾಜಕೀಯ ಪಕ್ಷಗಳವರು ಮಂತ್ರಿಮಂಡಲಕ್ಕೆ ಪ್ರತಿನಿಧಿಗಳನ್ನು ನೇಮಿಸುವರು ಅವರು ಯಾರಿಗೂ ಜವಾಬ್ದಾರರಾಗಿರುವುದಿಲ್ಲ. ಅವರನ್ನು ತೆಗೆದು ಹಾಕಲು ಯಾರಿಗೂ ಅಧಿಕಾರ ವಿರುವುದಿಲ್ಲ ಬಹು ಬಲವುಳ್ಳವರ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿದಂತಾಗುತ್ತದೆ. ಇದನ್ನು ಭಾರತದ ಅಲ್ಪ ಸಂಖ್ಯಾತರೆಲ್ಲ ತಿರಸ್ಕರಿಸುತ್ತಾರೆ. ಕೋಮುವಾರು ಭಿನ್ನಾಭಿಪ್ರಾಯಗಳು ಇನ್ನೂ ಉಗ್ರವಾಗಿರುವಾಗ ಭರತ ಖಂಡದಲ್ಲಿ ಬೇಜವ್ದಾರಿಯುಳ್ಳ ಬಹುಮತ ಪಕ್ಷಗಳ ಮಂತ್ರಿಮಂಡಲವನ್ನು ರಚಿಸುವುದು ಅಸಾಧ್ಯ. ಈಗಿನ ಆಡಳಿತ ವ್ಯವಸ್ಥೆಯನ್ನು ಸಂಪೂರ್ಣವಾಗಿ ಬದಲಾಯಿಸುವುದೊಂದೆ ನ್ಯಾ ಬಿಟ್ಟು ಎಷ್ಟುಮಟ್ಟಿಗೆ ಮುಂದುವರಿಯ ಬಹುದೋ ಅಷ್ಟು ಮುಂದೆ ಹೋದರೂ ಪೂರ್ತಿಗಾಗಿ ಕಮಿಟಿಯವರ ಸಲಹೆಗಳನ್ನು ಅಂಗೀಕರಿಸದಿದ್ದುದಕ್ಕಾಗಿ ನಾನೂ ಸಮ್ರಾಟ್ ಸರಕಾರವೂ ವಿಷಾದಿಸುವೆವು. ಎಂದು ತಿಳಿಸಿದ್ದಾರೆ.

ಅಜಾದರ ಉತ್ತರ

"ಕಾಂಗ್ರೆಸ್ಸಿನ ಕೈಗೆ ಅಧಿಕಾರ ತೆಗೆದು ಕೊಳ್ಳುವುದರಲ್ಲಿ ನಾವು ಖಂಡಿತ ಆಸಕ್ತರಾಗಿಲ್ಲ ಭಾರತೀಯ ಪ್ರಜೆಗಳೆಲ್ಲರಿಗೆ ಸ್ವಾತಂತ್ರ್ಯವೂ ಅಧಿಕಾರವೂ ದೊರೆಯಬೇಕೆಂಬುದೇ ಕಾಂಗ್ರೆಸಿನ ಇಷ್ಟ" ಎಂಬುದಾಗಿ ಮೌಲಾನಾ ಅಜಾದರು ಸರ್ ಕ್ರಿಪ್ಸ್‌ರವರಿಗೆ ಉತ್ತರವೀಯುತ್ತ ತಿಳಿಸಿದ್ದಾರೆ.

ದೆಂಡನಾಯಕರ ಅಧಿಕಾರಗಳನ್ನು ಮೊಟಕು ಮಾಡಬೇಕೆಂದು ನಾವು ಸಲಹೆ ಮಾಡಲೇ ಇಲ್ಲ. 'ಸಂಗ್ರಾಮ ಸಚಿವ' ರನ್ನಿಸುವ ಅವರಿಗೆ ಹೆಚ್ಚಿನ ಅಧಿಕಾರ ಕೊಡಲು ನಾವು ಸಿದ್ಧರಿದ್ದೆವು. ಆದರೆ ರಕ್ಷಣೆ ವಿಚಾರದಲ್ಲಿ ಕಾಂಗ್ರೆಸಿಗೂ ಬ್ರಿಟಿಷ್ ಸರಕಾರಕ್ಕೂ ಭಿನ್ನಾಭಿಪ್ರಾಯವಿದೆ. ಭಾರತೀಯರನ್ನು ಬ್ರಿಟಿಷರು ನಂಬಬೇಕೆಂಬುದು ನಮ್ಮ ವಾದ. ಆದರೆ ಭಾರತೀಯರನ್ನು ನಂಬಕೂಡದೆಂಬುದು ಬ್ರಿಟಿಷರವಾದ ಆಡಳಿತ ವ್ಯವಸ್ಥೆಯನ್ನು ಬದಲಾಯಿಸುವ ವಿಚಾರವನ್ನು ಮೊಟ್ಟಮೊದಲು ನಿನ್ನೆರಾತ್ರಿ ನಾವು ತಿಳಿಸಿದುದಾಗಿ ನೀವು ಹೇಳಿರುವುದು ನಿಜವಲ್ಲ. ಮಾತುಕತೆಗಳ ಕಾಲದಲ್ಲಿ ನಾವದನ್ನು ತಿಳಿಸಿದ್ದೆವು. ಆದರೆ ಒಪ್ಪಿತಯಸಡಿಸಲಿಲ್ಲ. ನಮ್ಮ ಮಾತುಕತೆಗಳು ಮುಂದುವರಿದಂತೆಲ್ಲ ಬ್ರಿಟಿಷ್ ಸರಕಾರದ ನೀತಿಯು ಹಿಂದೇಟು ಹಾಕಿದಂತಿದೆ. ನೀವು ಆರಂಭದಲ್ಲಿ ನಮಗೆ ಕೊಟ್ಟ ಭವ್ಯ ಚಿತ್ರವು ಕಟ್ಟಕಡೇ ಭೇಟಿಯಲ್ಲಿ ಕೊಟ್ಟ ವಿವರಣೆಯಿಂದ ಪೂರ್ತಿಪ್ರಭಾಯಿತು" ಎಂದು ತಿಳಿಸಿದ್ದಾರೆ.

NEO-MADRAS CAFE, BELLARY.

ನಿಯೋ ಮದ್ರಾಸ್ ಕೆಫೆ, ಬಳ್ಳಾರಿ.

Best boarding & Lodging House
Palatial & enviable quarters, Well ventilated rooms with electric lights.
Pure Ghee preparations.
Tea-party & Dinner arrangements undertaken at short notice.
Satisfaction guaranteed.
Service our speciality.

★

ಮನೋಹರ ಮತ್ತು ಆಕರ್ಷಣೀಯ ವಾಸಸ್ಥಾನ.
ಗಾಳಿ ಬೆಳಕುಗಳಿಂದ ಕೂಡಿದ ವಿಶಾಲ ಕೋಣೆಗಳು.
ರೈಲ್ವೆ ಸ್ಟೇಷನ್-ಬಸ್‌ಸ್ಟಾಂಡ್ ಸಮೀಪ.
ಸಕಲ ವ್ಯವಹಾರಗಳ ಕೇಂದ್ರ, ಸ್ವಲ್ಪ ದುಡ್ಡು ತುಪ್ಪದಲ್ಲೇ ಮಾಡಿದ ಸಲಹಾದ ಸಾಮಗ್ರಿಗಳು.
ಸ್ವಲ್ಪಾವಧಿಯ ಸೂಚನೆಯಿಂದ ಭೋಜನ-ಟೀಪಾರ್ಟಿ ಏರ್ಪಡಿಸುತ್ತೇವೆ
ವಿನಯಶೀಲರಾದ ಸೇವಕ ವರ್ಗ.

When you visit Bellary Do go to NEO MADRAS CAFE the best Boarding & Lodging house

ಬಳ್ಳಾರಿಗೆ ಬಂದಾಗ ಇಲ್ಲಿಳಿಯಲು ಮರೆಯ ಬೇಡಿರಿ.

(2ನೇ ಪುಟದಿಂದ)

ಇಂತಹ ಸೇನೆಗಳು ಭಾರತೀಯ ಸ್ವಾತಂತ್ರ್ಯಕ್ಕೆ ಬೀಡೆಗಳೆನಿಸುವುದರಲ್ಲಿ ಸಂದೇಹವಿಲ್ಲ

ಭಾರತೀಯ ಅಖಂಡತ್ವವೆಲ್ಲಿ ಉಳಿಯಿತು !

"ಯಾವುದಾದರೊಂದು ಪ್ರಾಂತ್ಯವು ಇಂತಹ ಕೇಂದ್ರ ವ್ಯವಸ್ಥೆಯಿಂದ ಪ್ರತ್ಯೇಕವಾಗಿ ಉಳಿಯಲು ಅನಕಾಶವೀಯುವ ವಿಚಿತ್ರ ತತ್ವವನ್ನು ಮೊದಲೇ ಅಂಗೀಕರಿಸುವುದರಿಂದ ಅಖಂಡ ಭಾರತದ ಕಲ್ಪನೆಗೆ ಧಕ್ಕೆ ಒದಗುವುದಾಗಿದೆ. ಪ್ರಾಂತ್ಯಗಳಲ್ಲಿ ಸಿದ್ಧೋಪನ್ನವು ಹೆಚ್ಚಲು ಸಹಕಾರಣವಾಗುವ ದೇಶೀಯ ಸಂಸ್ಥಾನಗಳು ಕೇಂದ್ರ ವ್ಯವಸ್ಥೆಯಲ್ಲಿ ಸೇರಲು ಪ್ರಾಂತ್ಯಗಳು ಹೆಚ್ಚಿನ ಕಷ್ಟವನ್ನು ತಂದೊಡ್ಡಬಹುದು. ಭಾರತೀಯ ಸ್ವಾತಂತ್ರ್ಯಕ್ಕೂ ಮತ್ತು ಭಾರತದ ಅಖಂಡತ್ವವನ್ನು ಉಳಿಸುವುದಕ್ಕೂ ಕಾಂಗ್ರೆಸ್ ಕಂಕಣ ಕಟ್ಟಿದೆ ನಾನಾವೇಶಗಳನ್ನೊಳಗೊಂತ ವಿಕಸ್ಪಬುದ್ಧಿವನ್ನು ನಲೆಗೊಳಿಸುವುದರಕಡೆಗೆ ಜನರ ಮನಸ್ಸನ್ನು ಹರಿಯಬಿಡುವಂತಹ ಅಧುನಿಕ ಲಹರಿಯಲ್ಲಿ ಒಂದು ದೇಶದ ಒಳಗೇ ಹಲವು ಪ್ರಭುತ್ವಗಳು ಏರ್ಪಡಿಸಿರುವ ತತ್ವವನ್ನು ನಾವು ಖಂಡಿತ ಒಪ್ಪುವುದಿಲ್ಲ. ಹಾಗಿದ್ದರೂ ಯಾವುದೇ ಪ್ರದೇಶವನ್ನೇ ಆಗಲಿ ಕೇಂದ್ರವ್ಯವಸ್ಥೆಗೆ ಸೇರಲೇಬೇಕೆಂದು ಕಾಂಗ್ರೆಸ್ಸು ಒತ್ತಾಯಪಡಿಸಲಾರದು. ಆದರೆ, ಬೇರೆ ಬೇರೆ ಭಾಗಗಳವರು ಒಂದಾಗಿರುವ ಸ್ವೇಚ್ಛೆಯ ಜೀವನವನ್ನು ರೂಪುಗೊಳಿಸಲು ಸಾಧ್ಯವಿರುವಂತಹ ವಾತಾವರಣವನ್ನು ಕಲ್ಪಿಸಬೇಕೆಂದು ಸಮಿತಿಯವರು ಅಭಿಪ್ರಾಯ ಪಡುತ್ತಾರೆ. ಬ್ರಿಟಿಷ್ ಸರಕಾರದ ಈಗಿನ ಸಲಹೆಗಳು ಕೇಂದ್ರ ವ್ಯವಸ್ಥೆಯ ಸ್ಥಾಪನೆಯ ಆರಂಭದಲ್ಲಿಯೇ ಪ್ರಾಂತ್ಯಗಳು ಪ್ರತ್ಯೇಕವಾಗಲು ಉತ್ತೇಜನಕೊಡುವ ಕೋಮುವಾರು ಬೇಡಿಕೆಯನ್ನು ಎದುರಿಸಲು ಈ ಸಲಹೆಗಳನ್ನು ಮಾಡಿರಬಹುದು ಆದರೆ ಕಡೆಯಲ್ಲಿ ಇದು ವಿಪತ್ಕಾರಕವಾಗಿ ಪರಿಣಮಿಸುವುದು

ರಕ್ಷಣೆ ಅಧಿಕಾರ ಕೊಡುವುದು ಅತ್ಯಗತ್ಯ

"ಭಾರತದ ಭವಿಷ್ಯಕ್ಕೆ ಸಂಬಂಧಿಸಿದ ಯಾವುದೇ ಸಲಹೆಗೇ ಆಗಲಿ ಗಮನ ಕೊಡುವುದು ಅವಶ್ಯಕ ಆದರೆ, ಇಂದಿರುವ ವಿಪತ್ಸಮಯದಲ್ಲಿ ಈಗಿನ ಸ್ಥಿತಿಯೇ ಮುಖ್ಯ ಈ ಅಂಶಕ್ಕೆ ಹೆಚ್ಚು ಗಮನವಿತ್ತಿದೆ. ಬ್ರಿಟಿಷ್ ಸರಕಾರದ ಸಲಹೆಗಳು ಅಸ್ಪಷ್ಟವಾಗಿವೆ ಮತ್ತು ಅಪೂರ್ಣವಾಗಿವೆ. ಈಗಿನ ವ್ಯವಸ್ಥೆಯಲ್ಲಿ ಸಮೂಲವಾದ ಬದಲಾವಣೆಯನ್ನು ಮಾಡುವ ಯೋಚನೆಯೇ ಅವುಗಳಲ್ಲಿಲ್ಲ ಏನೇ ಆಗಲಿ ಭಾರತದ ರಕ್ಷಣೆ ಹತೋಟೆಯು ಬ್ರಿಟಿಷರ ಕೈಲೇ ಇರುವುದೆಂದು ಸ್ಪಷ್ಟಪಡಿಸಲಾಗಿದೆ. ಯಾವುದೇ ಕಾಲದಲ್ಲಾದರೂ ರಕ್ಷಣೆ ವಿಚಾರವು ಬಹಳ ಮುಖ್ಯವಾದುದು, ಸಂಗ್ರಾಮಕಾಲದಲ್ಲಂತೂ ತೀರ ಮುಖ್ಯವಾದುದು ಮತ್ತು ಎಲ್ಲ ಜೀವನ ವಿಚಾರಗಳೂ ಅಡಕತಾಂಪಗಳೂ ರಕ್ಷಣೆ ಕೆಳಗೆ ಬರುತ್ತವೆ. ರಕ್ಷಣೆ ಅಧಿಕಾರವನ್ನು ಭಾರತೀಯರ ಜವಾಬ್ದಾರಿಯಿಂದ ಈಗ ವಿಸರ್ಜಿಸುವುದಾದರೆ, ಆ ಜವಾಬ್ದಾರಿಗೆ ಅರ್ಹರಾಗಿನ ಬೆಲೆಯಿಲ್ಲ ಭರತ ಖಂಡವು ಸ್ವತಂತ್ರವಾಗಿರುವುದಿಲ್ಲವೆಂದೂ ಸಂಗ್ರಾಮ ಮುಗಿಯುವವರೆಗೆ ಅಲ್ಲಿನ ಸರಕಾರವು ಸ್ವತಂತ್ರವಾಗಿ ಕೆಲಸಮಾಡಲು ಸಾಧ್ಯವಿಲ್ಲವೆಂದೂ ಸ್ಪಷ್ಟಪಡಿಸಿದಂತಾಗುತ್ತದೆ.

"ಈಗಿನ ಸ್ಥಿತಿಯಲ್ಲಿ ಭಾರತೀಯರು ರಕ್ಷಣೆ ಜವಾಬ್ದಾರಿ ಹೊರಬೇಕಾಗಿದ್ದರೆ ತಾವು ಸ್ವತಂತ್ರರೆಂದೂ, ತನ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವ ಭಾರ ತಮ್ಮದೆಂದೂ ಜನರು ಅರಿಯುವಂತಾಗಬೇಕಾದುದು ಅತ್ಯಗತ್ಯ ಈಗ ಜನರಲ್ಲಿ ಉತ್ಸಾಹವನ್ನು ಹುಟ್ಟಿಸುವುದು ಬಹಳ ಮುಖ್ಯವಾಗಿದೆ. ರಕ್ಷಣೆ ಅಧಿಕಾರವನ್ನು ಅವರಿಗೆ ಒಪ್ಪಿಸಿದ ಹೊರತು ಅವರಲ್ಲಿ ಉತ್ಸಾಹ ಹುಟ್ಟುವುದಿಲ್ಲ ಈ ಕಟ್ಟ ಕಡೇ ನಿಮಿಷದಲ್ಲಿ ಕೂಡ ಭಾರತೀಯರು ಬಗ್ಗಟ್ಟಾಗಿ ಕಾರ್ಯೋನ್ಮುಖರಾಗುವಂತೆ ಮಾಡಬಹುದು ಆದರೆ ರಕ್ಷಣೆ ಅಧಿಕಾರ ಕೊಡಬಹುದೊಂದೇ ಅದಕ್ಕೆ ದಾರಿ ಈಗಿನ ಇಂಡಿಯಾ ಸರಕಾರವೂ ಆದರ ಪ್ರಾಂತೀಯ ಶಾಖೆಗಳೂ ರಕ್ಷಣೆ ಜವಾಬ್ದಾರಿಯನ್ನು ಹೊರಲು ಅಯೋಗ್ಯವೆನಿಸಿಸಿವೆ. ಭಾರತೀಯ ಪ್ರಜೆಗಳು ಮಾತ್ರ ತಮ್ಮ ನಾಯಕರ ಮೂಲಕ ಈ ಜವಾಬ್ದಾರಿಯನ್ನು ಹೊರಬಲ್ಲರು. ಈಗ ಸಂಪೂರ್ಣ ಜವಾಬ್ದಾರಿಯನ್ನು ಭಾರತೀಯರಿಗೆ ಕೊಡುವುದರಿಂದ ಮಾತ್ರ ಇದು ಸಾಧ್ಯ.

"ಆದ್ದರಿಂದ ಬ್ರಿಟಿಷ್ ಸರಕಾರದ ಸಲಹೆಗಳನ್ನು ಸಮಿತಿಯವರು ಅಂಗೀಕರಿಸಲು ಸಿದ್ಧರಾಗಿಲ್ಲ.

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೯೯೭.

ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000, ರೂ.ಗಳಿಗೆ ಮೀರಿದೆ

ಈ ಕಂಪನಿಯವರು ಯಾವಯಾವ ತರಹದ ಜೀವ ವಿಮೆಯನ್ನು ವಿರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವುದರಲ್ಲಿ ನಿನಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚೆನ್ನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.

ಕೇಂದ್ರ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಜೋಂಬಾಯಿ.

ಬ್ರಾಂಚ್ ಕಚೇರಿ- ಡಿಸ್ಪೆಕ್ಟ್‌ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

ಕಣ್ಣಿಗೆ ಎಳ್ಳೆಣ್ಣೆ

ನಿಮ್ಮ ಉಪ್ಪಿನಕಾಯಿಯು ಚೆನ್ನಾಗಿರಬೇಕೆಂದರೆ
ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಉಪ್ಪಿನಕಾಯಿಯು ಮೆತ್ತಗಾಗುವುದಿಲ್ಲ.
,, ಮುಗ್ಗು ಯಾ ಬೂಜು ಹಿಡಿಯುವುದಿಲ್ಲ
,, ಹುಳಿವಾಸನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಇಲ್ಲದೆ ಅಮಿತವಾದ ರುಚಿಯನ್ನುಂಟು ಮಾಡುವುದು.

A. S. ಸೀಲನ್ನು ಗಮನಿಸಿ. ಕೊಳ್ಳಿರಿ. ಮೋಸಹೋಗಬೇಡಿರಿ

ದೊರೆಯುವ ಸ್ಥಳ- 1) ಎಂ. ಹುಚ್ಚೇಂಜಿರಾವು, ಎಂ. ವೆಂಕೋಬಿರಾವು, ತೆಂಗಿನಮರಿ, ಬಳ್ಳಾರಿ. ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ಮೂರವೈಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ರುಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಪರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಒಂದು ಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦	ಅಂಚೆ ಪಟ್ಟಿ ಪ್ರತಿ
ಕನ್ನಡ ನಮೋಪಸಿಷತ್ತುಗಳು	೦—೯—೦	ಸಪ್ತಕ ವ್ಯಾಪಾರಿಗಳ
ಶಿವಾಜಿಯ ಬೋಧೆ	೦—೪—೦	ಸಂ ಮಾಸ್ತಿ ಕನ್ನಡಕ
ಸುಮನೋರತಕ	೦—೧—೦	ಕೊಳ್ಳ ಸರಿಸೊ ಧಾರ
		ಧಾನಾದ ಕಮೀಷನ್

ಕಾಲವ ಸುಬ್ಬಣ್ಣ, ಮರ್ಚೆಂಟ್ಸ್, ಬಳ್ಳಾರಿ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ನೆಸ್ಟ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ವಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ತಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ ?

ಹಾಗಾದರೆ ಕೂಡಲೇ ಕಳಗಿನವರಲ್ಲಿ ನಿವೇದಗಳನ್ನು ತಿಳಿಯಿರಿ

ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಾಡಿಸಲಾಗುವುದು. ಪರೀಕ್ಷೆಯ ಪಾಸು ಪುಸ್ತಕಗಳು ಕಛೆ ಕಾಂಬರಿ ನಗ್ಗೆರೆ ದೊರೆಯುವುದಲ್ಲದೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯನ್ನೂ, ಉಚಿತವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಕ್ರಿಸ್ತ ಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin
THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local	2—0—0
Moffusil	3—0—0

6 Months

Local	1—4—0
Moffusil	2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri _____

_____

Printed at Vittal Press, Car Street Edited & Published by T. B. Keshava Rao, Bellary

Reg. No. M. 3937 ನಂದೇ ನಾತರಂ'

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಭೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೩೧ ಬಳ್ಳಾರಿ ಏಪ್ರೆಲ್ ೨೬ ನೇ ಭಾನುವಾರ ೧೯೪೩. ಟಿ. ಪಿ. ಕೇಶವರಾವ್

ಹಡಗುಗಳ ಮೇಲಿಂದ ಶತ್ರುವಿಮಾನಗಳನ್ನು ನಾಶಮಾಡುವಿಕೆ

ಫ್ರೆಂಚ್ ನೌಕೆಗಳನ್ನು ಜರ್ಮನಿಗೆ ಒಪ್ಪಿಸಿದರೇ ?

ಮಾಸ್ಕೋದಸುದ್ದಿ.

ಫ್ರೆಂಚ್ ನೌಕೆಗಳನ್ನು ಜರ್ಮನಿಗೆ ವಹಿಸಿಕೊಡುವ ವಿಚಾರವಾಗಿ ಎರಡು ದೇಶಗಳ ನಡುವೆ ಒಂದು ಒಪ್ಪಂದವಾಗಿದೆ. ೩ ಫ್ರೆಂಚ್ ಸಂಗ್ರಾಮ ನೌಕೆಗಳು, ಇತರ ವಿಧ 6 ನೌಕೆಗಳು, ವಿಮಾನಗಳನ್ನು ಹೊರುವ ಒಂದು ನೌಕೆ, 9 ಕಾವಲು ನೌಕೆಗಳನ್ನು ಜರ್ಮನಿಗೆ ಕೊಡಲಾಯಿತು. ಏಪ್ರಿಲ್ 14 ರಿಂದ ಒಪ್ಪಂದವು ಆಚರಣೆಗೆ ಬಂದಿತು.

ಟೌಲಾನ್ ಮತ್ತು ಮಾರ್ಸೇಲ್ಸ್ ಬಂದರುಗಳಲ್ಲಿ ನಪ್ಪಗೊಂಡ 10 ಡಿಸ್ಟ್ರಾಯರುಗಳೂ ಮತ್ತು ಇತರ ಹಲವು ಹಡಗುಗಳೂ ಇನೆಯೆಂದೂ, ಅವುಗಳನ್ನು ಸಪ ನಾಜಿಗಳ ವಶಪಡಿಸಲಾಗಿದೆಯೆಂದೂ ತಿಳಿಸಲಾಗಿದೆ.

ಸ್ಪಾನ್ಸಿನಲ್ಲಿ ಸರಕಾರದ ಬದಲಾವಣೆ

ಲನಾಲರಿಗೆ ಮುಖ್ಯಾಧಿಕಾರ.

ಸ್ಪಾನ್ಸಿನ ಮುಖ್ಯಾಧಿಕಾರಿಗಳಾದ ಜೆಬೆನರು ಎಲ್. ಲಾಲರಿಗೆ ತಮ್ಮ ಅಧಿಕಾರಗಳನ್ನೆಲ್ಲ ವಹಿಸಿಕೊಟ್ಟಿದ್ದಾರೆ. ಜನರೇ ಮುಖ್ಯಮಂತ್ರಿಗಳು ಅಡ್ಮಿರಲ್ ಡಾರ್ಲಾನರು ಭೂ-ಜಲ-ವಾಯುಸೇನೆಗಳ ಅಧಿಕಾರಿಗಳು. ಈ ಇಬ್ಬರು ಪ್ರಮುಖರೂ ಜರ್ಮನಿಯ ಮಿತ್ರರಿದ್ದು ಜರ್ಮನಿಗೆ ಸಹಾಯ ಮಾಡಬಹುದೆಂದು ಆಶಿಸಲಾಗಿದೆ.

ಬರ್ಮಾದ ಎಣ್ಣೆ ಭಾವಿಗಳನ್ನು ನಾಶಮಾಡಿದರು.

ಪಶ್ಚಿಮ ಬರ್ಮಾದ ಎಣ್ಣೆಯ ಕೇಂದ್ರವಾದ ಯೇನಾಂಗಾಂಗ ಎಂಬುದನ್ನು ಜಪಾನರು ಹಿಡಿಯುವ ಪೂರ್ವ ಎಣ್ಣೆಯ ಭಾವಿಗಳನ್ನೆಲ್ಲಾ ನಾಶಪೂಪಲಾಯಿ೦ದು ಅಧಿಕೃತ ಪ್ರಕಟನೆ ಹೊರಡಿಸಲಾಗಿದೆ. ಚೀನೀಯರು ಎರಡು ದಿನಗಳು ಕಾದಿ ಮತ್ತೆ ಅದನ್ನು ಆಕ್ರಮಿಸಿರುವರಂತೆ

ಬರ್ಮಾದಲ್ಲಿ ಬ್ರಿಟಿಪರು ಹಿಂದೆ ಸರಿಯುವ ಮುಂಚೆ 2 ಎಣ್ಣೆ ಭಾವಿಗಳನ್ನು ನಾಶಮಾಡಿದರೆಂದು ಹೇಳಲಾಗಿದೆ.

ಇರಾನ್

ಮಧ್ಯಪೂರ್ವದಲ್ಲಿರುವ ಪೆಟ್ರೋಲಿಣ್ಣಿಯ ಒಂದು ಕೇಂದ್ರ

ಉತ್ತರದಲ್ಲಿ ರಶಿಯಾದ ಕೋಕೆಸಸ್ ಪ್ರದೇಶ, ಪೂರ್ವದಲ್ಲಿ ಅಫ್ಘಾನಿಸ್ಥಾನ ಮತ್ತು ಹಿಂದುಸ್ಥಾನ, ದಕ್ಷಿಣದಲ್ಲಿ ಪರ್ಶಿಯ ಉಪಸಾಗರ ಮತ್ತು ಪಶ್ಚಿಮದಲ್ಲಿ ಇರಾಕ ಇವುಗಳು ಇರಾಣದ ಮೇರೆಗಳು.

ಇರಾಣದ ಕ್ಷೇತ್ರಫಲವು 6ಲಕ್ಷ 28 ಸಾವಿರ ಚದರು ಮೈಲುಗಳಷ್ಟಿದೆ. ಪ್ರಜಾ ಸಂಖ್ಯೆಯು ಒಂದು ಕೋಟಿ ಏವತ್ತು ಲಕ್ಷ ವಷ್ಟಿದೆ. ಇವರಲ್ಲಿ ಹೆಚ್ಚಿನವರು ಮುಸಲ್ಮಾನರಲ್ಲಿಯ ಶಿಯಾ ಪಂಗಡದವರು ಇಲ್ಲಿಯ ಮೂಲನಿವಾಸಿಗಳು ಆರ್ಯರು ಇರಾಣವು ಹಿಂದೆ "ಶಹಾ" ಎಂಬ ಪಂಗಡಿಗರ ಅರಸನ ಆಳಿಕೆಗೊಳಪಟ್ಟಿತ್ತು. ಈ ಗ ಕೆಲವು ದಿನಗಳ ಹಿಂದೆ ರೀಝಾಖಾನ ವಹಿಲವಿ ಎಂಬವನು ಇಲ್ಲಿ ರಾಜ್ಯಭಾರ ನಡೆಸುತ್ತಿದ್ದನು. ಟಿಹೆರಾನವು ಇರಾಣದ ಮುಖ್ಯಪಟ್ಟಣವಾಗಿದ್ದು 3 ಲಕ್ಷ 6 ಸಾವಿರ ಪ್ರಜೆಗಳಿಂದ ಕೂಡಿರುವುದು. 16 ಸಾವಿರ ಅಡಿ ಎತ್ತರವುಳ್ಳ, ನಯನಮನೋಹರವಾದ ಮಂಜಿನಿಂದ ಕೂಡಿದ ಮೌಂಟಡೆನೆವಾಂಡ ಎಂಬ ಪರ್ವತ ಶ್ರೇಣಿಯೊಂದು ಟಿಹೆರಾನದಲ್ಲಿದೆ ಆಲೆಕ್ಸಾಂಡರ ದಿಗ್ವೇಟನನ್ನು ಇವರೇ ಕೊಂದಿರುವರು.

ಪರ್ಶಿಯದ ಪತನ

ಪರ್ಶಿಯವು ಹಿಂದೆ ಪ್ರಬಲರಾಷ್ಟ್ರವಾಗಿತ್ತು ಆದರೆ 1900 ರಿಂದ ಮೊದಲ್ಗೊಂಡು ಅಲ್ಲಿಯ ಆಡಳಿತದಲ್ಲಿ ಮತಭೇದಗಳೂ ಒಳಜಗಳಗಳೂ ಉಂಟಾದುದರಿಂದ ಅದರ ಪ್ರಾಬಲ್ಯವು ಕುಂದುತ್ತ ಬಂದಿತು. 1906 ರಲ್ಲಿ ಪರ್ಶಿಯಕ್ಕೆ ಪ್ರತ್ಯೇಕವಾದ ರಾಜಶಾಸನವು ಕೊಡಲ್ಪಟ್ಟಿತು 1907ರ ಬ್ರಿಟಿಶ ರಶಿಯದವರೊಳಗಾದ ಒಪ್ಪಂದದಿಂದ ಪರ್ಶಿಯವನ್ನು ಎರಡು ಭಾಗಗಳಾಗಿ ವಿಂಗಡಿಸಿ ಬ್ರಿಟಿಶರೂ ರಶಿಯನ್ನರೂ ತಮ್ಮ ತಮ್ಮ ಪಾಲಿನವರಲ್ಲಿ ತಮ್ಮದೇ ಆದ ಹಕ್ಕು ಬಾಧ್ಯತೆಗಳನ್ನು ಸ್ಥಾಪಿಸಿದರು.

1914-18 ರ ಮಹಾಯುದ್ಧದಲ್ಲಿ ಪರ್ಶಿಯವು ತಾಟಸ್ಥ್ಯವನ್ನು ನಹಿಸಿದ್ದರೂ ಅದರ ಬಹುಭಾಗವನ್ನು ಬ್ರಿಟಿಶರು, ರಶಿಯನ್ನರು, ತುರ್ಕರು ಮತ್ತು ಜರ್ಮನರು ಆಕ್ರಮಣ ಮಾಡಿದರು ರಶಿಯಾದಲ್ಲಿ 1917ರಲ್ಲಿ ಕಮ್ಯೂನಿಸ್ಟರ ಕ್ರಾಂತಿ ಎದ್ದಿತು ಈ ಕ್ರಾಂತಿಯ ಪರಿಣಾಮದಿಂದಾಗಿ ರಶಿಯಾದಲ್ಲಿ ಕಮ್ಯುನಿಸ್ಟರ ಸರಕಾರವು ಸ್ಥಾಪಿಸಲ್ಪಟ್ಟಿತು. 1917ರಲ್ಲಿ ಪರ್ಶಿಯ ಮತ್ತು ರಶಿಯಾದೊಳಗಾದ ಒಪ್ಪಂದವನ್ನು ಟ್ರಾಟಸ್ಕಿಯು ಮುರಿದುಹಾಕಿದನಲ್ಲದೆ ಪರ್ಶಿಯದಲ್ಲಿ ರಶಿಯನ್ನರಿಗೆ ಯಾವ ಅಧಿಕಾರವೂ ಬೇಕಾಗಿಲ್ಲವೆಂದು ಸಾರಿದನು 1918ರಲ್ಲಿ ಪರ್ಶಿಯಾದಲ್ಲಿದ್ದ ರಶಿಯನ್ ಮತ್ತು ಆಂಗ್ಲ ಸೈನಿಕರನ್ನು ಆಯಾ ರಾಷ್ಟ್ರಪತಿಗಳು ಹಿಂತೆಗೆದುಕೊಂಡರು

ರೀಜಾಖಾನ

ಪರ್ಶಿಯನ್ ಕೊಸಾಕ್ ಸಂಗಡದ ಒಬ್ಬ ಸೈನಿಕನಾದ 40 ವರ್ಷ ಪ್ರಾಯದ ರೀಝಾಖಾನನು ಈ ಸಂದರ್ಭದ ಅವಕಾಶವನ್ನು ತೆಗೆದುಕೊಂಡನು ಅಂದು ಪರ್ಶಿಯಾದಲ್ಲಿ ಜಾಗೃತಿ ಹೊಂದಿದ ಸ್ವತಂತ್ರ ಸಂಗ್ರಾಮದ ಧುರೀಣತ್ವವನ್ನು ರೀಝಾಖಾನನು ವಹಿಸಿದನು ಅವನ ಧೈರ್ಯ ಸಾಹಸಗಳನ್ನು ಮೆಚ್ಚಿದ ಪರ್ಶಿಯಾದ ಮಂತ್ರಿಗಳು ರೀಝಾಖಾನನನ್ನು ಯುದ್ಧ ಮಂತ್ರಿಯನ್ನಾಗಿ 1920 ರಲ್ಲಿ ನಿಯಮಿಸಿದರು ತನ್ನ ಕಾರ್ಯದಕ್ಷತೆಯಿಂದ 1922 ರಲ್ಲಿ ರೀಝಾಖಾನನು ಮುಖ್ಯ ಮಂತ್ರಿಯ ಪದವಿಯನ್ನೇರಿದನು ಇವ್ವರಲ್ಲಿ ಪರ್ಶಿಯದ ರಾಜನಾದ ಶಹಾನು ಇರೋಪ್ಯ ರಾಷ್ಟ್ರಕ್ಕೆ ಪ್ರವಾಸವನ್ನು ಬೆಳೆಸಿದುದರಿಂದ ರೀಝಾಖಾನನು ರಾಜನ ಸಂಪೂರ್ಣ ಹೊಣೆಗಾರಿಕೆಯನ್ನು ವಹಿಸಿದನಲ್ಲದೆ ಪರ್ಶಿಯಾವ ಸೈನ್ಯಬಲವನ್ನು ಸಂಘಟನೆಮಾಡಿದನು ಶಾಂತತೆಯನ್ನೂ ಸಂಘಟನೆಯನ್ನು ಅಲ್ಲಿ ಸ್ಥಾಪಿಸುವನರಲ್ಲಿ 1942 ರೊ

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ೧೯೪೨.

ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್,

ಆಸ್ತಿಪಾಸ್ತಿಗಳು 5,60,00,000, ರೂ. ಗಳಿಗೆ ಮೀರಿದೆ

ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುವನ್ನು ವಿಚಾರಿಸುವದರಲ್ಲಿ ನಿಮಗೆ ಯಾವ ಪೆಚ್ಚೂ ಆಗುವುದಿಲ್ಲ; ನಿಮ್ಮ ಸಂಸಾರದ ರಕ್ಷಣೆಗೂ ನಿಮ್ಮ ಹಣದ ಸದ್ವಿನಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಜಾರಿಮಾಡಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ಏನೆ ಮಾಡಿರಿ.

ಕೇಂದ್ರ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.

ಬ್ರಾಂಚ್ ಕಚೇರಿ- ಡಿಸ್ಪೆನ್ಸರಿ ರೋಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

ಫ್ರಾನ್ಸಿನಲ್ಲಿ ಹೊಸಮಂತ್ರಿಮಂಡಲವು ಸ್ಥಾಪನವಾಗಿದೆ. ಇದು ಜರ್ಮನಿಗೆ ಅನುಕೂಲವಿರುವದೆಂದು ಹೇಳಲಾಗಿದೆ.

ಳಗಾಗಿ ರೀಝಾಖಾನನು ಕೃತಕೃತ್ಯನಾದನು ಪರ್ಶಿಯಾದಲ್ಲಿ ಸ್ವದೇಶಾಭಿಮಾನವೂ ಅದರೊಂದಿಗೆ ನವನಾಗರಿಕತೆಯೂ ಕೂಡಿ ಬೆಳೆಯುವಂತೆ ಬೇಕಾದ ಯುಕ್ತಿಯೋಜನೆಗಳನ್ನು ಕೈಕೊಂಡನು ಪರ್ಶಿಯಾದ ಮಂತ್ರಿಮಂಡಲದವರು 1925ರಲ್ಲಿ ರೀಝಾಖಾನನಿಗೆ ರಾಜಪದವಿಯನ್ನು ವಹಿಸಬೇಕಾಗಿ ಕೇಳಿಕೊಂಡರು ಇದನ್ನು ವಹಿಸಲಿಕ್ಕೆ ತುರ್ಕೋಮನ್ ಕಡ್ದಾರ ರಾಜವಂಶಜರು ರೀಝಾಖಾನನಿಗೆ ಆಡ್ಡಿಮಾಡಿದರು ಈ ಆಡ್ಡಿಗಳೆಲ್ಲವನ್ನೂ ಮೂಲೆ ಪಾಲುಮಾಡಿ ತಾ॥ 25-4-1926 ರಲ್ಲಿ ರೀಝಾಖಾನನು ರಾಜಪದನಿಯನ್ನೇರಿದನು

ಸುಧಾರಣೆಗಳು

ಅಂದಿನಿಂದ ರಾಜಮನೆತನದ "ಶಹಾ" ಬಿರುದು ಅವನ ಪಾಲಿಗೆ ಬಂದು ರೀಝಾ ಶಹಾನೆಂದು ಕರೆಯಲ್ಪಡತೊಡಗಿದನು. ರಾಜಕಾರಣದ ಸಂಪೂರ್ಣ ಹೊಣೆಯು ಇವನಕಡೆಗೆ ಬಂದನಂತರ ಪರ್ಶಿಯವು ಇತರ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲುವಂತೆ ಮಾಡಲು ಅನೇಕ ಉಪಯುಕ್ತ ಮತ್ತು ಸೂಕ್ತ ಯೋಜನೆಗಳನ್ನು ಯಶಸ್ವಿರೀತಿಯಿಂದ ಕೈಕೊಂಡು ಪೂರೈಸಿದನು. ಈ ರೀತಿಯ ಸುಧಾರಣೆಗಳನ್ನು ಮಾಡುವ ದಕ್ಕಾಗಿ ಅವನು ಅನೇಕ ಬಾರಿ ಮಾವನ್ಮಾದೀಯ ಮತ ಗುರುಗಳಾದ ಮುಲ್ಲಾ ಜನರೊಂದಿಗೆ ವೈಮನಸ್ಸನ್ನು ಕಟ್ಟಿಕೊಂಡನು. ರಾಜಸೂತ್ರವನ್ನು ಕಾಲಕಾಲಕ್ಕೆ ವಿರೋಧಿಸುತ್ತಿದ್ದ ತಿಇಟ್ ಪಂಗಡಿಗರ ಹೆಸರುಳಿಯುವಂತೆ ಮಾತಿದನು ಪರ್ಶಿಯವು ಹೀಗೆ ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವುದನ್ನು ಕಂಡು ನೆರೆಯ ರಾಷ್ಟ್ರವಾದ ತುರ್ಕಸ್ತಾನವು ೧೯೨೬ ರಲ್ಲಿಯೂ. ರಷಿಯ ಮತ್ತು ಅಫ್ಘಾನಿಸ್ತಾನಗಳು ೧೯೨೭ ರಲ್ಲಿಯೂ ಅದರೊಂದಿಗೆ ಒಪ್ಪಂದವನ್ನು ಮಾತಿಕೊಂಡವು. ೧೯೩೪ರಲ್ಲಾದ ಹೊಸದೊಂದು ಒಪ್ಪಂದದಿಂದಾಗಿ ತುರ್ಕಸ್ತಾನ, ಪರ್ಶಿಯ, ಇರಾಕ ಮತ್ತು ಅಫ್ಘಾನಿಸ್ತಾನಗಳೊಡನೆ ರಾಜಕೀಯ ಒಡಂಬಡಿಕೆಯಾಯಿತು. ೧೯೩೫ರಲ್ಲಿ ಪರ್ಶಿಯಾ ದೇಶದ ಹೆಸರು ಇರಾಣವೆಂದು ಮಾರ್ಪಡಿಸಲ್ಪಟ್ಟಿತು.

೧೯೪೧ ರಲ್ಲಿ ರೀಝಾಶಹಾನ ಮಗನಾದ ಇರಾಣದ ಯುವರಾಜನು, ಇಜಿಪ್ತದ ರಾಜನಾದ ಫರೂಕನ ಮಗಳನ್ನು ಮದುವೆಯಾಗಿ ಇರಾಣ ಇಜಿಪ್ತದೊಳಗೆ ಮೈತ್ರಿಯು ಬೆಳೆಯುವಂತೆ ಮಾಡಿದನು. ಇದರಿಂದಾಗಿ ಕೇವಲ ರಾಷ್ಟ್ರ ರಾಷ್ಟ್ರಗಳೊಳಗೆ ಹಿತಸಂಬಂಧವು ಬೆಳೆಯುತಲ್ಲದೆ ಮಹಮ್ಮದೀಯ ಮತದ ಎರಡು ಪಂಗಡಗಳಾದ ಸುನ್ನಿ ಮತ್ತು ಶಿಯಾ ಪಂಗಡಗಳೊಳಗೆ ಮೈತ್ರಿಯು ಬೆಳೆಯಲು ಅನುವು ದೊರೆಯಿತು. "I have made my country young and my self old" "ನಾನು ಮುದುಕನಾಗಿ ನನ್ನ ದೇಶವನ್ನು ತಾರುಣ್ಯಾವಸ್ಥೆಗೆ ಇಳಿಸಿದ್ದೇನೆ" ಎಂದು ರೀಝಾ ಶಹಾನು ಬಾರಿ ಬಾರಿಗೂ ಹೇಳುತ್ತಾನೆ.

ಹೀಗಿದ್ದರೂ ಇಂದಿಗೂ ಆ ದೇಶದಲ್ಲಿ ಸುಶೀದೆಗಳಿಗೆ ಪೋಲೀಸ ಸಹಾಯವಿಲ್ಲದೆ ಪ್ರವೇಶಿಸಲು ಸಾಧ್ಯವಿಲ್ಲ.

ರಾಜಸೂತ್ರ ಮತ್ತು ಅಭಿಮಾನ

ಪರ್ಶಿಯದಲ್ಲಿ 1906 ರಲ್ಲಿ ರೂಢಿಗೆ ಬಂದ ರಾಜಕಾರಣದ ನಿಯಮವು ಇನ್ನೂ ಪಾಲಿಸಲ್ಪಡುತ್ತಲಿದೆ ಈ ನಿಯಮವಾಳಿಗೆನ್ನನುಸರಿಸಿ ಇರಾಣದ ಮಂತ್ರಿಯನ್ನು ಮಂಡಲಕ್ಕೆ ಪ್ರತಿ 2 ವರ್ಷಕ್ಕೊಮ್ಮೆ ಮಂತ್ರಿಮಂಡಲಕ್ಕೆ ರಾಜನಿಗೆ ಸಲಹ ಸೂಚನೆಗಳನ್ನು ಕೊಡುವ ಅಧಿಕಾರ ವಿರುವುದಾದರೂ ಈ ಮನವಿಗಳನ್ನು ರಾಜನು ಪಾಲಿಸಲೇಬೇಕೆಂಬ ನಿಯಮವಿಲ್ಲ ಶಹಾನು ಸರ್ವತಂತ್ರ ಸ್ವತಂತ್ರನಾಗಿರುವನು. ಹೀಗಿದ್ದಾಗ್ಯೂ ಶಹಾನು ಇರಾಣದ ಪ್ರಗತಿಯನ್ನು ಸಾಧಿಸುವವರೆಲ್ಲಿ ಹಿಂದುಳಿಯಲಿಲ್ಲ 1921 ರಲ್ಲಿ ಇರಾಣದಲ್ಲಿ 5ನೆ ಸಾವಿರ ವಿದ್ಯಾರ್ಥಿಗಳುಳ್ಳ 600 ಶಾಲೆಗಳಿದ್ದವು. ಆದರೆ ಈಗ ಅಲ್ಲಿಯ ಶಾಲೆಗಳ ಸಂಖ್ಯೆಯು 5 ಸಾವಿರಕ್ಕೂ ಮೇಲ್ಪಟ್ಟು ವಿದ್ಯಾರ್ಥಿಗಳು ಓದುತ್ತಿರುವರು. ಜಗತ್ತಿನಲ್ಲಿರುವ ಮಹತ್ವದ ಎಣ್ಣೆಯ ಕೇಂದ್ರಗಳಲ್ಲಿ ಇರಾಣಕ್ಕೆ ಗಣನೀಯ ಸ್ಥಾನವಿದೆ. ಇರಾಣದ ಸೈನ್ಯವೂ ಆಧುನಿಕ ಯಂತ್ರೋಪಕರಣಗಳಿಂದ ಸುಸಜ್ಜಿತವಾಗಿರುವುದು. ರೀಝಾಶಹಾನ ದೇಶಾಭಿಮಾನವು ಎಷ್ಟೆಂದರೆ, ಇರಾಣದಲ್ಲಿರುವ ಯಾವ ಮತಸ್ಥನಾದರೂ ಬೇರೆ ಯಾವ ದೇಶಕ್ಕೆಯಲ್ಲಿಯೂ ತನ್ನ ಹೆಸರನ್ನು ಬರೆದ ಹಲಿಗೆ (ಬೋರ್ಡ) ಯನ್ನು ಹಾಕಕೂಡದೆಂದು ನಿಯಮ ಮಾಡಿದ್ದಾನೆ. ಇಷ್ಟೇ ಅಲ್ಲದೆ ರೀಝಾಶಹಾನು ಇತರ ವೈಷಮ್ಯಾಚಾರಗಳನ್ನು ಎದೆಂದಿಗೂ ತೆಗೆದುಕೊಳ್ಳಲೊಪ್ಪುವದಿಲ್ಲ. ಪರ್ಶಿಯಾದ ಹಾಲ್ವರರೇ ಆವನಿಗೆ ವೈಷಮ್ಯಾಚಾರ ನಡೆಸಬೇಕೆಂಬ ನಿಯಮವಿದೆ.

ಇರಾಣದ ಉತ್ಪತ್ತಿ

ಇರಾಣದ ಉತ್ತರ ಪ್ರದೇಶದಲ್ಲೆಲ್ಲ ಪೆಟ್ರೋಲಿಕ್ಷೇಯ ಗಣಿಗಳಿವೆ. 1938 ರಲ್ಲಿ ಈ ಗಣಿಗಳಿಂದ 103 ಲಕ್ಷ ಟನ್ ಪೆಟ್ರೋಲಿಕ್ಷೇಯು ದೊರೆತಿರುವುದು. ಅಂದಿನಿಂದ ಈ ಉತ್ಪನ್ನವು ಹೆಚ್ಚುತ್ತ ನಡೆದಿದೆ. ಈ ಉತ್ಪನ್ನವನ್ನು ಕೇಂದ್ರೀಕರಿಸಲು ಆ್ಯಂಗ್ಲೋ ಇರಾನಿಯನ್ ಆಯಿಲ್ ಕಂಪನಿಯೆಂಬ ಸಂಸ್ಥೆಯೊಂದಿದೆ, ಈ ಸಂಸ್ಥೆಯ ಮೂಲಧನದ ಹೆಚ್ಚಿನಪಾಲು ಬ್ರಿಟಿಶರದಾಗಿದೆ, ಪರ್ಶಿಯನ್ ಕೊಲ್ಲಿಯ ಉತ್ತರ ಕೊನೆಯಲ್ಲಿರುವ ಏಬೆಡಾನ ನೌಕಾನಿರ್ಮಾಣದಲ್ಲಿ ಇರಾಣದ ಎಣ್ಣೆಯನ್ನು ಶುದ್ಧಮಾಡುವ ಕೇಂದ್ರವಿದೆ, ಇರಾಣದ ವ್ಯಾಪಾರದ ಉತ್ಪನ್ನದಲ್ಲಿ ನೂರಕ್ಕೆ 40 ರಷ್ಟು ರಷಿಯದ್ದಿದೆ, ಜರ್ಮನಿ, ಬ್ರಿಟನ್, ಅಮೇರಿಕೆಯ ಸಂಯುಕ್ತ ಸಂಸ್ಥಾನ ಮತ್ತು ಹಿಂದುಸ್ಥಾನಗಳು ಇರಾಣದೊಂದಿಗೆ ವ್ಯಾಪಾರ ನಡೆಸುತ್ತಿವೆ,

ಉಗಿಬಂಡಿ

ಇರಾಣದಲ್ಲಿ ಒಂದೇ ಉಗಿಬಂಡಿಯ ಮಾರ್ಗವಿದೆ, ಇದೇ ಟ್ರಾನ್ಸ್ ಇರಾಣಿಯನ್ ರೇಲ್ವೆ, ಪರ್ಶಿಯನ್ ಕೊಲ್ಲಿಯ ಉತ್ತರ ದಂಡೆಯಲ್ಲಿರುವ ಬಂದರ ಶಹಪುರದಿಂದ ಹೊರಟ ಈ ಮಾರ್ಗವು ರಾಜಧಾನಿಯಾದ ಟೆಹೆರಾನದ ಮುಖಾಂತರವಾಗಿ ಕಾಸ್ಪಿಯನ್ ಸಮುದ್ರದ ದಕ್ಷಿಣ ದಂಡೆಯಲ್ಲಿರುವ ಬಂದರ ಶಹಾವನ್ನು ಮುಟ್ಟುವುದು, ರಷಿಯನ್ನರು ಈ ಉಗಿಬಂಡಿ ಮಾರ್ಗದ ಸಹಾಯವನ್ನು ಈಗ ಹೆಚ್ಚು ಹೆಚ್ಚಾಗಿ ಪಡೆಯಹತ್ತಿರುವರು, ಏಕೆಂದರೆ ಜರ್ಮನಿಗೆ ಉಳಿವ ಏಕಮಾತ್ರ ಸುರಕ್ಷಿತ ಮಾರ್ಗವು ಇದಾಗಿರುವುದು, ಕಾಸ್ಪಿಯನ್ ಸಮುದ್ರದಲ್ಲಿ ವೈರಿಯ ಜಲಾಂತರ್ಗಾಮಿಗಳ ಪ್ರಾಬಲ್ಯವಿರುವುದರಿಂದ ರಷಿಯನರು ಇರಾಣದ ರಾಜಧಾನಿಯಿಂದ ಇರಾಣ ರಷಿಯಾದ ಗಡಿಯಲ್ಲಿರುವ ಜುಲ್ಫಾದವರೆಗೆ ದಾರಿಯನ್ನು ಕಲ್ಪಿಸಿಕೊಂಡಿರುವರು, ಸುಮಾರು ಒಂದು ಸಾವಿರ ಮೈಲು ಉದ್ದವಿರುವ ಈ ರೈಲ್ ಮಾರ್ಗವನ್ನು ನಿರ್ಮಿಸಲು 300 ಲಕ್ಷ ಪವನುಗಳು ವೆಚ್ಚವಾಗಿವೆಯು,

ಜುಲ್ಫಾದಿಂದ ಹೊರಟ ಉಗಿಬಂಡಿ

ನೂರ್ಗವು ರಶಿಯಾದ ಕೇಂದ್ರವಾದ ಮಾಸ್ಕೋವನ್ನು ಸೇರುವುದು, ಬ್ರಿಟನ ನುತ್ತು ಹಿಂದುಸ್ಥಾನಕ್ಕೆರುವ ವಿಮಾನ ಮಾರ್ಗವೂ ಇರಾಕದಿಂದ ಮುಂದೆ ಇರಾ ಣದಲ್ಲಿರುವ ಬುಶಾಯರ್, ಜಾಸ್ಕಪಟ್ಟಣ ಗಳ ಮುಖಾಂತರ ಹಾಯ್ದು ಬರುವುದು, ಈ ಹಿಂದೆ ರೀಝಾಶಹಾನು ಜರ್ಮನರ ಲುಫ್ತಾನ ವಿಮಾನ ಸಂಘದವರಿಗೆ ಇರಾಣ ದಲ್ಲಿ ಆವಕಾಶವನ್ನು ಕಲ್ಪಿಸಿಕೊಟ್ಟಿದ್ದನು, ಆದರೆ ಜರ್ಮನರು ಈ ಸೌಲಭ್ಯದ ದುರು ಪಯೋಗವನ್ನು ಮಾಡಿಕೊಳ್ಳಹತ್ತಿದ್ದರಿಂ ದ ಈ ಸೌಲಭ್ಯವು ಕೆಲವೇ ವರ್ಷಗಳಲ್ಲಿ ಹಿಂದೆ ತೆಗೆದುಕೊಳ್ಳಲ್ಪಟ್ಟಿತು

ರಾಜ್ಯತ್ಯಾಗ

1940ನೇ ಜೂನ ತಿಂಗಳಲ್ಲಿ ಇರಾಕ ವಲ್ಲುಂಟಾದ ಗಲಭೆಯಿಂದಾಗಿ ಇರಾಕದ ರಾಜನಾದ ರಶೀದ ಅಲ್ಲಿಯು ಇರಾಣಕ್ಕೆ ಓಡಿಬಂದನು, ಇಂದಿನ ಯುದ್ಧಾರಂಭ ವಾದ ನಂತರ ಇರಾಣದ ರಾಜಕಾರಣದಲ್ಲಿ ಜರ್ಮನರು ಹೆಚ್ಚುಹೆಚ್ಚಾಗಿ ಕೈಹಾಕ ತೊಡಗಿದರು, ರಶಿಯಾ ಜರ್ಮನಿಗಳೊ ಳಗೆ ಯುದ್ಧವಾರಂಭವಾದ ನೇಲಂತೂ ಜರ್ಮನರು ಇರಾಣವನ್ನು ಹೆಚ್ಚಾಗಿ ಆತಿ ಸಹಕ್ತಿದರು, ರಶಿಯಾ ಮತ್ತು ಬ್ರಿಟನ್ ಗಳು ಕಾಲಕಾಲಕ್ಕೆ ಇರಾಣದ ರಾಜನಾಪ ರೀಝಾಶಹಾನಿಗೆ ಜರ್ಮನರನ್ನು ಇರಾಣ ದಿಂದ ಹೊರಗೆಹಾಕಬೇಕೆಂದು ಎಚ್ಚರಿಕೆ ಕೊಟ್ಟರೂ ಅವನು ಅದನ್ನು ಮಾನ್ಯಮಾ ಡದಿದ್ದುದರಿಂದ ತಾ|| 25-8-41 ನೇ ದಿನಸ ಬೆಳಿಗ್ಗೆ 10 ಘಂಟೆಗೆ ಬ್ರಿಟಿಶ ಮತ್ತು ರಶಿಯನ್ ಸೈನಿಕರು ಕ್ರಮವಾಗಿ ದಕ್ಷಿಣ ಮತ್ತು ಉತ್ತರದಿಂದ ಇರಾಣ ವನ್ನು ಪ್ರವೇಶಿಸಿದರು,

ಇರಾಣಿ ಸೈನಿಕರು ಈ ದಾಳಿಯನ್ನು ಪ್ರತಿಭಟಿಸಿದರೂ ಯಶಸ್ವಿಯಾಗಲಿಲ್ಲ, ತಾ|| 28-8-1941 ರೊಳಗಾಗಿ ಇರಾಣಿ ಸೈನಿಕರು ಹಿಂದೆ ಸರಿದರು, ಈ ಕ್ಷಣ ಪ್ರಸಂಗವನ್ನು ಎದುರಿಸಲು ಬೆದರಿ ತಾ|| 27-8-1941 ಕ್ಕೆ ರೀಝಾಶಹಾನು ತನ್ನ ರಾಜ್ಯಪದವಿಯನ್ನು ತನ್ನ ಮಗನಿಗೆ ಬಿಟ್ಟುಕೊಟ್ಟು ಇರಾಣವನ್ನು ತ್ಯಜಿಸಿದನು, ಇಂದು ಜರ್ಮನರು ಇರಾಣವನ್ನು ಆಶಿಸ ತೊಡಗಿರುವರು.

ಇರಾನಿಗೆ ಸಹಾಯ

ಈಗಾಗಲೇ ಇರಾಣದಲ್ಲಿ ಆಹಾರ ಸಾ ಮಗ್ರಿಗಳ ಕೊರತೆಯು ಅಧಿಕವಾಗಿ ಉಂ ಟಾಗಿರುವುದು, ಬ್ರಿಟಿಶರೂ ರಶಿಯನರೂ ಯೋಗ್ಯ ಸಹಾಯವನ್ನು ನೀಡುತ್ತಿರುವ ರಾಗಿ ಟೆಹರಾನಿನ ರೋಡಿಯೋ ವರ್ತ ಮಾನದಿಂದ ತಿಳಿಯುತ್ತದೆ, ಹಿಂದುಸ್ಥಾ ನದಿಂದ ಸಕ್ಕರೆ ಹಾಗೂ ಗೋಧಿಯು ಇರಾಣಕ್ಕೆ ಹೋಗಿರುವುದು, ರಶಿಯ ನ್ನರೂ ಗೋದಿ ಮತ್ತು ಇತರ ಸಾಮಗ್ರಿ ಗಳನ್ನು ಇರಾಣಕ್ಕೆ ಕಳುಹಿಸಿರುವರು, ಈ ರೀತಿಯ ಸಹಾಯಗಳು ಸಕಾಲಕ್ಕೆ ಇರಾ ಣಕ್ಕೆ ಒದಗಿಬಂದುದರಿಂದ ಅಲ್ಲಿಯ ಜನತೆ ಯು ಈ ತೊಂದರೆಯಿಂದ ಸ್ವಲ್ಪ ಮಟ್ಟಿ ರಿಸಿಕೊಂಡಿರುವುದು,

ಅಚ್ಚಿನ ರಾಷ್ಟ್ರಗಳಿಗೆ ಇರಾಣದ ಸುದ್ದಿ ಗಳನ್ನು ಕೊಟ್ಟುದಕ್ಕಾಗಿ ಆಜಾದನೆಯುನೇಂ ಟ್ 6 ಮಂದಿ ಇರಾಣದ ಪ್ರತಿನಿಧಿಗಳನ್ನು ಮೊನ್ನೆ ಮೊನ್ನೆ ದೇಶಭ್ರಷ್ಟರನ್ನಾಗಿ ಮಾಡಿರುವರು, ಪೆಟ್ರೋಲಿಯಂನ ಪ್ರಾಪ್ತಿ ಗಾಗಿ ಜರ್ಮನರು ಇದನ್ನೂ ಆಶಿಸಬಹು ದೆಂದು ಊಹಿಸಲಾಗಿದೆ.

(ಹು. ನಿಚೆಟ್ಟ)

ಜನರ ವಿಶ್ವಾಸವೇ
ಓರಿಯಂಟಲ್ ಕಂಪನಿಯನ್ನು
ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾಡಿದೆ.

ಜಾರಿಯಲ್ಲಿರುವ ವಿಮೆ 31—12—40 ರ ಕೋಟಿಗಿಂತಲು ಹೆಚ್ಚು
ನಿಧಿಯ ದ್ರವ್ಯ .... ,, 27½ ,,
ವಾರ್ಷಿಕ ಆದಾಯ ,, 4¾ ,,

ಅತ್ಯಂತ ಆಕರ್ಷಣೀಯವಾದ ನಮ್ಮ ವಿಮಾ ಯೋಜನೆಗಳ
ಪೂರ್ಣ ವಿವರಗಳನ್ನುಳ್ಳ ವಿಮಾ ಪುಸ್ತಕ
[Prospectus]ಕ್ಕಾಗಿ ಕೇಳಿಕೊಳ್ಳಿರಿ.

ದಿ ಪ್ರಾಂತ್ಯ ಸೆಕ್ರೆಟರಿ
ಓರಿಯಂಟಲ್
ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.,
ಆಲ್ಬಿಯನ್ ಸ್ಟ್ರೀಟ್, ಮದ್ರಾಸ್.

ಆಫೀಸ್ಸರು, ಓರಿಯಂಟಲ್ ಲೈಫ್ ಆಫೀಸು
312 ರೂಪರ್ಟ್ಸ್ ಗೇಟ್ ಬ್ರೂಸಪೇಟೆ ಬಳ್ಳಾರಿ.

ಮುಖ್ಯ ಕಾರ್ಯಾಲಯ,
ಬೊಂಬಾಯಿ.
ಹಿಂದೂಸ್ಥಾನದಲ್ಲಿ ಸ್ಥಾಪಿತ
1874

ಟೋಕಿಯೋದಲ್ಲಿ ಮುತ್ತಿಗೆ ಸೂಚನೆ.

ಕಳೆದವಾರ ಎರಡುಸಲ ಜಪಾನು ರಾಜ ಧಾನಿ ಟೋಕೇಯೋ ಮತ್ತು ಇತರ ನಗರ ಗಳ ಮೇಲೆ ವಿಮಾನ ದಾಳಿಯ ಸೂಚನೆ ಕೊಡಲಾಗಿತ್ತು. ಅಮೆರಿಕಾದ ವಿಮಾನ ವಾಹಕ ಹಡಗುಗಳಮೇಲೆ ವಿಮಾನಗಳನ್ನು ತರಲಾಗಿತ್ತೆಂದೂ ಅವು ದಾಳಿ ಮಾಡಿರ ಬೇಕೆಂಬೂ ಊಹಿಸಲಾಗಿದೆ. ನಷ್ಟದ ವಿವರ ಗಳು ಸಿಕ್ಕುತ್ತಾಗಿಲ್ಲ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಇಳಿಯವರೆಗೆ ಆದ ಪ್ರಗತಿ

ವಿವರಗಳು.	31-10-40	31-3-42
ಫಿಕ್ಸೆಡ್	ರೂ, Nil	108450-0-0
ಚಾಲ್ತಿ	,, 3,173	11150-0 0
ಸೇವಿಂಗ್ಸ್	,, 1,231	17489-0-0
ಇತರ	,, 40	2241-0-0
ಸಾಲಗಳು		
ಭಂಗಾರ	,, 520	33546-0-0
ಮಾಲು	,, Nil	40552-0-0
ಇತರ	,, Nil	37196-0-0
ಇತರ ಆಸ್ತಿ		
ಸರ್ಕಾರದ ಬಾಂಡುಗಳು	.,13,320	30476-0-0
ಬ್ಯಾಂಕುಗಳಲ್ಲಿರುವ ಹಣ	,.32,502	24951-0-0
ಕೈಯ್ಯಲ್ಲಿ ನಗದು	,, 5770	18819-0-0

ಒಟ್ಟು ವ್ಯವಹಾರದ ಮೊತ್ತ.

31—10—40.	31—3—42.
ರು. 1,14,774-0-0	ರು. 2,40,412-0-0

ಶಾಖೆಗಳು:—

1 ತಿಮ್ಮಸಮುದ್ರ 2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ

ಹೆಚ್. ಶೇಷಾರಾಮರೆಡ್ಡಿ., ಬಿ. ಎ. ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಬಳ್ಳಾರಿ ನಗರ

ಬಂಧ ಮುಕ್ತ ಕೈದಿಗಳ ಸಹಾಯ ಸಂಘಕ್ಕೆ [D P A Solity] ಜಿಲ್ಲಾ ಕಲೆಕ್ಟರವರು ಅಧ್ಯಕ್ಷರಾಗಿಯೂ-ಶ್ರೀ ಜೆ. ವೀರಣ್ಣಕಿಟ್ಟಿಯವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

ಪುರಸಭೆಯ ಕಟ್ಟಡವನ್ನು ಇಂಡಿರ್ಯ ಮೆಡಿಕಲ್ ಸರ್ವೀಸ್‌ಗಾಗಿ ಖಾಲಿ ನೂಡಿ ಪುರಸಭೆಯ ಕಛೇರಿಯನ್ನು ಮುನಿಸಿಪಲ್ ಹೈಸ್ಕೂಲಿಗೆ ತರಲಿರುವರು.

ಯಂ. ಯಸ್. ಯಂ. ಕಂಪನಿ ಆಡಿಟ ಆಫೀಸು ಇಲ್ಲಿಗೆ ಬಂದಿದೆ. ಸೂರಾರು ಗುಮಾಸ್ತರು ಬಂದಿರುವರು. ಎಲ್ಲಾ ಹೋಟಿಲಗಳೂ ತುಂಬಿವೆ. ಕಾಯಿಪಲ್ಲ ಆಹಾರ ಸಾಮಗ್ರಿಗಳ ದರವು ಏರುತ್ತಲಿದೆ. ಹಾಲು ಮೊಸರಿಗೆ ಹೆಚ್ಚು ನೀರು ಬೆರೆಸಲಾಗುತ್ತಿದೆ ಮನೆಗಳು ಬಾಡಿಗೆಗೆ ಸಿಕ್ಕುವುದೇ ಕಠಿಣವಾಗುತ್ತಲಿದೆ

ಕಾಮಲಾಪುರ [ಹೊಸಹೇಟಿ]

17-4-42ರಿಂದ 19-4-42ರ ವರೆಗೆ ನಡೆದ ಶ್ರೀ ನಗರೇಶ್ವರ ಸ್ವಾಮಿಯ ರಥೋತ್ಸವದ ಕಾಲವಲ್ಲಿ ಬೋರ್ಡ್ ಉನ್ನತ ಪ್ರಾಥಮಿಕ ಶಾಲೆಯ ರೆಡ್‌ಕ್ರಾಸ್ ಸಂಘದವರು ಆರೋಗ್ಯ ಶಾಖಾಧಿಕಾರಿಗಳ ಸೂಚನೆಗಳಂತೆ ರುಚ್ಚತೆಯ ಏರ್ಪಾಟುಮಾಡಿ ಜನ ಸಂದಣಿಯನ್ನು ವ್ಯವಸ್ಥೆಗೊಳಿಸಿದರು.

ಸರ್ ಸ್ಟಾಫರ್ಡ್ ಕ್ರಿಪ್ಸ್

ಕ್ರಿಪ್ಸರು ತಮ್ಮ ದೇಶವಾದ ಇಂಗ್ಲೆಂಡಿಗೆ ಪುನಃ ಮರಳಿಬಂದರೆಂಬ ಪ್ರಕಟವಾಗಿದೆ. 21ನೆಯ ತಾ. ನುಮ್ಮಮಂತ್ರಿಗಳೊಡನೆ ಮಾತಾಡಿದರು.

ಮೈಸೂರು ಕಾಂಗ್ರೆಸ್ ಸಮಾವೇಶ

ಈ ವರ್ಷದ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರು, ತಮ್ಮ ಅಧ್ಯಕ್ಷ ಭಾಷಣದಲ್ಲಿ ಜವಾಬ್ದಾರಿ ಸರ್ಕಾರದ ಧ್ಯೇಯ ಸದ್ಯದ ರಾಜಕೀಯ ಪರಿಸ್ಥಿತಿ ಮೈಸೂರು ಕಾಂಗ್ರೆಸ್‌ನ ಪ್ರಗತಿಯನ್ನು ಕುರಿತು ಸ್ಫೂರ್ತಿದಾಯಕವಾದ ಭಾಷಣವನ್ನು ಕೊಟ್ಟರು. ಜೆನ್ನಪಟ್ಟಣದ ಬಳಿಯ ಹಳ್ಳಿಯಲ್ಲಿ ನೆಹರೂನಗರವೆಂದು ನಾಮಧೇಯ ಮಾಡಿದ ಸುಂದರ ಮಂಟಪದಲ್ಲಿ ಈ ಸಮಾವೇಶವು ನಡೆಯಿತು ಮೈಸೂರಿನ ಎಲ್ಲಾ ಭಾಗಗಳಿಂದಲೂ ಕಾಂಗ್ರೆಸ್‌ನವರು ಬಂದಿದ್ದರು. ಖಾದಿ ಮತ್ತು ಗ್ರಾಮೋದ್ಯೋಗ ಪ್ರದರ್ಶನವು ಶ್ರೀ ದಿವಾಕರ ರವರಿಂದ ಪ್ರಾರಂಭವಾಯಿತು. ಜವಾಬ್ದಾರಿ ಸರ್ಕಾರದ ಧ್ಯೇಯ ಪ್ರತಿ ಬಂಧ ಕಾಲ್ಪೈಗಳ ಖಂಡನೆ ನಗೈರಿ ವಿಷಯಗಳನ್ನು ಕುರಿತು ತೀರ್ಮಾನಗಳಾದವು.

....

ಹಿಂದೂಸ್ಥಾನವನ್ನು ಮುತ್ತಿದರೆ ಜಪಾನಿನ ಸರ್ವನಾಶ.

ಶ್ರೀ ಸಿ. ರಾಜಗೋಪಾಲಾಚಾರ್ಯರವರ ಅಭಿಪ್ರಾಯ

ಹಿಂದೂಸ್ಥಾನಕ್ಕೆ ಜನರು ಊಹಿಸುವಷ್ಟು ಗಂಡಾಂತರವಿಲ್ಲೆಂತಲೂ ಜಪಾನಿನವರು ಇಲ್ಲಿ ಕಾಲಿಟ್ಟರೆ ಅವರ ಅಸಜಯವು ಖಂಡಿತವೆಂತಲೂ ಹಿಂದುಸಲ ಅವರು ಸೋತರೆ ಜಪಾನಿನವರ ಸರ್ವನಾಶವು ನಿಶ್ಚಯವೆಂತಲೂ ರಾಜಾಜಿಯವರು ಅಭಿಪ್ರಾಯ ಪಟ್ಟರು. ಈ ದೃಷ್ಟಿಯಿಂದ ಸೈನ್ಯಾಧಿಪತಿಗಳಾದ ನಾನೆಲ್ಲರ ಭಾಷಣವು ಪತ್ರಿಕೆಯೋಗ್ಯವಾಗಿವೆ ಯೆಂದರು.

ಜರ್ಮನರ ಸೋಲು

ಲೆನಿನ್‌ಗ್ರೇಡ ಪ್ರದೇಶವನ್ನಲ್ಲಿ ಜರ್ಮನರಿಗೆ ಸೋಲುಂಟಾಗುವ ಸುದ್ದಿಗಳೇ ವಿಶೇಷವಾಗಿ ಬರುತ್ತಲಿವೆ. ಕಳೆದ ವಾರ 3 ಸಾವಿರ ಜರ್ಮನರ ಸಂಹಾರವಾಯಿತಂತೆ

ಜಪಾನಿನ ಮುನ್ನಡೆ

ಸಾಲ್ವೀನ ನದಿಯ ತಂಡೆಗೆಂಟಿ ಜಪಾನಿನ ಮುನ್ನಡೆಯು ಜೋರಾಗಿದೆಯಂತೆ. ಅವರು ಅಸಂಖ್ಯಾತ ಟ್ಯಾಂಕು ವಿಮಾನಗಳೊಂದಿಗೆ ದಾಳಿಮಾಡುತ್ತಲಿರುವಂತೆ ಗೊತ್ತಾಗಿದೆ.

262

ಗ್ರಾಮ ಮತ್ತು ಪಟ್ಟಣ ರಸ್ತೆಗಳಲ್ಲಿ

ಹರಿಜನರು ಪಂಚಕಲಶ ಮೆರವಣಿಗೆಯಿಂದ ಹೋಗಬಹುದು.

ಬಳ್ಳಾರಿ ನ್ಯಾಯಾಧೀಶರ ತೀರ್ಪು

ಹರಿಜನರು-ಹಿಂದುಗಳು ಹಿಂದುಗಳಿಗಿರುವ ಎಲ್ಲಾ ಹಕ್ಕುಗಳೂ ಹರಿಜನರಿಗೂ ಉಂಟು. ಮೆರವಣಿಗೆ ಎಂದರೆ ಅದರ ಸ್ಫೂರ್ಣತೆಗೆ ಬೇಕಾದ ಎಲ್ಲಾ ಚಿಹ್ನೆ ಬಾಜಾ-ಬಜಂತ್ರಿಗಳೂ ಬಂದವು, ಇದಕ್ಕೆ ಎಷ್ಟೋ ಆಧಾರಗಳಿವೆ ಅಲಹಾಬಾದ್ ಹೈಕೋರ್ಟಿನಲ್ಲಿ ರಾಮಲೀಲಾ ಮೆರವಣಿಗೆಯ ಸಂಬಂಧ ನ್ಯಾಯಾಧೀಶರು ಕೊಟ್ಟತೀರ್ಪಿನಿಂದ ಹರಿಜನರ ಹಕ್ಕು ಧೃಡಪಟ್ಟಿದೆ. ಪ್ರತಿವಾದಿಗಳ ಹೇಳಿಕೆವಾದ ಮತ್ತು ಸಾಕ್ಷ್ಯಗಳಲ್ಲಿ ಹುರುಳಿಲ್ಲ ಸಾಮಾನ್ಯ ಮನುಷ್ಯಯೋಗ್ಯ ಹಕ್ಕುಗಳು ಜಾರಿಗೆ ಬರದಂತೆ ತಡೆಯಲು ಪ್ರತಿವಾದಿಗಳು ಯತ್ನಿಸುತ್ತಿರುವುದು ಕಂಡು ಬಂದಿದೆ. ಈ ಕಾರಣ ಹರಿಜನರು ಎಲ್ಲಾ ಬೀದಿಗಳಲ್ಲೂ ಇತರರಂತೆ ಮೆರವಣಿಗೆಯಿಂದ ಹೋಗಲು ಹಕ್ಕುಂಟು " ವಾದಿಗಳಾದ ಹರಿಜನರ ಖರ್ಚನ್ನು ಪ್ರತಿವಾದಿಗಳಾದ ಪಲ್ಲೀದ ಅಡಿನಪ್ಪ, ಮೊಡ್ಡಪ್ಪ, ಮತ್ತು ಕಂದಾರೆ ಭೀಮಪ್ಪನವರು ಕೊಡಬೇಕು ಈ ಅರ್ಥವುಳ್ಳ ತೀರ್ಪನ್ನು ಬಳ್ಳಾರಿ ಡಿಸ್ಟ್ರಿಕ್ಟ್ ಅಡಿಷನಲ್ ಮುನ್ಸೀಫ್‌ರಾದ ಶ್ರೀ ರಘುರಾಮಯ್ಯನವರು ಹರಿಜನರು ಮತ್ತು ಇತರರಿಗೆ ನಡೆದ ಒಂದು ಸೋಕ ವ್ಯಾಜ್ಯೆಯಲ್ಲಿ ತೀರ್ಪುಕೊಟ್ಟರು.

ಪೂರ್ವಚರಿತ್ರೆ

ಬಳ್ಳಾರಿ ನಗರಕ್ಕೆ 12 ಮೈಲಿ ದೂರದಲ್ಲಿರುವ ಕುಡುತಿನಿ ಗ್ರಾಮದಲ್ಲಿ ಹರಿಜನರು ತಮ್ಮ ಕೇರಿಯಲ್ಲಿ ದೇವಸ್ಥಾನವನ್ನು ಕಟ್ಟಿ 12 ವರ್ಷಗಳಾಯಿತು. ದೇವರ ಪ್ರತಿಷ್ಠೆಯನ್ನು ಶ್ರೀ ನಾಗಲಿಂಗಪ್ಪನವರಿಂದ ತಯಾರಿಸಲಾಯಿತು ಅವರವರ ಊರಿನಲ್ಲಿವೆ. ಹರಿಜನ ಕೇರಿಯು ಊರಿಗೆ ಸಮೀಪದಲ್ಲಿದೆ. ಸದರಿ ಪ್ರತಿಮೆಯನ್ನು ಮೆರವಣಿಗೆಯಿಂದ ಬೀದಿಗಳಲ್ಲಿ ತೆಗೆದು ಕೊಂಡು ಹೋಗಬಾರದೆಂಬುದು ಕೆಲವರ ವಾದ ವಿರೋಧಿಗಳೆಲ್ಲಾ ಹೆಚ್ಚಿಗಿರುವುದು ಲಿಂಗಾಯತ್ತ ವರ್ಗದಲ್ಲಿ. ಊರಿನ ಇತರ ಯಾವ ಜಾತಿಯವರಿಗೂ ವಿರೋಧವಿಲ್ಲ. ಬಹು ಸಂಖ್ಯಾಕರು ಹರಿಜನರಿಗೆ ಅನುಕೂಲ ವಿದಾರೆ ಸೌಹಾರ್ದಭಾವದಿಂದಿದಾರೆ. [ಹರಿಜನರಿಗೂ ಊರಿನ ವಿರೋಧೀ ಸವರ್ಣೀಯರಿಗೂ ರಾಜಮಾಡಿಸಬೇಕೆಂದು ಶ್ರೀಗಳಾದ ಬೆಲ್ಲೊಣ ಭೀಮರಾವು, ಡಾಕ್ಟರ್ ಲಕ್ಷ್ಮಿದೇವಿ, ನಾಗಭೂಷಣಂ, ಕೇಶವರಾಯರು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಹರಿಜನರು ಮೆರವಣಿಗೆಯಲ್ಲಿ ಬರಲೇ ಬಾರದೆಂದೂ ತಾವು ದೇವರನ್ನು ಊರಿನ ಆಗಸಿಗೆ ತಂದುಕೊಡುವುದಾಗಿಯೂ ನೋದಲು ಹಟಹಿಡಿದರು.

ಈ 12 ವರ್ಷಗಳಲ್ಲಿ ಹರಿಜನರು ದೇವರನ್ನು 3....4 ಸಲತರಲು ಪ್ರಯತ್ನಿಸಿ ವಿಫಲರಾದರು. ಹರಿಜನರು ಪ್ರಯತ್ನಿಸಿದಾಗಲೆಲ್ಲಾ ಕೆಲ ಹಿಂದೂ ಮುಖಂಡರು ಪೋಲೀಸ್ ಮತ್ತು ಮ್ಯಾಜಿಸ್ಟ್ರೇಟರ ಸಹಾಯದಿಂದ ಶಾಂತಿಭಂಗವಾಗುವದೆಂಬ ಕಲಮಿನ ಮೊರೆಹೊಕ್ಕು ನೊರವಣಿಗೆಯನ್ನು ತಡೆದರು ಇದರಿಂದ ಹರಿಜನರಿಗೆ ಸಾವಿರಾರು ರೂ. ಗಳ ಲುಕ್ಸಾನಾಗಿರುವುದರಲ್ಲಿ ಆಶ್ಚರ್ಯವಿಲ್ಲ.

'ಹರಿಜನರಿಗೂ ಕಸಗುಡಿಸುವವರಿಗೂ ಭೇದವಿದೆ ಕಸಗುಡಿಸುವವರನ್ನು ನೀರು ತುಂಬಲು ಬಿಡುವುದಿಲ್ಲ. ಇವನ್ನು ಸರಿಪಡಿಸಿದರೆ ಅವರಿಗೆ ಮೆರವಣಿಗೆಯಲ್ಲಿ ಹೋಗಲು ಬಿಡುತ್ತೇವೆ ಎಂದು ವಿರೋಧಿಗಳಂದರು ತಕ್ಷಣ ಶ್ರೀ ಭೀಮರಾವು ವರ್ಗೀಕರಿಯವರೆ ಕಸಗುಡಿಸುವವರಿಗೆ ನೀರು ತುಂಬಲು ಅಪ್ಪಣೆಕೊಡಿಸಿದರು. ಇಷ್ಟಾದರೂ, ಶ್ರೀ ಪಲ್ಲೀದ ಅಡಿನೆಪ್ಪ ಮತ್ತು ಅವರ ಸ್ನೇಹಿತರಿಗೆ ಸಮಾಧಾನವಾಗಲಿಲ್ಲ.

ಇನ್ನು ಈ ಚರ್ಚೆ-ಸಂಧಾನಗಳಿಂದ ಉಪಯೋಗವಿಲ್ಲೆಂದು ಸರ್ಕಾರಕ್ಕೆ ನೋಟೀಸು ಕೊಟ್ಟು ಹರಿಜನರ ಹಕ್ಕನ್ನು ಸಾಧಿಸಲು ಸಹಾಯಮಾಡಬೇಕೆಂದು ಕೋರಲಾಯಿತು "ನೀವು ಕೋರ್ಟಿನಲ್ಲಿ ಸಂಚಕಲಶದಿಂದ ಮೆರವಣಿಗೆಯಲ್ಲಿಹೋಗಬಹುದೆಂದು ಡಿಕ್ರೀಪಡೆಯಿರಿ, ನಾವು ಅವನ್ನು ಮಾನ್ಯಮಾಡಿ ಮೆರವಣಿಗೆ ತೆಗೆದುಕೊಂಡು ಹೋಗಲು ತಕ್ಕ ಒಂದೋಬಸ್ತು ಕೊಡುತ್ತೇವೆ" ಎಂದು ಬಳ್ಳಾರಿ ಕಲೆಕ್ಟರ್‌ರವರು ಸರಕಾರದ ಪರವಾಗಿ ಉತ್ತರಕೊಟ್ಟರು.

ಈ ಕಾರಣ ಹರಿಜನರು ತಮ್ಮ ಹಕ್ಕನ್ನು ಧೃಡಪಡಿಸಿಕೊಳ್ಳಲು ಕೋರ್ಟಿಗೆ ಹೋಗಬೇಕಾಯಿತು. ಕೋರ್ಟಿನಲ್ಲಿ ಸುಮಾರು ಎರಡು ವರ್ಷಗಳವರೆಗೂ ಈ ವ್ಯಾಜ್ಯವು ನಡೆದು, ಕೊನೆಯಲ್ಲಿ ಹರಿಜನರ ಪರವಾಗಿ ತೀರ್ಪುಕೊಡಲಾಯಿತು.

ಹರಿಜನರ ಪರವಾಗಿ ಶ್ರೀಗಳಾದ ಭೀಮರಾವ್, ಎಂ ಎಲ್. ಸಿ - ಡಿ. ಗೋವಿಂದದಾಸ್ ಎಂ. ಎಲ್. ಎ. ಟಿ. ಬಿ. ಕೇಶವರಾವ್, ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿ.

ವರ್ಗೀಕರಿಯವರೂ, ವಿರೋಧಿಗಳ ಪರವಾಗಿ ಉಜ್ಜನೀಮಹಾಸಂಸ್ಥಾನ್ಯಾಯಾಧೀಶರಾದ ಗುರುಶಿದ್ಧ ಶಾಸ್ತ್ರಿ, ಆಲೂರು ಮಲೆಗೌಡ ಅಡಿವಪ್ಪ ವರ್ಗೀಕರಿಯವರು ಸಾಕ್ಷ್ಯಕೊಟ್ಟರು ಹರಿಜನರ ಪರವಾಗಿ ಶ್ರೀ ಎ ವೀರಾಸ್ವಾಮಿ, ಬಿ. ಎ. ಬಿ ಎಲ್ ರವರೂ ವಿರೋಧಿಗಳ ಪರವಾಗಿ ಶ್ರೀ-ಶ್ರೀನಿವಾಸಯ್ಯರ್‌ರವರೂ ವಕೀಲರಾಗಿ ವಾದಿಸಿದರು.

ಮದ್ರಾಸು ಪರಿಸ್ಥಿತಿ

ಮದ್ರಾಸು ನಗರದ ಅನೇಕ ಭಾಗಗಳಲ್ಲಿ ಸೈನಿಕರು ಕೇಂದ್ರಗಳನ್ನೇರ್ಪಡಿಸುತ್ತಿರುವರೆಂದೂ ಅದರಿ ನಗರವನ್ನು ಖಾಲಿಮಾಡಿಗೆ ಒಪ್ಪಿಸುವುದಿಲ್ಲವೆಂದೂ ಹೇಳಲಾಗಿದೆ. ಜನರು ತಮ್ಮತಮ್ಮ ಕಾರುಗಳನ್ನು ಒಯ್ಯಲು ಯಾವ ಆಡ್ಡಿಯೂ ಇಲ್ಲವೆಂದು ಸರಕಾರದವರು ಪ್ರಕಟಿಸಿದ್ದರು ಮದರಾಸಿನಿಂದ 5 ಲಕ್ಷ ಗಳಿಗಿಂತಲೂ ಹೆಚ್ಚಿಗೆ ಊರುಬಿಟ್ಟು ಹೋಗಿರುವರು. ಹಣ್ಣು ಹಂಪಲು ತರಕಾರಿಗೂ ಆಹಾರ ಸಾಮಗ್ರಿಗಳಿಗೂ ಬಹಳಕಷ್ಟವಾಗಿದೆ. ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಕಡಮೆಯಾಗುತ್ತಲಿದೆ. ಹೋಟೇಲುಗಳನ್ನೂ, ಆಹಾರ ಸಾಮಗ್ರಿಗಳ ಅಂಗಡಿಗಳನ್ನೂ ತೆರೆಯಲು ಸರ್ಕಾರದವರು ಪ್ರೋತ್ಸಾಹಕೊಡುತ್ತಲಿರುವರು. ಮದ್ರಾಸ್ ಪ್ರಾಂತದ ಇತರ ಜಿಲ್ಲಾ ನಗರಗಳಲ್ಲಿ ಮನೆಬಾಡಿಗೆಗಳು ಅತಿಶಯವಾಗಿ ಏರುತ್ತಲಿವೆ.

ಸ್ಟಾರ್ ಸಿನೆಮಾದಲ್ಲಿ ತೋರಿಸಲ್ಪಡುತ್ತಿರುವ

ಸತ್ಯಭಾಮ

(ತೆಲುಗು ವಾಕ್ಚಿತ್ರ)

ಸುಂದರ ಮತ್ತು ಪುನರ್ಜೋಡಿಸಿದ ದೃಶ್ಯಗಳು
ಸ್ವರ್ಗೀಯ ಗಾನ
ರೋಮಾಂಚಕ ಕಥಾವಿಷಯಗಳು.

ಕಥೆ ಸಾರಾಂಶ

ಸ್ಯಮಂತಕವೂ 8 ಖಂಡಿ ಭಂಗಾರವನ್ನು ಕೊಡುತ್ತಿದ್ದ ಶಮಂತಕಮಣಿಯನ್ನು ಸೂರ್ಯಭಗವಾನನಿಂದ ಪೊಂದಿ ಅದಕ್ಕೋಸ್ಕರ ಒಂದು ಮಹೋತ್ಸವವನ್ನು ಏರ್ಪಡಿಸಿ ಎಲ್ಲಾ ರಾಜರನ್ನೂ ಆಹ್ವಾನಿಸಿದನು ಈ ಉತ್ಸವಕ್ಕಾಗಿ ಬಂದಿದ್ದ ಶ್ರೀಕೃಷ್ಣನನ್ನು ಸತ್ರಾಜಿತನ ಮಗಳಾದ ಸತ್ಯಭಾಮೆಯು ನೋಡಿ ಪ್ರೇಮಿಸಿದಳು, ಸತ್ಯಭಾಮೆಗಾಗಿ ಆಗಲೇ ಏರ್ಪಟ್ಟ ವರನಾದ ಶತಧನ್ವ ಮತ್ತು ಅಕ್ರೂರ ಮಿತ್ರ ಜಯಸೇನ ಇವರು ಕೃಷ್ಣ-ಸತ್ಯಭಾಮೆಯರ ವೀಕ್ಷಣೆಗಳನ್ನು ನೋಡಿ ಸತ್ರಾಜಿತನನ್ನು ಸಿಟ್ಟಿಗೆಬ್ಬಿಸಿ ಕೃಷ್ಣನು ಸತ್ಯಭಾಮೆ ಮತ್ತು ಶಮಂತಕಮಣಿಗಳನ್ನು ಅಪಹರಿಸಲು ಹೊಂಚು ಹಾಕಿದ್ದಾನೆಂದು ಹೇಳಿದರು. ಪೂಜಾಕಾಲದಲ್ಲಿ ಶಮಂತಕಮಣಿಯಿಂದ ಸಾಮ್ರಾಜ್ಯಕ್ಕೆ ಉಪಯೋಗವಿಲ್ಲವೆಂಬ ಕೃಷ್ಣನ ಮಾತುಗಳಿಂದ ಸತ್ರಾಜಿತನಿಗೆ ಮತ್ಸರ ಕೋಪವುಂಟಾಗಿ ಶತಧನ್ವನೊಡನೆ ಕೂಡಲೇ ಮದುವೆ ಮಾಡಲು ನಿಶ್ಚಿತನಾಗುವನು

ಕೃಷ್ಣ-ಸತ್ಯಭಾಮೆಯರು ಚಂದ್ರಿಕಾ ಎಂಬ ದಾಸಿಯ ಸಹಾಯದಿಂದ ಪುಷ್ಪೋದ್ಯಾನದಲ್ಲಿ ಕಲೆಯುವರು. ಶೀಘ್ರವಾಗಿ ನುದುವೆಯಾಗಲು ಕೃಷ್ಣನು ಅಭಯವನ್ನು ಕೊಡುವನು

ಮಣಿಯನ್ನು ಧರಿಸಿ ಬೇಟೆಗೆಹೋದ ಸತ್ರಾಜಿತನ ತಮ್ಮನಾದ ಪ್ರಸೇನನು ತನ್ನ ಶಿಬಂದಿಯೊಂದಿಗೆ ಹಿಂದಿರುಗಲೇ ಇಲ್ಲ. ಶಮಂತಕಮಣಿಯ ಆಶೆಯಿಂದ ಕೃಷ್ಣನು ಇವರನ್ನು ಕೊಂದಿರಬೇಕೆಂಬ ನಿಂದೆಯು ಎಲ್ಲೆಲ್ಲೂ ಹಬ್ಬಿತು ರುಕ್ಮಿಣಿ ಬಲರಾಮರು ಕೂಡ ಕೃಷ್ಣನನ್ನು ಸಂತಯಿಸಮಾಡಹತ್ತಿದರು ಈ ಅಪವಾದದಿಂದ ಪಾರಾಗಲು ಶಮಂತಕಮಣಿಯನ್ನು ಕರಲು ಕೃಷ್ಣನು ಹೊರಡುವನು

ನೊವಲುದ್ದೇಶಿಸಿದಂತೆ ಸತ್ರಾಜಿತನು ಶತಧನ್ವನಿಗೆ ತನ್ನ ಮಗಳನ್ನು ಕೊಡಬಾರದೆಂದು ಆಶಿಸುವನು. ಇದನ್ನು ಕಾಯುತ್ತಿದ್ದ ಜಯಸೇನನು ಚಂದ್ರಿಕೆಯ

ಬಳ್ಳಾರಿ ಪೇಟೆ ಧಾರಣೆ

24-4-42 ಶುಕ್ರವಾರ.

ಬಂಗಾರ ತೊಲ 1ಕ್ಕೆ		46-12-0
ಸಾವರಿನ್		38-0-0
ಬೆಳ್ಳಿ 100 ತೊಲ ರೂ.		72-0-0
ಹತ್ತಿ ಮುಂಗಾರಿ 12 ಮಣಕ್ಕೆ		12-0-0
ಹತ್ತಿ ಫಾರಂ		22-0-0
ಅಕ್ಕಿ 1 ರೂ. ಗೆ	4½ರಿಂದ	5 ಸೇರು
ಬೇಳೆ ,,		4 ,,
ಗೋಧಿ ,,		4 ,,
ಜೋಳ ,,	12 ,,	14 ,,
ರಾಗಿ ,,		19 ,,
ಸಜ್ಜೆ ,,		17 ,,
ನೆಲಗಡಲೆ ...	...	1-1-6
ಮೆಣಸಿನಕಾಯಿ 9 ಮಣ	25 ರಿಂದ	30
ಸಕ್ಕರೆ(ಮುದ್ದೆ) 9 ಮಣ	39	ರೂ
ಬೆಲ್ಲ ...	12 ರಿಂದ	20 ರೂ
ಜುಮ್ಮಿ ಎಂಟೆ ಡಬ್ಬಿ		4-12-0

ಬಳ್ಳಾರಿ ಜಿಲ್ಲೆಯ ಕ್ಷಾಮಕೇಂದ್ರಗಳು

(21-4-42ನೆಯ ದಿನ)

Rel'ef Works

ಅದವಾನಿ ತಾಲೂಕು	ಗಂಡಸರು	ಹೆಂಗಸರು	ಮಕ್ಕಳು	ಉಚಿತಾಹಾರ ಒಟ್ಟು ಹೊಂದುತ್ತಿರುವ	
ಕುಬಳದಿನ್ನೆ ಸೂಲಸಲ್ಲಿ	1832	2602	829	1120	638.3
ನಂದನಪಂಪನಗೆಲದಿನ್ನೆ	1255	2515	501	1138	5409
ಪಿಪ್ಪಲಾಪುರುಪ್ಪೈನಂದಿನ್ನೆ	1106	2002	648	1464	5220
ಚಿಲಕಲದೊಣ (6-4-42 ಪ್ರಾರಂಭ)	718	1318	374	700	3110

Test Works

ಆಲೂರು ತಾಲೂಕು				
ಹೆಬ್ಬಟಂ (15-4-42	138	408	124	670

Dt Board Work

ಹಜ್ಜೊಳ್ಳಿ 18ನೆಯ ತಾ ಪ್ರಾರಂಭ	470	963	551	1984

ಈವಾರ ಜಿಲ್ಲೆಯ ಎಲ್ಲಾ ಕೇಂದ್ರಗಳಲ್ಲಿ ಸುಮಾರು 23 ಸಾವಿರ ಜನರು ಸಹಾಯ ಹೊಂದಿದರು. ಸೈನ್ಯಕ್ಕೆ ಭರ್ತಿಮಾಡುವ ಜನರೂ ಮತ್ತು ಇತರ ಅಧಿಕಾರಿಗಳೂ ಕೆಲಕೇಂದ್ರಗಳಿಗೆ ಹೋಗಿದ್ದರಿಂದಲೂ, ಇದರಿಂದ ಜನರು ಭಯಪಟ್ಟು ಕಾರಣ ಸಂಖ್ಯೆಯು ಸದರಿ ಕೇಂದ್ರಗಳಲ್ಲಿ ಕಡಮೆಯಾಯ್ತೆಂದು ನಮಗೆ ತಿಳಿದುಬಂದಿದೆ.

ಮೂಲಕ ಸತ್ಯಭಾಮೆಯನ್ನು ನೋಡಲು ಪೇಕ್ಷಿಸುವನು. ಒಂದು ತೋಟದಲ್ಲಿ ಸತ್ಯಭಾಮೆಯನ್ನು ನೋಡುವ ಉದ್ದೇಶ ಜಯಸೇನ ಮತ್ತು ಶತಧನ್ವರಿಬ್ಬರೂ ಏಕಕಾಲಕ್ಕೆ ಕೂಡುವಂತೆ ಮಾಡಿ ಅವರೇರ್ಪಡಿಸಿ ಅಲ್ಲಿಗೆ ಸತ್ರಾಜಿತನನ್ನು ಕರೆತರುವಳು. ಸತ್ರಾಜಿತನು ಇಬ್ಬರನ್ನೂ ದೇಶದಿಂದ ಹೊರಡಿಸುವನು. ಅವರಿಬ್ಬರೂ ಸ್ನೇಹಿತರಾಗಿ ಸತ್ರಾಜಿತನನ್ನು ಕೊಂದು ಸತ್ಯಭಾಮೆಯನ್ನು ಕಪ್ಪೊಯ್ಯಲು ಯೋಚಿಸುವರು.

ಕೃಷ್ಣನು ಜಾಂಬವಂತನ ಗುಹೆಗೆ ಹೋಗಿ ಅಲ್ಲಿ ಅವನ ಮಗಳಾದ ಜಾಂಬವತಿಯನ್ನು ಮೋಹಗೊಳಿಸಿ ತನ್ನ ವೇಣುಗಾನಕ್ಕೆ ಆಕೆಯು ಕುಣಿಯುವಂತೆ ಮಾಡುವನು. ಜಾಂಬವಂತನು ಬಂದು ತನ್ನ ಗದೆಯಿಂದ ಕೃಷ್ಣನೊಡನೆ ಹೋರಾಟಕ್ಕೆ ನಿಲ್ಲುವನು. ಹೋರಾಟವು 26 ದಿನ ನಡೆಯುವುದು. ಇತ್ತ ಜಯಸೇನ ಶತಧನ್ವರು ಸತ್ಯಭಾಮೆಯನ್ನು ಕಪ್ಪೊಯ್ಯುವರು ಸತ್ರಾಜಿತನು ವಿರಲಚಿತ್ತನಾಗುವನು.

ಬಾಕಿ ಅಂಕಣಗಳನ್ನು ಪಟದಮೇಲೆ ನೋಡಿರಿ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಕಾರ್ಯಕಾರೀ ಮಂಡಲದ ಸಭೆ

ಪ್ರಾಂತೀಯ ಕಾಂಗ್ರೆಸ ಸಮಿತಿಯ ಕಾರ್ಯಕಾರೀ ಮಂಡಲದ ಸಭೆಯು ತಾ| 19-4-42ನೇ ದಿನದ ಧಾರವಾಡದಲ್ಲಿ ಡಾ|| ಆರ್ ನಾಗನಗೌಡ ಇವರ ಅಧ್ಯಕ್ಷತೆಯಲ್ಲಿ ನೇರಿತು. ಸಭೆಗೆ ಶ್ರೀಮತಿ ಕೃಷ್ಣಾಬಾಯಿ ಪಂಚಾಕರ, ಶ್ರೀ ದತ್ತಾತ್ರೇಯ ಕರಮರಕರ, ನರಸಣ್ಣಾ ಜೋಷಮಸಿ, ಕೆ ಕೆ ಪಿ. ರಾಮಪ್ಪೋಪ್ರಸಾಳ್ ಹಾಗು ಶ್ರೀ ಚನಬಸಪ್ಪ ಅಂಬಲಿ ಇವರು ಬಂದಿದ್ದರು ಹೋದ ಸಭೆಯ ಕಾರ್ಯಕಲಾಪಗಳು ಓದಿ ಸ್ವೀಕೃತವಾದಮೇಲೆ ಕೆಳಕಂಡ ವಿಷಯಗಳು ಪಾಸಾದವು.

(1) **ರಾಜೀನಾಮೆ:** ಶ್ರೀ ವಿ ಎಸ್ ನಾಯಕ್ ಇವರು ಪ್ರಾಂತೀಯ ಕಾರ್ಯಕಾರೀ ಮಂಡಲಕ್ಕೆ ಕೊಟ್ಟ ತಮ್ಮ ರಾಜೀನಾಮೆಯನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಈ ಸಭೆಯು ವಿನಂತಿಮಾಡಿಕೊಳ್ಳುತ್ತದೆ

(ಬ) ಡಾ|| ನಾ. ಸು. ಹರ್ಡೀಕರ ಇವರು ಪ್ರಾಂತೀಯ ಸ್ವಯಂಸೇವಕ ಉಪಸಮಿತಿಯ ಸದಸ್ಯತ್ವಕ್ಕೆ ಕೊಟ್ಟ ರಾಜೀನಾಮೆಯನ್ನು ಈ ಸಭೆಯು ಸ್ವೀಕರಿಸುತ್ತದೆ. ಮತ್ತು ಆ ಸ್ಥಳದಲ್ಲಿ ಬಳ್ಳಾರಿಯ ಶ್ರೀ ಟಿ. ಸುಬ್ರಹ್ಮಣ್ಯಂ ಇವರನ್ನು ಈ ಸಭೆಯು ನಿಯಮಿಸುತ್ತದೆ.

(ಕ) ಶ್ರೀಮತಿ ಉಮಾಬಾಯಿ ಕುಂದಾಪೂರ ಇವರು ಪ್ರಾಂತೀಯ ಸ್ತ್ರೀ ನಿಭಾಗಕ್ಕೆ ಕೊಟ್ಟ ರಾಜೀನಾಮೆನ್ನು ಈ ಸಭೆಯು ಸ್ವೀಕರಿಸಿ ಅವರ ಸ್ಥಳದಲ್ಲಿ ಶ್ರೀಮತಿ ಕೃಷ್ಣಾಬಾಯಿ ಪಂಚೀಕರ ಇವರನ್ನು ನಿಯಮಿಸುತ್ತದೆ

(ಡ) ಶ್ರೀ ರಾ ಶ್ರೀನಿವಾಸರಾವ ಇವರು ಕಚೇರಿಯ ತಮ್ಮ ಕೆಲಸಕ್ಕೆ ಕೊಟ್ಟ ರಾಜೀನಾಮೆಯನ್ನು ಈ ಸಭೆಯು ಸ್ವೀಕರಿಸುತ್ತದೆ ಮತ್ತು ಅವರು ಈ ವರೆಗೆ ಒಳ್ಳೇ ನಿಷ್ಠೆಯಿಂದ [ಕೆಲಸಮಾಡಿದ್ದಕ್ಕೆ ಈ ಸಭೆಯ ತನ್ನ ಹೃತ್ಪೂರ್ವಕ ಸಮಾಧಾನ (~~appreciation~~) ನನ್ನು ವ್ಯಕ್ತಮಾಡುತ್ತದೆ

(2) **ನಿಧಿಸಂಗ್ರಹ:-** ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಗೆ ಪ್ರತಿಯೊಬ್ಬ ಸ್ಥಾಪಿಕಸಂಸ್ಥೆಗಳಲ್ಲಿಯು ಕಾಂಗ್ರೆಸ ಪಕ್ಷದ ಸದಸ್ಯರು ಕನಿಷ್ಟ ಹತ್ತುರೂಪಾಯಿ (~~on-non~~) ಕಾಣಿಕೆಯನ್ನು ಸಲ್ಲಿಸಬೇಕೆಂಬ ಈ ಸಭೆಯು ಆ ಸದಸ್ಯರಿಗೆ ಬಿನ್ನವಿಸುತ್ತದೆ

(3) **ಶ್ರೈಷ್ಟ ಯೋಜನೆ:-** ಕ್ರೈಸ್ಟ ಯೋಜನೆಯು ಅಸಮಾಧಾನಕಾರಕ ವಿಷಯದಿಂದ ಕಾಂಗ್ರೆಸ ವರ್ಕಿಂಗ ಕಮಿಟಿಯು ಅದನ್ನು ನಿರಾಕರಿಸಿದ್ದು ಒಳ್ಳೇದಾಯಿತೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ

(4) **ಆಕ್ರಮಣಗಾರರ ವಿಷಯುಕ್ತ ಭೋರಣೆ:** ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸು ಅಹಿಂಸಾತ್ಮಕ ಪ್ರತೀಕಾರದ ಧೋರಣೆಕ್ಕೆ ಅಂಟಿಕೊಳ್ಳುವದು ಯುಕ್ತವೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ

(5) **ಆಭಾಗ್ರಾನೋದ್ಯೋಗ ಸಂಘದ ಕೆಲಸ:-** ಅಪಿಲ ಭಾರತ ಗ್ರಾನೋದ್ಯೋಗ ಸಂಘದ ಕಾರ್ಯವನ್ನು ಹಿಂದುಸ್ತಾನದಲ್ಲಿ ಹೆಚ್ಚು ವ್ಯವಸ್ಥಿತವಾಗಿ ನಡೆಯುಬೇಕೆಂಬ ಯೋಜನೆಯ ಪ್ರಕಾರ ಕರ್ನಾಟಕ ಪ್ರಾಂತದ ಸಲುವಾಗಿ ಮಾಡುವ ವ್ಯವಸ್ಥೆಯ ವಿಷಯಕ್ಕೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯೊಡನೆ ವಿಚಾರ ವಿನಿಮಯ ಮಾಡಿ, ಮಾಡುವದರಿಂದ ಈ ಕಾರ್ಯವು ಒಳ್ಳೇ ಯಶಸ್ವಿಯಾಗಿ ನಡೆಯಲು ಅನುಕೂಲವಾಗುವದೆಂದು ಈ ಸಭೆಯ ನಂಬ್ರವಾದ ಅಭಿಪ್ರಾಯವಿದೆ. ಈ ಅಭಿಪ್ರಾಯವನ್ನು ಭಾ. ಗ್ರಾ. ಸಂಘದ ಕಾರ್ಯದರ್ಶಿಗಳಿಗೆ ಪ್ರಾಂತೀಯ ಸಮಿತಿಯ ಕಾರ್ಯಕರ್ತಿಗಳು ತಿಳಿಸಬೇಕೆಂದು ಈ ಸಭೆಯು ಬಿನ್ನವಿಸುತ್ತದೆ

ಪಾಕಿಸ್ತಾನ ಧೋರಣೆ ಸ್ವೀಕರಿಸಿರಿ; ಲೀಗಿನಿಂದ ಕೂಡಿದ ಮಂತ್ರಿವರ್ಗ ಸ್ಥಾಪಿಸಿರಿ.

ಶ್ರೀ ಸಿ ರಾಜಗೋಪಾಲಾಚಾರ್ಯರ ಅಭಿಪ್ರಾಯ

ಭವಿಷ್ಯದಲ್ಲಿ ರಾಜ್ಯಾಂಗಬದಲಾವಣೆಗಳಾಗಬೇಕಾದಾಗ ಮುಸ್ಲಿಂಲೀಗಿನವರು ಪಟ್ಟುಹಿಡಿದರೆ ಅವರು ಸಂಯುಕ್ತ ಹಿಂದುಸ್ತಾನದಿಂದ ಬೇರೆಯಾಗಲಿ, ಸದ್ಯದ ಗಂಡಾತರ ಪರಿಸ್ಥಿತಿಯಲ್ಲಿ ಲೀಗಿನಿಂದ ಕೂಡಿದ ಮಂತ್ರಿವರ್ಗವು ಕೊನೆಯಪಕ್ಷ ಮುದ್ರಾಸಿನಲ್ಲಾದರೂ ಸ್ಥಾಪಿತವಾಗಬೇಕು ಎಂಬ ಧೋರಣೆಯ ನಿರ್ಣಯವು ಮುದ್ರಾಸ ಪ್ರಾಂತದ ಕಾಂಗ್ರೆಸ್ ಪಾರ್ಟಿ ಸಭೆಯಲ್ಲಿ ರಾಜಗೋಪಾಲಾಚಾರಿಯವರಿಂದ ಸೂಚಿತವಾಗಿ ಸ್ವೀಕೃತವಾಯಿತು. ಅಲಹಾಬಾದಿನಲ್ಲಿ ಕೂಡುವ ಎ. ಸಿ ಸಿ ಸಭೆಯಲ್ಲಿ ಈ ನಿರ್ಣಯವು ಮಂಡಿಸಲ್ಪಡುವುದು.

ರಾಜಾಜಿಯವರ ನಿರ್ಣಯವು ಅಯೋಗ್ಯವಾದ್ದಿರುವುದೆಂದು ಇಡೀ ಹಿಂದೂಸ್ತಾನದಲ್ಲೆಲ್ಲಾ ಆಂದೋಳನವಾಗಿ ಮುಖ್ಯರು ಕಟುತರವಾದ ಟೀಕೆಗಳಿಗೆ ಆರಂಭಿಸಿರುತ್ತಾರೆ.

ಪ್ರಜಾಪ್ರಭುತ್ವ ರಾಷ್ಟ್ರಗಳಾದ ಇಂಗ್ಲೆಂಡ್ ಅಮೆರಿಕಾಗಳಿಗೆ ಸಹಾಯಮಾಡುವುದು ಯೋಗ್ಯವಾದ್ದಿರುವದೆಂದು ಕರ್ನಾಟಕದ ಜನರು ಭಾರತೀಯರಿಗೆ ಆಕಾರಣಾಭಿನ್ನ ಭಾಷಣದಮೂಲಕ ವಿನಂತಿ ಮಾಡಿರುವರು.

ಬರ್ಮಾಗಡಿಯಲ್ಲಿ ಮಾಂಡಲೆ ಮುಂತಾದ ಭಾಗಗಳನ್ನೆಲ್ಲ ಜಪಾನರು ಬಾಂಬುಗಳ ಮಳೆಯನ್ನು ಸುರಿಸುತ್ತಲಿರುವರು.

ಟಾಂಗ್ಕಿಂಜ ಎಂಬ ಬರ್ಮಾದ ಈಶಾನ್ಯ ಭಾಗದಿಂದ ಬ್ರಿಟಿಷು ಸೈನ್ಯಗಳು ಹಿಂದಕ್ಕೆ ಕಿರುಗಿನೆಯೆಂಬಂ ಚೈನೀಯರು ಸತ್ತಲ್ಪಡುವ ಮುಂಚೆ ಹಿಂದಕ್ಕೆ ಸರಿದಿದ್ದಾರೆಂದೂ ಜಪಾನರ ಒತ್ತಡವು ಹೆಚ್ಚಿಗಿರುವದೆಂದೂ ತಿಳಿದುಬಂದಿದೆ.

'ಬೊಂಬಾಯಿ ಸೆಂಟಿನಲ್' ಪತ್ರಿಕೆಯವರು ಅಕ್ಷೇಪಾರ್ಹ ವಿಷಯಗಳನ್ನು ಪ್ರಕಟಿಸಿದರೆಂಬ ಕಾರಣದಮೇಲೆ ಅದನ್ನು ಒಂದು ತಿಂಗಳವರಿವಿಗೆ ನಿಲ್ಲಿಸಲಾಗಿದೆ.

ಬಳ್ಳಾರಿ ಜಿಲ್ಲಾ ಬೋರ್ಡು ಶಾಲೆಗಳ

ಉಪಾಧ್ಯಾಯ ಸಂಘಗಳು.

ಕಾರ್ಯದರ್ಶಿಗಳಿಗೆ ಮಹತ್ವ ಸೂಚನೆ

ಬಳ್ಳಾರಿ ಜಿಲ್ಲಾ ಬೋರ್ಡು ಶಾಲೆಗಳಲ್ಲಿ ಅನೇಕ ವರ್ಷಗಳಿಂದ ನವಕರಿಮಾಡು ತ್ತಿದ್ದು ಸಂಬಳದ ಹೆಚ್ಚಳಕ್ಕೆ (Increment) ಅರ್ಹರಾದ ಉಪಾಧ್ಯಾಯರಿಗೆ ಬೋರ್ಡಿನಿಂದ ಇಂಕ್ರಿಮೆಂಟು ದೊರೆತಿರುವುದಿಲ್ಲ. ಅಲ್ಲದೆ ಯುದ್ಧವಾರಂಭವಾದ ಮೇಲೆ ಆಹಾರಪದಾರ್ಥಗಳೆಲ್ಲ ತುಟ್ಟಿಯಾಗಿ ಕುಟುಂಬೀಕರಾದ ಬಡ ಉಪಾಧ್ಯಾಯರಿಗೆ ವರ್ಣಿಸಲಸದಳವಾದ ಕಷ್ಟಗಳು ಪ್ರಾಪ್ತವಾಗಿವೆ. ಈ ಗಾಗಲೇ ಅನೇಕ ಉಪಾಧ್ಯಾಯ ಸಂಘಗಳವರು ನಿರ್ಣಯಗಳನ್ನು ಮಾಡಿ ಮೇಲ್ಪಟ್ಟ ಅಧಿಕಾರಿಗಳಿಗೆ ಹೇಳಿಕೊಂಡಿರುತ್ತಾರೆ. ಉಪಾಧ್ಯಾಯರ ಹಿತದ ದೃಷ್ಟಿಯಿಂದ ಎಲ್ಲಾ ಉಪಾಧ್ಯಾಯ ಸಂಘಗಳವರೂ ಇಂಕ್ರಿಮೆಂಟು ಮತ್ತು ನಾರ ಆಲೋಯಣಸುಗಾಗಿ ನಿರ್ಣಯಗಳನ್ನು ಮಾಡಿ ಜಿಲ್ಲಾಬೋರ್ಡು ಅಧ್ಯಕ್ಷರು ಡೆಪ್ಯುಟಿ ಇನ್‌ಸ್ಪೆಕ್ಟರವರು, ಮತ್ತು ಡಿ. ಇ. ಒ. ರವರಿಗೆ ಕಳುಹಿಸಲು ಪ್ರಾರ್ಥನೆ

ಅನೇಕ ಉಪಾಧ್ಯಾಯ ಸಂಘಗಳ ಸಮ್ಮತಿಯನ್ನು ಪಡೆದು ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರು ಮತ್ತು ಡಿ. ಇ. ಒ. ರವರನ್ನು ಕಂಡು ಹೇಳಿಕೊಳ್ಳುವುದಕ್ಕಾಗಿ ಒಂದು ಶಿಷ್ಟಮಂಡಲವನ್ನೇರ್ಪಡಿಸಲು (Deputation) ನಿಶ್ಚಿತವಾಗಿದೆ 1942 ನೆಯ ಮೇ ತಿಂಗಳ 3 ನೆಯ ವಾರದಲ್ಲಿ ಜಿಲ್ಲಾಬೋರ್ಡು ಸಭೆಯು ಸೇರುವ ದಿನ (—5—1942 ವಾರ) ಜಿಲ್ಲೆಯಲ್ಲಿನ ಎಲ್ಲಾ ಭಾಗಗಳಿಂದಲೂ ಉಪಾಧ್ಯಾಯ ಸಂಘಗಳ ಪ್ರತಿನಿಧಿಗಳು ಬಳ್ಳಾರಿಗೆ ಬರಬೇಕು. ತಾಲೂಕು ಸಂಘಗಳಲ್ಲಿ ತಾಲೂಕಿನಿಂದ ಇಬ್ಬರು ಪ್ರತಿನಿಧಿಗಳು ಬಂದರೆ ನಾಕು ತಾಲೂಕು ಸಂಘಗಳು ಇಲ್ಲದಿದ್ದರೆ, ಅವು ಸರಿಯಾಗಿ ಕೆಲಸಮಾಡುತ್ತಿರುವುದು ಇಲ್ಲವಾದರೆ, ಉಪಾಧ್ಯಾಯ ಸಂಘಗಳವರೇ ಪ್ರತಿನಿಧಿಗಳನ್ನು ಕಳುಹಿಸಬೇಕು. ಸಂಘಗಳವರು ಸದರಿ ಪ್ರತಿನಿಧಿಗಳ ಎಲ್ಲಾ ಖರ್ಚುಗಳನ್ನೂ ಭರಿಸಬೇಕು. ಬೋರ್ಡು ಮಿಟಿಂಗಿನ ತೇದಿಯು ನಿಶ್ಚಿತವಾದೊಡನೆಯೇ 'ನವಭಾರತ'ದಲ್ಲಿ ತಿಳಿಸಲಾಗುತ್ತದೆ

ಅಧ್ಯಕ್ಷರು:- ಜಿಲ್ಲಾಬೋರ್ಡು ಸದಸ್ಯರು ಮತ್ತು ಇತರ ಅಧಿಕಾರಿಗಳಿಗೆ ಅರ್ಪಿಸಲು ಒಂದು ವಿನ್ನವತ್ತಳೆ (Memorandum)ಯನ್ನು ಇಂಗ್ಲೀಷ್, ಕನ್ನಡ, ತೆಲುಗು ಭಾಷೆಗಳಲ್ಲಿ ತಯಾರಿಸಲು 'ನವಭಾರತ'ದ ಸಂಪಾದಕರಾದ ಶ್ರೀ ಟಿ ಬಿ ಕೇಶವರಾಯರನ್ನು ಕೇಳಿಕೊಳ್ಳಲಾಗಿದೆ. ವಿನ್ನವತ್ತಳೆ ವಗೈರೆ ಖರ್ಚುಗಳಿಗಾಗಿ ಎಲ್ಲಾ ಉಪಾಧ್ಯಾಯ ಸಂಘಗಳವರೂ ಒಂದೊಂದು ರೂಪಾಯಿ "ನವಭಾರತ" ಸಂಪಾದಕರಿಗೆ ಮನಿಆರ್ಡರು ಮಾಡಬೇಕು

ಮದ್ರಾಸು ಪ್ರಾಂತದ ಇತರ ಜಿಲ್ಲೆಗಳಲ್ಲಿರುವಂತೆ ನಮ್ಮ ಜಿಲ್ಲೆಯಲ್ಲೂ ಒಂದು ಜಿಲ್ಲಾ ಉಪಾಧ್ಯಾಯರ ಸಂಘವನ್ನು ಸ್ಥಾಪಿಸಬೇಕಾಗಿದೆ ಈ ಕಾರಣ ಸಂಘಕ್ಕೊಬ್ಬರಂತೆ ಪ್ರತಿನಿಧಿಗಳು ಬರಲೇಬೇಕೆಂದೂ ಬರುವ ಮುಂಜೆ ಸಂಪಾದಕರಿಗೆ ರೂ 1-0-0 ಕಳುಹಿಸಬೇಕೆಂದೂ ಆಗ್ರಹದ ಪ್ರಾರ್ಥನೆ.

ವ್ಯವಸ್ಥಾಪಕರು,
(ಬಳ್ಳಾರಿ ಜಿಲ್ಲಾ ಬೋರ್ಡು ಪಾಠಶಾಲೋಪಾಧ್ಯಾಯರ ಪರವಾಗಿ)

ವೆಂಕಟೇಶ್ವರ ವಾಚನಾಲಯ
ತಿರುಗುಪ್ಪೆ

ಈ ವಾಚನಾಲಯದ ಚಟುವಟಿಕೆಗಳಲ್ಲಿ ಪುರ ಜನರು ಶ್ರದ್ಧೆ ವಹಿಸುತ್ತಿರುವುದು ಆನಂದದಾಯಕ ವಿಷಯವಾಗಿದೆ. ಗಳನೆಯ ತಾರೀಕು ಸೆಂಟು ರಾಮರಾಯರ ಕೇರ್ತನಾಕಾಲಕ್ಷೇಪವಾಯಿತು. ೧೭ ನೆಯ ತಾ. ಡಾ. ಮಾರ್ಲರವರ ಅಧ್ಯಕ್ಷತೆಯಲ್ಲಿ ಸಭೆಕೂಡಿ ವಾಚನಾಲಯದ ನಿಬಂಧನೆಗಳು ಏರ್ಪಾಟಾದವು. ವಾಚನಾಲಯವು ಪ್ರತಿ ನಿತ್ಯ ಸಾಯಂಕಾಲ ೪ ರಿಂದ ೯ ರವರೆಗೆ ಆದಿತ್ಯವಾರ ಮಾತ್ರ ೮ ರಿಂದ ೧೧ ಮತ್ತು ಸಂಜೆ ೪ ರಿಂದ ೯ ರ ವರೆಗೆ ತೆರೆದಿಡಲ್ಪಡುವುದು. ವಾರ್ಷಿಕ ಚಂದಾ ಒಂದು ರೂ. ಕೊಡುವ ಸದಸ್ಯರಿಗಲ್ಲದೆ ಬೇರೆಯವರು ಪುಸ್ತಕ ಪತ್ರಿಕೆ ಮನೆಗೆ ಕೊಂಡೊಯ್ಯಲು ಬರುವಂತಿಲ್ಲ.ವಗೈರೆ. ಈ ಮಹಾಶಯರು ಪತ್ರಿಕೆಗಳನ್ನು ತರಿಸಲು ದ್ರವ್ಯ ಸಹಾಯ ಮಾಡಿದ್ದಾರೆ ಶ್ರೀ ದೇ. ರಾಮರೆಡ್ಡಿ-ಆಂಧ್ರ ಪತ್ರಿಕೆ 2 ಕೋ. ಹನುಮಪ್ಪನಾಯ್ಕರು ಇಂಡಿಯನ್ ಎಕ್ಸಪ್ರೆಸ್ 3 ಡಾ. ಮಾರ್ಲರು ನವಯುಗ - ನವಭಾರತ - ನವಚೇತನ + ಜಿ ರಾಮಣ್ಣನವರು ಪ್ರಜಾಮತ 5 ಬಾಲಯ್ಯನವರು, ಆಂಧ್ರ ಉಗಾದಿ ಸಂಚಿಕೆ 6 ಎಂ. ಹನುಮಂತಪ್ಪನವರು, ಹಿಂದೀ ವಿಕ್ರಮಮಿತ್ರ ವಾರಪತ್ರಿಕ 7 ದೊಡ್ಡನ ಗೌಡ್ರು ಕಥಾಂಜಲಿ 8 ಧರ್ಮಸಿಂಗರು. ಆಂಧ್ರಜ್ಯೋತಿ ವಾರ ಪತ್ರಿಕೆ. 9 ಓಬಳ ಶಾಸ್ತ್ರಿಗಳು ವಿಕಟವಿನೋದಿನಿ 10 ಶಿ.ಯಂ ನರಸಯ್ಯನವರು, ಶ್ರೀಕೃಷ್ಣಪರ್ಯಾಯ ಪ್ರಕಾಶಿನಿ. ಇವೂ ಅಲ್ಲದೆ ಕೆಲ ದಿನ ಮತ್ತು ವಾರಪತ್ರಿಕೆಗಳನ್ನು ತರಿಸಲಾಗುತ್ತಿದೆ. ಇವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು.

ಅಂದಮಾನದಮೇಲೆ ಕಳೆದ ವಾರ ಮುತ್ತಿಗೆ ನಡೆಯಿತು. ಮೂರು ಶತ್ರು ವಿಮಾನಗಳು ನಾಶವಾಗಿರಬೇಕೆಂದು ಅಂದಾಜು ಮಾಡಲಾಗಿದೆ.

ಇರಾನದೇಶದ ಮುಖ್ಯಾಂತರ ರಷ್ಯಾಕ್ಕೆ ಮಿತ್ರಪಕ್ಷದವರು ಯುದ್ಧಸಾಮಗ್ರಿಗಳನ್ನು ಸಾಗಿಸುತ್ತಲಿರುವರೆಂದು ತಿಳಿಬಂದಿದೆ.

ಆಸ್ಟ್ರೇಲಿಯಾದ ವಿನಾಶಿಕೆ ಹಡಗಾದ 'ವಾಂಪೈರ್' ಎಂಬುದು ಮುಳುಗಿತೆಂದು ಕರ್ಟಿನರವರು ಹೇಳಿದರು.

ಪಾಂಕಾಂಗ್‌ನಲ್ಲಿ ಬ್ರಿಟಿಷ ರಾಯಭಾರಿಗಳಾದ ಮಿ ಆರ್ಥರ್‌ಜಾನ್‌ಸ್ಟೋರ್ಟನ ರವರು ಏಪ್ರಿಲ್ 6ನೆಯ ತಾರೀ ಸತ್ತರೆಂದು ಪ್ರಕಟವಾಗಿದೆ.

ಮಿತ್ರಪಕ್ಷದವರು ಗೆದ್ದರೆ ತನ್ನ ಎಲ್ಲಾ ವಿಧವಾದ ನಾಶವು ತಪ್ಪಿದ್ದಲ್ಲವೆಂದು ಹಿಟ್ಲರ್‌ರವರು ಜರ್ಮನ ಜನರಿಗೆ ರೆಡಕ್ರಾಸ ಸಹಾಯ ಕೋರುತ್ತಾ ಹೇಳಿದರು.

ಎಣ್ಣೆ

ನಿಮ್ಮ ಉಪ್ಪಿನಕಾಯಿಯು ಜೆನ್ನಾಗಿರಬೇಕೆಂದರೆ
ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ
ಉಪ್ಪಿನಕಾಯಿಯು ಮೆತ್ತಗಾಗುವುದಿಲ್ಲ.
,, ಮುಗ್ಗು ಯಾ ಬೂಜು ಹಿಡಿಯುವುದಿಲ್ಲ
,, ಹುಳಿವಾಸನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಇಲ್ಲದೆ ಅಮಿತವಾದ ರುಚಿಯನ್ನುಂಟು ಮಾಡುವುದು.

A. S. ಸೀಲನ್ನು ಗಮನಿಸಿ, ಕೊಳ್ಳಿರಿ. ಮೋಸಹೋಗಬೇಡಿರಿ.

ದೊರೆಯುವ ಸ್ಥಳ- 1) ಎಂ. ಹುಶೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿನರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦	ಅಂಚೆ ವೆಚ್ಚ ಬೇರೆ
ಕನ್ನಡ ದಶೋಪನಿಷತ್ತುಗಳು	೦—೯—೦	ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವರಿಗೂ ರಿಯಾಯಿತಿ
ಶಿವಾನುಭವ ಬೋಧೆ	೦—೪—೦	
ಸುನುತ ಶತಕ	೦—೧—೦	

ಕಾಲಿನ ಸುಬ್ಬಣ್ಣ, ಮಜೀಂಟು, ಬಳ್ಳಾರಿ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮೂಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ಪಾಚುಗೆಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ವಯನಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕಳಗಿನವರಲ್ಲಿ ವಿವರಗಳನ್ನು ತಿಳಿಯಿರಿ
ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು
ಮೆ. ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಛೆ ಕಾಂಬುರಿ ನಗ್ಗರೆ ಮೊದಲಾಯುವುದಲ್ಲದೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ಸೂಚಿಕವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಕೃಷ್ಣ ಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress' Bulletin
THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ

The Rates of Subscription

Annual

Local	2—0—0
Moffusil	3—0—0

6 Months

Local	1—4—0
Moffusil	2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
6 ತಿಂಗಳಿಗೆ
ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri_____

Printed at Vittal Press, Car Street Edited & Published by A. D. Neelava Rao, Bellary

Reg. No. M. 3937

ವಂದೇ ಮಾತರಂ'

ನವಜಾಗೃತಿ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ವರ್ಷ ೪ ಸಂಚಿಕೆ ೩೨

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

ಬಳ್ಳಾರಿ ನೇ ೩ ನೇ ಭಾನುವಾರ ೧೯೪೨.

ಸಂಪಾದಕ:—
ಟಿ. ಬಿ. ಕೇಶವರಾವ

ಸಮುದ್ರತೀರ ಪಟ್ಟಣಗಳಿಗೆ ಅಪಾಯ

ಸುಭಾಸರನ್ನು ಪ್ರಾಣಹೋಗುವವರೆಗೂ ಎದುರಿಸುವೆನು.

ಪಂ॥ ಜವಹರಲಾಲರ ಹೇಳಿಕೆ.

ತಮ್ಮ ಅಸಾಮ ಸಂಚಾರದಲ್ಲಿ ಜವಹರಲಾಲರು ತೇಜಪುರವೆಂಬ ನಗರ ನ್ನೊಂದರಲ್ಲಿ ಭಾಷಣ ಮಾಡುತ್ತಾ ಏನು ಹೇಳಿದರು — ಬಿಂಮೊಸ್ತಾನದ ಸಮುದ್ರ ತೀರ ಪಟ್ಟಣಗಳು ಬಾಂಬಿನ ದಾಳಿಗೆ ಗುರಿಯಾಗುವ ಅಪಾಯವು ವಿಶೇಷವಿದೆ. ಜನರ ಸರ್ಕಾರವೇ ಜನತೆಯನ್ನು ರಕ್ಷಿಸ ಬಲ್ಲುದು. ಶತ್ರುಗಳ ದಂಡೆಯಾತ್ರೆಯನ್ನು ಎದುರಿಸಲು ಕಾಂಗ್ರೆಸ್ ಮುಂದೆ ಬಂದಿತು ಆದರೆ ಆ ಬ್ರಿಟಿಷ ಸರಕಾರವು ಇವ ಕ್ಕೆ ಅಡ್ಡ ಬಂದಿತು. ಬ್ರಿಟಿಷು ಸರಕಾರವು ನಮ್ಮ ರಾಷ್ಟ್ರೀಯ ಬೇಡಿಕೆಗಳನ್ನು ಇಷ್ಟು ವಿರೋಧಿಸುತ್ತಿದ್ದರೂ ನಮ್ಮ ಸಹಾ ನುಭೂತಿಯು ಪ್ರಜಾಸರಕಾರಗಳ ಕಡೆಗಿದೆ. ಪ್ರಪಂಚವು ಈಗ ಇಬ್ಭಾಗವಾಗಿದೆ. ಅಚ್ಚೆತ ರಾಷ್ಟ್ರಗಳನ್ನು ಸುಭಾಸರು ಸಮರ್ಥಿಸಬಹುದು. ಅವರ ನೀತಿಯು ತಪ್ಪು. ಪ್ರಾಣ ಹೋಗುವವರೆಗೂ ಅವರನ್ನು ಎದುರಿಸುವೆನು. ರಾಜ್ಯವು ಸಡಿಲವಾದ ಕಾಲದಲ್ಲಿ ದಂಗೆಕೋರರನ್ನು ಹಿಂಸೆಯಿಂದ ಎದುರಿಸಬಹುದೆಂದೂ - ಇಂಥಾ ಸಂದರ್ಭ ಗಳಲ್ಲಿ ಪೂರ್ಣ ಅಹಿಂಸಾಚರಣೆಯು ಕಷ್ಟ ವೆಂದೂ ಹೇಳಿದರು

ಬರ್ಮಾದಿಂದ ಬರುವ ಭಾರತನಿರಾಶ್ರಿತರ ಕಷ್ಟಗಳು.

ಭಾರತ ಸರ್ಕಾರದ ಸದಸ್ಯರಾದ ಶ್ರೀ ಅಣಯವರ ಜೊತೆಯಲ್ಲಿ ಹೋದ ಪಂಡಿತ ಹೃದಯನಾಥಕುಂಜ್ರೂ ಮತ್ತು ಡಾಂರವರು ಬರ್ಮಾದಿಂದ ಬರುತ್ತಲಿರುವ ನಿರಾಶ್ರಿತರ ಅವರ್ಣನೀಯ ಕಷ್ಟಗಳು, ತಪ್ಪು ಮತ್ತು ಬಿಳಜಾತಿಯಲ್ಲಿ ತೋರಿಸಲ್ಪಡುತ್ತಿರುವ ವರ್ಣಭೇದ ನಿರಾಶ್ರಿತರ ಕ್ಯೋಂಪ್ರಗಳಲ್ಲೆಲ್ಲಾ ಅಧಿಕಾರದಲ್ಲಿರುವ ಬಿಳಿಯರ ವರ್ತನೆ ನಿರಾಶ್ರಿತರನ್ನು ಪೋಲೀಸರು ಹೊಡೆದದ್ದು - ಈ ಅಂಶಗಳನ್ನೆಲ್ಲಾ ಕುರಿತು ವೈಸ್‌ರಾಯರ ಹೇಳಿಕೆಯನ್ನು ಕೊಟ್ಟಿದ್ದಾರೆ. ಈ ದೋಷಗಳನ್ನೆಲ್ಲಾ ಕೂಡಲೇ ನಿವಾರಿಸಬೇಕೆಂದು ಸರ್ಕಾರಕ್ಕೆ ಸೂಚಿಸಿರುವರು

ಆರ್. ಎ. ಎಫ್ ಮುತ್ತಿಗೆ

ಕಳೆದ ವಾರ ಮಿತ್ರ ವಿಮಾನಗಳು ಜರ್ಮನಿಯ ಮೇಲೆ ಮುತ್ತಿಗೆ ನಡೆಸಿ ಅತಿಶಯ ನಷ್ಟ ವುಂಟುಮಾಡಿದವು. ಜೆಕೊ ಸ್ಲೋವೇಕಿಯಾದ ಸ್ಕೋಡಾ ಕಾರ್ಖಾನೆಯ ಮೇಲೆ ಕೂಡ ಬಾಂಬುಗಳನ್ನು ಸುರಿಸಿದೆ.

ಚರ-ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳಬಹುದು

ನವದೆಹಲಿ ಏ. 25

ಭಾರತ ರಕ್ಷಣೆ ಶಾಸನದಲ್ಲಿ ಒಂದು ತಿದ್ದುಪಡಿಯನ್ನು ಮಾಡಿ, ಯುದ್ಧಕಾರ್ಯ ಕ್ಕೋಸ್ಕರ ಸರಕಾರದವರು ಯಾವುದೇ ಚರ ಅಥವ ಸ್ಥಿರ ಆಸ್ತಿಪಾಸ್ತಿಗಳನ್ನು ವಶ ಪಡಿಸಿಕೊಳ್ಳುವ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡಿದ್ದಾರೆ. ಇಂಡಿಯಾ ಸರಕಾರದವರಾಗಲಿ, ಪ್ರಾಂತೀಯ ಸರಕಾರದವರಾಗಲಿ ಆ ರೀತಿ ಇಷ್ಟಪಟ್ಟರೆ ಆಸ್ತಿಗಳ ಮಾಲೀಕರಿಗೆ ನೋಟೀಸು ಕೊಟ್ಟು ವಶಪಡಿಸಿಕೊಳ್ಳಬಹುದು. ಸರಕಾರದವರು ಕೇಳುವ ಆಸ್ತಿಪಾಸ್ತಿಗಳ ವಿಚಾರದಲ್ಲಿ ಮಾಲೀಕರು ಎಲ್ಲ ಅಂಶಗಳನ್ನೂ ತಿಳಿಸಬೇಕು. ಅಲ್ಲದೆ, ಇಸ್ಪುಕಾಲ ಆ ಆಸ್ತಿಯನ್ನು ಮಾರಕೂಡದೆಂದು ಸರಕಾರದವರು ವಿಧಿಸಬಹುದು ಈ ವಿಧಿಗೆ ಮೀರಿದವರಿಗೆ 2 ವರ್ಷ ಶಿಕ್ಷೆ ವಿಧಿಸಬಹುದು. ಅಥವ ದಂಡಹಾಕಬಹುದು ಅಥವ ಶಿಕ್ಷೆ ಮತ್ತು ದಂಡ ಎರಡನ್ನು ವಿಧಿಸಬಹುದು ಧಾರ್ಮಿಕ ಸಂಸ್ಥೆಗಳ ಆಸ್ತಿಗಳನ್ನು ಮಾತ್ರ ವಹಿಸಿಕೊಳ್ಳಲಾಗದು.

ಜರ್ಮನಿಯ ಕೈದಾರಿಕೆ ಕೇಂದ್ರವ ನೇಲೂ ಮತ್ತು ಶತ್ರುಗಳು ಆಕ್ರಮಿಸಿರುವ ದೇಶಗಳನೇಲೂ ಬ್ರಿಟಿಷು ಬಾಂಬರುಗಳು ಮುತ್ತಿಗೆ ನಡೆಸುತ್ತಲೇ ಇವೆ. ಸ್ಕೋಡಾ ಕಾರ್ಖಾನೆಯನೇಲೆ ಮುತ್ತಿಗೆ ನಡೆಸುವುದೆಂದರೆ 1400 ಮೈಲಿ ಬಳ್ಳಾರಿಯಂತಾಯಿತು ಯುರೋಪಿನಲ್ಲಿರುವ ಅತ್ಯಂತ ದೊಡ್ಡ ಮುವ್ವತ್ತುಗುಂಡು ಕಾರ್ಖಾನೆಗಳಲ್ಲಿ ಇದು ಎರಡನೆಯದು. ಅದರ ಮೇಲೆ ಈಗಾಗಲೇ ಮೂರುಸಾರೆ ಮುತ್ತಿಗೆ ನಡೆಸಿದಂತಾಯಿತು.

ಹರಿಜನ ಪತ್ರಿಕೆಯಲ್ಲಿ
ಮಹಾತ್ಮಗಾಂಧಿಯವರ ಲೇಖನಗಳು

ಹಿಂದುಸ್ತಾನದಲ್ಲಿ ಪರದೇಶದ ಸೈನಿಕರು

ಜಪಾನರು ತಾವು ಹೇಳುವಂತೆ ಆಚರಿಸುವರೇ?

ಪ್ರಶ್ನೆ— ಜಪಾನರು ತಾವು ಹೇಳುವಂತೆ ಆಚರಿಸುವದು ನಿಜವಿದ್ದರೆ ಹಾಗೂ ಹಿಂದುಸ್ತಾನವನ್ನು ಬ್ರಿಟಿಶರ ನೊಗದಿಂದ ಕೊರಳು ಬಿಡಿಸುವಂತಿದ್ದರೆ ಅವರ ಸಹಾಯವನ್ನು ನಾವು ಮನಃಪೂರ್ವಕವಾಗಿ ಏಕೆ ಸ್ವೀಕರಿಸಬಾರದು?

ಉತ್ತರ— ಆಕ್ರಮಣಗಾರರು ಎಂದಾದರೂ ನಮ್ಮ ಹಿತಚಿಂತಕರೆಂದು ಭಾವಿಸುವದು ಮೂರ್ಖತನ. ಬ್ರಿಟಿಶರ ನೊಗದಿಂದ ಹಿಂದುಸ್ತಾನದ ಕೊರಳನ್ನು ಜಪಾನರು ಬಿಡಿಸಬಹುದು. ಆದರೆ ನುಂದೆ ತನ್ನ ನೊಗವನ್ನು ಕೊರಳಿಗೆ ಕಟ್ಟುವರು. ಬ್ರಿಟಿಶರ ಬಂಧನದಿಂದ ಹಿಂದುಸ್ತಾನವನ್ನು ಬಿಡಿಸಲು ನಾವು ಯಾವ ಪರಕೀಯ ರಾಷ್ಟ್ರದ ಸಹಾಯವನ್ನು ಕೇಳಬಾರದೆಂದು ನಾನು ಸತತ ಲಿಖಿಸ್ಯಾಯ ಪಟ್ಟ ದ್ದೇನೆ ಯಾಕಂದರೆ ಹಾಗೆ ಮಾಡುವದು ಅಹಿಂಸಾತ್ಮಕ ಮಾರ್ಗವಲ್ಲ. ಎಂದಾದರೂ ಬ್ರಿಟಿಶರ ವಿರುದ್ಧ ಹೋರಾಡಲು ನಾವು ಸಾಕೀಯ ನುಂಡಲದ ಸಹಾಯವನ್ನು ಪಡೆಯಲು ಒಪ್ಪಿದರೆ ನಾವು ವಿಶೇಷವನ್ನು ಶಕ್ತಿ ಸರ್ವಸ್ವದ ಹೆಚ್ಚು ಭಾಗವನ್ನು ನೆಚ್ಚಿಮಾಡಬೇಕಾಗುವದು. ನಮ್ಮ ಅಹಿಂಸಾತ್ಮಕ ಮಾರ್ಗದಿಂದ ನನಗೆ ಗುರಿಯನ್ನು ಮುಟ್ಟುವದು ಸುಲಭವಿದೆ. ಅಹಿಂಸಾತತ್ವದಲ್ಲಿ ನನ್ನ ವಿಶ್ವಾಸವು ಅಚಲವಾಗಿದ್ದುದಾನು ಅದಕ್ಕೆ ಅಂಟಿಕೊಂಡಿದ್ದೇನೆ. ಜಪಾನರ ಬಿರುದ್ಧ ನನಗೆ ಯಾವ ದ್ವೇಷವೂ ಇಲ್ಲ. ಆದರೆ ಹಿಂದುಸ್ತಾನದ ಬಗ್ಗೆ ಅವರು ತಳೆದ ಧೋರಣೆಯು ಸರಿಯಾಗಿದೆ ಎಂದು ನಾನು ಖಚಿತೋತ್ಪನ್ನಾಗಿ ಆಲೋಚಿಸಲಾರೆ. ನಾವು ಸ್ವತಂತ್ರ ವ್ಯಕ್ತಿಗಳಾಗಿ ಅನ್ಯರೊಡನೆ ನಮಗೆ ಶತ್ರುತ್ವವಿಲ್ಲವೆಂದು ಅವರು ಏಕೆ ತಿಳಿಯಬಾರದು? ಅವರು ಹಿಂದುಸ್ತಾನವನ್ನು ಅದರ ಪಾಡಿಗೆ ಬಿಟ್ಟು ಬಿಡಲಿ. ಅನಂತರ ಉದ್ದೇಶವು ಉತ್ತಮವಾಗಿದ್ದರೆ ಚೀನದ ಮೇಲೆ ದಾಳಿಮಾಡಿ ಅವರು ಚೀನರ ಸರ್ವನಾಶ ಮಾಡುವಂಥ ಮಹತ್ವದ ಯಾವ ತಪ್ಪನ್ನು ಚೀನವು ಮಾಡಿದೆ?

ನನ್ನ ಪತ್ರವ್ಯವಹಾರದಲ್ಲಿ ಅಡಕವಾಗಿರುವ ಪ್ರಶ್ನೆಗಳಲ್ಲಿ ಒಂದು ಹಿಂದುಸ್ತಾನದ ರಕ್ಷಣೆಗಾಗಿ ಬರುವ ಪರದೇಶದ ಸೈನಿಕರಿಗೆ ಸಂಬಂಧಿಸಿದೆ. ನಮ್ಮ ದೇಶದಲ್ಲಿ ನಾಕಮ್ಮ ಸರದೇಶದ ಕೈದಿಗಳಿರುವರು. ಇನ್ನು ಸೈನಿಕರ ಅನಂತ ವಾಹಿನಿಯು ಈ ದೇಶಕ್ಕೆ ಅಮೇರಿಕ ಮತ್ತು ಬ್ರಹ್ಮದೇಶ ಚೀನದಿಂದ ಬರಲಿರುವನೆಂದು ಜರ್ಮನಿಯನಿದೆ ಹಿಂದುಸ್ತಾನದ ಹಲವು ಕೋಟಿ ಜನರಲ್ಲಿ ಅಸಂಖ್ಯ ಸೈನಿಕರನ್ನು ಸಿದ್ಧಮಾಡುವದು ಶಕ್ಯವಿಲ್ಲವೇ- ಹಿಂದುಸ್ತಾನದ ಜನರು ಯೋಗ್ಯತೆಯಿಲ್ಲ ಇನ್ನಿತರ ದೇಶಗಳ ಸೈನಿಕರಿಗೆ ಸರಿಸಮಾನರಾಗಿಲ್ಲವೇ? ಛಾಗಾದರೆ ಸರದೇಶದ ಸೈನಿಕರೇಕೆ? ಅಮೇರಿಕೆಯ ಸೈನ್ಯ ಸಹಾಯದ ಅರ್ಥವೇನೆಂಬುದು ನಮಗೆ ಗೊತ್ತಿಲ್ಲ. ಮುಂದೆ ಬ್ರಿಟಿಶರ ಆಡಳಿತೆ ಸಾಲದುವಕ್ಕೆ ಅಮೇರಿಕೆಯ ಆಡಳಿತೆಯು ಬಲಾವರೂ ಅವರ ವರ್ಚಸ್ಸಿಗೆ ಒಳಬಿದ್ದು ಹೋಗಿರಾಗಿಪ ಪ್ರಸಂಗವು ನನಗೆ ಉಂಟಾಗುವದು.

ಹಾಗೆ ನೂತುವದರಿಂದ ನಿಶ್ಚಿತವೆಂದುಗಳಿಗೆ ನುಂದೆ ಲಭಿಸಬಹುದೆಂದು ಎಣಿಸಲಾದ ವಿಜಯಕ್ಕೆ ನಾವು ನನ್ನ ಶಕ್ತಿ ಸರ್ವಸ್ವವನ್ನು ಅಪಾಯವಾಗಿ ಪೆಚ್ಚಮಾಡಿದಂತಾಗುವದು. ಈಗ ಹಿಂದುಸ್ತಾನದ ಸಂರಕ್ಷಣೆಯು ಸಲುವಾಗಿ ಮಾಡಲಾಗುವ ಪ್ರಯತ್ನದಿಂದ ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ದೊರಕುವದೆಂದು ನನಗೆ ಅನಿಸುವದಿಲ್ಲ. ಬ್ರಿಟಿಶರು ನೀನೇ ಅಂದರೂ ಇದು ಬ್ರಿಟಿಶ ಸಾಮ್ರಾಜ್ಯ ಸಂರಕ್ಷಣೆಯು ಸಲುವಾಗಿ ಮಾಡಲ್ಪಡುವ ಪ್ರಯತ್ನವೆಂಬುದು ಸ್ಪಷ್ಟವಿದೆ. ಸಿಂಗಾಪುರವನ್ನು ಅದರ ಪ್ಪಕ್ಕೆ ಕೈಬಿಟ್ಟಂತೆ ಹಿಂದುಸ್ತಾನವನ್ನು ಅದರ ಅದೃಷ್ಟಕ್ಕೆ ಬಿಟ್ಟುಕೊಟ್ಟರೆ ಅಹಿಂಸಾತ್ಮಕ ಹಿಂದುಸ್ತಾನಕ್ಕೆ ಯಾವ ನಷ್ಟವೂ ಆಗಲಾರದು. ಬಹುಶಃ ಜಪಾನರು ಸಹ ಹಿಂದುಸ್ತಾನವನ್ನು ಅದರ ಪಾಡಿಗೆ ಬಿಟ್ಟು ಬಿಡಬಹುದು. ಇಲ್ಲಿಯ ಪ್ರಮುಖ ಪಕ್ಷಗಳು ತಮ್ಮೊಳಗೆ ಒಂದು ಒಪ್ಪಂದಕ್ಕೆ ಬಂದರೆ ಒಪ್ಪಂದಕ್ಕೆ ಬರುವ ಸಂಭವನಿಲ್ಲವೆಂದಲ್ಲ ಹಿಂದುಸ್ತಾನವು ಶಾಂತಿಯ ಮಾರ್ಗದಲ್ಲಿ ವಿಶೇಷ ನೆರವಾಗಬಹುದು. ಮುಂದೆ ಸಂಭವಿಸಬಿದ್ದಾಗ ಜಗತ್ತಿನ ಶಾಂತಿಯ ಸಲುವಾಗಿ ಹಿಂದುಸ್ತಾನವು ಮಹತ್ವದ ಭಾಗವನ್ನು ವಹಿಸಿವರೂ ಸಹಿಸಬಹುದು. ಬ್ರಿಟಿಶರು ಕೊನೆಗೆ ಉಪಾಯಗಾಣದ್ದಿಂದ ಬೇರೆ ಮಾರ್ಗವಿಲ್ಲದೆ ಬಿಟ್ಟುಕೊಟ್ಟರೆ ಈ ಮಹತ್ಕಾರ್ಯಗಳೆಲ್ಲ ಸಾಧ್ಯವಾಗಲಾರವು ಈಗ ಬ್ರಿಟನವು ಪಶ್ಚಿಮ ಪ್ಯೂಹದಲ್ಲಿ ಯುದ್ಧಕೊಟ್ಟು ಪೂರ್ವದ ಸ್ಥಿತ್ಯಂತರವನ್ನು ನರಿಪಡಿಸಿಕೊಳ್ಳಲು ಅವರ ಪಾಡಿಗೆ ಬಿಟ್ಟುಕೊಟ್ಟರೆ. ಆನು ಎಷು ಶೌರ್ಯ ಧೈರ್ಯ ಮತ್ತು ಆರ್ಜತೆಗೆ ತಕ್ಕ ಕಲಸವನ್ನಿನಲಿಕ್ಕೆಲ್ಲ? ಈ ಮಹಾಯುದ್ಧದಲ್ಲಿ ತನ್ನ ಯಾನತ್ರ್ಯ ಸಾಮ್ರಾಜ್ಯವನ್ನು ಬ್ರಿಟನವು ಸಂರಕ್ಷಿಸಿಕೊಳ್ಳುವದು ಎಂಬುದಕ್ಕೆ ಯಾವ ಭದ್ರತೆಯೂ ಇಲ್ಲ. ಸ್ವಾತಂತ್ರ್ಯದ ಬೇರೆ ಬೇರೆ ಭಾಗಗಳು ಇಂದು ಬ್ರಿಟನವ ಕೊರಲಲ್ಲಿ ಹೊರಲಾರದ ಹೊರೆಯಾಗಿ ನಿಂತುಬಿಟ್ಟಿವೆ. ಅವಮ್ಮ ಬೇಗ ಈ ಹೊರಲಾರವ ಭಾರವಿಂದ ಹಾಗು ನಾಳಿಗಳಿಂದ ತನ್ನನ್ನು ಬ್ರಿಟನವು ತಪ್ಪಿಸಿಕೊಂಡರೆ, ಜಪಾನವ ಪ್ಯಾಸಿಸ್ಟರು ಹಿಂದುಸ್ತಾನವನ್ನು ಅದರ ಪಾಡಿಗೆ ಬಿಡುವ ದರಬವಲು ಅವನ್ನು ಮತ್ತಿಪ್ಪ ಹತ್ತಿಕ್ಕಲು ಪ್ರಯತ್ನಿಸುವರು. ತನ್ನ ಶಕ್ತಿಗೆ ಮಿಂದ ಹೊರೆಯನ್ನು ತಾವು ಹೊರಬೇಕಾಗುವದೆಂದು ಅನರಿಗೆ ಆಗ್ಗೆ ಅನಿಸುವದು ನುಂದೆ ಅವರಿಗೆ ಬ್ರಿಟಿಶರಿಗಿಂತ ಬಹಳ ಹೆಚ್ಚು ಕಷ್ಟವಾಗುವದು. ಅವರ ಕರ್ಮ

ಶಕ್ತಿ ಮತ್ತು ಬಿಗುಹೇ ಅವರ ಕುತ್ತಿಗೆಗೆ ಉರುಳಾಗುವದು ಬ್ರಿಟಿಶ ಪದ್ಧತಿಯಲ್ಲಿ ಒಂದು ಬಗೆಯ ಸ್ಥಿತಿ ಸ್ಥಾಪಕತೆ ಗುಣವಿದ್ದುದರಿಂದ ಹಾಗೂ ತಕ್ಕ ಬಲಶಾಲಿ ಪ್ರತಿಸ್ಪರ್ಧಿಗಳಿಲ್ಲದುದರಿಂದ ಇಷ್ಟರವರೆಗೆ ಅದು ಬಾಳಿತು ಆದರೆ ಆಸ್ಥಿತಿಸ್ಥಾಪಕತೆಯಿಂದ ಇಂದಾವ ಲಾಭವೂ ಇಲ್ಲ ಬ್ರಿಟನವು ಏಶಿಯಾ ಮತ್ತು ಆಫ್ರಿಕೆಯ ಜನರನ್ನು ದಾಸ್ಯನಲ್ಲಿ ಅದ್ದಿ ಸುಲಿಗೆಮಾಡಿದ ಪಾಪದ ಪ್ರಾಯಶ್ಚಿತವನ್ನು ಕೊಡಲು ನಾಜೀ ಶಕ್ತಿಯು ತಲೆದೋರಿತೆಂದು ನಾನು ಒಂದೆರಡು ಸಾರಿ ಇದೇ ಪತ್ರಿಕೆಯಲ್ಲಿ ಹೇಳಿದ್ದುಂಟು.

ಆದಕಾರಣ ಹಿಂದುಸ್ತಾನದ ಸಂಬಂಧದಲ್ಲಿ ಯುದ್ಧದ ಪರಿಣಾಮವೇನೆಯಿರಲಿ ಅದರ ಪಾಡಿಗೆ ಅದನ್ನು ಬಿಟ್ಟುಕೊಟ್ಟು ಕ್ರಮಬದ್ಧವಾಗಿ ಬ್ರಿಟಿಶರು ಹಿಂದುಸ್ತಾನದಿಂದ ಬಿಟ್ಟುಹೋದರೆ ಹಿಂದುಸ್ತಾನ ಮತ್ತು ಬ್ರಿಟನ ಇವೆರಡು ರಾಷ್ಟ್ರಗಳಿಗೂ ಹಿತವಿದೆ. ನರೇಂದ್ರರೊಡನೆ ಮಾಡಿಕೊಂಡ ಒಪ್ಪಂದ, ಅಲ್ಪ ಸಂಖ್ಯಾಕರಿಗೆ ಕೊಟ್ಟ ನಚನ ಇವೆಲ್ಲ ಬ್ರಿಟಿಶರ ಹಿತದ ಸಲುವಾಗಿ ಬ್ರಿಟಿಶರ ಆಳಿಕೆಯನ್ನು ಚಿರಸ್ಥಾಯಿಯನ್ನಾಗಿ ಮಾಡಲು ಬ್ರಿಟಿಶರೇ ನಿರ್ಮಿಸಿದ ಕಾರಣಗಳು. ನಾವು ಕಾಣುತ್ತಿರುವ ಕಠೋರವಾದ ಸತ್ಯದ ಮುಂದೆ ಅವೆಲ್ಲ ಕರಗಿ ಮಾಯವಾಗಲೇಬೇಕು. ನರೇಂದ್ರರಲ್ಲಿ ಸೈನ್ಯಬಲವಿರುವದರಿಂದ ಸೈನ್ಯಬಲವಿಲ್ಲದ ಶಸ್ತ್ರಾಸ್ತ್ರ ವಿಹೀನವಾದ ಬ್ರಿಟಿಶ ಹಿಂದುಸ್ತಾನದಿಂದ ತಮ್ಮ ಸಂಸ್ಥಾನಗಳನ್ನು ಉಳಿಸಿಕೊಳ್ಳುವದು ಅವರಿಗೆ ಬಹಳ ಸುಲಭವಿದೆ ಸ್ವಾತಂತ್ರ್ಯೋದಯದ ಸೂರ್ಯನ ಕಿರಣದ ಪ್ರಖರತೆಗೆ ಅಲ್ಪ ಸಂಖ್ಯಾಕ ಬಹು ಸಂಖ್ಯಾಕ ಕಾಲ್ಪನಿಕ ಸಮಸ್ಯೆಯು ಮಂಜು ಮಾಯವಾಗುವದು. ನಮ್ಮ ದೇಶವನ್ನು ಸಂಧಿವಾತಕ್ಕೆ ಗುರಿಪಡಿಸುವ ಬ್ರಿಟಿಶ ಸೈನ್ಯವು ಇಲ್ಲಿ ಇಲ್ಲದೆ ಹೋದೊಡನೆ ಅಲ್ಪ ಸಂಖ್ಯಾಕ ಬಹುಸಂಖ್ಯಾಕ ಪ್ರಶ್ನೆ ಬರುವದಿಲ್ಲವೆಂಬುದು ಸತ್ಯವು ಬ್ರಿಟಿಶರ ಕೈವಾಡ ತಪ್ಪಿದೊಡನೆ ಹಿಂದುಸ್ತಾನದ ಅಸಂಖ್ಯ ಜನರು ಒಕ್ಕಟ್ಟಿನಿಂದ ಅಖಂಡವಾದ ಒಂದೇ ಮಾನವ ವಂಶದವರೆಂದು ಆಗ್ಗೆ ನಡೆದುಕೊಳ್ಳುವರು, ಆಗ್ಗೆ ತಮ್ಮ ಸಮಸ್ಯೆಯನ್ನು ಬಿಡಿಸಲನುಕೂಲವಾಗುವಂಥ ಯೋಗ್ಯ ರೀತಿಯ ಉಪಾಯವನ್ನು ನಿಜವಾದ ಮುಖಂಡರು ಮಾಡಿಯೇ ತೀರುವರೆಂಬುದರಲ್ಲಿ ಅನುಮಾನವಿಲ್ಲ. ಆಂದರೆ ಹೀಗಾಗದೇಕಾದರೆ ಜಪಾನ ಮತ್ತು ಇನ್ನಿತರ ರಾಷ್ಟ್ರಗಳು ಹಿಂದುಸ್ತಾನವನ್ನು ಮಾತ್ರ ಅದರ ಪಾಡಿಗೆ ಬಿಟ್ಟುಬಿಡಬೇಕು. ಅವರು ಹಾಗೆ ಮಾಡದಿದ್ದರೆ ಅಗ್ಗೆ ಸಪ್ತ ಬುದ್ಧಿಯೇ ಪ್ರಧಾನವಾಗಿ ಮುಖ್ಯ ಪಕ್ಷಗಳನ್ನು ನಡಿಸುವಂತೆ ಒಂದು ಯೋಜನೆಯನ್ನು ಸಿದ್ಧಮಾಡಿ ಎಲ್ಲರೂ ಒಂದುಗೂಡಿ ಹೊಸ ಮರಣಂತನನ್ನು ಇದಿರಿಸಲು ಬರುವದು

ಮೇಲೆ ಸೂಚಿಸಲಾದ ಈಬಗೆಯ ಅಭಿಪ್ರಾಯಗಳಿಂದ ಪರದೇಶದ ಸೈನ್ಯದಿಂದ ನಮಗೆ ಬಂಡಿತ ಆಪಾಯವಿವೆಯೆಂದು ನಾನೇಕೆ ಭಾವಿಸುವೆನೆಂಬುದು ಸ್ಪಷ್ಟವಾಗುತ್ತದೆ. ಈ ಆಪಾಯವು ಸಾಮಾನ್ಯವಾದುದಲ್ಲ. ಸಂಪೂರ್ಣವಾಗಿ ಶೋಷಕ್ಕೆ ಗುರಿಪಡಿಸುವಂತಿದ್ದು ಅತ್ಯಂತ ಅವಿಶ್ವಾಸಕ್ಕೆ ಕಾರಣವಾಗಿದೆ. ಸದ್ಯದ ಕಾರಭಾರದ ಪರಿಸ್ಥಿತಿ ಮತ್ತು ಅದನ್ನು ಸಮರ್ಥಿಸಲು ಮಾಡುವ ಪ್ರಯತ್ನ ಇವೆಲ್ಲ ಹಿಂದುಸ್ತಾನದ ರಾಜಕಾರಣದ ಆಸ್ತಿತ್ವವನ್ನು ಕರಗಿಸಿ ನಾಶಮಾಡುವ ದುಶ್ಚಿಹ್ನಗಳೆಂದು ಸ್ಪಷ್ಟವಾಗುತ್ತವೆ

ಪಂ. ಜವಾಹರಲಾಲರು ನನ್ನ ವಾರಸದಾರರಾಗುವರೆಂದು ಜನತೆಯ ಅಭಿಪ್ರಾಯ.

ಪ್ರಶ್ನೆ—ಪಂಡಿತ ಜವಾಹರಲಾಲರು ನಿಮ್ಮ "ಉತ್ತರಾಧಿಕಾರಿ"ಯೆಂದು ಅದಿನ ವರ್ಧಾದಲ್ಲಿ ನೀವು ಸಾರಿದಿರಿ. ಜಪಾನರ ವಿರುದ್ಧ ಕೂಟಯುದ್ಧ ಮಾಡಬೇಕೆಂದು ನಿಮ್ಮ ಉತ್ತರಾಧಿಕಾರಿಯಾದ ಜವಾಹರಲಾಲರು ಹೇಳುವ ಅಭಿಪ್ರಾಯವು ನಿಮ್ಮ ಮನಸ್ಸಿಗೆ ಹೇಗೆ ಬಂತು? ಬಹಿರಂಗವಾಗಿ ಹಿಂಸೆಯನ್ನು ಅವರು ಪುರಸ್ಕರಿಸುವಾಗ ರಾಜಾಜಿಯವರು ಸಮಗ್ರ ರಾಷ್ಟ್ರಕ್ಕೆ ಶಸ್ತ್ರ ಮತ್ತು ಯುದ್ಧತರಬೇತಿ ಬೇಕೆನ್ನುವಾಗ ನಿಮ್ಮ "ಅಹಿಂಸೆ"ಯ ಗತಿ ಏನಾಗುವದು?

ಉತ್ತರ...ನೀವು ಕೇಳಿದ ಪ್ರಶ್ನೆಯಲ್ಲಿ ತೋರುವಂತೆ ಪರಿಸ್ಥಿತಿಯು ಭಯಾನಕ

ಸ್ಥಾಪನೆ- ಎಂಪೈರ್ ಆಫ್ ಇಂಡಿಯಾ ನಿರ್ಣಯ.
ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಆಸ್ತಿಪಾಸ್ತಿಗಳು 5,60,00,000 ರೂ.ಗಳಿಗೆ ಮೀರಿದೆ
ಈ ಕಂಪನಿಯವರು ಯಾವಯಾವ ತರಹೆಯ ಜೀವ ವಿಮೆಯನ್ನು ಏರ್ಪಡಿಸಿದ್ದಾರೆ ಎಂಬುದನ್ನು ವಿಚಾರಿಸುವದರಿಂದ ನಿಮಗೆ ಯಾವ ವೆಚ್ಚವೂ ಆಗುವುದಿಲ್ಲ; ನಿಮ್ಮ ಸಂಪತ್ತಿನ ರಕ್ಷಣೆಗೂ ನಿಮ್ಮ ಹಣದ-ಪದ್ಧತಿಯೋಗಕ್ಕೂ ಯಾವ ಬಗೆಯ ವಿಮೆಯನ್ನು ಬೇಕಾದರೂ ಚುನಾಯಿಸಿಕೊಳ್ಳಲು ಅವಕಾಶವಾಗುತ್ತದೆ. ಈ ದಿನವೇ ಬರೆದು ತಿಳಿಯಿರಿ. ಇಲ್ಲವೇ ಏಜಂಟರಿಂದ ವಿವರಗಳನ್ನು ತಿಳಿದು ಬೇಕಾದ ವಿಮೆ ಮಾಡಿರಿ.
ಕೇಂದ್ರ ಕಚೇರಿ- ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್, ಬೊಂಬಾಯಿ.
ಬ್ರಾಂಚ್ ಕಚೇರಿ- ಡಿಸ್ಪೆನ್ಸರಿ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು ಸಿಟಿ.

270

ನಾಗಿ ತೋರುತ್ತದೆ. ಮೊಟ್ಟಮೊದಲು "ಉತ್ತರಾಧಿಕಾರಿ"ಯೆಂಬ ಶಬ್ದವು ನನ್ನದಲ್ಲ. ನಾನು ಹಿಂದೀ ಭಾಷೆಯಲ್ಲಿ ಮಾತಾಡಿದ್ದೆ. ಆಗ್ಗೆ ನಾನು ಜವಾಹರಲಾಲರು ನನ್ನ ಉತ್ತರಾಧಿಕಾರಿಯಲ್ಲ ಆದರೆ ನುಂಪೆ ಅವರೇ ನನ್ನ ವಾರಸದಾರರಾಗುವರೆಂದು ಜನತೆಯ ಪ್ರತಿನಿಧಿಯು ಹೇಳಿದ್ದೆ ಅಂದರೆ ನಾನು ಈ ಲೋಕವನ್ನು ಬಿಟ್ಟು ತೆರಳಿದ ನಂತರ ನನ್ನ ಸ್ಥಾನವು ಜವಾಹರಲಾಲರನ್ನು ಸೇರುವದು ಎಂದಿದ್ದೇ ಆದರ ಅರ್ಥ. ನನ್ನ ರೀತಿಯನ್ನು ಜವಾಹರಲಾಲರು ಎಂದೂ ಪೂರ್ಣವಾಗಿ ಒಪ್ಪಲಿಲ್ಲ. ಆದನ್ನು ಅವರು ಸರಳವಾಗಿ ಟೀಕಿಸಿದ್ದಾರೆ. ಆದರೆ ಕಾಂಗ್ರೆಸದ ಘೋರಣೆಯು ನನ್ನೊಬ್ಬನ ಸಲಹೆಯಂತೆ ಪೂರ್ಣವಾಗಿ ಸಾಗದ ಕಾಲದಲ್ಲಿಯೂ ಅವರು ಕಾಂಗ್ರೆಸ ಘೋರಣೆಯಂತೆ ಪೂರ್ಣವಾಗಿ ನಡೆದು ಕೂಡಲು ತಮ್ಮ ವರ್ಚಸ್ಸನ್ನು ಬಹಳವಾಗಿ ಬೆಳೆಸಿದ್ದಾರೆ. ನನ್ನನ್ನು ತಳಿ ತಪ್ಪದೆ ಅನುಸರಿಸಿದ ಸರದಾರ ವಲ್ಲಭಭಾಯಿ ಪಟೇಲರಂಥವರು ನನ್ನ ಉತ್ತರಾಧಿಕಾರಿಗಳಾಗಲಾರರು. ಅದೇ ರೀತಿಯಲ್ಲಿ ಇನ್ನಾರಿಗೂ ಇಲ್ಲದಷ್ಟು ಧೈರ್ಯ ಸಾಹಸ ಮುಂತಾದವುಗಳು ಜವಾಹರಲಾಲರಿಗಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅಲ್ಲದೆ ನಾನು ಸತ್ತ ಬಳಿಕ ಅನೇಕ ಸಾರಿ ಜವಾಹರಲಾಲರು ನನ್ನೊಡನೆ ಮತಭೇದ ಪಡುವದಾಗಿ ಹೇಳಿದ ಭಿನ್ನಾಭಿಪ್ರಾಯವನ್ನು ಬಿಟ್ಟುಕೊಡುವರೆಂದು ನಾನು ಎಷ್ಟೋ ಸಾರಿ ಹೇಳಿಲ್ಲವೆ? ಅದ್ಯಾಕೋ ಕೂಟ ಯುದ್ಧವಿಚಾರದಲ್ಲಿ ಅವರಿಗೆ ಒಂದು ಬಗೆಯ ಮೋಹವಿದೆ ಇದು ನನಗೆ ಸಮಾಧಾನವಿಲ್ಲ. ಆದರೆ ಇದ್ದ 9 ದಿನಗಳ ಅವ್ಪಕಾಲದಲ್ಲಿ ಯಾವ ಅನುಮಾನವೂ ಇಲ್ಲ ಅವರ ಪರಿಣಾಮವೇ ವಿರೀತಿಯಾಗುವದು. ಯಾಕಂದರೆ ಹಿಂದೀಯರಿಗೆ ಆ ರೀತಿಯು ಪರಕೀಯವಾದುದು. ಜವಾಹರಲಾಲ ಮತ್ತು ರಾಜಾಜಿಯವರು ಎಷ್ಟೇನರ್ಚಸ್ವಿಗಳೆದ್ದು ಶಕ್ತಿವಂತರಾದರೂ 22 ವರ್ಷಗಳವರೆಗೆ ಸತತ ಭೋಧಿಸಿಕೊಂಡು ಕಾರ್ಯರೂಪದಲ್ಲಿ ಬಂದ ಅಹಿಂಸಾ ತತ್ವವು ಎಷ್ಟೇ ಅಪೂರ್ಣವಿದ್ದರೂ ಕೇವಲ ಅವರ ಉಪದೇಶೆಯಂತೆ ಒಮ್ಮಿಂದೊಮ್ಮೆಲೆ ಆ ತತ್ವವನ್ನು ಇಲ್ಲದಂತೆ ಮಾಡಿಸುವದು ಶಕ್ಯವಾಗಲಾರದು.

ಆದಕಾರಣ ಜವಾಹರ ಹಾಗು ರಾಜಾಜಿಯವರು ತಮ್ಮ ತತ್ವವನ್ನು ಬದಲಾಯಿಸಬಹುದೆಂಬ ನನ್ನ ಮನಸ್ಸು ಚಂಚಲವಾಗಲಾರದು. ತಮ್ಮ ಪ್ರಯತ್ನವು ವಿಫಲವಾದಾಗ ತಮ್ಮ ಪರಾಜಯದಿಂದ ಮತ್ತಿಷ್ಟುವ ಶಕ್ತಿ ಸಂಪಾದಿಸಿ ಪುನರುಜ್ಜೀವಿತವಾದ ತಾಳ್ಮೆಯಿಂದ ಅವರು ಅಹಿಂಸಾ ತತ್ವವನ್ನೇ ಅನುಸರಿಸುವರು ಹಿಂಸೆಯಲ್ಲಿ ವಿಶ್ವಾಸವಿದ್ದು ಅವರಿಬ್ಬರಲ್ಲಿ ಯಾರೂ ಆ ಮಾರ್ಗವನ್ನು ಅನುಸರಿಸುವದಿಲ್ಲ. ಅಹಿಂಸಾ ಮಾರ್ಗವು ನೆಲೆಗೊಳ್ಳಬೇಕಾದರೆ ಮೊದಲೊನ್ನೆ ಹಿಂದುಸ್ತಾನದಲ್ಲಿ ಹಿಂಸಾಮಾರ್ಗದಲ್ಲಿ ಸಣೆದರೆ ಮಾತ್ರ ಕಳ್ಳಪಿಲ್ಲೆಯೆಂಬ ಅವರ ವಿಶ್ವಾಸವಿರುವದರಿಂದ ಅವರು ಹಾಗೆ ಮಾಡುತ್ತಿದ್ದಾರೆ. ಮುಂದೆ ಘಟನೆಗಳಲ್ಲಿ ಯಾವ ರೂಪದಲ್ಲಿ ಬದಲಾವಣೆ ಹೊಂದಬಹುದೆಂದು ಧೈರ್ಯದಿಂದ ಯಾರೂ ಹೇಳಲಾರರು. ಅವರ ಅನೈಸರ್ಗಿಕ ಆಂತರಿಕ ಭಾವನೆಯು ಹಿಂದುಮೇಳೆ ಸರಿಯಿದ್ದರೂ ಸರಿಯಿರಬಹುದು ಅನುಭವ ಸಿದ್ಧವಾದ ನನ್ನ ಭಾವನೆಯು ತಪ್ಪಿದ್ದರೂ ತಪ್ಪಿರಬಹುದು ಆದರೆ ನನ್ನ ಮಾರ್ಗವು ನನಗೆ ಎಂಬುದನ್ನು ನಾನು ಬಲ್ಲೆ. ನನ್ನ ತತ್ವವನ್ನನುಸರಿಸುವವರು ನಾನೊಬ್ಬನೇ ಆದರೂ ನಾನು ಸ್ವಲ್ಪವೂ ಧೃತಿಗೆಡದೆ ಎಂದೂ ಕಾರ್ಯಕಲಾಪಗಳು ಹಿಂಸಾ ಮಾರ್ಗವನ್ನು ಅನುಸರಿಸಲಾರವು ಎಂಬ ವಿಶ್ವಾಸದಿಂದ ನಡೆಯುವರು ನನ್ನ ಕರ್ತವ್ಯವಿದೆ ಮುಂದೆ ಅವರು ನಿಷ್ಠುರಯಾ ವ್ಯಕ್ತಿಗಳಾಗಬಹುದು ಆಥವಾ ಅಹಿಂಸಾಮಾರ್ಗವನ್ನು ವಲಂಬಿಸಬಹುದು ಕೂಟ ಯುದ್ಧದಿಂದ ನಮಗಾವ ಲಾಭವೂ ಆಗಲಾರದು ಮೆಚ್ಚು ಪ್ರಮಾಣದಲ್ಲಿ ಅದನ್ನನುಸರಿಸಿದರೆ ಅವರಿಂದ ಉತ್ಪಾತವುಂಟಾಗುವದೆಂಬದು ನಿಜ ಪ್ರತಿಯೊಂದು ಬಗೆಯ ಹಿಂಸಾತ್ಮಕ ಯುದ್ಧಕ್ಕೆ ದಿವ್ಯೌಷಧವೆಂದರೆ ಅಹಿಂಸಾತ್ಮಕ ಅಸಹಕಾರ. ಸಮಗ್ರ ರಾಷ್ಟ್ರವೇ ಅಹಿಂಸಾತ್ಮಕ ಮಾರ್ಗವನ್ನವಲಂಬಿಸಿದರೆ ಪೂರ್ಣ ವಿಜಯವಾಗುವದರಲ್ಲಿ ಅನುಮಾನವಿಲ್ಲ ಆದರೆ ಬ್ರಿಟಿಶರ ವಿರುದ್ಧ ಈ ಪ್ರಯೋಗವು ಅಷ್ಟೊಂದು ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ. ಯಾಕಂದರೆ ಬ್ರಿಟಿಶರು ಇಲ್ಲಿ ಬಂದು ಬೇರೂರಿ ಬಹಳ ದಿನವಾಗಿದೆ ಜವಾನರಿಗೆ ಹಾಗಲ್ಲ ಒಂದು ಹೆಜ್ಜೆಯಷ್ಟು ಸ್ಥಳ ಅವರದೆನಿಸಿದ್ದು ಅವರಿಗೆ ಇಲ್ಲಿಲ್ಲ ಮುಂದೆ ಕೂಡಲಿರುವ ಸಭೆಯಲ್ಲಿ ಎ ಆಯ್. ಸಿ. ಸಿಯವರು ಅಹಿಂಸಾತ್ಮಕ ಪದ್ಧತಿಗೆ ಮರಳಿ ಅಹಿಂಸಾತ್ಮಕ ಅಸಹಕಾರದ ಬಗ್ಗೆ ಸ್ಪಷ್ಟವಾಗಿ ತಕ್ಕ ಸಲಹೆಯನ್ನು ಕೊಡುವದೆಂದ. ನಾನು ಆಶಿಸುತ್ತೇನೆ. ಸಂಧಾನದ ಪ್ರಾತುಕತೆಗಳು ವಿಫಲವಾದ ಬಳಿಕ, ಅಧಿಕೃತ ಸಂಬಂಧವಿಲ್ಲದೆ ಬ್ರಿಟಿಶರ ಯುದ್ಧಪ್ರಯತ್ನಕ್ಕೆ ಹಿಂಸಾಮಾರ್ಗದಲ್ಲಿ ಬೆಂಬಲ ಕೊಡುವದೆಂದರೆ ರಾಷ್ಟ್ರೀಯ ಅಪಮಾನವನ್ನು ಆಮಂತ್ರಿಸಿದಂತಾಗುವದೆಂದು ನನ್ನ ಭಾವನೆ

ಚಿಕ್ಕಜೋಗಿಹಳ್ಳಿ

ತಿಪಟೆಯ ತಾ. ಬಳ್ಳಾರಿಯ ಶ್ರೀ ಬಿಂದು ಮಾಧವನ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಸಾಕ್ಷಾನಾಯ್ಯ, ಕೂಚಿನಾಯ್ಕ, ಮತ್ತು ಎಂ. ಹನುಮಂತಪ್ಪನವರು, ಲಂಬಾಣಿ ಜನರು ಯಾವ ರೀತಿಯಲ್ಲಿ ಸುಧಾರಿಸಿ ಅಭಿವೃದ್ಧಿ ಹೊಂದಬಹುದೆಂಬುದನ್ನು ಕುರಿತು ಉಪನ್ಯಾಸಕೊಟ್ಟರು ಮುಂದೆ ಸಾಗಲಿರುವ ಜಿಲ್ಲಾ ಲಂಬಾಣಿ ಸಭೆಯ ಖರ್ಚುಗಳಿಗಾಗಿ ನಾಕ್ಷಾನಾಯ್ಕರು ಧನ ಸಹಾಯವನ್ನು ಕೋರಿದರು

ಹಬ್ಬಿಳ್ಳಿ

ಇಲ್ಲಿ 25 ನೆಯ ತಾ. 126ನ ಜನ ಕೂಲಿಕೆಲಸಗಳಿಗಾಗಿ ಬಂದಿದ್ದರು. ಮೇ ತಿಂಗಳ ಎರಡನೆಯವಾರದಲ್ಲಿ ಸರ್ಕಾರವು ಟಿಸ್ಸನರ್ಕಾಗಿ ಮಾರ್ಪಡಿಸುತ್ತಾರೆಂದು ತಿಳಿದುಬಂದಿವೆ ಆಗ ಇತ್ತು ಮುರವಣಿ-ರಾಣಿಹಾಳು ರಸ್ತೆಯನ್ನು ತೆಗೆದುಕೊಳ್ಳುವರು. ಬಿಸಿಲು ಪ್ರಖರವಾಗಿದೆ

ಕೌತಾಳ

ಇಲ್ಲಿ ಬಸವಜಯಂತಿ ಮಹೋತ್ಸವವು ಚೈತ್ರ ಶು|| 4 ಕ್ಕೆ ವೈಭವವಾಗಿಯೂ ನಿರ್ವಿಘ್ನವಾಗಿಯೂ ಆಚರಿಸಲ್ಪಟ್ಟಿತು. ಜಸವಗೀತೆಯ ಪ್ರಭಾತಫೇರಿಯು 3 ದಿನಗಳು ನಡೆದನಂತರ ಭಾನುವಾರ ಸಾಯಂಕಾಲ ವಿಶ್ವನಾಥ ದೇವಾಲಯದಿಂದ ಮೆರವಣಿಗೆಯು ಹೊರಟು, ರಾತ್ರಿ ಹಿಂದಿರುಗಿತು. ಶ್ರೀ ದುಪ್ಪಿ ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ-ಶಾಂತವೀರಪ್ಪ ಬಳ್ಳಾರಿ ಮತ್ತು ಜ್ಞಾನಪ್ಪ-ಮಾಸ್ತರ್ ಇವರು ಬಸವ ಜೀವಿತ, ಸಜ್ಜನಗಳ ಸುಜ್ಞಪ್ತಿ, ವೀರಶೈವ ಧರ್ಮದ ಶ್ರೇಷ್ಠತೆಯನ್ನು ಕುರಿತು ಭಾಷಣ ಮಾಡಿದರು

ಕರ್ನಾಟಕ ಪ್ರಾಂತದ ಕಾಂಗ್ರೆಸ್ ಧುರೀಣರೆಲ್ಲೊಬ್ಬರಾದ ಶ್ರೀ ಎಸ್. ಕೃಷ್ಣಣ್ಣಾಯಿ ಸಂಜೀಕರರವರನ್ನು ಇಂಡಿಯಾರಕ್ಷಣೆ ಕಾಯ್ದೆಯನ್ವಯ ಬಂಧಿಸಲ್ಪಟ್ಟು 9 ತಿಂಗಳ ಶಿಕ್ಷೆಗೆ ಗುರಿಯಾದರು (ರತ್ನಗಿರಿಯ ಭಾಷಣಕ್ಯಾಗಿ)

ಸೂಚನೆ.

ಮುದ್ರಣಾಲಯದ ನೈತಕ್ಕೆಯ ಕಾರಣ 10-5-42ನೆಯ 'ನವಭಾರತ' ಸಂಚಿಕೆಯು ಹೊರಡುವುದಿಲ್ಲ. 17-5-42ನೆಯ ತಾ. ಮತ್ತೆ ಹೊರಡುವುದು.

ವ್ಯವಸ್ಥಾಪಕ.

ನೋ ಪ್ರಿಸ್ಟಿಗ್ಯೂಟ್.

ರಾಜಾಜಿಯವರ ಸೂಚನೆಗಳು ಎಳ್ಳಷ್ಟಾದರೂ ವಿರೋಧ

ಮದ್ರಾಸಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮನ್ ರಾಜಗೋಪಾಲಾಚಾರಿಯವರು, ಮುಸ್ಲಿಂಲೀಗಿ ನೊಡನೆ ಸಹಕರಿಸಬೇಕೆಂಬ ಕಾರಣವಿಂದ ಅವರ ವಕನುತ್ಯ ಘಾತಕ ತತ್ವದ ವಾದ ಪಾಕಿಸ್ತಾನವನ್ನು ಕಾಂಗ್ರೆಸ್ ಒಪ್ಪಬೇಕೆಂದೂ ಮದ್ರಾಸ್ ಪ್ರಾಂತ್ಯದಲ್ಲಿ ಲೀಗ್ ಸದಸ್ಯರಿಂಗ್ ಕೂಡಿದ ಮಂತ್ರಿಮಂಡಳವನ್ನೇ ನಿರ್ಮಿಸಬೇಕೆಂದೂ ಕಳೆದವಾರ ಕಾಂಗ್ರೆಸ್ ಶಾಸನ ಸಭೆಯ ಸಭೆಯಲ್ಲಿ ಮಾಡಿದ ತೀರ್ಮಾನದಿಂದ ಹಿಂದೂಸ್ತಾನವ ರಾಷ್ಟ್ರೀಯ ವಾತಾವರಣದಲ್ಲಿ ಶಿಥಿಲ ಬಡಿತಂದಾಗಿದೆ.

ಮುಸ್ಲಿಂಲೀಗ್ ರಾಷ್ಟ್ರೀಯ ಸಂಸ್ಥೆ ಅಲ್ಲ ಅದು ಜಾತೀಯ ಸಂಸ್ಥೆ ಅದು ಯಾವತ್ತೂ ಮುಸಲ್ಮಾನರ ಹಿತಸಕ್ತಿಯ ಅಭಿವೃದ್ಧಿಯನ್ನೂ ಬೆಕ್ಕಿಸುವುದಾಗಲಿ, ದೇಶದ ಹಿತಸಕ್ತಿಯನ್ನು ಲಕ್ಷಿಸುವುದಿಲ್ಲ ಅಲ್ಲದೆ ಅದಕ್ಕೆ ಬಂದಿರುವ ಪಾಪಹತ್ತನೆಂದರೆ ಬ್ರಿಟಿಷ್ ಸರಕಾರದವರು ತಮ್ಮ ಭೇದನೀತಿಯ ಫಲವಾಗಿ ಕೊಟ್ಟವ್ದು. ಅದು ಇಲ್ಲಿಯವರಿಗೂ ಹಳ್ಳಿಗರ ಹಿತಕ್ಕಾಗಿ ಏನೂಮಾಡಿಲ್ಲ. ಇಂಥಾ ಸಂಸ್ಥೆಯೊಂದಿಗೆ ಕಾಂಗ್ರೆಸ್ಸಿನವರು, ರಾಜಿ ಮಾಡಿಕೊಳ್ಳಬೇಕೆಂದು ಪ್ರಯತ್ನಿಸಿ ವಿಫಲರಾದರು. ಲೀಗಿಗೆ ಬ್ರಿಟಿಷರ ಸಹಾಯ-ಸಹಕಾರ ಗಳಿರುವುದರಿಂದಲೂ, ಅದರ ಕೆಲ ನಾಯಕರ ಅತೀಶ್ರದ್ಧೆಗಳು ಸ್ವಾರ್ಥ ವಿರೋಧ ಕಾರಣವೂ ಅವರೊಡನೆ ಇಲ್ಲಿಯವರಿಗೆ ಸಂಧಿಯು ಸಾಧ್ಯವಾಗಿಲ್ಲ. ಕಾಂಗ್ರೆಸಿನವರು ಪ್ರಯತ್ನಿಸಿದಾಗೆಲ್ಲಾ ಲೀಗನಾಯಕರಾದ ಜಿನ್ನಾರವರು ತಮ್ಮ ಬೇಡಿಕೆಯ ಮಟ್ಟವನ್ನು ಏರಿಸುತ್ತಲೇ ಇರುವರು. ಇಂಥಾ ಪರಿಸ್ಥಿತಿಯಲ್ಲಿ ಲೀಗಿನೊಂದಿಗೆ ನಡೆಸಲ್ಪಡುವ ಸಂಧಾನಗಳು ವ್ಯರ್ಥವಾಗುವವೆಂದು ಎಲ್ಲರಿಗೂ ತಿಳಿದಿದ್ದರು.

ಅಖಂಡ ಹಿಂದೂಸ್ತಾನದ ತತ್ವವನ್ನು ಒಪ್ಪಿಕೊಂಡಿರುವ ಕಾಂಗ್ರೆಸ್ ಪಾಕೀಸ್ತಾನದ ತತ್ವಕ್ಕೆ ಒಪ್ಪುವುದರಿಂದ ಕಾಂಗ್ರೆಸ್ ಸಂಸ್ಥೆಯಲ್ಲಿ ಸೇರಿರುವ ಎಲ್ಲಾ ಮುಸಲ್ಮಾನರನ್ನೂ ಕೈಬಿಟ್ಟಂತಾಗುತ್ತದೆ. ಅಲ್ಲದೆ ರಾಷ್ಟ್ರೀಯ ಜೀವನದಲ್ಲಿ ವಿಷಯವನ್ನು ಬೆರೆಸಿದಂತಾಗುತ್ತದೆ. ಈ ಕಾರಣ ದೇಶದ ಪ್ರಮುಖ ಮುಖಂಡರಾದ ಅಬುಲಕಲಂ ಆಜಾದ ಪಂಡಿತ ಜವಹರಲಾಲ ಪಂಡಿತ ಮಾಳವೀಯ ರಾಜಾಜಿಯವರ ಮಾರ್ಗವು ಸರಿಯಾದುದಲ್ಲವೆಂದು ಖಂಡಿಸಿದ್ದಾರೆ. ಸುಮಾರು 190 ಕಾಂಗ್ರೆಸ್ ಸದಸ್ಯರಿರುವ ಶಾಸನ ಸಭೆಯಲ್ಲಿ 36 ಜನರು (ರಾಜಾಜಿಯವರ ಶಿಷ್ಯರು) ಸಮ್ಮತಿಸಿದ್ದರೆ, ಅವರು ರಾಜಾಜಿಯವರ ವ್ಯಕ್ತಿತ್ವಕ್ಕೆ ವೋಟು ಕೊಟ್ಟರೆನ್ನಬೇಕು, ಈಗಾಗಲೇ ಅನೇಕ ಸದಸ್ಯರು ವೈತ್ಯ ಪತ್ರಗಳಲ್ಲಿ ವಿರೋಧಾಭಿಪ್ರಾಯಗಳನ್ನು ಕೊಡುತ್ತಿರುವರು

ವರ್ಕಿಂಗ್ ಕಮಿಟಿಯ ಕಾರ್ಯಕಲಾಪಗಳನ್ನು ನೋಡಿದರೆ ರಾಜಾಜಿಯವರು ತಮ್ಮ ನಿರ್ಣಯಕ್ಕೆ ಅಂಟಿಕೊಳ್ಳುವರೆಂದು ತೋರುತ್ತದೆ. ಎ. ಐ. ಸಿ. ಸಿ ಸಭೆಯಲ್ಲಿ ರಾಜಾಜಿಯವರ ತೀರ್ಮಾನವು ಬಹು ಸಂಖ್ಯಾತೆ ಮತದಿಂದ ಬಿದ್ದು ಹೋಗುವುದರಲ್ಲಿ ಸಂಶಯವಿಲ್ಲ. ಹಿಂದೂಸ್ತಾನದ ಪ್ರಮುಖ ಮುಖಂಡರೆಲ್ಲೊಬ್ಬರೂ ಸುರಿತ ದೇಶಸೇವಕರೂ ಆದ ರಾಜಾಜಿಯವರು ಇಂಥಾ ಕಠಿಣ ಪ್ರಸಂಗದಲ್ಲಿ ಈ ನಿರ್ಣಯವನ್ನು ತಂದು ಕಾಂಗ್ರೆಸ್ಸಿನಲ್ಲಿ ಒಡಕು ಹುಟ್ಟಿಸಿ ದೇಶದ್ದ ವಾತಾವರಣವನ್ನು ವಿಷಪೂರಿತವಾಗಿ ಮಾಡಿದುದು ನಮ್ಮ ದೌರ್ಭಾಗ್ಯವೇಸರಿ.

ರಾಯದುರ್ಗದ ಉಪಾಧ್ಯಾಯರ ಸಂಘ

ರಾಯದುರ್ಗ ಕೇಂದ್ರದ ಉಪಾಧ್ಯಾಯ ಸಂಘವು ೩೬ನೆಯ ವಾ. ಕೂಡಿ ತಮ್ಮ ಅರ್ಥದ ನಿರ್ಣಯಗಳನ್ನು ಮಾಡಿದೆ. ೧) ಯುದ್ಧ ಕಾರಣ ಉಂಟಾದ ಭೀಕರ ಪರಿಸ್ಥಿತಿಯ ನಿವಾರಣೆಗಾಗಿ ಬಳ್ಳಾರಿ ಜಿಲ್ಲಾ ಬೋರ್ಡಿನವರು ಸ್ವಾಂತದ ಕೆಲ ಮುಸಿ ಪಿಲ್ಲ ಬ್ರಾಮತ್ತು ಜಿಲ್ಲಾ ಬೋರ್ಡುಗಳಂತೆ ಪ್ರಾಥಮಿಕ ಶಾಲೋಪಾಧ್ಯಾಯರಿಗೂ ಡಿಯರ್ನೆಸ್ ಅಲೋಯನ್ಸ್ ದಯಪಾಲಿಸಬೇಕು ೨) ಕೆಲಸೀನಿಯರ್ ಟೀಚರುಗಳ ಪರಿಸ್ಥಿತಿಯ ಬಗ್ಗೆ ಸಾನುಭೂತಿಯನ್ನು ತೋರಿದ ಜಿ. ಬೋ. ಅಧ್ಯಕ್ಷರನ್ನು ವಂದಿಸುತ್ತಾ (L Dis, C. No. ೧೫೫—೪೨ D. ೧೫೫-೪೨) ಆವರ ಇನ್ಕ್ರಿಮೆಂಟು ಗಳನ್ನು ಕೊಟ್ಟು, ಅವರನ್ನೂ ಸಹ ತೃಪ್ತಿಗೊಳಿಸಬೇಕೆಂದು ಕೋರುತ್ತದೆ. ೩) ಉಪಾಧ್ಯಾಯ ಸಂಘಗಳವರು ವರ್ಷಕ್ಕೆ ೦-೪-೦ ಕೊಟ್ಟರೆ ಸಾಕೆಂಬುದನ್ನು ಡಿ. ಪಿ. ಐ. ರವರು ವಿಧಿಸುವಂತೆ ಮಾಡಿ ಅಭ್ಯಸಂಬಳ ದವರನ್ನು ಕಾಪಾಡಲು ಬೇಡಿಕೆ.

ಹಿಂದೂಸ್ತಾನ

ಮಸ್ಲಿಂಲೀಗಿನ ಅಧ್ಯಕ್ಷರಾದ ಜಿನ್ನಾರವರು ಹಿಂದೂಸ್ತಾನ್ ಟೈಂಸ್ ಪತ್ರಿಕಾಕಾರ್ಯನಿರ್ವಾಹಕರಿಗೆ ಅವಮಾನ ಪಡಿಸಿದು ಅಖಿಲಭಾರತ ವೃತ್ತಪತ್ರಿಕೋದ್ಯೋಗಿಗಳಿಗೇ ಅವಮಾನವೆಂತಲೂ ಜಿನ್ನಾರವರು ಸದರೀ ಪತ್ರಿಕೆಗೂ ಮತ್ತು ವೃತ್ತಪತ್ರಿಕೋದ್ಯೋಗಿಗಳ ಸಂಘಕ್ಕೂ ಕ್ಷಮಾಪಣೆ ಕೇಳಿಕೊಳ್ಳಬೇಕೆಂದೂ ಅಲ್ಲಿಯವರಿವಿಗೂ ಅವರ ಹೇಳಿಕೆ ಭಾಷಣ ವನ್ನೆರೆ ಯಾವವಾರ್ತಾ ಸಂಸ್ಥೆ ಪತ್ರಿಕೆಗಳವರೂ ಪ್ರಕಟಿಸಬಾರದೆಂದೂ ತೀರ್ಮಾನಿಸಿದ್ದಾರೆ.

ಬಳ್ಳಾರಿ ಪೇಟೆ ಧಾರಣೆ

1-5-42 ಶುಕ್ರವಾರ.

ಭಂಗಾರ ತೊಲ 1ಕ್ಕೆ			46-0-0
ಸಾವರಿನ್			38-0-0
ಬೆಳ್ಳಿ 100 ತೊಲ ರೂ.			76-0-0
ಹತ್ತಿ ಮುಂಗಾರಿ 12 ಮಣಕ್ಕೆ			12-0-0
ಹತ್ತಿ ಘಾರಂ			22-0-0
ಅಕ್ಕಿ 1 ರೂ. ಗೆ		4½ರಿಂದ	5 ಸೇರು
ಬೇಳೆ ,,			4 ,,
ಗೋಧಿ ,, ...		4½	,,
ಜೋಳ ,,	14	,, 15	,,
ನವಣೆ ,,		18½	,,
ಸಜ್ಜೆ ,,		14½	,,
ನೆಲಗಡಲೆ ...		...	1-1-9
ಮೆಣಸಿನಕಾಯಿ 9 ಮಣ	25	ರಿಂದ 30	ರೂ
ಸಕ್ಕರೆ(ಮಂಡ್ಯ) 9 ಮಣ		39	ರೂ
ಬೆಲ್ಲ ...	12	ರಿಂದ 20	ರೂ
ಚುಮ್ಮಿ ಎಂಕೆ ಕಲಿ			5-0-0



ಜರಾಜದಲ್ಲಿರುವ ಎಣ್ಣೆ ಕಣಿಗಳನ್ನು ಮತ್ತು ಎಣ್ಣೆಯನ್ನು ಶುಭ್ರವಾಗಿ ಮಾಡುವ ಕಾರ್ಖಾನೆಗಳನ್ನು ಬ್ರಿ. ಸೈನಿಕರು ಕಾಯುತ್ತಿರುವರು

ಬರ್ಮಾದಲ್ಲಿ ಜಪಾನರು

ಜಪಾನರು ಮಾಂಡಲೇನಗರದಕಡೆ ಒಳ್ಳೆಯ ಜೋರಿನಿಂದ ನುಗ್ಗುತ್ತಿರುವರು. ಮಾಂಡಲೇ ಲಾಶಿಯೋ ರೈಲ್ವೆ ರಸ್ತೆಯನ್ನು ಒತ್ತರಿಸಿದರೆ ಮಿತ್ರಪಕ್ಷದವರಿಗೆ ಭಯಂಕರ ಪರಿಸ್ಥಿತಿ ಯುಂಟಾಗಬಹುದು. ಒಂದು ಕಡೆಯಲ್ಲಿ ಮಿತ್ರ ಮತ್ತು ಚೀನೀ ಸೈನ್ಯಗಳನ್ನು ಪ್ರತ್ಯೇಕಿಸಿರುವರೆಂದು ಹೇಳಲಾಗಿದೆ. ಬರ್ಮಾದ ಉತ್ತರ ಭಾಗದಲ್ಲಿರುವ 'ಲಾಶಿಯೋ' ಎಂಬ ಮುಖ್ಯಕೇಂದ್ರವನ್ನು ತಾವು ಹಿಡಿದಿರುವದಾಗಿ ಜಪಾನೀಯರು ಹೇಳುತ್ತಾರೆ. ಇದು ಧೈಡಪಟ್ಟಿಲ್ಲ.

ಜಪಾನರು ನ್ಯೂಗಿನಿಯಾದಲ್ಲಿ ಸೈನಿಕರನ್ನು ವಿಮಾನಗಳನ್ನು ಮತ್ತು ಹಡಗುಗಳನ್ನು ಕೇಂದ್ರೀಕರಿಸುತ್ತಿದ್ದಾರೆ. ಆದ್ದರಿಂದ ಜಪಾನರು ಇನ್ನು 15 ದಿನಗಳೊಳಗಾಗಿ ಮೋರ್ಸ್‌ಬಿ ಜಂದರಿಗೆ ಏಟು ಹಾಕುವರೆಂಬ ನಿರೀಕ್ಷೆಯಿದೆ. ರಬಾಲ್ ಬಂದರಲ್ಲಿ ಸೈನಿಕರನ್ನು ಹೊರುವ ಏಳು ಭಾರಿ ಹಡಗಗಳುನೇರಿ ಕನಿಷ್ಟಪಕ್ಷ 15 ಹೆಡಗುಗಳೆವೆಲಿಯೋ ಬಂದರಲ್ಲಿ ಇತರ ಕೆಲವು ಹಡಗುಗಳಿವೆ. ಏಪ್ರಿಲ್‌ನಲ್ಲಿ ಈ ಕ್ಷೇತ್ರದಲ್ಲಿ ಮಿತ್ರವಿಮಾನ ಬಲದ ಕೈಹೋರಾಗಿತ್ತು. ಈಗ ಮತ್ತೆ ಶತ್ರವಿಮಾನಬಲದ ಕೈಯೇ ಜೋಗುವಂತಿದೆ. ಅಂತೂ ಮುಂದೆ ಮೋರ್ಸ್‌ಬಿಬಂದರಿನಲ್ಲಿ ಉಗ್ರಕದನ ಖಂಡಿತವೆಂದು ಹೇಳಲಾಗಿದೆ ಜಪಾನರು ಇತ್ತೀಚಿನ ಮಾದರಿಯ ಅತ್ಯುತ್ತಮ ವಿಮಾನಗಳನ್ನು ರಂಗಕ್ಕೆ ತರುತ್ತಲಿದ್ದಾರೆ

ಆಸ್ಟ್ರೇಲಿಯಾಕ್ಕೆ ಮುತ್ತಿಗೆ ಭಯ.

ಶಾಸನ ಸಭೆಯಲ್ಲಿ ಮಹಾ ಪ್ರಧಾನರಾದ ಶ್ರೀ ಕರ್ಟಿನರು ಮಾತನಾಡುತ್ತಾ,

"ನ್ಯೂಗಿನಿಯಾ ಮುಂತಾದ ಭಾಗಗಳಲ್ಲಿ ಜರ್ಮನರಿಗೆ ವಿಮಾನಗಳಲ್ಲೂ ಹಡಗುಗಳಲ್ಲೂ ಅಪಾರ ನಷ್ಟವುಂಟಾಗಿದೆ. ಹಾಗಿದ್ದರೂ ಕೂಡ ಜಪಾನರು ಆಸ್ಟ್ರೇಲಿಯಾವನ್ನು ಏಕಾಏಕಿ ಮುತ್ತುವ ಭಯವಿದ್ದೇ ಇದೆಯೆಂದು ಸರಕಾರದವರು ಪರಿಗಣಿಸುವರು" ಎಂದರು

ಜರ್ಮನಿ—ರಷ್ಯಾ

ರಷ್ಯನರು ಸ್ಟಾಲಿನ ಕಾಲುವೆಯ ಉದ್ದಕ್ಕೂ ಕದನ ನಡೆಸುತ್ತಲಿರುವರು. ಇಲ್ಮನ್ ಸರೋವರವು ಸುತ್ತಮುತ್ತಲಿನ ಪ್ರದೇಶಗಳನ್ನು ಆಕ್ರಮಿಸಿರುವರು. ಬ್ರಯಾನ್ಸ್ಕ ನಗರದ ಸಮೀಪ ಕಂಪು ಸೇನೆಗಳು ಬಂದಿವೆ.

ರಷ್ಯನ್ ರಂಗದಲ್ಲಿ ಈಗಲೂ ಜರ್ಮನ್ ವಿಮಾನ ಬಲಕ್ಕೆ ಅಪಾರ ಹಾನಿಯಾಗುತ್ತಿದೆ. ಏಪ್ರಿಲ್ ತಿಂಗಳ ತಾ. ಗೆ ಮುಗಿದ ಒಂದು ವಾರದಲ್ಲಿ ೨೫೭ ಜರ್ಮನ್ ವಿಮಾನಗಳು ನಾಶವಾದವು. ಇದೇ ಅವಧಿಯಲ್ಲಿ ರಷ್ಯನರು ೭೪ ವಿಮಾನಗಳನ್ನು ಕಳೆದುಕೊಂಡರು.

ನಾಜಿಗಳ ಕ್ರೂರ ವರ್ತನೆ

ರಷ್ಯಾದಲ್ಲಿ ಜರ್ಮನಿಯು ಆಕ್ರಮಿಸಿದ ಪ್ರದೇಶಗಳಿಂದ ಸಾದನ ಸಂಪತ್ತುಗಳನ್ನೆಲ್ಲಾ ಅಪರಲ್ಲಿಯೂ ಮುಖ್ಯವಾಗಿ ಎಣ್ಣೆಯನ್ನು ಜರ್ಮನಿಗೆ ಸಾಗಿಸುತ್ತಿರಲಾಗಿದೆ. ಎಲ್ಲಾ ಕಡೆಗೂ ಕೊಲೆ-ಸುಲಿಗೆಗಳನ್ನು ನಡೆಸುತ್ತಲಿರುವರು. ರಷ್ಯಾದ ಪ್ರಜೆ-ಮತ್ತು ಜನರ ಸಂಸ್ಕೃತಿಯನ್ನು ಹಾಳುಮಾಡಬೇಕೆಂಬುದೇ, ರಷ್ಯನ ಸ್ಪಜೆಗಳು ಜರ್ಮನಿಯ ಗುಲಾಮರಿರಬೇಕೆಂಬುದೇ ಜರ್ಮನಿಯ ಆಕಾಂಕ್ಷೆ.

ಟೊಲಾ ಜಿಲ್ಲೆಯೊಂದರಲ್ಲಿಯೇ ಜರ್ಮನಿ ಅಧಿಕಾರಿಗಳು 1408 ಆಕಳುಗಳನ್ನು 11,860 ಹಂದಿಗಳನ್ನು 28,459 ಕುರಿಗಳನ್ನು 213678 ಕೋಳಿಗಳನ್ನು 25,465 ಜೇನು ಗೂಡುಗಳನ್ನು ವಶಪಡಿಸಿಕೊಂಡರೆಂದು ರಷ್ಯಾದ ವಿದೇಶಾಂಗ ಮಂತ್ರಿಗಳಾದ ಶ್ರೀ ಮೊಲಟೋವ್ ರವರು ಸೂಚಿಸಿದ್ದಾರೆ.

ಫ್ರೆಂಚರ ಪ್ರತಿ ಭಟನೆ

ವಿಚಿಫ್ರಾನ್ಸಿಗೆಸೇರಿದ ಕಾರ್ಸಿಡೋನಿಯಾ ದ್ವೀಪದಲ್ಲಿ ಅಮೆರಿಕನ್ ಸೈನಿಕರು ಇಳಿದ ಕೃತ್ಯವನ್ನು ಪ್ರತಿಭಟಿಸಲು ವಿಚಿ ಸರ್ಕಾರವು ವಾಶಿಂಗ್ಟನ್‌ನಲ್ಲಿ ತನ್ನ ಪ್ರತಿನಿಧಿಗೆ ಸೂಚಿಸಿದೆ.

ಮೈಸೂರಿನ ಮಹಾರಾಜರ ವಿವಾಹ

ಮೈಸೂರಿನ ಮಹಾರಾಜರಾದ ಶ್ರೀ ಜಯರಾಮರಾಜ ಒಡೆಯರವರು 6-5-42 ನೆಯ ದಿನ ಕರ್ನಲ್ ಚಾಮೇ ಅವರ ಪ್ರಥಮಪುತ್ರಿ ಶ್ರೀಮತಿ ತ್ರಿಪುರಸುಂದರಿ ಅಮ್ಮಣ್ಣಿಯವರನ್ನು ಮದುವೆಯಾಗುವರು. ಇವರಿಗೆ 4 ವರ್ಷಗಳಕೆಳಗೆ ಚರಿಖಾರಿ ಸಂಸ್ಥಾನಾಧೀಶರ ಸೋದರಿಯನ್ನು ಕೊಟ್ಟು ಮದುವೆಯಾಗಿತ್ತು. ಪ್ರಾಯಶ, ಸಂತಾನಾಪೇಕ್ಷೆಯಿಂದ ಈ ವಿವಾಹವು ವರ್ಷಕ್ಕೆರ ಬಹುದು.

ಕಾಂಗ್ರೆಸ ವರ್ಕಿಂಗ ಕಮಿಟಿಯವರು ರಂಗೂನ ಘಟನೆಗಳನ್ನು ಕುರಿತು ಮಾಡಿದ ಮತ್ತು ನಿರಾಶ್ರಿತರ ಬಗ್ಗೆ ಮಾಡಿದ ನಿರ್ಣಯಗಳನ್ನಾಗಲಿ ನಿರ್ಣಯಗಳ ಭಾಗಗಳನ್ನಾಗಲಿ ಪ್ರಕಟಿಸಬಾರದೆಂದು ಇಂಡಿಯಾ ಸರಕಾರವು ಆಜ್ಞೆಮಾಡಿದೆ.

ಬ್ರಿಟನ್ನು ೧ ವಾರದಲ್ಲಿ ೧ ಸಾವಿರ ವಾಗೀನುಗಳನ್ನು ತಯಾರಿಸಿ ರಷ್ಯಾಕ್ಕೆ ಕಳುಹಿಸುವ ದೃಶ್ಯ

ಯುದ್ಧಪರಿಸ್ಥಿತಿಯಲ್ಲಿ ಬ್ರಿಟಿಶರ ಸ್ಥಾನಮಾನಗಳು ಭಾರತೀಯರ ಕರ್ತವ್ಯ

ಹರ್ಬರ್ಟ್ ಮಾರಿಸನ್ನರ ಭಾಷಣವ ನಂತರ ಇಂಗ್ಲೆಂಡಿನಲ್ಲೇ ದಾಳಿಯ ಪ್ರಖರತೆಯೂ ಹೆಚ್ಚುತ್ತಲಿದೆ. ಈ ಹಿಂದೆ ಬ್ರಿಟಿಷ ಪ್ರಧಾನಿಯಾದ ಚರ್ಚಿಲರನ್ನು ಸೂಚಿಸಿದ ಪ್ರಕಾರ ಅಟ್ಲಾಂಟಿಕ್ ಸಾಗರದಲ್ಲಿ ಹಡಗುಗಳ ಮುಳುಗುವಿಕೆಯು ಹೆಚ್ಚುತ್ತಲಿನ್ನು ಅಲ್ಲಿಯೂ ಪರಿಸ್ಥಿತಿಯು ಸಮಾಧಾನಕಾರಕವಿರುವದಿಲ್ಲ. ಭೂಮಧ್ಯ ಸಮುದ್ರದಲ್ಲಿ ಮಾಲ್ಟಾದ್ವೀಪವು ನಿತ್ಯವೂ ಅಗ್ನಿ ನಾರಾಯಣನಿಗೆ ಆಹುತಿಯಾಗುತ್ತಲಿದೆ ಲಿಬ್ಯಾದಲ್ಲಿ ಶಾಂತಿಯ್ಯು ಗೋಚರನಾಗಿದ್ದರೂ ಬೂದಿ ಮುಚ್ಚಿದ ಕೆಂಡದಂತಿದೆ ಇತ್ತ ಪ್ರಾಚ್ಯದೇಶಗಳಲ್ಲಿ ಫಿಲಿಪೈನ್ ದ್ವೀಪಗಳು ಜಾವಾಮಲಯಾ ಸುಮ್ಯಾತ್ರಾಗಳನ್ನು ಆಕ್ರಮಿಸಿ ಬರ್ಮಾದೇಶವನ್ನು ಪೂರ್ಣವಾಗಿ ನುಂಗಿ ಢೀರುಕುಡಿಯಲು ಜಪಾನು ಹವಣಿಸುತ್ತಿದೆ. ಹಿಂದೂಸ್ತಾನದ ಒಂದೆರಡು ನಬ್ಬಣಿಗಳನ್ನೇಲೂ ಸಿಬ್ಬೋಸಿನ ಟ್ರಿಂಕಾಮಲಿ ಕೊಲಂಬೋಗಳಮೇಲೂ ಬಾಂಬುದಾಳಿಯಾದಂದಿನಿಂದ ಹಿಂದುಸ್ತಾನವೂ ಕೂಡ ಯುದ್ಧರಂಗದ ವೃತ್ತದೊಳಗೇ ಇದೆಯೆಂದು ಹೇಳುವುದರಲ್ಲಿ ಯಾವ ಸಂಶಯವೂ ಇಲ್ಲ

ಬ್ರಿಟಿಷ್ ಸಾಮ್ರಾಜ್ಯಕ್ಕೆ ಇಂಥಾ ಕಷ್ಟವು ನೂರಾರು ವರ್ಷಗಳಿಂದಲೂ ಬಂದಿಲ್ಲ. ಸರ್ ಸ್ಟಾಫರ್ಡ ಕ್ರಿಪ್ಸರು ಹಿಂದೀ ಮುಖಂಡರೊಡನೆ ಸಂಧಾನಕ್ಕೆ ಬಂದು ಚರ್ಚೆಮಾಡಿದರೆ ಪ್ರತಿಫಲವಾಗಿ ಬ್ರಿಟನರು ಇನ್ನೂ ಸಾಮ್ರಾಜ್ಯತತ್ವಕ್ಕೆ ಅಂಟಿಕೊಂಡಿರುವದು ಬಹಳ ಸ್ಪಷ್ಟವಾಗಿದೆ.

ಬ್ರಿಟಿಷ್ ರಾಜಕಾರಣಕ್ಕೆ ಜವಾಬ್ದಾರರಾದ ಮುಖಂಡರು ಮನಸ್ಸುಮಾಡಿದ್ದರೆ ಇಡೀ ಭಾರತ ಜನಾಂಗವನ್ನೇ ಯುದ್ಧದಲ್ಲಿ ನೈಪುಣ್ಯಕ್ಕೆ ಗೊಳಿಸಬಹುದಾಗಿತ್ತು. ಆದರೆ ಅವರು ಹಾಗೆ ಮಾಡಬಿದ್ದುದು ಇಂಗ್ಲೆಂಡಿನ ಮತ್ತು ಭಾರತದ ದುರ್ದೈವವೆನ್ನಬೇಕು. ಸಾರ್ವಿಪೆಂಟೆನ್ನಲ್ಲಿ ಸಹಾನುಭೂತಿ ಸರಹೇಳಿಕೆ ಮತ್ತು ಭಾಷಣಗಳಿಂದ ಸಿಹುಪಯೋಗವಿಲ್ಲ. ಕೈಮೀರುವದರೊಳಗಾಗಿ ಬ್ರಿಟಿಷ್ ಸರಕಾರವು ಭಾರತ ಮುಖಂಡರೊಡನೆ ಬಂದು ಸಂಧಿಗೆ ಬಂದು ನಿಜವಾದ ಅಧಿಕಾರಗಳನ್ನು ಕೊಟ್ಟು ಪ್ರಜಾಶಕ್ತಿಯ ರಾಜ್ಯಭಾರಕ್ಕೆ ಅನ್ತಿಭಾರವನ್ನು ಹಾಕಬೇಕು.

ಭಾರತವ ಪ್ರಮುಖ ಮುಖಂಡ ರಾದ ಮಹಾತ್ಮಗಾಂಧಿ ಜವಹರಲಾಲ ರಾಜಗೋಪಾಲಾಚಾರಿ ರಾಜೇಂದ್ರ ಬಾಬುಗಳು ಹೇಳುವಂತೆ ಹಿಂದೂಸ್ತಾನಕ್ಕೆ ಪರಿಪೂರ್ಣ ಯಾವ ರೀತಿಗೂ ಮುಕ್ತಿಯಬಾರದು ಕಾಂಗ್ರೆಸ್ ಅಧ್ಯಕ್ಷರಾದ ಆಜಾದರು ಹೇಳುವಂತೆ ನಾವು ತಟಸ್ಥ ನೃತ್ತಿಯನ್ನು ಕೂಡ ಅನುಸರಿಸಬಾರದು. ಜನತೆಯು ಎಲ್ಲಾ ಕಡೆಗಳಲ್ಲೂ ಜಾಗೃತವಾಗಬೇಕು ಸ್ವತಂತ್ರತೆಗೆ ಸ್ಪಷ್ಟವಾದ ನೀತಿಯ ಮಾರ್ಗಗಳನ್ನು ಇಂದಿನಿಂದಲೇ ಹುಡುಕಿ ಶತ್ರುಗಳನ್ನು ಎದುರಿಸಲು ಸಂಸಿದ್ಧರಾಗಬೇಕು. ಬೇರೆಯವನೆಂಬ ನಮಗೆಂದಿಗೂ ಮೋಕ್ಷ ದೊರೆಯಲಾರದು. ನಮ್ಮ ಉದಾತ್ತವಾದ ನಮ್ಮ ಸ್ವಾತಂತ್ರ್ಯದ ಬೇಗದ ಕೈ ನಮ್ಮ ಹತ್ತರವೇ ಇದೆ.

—

ಶ್ರೀ ದೇಕಾಯಿ ಚಂದ್ರನೌಳ ಹಾಯರ ನಿಧನ.

ಮೇಕದ ಕರಣಂ ಶ್ರೀ ಚಂದ್ರನೌಳ ರಾಯರು 29 ನೆಯ ತಾ. ರಾತ್ರಿ ಸ್ವರ್ಗಸ್ಥರಾದರು ಇವರು ಕನ್ನಡ, ತೆಲುಗು ಭಾಷೆಗಳಲ್ಲಿ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿ ಈ ಬಾಗದಲ್ಲಿ ವರ್ಚಸ್ವಿಗಳಾಗಿದ್ದರು ಭಗವಂತನು ಇವರಾತ್ಮಕ್ಕೆ ಶಾಂತಿ ಈಯಲಿ

ಕೋಲಾರ್‌ದಲ್ಲಿ ಚಿನ್ನದ ಗಣಿ

14 ಜನರನ್ನು ಬಂಧಿಸಿದರು.

ಕಳೆದ ತಿಂಗಳು ಕೋಲಾರದ ಚಿನ್ನದ ಗಣಿಯಲ್ಲಿ ನಡೆದ ಗಲಭೆಯ ಕಾರಣ ಪೋಲೀಸರು ಗುಂಪು ಹಾಕಿಸುವ ಪ್ರಸಂಗ ಒದಗಿತ್ತು. ಈಗ 14 ಜನರನ್ನು ಬಂಧಿಸಿದ್ದಾರೆ. ವಿಚಾರಣೆ ಯಾಗುತ್ತಲಿದೆ.

ಹಿಟ್ಲರ ಮುಸೋಲಿನಿಯವರು ಭೇಟಿಯಾಗಲಿರುವರು. ಜಪಾನಿನಲ್ಲಿನ ಸಾರ್ವತ್ರಿಕ ಚುನಾವಣೆಯ ಫಲಿತಾಂಶಗಳನ್ನು ಕುತೂಹಲದಿಂದ ಈಕ್ಷಿಸುತ್ತಿರಲಾಗಿದೆ.

ಆರ್. ಎ. ಎಫ್-ನವರವರು ಬ್ಯಾಂಡೀ ಮತ್ತು ಕೀಲಗಳ ಮೇಲೆ ಪ್ರಚಂಡದಾಳಿ ನಡೆಸಿದರು. ಬ್ರಿಟಿಷರ 9 ಬಾಂಬರುಗಳು ಹಿಂದಿರುಗಲಿಲ್ಲ.

Visit Royal Cafe
Near Royal Picture Palace
Royal Cafe is ROYAL.

ಕಾಂಗ್ರೆಸ ಕಾರ್ಯ ಕಲಾಪಗಳು.

ರಾಜಾಜಿ ರಾಜೀನಾಮೆ:-

ಶ್ರೀ ಸಿ. ರಾಜಗೋಪಾಲಾಚಾರಿಯವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ರಾಜೀನಾಮೆ ಕೊಟ್ಟರು. ತಾವು ಅಧ್ಯಕ್ಷರಿಗೆ ಬರೆದ ಪತ್ರದಲ್ಲಿ ಪ್ರಧಮತಃ ವರ್ಕಿಂಗ್ ಕಮಿಟೀ ಸದಸ್ಯರಿಂದ ಮದ್ರಾಸ ನಿರ್ಣಯವನ್ನು ಕುರಿತು ತಿಳಿಸದೆ ಇದ್ದದಕ್ಕಾಗಿ ವಿಷಾದಿಸಿರುವರು.

ವರ್ಕಿಂಗ ಕಮಿಟಿ

ಯುದ್ಧ ಪರಿಸ್ಥಿತಿ ಮತ್ತು ಸದ್ಯದಲ್ಲಿ ಭಾರತೀಯರ ಕರ್ತವ್ಯವೇ ನೆಂಬುದನ್ನು ಕುರಿತು ವರ್ಕಿಂಗ ಕಮಿಟಿಯು ಎ. ಐ. ಸಿ. ಸಿ. ಸಭೆಯ ಸ್ವೀಕಾರಕ್ಕಾಗಿ ನಿರ್ಣಯಗಳನ್ನು ಮಾಡಿದೆ. ಮಹಾತ್ಮ ಗಾಂಧಿಯವರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿ ಇಂಗ್ಲೀಷರವರು ಭಾರತವನ್ನು ಬಿಟ್ಟು ಹೋಗುವದಕ್ಕೆ ತಮಗೆ ಕ್ಷೇಮವಿಲ್ಲೆಂದು ಸೂಚಿಸಿರುವರೆಂದು ಪ್ರಕಟವಾಗಿದೆ.

ಎ. ಐ ಸಿ. ಸಿ.

ಅಖಿಲಭಾರತ ಕಾಂಗ್ರೆಸ್ ಸಮಿತಿಯು ಬಾಂಬರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. 100 ಸದಸ್ಯರೂ ಒಂದು ಸಾವಿರಕ್ಕಿಂತ ಹೆಚ್ಚಿನ ಪ್ರೇಕ್ಷಕರೂ ಹಾಜರಿದ್ದರು. ಕ್ರಿಪ್ಸ ನಿಯೋಗವು ನಿಷ್ಫಲವಾದ ಕಾರಣ ಯುದ್ಧ ಪರಿಸ್ಥಿತಿ ಕುರಿತು ವರ್ಕಿಂಗ ಕಮಿಟಿಯವರು ಮಾಡಿದ ತೀರ್ಮಾನಗಳು ಎ. ಐ. ಸಿ. ಸಿ. ಸಭೆಯಲ್ಲಿ ಸ್ವೀಕೃತವಾಗವು. ಪ್ರಸಿದ್ಧರಾದ ಪಂಡಿತ ಮಾಳವೀಯರು ಸಹ ನೇದಿಕೆಯಮೇಲೆ ಕುಳಿತಿದ್ದರು.

ಸೈನಿಕರ ಪದಕ

ಸ್ಥಳೀಯರ ಮೇಲೆ ಸೈನಿಕರು ಅತ್ಯಾಚಾರ ನಡೆಸಿದರೆಂದು ಹೇಳಲಾಗಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಿರುವ 2 ನೇ ನಿರ್ಣಯದಲ್ಲಿರುವ ಅಂಶಗಳನ್ನು ಪ್ರಕಟಿಸಿದಾರದೆಂದು ಸರ್ಕಾರದವರು ಬಹಿಷ್ಕಾರ ಹಾಕಿದ್ದಾರೆ

ಬರ್ಮಾ ರಸ್ತೆಯು ಕೈಬಿಟ್ಟಿತು.

ಬರ್ಮಾವ ಪೂರ್ವಭಾಗದಲ್ಲಿನ ಮುಖ್ಯ ಪಟ್ಟಣವಾದ ಲಾಶಿಯೋ ಜಪಾನರ ವಶವಾಯಿತೆಂದೂ ಬರ್ಮಾದ ರಸ್ತೆಯು ಕೈಬಿಟ್ಟಿತೆಂದೂ ಪ್ರಕಟವಾಗಿದೆ. ಆದರೂ ಚೈನೀಯರು ಯುದ್ಧಸಾಗಿಸುವರೆಂದೂ ಈವಾರ ಶ್ರೀಮತಿ ಜೊಂಗೆ ಶೇಕರು ಬರ್ಮಾಕ್ಕೆ ಬಂದಿದ್ದರೆಂದೂ ಗೊತ್ತಾಗಿದೆ.

ಆಸ್ಟ್ರೇಲಿಯಾ ದೇಶಕ್ಕೆ ಗಂಡಾಂತರ ಬಂದಿದೆಯೆಂದು ಕರ್ಟಿನರವರು ಹೇಳಿದರು.

ಇಂಗ್ಲೆಂಡಿನಮೇಲೆ ಪುಗ್ಸಟಾಳಿ.

ಸಾರ್ವಜನಗರನಮೇಲೆ ಜರ್ಮನರ ಉಗ್ರಾಣಿಯಾಗಿ 78 ಜನರು ಸತ್ತರೆಂತಲೂ ಅನೇಕ ಅಂಗಡಿ ಮನೆಗಳು ನಾಶನಾದವೆಂತಲೂ ಅತಿಪಯ ನಷ್ಟವಾಯಿತೆಂತಲೂ ಹೇಳಲಾಗಿದೆ.

ಮದ್ರಾಸಿನ ಕಾಂಗ್ರೆಸ್ ಶಾಸನ ಸಭೆಯ ಸಭೆಗೆ ಬಳ್ಳಾರಿ ಅನಂತಪುರ ಜಿಲ್ಲೆ ಗಳಿಂದ ಯಾವ ಸದಸ್ಯರೂ ಹೋಗಿರಲಿಲ್ಲವೆಂದು ತಿಳಿದುಬಂದಿದೆ

The Rayalaseema Bank Ltd., BELLARY.

NOTICE TO SHARE-HOLDERS

The Second Ordinary General Meeting of the RAYALASEEMA BANK LIMITED. BELLARY will be held on Sunday, 17th May, 1942, at 12 Noon at the Registered Office of the Bank, 'Doddi House' Brahmin Street, Bellary, to transact the following business:

1. To receive and adopt the Directors' Report and Audited Balance Sheet and Profit and Loss Account for the period ending 31st December 1941.
2. To elect 4 directors in place of those retiring by rotation under Article 87 of the Association; the retiring directors are eligible for re-election.
3. To appoint Auditor or Auditors for the current year and to fix his or their remuneration.

A Shareholder has proposed the name of Mr D Tirumala Rao G. D A. R. A.

The Transfer Books of the Company will be closed from 1st to 15th May 1942, both days inclusive.

By order of the Board,
B. V. Seshagiri Rao,
Secretary.

19th April, 1942
Bellary.

ಜರ್ಮನಿಯ ಸರ್ವಾಧಿಕಾರಿ ಹಿಟ್ಲರರ ಭಾಷಣ

ಜರ್ಮನಿಯ ರಿಷ್ ಮಹಾಸಭೆಯಲ್ಲಿ ಹಿಟ್ಲರರು ೨೬ ನೆಯ ತಾ. ನುಡ್ಯಾಸ್ಪದ ಭಾಷಣಮಾಡಿದರು.

ರಿಷ್ ಮಹಾಸಭೆಯು ಕಿಕ್ಕಿರಿದಿತ್ತು. ಫೀಲ್ಡ್ ಮಾರ್ಷಲ್ ಗೋರಿಂಗರು ದ್ವಾರದಲ್ಲಿ ಹರ್ ಹಿಟ್ಲರರನ್ನು ಸ್ವಾಗತಿಸಿದರು. ಗೋರಿಂಗರು ಹಿಟ್ಲರರಿಗೆ ಸ್ವಾಗತನೀಡುತ್ತ "ಈ ನಿಮಿಷವನ್ನು ಇಡೀ ಜಗತ್ತೇ ಎದುರು ನೋಡುತ್ತಿದೆ. ನಿಮ್ಮ ಹೇಳಿಕೆಯಿಂದ ಇತಿಹಾಸಕ್ಕೊಂದು ಹೊಸ ಪ್ರಕರಣವನ್ನು ತೋರಿಸಬೇಕಾಗಿದೆ"ಎಂಬುದಾಗಿತಿಳಿಸಿದರು

ಸಾವಿರ ವರ್ಷಕ್ಕೊಮ್ಮೆ ಜಗತ್ತನ್ನು ಅಲ್ಲಾಡಿಸುವ ಕದನ

ಹರ್ ಹಿಟ್ಲರರು ತಮ್ಮ ಭಾಷಣವನ್ನು ಆರಂಭಿಸಿ, ಬ್ರಿಟನ್ನು ಮೊದಲಿನಿಂದ ಯೂರೋಪಿನ ತಳಪಾಯವನ್ನು ಸಡಲಿಸುತ್ತ ಬಂದಿತೆಂದೂ ಆದರೆ ಈ ಕೆಲಸವು ಆಚಂದ್ರಾರ್ಕವಾಗಿ ನಡೆಯುವಂತೆ ಆಯಿತೆಂದೂ ಬ್ರಿಟನ್ನಿನ ಸೂರೆಯು ಕೊನೆಗಾಣುವ, ಕಾಲವು ಸನ್ನಿಹಿತವಾಗಿ ಈ ಕದನಕ್ಕೆ ಇಳಿಯಬೇಕಾಯಿತೆಂದೂ ಅನಂತರ ಸೂಚಿಸಿದರು.

ಗರ್ಜಿಸಲ್ಲಿ ಜರ್ಮನಿಯು ಅನಿವಾರ್ಯವಾಗಿ ಎದುರಿಸಬೇಕಾಗಿ ಬಂದ ಕದನವು ಕೇವಲ ಯೂರೋಪಿಗೆ ಮಾತ್ರ ಅಸ್ತಿಯಿಸುವುದಿಲ್ಲವೆಂಬುದು ಸ್ಪಷ್ಟವಾಯಿತು ಸಾವಿರ ವರ್ಷಕ್ಕೊಮ್ಮೆ ಜಗತ್ತನ್ನು ಅಲ್ಲಾಡಿಸುವಂತಹ ಕದನವಿದೆಂಬುದು ಸ್ಪಷ್ಟವಾಯಿತು. ಬ್ರಿಟನ್ನು ಮತ್ತು ಫ್ರಾನ್ಸ್-ಪೂರ್ಲೆಂಪನ್ನು ನುಂಡಿಟ್ಟುಕೊಂಡು ಕದನನಾರಂಭಿಸಿದವು.

"ಯೂರೋಪಿನಲ್ಲಿ ಅನೈಕಮತ್ಯವೂ, ನಿಸ್ಸಹಾಯಕತ್ವವೂ ಇರುವಂತೆ ಮಾಡುವುದೇ ಬ್ರಿಟನ್ನಿನ ಉದ್ದಿಶ್ಯ. ಆದರೆ, ಬ್ರಿಟನ್ನಿನ ಸಾಮ್ರಾಜ್ಯದ ಗಡಿಯಲ್ಲಿ ಅದನ್ನು ಎದುರಿಸಬಲ್ಲ ಸಮಾನ ಬಲಪ ರಾಷ್ಟ್ರವೊಂದು ಇಲ್ಲದೇ ಇದುವರೆಗೆ ಬ್ರಿಟನ್ನಿನ ಸ್ಥಾನವು ಭದ್ರವಾಗಿರುತ್ತದೆ. ರಷ್ಯನರು ಪೂರ್ವ ಏಷ್ಯದ ಕಡೆಗೆ ಕಾಲಿಟ್ಟಾಗ, ಅವೆರಡವು ಸಂಪೂರ್ಣವಾಗಿ ಪ್ರತ್ಯೇಕವಾದಾಗ, ಜಪಾನರು ಸಹೆ ಜರ್ಮನರಂತೆ ಮತ್ತು ಇಟಾಲಿಯನರಂತೆ ನಿದ್ದೆಯಿಂದ ಎದ್ದಾಗ ಬ್ರಿಟಿಷ್ ಸಾಮ್ರಾಜ್ಯದ ಇತಿಹಾಸಕ್ಕೆಗೆ ತೊಂದರೆ ಬಂತು. ಯೂರೋಪಿನ ಸಹಕಾರದ ಮೇಲೆ ಹೊರತು ಆದಕ್ಕೆ ವಿರುದ್ಧವಾಗಿ ವರ್ತಿಸಿ ಬ್ರಿಟಿಷ್ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಆಗಲಿಲ್ಲ

"ಆದ್ದರಿಂದ 1914 ರಲ್ಲಿ ಇಂಗ್ಲೆಂಡು ಇತರ ಬಲಯುತ ರಾಷ್ಟ್ರಗಳೊಂದಿಗೆ ಜರ್ಮನಿಯನೇಲೆ ಸಂಗ್ರಾಮ ಹೂಡಿತು. ಆದರೆ ಫಲವಾಗಿ ಜರ್ಮನಿಯನ್ನು ಬಂಧಿಸಿ ಕೂರಿಸಿತ್ತು.ಆದರೆ ಕೊಂಚಕಾಲವಲ್ಲಿಯೇ ಜರ್ಮನಿಯು ಈ ಬಂಧನವನ್ನು ಹರಿದು ಬಿಸಾಡಿತು. ಇಂಗ್ಲೆಂಡು ಅಮೆರಿಕದ ಸಹಾಯವನ್ನು ಯಾಚಿಸಿದುದರಿಂದ ಅಮೆರಿಕಕ್ಕೆ ಆರ್ಥಿಕವಾದ ಮತ್ತು ರಾಜಕೀಯ ಮಹತ್ವವನ್ನು ಕೊಟ್ಟಂತಾಯಿತು ಇನ್ನು ಇಂಗ್ಲೆಂಡು ತಪ್ಪಿಸಲಾಗದು. ಕಳೆದ ಸಂಗ್ರಾಮವು ನುಗಿದನೇಲೆ ಜರ್ಮನಿಯು ಜರ್ಮನಿಯ ಸ್ಥಾನವನ್ನು ಆಕ್ರಮಿಸಿತು. ಅಮೆರಿಕವು ಇಂಗ್ಲೆಂಡಿನ ಸ್ಥಾನವನ್ನು ಹಿಡಿಯಿತು. ಇಂಗ್ಲೆಂಡು 'ಬಿಲ್ಲುಗಳಿಗೆ ಸಹಿಮಾಡಿಸ್ವೆ ಮಾಡಿದ್ದೆ; ಬೆಂಬಲಿಗಳನ್ನು ಕೊಟ್ಟಿದ್ದು ಕೊಟ್ಟಿದ್ದೆ. ಆದರೆ ಅವುಗಳನ್ನು ಪೂರೈಸಲು ಮಾತ್ರ ಅದು ಅಶಕ್ತವಾಗಿತ್ತು. ಕಡೆಗೆ ಇಂಗ್ಲೆಂಡಿನ ಅರ್ಥಿಕಶಕ್ತಿ ಸಂಪೂರ್ಣವಾಗಿ ನಾಶವಾಯಿತು. ಇದೇ ಅನಂತರದಲ್ಲಿ ಅದರ ಸೋಲಿಗೆ ತಳಪಾಯವಾಯಿತು

ಇಂದು ಬ್ರಿಟನ್ನು ಮತ್ತೊಂದು ರೀತಿಯ ಸಂಗ್ರಾಮದಲ್ಲಿ ಕೈಹಾಕಿದೆ. ರಕ್ಷಿಸಿಕೊಳ್ಳಲು ಅಸಾಧ್ಯವೆನಿಸಿದಂತಹ ಯೂರೋಪಿನ ಶಿಸ್ತನ್ನು ರಕ್ಷಿಸಿಕೊಳ್ಳುವುದರಲ್ಲಿ ಬ್ರಿಟನ್ನಿನ ಶಕ್ತಿಯು ಕುಂಠಿತಗೊಂಡಿದೆ. ಇಂಗ್ಲೆಂಡು ಯಾವುದೇ ರಾಷ್ಟ್ರಕೊಂದಿಗೆ ಸೇರಿದರೂ, ಸಂಗ್ರಾಮ ನುಗಿದ ನೇಲೆ ಬ್ರಿಟನ್ನಿಗಿಂತ ಅದರ ಮಿತ್ರರಾಷ್ಟ್ರಗಳೇ ಬಲಯುತವಾಗಿರುತ್ತವೆ.

ಯೆಹೂದ್ಯರ ಉಪಟಳ.

ಮೊದಲನೆ ನುಮಾ ಸಂಗ್ರಾಮದಲ್ಲಿ ಬ್ರಿಟನ್ನು ಸಂಗ್ರಾಮಕ್ಕೆ ತರುವ ಶಕ್ತಿಯೆಂದರೆ ಯೆಹೂದ್ಯರು. ನಮ್ಮನ್ನು ನಿಸ್ಸಹಾಯಕ ಸ್ಥಿತಿಗಿಳಿಸಿದವರೂ ಅವರೆ ಬ್ರಿಟಿಷ್ ಸಾಮ್ರಾಜ್ಯಕ್ಕೆ ಯೆಹೂದ್ಯರೀಗ ವಿಪತ್ತನ್ನು ತಂದಿದ್ದಾರೆ. ಬೋಲ್ಷೆವಿಕ್ ಸಾಂಕ್ರಾಮಿಕವನ್ನು ಹರಡಿದವರು ಯೆಹೂದ್ಯರು. ಅವರಿಗೆ ಇನ್ನೇನೂ ಯೋಚನೆಯೇ ಇಲ್ಲ; ಒಬ್ಬರಮೇಲೆ ಇನ್ನೊಬ್ಬರನ್ನು ಎತ್ತಿ ಕಟ್ಟುವುದೇ ಅವರಿಕನವನ್ನು ಈಗಿನ ಯುದ್ಧಕ್ಕೆ ಯೆಹೂದ್ಯರೇ ಎಳೆದರು. ಅಮೆರಿಕದ ಅಭಿಪ್ರಾಯದಲ್ಲಿ ಇದು ಅನಾವಶ್ಯಕವಾಗಿತ್ತು. ಯೆಹೂದ್ಯರ ಈ ಸಂಗ್ರಾಮದಾಹವನ್ನು ಜರ್ಮನ್ ಯೋಧರೂ ಅವರ ಮಿತ್ರರೂ ಅರಿತಿದ್ದಾರೆ.

ರಷ್ಯದಲ್ಲಿ ಸಂಗ್ರಾಮ

"ಈಸಾರಿ ರಷ್ಯದಲ್ಲಿ ಆರಂಭವಾದಂತಹ ಉಗ್ರ ಛಳಿಯು ಕಳೆದ 140 ವರ್ಷಗಳಿಂದ ತಲೆ ಹಾಕಿರಲಿಲ್ಲ. ಜರ್ಮನಿಯ ಸೇನೆಗಳನ್ನೆಲ್ಲ ಹಿಂದಕ್ಕೆ ಕರೆಸಲಾಯಿತು ಈ ಕಷ್ಟ ಕಾರ್ಯವನ್ನು ನಾವು ಬಹಳ ವಿಜಕ್ಷಣತೆಯಿಂದ ನಡೆಸಿದೆವು ನನ್ನ ಮುಂದೆ ಬಹಳ ಕಷ್ಟಗಳಿದ್ದುದರಿಂದ ನನ್ನ ಹೆಸರನ್ನು ನನ್ನ ಸೇನೆಯ ಭವಿಷ್ಯದೊಂದಿಗೆ ಬೆರೆಸುವ ನಿಶ್ಚಯಮಾಡಿದೆ. ದೇವರ ದಯದಿಂದ ಈ ನಿಷ್ಠತನ್ನು ನಿಭಾಯಿಸಿದೆಂತಾಯಿತು ನನ್ನ ಸೈನಿಕರ ಶೌರ್ಯ ಪ್ರತಾಪಗಳು ಮೆಚ್ಚತಕ್ಕವಾಗಿವೆ. ರಷ್ಯಗಳು ಆಕಾರ ಸಂಖ್ಯೆಯಲ್ಲಿ ನುಂಪೆ ನುಗ್ಗಿ ಬರೂ ನನ್ನ ಯೋಧರು ಅವರನ್ನು ಹತಮಯಲು ಸಮರ್ಥರಾದರು. ನನಗೆ ಸಂಧಿವಿನಿವೆ ಭಾರಿ ಕಷ್ಟವೆಂದರೆ ಸರಕಾರಾಜ್ಞ. ನನಗೆ ಸನ್ನುಗಳು ತೀರ ಅಗತ್ಯವಾಗಿದ್ದವು. ಆಗ ನಾನೇ ನಾನು ದಂಡನಾಯಕತ್ವ ವಹಿಸಿ, ಅತ್ಯುಗ್ರವಾದ ವೃಥಮನಸ್ಸಿನಿಂದ ಕಾರ್ಯ ಸಾಧನೆ ಮಾಡಿದ್ದವನ್ನು ನೀವೆಲ್ಲಾ ಒಪ್ಪುವಿರೆಂದು ಭಾವಿಸುತ್ತೇನೆ.

ಹೆಚ್ಚಿನ ಅಧಿಕಾರಬೇಕು.

ಮುಂದಿನ ಛಳಿಗಾಲದಲ್ಲಿ ಸ್ಥಿತಿಗಳನ್ನು ಎದುರಿಸಲು ಜರ್ಮನಿ ಸಲಕರಣೆಗ

ಳು ಹೆಚ್ಚು ಶಕ್ತನಾಗುವುದು. ಆ ಪರಿಯಾನ ಕ್ಷಣದಲ್ಲೆಂದರೆ ಆ ಕ್ಷಣ ನಾನು ಮಧ್ಯೆ ಕೆ ಹಾಕಿ, ನನಗೆ ಸೂಕ್ತತೋರಿದ ರೀತಿಯಲ್ಲಿ ವರ್ತಿಸಲು ಶಕ್ತ ಅಧಿಕಾರವನ್ನು ಜನಾಂಗವು ನನಗೆ ಕೊಡಬೇಕೆಂದು ನಿರೀಕ್ಷಿಸುತ್ತೇನೆ ಜನಾಂಗದ ಸಾವು ಜೀವದ ಪ್ರಶ್ನೆ ಬಂದಾಗ ನಾನು ನನಗೆ ಉಚಿತವೆಂದು ಕಾಣುವ ಮಾರ್ಗದಲ್ಲಿ ಕೆಲಸಮಾಡುವಂತಿರಬೇಕು ಆದ್ದರಿಂದ ಯಾರೇ ಆಗಲಿ ತಮ್ಮ ಕರ್ತವ್ಯವನ್ನು ನೆರವೇರಿಸುವಂತೆ ಒತ್ತಾಯಪಡಿಸುವುದು ಅಧಿಕಾರ ನನಗಿದೆಯೆಂಬುದಾಗಿ ರಿಷ್ ಮಹಾ ಸಭೆಯು ಒಪ್ಪಬೇಕು ಹಾಗೆ ನನ್ನ ಸೂಚನೆಗೆ ವಿರುದ್ಧವಾಗಿ ನಡೆಯುವವರನ್ನು ಅವರು ಯಾವ ಮಹತ್ವ ಸ್ಥಾನದಲ್ಲಿಯೇ ಇರಲಿ ತಕ್ಷಣ ಮನೆಗೆ ಕಳಿಸಲು ನನಗೆ ಅಧಿಕಾರ ವೀಯಬೇಕು' ಎಂದರು

ರಜವನ್ನೇ ನಾನು ಕಂಡಿಲ್ಲ.

1933 ರಿಂದೀಚೆಗೆ ಒಂದು ದಿನ ಕೂಡ ನಾನು ರಜವನ್ನು ಕಂಡಿಲ್ಲ ಇನ್ನು ಕೆಲವು ತಿಂಗಳುಗಳ ಕಾಲ ರಣರಂಗದಲ್ಲಿರುವವರಿಗೆ ನಾನು ರಜ ಕೊಡಲಾರೆ" ಎಂದರು ಜರ್ಮನಿಯಲ್ಲಿ ತಪ್ಪುಮಾಡಿದವರಿಗೆ ಸಾಮಾನ್ಯಶಿಕ್ಷೆಗಳನ್ನು ವಿಧಿಸುತ್ತಿರುವ ಉದಾಹರಣೆಗಳನ್ನು ಹಿಟ್ಲರರು ಕೊಟ್ಟು ಕಾಲಕ್ಕೆ ತಕ್ಕಂತೆ ವರ್ತಿಸದೇ ಇರುವ ನ್ಯಾಯಾಧೀಶರನ್ನು ಮನೆಗೆ ಕಳಿಸಲಾದೀತೆಂದು ಎಚ್ಚರಿಸಿದರು

ಇನ್ನೇನು ನಕಾಲವು ನನ್ನಿಹತನಾಗುತ್ತಿವೆ ಛಳಿಗಾಲದ ನಿದ್ರಾವಸ್ಥೆಯಿಂದ ಎದ್ದು ವಿಜಯವನ್ನು ಸಾಧಿಸಬೇಕಾಗಿದೆ ನಾನೆಸ್ಟರಮಟ್ಟಿಗೆ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆಂಬುದನ್ನು ಭವಿಷ್ಯತ್ ವ್ಯಕ್ತಪಡಿಸುವುದಾಗಿದೆ' ಎಂದರು

ರಷ್ಯವು ನಾಶವಾಗಬೇಕು.

'ರಷ್ಯವು ನಾಶವಾಗುವವರೆಗೆ ನಾವು ಕದನವನ್ನು ನಿಲ್ಲಿಸುವುದಿಲ್ಲ ಜರ್ಮನಿಯು ಬೋಟುಗಳೂ ಇತರ ಸಾಧನಗಳೂ ಪರ್ಯಾಪ್ತವಾಗಿ ಉತ್ಪತ್ತಿಗೊಳ್ಳುತ್ತವೆ. ಹೋಗುವುದನ್ನು ಬ್ರಿಟನ್ನು ಕಾಣದೇ ಇರದು ಜರ್ಮನಿಯು ಈಗಿನ ಕದನದಲ್ಲಿ ಹೆಚ್ಚಿನ ಸೌಕರ್ಯಬಲವಿಲ್ಲದೆಯೇ ಹಿಂದಿನ ಕದನಕ್ಕಿಂತ ಹೆಚ್ಚು ಜಯಗಳಿಸಿದೆ. ಈಗಿನ ಕದನದಲ್ಲಿ ಸತ್ಯಕ್ಕೆ ಜಯವುಂಟು. ಸತ್ಯವು ನಮ್ಮ ಕಡೆಗಿದೆ. ನನ್ನ ಹೆಸರನ್ನು ಜರ್ಮನ್ ಪ್ರಜೆಗಳ ಭವಿಷ್ಯದೊಂದಿಗೆ ಬಂಧಿಸಿದ್ದೇನೆ ದೇವರಲ್ಲಿ ನನ್ನ ದೊಂದೇ ಪ್ರಾರ್ಥನೆ. ಜರ್ಮನ್ ಪ್ರಜೆಗಳು ನಡೆಸುತ್ತಿರುವ ಈಗಿನ ಕದನದ ದೃಷ್ಟಿಯಿಂದ ಅವಶ್ಯಕವೆನಿಸುವ ಹೆಚ್ಚುಕಾಲ ನನಗೆ ಆಯುಸ್ಸನ್ನು ಕೊಡಲಿ'

ಜಪಾನರ ನಾವೆ—

ಹಿಂದೂಸಾಗರದಲ್ಲಿದ್ದ ಜಪಾನರ ನಾವೆಯು ಸದ್ಯಕ್ಕೆ ಕಾಣದಂತಾಗಿದ್ದರೂ, ಅದರ ಅಪಾಯವು ಇಮೆಯಿಂತಲೇ ಗಮನಿಸಬೇಕು ಜಪಾನಿಯುದ್ಧದ ಹಡಗುಗಳುಎಣ್ಣೆತುಂಬಿಕೊಂಡುಬರಲು ಅಂದಮಾನದ್ವೀಪಗಳಿಗೋ ಸಿಂಗಪ್ಪೂರಕ್ಕೋ ಹೋಗಿರಬೇಕು. ಎಂಬುದಾಗಿ ಲಂಡನ್ನಿನ ಪಾರ್ಲೆಯಿಮೆಂಟ್.

ಭಾರತಕ್ಕೆ ಅಪಾಯ:—

ಡರ್ಚ್ ಈಸ್ಟ್ ಇಂಡೀಸಗವರ್ನರರಾಗಿದ್ದ ಡಾ. ವಾನಮೂಕರನರು ಆಸ್ಟ್ರೇಲಿಯಾಕ್ಕಿಂತಲೂ ಹಿಂದೂಸ್ತಾನಕ್ಕೆ ಹೆಚ್ಚಿನ ಅಪಾಯವಿದೆಯೆಂದು ವಾಶಿಂಗ್ಟನ್‌ನಲ್ಲಿ ಹೇಳಿದರು

ಇಂಗ್ಲೆಂಡಮೇಲೆ ಜರ್ಮನರ ದಾಳಿ.

ಕಳೆದವಾರದಿಂದ ಜರ್ಮನರು ಇಂಗ್ಲೆಂಡಿನ ಪಟ್ಟಣಗಳಮೇಲೆ ಬಾಂಬುದಾಳಿಯನ್ನು ಹೆಚ್ಚು ಜೋರಿನಿಂದ ಸ್ಫಾರಂಭಿಸಿರುವರು. ಈಸ್ಟ್ ಆಂಗ್ಲಿಯಾವ ಒಂದು ಪಟ್ಟಣದಲ್ಲಿ ಬಹಳ ನಸ್ಟವೂ ಮರಣಗಳೂ ಸಂಭವಿಸಿವೆ.

ಜನರ ವಿಶ್ವಾಸವೇ

ಓರಿಯಂಟಲ್ ಕಂಪನಿಯನ್ನು

ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾಡಿದೆ.

ಚಾರಿಯಲ್ಲಿರುವ ವಿಮೆ 31—12—40 83 ಕೋಟಿಗಿಂತಲು ಹೆಚ್ಚು.
ನಿಧಿಯ ದ್ರವ್ಯ .... „ 27½ „
ವಾರ್ಷಿಕ ಆದಾಯ „ 4¾ „

ಅತ್ಯಂತ ಆಕರ್ಷಣೀಯವಾದ ನಮ್ಮ ವಿಮಾ ಯೋಜನೆಗಳ
ಪೂರ್ಣ ವಿವರಗಳನ್ನುಳ್ಳ ವಿಮಾ ಪುಸ್ತಕ
[Prospectus]ಕ್ಕಾಗಿ ಕೆಳಗಿನವರಿಗೆ ಬರೆಯಿರಿ

ಪಿ. ಬ್ರಾಂಚ್ ಸೆಕ್ರೆಟರಿ

ಓರಿಯಂಟಲ್

ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.,
ಅಕೌಂಟೆಂಟ್ಸ್ ಸ್ಟ್ರೀಟ್, ಮದ್ರಾಸ್.

ಅಥವಾ ಇನ್ಸ್‌ಪೆಕ್ಟರು, ಓರಿಯಂಟಲ್ ಲೈಫ್ ಆಫೀಸು
312 ರೂಪರ್ಟ್ಸ್ ಗೇಟ್ ಬ್ಯೂಸಿಂಗ್ ಬಳ್ಳಾರಿ.

ಮುಖ್ಯ ಕಾರ್ಯಾಲಯ, ಬೊಂಬಾಯಿ. ಹಿಂದೂಸ್ಥಾನದಲ್ಲಿ ಸ್ಥಾಪಿತ 4187

ಬಳ್ಳಾರಿ ಜಿಲ್ಲೆಯ ಆರೋಗ್ಯ

ಕಾಲರಾ:-ಕಳೆದ ವಾರ 274 ಜನರಿಗೆ ತಗಲಿ 136 ಜನರು ಸತ್ತರು.

ಪ್ಲೇಗು:—ಕಳೆದವಾರ 12 ಜನರಿಗೆ ತಗಲಿ 5 ಜನರು ಸತ್ತರು.

ತಂಬ್ರಹಳ್ಳಿ

ಉಪಾಧ್ಯಾಯರ ಶೋಚನೀಯ ನಿಧನ.

ಇಲ್ಲಿಯ ಹೈಯರ್ ಎಲಿಮೆಂಟರಿ ಶಾಲೆಯಲ್ಲಿ ಸಹಾಯೋಪಾಧ್ಯಾಯರಾಗಿದ್ದ ಶ್ರೀ ಕೆ. ನಾಸುದೇವರಾಯರು ತಾ.೪-೪-೪೨ರ ದಿನ ಕಾಲಂತಾದಿಂದ ಸ್ವರ್ಗವಾಸಿಗಳೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಜಿಲ್ಲಾ ಬೋರ್ಡಿನ ಖರ್ಚಿನಿಂದ ಪಾಧ್ಯಾಶಿಕ್ಷಣ ಹೊಂದಿದ್ದು, ಉ ತ್ತಾ ಹಿ ಗಳಾ ದ ಅಧ್ಯಾಪಕರಾಗಿದ್ದರು. ಇವರ ಆತ್ಮಕ್ಕೆ ಶಾಂತಿಯೊದಗಲಿ.

—0—

ಪ್ರಾಥಮಿಕ ಶಾಲೋಪಾಧ್ಯಾಯರ ಇಂಕ್ರಿಮೆಂಟ್

ಡಿ. ಇ. ಓ. ರವರ ಅಭಿಪ್ರಾಯ

'ನವಭಾರತ' ಪ್ರತಿನಿಧಿಗಳು ಬಳ್ಳಾರಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ನರಸಿಂಹ ಶಾಸ್ತ್ರಿ ಯವರೊಡನೆ ಸಂಭಾಷಿಸಿ ಈ ಕೆಳಗಿನ ಅಂಶಗಳನ್ನು ತಿಳಿದರು.

ಪ್ರಶ್ನೆ:-ಬೋರ್ಡು ಶಾಲಾಪ್ರಾಥಮಿಕೋಪಾಧ್ಯಾಯರು ತಮಗೆ ಬರಬೇಕಾದ ಇಂಕ್ರಿಮೆಂಟುಗಳಿಗಾಗಿ ಆಂದೋಲನ ನಡೆಸಬಹುದೇ? (Agitation)

ಉತ್ತರ:-ಬೋರ್ಡು ಶಾಲಾಪ್ರಾಥಮಿಕೋಪಾಧ್ಯಾಯರಿಗೆ ಇಂಕ್ರಿಮೆಂಟ್ ಕೊಡಬೇಕೆಂದು ಸರ್ಕಾರವೂಕೂಡ ಹೇಳಿದೆ. ಆದರು ನ್ಯಾಯವಾದ ರೀತಿಯಲ್ಲಿ ತಮ್ಮ ಈ ಬೇಡಿಕೆಯನ್ನು ಜಿ. ಬೋ. ಅಧ್ಯಕ್ಷರ ಮುಂದೆ ಇಡುವುದರಲ್ಲಿ ಏನೂತಪ್ಪಿಲ್ಲ. ಇದಕ್ಕೆ ನನ್ನ ಸಾನುಭೂತಿ ಇದೆ.

ಪ್ರ:—ಈ ವಿಷಯದಲ್ಲಿ ಉಪಾಧ್ಯಾಯ ಸಂಘಗಳ ಪ್ರತಿನಿಧಿಗಳು ಜಿ. ಬೋ. ಅಧ್ಯಕ್ಷರಲ್ಲಿ ಶಿಷ್ಟಮಂಡಳವನ್ನು ಒಯ್ಯುವರಿರುತ್ತಾರೆ. ತಮ್ಮಲ್ಲಿಗೂ ಶಿಷ್ಟಮಂಡಳವು ಬರಬಹುದೇ?

ಉ:-ಉಪಾಧ್ಯಾಯರೇ ಶಿಷ್ಟಮಂಡಳ (Deputation) ವನ್ನೊಯ್ಯಬಹುದು. ಇದರಲ್ಲಿ ಇತರರು ಕೈಯಾಕಬಾರದು. ಅವರಿಗೆ ಇಂಕ್ರಿಮೆಂಟ್ ಕೊಡಿಸುವ ವಿಷಯ ನನಗೆ ಸಂಬಂಧಿಸಿದ್ದಲ್ಲ. ನಾನು ಇದರಲ್ಲಿ ಪ್ರವೇಶಮಾಡುವುದು ಒಳ್ಳೆಯದಲ್ಲ. ಉಪಾಧ್ಯಾಯರ ಶಿಷ್ಟಮಂಡಳವು ವಿದ್ಯಾಭ್ಯಾಸದ ಇತರ ಅಂಶಗಳ-ಯಾ-ಅನುಮಾನಗಳನ್ನು ಸ್ಪಷ್ಟವಾಗಿ ತಿಳಿಯಲು ನನ್ನಲ್ಲಿ ಬರಬಹುದು. ನಾವು ಸಂತೋಷದಿಂದ ಆ ನ ದೊಡನೆ ಚರ್ಚಿಸುವೆವು.

ಪ್ರ:-ಉಪಾಧ್ಯಾಯರು ಮತ್ತು ಉಪಾಧ್ಯಾಯ ಸಂಘಗಳು ತಮ್ಮ ಕುಂದುಕೊರತೆಗಳನ್ನು ಪ್ರಕಟಿಸಬಹುದೇ? ವಿದ್ಯಾವಿಷಯಕ ಲೇಖನಗಳನ್ನು ಪತ್ರಿಕೆಗಳಿಗೆ ಕಳುಹಿಸಬಹುದೇ ?

ಉ:—ಡೆಪ್ಯುಟೇ ಇನ್ಸ್‌ಪೆಕ್ಟರುಗಳೂ, ಉಪಾಧ್ಯಾಯರೂ, ವಿದ್ಯಾವಿಷಯಕ ಲೇಖನಗಳನ್ನು ವೃತ್ತ ಪತ್ರಗಳಿಗೂ, ಮಾಸ ಪತ್ರಿಕೆಗಳಿಗೂ ಕಳುಹಿಸಬಹುದು. ಉಪಾಧ್ಯಾಯ ಸಂಘಗಳವರ ನಿರ್ಣಯಗಳನ್ನು ಪ್ರಕಟನೆಗೆ ಕಳುಹಿಸಬಹುದು. ನಿರ್ಣಯಗಳು ಮಹತ್ವ ವಿದ್ದರೆ, ನನಗೊಂದು ಪ್ರತಿಯನ್ನು (Copy) ಕಳುಹಿಸಬಹುದು.

ಬಳ್ಳಾರಿ ಜಿಲ್ಲಾ ಬೋರ್ಡು ಶಾಲೆಗಳ

ಉಪಾಧ್ಯಾಯ ಸಂಘಗಳು.

ಕಾರ್ಯದರ್ಶಿಗಳಿಗೆ ಮಹತ್ವ ಸೂಚನೆ

ಬಳ್ಳಾರಿ ಜಿಲ್ಲಾ ಬೋರ್ಡು ಶಾಲೆಗಳಲ್ಲಿ ಅನೇಕ ವರ್ಷಗಳಿಂದ ನವಕರಿಮಾಡುತ್ತಿದ್ದು ಸಂಬಳದ ಹೆಚ್ಚಳಕ್ಕೆ (Increment) ಅರ್ಹರಾದ ಉಪಾಧ್ಯಾಯರಿಗೆ ಬೋರ್ಡಿನಿಂದ ಇಂಕ್ರಿಮೆಂಟು ದೊರೆತಿರುವುದಿಲ್ಲ. ಅಲ್ಲದೆ ಯುದ್ಧವಾರಂಭವಾದ ಮೇಲೆ ಆಹಾರಪದಾರ್ಥಗಳೆಲ್ಲ ತುಟ್ಟಿಯಾಗಿ ಕುಟುಂಬೀಕರಾದ ಬಡ ಉಪಾಧ್ಯಾಯರಿಗೆ ನರ್ನಿಸಲಸದಳವಾದ ಕಷ್ಟಗಳು ಪ್ರಾಪ್ತವಾಗಿವೆ. ಈ ಗಾ ಗ ಲೇ ಅನೇಕ ಉಪಾಧ್ಯಾಯ ಸಂಘಗಳವರು ನಿರ್ಣಯಗಳನ್ನು ಮಾಡಿ ಮೇಲ್ಪಟ್ಟ ಅಧಿಕಾರಿಗಳಿಗೆ ಹೇಳಿಕೊಂಡಿರುತ್ತಾರೆ. ಉಪಾಧ್ಯಾಯರ ಹಿತದ ದೃಷ್ಟಿಯಿಂದ ಎಲ್ಲಾ ಉಪಾಧ್ಯಾಯ ಸಂಘಗಳವರೂ ಇಕ್ರಿಮೆಂಟು ಮತ್ತು ವಾರ ಆರೋಗ್ಯಸುಧಾರಿಗಾಗಿ ನಿರ್ಣಯಗಳನ್ನು ಮಾಡಿ ಜಿಲ್ಲಾಬೋರ್ಡು ಅಧ್ಯಕ್ಷರು ಡೆಪ್ಯುಟಿ ಇನ್ಸ್‌ಪೆಕ್ಟರವರು, ಮತ್ತು ಡಿ. ಇ. ಓ. ರವರಿಗೆ ಕಳುಹಿಸಲು ಪ್ರಾರ್ಥನೆ

ಅನೇಕ ಉಪಾಧ್ಯಾಯ ಸಂಘಗಳ ಸಮ್ಮತಿಯನ್ನು ಪಡೆದು ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರು ಮತ್ತು ಡಿ. ಇ. ಓ. ರವರನ್ನು ಕಂಡು ಹೇಳಿಕೊಳ್ಳುವುದಕ್ಕಾಗಿ ಒಂದು ನಿಷ್ಟಮಂಡಲವನ್ನೇರ್ಪಡಿಸಲು (Deputation) ನಿಶ್ಚಿತವಾಗಿದೆ 1942 ನೆಯ ಮೇ ತಿಂಗಳ 3 ನೆಯ ವಾರವಲ್ಲಿ ಜಿಲ್ಲಾಬೋರ್ಡು ಸಭೆಯು ಸೇರುವ ದಿನ (—5—1942 ವಾರ) ಜಿಲ್ಲೆಯಲ್ಲಿನ ಎಲ್ಲಾ ಭಾಗಗಳಿಂದಲೂ ಉಪಾಧ್ಯಾಯ ಸಂಘಗಳ ಪ್ರತಿನಿಧಿಗಳು ಬಳ್ಳಾರಿಗೆ ಬರಬೇಕು. ತಾಲೂಕು ಸಂಘಗಳಿದ್ದಲ್ಲಿ ತಾಲೂಕಿನಿಂದ ಇಬ್ಬರು ಪ್ರತಿನಿಧಿಗಳು ಬಂದರೆ ಸಾಕು. ತಾಲೂಕು ಸಂಘಗಳು ಇಲ್ಲವಿದ್ದರೆ, ಅವು ಸರಿಯಾಗಿ ಕೆಲಸಮಾಡುತ್ತಿರುವುದು ಇಲ್ಲವಾದರೆ, ಉಪಾಧ್ಯಾಯ ಸಂಘಗಳವರೇ ಪ್ರತಿನಿಧಿಗಳನ್ನು ಕಳುಹಿಸಬೇಕು. ಸಂಘಗಳವರು ಸದರಿ ಪ್ರತಿನಿಧಿಗಳ ಎಲ್ಲಾ ಖರ್ಚುಗಳನ್ನೂ ಭರಿಸಬೇಕು. ಬೋರ್ಡು ನೊಟೆಂಗಿನ ತೀರ್ಮಯು ನಿಶ್ಚಿತವಾದೊಡನೆಯೇ 'ನವಭಾರತ'ದಲ್ಲಿ ತಿಳಿಸಲಾಗುತ್ತದೆ

ಅಧ್ಯಕ್ಷರು:- ಜಿಲ್ಲಾಬೋರ್ಡು ಸದಸ್ಯರು ಮತ್ತು ಇತರ ಅಧಿಕಾರಿಗಳಿಗೆ ಅರ್ಪಿಸಲು ಒಂದುವಿನ್ನವತ್ತೇ (Memorandum)ಯನ್ನು ಇಂಗ್ಲೀಷ್, ಕನ್ನಡ, ತೆಲುಗು ಭಾಷೆಗಳಲ್ಲಿ ತಯಾರಿಸಲು 'ನವಭಾರತ'ದ ಸಂಪಾದಕರಾದ ಶ್ರೀ ಟಿ. ಪಿ ಕೇಶವರಾಯರನ್ನು ಕೇಳಿಕೊಳ್ಳಲಾಗಿದೆ ವಿನ್ನವತ್ತಳೆ ನಕ್ಕೆಯ ಖರ್ಚುಗಳಿಗಾಗಿ ಎಲ್ಲಾ ಉಪಾಧ್ಯಾಯ ಸಂಘಗಳವರೂ ಒಂದೊಂದು ರೂಪಾಯಿ "ನವಭಾರತ" ಸಂಪಾದಕರಿಗೆ ಮುನಿಆರ್ಡರು ಮಾಡಬೇಕು

ಮದ್ರಾಸು ಪ್ರಾಂತದ ಇತರ ಜಿಲ್ಲೆಗಳಲ್ಲಿರುವಂತೆ ನಮ್ಮ ಜಿಲ್ಲೆಯಲ್ಲೂ ಒಂದು ಜಿಲ್ಲಾ ಉಪಾಧ್ಯಾಯರ ಸಂಘವನ್ನು ಸ್ಥಾಪಿಸಬೇಕಾಗಿದೆ ಈ ಕಾರಣ ಸಂಘಕ್ಕೆ ಬ್ಬರಂತೆ ಪ್ರತಿನಿಧಿಗಳು ಬರಲೇಬೇಕೆಂದೂ ಬರುವ ಮುಂಚೆ ಸಂಪಾದಕರಿಗೆ ರೂ 1.0.0 ಕಳುಹಿಸಬೇಕೆಂದೂ ಆಗ್ರಹದಪ್ರಾರ್ಥನೆ.

ವ್ಯವಸ್ಥಾಪಕರು,
(ಬಳ್ಳಾರಿ ಜಿಲ್ಲಾ ಬೋರ್ಡು ಪಾಠೋಪಾಧ್ಯಾಯರ ಪರವಾಗಿ)

ಎಣ್ಣೆ ಕೊಳ್ಳಿ

ನಿಮ್ಮ ಉಪ್ಪಿನಕಾಯಿಯು ಚೆನ್ನಾಗಿರಬೇಕೆಂದರೆ ಇವರ A.S. ಬ್ರಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ.

ಉಪ್ಪಿನಕಾಯಿಯು ಮೆತ್ತಗಾಗುವುದಿಲ್ಲ.
,, ಮುಗ್ಗು ಯಾ ಬೂಜು ಹಿಡಿಯುವುದಿಲ್ಲ
,, ಹುಳಿವಾಸನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಇಲ್ಲದೆ ಅಮೃತವಾದ ರುಚಿಯನ್ನುಂಟು ಮಾಡುವುದು.

A. S. ಸೀಲನ್ನು ಗಮನಿಸಿ, ಕೊಳ್ಳಿರಿ. ನೋಸಹೋಗಬೇಡಿರಿ.

ದೊರೆಯುವ ಸ್ಥಳ. 1) ಎಂ. ಪುಟ್ಟೇಂಜಿರಾವು, ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ವಿ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಮಗೆ ಶಾಶ್ವತವಾಗುವುದು.

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦
ಕನ್ನಡ ದಶೋಪನಿಷತ್ತುಗಳು	೦—೯—೦
ಶಿವಾನುಭವ ಚೋಧೆ	೦—೪—೦
ಸುಮತಿ ಶತಕ	೦—೧—೦

ಅಂಚೆ ವಿಳಿ ಬೇರೆ. ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವವರಿಗೂ ಧಾರಾಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮಚೇಂಟು, ಬಳ್ಳಾರಿ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ. ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಹೊಸ ವಸ್ತುಗಳನ್ನು ಕೊಡುತ್ತೇವೆ. ಬೆಸ್ಟ್ ಎಂಡ್ ನಾಚುಗೆಯೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ಸ್ವತಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ

ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಪರೀಕ್ಷೆಯ ಸಂಬಂಧ ಪುಸ್ತಕಗಳು, ಕಛೇರಿ ಕಾಗದಂಬರಿಗಳೆಲ್ಲವೂ ದೊರೆಯುವುದಲ್ಲದೆ ನಿಮಗೆ ಎಲ್ಲಾ ವಿಷಯವೂ ಮಾತಿನಿಂದಲೂ, ಸ್ಪಷ್ಟವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಹಿಂದೂಸ್ಥಾನಿ ಕಾಂಪೌಂಡು, ಬಳ್ಳಾರಿ.

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	
Annual	
Local	2—0—0
Mofussil	3—0—0
6 Months	
Local	1—4—0
Mofussil	2—0—0

ಚಂದಾ ವಿವರ	
ವರ್ಷಕ್ಕೆ	
ಬಳ್ಳಾರಿಯವರಿಗೆ	2-0-0
ಹೊರಗಿನವರಿಗೆ	3-0-0
೬ ತಿಂಗಳಿಗೆ	
ಬಳ್ಳಾರಿಯವರಿಗೆ	1-4-0
ಹೊರಗಿನವರಿಗೆ	2-0-0

Nava Bharat, Bellary.

REG. No. M. 3937.

Sri _____

Printed at Vittal Press, Car Street Fort, & Published by T. B. Keshava Rao, Bellary

MEMORANDUM.

Submitted to the President, District Board, Bellary, by the Representatives of the Elementary School Teachers' Unions and Associations, on 20—5—1942.

A Plea for Increments and Dearness Allowance Etc;

We beg to submit as follow :—

1. That the District Board is spending annually a sum of Rs. 2,25,000 for Elementary Education and this forms the major item in the Board's budget.

2. Owing to the favouritism shown in the days of the Taluk Board and notwithstanding the scales of pay introduced by the District Board with the approval of the Government in the year 1935, invidious inequalities exist in the salaries of the teachers' of various grades, lower, higher and secondary.

Lower Grade Teacher draws from			Rs. 15	to Rs.	28.
Higher	,,	,,	,, 20	to	32.
Secondary	,,	,,	,, 20	to	35

3. The increments due on 1-4-1937 and 1-4-1939 given to some teachers only for those periods without arrears, we beg to submit, are unjust and irregular as they benefited mostly the new entrants. The claims of the senior teachers were ignored.

4. There are teachers in all grades drawing the same pay as when they were entertained, this period ranging from five to twenty years.

5. There is a good number of secondary grade trained teachers working in the Higher grade places and the few senior secondary Grade teachers working in the Board elementary Schools, in spite of the P. D. B's assurance are not being promoted either in pay or in rank and we beg to submit that when vacancies arise in secondary schools only fresh recruits are usually preferred.

6. We beg to submit that inspite of several disabilities such as want of proper and adequate accommodation, furniture, antipathy of the public for rapid progress in education and attitude of indifference towards the emoluments of the teaching profession, most of us strive our best to keep up the best traditions of our profession and maintain the strength and efficiency.

7. Inspite of several years of faithful service, (i.e., 5 years and more) some teachers are not confirmed in service, thus depriving them of the provident fund benefits. This is detrimental to the progress of the school and jeopardises the prospects of the teacher.

8. The Daily press has been publishing the special allowances given to the local board employees elsewhere in the province in view of the war situation. Our plight is also equally unenviable owing to the abnormal increase in the prices of food stuffs.

9. The rise in the postal rates and the prices of the stationery articles justifies our demand for contingency allowance being increased at least by fifty percent.

Therefore we pray :—

1. That our increments so far withheld be granted up-to-date with arrears to all the teachers entitled for them.

2. That the teachers be granted Dearness Allowance and fifty percent contingency allowance over and above the present allowance.

3. That the case of the senior secondary teachers be considered favourably in regard to increments, promotion to secondary schools etc., from the date of the adoption of the time scale pay.

4. That Secondary teachers working in Higher Grade places be given secondary posts with corresponding increase in pay.

5. That the teachers in the several grades having a service of three years and more be confirmed forthwith.

Lastly we pray that the other essential requirements of our schools, so very necessary for their progressive working, may also be kindly considered and granted.

We beg to remain,
Sir,
Your most obedient servants,

Krishna Press, Bellary.

ಬಳ್ಳಾರಿಜಿಲ್ಲಾ ಬೋರ್ಡು ಪ್ರಾಥಮಿಕ ಪಾಠಶಾಲೋಪಾಧ್ಯಾಯರ ಸಂಘಗಳವರು - ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ 20—5—1942 ರ ದಿನ ಅರ್ಪಿಸಿದ

ವಿಜ್ಞಾಪನಾ-ಪತ್ರಿಕೆ.

[ಸಂಬಳದ ಹೆಚ್ಚಳ ಮತ್ತು ತುಟ್ಟಿ ಭತ್ಯ ದಯಪಾಲಿಸಿರಿ]

ಸ್ವಾಮಿ,

1. ಬಳ್ಳಾರಿಜಿಲ್ಲಾ ಬೋರ್ಡಿನವರು ಪ್ರತಿವರ್ಷವೂ ಸುಮಾರು 2,25,000 ರೂ. ಜಿಲ್ಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಿದ್ದು - ಬೋರ್ಡಿನ ವೆಚ್ಚದಲ್ಲಿ ಇದು ಬಹು ದೊಡ್ಡಭಾಗವಾಗಿದೆ.

2. ತಾಲೂಕು ಬೋರ್ಡುಗಳ ಕಾಲದಲ್ಲಿನ ಪಕ್ಷಪಾತದಿಂದ ಕೊಟ್ಟ ಸಂಬಳದ ವಿಧಾನವು - ಸರಕಾರದವರ ಸಮ್ಮತಿಯಿಂದ 1935 ರಲ್ಲಿ ಬೋರ್ಡಿನವರ ಸ್ಕೇಲುಗಳನ್ನು ಜಾರಿಯಲ್ಲಿ ತಂದರೂ - ಲೋಯರ್ - ಹೈಯರ್, ಮತ್ತು ಸೆಕಂಡರಿ ಗ್ರೇಡುಗಳ ಸಂಬಳಗಳಲ್ಲಿ ಅಸಾಮ್ಯಕ್ಕೆ ಕಾರಣವಾದ ಅಂತರವಿದ್ದೇ ಇದೆ.

ಲೋಯರ್‌ನವರು ಮಾಸಿಕ ರೂ	15	ರಿಂದ	28 ರ ವರೆಗೆ ಇದ್ದಾರೆ
ಹೈಯರ್	„	20 ರಿಂದ	32 „
ಸೆಕಂಡರಿ	„	20 ರಿಂದ	35 „

3. ಹಿಂದಿನ ಬಾಕಿಗಳನ್ನು ಲೆಕ್ಕಿಸದೇ 1-4-1937 ಮತ್ತು 1-4-1939 ರ ಕಾಲಕ್ಕೆ ಮಾತ್ರ ಸಲ್ಲುವ ಇಂಕ್ರಿಮೆಂಟುಗಳನ್ನು ಅನ್ಯಾಯ ಮತ್ತು ಅಕ್ರಮ ಪದ್ಧತಿಗಳಿಂದ ಕೊಡಲಾಯಿತು. ಇದರಿಂದ ಹೊಸದಾಗಿ ಸೇರಿದವರಿಗೆ ಅನುಕೂಲವಾಯ್ತಾಗಲಿ, ಸರ್ವೀಸಾದ ಪಳಬರಿಗೆ ಲೇಶಾಂಶವೂ ಅನುಕೂಲವಾಗಲಿಲ್ಲ.

4. ವ್ಯಾರಂಭದಲ್ಲಿ ಕೊಟ್ಟ ಸಂಬಳವು ಇಂದಿಗೂ ಹೆಚ್ಚಿದೆ ಇರುವ ಉದಾಹರಣೆಗಳು - 5 ವರ್ಷದಿಂದ 20 ವರ್ಷದವರೆಗೆ ನೌಕರಿಮಾಡಿದ ಉಪಾಧ್ಯಾಯರಲ್ಲಿ ದೊರೆಯುತ್ತವೆ.

5. ಬೋರ್ಡು ವ್ಯಾಥಮಿಕ ವಾರಶಾಲೆಗಳಲ್ಲಿ ಸೆಕಂಡರೀ ಗ್ರೇಡು ಉಪಾಧ್ಯಾಯರು ಹೈಯರ್ ಸ್ಥಾನಗಳಲ್ಲಿ ಕೆಲಸ ಮಾಡುತ್ತಿರುವರು. ಜಿಲ್ಲಾ ಬೋರ್ಡು ಅಧ್ಯಕ್ಷರು ಅನೇಕ ಸಲ ವಾಗ್ದಾನಕೊಟ್ಟ ಪ್ರಕಾರ - ಪ್ರಾಥಮಿಕ ಶಾಲೆಗಳಲ್ಲಿನ ಸ್ವಲ್ಪನುಂಡಿ ಸೆಕಂಡರೀ ಗ್ರೇಡು ಉಪಾಧ್ಯಾಯರುಗಳಿಗಾದರೂ - ಸಂಬಳದ ಹೆಚ್ಚಳ - ಮತ್ತು ಮಾಧ್ಯಮಿಕ ಪಾಠಶಾಲೆಗಳಲ್ಲಿ ಸ್ಥಾನವು ದೊರೆಯದಿರುವುದು ಶೋಚನೀಯವಾಗಿದೆ. ಸೆಕಂಡರೀ ಶಾಲೆಗಳಲ್ಲಿ ಖಾಲೀ ಬಿದ್ದಾಗಲೆಲ್ಲಾ ಹೊಸಬರನ್ನು ನಿಯುಕ್ತಮಾಡುವುದು ಸಾಮಾನ್ಯವಾಗಿ ವಾಡಿಕೆಯಾಗಿದೆ.

6. ಸರಿಯಾದ ಶಾಲಾಯೋಗ್ಯಸ್ಥಳ - ಸಲಕರಣೆಗಳ ಅಭಾವ, ವಿದ್ಯಾವಿಷಯದಲ್ಲಿ ಸಾರ್ವಜನಕರಿಗಿರುವ ಔದಾಸೀನ್ಯ ಮತ್ತು ಉಪಾಧ್ಯಾಯರಿಗಿರುವ ಇತರ ಅನಾನುಕೂಲಗಳು ಇದ್ದರೂ – ಬಹು ಸಂಖ್ಯಾಕ ಉಪಾಧ್ಯಾಯರು ಸಂಖ್ಯೆ ಮತ್ತು ಶಾಲೆಯ ಅಭಿವೃದ್ಧಿಯನ್ನು ಕಾಪಾಡಿಕೊಂಡು ಬರುತ್ತಿರುವರು.

7. ಕೆಲ ಉಪಾಧ್ಯಾಯರು 5 ಮತ್ತು ಅದಕ್ಕಿಂತ ಹೆಚ್ಚಿನ ವರ್ಷಗಳ ನವಕರಿಮಾಡಿದ್ದರೂ - ಖಾಯಂ ಆಗಿಲ್ಲ. ಇದರಿಂದ ಅವರ ಭವಿಷ್ಯಕ್ಕೆ ಶಾಲೆಯ ಅಭಿವೃದ್ಧಿಗೆ ಕುಂದಾಗುವುದೆಂಬುದನ್ನು ತಮಗೆ ಹೇಳಿಕೊಳ್ಳುವ ವಲ್ಲದೆ - ಪ್ರಾವಿಡೆಂಟ್ ಫಂಡಿನ ಅನುಕೂಲತೆಯು ಅವರಿಗೆ ಇಲ್ಲದಂತಾಗಿದೆ.

8. ಮದ್ರಾಸ್ ಪ್ರಾಂತ್ಯದ ಅನೇಕ ಭಾಗಗಳಲ್ಲಿ ಯುದ್ಧದಕಾರಣ ತುಟ್ಟಿಭತ್ಯವನ್ನು ಕೊಡುತ್ತಿರುವಂಶವನ್ನು ಪತ್ರಿಕೆಗಳಲ್ಲಿ ಓದುತ್ತಿರುವೆವು. ಆಹಾರ ಸಾಮಗ್ರಿಗಳ ಬೆಲೆಯು ಅತ್ಯಧಿಕವಾಗಿ ಏರಿ ನಮ್ಮ ಪರಿಸ್ಥಿತಿಯಂದರೂ ಕರುಣಾಜನಕವಾಗಿದೆ.

9. ಸ್ಪೇಷನರಿ ವಸ್ತುಗಳ ಮತ್ತು ಪೋಸ್ಟು ಕವನಿನ ಬೆಲೆ ಹೆಚ್ಚಾಗಿರುವದರಿಂದ ನಮಗೆ ಕೊಡುವ ಕಂಟಿಂಜನ್ಸಿ ಅಲೋಯೆನ್ಸ್ ಸಾಲದು. ಅದನ್ನು ಕೊನೆಯಪಕ್ಷ ಶೇ 50% ಭಾಗವಾದರೂ ಹೆಚ್ಚಿಸಬೇಕು.

ಈ ಕಾರಣ ನಾವು ನಿಮ್ಮಲ್ಲಿ ಪ್ರಾರ್ಥಿಸುವದೇನಂದರೆ:—

1. ಹಕ್ಕಿರುವ ಎಲ್ಲಾ ಉಪಾಧ್ಯಾಯರಿಗೂ ಸ್ಕೇಲುಗಳನ್ನು ಜಾರಿಯಲ್ಲಿ ತಂದಕಾಲದಿಂದ ಇಲ್ಲಿಯವರಿಗೆ ಇಂಕ್ರಿಮೆಂಟು ಕೊಡಬೇಕು.

2. ಎಲ್ಲಾ ಉಪಾಧ್ಯಾಯರಿಗೆ ಈ ಯುದ್ಧವು ಮುಗಿಯುವವರಿಗೆ ತುಟ್ಟಿ-ಭತ್ಯ ಮತ್ತು ಈಗಿರುವದರ ಮೇಲೆ ಅರ್ಧದಷ್ಟು ಹೆಚ್ಚಿನ **ಕಂಟಿಂಜನ್ಸಿ ಅಲೋಯೆನ್ಸು** ದಯಪಾಲಿಸಬೇಕು.

3. ಬೋರ್ಡಿನವರು ಟೈಂಸ್ಕೇಲ್ ಜಾರಿಗೆ ತಂದ ಕಾಲದಿಂದ ಸೀನಿಯರ್ ಸೆಕಂಡರಿಗ್ರೇಡು ಉಪಾಧ್ಯಾಯರಿಗೆ ಇಂಕ್ರಿಮೆಂಟು ಕೊಡುವುದಲ್ಲದೆ ಖಾಲಿಯೂಬಾಗ ಸೆಕಂಡರೀ ಶಾಲೆಗಳಲ್ಲಿ ಸ್ಥಾನವೊದಗಿಸಬೇಕು.

4. ಹೈಯರ್‌ಗ್ರೇಡು ಸ್ಥಾನಗಳಲ್ಲಿ ಕೆಲಸಮಾಡುತ್ತಿರುವ ಸೆಕಂಡರೀ ಉಪಾಧ್ಯಾಯರಿಗೆ ಸೆಕಂಡರೀ ಸ್ಥಾನಗಳನ್ನು ಹೆಚ್ಚಿನ ಸಂಬಳದಿಂದ ದಯಪಾಲಿಸಬೇಕು.

5. ಮೂರು ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ಸರ್ವೀಸಾದ ಉಪಾಧ್ಯಾಯರನ್ನು ಖಾಯಂ ಮಾಡಬೇಕು.

6. ಉಪಾಧ್ಯಾಯ ಸಂಘದವರು ಶಾಲೆಗಳ ಅಭಿವೃದ್ಧಿಯ ದೃಷ್ಟಿಯಿಂದ ಬೇಡುವ ಇತರ ಸೌಕರ್ಯಗಳೆಲ್ಲಾ ಒದಗಿಸಲು ಕೋರಿಕೆ.

ತಮ್ಮ ವಿಧೇಯ ಸೇವಕರು.

ಶ್ರೀಕೃಷ್ಣ ಮುದ್ರಣಾಲಯ, ಬಳ್ಳಾರಿ.

MEMORANDUM.

Submitted to the President, District Board, Bellary, by the Representatives of the Elementary School Teachers' Unions and Associations, on 20—5—1942.

A Plea for Increments and Dearness Allowance Etc;

We beg to submit as follow :—

1. That the District Board is spending annually a sum of Rs. 2,25,000 for Elementary Education and this forms the major item in the Board's budget.

2. Owing to the favouritism shown in the days of the Taluk Board and notwithstanding the scales of pay introduced by the District Board with the approval of the Government in the year 1935, invidious inequalities exist in the salaries of the teachers' of various grades, lower, higher and secondary.

Lower Grade Teacher	draws	from	Rs.	15 to	Rs. 28.
Higher	,,	,,	,,	20 to	32.
Secondary	,,	,,	,,	20 to	35

3. The increments due on 1-4-1937 and 1-4-1939 given to some teachers only for those periods without arrears, we beg to submit, are unjust and irregular as they benefited mostly the new entrants. The claims of the senior teachers were ignored.

4. There are teachers in all grades drawing the same pay as when they were entertained, this period ranging from five to twenty years.

5. There is a good number of secondary grade trained teachers working in the Higher grade places and the few senior secondary Grade teachers working in the Board elementary Schools, in spite of the P. D. B's assurance are not being promoted either in pay or in rank and we beg to submit that when vacancies arise in secondary schools only fresh recruits are usually preferred.

6. We beg to submit that inspite of several disabilities such as want of proper and adequate accommodation, furniture, antipathy of the public for rapid progress in education and attitude of indifference towards the emoluments of the teaching profession, most of us strive our best to keep up the best traditions of our profession and maintain the strength and efficiency.

7. Inspite of several years of faithful service, (i e., 5 years and more) some teachers are not confirmed in service, thus depriving them of the provident fund benefits. This is detrimental to the progress of the school and jeopardises the prospects of the teacher.

8. The Daily press has been publishing the special allowances given to the local board employees elsewhere in the province in view of the war situation. Our plight is also equally unenviable owing to the abnormal increase in the prices of food stuffs.

9. The rise in the postal rates and the prices of the stationery articles justifies our demand for contingency allowance being increased at least by fifty percent.

Therefore we pray :—

1. That our increments so far withheld be granted up-to-date with arrears to all the teachers entitled for them.

2. That the teachers be granted Dearness Allowance and fifty percent contingency allowance over and above the present allowance.

3. That the case of the senior secondary teachers be considered favourably in regard to increments, promotion to secondary schools etc., from the date of the adoption of the time scale pay.

4. That Secondary teachers working in Higher Grade places be given secondary posts with corresponding increase in pay.

5. That the teachers in the several grades having a service of three years and more be confirmed forthwith.

Lastly we pray that the other essential requirements of our schools, so very necessary for their progressive working, may also be kindly considered and granted.

We beg to remain,
Sir,
Your most obedient servants,

Krishna Press, Bellary.

విజ్ఞాపన పత్రిక.

———:o:———

బళ్ళారి జిల్లాబోర్డులోనున్న ప్రాథమిక పాఠశాల సంఘముల పరముగా, బోర్డు అధ్యక్షులకు సమర్పింపబడిన విజ్ఞాపన పత్రము.

ఇంక్రిమెంటు మరియు డియర్నెస్ అలోయన్సుకు గాను కోరిక.

ఈ క్రింది విధముగా మనవి చేయుచున్నాము:—

1. జిల్లాబోర్డు ఆదాయవ్యయ పట్టికలోకెల్ల పెద్దమొత్తము, రూ. 2,25,000లు, ప్రాథమిక విద్య కొరకై ఖర్చుచున్నది.

2. తాలూకాబోర్డు పరిపాలనలోనుండిన పక్షపాతము, 1935లో ప్రభుత్వవారు జీతములు నియమావళి నేర్పరచినప్పటికిని, నేటికిని అన్ని గ్రేడులలోను కొంచరి జీతములలో కన్పడుచున్నది. జీతములు హెచ్చు తగ్గులుగానున్నవి.

లోయర్	గ్రేడు	టీచరుకు	రూ. 15	నుండి 28 వరకున్నది.
హైయ్యర్	,,	,,	రూ. 20	,, 32 వరకు.
సెకండరీ	,,	,,	రూ. 20	,, 35 వరకు.

3. 1—4—37, 1—4—1939 తేదీలవరకూ రానలసిన జీతపు హెచ్చింపులలో సాత బకాయిలు కలపబడక పోవుటచేత, అవి క్రొత్తగా వృత్తిలో ప్రవేశించినవారికే ఉపయోగకరముగా నుండి, పాతవారికి అక్రమము చేసినవి.

4. ఆదినుండి 20 సంవత్సరములవరకూ పనిచేసిననూ ప్రారంభవేతనమునే పొందెడి ఉపాధ్యాయులు అన్ని గ్రేడులలోనూ వున్నారు.

5. ప్రాథమిక పాఠశాలలో పనిచేసెడి సెకండరీగ్రేడు టీచర్లు, అధ్యక్షులు యిచ్చిన వాగ్దానమునుబట్టి నేటికిని వీరికెట్టి ఉన్నత స్థానములుగాని, జీతపు హెచ్చింపులుగాని ఇవ్వబడలేదు. సెకండరీ పాఠశాలలో ఖాళీలు పడినప్పుడు క్రొత్తవారిని నియమించుచున్నారు.

6. మాకు యెన్ని కష్టములు వున్నను స్థలములేమి విద్యావ్యాప్తికి ప్రజనిరుత్సాహము, మాస్థితియందు నిర్దయ, కూపవృత్తి గౌరవమును కాపాడుకొనుచూ, పాఠశాలలో బాలుర సంఖ్య, బోధనాపేక్షిత్యమునూ చక్కగా పెట్టుకొనియున్నాము.

7. 5 సంవత్సరములవరకూ పనిచేసిననూ కొంతమందికి నేఖరి ఖాయముకాలేదు. ప్రావిడెంటు ఫండు సౌకర్యములేదు. ఇది ఉపాధ్యాయుల భావికి భంగకరమగుటయేగాక, పాఠశాలాభివృద్ధికి అటంకమగుచున్నది.

8. వార్తాపత్రికల మూలముగా స్థానిక స్వపరిపాలనా శాఖోద్యోగులకు యుద్ధపుధరల స్థలితముగా ప్రత్యేక అలవెన్సు లివ్వబడినట్లు తెలియుచున్నది. ధరలు ప్రియమగుటచేత మేము కూడా శోచనీయస్థితిలో నున్నాము.

9. పోస్టు చార్జీలు, కాగితము మొదలైనవాటి ధరలు ఎక్కువగుటచేత, కంటింజెంటు అలవెన్సును ఇంకనూ సగము హెచ్చుచేయవలెను.

కావున మావేడికోలు యేమనగా:—

1. ఇంతవరకూ నిలబడిన మాజీతపు హెచ్చింపుల నొసంగవలెను.

2. ధరల అలవెన్సును, కంటింజెంసు అలవెన్సును పెంచవలెను; కంటింజెంటు అలవెన్సును సగము హెచ్చింపవలెను.

3. సర్వీసైన సెకండరీ టీచర్లకు వలయు జీతపు హెచ్చింపులు, సెకండరీ పాఠశాలలో స్థానములు, కాలమానజీతపు కొలత పెట్టినాటినుండి, ఇవ్వవలెను. హయ్యరుగ్రేడు స్థానములలో వుండిపోయిన సెకండరీ టీచర్లకు, సెకండరీ స్థానములిచ్చి, వారికి రావలసిన జీతములిన్వవలెను.

4. 3 ఏళ్ళకుపైగా పనిచేసినవాళ్ళకు పనిలో ఖాయము చేయవలెను.

పాఠశాలల ఉన్నతి కాకరమైన ఇతర అక్కరలను కూడా గమనించి మంజూరు చేయవలెనని ప్రార్థించుచున్నాము.

ఇట్లు,

భవద్విధేయులు,

కృష్ణా శూద్రాశ్రమశాల, బళ్ళారి.

Reg. No. M° 3937 ಸಂಡೀ ಮಾತರಂ.

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೫೩ ಬಳ್ಳಾರಿ ಮೇ ೧೦ ನೇ ಭಾನುವಾರ ೧೯೪೩. ಟಿ. ವಿ. ಕೇಶವರಾವ್

ಬಳ್ಳಾರಿ ಜಿಲ್ಲಾ ಬೋರ್ಡು ಶಾಲೆಗಳ

ಉಪಾಧ್ಯಾಯ ಸಂಘಗಳು.

ಕಾರ್ಯದರ್ಶಿಗಳಿಗೆ ಮಹತ್ವ ಸೂಚನೆ

ಬಳ್ಳಾರಿ ಜಿಲ್ಲಾ ಬೋರ್ಡು ಶಾಲೆಗಳಲ್ಲಿ ಅನೇಕ ವರ್ಷಗಳಿಂದ ನವಕರಿಮಾಡುತ್ತಿದ್ದು ಸಂಬಳದ ಹೆಚ್ಚಳಕ್ಕೆ (Increment) ಅರ್ಹರಾದ ಉಪಾಧ್ಯಾಯರಿಗೆ ಬೋರ್ಡಿನಿಂದ ಇಂಕ್ರಿಮೆಂಟು ದೊರೆತಿರುವುದಿಲ್ಲ ಅಲ್ಲದೆ ಯುದ್ಧವಾರಂಭವಾದ ನೇಲೆ ಆಹಾರಪದಾರ್ಥಗಳೆಲ್ಲ ತುಟ್ಟಿಯಾಗಿ ಕುಟುಂಬೀಕರಾದ ಬಡ ಉಪಾಧ್ಯಾಯರಿಗೆ ವರ್ಣಿಸಲಸದಳವಾದ ಕಷ್ಟಗಳು ಪ್ರಾಪ್ತವಾಗಿವೆ. ಈ ಗಾಗಲೇ ಅನೇಕ ಉಪಾಧ್ಯಾಯ ಸಂಘಗಳವರು ನಿರ್ಣಯಗಳನ್ನು ಮಾಡಿ ನೇಲ್ಪಟ್ಟ ಅಧಿಕಾರಿಗಳಿಗೆ ಹೇಳಕೊಂಡಿರುತ್ತಾರೆ. ಉಪಾಧ್ಯಾಯರ ಹಿತದ ದೃಷ್ಟಿಯಿಂದ ಎಲ್ಲಾ ಉಪಾಧ್ಯಾಯ ಸಂಘಗಳವರೂ ಇಂಕ್ರಿಮೆಂಟು ಮತ್ತು ವಾರ ಆಲೋಯೆನ್ಸುಗಾಗಿ ನಿರ್ಣಯಗಳನ್ನು ಮಾಡಿ ಜಿಲ್ಲಾಬೋರ್ಡು ಅಧ್ಯಕ್ಷರು ಡೆಪ್ಯುಟಿ ಇನ್ಸ್ಪೆಕ್ಟರವರು, ಮತ್ತು ಡಿ. ಇ. ಒ. ರವರಿಗೆ ಕಳುಹಿಸಲು ಪ್ರಾರ್ಥನೆ

ಅನೇಕ ಉಪಾಧ್ಯಾಯ ಸಂಘಗಳ ಸಮ್ಮತಿಯನ್ನು ಪಡೆದು ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರು ಮತ್ತು ಡಿ. ಇ. ಒ. ರವರನ್ನು ಕಂಡು ಹೇಳಿಕೊಳ್ಳುವದಕ್ಕಾಗಿ ಒಂದು ವಿಶೇಷಮಂಡಲವನ್ನೇರ್ಪಡಿಸಲು (Deputation) ನಿಶ್ಚಿತವಾಗಿದೆ 1942 ನೆಯ ನೇ ಶಿಂಗಳ 3 ನೆಯ ವಾರದಲ್ಲಿ ಜಿಲ್ಲಾಬೋರ್ಡು ಸಭೆಯು ಸೇರುವ ದಿನ 20—5—1942 ಬುಧವಾರ ಜಿಲ್ಲೆಯಲ್ಲಿನ ಎಲ್ಲಾ ಭಾಗಗಳಿಂದಲೂ ಉಪಾಧ್ಯಾಯ ಸಂಘಗಳ ಪ್ರತಿನಿಧಿಗಳು ಬಳ್ಳಾರಿಗೆ ಬರಬೇಕು. ತಾಲೂಕು ಸಂಘಗಳಿದ್ದಲ್ಲಿ ತಾಲೂಕಿನಿಂದ ಇಬ್ಬರು ಪ್ರತಿನಿಧಿಗಳು ಬಂದರೆ ಸಾಕು. ತಾಲೂಕು ಸಂಘಗಳು ಇಲ್ಲದಿದ್ದರೆ, ಅವು ಸರಿಯಾಗಿ ಕೆಲಸಮಾಡುತ್ತಿರುವುದು ಇಲ್ಲವಾದರೆ, ಉಪಾಧ್ಯಾಯ ಸಂಘಗಳವರೇ ಪ್ರತಿನಿಧಿಗಳನ್ನು ಕಳುಹಿಸಬೇಕು. ಸಂಘಗಳವರು ಸರಿಯಾದ ಪ್ರತಿನಿಧಿಗಳ ಎಲ್ಲಾ ಖರ್ಚುಗಳನ್ನೂ ಭರಿಸಬೇಕು.

ಅಧ್ಯಕ್ಷರು ಜಿಲ್ಲಾಬೋರ್ಡ ಸದಸ್ಯರ ಮತ್ತು ಇತರ ಅಧಿಕಾರಿಗಳಿಗೆ ಆರ್ಸಿಸಲು ಒಂದುಬಿನ್ನವತ್ತಳೆ (Memorandum)ಯನ್ನು ಇಂಗ್ಲೀಷ್, ಕನ್ನಡ, ತೆಲುಗು ಭಾಷೆಗಳಲ್ಲಿ ತಯಾರಿಸಲು 'ನವಭಾರತ'ದ ಸಂಪಾದಕರಾದ ಶ್ರೀ ಟಿ. ವಿ. ಕೇಶವರಾಯರನ್ನು ಕೇಳಿಕೊಳ್ಳಲಾಗಿದೆ ಬಿನ್ನವತ್ತಳೆ ವಗೈರೆ ವರ್ತುಗಳಿಗಾಗಿ ಎಲ್ಲಾ ಉಪಾಧ್ಯಾಯ ಸಂಘಗಳವರೂ ಒಂದೊಂದು ರೂಪಾಯಿ "ನವಭಾರತ" ಸಂಪಾದಕರಿಗೆ ಮನಿಆರ್ಡರು ಮಾಡಬೇಕು

ಮಹಾರು ಕ್ಷಾಂತದ ಇತರ ಜಿಲ್ಲೆಗಳಲ್ಲಿರುವಂತೆ ನಮ್ಮ ಜಿಲ್ಲೆಯಲ್ಲೂ ಒಂದು ಜಿಲ್ಲಾ ಉಪಾಧ್ಯಾಯರ ಸಂಘವನ್ನು ಸ್ಥಾಪಿಸಬೇಕಾಗಿದೆ ಈ ಕಾರಣ ಸಂಘಕ್ಕೆ ಬ್ಯರಂತೆ ಪ್ರತಿನಿಧಿಗಳು ಬರಲೇಬೇಕೆಂದೂ ಬರುವ ಮುಂಚೆ ಸಂಪಾದಕರಿಗೆ ರೂ 1-0-0 ಕಳುಹಿಸಬೇಕೆಂದೂ ಆಗ್ರಹಪೂರ್ವಕ ಪ್ರಾರ್ಥನೆ.

ವ್ಯವಸ್ಥಾಪಕರು,
(ಬಳ್ಳಾರಿ ಜಿಲ್ಲಾ ಬೋರ್ಡು ಶಾಲೋಪಾಧ್ಯಾಯರ ಪರವಾಗಿ

ಬಳ್ಳಾರಿ ಜಿಲ್ಲಾ ಬೋರ್ಡು ಸಭೆ.

೨೦-೫-೧೯೪೨
ಈ ದಿನ
ಜಿಲ್ಲಾ ಬೋರ್ಡು ಶಾಲೋಪಾಧ್ಯಾಯರ ಸಂಘದ
ಪ್ರತಿನಿಧಿಗಳು ಬರಬೇಕು.
ಬರುವ ಮುಂಚೆ
ನನಗೆ ತಿಳಿಸಬೇಕು.
(೧) ಒಂದು ರೂಪಾಯಿ
ಕಳುಹಿಸದಿದ್ದರೆ
ತಾವು
ಬರುವಾಗ
ತರಬೇಕು.

ವ್ಯವಸ್ಥಾಪಕ,
ನವಭಾರತ.

ಎಣ್ಣೆ

ನಿಮ್ಮ ಉಪ್ಪಿನಕಾಯಿಯು ಚೆನ್ನಾಗಿರಬೇಕೆಂದರೆ
ಇವರ A.S. ಬ್ರಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಉಪ್ಪಿನಕಾಯಿಯು ಮೆತ್ತಗಾಗುವುದಿಲ್ಲ
,, ನುಗ್ಗು ಯಾ ಬೂಜು ಹಿಡಿಯುವುದಿಲ್ಲ.
,, ಹುಳವಾಸನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಇಲ್ಲದೆ
ಅಮಿತವಾದ ರುಚಿಯನ್ನುಂಟು ಮಾಡುವುದು.

A. S. ಸೀಲನ್ನು ಗಮನಿಸಿ. ಕೊಳ್ಳಿರಿ. ಮೋಸಹೋಗ ಬೇಡಿರಿ

ದೊರೆಯುವ ಸ್ಥಳ- 1) ಎಂ. ಪುಟ್ಟೇಂಜಿರಾವು,
ಎಂ. ನೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ವಿ ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರವೈಪ್ಪಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೌನ್ಸ್ ಕನ್ನಡಿಗಳು ಸಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಒಮ್ಮೆ ನಮ್ಮಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦	ಅಂಚೆ ವೆಚ್ಚ ಬೇರೆ
ಕನ್ನಡ ದಶೋಪನಿಷತ್ತುಗಳು	೦—೪—೦	ಪುಸ್ತಕ ವ್ಯಾಪಾರಿಗಳ
ಶಿವಾನುಭವ ಬೋಧೆ	೦—೮—೦	ಹಾಗೂ ಹೆಚ್ಚು ಪುಸ್ತಕ
ಸುಮತಿ ಶತಕ	೦—೧—೦	ಕೊಳ್ಳುವರಿಗೂ ಧಾರಾಳ
		ಕಮೀಶನ್

ಕಾಲನ ಸುಬ್ಬಣ್ಣ, ಮಜೇಂಟು, ಬಳ್ಳಾರಿ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ನಮ್ಮ ಬೆಳ್ಳಿಯ ನಮ್ಮುಗಳು ನಮ್ಮಲ್ಲಿ ಪೊರಿಯಿಸುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ಮೇಕ್ಸ್‌ಚೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ಮೆಸ್ಸ್ ಎಂಡ ಬಾಚುಗಳೂ ದೊಡ್ಡ ಗಾಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮು ಸಲ ಪಯಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ನೂತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ ?

ಹಾಗಾದರೆ ಕೂಡಲೇ ಕಾಗದವನ್ನು ಬರೆದು ವಿವರಗಳನ್ನು ತಿಳಿಯಿರಿ

ನಿಮಗನುಕೂಲವಾದ ಶಿಕ್ಷಣಕ್ಕೆ ವರ್ಗ ಸಜ್ಜಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಕಗಳು ಕಛೇರಿಯಲ್ಲಿ ಮಾರಲ್ಪಡುವವು. ಅಗ್ಗೆಲೆ ಬೋರಯಿಸುವುದಲ್ಲದೆ ನಿಮಗೆ ಎಲ್ಲಾ ರೀತಿಯಾದ ಅನುಕೂಲತೆಯೂ, ಸೂಚನೆಯೂ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಪ್ರಿನ್ಸಿಪಾಲರು ಕಾಂಗ್ರೆಸ್ ಲೈಬ್ರರಿ, ಬಳ್ಳಾರಿ

NAVA BHARAT BELLARY.

With which is incorporated Congress Bulletin
THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉತ್ತಮ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual
Local 2—0—0
Mofussil 3—0—0

6 Months
Local 1—4—0
Mofussil 2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri _____

_____

_____

Printed at Vitral Press, Car Street Edited & Published by T. B Keshava Rao, Bellary

Reg.No. M. 3937

ವಂದೇ ಮಾತರಂ'

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಭೋಧತ.

ಸಂಪುಟ ೪

ಸಂಚಿಕೆ ೫೭

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.
ಬಳ್ಳಾರಿ ಮೇ ೧೭ ನೇ ಭಾನುವಾರ ೧೯೪೨.

ಸಂಪಾದಕ:—
ಟಿ. ವಿ. ಕೇಶವರಾವ

★

'ರಾಯಲ್' ನಲ್ಲಿ
ತೋರಿಸಲ್ಪಡುವ

ಜೀವನ್ಮುಕ್ತಿ

(ತೆಲುಗು ಸಾಮಾಜಿಕ ನಾಟ್ಯಚಿತ್ರ)

★

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ — ರೂ. 85,61,000 ನೂರಿಪ್ಪತ್ತೈದು
ಚಾಲ್ತಿ ಯಲ್ಲಿರುವ ವಿಮಾ ಪಾಲಿಸಿಗಳು — ರೂ. 14,84,44,000 ,,
ಆಸ್ತಿ — ರೂ. 5,80,86,000 ,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಸಾವತಿ ನೂಡಿರುವ ಕ್ಲೈಂಗಳು ರೂ. 7,48,66,000 ,,

ವಿಜನ್ನಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಪೆನ್ಸರಿ ರೋಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

THE NAVABHARAT
ನವಭಾರತ
ಸಂಪಾದಕ-ಪ್ರ.ಬ.ತೇಲವಲಾವು

• 17—5—42 ನೇ ಭಾನುವಾರ.

ಬೋರ್ಡು ಶಾಲೆಗಳ ಸ್ಪೆಷಲ್ ಉಪಾಧ್ಯಾಯರಿಗೆ ಇಂಕ್ರಿಮೆಂಟು.

ಜಿಲ್ಲಾ ಬೋರ್ಡಿಗೆ ಸಲಹೆ

ಬಳ್ಳಾರಿ ಜಿಲ್ಲಾ ಬೋರ್ಡಿನವರು ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಬಳ್ಳಾರಿಜಿಲ್ಲೆಯಲ್ಲಿ ಪ್ರತಿವರ್ಷವೂ ಸುಮಾರು 2 ಲಕ್ಷ ರೂ. ಸಾವಿರ ರೂ ಖರ್ಚುಮಾಡುತ್ತಾರೆ. 1940-41ರಲ್ಲಿ 2,24,827 ರೂ. ಖರ್ಚು ಮಾಡಿರುವರು. ಜಿಲ್ಲಾಬೋರ್ಡಿನವರಿಗೆ ಒಪ್ಪಿಸಿರುವ ಜನಾಬ್ದಾರಿಯುತ ಕಾರ್ಯಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಖಾತೆಯನ್ನು ತಪ್ಪಿಸಿದರೆ ಜಿಲ್ಲಾಬೋರ್ಡಿನ ಅಸ್ತಿತ್ವವೇ ಅನಾವಶ್ಯಕವಾಗುವುದು.

ಜಿಲ್ಲಾಬೋರ್ಡಿನ ಬಹು ಸಂಖ್ಯಾಕ ಸದಸ್ಯರು ಪ್ರಾಥಮಿಕ ವಿದ್ಯಾಭ್ಯಾಸದ ಅಭಿವೃದ್ಧಿಯ ವಿಷಯದಲ್ಲಿ ಎಳ್ಳಷ್ಟೂ ಶ್ರದ್ಧೆಯನ್ನು ವಹಿಸುತ್ತಿರುವುದಿಲ್ಲ. ತಮ್ಮ ಸ್ವಾರ್ಥಸಾಧನೆಗೆ ಅನುಕೂಲ ರಲ್ಲದ ಉಪಾಧ್ಯಾಯರನ್ನು ಒಂದೊರಿಂದ ಮತ್ತೊಂದೂರಿಗೆ ವರ್ಗಾಯಿಸುವುದರಲ್ಲಿ ಕೆಲ ಸದಸ್ಯರು ನಿರತರಾಗಿರುತ್ತಾರೆ. ಶಾಲೆಯನ್ನು ನಡೆಸುತ್ತಿರುವ ಕಟ್ಟಡವೆಂಥಹುದು? ಅದಕ್ಕೆ ಯಾವಾಗ ರಿಪೇರಿ? ಸಾಮಗ್ರಿ, ಸಲಕರಣೆಗಳು ಹೇಗಿವೆ? ಉಪಾಧ್ಯಾಯರಿಗೆ ಮನುಷ್ಯ ಯೋಗ್ಯವಾದ ಅನುಕೂಲಗಳು ಹೊರಿಪಿಲೆಯೆ? ವರ್ಗೈರಿ ಅಂಶಗಳನ್ನು ಕುರಿತು ಸದಸ್ಯರೂ ಬೋರ್ಡು ಅಧಿಕಾರಿಗಳೂ ಯೋಚಿಸಿ ತಕ್ಕ ಚರ್ಯೆ ತೆಗೆದುಕೊಂಡಿದ್ದರೆ, ನಾವು ಇಷ್ಟು ಹಿಂದುಳಿಯುವ ಪ್ರಸಂಗವೇ ಇರುತ್ತಿರಲಿಲ್ಲ.

ಜಿಲ್ಲೆಯಲ್ಲಿ 357 ಪ್ರಾಥಮಿಕ ಪಾಠಶಾಲೆಗಳೂ 697 ಉಪಾಧ್ಯಾಯರೂ ಇದ್ದಾರೆ. ಜಿಲ್ಲಾ ವಿದ್ಯಾಶಾಖೆಯ ಮುಖ್ಯಾಧಿಕಾರಿಗಳು ಹೇಳುವಂತೆ ಬಹಳ ಶಾಲೆಗಳು ಕ್ಷೀಣ ಗತಿಯಲ್ಲಿವೆ. ಈ ಪರಿಸ್ಥಿತಿಗೆ ಕಾರಣಗಳನೇಕವುಂಟು, ಆದರೆ ಒಂದು ಮುಖ್ಯ ಕಾರಣವನ್ನು ಇಲ್ಲಿ ವಿವೇಚಿಸದೆ ವಿಧಿಇಲ್ಲ, ತಮಗೆ ಕೊಡುವ ಸಂಬಳದಲ್ಲಿ ಹೆಚ್ಚಳವಿಲ್ಲದೆ, **ಉಪಾಧ್ಯಾಯರು ಅನೇಕ ವರ್ಷಗಳಿಂದ ಒಂದೇ ಪರಿಮಿತಿಯಲ್ಲಿರುವ ಅಸಮಾಧಾನ, ಅತೃಪ್ತಿಗಳೇ ಶಾಲೆಗಳ ಕ್ಷೀಣದೆಸೆಗೆ ಬಹು ಮುಖ್ಯ ಕಾರಣವಾಗಿದೆ.**

ಪ್ರಾರಂಭದಲ್ಲಿ ಕೊಟ್ಟ ಸಂಬಳವು ಹೆಚ್ಚು ಕಡಮೆಗಳಿಲ್ಲದೆ ಕಳೆದ 20 ವರ್ಷಗಳಿಂದಲೂ ಒಂದೇಸಮವಾಗಿಟ್ಟಿರುವ ಉದಾಹರಣೆಗಳಿಷ್ಟೋ ಇವೆ. ತಾಲೂಕು ಬೋರ್ಡು ಮೊಗಲ ರಾಜ್ಯಭಾರಕಾಲದಲ್ಲಿ ಆದ ಸಂಬಳದ ಅಸಮಾನತೆಯನ್ನು ತಪ್ಪಿಸಲು ಜಿಲ್ಲಾ ಬೋರ್ಡಿನವರು ತಕ್ಕ ಉಪಾಯಗಳನ್ನು ಕೈಕೊಳ್ಳಲಿಲ್ಲ. 1935ರಲ್ಲಿ ಸರಕಾರದವರೆ ಒಪ್ಪಿಗೆಯಿಂದ ಸ್ಕೇಲುಗಳ ಮುಂಜೂರಿಯಾಯಿತು. 1-4-37-1 4-39ರ ಎರಡು ಇನ್‌ಕ್ರಿಮೆಂಟುಗಳನ್ನು ಹಿಂದಿನ ಬಾಕಿಯನ್ನು ಲೆಕ್ಕಿಸದೆ ಸರಸು ಅನ್ಯಾಯದ ಪದ್ಧತಿಯಿಂದ ಕೊಟ್ಟರು.

ಪುರುಷರಿಗೊಂದು ಗ್ರೇಡು, ಸ್ತ್ರೀಯರಿಗೊಂದು ಗ್ರೇಡು, ಒಟ್ಟಿನಲ್ಲಿ ಆಚಾರ ಹೇಳುವುದಕ್ಕೆ ಬದನೆಕಾಯಿ ತಿನ್ನುವುದಕ್ಕೆ ಎಂಬ ರೀತಿಯಲ್ಲಿದೆ. ಲೋಯರ್‌ಗ್ರೇಡು ಉಪಾಧ್ಯಾಯರು 151-ರೂ ಇಂದ 281-ರ ವರೆಗೂ ಇದ್ದಾರೆ. ಹೈಯ್ಯರ್ ಗ್ರೇಡಿನವರ 20- ರೂ ಇಂದ 32 ರ ವರೆಗೂ ಇದ್ದಾರೆ. ನೆಕೆಂಡರಿಯವರು 20 ರಿಂದ 35 ವರೆಗೂ ಇದ್ದಾರೆ. ಒಂಒಂದು ಶಾಲೆಯಲ್ಲಿ ಹೆಚ್ಚಿನ ಸಂಬಳವವರು ಅಸಿಸ್ಟೆಂಟು ಆಗಿ ಕಡಮೆಯವರು ಹೆಡ್ಮಾಸ್ಟರಾಗಿದ್ದಾರೆ. ಅಥವಾ ಕಡಮೆ ಯೋಗ್ಯತೆಯವರು ಹೆಚ್ಚಿನ ಯೋಗ್ಯತೆಯವರ ಮೇಲೆ ಇವ್ವಾರೆ ಇವೆಲ್ಲಾ ಅಸಮಾನತೆಗಳಿಂದ ದ್ವೇಷಾಸೂಯೆಗಳ ಹುಟ್ಟು ಇಬ್ಬರ ಜಗಳದಲ್ಲಿ ಕೂಸು ಸಣ್ಣಗಾಯ್ತೆಂಬ ರೀತಿಯಲ್ಲಿ ಶಾಲೆಗಳು ಕ್ಷೀಣಿಸುತ್ತಾ ಬಂದಿವೆ.

"ಈಗ ನಾವು 0-0-3 ಪೈ ಎಜುಕೇಷನ್ ಸೆಸ್ ವಿಧಿಸಿರುತ್ತೇವೆ. ಇನ್ನು ಹೆಚ್ಚಿಗೆ ಹಾಕದೆ ನಮಗೆ ಆ ಭಾಗದಿಂದ ವರಮಾನ ಬರದೆ ಉಪಾಧ್ಯಾಯರಿಗೆ ಸಂಬಳ ಹೇಗೆ ಹೆಚ್ಚಿಸಬೇಕು? ಸರಕಾರದವರು ಗ್ರಾಂಟು ಕೂಡ ಹೆಚ್ಚಿಸುವಂತಿಲ್ಲ. ಜಿಲ್ಲಾಬೋರ್ಡಿನ ಆರ್ಥಿಕ ಪರಿಸ್ಥಿತಿಯಾದರೋ ಕರುಣಾಜನಕವಾಗಿದೆ" ಎಂದು ಬೋರ್ಡಿನ ವಾದವು ಬರಬಹುದು. ಈ ವರ್ಷಗಳಲ್ಲಿ ಜಿಲ್ಲಾ ಬೋರ್ಡಿನವರ ಇತರ ಭಾಗದ ಖರ್ಚುಗಳು ಅಧಿಕವಾಗುತ್ತಾನಡೆದಿವೆ. ಪ್ರತಿವರ್ಷದ ಆಂದಾಜು ಪಟ್ಟಿಗಳಲ್ಲಿ ಇವು ಮುಂಜೂರಾಗುತ್ತಲೇ ಇವೆ ಸರಕಾರದವರು ವಿಧಿಸಿದ ಭತ್ಯಾಕ್ಕಿಂತಲೂ (T. A.) 2 ಸಾವಿರ ರೂ. ಹೆಚ್ಚಿಗೆ ಅಸಿಸ್ಟೆಂಟು ಇಂಜಿನೀಯರ್‌ರವರ ಖಾತೆಗೇ ಖರ್ಚಾದದ್ದೂ ಮುಂಜೂರಾದದ್ದೂ ವಿದಿತವಿದೆ.

ಯುದ್ಧಪ್ರಾರಂಭನಾಗಿ 2½ ವರ್ಷಗಳಾಯಿತು. ಮನುಷ್ಯನ ಜೀವನ ಭರಣಕ್ಕೆ ಆಕರವಾದ ಆಹಾರ ಸಾಮಗ್ರಿಗಳು ಬಹಳ ತುಟ್ಟಿಯಾಗಿವೆ. ಮದ್ರಾಸು ಪ್ರಾಂತ್ಯದ ಅನೇಕ ಭಾಗಗಳಲ್ಲಿ ವಿವಿಧ ಶಾಖೆಗಳ ನವಕರರಿಗೆ ತುಟ್ಟಿ ಭತ್ಯ ಕೊಟ್ಟದ್ದು (Dearness Allowance) ತಿಳಿದು ಬಂದಿದೆ. ತುಟ್ಟಿ ಭತ್ಯವೂ ಇಲ್ಲ. ಇಂಕ್ರಿಮೆಂಟುಕೂಡ ಇಲ್ಲವೆಂದರೆ ಉಪಾಧ್ಯಾಯರು ಬದುಕುವ ಬಗೆ ಹೇಗೆ? ಉಪಾಧ್ಯಾಯರ ಔದಾಸೀನ್ಯ ಅಲಕ್ಷ್ಯ ಕರ್ತವ್ಯ ಶೂನ್ಯತೆಗಳಿಗಾಗಿ ಶಿಕ್ಷೆಸಲಿ ಬೇಡವೆನ್ನುವುದಿಲ್ಲ. ಆದರೆ ಉಪವಾಸ ಕೆಡುವುದು ಧರ್ಮವಲ್ಲ.

ಈ ಕಾರಣ ಎಲ್ಲಾ ದೃಷ್ಟಿಗಳಿಂದಲೂ ಉಪಾಧ್ಯಾಯರಿಗೆ ತುಟ್ಟಿಭತ್ಯ ಇಂಕ್ರಿಮೆಂಟು ಕೊಡುವುದು ಸರ್ವಥಾ ಯೋಗ್ಯವಾದುದಾಗಿದೆ. ಸರಕಾರದವರೂ ಇದಕ್ಕೆ ತನ್ನ ಒಪ್ಪಿಗೆಯ ಮುದ್ರೆಯನ್ನು ಒತ್ತಿದೆ. ಜಿಲ್ಲಾ ಬೋರ್ಡಿನವರು ತಮ್ಮ ಇತರ ಫಂಡಿನಿಂದಲಾದರೂ (General Funds) ಇವುಗಳನ್ನು ಕೊಟ್ಟು ಪ್ರಾಥಮಿಕ ವಿದ್ಯಾಭ್ಯಾಸದ ಸಾರ್ಥಕತೆಯನ್ನು ಸ್ಪಷ್ಟಪಡಿಸಿ ಬಡ ಉಪಾಧ್ಯಾಯರ ಕೃತಜ್ಞತೆಗೆ ಪಾತ್ರರಾಗಬೇಕೆಂದು ಆತಿಸುತ್ತೇವೆ.

ಬಳ್ಳಾರಿ ಪೇಟೆ ಧಾರಣೆ

15-5-42 ಶುಕ್ರವಾರ.

ಭಂಗಾರ ತೊಲ 1ಕ್ಕೆ		48-0-0
ಸಾವರಿನ್		38-0-0
ಬೆಳ್ಳಿ 100 ತೊಲ ರೂ.		75-0-0
ಪತ್ತಿ ಮುಂಗಾರಿ 12 ಮಣಕ್ಕೆ		60-0-0
ಹತ್ತಿ ಫಾರಂ		98-0-0
ಅಕ್ಕಿ 1 ರೂ. ಗೆ	4 ರಿಂದ	4½ ಸೇರು
ಬೇಳೆ ,,		4 ,,
ಗೋಧಿ ,, ...		4 ,,
ಜೋಳ ,,	14 ,,	15 ,,
ನವಣೆ ,,		18 ,,
ಸಜ್ಜೆ ,,		14½ ,,
ನೆಲಗಡಲೆ ...	...	1-3-0
ಸಕ್ಕರೆ(ಮೇಣ್ಯ) 9 ಮಣ	39	೧
ಬೆಲ್ಲ ...	14 ರಿಂದ	16
ಹುಣ್ಣಿ ಎಂಣೆ ಡಬ್ಬಿ		5-0-0

ಮಹಾತ್ಮ ಗಾಂಧಿ ಲೇಖನಗಳು.

ನೀವು ಜಪಾನರನ್ನು ಅಮಂತ್ರಿಸಿದಂತಾಗುವದಿಲ್ಲವೆ ?

ಪ್ರಶ್ನೆ—ಒಳ್ಳೆ ಎದೆಗಾರಿಕೆಯಿಂದ ಅಮಂತ್ರಣ ಕೊಡುವದು ನಿಮಗೆ ಒಲಿತಿನಿಸಬಹುದು; ಆದರೆ ಬ್ರಿಟಿಶ್ ಸರಕಾರದವರಿಗೆ ಹೊರಟುಹೋಗಲು ಹೇಳುವದರಿಂದ ಹಿಂದುಸ್ತಾನದ ಮೇಲೆ ದಾಳಿ ಮಾಡಲು ಜಪಾನರಿಗೆ ಅಮಂತ್ರಣ ಕೊಟ್ಟಂತಾಗುವದಿಲ್ಲವೆ ?

ಉತ್ತರ—ನಾನು ಹಾಗೆ ಮಾಡುವದಿಲ್ಲ ಬ್ರಿಟಿಶರು ಇಲ್ಲಿರುವದರಿಂದಲೆ ದಾಳಿಮಾಡಲು ಜಪಾನರಿಗೆ ಪ್ರೋತ್ಸಾಹನೆ ದೊರೆಯುತ್ತದೆಂದು ನನಗೆ ನುನಪಂತಿಯಾಗಿದೆ. ಬ್ರಿಟಿಶರು ಹಿಂಸಸ್ತಾನವನ್ನು ಬಿಟ್ಟುಹೋಗಲು ಜಾಣತನದ ನಿರ್ಧಾರನುಮಾಡಿ ಒಂದೂಸ್ತಾನದ ಪ್ರವಾರನನ್ನು ಹಿಂದೀಯರಿಗೇ ಒಪ್ಪಿಸಿಕೊಟ್ಟರೆ ಜಪಾನರು ತನ್ನ ಯೋಜನೆಗಳಬಗ್ಗೆ ಪುನರ್ವಿಚಾರ ಮಾಡತೊಡಗಬೇಕಾಗುವದು. ಬ್ರಿಟಿಶ್‌ರ ಈಹೊಸ ನೋರಣದಿಂದಲೆ ಜಪಾನರು ವಿಚಾರಗೊಂಡಲದಲ್ಲಿ ಬೀಳುವರು, ಬ್ರಿಟಿಶ್‌ರ ಬಗ್ಗೆ ಪುಂಸಯತ ದ್ವೇಷವನ್ನು ಬಿಟ್ಟುಗೊಡುವರು, ಹಿಂದೀ ಜೀವನವನ್ನೆ ಹತ್ತಿಕ್ಕುತ್ತಿರುವ ಅನೇಕ ಅಸ್ವಾಭಾವಿಕ ಸಂಗತಿಗಳು ಮಾಯವಾಗುವಂಥ ಪಾತಾವರಣವುಂಟಾಗಬಹುದು. ನನಗೆ ತಿಳಿದ ನುಟ್ಟಿಗೆ ಹಿಂದೀಯರ ಅಭಿಪ್ರಾಯವನ್ನು ಲಕ್ಷಿಸದೆ ಜಪಾನರು ತಮ್ಮ ಯೋಜನೆಗಳನ್ನು ಮಾಡಿರುವರು. ನನ್ನ ಬರವಣಿಗೆಯಿಂದ ಅವರಮೇಲೆ ಯಾವದೇ ಬಗೆಯ ಪರಿಣಾಮವಾಗುವದಿಲ್ಲ. ಆದರೆ ಬ್ರಿಟಿಶರಿಗೆ ನಾನು ಸ್ವೀಕರಿಸಲು ಹೇಳಿದ ಸೂಗ್ರವಿಂದ ಸೂತ್ರ ಅವರು ಸೋಂದಲದಲ್ಲಿ ಬೀಳುವರು.

ಅಹಿಂಸಕ ವ್ಯಾಯಾಮ ಸಂಘ

ಮಲಾವಿನಲ್ಲಿ ಅಹಿಂಸಕ ವ್ಯಾಯಾಮ ಸಂಘವು ಕೆಲವು ದಿನಗಳಿಂದ ಕೆಲಸ ಮಾಡುತ್ತಿರುವದು ನಾಜಕರಿಗೆ ಗೊತ್ತಿರಬಹುದು. ಸರದಾರ ಸೃಥ್ವಿಸಿಂಗರೇ ಅವರ ಆತ್ಮ ಅವರ ಮಾರ್ಗದರ್ಶಕರೇ ಶ್ರೀ ನುಥಜೀ ಅವರು ಶ್ರೀಗಳಾದ ರಾಮೇಶ್ವರದಾಸ ಬಿರ್ಲಾ ಪುರುಷೋತ್ತಮ ಕಾಂಜಿ ಮತ್ತು ಕೇಶವ ದೇವನೆನೆತಿಯಾ ಇವರು ಅವರ ಧರ್ಮಾಧಿಕಾರಿಗಳು ಯುವಕರಿಗೆ ಸರದಾರ ಸೃಥ್ವಿಸಿಂಗರವರು ಶಿಕ್ಷಣ ಕೊಡುತ್ತಿರುವರು ಅವರ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳು ಶಿಕ್ಷಣ ಕ್ಕೆಂದು ಒಳ್ಳೇ ವ್ಯಕ್ತಿಗಳನ್ನು ಆಯ್ದು ಕಳುಹಿಸಿದರೆ ಮಾತ್ರ ಸಂಘವು ಅತ್ಯುತ್ತಮ ಕೆಲಸ ನಿರ್ವಹಿಸಬಲ್ಲದು. ದೈಹಿಕ ಪೂರ್ಣ ಬೆಳವಣಿಗೆಯ ಜೊತೆಗೆ ಅಹಿಂಸೆಯು ಯಾವ ರೀತಿ ಕೆಲಸ ಮಾಡಬಹುದೆಂಬ ವಿಷಯದಲ್ಲಿ ಸರದಾರ ಸೃಥ್ವಿಸಿಂಗರವರೇ ಪ್ರಯೋಗ ನಡೆಸುತ್ತಿರುವದರಿಂದ ಸಂಘದ ಕಾರ್ಯಕ್ರಮಗಳು ಅನುಪಮವಾಗಿವೆ. ಹಿಂಸೆಯಿಂದಲೇ ಭಾರತವ ಉದ್ಧಾರವಾಗಬೇಕೆಂಬ ನಂಬಿಕೆಯಲ್ಲಿ ಜೀವನದ ಉತ್ತಮ ಭಾಗವನ್ನು ಕಳೆದಂಥ ಸರದಾರರು ಅಹಿಂಸೆಯೇ ಅತ್ಯುತ್ತಮ ಸಾಧನವೆಂದು ಅದಕ್ಕೆ ನೊರೆಹೋಗಿರುವರು. ಅವರು ಮಾಡುತ್ತಿರುವ ಪ್ರಯತ್ನ ಪ್ರಮಾಣಿಕವಾದುದೆಂದು ನಾನು ನಂಬುತ್ತೇನೆ. ಕಷ್ಟತರವಾದ ಕೆಲಸವಿದು. ಒಂದು ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವದು ಒಂದು ತರಹ. ಆದರೆ ಅದೇ ತತ್ವವನ್ನು ಕಾರ್ಯರೂಪಕ್ಕೆ ತರಬೇಕೆಂದರೆ ಅವರಲ್ಲಿಯೂ ತಾನು ಇನ್ನುವರೆಗೂ ತುಳಿಯುತ್ತಿದ್ದ ಮಾರ್ಗಕ್ಕೆ ವಿರುದ್ಧ ಮಾರ್ಗವಾಗಿ ನಡೆಯಬೇಕೆಂದರೆ ಅದೇ ಬೇರೆ ತರಹವಾಯಿತು. ಸರದಾರ ಸೃಥ್ವಿಸಿಂಗರ ಕೈಕೆಳಕ್ಕೆ ಶಿಕ್ಷಣ ಪಡೆಯಲಿಕ್ಕೆ ಕಳುಹಿಸಲ್ಪಟ್ಟವರಿಗೆ ಅಹಿಂಸೆಯ ಆಚರಣೆಯಲ್ಲಾದರೂ ನಂಬಿಕೆ ಇರಬೇಕಾದುದು ಅಗತ್ಯ.

ನಕ್ಷತ್ರ ನೆಲಕ್ಕುರುಳಿ ದನಕ್ಕೆ ಮರಣ

ಕಳೆದ ತಿಂಗಳ 21 ನೇ ತಾರೀಖು ರಾತ್ರಿ ಹನ್ನೊಂದರ ಹೊತ್ತಿಗೆ ಝೂಂಸಿ ನಗರದ ನೇಲೆಲ್ಲಿ ಕಣ್ಣು ಕುಕ್ಕುವಂತಹ ಬೆಳಕು ಬಿದ್ದು ಆಕಾಶದಿಂದ ಉರುಳಿಬಿದ್ದ ನಕ್ಷತ್ರವ ಪ್ರಕಾಶನೇ ಇದಕ್ಕೆ ಕಾರಣವೆಂದು ಅನಂತರ ತಿಳಿಸುಬಂದಿತು. ಝೂಂಸಿಗೆ 10 ಮೈಲು ದೂರ ಈ ನಕ್ಷತ್ರವು ಬಿದ್ದುದು ದೊಡ್ಡ ಕಲ್ಲಿನಗಾತ್ರವಿವೆ. ಸೂರ್ಯನಲ್ಲಿ ಹೋಗುತ್ತಿದ್ದ ಎರಡು ದನಗಳು ನಕ್ಷತ್ರ ಪತನದಿಂದ ಸ್ವಾಣಬಿಟ್ಟಿವೆ. ಝೂಂಸಿಯ ಪಂಡಿತರು ಆ ನಕ್ಷತ್ರ ಬೀಳುವದರಿಂದ ಉಂಟಾಗುವ ಮತ್ತು ಪರಿಣಾಮಗಳು ದೂರವಾಗಲೆಂದು ಆ ರಾತ್ರಿಯೆಲ್ಲಾ ಪ್ರಾರ್ಥನಾದಿಗಳನ್ನು ನಡೆಸಿದರು.

ಬ್ರಿಟಿಶರು ಇಂಡಿಯಾದಿಂದ ತೆರಳಬೇಕು.

ಹಿಂದೂಸ್ತಾನದ ಸದ್ಯದ ಪರಿಸ್ಥಿತಿಯು ಸುಧಾರಿಸಬೇಕಾದರೆ ದಾಳಿಯ ಭಯವು ತಪ್ಪ ಬೇಕಾದರೆ ಜನರು ಸ್ವಾವಲಂಬಿಗಳಾಗಬೇಕಾದರೆ ಬ್ರಿಟಿಶರು ಹಿಂದೂ ಸ್ಥಾನ ಬಿಟ್ಟುಹೋಗುವುದೊಂದೇ ಮಾರ್ಗವೆಂದು 'ಹರಿಜನ' ಪತ್ರಿಕೆಯಲ್ಲಿ ಮಹಾತ್ಮ ಗಾಂಧಿಯವರು ಲೇಖನ ಬರೆದಿರುವರು.

ವೀರಶೈವ ವಿದ್ಯಾವರ್ಧಕ ಸಂಘದ ಹೈಸ್ಕೂಲು

ಬಳ್ಳಾರಿಯ ಗಾಂಧೀನಗರಭಾಗದಲ್ಲಿ ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದವರಿಂದ ಬರುವ ಜೂನ್ ತಿಂಗಳ ಪ್ರಥವ ವಾರದಲ್ಲಿ, ಮಾದರಿಯ ಉನ್ನತ ಪಾಠಶಾಲೆಯು ಪ್ರಾರಂಭವಾಗಲಿದೆ. ಗಾಂಧೀನಗರದ ವೀರಶೈವ ಹಾಸ್ಟೆಲ್‌ನಲ್ಲಿ ಶಾಲೆಯು ಸದ್ಯಕ್ಕೆ ನಡೆಸಲ್ಪಡುವುದು, ಉಪಾಧ್ಯಾಯರು ಮತ್ತು ಇತರ ಸಿಬ್ಬಂದಿಯ್ಗಬ್ಗೆ ಮುಂದೆ ತಿಳಿಸಲಾಗುವುದು.

ಟಿ. ವೀರಮಲ್ಲಪ್ಪ, ಮ್ಯಾನೇಜರು.

ಬಳ್ಳಾರಿ ಹಿಂದೂ ಮಹಾಸಭೆ ಪಾಕಿಸ್ತಾನ ವಿರೋಧ.

ಬಳ್ಳಾರಿ ಹಿಂದೂ ಮಹಾ ಸಭೆಯ ಆಸ್ತಿತ್ವದಲ್ಲಿ ಪಾಕಿಸ್ತಾನ ವಿರೋಧ ಸಭೆಯು ಸಾಂಬನೂರ್ತಿ ಮೈದಾನದಲ್ಲಿ 11-5-42 ನೇ ಘಾನುವಾರ ಸಾಯಂಕಾಲ ನಡೆಯಿತು. ಅಧ್ಯಕ್ಷರೂ ಶ್ರೀ ನರಸಿಂಹಮೂರ್ತಿಯವರೂ ಪಾತಾವಿಸಿದನಂತರ ತಜ್ಞಂಬಂಧನಿರ್ಣಯಗಳು ತೀರ್ಮಾನಿಸಲ್ಪಟ್ಟವು.

ವೋಕ ಪ್ರೌ. ಉಪಾಧ್ಯಾಯರ ಸಂಘ

ಈ ಸಂಘದ ಸಭೆಯು 10 ನೆಯ ತಾ. ಶ್ರೀ ಹೆಚ್. ಹನುಮಂತರಾಯರಧ್ಯಕ್ಷತೆಯಲ್ಲಿನೇರಿ, ಇನ್‌ಕ್ರಿಮೆಂಟು ಡಿಯರ್ನೆಸ್ ಮತ್ತು ಕಂಟಿಜನ್ಸಿ ಅಲೋಯನ್ಸ್ ಕೊಡಬೇಕೆನ್ನುವ ಮೂರು ತೀರ್ಮಾನಗಳಾದವು.

★ ಯುದ್ಧ ವಾರ್ತೆಗಳು. ★

ಚರ್ಚಿಲರ ಭಾಷಣ.

ಬ್ರಿಟಿಶ ಪ್ರಧಾನ ಮಂತ್ರಿಗಳಾದ **ಚರ್ಚಿಲರವರು ಭಾಷಣ** ಕೊಡುತ್ತಾ ಇಂ**ಗ್ಲೆಂಡಿನ ವಿಮಾನ**ದಳವು ಅತ್ಯಂತ ಬಲ ಯುತವಾಗಿದೆಯೆಂದರು. ಹಿಟ್ಲರ್ ರಷ್ಯಾದಲ್ಲಿ ವಿಷಗಾಳಿಯನ್ನು ಉಪಯೋಗಿಸಿದರೆ ಇಂಗ್ಲೆಂಡು ಜರ್ಮನಿಯಮೇಲೆ ಗ್ಯಾಸುಬಾಂಬುಗಳ ದಾಳಿಯನ್ನಾರಂಭಿಸುವುದೆಂದು ಎಚ್ಚರಿಕೆ ಇತ್ತರು.

ಸ್ವಸಂರಕ್ಷಣಾರ್ಥವಾಗಿ ಮಾತ್ರ ವಿಷಗಾಳಿಯು ಉಪಯೋಗಿಸಲ್ಪಡುವುದೆಂದೂ **ಜರ್ಮನರು** ತಾವೇ ಮೊದಲು ವಿಷಗಾಳಿಯನ್ನು ಪಯೋಗಿಸುವುದಿಲ್ಲವೆಂದೂ ಒಂದು ಸುದ್ದಿ ತಿಳಿಸುತ್ತದೆ.

ಜರ್ಮನರ ವಸಂತಪಾಳಿಯು ಪ್ರಾರಂಭವಾಯಿತು.

ನೀಪರ ಪೆಟ್ರೋವಸ್ಕದಿಂದ ಕಾರ್ಕೊವರೆಗೆ ಕ್ರೈಮಿಯಾಭಾಗದಲ್ಲಿ ಹಿಟ್ಲರನ ಇಪ್ಪತ್ತು ಲಕ್ಷ ದಂಡುಗಳು 250 ಮೈಲಿ ಅಗಲ ಪ್ರದೇಶದಲ್ಲಿ ರಷ್ಯನ ಸೈನ್ಯಗಳ ಮೇಲೆ ಉಗ್ರದಾಳಿಯನ್ನಾರಂಭಿಸಿವೆ. ರಷ್ಯನರು ಬಲವಾಗಿ ಪ್ರತಿಭಟಿಸುತ್ತಲಿರುವರು.

卐

ಸ್ಕೋಡಾ ಕಾರ್ಖಾನೆ.

ಜಗತ್ತಿನಲ್ಲೇ ಅತ್ಯಂತ ದೊಡ್ಡದಾದ ಜೆಕೋಸ್ಲೋವೇಕಿಯಾ ದೇಶದಲ್ಲಿರುವ **ಸ್ಕೋಡಾ ಕಾರ್ಖಾನೆ**ಯ ಮೇಲೆ ಕಳೆದ **ಶನಿವಾರ ಆರ್-ಎ-ಎಫ್** ವಿಮಾನಗಳು ಮುತ್ತಿಗೆಯನ್ನು ನಡೆಸಿದವು. ಬಹಳ ನಷ್ಟವಾಗಿರಬೇಕೆಂದು ಬ್ರಿಟಿಷರು ಊಹಿಸುತ್ತಾರೆ. ಈ ಕಾರ್ಖಾನೆಯು ಜರ್ಮನಿಗೆ **ಅಧೀನವಾಗುವ** ಪೂರ್ವದಲ್ಲಿ ಭಾರವಾದ ಯುದ್ಧ ಸಾಮಗ್ರಿಗಳನ್ನು ಸಿದ್ಧ ಮಾಡುತ್ತಲಿತ್ತು. 30 ಸಾವಿರ ಜನರು ಕೆಲಸಮಾಡುತ್ತಲಿದ್ದರು. ಕೂಲಿಕಾರರಲ್ಲಿ ಆಗಾಗ್ಗೆ ಪಿತೂರಿಗಳಾಗುವುದೂ ಉಂಟು. ಇದರ ವಿಸ್ತೀರ್ಣ 400 ಎಕರೆ.

ಹಿಟ್ಲರನ ಮುಂದಿನ ಯುದ್ಧ.

ಬಹುಶಃ **ಮೇ** ತಿಂಗಳ ಮೂರನೇ ವಾರದಲ್ಲಿ ಮಧ್ಯ ಪೂರ್ವದಲ್ಲಿ ಹಿಟ್ಲರನು ಪ್ರಚಂಡ ಹೋರಾಟವನ್ನು ಆರಂಭಿಸುವನೆಂದೂ. ಉತ್ತರದಲ್ಲಿ ಉಕ್ರೇನ್, ಕಾಕಸಸ್‌ಗಳಿಂದ ಹಿಡಿದು ದಕ್ಷಿಣದಲ್ಲಿ ಮೆಡಿಟರೇನಿಯನ್, ಸಿರಿಯಾವರೆಗೆ ಕದನರಂಗವು ವ್ಯಾಪಿಸಿರುವುದೆಂದೂ **ಅಮೆರಿಕನ್** ಸುದ್ದಿಗಾರರೊಬ್ಬರು ತಿಳಿಸಿದ್ದಾರೆ.

ಬರ್ಮಾದಲ್ಲಿ ಬ್ರಿಟಿಶರಿಗೆ ಸೋಲು.

ಬರ್ಮಾದಲ್ಲಿ ಬ್ರಿಟಿಷರಿಗೆ ಸೋಲಾಗಿ ಮುಖ್ಯ ಪ್ರದೇಶಗಳೆಲ್ಲಾ ಜಪಾನಿನ ವಶವಾಗುತ್ತಿರುವುದು ತಿಳಿದು ಬರುತ್ತಲಿದೆ. ಬರ್ಮಾದ ಹಿಂದಿನ ರಾಜಧಾನಿಯಾದ ಮಾಂಡಲೆಯು ಪೂರ್ಣವಾಗಿ ಪತ್ಕವಾಗಿ ಜಪಾನಿನ ಕೈಸೇರಿದೆ. ಬರ್ಮಾರಸ್ತೆ ಪ್ರಾರಂಭವಾಗುವ ಲಾಷಿಯೋನಗರವೂ ಕೈಬಿಟ್ಟ ಕಾರಣ, ಬರ್ಮಾರಸ್ತೆಯ ಆಟವು ಮುಗಿದಂತಾಗಿದೆ. ಜಪಾನಿನವರು ಲಾಷಿಯೋಪೂರ್ವಕ್ಕೆ ನುಗ್ಗುತ್ತಿರುವರು. ಬ್ರಿಟಿಷ ಸೈನ್ಯಗಳು ಆಸ್ತಾಪಿನ ನಾರ್ಗದಿಂದ ಯಶಸ್ವಿಯಾಗಿ ಹಿಂದಿರುಗುತ್ತಲಿವೆಯಂತೆ. ಇಂಜಿನೀಯರು ಕಲಿತನದಿಂದ ಕಾಮುತ್ತಿರುವರು. ಯಾನಾಚಂಗ ಎಣ್ಣೆಗಣಿಗಳನ್ನು ಸಂಪೂರ್ಣವಾಗಿ ನಾಶಮಾಡಿರುತ್ತಾರೆ.

ಮಡಗಾಸ್ಕರ ದ್ವೀಪದ ಆಕ್ರಮಣ.

ನಾಜ್ಞಿಪಾತ್ಯ ದೇಶಗಳಿಂದ ಆಫ್ರಿಕಾ ಖಂಡದ ಗುಡ್‌ಹೋಪ್ ಭೂಶಿರದಮಾರ್ಗವಾಗಿ ಹಿಂದೂಸ್ಥಾನಕ್ಕೆ ಬರುವ ಮಾರ್ಗದಲ್ಲಿದ್ದ ಪ್ರಸಂಚದ 4 ದೊಡ್ಡ ದ್ವೀಪಗಳಲ್ಲೊಂದಾದ ಮಡಗಾಸ್ಕರ ದ್ವೀಪವನ್ನು ಬ್ರಿಟಿಷರು ಆಕ್ರಮಿಸಿರುವರು. ಫ್ರೆಂಚರೆಷ್ಟು ಪ್ರತಿಭಟಿಸಿದರೂ ಕೊನೆಗೆ ಶರಣಾಗತರಾಗಲೇಬೇಕಾಯಿತು. ಬ್ರಿಟಿಷರಲ್ಲಿ 500 ಜನರು ಸತ್ತರೆಂದು ಹೇಳಲಾಗಿದೆ ಫ್ರೆಂಚರಿಗಾದ ನಷ್ಟವು ಗೊತ್ತಿಲ್ಲ.

ಜರ್ಮನಿ—ರಷ್ಯಾ

ಜರ್ಮನರಿಗೆ ಕರ್ಚೋದಲ್ಲಿ ಜಯ.

ಜರ್ಮನರು 8ನೇ ತಾರೀಖಿನ ಕ್ರೈಮಿಯಾದಲ್ಲಿ ಕದನವಾರಂಭಿಸಿದರು. 15ರಿಂದ 20 ವೈಲಿವರೆಗಿರುವ ಇಕ್ಕಟ್ಟಾದ ರಂಗದಲ್ಲಿ ಜರ್ಮನರು ಅನೇಕ ಡಿವಿಜ್ ಸೈನಿಗಳೊಡನೆಯೂ ಹೆಚ್ಚು ಸಂಖ್ಯೆಯ ಟ್ಯಾಂಕುಗಳು ಮತ್ತು ವಿಮಾನಗಳೊಡನೆಯೂ ಹೊಡೆದಾಟವಾರಂಭಿಸಿದ್ದಾರೆ. ರಷ್ಯನ್ ಸೇನೆಗಳಮೇಲೆ ನಾಜಿವಿಮಾನಗಳು ಮುತ್ತಿಗೆ ನಡೆಸುತ್ತಿವೆ.

ಹವಮಾನವು ಬಹಳ ಚೆನ್ನಾಗಿದೆ. ನೆಲವು ಒಣಗಿದೆ. ಉತ್ತರದಲ್ಲಿ ಜರ್ಮನರ ಏಟುಕೊಂಚ ಜಯವ್ರದವಾಯಿತು. ಆದರೆ ಇತರ ಕಡೆಗಳಲ್ಲಿ ವೀಷ ನಷ್ಟದೊಂದಿಗೆ ಅವರನ್ನು ಮೊದಲಿನ ಸ್ಥಾನಗಳಿಗೆ ಓಟ್ಟಲಾಯಿತು.

ಜಪಾನಿನ ಮುತ್ತಿಗೆ ಯಾದರೆ ಗಾಂಧಿ ಚಳವಳದಿಂದಲೂ ಅಡಚಣೆ.

ಕ್ರಿಪ್ಸ್‌ಕಾರ್ಯದರ್ಶಿ ಹೇಳಿಕೆ

ಅಮೆರಿಕನ್ ಮತ್ತು ಬ್ರಿಟಿಷ್ ವಿಮಾನಗಳು ಹೆಚ್ಚು ಸಂಖ್ಯೆಯಲ್ಲಿ ಭಾರತಕ್ಕೆ ತೆರಳುತ್ತಿವೆಯೆಂದೂ, ಒಂದುವೇಳೆ ಜಪಾನರು ಭಾರತವನ್ನು ಮುತ್ತಿದರೆ 10 ಲಕ್ಷ ಯೋಧರಿಗೆ ಮಿಂಚಿದ ಸೇನೆಯು ರತ್ಯಗಳನ್ನು ಎದುರಿಸಲು ಸಿದ್ಧವಾಗಿದೆಯೆಂದೂ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರ ಖಾಸಗಿ ಕಾರ್ಯದರ್ಶಿಗಳಾದ ಶ್ರೀ ಗ್ರಹಾಂಸ್ಟೈಯವರು ತಿಳಿಸಿದರು.

ಆಹಿಂಸಾತ್ಮಕ ಅಸಹಕಾರದಿಂದ ಕೂಡ ಶತ್ರುಗಳಿಗೆ ಅಡಚಣೆಯಾಗುವುದೆಂದು ಅವರು ತಿಳಿಸಿದರು. ಭರತಖಂಡದಸೇನೆಯು ತಿಂಗಳಿಗೆ 50,000 ದಷ್ಟು ಹೆಚ್ಚುತ್ತಿದೆಯೆಂದೂ, ಆದರೆ ಸಂಗ್ರಾಮ ಸಲಕರಣೆಗಳಿಗೆ ನಿತಿಯಿರುವದರಿಂದ ಅವುಗಳನ್ನು ಹೆಚ್ಚು ಹೆಚ್ಚಾಗಿ ಕಳಿಸಲು ಸಾಧ್ಯವಾಗಿಲ್ಲವೆಂದೂ ಅವರು ತಿಳಿಸಿದರು.

—0—

ಉತ್ತರ ಬರ್ಮಾದಲ್ಲಿ ಮಿತ್ರವಿಮಾನಗಳು ರತ್ಯವಿಮಾನಗಳಮೇಲೆ ಪರೀಕ್ಷಣೆ ನಡೆಸಿವೆ. ಸೈನಿಕರು ತುಂಬಿದ ಲಾರಿಗಳಮೇಲೆ ಗುಂಡು ಹಾರಿಸಲಾಯಿತು.

—ಕರ್ಚುವೆನಿನ್ಸುಲ ಶತ್ರು ವಶವಾಗಿರುವನೆಂದು ಜರ್ಮನರು ಪ್ರಕಟಿಸಿರುವರು.

—ನಮ್ಯನರ ಸೈನ್ಯಗಳು ಸಿಸ್ತಿಸಂದ ಹಿಂದಿರುಗಿದರೆಂದು ಗೊತ್ತಾಗಿದೆ.

—ಜರ್ಮನಿಯಲ್ಲಿ ಅಪಾರಯುದ್ಧ ವಸ್ತುಗಳ ಸಂಗ್ರಹವಿದೆಯೆಂದು ಅಮೆರಿಕಾವೆ ಯುದ್ಧ ವಸ್ತು ನಿರ್ಮಾಣ ಬೋರ್ಡಿನಧ್ಯಕ್ಷರು ತಿಳಿಸಿದರು.

ನನುಗೆ ತೋರುತ್ತದೆ. ದಯಾಶೂನ್ಯರಿಗಿಂತಲೂ ದಯಾಮಯರು ಒಳ್ಳೆಯವರಲ್ಲವೇ ಎಂಬುದಾಗಿ ಕೇಳಬಹುದು. ಸರಕಾರದ ಯಂತ್ರವು ಏಕಸೂತ್ರದಲ್ಲಿ ಸಮಾನವಾಗಿ ಎಲ್ಲಾ ಪ್ರವೃತ್ತಿಯ ಅಧಿಕಾರಿಗಳನ್ನು ಬಂಧಿಸಿರುವುದರಿಂದ ಸರಕಾರದ ನೀತಿಯು ಬದಲಾಗುವವರೆಗೂ, ಅಧಿಕಾರಿಗಳ ಬದಲಾವಣೆಯಿಂದ ಏನೂ ಉಪಯೋಗವಿಲ್ಲ. ನಾಗರೀಕ ಸರಕಾರವು ನಿಜವಿದ್ದರೆ ಸ್ವತಂತ್ರ ವಿಚಾರಣಾ ಸಮಿತಿಯನ್ನೇರ್ಪಡಿಸಿ ನೊಂದವರಿಗೆ ಪರಿಹಾರ ಕೊಟ್ಟು ತಪ್ಪಿತಸ್ಥರನ್ನು ಶಿಕ್ಷಿಸಿ ತನ್ನ ತಪ್ಪನ್ನು ಒಪ್ಪಿಕೊಳ್ಳುವುದು. ಆದರೆ ಈಗಿನ ಪರಿಸ್ಥಿತಿಯಲ್ಲಿ ಅಂಥಾ ಆಶೆಯನ್ನು ಇಟ್ಟುಕೊಳ್ಳುವುದು ಹುಚ್ಚುತನ. ಕೂಲಿಕಾರರು ಇವೊಂದನ್ನೂ ಲಕ್ಷಿಸದೆ ತಮ್ಮ ಕರ್ತವ್ಯಗಳನ್ನು ನ್ಯಾಯವಾಗಿಯೂ ಧರ್ಮದಿಂದಲೂ ನೆರವೇರಿಸಬೇಕು.

ಕಾನಕಾನಹಳ್ಳಿಯಲ್ಲಿ ಜೂನ್ 1942 ರಿಂದ ಒಂದು ಹೈಸ್ಕೂಲು ಪ್ರಾರಂಭವಾಗಲಿದೆ.

ಕೋಲಾರಚಿನ್ನದಗಣಿ ಮತ್ತು ಭದ್ರಾವತಿ ಕಾರ್ಖಾನೆಗಳ ಕಾರ್ಮಿಕರಮೇಲೆ ಗುಂಡುಹಾರಿಸಿದುದರ ಖಂಡನಾ ಸಭೆಗಳು ಮೈಸೂರು ದೇಶದ ಮುಖ್ಯಪಟ್ಟಣಗಳಲ್ಲೆಲ್ಲಾ ನಡೆದವು.

ಭದ್ರಾವತಿಯ ಹುತಾತ್ಮರಿಗೆ ಸಹಾಯ ಮಾಡಿರಿ

ತಾ|| 3-5-42 ನೇ ಭಾನುವಾರ ಭದ್ರಾವತಿ ನಗರದಲ್ಲಿ ನಡೆಯ ಬಂದ ಘೋರಂತ ಪ್ರಕರಣದಲ್ಲಿ ಮೂರು ಜನಗಳು ಗುಂಡಿಗೆ ಆಹುತಿಯಾಗಿರುತ್ತಾರೆ. ಇದರಲ್ಲಿ ಕೇವಲ ನೂರು ವರ್ಷದ ಹೆಣ್ಣು ಮಗುವು ಸಹ ಕನ್ನ ಪ್ರಾಣವನ್ನು ಗುಂಡಿಗೆ ಬಲಿ ಕೊಟ್ಟಿರುತ್ತವೆ ಅನೇಕ ಜನಗಳು ಗುಂಡಿನ ಪೆಟ್ಟು ತಗುಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾರೆ ಇದರ ವರಿಣಾಮವಾಗಿ ಅನೇಕ ಸಂಸಾರಗಳು ಹೊಂಚರಿಗೆ ಗುರಿಯಾಗಿವೆ.

ತಾಯಿಯನ್ನು ಕಳೆದುಕೊಂಡ ಮುರಿಗಳೋವಾಯಿಲ್ಲಿ ಪರಿತಪಿಸುತ್ತಿರುವ ಮಹಾತ್ಮರ ಬಡ ಸಂಸಾರಕ್ಕೆ ಮತ್ತು ದುರಂತಕ್ಕೆ ಗುರಿಯಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡುತ್ತಿರುವವರ ಶಿಶ್ರೂಷೆ ಮತ್ತು ಅವರ ಸಂಸಾರ ಪೋಷಣೆಗೆಗೂ ಸಹ ತಾವುಗಳೆಲ್ಲರೂ ಉದಾರ ಮನಸ್ಸಿನಿಂದ ಧನ, ಧಾನ್ಯ ಸಹಾಯಮಾಡಿ ದರಿದ್ರ ನಾರಾಯಣನ ಸೇವೆಗೆ ಭಾಗಿಗಳಾಗಬೇಕಾಗಿ ಮಹಾ ಜನರುಗಳಲ್ಲಿ ಅತಿದೈನ್ಯದಿಂದ ಪ್ರಾರ್ಥಿಸುತ್ತೇನೆ.

ತಮ್ಮ ಸೇವಕರು.

ಟಿ. ವಿಶ್ವನಾಥಾಡ್ಯ. S. ರಾಘವೇಂದ್ರರಾವ್
A. M. C. C. ಸದ್ಯ. ಮೂಲಿಕ,
ಬ್ಯಾಕ್ಟರ್ ತಂಜಾವೂರ್ ಹೋಟೆಲ್

ಶ್ರೀಮಣ ಸಚಿವರಾದ ಶ್ರೀ. ಜೆ. ಇಮಾಮ್ ಸಾಹೇಬರು ನೇ 15ರಿಂದ ಹಾಸನ-ಕಡೂರು, ಶಿವಮೊಗ್ಗ, ಮತ್ತು ಕೋಲಾರಗಳ ಕೆಲಭಾಗಗಳನ್ನು ಸಂದರ್ಶಿಸಿ ಜಿಲ್ಲಾಸಮ್ಮೇಳನಗಳಲ್ಲಿ ಭಾಗವಹಿಸುವರು.

ಹಾಸನದ ಜಿಲ್ಲಾ ಕಾಂಗ್ರೆಸ್ ಸಭೆಯು 15-5-42ನೆಯ ತಾ. ನಡೆಯ ಕಾಂಗ್ರೆಸ್ ಹಿತವನ್ನು ಕುರಿತ ಮುಖ್ಯ ನಿರ್ಣಯಗಳಾದುವು.

ಚಿತ್ರದುರ್ಗ ಜಿಲ್ಲಾ ಸಮ್ಮೇಳನ.

ನ್ಯಾಯಮಂತ್ರಿ ಶ್ರೀರಾಮನಾಥನರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ಜಿಲ್ಲಾಧಿಕಾರಿಗಳು ಕಳೆದ ವರ್ಷದ ಅಭಿವೃದ್ಧಿಯನ್ನು ನಿರೀಜಿಸಿ ಯು ಪ್ರ ನಿಧಿಗೆ 63739-8-0, ಗ್ರಾಮಗಳಲ್ಲಿ ನೀರಿನ ಸರಬರಾಜಿಗೆ 401 ಭಾವಿಗಳು ತೋಡಿಸಲು ಕೈಗೊಂಡಿರುವರೆಂಬೂ ಜಗಳೂರಿಗೆ ವಿದ್ಯುಚ್ಛಕ್ತಿ ಕೊಟ್ಟರುವುದಾಗಿಯೂ ಹೇಳಿದರು. 116 ವಿಷಯಗಳಲ್ಲಿ ಸಾಕ್ಷರತೆ ಬಲಾತ್ಕಾರ ವಿದ್ಯಾಭ್ಯಾಸ ಮುಖ್ಯವಾಗಿದ್ದವು.

ಹಿಂದಿನ ಕಾಂಗ್ರೆಸ ಮಂತ್ರಿಗಳ ಬಂಧನೆ.

ಯು. ಪಿ ಕಾಂಗ್ರೆಸ್ ಮಂತ್ರಿಗಳಲ್ಲೊಬ್ಬರಾಗಿದ್ದ ರಾಫಿ ಅಹ್ಮದ್ ಕಿದ್ವಾಯರನ್ನು ಇಂಡಿಯಾ ರಕ್ಷಣಾಶಾಸನದನ್ವಯ ಬಂಧಿಸಲಾಗಿದೆ.

ಕಾಂಗ್ರೆಸ್ ವಿರುದ್ಧ ಪ್ರಚಾರ ಕಾರ್ಯ ಕೈಗೊಳ್ಳುವುದು ತಪ್ಪು.

ಪಂಡಿತ್ ಜವಹರಲಾಲರು ತಮ್ಮ ಮಗನಾದ ಇಂದಿರೆಯೊಂದಿಗೆ ಕುಲು ಎಂಬಲ್ಲಿಗೆ ತೆರಳಿದರು. ಅನ್ಯತ್ರ ಸದ್ಯದಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳುಹಿಸುತ್ತಾ ಕಾಂಗ್ರೆಸ್‌ನಲ್ಲಿರುವವರು ಎಂಥಾ ಅಭಿಪ್ರಾಯಗಳನ್ನಾಗಲಿ ನಮ್ಮ ಸಭೆಗಳ ನುಂದಿಡಬಹುದು. ಆದರೆ ಕಾಂಗ್ರೆಸ್ ನಿರ್ಣಯಗಳ ವಿರುದ್ಧಪ್ರಚಾರ ಕಾರ್ಯಕ್ರಮ ಕೈಗೊಳ್ಳುವುದು ತಪ್ಪು ಎಂದು ಹೇಳಿದರು.

ಬರ್ಮಾದ ಮಂತ್ರಿ ಗವರ್ನರರು ಹಿಂದೂಸ್ಥಾನಕ್ಕೆ ಬಂದಿರುವರೆಂದು ಪ್ರಕಟವಾಗಿದೆ. ಬರ್ಮಾದ ಯುದ್ಧವು ಪೂರ್ಣಗೊಂಡಿಲ್ಲವೆಂದು ಹೇಳುವುದಾದರೆ ಚೀನಾ ಸೈನಿಕರೇ ಜಪಾನರೊಡನೆ ಯುದ್ಧ ಹೂಡಿರುವರು.

ಹಿಂದುಸ್ಥಾನದಮೇಲೆ ಮುತ್ತಿಗೆ.

8 ನೆಯ ತಾ|| ಬಂಗಾಳ ಪ್ರಾಂತದ ಬೆಟ್ಟಗಾಂಗ್‌ಮೇಲೆ ಮುತ್ತಿಗೆಯಾದನಂತರ ಪೂರ್ವ ಅಸಾಮಿನ ಒಂದು ಸಣ್ಣ ನಗರದಮೇಲೆ ದಾಳಿಯಾಗಿ ನಾಗರಿಕ ಸೈನಿಕರಿಗೆ ಅಲ್ಪಸ್ವಲ್ಪ ನಷ್ಟ ಸಂಭವಿಸಿತೆಂದು ಹೇಳಲಾಗಿದೆ. ಇನ್ನು ಹಿಂದುಸ್ತಾನದಮೇಲೆ ಪ್ರತ್ಯಕ್ಷದಾಕ್ರಮಣವಾಯ್ತೆಂದು ಹೇಳಬಹುದಲ್ಲವೇ?

ಎಂಪೈರ್ ಆಫ್ ಇಂಡಿಯಾ ಲೈಫ್ ಅಷ್ಯೂರೆನ್ಸ್ ಕಂಪನಿ ಲಿಮಿಟೆಡ್ ೪೫ ನೆಯ ವಾರ್ಷಿಕೋತ್ಸವ

೩೧-೩-೪೨ನೆಯ ದಿನ ಶ್ರೀ ಫಾಸವಾಲಾರ ಅಧ್ಯಕ್ಷತೆಯಲ್ಲಿ ಕಂಪನಿಯ ಷೇರುದಾರರ ಸಭೆಯು ನೆರೆದವರದಿಯೂ, ಲೆಕ್ಕಪತ್ರಗಳೂ ಅರ್ಪಿಸಲ್ಪಟ್ಟವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಂಪನಿಯ ಸರ್ವತೋಮುಖವಾದ ಪ್ರಗತಿಯನ್ನು ವಿವರಿಸಿದ ನಂತರ ೩೧-೩-೪೧ಕ್ಕೆ ಮುಗಿದ ಒಂದು ವರ್ಷದ ವರದಿಯನ್ನೂ ಲೆಕ್ಕಪತ್ರಗಳನ್ನು ಅಂಗೀಕರಿಸಲಾಯಿತು. ಪ್ರಗತಿದಾಯಕವಾಗಿಯೂ ಮತ್ತು ವಿಮಾದಾರರಿಗೆ ಹೆಚ್ಚಿನ ಸೌಕಾರ್ಯಗಳನ್ನೊದಗಿಸುತ್ತಲೂ ಕೆಲಸಮಾಡುತ್ತಿರುವ ಈ ಕಂಪನಿಯ ಕಡೆ ನಮ್ಮ ವಾಚಕರ ಗಮನ ಎಳೆಯಲು ಬಯಸುತ್ತೇವೆ.

ವರದಿಯ ವರ್ಷದಲ್ಲಿ ೧೫೬೯,೩೬೨ ರೂ. ಗಳ ಮೊತ್ತ ಲ್ಯಾಗ್ ಪ್ರೊಪೋಸಲ್‌ಗಳು ಬಂದವು. ೧೫೪೪,೩೮೪,೪೫೫ ರೂ. ವಿನಾ ಮೊತ್ತದ ೩೮೪೪ - ಹೊಸ ಪಾಲಿಸಿಗಳನ್ನು ಕೊಡಲಾಯಿತು. ಇದರ ವಾರ್ಷಿಕ ಪ್ರೀಮಿಯಂ ವರಮಾನ ೬,೭೬,೪೬೩ ರೂ. ಈಗ ಒಟ್ಟು ಲ್ಯಾಗಿಂ ಪಾಲಿಸಿಗಳು ಚಾಲ್ತಿ

★ ಯುದ್ಧ ವಾರ್ತೆಗಳು. ★

ಚರ್ಚಿಲರ ಭಾಷಣ.

ಬ್ರಿಟಿಶ ಪ್ರಧಾನ ಮಂತ್ರಿಗಳಾದ **ಚರ್ಚಿಲರವರು ಭಾಷಣ** ಕೊಡುತ್ತಾ ಇಂಗ್ಲೆಂಡಿನ ವಿಮಾನಬಲವು ಅತ್ಯಂತ ಬಲಯುತವಾಗಿದೆಯೆಂದರು. ಹಿಟ್ಲರನು ರಷ್ಯಾದಲ್ಲಿ ವಿಷಗಾಳಿಯನ್ನು ಉಪಯೋಗಿಸಿದರೆ ಇಂಗ್ಲೆಂಡು ಜರ್ಮನಿಯಮೇಲೆ ಗ್ಯಾಸುಬಾಂಬುಗಳ ದಾಳಿಯನ್ನಾರಂಭಿಸುವುದೆಂದು ಎಚ್ಚರಿಕೆ ಇತ್ತರು

ಸ್ವಸಂರಕ್ಷಣಾರ್ಥವಾಗಿ ಮಾತ್ರ ವಿಷಗಾಳಿಯು ಉಪಯೋಗಿಸಲ್ಪಡುವುದೆಂದೂ ಜರ್ಮನರು ತಾವೇ ಮೊದಲು ವಿಷಗಾಳಿಯನ್ನು ಪಯೋಗಿಸುವುದಿಲ್ಲವೆಂದೂ ಒಂದು ಸುದ್ದಿ ತಿಳಿಸುತ್ತದೆ.

ಜರ್ಮನರ ವಸಂತದಾಳಿಯು ಪ್ರಾರಂಭವಾಯಿತು.

ನೀಪರ ಪೆಟ್ರೋವಸ್ಕದಿಂದ ಕಾರ್ಚೂ ವರೆಗೆ ಕ್ರೀಮಿಯಾಭಾಗದಲ್ಲಿ ಹಿಟ್ಲರನ ಇಪ್ಪತ್ತು ಲಕ್ಷ ಸೈನುಗಳು 250 ಮೈಲಿ ಅಗಲ ಪ್ರದೇಶದಲ್ಲಿ ರಷ್ಯನ ಸೈನ್ಯಗಳ ಮೇಲೆ ಉಗ್ರದಾಳಿಯನ್ನಾರಂಭಿಸಿವೆ. ರಷ್ಯನರು ಬಲವಾಗಿ ಪ್ರತಿಭಟಿಸುತ್ತಲಿರುವರು.

ಸ್ಕೋಡಾ ಕಾರ್ಖಾನೆ.

ಜಗತ್ತಿನಲ್ಲೇ ಅತ್ಯಂತ ದೊಡ್ಡದಾದ ಜೆಕೋಸ್ಲೋವೇಕಿಯಾ ದೇಶದಲ್ಲಿರುವ ಸ್ಕೋಡಾ ಕಾರ್ಖಾನೆಯ ಮೇಲೆ ಕಳೆದ ಶನಿವಾರ ಆರ್-ಎ-ಎಫ್ ವಿಮಾನಗಳು ಮುತ್ತಿಗೆಯನ್ನು ನಡೆಸಿದವು. ಬಹಳ ನಷ್ಟವಾಗಬೇಕೆಂದು ಬ್ರಿಟಿಷರು ಊಹಿಸುತ್ತಾರೆ. ಈ ಕಾರ್ಖಾನೆಯು ಜರ್ಮನಿಗೆ ಅಧೀನವಾಗುವ ಪೂರ್ವದಲ್ಲಿ ಭಾರವಾದ ಯುದ್ಧ ಸಾಮಗ್ರಿಗಳನ್ನು ನಿರ್ಮಾಣ ಮಾಡುತ್ತಲಿತ್ತು. 30 ಸಾವಿರ ಜನರು ಕೆಲಸಮಾಡುತ್ತಲಿದ್ದರು. ಕೂಲಿಕಾರರಲ್ಲಿ ಆಗಾಗ್ಗೆ ಪಿತೂರಿಗಳಾಗುವುದೂ ಉಂಟು. ಇದರ ವಿಸ್ತೀರ್ಣ 400 ಎಕರೆ.

ಹಿಟ್ಲರನ ಮುಂದಿನ ಯುದ್ಧ.

ಬಹುಶಃ ಮೇ ತಿಂಗಳ ಮೂರನೇ ವಾರದಲ್ಲಿ ಮಧ್ಯ ಪೂರ್ವದಲ್ಲಿ ಹರ್ ಹಿಟ್ಲರನು ಪ್ರಚಂಡ ಹೋರಾಟವನ್ನು ಆರಂಭಿಸುವನೆಂದೂ, ಉತ್ತರದಲ್ಲಿ ಉಕ್ರೇನ್, ಕಾಕಸ್‌ಗಳಿಂದ ಹಿಡಿದು ದಕ್ಷಿಣದಲ್ಲಿ ಮೆಡಿಟರೇನಿಯನ್, ಸಿರಿಯಾವರೆಗೆ ಕದನ ರಂಗವು ವ್ಯಾಪಿಸಿರುವುದೆಂದೂ ಅಮೆರಿಕನ್ ಸುದ್ದಿಗಾರರೊಬ್ಬರು ತಿಳಿಸಿದ್ದಾರೆ.

ಬರ್ಮಾದಲ್ಲಿ ಬ್ರಿಟಿಶರಿಗೆ ಸೋಲು.

ಬರ್ಮಾದಲ್ಲಿ ಬ್ರಿಟಿಷರಿಗೆ ಸೋಲಾಗಿ ಮುಖ್ಯ ಪ್ರದೇಶಗಳೆಲ್ಲಾ ಜಪಾನಿನ ವಶವಾಗುತ್ತಿರುವುದು ತಿಳಿದು ಬರುತ್ತಲಿದೆ. ಬರ್ಮಾದ ಹಿಂದಿನ ರಾಜಧಾನಿಯಾದ ಮಾಂಡಲೆಯು ಪೂರ್ಣವಾಗಿ ದಗ್ಧವಾಗಿ ಜಪಾನಿನ ಕೈಸೇರಿದೆ. ಬರ್ಮಾರಸ್ತೆ ಪ್ರಾರಂಭವಾಗುವ ಲಾಷಿಯೋನಗರವೂ ಕೈಬಿಟ್ಟ ಕಾರಣ, ಬರ್ಮಾರಸ್ತೆಯ ಆಟವು ಮುಗಿದಂತಾಗಿದೆ. ಜಪಾನಿನವರು ಲಾಷಿಯೋವನ್ನು ಪ್ರವೇಶಿಸಿರುವರು. ಬ್ರಿಟಿಷ ಸೈನ್ಯಗಳು ಅಸ್ಸಾಮಿನ ಮಾರ್ಗದಿಂದ ಯಶಸ್ವಿಯಾಗಿ ಹಿಂದಿರುಗುತ್ತಲಿವೆಯಂತೆ. ಚೈನೀಯರು ಕಲಿತನದಿಂದ ಕಾದುತ್ತಿರುವರು. ಯುನಾನ ಚಂಗ ಎಸ್ಸೈಗಣಿಗಳನ್ನು ಸಂಪೂರ್ಣವಾಗಿ ನಾಶಮಾಡಿರುತ್ತಾರೆ.

ಮಡಗಾಸ್ಕರ ದ್ವೀಪದ ಆಕ್ರಮಣ.

ಸಾಶ್ಚಿಮಾತ್ಯ ದೇಶಗಳಿಂದ ಆಫ್ರಿಕಾ ಖಂಡದ ಗುಡ್‌ಹೋಪ್ ಭೂತಿರವನ್ನಮಾರ್ಗವಾಗಿ ಹಿಂದೂಸ್ಥಾನಕ್ಕೆ ಬರುವ ಮಾರ್ಗದಲ್ಲಿದ್ದ ಪ್ರಪಂಚದ 4 ದೊಡ್ಡ ದ್ವೀಪಗಳಲ್ಲೊಂದಾದ ಮಡಗಾಸ್ಕರ ದ್ವೀಪವನ್ನು ಬ್ರಿಟಿಷರು ಆಕ್ರಮಿಸಿರುವರು. ಫ್ರೆಂಚರೆಷ್ಟು ಪ್ರತಿಭಟಿಸಿದರೂ ಕೊನೆಗೆ ಶರಣಾಗತರಾಗಬೇಕಾಯಿತು. ಬ್ರಿಟಿಷರಲ್ಲಿ 500 ಜನರು ಸತ್ತರೆಂದು ಹೇಳಲಾಗಿದೆ ಫ್ರೆಂಚರಿಗಾದ ನಷ್ಟವು ಗೊತ್ತಿಲ್ಲ.

ಜರ್ಮನಿ—ರಷ್ಯಾ ಜರ್ಮನರಿಗೆ ಕರ್ಚೂದಲ್ಲಿ ಜಯ.

ಜರ್ಮನರು 8ನೇ ತಾರೀಖಿನ ಕ್ರಿಮಿಯಾದಲ್ಲಿ ಕದನವಾರಂಭಿಸಿದರು. 15ರಿಂದ 20 ಮೈಲಿವರೆಗಿರುವ ಇಕ್ಕಟ್ಟಾದ ರಂಗದಲ್ಲಿ ಜರ್ಮನರು ಅನೇಕ ಡಿವಿಜ಼್ ಸೇನೆಗಳೊಡನೆಯೂ ಬೆಚ್ಚು ಸಂಖ್ಯೆಯ ಟ್ಯಾಂಕುಗಳು ಮತ್ತು ವಿಮಾನಗಳೊಡನೆಯೂ ಹೊಡೆದಾಟವಾರಂಭಿಸಿದ್ದಾರೆ. ರಷ್ಯನ್ ಸೇನೆಗಳಮೇಲೆ ನಾಜಿವಿಮಾನಗಳು ಮುತ್ತಿಗೆ ನಡೆಸುತ್ತಿವೆ.

ಹವಮಾನವು ಬಹಳ ಚೆನ್ನಾಗಿದೆ. ನೆಲವು ಒಣಗಿದೆ. ಉತ್ತರದಲ್ಲಿ ಜರ್ಮನರು ಏಟುಕೊಂಚ ಜಯಪ್ರದವಾಯಿತು. ಆದರೆ ಇತರ ಕಡೆಗಳಲ್ಲಿ ವಿಶೇಷ ನಷ್ಟದೊಂದಿಗೆ ಅವರನ್ನು ಮೊದಲಿನ ಸ್ಥಾನಗಳಿಗೆ ಅಟ್ಟಲಾಯಿತು.

ಜಪಾನಿನ ಮುತ್ತಿಗೆ ಯಾದರೆ ಗಾಂಧಿ ಚಳವಳದಿಂದಲೂ ಅಡಚಣೆ.

ಕ್ರಿಪ್ಸ್‌ಕಾರ್ಯದರ್ಶಿ ಹೇಳಿಕೆ

ಅಮೆರಿಕನ್ ಮತ್ತು ಬ್ರಿಟಿಷ್ ವಿಮಾನಗಳು ಹೆಚ್ಚು ಸಂಖ್ಯೆಯಲ್ಲಿ ಭಾರತಕ್ಕೆ ತಿರುಗುತ್ತಿವೆಯೆಂದೂ, ಒಂದುವೇಳೆ ಜಪಾನರು ಭಾರತವನ್ನು ಮುತ್ತಿದರೆ 10 ಲಕ್ಷ ಯೋಧರಿಗೆ ಮಿಂಚಿದ ಸೇನೆಯು ರತ್ನಗಳನ್ನು ಎಮಿನಿಸಲು ಸಿದ್ಧವಾಗಿದೆಯೆಂದೂ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರ ಜೊತೆಗಿ ಕಾರ್ಯದರ್ಶಿಗಳಾದ ಶ್ರೀ ಗ್ರಹಾಂಸ್ಮಿಯವರು ತಿಳಿಸಿದರು.

ಆಹಿಂಸಾತ್ಮಕ ಅಸಹಕಾರದಿಂದ ಕೂಡ ಶತ್ರುಗಳಿಗೆ ಅಡಚಣೆಯಾಗುವುದೆಂದು ಅವರು ತಿಳಿಸಿದರು. ಭರತಖಂಡದಸೇನೆಯು ತಿಂಗಳಿಗೆ 50,000 ದಷ್ಟು ಹೆಚ್ಚುತ್ತಿದೆಯೆಂದೂ, ಆದರೆ ಸಂಗ್ರಾಮ ಸಲಕರಣೆಗಳಿಗೆ ನಿತಿ ಯಿರುವದರಿಂದ ಅವುಗಳನ್ನು ಹೆಚ್ಚು ಹೆಚ್ಚಾಗಿ ಕಳಿಸಲು ಸಾಧ್ಯವಾಗಿಲ್ಲವೆಂದೂ ಅವರು ತಿಳಿಸಿದರು.

—0—

ಉತ್ತರ ಬರ್ಮಾದಲ್ಲಿ ಮಿತ್ರವಿಮಾನಗಳು ರತ್ನ ವಿಮಾನಗಳಮೇಲೆ ಪರೀಕ್ಷಣೆ ನಡೆಸಿವೆ. ಸೈನಿಕರು ತುಂಬಿದ ಲಾರಿಗಳಮೇಲೆ ಗುಂಡು ಹಾರಿಸಲಾಯಿತು.

—ಕರ್ಚೂವೆನಿಸ್ಸುಲ ವನ್ನು ವಶವಾಗಿರುವದೆಂದು ಜರ್ಮನರು ಪ್ರಕಟಿಸಿರುವರು.

—ರಷ್ಯನರ ಸೈನ್ಯಗಳು ಸಿಸ್ಥಿನಿಂದ ಹಿಂದಿರುಗಿವೆಯೆಂದು ಗೊತ್ತಾಗಿದೆ.

—ಜರ್ಮನಿಯಲ್ಲಿ ಅಪಾರಯುದ್ಧ ವಸ್ತುಗಳ ಸಂಗ್ರಹವಿದೆಯೆಂದು ಅಮೆರಿಕಾವೆ ಯುದ್ಧ ವಸ್ತು ನಿರ್ಮಾಣ ಬೋರ್ಡಿನಧ್ಯಕ್ಷರು ತಿಳಿಸಿದರು.

ನನುಗೆ ತೋರುತ್ತದೆ. ದಯಾಶೂನ್ಯರಿಗಿಂತಲೂ ದಯಾಮಯರು ಒಳ್ಳೆಯವರಲ್ಲವೇ ಎಂಬುದಾಗಿ ಕೇಳಬಹುದು. ಸರಕಾರದ ಯಂತ್ರವು ಏಕಸೂತ್ರನಲ್ಲಿ ಸಮಾನವಾಗಿ ಎಲ್ಲಾ ಪ್ರವೃತ್ತಿಯ ಅಧಿಕಾರಿಗಳನ್ನು ಬಂಧಿಸಿರುವುದರಿಂದ ಸರಕಾರದ ನೀತಿಯು ಬದಲಾಗುವವರೆಗೂ, ಅಧಿಕಾರಿಗಳ ಬದಲಾವಣೆಯಿಂದ ಏನೂ ಉಪಯೋಗವಿಲ್ಲ. ನಾಗರೀಕ ಸರಕಾರವು ನಿಜವಿದ್ದರೆ ಸ್ವತಂತ್ರ ವಿಚಾರಣಾ ಸಮಿತಿಯನ್ನೇರ್ಪಡಿಸಿ ನೊಂದವರಿಗೆ ಪರಿಹಾರ ಕೊಟ್ಟು ತಪ್ಪಿತಸ್ಥರನ್ನು ಶಿಕ್ಷಿಸಿ ತನ್ನ ತಪ್ಪನ್ನು ಒಪ್ಪಿಕೊಳ್ಳುವುದು. ಅವರೀಗಿನ ಸರಿಸ್ಥಿತಿಯಲ್ಲಿ ಅಂಥಾ ಅಕೆಯನ್ನು ಇಟ್ಟುಕೊಳ್ಳುವುದು ಹುಚ್ಚತನ. ಕೂಲಿಕಾರರು ಇವೊಂದನ್ನೂ ಲಕ್ಷಿಸದೆ ತಮ್ಮ ಕರ್ತವ್ಯಗಳನ್ನು ನ್ಯಾಯವಾಗಿಯೂ ಧರ್ಮದಿಂದಲೂ ನೆರವೇರಿಸಬೇಕು.

ಕಾನಕಾನಹಳ್ಳಿಯಲ್ಲಿ ಜೂನ್ 1942 ರಿಂದ ಒಂದು ಹೈಸ್ಕೂಲು ಪ್ರಾರಂಭವಾಗಲಿದೆ.

ಕೋಲಾರಚಿನ್ನದಗಣಿ ಮತ್ತು ಭದ್ರಾವತಿ ಕಾರ್ಖಾನೆಗಳ ಕಾರ್ಮಿಕರನ್ನೇಲೆ ಗುಂಡುಹಾರಿಸಿದುದರ ಖಂಡನಾ ಸಭೆಗಳು ಮೈಸೂರು ದೇಶದ ಮುಖ್ಯಪಟ್ಟಣಗಳಲ್ಲೆಲ್ಲಾ ನಡೆದವು.

ಭದ್ರಾವತಿಯ ಹುತಾತ್ಮರಿಗೆ ಸಹಾಯ ಮಾಡಿರಿ

ತಾ|| 3-5-42 ನೇ ಭಾನುವಾರ ಭದ್ರಾವತಿ ನಗರದಲ್ಲಿ ನಡೆಯ ಬಂದ ಮರಂತ ಪ್ರಕರಣದಲ್ಲಿ ನೂರು ಜನಗಳು ಗುಂಡಿಗೆ ಆಹುತಿಯಾಗಿರುತ್ತಾರೆ ಇವರಲ್ಲಿ ಕೇವಲ ನೂರು ವರ್ಷದ ಹೆಣ್ಣು ಮಗುವು ಸಹ ತನ್ನ ಪ್ರಾಣವನ್ನು ಗುಂಡಿಗೆ ಬಲಿ ಕೊಟ್ಟಿರುತ್ತದೆ ಅನೇಕ ಜನಗಳು ಗುಂಡಿನ ಪೆಟ್ಟು ತಗುಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುತ್ತಾರೆ ಇದರ ಪರಿಣಾಮವಾಗಿ ಅನೇಕ ಸಂಸಾರಗಳು ತೊಂದರೆಗೆ ಗುರಿಯಾಗಿವೆ.

ತಾಯಿಯನ್ನು ಕಳೆದುಕೊಂಡ ಮಗುಗಳೋವಾದಿಯಲ್ಲಿ ಪರಿತಪಿಸುತ್ತಿರುವ ಹುತಾತ್ಮರ ಬಡ ಸಂಸಾರಕ್ಕೆ ಮತ್ತು ಮರಂತಕ್ಕೆ ಗುರಿಯಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡುತ್ತಿರುವವರ ಶಿಶ್ರೂಷೆ ಮತ್ತು ಅವರ ಸಂಸಾರ ಪೋಷಣೆಗಳಿಗೂ ಸಹ ತಾವುಗಳೆಲ್ಲರೂ ಉದಾರ ಮನಸ್ಸಿನಿಂದ ಧನ, ಧಾನ್ಯ ಸಹಾಯಮಾಡಿ ದರಿದ್ರ ನಾರಾಯಣನ ಸೇವೆಗೆ ಭಾಗಿಗಳಾಗಬೇಕಾಗಿ ಮಹಾ ಜನರುಗಳಲ್ಲಿ ಅತಿದೈನ್ಯದಿಂದ ಪ್ರಾರ್ಥಿಸುತ್ತೇವೆ.

ತಮ್ಮ ಸೇವಕರು.

ಉ ವಿಶ್ವನಾಥರಾವ್. S ರಾಘವೇಂದ್ರರಾವ್
A·M C.C. ಸದ್ಯ. ಮಾಲಿಕ,
ಬ್ರಾಹ್ಮಣರ ಕಂಜಾವೂರ್ ಹೋಟಲ್

ಲಕ್ಷ್ಮಣ ಸಚಿವರಾದ ಶ್ರೀ ಜೆ ಇವಾಂ ಸಾಹೇಬರು ಮೇ 15ರಿಂದ ಬಾಸನ-ಕಡೂರು, ಶಿವಮೊಗ್ಗ, ಮತ್ತು ಕೋಲಾರಗಳ ಕೆಲಭಾಗಗಳನ್ನು ಸಂದರ್ಶಿಸಿ ಜಿಲ್ಲಾಸಮ್ಮೇಳನಗಳಲ್ಲಿ ಭಾಗವಹಿಸುವರು.

ಹಾಸನದ ಜಿಲ್ಲಾ ಕಾಂಗ್ರೆಸ್ ಸಭೆಯು 15-5-42ನೆಯ ತಾ. ನಡೆದು ಕಾಂಗ್ರೆಸ್ ಹಿತವನ್ನು ಕುರಿತ ಮುಖ್ಯ ನಿರ್ಣಯಗಳಾದುವು.

ಚಿತ್ರದುರ್ಗ ಜಿಲ್ಲಾ ಸಮ್ಮೇಳನ.

ನ್ಯಾಯಮೂರ್ತಿ ಶ್ರೀರಾಮನಾಥನರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ಜಿಲ್ಲಾಧಿಕಾರಿಗಳು ಕಳೆದ ವರ್ಷದ ಅಭಿವೃದ್ಧಿಯನ್ನು ವಿವೇಚಿಸಿ ಯುದ್ಧ ನಿಧಿಗೆ 63739-8-0, ಗ್ರಾಮಗಳಲ್ಲಿ ನೀರಿನ ಸರಬರಾಜಿಗೆ 401 ಭಾವಿಗಳು ತೋಡಿಸಲು ಕೈಗೊಂಡಿರುವೆವೆಂದೂ ಜಗಳೂರಿಗೆ ವಿದ್ಯುಚ್ಛಕ್ತಿ ಕೊಟ್ಟಿರುವುದಾಗಿಯೂ ಹೇಳಿದರು 116 ವಿಷಯಗಳಲ್ಲಿ ಸಾಕ್ಷರತೆ ಬಲಾತ್ಕಾರ ವಿದ್ಯಾಭ್ಯಾಸ ಮುಖ್ಯವಿದ್ದವು.

ಹಿಂದಿನ ಕಾಂಗ್ರೆಸ ಮಂತ್ರಿಗಳ ಬಂಧನೆ.

ಯು ಪಿ ಕಾಂಗ್ರೆಸ್ ಮಂತ್ರಿಗಳ ಬ್ಲೊಬ್ಬರಾಗಿದ್ದ ರಫಿ ಅಹ್ಮದ್ ಕಿದ್ವಾಯರನ್ನು ಇಂಡಿಯಾ ರಕ್ಷಣೆಕಾನೂನ್ನಿನ ಬಂಧಿಸಲಾಗಿದೆ.

ಕಾಂಗ್ರೆಸ್ ವಿರುದ್ಧ ಪ್ರಚಾರ ಕಾರ್ಯ ಕೈಗೊಳ್ಳುವುದು ತಪ್ಪು.

ಪಂಡಿತ ಜವಹರಲಾಲರು ತಮ್ಮ ಮಗಳಾದ ಇಂದಿರೆಯೊಂದಿಗೆ ಕುಲು ಎಂಬಲ್ಲಿಗೆ ತೆರಳಿದರು. ಅವ್ಯಕ್ತ ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳುಹಿಸುತ್ತಾ ಕಾಂಗ್ರೆಸ್‌ನಲ್ಲಿರುವವರು ಎಂಥಾ ಅಭಿಪ್ರಾಯಗಳನ್ನಾಗಲಿ ನಮ್ಮ ಸಭೆಗಳ ಮುಂದಿಡಬಹುದು. ಆದರೆ ಕಾಂಗ್ರೆಸ್ ನಿರ್ಣಯಗಳ ವಿರುದ್ಧ ಪ್ರಚಾರ ಕಾರ್ಯಕ್ರಮ ಕೈಗೊಳ್ಳುವುದು ತಪ್ಪು ಎಂದು ಹೇಳಿದರು.

ಬರ್ಮಾದ ಮಂತ್ರಿ ಗವರ್ನರರು ಹಿಂದೂಸ್ಥಾನಕ್ಕೆ ಬಂದಿರುವರೆಂದು ಪ್ರಕಟವಾಗಿದೆ. ಬರ್ಮಾದ ಯುದ್ಧವು ಪೂರ್ಣ ಮುಗಿದಿಲ್ಲವೆಂದು ಹೇಳುವುದಾದರೆ ಚೀನಾ ಸೈನಿಕರೇ ಜಪಾನರೊಡನೆ ಯುದ್ಧ ಮಾಡಿರುವರು.

ಹಿಂದುಸ್ಥಾನದಮೇಲೆ ಮುತ್ತಿಗೆ.

8 ನೆಯ ತಾ|| ಬಂಗಾಳ ಪ್ರಾಂತದ ಜೆಬ್ಬಗಾಂಗ್‌ಮೇಲೆ ಮುತ್ತಿಗೆಯಾದನಂತರ ಸ್ವಾರ್ವ ಅಸಾನುವ ಒಂದು ಸಣ್ಣ ನಗರದಮೇಲೆ ದಾಳಿಯಾಗಿ ನಾಗರಿಕ ಸೈನಿಕರಿಗೆ ಅಲ್ಪಸ್ವಲ್ಪ ನಷ್ಟ ಸಂಭವಿಸಿತೆಂದು ಹೇಳಲಾಗಿದೆ. ಇನ್ನು ಹಿಂದುಸ್ತಾನದಮೇಲೆ ಮುತ್ತಿಗೆಯಾರಂಭವಾಯ್ತೆಂದು ಹೇಳಬಹುದಲ್ಲವೇ?

ಎಂಪೈರ್ ಆಫ್ ಇಂಡಿಯಾ ಲೈಫ್ ಅಸ್ಯೂರೆನ್ಸ್ ಕಂಪನಿ ಲಿಮಿಟೆಡ್ ೪೫ ನೆಯ ವಾರ್ಷಿಕೋತ್ಸವ

೩೧-೩-೪೨ನೆಯ ದಿನ ಶ್ರೀ ಘಾಸವಾಲಾರ ಅಧ್ಯಕ್ಷತೆಯಲ್ಲಿ ಕಂಪನಿಯ ಷೇರುದಾರರ ಸಭೆಯು ನೆರೆದವರದಿಯೂ, ಲೆಕ್ಕಪತ್ರಗಳೂ ಅರ್ಪಿಸಲ್ಪಟ್ಟವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಂಪನಿಯ ಸರ್ವತೋಮುಖವಾದ ಪ್ರಗತಿಯನ್ನು ವಿವರಿಸಿದನಂತರ ೩೧-೩-೪೨ಕ್ಕೆ ಮುಗಿದ ಒಂದು ವರ್ಷದ ವರದಿಯನ್ನೂ ಲೆಕ್ಕಪತ್ರಗಳನ್ನು ಅಂಗೀಕರಿಸಲಾಯಿತು. ಪ್ರಗತಿದಾಯಕವಾಗಿಯೂ ಮತ್ತು ವಿಮಾದಾರರಿಗೆ ಹೆಚ್ಚಿನ ಸೌಕಾರ್ಯಗಳನ್ನೊದಗಿಸುತ್ತಲೂ ಕೆಲಸಮಾಡುತ್ತಿರುವ ಈ ಕಂಪನಿಯ ಕಡೆ ನನ್ನ ವಾಚಕರ ಗಮನ ಎಳೆಯಲು ಬಯಸುತ್ತೇವೆ.

ವರದಿಯ ವರ್ಷದಲ್ಲಿ ೧,೩೬,೯೬,೩೦೦ ರೂ. ಗಳ ಮೊತ್ತ ಅರ್ಥಾ ಪ್ರೊಪೋಸಲ್‌ಗಳು ಬಂದವು. ೧,೩೫,೩೮,೪೫೫ ರೂ. ಏಮಾ ಮೊತ್ತದ ೬೮೪೪ ಹೊಸ ಪಾಲಿಸಿಗಳನ್ನು ಕೊಡಲಾಯಿತು. ಇದರ ವಾರ್ಷಿಕ ಪ್ರೀಮಿಯಂ ವರಮಾನ ೬,೭೬,೬೩೩ ರೂ. ಈಗ ಒಟ್ಟು ೪೯೯೦ ಪಾಲಿಸಿಗಳು ಚಾಲ್ತಿ

ಯಲ್ಲಿವೆ. ಬೋನಸ್ಸೂ ಸೇರಿ ಆ ವುಗಳ ವಿಮಾ ಮೊಬಲಗು ೧೪,೪೪,೪೪,೧೬೧ ರೂಪಾಯಿಗಳು.

ಕಂಪೆನಿಯು ಬಹಳ ಮಿತವ್ಯಯದಿಂದ ಕೆಲಸ ಮಾಡುತ್ತಿದೆ. ಪ್ರೀಮಿಯಂ ಆದಾಯದಲ್ಲಿ ಶೇ|| ೨೨-೬ ರನ್ನಷ್ಟುಮಾತ್ರ ಪೆಚ್ಚು ಮಾಡುತ್ತಿದೆ. ರಿಜರ್ವ್ ನಿಧಿಯೂ ಸೇರಿ ಜೀವವಿಮೆ ನಿಧಿಯು ೫,೫೨,೨೧,೨೧೯ ರೂಗಳಷ್ಟಿದೆ. ಕಂಪೆನಿಯ ಒಟ್ಟು ಆಸ್ತಿ ೫,೮೦೬,೯೪೦ ರೂಗಳು.

ಕಂಪೆನಿಯ ಹಣಕಾಸಿನ ಭದ್ರತೆಯನ್ನೂ ಪ್ರಗತಿಯನ್ನೂ ಪರದಿಯೂ ಮತ್ತು ಲೆಕ್ಕ ಗಳೂ ಸಾರುತ್ತಿವೆ. ಯುದ್ಧಕಾಲಗಳಲ್ಲಿಂತೂ ವಿಮಾಕಂಪೆನಿಗಳ ಜವಾಬ್ದಾರಿ ಅಪಾರ ರತ್ನು ಕಾರ್ಯಾಚರಣೆಯಿಂದ ಸಿವಿಲಿಯನ ರಿಗೆ ಉಂಟಾಗಬಹುದಾದ ನಾನಿಗೆ ಈ ಕಂಪೆ ನಿಯ ಪಾಲಿಸಿಗಳು ಪೂರ್ಣ ರಕ್ಷಣೆ ಕೊಡು ತ್ತವೆ ಎ ಆರ್. ಪಿ. ಮುಂತಾದ ಸಿವಿಲ್ ರಕ್ಷಣೆ ಕಾರ್ಯಗಳಲ್ಲಿ ನಿರತರಾಗಿರುವವರಿಗೆ ಸಹ ಹೆಚ್ಚಿನ ಪ್ರೀಮಿಯಂ ದೇಖಲೆ ರಕ್ಷಣೆ ಕೊಡಲಾಗಿದೆ.

ಬಹಳ ಕಡಿಮೆ ದರದ ಪ್ರೀಮಿಯಂ ನಿಂದಷ್ಟೂ ಸೌಕರ್ಯವನ್ನು ಪಾಲಿಸಿ ದಾರರಿಗೆ ಕೊಡುವುದೇ ಈ ಕಂಪೆನಿಯ ಮುಖ್ಯೋದ್ದೇಶ. ಕಂಪೆನಿಯು ಸರ್ವತೋ ಮುಖ ಪ್ರಗತಿ ಹೊಂದಲೆಂದು ಹಾರೈಸುವೆವು.

卐

ಭಾರತದ ರಾಜಕೀಯ ರಂಗ

ರಾಜಾಜಿಯವರ ಪಾಕಿಸ್ತಾನ ನಿರ್ಣಯಬಿದ್ದು ಹೋಯಿತು. ನುಂದೇನು ?

ಶ್ರೀ ಸಿ. ರಾಜಗೋಪಾಲಾಚಾರಿಯವರು ಅಖಿಲಭಾರತ ಕಾಂಗ್ರೆಸ ಕಮಿಟಿಯಮುಂದೆ ಮುಸಲ್ಮಾನರಿಗೆ ಪಾಕಿಸ್ತಾನವನ್ನು ಬೇಡಿದರೆ ಕೊಡಬಹುದೆಂಬ ನಿರ್ಣಯವನ್ನಿಟ್ಟಿದ್ದರು. ಅದು 120 ವಿರೋಧ ಪರವಾಗಿ 15 ರಿಂದ ಬಿದ್ದು ಹೋಯಿತು. ರಾಜಾಜಿಯವರು ಕಳೆದ 25 ವರ್ಷಗಳಿಂದ ಕಾಂಗ್ರೆಸ್ಸಿನ ಆಪ್ತರಿನು ದೇಶಭಕ್ತರಾಗಿ ಧುರೀಣರಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದರು. ಜನತೆಯ ಬೆಂಬಲವಿದ್ದರೆ ಸಂಸ್ಥೆಗೆ ಹೊಂದಿಕೊಂಡು ನಡೆದರೆ, ಧುರೀಣತ್ವ, ದೇಶನಾಯಕರಿಂದರೆ ಅವರಿಗೆ ಬಹು ಸಂಖ್ಯಾಕ ಜನರ ಬೆಂಬಲವಿದೆಯೆಂದರ್ಥ ಯಾವಾಗ ಈ ನಾಯಕರಿಗೆ ಬುದ್ಧಿ ಭ್ರಮೆ ಯಾಗಿ ತಾವು ತೋರಿಸಿದ ಹಾದಿಯೇ ಶ್ರೇಸ್ಕವೆಂದು ಜನತೆಯ ಇಷ್ಟವಿರೋಧವಾಗಿ ಯಾವುದಾದರೂ ನಿರ್ಣಯವನ್ನು ಅವರು ಮುಂದೆ ಇಟ್ಟರೆ ಅದು ತಿರಸ್ಕರಿಸಲ್ಪಡುವುದಷ್ಟೇ ಅಲ್ಲ, ಜನತೆಯು ಅಂಥವರ ಮೆಲ್ಲಿಟ್ಟ ವಿಶ್ವಾಸವು ಶೂನ್ಯವಾಗುವುದು.

ಹಿಂದಾಪಾರ್ಗದಲ್ಲಿ ವಿಶ್ವಾಸವಿಟ್ಟು ಸುಭಾಸರೂ, ಕಾಂಗ್ರೆಸ್ ಸಂಸ್ಥೆಗೆ ವಿರೋಧವಾಗಿ ನಡೆದ ಖರೆಯವರೂ, ಜನಗಣನೆಯಲ್ಲಿಲ್ಲವಾದರು. ಕಾಂಗ್ರೆಸಿಗೆ ವಿರೋಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಮದ್ರಾಸಿನ ಶ್ರೀನಿವಾಸಯ್ಯಂಗಾರ್ಯರು ಅನೇಕ ವರ್ಷಗಳ ಕಾಲ ರಾಜಕೀಯದಿಂದ ಬಿಡುಗಡೆ ಹಾದರು, ರಾಜಾಜಿಯವರು ನುರಿತ ರಾಜಕಾರಣಿ ಪಟುಗಳು ಇದೆಲ್ಲಾ ಅವರಿಗೆ ತಿಳಿಯದೆ ಇಲ್ಲ. ಜನತೆಯು ಅವರ ಅಭಿಪ್ರಾಯದಂತೆ ನಡೆಯದೆಂದು ಗೊತ್ತಾದಾಗ ನಿವೃತ್ತರಾಗಿ ಆಶ್ರಮವನ್ನು ಸೇರಿ ವೃದ್ಧಾಪ್ಯದಲ್ಲಿ ಶಾಂತಿಯನ್ನು ಪಡೆಯುವುದುತ್ತಮ ಹಟದಿಂದ ಜನತೆಯು ಮತ್ತಷ್ಟುಷ್ಟುಬ್ಧವಾಗುವುದು. ಹಿಂದೂಸ್ತಾನವನ್ನು ಎರಡು ಭಾಗಮಾಡಬೇಕೆಂಬ ತತ್ವಕ್ಕೆ ಮುಸಲ್ಮಾನರೇ ಒಪ್ಪುವುದಿಲ್ಲ. ಪಾಕಿಸ್ತಾನವೆಂದರೇನೆಂಬುದು ಇಲ್ಲಿಯವರಿಗೂ ಸ್ಪಷ್ಟವಾಗಿಲ್ಲ. ಈ ಕಾರಣ ರಾಜಾಜಿಯವರ ಪ್ರಚಾರ ಕಾರ್ಯದಿಂದ ಯಾರೂ ಮೋಸ ಹೋಗಲಾರರು.

Visit Royal Cafe
Near Royal Picture Palace
Royal Cafe is ROYAL.

ಜನರ ವಿಶ್ವಾಸವೇ
ಓರಿಯಂಟಲ್ ಕಂಪನಿಯನ್ನು
ಹಿಂದೂಸ್ಥಾನದ ಪ್ರಮುಖ ವಿಮಾ ಕಂಪನಿಯನ್ನಾಗಿ ಮಾಡಿದೆ

ಚಾರಿಯಲ್ಲಿರುವ ವಿಮೆ 31—12—40 83 ಕೋಟಿಗಿಂತಲು ಹೆಚ್ಚು.
ನಿಧಿಯ ದ್ರವ್ಯ .... „ 27½ „
ವಾರ್ಷಿಕ ಆದಾಯ „ 4¾ „

ಅತ್ಯಂತ ಆಕರ್ಷಣೀಯವಾದ ನಮ್ಮ ವಿಮಾ ಯೋಜನೆಗಳ
ಪೂರ್ಣ ವಿವರಗಳನ್ನುಳ್ಳ ವಿಮಾ ಪುಸ್ತಕ
[Prospectus]ಕ್ಕಾಗಿ ಕೆಳಗಿನವರಿಗೆ ಬರೆಯಿರಿ

ಪಿ. ಬ್ರೂಂಟ್ ಸೆಕ್ರೆಟರಿ .

ಓರಿಯಂಟಲ್
ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್.,
ಲಂಡನ್ ಯಾನ್ ಸ್ಟ್ರೀಟ್, ಮದ್ರಾಸ್.

ಅಖಿಲ ಇಂಡಿಯಾ ಇನ್ಸ್‌ಪೆಕ್ಟರು, ಓರಿಯಂಟಲ್ ಲೈಫ್ ಆಫೀಸು
312 ರೂಪರ್ಟ್‌ಸ್ ಗೇಟ್ ಬ್ಯೂಸಹೇಟ್ ಬಳ್ಳಾರಿ.

ಮುಖ್ಯ ಕಾರ್ಯಾಲಯ, ಹಿಂದೂಸ್ಥಾನದಲ್ಲಿ ಸ್ಥಾಪಿತ
ಬೊಂಬಾಯಿ. 1874

ರಾಯಲಸೀಮ ಬ್ಯಾಂಕು ಲಿ., ಬಳ್ಳಾರಿ.

17–5–42 ನೆಯ ಭಾನುವಾರ ಜನರಲಬಾಡಿ ಮೀಟಿಂಗಿನಲ್ಲಿ ಅಧ್ಯಕ್ಷರಾದ ಶ್ರೀ ಹೆಚ್. ಸೀತಾರಾಮರೆಡ್ಡಿ ಬಿ. ಎ. ಬಿ. ಎಲ್. (ಎಂ. ಎಲ್. ಎ) ಇವರ ಭಾಷಣ

ಮಹಾಶಯರೇ!

ಡೈರೆಕ್ಟರುಗಳ ಪರವಾಗಿ ನಿಮ್ಮನ್ನು ಸ್ವಾಗತಿಸಿ ರಾಷ್ಟ್ರೀಯ ಜೀವನದ ಪ್ರತಿಯೊಂದು ಭಾಗಕ್ಕೆ ಧಕ್ಕೆ ತಗಲಿದ ನಮ್ಮ ದೇಶದ ಈ ಚರಿತ್ರಾರ್ಹ ಸಂದರ್ಭದಲ್ಲಿ ನಿಮ್ಮೊಡನೆ ವಿಚಾರವಿನಿಮಯ ಮಾಡಲು ನನಗೆ ಬಹಳ ಸಂತೋಷ ವೆನಿಸುತ್ತದೆ.

ಯುದ್ಧದ ಕಾರಣ ದೇಶದ ಉದ್ಯೋಗ ಮತ್ತು ವ್ಯಾಪಾರಕ್ಕೆ ಬಹಳ ಪೆಟ್ಟು ತಗಲಿದೆ. ಸಮುದ್ರಯಾನಕ್ಕೆರಿನ ಅಪಾಯ, ಹಡಗುಗಳ ಅಭಾವದಿಂದ ಅಂತ ರಾಷ್ಟ್ರೀಯ ವ್ಯಾಪಾರವು ಬಹುಮಟ್ಟಿಗೆ ಕುಗ್ಗಿಹೋಗಿದೆ. ಸೈನಿಕ ಚಲನ-ವಲನ ಗಳಿಂದ ಮೂಲು ರೈಲುಗಳ ಮೂಲಕ ಕಳುಹಿಸಲ್ಪಡಬೆ ನಮ್ಮ ದೇಶದಲ್ಲೂ ಕೂಡ ಆಗಾಗ್ಗೆ ವ್ಯಾಪಾರಕ್ಕೆ ತೊಂದರೆಯೊದ ಗುತ್ತಲಿದೆ. ಸರಕಾರದವರು ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳುವರೆಂಬ, ಯುದ್ಧಕಾಲದಲ್ಲಿ ದೋಳಿಯನ್ನಾರಂಭಿಸುವ ರೆಂಬ (Scorched Earth Policy) ಭಯದಿಂದ ಪರಿಸ್ಥಿತಿಯು ಇನ್ನೂ ಕೆಟ್ಟಿದೆ. ನಮ್ಮದೇಶದ ಮೇಲಾಗಿ 'ನಮ್ಮ ಭಾಗದ ಮುಖ್ಯಬೆಳೆಗಳಾದ ಹತ್ತಿ ಮತ್ತು ನೆಲಗಡಲೆಯನ್ನು ವೈತರು ಅತ್ಯಧಿಕ ರೂಪದಿಂದ ತಮ್ಮಲ್ಲೇ ಸ್ಟಾಕುಮಾಡಿರು ವರು. ಪಟ್ಟಣಗಳೂ ಬಂದರುಗಳೂ ವ್ರಥಮತಃ ಶತ್ರುಗಳ ದಾಳಿಗೆ ಗುರಿಯಾಗಬಹುದೆಂಬ ಭಯವು ಕಾರಣವಿರಬಹುದು.

ಈ ಸಮಸ್ಯೆಗಳಿಂದ ಜಿಲ್ಲೆಯ ಆರ್ಥಿಕ ಪರಿಸ್ಥಿತಿಯು ಕೊದ ತೆಗೆದುಕೊಳ್ಳುವ ಹಣದ ವ್ಯವಹಾರವೂ ಸಾಲಭ್ಯಗಳೂ ಕಟ್ಟಾಗಿವೆ. ರಫ್ತಾಗುವ ಪೂರ್ಣವಸ್ತು ಸಾಮಗ್ರಿಗಳ ಒದಗುವಿಕೆಯು ಪಟ್ಟಣದ ಮಾರ್ಕೆಟುಗಳಿಗೆ ತಗ್ಗಿ ಹೋಗಿರುವುದರಿಂದ ಬಳ್ಳಾರಿಯಂಥ ಶಹರುಗಳಲ್ಲಿ ನಮ್ಮ ಬಂಡವಾಲವನ್ನು ಲಾಭಕರವಾಗಿ ವಿನಿಯೋಗಿಸುವುದು ಯಥಾಪ್ರಕಾರ ತಗ್ಗಿಹೋಗಿದೆ. ಒಳ್ಳೆಯ ವ್ಯವಸಾಯ ಪ್ರದೇಶವಾದ ನಮ್ಮ ಭಾಗದ ನೂರ್ಕೆಟುಗಳಲ್ಲಿ ಭಲೋ ಜಾಮೀನಿನಿಂದ ಸಣ್ಣ ಬ್ಯಾಂಕುಗಳ ಬಂಡವಾಲದ ವಿನಿಯೋಗಕ್ಕೆ ಲಾಭಕರನೆಂಬುವಂರವು ಎಲ್ಲರೂ ಅರಿತಿರಲಿಕ್ಕೇಬೇಕು ರೈತೋಪಯೋಗೀಕಾರ್ಯಕ್ಕೆ ನಾವು ಸಹಾಯಮಾಡುವ ಪರಿಮಿತಿಯನ್ನು ಲೆಕ್ಕಿಸಿ ನಮ್ಮ ಬ್ಯಾಂಕಿನ ಉಪಯುಕ್ತತೆಯನ್ನು ನಿರ್ಣಯಿಸಬೇಕು. ಈ ಉದ್ದೇಶ ಸಾಧನೆಗಾಗಿ ಜಿಲ್ಲೆಯ ಮುಖ್ಯ ವ್ಯವಸಾಯ ವಸ್ತುಕೇಂದ್ರಗಳಾದ ಕೊಟ್ಟೂರು- ಉರವ ಕೊಂಡ-ಪತ್ತಿಕೊಂಡ ಸಕ್ರಮವಾಗಿ ಬಳ್ಳಾರಿ ಅನಂತಪುರ ಮತ್ತು ಕರ್ನೂಲು ಜಿಲ್ಲೆಗಳಲ್ಲಿ ಬ್ಯಾಂಕಿನ 3 ಶಾಖೆಗಳನ್ನು ತೆರೆಯಲಾಯಿತು. ಈ ಕಾಲದಲ್ಲ ನುಳೆಯು ಅಲ್ಪನಾಗಿ ಶಾಖೆಗಳು ಕೆಲತಿಂಗಳು ನಮಿಗೆ ಕೆಲಸಮಾಡಿದ್ದರೂ, ಬ್ಯಾಂಕು ಚಟುವಟಿಕೆಗಳ 14½ ತಿಂಗಳಲ್ಲಿ (ಕಾರ್ಯಾರಂಭವಾದ್ದು 11–10–40ರಲ್ಲಿ) 11 ತಿಂಗಳ ಫಲಿತಾಂಶವನ್ನು ವಿಮರ್ಶಿಸಿದರೆ ಬ್ಯಾಂಕಿನ ಯೋಗ್ಯತೆ ಮತ್ತು ಇಷ್ಟು ಅಲ್ಪಾವಧಿಯಲ್ಲಿ ಅನೇಕ ಸ್ವತಂತ್ರಮಹಾಶಯರು ಅಭಿಪ್ರಾಯಪಡುವಂತೆ ತೃಪ್ತಿಕರವಾಗಿಯೇ ಕೆಲಸ ನಡೆಸಿನೆಯೆನ್ನಬೇಕು.

ಇನ್ನು ಲೆಕ್ಕಗಳನ್ನು ವಿಮರ್ಶಿಸುವಾ. ಖರ್ಚಿನಕಡೆ 1941 ನೆಯ ಜುಲೈ 1 ನೆಯ ತಾ॥ ನಲ್ಲಿ 68 ಸಾವಿರ ಡಿಪಾಜಿಟ್ ಇದ್ದದ್ದು ಈಗ 1,24,000 ಆಗಿದೆ. ಅದಾಯ ಭಾಗದಲ್ಲಿ ಇದೇ ತಾರೀಖಿನ ದಿನ 51 ಸಾವಿರ ಸಾಲ ಮತ್ತು ಅಡ್ವಾನ್ಸು ಇದ್ದು ಈಗ 1,07,000 ಆಗಿದೆ. ಈ 11 ತಿಂಗಳ ಸರಾಸರಿ ಬಂಡವಲದ ವಿನಿಯೋಗವು 65 ಸಾವಿರನಿದೆ. ಈ ವರಿಸ್ಥಿತಿಯಲ್ಲಿ ನಾವುನೂತ್ರದ ಲಾಭವು ಸ್ವಲ್ಪವೆಂದರೂ ತೃಪ್ತಿಕರವೆಂದೇ ಭಾವಿಸಬೇಕು.

ಯುಷ್ಮವು ಸಾಗಿದೆ. ಅದರ ಕ್ರೌರ್ಯದ ಪರಮಾವಧಿಯನ್ನು ನಾವು ಇನ್ನೂ ಕಾಣಬೇಕಾಗಿದೆ. ವ್ಯಾಪಾರಕ್ಕೇ ಕಷ್ಟವೊದಗಬಹುದು. ವ್ಯವಹಾರದ ಋಣದ ಮಾರ್ಕೆಟ್ಟು ಇನ್ನೂ ಕಟ್ಟಾಗಬಹುದು. ಬ್ಯಾಂಕಿಗೆ ಸಂಜಾತನೆಯೊಗಲಿರುವ ಕಮೀರ್ಶ ಮತ್ತು ವಿನಿಮಯ ವ್ಯಾಪಾರದಲ್ಲಿ ಅಸ್ಟೊಂದು ಪ್ರಗತಿಯಾಗಲಿಕ್ಕಿಲ್ಲ, ಸನ್ಯಕ್ಕೇನೋ ಬಡ್ಡಿ ಮಡಿಯುವ ಬ್ಯಾಂಕಿನ ಸ್ಥಿತಿಯು ಭದ್ರವಿವೆ, ಬಂಡವಲದ ವಿನಿಯೋಗವು ಭಂಗಾರದ, ಮಾಲಿನ ಮತ್ತು ಆಹಾರ ಧಾನ್ಯಗಳ ಅಡವಿನ ಮೇಲಿದ್ದು ಸುವ್ಯವಸ್ಥಿತವಿವೆ. ಬ್ಯಾಂಕು ಇಂಥಾ ವ್ರಗತಿಯನ್ನು ಹೊಂದಲು ವ್ಯೋತ್ಸಾಹ ಸಹಕಾರಗಳನ್ನೊದಗಿಸಿದ ಮೇರು ದಾರರಿಗೂ ಸಾರ್ವಜನಿಕರಿಗೂ ಡೈರೆಕ್ಟರವರು ನಂದನೆಗಳನ್ನರ್ಪಿಸುತ್ತಾರೆ.

ವರ್ಷದ ಕೊನೆಯಲ್ಲಿ ಭಂಡವಲದ ವಿನಿಯೋಗವು 1,45,000 ಸಾವಿರ ರೂ॥ ಗಳದ್ದು (ಮೊದಲಿನ ಸಂಪೆ 65 ಸಾವಿರ ರೂ॥) ಲಾಭಾಂಶದಲ್ಲಿ ತೃಪ್ತಿಕರವಾಗಿ ಹೆಚ್ಚಬಹುದೆಂದು ಡೈರೆಕ್ಟರುಗಳ ಆಶೆಯಿಂಟು, ಬ್ಯಾಂಕಿನ ನಿಜವಾದ ಉಪಯುಕ್ತತೆ ಮತ್ತು ಅದರ ಸಂಪಾದನಾಶಕ್ತಿಯು ತಿಳಿಯಬೇಕೆಂದರೆ ನಾವು ಶಾಂತಿಕಾಲದವರೆಗೂ ಕಾಯಬೇಕಾಗುತ್ತದೆ.

ಬ್ಯಾಂಕಿನ ನೌಕರರು ಶ್ರದ್ಧೆ ಪರಸ್ಪರ ಸಹಕಾರದಿಂದ ಮಡಿದುದನ್ನು ಇಲ್ಲಿ ಹೇಳಬಯಸುತ್ತೇನೆ. ಡೈರೆಕ್ಟರುಗಳು ಒಳ್ಳೆಯ ಸಂಘಬಲದಿಂದ ಕಾರ್ಯನಿರತರಾಗಿರುವರು, ನಿಮ್ಮ ಮತ್ತು ಈಭಾಗದ ಸಾರ್ವಜನಿಕರ ಸಹಾಯ ಸಹಾನುಭೂತಿಯಿಂದ ಬ್ಯಾಂಕಿನ ಉತ್ತರೋತ್ತರ ಅಭಿವೃದ್ಧಿಯು ನಿಶ್ಚಯವೆಂದು ಡೈರೆಕ್ಟರುಗಳ ಪರವಾಗಿ ಹಾರೈಸುತ್ತೇನೆ.

ಭದ್ರಾವತಿಯಲ್ಲಿ ಸರಕಾರದವರ ಗುಂಡಿನೇಟುಗಳಿಂದ ಮರಣ.

ಕೂಲಿಕಾರರ ಸಮಸ್ಯೆ.

ಪ್ರಪಂಚದ ಔದ್ಯೋಗಿಕ ಕೇಂದ್ರಗಳಲ್ಲೆಲ್ಲಾ ವಿಜೃಂಭಣೆಯಿಂದ ನಡೆಯುವ ಮೇ ದಿನಾಚರಣೆಯು 1-5-42ರಲ್ಲಿ ಭದ್ರಾವತಿಯಲ್ಲಿ ನಡೆಯಿತು. ಕೂಲಿಕಾರರು ಪೋಲೀಸ್ ಶಾಸನದ 39ನೆಯ ವಿಧಿಯನ್ನು ಧಿಕ್ಕರಿಸಿದರೆಂಬ ಆಪಾದನೆಯಿಂದ 1-2ನೇ ತಾ. ಸುಮ್ಮನಿದ್ದು ಅಧಿಕಾರಿಗಳು 3 ನೆಯ ತಾ. ಪ್ರಾತಃಕಾಲ ಶ್ರೀಗಳಾದ ಕೃಷ್ಣಪ್ಪ, ಬಿ. ಪಿ. ಪಾಲಪ್ಪ, ಶೇಷಗಿರಿಶಾಸ್ತ್ರಿ, ಪುಟ್ಟಯ್ಯ ಇವರನ್ನು ಬಂಧಿಸಿದರು. ಜನರನ್ನು ನೋಡಲು, ಸೌರವಿಸಲು, ಕೂಲಿಕಾರರಿಗೆ ಅನುಕಾಶಕೊಡದೆ ಅಶ್ರುವಾಯ್ವಪ್ರಯೋಗವುನಡೆದು ಕೊನೆಗೆ ಗುಂಡು ಹಾರಿಸಲ್ಪಟ್ಟು, 3 ಸತ್ತರೆಂತಲೂ 35 ಜನರಿಗೆ ಗಾಯಗಳಾದವೆಂತಲೂ ಈ ಗಾಗಲೇ ಎಲ್ಲಾ ವೃತ್ತ ಪತ್ರಗಳಲ್ಲೂ ಪ್ರಕಟವಾಗಿದೆ, ಕೂಲಿಕಾರರು ಕಲ್ಲುಗಳನ್ನೆಸೆದು, ಪೋಲೀಸರಿಗೆ ಗಾಯಗಳಾಗಿವೆಯೆಂದು ಗೊತ್ತಾಗಿದೆ. ಕೂಲಿಕಾರರು ಯಾವಾಗ ಕಲ್ಲುಗಳ ಪ್ರಯೋಗ ಮಾಡಿದರೆಂಬುದು ಗೊತ್ತಾಗಿಲ್ಲ.

ತಮ್ಮೊಗ್ಗಾ ಜಿಲ್ಲೆಗೆ ಮುಖ್ಯಾಧಿಕಾರಿಗಳಾದ ಶ್ರೀ ನವನೀತಂನಾಯಿಡೂರವರೂ ಜಿಲ್ಲೆಯ ಡಿ. ಎಸ್. ಪಿ. ಯವರೂ, ಅಲ್ಲಿ 3 ದಿನಗಳಿಂದ ಇದ್ದರೆಂದು ತಿಳಿದುಬಂದಿರುವುದರಿಂದ ಜನರ ಆಜ್ಞೆಗೊಳಪಟ್ಟೇ ಈ ಪರಿಸ್ಥಿತಿಯುತ್ಪನ್ನವಾಗಿರಬೇಕು. ನಮ್ಮ ಅಭಿಪ್ರಾಯದಲ್ಲಿ ಈ ಗುಂಡಿನ ಪ್ರಕರಣಕ್ಕೆ ಜಿಲ್ಲಾ ಮ್ಯಾಜಿಸ್ಟ್ರೇಟರ ಜವಾಬ್ದಾರಿ ಹೆಚ್ಚಾಗಿದೆ.

ಗುಂಡು ಹಾರಿಸಲೇಕಾಗಿತ್ತೆ, ಗಾಳಿಯಲ್ಲಿ ಹಾರಿಸಿ ಸುಮ್ಮನಿಕೆ ಕೊಟ್ಟಿರೋ ಇಲ್ಲವೋ ನಮಗೆ ತಿಳಿದುಬಂದಿಲ್ಲ. ಹಾರಿಸುವಾಗ ಮಾತ್ರ ಪೋಲೀಸಿನವರು ಹುಚ್ಚಾಪಟ್ಟೆ ಗುಂಡುಹಾರಿಸಿದರೆನ್ನಬೇಕು. ಸತ್ತವರಲ್ಲಿ ಹಣೆಯಮೇಲೆ ಕುತ್ತಿಗೆಯಮೇಲೆ ಗುಂಡಿನೇಟುಗಳು ಬಿದ್ದಿರುವುದರಿಂದ ಸರ್ವೇ ಸಾಧಾರಣವಾಗಿ ಗುಂಡುಹಾರಿಸುವ ಪ್ರಸಂಗವೇಬಂದಾಗ, ಕೆಳಗೆ ಹಾರಿಸಬೇಕೆಂಬ ನಿಯಮವನ್ನೂ ಭದ್ರಾವತಿ ಪೋಲೀಸರು ಧಿಕ್ಕರಿಸಿರಬೇಕು. ದೂರದಲ್ಲಿ ಇಂದರೆ ಸುಮಾರು ಪೋಲೀಸ್‌ಸ್ಟೇಷನ್ನಿಗೆ ಎರಡು ಫರ್ಲಾಂಗ್ ದೂರದ ಮನೆಯಂಗಳದಲ್ಲಿ ಆಡುತ್ತಿದ್ದ, ಸರೋಜ ಎಂಬ ಕೂಸು ಗುಂಡಿನೇಟಿಗೆ ತುತ್ತಾಗಿ ಮೃತಪಟ್ಟ ಅಂಶವು ನಮ್ಮ ಮೇಲಿನ ಆಪಾದನೆಯನ್ನು ಮತ್ತಷ್ಟು ಧೃಢಪಡಿಸುತ್ತದೆ.

ನಮಗೆ ಗೊತ್ತಿರುವಂತೆ ಶ್ರೀ ಎಸ್. ಡಿ. ಶಂಕರ್‌ರಹೊರತಾಗಿ, ಉಳಿದ ಕೂಲಿಕಾರ ಮುಖಂಡರೆಲ್ಲಿ 'ರಾಯ್'ವಾದಿಗಳಿದ್ದಾರೆ. ಈಗಿನ ಯುದ್ಧದಲ್ಲಿ ಬ್ರಿಟಿಷ್‌ರಿಗೆ ಸಹಾಯ ಮಾಡಿ ಫಾಸಿಸ್ಟ್ ಸಾಮ್ರಾಜ್ಯವು ಸ್ಥಾಪನೆಯಾಗದಂತೆ ಮಾಡಬೇಕೆಂಬ ತತ್ವಕ್ಕೆ ಬದ್ಧರಾಗಿದ್ದಾರೆ. ಕೂಲಿಕಾರರನ್ನು ಆದಾರಿಯಲ್ಲಿ ಒಯ್ಯುತ್ತಿದ್ದಾರೆ. ಶ್ರೀ ಎಸ್. ಡಿ. ಶಂಕರರವರಾದರೂ ಯುದ್ಧ ವಿರೋಧಿಗಳಲ್ಲ. ಕೂಲಿಕಾರರ ಅನೇಕ ಸಭೆಗಳಲ್ಲಿ ಬ್ರಿಟಿಷರಿಗೆ ಮಿತ್ರಪಕ್ಷವಾದ ರಷ್ಯಾಕ್ಕೆ ಸಹಾನುಭೂತಿಯು ಪ್ರದರ್ಶಿತವಾಗಿದೆ. ಕೂಲಿಕಾರರು ತಮ್ಮ ಕೆಲಸಗಳನ್ನು ಶಾಂತರೀತಿಯಲ್ಲಿ ನೆರವೇರಿಸಿ ರಾಜಭಕ್ತರಾಗಿರುವರಷ್ಟೇ ಅಲ್ಲದೆ ಯುದ್ಧಕ್ಕೆ ಸಹಾಯಮಾಡಬೇಕೆನ್ನುವ ಮನೋಭಾವನವನ್ನುಳ್ಳವರಾಗಿರುವರು.

ಅಂತ ರಾಷ್ಟ್ರೀಯ ಕೂಲಿಗಾರ ದಿನಾಚರಣೆಯು 1-2 ನೆಯ ತಾ. ನೆರವೇರಿ ಶಾಂತವಾತಾವರಣವಿದ್ದಾಗ ಶಾಂತ ಸಮುದ್ರವನ್ನು ಪ್ರಕ್ಷುಬ್ಧವನ್ನಾಗಿ ಏಕೆಮಾಡಬೇಕಾಗಿತ್ತು? ಸಂಬಂಧಿಸಿದವರನ್ನು ಕರೆಸಿ ಆಜ್ಞೋಲ್ಲಂಘನೆ ಮಾಡಿದುದು ತಪ್ಪೆಂದು ತಿಳಿಸಿದ್ದರೆ ಸಾಕಾಗುತ್ತಿರಲಿಲ್ಲವೇನು? ಸಭೆಗೆ ಅನುಮತಿಕೊಡದಿದ್ದರೂ ಆಜ್ಞೋಲ್ಲಂಘನೆ ಏಕೆ ಮಾಡಬೇಕಿತ್ತೆಂಬುದನ್ನು ಸರಕಾರವು ಹೇಳುವುದಾದರೆ ಬ್ರಿಟಿಷ್ ಸರಕಾರವು ರಷ್ಯಾಕ್ಕೆ ಏತಕ್ಕೆ ಸಹಾಯಮಾಡಬೇಕೆಂಬುದನ್ನು ಕೇಳಬೇಕಾಗುತ್ತದೆ ವಿನಾಚರಣೆಯ ಉದ್ದೇಶವಾದರೂ ಸಾಜಿಜಂ - ಫ್ಯಾಸಿಸಂ ತತ್ವಗಳನ್ನು ಖಂಡಿಸಿ, ಸಂಪೂರ್ಣ ಪ್ರಜಾ ಪ್ರಭುತ್ವವನ್ನುಳ್ಳ ರಷ್ಯಾಕ್ಕೆ ಸಹಾನುಭೂತಿಯನ್ನು ವ್ಯಕ್ತಿಸುವದಾಗಿತ್ತು. ಬ್ರಿಟಿಷ್ ಹಿಂದೂಸ್ತಾನದಲ್ಲಿ ಕಮ್ಯೂನಿಸ್ಟ ಪಾರ್ಟಿಯನ್ನು ಕಾಯ್ದೆ ವಿರೋಧವಾಗಿಮಾಡಿ ಅದರ ತತ್ವ ಧಾರಿಗಳನ್ನು ಇನ್ನೂ ಬಂಧನದಲ್ಲಿಟ್ಟಿರುವುದೂ ಮೈಸೂರು ಸರಕಾರವು ಈ ನೀತಿಗೆ ಸರಿಹೋಲುವುದು.

ಶ್ರೀ ಶಂಕರರವರ ಬಂಧನಾನಂತರ ಭದ್ರಾವತಿಯ ಕೂಲಿಕಾರ ಸಮಸ್ಯೆಗೆ ಕಳೆಯೇರಿತು. ಸರಕಾರವ ಪ್ರತಿಬಂಧ ಕಾಜ್ಞೆಗಳಿಂದ ಕೂಲಿಕಾರರ ಜೀವನಕ್ಕೆ ಆಧಾರವು ದೊರಕಿಯಿತು. ಈಗಿನ ದಬ್ಬಾಳಿಕೆಯಿಂದ ಗುಂಡಿನೇಟುಗಳಿಂದ ಅದು ಇನ್ನೂ ಪರಿಪುಷ್ಟವಾಗುವುದು.

ಬ್ರಿಟಿಷ್ ಹಿಂದೂಸ್ತಾನದಲ್ಲಾದರೂ ಕಾಂಗ್ರೆಸ್ ಸಂಸ್ಥೆಯು 1921,1930-32,1941ರ ಆಂದೋಳನಗಳಿಂದ ಅಪರಿಮಿತ ಶಕ್ತಿಯನ್ನು ಸಂಪಾದಿಸಿತು. ಪ್ರಪಂಚದಲ್ಲಿ ಅದಕ್ಕೆ ಮೊರೆಹೊಕ್ಕಿರುವ ಅನುಪಮಸ್ಥಾನವು, ತ್ಯಾಗದಿಂದ ಬಲಿದಾನದಿಂದ ಭದ್ರವಾಗಿದೆ ಕೂಲಿಕಾರರ ಸ್ಥಾನಮಾನಗಳು ಭದ್ರವಾಗಬೇಕಾದರೆ ಧೈರ್ಯ ಸ್ಥೈರ್ಯ ಸಹನಶಕ್ತಿಗಳಷ್ಟೇ ಉಲ್ಲದೆ ಅವರಲ್ಲಿ ತ್ಯಾಗಬುದ್ಧಿಯು ಹುಟ್ಟಿ ಅದು ಕಾರ್ಯರೂಪದಲ್ಲಿ ಬರಬೇಕು. ಸಂಸ್ಥೆಯ ಜೀವನಾಡಿಯನ್ನು ಸ್ಪುರಿಸುವಿಸಿ, ಕೆಲಸದಿಂದ ತೆಗೆಯಲ್ಪಟ್ಟು ನೊಂದವರಿಗೆ ಸಹಾಯಿಸುವಂತೆ ಸರಕಾರಗಳನ್ನೀಯಜೇಕು, ವ್ಯರ್ಥ ಮತ್ತು ಅನಾವಶ್ಯಕ ಜೇಡಿಕೆಗಳನ್ನು ಮುಂದಿಡಬಾರದು ಇತರ ಪ್ರಾಪ್ತಿಕ ಭೇದಗಳನ್ನು ದೂರವಿಟ್ಟು ಐಕಮತ್ಯದಿಂದ ಸಾಗಬೇಕು. ಹಿಂಸಾಚರಣೆಗಳನ್ನು, ಹಿಂಸಾ ಪ್ರವೃತ್ತಿಯನ್ನೂ ಬಹಿರಂಗವಾಗಿ ಖಂಡಿಸಿ, ಸಾಧ್ಯವಾದಷ್ಟೆ ಅದಕ್ಕಾಗಿ ಕ್ಷಮಾಪಣೆಯೇಡಿ ಕಾಯಾ-ವಾಚಾ-ಮನಸಾ-ಅಹಿಂಸಾ ವೃತ್ತಿಯಿಂದ ನಡೆದರೇನೇ ಕೂಲಿಕಾರ ಜೀವನಳಿಗೆ ಶಕ್ತಿಯುತ್ಪನ್ನವಾಗುವದು. ಸದ್ಯದ ಪರಿಸ್ಥಿತಿಯಲ್ಲಿ ಇವಲ್ಲದೆ ಬೇರೆ ಮಾರ್ಗವೇನೂ ಇಲ್ಲ.

ಸರಕಾರದ ನೀತಿಯಲ್ಲಿ ಪ್ರವರ್ತನೆಯಾಗದಿದ್ದರೆ ಯಾವ ಅಧಿಕಾರಿಗಳಿದ್ದರೇನು ಯಾವ ಅಧಿಕಾರಿಗಳು ಬಂದರೇನು? ಈ ಭಾಗದ ವೇಡಿಕೆಯು ವ್ಯರ್ಥವೆಂದು

ನೇ ಪುಟವನ್ನು ನೋಡಿರಿ.

ಬೋರ್ಡು ಶಾಲೆಗಳ

ಉಪಾಧ್ಯಾಯರ ಸಂಘ ಕಾರ್ಯದರ್ಶಿಗಳಿಗೆ ಸೂಚನೆ.

20-5-1942ನೆಯ ದಿನ ನಡೆಯಲಿರುವ ಜಿಲ್ಲಾಬೋರ್ಡು ಶಾಲೋಪಾಧ್ಯಾಯ ಪ್ರತಿನಿಧಿಗಳ ವಿಶೇಷಮಂಡಲವೊಂದು (Deputation) ಬೋರ್ಡು ಅಧ್ಯಕ್ಷರನ್ನು ಕಂಡು ಇಕ್ರಿಮೆಂಟುಗಳ ವಿಷಯದಲ್ಲಿ ಪ್ರಾರ್ಥನಾಪತ್ರವೊಂದನ್ನು (Memorandum) ಅರ್ಪಿಸಲು ನಿಶ್ಚಯವಾಗಿದೆ. ಇದರ ಸಂಬಂಧ ನೋಟೀಸುಗಳನ್ನು 'ನವ ಭಾರತ'ದ ಮೂಲಕ ಕಳೆದ ಒಂದು ತಿಂಗಳಿಂದ ತಿಳಿಸುತ್ತಾ ಬಂದಿದ್ದರೂ, ಬಹುಸಂಖ್ಯಾಕ ಸಂಘಗಳವರು ಲಕ್ಷಿಸದಿರುವುದು ದುಃಖದಾಯಕ ವಿಷಯವಾಗಿದೆ. ಈಗಲಾದರೂ ಸಂಘಗಳ ಕಾರ್ಯದರ್ಶಿಗಳೂ ಸೆಮೊರಾಂಡಂ ಪ್ರೋಫೈಜು ವಗೈರೆ ಖರ್ಚುಗಳಿಗಾಗಿ 'ನವಭಾರತ' ಸಂಪಾದಕರಿಗೆ ಒಂದು ರೂ. ಕಳುಹಿಸಬೇಕು. ಈ ವಳಗೆ ಕಳುಹಿಸದಿದ್ದಲ್ಲಿ 20ನೆಯ ತಾ. ತನ್ನೊಡನೆ ತರಲು ಪ್ರಾರ್ಥನೆ.

ವ್ಯವಸ್ಥಾಪಕರು.

ನಾರ್ಮಂಡಿ ದ್ವೀಪ ಕೊಡಿರಿ ಫ್ರೆಂಚರಿಗೆ ಅಮೆರಿಕನ್ನರ ಪೀಡಿಕೆ

—ಅಮೆರಿಕ ಸರಕಾರವನರು ನಾರ್ಮಂಡಿ ದ್ವೀಪದಲ್ಲಿರುವ ಫ್ರೆಂಚ್ ಹೈ ಕಮೀಷನರ ಮುಂದೆ ಕೆಳಗೆ ಕಂಡ ಬೇಡಿಕೆಗಳನ್ನು ಇಟ್ಟಿದ್ದಾರೆಂಬುದಾಗಿ ಜರ್ಮನ್ ವರ್ತಮಾನ ಸಂಸ್ಥೆಗೆ ವಿಚಿಯಿಂದ ಸುದ್ದಿ ಬಂದಿದೆ.

(1) ಫ್ರೆಂಚ್ ದ್ವೀಪಗಳಲ್ಲಿ ಅಮೆರಿಕ ಸೇನೆಗಳಿರಲು ಅವಕಾಶಕೊಡಬೇಕು.

(2) ಫ್ರಾನ್ಸ್-ಜರ್ಮನಿ ಒಪ್ಪಂದವಾದ ಕಾಲದಿಂದ ನಾರ್ಮಂಡಿಯಲ್ಲಿರುವ ಫ್ರೆಂಚ್ ನೌಕಾಬಲವನ್ನು ನಿರಸ್ತ್ರನನ್ನಾಗಿ ಮಾಡಬೇಕು. ಅಲ್ಲದೆ ಅಲ್ಲಿರುವ ಫ್ರೆಂಚ್ ಟ್ಯಾಂಕರುಗಳನ್ನು ಒಪ್ಪಿಸಿಬಿಡಬೇಕು.

ಮೆಡಿಟರೇನಿಯನ್ ಸಮುದ್ರದಲ್ಲಿ ಸಂಚರಿಸುತ್ತಿದ್ದ 4-5 ಬ್ರಿಟಿಷ ಡಿಸ್ಟ್ರಾಯರುಗಳಮೇಲೆ ಜರ್ಮನ ವಿಮಾನಗಳು ಮುತ್ತಿಗೆ ನಡೆಸಿ 3 ಬ್ರಿಟಿಷ ಡಿಸ್ಟ್ರಾಯರುಗಳನ್ನು ಮುಳುಗಿಸಿದವು.

ಬರ್ಮಾದಲ್ಲಿ

—ಈಶಾನ್ಯ ಬರ್ಮಾದಲ್ಲಿ ಜಪಾನರ ಮಿತ್ರಸೇನೆಗಳನ್ನು ಸುತ್ತುವರಿಯುವ ಕಾರ್ಯವನ್ನು ಮುಂದುವರಿಸುತ್ತಿದ್ದಾರೆಂದು 11ನೇ ರಾತ್ರಿ ಹೊರಟ ಚಂಗ್‌ಕಿಂಗ್ ಪ್ರಕಟನೆಯು ತಿಳಿಸಿತು. ಶತ್ರುಗಳು ಭಾಮೋ ಮತ್ತು ಮಿಟ್ಕಿನಾ ಎಂಬ ಊರುಗಳನ್ನು ಹಿಡಿದಿರುವುದು ಸಪ ನಿಜವೆಂದು ಗೊತ್ತಾಗಿದೆ.

—ಬರ್ಮಾ ರಸ್ತೆಯಲ್ಲಿರುವ ಸೇನೆಗೆ ಜಪಾನರು ಆಕಾರ ಸಹಾಯವನ್ನು ಕಳಿಸಿದ್ದಾರೆ ಈಗ ಉಗ್ರಕದನವಾಗುತ್ತಿದೆ

—ಕಳೆದ ವಾರ ಬರ್ಮಾ ರಸ್ತೆಯಲ್ಲಿ ಜಪಾನರು ಹಿಡಿದಿದ ವಾಂಟಿಂಗ್ ನಗರವನ್ನು ಈಗ ತ್ಯಜಿಸಿ ಹಿಮ್ಮೆಟ್ಟಿದ್ದಾರೆಂಬುದಾಗಿ ಚಂಗ್‌ಕಿಂಗ್‌ನಿಂದ ಸುದ್ದಿ ಬಂದಿದೆ.

ಮಾಲ್ಟಾದಮೇಲೆ ಶನಿವಾರದಿಂದ ಹಿಡಿದು ಸೋಮವಾರದ ವರೆಗೆ ಇಂದರೆ 72 ಘಂಟೆಗಳಲ್ಲಿ 112 ಜರ್ಮನ ವಿಮಾನಗಳನ್ನು ನಾಶಮಾಡಲಾಗಿದೆ.

ಕೋರಲ ಸಮುದ್ರ ಕದನವಲ್ಲಿ ಮಿತ್ರಪಕ್ಷದ ಯುದ್ಧ ನೌಕೆಗಳು ಭಾಗವಹಿಸಿರಲಿಲ್ಲವೆಂದು ಪ್ರಕಟವಾಗಿದೆ.

ಫ್ರಾನ್ಸಿನಿಂದ ಯುದ್ಧ ಸಾಮಗ್ರಿಯ ಲವಾಗಿ ಹೆಚ್ಚು ಹೆಚ್ಚು ಸೌಕರ್ಯಗಳನ್ನು ಪಡೆಯಲು ಜರ್ಮನಿಯಿಂದ ಹಿರಿಯ ಅಧಿಕಾರಿಗಳು ಸ್ಯಾರಿಸ್ಸಿಗೆ ಬಂದಿರುತ್ತಾರೆ

ಭೂಮಧ್ಯ ಸಮುದ್ರದಲ್ಲಿ ಜರ್ಮನ್ ವಿಮಾನದಳವನ್ನು ಕಡಮೆಮಾಡಿ ಲಿಬ್ಯಾದಲ್ಲಿದ್ದ ಜನರಲ್ ರೋಮೆಲರನ್ನು ರಕ್ಷಿಸಲು ಕಳುಹಿಸಿರುವುದಾಗಿ ಒಂದು ಸುದ್ದಿ ಇದೆ.

ಇಂಗ್ಲೆಂಡಿನಮೇಲೆ ದಾಳಿ.

ಇಂಗ್ಲೆಂಡಿನ ಮೇಲೆ ಏಪ್ರಿಲ್ ತಿಂಗಳಲ್ಲಿ ನಡೆದ ವಿಮಾನ ದಾಳಿಯಿಂದ 938 ಜನರು ಸತ್ತರೆಂತಲೂ 998 ಜನರಿಗೆ ಘಾಯಗಳಾದವೆಂತಲೂ ಗೊತ್ತಾಗಿದೆ. ಸತ್ತವರಲ್ಲಿ 122 ಮಕ್ಕಳಿರುವರು.

ರಷ್ಯಾದಲ್ಲಿ ಭೀಕರ ಸಂಗ್ರಾಮ

ಕ್ರೀಮಿಯಾ ಪ್ರದೇಶದಲ್ಲಿ ಜರ್ಮನರು ಕಾಳಗ ನಡೆಸಿರುವರು. ಕರ್ಚ್ ಜಲಸಂಧಿಯು ಜರ್ಮನರ ಆಧೀನವಾದರೂ ಕಾಕಸಸ್ ಭಾಗದಲ್ಲಿ ಸೈನ್ಯವು ಸುಸಜ್ಜಿತವಾಗಿ ನಿಂತಿರುವದೆಂದೂ ಜರ್ಮನರು ಅದನ್ನು ಎದುರಿಸಬೇಕಾಗುವದೆಂದೂ ಹೇಳಲಾಗಿದೆ. ಉಕ್ರೇನ್‌ನಲ್ಲಿ ನೂರ್ವಲಟೆಂಕೋಶಂಕನ ಸೈನ್ಯವು ಕಾರ್ಕೋವ ಪಟ್ಟಣವನ್ನು ಆಕ್ರಮಿಸಲು ಅತ್ತಕಡೆಗೆ ಜೋರಾಗಿ ನುಗ್ಗುತ್ತಲಿದೆ.

ಹಿಂದೂಸ್ತಾನದ ಗಡಿಯಲ್ಲಿ.

ಜನರಲ್ ಅಲೆಕ್ಸಾಂಡರನರ ಸೈನ್ಯವನ್ನು ಸುತ್ತುವರಿಯಲು ಜಪಾನರು ಸಾಹಸ ಪಡುತ್ತಿರುವರು. ಈ ಯುದ್ಧವು ಹಿಂದೂಸ್ತಾನಗಡಿಗೆ 50 ಮೈಲಿ ದೂರದಲ್ಲಿ ಕಳೇಪಾ ಎಂಬ ಬಳಿ, ನಡೆಯುತ್ತಿದೆ. ಆರ್. ಎ ಎಫ್ ವೈಮಾನಿಕರು ಆಕ್ಯಾಬ್ ಮುಂತಾದ ಕಡೆಗಳಮೇಲೆ ಬಾಂಬುದಾಳಿ ಮಾಡಿ ಶತ್ರುವಿಗೆ ನಷ್ಟವನ್ನುಂಟುಮಾಡಿದರು.

ರುಮೇನಿಯಾದಲ್ಲಿ ಗಲಭೆ.

ಕಂಗೇರಿಯಾದಿಂದ ಟ್ರಾನ್ಸಲೇನಿಯಾ ಜಿಲ್ಲೆಯು ತಮಗೆ ವಾಪಸುಬರಬೇಕೆಂದು ರುಮೇನಿಯಾದಲ್ಲಿ ಚಳವಳಿ ಎದ್ದಿದೆಯೆಂತಲೂ ಹಂಗೇರಿಯಾದಲ್ಲಿ ರುಮೇನಿಯಾದ ಡಂಗೆಕೋರರನ್ನು ಗಲ್ಲಿಗೇರಿಸುತ್ತಿರುವದಾಗಿಯೂ ಮಾಸ್ಕೋಸುದ್ದಿಯು ಹೇಳುತ್ತಿದೆ

ಗಾಂಧೀಜೀಯವರ ಹರಿಜನ ಪತ್ರಿಕೆಯು ಸರ್ಕಾರದ ನೀತಿಯ ಕಾರಣ ನಿಲ್ಲಬಹುದೆಂದುತಿಳಿದುಬಂದಿದೆ.

ಬೆಂಗಳೂರು ಮಿಲಿಟರಿ ಲಾರಿಗಳಿಂದ ಅನಾಹುತಗಳು ಹೆಚ್ಚಾಗುತ್ತಿರುವವೆಂದು ವಿಶ್ವಕರ್ನಾಟಕವು, ಘಟನೆ ಗಳೊಂದಿಗೆ ಪ್ರಕಟಿಸಿದೆ ದೀನಬಂಧು ಆಂಡ್ರೂಸ್ ಸ್ಮಾರಕನಿಧಿಯ ಸಂಗ್ರಹಕ್ಕಾಗಿ ಮಹಾತ್ಮ ಗಾಂಧಿಯವರು ಬೊಂಬಾಯಿಗೆ ಬಂದಿರುವರು.

ವಿಕಲ ಪ್ರೆಸ್ ಮಾಲೀಕರ ನಿಧನ

ಬಳ್ಳಾರಿ ವಿಕಲ ಪ್ರೆಸ್ ಮಾಲೀಕರಾದ ಶ್ರೀ ಈ. ವೆಂಕಭೀಮಯ್ಯನವರು 16.5.42ನೆಯ ಪ್ರಾತಃಕಾಲ 6 ಘಂಟೆಗೆ ಅಕಸ್ಮಿಕವಾಗಿ ಸ್ವರ್ಗಸ್ಥರಾದರು. ಇವರಿಗೆ ಸಾಯುವಾಗ 75 ವರ್ಷಗಳಾಗಿತ್ತು. ಇಬ್ಬರು ಗಂಡು ಮಕ್ಕಳೂ ಅನೇಕ ಬಂಧುಬಾಂಧವರೂ ಇದ್ದಾರೆ. ಇವರ ಆತ್ಮಕ್ಕೆ ಈಶನು ಶಾಂತಿ ಈಯಲಿ.

ಎಳ್ಳೆಣ್ಣೆ

ನಿಮ್ಮ ಉಪ್ಪಿನಕಾಯಿಯು ಜೆನ್ನಾಗಿರಬೇಕೆಂದರೆ ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಉಪ್ಪಿನಕಾಯಿಯು ಮೆತ್ತಗಾಗುವುದಿಲ್ಲ.
,, ಮುಗ್ಗು ಯಾ ಬೂಜು ಹಿಡಿಯುವುದಿಲ್ಲ
,, ಹುಳಿವಾಸನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಇಲ್ಲದೆ ಅಮಿತವಾದ ರುಚಿಯನ್ನುಂಟು ಮಾಡುವುದು.

A. S. ಟೀಲನ್ನು ಗಮನಿಸಿ. ಕೊಳ್ಳಿರಿ. ಮೋಸಹೋಗಬೇಡಿರಿ

ಮಾರಲಿಯುವ ಸ್ಥಳ- 1) ಎಂ. ಪುಶೇಂಜೆರಾವ್ಯ, ಎಂ. ವೆಂಕೋಜಿರಾವ್ಯ, ತೇರುಬೀದಿ. ಬಳ್ಳಾರಿ.
ಮತ್ತು 2) ಖ. ಯಂ. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾವ ಕ್ರೋಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು(ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦	ಅಂಚೆ ವೆಚ್ಚ ಬೇರೆ	
ಕನ್ನಡ ನತೋಪನಿಷತ್ತುಗಳು	೦—೯—೦	ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವರಿಗೂ ಧಾರಾಳ ಕಮೀಶನ್	
ಶಿಪಾಸುಧೆಯ ಬೋಧೆ	೦—೮—೦		
ಸುಮತಿ ಶತಕ	೦—೧—೦		

ಕಾಲವ ಸುಬ್ಬಣ್ಣ, ಮುಚ್ಕಂಟು, ಬಳ್ಳಾರಿ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಸರಬುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತವೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ನೂತನ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ನಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ

ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು. ಸಂಕ್ಷೇಯ ಪಾಠ್ಯ ಪುಸ್ತಕಗಳು, ತಕ್ಕೆ ಕಾಡಂಬರಿ ಇತ್ಯಾದಿ ನಿಮಗೆ ಎಲ್ಲಾ ವಿಚಾರವೂ ಮಾಹಿತಿಯೂ, ಪುಟಿಯಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಕೃಷ್ಣಮಾಚಾರಿ ಕಾಂಪೌಂಡು, ಬಳ್ಳಾರಿ.

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ಪಾಕ್ಷಿಕ ಪತ್ರಿಕೆ.

The Rates of Subscription	
Annual	
Local	2—0—0
Moffusil	3—0—0
6 Months	
Local	1—4—0
Moffusil	2—0—0

ಚಂದಾ ವಿವರ	
ವರ್ಷಕ್ಕೆ	
ಬಳ್ಳಾರಿಯವರಿಗೆ	2-0-0
ಹೊರಗಿನವರಿಗೆ	3-0-0
೬ ತಿಂಗಳಿಗೆ	
ಬಳ್ಳಾರಿಯವರಿಗೆ	1-4-0
ಹೊರಗಿನವರಿಗೆ	2-0-0

Nava Bharat, Bellary.

REG. No. M. 3937.

Sir ...

Printed at Vittal Press, Car Street Edited & Published by T. B. Keshava Rao, Bellary

Reg. No. M. 3937 ವಂದೇ ಮಾತರಂ

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ನಪರ್ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೫೮ ಬಳ್ಳಾರಿ ಮೇ ೨೪ ನೇ ಭಾನುವಾರ ೧೯೨೨. ಟಿ. ಪಿ. ಕೇಶವರಾವ್

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ.	85,61,000 ವಿಾರಿದೆ
ಜಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ.	14,84,44,000 ,,
ಆಸ್ತಿ	ರೂ.	5,80,86,000 ,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

ಯುದ್ಧ ಸಮಾಚಾರಗಳು

ಜರ್ಮನಿ-ರಷ್ಯಾ

ಕಾರಮೋವ ಕಡೆಗೆ ಮಾರ್ಷಲ್ ಟಿನೋಶಂಕೆಯವರ ನೇತೃತ್ವದಲ್ಲಿ ಹೋಗುತ್ತಿರುವ ಸೈನ್ಯಗಳು 50 ನೈಲಿ ಮುಂದೆ ಹೋಗಿವೆ. ರಷ್ಯನರು 100 ನೈಲಿ ಅಗಲದಲ್ಲಿ ಹೊಡೆದಾಡುತ್ತಿದ್ದಾರೆಂದು ತಿಳಿದು ಬಂದಿದೆ.

—ಒಂದೇ ದಿನ 60 ಟ್ಯಾಂಕುಗಳನ್ನೂ 130 ಲಾರಿಗಳನ್ನೂ ರಷ್ಯನರು ನಾಶಪಡಿಸಿದರಂತೆ. ಜರ್ಮನರು ಹೆಚ್ಚುಹೆಚ್ಚಾಗಿ ಟ್ಯಾಂಕುಗಳನ್ನು ತರುತ್ತಿರುವರು. ರಷ್ಯನರ ಪ್ರತಿಭಟನೆಯು ಜೋರಾಗಿರುವದೆಂದು ಜರ್ಮನರು ಒಪ್ಪಿಕೊಂಡಿದ್ದಾರೆ. ಮೇ 12 ರಿಂದ 16ರ ವರೆಗಾಗಿ 300ಕ್ಕೂ ಹೆಚ್ಚಿನ ಖೂರುಗಳನ್ನು ರಷ್ಯನರು ಆಕ್ರಮಿಸಿದ್ದಾರೆ.

ಆಸ್ಟ್ರೇಲಿಯಾ.

ತಾವು ಕೇಳಿದ ಸಹಾಯವು ತಮಗೆ ಬಂದಿರುವುದೆಂದು ಆಸ್ಟ್ರೇಲಿಯಾ ಮಂತ್ರಿಗಳಾದ ಕರ್ಟನರು ಸೂಚಿಸಿ ತನ್ನ ನೇತವನ್ನು ಕಳಿಸಲು ಇತರ ಮಿತ್ರದೇಶಗಳನ್ನು ಬಲಿಕೊಡುವ ನೀತಿಯು ತಮ್ಮದಲ್ಲವೆಂದು ಹೇಳಿದರು. ಆದರೂ ಆಸ್ಟ್ರೇಲಿಯಾಕ್ಕೆ ಭಯವು ತಪ್ಪಿಲ್ಲವೆಂದರು.

ಬರ್ಮಾ.

ಬರ್ಮಾದ ಯುದ್ಧವು ಮುಗಿಯಿತೆಂದು ಅನೇಕರು ಅಭಿಪ್ರಾಯ ಪಡುವುದಾದರೂ ಬರ್ಮಾದಲ್ಲಿರುವ ಜಪಾನು ಸೈನಿಕರ ಮೇಲೆ ಬ್ರಿಟಿಷ್ ವಿಮಾನಗಳು ಮುತ್ತಿಗೆ ನಡೆಸುತ್ತಲೇ ಇವೆ. ಜಪಾನ ನಗಳು ಕಾಲೇವಾದ ಹತ್ತರ ಚಿಂದ್ವೀನ ನದಿಯ ಎರಡೂ ಭಾಗಗಳಿಂದ ಪ್ರತಿಭಟನೆಯಿಲ್ಲದೆ ಇಳಿದಿದ್ದಾರೆ. ಅಲ್ಲಿಂದ ಕೆಲವು ದಿನಗಳ ಹಿಂದೆಯೇ ಬ್ರಿಟಿಷ್ ಸೇನೆಗಳು ಹಿಮ್ಮೆಟ್ಟಿದ್ದವು. ಜಪಾನರ ದೊಡ್ಡ ಸೈನ್ಯವು ಬರ್ಮಾಕ್ಕೆ ಬರುತ್ತಿರುವದಾಗಿ ಪ್ರಕಟವಾಗಿದೆ

ಭೌಗೋಲಿಕ ಸ್ಥಾನ

ಪೂರ್ವದಿಕ್ಕಿಗೆ ಹಿಂದುಸ್ಥಾನದ ವಾಯವ್ಯ ಗಡಿನಾಡಿನ ಪ್ರಾಂತ ಮತ್ತು ಪಂಜಾಬು, ದಕ್ಷಿಣದಲ್ಲಿ ಬಲೂಚಿಸ್ತಾನ, ಪಶ್ಚಿಮದಲ್ಲಿ ಇರಾಣ ಮತ್ತು ಉತ್ತರದಲ್ಲಿ ರಶಿಯಾದ ತುರ್ಕಸ್ತಾನ, ಅಮುಬೆಕ್ಕ, ಟಾಲ್ಸಿಕ್ ಪ್ರಾಂತ ಇವುಗಳು ಅಫಗಾನಿಸ್ತಾನದ ಮೇರೆಗಳು. ಅಫಗಾನಿಸ್ತಾನವು ಪರ್ವತ ಪ್ರದೇಶವಾಗಿರುವುದು ಹಿಮಾಲಯ ಪರ್ವತದ ಅಂಗವಾದ ಹಿಂದೂಕುಶ ಪರ್ವತಾವಳಿಯಿಂದಲು ಅಫಗಾನಿಸ್ತಾನದಿಂದ ಪ್ರಾರಂಭವಾಗುವುದು.

ಹಿಂದೂಸ್ತಾನವನ್ನು ಉತ್ತರದಿಕ್ಕಿನಿಂದ ವೈರಿಗಳು ಪ್ರವೇಶಿಸದಂತೆ ದೈವನಿರ್ಮಿತವಾದ ಹಿಮಾಲಯಪರ್ವತಗಳು ಪ್ರತಿಬಂಧಿಸುತ್ತವೆ. ಈ ಪರ್ವತದ ಸಾಲಿನಲ್ಲಿ ವೈರಿಗಳು ಮುನ್ನುಗ್ಗಬಹುದಾದ ಒಂದೇ ಒಂದು ಎಡೆ ಎಂದರೆ ಖೈಬರಕಣಿವೆ. ಈ ಕಣಿವೆಯು ಹಿಂದುಸ್ಥಾನದ ವಾಯವ್ಯ ದಿಕ್ಕಿಗೂ ಅಫಗಾನಿಸ್ತಾನದ ಈಶಾನ್ಯ ದಿಕ್ಕಿಗೂ ಇದೆ. ಈ ಮಾರ್ಗವು ಈಗ ಹಿಂದಿನಂತೆ ದುಸ್ಥಿತಿಯಲ್ಲಿರದೆ ಮೋಟರ ಬಂಡಿಗಳು ಸರಾಗವಾಗಿ ಓಡಾಡಲು ಅನುಕೂಲವಾಗುವಂತೆ ಇದೆ.

ಇದೇ ಮಾರ್ಗವಾಗಿ ಕಾಲಕಾಲಕ್ಕೆ ವಿವಿಧ ಜನಾಂಗದವರು ಹಿಂದುಸ್ಥಾನವನ್ನು ಅತಿಕ್ರಮಿಸಿ ಪ್ರವೇಶಮಾಡಿ ಇಲ್ಲಿಯ ಸಿರಿ ಸಂಪತ್ತನ್ನು ಸೂರೆಮಾಡಿರುವರು ಹಾಗೆ ಬ್ರಿಟಿಶರು ಇಲ್ಲಿ ಹೆಚ್ಚಿನ ಸೈನ್ಯಬಲವನ್ನಿಟ್ಟು ಈ ಪ್ರದೇಶವನ್ನು ಜಾಗರೂಕತೆಯಿಂದ ರಕ್ಷಿಸಿರುವರಾಗಿ ತಿಳಿದುಬರುತ್ತದೆ.

ಅಸಹಾಯಕತೆ ಮತ್ತು ಮಹತ್ವ

ಬ್ರಿಟಿಶರು ಅಫಗಾನಿಸ್ತಾನದ ಅಸಹಾಯಕತೆಯ ಸಂಪೂರ್ಣ ಲಾಭವನ್ನು ಪಡೆದು ಉತ್ತರದಿಂದ ರಶಿಯದವರು ತಮ್ಮದಾದ ಹಿಂದುಸ್ಥಾನದಮೇಲೆ ದಂಡೆತ್ತಿ ಬರದಂತೆ ಆತಂಕನನ್ನು ಕಲ್ಪಿಸುವುದಕ್ಕಾಗಿಯೂ, ಅದರಂತೆಯೇ ರಶಿಯನರು, ಬ್ರಿಟಿಶರು ತಮ್ಮ ಮೇಲೆ ಏರಿಬಾರದಂತೆ ಅತ್ತಿಸುಡುವುದಕ್ಕಾಗಿಯೂ ಅಫಗಾನಿಸ್ತಾನವು ಸ್ವತಂತ್ರದೇಶವಾಗಿರುವುದನ್ನೇ ಸಮರ್ಥಿಸಿದರು. ರಶಿಯಾ ಹಿಂದೂಸ್ತಾನಗಳ ನಡುವೆ ಅಫಗಾನಿಸ್ತಾನವು ಚೀಪುಗಡ್ಡನಂತೆ (ಬಫರ್ ಸ್ಟೇಟ್) ಇದೆ. ಇದರ ಉಪಯೋಗದ ಮಹತ್ವವು ಬೆಲ್ಜಿಯಂ ಮತ್ತು ಅಲ್ಸೆಸ್ ಲೋರೇನದ ನಡುವಿರುವ ಲಕ್ಸೆಂಬರ್ಗ ದೇಶದ ಮಹತ್ವದಷ್ಟೇ ಇದೆ.

ಅಫಗಾನಿಸ್ತಾನ

ಹಿಂದುಸ್ತಾನ ರಶಿಯಗಳ ನಡುವೆ ಚೀಪುಗಡ್ಡಿನಂತಿರುವ ಸ್ವತಂತ್ರ ದೇಶ.

ಈಗಿನ ಯುದ್ಧದಲ್ಲಾದರೂ ಶತ್ರುಗಳು ಹಿಂದೂಸ್ತಾನದ ಉತ್ತರದಿಕ್ಕಿನಿಂದ ಏರಿ ಬರದಿರಬೇಕಾದರೆ ಅಫಗಾನಿಸ್ತಾನವು ಮಿತ್ರರಾಷ್ಟ್ರಗಳಿಗೆ ಸಹಾಯವಾಗಬೇಕು ಇಲ್ಲವಾದರೆ ಮಧ್ಯಪ್ರವೇಶದ ಯುದ್ಧವು ಹದಗೆಟ್ಟು ಹೋಗುವುದರಲ್ಲಿ ಸಂದೇಹವಿಲ್ಲ

ಸೃಷ್ಟಿ ಸೌಂದರ್ಯ

ಇಲ್ಲಿಯ ಮುಖ್ಯ ನದಿ ಎಂದರೆ ಹೆಲ್‌ಮಾಂಡ ಎಂಬುದು 5—6 ಚಿಕ್ಕ ಪುಟ್ಟ ಕವಲುಗಳಿಂದ ಕೂಡಿದ ಈ ನದಿಯು 600 ಮೈಲುಗಳಷ್ಟು ಉದ್ದವಿದ್ದು ಅಫಗಾನಿಸ್ತಾನವನ್ನೆಲ್ಲ ಆವರಿಸಿರುವುದು. ಸಿಂಧೂನದಿಯ ಒಂದು ಶಾಖೆಯು ಕಾಬೂಲವ ಸಮೂಹದಲ್ಲಿ ಜನ್ಮ ತಾಳುವುದು.

ಅಫಗಾನಿಸ್ತಾನದ ಕ್ಷೇತ್ರ ವಿಸ್ತೀರ್ಣವು ಸುಮಾರು 2ll ಲಕ್ಷ ಚದರು ಮೈಲುಗಳಷ್ಟಿದ್ದು ಒಂದು ಕೋಟಿಗಿಂತಲೂ ಹೆಚ್ಚು ಪ್ರಜೆಗಳಿಂದ ಕೂಡಿರುವುದು. ಕಾಬೂಲವು ಇದರ ಮುಖ್ಯಪಟ್ಟಣ. ಅಫಗಾನಿಸ್ತಾನದಲ್ಲಿ ಗಾರ್ಸಿಯನ್, ಪುಷ್ತು ಮತ್ತು ತುರ್ಕಿ ಭಾಷೆಯು ಪ್ರಚಾರದಲ್ಲಿದ್ದರೂ ಪರ್ಶಿಯನ್ ಭಾಷೆಯು ರಾಜಭಾಷೆಯಾಗಿದೆ ಪರ್ವತ ಶ್ರೇಣಿಗಳಿಂದ ಕೂಡಿದ ಈ ಪ್ರಾಂತವು ಇನ್ನೂ ಸುಧಾರಣೆಯಲ್ಲಿ ಬಹಳ ಹಿಂದುಳಿದಿರುವುದೆಂದು ಹೇಳಿದರೆ ತಪ್ಪಾಗಲಾರದು. ಅಫಗಾನಿಸ್ತಾನದ ಮೂಲನಿವಾಸಿಗಳು ಪೂರ್ತು; ಯುದ್ಧ ಪ್ರಿಯರು. ಇವರು ಯಾವ ಸುಧಾರಣೆಗಳನ್ನೂ ಅಪೇಕ್ಷಿಸುವ ದಿಲ್ಲ ಮಾಹ್ಯನಲ್ಲವೆ ತಮ್ಮಗಳನ್ನು ತಿರಸ್ಕರಿಸುವರು

ಅಮಾನುಲ್ಲಾನ ರಾಜ್ಯಭಾರ

41ನೇ ಶತಮಾನದಿಂದ ಆಫ್ಘಾನಿಸ್ತಾನವು ಸ್ವತಂತ್ರವಾಗಿದೆ ಅಲ್ಲಲ್ಲಿಯ ಪ್ರಜೆಗಳು ಸ್ವಾತಂತ್ರ್ಯ ಪ್ರಿಯರಿದ್ದಾಗ್ಯೂ ಒಳ ಜಗಳಗಳಿಗೆ ಅಲ್ಲಿಯೂ ಏನೂ ಕಡಿಮೆಯಿದ್ದಿಲ್ಲ ಅಲ್ಲಿಯ ಅರಸನಾದ ಅಮೀರ ಹಬೀಬುಲ್ಲಾನು ಬ್ರಿಟಿಶರ ಕಡೆಗೆ ಒಲಿಯುವನೆಂದು ಕಂಡು ಬಂದುದರಿಂದ ಅವನ ಪ್ರಜೆಗಳು 1919 ರಲ್ಲಿ ಅವನನ್ನು ಕೊಂದರು. ಮತ್ತು ಅವನ ತಮ್ಮನಾದ ನಸುರುಲ್ಲಾನಿಗೆ ರಾಜ್ಯಪದವಿಯನ್ನು ಸೊರೆಕಿಸಿಕೊಡುವದರಲ್ಲಿ ತೊಡಗಿದರು. ಆದರೆ ಅಮೀರ ಹಬೀಬುಲ್ಲಾನ ಮಗನಾದ ಅಮಾನುಲ್ಲಾನು ಈ ಕೃತ್ಯವನ್ನು ಸಹಿಸದಾದನು. ಅವನು ತನ್ನ ತಂದೆಯ ಕೊಲೆಪಾತಕಿಗಳ ಸೇಡು ತೀರಿಸಿಕೊಳ್ಳುವದಕ್ಕಾಗಿ ನಸುರುಲ್ಲಾನನ್ನು ಸೆರೆಮನೆಗೆ ಕಳುಹಿಸಿ ರಾಜ್ಯಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡನು. ಆರಸನಾಗಿ ಬಂದ ಮೇಲೆ ಅಮಾನುಲ್ಲಾನು ಮಾಡಿದ ಪ್ರಥಮ ಕಾರ್ಯವೆಂದರೆ ಬ್ರಿಟಿಶರೊಡನೆ ಯುದ್ಧ ಪ್ರಾರಂಭಿಸಿದುದು ಇನ್ನೇ ಅಲ್ಲದೆ ಹಿಂದುಸ್ತಾನದ ವಾಯವ್ಯ ಗಡಿನಾಡಿನಲ್ಲಿರುವವರಿಗೆ ಬ್ರಿಟಿಶರೊಡನೆ ಯುದ್ಧ ಹೂಡುವದಕ್ಕಾಗಿ ಸಹಾಯ ಕೊಡಲೆಂದು ಖೈಬರ ಖಣಿವೆಯ ಮಾರ್ಗವಾಗಿಯೂ ಅವನು ತನ್ನ ಸೈನ್ಯವನ್ನು ಕಳುಹಿಸಿದನು. ಆದರೆ ಸುಸಜ್ಜಿತಕಲ್ಲದೆ ಅಫಗಾನರು ಸೋತು ಹೋದುದರಿಂದಾಗಿ ಒಪ್ಪಂದವಾಯಿತು ಮತ್ತು 1 21ರಲ್ಲಿ ಶಾಂತಿಯು ಒಡಂಬಡಿಕೆಯೂ ಆಯಿತು. ಅಮೀರ ಅಮಾನುಲ್ಲಾನು (ರಾಜ್ಯಪದವಿಯನ್ನೇರಿದನೇತೆ ಅಮಾನುಲ್ಲಾನಿಗೆ ಅಮೀರಷೆಂಬ ಬಿರುದು ಬಂದಿತು.) ಇತ್ತ ಸೋವಿಯೆಟ್ ರಶಿಯಾದೊಂದಿಗೆ ಒಂದು ಗುಪ್ತವಾದ ಮತ್ತು ಇನ್ನೊಂದು ಎಲ್ಲರಿಗೂ ವಿದಿತವಾಗುವಂತೆ ಎರಡು ಒಪ್ಪಂದಗಳನ್ನು ಮಾಡಿಕೊಂಡನು. ಹಿಂದುಳಿದ ತನ್ನ ರಾಜ್ಯವು ಸುಧಾರಿಸಬೇಕೆಂಬುದು ಅವನ ಆಶೆಯಾಗಿತ್ತು. 1926ರಲ್ಲಿ 'ರಾಜಾ' ಎಂಬ ಬಿರುದನ್ನು ಕೊರೆಕಿಸಿಕೊಂಡು 1927, 1928ರಲ್ಲಿ ಐರೋಪ್ಯ ಮತ್ತು ಅತಿಪೂರ್ವದ ರಾಷ್ಟ್ರಗಳನ್ನು ಸಂದರ್ಶಿಸಿದನು. ಈ ಪ್ರವಾಸದ ಫಲಿತಾಂಶವಾಗಿ ನವನಾಗರಿಕತೆಯನ್ನು ವೈವಿಧ್ಯವನ್ನೂ ಕಂಡ ಅಮಾನುಲ್ಲಾನಿಗೆ ತನ್ನ ರಾಜ್ಯವನ್ನೂ ಹೀಗೆ ಸುಧಾರಿಸಬೇಕೆಂಬ ಆಶೆಹುಟ್ಟಿತು ತುರ್ಕಿಸ್ತಾನದಲ್ಲಿ ಕಮಾಲ ಪಾಶನು ಸುಧಾರಣೆ ಮಾಡಿದ ರೀತಿನೀತಿಗಳು ಅವನ ಕಣ್ಣಮುಂದೆ ಬಂದು ನಿಂತವು ಅವನ್ನೇ ಅನುಸರಿಸಿ ಸ್ತ್ರೀಯರು ಘೋಷಾಸನ್ನಿವೇಶವನ್ನು ತ್ಯಜಿಸಬೇಕೆಂದೂ ಪುರುಷರೆಲ್ಲರೂ ಆಂಗ್ಲೇಯರ ವೇಷ ಭೂಷಣಗಳನ್ನು ಅನುಸರಿಸಬೇಕೆಂದೂ ಆಜ್ಞೆ ಹೊರಡಿಸಿದನು. ಸಂಪ್ರದಾಯಪರಂಪರೆಯಿಂದ ಬಂದ ವಿಷಯಾಚಾರಗಳನ್ನು ತಿರಸ್ಕರಿಸುವುದು ಸುಲಭವಾದ ಮಾತಲ್ಲ. ಮುಲ್ಲಾ (ಮಹಮ್ಮದೀಯ ಮತದ ಗುರು.

ಓರಿಯಂಟಲ್

ಸಂಪೂರ್ಣ ರಕ್ಷಣೆ, ಪೂರ್ಣ ಭರವಸೆ

ಈ 68 ವರ್ಷಗಳ ಜೀವನದಲ್ಲಿ ಓರಿಯಂಟಲ್ ಕಂಪನಿಯು ತನ್ನ ಲಕ್ಷಾಂತರ ವಿಮಾದಾರರಿಗೆ ಶಾಂತ ಮತ್ತು ಯುದ್ಧಕಾಲಗಳೆಲ್ಲೂ ಸಹ ಮಾದರಿ ವಿಮಾಕಾರ್ಯದ ಶ್ರೇಷ್ಠ ತತ್ವಗಳ ಅನುಕರಣೆಯಿಂದ ಮೇಲ್ಮಾಣಿಸಿದುದನ್ನು ಕೊಟ್ಟಿದೆ. ಅವರೊಡಗಿಸಿದ ಸೌಲಭ್ಯಗಳನ್ನು ನಿಮಗೂ ಓರಿಯಂಟಲ್ ಒದಗಿಸಲು ಸಿದ್ಧವಿದೆ.

ಇಲ್ಲಿಯವರೆಗೆ ಸಲ್ಲಿಸಿರುವ ಹಕ್ಕುಗಳ ಕಣ ರು 26ಕೋ. ಮೀರಿ
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು 85½ ಕೋಟಿ
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5 ಕೋಟಿ
ನಿಧಿಯ ವೃದ್ಧಿ ರು 30 ಕೋಟಿ

ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್,
ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ.

ಶಾಖೆ:- ೧೩೪ ಲಾಯಿಡ್ಸ್‌ರೋಡ್ ನೋಸ್ಟ್ ಬಾಳ್ಸ್ ನಂ. ೮ ಮದ್ರಾಸು.
ಇನ್ಸ್‌ಪೆಕ್ಟರವರ ಆಫೀಸು:- ೩೧೨ ರೂಪರ್ಟಸ್ ಗೇಟ್ ಬ್ರೂಸಹೇಟ ಬಳ್ಳಾರಿ.

ಗಳು) ಜನರು ಇವನ ಈ ಸುಧಾರಣೆಯನ್ನು ಆಮೂಲಾಗ್ರವಾಗಿ ವಿರೋಧಿಸಿದರು. ಮತಾನುಯಾಯಿಗಳ ಕ್ರಾಂತಿಯೇ ಎದ್ದಿತು. ಇದೇ ಸಮಯಕ್ಕೆ ಸರಿಯಾಗಿ ಅವನ ಸೈನ್ಯದ ಸಂಬಳವು ಕೊಡದೆಹೋಗಿ ಉಳಿದುದರಿಂದಲೂ ರಾಜ ಬೊಕ್ಕಸವು ಬರಿದಾಗಿದ್ದುದರಿಂದಲೂ ಅಮಾನುಲ್ಲಾನು ಸೈನ್ಯ ಸಹಾಯವನ್ನು ಪಡೆದು ಈ ಕ್ರಾಂತಿಯನ್ನು ಅಡಗಿಸಿದನು. ಹೀಗೆ ನಿರಾಶ್ರಿತನಾದ ಅಮಾನುಲ್ಲಾನಿಗೆ ಉಳಿದ ಒಂದೇ ಉಪಾಯವೆಂದರೆ ಪಲಾಯನ. ಅವನು ಅದನ್ನೇ ಅನುಸರಿಸಿ ಹಿಂದುಸ್ಥಾನಕ್ಕೆ ಬಂದು ಅಲ್ಲಿಂದ ನುಂದೆ ಇಟಲಿಯನ್ನು ಸೇರಿದನು. ಆಫಘಾನಿಸ್ತಾನದ ಚರಿತ್ರೆಯಲ್ಲಿ ಅಮಾನುಲ್ಲಾನ ರಾಜ್ಯಭಾರವು ಎಂದಿಗೂ ಮರೆಯದಂತಾಯಿತು.

ಬಚ್ಚಾ-ಇ-ಸಕೂ

ಅಮಾನುಲ್ಲಾನು ಓಡಿಹೋದುದಕ್ಕೆ ಬ್ರಿಟಿಶರು ಅನೆಸ್ತಿಂದು ಮಹತ್ವವನ್ನು ಕೊಡಲಿಲ್ಲ. ಅವನ ಬಲವು ರಷಿಯಾದ ಕಡೆಗಿದ್ದುದರಿಂದ ಅವನ ಕೈಯಿಂದ ಅಲ್ಲಿಯ ರಾಜ್ಯಸೂತ್ರಗಳು ಹೋಗಬೇಕೆಂಬುದೇ ಅವರ ಇಚ್ಛೆಯಾಗಿರಬೇಕು. ಅದು ಏನೇ ಇರಲಿ. ಅಮಾನುಲ್ಲಾನು ರಾಜ್ಯವನ್ನು ತ್ಯಜಿಸಿ ಹೊರಟು ಹೋದುದರಿಂದ ಆಫಘಾನಿಸ್ತಾನದ ರಾಜಕಾರಣದಲ್ಲಿ ಅನೇಕ ತೊಡಕು ತೊಂದರೆಗಳೂ ಅನ್ಯಿ ಅತಂಕಗಳೂ ತಲೆದೋರಿದವು. ಅಮಾನುಲ್ಲಾನನ್ನು ವಿರೋಧಿಸಿದ ಪಂಗಡದ ಧುರೀಣನಾದ ಬಚ್ಚಾ-ಇ-ಸಕೂ (ಈ ಶಬ್ದದ ಅರ್ಥವು ಅವರ ಭಾಷೆಯಲ್ಲಿ "ನೀರು ಹೊರುವನ ಮಗ") ಎಂಬವನು ರಾಜಸೂತ್ರವನ್ನು ತನ್ನ ಕಡೆಗೆ ಎಳೆದುಕೊಂಡನು. ಅವನು ಹೀನಕುಲಸಂಜಾತನು ಅಮಾನುಲ್ಲಾನ ನವ ನಾಗರಿಕತೆಯ ಯೋಜನೆಗಳೆಲ್ಲವನ್ನೂ ಅವನು ರಾಜ ಕಾರಣದಿಂದ ಕಿತ್ತೊಗೆದನಲ್ಲದೆ ತಾನು ಆಫಘಾನಿಸ್ತಾನದ ಭಾಗ್ಯವಿಧಾತನಾದ ಅಮೀರನೆಂದು ಅಲ್ಲಿಯ ಸ್ವಜಗಳಿಗೆ ಸಾರಿದನು ಅಲ್ಪನಾದ ಬಚ್ಚಾ-ಇ-ಸಕೂನು ರಾಜಕಾರಣವನ್ನು ಸುಸೂತ್ರವಾಗಿ ನಿರ್ವಹಿಸಿ ನಿರ್ಬಂಧನೆಗಳನ್ನನುಸರಿಸಿ ಸಾಗಿಸಿಕೊಂಡು ಹೋಗಿದಾದನು ಈ ಸಮಯವನ್ನು ಸಾಧಿಸಿ ಹಿಂದಿನ ರಾಜವಂಶಕ್ಕೆ ಸೇರಿದವರಲ್ಲೊಬ್ಬನಾದ ನಾದಿರ ಖಾನನು ಬಚ್ಚಾ-ಇ-ಸಕೂನನ್ನು ಎದುರಿಸಿದನು. ಆಂಗ್ಲರ ಸಹಾಯವನ್ನು ಪಡೆದು ನಾದಿರ ಖಾನನು ಅವನನ್ನು ಸೋಲಿಸಿದನಲ್ಲದೆ 1929ರಲ್ಲಿ ಬಚ್ಚಾ-ಇ-ಸಕೂನನ್ನು ಗಲ್ಲಿಗೇರಿಸಿದನು ಶಹಾಬುದ್ದೀನನ್ನು ಪಡೆದು ಆಫಘಾನಿಸ್ತಾನದ ರಾಜಪಟ್ಟವನ್ನೇರಿದ ನಾದಿರ ಖಾನನು ಲಿಂಗ್ಲರಿಂದ ೪ ಲಕ್ಷ ಪವನುಗಳ ಸಾಲ ಪಡೆದು ಆಫಘಾನಿಸ್ತಾನದಲ್ಲಿ ಶಾಂತಿ ಸಮಾಧಾನಗಳು ನೆಲೆನಿಲ್ಲುವಂತೆ ಮಾಡಿದನು ರಷಿಯಾದೊಂದಿಗೆ ಇನ್ನೂ ಹಿತ ಸಂಬಂಧಗಳೆಲ್ಲವನ್ನೂ ಕಡಿದುಹಾಕಿ ಆಫಘಾನಿಸ್ತಾನವು ಮುಖ್ಯ ಜನರ ವಿರೋಧ ಕಟ್ಟಿಕೊಳ್ಳದಂತೆ ನವನಾಗರಿಕತೆಯ ವೆಚ್ಚಗಳನ್ನು ಒಂದೊಂದಾಗಿ ವಿರುವಂತೆ ಹಜಿಕೆಯನ್ನು ಮಾಡಿದನು. ಇವನ ಈ ಯೋಜನೆಗಳು ಸಫಲವಾದವು. ಆಫಘಾನಿಸ್ತಾನದ ಪ್ರಜೆಗಳು ಇವನಿಂದ ಇನ್ನೂ ಹೆಚ್ಚಿನ ಸುಧಾರಣೆಯನ್ನು ಆಶಿಸ ಹತ್ತಿದರು ಅವರೆ ತಾ. 8-4-19 ರಂದು ಪಾರ್ಲಿಮೆಂಟಿನ ಕಲಾಪವನ್ನು ಹಂಚಿವ ಒಂದು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದಾಗ ಅವನ ಕೊಲೆಯಾಯಿತು ಯಾರೋ ಮಾಡಿಬಿಟ್ಟರು

ಈಗಿನ ರಾಜಕಾರಣ

ನಾದಿರಖಾನನ ಕೊಲೆಯ ನಂತರ ಅವನ ಮಗನಾದ ರಾಜಾ ಮಹಮ್ಮದ ಜಾಹೀರನು (ಆಗ ಇವನಿಗೆ 19 ವರ್ಷ ವಯಸ್ಸಾಗಿತ್ತು) ಅವಿರೋಧವಾಗಿ ರಾಜಸಾದನು. ತನ್ನ ತಂದೆಯು ಕೈಕೊಂಡ ಕಾರ್ಯವನ್ನು ಅವನು ಚಾಣಾಕ್ಷತೆಯಿಂದ ನೆರವೇರಿಸುತ್ತಿರುವನು ಮಹಮ್ಮದ ಜಾಹೀರನ ಕಕ್ಕಸ ಮಕ್ಕಳು ಮೂವರು ಅವನಿಗೆ ರಾಜಕಾರಣದಲ್ಲಿ ಸಲಹೆ ಸೂಚನೆಗಳನ್ನು ಕೊಡುತ್ತಲಿರುವರು.

ಈಗಿನ ಯುದ್ಧವಾತಾವರಣವಾಗುವ ಕ್ಕಿಂತ ಮುಂಚೆ ಆಫಘಾನಿಸ್ತಾನವು ತಾಟಸ್ಥ್ಯವನ್ನು ವಹಿಸಿದ್ದಿತು. ಆದರೆ ಈಗ 2 ವರ್ಷಗಳಿಂದ ಬ್ರಿಟಿಶರ ಮಾತಿಗೆ ಅಲ್ಲಿ ಬೆಂಬಲವು ದೊರೆಯುತ್ತಲಿದೆ ಆಫಘಾನಿಸ್ತಾನವು ಮಿತ್ರರಾಷ್ಟ್ರಗಳ ಪಕ್ಷವನ್ನು ಹಿಡಿದುದರಿಂದ ರಷಿಯಾಕ್ಕು ಅಲ್ಲಿ ಈಗ ಎಡೆ ದೊರೆತಿರುವುದು. ಹಿಂದುಸ್ತಾನದ ಕಿಟಕಿಯೋಪಾದಿಯಲ್ಲಿರುವ ಆಫಘಾನಿಸ್ತಾನದ ಸುರಕ್ಷಿತತೆಯು ಅತಿ ಪೂರ್ವದ ಯುದ್ಧದ ದೃಷ್ಟಿಯಿಂದ ಮಿತ್ರರಾಷ್ಟ್ರದವರಿಗೆ ಮಹತ್ವದ್ದಿದೆ.

ರಷಿಯಾಕ್ಕೆ ಮಿತ್ರರಾಷ್ಟ್ರಗಳೆಲ್ಲವು ಸಹಾಯವನ್ನೂಡುವ ಭರವಸೆಯನ್ನು ಕೊಟ್ಟಿರುವ ರಷ್ಟೆ! ಇನ್ನು ಮುಂದೆ ಉಂಟಾಗಬಹುದಾದ ವಸಂತ ದಾಳಿಯನ್ನು ಎದುರಿಸಲು ರಷಿಯಕ್ಕೆ ಬ್ರಿಟಿಶರು ಇತ್ತ ಕಡೆಯಿಂದಲೂ ಸಹಾಯವನ್ನು ಯಥೇಚ್ಛವಾಗಿ ಒದಗಿಸಬಹುದು. ಪರ್ಶಿಯನ್ನ ಕೊಲ್ಲಿಯ ಮಾರ್ಗವು ಕಟ್ಟುವರಿ ಆಫಘಾನಿಸ್ತಾನ ಮಾರ್ಗವನ್ನು ಉಪಯೋಗವನ್ನು ಹೆಚ್ಚಾಗಿ ಪಡೆಯಬಹುದೆಂದು ಹೇಳಬಹುದಾಗಿದೆ.

(ಹುಬಳಿ ಗೆಜೆಟ್)

ಪೂರ್ವ ಆಸ್ಸಾಮಿನ ಸ್ವಾಯಾಂತರ ಕ್ಷೇತ್ರದಲ್ಲಿರುವ ನಗರದಮೇಲೆ ಕಳೆದ ವಾರ ಜಪಾನರು ಬಾಂಬುದಾಳಿ ಮಾಡಿದರು. ಅಲ್ಪಸ್ವಲ್ಪ ನಷ್ಟವಾಗಿದೆ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ

ಡಿಪಾಜಿಟ್ಟುಗಳು.		
ಫಿಕ್ಸೆಡ್	ರೂ, Nil	113247
ಚಾಲ್ತಿ	,, 3,173	13859
ಸೇವಿಂಗ್ಸು	,, 1,231	18168
ಇತರ	,, 40	2227
ಸಾಲಗಳು		
ಭಂಗಾರ	,, 520	32113
ಮೂಲು	,, Nil	38810
ಇತರ	,, Nil	28328
ಇತರ ಆಸ್ತಿ.		
ಸರ್ಕಾರದ ಬಾಂಡುಗಳು	,, 13,32	30476
ಬ್ಯಾಂಕುಗಳಲ್ಲಿರುವ ಹಣ	,, 32,502	28728
ಕೈಯ್ಯಲ್ಲಿ ನಗದು	,, 5770	14778

ಒಟ್ಟು ವ್ಯವಹಾರದ ಮೊತ್ತ.

31—10—40.	30—4—42.
ರು. 1,14,774-0-0	ರು 23,2868-0-0

ಶಾಖೆಗಳು:—

1 ತಿಮ್ಮನಚರ್ಲು 2 ಕೊಟ್ಟೂರು 3 ಹುರುತಕೊಂಡ 4 ಪತ್ತಿಕೊಂಡ

ಹೆಚ್. ಶೇಕಾವಾಮುದ್ದಿನ್,, ಬಿ. ಎ ಬಿ ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ

ಬಳ್ಳಾರಿ ಜಿಲ್ಲಾ

ಕಾಲರಾ ವರದಿ ೧೭-೫-೪೨.

	ಹಳ್ಳಿಗಳ ಸಂಖ್ಯೆ	ತಗಲಿದವರು	ಸತ್ತವರು
ಆಲೂರು ತಾಲೂಕು	23	345	157
ಆದವಾನಿ	5	372	183
ಎಮ್ಮಿಗನೂರು	9	127	30
	ಹಳ್ಳಿ 37	ತಗಲಿದವರು 844	ಸತ್ತವರು 364

ಎಮ್ಮಿಗನೂರು

ಕಳೆದ ಸೋಮವಾರ ಶ್ರೀ ಮಲ್ಲಾರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕೈಮಗ್ಗದ ನೇಕಾರರ ಪರಿಸ್ಥಿತಿಯು ಚರ್ಚಿತವಾಯಿತು ಕ್ಷಾಮ ನಿವಾರಣಾಕೇಂದ್ರಗಳಲ್ಲಿ ಕೆಲಸದ ತೂಕವನ್ನು ಕಡಮೆ ಮಾಡಬೇಕೆಂದೂ ಕೊಡುವ ಸೂಲಿನ ತೂಕಕ್ಕಿಂತ ಪೂರ್ಣ ಸರಕುಗಳ ಶಿಯಮಿತ ತೂಕವು ಹೆಚ್ಚಿಗಿದುನದೆಂದೂ ಹೇಳಲಾಯಿತು ಎಧಿಸಿದ ಪಂಪವನ್ನು ಹಿಂದಿರುಗಿಕೊಡಬೇಕೆಂದೂ ಸೂಚಿಸಲಾಯಿತು, ಅಧಿಕಾರಿಗಳೊಡನೆ ಸತ್ರವ್ಯವಹಾರ ನಡೆಸಲು ಕ್ಷಾಮನಿವಾರಣಾ ಸಮಿತಿಗು ಅಧ್ಯಕ್ಷರಾದ ಶ್ರೀ ಎಂ.ಸೋಮಸ್ಪನವರಿಗೆ ಅಧಿಕಾರ ಕೊಡಲಾಯಿತು.

ಮಲ್ಲಸಜ್ಜನ ವ್ಯಾಯಾಮ ಶಾಲೆ

12-೫-42 ನೆಯ ಮಂಗಳವಾರ 6 ಗಂಟೆಗೆ ಶ್ರೀ ಬಿಂದುನಾಥವರಧ್ಯಕ್ಷತೆಯಲ್ಲಿ ವ್ಯಾಯಾಮಶಾಲಾ ಸದಸ್ಯರಾದ ಶ್ರೀ ಡಿ. ರಾಮಾಚಾರ್ಯರ ನಿಧನಕ್ಕಾಗಿ ಹುಃಖಸೂಚಕ ನಿರ್ಣಯನಾಗಿ ಮೃತರಿಗೆ ಶಾಂತಿಯನ್ನು ಕೋರುವುದಾಯಿತು.

ಬೆಳಗಲ್ಲು ತಾಂಡಾದಲ್ಲಿ ಸಭೆ.

17—೫—42 ನೇ ಆದಿತ್ಯವಾರ ಸಾಯಂಕಾಲ ಬಳ್ಳಾರಿ ತಾಲೂಕು ಬೆಳಗಲ್ಲು ತಾಂಡಾವಲ್ಲಿ ಬಂಜಾರ ಜನರ ಸಭೆಯು ನೆರೆದಿತ್ತು. ಹೊನ್ನಳ್ಳಿ ಚಾನಿ ಕೆಂಪೆ ತಾಂಡಾವನರೂ ಸೇರಿ ಸುಮಾರು 500 ಜನ ತಾಂಡಾದ ಜನರು ಕಿಕ್ಕಿರಿದಿದ್ದರು ಜಿಲ್ಲಾ ಪೋಲೀಸು ಸೂಪರೆಂಟೆಂಡೆಂಟರಾದ ಶ್ರೀ ಸುಬ್ಬರಾಯನ್‌ರವರು ಸುಲಲಿತವಾದ ಭಾಷೆಯಲ್ಲಿ ಅಮೂಲ್ಯ ಉಪದೇಶವನ್ನು ಕೊಟ್ಟು ಅವರು ಸನ್ಮಾನಗ್ರಹಣವಾದರೆ ಗ್ಯಾಂಗಿನಿಂದ ತೆಗೆಯುವುದಾಗಿ ಹೇಳಿದರು. ಸರ್ಕಲ್ ಇನ್ಸ್‌ಪೆಕ್ಟರ್ ರಾಮಯ್ಯನವರು ಸೂಪರೆಂಟರ ಭಾಷಣವನ್ನು ಕನ್ನಡಿಸಿದರು. ಚಿಕ್ಕ ಜೋಗೀಹಳ್ಳಿ ತಾಂಡದ ಶ್ರೀ ಕುಬೇರ ನಾಯ್ಕ ಮತ್ತು ನಾಕ್ಯಾನಾಯ್ಕ ಇವರು ಈ ಸಭೆಯನ್ನು ಏರ್ಪಡಿಸಿದ್ದಲ್ಲದೆ ತಮ್ಮ ಸಾಮ್ರಭಾಷೆಯಲ್ಲಿ ದುರಾಚರಣೆಗಳನ್ನು ಬಿಡಲು ಸದುಪದೇಶಕೊಟ್ಟರು

ರೈಲಿನ ಅಪಘಾತ:-

ಮೇ 17 ನೆಯ ರಾತ್ರಿ ಕರಾಚಿಗೆ 150 ಮೈಲು ದೂರದಲ್ಲಿ ಪಂಜಾಬು ಮೇಲು ಗಾಡಿಯು ಭಯಂಕರ ಅನಾಹುತಕ್ಕೆ ಒಳಗಾಯಿತು. ಹೆಚ್ಚು ಜನಾಂಗದ ದರೋಡೆಕೋರರು ರೈಲು ಕಂಬಿಗಳನ್ನು ತಪ್ಪಿಸಿದ್ದರೆಂದು ಗೊತ್ತಾಗಿದೆ. ರೈಲು ಉರುಳಿಬಿದಮೇಲೆ ದರೋಡೆಕೋರರು ಸಿಕ್ಕಾಪಟ್ಟೆ ಗುಂಡು ಹಾರಿಸಿದರೆಂದೂ ಇದರ ಫಲವಾಗಿ ಅನೇಕರು ಸತ್ತರೆಂದೂ ಭಾವಿಸಿಕೊಂಡರೆಂದೂ ಹೇಳಲಾಗಿದೆ. 6 ರೈಲುಗಳು ಉರುಳಿವೆ. ಈಗ ಬಂದಿರುವ ವರದಿಗಳಿಂದ 22 ಮಂದಿ ಸತ್ತರೆಂತಲೂ 26 ಮಂದಿಗೆ ಗಾಯಗಳಾದವೆಂತಲೂ ಸುದ್ದಿ ಬಂದಿದೆ.

ಮೈಸೂರಿನ ದಬ್ಬಾಳಿಕೆ

—0—

ಮಹಾತ್ಮ ಗಾಂಧಿಯವರ ಲೇಖನ.

卐

ಮೈಸೂರು ಸಂಸ್ಥಾನ ಸರ್ಕಾರದವರು ಸಂಸ್ಥಾನ ಕಾಂಗ್ರೆಸ್ಸಿನ ಮೇಲೆ ತೆಗೆದುಕೊಳ್ಳುತ್ತಿರುವ ದಬ್ಬಾಳಿಕೆಯ ಕ್ರಮದ ಬಗ್ಗೆ ನಾನೀ ಮೊದಲು ಈ ಪತ್ರಿಕೆಯಲ್ಲಿ ಕೆಲ ಮಾತು ಬೇಕಿರುವೆನು. ಇದೀಗ ಭದ್ರಾವತಿಯಲ್ಲಿ ಪೋಲೀಸರು ಗೋಳೀಬಾರು ಮಾಡಿದ ಅವಕ್ಕೂ ತೀರ ದುಃಖದಾಯಕವಾದ ಸುದ್ದಿಯು ನಮ್ಮ ಕಡೆಗೆ ಬಂದಿದೆ. ನಿಶ್ಶಸ್ತ್ರ ಜನಸಮುದಾಯದ ಮೇಲೆ ಪೋಲೀಸರು ಮಾಡಿದ ಈ ಗೋಳೀಬಾರಿನಿಂದ 3 ಜನರು ಮರಣ ಹೊಂದಿದ್ದು ಅದರಲ್ಲಿ ಮೂರು ವರ್ಷದ ಮಗು ಮರಣಹೊಂದಿತೆಂದು ತಿಳಿಯುತ್ತದೆ. ವಿವರಗಳನ್ನು ಒರೆಯಬೇಕೆಂದು ನಾನು ಬಯಸುವದಿಲ್ಲ. ಶಾಂತೀಕೃತಿಯಿಂದ ಕೂಲಿಕಾರರು ವಿರೋಧ ಸ್ಪಂದರ್ನ ಮಾಡುವಾಗ ಇಷ್ಟೆಲ್ಲ ದುರಂತ ಸಂಭವಿಸಿತೆಂದು ಕಾಂಗ್ರೆಸ್ಸಿಗರ ಹೇಳಿಕೆ. ಭದ್ರಾವತಿಯಲ್ಲಿ ಪೋಲೀಸ ಸ್ಟೇಷನದ ಮೇಲೆ ಜನಸಮುದಾಯವು ನುಗ್ಗಿದ್ದರಿಂದ ಗೋಳೀಬಾರು ಮಾಡಬೇಕಾಯಿತೆಂದು ಸರ್ಕಾರದವರ ಪರವಾಗಿ ಸೂಚಿಸಲಾಗುತ್ತದೆ ಕಾಂಗ್ರೆಸ್ಸಿನ ಅಧ್ಯಕ್ಷರು ಈ ಆರೋಪವನ್ನು ಅಲ್ಲಗಳೆಯುವದರಲ್ಲಿದೆ ನಿಜಾರಣೆ ನಡೆಸಬೇಕೆಂದು ಕೇಳಿಕ್ಕುತ್ತಿರೆ ಆದರೆ ಆ ವಿಚಾರಣೆಯು ಎಲ್ಲರಿಗೂ ಒಪ್ಪಿತವಾಗುವಂತೆ ನಿಸ್ಪಕ್ಷಪಾತವಾಗಿದ್ದಂತೆ ಮಾತ್ರ ಉಪಯುಕ್ತ ಇಲ್ಲದಿದ್ದರೆ ನಿರರ್ಥಕ, ಜನಸಮುದಾಯವು ಅಹಿಂಸೆಯಿಂದಾಚರಿಸಿದ್ದರೆ ಗೋಳೀಬಾರು ಮಾಡಿದ್ದು ಕೇವಲ ಗಾಬರಿಗೊಳಿಸುವದಕ್ಕಾಗಿ ಯೋಜಿಸಿದ ಯೋಜನೆಯೇ ಏನೇ ಇದ್ದರೂ ಜನರು ಬೆಗೆ ಕೊಲ್ಲಲ್ಪಟ್ಟಜೇಂಬುದನ್ನು ಕಲಿಯಲಕ್ಕೆ ಬೇಕು ಬೇರೆ ಯಾವ ಕಾರಣಕ್ಕಲ್ಲದೆ ಕೇವಲ ತಮ್ಮ ನ್ಯಾತಂತ್ರ್ಯ ಪ್ರೇಮಕ್ಕಾಗಿ ಅನರು ಅಹಿಂಸೆಯ ಸ್ವಾತಂತ್ರ್ಯ ಸಾಧಿಸುತ್ತಿದ್ದರೆ ಸಾವು ತುರಂಗವಾಸವನ್ನು ಅತ್ಯಂತ ಆನಂದದಿಂದ ಸ್ವಾಗತಿಸುವಂತೆ ಮರಣವನ್ನೂ ಸ್ವಾಗತಿಸುವದು ನಮ್ಮ ಕರ್ತವ್ಯವಾಗಿದೆ ಕೆಲ ಸಲ ತುರಂಗಗಳಲ್ಲಿಯ ಬೇಜಾರ ಬರುವಂಥ ಜೀವನಕ್ಕಿಂತ ಹೀಗೆ ಒಮ್ಮೆಲೆ ಮರಣಹೊಂದುವದಕ್ಕಿಂತ ಬೇರೆ ಯಾವ ಮಾರ್ಗವು

Visit Royal Cafe
Near Royal Picture Palace
Royal Cafe is ROYAL.

ಸ್ವಾಗತಾರ್ಹವೆಂದು ನನಗೆ ತಿಳಿಯುವದಿಲ್ಲ. ಹೋರಾಟವು ಹೆಚ್ಚು ನ್ಯಾಯಕ ಹೆಚ್ಚು ಉತ್ಸಾಹದ್ದು ಮತ್ತು ನಿಜಸ್ವರೂಪದ್ದಾಗುತ್ತ ನಡೆದಂತೆ, ಹಿಂದಿನ ಅನುಭವದಿಂದ ತಿಳಿಯುವಂತೆ, ಸೆರೆಮನೆವಾಸವು ಹೆಚ್ಚು ಅಸಹ್ಯವಾಗಲಿಕ್ಕೆ ಬೇಕಾಗುವದು. ಅನಂತರ ಕೂಡ ಮತ್ತು ಗಟ್ಟಿಮನಸ್ಸಿನ ಮನುಷ್ಯರಿಗೆ ಮರಣವು ಸ್ವಾಗತಾರ್ಹ ದುಃಖನಿವಾರಣ ಸಂಗತಿಯಾಗುವದು.

卐

ಎಂಪ್ರೆಸ್ ಆಫ್ ಏಶಿಯಾ ಮುಳುಗಿತು.

17 ಸಾವಿರ ಟನ್ ತೂಕವುಳ್ಳ ಸೈನಿಕರನ್ನು ಸಾಗಿಸುವ ಎಂಪ್ರೆಸ್ ಆಫ್ ಏಶಿಯಾ ಎಂಬ ಹೆಸರು ಸಿಂಗಪುರಕ್ಕೆ 6 ಸೈಲಿ ದೂರದಲ್ಲಿ ಮುಳುಗಿಸಲ್ಪಟ್ಟಿತೆಂದು ಪ್ರಕಟವಾಗಿದೆ. ಸಿಂಗಪುರದ ಪತನದಕಾಲಕ್ಕೆ 2500 ಸೈನಿಕರನ್ನೂ, 100 ನಾವಿಕರನ್ನೂ ತುಂಬಿಕೊಂಡು ಸಿಂಗಪುರಕ್ಕೆ ಹೋಗುತ್ತಿರುವಾಗ ಜಪಾನ ಬಾಂಬರ ವಿಮಾನಗಳು ಬಂದು 80 ಬಾಂಬುಗಳನ್ನು ಸುರಿಸಿದವೆಂದೂ 5 ಬಾಂಬುಗಳು ನೇರವಾಗಿ ತಾಕಿದವೆಂದೂ ವ್ಯಾಪಾರವನ್ನು ರಕ್ಷಿಸುವ ದೋಣಿಗಳು ಕೂಡ ಸುಟ್ಟುಹೋದವೆಂದೂ ಆ ಹಡಗಿನಿಂದ ಬಾಳಿದ ಕ್ಯಾಪ್ಟನ್ ಡಾವರ್ಸನು ಪ್ರಕಟಿಸಿದ್ದಾನೆ.

ಆಸ್ಸಾಂ ಮೇಲೆ ದಾಳಿ

ಆಸ್ಸಾಂ ಪಟ್ಟಣಾದ್ಯಂತ ಮೇಲೆ ಜಾಪಾನಿನ ದಾಳಿಯಾಯ್ತೆಂದು ಸರ್ಕಾರದವರು ಪ್ರಕಟಿಸಿದ್ದಾರೆ.

ಹಿಂದೂಸ್ಥಾನದ ಪ್ರಾಂತಗಳಲ್ಲೊಂದಾದ ಆಸ್ಸಾಂಗೆ ಯುದ್ಧ ಭಯವು ಹುಟ್ಟಿದೆ. ಅಲ್ಲಿ ರಸ್ತುಗಳನ್ನೆಲ್ಲ ಸುರಿಸಲು ಸರ್ಕಾರಿ ಸೌಕರ್ಯಗಳನ್ನು ಮಾಮಿಷ್ಟರಲಾಗಿದೆ. ಇತ್ತೀಚೆಗೆ ನಾಗರಿಕಳ್ಳಿ ಆಸ್ಸಾಂಗೆ ಯುದ್ಧ ಸರಕರಣೆಗಳು ಬಹಳವಾಗಿ ಬಂದಿರುವಿವೆ. ಇವೆಲ್ಲಾ ರಹಸ್ಯವಾಗಿಡಲಾಗಿದೆ.

—ಚೀನಾ ದೇಶದಲ್ಲಿ ಬಹುಮೂರು ಸುಗ್ಗಿವ ಜಪಾನೀ ಸೈನಿಕರನ್ನು ಹಿಂತೆಗೆಸ್ಟು ಲಾಯ್ತೆಂದು ಚೀನಾ ಪಕಟನೆ ಹೊರಟಿದೆ

—ರಷ್ಯಾದ ಕಚ್ಚೂ ಪ್ರದೇಶದಲ್ಲಿ 140 ಸಾವಿರ ರಷ್ಯನರನ್ನು ಸೆರೆಹಿಡಿದಿರುವಾಗಿ ಜರ್ಮನ ವಾರ್ತಾ ಸಂಸ್ಥೆಯ ಸುದ್ದಿ.

ಸಿಂಧಸ್ರಾಂತ್ಯದಲ್ಲಿ ಹೊರರಹಾವಳಿ ಮತ್ತೆ ಹೆಚ್ಚಾಗಿದೆ.

19ನೇ ತಾ॥ ಮೀರಪುರ-ಖಿಪ್ರೊ ರಸ್ತೆಯಲ್ಲಿ ಹೋಗುತ್ತಿದ್ದ ಮೋಟಾರನ್ನು ತಡೆದು ಅದರೊಳಗಿದ್ದ 13 ಜನ ಪ್ರಯಾಣಿಕರನ್ನು ಸಂಹರಿಸಿರುವರು. ಪೆಫ್ರೋ ಪೋಲೀಸ್ ಸ್ಟೇಷನದ ಇನ್ಸ್‌ಪೆಕ್ಟರ್ ಅಬ್ದುಲ ಸುಹಮದ್ ಮುನಾಂವರನ್ನು ಕೂಡ ಸಂಹರಿಸಲಾಗಿದೆ. ಮೋಟಾರನ್ನು ಸುಡಲಾಗಿವೆ.

ಗವರ್ನರರು ಆಶ್ವಾಸನವಿತ್ತು ಹೊರರ ಹಾವಳಿಯನ್ನು ಸಂಪೂರ್ಣವಾಗಿ ಅಡಗಿಸುವವಾಗಿ ಭರವಸೆ ಇತ್ತಿರುವರು.

—ಡಾನಬಂದು ಅಂಡ್ರೂಸ್ ಸ್ಮಾರಕ ಸಭೆಯಲ್ಲಿ ಭಾಗವಹಿಸುವಕ್ಕೆ ಬೊಂಬಾಯಿಗೆ ಹೋಗಿದ್ದ ಮಹಾತ್ಮ ಗಾಂಧಿಯವರು ೫ ಲಕ್ಷ ರೂ. ಗಳ ಸಂಗ್ರಹವು ಮಾಡಿ ಮತ್ತೆ ಸೇವಾಗ್ರಾಮಕ್ಕೆ ಮರಳಿ ಬಂದರು

—ಪಂಡಿತ ಜವಹರಲಾಲ ನೆಹರೂರವರು ಮಧ್ಯಾಸ್ ಪ್ರಾಂತ್ಯದಲ್ಲಿ ೧೦೮ದಿನಗಳ ವರೆಗೆ ರಾಜಕೀಯ ಪ್ರಯಾಣವನ್ನು ಕಾರ್ಯಕ್ರಮವನ್ನಿಟ್ಟುಕೊಂಡಿರುವರೆಂದೂ ಜೂನ್ ತಿಂಗಳಲ್ಲಿ ಬರಬಹುದೆಂದೂ ತಿಳಿದುಬಂದಿದೆ

ಬಳ್ಳಾರಿ ಪೇಟೆ ಧಾರಣೆ

22-5-42 ಶುಕ್ರವಾರ.

ಭಂಗಾರ ತೊಲ 1ಕ್ಕೆ		47-8-0
ನಾನೇನ್ಸ್		39-0 0
ಬೆಳ್ಳಿ 100 ತೊಲ ರೂ.		75-0-0
ಹತ್ತಿ ಮುಂಗಾರಿ 12 ಮಣಕ್ಕೆ		60-0-0
ಹತ್ತಿ ಫಾರಂ		95-0-0
ಅಕ್ಕಿ 1 ರೂ. ಗೆ	4 ರಿಂದ	4½ ಸೇರು
ಜೋಳ ,,		4 ,,
ಗೋಧಿ ,, ...		4 ,,
ಸಜ್ಜೆ ,,	12 ,,	13½ ,,
ನವಣೆ ,,		17½ ,,
ಸಜ್ಜೆ ,,		13 ,,
ನೆಲಗಡಲೆ ...	...	1-4 3
ಸಕ್ಕರೆ(ಮಂಡ್ಯ) 9 ಮಣ		89 ರೂ
ಬೆಲ್ಲ ...	14 ರಿಂದ	16

300

Bellary District Teachers Guild
FOR
Board Elementary Teachers.

ಬಳ್ಳಾರಿ ಜಿಲ್ಲಾ ಬೋರ್ಡು ಪ್ರಾಥಮಿಕ ಪಾಠಶಾಲೆಗಳ ಉಪಾಧ್ಯಾಯರ ಸಂಘ.

20-5 42 ನೆಯ ತಾ. ಸಾಯಂಕಾಲ 6 ಘಂಟೆಗೆ ನವಭಾರತ ಸಂಪಾದಕರಾದ ಶ್ರೀ ಟಿ. ಬಿ. ಕೇಶವರಾಯರ ಮನೆಯಲ್ಲಿ ಜಿಲ್ಲೆಯೆಂದಬಂದ ಉಪಾಧ್ಯಾಯ ಸಂಘೆಗಳ ಪ್ರತಿನಿಧಿಗಳೆಲ್ಲಾ ಸೇರಿ, ತಮ್ಮ ಮತ್ತು ವಿದ್ಯಾರ್ಥಿಗಳ ಸಾಧ್ಯವಾಗಬೇಕೆಂದರೆ ಒಂದು ಸಂಘವಿರಬೇಕೆಂಬುದನ್ನು ನಿಶ್ಚಯಿಸಿ ಮೇಲ್ಕಾಣಿಸಿದ ಸಂಘವನ್ನು ಸ್ಥಾಪಿಸಿ, ಬೋರ್ಡು ಪ್ರಾಥಮಿಕಶಾಲೆಗಳ ಪ್ರತಿಯೊಬ್ಬ ಉಪಾಧ್ಯಾಯರೂ, ವರ್ಷಕ್ಕೆ 0—4—0 ಕೊಡಬೇಕೆಂಬುದನ್ನು ವಿಧಿಸಿದರು. ಜೈರೆಕ್ಟರವರಿಂದ ಮುಂಜೂರಾತಿಯ ಸಮ್ಮತಿಯ ದೊರೆತನಂತರ (Recognition) ಸಂಘವನ್ನು ರಿಜಿಸ್ಟರ್ ಮಾಡಿಸಬೇಕೆಂದು ಆಲೋಚಿಸಲಾಯಿತು. ಪತ್ರ ವ್ಯವಹಾರ ನಗೈರೆ ಕಾರ್ಯಕ್ಕಾಗಿ ಕಾರ್ಯದರ್ಶಿಗಳಿಗೆ ಅಧಿಕಾರಕೊಡಲಾಯಿತು ಸಂಘದ ನಿಯಮಾವಳಿ, ಉದ್ದೇಶ ವಗೈರೆ ತಯಾರುಮಾಡಿ ಸಭೆಯ ಮುಂದಿಡಲು 4-7-42ಕ್ಕೆ ಬಳ್ಳಾರಿಯಲ್ಲಿ ಸಭೆ ಕರೆಯಬೇಕೆಂದು, ನಿಶ್ಚಯವಾಯಿತು.

ಅಧಿಕಾರವರ್ಗ

ಅಧ್ಯಕ್ಷರು:- ಶ್ರೀ ಹೆಚ್. ವೆಂಕೋಬರಾವ್ ಹೊಳಗುಂದಿ

ಉಪಾಧ್ಯಕ್ಷರು- „ ವೈ ಪಿ ನರಸಿಂಹಶಾಸ್ತ್ರಿ ಹರಿವಾಣ

ಕಾರ್ಯದರ್ಶಿಗಳು- „ 1) ಎ ಅಂಬಾಚರಣವು ಸಿರುಗುಪ್ಪೆ
2) ಜಿ ಶೀತಾರಾಮಭಟ್ಟ ವೆ.ಟ್ರ

ಖಜಾಂಚಿ- ಶ್ರೀ ವಿರುಪಾಕ್ಷಭಟ್ಟ, ತೆಕ್ಕಲಕೋಟೆ

ಕಾರ್ಯಕಾರಿಣೀಸಮಿತಿ

1) ಜಿ ಆಂಜನೇಯುಲು, ಕುರುಗೋಡು
2) ಪಿ ಪ್ರಾಣೇಶಾಚಾರ್, ಮೆಟ್ರಿ
3) ಮಹದೇವನಗೌಡ, ಹೊಳಲು
4) ಮುಳ್ಳಯ್ಯ, ಕರೂರು
5) ವೀರಭದ್ರಪ್ಪ, ತಂಬ್ರಹಳ್ಳಿ
6) ಎಂ. ರಘುನಾಥಾಚಾರ್, ಬದಿನೆಹಾಳು
7) ಜೆ. ವೀರಣ್ಣ, ಕುಡಿ ದರಹಾಳು
8) ಜಿ. ವೆಂಕೋಬಾಚಾರ್ಯ, ರಾಯದುರ್ಗ
9) ಬಿ ನಾರಾಯಣದೇವರಾವು, ಹಿರಾಳು
10) ಹೆಚ್. ಎಂ. ಗುರುಶಾಂತಯ್ಯ, ಕೊಟ್ಟೂರು
11) ಪಿ. ಖಾಜಾಹುಸೇನ್, ಎಮ್ಮಿಗನೂರು
12) ಕೆ. ವಿ ಶಾಸ್ತ್ರಿ, ಮೋಕ
13) ಎಂ. ವೀರಾಸ್ವಾಮಿ, ರೂಪನಗುಡಿ
14) ರಾಜಾಬಕ್ಷಿಸಾಹೇಬ್, ರವಡೂರು
15) ಹೆಚ್. ವಿ ತಿಮ್ಮಾರಾವು ಕಾನಾಮಲಾಪುರ

ಸಮಿತೀ ಸದಸ್ಯರ ಸಂಖೆಯನ್ನು ಹೆಚ್ಚು ಕಡಮೆ ಮಾಡುವ ಅಧಿಕಾರ ವಿದೆ.

ಕ. ಪ್ರಾಂ. ಕಾರಿ. ಸಮಿತಿ ಭದ್ರಾವತಿಯಲ್ಲಿ ದಬ್ಬಾಳಿಕೆ

ಮೈಸೂರು ಸರ್ಕಾರವು ಭದ್ರಾವತಿಯಲ್ಲಿ ನಡಿಸಿದ ದಬ್ಬಾಳಿಕೆಯು ಎಲ್ಲರ ಲಕ್ಷವನ್ನು ಸೆಳೆದಿದ್ದು ಜನತೆಯಲ್ಲಿ ಕ್ಷೋಭೆಯನ್ನು ಹೆಚ್ಚಿಸುವಂತಾಗಿದೆ ಯಾವುದೇತರಹದಿಂದ ಈ ಕಾಲದಲ್ಲಿ ಸರ್ಕಾರಕ್ಕೆ ತೊಂದರೆಯಾಗುವಂತೆ ದೃಷ್ಟಿ ಇಟ್ಟು 'ಮೈ ದಿನಾಚರಣೆ'ಯನ್ನು ಶಾಂತರೀತಿಯಿಂದ ಜನರು ನುಗಿಸಿದ ನಂತರ ೆ ನೇ (ಮೇ) ತ ರೀಖಿನ ದಿವಸ ಅಧಿಕಾರಿಗಳು ಕೂಲಿಕಾರ ಮುಖಂಡರನ್ನು ಕೈದುಮಾಡಿ ಒಯ್ಯುವಾಗ ಜನರನ್ನು ಕಾಣಬೇಕೆಂದು ನೆರೆದ ಜನರ ಮೇಲೆ 'ಲಾಠಿಪ್ರಹಾರ' 'ಗುಂಡಿನ ಪ್ರಯೋಗ' ನಡೆಸಿದ್ದು ಬಹಳ ಕ್ರೂರಮಯವಾಗಿದೆ ಆ ಪ್ರಯೋಗದಿಂದ ನೂರು ಜನರು ಮರಣಹೊಂದಿ ಹತ್ತಿಪ್ಪತ್ತು ಜನರು ಗಾಯಗೊಂಡಿದ್ದು. ಅದರಲ್ಲಿ ಸರೋಜ ಎಂಬ ಮೂರು ವರುಷದ ಬಾಲಿಕೆಯು ತನ್ನ ಮನೆಯಲ್ಲಿದ್ದಾಗ ಗುಂಡಿಗೆ ತುತ್ತಾಗಿ ಸತ್ತದ್ದು ಜನತೆಯಲ್ಲಿ ಅತ್ಯಂತ ಸಂತಾಪ ತುಂಬಿಸುವಂತಾಪದ್ದು ಆಗಿರುವದು

ದೇಶದ ಈಗಿನ ಗಂಡಾಂತರ ಕಾಲದಲ್ಲಿ ಸರ್ಕಾರವು ಪ್ರಸಂಗ ಹಾಗು ಪರಿಸ್ಥಿತಿಯನ್ನು ಯೋಚಿಸದೆ ಅನಾವಶ್ಯಕವಾಗಿ ಅಶಾಂತಿ ಉಂಟಾಗುವಂತೆ ಮಾಡಿದ್ದು ಬಹಳ ವಿಷಾದಕರ ಸಂಗತಿಯಾಗಿದೆ. ಮೈಸೂರು ಸಂಸ್ಥಾನದಲ್ಲಿ ಪದೇ ಪದೇ ಇಂಥ ಅತ್ಯಾಚಾರಗಳು ಸಂಭವಿಸುತ್ತಿದ್ದರೆ ಜನತೆಯಲಿ • ಅಪ್ರೀತಿ ಬೆಳೆಯುವಂತಾಗಿ ಸರ್ಕಾರವು ಹಲವುಬಗೆಯಿಂದ ತನ್ನ ಸತ್ವವನ್ನು ಕಳಕೊಳ್ಳಲಿಕ್ಕೆ ಹತ್ತಿದಂತಾಗಿದೆ.

ಎಂದಿನಂತೆ ಮೈಸೂರು ಕಾಂಗ್ರೆಸ್ ಕಾರ್ಯಕರ್ತರೂ ಮೈಸೂರ ಜನತೆಯೂ ಇಂತಹ ಉದ್ರೇಕ ಕಾರಕ ಪರಿಸ್ಥಿತಿಯಲ್ಲಿ ಕೂಡಾ ಶಾಂತತೆಯಿಂದಲೂ ವರ್ತಿಸಿದ್ದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಮರ್ಪಿಸುತ್ತೇವೆ.

ಭದ್ರಾವತಿಯ ಸಮಾಚಾರಗಳು.

ಪರಿಹಾರ:-

ಗುಂಡಿನೇಟಿನ ಪ್ರಕರಣದಲ್ಲಿ ಪ್ರಾಣ ಬಿಟ್ಟರುವ ಸಂಸಾರಗಳಿಗೆ ತಲಾ ೫೦೦ ರೂಗಳನ್ನೂ ಗುಂಡಿನೇಟಿನಿಂದ ಗಾಯಗೊಂಡವರಿಗೆ ತಲಾ ೫೦ ರೂಗಳನ್ನೂ ಕೊಡಬೇಕೆಂದು ಮೈಸೂರು ಸರ್ಕಾರವನವರು ಆಜ್ಞೆಮಾಡಿದ್ದಾರೆಂದು ಗೊತ್ತಾಗಿದೆ.

ದಿವಾನರು:- ಶ್ರೀ ಎನ್. ಮಾಧವರಾಯರು ಮೇ 19ನೆಯ ತಾ॥ ಸಂಧ್ಯಾನ್ನ ಕೂಲಿಗಾರರ ಮುಖಂಡರನ್ನು ಭೇಟಿ ಮಾಡಿದರು ಕೂಲಿಗಾರರು ತಮ್ಮ ಬೇಡಿಕೆಗಳನ್ನೆಲ್ಲಾ ಮುಂದಿಟ್ಟರು. ಎಷ್ಟರೂ ಕೆಲಸಕ್ಕೆ ಹಿಂದಿರುಗಬೇಕೆಂದೂ ಸಾಮುಖೂತಿ ಪರವಾಗಿ ಆಲೋಚಿಸಬಹುದೆಂದೂ ದಿವಾನರು ಹೇಳಿದರು. ಕೂಲಿ ಕಾರರು ಇನ್ನೂ ಯಾವ ನಿರ್ಣಯಕ್ಕೂ ಬಂದಿಲ್ಲ.

ಕಬ್ಬಿಣದ ಕಾರ್ಖಾನೆಯು ನಡೆಯುತ್ತಿಲ್ಲ ಕಾಗದದ ಕಾರ್ಖಾನೆ ಕೊಂಚಮಟ್ಟಿಗೆ ನಡೆಯುತ್ತಿದೆ

ಕೂಲಿಗಾರರ ಶಾಸನವನ್ನು ರದ್ದು ಗೊಳಿಸಲು ಬೆಂಗಳೂರಿನ ಸುಪ್ರಸಿದ್ಧ ವಕೀಲರಾದ ಶ್ರೀ ಯಲ್ ಎಸ್. ರಾಜು ರವರು ಹೇಳಿಕೆ ಇತ್ತಿರುವರು.

ಭದ್ರಾವತಿ.

ಸುಮಾರು 18 ದಿನಗಳ ವರೆಗೆ ನಡೆದ ಕೂಲಿಕಾರರ ಮುಷ್ಕರವು 21 ನೆಯ ತಾ॥ ನಿಂತಿತೆಂದೂ ಕೆಲಸದಿಂದ ವಜಾಮಾಡಿದ 64 ಜನ ಕೂಲಿಕಾರರನ್ನು ಹೊತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಯ್ತೆಂದು ಇನ್ನು ಮುಂದೆ ಕೂಲಿಕಾರರನ್ನು ಶಿಕ್ಷಿಸಿಗುರುವ ಧೋರಣೆಯು ದೊರೆಯಿತೆಂದೂ ಗೊತ್ತಾಗಿದೆ.

ಪ್ರಾಥಮಿಕೋಪಾಧ್ಯಾಯರ ಪುಟ

ಬಳ್ಳಾರಿ ಜಿಲ್ಲಾ ಬೋರ್ಡು ಪ್ರಾಥಮಿಕಶಾಲೆಗಳ ಉಪಾಧ್ಯಾಯರ ಶಿಸ್ತಮಂಡಲವು 20-5-42ರ ದಿನ ಪ್ರಾತಃಕಾಲ 10 ಘಂಟೆಗೆ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಡಾ. ನಾಗನಗೌಡರನ್ನು ದರ್ಶಿಸಿತವ್ಯ ಕುಂದುಕೊರತೆಗಳನ್ನು ಹೇಳಿಕೊಂಡರು.

ವಿಜ್ಞಾಪನ ಪತ್ರಿಕೆಯ

ಮುಖ್ಯಾಂಶಗಳು:-

ವಿವಿಧ ಗ್ರೇಡುಗಳಲ್ಲಿರುವ ಉಪಾಧ್ಯಾಯರ ಸಂಬಳವು ಸಮಾನವಾಗಿಲ್ಲ. ಅಸೂಯೆಬರುವಷ್ಟು ಅಂತರವಿದೆ. ಹಿಂದಿಕೊಟ್ಟ ಇಕ್ರಿಮೆಂಟುಗಳು ಅನ್ಯಾಯವಾಗಿಯೂ ಅಕ್ರಮವಾಗಿಯೂ ಇವೆ. ಕಳೆದ 20 ವರ್ಷಗಳಿಂದಲೂ ಸಂಬಳ ಹೆಚ್ಚಳವಿಲ್ಲದ ಉಪಾಧ್ಯಾಯರಿಗೆ ಪರಿಹಾರಬೇಕು. ಸೆಕಂಡರಿ ಗ್ರೇಡು ಉಪಾಧ್ಯಾಯರ ಸ್ಥಾನಮಾನಗಳು ಸುಧಾರಿಸಬೇಕು. ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಬಿದ್ದಾಗಲೆಲ್ಲಾ ಹೊಸದಾಗಿ ಕೊಡುವದನ್ನು ತಪ್ಪಿಸಿ ಪಳಬರನ್ನು ಮೇಲಕ್ಕೆ ಹಾಕಬೇಕು. ಈಗ ನಿಲ್ಲಿಸಲಾಗಿರುವ ಇಕ್ರಿಮೆಂಟುಗಳನ್ನೆಲ್ಲಾ ಈ ತಾರೀಪಿನವರೆಗೆ ಕೊಡಬೇಕು. 3 ವರ್ಷಗಳಿಗಿಂತ ಹೆಚ್ಚಿನ ಸರ್ವೀಸಾದವರನ್ನು ಖಾಯಂ ಮಾಡಬೇಕು. ಹೈಯರ್ ಸ್ಥಾನಗಳಲ್ಲಿರುವ ಸೆಕಂಡರಿ ಉಪಾಧ್ಯಾಯರಿಗೆ ಬಡ್ತಿ ಕೊಡಬೇಕು. ಯುದ್ಧದ ಕಾರಣ ಆಹಾರ ಸಾಮಗ್ರಿ ಮತ್ತು ಇತರ ವಸ್ತುಗಳ ಬೆಲೆ ಹೆಚ್ಚಾಗಿರುವ ಕಾರಣ ಡಿಯರ್ನೆಸ್ ಅಲೋಯನ್ಸು 50% ಹೆಚ್ಚಿನ ಕಂಟೆಂಜನ್ಸಿ ಅಲೋಯನ್ಸ್ ಕೊಡಬೇಕು. ಹೈಸ್ಕೂಲುಗಳಲ್ಲಿ ಖಾಲೀಬಿದ್ದಾಗಲೆಲ್ಲಾ ಎಲಿಮೆಂಟರೀ ಶಾಲೆಗಳಲ್ಲಿರುವ ಸೀನಿಯರ್ ಸೆಕಂಡರೀ ಉಪಾಧ್ಯಾಯರಿಗೆ ಸ್ಥಾನವನ್ನು ಕೊಡಬೇಕಲ್ಲದೆ. ದೊಸಬರನ್ನು ತೆಗೆದುಕೊಳ್ಳಬಾರದು. ಇತ್ಯಾದಿ

ಈ ವಿಷಯಗಳನ್ನೆಲ್ಲಾ ಸುಮಾರು 2 ಘಂಟೆ ಚರ್ಚೆಯಾಯಿತು. ಇಕ್ರಿಮೆಂಟು ಕೊಡುವ ವಿಷಯಕ್ಕೆ ಸಹಾನುಭೂತಿ ಪರವಾಗಿ ಆಲೋಚಿಸಲಾಗುವುದೆಂದೂ ಕೆಲ ಉಪಾಧ್ಯಾಯರಿಗಾದರೂ ಸಕ್ರಮವಾಗಿ ಕೊಡಲಾಗುವುದೆಂದೂ ಅಧ್ಯಕ್ಷರು ಹೇಳಿ ಎಲ್ಲರಿಗೂ ಕೊಡಬೇಕೆಂಬ ತಮ್ಮ ಇಚ್ಛೆಯು ಸಾಧಿಸಲು ಬೋರ್ಡಿನ ಆರ್ಥಿಕ ಸ್ಥಿತಿಯು ಅಶಕ್ತಿಕರವಿದ್ದು ಸರಕಾರದವರ ಸಹಾಯವು ಹೆಚ್ಚಿಗೆದೊರೆಯುವಂತಿಲ್ಲವೆಂದರು. ಡಿಯರ್ನೆಸ್ ಅಲೋಯನ್ಸಾದರೂ ಕೊಡಲಿಕ್ಕೆ ಸಾಧ್ಯವಿಲ್ಲೆಂದರು. ಹೈಸ್ಕೂಲುಗಳಲ್ಲಿ ಖಾಲಿಬಿದ್ದಾಗಲೆಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಕೆಲಸಮಾಡುತ್ತಿರುವ ಸೀನಿಯರ್ ಸೆಕಂಡರಿ ಉಪಾಧ್ಯಾಯರಿಗೆ ಸ್ಥಾನ ಕೊಡುವುದಾಗಿಯೂ, ಅವನ್ನು ಬೋರ್ಡು ನೀತಿಯನ್ನಾಗಿ (Policy) ಮಾಡಿಕೊಳ್ಳಲು ಕೆಲ ಉಪಾಧ್ಯಾಯರು ಸೂಚಿಸಿದರು) ಅವನ್ನು ಬೋರ್ಡು ನೀತಿಯಾಗಿ ಮಾಡಲು ಅಭ್ಯಂತರವಿಲ್ಲೆಂತಲೂ ಹೇಳಿದರು. ಯುದ್ಧದ ಕಾರಣ ಸ್ಟೇಷನರಿ ವಸ್ತುಗಳ ಧಾರಣೆಯು ಹೆಚ್ಚಿರುವಂಶವನ್ನು ತಿಳಿದು ಕಂಜೂಸನ್ನಿ ಹೆಚ್ಚಿಸುವ ಆಲೋಚನೆಯನ್ನು ಮಾಡುವರೆಂದು ಹೇಳಿದರು. ಇನ್ನಿತರ ಬೇಡಿಕೆಗಳಿಗೂ ಸರಿಯಾದ ಉತ್ತರ ಕೊಟ್ಟರು ಅಧ್ಯಕ್ಷರಿಗೆ ಕೊಟ್ಟವಿಜ್ಞಾಪನಾಪತ್ರಿಕೆಯು ಇಂಗ್ಲೀಷು, ಕನ್ನಡ, ತೆಲುಗುಗಳಲ್ಲಿ ಪ್ರಕಟಿಸಲ್ಪಟ್ಟು ಎಲ್ಲಾ ಸದಸ್ಯರಿಗೂ ಹಂಚಲ್ಪಟ್ಟವು. ಜಿಲ್ಲೆಯ 9 ತಾಲೂಕುಗಳಿಂದಲೂ ಪ್ರತಿನಿಧಿಗಳು ಬಂದಿದ್ದರು.

ಗೈರುಹಾಜರಿಯಲ್ಲಿ ಬೋರ್ಡಿನವರ ಸಿಫಾರಸಿನಿಂದ, ಸರ್ಕಾರದ ಒಪ್ಪಿಗೆಯಿಂದ ಜಾರಿಯಲ್ಲಿ ಬಂದ ಪ್ರಾಥಮಿಕೋಪಾಧ್ಯಾಯರಸ್ಕೇಲುಗಳು

ಉಪಾಧ್ಯಾಯರು

ಲೋಯರ್— 15-½-20
ಹೈಯರ್— 20-½-24-½-30
ಸೆಕಂಡರಿ— 25-½-45

ಉಪಾಧ್ಯಾಯನಿಯರು

ಲೋಯರ್— 20½-25
ಹೈಯರ್— 25-½-29-½-35
ಸೆಕಂಡರಿ— 30-½-50

ಬಳ್ಳಾರಿ ಜಿಲ್ಲಾಬೋರ್ಡು ಗಮನಿಸಬೇಕಾದ ಅಂಶಗಳು.

ಬಳ್ಳಾರಿ ಜಿಲ್ಲಾ ಬೋರ್ಡು ಪ್ರಾಥಮಿಕ ಪಾಠಶಾಲೆಗಳು ಬಾಲಕರಿಗಾಗಿ 282
,, ಬಾಲಕಿಯರಿಗಾಗಿ 75

ಲೋಯರ್	ಉಪಾಧ್ಯಾಯರು	284
ಹೈಯರ್	,,	354
ಸೆಕಂಡರಿ	,,	59
ಒಟ್ಟು ಉಪಾಧ್ಯಾಯರ ಸಂಖ್ಯೆ		697

೧೯೪೦-೪೧ ರಲ್ಲಿ

ಎಲಿಮೆಂಟರಿ ಎಜುಕೇಶನ ಆದಾಯ- 2,27,087-
,, ಖರ್ಚು 2,24,827-
ಬಾಲಕರ ಪಾಠಶಾಲೆಗಳಲ್ಲಿ ಸರಾಸರಿ ಹಾಜರಿ 16704
ಬಾಲಿಕೆಯರ ,, 5489
ಪ್ರತಿಯೊಬ್ಬ ವಿದ್ಯಾರ್ಥಿ-ವಿದ್ಯಾರ್ಥಿನಿಗಾಗಿ ಜಿಲ್ಲಾಬೋರ್ಡಿನವರು ಖರ್ಚುಮಾಡುತ್ತಿರುವುದು.
ವಾರ್ಷಿಕ ರೂ. 10—1—6

ಬಳ್ಳಾರಿ ಜಿಲ್ಲಾಬೋರ್ಡಿನಲ್ಲಿ ಈಗ ಜಾರಿಯಲ್ಲಿರುವ ಸಂಬಳದ ವಿಧಾನ.

ಲೋಯರ್	ಉಪಾಧ್ಯಾಯರಿಗೆ	ಮಾಸಿಕ ರೂ. 15 ಇಂದ 28-ರ ವರೆಗೆ
ಹೈಯರ್	,,	ರೂ. 20 ಇಂದ 32 ,,
ಸೆಕಂಡರಿ	,,	ರೂ 20 ಇಂದ 35 ,,

ಬಳ್ಳಾರಿ ಜಿಲ್ಲಾ ಬೋರ್ಡು ಸಭೆ.

ಡಾ. ನಾಗನಗೌಡರ ಅಧ್ಯಕ್ಷತೆಯಲ್ಲಿ 28.5.42ನೇಯದಿನ ಬೋರ್ಡು ಭವನದಲ್ಲಿ ಸಮಾವೇಶನಾಗಿ ಪಟ್ಟಿಯಲ್ಲಿದ್ದ ಅಂಶಗಳನ್ನೆಲ್ಲಾ ಚರ್ಚಿಸಲಾಯಿತು. ಪ್ರಾಥಮಿಕ ವಿದ್ಯಾಭ್ಯಾಸವಲ್ಲಿ 40001-ಕಡಮೆ ಬಿದ್ದಿರುವ ಕಾರಣ, ಏನುಮಾಡಬೇಕೆಂಬ ವಿಷಯವು ಚರ್ಚಿಸಲಾಯಿತು. ಶಾಲಾ ಮಾಸ್ಟರುಗಳ ಸಂಬಳವನ್ನೂ ಕಡಮೆಮಾಡಬಾರದು. ಅವರಿಗೆ ಇಕ್ರಿಮೆಂಟ್ ಕೂಡಕೊಡಬೇಕು. ಎಂಬುವ ಸರ್ಕಾರದ ಉತ್ತರವನ್ನು ಪರಿಶೀಲಿಸಿ ಶಾಲೆಗಳ ಸಂಖ್ಯೆಯನ್ನು ಕಡಮೆಮಾಡಬೇಕು, ಇಲ್ಲವೇ ವಿದ್ಯಾಶಿರಿಗೆಯನ್ನು ಹೆಚ್ಚಿಸಬೇಕೆಂಬುವ ಅಂದಾಜು ಗಣನಿಸಲ್ಪಟ್ಟಿತು. ಈ ವಿಷಯಗಳನ್ನೆಲ್ಲಾ ವಿಮರ್ಶಿಸಿ ಒರುವ ಮೀಟಿಂಗ ಸಮಯಕ್ಕೆ ಕರ್ತವ್ಯ ನಿರ್ಧಾರವನ್ನು ತಿಳಿಸಲು ಅಧ್ಯಕ್ಷರನ್ನೊಳಗೊಂಡು 5 ಜನರ ಉಪಸಮಿತಿಯು ನಿಯಾಮಕವಾಯಿತು.

ಹೊಸದಾಗಿ ನಿಯುಕ್ತವಾಗಿರುವ ಅಸಿಸ್ಟೆಂಟ್ ಜಿಲ್ಲಾ ಹೆಲ್ತ್ ಆಫೀಸರವರ ಖರ್ಚನ್ನೆಲ್ಲಾ ಸರ್ಕಾರದವರೇ ಬರಿಸಬೇಕೆಂದೂ ಈಗಿನ ಬೋರ್ಡು ಆರ್ಥಿಕ ಪರಿಸ್ಥಿತಿಯಲ್ಲಿ ಅರ್ಧವನ್ನು ಬರಿಸಲು ಸಾಧ್ಯವಿಲ್ಲೆಂದೂ ನಿರ್ಣಯವಾಯಿತು.

ನಿಮ್ಮ ಎಳ್ಳೆಣ್ಣೆ

ನಿಮ್ಮ ಉಪ್ಪಿನಕಾಯಿಯು ಚೆನ್ನಾಗಿರಬೇಕೆಂದರೆ
ಇವರ A.S. ಬ್ರ್ಯಾಂಡ್ ಎಳ್ಳೆಣ್ಣೆಯನ್ನೇ ಉಪಯೋಗಿಸಿರಿ

ಉಪ್ಪಿನಕಾಯಿಯು ಮೆತ್ತಗಾಗುವುದಿಲ್ಲ.
,, ಮುಗ್ಗು ಯಾ ಬೂಜು ಹಿಡಿಯುವುದಿಲ್ಲ
,, ಹುಳಿವಾಸನೆ ಬರುವುದಿಲ್ಲ.
,, ಯಾವ ವಿಧವಾದ ವಾಸನೆ ಇಲ್ಲವೆ
ಅಮಿತವಾದ ರುಚಿಯನ್ನುಂಟು ಮಾಡುವುದು.

A. S. ಲೇಬಲನ್ನು ಗಮನಿಸಿ, ಕೊಳ್ಳಿರಿ. ನೋಸುಮೋಗ ಬೇಡಿರಿ

ದೊರೆಯುವ ಸ್ಥಳ. 1) ಎಂ ಹುಶೇಂಜಿರಾವು,
ಎಂ. ವೆಂಕೋಜಿರಾವು, ತೇರುಬೀದಿ, ಬಳ್ಳಾರಿ.
ಮತ್ತು 2) ವಿ. ಯು. ಗಿರಿ ಅಂಡ್ ಸನ್ಸ್, ಬಳ್ಳಾರಿ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದು ಸಲ ಉಪಯೋಗಿಸಿನರೆ ನಿಮಗೆ ತೃಪ್ತಿಯಾಗುವುದು

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦	ಅಂಚೆ ವೆಚ್ಚ ಬೇರೆ	
ಕನ್ನಡ ದಶೋಪನಿಷತ್ತುಗಳು	೦—೯—೦	ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವವರಿಗೂ ಧಾರಾಳವಾದ ಕಮೀಶನ್	
ಶಿವಾನುಭವ ಬೋಧೆ	೦—೮—೦		
ಸುಮತಿ ಶತಕ	೦—೧—೦		

ಕಾಲವ ಸುಬ್ಬಣ್ಣ, ಮಜೀಂಟು, ಬಳ್ಳಾರಿ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಸೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ವ್ಯಾಕರಣವನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವಿಳಾಸಕ್ಕೆ ವಿವರಗಳನ್ನು ತಿಳಿಯಿರಿ

ನಿಮಗನುಕೂಲವಾದ ಶಿಕ್ಷಣಕ್ಕೆ ವ್ಯವಸಿಸಲಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಛೇರಿ ಕಾರ್ಯಂಬರಗೈರೆ ದೊರೆಯುವುದಲ್ಲದೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ನ್ಯಾಯವಾಗಿ ಹೇಳಲಾಗುವುದು

ಟಿ. ಬಿ. ಕೇಶವರಾವ್,
ಕ್ರಿಸ್ಟ ಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ಸ್ವಾತ್ರಂಯ ವಾರ ಪತ್ರಿಕೆ.

The Rates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—0—0	ಬಳ್ಳಾರಿಯವರಿಗೆ 2-0-0
Moffusil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local 1—4—0	ಬಳ್ಳಾರಿಯವರಿಗೆ 1-4-0
Moffusil 2—0—0	ಹೊರಗಿನವರಿಗೆ 2-0 0

Nava Bharat, Bellary.

REG. No. M. 3937.

Sri _____

_____

_____

Printed at Vittal Press, Car Street Edited & Published by T. B Keshava Rao, Bellary

Reg. No. M. 3937 'ವಂದೇ ಮಾತರಂ'

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಭೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೩೫ ಬಳ್ಳಾರಿ ಮೇ ೩೧ ನೇ ಭಾನುವಾರ ೧೯೪೬. ಟಿ. ಬಿ. ಕೇಶವರಾವ್

★ ಶಾಂತ ಆಪ್ಟೆ ★
(ಸಾವಿತ್ರೀ ಪುತ್ರ)

ಮದ್ರಾಸ್ ೧೪ನೆ ವಾರ. ಮಧುರ ೧೯ನೆ ವಾರ. ಬೆಂಗಳೂರ ೪ನೆ ವಾರ ನಡೆಯುತ್ತಿದೆ.

೩ ಲಕ್ಷ ರೂ ಖರ್ಚಿನಿಂದ ಮಧುರ ರಾಯಲ ಟಾಕೀಸ್‌ನವರು ಈ ವೌರಾಣಿಕ ಚಿತ್ರವನ್ನು ಸುಪ್ರಸಿದ್ಧರಾದ ಶಾಂತಾ ಆಪ್ಟೆ, ಯಂ. ಯಸ್. ಸುಬ್ಬಲಕ್ಷ್ಮಿ, ಪ್ರೊ. ವಿ. ರಾಘವ, ಸಾರಂಗಪಾಣಿ ಮುಂತಾದ ನಟ್ಟಿರೆ ಪಾತ್ರವರ್ಗದವರಿಂದ ತಯಾರಿಸಿರುವರು.

ನೀವು ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ತಮಿಳ ವಾಕ್ಚಟ ಮಹಾರಾಷ್ಟ್ರದ ತರುಣಿಯ ತಮಿಳವಾಗ್ಝರಿಯನ್ನು ನೋಡಿ ಆನಂದಿಸಿ ಮನದಣಿಯಿರಿ.
ಸ್ಟಾರ್ ಸಿನಿಮಾದಲ್ಲಿ ಇಂದು ಆರಂಭವಾಗಿದೆ. ಕಛಾಪ್ರೇ
ನಿಮಗಳು ಇಂಥಾ ಸುಸಂಧಿಯನ್ನು ಕಳೆದುಕೊಳ್ಳಬಾರದು
ನಡೆಯಿರಿ ಸ್ಟಾರ್ ಸಿನಿಮಾಕ್ಕೆ.

ಜವಹರಲಾಲರು ಅಮೆರಿಕಾಕ್ಕೆ ಹೋಗುವರೇ?

ಬೊಂಬಾಯಿ ಕ್ರಾನಿಕಲ್‌ನ ಲಂಡನ್ ಸುದ್ದಿಗಾರರು ಹೇಳುವ ಪ್ರಕಾರ ಪಂಡಿತ ಜವಹರಲಾಲರು ಅಮೆರಿಕಾಕ್ಕೆ ಹೋಗಿ ರೂಸವೆಲ್ಟರೊಡನೆ ಭಾರತದ ಬಿಕ್ಕಟ್ಟಿನ ಬಗ್ಗೆ ವಿಚಾರ ವಿನಿಮಯ ಮಾಡಲಿರುವರಂತೆ ಈ ಸುದ್ದಿಯು ಅಮೆರಿಕಾದ ನ್ಯಾಷನಲ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಶನ್‌ನಿಂದ ಹೊರಟಿತೆಂದು ಗೊತ್ತಾಗಿದೆ.

ಇಟಲಿಯಬೇಡಿಕೆ—

ಫ್ರಾನ್ಸಿನ ಆಫೀಸವಲ್ಲಿರುವ ಕಾರ್ಸಿಕ-ಟ್ಯೂನಿಸ್ ಮತ್ತು ನೀಸ್‌ಗಳನ್ನು ತನಗೆ ಅರ್ಪಿಸಬೇಕೆಂದು ಇಟಲಿಯ ಸರ್ವಾಧಿಕಾರಿಗಳಾದ ಮುಸೋಲಿನಿಯವರು ವಿಚಿ ಸರ್ಕಾರಕ್ಕೆ ಬರೆದಿರುವರೆಂದು ಅಂಕಾರಾ ರೇಡಿಯೋ ತಿಳಿಸಿತು.

ಅಂತರಿಕ್ಷದಲ್ಲಿ ಎರಡನೇ ಯುದ್ಧರಂಗ

ಅಮೆರಿಕಾ - ಇಂಗ್ಲೆಂಡುಗಳು ಎರಡೂ ನೇರಿ ಜರ್ಮನಿಯ ಕಾರ್ಖಾನೆಗಳ ಮೇಲೆ ಬಾಂಬುಗಳನ್ನು ಹಾಕಲು ಯೋಜನೆ ನಡೆಸಿವೆ. ಇವರ ಬಲವನ್ನು ಒಂದು ಗೂಡಿಸಿ ಅಂತರಿಕ್ಷದಲ್ಲಿ ದ್ವಿತೀಯ ಯುದ್ಧರಂಗವನ್ನು ವಸ್ತಾಪಿಸುರಂತೆ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ವಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ, ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೋಮ್ಯ ಕನ್ನಡಿಗಳು ಸರಿಯಾದ ಬೆಲೆಗೆ ಮಾರಲ್ಪಡುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ಸಮೃದ್ಧಿಯ ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

H. S. & Sons, Bellary.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦
ಕನ್ನಡ ದಶೋಪನಿಷತ್ತುಗಳು	೦—೪—೦
ವಿವಾಹವಿಧಿ ಮೋಕ್ಷ	೦—೮—೦
ಸುಮತಿ ಶತಕ	೦—೧—೦

ಅಂಚೆ ವೆಚ್ಚ ಬೇರೆ ಪುಸ್ತಕ ವ್ಯಾಪಾರಿಗಳಿಗೂ ಸಹಿ ಪುಸ್ತಕ ಕೊಳ್ಳುವರಿಗೂ ಪಾರಿತೋಷಕ ಕಮೀಶನ್

ಕಾಲಿವ ಸುಬ್ಬಣ್ಣ, ಮಜೀಂಟು. ಬಳ್ಳಾರಿ.

304.

ರಾಜಾಜಿಯವರ ಪಾಕಿಸ್ತಾನ ಯೋಜನೆ.

ಗಾಂಧೀಜೀಯವರ ಅಭಿಪ್ರಾಯ

".....ನಮ್ಮ ಅವರ ಧೋರಣದಲ್ಲಿ ಸುಣ್ಣ - ಬೆಣ್ಣೆಗಳಷ್ಟು ಅಂತರವಿದೆ. ಜಪಾನಿನು ಹಿಂದೂಸ್ತಾನವನ್ನಾಕ್ರಮಿಸುವರೆಂಬ ಭೀತಿಯು ರಾಜಾಜಿಯವರನ್ನು ಸತ್ಯದಳಿದ ಅಂಧರನ್ನಾಗಿ ಮಾಡಿದೆ....."

ಪ್ರಶ್ನೆ:- ಆಕ್ಷೇಪಕರು ಅದಕ್ಕಾಗಿ ಹೋರಾಟ ಹೂಡದಿದ್ದರೆ ಮುಸಲ್ಮಾನರಿಗೆ ಬೇಕಾದುದಕ್ಕೆ ಯಾವದೂ ತಡೆಯನ್ನುಂಟು ಮಾಡಲಾರದೆಂದು ನೀವು ಆಗಾಗ್ಗೆ ಹೇಳುತ್ತಿದ್ದುದನ್ನೆ ಮುಂಬಯಿ ಸತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಮತ್ತೆ ಹೇಳಿರುವಿರಿ. ನಿಮ್ಮ ಮತ್ತು ಶ್ರೀ ರಾಜಗೋಪಾಲಾಚಾರಿಯರವರ ಧೋರಣದಲ್ಲಿರುವ ಭೇದವೇನು ?

ಉತ್ತರ:- ತಮಗೆ ಸೃಷ್ಟಿ ಸಿಕ್ಕಬೇಕೆಂದು ಅವರು ನನ್ನ ಹೇಳಿಕೆಯನ್ನುಲ್ಲೇಖಿಸಿದ್ದರೂ ನಮ್ಮ ಅವರ ಧೋರಣದಲ್ಲಿ ಸುಣ್ಣ ಬೆಣ್ಣೆಯಷ್ಟು ಅಂತರವಿರುವದು. ಜಪಾನಿಗಳನ್ನು ಹೊಡೆದೋಡಿಸುವದಕ್ಕಾಗಿ ಐಕ್ಯವನ್ನು ಕೊಳ್ಳಲು, ಅವರೀಗ ಬೇಡೆಯಾಗುವ ಹಕ್ಕಿಗೆ ತಲೆಬಾಗುತ್ತಿರುವರು. ಹಿಂದೂಸ್ತಾನವನ್ನು ತುಂತೆರಿಸುವದು ಪಾಪವೆಂದು ನಾನು ತಿಳಿಯುತ್ತೇನೆ. ಆ ಅಪರಾಧವನ್ನು ಮಾಡದಂತೆ ನನ್ನ ನೆರೆಯವನನ್ನು ನಾನು ತಡೆಯಲಾರೆನೆಂದು ನನ್ನ ಹೇಳಿಕೆಯ ಅರ್ಥವಾಗುವದು. ನೆರೆಯವನು ಪಾಪಮಾಡಬಯಸಿದರೆ ಶ್ರೀ ರಾಜಗೋಪಾಲಾಚಾರ್ಯರು ಅದಕ್ಕೆ ಸಹಭಾಗಿಗಳಾಗುವರು. ನಾನು ಹಾಗಾಗಲಾರೆನು. ಇದಕ್ಕೂ ಹೆಚ್ಚಿನದೆಂದರೆ ಮೂರನೆಯದೊಂದು ಸಕ್ಷವು ಇಲ್ಲಿದ್ದು ನಮ್ಮ ಐಕ್ಯಕ್ಕೆ ತಡೆಯನ್ನುಂಟು ಮಾಡಿಸುವರೆಗೆ ನಮ್ಮಲ್ಲಿ ಐಕ್ಯವಾಗಲಾರವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಅದು ಕೃತ್ರಿಮ ಭೇದನನ್ನು ಕಲ್ಪಿಸಿದ್ದು ಹಾಗೆಯೆ ಅವಸ್ಥಿಸಿರುವದು. ಅದು ಇಲ್ಲಿರುವವರೆಗೆ ಹಿಂದುಗಳು ಮತ್ತು ಮುಸಲ್ಮಾನರು ಅಲ್ಲದೆ ತೋರಿಕೆಯಲ್ಲಿ ತಿಕ್ಕಾಟವುಳ್ಳ ಮತ್ತು ಅಸಮಾಧಾನ ಹೊಂದಿದ ಬೇರೆ-ಬೇರೆ ಹಿತಸಂಬಂಧವುಳ್ಳವರು ಅವರ ಬೆಂಬಲ ಪಡೆಯಲು ಹಾತೊರೆಯುವರು ಮತ್ತು ಅವರಿಗೆ ಅದು ಸಿಕ್ಕುವದು. ತಮ್ಮ ದೇಶದ ಸ್ವಾತಂತ್ರ್ಯಕ್ಕಿಂತ ಅವರಿಗೆ ತಮ್ಮ ಸ್ವಂತ ಹಿತಸಂಬಂಧಗಳು ಹೆಚ್ಚೆನಿಸುವವು. ಐಕ್ಯವಾಗದೆ ಸ್ವಾತಂತ್ರ್ಯವು ಶಕ್ಯವಿಲ್ಲೆಂದು ನಾನು ಹೇಳುತ್ತಿರುವದನ್ನು ಈ ಸಮಯದಲ್ಲಿ ಯಾರೂ ನನಗೆ ನೆನಪುಮಾಡಿಕೊಡಬೇಕಾಗಿಲ್ಲ. ಅದರಲ್ಲಿಯ ಒಂದು ಶಬ್ದವನ್ನುಕೂಡ ನಾನು ಹಿಂತೆಗೆದುಕೊಳ್ಳಿ ಬಯಸುವದಿಲ್ಲ. ಅದೊಂದು ಪ್ರತ್ಯಕ್ಷ ಸತ್ಯವು. ಆ ಸತ್ಯಚಿಂತನೆಯಲ್ಲಿ ನಾನಿರುವಾಗಲೆ ಬ್ರಿಟಿಶರು ಹಿಂದುಸ್ತಾನ ಬಿಟ್ಟು ಹೋಗಬೇಕೆಂಬ ಯೋಜನೆಯನ್ನು ನಾನು ಕಂಡುಹಿಡಿದೆನು. ಅವರು ಹೊರಟುಹೋದ ಮಾತ್ರದಿಂದಲೆ ನಮಗೆ ಸ್ವಾತಂತ್ರ್ಯ ಸಿಕ್ಕಲಾರದು. ಅವರು ಹೋಗುವದರಿಂದ ನಮ್ಮಲ್ಲಿ ಐಕ್ಯವಾದರೂ ಆಗಬಹುದು. ಇಲ್ಲವೆ ಅರಾಜಕತೆಯಾದರೂ ಉಂಟಾಗಬಹುದು. ತೆರವು ಬಿದ್ದ ಆ ಸ್ಥಳವನ್ನು ಮತ್ತೊಂದು ರಾಷ್ಟ್ರ ತುಂಬುವ ಗಂಡಾಂತರವೂ ಇರುವದು. ಆದರೆ ಬ್ರಿಟಿಶರು ಒಳ್ಳೆ ವ್ಯವಸ್ಥಿತ ರೀತಿಯಿಂದ ಮತ್ತು ಸ್ವಪ್ರೇರಣೆಯಿಂದ ಹೊರಟು ಹೋದರೆ ಅವರ ನೈತಿಕ ಬಲವು ಹೆಚ್ಚುವುದಲ್ಲದೆ ದೊಡ್ಡದೊಂದು ರಾಷ್ಟ್ರದ ನಿರ್ಮಾತೃರ ಗೌರವನವು ಅವರಿಗೆ ಸಿಕ್ಕುವುದು. ಹಿಂದುಸ್ತಾನದಲ್ಲಿಯ ಬೇರೆ ಬೇರೆ ಹಿತಸಂಬಂಧವುಳ್ಳ ಮತ್ತು ತಿಕ್ಕಾಡುತ್ತಿರುವ ಪಕ್ಷಪಂಗಡಗಳು ಅದನ್ನು ಪರಕೀಯ ಪ್ರಭುತ್ವದಿಂದ ಮುಕ್ತವಾಡಲು ಸಂಯುಕ್ತ ಪ್ರಯತ್ನ ನಾಡುವನೆಂದು ನಾನು ಆಶಿಸುತ್ತೇನೆ. ಅವು ಹಾಗೆ ಮಾಡದಿದ್ದರೆ ಅವುಗಳೊಡನೆ ಪೂರಾಡಿಕೊಳ್ಳುವ ಯಾವದೆ ಒಡಂಬಡಿಕೆಯು ಮರಳಿನಲ್ಲಿ ಕಟ್ಟಿದ ಮನೆಯಂತೆ ನಿರುಪಯೋಗಿ ಯಾಗುವದು. ಜಪಾನಿರು - ಹಿಂದುಸ್ತಾನವನ್ನಾಕ್ರಮಿಸುವರೆಂಬ ಭೀತಿಯಲ್ಲಿ ಚಕ್ರವರ್ತಿ ರಾಜಗೋಪಾಲಾಚಾರ್ಯರು ಈ ಸ್ವಪ್ನ ಸತ್ಯವನ್ನಕ್ಕೆ ಅಂಧರಾಗಿರುವರು. ಸ್ವಾತಂತ್ರ್ಯವು ಎಲ್ಲವುಗಿಂತ ಅಂಜಿಕೆಯನ್ನು ಹೊಡೆದೋಡಿಸುವುದು. ಜಪಾನಿಗಳ ಭೀತಿ, ಅರಾಜಕತೆಯ ಅಂಜಿಕೆ ಮತ್ತು ಬ್ರಿಟಿಶ್ ಸಿಂಹನ ಸಿಟ್ಟು ಇವೆಲ್ಲ ಅದರಿಂದ ನಾಶವಾಗುವವು.

ಸೇವಾಗ್ರಾಮ ತಾ. ೧೫-೫-೪೨.

ಬಾರ್ಜಾ ದೊರೆಗಳು ಲಂಡನ್ನಿನಲ್ಲಿರುವ ಬಕಿಂಗಹ್ಯಾಮ ಅರಮನೆಯ ಬೇಲಿಗೆ ಹಾಕಿರುವ ೨೦ ಟನ್ ತೂಕದ ಕಬ್ಬಿಣದ ಕಟಾಂಜನವನ್ನು ಯುದ್ಧಸಾಮಗ್ರಿಗಳ ತಯಾರಿಕೆಗೆ ಕಳೆದ ವರ್ಷ ಕೊಟ್ಟರು.

ಸಿಂಧೂದೇಶದ ಅರಾಜಕತೆ :—

"ಸಿಂಧೂದೇಶದಲ್ಲಿ ಹೂರರ ಹಾವಳಿಯನ್ನು ತಪ್ಪಿಸಬೇಕೆಂದರೆ - ಸಿಂಧೂ ದೇಶದ ಅಸೆಂಬ್ಲಿಯಲ್ಲಿನ ಕಾಂಗ್ರೆಸ್ ಸದಸ್ಯರೂ - ಮುಖ್ಯ ಮಂತ್ರಿಗಳಾದ ಅಲ್ಲಾ ಬಕ್ಷರೂ ಅವರ ಮಂತ್ರಿಮಂಡಲವೂ ರಾಜೀನಾಮೆ ಕೊಟ್ಟು - ಹೂರಜನಾಂಗವಿರುವ ಪ್ರಾಂತ್ಯದಲ್ಲಿ ನೆಲೆಸಬೇಕು. ಅವರನ್ನು ಸನ್ಮಾರ್ಗಕ್ಕೆ ಹಚ್ಚುವ ದಾರಿಯಲ್ಲಿ ಪ್ರಾಣವನ್ನಾದರೂ ಕೊಡಬೇಕು. ಹೂರರ ಧರ್ಮಗುರುವಾದ ಪಿಗಾರೊ ಪೀರರಲ್ಲಿಗೆ ಅವರಿಗೆ ಪರಿಚಯಸ್ಥರಾದವರು ತಿಪ್ಪೆಮಂಡಲದೊಡನೆ ಹೋಗಿ ಈ ಅಕೃತ್ಯಗಳನ್ನು ನಿಲ್ಲಿಸಲು ತಮ್ಮ ಅನುಯಾಯಿಗಳಿಗೆ ಹೇಳಬೇಕೆಂದು ಪ್ರಾರ್ಥಿಸಬೇಕು —" ಎಂಬುದಾಗಿ ಮಹಾತ್ಮ ಗಾಂಧಿಯವರು ಉಪದೇಶಮಾಡಿದ್ದಾರೆ.

ಗಾಂಧಿಯವರು ಅಂದೋಳನ ವಾರಂಭಿಸುವರೇ ?

ಬೊಂಬಾಯಿ ಮುನಿಸಿಪಲ್ ಕಾರ್ಪೊರೇಶನ್ ಮೇಯರ್‌ರಾದ - ಯೂಸುಫ್ ಮೆಹರಾಲಿಯವರು - ಒಂದು ಹೇಳಿಕೆ ಕೊಡುತ್ತಾ - ಮಹಾತ್ಮಾ ಗಾಂಧಿಯವರು ಇಷ್ಟೆರಲ್ಲಿಯೇ - ಒಂದು ಅಂದೋಳನವನ್ನು ಪ್ರಾರಂಭಿಸಲಿರುವರೆಂದೂ - ಎಲ್ಲಾ ಕಾಂಗ್ರೆಸ ಜನರೂ ಸಿದ್ಧರಿರಬೇಕೆಂದೂ - ಸೂಚಿಸಿರುತ್ತಾರೆ.

ಭೂಮಿಯೊಳಗಿನ ನಗರ.

ಹಿಂದು ಮುಂದೆ ಆಲೋಚನೆ ಮಾಡದೆ ಜಪಾನಿರು ಚೀನವನ್ನು ದಾಳಿಮಾಡಿದ್ದರ ಪರಿಣಾಮ ಚೀನರ ಸೂತಾರು ನಗರಗಳು ನೆಲಸಮವಾಗಿ ಹೋಗಿವೆ. ಹಾಗಾಗಿರುವದು ಒಂದು ರೀತಿಯಿಂದ ಒಳ್ಳೆಯದೆಂದೇ ಹೇಳಬೇಕು. ಈಗ ಹೊಸದಾಗಿ ನಿರ್ಮಾಣವಾಗುತ್ತಿರುವ ನಗರೆಗಳು ಸಕಲ ಆಧುನಿಕ ಸೌಕರ್ಯಗಳನ್ನೊಳಗೊಂಡೇ ನಿರ್ಮಾಣವಾಗುತ್ತಿವೆ. ಪ್ರತಿಯೊಂದು ಮನೆಗೂ ವಿಮಾನದಾಳಿಯ ರಕ್ಷಣಾಲಯಗಳಿದ್ದೇ ಇವೆಯಂತೆ.

ಶಾಸನ ರಾಜಧಾನಿಯಾದ ಶಿಸ್ಸಿಯಲ್ಲಿ ಭೂಮಿಯೊಳಗೇ ಊರನ್ನು ಕಟ್ಟುವಾರಂತೆ. ಅಲ್ಲಿ ರೇಡಿಯೋ ನಿಲಯಗಳು, ಶಾಲೆಗಳು, ಸತ್ರಿಕಾ ಮುದ್ರಣಾಲಯಗಳು, ಟೆಲಿಫೋನು ಟೆಲಿಗ್ರಾಫ ಕಚೇರಿಗಳು ಇವೇ ಮೊದಲಾದ ಎಲ್ಲ ಆಧುನಿಕ ಸೌಕರ್ಯಗಳನ್ನೂ ಕಲ್ಪಿಸಲಾಗಿದೆ. ಅಲ್ಲೆಂದು ದೊಡ್ಡ ಆಸ್ಪತ್ರೆಯೂ ಇದೆಯಂತೆ. ಗಾಳಿ ಬೆಳಕಿನ ಯಾವ ಕೊರತೆಯೂ ಇಲ್ಲದಂತೆ ಅದನ್ನು ಕಟ್ಟಲಾಗಿದೆ. ೧೧ ಸಾವಿರ ಚದರ ಅಡಿ ಜಾಗವನ್ನು ಆಕ್ರಮಿಸಿಕೊಂಡಿರುವ ಒಂದು ಹತ್ತೀ ನಿರಿಣಿಯು ಸಹ ಈ ಭೂಮಾಂತರ್ಗತ ನಗರದಲ್ಲಿದೆ. ಪಾರತಂತ್ರ್ಯ ಕ್ಕೊಳಗಾಗದೆ ಸ್ವಾತಂತ್ರ್ಯವಿಂದ ಬಾಳಿ ಬದುಕಬೇಕೆಂಬ ಚೀನರ ದೃಢ ನಿಶ್ಚಯದ ಕುರುಹೇ ಈ ಎಲ್ಲ ನವೀನ ನಿರ್ಮಾಣಗಳು.

ಕಾಕಸಸ್ ಕೈಬಿಟ್ಟರೆ ರಷ್ಯನರಿಗೆ ಅಪಾಯ

ಶರೀರದ ರಕ್ತ ಸಂಚಾರವು ನಿಂತಂತಾಗುವದೇ?

ನೆಗ್ಲಿಫಾರ್ಸ್‌ರವರು ಲಂಡ್ ಡೇಲಿಮೇಲ್ 18-5-42ರಲ್ಲಿ ಬರೆದ ಅಂಶ.

—×—

ರಷ್ಯನರ ಮುಖ್ಯ ಎಣ್ಣೆಯ ಕೇಂದ್ರವಾದ ಕಾಕಸಸ್ ಎಣ್ಣೆಗಣಿಗಳನ್ನು ಹಿಡಿದರೆ, ರಷ್ಯನರು ಬಹಳ ಅಪಾಯಕ್ಕೊಳಗಾಗುವರು. ಅವರ ನಾಡಿಯಲ್ಲಿ ರಕ್ತ ಸಂಚಾರವನ್ನೇ ನಿಲ್ಲಿಸಿದಂತಾಗುವುದು. ಜರ್ಮನರು ಈ ಕಾರಣದಿಂದಲೇ ಭಳಿಗಾಲ ವೆಲ್ಲಾ ಟಿಗನ್‌ರಾಗ, ಮತ್ತು ಕರ್ಚುಗಳ ನ್ನಿಲ್ಲಿಸ್ಸಾ, ಕಾಕಸಸ್‌ಗಾಗಿ ಹೊಂಚು ಹಾಕುತ್ತಿದ್ದರು. ರಷ್ಯದ ಯುದ್ಧ ಸಾಮಗ್ರಿಯೂ ಯಂತ್ರಗಳೂ, ವೈಮಾನಿಯವೂ ಎಣ್ಣೆಯಿಲ್ಲದೆ ನಡೆಯುವಂತಿಲ್ಲ. ಸಮಾಜಸ ಮತಾವಾದದ ರಾಜ್ಯಭಾರ ಕ್ರಮದಲ್ಲಿ, ತಮ್ಮ ಜೀವನದ ಸರ್ವ ಭಾಗವನ್ನೂ ಯಂತ್ರದಿಂದ ಸಾಗಿಸುತ್ತಿರುವರು. ಕಾಕಸಸ್ ಎಣ್ಣೆಯು ಹೋದರೆ, ತಮ್ಮ ನಾಶವಾಗುವದೆಂದು, ಅವರು ಸರ್ವವಿಧ ಯತ್ನಗಳನ್ನು ಮಾಡಿ, ಅಲ್ಲಿಗೆ ಮೊಹ್ಲ ಸೈನ್ಯವನ್ನು ತಂದಿರುವರು.

ಕರ್ಚು ಭಾಗವು ಕೈಬಿಟ್ಟಿತು.

ಕರ್ಚು ಪೆನಿನ್ಸುಲ ಜರ್ಮನರ ಸ್ವಾಧೀನವಾಯ್ತೆಂದೂ ಅಲ್ಲಿಂದ ರಷ್ಯನ ಸೈನ್ಯಗಳು ಸುವ್ಯವಸ್ಥಿತವಾಗಿ ಬಲವತ್ತರವಾದ ಮತ್ತೊಂದು ಸ್ಥಳಕ್ಕೆ ಹಿಂದಿರುಗಿದವೆಂದೂ ಪ್ರಕಟವಾಗಿದೆ. ಕರ್ಚುಭಾಗವು ಶತ್ರು ವಶವಾಗಿರುವದರಿಂದ ಕಾಕಸಸ್ ಎಣ್ಣೆ ಕೇಂದ್ರಕ್ಕೆ ಅಪಾಯವು ಹೆಚ್ಚಿದಂತಾಯಿತು.

ಚೀನದಲ್ಲಿ ಜಪಾನರ ಮುನ್ನಡೆ

ಜಪಾನರ ಒಂದು ಲಕ್ಷಕ್ಕಿಂತಲೂ ಹೆಚ್ಚಿನ ಸೈನ್ಯವು ಜೆಯಕಾಂಗ ಪ್ರಾಂತದಲ್ಲಿ ಮೂರು ಕಡೆಗಳಿಂದ ಮುನ್ನುಗ್ಗುತ್ತಲಿದೆ, ಚೀನಾ ಸೈನ್ಯವು ಜಪಾನರನ್ನು ಬಲವಾಗಿ ವಿರೋಧಿಸುತ್ತಿರುವದೆಂದು ಗೊತ್ತಾಗಿದೆ. ಜಪಾನರು ಚಿಯಕಾಂಗ್ ಪ್ರಾಂತದ ರಾಜಧಾನಿಯಾದ ಕಿನ್ಹವಾಕ್ಕೆ 7 ಮೈಲಿ ದೂರದಲ್ಲಿ 24ಕ್ಕೆ ಇದ್ದರು. ಕಿನ್ಹವಾಪ ತನವಾಯ್ತೆಂಬ ಸುದ್ದಿಯು ಈಗ ಬಂದಿದೆ. ಯುನ್ನಾನ್ ಪ್ರಾಂತದಲ್ಲಿ ಜಪಾನರು ಪಟ್ಟಣಗಳಮೇಲೆ ಬಾಂಬುಗಳನ್ನು ಸುರಿಸುತ್ತಿರುವರು. ಈಗ ಮಳೆಗಾಲವು ಪ್ರಾರಂಭವಾಗಿರುವ ಕಾರಣ, ನದಿಗಳೆಲ್ಲಾ ತುಂಬಿ ಹರಿದು ಮಾರ್ಗ ಸೌಕರ್ಯಗಳೆಲ್ಲಾ ಹಾಳಾಗಲಾರಂಭವಾಗಿವೆಯಂತೆ

ಕಾರ್ಖಾನೆ

ರಷ್ಯಾ ದೇಶದ ಈ ಭಾಗದಲ್ಲಿ ರಷ್ಯದ 3 ಸೈನ್ಯಗಳನ್ನು ತಾವು ಸುತ್ತುಗಟ್ಟಿರುವುದಾಗಿ ಜರ್ಮನರ ಪ್ರಕಟನೆಯು ತಿಳಿಸುತ್ತದೆ. ಕದನದ ಉಗ್ರತೆಯು ಕಾರಣೊವಲಿಂದ ಇಜಂಕ್ಷೇತ್ರಕ್ಕೆ ವರ್ಗಾಯಿಸಲ್ಪಟ್ಟಿರುವುದಾಗಿ ಲಂಡನ್ನಿನಲ್ಲಿ ಊಹಿಸಲಾಗಿದೆ. ಜರ್ಮನರು ವಿಮಾನಬಲವನ್ನು ವಿವಿಧ ರಂಗಗಳಲ್ಲಿ ಬೇಕಾದ ಹಾಗೆ ಹೆಚ್ಚು ಕದನವು ಮಾಡುತ್ತಿರುವರು. ಜರ್ಮನರಿಗೆ ಕರ್ಚು ನಿನಲ್ಲಿ ಲಭಿಸಿದ ಜಯಕ್ಕೆ ಹೆಚ್ಚಿನ ವಿಮಾನಬಲವೇ ಕಾರಣವಾಗಿರಬೇಕು.

ಜರ್ಮನಿಯ ಮೇಲೆ ಬ್ರಿಟಿಷ ವಿಮಾನಗಳು ಫೆಬ್ರವರಿ ಅಂತ್ಯದ ವೇಳೆಗೆ 7500 ಸಲ ಮುತ್ತಿಗೆ ನಡೆಸಿ 30 ಲಕ್ಷ ಪೌಲಿಯನ್ನು ಸುತ್ತಿಬಂದವಂತೆ

ತುರ್ಕಿಯ ಹಡಗುಗಳು ಮುಳುಗಿದವು.

ಕಪ್ಪುಕಡಲಿನಲ್ಲಿ ಬಲ್ಗೇರಿಯ ಸನುದ್ರ ತೀರದಲ್ಲಿ 5೮0 ಟನ್ ತೂಕದ ತುರ್ಕಿ ಹಡಗೊಂದಕ್ಕೆ ಯಾವುದೋ ಸಬ್‌ಮೇರಿನ್ ಟಾರ್ಪೆಡೋ ಏಟುಹಾಕಿ ಮುಳುಗಿಸಿತು. ಬಲ್ಗೇರಿಯದ ಬಂದರಿನಿಂದ ಇಸ್ತಂಬೂಲಿಗೆ ಈ ಹಡಗು ಬರುತ್ತಿತ್ತು. ಇದೂ ಸೇರಿ 5 ದಿನಗಳಲ್ಲಿ ಎರಡು ತುರ್ಕಿ ಹಡಗುಗಳು ಮುಳುಗಿದವು.

ಮೆಕ್ಸಿಕೋದಲ್ಲಿ ಜರ್ಮನಿಗೆ ವಿರೋಧ - ಯುದ್ಧ ಹೂಡುವದು.

ಮೆಕ್ಸಿಕೋದೇಶದ ವ್ಯಾಪಾರೀ ಹಡಗುಗಳನ್ನು ಮುಳುಗಿಸಿದ ಕಾರಣ್ಯ, ಮೆಕ್ಸಿಕೋ ದೇಶವು ಆಕ್ಸಿಸ್ ರಾಷ್ಟ್ರಗಳ ವಿರುದ್ಧ ಯುದ್ಧ ಹೂಡಲಿದೆ. ಜರ್ಮನರು ಹೊಸ ಬಗೆಯ ಟಾರ್ಪೆಡೋಗಳನ್ನು ಪ್ರಯೋಗಿಸಿದರು. ಟಾರ್ಪೆಡೋ ಹಡಗಿಗೆ ಬಡಿದು ಬೆಂಕಿ ಹತ್ತಿ 21 ನಾವಿಕರು ಬೆಂದು ಹೋದರು.

ವಿನೆಯ ಯುದ್ಧರಂಗ ಬೇಕು.

ಲಂಡನ್ನಿನ ಟ್ರಾಫಲ್ಗರ್ ಚೌಕದಲ್ಲಿ 50 ಸಾವಿರ ಕಮ್ಯೂನಿಸ್ಟರು ಸೇರಿದ ಸಭೆಯಲ್ಲಿ ಎರಡನೆಯ ಯುದ್ಧರಂಗಬೇಕೆಂಬುದನ್ನು ಪ್ರದರ್ಶಿಸಲಾಯಿತು

ಆಧುನಿಕ ಭಯಂಕರ ಅಸ್ತ್ರ.

ರಷ್ಯನರು ಈಗ ಅಂತ್ಯಂತಾಧುನಿಕವೆನಿಸಿದ ಭಯಂಕರ ಅಸ್ತ್ರಗಳನ್ನು ತಯಾರಿಸುತ್ತಿರುವರೆಂದೂ ಶತ್ರುಗಳು ಅವುಗಳನ್ನು ಹೊಂದಿಲ್ಲವೆಂದೂ ರಷ್ಯಾದ ಈ ರಾಜಕೆಯ ಮುಖ್ಯಾಧಿಕಾರಿಗಳು ನುಡಿದರು.

ಓರಿಯಂಟಲ್

ಸಂಪೂರ್ಣ ರಕ್ಷಣೆ, ಪೂರ್ಣ ಭರವಸೆ

ಈ 18 ವರ್ಷಗಳ ಜೀವನದಲ್ಲಿ **ಓರಿಯಂಟಲ್** ಕಂಪನಿಯು ತನ್ನ ಲಕ್ಷಾಂತರ ವಿಮಾದಾರರಿಗೆ **ಶಾಂತಿ ಮತ್ತು ಯುದ್ಧಕಾಲಗಳೆಲ್ಲೂ** ಸಹ ಮಾದರಿ ವಿಮಾಕಾರ್ಯದ ಶ್ರೇಷ್ಠ ತತ್ವಗಳ ಅನುಸರಣೆಯಿಂದ ಮೇಲ್ಪಾಡಿನಿಮವನ್ನು ಕೊಟ್ಟಿದೆ. ಅವರಿಗೊದಗಿಸಿದ ಸೌಲಭ್ಯಗಳನ್ನು ನಿಮಗೂ **ಓರಿಯಂಟಲ್** ಒದಗಿಸಲು ಸಿದ್ಧವಿದೆ.

ಇಲ್ಲಿಯವರಿವಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26ಕೋ. ಮೀರಿ
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು 85½ ಕೋಟಿ
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5 ಕೋಟಿ
ನಿಧಿಯ ದ್ರವ್ಯ ರು 30 ಕೋಟಿ

ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್,
ಸ್ಥಾಪನೆ ೧೮೭೪. **ಮುಖ್ಯ ಕಛೇರಿ ಬೊಂಬಾಯಿ.**

ಶಾಖೆ:- ೧೩೪ ಲಾಯಡ್ಸ್ ರೋಡ್ ಪೋಸ್ಟು ಬಾಕ್ಸು ನಂ. ೪ ಮದ್ರಾಸು.
ಇನ್ಸ್‌ಪೆಕ್ಟರವರ ಆಫೀಸು:- ೩೦೨ ರಾಪರ್ಟ್‌ಸನ್ ನೇಟ್ ಬ್ಯೂಸಪೇಟೆ ಬಳ್ಳಾರಿ.

ಕನ್ಯಾರತ್ನ—ಅಮೃತ

(ಈ ಚಿಕ್ಕ ಕೆಯೆಯಲ್ಲಿ ವರವಕ್ಷಿಣಿ ವರೋಪಚಾರ ಕೊಡಲು ಯೋಗ್ಯತೆ ಇಲ್ಲದೆ ತಂದೆಯು ಕನ್ಯಾಕ್ಕೆ ವಿದ್ಯಾಭ್ಯಾಸ ಮಾಡಿಸುವನು. ಯೋಗ್ಯವಾದ ವರನು ನಂತರ ತಾನೇ ದೊರೆತು ವಂಶ ತಿಗಳು ಸುಖವಾಗಿರಲು ಮಾರ್ಗವಾಗುವುದು. ಕೆ. ಆರ್. ಆಚಾರ್ಯ, ಎಮ್ಮಿಗನೂರು.)

ನಾರಾಯಣಾಚಾರು ಓರ್ವ ನಿರ್ಭಾಗ್ಯ ಪ್ರಾಥಮಿಕ ಶಾಲೋಪಾಧ್ಯಾಯ. 20 ರೂ ಸಂಬಳ. 4 ಹೆಣ್ಣು, 3 ಗಂಡು ಸಂತಾನವುಳ್ಳ ಪ್ರಾ ಣಿ. 95 ವರ್ಷದ ವೃದ್ಧ ಮಾತೆ. ಗಂಡ ಹೆಂಡತಿ ಸಪ್ತಸಂತಾನವುಳ್ಳ ಕುಟುಂಬವದು. ಆತನ ಕನ್ಯಗಳು ವರ್ಣನಾತೀತ - ಅಮೃತ ಆತನ ಜೇಷ್ಠ ಪುತ್ರಿ ಹೋಡಶ ವರ್ಷ ಪ್ರಾಯದ ಸುಂದರ ಸುಕುಮಾರಾಂಗಿ. IV ಸಾರಂವರೆಗೆ ಓದಿದವಳು. ಪಾಪ ಇವಳ ತಂದೆಯು ವಿವಾಹ ಸಂಬಂಧದ ಹಾಡಿಕೆ ಮಾಡಿ ಜೇಜಾರಾಗಿದ್ದ. ಎಲ್ಲೆಲ್ಲಿ ವಿಚಾರಿಸಿದರೂ ನಾವಿರಗಟ್ಲೆ ವರವಕ್ಷಿಣಿ, ನೂರರಗಟ್ಲೆ ವರೋಪಚಾರಗಳನ್ನಪೇಕ್ಷಿಸುತ್ತಾರೆ. ಎಲ್ಲಿಂದ ತಂದಾನು ಪಾಪ! ಇಲ್ಲನೇ 3ನೇ 4ನೇ ಸಂಬಂಧದ ಸಂತಾನಾಪೇಕ್ಷೆಯುಳ್ಳ ವೃದ್ಧವರರತ್ನಗಳು ಬಂದು ಬಂದು ವಿಚಾರಿಸುತ್ತಾರೆ. ಕೇಳಿದಷ್ಟು ಭಂಗಾರ ಯಾಕೆಲು ಒಪ್ಪುತ್ತಾರೆ. ಕನ್ಯಾಶುಲ್ಕ ಕೊಡಾ ಕೊಡಲು ಸಿದ್ಧವಾಗುತ್ತಾರೆ. ನೋಡಿ ನೋಡಿ ಜಾಂಬವಂತರಿಗೆ ಮಗಳನ್ನು ಕೊಡಲು ಲೇಶವಾದರು ಒಪ್ಪದ ಸ್ವಾಸ್ಥ್ಯ. ವರದಕ್ಷಣೆ ಕೊಡಲು ಯೋಗ್ಯತೆ ಇಲ್ಲವೇ! ಯಿಲ್ಲವಷ್ಟೇ! ದೇವರೇ ಏನುಗತಿ ಎಂದು ನಿರಂತರ ಕುಂಯಿತ್ತರುವನು ನಾರಾಯಣಾಚಾರ್ಯ. ಅಮೃತ ಸಾಕಷ್ಟು ಲೋಕಾನುಭವವುಳ್ಳವಳು. ಹೆತ್ತ ತಂದೆಯು ಪಡತಕ್ಕ ನಿರಂತರ ವೇದನೆಗಳನ್ನು ಅರಿತವಳು. ತನ್ನ ಮದುವೆಯ ವಿಚಾರ ಬಿಟ್ಟು ಸಂಘದ ನಿಯಮಗಳಿಗೆ ಹೆದರಿ ತನ್ನನ್ನು ಸ್ಕೂಲು ಫೈನಲ್ ಟ್ರೇನಿಂಗಿಗೆ ನೇರಿಸಲು ಪ್ರಯತ್ನಮಾಡೆಂದು ತಂದೆಗೆ ಬೋಧಿಸಿದಳು. ಆತನೂ ಒಪ್ಪಿದನು. ಟ್ರೇನಿಂಗು ಸೀಟು ದೊರಕಿತು. ಎರಡು ವರ್ಷದ ಕೋರ್ಸಿನಲ್ಲಿ ವಿನಯ ವಿಧೇಯತೆ ಇಂದಲೂ, ಸೌಸೀಲ್ಯತೆ ಇಂದಲೂ ಸಿಕ್ಷಣದಲ್ಲಿ ಕಾಲ ಕಳೆದಳು. ಮೇಧಾ ಸಂಪತ್ತಿನಿಂದ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಉದ್ಯೋಗವಾತ್ತು. ರೂ. 25 ವೇತನವುಳ್ಳ ಒಂದು ಸ್ಥಾನವನ್ನು ಪಡೆದಳು. ಬಡ ಕುಟುಂಬಕ್ಕೆ ಆಧಾರನಾದಳು. ಈಗ ಮಿಸ್ಟ್ರೆಸ್ ಅಮೃತಬಾಯಿ ತನ್ನ ಸತ್ಪ್ರವರ್ತನೆ ಇಂದಲೂ, ಜನರ ಆದರಾಭಿಮಾನಗಳಿಂದಲೂ, ವಿದಿತ ಧರ್ಮದಿಂದಲೂ, ಶ್ರಿಕರ್ಣಾಮೃದ್ಧಿ ಇಂಬಲೂ ಕೆಲಸ ಮಾಡುತ್ತಿದ್ದಳು.

ಆದೇ ಗ್ರಾಮದ ಬಾಲಕ ಪಾಠಶಾಲೆಯ ಪ್ರಧಾನೋಪಾಧ್ಯಾಯ ಸಂಜೀವರಾವು. ವಯಸ್ಸು 24 ವರ್ಷ. ಲೆಕಂಡರಿ ಗ್ರೇಡಿನವನು. ಸಂಬಳ 35 ಯುವಕ. ಪ್ರಾಜ್ಞ - ಸುಂದರಾಂಗ - ಸುಗುಣ ಹೆಡ್ಮಿಸ್ಟ್ರೆಸ್ ಅಮೃತಬಾಯಿಯನ್ನು ಹೆಡ್ಮಾಸ್ಟರು ಸಂಜೀವರಾವು ಮದುವೆಯಾದ ಈಗ ಅಮೃತ ಕನ್ಯೆಯಲ್ಲ - ಸುಮಂಗಲಿ ನಿಶ್ಚಿಂತೆ ಇಂದ ಸುಖವಾಗಿ ಯಾತ್ರೆನಡಿಸುತ್ತಿರುವರು.

—×—

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಇಲ್ಲಿಯವರೆಗೆ ಆದ ಪ್ರಗತಿ

ಡಿಪಾಜಿಟ್ಟುಗಳು.			
ಫಿಕ್ಸೆಡ್	ರೂ,	Nil	113247
ಚಾಲ್ತಿ	,,	3,173	13859
ಸೇವಿಂಗ್ಸು	,,	1,231	18168
ಇತರ	,,	40	2227
ಸಾಲಗಳು			
ಭಂಗಾರ	,,	520	32413
ಮಾಲು	,,	Nil	38810
ಇತರ	,,	Nil	28328
ಇತರ ಆಸ್ತಿ.			
ಸರ್ಕಾರಿವೆ ಬಾಂಡುಗಳು	,,	13,32	30476
ಬ್ಯಾಂಕುಗಳಲ್ಲಿರುವ ಹಣ	,,	32,502	28728
ಕೈಯ್ಯಲ್ಲಿ ನಗದು	,,	5770	14778

ಒಟ್ಟು ವ್ಯವಹಾರದ ಮೊತ್ತ.

31—10—40.	30—4—42.
ರು. 1,14,774-0-0	ರು. 23,2868-0-0

ಶಾಖೆಗಳು:—

1 ತಿಮ್ಮನಚರ್ಲ 2 ಕೊಟ್ಟೂರು. 3ಆರವಕೊಂಡ. 4 ಪತ್ತಿಕೊಂಡ

ಹೆಚ್. ಸೀತಾರಾಮರೆಡ್ಡಿ,, ಬಿ. ಎ. ಬಿ. ಎಲ್. (ಎಂ. ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ವೃತ್ತಪತ್ರಿಕೆಗಳಿಗೆ ಸಲಹೆಗಾರರು.

ಹಿಂದೂ ಪತ್ರಿಕೆಯ ಸಂಪಾದಕ ಮಂಡಲಿಗೆ ನೇರಿದ ಶ್ರೀ ಎಸ್. ಎ. ಗೋವಿಂದ ರಾಜನ್‌ರವರನ್ನು ನವದೆಹಲಿಯಲ್ಲಿರುವ ಥೀಫ್‌ವೈಸ್ ಆಡ್‌ವೈಜರ್‌ರನವರ ಸಹಾಯಕರನ್ನಾಗಿ ನೇಮಿಸಲಾಗಿದೆ. ಮುಂದಿನವಾರ ಅವರು ಅಧಿಕಾರ ವಹಿಸುವರು.

ಕಾಫಿ ಇನ್ನು ಮೇಲೆ ಹೊರಗೆ ಕಳುಹಿಸುವುದಿಲ್ಲ.

ಭಾರತದ ಮಾರ್ಕೆಟುಗಳಲ್ಲಿ ಕಾಫಿಯು ಬಹಳ ಕಡಮೆಯಾಗಿರುವ ಕಾರಣ ಇನ್ನು ಮೇಲೆ ಹೊರಗೆ ಕಳುಹಿಸುವುದಿಲ್ಲವೆಂದು ನಿರ್ಧಯಿಸಿವ್ವಾರೆ. ಇಂಗ್ಲೆಂಡಿಗೆ 2841ಟ್ಟ ಕಾಫಿಕಳುಹಿಸಲಾಗಿತ್ತು. ಕಾಫಿಯ ಬೆಲೆಯನ್ನು ಕಟ್ಟುನಲ್ಲಿರಿಸಲು ಸರಕಾರವು ನಿರ್ಧಯಿಸಿದೆ.

ಆಂಧ್ರ ಕರ್ನಾಟಕ ಹಿಂದೀ ಮಹಾವಿದ್ಯಾಲಯ ಅನಂತಪುರ.

ಈ ವಿದ್ಯಾಲಯವು 15ನೆಯ ಜೂನ್ 1942ಕ್ಕೆ ಸುತ್ತಿ ಪ್ರಾರಂಭವಾಗಲಿದೆ. ರಾಷ್ಟ್ರಭಾಷಾ, ವಿಶಾರದ ವರ್ಗದ ಜೊತೆಗೆ ಪ್ರಚಾರಕ ತರಗತಿಯೂ ನಡೆಸಲ್ಪಡುವುದು. ವಿಶಾರದ ತರಗತಿ ಸೇರಬೇಕೆಂದರೆ ಕನಿಷ್ಠಪಕ್ಷ ರಾಷ್ಟ್ರ ಭಾಷೆ ಪರೀಕ್ಷೆಯಲ್ಲಿ ಪ್ರಚಾರಕ ವರ್ಗಕ್ಕೆ ಸೇರಲು ವಿಶಾರದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಶಾಲೆಗೆ ಹೊಂದಿಕೊಂಡೇ ವಿದ್ಯಾರ್ಥಿನಿಲಯವುಂಟು. ಯೋಗ್ಯರಾದ ಕೆಲ ವಿದ್ಯಾರ್ಥಿಗಳಿಗೆ ನೇತನವು ಕೊಡಲಾಗುವುದು. ವ್ಯಾಸಂಗದ ಅವಧಿ 8 ತಿಂಗಳು ಅ ನೆಯ ಜೂನ್ 1942ರ ವರೆಗಾಗಿ ನಿಯಮಿತ ದರಖಾಸ್ತಿನ ಮೂಲಕ ಕೇಳಿ ಕೊಳ್ಳಬೇಕು.

ಭಾಲಚಂದ್ರ ಆಪ್ಟೆ,
ಆಚಾರ್ಯ (Principal)

ಬಳ್ಳಾರಿ ಜಿಲ್ಲಾ ಬೋರ್ಡು.

ಪ್ರಾಥಮಿಕ ವಿದ್ಯಾಭ್ಯಾಸದ ಮಾತಿಯಲ್ಲಿ ಕೊರತೆಬಿದ್ದ 4000 ರೂ. ಗಳನ್ನು ಯಾವರೀತಿ ಭರ್ತಿಮಾಡಬೇಕೆಂಬ ಮತ್ತು ಶಾಲೋಪಾಧ್ಯಾಯರಿಗೆ ಯಾವ ರೀತಿಯಲ್ಲಿ ಇಕ್ರಿಮೆಂಟುಗಳನ್ನು ಕೊಡಬೇಕೆಂಬ ಬಗ್ಗೆ ಯೋಗ್ಯ ಸಲಹೆ-ಸೂಚನೆಗಳನ್ನು ಕೊಡಲು ಈ ಮಹನೀಯರಿಂದ ಕೂಡಿದ ಉಪಸಮಿತಿಯು ನಿರ್ಣಾಟಾಗಿರುವುದು ಸರಿಯಷ್ಟೆ.....

ಡಾ. ನಾಗನಗೌಡ ಜಿ. ಜೋ. ಅಧ್ಯಕ್ಷರು
ಶ್ರೀ ಸೀತಾರಾಮರೆಡ್ಡಿ. ಶ್ರೀ ಲೋಕಿರೆಡ್ಡಿ
,, ವೆಂಕಟರೆಡ್ಡಿ. ಚಕ್ಕಿಚನ್ನಪ್ಪ

ಪ್ರಾಥಮಿಕ ಶಾಲೋಪಾಧ್ಯಾಯರುಗಳು ತಮ್ಮ ಪ್ರತಿನಿಧಿಗಳ ಮೂಲಕ ಜಿ. ಜೋ. ಅಧ್ಯಕ್ಷರಿಗೆ ಎಲ್ಲಾ ವಿನಂತಿಗಳನ್ನು ನಿವೇದಿಸಿರುವರು. ಹಿಂದೆ ಇಂಕ್ರಿಮೆಂಟುಗಳು ಕೊಟ್ಟಾಗ ಹೊಸದಾಗಿ ಸೇರಿದವರಿಗೆ ಅನುಕೂಲವಾಯಿತಾಗಲಿ ಸೀನಿಯರ್ ಟೀಚರ್ ಗಳಿಗೆ ಅನುಕೂಲವಾಗಿಲ್ಲ. ಈಗಲಾದರೂ ಅಂಥಾ ಅನ್ಯಾಯವಾಗಬಾರದು. ಇನಷಿಯಲ್ ಪೇಯಲ್ಲೇ ಸಾಯುತ್ತಿರುವವರನೇಕರು ಇದ್ದಾರೆ. ಇಂಥಾ ಬಡ ಕುಟುಂಬದ ಸೀನಿಯರ್ ಟೀಚರುಗಳಿಗೂ ಸಹ ಅನ್ಯಾಯವಾಗದಂತೆ ಹಿಂದೆ ಬಾಕಿಬಿದ್ದವುಗಳನ್ನು ಕೂಡ ಕೊಡಿಸಬೇಕೆಂದು ಪ್ರಾರ್ಥನೆ.

ಒಬ್ಬ ಸೀನಿಯರ್ ಉಪಾಧ್ಯಾಯ.

ಜಿಲ್ಲಾಬೋರ್ಡು ಉಪಸಮಿತಿಯವರಿಗೊಂದು ಸಲಹೆ.

ಉಪಯೋಗವಿಲ್ಲದ ಶಾಲೆಗಳನ್ನು ಮುಚ್ಚಿರಿ.

'ನವಭಾರತ' ಸಂಪಾದಕರಿಗೆ–

ನಿಮ್ಮ ಪತ್ರಿಕೆಯಲ್ಲಿ ಸದಾ ಉಪಾಧ್ಯಾಯರ ವಕಾಲತ್ತು ವಹಿಸಿದ ಬರವಣಿಗೆಗಳೇ ಬರುತ್ತವೆ. ಬಹುಸಂಖ್ಯಾಕ ಶಾಲೆಗಳು ಪ್ರಾಣಸ್ಥಿತಿಯಲ್ಲಿರುವವೆಂದೂ ಬಹುಮಂದಿ ಉಪಾಧ್ಯಾಯರು ಕರ್ತವ್ಯ ಶೂನ್ಯರಾಗಿ ವೃಥಾ ಸಂಬಳ ಪಡೆಯುತ್ತಿರುವರೆಂದೂ ನಿಮಗೆ ತಿಳಿಯದೆ ಇಲ್ಲ. ಸರ್ಕಾರದ ಸಿಯಮಗಳನ್ನು ಪೂರೈಸಲು ಮಾತ್ರ (For statistical purposes only) ಶಾಲೆಗಳು ನೃದ್ಧಿಯಲ್ಲಿವೆ ಒಳ್ಳೆಯ ಶಾಲೆಗಳಿಗೂ ಒಳ್ಳೆಯ ಉಪಾಧ್ಯಾಯರಿಗೂ ಪ್ರೋತ್ಸಾಹ ಕೊಡಬಹುದು. ಆದರೆ ಉಪಯುಕ್ತವಿಲ್ಲದ ಶಾಲೆಗಳನ್ನು ಏಕೆ ಇಡಬೇಕು.

ರಾಯದುರ್ಗದ ಬೋರ್ಡು ಅದಿ ಆಂಧ್ರ ಶಾಲೆಯನ್ನು ನಡೆಸುತ್ತಿರುವುದು ಪರಮ ಅನ್ಯಾಯ. ಅದರ ಉಪಾಧ್ಯಾಯರಿಗೆ 28ಸಂಬಳ, ಕೊನೆಗೆ 3ರೂ.ಗೆ ಒಬ್ಬ ಬಾಲಕರಾದರೂ ವಿದ್ಯಾಭ್ಯಾಸ ಪಡೆಯುವುದಿಲ್ಲ. 12 ವರ್ಷಗಳ ಲೆಕ್ಕಹಾಕಿ ಕೇರಿಯಲ್ಲಿ ಎಷ್ಟು ಅಕ್ಷರಸ್ಥರಿರುವರೆಂಬುದನ್ನು ಪತ್ತೆಹಚ್ಚಿರಿ – ಆಗ ನಿಮಗೆ ಗೊತ್ತಾಗುವುದು. ಇಂಥಾ ಶಾಲೆಗಳೆಷ್ಟೋ ಬೋರ್ಡಿನಲ್ಲಿವೆ. ಅವುಗಳನ್ನೆಲ್ಲಾ ಧೈರ್ಯವಾಗಿ ಕಿತ್ತೆದು ಹಾಕಿರಿ. ಒಳ್ಳೆಯ ಶಾಲೆಗಳನ್ನೆಲ್ಲಾ ಇಡಿರಿ. ಯೋಗ್ಯ ಉಪಾಧ್ಯಾಯರಿಗೆಲ್ಲಾ ಇಂಕ್ರಿಮೆಂಟು ಕೊಡಿರಿ. ನಮ್ಮ ಆಕ್ಷೇಪಣೆಯೇನೂ ಇಲ್ಲ. ವಿದ್ಯಾ ಸೆಸ್ (Education Cess) ಹೆಚ್ಚಿಸಿದರೆ ರೈತರು ಕಂಗಲಾಗಿ ಹೋಗಿದ್ದಾರೆಕೂಡುವರಕ್ತಿ ಇಲ್ಲ. ತಿಳಿಯಿರಿ.

30-5-42 .....ರೆಡ್ಡಿ
ರೈತ ಮತ್ತು ಸರ್ವಕ.

ಬಳ್ಳಾರಿ ಜಿಲ್ಲೆ ಕ್ಷಾಮ ಕೇಂದ್ರಗಳು.

(23-4-42ಕ್ಕೆ ಮುಗಿದ ವಾರದಲ್ಲಿ)

ಆದವಾನಿ ತಾಲೂಕಿನ ಮೂಲಸಲ್ಲಿ ನಂದವರಂ, ತಿಮ್ಮಲಾಪುರ, ಮುದ್ದಿ, ಮುಂತಾಲೆಗಳಲ್ಲಿ 16626 ವಯಸ್ಕರು, 1531 ಹುಡುಗರೂ ಕೂಲಿ ಕೆಲಸಮಾಡುತ್ತಿದ್ದರು. ಸುಮಾರು 3000 ಸಾವಿರ ಜನರಿಗೆ ಉಚಿತಾಹಾರ ಏರ್ಪಡಿಸಲಾಯಿತು. ಆಲೂರು ತಾಲೂಕಿನ ಹೆಬ್ಬಟಂ ಟೆಸ್ಟವರ್ಕಿನಲ್ಲಿ 2025 ಜನ ಕೆಲಸಮಾಡುತ್ತಿದ್ದರು. ಸಿರುಗುಪ್ಪೆ ತಾಲೂಕು ರಾವಿಹಾಳು ಮತ್ತು ಮುರವಣಿ ರಸ್ತೆಯ ಕಾರ್ಯದಲ್ಲಿ 1681 ಜನರು ತೊಡಗಿದ್ದರು.

ನೆಯ್ಯಾರರಿಗೆ ಸಹಾಯ ಒದಗಿಸುವ ಆದವಾನಿ ತಾಲೂಕಿನ 5 ಕೇಂದ್ರಗಳಲ್ಲಿ 3404 ಜನರೂ – ರಾಯದುರ್ಗದಲ್ಲಿ 678 ಜನರೂ ಸಹಾಯ ಹೊಂದಿದರು.

೧೯೪೨ರಲ್ಲಿ ಅತಿ ಭಯಂಕರ ಯುದ್ಧ

ಆಫ್ರಿಕಾದ ಪ್ರಧಾನ ಮಂತ್ರಿಗಳಾದ ಫೀಲ್ಡ್ ಮಾರ್ಷಲ್ ಸ್ಮಟ್ಸ್‌ರವರು 1942ರಲ್ಲಿ ಭಯಂಕರ ಯುದ್ಧವಾಗಲಿರುವದೆಂಬುದನ್ನು ಹೇಳುತ್ತಾರೆ. ಪ್ರಪಂಚದ ಎರಡು ದೊಡ್ಡ ದೇಶಗಳು ಮಿತ್ರಪಕ್ಷಕ್ಕೆ ಸೇರಿರುವ ಕಾರಣ ಜಪಾನಿನ ಸೋಲು ಸಿದ್ಧವೆಂದು ಹೇಳಿದರು.

ರಷ್ಯಾ- ಕಾರ್ಮೋವದ ಬಳಿ ರಷ್ಯ ಸೈನ್ಯಗಳನ್ನು ಸುತ್ತುಗಟ್ಟಲು ಜರ್ಮನರು ಯತ್ನಿಸುತ್ತಿರುವರೆಂದು ಅವರು ಪ್ರಯತ್ನಗಳು ಯಶಸ್ವಿಯಾಗಲಿಲ್ಲವೆಂದೂ ತಿಳಿದು ಬಂದಿದೆ.

Visit Royal Cafe
Near Royal Picture Palace
Royal Cafe is ROYAL.

ಬಳ್ಳಾರಿ ಪೇಟೆ ಧಾರಣೆ

29-5-42 ಶುಕ್ರವಾರ

—○—

ಭಂಗಾರ ತೊಲ 1ಕ್ಕೆ		48-0-0
ಸಾವರಿನ್		37-0-0
ಬೆಳ್ಳಿ100 ತೊಲ ರೂ.		75-0-0
ಹರಳೆಮುಂಗಾರಿ 12 ಮಣಕ್ಕೆ		18-0-0
ಹತ್ತಿ ಘಾರಂ		30-0-0
ಅಕ್ಕಿ 1 ರೂ. ಗೆ	3½ ರಿಂದ	4½ ಸೇರು
ಬೇಳೆ ,,		4 ,,
ಗೋಧಿ ,, ...		4 ,,
ಜೋಳ ,,	12 ,,	12½ ,,
ನವಣೆ ,,		17 ,,
ಸಜ್ಜೆ ,,		12 ,,
ನೆಲಗಡಲೆ ...	...	1-4-0
ಸಕ್ಕರೆ(ಮಂಡ್ಯ) 9 ಮಣ		39 ರೂ
ಬೆಲ್ಲ ...	14 ರಿಂದ	16

ವೈಸ್ರಾಯರವರ ಕಾರ್ಯಕಾರಿಣಿ ಸಮಿತಿ.

ಅಲ್ಪ ಸಂಖ್ಯಾಕರನ್ನು ಸಂತೃಪ್ತಿಗೊಳಿಸಲು ವೈಸ್ರಾಯರು ತಮ್ಮ ಕಾರ್ಯಕಾರಿಣೀ ಸಮಿತಿಯಲ್ಲಿ ಒಬ್ಬ ಸಿಕ್ಖರನ್ನೂ ಒಬ್ಬ ಹರಿಜನರನ್ನೂ ಸೇರಿಸಿಕೊಳ್ಳುವರೆಂದು ದಟ್ಟವಾದ ವಾರ್ತೆ ಇದೆ.

—ಚೀನ ಸೈನ್ಯಗಳ ದಂಡನಾಯಕರಾದ ಜನರಲ್ ಸ್ಟಿಲ್‌ವೆಲ (ಅಮೆರಿಕಾದವರು) ರವರು ದೆಹಲಿಗೆ ಬಂದಿರುತ್ತಾರೆ

ಗಾಂಧೀಜೀಯವರ ನೂತನ ಯೋಜನೆ.

ತಮ್ಮ ಯೋಜನೆಯನ್ನು ತಿಳಿಸಿ ತಕ್ಕ ಸಲಹೆ ಸೂಚನೆಗಳನ್ನು ಪಡೆಯಲು ಗಾಂಧೀಜೀಯವರು ಮೌಲಾನಾ ಅಜಾದ್ ಮತ್ತು ಇಂಡಿತ ಜವಹರಲಾಲರನ್ನು ವಾರ್ಧಾಕ್ಕೆ ಕರೆಸಿಕೊಂಡಿರುವರು.

—●—

ಮೈಸೂರು ವಾರ್ತೆಗಳು-

ಶ್ರೀಮನ್ಮಹಾರಾಜ ಜಯಚಾಮರಾಜ ಒಡೆಯರವರು ಜೂಲೈ ತಿಂಗಳು ಮೊದಲನೆಯ ವಾರದಿಂದ ತಮಕೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆಂದೂ, ಪ್ರತಿಯೊಂದು ಜಿಲ್ಲೆಯಲ್ಲೂ 4 ದಿನಗಳು ಸಂಚರಿಸುವರೆಂದೂ ತಿಳಿದು ಬಂದಿದೆ.

ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷವು 25ನೇ ತಾ॥ ಬೆಳಿಗ್ಗೆ ಕಾಂಗ್ರೆಸ್ ಕಾರ್ಯಾಲಯದಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿ ಕಾಂಗ್ರೆಸ್ ಕೆಲಸಗಾರರ ರ್ಯಾಲಿಯನ್ನು ಕೂಡಿಸುವ ನಿರ್ಧಾರ, ಸದಸ್ಯರ ಪ್ರಯೋಜನಕ್ಕಾಗಿ ಸಭೆಗಳನ್ನು ವಿಸರ್ಜಿಸುವುದು ಸ್ವಯಂಸೇವಕ ಸಿಬಿರದ ಸ್ಥಾಪನೆ ಇವುಗಳನ್ನು ಕುರಿತು ನಿರ್ಣಯ ಮಾಡಿದರು.

ಶಿವಮೊಗ್ಗದ ರಾಷ್ಟ್ರೀಯ ಯುವಜನ ಸಂಘದಲ್ಲಿ ಕೂಲಿಕಾರರ ಮೇಲೆ ಕೋಲಾರ – ಭದ್ರಾವತಿಗಳಲ್ಲಿ ಗುಂಡು ಹಾರಿಸಿದ ಪರಿಣಾಮದಿಂದ ಆತ್ಮಕ್ಕೆ ಶಾಂತಿಯನ್ನು ಕೋರಿ ಕೂಲಿಕಾರರು ವ್ಯಪರ್ತಿಪಿದ ಶಾಂತಿ ಅಹಿಂಸೆ ತತ್ವಗಳನ್ನು ಪ್ರಶಂಸಿಸಲಾಯಿತು.

ಗ್ರಾಮಗಳ ಮನರುದ್ಧಾರ ಕಾರ್ಯಕ್ಕಾಗಿ ಸಂಚಾರ್ಷಿಕ ಕಾರ್ಯಕ್ರಮವೆಂದನ್ನು ಅಚರಣೆಯಲ್ಲಿ ತಂದು 80 ಹೋಬಳಿಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿ ಕಾರ್ಯಾರಂಭ ಮಾಡಬೇಕೆಂಬ ಸರ್ಕಾರದ ಯೋಜನೆಯನ್ನು ಸ್ಥಳೀಯ ಸಂಸ್ಥೆಗಳ ಶಾಖೆಗಳ ಸಚಿವರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡರು ತಿಳಿಸಿದರು.

ಭದ್ರಾವತಿ

(ನಮ್ಮ ಸುದ್ದಿಗಾರರಿಂದ)

ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಕೂಲಿಗಾರ ಸಂಘದ ಕಾರ್ಯಕಾರಿಣೀ ಸಮಿತಿ ಸಭೆಯು 24ನೇ ತಾ॥ ಶ್ರೀ ಬಾವರಾಯಣರ ಅಧ್ಯಕ್ಷತೆಯಲ್ಲಿ ಕೂಡಿ ಕೆಲ ನಿರ್ಣಯಗಳನ್ನು ಮಾಡಿತು. ಮೃತರ ಆತ್ಮಕ್ಕೆ ಶಾಂತಿಕೋರುವ ಘಾಯಾಳುಗಳನ್ನು ಪ್ರೇಮದಿಂದ ಚಿಕಿತ್ಸೆಮಾಡಿದ ಭದ್ರಾವತಿ ಶಿವಮೊಗ್ಗ ಡಾಕ್ಟರ್‌ಗಳಿಗೆ ವಂದಿಸುವ, ಸಹಾಯಮಾಡಿದ ಕಾಂಗ್ರೆಸ್ ಸಮಿತಿ ಮತ್ತಿತರರಿಗೆ ಸಲಹೆ ಸೂಚನೆ ಕೊಟ್ಟು ಕೆಲಸಕ್ಕೆ ಹಿಂದಿರುಗುವಂತೆ ಮಾಡಿದ ದಿವಾನರು ಭೂಪಾಳಂ ವಗೈರೇಯವರಿಗೆ ಕೃತಜ್ಞತೆಯನ್ನು ಸಲ್ಲಿಸುವ ಸ್ವತಂತ್ರ ವಿಚಾರಣಾಸಮಿತಿಯನ್ನೇರ್ಪಡಿಸಬೇಕೆಂಬುವ ಮುಖ್ಯ ನಿರ್ಣಯಗಳಾದವು. ಕೂಲಿಗಾರರು ಯುದ್ಧನಿಧಿಗೆ 0-4-0 ಪ್ರಕಾರ ಕೊಟ್ಟಿರುವರು. ಸರಕಾರದವರು ಸ್ವತಂತ್ರ ವಿಚಾರಣಾಸಮಿತಿಯ ವರದಿಯು ಹೊರಬೀಳುವವರೆಗೆ ನೊಕದ್ದಮೆಗಳನ್ನು ಮುಂದುವರಿಸಬಾರದೆಂದೂ, ಸ್ಥಿತಿ ಬಂಧ ಕಾಖ್ಷೆಗಳನ್ನು ಹಿಂದೆಗೆದುಕೊಂಡು ಶಾಂತ ವಾತಾವರಣವನ್ನು ಕಲ್ಪಿಸಬೇಕೆಂದೂ ಆಶಿಸಲಾಗಿದೆ.

—○—

ಬಳ್ಳಾರಿ.

ಅಸಮಧಾನ- ಈ ಜಿಲ್ಲೆಯಲ್ಲಿ ಯುದ್ಧದ ಮುಖ್ಯ ಪ್ರಚಾರಕರನ್ನಾಗಿ ತಹಶೀಲ್ದಾರರಾಗಿದ್ದ ಶ್ರೀ ರಂಗಬ್ರಹ್ಮನ್‌ರವರನ್ನೂ ಮುಖ್ಯ ಉಪನ್ಯಾಸಕರನ್ನಾಗಿ ಆವಣಾನಿ ರಿಜಿಸ್ಟ್ರಾರರಾಗಿದ್ದ ಶ್ರೀ ರಾಮಮೂರ್ತಿಯವರನ್ನು ನಿಯಮಿಸಿರುವರು. 10 ಲಕ್ಷ ಶುದ್ಧ ಕನ್ನಡಿಗರನ್ನುಳ್ಳ ಈ ಜಿಲ್ಲೆಯ ಯುದ್ಧ ಪ್ರಚಾರಕ್ಕೆ ಇಬ್ಬರು ಶುದ್ಧಾಂಧ್ರರ ನಿಯಾಮಕ ಪ್ರಚಾರಕಾರ್ಯಕ್ಕೆಂದು ತಿಂಗಳಿಗೆ ಸಾವಿರಾರು ರೂ. ಖರ್ಚು ಯುದ್ಧ ಸಮಿತಿಯಲ್ಲಿ ಯೋಗ್ಯರಾದ ಶಕ್ತರಾದ, ಕನ್ನಡ - ತೆಲುಗು ಬಲ್ಲವರು ಇದ್ದರೂ, ಇಬ್ಬರೂ ಅಧಿಕಾರಿಗಳನ್ನೇ ಆದರಲ್ಲಿಯೂ ತೆಲುಗರನ್ನೇ ನಿಯಮಿಸಿರುವುದು, ಯುದ್ಧ ಸಮಿತಿಯವರಿಗೆ ಅಸಹ್ಯವನ್ನುಂಟು ಮಾಡಿದೆ. ಇದನ್ನು ಪ್ರತಿಭಟಿಸುತ್ತಾ ಯುದ್ಧ ಸಮಿತಿಯವರು ಗವರ್ನರರಿಗೆ ವಿರೋಧ ಪತ್ರ ಕಳಿಸಿರುವರು. ಮೊನ್ನೆ ಹೈಸ್ಕೂಲ್‌ನಲ್ಲಿ ನಡೆದ ಸಭೆಯಲ್ಲಿ ಅನಧಿಕಾರಿಗಳಲ್ಲಿ ಒಳ್ಳೆಯ ಉಪನ್ಯಾಸಕರಿಲ್ಲವೆಂಬ ಹೇಳಿರುವುದು ವಿಚಿತ್ರ ತರ್ಕವಾಗಿದೆ. ಲೆಕ್ಚರರ್ಸ್ ಇರುವುದೆಲ್ಲಾ ಸಾರ್ವಜನಿಕ ವರ್ಗದಲ್ಲೇ ಎಂಬುದು ಇವರಿಗೆ ತಿಳಿಯದೆ ಇರಲಿಕ್ಕಿಲ್ಲ. ಶ್ರೀ ರಾಮಮೂರ್ತಿಯವರ ಸರ್ಕಾರ ಜಿಲ್ಲೆಗಳ ಆಂಧ್ರ ಭಾಷೆಯು ಬಳ್ಳಾರಿ ಜನರಿಗೆ ಅರ್ಥವಾಗುವಂತಿಲ್ಲ. **ಅಂತೂ ಒಟ್ಟನಲ್ಲಿ ಯುದ್ಧ ಪ್ರಚಾರದ ಉದ್ದೇಶವು ಇದರಿಂದ ಸಾಧಿಸುವುದಿಲ್ಲವೆಂದು ಕಲೆಕ್ಟರವರು ತಿಳಿದರೆ ಒಳ್ಳೆಯದು.**

ಶ್ರೀ ಮಾಧವರಾಯರ ನಿಧನ. ಬಳ್ಳಾರಿಯಲ್ಲಿ ಹಿಂದೂ ಪತ್ರಿಕೆಯ ವಿಜಯನಗರಾದ್ದ ಶ್ರೀ ಹೆಚ್. ಯನ್. ಮಾಧವರಾಯರು 23-5-42ನೇ ಶನಿವಾರ ರಾತ್ರಿ ಗತಿಸಿದರು. ಕಳೆದ ಒಂದು ವರ್ಷದಿಂದ ಇವರು ಕ್ಷಯರೋಗಕ್ಕೆ ತುತ್ತಾಗಿದ್ದರೆಂದು ಗೊತ್ತಾಗಿದೆ. ಮರಣವು ಆಕಸ್ಮಿಕವಾದುದು. ಸಾಯುವಾಗ 40 ವರ್ಷಗಳಿರಬಹುದು. 2 ಗಂಡುಮಕ್ಕಳು, 2 ಹೆಣ್ಣು ಮಕ್ಕಳೂ ಪತ್ನಿಯೂ ಇದ್ದಾರೆ ಮೃತರ ಆತ್ಮಕ್ಕೆ ಶಾಂತಿ ದೊರೆಯಲಿ.

ಹಬ್ಬೋಳಿ (ಸಿರುಗುಪ್ಪೆ ತಾ॥)

ಇಲ್ಲಿ ದಶಬಂಧಂ ಕೆರೆಯ ರಿಪೇರಿಗಾಗಿ ಸುಮಾರು 800 ರೂ- ವರೆಗೂ ಖರ್ಚುಮಾಡಿ ಕೆಲಸವನ್ನು ನಿಲ್ಲಿಸಿರುತ್ತಾರೆ. ಇಂಜಿನಿಯರಿಂಗ್ ಖಾತೆಯವರ ಔದಾಸೀನ್ಯ ಅಯೋಗ್ಯತೆಯು ಇವರಿಂದ ವ್ಯಕ್ತಪಡುತ್ತದೆ. ಕ್ಷಾಮದ ಕೆಲಸವು ನಡೆಯುತ್ತಿದ್ದಾಗ ಇದು ಸುಲಭವಾಗಿ ನೆರವೇರಬಹುದಾಗಿತ್ತು. ಜಿಲ್ಲಾ ಬೋರ್ಡಿನಲ್ಲಿ ಮುಂಜೂರಾದ ಯೋಜನೆಗಳ ಎಸ್ಟಿಮೇಟು ತಯಾರಿಗೆ ಬಹಳ ಕಾಲಹಿಡಿಯುವುದು. ಆದು ತಯಾರಾದ ಮೇಲೆ ಕೆಲಸ ಮುಗಿಸಲು ಇನ್ನೂ ಕಾಲ ಹಿಡಿಯುವುದು. ಸಂಚಾಯ್ತಿ ಬೋರ್ಡಿನ ಹಣದಿಂದ ಗ್ರಾಮದ ನೈರ್ಮಲ್ಯಕ್ಕೆ ಒತ್ತಿ ಸಂಬಂಧಿಸಿದ ಕಾರ್ಯಗಳ ಮುಂಜೂರಿಗೆ ಕಾರ್ಯಾರಂಭಕ್ಕೆ ಜಿಲ್ಲಾ ಬೋರ್ಡಿನ ಎಂಜಿನಿಯರಿಂಗ್ ಖಾತೆಯಿಂದ ಒಹಳ ತಡೆಯಾಗಿದೆ- ಜಿ. ಬೋ. ಅಧ್ಯಕ್ಷರು ಈ ಕೊರತೆಯನ್ನು ನಿವಾರಿಸಬೇಕು.

ಭಾರತವನ್ನು ಕತ್ತರಿಸುವ ಪ್ರಯತ್ನ ಮಹಾಪಾಪ.

[ಟಿ. ಟಿ. ಕೃಷ್ಣ]

ಶ್ರೀ ಸಿ. ರಾಜಗೋಪಾಲಾಚಾರ್ಯರಂತಹ ಜ್ಞಾನವೃದ್ಧರೂ, ವಯೋವೃದ್ಧರೂ ದೇಶಭಕ್ತರೂ ಕಾಂಗ್ರೆಸಿನಂತಹ ಮಹಾ ಸಂಸ್ಥೆಯನ್ನು ಧ್ವಂಸಮಾಡಲು ಮನಸ್ಸು ಮಾಡಿದ್ದು ಪರಮ ಅನ್ಯಾಯ. ಆಚಾರ್ಯರು ಕಾಂಗ್ರೆಸಿನ ಶಿಸ್ತಿಗೆ ಸಂಚಕಾರ ತರುವ ನಡತೆ ತೋರಿಸುತ್ತಿದ್ದಾರೆ. ಮದರಾಸು ಶಾಸನಸಭೆಯ ಕಾಂಗ್ರೆಸ್ ಪಕ್ಷದವರು ತಂದ ನಿರ್ಣಯಕ್ಕೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಒಪ್ಪಿಗೆ ಸಿಗಲಿಲ್ಲ. ಬಹುಮತದ ತೀರ್ಮಾನಕ್ಕೆ ಕಾಂಗ್ರೆಸ್ ಸದಸ್ಯರೆಲ್ಲ ತಲೆಬಾಗಿಸಬೇಡವೇ? ಕಾಂಗ್ರೆಸಿಗೆ ವಿರುದ್ಧವಾಗಿ ಪ್ರಚಾರಮಾಡಲಾರಂಭಿಸುವುದೆ? ಕಾಂಗ್ರೆಸನ್ನು ಧಿಕ್ಕರಿಸುವುದೇ? ಆಚಾರ್ಯರಂತಹವರು ಹೀಗೆಮಾಡಲು ಹೇಗೆ ಮನಸ್ಸು ಮಾಡಿದರೋ ಊಹಿಸುವುದೇ ಕಷ್ಟವಾಗಿದೆ!

ಎರಡನೆಯದಾಗಿ ತಮ್ಮ ವಿರುದ್ಧ ಪ್ರಚಾರವಲ್ಲಿ ಆಚಾರ್ಯರು ಬೆಳಗುತ್ತಿರುವ ತರ್ಕ ಹಾಸ್ಯಾಸ್ಪದವಾಗಿದೆ. ಹುಡುಗರು ಸಹ ಇಂತಹ ಉದಾಹರಣೆಗಳನ್ನು ಕೊಡುವುದಿಲ್ಲ. ಇಲ್ಲಿಲ ಉದಾಹರಣೆಗಳನ್ನು ತೋರಿಸಲು ನಮಗೆ ಇಷ್ಟವಿಲ್ಲ.

ಕಾಂಗ್ರೆಸ್ ವಿಚಾರದಲ್ಲಿ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಆಚಾರ್ಯರಿಗೆ ಉತ್ತರ ಕೊಟ್ಟು ಅವರ ಹೇಳಿದು ತಪ್ಪೆಂದು ತೋರಿಸಿದ್ದಾರೆ. ಗಾಂಧೀಜಿಯವರು,

"ನಾನು ಹೇಳಿದ ಮಾತಿನ ಅರ್ಥ ರಾಜಾಜಿಯವರು ಹೇಳುವಂತೆ ಅಲ್ಲ"

ಎಂಬುದಾಗಿ ವಿವರಿಸಿದ್ದಾರೆ:

"ನನ್ನ ನೆರೆಮನೆಯ ವಾಪಕಾರ್ಯ ಮಾಡದಂತೆ ಮಾಡಲು ನಾನು ಶಕ್ತನಲ್ಲ ವೆಂಬ ತತ್ವವನ್ನು ಸ್ಥಾಪಿಸುವುದೇ ನನ್ನ ಹೇಳಿಕೆಯ ಉದ್ದಿಶ್ಯ. ನೆರೆಯವನು ಸಾಪಕರ್ಮ ಮಾಡಿದ್ದಾಡೆ, ಆಚಾರ್ಯರು ಅದರ ಹೊಣೆಗಾರಿಕೆಯನ್ನು ಹೋರಲು ಸಿದ್ಧರಾಗಿದ್ದಾರೆ. ನಾನು ಅದಕ್ಕೆ ಸಿದ್ಧನಾಗಿಲ್ಲ. ಅಷ್ಟೇ ಅಲ್ಲ. ನೂರನೆಯವನೊಬ್ಬನಿದ್ದು ಒಬ್ಬರಮೇಲೊಬ್ಬರನ್ನು ಎತ್ತಿ ಕಟ್ಟುವವರೆಗೆ ಏಕಮತ್ಯವೆಂಬುದು ಕನಸಿನ ಮಾತೆಂಬುದು ನನ್ನ ಖಂಡಿತಾ ಭಿಪ್ರಾಯ. ಕೃತಕವಾದ ಈ ಗುಂಪುಗಳನ್ನು ಆ ಮೂರನೆಯವರು ಮಾಡಿದರು. ಆ ಗುಂಪುಗಳನ್ನು ಹಾಗೇ ಉಳಿಸುವುದರಲ್ಲಿ ಅವರು ಆಸಕ್ತರಾಗಿವ್ದಾರೆ. ಮೂರನೆಯವನಿರುವನರೆಗೆ ಗೊಣಗುಟ್ಟುವ ಹಿಂದುಗಳೂ, ಮುಸಲ್ಮಾನರೂ, ಸ್ವಹಿತ ಸಾಧನೆಯಲ್ಲೇ ಮನಸ್ಸುಳ್ಳ ಎಲ್ಲಗುಂಪುಗಳೂ, ಪ್ರಕೃತಿಗಳೂ ಎಲ್ಲ ಅವನಕಡೆಯೇ ತಿರುಗಿ. ಅವನ ಕೃಪಾಕಟಾಕ್ಷ ತನ್ನಮೇಲೆ ಬಿದ್ದೀತೇ ಎಂದು ಕಾದಿರುತ್ತವೆ. ಅವರಿಗೆ ದೇಶದ ಸ್ವಾತಂತ್ರ್ಯಕ್ಕಿಂತ ಸ್ವಹಿತವೇ ಹೆಚ್ಚು. ಏಕತೆ ಸಾಧಿಸದೆ ಸ್ವಾತಂತ್ರ್ಯ ಸಿಗದು– ಎಂಬ ನನ್ನ ಮಾತನ್ನು ನನ್ನ ಮುಖಕ್ಕೆ ಯಾರೂ ಎಸೆಯದಿರಲಿ. ಆ ಪಡಿನದ ಒಂದಕ್ಷರವನ್ನೂ ನಾನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ".

ರಾಜಗೋಪಾಲಾಚಾರ್ಯರ ನಡತೆಯಿಂದ ಗಾಂಧೀಜಿಯವರಿಗೆ ಬಹಳ ಬೇಸರ ಪುಂಟಾಗಿದೆ.

"ತಮ್ಮವಾದಸಮರ್ಥನೆಗೆ ರಾಜಾಜಿಗಳು ನನ್ನ ಮಾತನ್ನೆತ್ತಿ ಕೊಟ್ಟಿದ್ದಾರೆ. ಆದರೆ ಸುಣ್ಣಕ್ಕೂ ಬೆಣ್ಣೆಗೂ ಎಷ್ಟು ವ್ಯತ್ಯಾಸವುಂಟೋ ನನ್ನ ಅಭಿಪ್ರಾಯಕ್ಕೂ ರಾಜಾಜಿಯ ಅಭಿಪ್ರಾಯಕ್ಕೂ ಅಷ್ಟು ವ್ಯತ್ಯಾಸವಿದೆ. ಜಪಾನಿಯರನ್ನು ಹೊರಗೆ ಅಟ್ಟಲು ಏಕಮತ್ಯ ಬೇಕು. ಮುಸಲ್ಮಾನರು ರಾಷ್ಟ್ರದಿಂದ ಪ್ರತ್ಯೇಕವಾಗುವ ಶಕ್ತಿಯನ್ನು ಅವರಿಗೆ ಕೊಟ್ಟು ಏಕಮತ್ಯವನ್ನು ಕೊಂಡುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ ಭಾರತವನ್ನು ಕತ್ತರಿಸುವ ಪ್ರಯತ್ನವು ಮಹಾಪಾಪವೆಂದು ನಾನುನಂಬುತ್ತೇನೆ"

ಎಂಬುದಾಗಿ ಅವರು ಹೇಳಿದರು. ಕತೆಯ ನಾಕ್ಯವೊಂದು ಸಾಕು. ಬಹಳ ಅರ್ಥಗರ್ಭಿತವಾಗಿದೆ! ಭಾರತದ ಕೊರಳನ್ನು ಕತ್ತರಿಸಲು ಮುಹಾತ್ಮರು ಅನಕಾಶ ಕೊಡಲಾರರೆಂಬುದು ಖಂಡಿತ.

ವೈಚಿತ್ರ್ಯ

ಸಯಾಮಿದ ಕಾಳಗದ ಮೀನುಗಳು.

(ಕರ್ಮವೀರದ ಕೃಪೆ)

"ಕೋಳಿ ಕಾಳಗ" ಎಂಬ ನಂದ್ಯಾಟವನ್ನು ಹಳ್ಳಿಗಳಲ್ಲಿ ನಡೆಯುತ್ತಿರುವುದನ್ನು ಅನೇಕರು ನೋಡಿರಬಹುದು. ಆದರೆ ಅದೇ ರೀತಿ ಮತ್ಸ್ಯ ಕಾಳಗಗಳೂ ನಡೆಯುತ್ತಿವೆಯೆಂಬುದು ಅನೇಕರಿಗೆ ಗೊತ್ತಿರಲಿಕ್ಕಿಲ್ಲ.

ಸಯಾಮಿನಲ್ಲಿ ಒಂದು ವಿಚಿತ್ರ ಜಾತಿಯ ಪುಟ್ಟ ಮೀನುಗಳಿವೆ. ಅವುಗಳಿಗೆ ಕಾಳಗದ ಮೀನುಗಳೆಂದು ಹೆಸರು. ಈ ಕಾಳಗಗಳಿಗಾಗಿ ಬೇರೆ ಕ್ಷೇತ್ರಗಳನ್ನೇ ಮಾಡಿದ್ದಾರೆ. ಸಯಾಮದಲ್ಲಿ ಅದಕ್ಕಾಗಿ ಅಧಿಕಾರಿಗಳೂ, ಸೋಲು ಗೆಲುವಿನ ತೀರ್ಮಾನಕರು ಸಹ ನೇಮಿಸಲ್ಪಟ್ಟಿದ್ದಾರೆ.

ಈ ಪುಟ್ಟ ಕಾಳಗೋತ್ಸವಕ್ಕಾಗಿ ಬಾಜಾ ಬಜಂತ್ರಿಗಳ ವ್ಯವಸ್ಥೆ ಸಹ ಮಾಡಲಾಗಿರುತ್ತದೆ. ಕಾಳಗದ ಕಣ ಒಂದು ಗಾಜಿನ ತಟ್ಟಿ. ನೆಲದಿಂದ ಸುಮಾರು ೪ ಅಡಿಯ ಮೇಲೆ ಈ ಗಾಜಿನ ತಟ್ಟಿಯನ್ನು ತೂಗ ಹಾಕುತ್ತಾರೆ. ಅದರ ಸುತ್ತಲೂ ಹಾಕಿರುವ ಬೆಂಚು ಕುರ್ಚಿಗಳ ಮೇಲೆ ಕಾಳಗ ನೋಡ್ತಾ ಹಕರು ಬೆಂಬಲದವರು, ಜೂಜಾಡುವವರು, ವೀಕ್ಷಕರು ಇವರೇ ಮುಂತಾದವರು ನುಂಡಿಸಿರುತ್ತಾರೆ.

ಕಾಳಗವಾಡುವ ಮೀನುಗಳನ್ನು ಸಣ್ಣಸುಟ ಬಲೆಗಳಲ್ಲಿ ತಂದು ನೀರಿರುವ ಆ ಗಾಜಿನ ತಟ್ಟಿಯಲ್ಲಿ ಬಿಡುತ್ತಾರೆ. ಬಿಟ್ಟ ತಕ್ಷಣವೇ ಕಾಳಗ ಪ್ರಾರಂಭವಾಗುತ್ತದೆ. ಕಾಳಗ ನಿರತವಾದ ಈ ಮೀನುಗಳು ಅತಿ ಭಯಂಕರ ಕಾಳಗವನ್ನು ಮಾಡುತ್ತವೆ. ವಿಜಯಶಾಲಿಯು ತನ್ನ ಎದುರಾಳಿಯನ್ನು ಸೋಲಿಸಿ ವಿಜಯ ಪತಾಕೆಯನ್ನೇರಿಸುವ ಹೊತ್ತಿಗೆ ಅದು ಸಹ ಸುಸ್ತಾಗಿ ಬಿದ್ದಿರುತ್ತದೆ.

ಈ ಕಾಳಗ ಮೀನುಗಳು ನಿಂತ ನೀರಿನಲ್ಲಿ ಜೀವಿಸುವ ಜಾತಿಯವು. ಅವುಗಳ ಗಾತ್ರ ೨-೩ ಅಂಗುಲಕ್ಕೆ ಮೀರಿ ಇರುವದಿಲ್ಲ. ಈ ಜಾತಿಯ ಗಂಡು ಮೀನಿನ ಮೈಬಣ್ಣ ಒಳ್ಳೇ ತೋಹವರ್ಣದಿಂದ ಥಳಥಳ ಹೊಳೆಯುತ್ತಿರುತ್ತದೆ. ಪೈರಿಸಕ್ಷದ ಇನ್ನೊಂದು ಗಂಡು ಮೀನನ್ನು ಕಂಡ ತಕ್ಷಣ ಅದರ ಮೈಬಣ್ಣ, ಕೋಪ ಜ್ವಾಲೆಯಿಂದ ಮತ್ತಿಷ್ಟು ಮಿಂಚತೊಡಗುತ್ತದೆ.

ಈ ಕಾಳಗ ಮೀನುಗಳ ಪ್ರೇಮ ಕಲಹವೂ ಬಹು ಭಯಂಕರವಾಗಿಯೇ ಇರುತ್ತದೆ. ಮದನೇರಿದ ಗಂಡು ಮೀನು ತನ್ನ ಸುದನಾಂಗಿಯ ಮುಂದೆ ಬಣ್ಣ ಬಣ್ಣಗಳಿಂದ ನೃಯನ್ನು ಮಿನಗಿಸುತ್ತಾ ಅನಳ ಮೆಚ್ಚುಗೆಯನ್ನು ಸಡೆಯಲಿಕ್ಕೆ ನುತ್ತದೆ.

ಬಳ್ಳಾರಿ ಜಿಲ್ಲಾ.

ಆಲೂರು ಸಬ್ ರಿಜಿಸ್ಟ್ರಾರರಿಗೆ ಇಂಥಾ ಹಳ್ಳಿ ಪಾಠವೇಕೆ?

ಆಲೂರು ತಾಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಅನೇಕ ವರ್ಷಗಳಿಂದಲೂ ಕನ್ನಡದ ಪತ್ರಗಳನ್ನು ರಿಜಿಸ್ಟರು ನೂಡುವ ಪಾಡಿಕೆಯೂ ಇದ್ದಿತು. ಅದರಿಂದ ಈಗ ಬಂದಿರುವ ಸಬ್ ರಿಜಿಸ್ಟ್ರಾರವರು ಕನ್ನಡದಲ್ಲಿ ಬರೆದಿರುವ ಪತ್ರಗಳನ್ನು ರಿಜಿಸ್ಟರ್ ಮಾಡಿಸಲು ಸಾಧ್ಯವಿಲ್ಲೆಂದು ನಿರಾಕರಿಸಿರುತ್ತಾರೆ. ಹೊಳಗುಂದಿ ಫಿರ್ಕಾದ 25 ಹಳ್ಳಿಗಳಲ್ಲಿಯೂ ಮತ್ತು ತಾಲೂಕಿನ ಇನ್ನು ಕೆಲವು ಹಳ್ಳಿಗಳಲ್ಲಿ ತೆಲುಗು ಭಾಷೆಯು ಬಹುಸಂಖ್ಯಾತವಾಗಿ ತಿಳಿಯುವದಿಲ್ಲ. ಕನ್ನಡಭಾಷೆಯೊಂದನ್ನೇ ಬಲ್ಲ ರೈತರಿಗೂ - ಇತರರಿಗೂ - ಆಲೂರು ಸಬ್‌ರಿಜಿಸ್ಟ್ರಾರರ ನಿರಾಕರಣೆಯಿಂದ ಬಹಳ ತೊಂದರೆಯಾಗಿರುತ್ತದೆ.

ಈ ಕಾರಣ - 'ನವಭಾರತ' ದ ಮೂಲಕ ಮೇಲ್ಕಾಣಿಸಿದ ಅಧಿಕಾರಿಗಳ ಗಮನವನ್ನು ಈ ವಿಷಯಕ್ಕೆಳೆದು - ಇದನ್ನು ಕೂಡಲೇ ಸರಿಪಡಿಸಬೇಕೆಂದೂ - ಕನ್ನಡದಲ್ಲಿ ಬರೆದು ಬರುವ ಪತ್ರಗಳನ್ನು ರಿಜಿಸ್ಟರ್ ಮಾಡಲು ಆಲೂರು ರಿಜಿಸ್ಟ್ರಾರ್‌ಗೆ ಆಜ್ಞೆಯು ಹೋಗಬೇಕೆಂದೂ - ಆತಿಸುತ್ತೇನೆ.

ಹೆಚ್. ಬಸವನಗೌಡ,
25-3-42. ಹೊಳಲುಗುಂದಿ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸು ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000 ನಿಂರಿದೆ
ಚಾಲ್ತಿಯಲ್ಲಿರುವ ನಿಮಾ ಪಾಲಿಸಿಗಳು	ರೂ. 14,84,44,000 ,,
ಆಸ್ತಿ	ರೂ. 5,80,86,000 ,,

ಕಂಪೆನಿ ಪ್ರಾರಂಭವಾದ ಆಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ವಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ ನಮ್ಮ ಹೆಸರಿನ ಶೀಲು ಮೃತಿಯೊಂದು ವಸ್ತುವಿನ ಮೇಲೆ ಇದುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಹೊಸ ವಿಡಿದ ಕೂಲಿ ಮೇಸ್ಚೆಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ಮೆಸ್ಟ್ ಎಂಡ್ ವಾಚುಗಳೂ ದೊಪ್ಪ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ದಾನಾದಿ ಕೂಡಲೇ ಕೆಳಗಿನವಿಳ್ಳಿ
ವಿವರಗಳನ್ನು ತಿಳಿಯಿರಿ

ನಿಮಗನುಕೂಲವಾದ ಪರೀಕ್ಷೆಗೆ ಏರ್ಪಡಿಸಬಹುದು ಮತ್ತು ಪರೀಕ್ಷೆಯ ಪಾಠ್ಯ ಪುಸ್ತಕಗಳು, ಕಛೇರಿ ಕಾರ್ಡಂಬರಿಗಳನ್ನೆರೆ ದೊರೆಯುತ್ತವೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ಸ್ವೀಕೃತವಾಗಿ ಹೇಳಲಾಗುತ್ತದೆ.

ಟಿ. ಬಿ. ಕೇಶವರಾವ್,
ಕೃಷ್ಣ ಏಜೆನ್ಸಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual
Local 2—0—0
Moffusil 3—0—0

6 Months
Local 1—4—0
Moffusil 2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2.0.0
ಹೊರಗಿನವರಿಗೆ 3.0.0

೬ ತಿಂಗಳಿಗೆ
ಬಳ್ಳಾರಿಯವರಿಗೆ 1.4.0
ಹೊರಗಿನವರಿಗೆ 2.0.0

Nava Bharat, Bellary.

REG. No. M. 3937.

Sri_____

Printed at Vittal Press, Car Street Edited & Published by T. B Keshava Ra Bellary,

Reg. No M. 3937 ವಂದೇ ಮಾತರಂ'

ನವ ಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಭೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕರು:—
ಸಂಚಿಕೆ ೩೭ ಬಳ್ಳಾರಿ ಜೂನ್ ೭ ನೇ ಭಾನುವಾರ ೧೯೪೨. ಟಿ. ಪಿ. ಕೇಶವರಾವ್

ಯುದ್ಧದ ವಾರ್ತೆಗಳು.

ಬರ್ಮಾದಲ್ಲಿ.

ಶತ್ರು ಸೇನೆಗಳು ಬರ್ಮಾಗಡಿಯ ನ್ನು ದಾಟಿ ಭರತಖಂಡವನ್ನು ಪ್ರವೇಶಿಸಿರುವುದಾಗಿ ಜಪಾನರು ಹೇಳುತ್ತಿರುವುದು ನಿಜವಲ್ಲ. ಬ್ರಿಟಿಷರವರು ಅಕ್ಯಾಬ್‌ನಿಂದ ಹಿಂದಕ್ಕೆ ಬಂದ ಮೇಲೆ ಉತ್ತರ ತರಕಾನ ಕ್ಷೇತ್ರದಲ್ಲಿ ಗುಂಪುಗುಂಪಾಗಿ ಜಪಾನ ಸೈನ್ಯಗಳು ಬರುತ್ತಿರುವವರ ಆಧಾರಮೇಲೆ ಅವು ಚಿಟ್ಟಾಗಾಂಗ ಕಡೆಗೆ ತೆರಳುತ್ತಿರಬಹುದೆಂದು ಟೋಕಿಯೋ ಯಂತ್ರಸ್ಥ ತಿಳಿಸಬಹುದಾಗಿ ಒಬ್ಬ ನಿಲಿಟರಿ ಅಧಿಕಾರಿಯು ಹೇಳಿದನು. ಬರ್ಮಾ ಬಂಗಾಲಗಡಿಯು ಚಿಟ್ಟಾಗಾಂಗಿಗೆ ೫೧ ಮೈಲಿ ದೂರದಲ್ಲಿದ್ದು ಈ ರೂಕ್ಷ ಜನ ತಂಡಗಳು ಗಡಿ ಪ್ರದೇಶದಲ್ಲಿ ಕೋಚ ಇತ್ತ ಸರಿದಿರಬಹುದೆಂದು ಹೇಳಲಾಗಿದೆ.

ರಂಗೂನ ನೀಲಿ ಕಳೆದ ಸಾರಿ ಬಾಂಬು ದಾಳಿಯಾಗಿ ಬಂದರೆ ಪ್ರದೇಶದಲ್ಲಿ ಜಪಾನೀ ಮಿಲಿಟರಿ ಭಾಗಗಳಿಗೆ ಬಹಳ ನಷ್ಟವಾಗಿರಬೇಕೆಂದೂ ಹಿಂಕೆಯು ನೂರಾರು ಮೈಲು ಕಾಣುತ್ತಿತ್ತೆಂದೂ ಹೇಳಲಾಗಿದೆ.

ಚೀನಾದಲ್ಲಿ.

ಜಪಾನರು ನಿಷಾಯುಧವನ್ನು ಉಪಯೋಗಿಸಿ ಉತ್ತರ-ಪೂರ್ವ ಮತ್ತು ದಕ್ಷಿಣ ಭಾಗಗಳಿಂದ 10 ಸಾವಿರ ಜಪಾನರು ಚೀನಾನಗರವನ್ನು ಸುಧ್ಯರಾತ್ರಿ ಆಕ್ರಮಿಸಿಕೊಂಡರೆಂದು ಪ್ರಕಟಿಸಲಾಗಿದೆ. ಜಪಾನರು ಲಾಂಚೇನಗರವನ್ನು ಕೂಡ ಹೊಕ್ಕು ಲಂಘೂನಿಂದ ನೈರುತ್ಯಕ್ಕೆ ಸುಗ್ಗುತ್ತಿರುವರು. ಇಂಚಾಂಗ್‌ನಲ್ಲಿ ಚೀನರು ತಿರುಗಿ ಬಿದ್ದಿದ್ದಾರೆ. ಚೆಕಿಯಾಂಗ ಪ್ರಾಂತ್ಯದಲ್ಲಿ ಜಪಾನರ ಮುಂಜೋಟವು ಅಷ್ಟು ಜೋರಾಗಿಲ್ಲ. ಚೀನರು ಅತಿ ಪರಾಕ್ರಮದಿಂದ ಅಧುನಿಕ ಯುದ್ಧಗಳ ಅಧಾನವಿದ್ದರೂ ಕಾದಾಡುತ್ತಿರುವರು. ಶತ್ರುಗಳಿಗೆ ಅಂತರ ಹಾನಿಯಾಗುತ್ತಲಿದೆ. ಚೆಕಿಯಾಂಗ ಚೀನರಲ್ಲಿ 4 ಸಾವಿರ ಜನಾನ ಸೈನಿಕರು ಬಂದಿಳಿದಿದ್ದಾರೆ. ಸಾಟಾಂಗ ಪೋಲೀಗಡಿಯಲ್ಲಿ 11 ದಿನ ನಡೆದ ಕದನದಲ್ಲಿ ಜಪಾನರು 6 ಸಾವಿರ ಮುಂದಿ ಸತ್ತರು ಮತ್ತು ಗಾಯಗೊಂಡರೆಂದು ಪ್ರಕಟನಾಗಿದೆ. 30 ನೆಯ ತಾ॥ 3 ಯುದ್ಧ ನೌಕೆಗಳಲ್ಲಿ ಯುಹಾಂಗ ದ್ವೀಪದಲ್ಲಿ ಜಪಾನ ಸೈನ್ಯಗಳು ಇಳಿದನೆಂದು ಹೇಳಲಾಗಿದೆ. ಅನ್ನಿನ ಸ್ಯಾಂತದಲ್ಲಿ ಚೀನಗರದ ಮೇಲೆ ಚೀನರು ಮುತ್ತಿಗೆಯನ್ನಾರಂಭಿಸಿದ್ದಾರೆ ಕೆಲವು ಮುಖ್ಯ ಸ್ಥಾನಗಳನ್ನು ಹಿಡಿದಿದ್ದಾರೆ.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನು ಸುಲಭದರದಲ್ಲಿ ಸಾದರಪಡಿಸುತ್ತೇವೆ. ಗ್ಯಾರಂಟಿಯಾವ ಕ್ರಾಕ್ಸ್ ಕನ್ನಡಿಗಳು ಪರಿಯಾದ ಬೆಲೆಗೆ ದೊರೆಯುತ್ತವೆ. ಬತವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ

ರಷ್ಯಾದಲ್ಲಿ ಜರ್ಮನರಿಗೆ ಅಷ್ಟೇನೂ ಜಯವು ಲಭಿಸಿಲ್ಲ.

ಕಾರ್ಕೋವ ಭಾಗದಲ್ಲಿ ರಷ್ಯನ ಸೇನಾ ನಾಯಕರಾದ ಮಾರ್ಷಲ ಟೆಮೊಶಂಕರ ನರು ಎರಡು ರುಮೇನಿಯನ್ ಡಿವಿಜನ್ನು ಗಳನ್ನು ನಾಶಪಡಿಸಿದರಂತೆ, ಕಾರ್ಕೋವ ನಗರದ ಸಮೀಪದ ನಗರದಲ್ಲಿ ರಷ್ಯನರು ಭೀಕರವಾದ ಕದನನನ್ನು ನಡೆಸಿರುನರು. ಕಾಕಸಸ್ ಕಡೆಗೆ ಸುಗ್ಗುವ ಪೂರ್ವದಲ್ಲಿ ಗೊಸ್ಕೋವ ಮುತ್ತಬೇಕೆಂದು ನಾಜಿಗಳು ಮಾಡಿಕೊಂಡಿದ್ದ ಹಂಚಿಕೆಯು ಸದ್ಯಕ್ಕೆ ನಿಷ್ಫಲವಾಗಿದೆ. ಕಾರ್ಕೋವ ರಣರಂಗದಲ್ಲಿ ತಮಗೆ ಅಮೃತ ಜಯವಾಯಿತೆಂದೂ ರಷ್ಯನರ ಬಹು ಬಲವು ಸೆರೆಸಿಕ್ಕಿತೆಂದೂ ಜರ್ಮನರು ತಿಳಿಸುತ್ತಾರೆ. ರಷ್ಯನರು ಇದೆಲ್ಲಾ ಉತ್ಪ್ರೇಕ್ಷೆಯೆಂದೂ ನಾಜಿಸೇನೆಯ ಬಲವು ಕುಗ್ಗಿದೆಯೆಂದೂ ತಿಳಿಸುತ್ತಾರೆ. ಜರ್ಮನರು ಹೆಚ್ಚು ಹೆಚ್ಚು ಬಲವನ್ನು ತರುತ್ತಿದ್ದರೂ, ರಷ್ಯನರು ಸುಲಭವಾಗಿ ಸೋಲುವಂತಿಲ್ಲ. ಇಜಂ ಎಂಬಲ್ಲಿ ಇತಿಹಾಸ ಪ್ರಸಿದ್ಧವಾದ ಕದನ ನಡೆಯುತ್ತಲಿದೆ. 15ದಿನಗಳಾಗಿದ್ದರೂ, ಮುಖ್ಯ ನಡಿಯೊಂದನ್ನು ಮಾಟಲು ಅಶಕ್ತರಾಗಿದ್ದಾರೆ.

ರಷ್ಯ ಸುತ್ತಿತರ ಸಹಾಯ ಸಾಮಗ್ರಿಗಳನ್ನೆಲ್ಲ ಮಿತ್ರರ ಹಡಗುಗಳು ರಷ್ಯಾದ ಉತ್ತರ ಭಾಗದ ಒಂದು ಬಂದರನ್ನು ಸುರಕ್ಷಿತವಾಗಿ ಮುಟ್ಟಿವೆಯೆಂಬುವಾಗಿ ಲಂಡನ ವಾರ್ತೆಯು ಹೇಳುತ್ತವೆ. ಜರ್ಮನರ 100 ವಿಮಾನಗಳು ನೇ 25ಂದ 30ರ ವರಿಗೆ ಈ ಹಡಗುಗಳಮೇಲೆ ದಾಳಿಮಾಡಿದವು, ಜರ್ಮನರು 18 ಹಡಗುಗಳನ್ನು ಮುಳುಗಿಸಿದರೆಂಬುದು ಸುಳ್ಳು.

ನವ ಭಾರತಕ್ಕೆ
ಚಂದಾದಾರರಾಗಿರಿ!

ಸಂಸ್ಥಾನೀಕರು ರಾಜ್ಯತ್ಯಾಗ ಮಾಡಬೇಕೇ?

ಮಹಾತ್ಮಾ ಗಾಂಧಿಯವರ ಅಭಿಪ್ರಾಯ.

—×—

ಪ್ರೊಫೆಸರೊಬ್ಬರು ಹೀಗೆ ಬರೆಯುತ್ತಾರೆ—

"ಬ್ರಿಟಿಷರಿಗೆ ಹೊರಟು ಹೋಗಲು ನೀವು ಸಲಹೆ ಕೊಟ್ಟಿರುತ್ತೀರಿ. ಸಂಸ್ಥಾನಿಕರ ಬಗ್ಗೆ ನೀವು ಹೀಗೆ ಹೇಳುತ್ತೀರಿ. "ಸಂಸ್ಥಾನಿಕರು ಮತ್ತು ಅವರ ಸಲಹೆಗಾರರು ತಮ್ಮ ಹಿತದೃಷ್ಟಿಯಿಂದ ಮತ್ತು ಹಿಂದುಸ್ತಾನದ ಹಿತದೃಷ್ಟಿಯಿಂದ, ಅನೇಕ ಸಂಸ್ಥಾನಗಳಲ್ಲಿ ಆರಾಜ್ ಕತೆಯ ಹೊರತು ಬೇರೆ ವಿವೇಚನೆಯಿಂದ ಕರೆಯಿಸಿಕೊಳ್ಳದಿವ್ಯ ಮನೋವೃತ್ತಿಯನ್ನು ನಿಯಂತ್ರಿಸಲು ಪ್ರಯತ್ನಿಸುವರೆಂದು ನಾನು ಆಶಿಸುತ್ತೇನೆ. ಬ್ರಿಟಿಶರಿಗಿಂತ ಹೆಚ್ಚು ದಿನಗಳಿಂದ ನಡೆದು ಬಂದ ಮತ್ತು ಆಳವಾಗಿ ಬೇರೂರಿದ ಪ್ರಜಾಪೀಡೆಯನ್ನು ನಡೆಸಿದ ಈ ಸಂಸ್ಥಾನಿಕರಿಗೆ ಕೂಡಲೆ ರಾಜ್ಯತ್ಯಾಗ ಮಾಡಲು ನೀನೇಕೆ ಹೇಳುವದಿಲ್ಲ?

ಸಂಸ್ಥಾನಿಕರು ಮತ್ತು ಸಾರ್ವಭೌಮರುಳ್ಳಿದ್ದ ಭೇದವನ್ನು ಪ್ರೊಫೆಸರು ತಿಳಿದುಕೊಳ್ಳವಿಪ್ಪದಕ್ಕಾಗಿ ನನಗೆ ಆಶ್ಚರ್ಯವಾಗುತ್ತಿದೆ ಸಂಸ್ಥಾನಿಕರು (ಈ ಗಿನ) ಈ ನಾಮ ಭೌಮ ಸರ್ಕಾರದ ಮಾಂಡಲಿಕರು ಇವರಿಂದಲೆ ಇವರಿಗೆ ಅಧಿಕಾರ. ಸಂಸ್ಥಾನಿಕರು ರಾಜ್ಯತ್ಯಾಗ ಮಾಡಿದರೆ ಅವರ ಆಳಿಕೆ ಕೊನೆಗೊಳ್ಳುವದಿಲ್ಲ. ಮತ್ತೊಬ್ಬನು ಕೂಡಲೆ ಆ ಸ್ಥಳವನ್ನಾಕ್ರಮಿಸುವನು; ಮತ್ತೊಬ್ಬನು ಆ ಸ್ಥಳವನ್ನೆಲ್ಲದಿದ್ದರೆ ಬ್ರಿಟಿಷರೆ ಆ ಆಡಳಿತೆಯನ್ನು ನಡೆಸಿಕೊಳ್ಳುವರು. ಆದುದರಿಂದ ಯಾವದೇ ದೃಷ್ಟಿಯಿಂದ ನೀವು ನೋಡಿದರೂ ಬ್ರಿಟಿಷ್ ಸರ್ಕಾರದವರು ತಮ್ಮ ಸ್ವಜಾವಕ್ಕನುಗುಣವಾಗಿ ಸತ್ಯದ ಮಾರ್ಗವನ್ನು ಸ್ವೀಕರಿಂಧಿಸುತ್ತಿರುವರೆಂಬುದು ನಿಮಗೆ ಸೊತ್ತಾಗುವದು.

ನಮ್ಮ ಬಡ ರೈತರ ಸಾಲದ ಹೊರೆ

ಕಳೆದ 150 ವರ್ಷಗಳಲ್ಲಿ ಭಾರತದ ಬಡ ರೈತರ ಸಾಲದ ಹೊರೆ ಮೇರೆಮೀರಿ ಹೋಗಿದೆ. ಬ್ರಿಟಿಷ ಭಾರತದಲ್ಲಿರುವ ರೈತರ ತಲೆಯ ಮೇಲೆ ಸುಮಾರ 900 ಕೋಟಿ ರೂಪಾಯಿಗಳಷ್ಟು ಸಾಲದ ಭಾರ ವಿದೆಯೆಂದು ಆರ್ಥಿಕ ತಜ್ಞರು ಲೆಖ್ಖಹಾಕಿದ್ದಾರೆ. ಈ ಸಾಲವ ಹೊರೆ ಅಪ್ಪನಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ, ಈ ರೀತಿ ಬೆಳೆಯುತ್ತ ಹೋಗಿದೆ.

ಪ್ರಾಂತಾನುಗುಣ ಸಾಲದ ಭಾರ ಈ ರೀತಿ ಇದೆ

ಪ್ರಾಂತ (ಇಷ್ಟು ಕೋಟಿ ರೂ. ಸಾಲ)	
ಮುಂಬಯಿ (ಸಿಂಧಪ್ರಾಂತವೂ ಸೇರಿ)	81
ಮದ್ರಾಸು	150
ಬಂಗಾಲ	100
ಸಂಯುಕ್ತ ಪ್ರಾಂತ	123
ಪಂಜಾಬು	137
ಮಧ್ಯಪ್ರಾಂತ ಮತ್ತು ಬೀರಾರು	365
ಬಿಹಾರು ಮತ್ತು ಓರಿಸಾ	155
ಆಸಾಮು	22

ಹೀಗೆ ಸಾಲದ ಮೇಲೆ ಸಾಲ ಏರುತ್ತಿರುವದಕ್ಕೆ ಅನಿದ್ಯೆ ಅಜ್ಞಾನಗಳೇ ಮುಖ್ಯ ಕಾರಣವೆನ್ನಬಹುದು. ಜಗತ್ತಿನ ಜನಾಂಗದಲ್ಲಿ ಅನಕ್ಷರಸ್ಥರು ಎಲ್ಲೆಲ್ಲಿ ಹೆಚ್ಚಿರುವರೋ ಅವನ್ನು ನೋಡಿರಿ:

ದೇಶ	ನೂರಕ್ಕೆ ಇಷ್ಟು ಜನ ಅನಕ್ಷರಸ್ಥರು
ಇಂಗ್ಲೆಂಡ್ ಮತ್ತು ವೇಲ್ಸ್	3
ಸ್ಕಾಟ್ಲೆಂಡ್	3
ಸ್ವಿಜರ್ಲೆಂಡ್	4
ಜಪಾನು	5
ಅಮೇರಿಕ	43
ಕೆನಡ	51
ಬೆಲ್ಜಿಯಮ್	70
ಸ್ಪಾನ್ಸ್	82
ಇಟಲಿ	280
ರಷಿಯ	433
ದಕ್ಷಿಣ ಆಫ್ರಿಕಾ	903
ಹಿಂದುಸ್ತಾನ	905
ಇಜಿಪ್ತ್	920

ವಿದ್ಯಾನುಗುಣವಾಗಿ ನೋಡಿದರೆ

ಸಾರ್ಸಿಗಳಲ್ಲಿ	ನೂರಕ್ಕೆ	79
ಕ್ರೈಸ್ತರಲ್ಲಿ	,,	28
ಬರ್ಮಿಗಳಲ್ಲಿ	,,	36
ಸೀಕರಲ್ಲಿ	,,	9
ಹಿಂದುಗಳಲ್ಲಿ	,,	8
ಮುಸ್ಲೀಮರಲ್ಲಿ	,,	6

ಜನ ಅಕ್ಷರಸ್ಥರಿದ್ದಾರೆ. ಆಂದರೆ ಹಿಂದೀ ಮುಸ್ಲಿಂ, ಶೇಕ ಜನಾಂಗದವರಲ್ಲಿ ನೂರಕ್ಕೆ ಹತ್ತು ಜನರೂ ಅಕ್ಷರಸ್ಥರಿಲ್ಲವೆಂದಾಯಿತು.

ಅಜ್ಞಾನ ನಿವಾರಣೆಗೆ ಅಕ್ಷರತೆಯು ಅಪಾರ ಸಹಾಯವಾಗುತ್ತದೆ. ನಮ್ಮ ರೈತರು ಅಕ್ಷರಸ್ಥರಾದಷ್ಟೂ ಕುರುಡು ನಂಬಿಕೆಗಳಿಂದ ದೂರವಾಗಿ, ವ್ಯರ್ಥ ಧನವ್ಯಯ ಮಾಡುವದು ನಿಂತು, ಮುಂದಿನೆ ಹೆಚ್ಚಾಗಿ, ಸಾಲ ನೀಗಿ ಸುಖವಾಗಿ ಬಾಳಲು ಸಹಾಯಕವಾಗುತ್ತದೆ.

ಓರಿಯಂಟಲ್

ಸಂಪೂರ್ಣ ರಕ್ಷಣೆ, ಪೂರ್ಣ ಭರವಸೆ

ಈ 68 ವರ್ಷಗಳ ಜೀವನದಲ್ಲಿ **ಓರಿಯಂಟಲ್** ಕಂಪನಿಯು ತನ್ನ ಲಕ್ಷಾಂತರ ವಿಮಾದಾರರಿಗೆ **ಶಾಂತಿ ಮತ್ತು ಯುದ್ಧಕಾಲಗಳೆಲ್ಲೂ** ಸಹಾಯಮಾಡಲು ಪಿತಾಮಹರ ಶ್ರೇಷ್ಠ ತತ್ವಗಳ ಅನುಸರಣೆಯಿಂದ ಸೌಲಭ್ಯಗಳನ್ನು ನಿಮಗೂ **ಓರಿಯಂಟಲ್** ಒದಗಿಸಲು ಸಿದ್ಧವಿದೆ.

ಜಲ್ಲಿಯನವನಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26ಕೋ. ಮೀರಿ
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು 85½ ಕೋಟಿ
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5 ಕೋಟಿ
ನಿಧಿಯ ದ್ರವ್ಯ ರು 30 ಕೋಟಿ

ಗವರ್ನಮೆಂಟು ಸೆಕ್ಯೂರಿಟಿ ಲೆಫ್ ಅಶ್ಯೂರೆನ್ಸ ಕಂಪನಿ ಲಿಮಿಟೆಡ್,
ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ.

ಶಾಖೆ:- ೧೩೪ ಲಾಯಡ್ಸರೋಡ್ ಹೋಸ್ಪು ಬಾಳ್ಸು ನಂ. ೪ ಮದ್ರಾಸು
ಇನ್ಸ್ಪೆಕ್ಟರರ ಆಫೀಸು:- **೩೧೨ ರಾಪರ್ಟ್ಸ್ ಗೇಟ್ ಬ್ರಾಸಪೇಟೆ ಬಳ್ಳಾರಿ.**

ಭಾನುವಾರ, ಜೂನ್ 7

ಮದ್ರಾಸು
ವೀರಶೈವ ವಿದ್ಯಾವರ್ಧಕ ಸಂಘ
ಉಚ್ಚ ಶಿಕ್ಷಣ.

ಕಳೆದ ಕಾಲು ಶತಮಾನದಿಂದ ಬಳ್ಳಾರಿ ನಗರವಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಮಹತ್ವವನ್ನು ಕೊಟ್ಟು ಬಳ್ಳಾರಿಯಲ್ಲಿ ಕನ್ನಡವು ಅಳಿಯದಂತೆ ಮಾಡಿದ ಕೀರ್ತಿಯು ಮದ್ರಾಸು ವೀರಶೈವ ವಿದ್ಯಾವರ್ಧಕ ಸಂಘಕ್ಕೆ ಸಲ್ಲಬೇಕಾಗಿದೆ. ಸಮಾಜದಲ್ಲಿ ಅನೇಕ ಯುವಕರು ಉಚ್ಚ ಶಿಕ್ಷಣ ಹೊಂದಲಿಕ್ಕೆ ಧನ ಸಹಾಯಮಾಡಿ ಅವರಿಗೆ ನವಕರಿ ದೊರೆತನಂತರ ಕೊಟ್ಟ ಹಣವನ್ನು ಪುನಃ ಪಡೆಯುವುದು ಸಂಘದ ನಾಡಿಕೆಯಾಗಿದೆ.

ಬಳ್ಳಾರಿಯಲ್ಲಿ ಹಿಂದಿನ ಕೆಲ ಮುಖಂಡರ ಅಜಾಗರೂಕತೆ ಔನಾಶೀಸ್ಯಗಳಿಂದ ಅಸಂತಪುರಕ್ಕೆ ಕಾಲೇಜಿನ ಲಭ್ಯನಾಯಿತು. ದತ್ತಮಂಡಲದ 5 ಜಿಲ್ಲೆಗಳಲ್ಲಿ ಬಳ್ಳಾರಿಗೆ ಪ್ರಥಮ ಸ್ಥಾನ ದೊರೆಯುವುದೇಕಾಗಿತ್ತು ಆದರೆ ಬಳ್ಳಾರಿಯು ಎಲ್ಲಾ ವಿಷಯಗಳಲ್ಲೂ ಹಿಂದೂಡಲ್ಪಡುತ್ತಿರುವುದು ನಿಜಾದಕರ ವಾಗಿದೆ.

ಇಂಥಾ ಪರಿಸ್ಥಿತಿಯಲ್ಲಿ ವಿದ್ಯಾವರ್ಧಕ ಸಂಘದವರು 8-6-42 ರ ದಿನ ಉಚ್ಚ ಶಿಕ್ಷಣಕ್ಕಾಗಿ ಹೈಸ್ಕೂಲ್ ಆರಂಭಿಸುವ ಉದ್ದಿಶ್ಯವನ್ನು ಸಫಲಗೊಳಿಸಿದುದು ಪ್ರಶಂಶಾರ್ಹನಾಗಿದೆ. ವಿದ್ಯಾವರ್ಧಕ ಸಂಘದವರು ತಕ್ಕ ಸಮಾಯ ಸನ್ನಿವೇಶಗಳನ್ನೊ ದಗಿಸಿಕೊಂಡು ಕಾಲೇಜನ್ನು ಕೂಡ ತೀಕ್ರ ವಲ್ಲಿಯೇ ಸ್ಥಾಪಿಸಲೆಂದು ಆಶಿಸುವೆವು

ಭಾರತೀಯರಿಗೆ
ಬ್ರಿಟಿಷರ ಅಳಿಕೆಯೂ ಬೇಡ.

ಜಪಾನಿನ ಒಡೆತನವೂ ಬೇಡವೆಂದು ಸರ್ಕಾರ ನಲ್ಲಭಭಾಯಿ ಪಟೇಲರವರು ಬಾರ್ಡೋಲಿಯಲ್ಲಿ ನೂಲುವ ಕೇಂದ್ರವ ಸ್ಥಾರಂಭೋತ್ಸವನ್ನು ನಡೆಸುತ್ತಾ ಕಳೆದ ಭಾನುವಾರ ತಿಳಿಸಿ

ಬರ್ಮಾದಲ್ಲಾದ ಅನರ್ಥ
ಕಾಲಮೀರಿದ ಮೇಲೆ ಶಸ್ತ್ರ ತೀದುಕೊಂಡರು.
ಚೀನರ ಸಲಹೆ ಸ್ವೀಕೃತವಾಗಲಿಲ್ಲ.

ಕಳೆದ ೧೫ ದಿನಗಳಲ್ಲಿ ಬರ್ಮಾ ಕದನಕ್ಕೆ ಸಂಬಂಧಪಟ್ಟ ನಾಲ್ಕು ಅಧಿಕಾರಿಗಳು ಮಾತನಾಡಿದ್ದಾರೆ. ಜನರಲ್ ವೇವೆಲ್, ಅಲೆಗ್ಜಾಂಡರು, ಸ್ಟಿಲ್‌ವೆಲ್ ಮತ್ತು ಸರ್ ರಿಚರ್ಡ್ ಓಕೆನ್ನರ್ ಇವರೇ ನಾಲ್ವರು ಸ್ಟಿಲ್‌ವೆಲ್‌ರವರಂತೂ ಕೊಂಚವೂ ಮುಚ್ಚು ಮರೆಯಿಲ್ಲದೆ ಮಿತ್ರಸೇನೆಗಳು ಬರ್ಮಾದಲ್ಲಿ ಎಟು ತಿಂದ ಬಗೆಯನ್ನು ವರ್ಣಿಸಿದರು

ಬರ್ಮಾದಲ್ಲಿದ್ದ ಬಹುಮುಟ್ಟಿನ ಸೇನೆಯನ್ನು ಭಾರತಕ್ಕೆ ಕರೆಸಿಕೊಳ್ಳಲು ಸಾಧ್ಯವಾಗದೂ ಮತ್ತು ಬರ್ಮಾದಲ್ಲಿ ಪ್ರತಿಭಟಿಸಿದ್ದರಿಂದ ಭಾರತದ ರಕ್ಷಣೆ ನಿರ್ಲಾಡಿಗೆ ಕಾಲಾವಕಾಶ ಸಿಕ್ಕಿದುದೂ ತೃಪ್ತಿಕರವಾದ ಅಂಶಗಳೆಂದು ಬ್ರಿಟಿಷ್ ಮಿಲಿಟರಿ ಅಧಿಕಾರಿಗಳು ತಿಳಿಸುತ್ತಾರೆ ಆಂತೂ ಬರ್ಮಾದಲ್ಲಿ ಅಪಾರ ಸಂಗ್ರಾಮ ವಸ್ತುಗಳನ್ನು ಬಿಟ್ಟು ಬರಬೇಕಾಯಿತು ಇಲ್ಲಿ ಕೂಡ ಅಧಿಕಾರಿಗಳು ನಷ್ಟದ ಪ್ರಮಾಣವನ್ನು ತಗ್ಗಿಸುವ ಭಾವನೆಯನ್ನೇ ತೋರ್ಪಡಿಸುತ್ತಿದ್ದಾರೆ ಬಿಟ್ಟು ಬಂದ ಲಾರಿಗಳಲ್ಲೂ ಟ್ಯಾಂಕುಗಳಲ್ಲೂ ಜೀವನೇ ಇರಲಿಲ್ಲವಂತೆ ಆದ್ದರಿಂದ ಅವು ಅನುಪಯುಕ್ತವಾದುವೆಂಬುದು ಅವರವಾದ. ಬರ್ಮಾದ ಎಣ್ಣೆ ಗಣಿಗಳನ್ನು ಪೂರ್ಣವಾಗಿ ನಾಶಮಾಡಲಾಗಿದೆಯೆಂದೂ ಅವುಗಳಿಂದ ಒಂದು ಟನ್ನು ಎಣ್ಣೆ ತೆಗೆಯ ಬೇಕಾಗಿದ್ದರೂ ಜಪಾನರಿಗೆ ಒಂದು ವರ್ಷ ಬೇಕಾಗುವುದೆಂದೂ ಅವರು ಹೇಳುತ್ತಾರೆ.

ಆದರೆ ಹಲವು ಅಸಂಬದ್ಧ ಹೇಳಿಕೆಗಳನ್ನು ಸರಿಪಡಿಸಬೇಕಾಗಿದೆ ಮತ್ತು ಹಲವು ಸಂದೇಹಗಳನ್ನೂ ನಿವಾರಿಸಬೇಕಾಗಿದೆ. "ಜಪಾನರು ಬರ್ಮಾವನ್ನು ಹಿಡಿಯಲು ಆರು ತಿಂಗಳಾಯಿತು! ಈ ಕಾರ್ಯವನ್ನು ಸಾಧಿಸಬೇಕಾದರೆ ಅವರಿಗೆ ಸಾಕಾಗಿ ಹೋಯಿತು" ಎಂಬುದಾಗಿ ಹೇಳಲಾಗುತ್ತಿದೆ ಆದರೆ ಇದೆ 6 ತಿಂಗಳ ಕಾಲವಲ್ಲಿ ಜಪಾನರು ಮಲಯಾ ಡಚ್ ಇಂಡೀಸ್ ಫಿಲಿಪೈನ್ಸ್‌ಇಲ್ಲೆಲ್ಲ ಹೊಡೆದಾಡಲಿಲ್ಲವೇನೆ! ಜಪಾನರು ತಮ್ಮ ಗಮನವನ್ನು ಬರ್ಮಾದ ಮೇಲೆ ಕೇಂದ್ರಿಕರಿಸಿದ ಕೂಡಲೇ ಬ್ರಿಟಿಷರು ತ್ವರೆಯಿಂದ ಹಿಂದಕ್ಕೆ ಸರಿದರು.

ಅಧಿಕಾರಿಗಳು ತಪ್ಪನ್ನು ಬಹಳ ಸಾವ ಕಾರಣಾಗಿ ಅರಿತರು ಮರುಭೂಮಿಯ ಕದನಕ್ಕೆ ತರಬೇತಾದ ಸೈನಿಕರು ಅರಣ್ಯದಲ್ಲಿ ಹೊಡೆದಾಡಲಾರರೆಂಬುದನ್ನು ಮಲಯಾದಲ್ಲಿ ಸೈನ್ಯಾಧಿಕಾರಿಗಳು ಮೊದಲು ತಿಳಿದುಕೊಳ್ಳಲಿಲ್ಲ. ಬರ್ಮಾದಲ್ಲಿ ಒಳ್ಳೆಯ ರಸ್ತೆಗಳಿಲ್ಲವಾದ್ದರಿಂದ ಶಸ್ತ್ರ ಬಂಡಿಗಳನ್ನು ಉಪಯೋಗಿಸುವುದು ಸಾಧ್ಯವಿರಲಿಲ್ಲವೆಂದು ಈಗ ಒಪ್ಪಿಕೊಳ್ಳಲಾಗಿದೆ. ಆದರೆ ಶತ್ರುಗಳಿಗೆ ಇದುಮೊದಲೇ ಗೊತ್ತಿದ್ದಂತಿದೆ. ಅವರು ಸಾಮಾನುಗಳನ್ನು ಹೊರಲು ಹೇಸರ ಕತ್ತೆಗಳನ್ನೇ ನಂಬಿದರು ಎತ್ತಿನ ಬಂಡಿಗಳನ್ನೇ ಉಪಯೋಗಿಸಿದರು. ಅರ್ಧ ಶತಮಾನ ಹಿಂದಿನಿಂದಲೂ ಬರ್ಮಾದಲ್ಲಿ ಪ್ರಭುತ್ವ ನಡೆಸುತ್ತಿರುವ ಬ್ರಿಟಿಷರಿಗೆ ವಾಹನ ಸೌಕರ್ಯ ಸಮಸ್ಯೆಯನ್ನು ಬಿಡಿಸಲು ಶತ್ರುಗಳಿಗಿಂತ ಹೆಚ್ಚಿನ ಪರಿಶ್ರಮ ವಿರಲೇಬೇಕು ಆದರೆ ಅದನ್ನವರು ತೋರಿಸಲಿಲ್ಲ.

ಬರ್ಮಾದಲ್ಲಿರುವ ನಮ್ಮ ಸೇನೆಗೆ ಹೆಚ್ಚಿನ ಸರಪರಾಜು ಬಂದಿದ್ದರೆ ಅವನ್ನು ಉಳಿಸಿಕೊಳ್ಳಬಹುದಾಗಿತ್ತೇ ಹೇಗೆಂಬ ವಿಚಾರದಲ್ಲಿ ಸೈನ್ಯಾಧಿಕಾರಿಗಳಲ್ಲೇ ಭಿನ್ನಾಭಿಪ್ರಾಯವಿದೆ ಸಾಮಾನುಗಳನ್ನು ಕಳಿಸಲು ಸಾಧ್ಯವಿಲ್ಲವೆಂದೂ ಮತ್ತು ಹಿಂದಕ್ಕೆ ಸರಿಯುವುದು ಅನಿವಾರ್ಯವೆಂದೂ ಕಂಡುಬಂದಾಗ ಚೀನಾರಿಗೆ ಈ ವಿಚಾರವನ್ನು ತಿಳಿಸಲಾಯಿತು. ಆದರೆ ಸಂಗ್ರಾಮದ ಆರಂಭದಲ್ಲಿ ಚೀನರು ಸಹಾಯನೀಡಲು ನುಂಪೆ ಬಂದಾಗ ಅವನ್ನು ಪರಿಸ್ಥಿತಿ ದುರುಪಯೋಚನೆಯವಾದುದು. ಬ್ರಿಟಿಷರ ಕತ್ತಲು ಉಗ್ರವಾದಾಗ ಚೀನರು ಸಹಕರಿಸಿದುದರಿಂದ ಕೆಲವು ಕಡೆ ಬಹಳ ಒಳ್ಳೆಯದಾಯಿತು. ಜಪಾನರನ್ನು ಉಗ್ರವಾಗಿ ವಿರೋಧಿಸಲು ಹೆಲವು ಚೀನಾ ಪಡೆಗಳು 3000 ಮೈಲಿ ದೂರದಿಂದ ಬಂದವೆಂಬುದು ಅನೇಕ ಭಾರತೀಯರಿಗೆ ಗೊತ್ತಿರಲಾರದು. ಬ್ರಿಟಿಷರು ತಮ್ಮ ಕಾರ್ಯಮಾರ್ಗವನ್ನೇ ಬದಲಾಯಿಸುವರೆಂಬುದು, ಶತ್ರುಗಳನ್ನು ಎದುರಿಸುವುದನ್ನು ಬಿಟ್ಟು ಹಿಂದೆ ಸರಿಯುವರೆಂದು ಚೀನರಿಗೆ ಸಕಾಲದಲ್ಲಿ ಗೊತ್ತಾಗಿದ್ದರೆ ಅವರು ತಮ್ಮ ಅತಿ ಶ್ರೇಷ್ಠ ಪಡೆಗಳನ್ನು ಚೀನಾಕ್ಕೆ ಕಳಿಸುತ್ತಿದ್ದರೋ ಇಲ್ಲವೋ ಯಾರು ಬಲ್ಲರು? ಬ್ರಿಟಿಷರೇನೋ ಭಾರತಕ್ಕೆ ಹಿಂತಿರುಗಿದರು. ಆದರೆ ಚೀನರಿನ್ನೂ ಬಹಳ ಕಷ್ಟದ ಸರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದಾರೆ. ಚೀನಾಕ್ಕೆ ಹೋಗುವ ರಸ್ತೆಯಲ್ಲಿ ಮುಖ್ಯ ಸ್ಥಾನಗಳನ್ನೆಲ್ಲ ಶತ್ರುಗಳು ಹಿಡಿದಿರುವುದರಿಂದ ಅವರು ಹಿಂತಿರುಗುವುದು ಕಷ್ಟವಾಗಿದೆ.

508
3/4

ಆಹಾರ ಪದಾರ್ಥಗಳನ್ನು ಹೆಚ್ಚಿಗೆ ಬೆಳೆಸಿರಿ.

ಶ್ರೀ ಹೆಚ್. ಸೀತಾರಾಮರೆಡ್ಡಿಯವರ ಅಭಿಪ್ರಾಯ.

'ನವಭಾರತ' ಸಂಪಾದಕರಿಗೆ

'ಹೆಚ್ಚಿಗೆ ಆಹಾರ-ಧಾನ್ಯಗಳನ್ನು ಬೆಳೆಯಿರಿ' ಎಂಬ ಆಂದೋಲನವು ನಮ್ಮ ಪ್ರಾಂತ್ಯದಲ್ಲಿ ಪ್ರಾರಂಭವಾಗಿರುವುದು ಸರಿಯಷ್ಟೆ. ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆಯುವುದಷ್ಟೇ ಅಲ್ಲ. ಆದರೆ ವಿವಿಧ ಜಾತಿಗಳ ಆಹಾರ ಪದಾರ್ಥಗಳನ್ನು ಹೆಚ್ಚು ಬೆಳೆಸುವುದಗತ್ಯವಾಗಿದೆ. ಉತ್ತರ ಹಿಂದೂಸ್ತಾನದಿಂದ ನಮ್ಮ ಪ್ರಾಂತ್ಯಕ್ಕೆ "ತೊಗರಿ-ಬೇಳೆ"ಯು ಆಧಿಕವಾಗಿ ಬರುತ್ತಲಿದೆ. ಅದರ ಉತ್ಪತ್ತಿಯನ್ನು ಸಾಕಷ್ಟು ಹೆಚ್ಚಿಸಬೇಕು. ದಕ್ಷಿಣ ಹಿಂದೂಸ್ತಾನದಲ್ಲಿ ಬೇಕಾದ ಇತರ ಬೆಳ್ಳರೆ ಆಹಾರ ವಸ್ತುಗಳ ಬೆಳೆಯೂ ಹೆಚ್ಚಿಗೆ ಆಗಬೇಕು.

ಹೆಚ್ಚಿನ ಉತ್ಪನ್ನವೆಂದರೆ ಬೆಲೆಯು ಕಡಮೆಯಾಗಿ ಉತ್ಪನ್ನಮಾಡುವ ರೈತರಿಗೆ ನಷ್ಟವಾಗಬಹುದೆಂಬ ಒಂದು ಸಂಶಯವು ಹುಟ್ಟುವುದು ಸಹಜವಾಗಿದೆ ಹೆಚ್ಚಿಗೆ ಬೆಳೆದದ್ದು ಕೊಳೆಯದಂತೆ ಎಲ್ಲಾ ಕೊಳ್ಳಲ್ಪಡುವುದೆಂಬ ವಾಗ್ದಾನ ಪಾತ್ರದಿಂದೆ ಈ ಆಂದೋಲನಕ್ಕೆ ಸಾಮರ್ಥ್ಯವು ಬರಲಾರದು. ಆಹಾರ ವಸ್ತುಗಳಿಗೆ ಸರ್ಕಾರದವರು ಒಂದು ಕನಿಷ್ಠ ಬೆಲೆಯನ್ನು ನಿಗದಿ ಮಾಡಿ ಹೆಚ್ಚಿನ ಭಾಗವನ್ನೆಲ್ಲಾ ಕೊಳ್ಳುವೆನೆಂದು ಪ್ರಕಟಿಸಬೇಕು. ಇಂಥಾ ಪ್ರಕಟನೆಯಿಂದ ಒಳ್ಳೆಯ ಪರಿಣಾಮವಾಗುವುದೆಂಬ ವಿಶ್ವಾಸವಿದೆ. ಯುದ್ಧವು ಸಮೀಪಿಸುತ್ತಿರುವದರಿಂದ ಪ್ರಾಂತವ ಎಲ್ಲಾ ಭಾಷೆಗಳಲ್ಲೂ ಈ ಪ್ರಕಟನೆಯ ಪ್ರಚಾರವು ತೀವ್ರವಾಗಿ ಆಗಲೆಬೇಕಾಗಿದೆ.

ಆಹಾರ ವಸ್ತುಗಳನ್ನು ಹೆಚ್ಚಿಗೆ ಬೆಳೆಸಬೇಕೆಂಬ ಆಕಾಂಕ್ಷೆಯಲ್ಲಿ ನೆಲಗಡಲೆಗೆ ಬರುವ ಭವಿಷ್ಯದ ಮಹತ್ವವನ್ನು ಸರ್ಕಾರದವರು ಪೂರ್ಣವಾಗಿ ಅರಿತಿಲ್ಲ. ನೆಲಗಡಲೆಯನ್ನು ಬೆಳೆಸುವ ಭೂಕ್ಷೇತ್ರದ ವಿಸ್ತಾರದಲ್ಲಿ ಕಡಮೆಯಾಗಬಾರದು. ನೆಲಗಡಲೆ ಎಣ್ಣೆಗೆ ಗಿರಾಕಿ ಹೆಚ್ಚಾಗುತ್ತಲಿದೆ. ಹಿಂದೂಸ್ತಾನದ ಮೇಲೆ ಮುತ್ತಿಗೆಯಾಗುವುದಾದರೆ ಇದರ ಬೇಡಿಕೆಯು ಇನ್ನೂ ಬೆಳೆಯಬಹುದು. ಅದಿಗೆ ಗೇ ಅಲ್ಲದೆ ಕ್ರೂಡ್ ಆಯಿಲ್ ಅಭಾವದಿಂದ ವಿದ್ಯುತ್ತಯಂತ್ರಕ್ಕೂ ಈ ಎಣ್ಣೆಯು ಉಪಯೋಗವಾಗಿ ನಮಗೆ ಪ್ರಕಾಶವು ದೊರೆಯುವಂತಾಗಬಹುದು. ಇದರಿಂದ ಇನ್ನೂ ಕೆಲ ಔದ್ಯೋಗಿಕ ಉಪಯೋಗಗಳಿವೆ. ಸರ್ಕಾರದ ಹಣ ಕಟ್ಟಲು ಸಹಾಯವಾಗುವ ರೈತನ ತೀಪ್ಪು ಬೆಳೆಯೂ ಇದೇ. ಈ ಆಂದೋಲನದಲ್ಲಿ ನೆಲಗಡಲೆ ಬೆಳೆಯುವ ಭೂಕ್ಷೇತ್ರವನ್ನು ಕಡಮೆ ಮಾಡಲು ಸರ್ಕಾರದವರು ಉಪದೇಶ ಮಾಡಬಾರದೆಂದು ನನ್ನ ಆಶೆ.

ತಮ್ಮ
ಹೆಚ್. ಸೀತಾರಾಮರೆಡ್ಡಿ.

ಬಳ್ಳಾರಿ ಜಿಲ್ಲೆಯಲ್ಲಿ ಕ್ಷಾಮನಿವಾರಣಾ ಕಾರ್ಯ

(30-5-42)

ಆದವಾನಿ ತಾಲೂಕಿನ ಎಮ್ಮಿಗನೂರು, ನಂದನವಂ, ತಿಮ್ಮಾಪುರ, ಮುಗಿ ಮಂತ್ರಾಲ ಕೇಂದ್ರಗಳಲ್ಲಿ 30-5-42ಕ್ಕೆ ಮುಗಿಯುವ ವಾರದಲ್ಲಿ 21210 ಜನರು, ಆಲೂರು ತಾಲೂಕಿನ ಹೆಬ್ಬಟಿನಲ್ಲಿ 2227 ಜನರು, ಸಿರುಗುಪ್ಪ ತಾಲೂಕು ರಾಯಪಾಳು ರೋಡ್ ಕಾರ್ಯದಲ್ಲಿ 1880 ಜನರು ಸಹಾಯ ಹೊಂದಿದರು. ರಾಯದುರ್ಗದಲ್ಲಿ 634 ಜನ, ಎಮ್ಮಿಗನೂರಿನ 3 ಕೇಂದ್ರಗಳಲ್ಲಿ 3367 ಜನರಿಗೆ ಉದ್ಯೋಗಗಳು ಲಭ್ಯವಾಗಿ ಕೂಲಿಯು ಕೊಡಲ್ಪಟ್ಟಿತು. ಕ್ಷಾಮದ ಬೇಗೆಯು ಇನ್ನೂ ಹೆಚ್ಚಿದೆ. ಸಣ್ಣ ಪುಟ್ಟ ರೈತರು ಕೃಷ್ಣದಲ್ಲಿ ದ್ದಾರೆ. 1-6-42 ರಿಂದ ಹೆಬ್ಬಟ್ಟಿದ ಕೇಂದ್ರವು ನಿವಾರಣಾ ಕೇಂದ್ರವಾಗಿ ಮಾರ್ಪಟ್ಟಿತು. ನಂದನವಂ ಕೇಂದ್ರದಲ್ಲಿ ಕಾಲರಾದ ಕಾರಣ ಅಷ್ಟಿಗೆಯ ಮನೆಯನ್ನು ಮುಚ್ಚಿ ಜನರೂಪದಿಂದ ಸಹಾಯಮಾಡಲಾಯಿತು. ರಾಯಪಾಳು ಕೇಂದ್ರವನ್ನು ನಿವಾರಣಾಕೇಂದ್ರವನ್ನಾಗಿ (Relief work) ಮಾಡಲು ಕಲೆಕ್ಟರವರು R. D. O. ರವರ ಸರಿಯನ್ನು ಕೇಳಿದ್ದಾರೆ.

ಸಿರುಗುಪ್ಪೆ ತಾಲೂಕು ಉಪಾಧ್ಯಾಯರ ಸಂಘ.

ಸಾಧಾರಣ ಸಭೆಯು 31-5-42 ನೆಯ ತಾ॥ ತೆಕ್ಕಲಕೋಟೆಯ ಬೋರ್ಡು ಶಾಲೆಯಲ್ಲಿ ಸಮಾವೇಶವಾಗಿ ಅಧಿಕಾರ ವರ್ಗದವರು ಆರಿಸಲ್ಪಟ್ಟರು. ಅಧ್ಯಕ್ಷ-ಶ್ರೀ ಮುಕ್ಕಣ್ಣಯ್ಯ ಉಪಾಧ್ಯಕ್ಷ-ಯಸ್. ಯಂ. ಬಸವಲಿಂಗಯ್ಯ, ಕಾರ್ಯದರ್ಶಿ-ಆರ್. ನರಸಿಂಹಾಚಾರ್ಯ, ಖಜಾಂಚಿ-ರಾಮಣ್ಣ. ಕಾರ್ಯಕಾರಿಣೀಸಮಿತಿಯಲ್ಲಿ ತೆಕ್ಕಲಕೋಟೆ 3, ಸಿರುಗುಪ್ಪೆ 3, ಕರೂರು 3, ಹಚ್ಚೊಳ್ಳಿ 3, ಸಿರಿಗೇರಿ 2 ಈ ಪ್ರಕಾರ ಸ್ಥಾನಗಳನ್ನು ನಿರ್ಣಯಿಸಿರುವರು. ಸಭೆಯು 3 ತಿಂಗಳಿಗೊಂದು ಸಲಸೇರಬೇಕೆಂಬ 10 ಜನರಿದ್ದರೆ ಕೋರಂ ಎಂಬ ಉಪನಿಯಮಗಳು ಪಾಸಾದವು. ಕಾರ್ಯಕಾರಿಣೀ ಸದಸ್ಯರು ವರ್ಷಕ್ಕೆ 0-8-0 ಪ್ರಕಾರ ವಿಧಿಸಲಾದ ಸದಸ್ಯ ಶುಲ್ಕವನ್ನು ವಸೂಲಿಮಾಡಲು ಅಧಿಕಾರಕೊಡಲಾಗಿದೆ. ಮುಂದಿನ ಸಭೆಯು ಕರೂರಲ್ಲಿ 30-ನೇ ಆಗಸ್ಟು ಸೇರುವುದು.

ಆಲೂರು ತಾಲೂಕಿನಲ್ಲಿ ೪ ಜನರ ಖೂನಿ.

2-6-42 ನೆಯ ತಾ॥ ಆದವಾನಿಯಿಂದ ಹೊಳಲಗುಂದಿ ಸಮೀಪದಲ್ಲಿರುವ ಕೋಗಿಲೆ ತೋಟಕ್ಕೆ ಬರುವ ಗಾಡಿಗಳನ್ನು ತಡೆದು ಶ್ರೀ ವಿವಾರೆಡ್ಡಿ ವರ್ಗದ 4 ಜನರನ್ನು ಯಾರೋ ದುಷ್ಕರ್ಮಿಗಳು ಖೂನಿಮಾಡಿರುತ್ತಾರೆ. ಖೂನಿಮಾಡಲ್ಪಟ್ಟ 4 ಜನರೂ ಕೋಗಿಲೆತೋಟದವರೆಂದೂ ಆ ಖೂನಿನಲ್ಲಿ ಪಾರ್ಟಿಗಳಲ್ಲದ್ದು ಜಾಮೀನು ಕೇಸು ಇನ್ನೂ ಕೋರ್ಟಿನಲ್ಲಿ ನಡೆಯುತ್ತಿರಬೇಕಾದರೇ ಈ ಕೃತ್ಯವು ಸಂಭವಿಸಿದೆಂದೂ ಗೊತ್ತಾಗಿದೆ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦
ಕನ್ನಡ ಜಪೋಪಾಸನಗಳು	೦—೪—೦
ವಿವಾಹವಿಧಿ	೦—೪—೦
ಸುವಾಸಿನಿ ಕತೆಗಳು	೦—೧—೬

ಅಂಚೆ ವೆಚ್ಚ ಬೇರೆ ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವವರಿಗೂ ಧಾರಾಳವಾದ ಕಮೀಶನ್

ಕಾಲನ ಸುಬ್ಬಣ್ಣ, ಮಜೇಂಟು, ಬಳ್ಳಾರಿ.

Visit Royal Cafe
Near Royal Picture Palace
Royal Cafe is ROYAL.

ಬಳ್ಳಾರಿ ತಾಲೂಕು ಕುಡಿತಿನಿಯಲ್ಲಿ

ಹರಿಜನರ ಪಂಚಕಲಶದ ಮೆರವಣಿಗೆ

[ಶಾಲಿವಾಹನಶಕ ೧೮೬೪ನೆಯ ಚಿತ್ರಭಾನು ಸಂವತ್ಸರ ಅಧಿಕ ಜೇಷ್ಠ ಬಹುಳ ೧೦-೨ ಭಾನುವಾರ ಪ್ರಾತಃಕಾಲ ಘಂಟೆ ೮-೩೦ ರಿಂದ ೧೧ ರ ವರೆಗೆ – ಇಂಗ್ಲೀಷು ತಾರೀಖು 31 ಮೇ 1942 ದಿನ ಹರಿಜನರ (ಮಾದಿಗಕುಲಕ್ಕೆ ಸೇರಿದ) ಮೆರವಣಿಗೆಯು ಏನೂ ತಡೆಯಿಲ್ಲದೆ ಶಾಂತವಾಗಿ ನೆರವೇರಿತು –]

"ಹರಿ-ಹರನನ್ನು ಎಲ್ಲಾ ಹಿಂದೂಧರ್ಮದವರೂ ಪೂಜಿಸುತ್ತಾರೆ. ಹಿಂದೂಶಾಸ್ತ್ರಗಳಲ್ಲಿ ಉಚ್ಚ ನೀಚತೆಗೆ ಸ್ಥಾನವೇ ಇಲ್ಲ. ಹರಿಜನರಲ್ಲಿ - ಉನ್ನತ ಕುಲದವರಲ್ಲಿ ಭೇದಗಳನ್ನು ಸ್ವಾರ್ಥದೃಷ್ಟಿಯಿಂದ ಕೆಲ್ಪಿಸಿರುವುದು ಪರಮ ಅನ್ಯಾಯ. ಹೆಚ್ಚಿನ ಕುಲದವರೆಂದು ಹೇಳಿಕೊಳ್ಳುವ ನಾವು – ಮಹಾತ್ಮ ಗಾಂಧಿಯವರು ಹೇಳುವಂತೆ ಹರಿಜನರನ್ನ ಅಧೋಗತಿಯಲ್ಲಿಟ್ಟು ಘೋರಪಾಪ ಮಾಡುತ್ತೇವೆ. ಪ್ರತಿಯೊಬ್ಬ ಹಿಂದುವೂ ತನ್ನ ಕರ್ತವ್ಯವನ್ನು ನೆರವೇರಿಸಲು ಗಾಂಧಿಯವರ ಆದರ್ಶವನ್ನಿಟ್ಟುಕೊಳ್ಳಲಿ — ,,

ಶ್ರೀ ವಿ. ಸುಬ್ಬರಾಯನ್,
ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟ್, ಬಳ್ಳಾರಿ.

ಮೆರವಣಿಗೆ .—

31-5-1942 ನೆಯ ದಿನ ಬಳ್ಳಾರಿ ತಾಲೂಕು ಕುಡುತಿನಿಯಲ್ಲಿ ವ್ಯಾತಃಕಾಲ ಸಡಗರದ ಹಬ್ಬದ ವಾತಾವರಣ - ಅದು ಶುಭ ಕಾರ್ಯವಾದರೂ - ಕೆಲವರಿಗೆ ದಿಗಿಲು - ಕೆಲವರಿಗೆ ಅಂಜಿಕೆ - ಕೆಲವರಿಗೆ - ಏನಾಗುತ್ತೆ ನೋಡೋಣವೆಂಬ ಕುತೂಹಲ - ಅಂತೂ ಪೋಲೀಸರು ದಂಗೂರವಟ್ಟಾಯಿಸಿ ಜನಗಳನ್ನು ಎತ್ತರಿಸಿದ್ದರೂ - ಅಲ್ಲಲ್ಲಿ ಜನರು ಗುಂಪುಗೂಡುತ್ತಿದ್ದರು. ಸಾವಿರಾರು ಸ್ತ್ರೀಯರು - ನಿರ್ಭಯವಾಗಿ ಮೆರವಣಿಗೆ ನಡೆಯುವ ಅಕ್ಕಪಕ್ಕ ಮಾಳಿಗೆಗಳಮೇಲೆ ಅಂಬಾಭವಾನಿದೇವಿಯ ದರ್ಶನಕ್ಕಾಗಿ ನಿಂತಿದ್ದರು. ಹಿಂದಿನ ರಾತ್ರಿ ಬಂದ ಪೋಲೀಸು ಸಿಬ್ಬಂದಿಯನ್ನು ಸ್ವಸ್ಥಿತನಾಗಿ ಸಬ್-ಇನ್ಸ್‌ಪೆಕ್ಟರ್ ವಿಭಾಗುಮೆಯವರು ಸಿದ್ಧಪಡಿಸಿದ್ದರು.

ಸುಮಾರು 8 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಾದ ಶ್ರೀ ವಿ. ಸುಬ್ಬರಾಯನವರು - ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ. ರಾಮಯ್ಯನವರು - ಸಬ್ ಇನ್ಸ್‌ಪೆಕ್ಟರ್ ಶ್ರೀ ನಾರಾಯಣಸ್ವಾಮಿಯವರು - ಸುಮಾರು 20 ಜನಸಶಸ್ತ್ರರಾದ ಸಿಪಾಯಿ ಕಾನ್ಸ್‌ಟೇಬಲ್‌ರೊಡನೆ ಬಂದರು. ಸೂಪರಿಂಟರು ಬಂದೊಡನೆಯೇ ಮೆರವಣಿಗೆ ಸಿದ್ಧ ಮಾಡಿರೆಂದು ಹರಿಜನ ಸೇವಕಸಂಘದ ಕಾರ್ಯದರ್ಶಿ ಶ್ರೀ ಕೇಶವರಾಯರಿಗೆ ಕಳಿಸಿ - ತಾವು ಪೋಲೀಸು ಸ್ಟೇಷನ್ನಿಗೆ ಹೋಗಿ - ಸಿದ್ಧತೆಗಳೊಡನೆ ಎಲ್ಲಾ ವಿವರವು ಸೂತಾಡಿದರು.

ಮೆರವಣಿಗೆಯಲ್ಲಿ ಇಷ್ಟುವರ್ಷ ವಿರೋಧಿಸಿದ ಮುಖಂಡರೂಕೂಡ ಪಾಲ್ಗೊಂಡರು —

ಜಿಲ್ಲಾ ಸೂಪರಿಂಟರು ಉಪದೇಶವನ್ನೆಲ್ಲಾ ಕೇಳಿ - ಆನಂದ ಬೇಳಿದ ಪ್ರಕಾರಕ್ಕೆ ಮುಖಂಡರಾದ ಪಲ್ಲೇದ ಅಡಿವೆಪ್ಪ - ಪಲ್ಲೇದ ದೊಡ್ಡಪ್ಪ ಮತ್ತು ಕಂದಾರಿ ಭೀಮಪ್ಪನವರು - ಸೂಪರೆಂಟೆಂಡೆಂಟೊಡನೆ ಮೆರವಣಿಗೆಗೆ ಬಂದರು - ಒಳ್ಳಾರಿಯಿಂದ ಈ ಏರ್ಪಾಟುಗಳೆನ್ನೆಲ್ಲಾ ನಾಡಿಲು ಮೊದಲೇಬಂದ ಜಿಲ್ಲಾ ಹರಿಜನಸೇವಕ ಸಂಘದ ಕಾರ್ಯದರ್ಶಿ ಶ್ರೀ ಟಿ. ಬಿ. ಕೇಶವರಾಯರು - ಹರಿಜನರ ಪರವಾಗಿ ನಕಾಲತ್ತು ಸಹಿಸಿ ಕೋರ್ಟ್‌ದಲ್ಲಿ ಗೆಲಿಸಿದ ಶ್ರೀ ಎ. ವೀರಾಸ್ವಾಮಿಯವರು - ಶಾಸನಸಭ್ಯರಾದ ಶ್ರೀ ವಿ. ಗೋವಿಂದದಾಸ್ (ಎಂ. ಎಲ್. ಎ) ಇವರು ಮೆರವಣಿಗೆಯಲ್ಲಿ ಇದ್ದರು - ಹರಿಜನರಿಗಿಂತ 7-8 ಪಟ್ಟು ಹೆಚ್ಚಾಗಿ ಸವರ್ಣೀಯ ಹಿಂದೂ ಸೋದರರೇ ಇದ್ದರು. ಅಂತೂ ಒಟ್ಟಿನಲ್ಲಿ - ಮೆರವಣಿಗೆಯು ಎರಡು ಫರ್ಲಾಂಗು ಉದ್ದವಾಗಿ - ಎರಡುಸಾವಿರ ಜನಸಂಖ್ಯೆಯಿಂದ ಕೂಡಿದ್ದಿತು.

ಮೆರವಣಿಗೆಯ ಶಾಂತತೆ ಮತ್ತು ಗಂಭೀರತೆ :—

ಒಂದು ತನೂಹೆ.

ಪುಷ್ಪಾಲಂಕೃತರಾದ - ಮತ್ತು **ಪಂಚಕಲಶಗಳನ್ನು** ಹಿಡಿದ ಇಬ್ಬರು ಸ್ತ್ರೀಯರು - ನುಂಗಳಾಕ್ಷತೆಗಳನ್ನು ಧರಿಸಿದ ಮತ್ತೆ ಕೆಲಸ್ತ್ರೀಯರು - ಮೃದುಮಧುರ ಹರಿ - ಹರಭಜನೆ ಮಾಡುತ್ತಿದ್ದ ಭಜನಮಂಡಳಿ, ಬಳ್ಳಾರಿಯಿಂದ ಸ್ಪೆಷಲ್ ಆಗಿಬಂದ ಕೊಳಲು - ಬ್ಯಾಂಡ್ ಮತ್ತು ಇಂಗ್ಲೀಷ್ ವಾದ್ಯ - ಬನ್ನಿಹಟ್ಟಿಯಿಂದ ಬಂದ ಕಂಚಿನೇಳದೊಂದಿಗೆ ಮೆರವಣಿಗೆಯು ಸುಮಾರು 8-40 ಘಂಟೆಗೆ ಹರಿಜನರಕೇರಿಯಿಂದ ಊರಿನ ಆಗಸೆಬಾಗಿಲಲ್ಲಿ ಹಾದು ಪೋಲೀಸ್ ಸ್ಟೇಷನ್ - ಪೋಕಲಫಂಡ್ ಆಸ್ಪತ್ರೆ - ಪೋಸ್ಟಾಫೀಸು - ಚೋಳ್ಳೆ ನರಸಿಂಹಾಚಾರ್ಯರ ಮನೆ ಪಂಚಾಯ್ತಿ ಬೋರ್ಡ್ ಆಫೀಸು ಮುಖಾಂತರ - ಅಕ್ಕಸಾಲೆ ನಾಗಲಿಂಗಪ್ಪನವರ ಮನೆಗೆ ಬಂದಿತು - ಮೆರವಣಿಗೆಯ ಜೊತೆಯಲ್ಲಿ ಸೂಪರೆಂಟರು - ಸರ್ಕಲ್ ಇನ್ಸ್‌ಪೆಕ್ಟರು - ಸಬ್ ಇನ್ಸ್‌ಪೆಕ್ಟರುಗಳು - ಇತರರು ಇದ್ದರು - ನಾಗಲಿಂಗಪ್ಪನವರ ಮನೆಯಲ್ಲಿ ಭವಾನೀ ದೇವಿಯ ಪೂಜೆಯಾಗಿ ತುಂಬಿದ ಮೂರ್ತಿಯು ಹೊರಬಂದೊಡನೆಯೇ ಅನೇಕರು ದೇವಪರವಶರಾದರು - ಮೂರ್ತಿಯು ಸಶಸ್ತ್ರವಾಗಿ ಉಗ್ರವಾಗಿದ್ದರೂ - ಸೌಮ್ಯತೆ - ಶಾಂತಿಯು ಉಕ್ಕೇರಿ ಬರುತ್ತಿತ್ತು.

ನಯಸ್ಸಾಗಿ ವೈದ್ಯಾಧ್ಯವು ಬಂದಮೇಲಾದರೂ - ಇಂಥಾ ಸೌಭಾಗ್ಯ ಸಂದರ್ಶನವು ದೊರೆಯಿತೆಂದು ಅಕ್ಕಸಾಲೆ ನಿರುನಾಕ್ಷನ್ನನು ದೇವಪರವಶನಾಗಿ ವಿಚಿತ್ರ ಧ್ವನಿಯಿಂದ ಕೇಕೆಹಾಕಿ ತೆಂಗಿನಕಾಯಿ ಒಡೆದ ನೀರು - ಸೂಪರೆಂಟರ ಅಂಗಿಗೆ ಸಿಡಿದು - ಅವರಂಗಿಯು ಅರ್ಧ ತೋಯ್ದುಹೋಯಿತು. ತೀರ್ಥವೆಲ್ಲಾ ಅವರಿಗೇ ಲಭ್ಯವಾಯ್ತೆಂದು ಅನರು ಘಟ್ಟಿಗೆ ನಕ್ಕರು. ಭವಾನೀಮೂರ್ತಿಯು ರಥಾರೂಢವಾದಮೇಲೆ - ಅದೇ ಹಾದಿಯಿಂದ ಹೊರಟು ಹರಿಜನಕೇರಿಗೆ ಬಂದು ಕೇರಿಯ ದೇವಾಲಯದಲ್ಲಿ ಪ್ರತಿಷ್ಠಾಪನೆಯಾಯಿತು.

ಕೇರಿಯಲ್ಲಿ ಸಭೆ - ಸೂಪರಿಂಟರ ಭಾಷಣ :—

ಕೇರಿಗೆ ಬಂದೊಡನೆಯೇ - ಜಿಲ್ಲಾ ಹರಿಜನ ಸೇವಕಸಂಘದ ಶ್ರೀ ಟಿ. ಬಿ. ಕೇಶವರಾಯರು - ಪೂರ್ವದ ಆದ್ಯಂತ ಚರಿತ್ರೆಯನ್ನು ವಿವರಿಸಿ - ಸೆರವಣಿಗೆಯು ಶಾಂತರೀತಿಯಾಗಿ ನಡೆಯಲು ಸಹಕರಿಸಿದ ಎಲ್ಲರನ್ನೂ ಪೋಲೀಸು ಅಧಿಕಾರಿಗಳನ್ನೂ ವಂದಿಸಿ – ಇಷ್ಟುದಿದ ವಿರೋಧಿಸಿದವರೂ ಕೂಡ ಸೆರವಣಿಗೆಯಲ್ಲಿ ಭಾಗ ತೆಗೆದು ಕೊಂಡದ್ದು ವಿಶೇಷವೆಂದು ಹೇಳಿದರು. ನಂತರ ಹರಿಜನರ ಪರವಾಗಿ ಶ್ರೀ ಡಿ. ಗೋವಿಂದದಾಸರು ಎಲ್ಲರನ್ನೂ ಪೋಲೀಸು - ಅಧಿಕಾರಿಗಳನ್ನೂ ವಂದಿಸಿದರು - ಆ ಮೇಲೆ ಜಿಲ್ಲಾ ಸೂಪರೆಂಟರಾದ ಶ್ರೀ ವಿ. ಸುಬ್ಬರಾಯನ್‌ರವರು ಹೀಗೆ ಹೇಳಿದರು —

"ನಾವು ಬಂದೋಬಸ್ತಿಗಾಗಿ ಬಂದು ನಮ್ಮ ಕರ್ತವ್ಯವನ್ನು ನೆರವೇರಿಸಿರುತ್ತೇವೆ. ಒಂದೇ ಹಿಂದೂ ಧರ್ಮವನ್ನು ಆಚರಿಸುತ್ತಿರುವ ನಿಮಗೂ - ಉನ್ನತ ಕುಲದವರೆಂದು ಹೇಳಿಕೊಳ್ಳುವ ನಮಗೂ ಭೇದವನ್ನು ಕಲ್ಪಿಸಿರುವದು ಮಹಾಪಾಪ - ಈ ಆಧುನಿಕ ಕಾಲದಲ್ಲಾದರೂ ಇಂಥಾ ದುರಾಚರಣೆಗಳು ಹೋಗಬೇಕು. ನೀವು ಹೊರ ಟಾಗ ಹರಿಯ ಧ್ಯಾನಮಾಡಿದಿರಿ - ಬರುವಾಗ ಹರನಧ್ಯಾನಮಾಡಿದಿರಿ - ಹಾಗೆಯೇ ಪ್ರತಿಯೊಬ್ಬ ಹಿಂದುವೂ - ಹರಿ ಹರರಭೇದವಿಡದೆ ಪೂಜಿಸುವುದು - ಆದರಿಸುವುದು ಶ್ರೇಯಸ್ಕರ - ನೀವು ಬೇರೆಯವರೆಂಬ ಭಾವನೆ ಇಟ್ಟುಕೊಂಡು ದೂರವಾಗಿಡಲ್ಪಟ್ಟಿರುವಿರಿ - ಆ ಭಾವನೆಯನ್ನು ದೂರಮಾಡಿರಿ - ನಿಮ್ಮಲ್ಲಿ ನನಗೆ ಸೋದರಭಾವನೆಯುಂಟು - ನಿಮ್ಮ ಉದ್ಧಾರಕ್ಕೆ ನಾನು ಸರ್ವಯತ್ನಮಾಡುವೆ. ಮಹಾತ್ಮ ಗಾಂಧಿಯವರು ಪತಿತರ ಉದ್ಧಾರಕ್ಕಾಗಿ ತಮ್ಮ ಪ್ರಾಣ ವನ್ನು ಕೊಡಲುಕಾಡ ಸಿದ್ಧರಾಗಿದ್ದುದು ನಿಮಗೆ ತಿಳಿಯದೇ ಇಲ್ಲ. ಅವರಶಿಷ್ಯರೂ - ಅವರಿಂದ ಉದ್ಭವವಾದ ಹರಿ ಜನ ಸಂಘದವರೂ - ನಿಮಗೆ ಎಲ್ಲಾವಿಧಗಳಲ್ಲೂ ಸಹಾಯ ಮಾಡುತ್ತಿರುವರು - ಗಾಂಧಿಯವರ ಆದರ್ಶಗಳಿಂದಲೇ ಜಗತ್ತಿನ ಕಲ್ಯಾಣವಾಗುವದೆಂದು ನನ್ನ ನಂಬಿಕೆ. ನಿಮ್ಮಲ್ಲಿ ಸೌಹಾರ್ದ - ಸಹಾನುಭೂತಿಗಳುತ್ಪನ್ನವಾದವೆಂದರೆ - ನಿಮ್ಮ ಸೋದರರಲ್ಲೂ ಅವು ಬೆಳೆಯುವುವು - ಆಗ ನಿಮ್ಮ ಹಿತವಾಗುವುದು. ನಿಮ್ಮ ಉದ್ಧಾರಣೆ ಬೇಗದಕ್ಕೆ ನಿಮ್ಮ ಟ್ಲೇಯುಂಟು - ನೀವೂ - ಊರವರೂ ಪರಸ್ಪರರೂ ಸ್ನೇಹ - ಸೌಹಾರ್ದಗಳಿಂದ ವರ್ತಿಸುವರೆಂದು ನನ್ನ ಆಶೆ – "

ಈ ಪ್ರಕಾರವಾಗಿ ಬಳ್ಳಾರಿ ತಾಲೂಕು ಕುಡಿತಿನಿಯಲ್ಲಿ - ಹರಿಜನರ ಪಂಚಕಲಶದ ಸೆರವಣಿಗೆಯು - ಶಾಂತರೀತಿಯಾಗಿ ವೈಭವದಿಂದ ನೆರವೇರಿತು.

ಪೂರ್ವ ಚರಿತ್ರೆ :

ಅಕ್ಟೋಬರಾನು ಸಂವತ್ಸರದಲ್ಲಿ (1926-27) - 16 ವರ್ಷಗಳಹಿಂದೆ ಕುಡಿತಿನಿ ಗ್ರಾಮದ ಮಾದಿಗರಕೇರಿ ಯಲ್ಲಿ ಒಂದು ಶೇಷಾಲಯವು ಕಟ್ಟಬಾಯಿತು. ಮೂರ್ತಿಯನ್ನು ತಯಾರಿಸಲು ಅಕ್ಕಸಾಲೆ ನಾಗಲಿಂಗಸ್ವಾಮಿಗೆ ಒಪ್ಪಿಸಲಾಯಿತು. ಈ 16 ವರ್ಷಗಳಲ್ಲಿ ಎಷ್ಟುಸಲ ಪ್ರಯತ್ನಿಸಿದರೂ - ಒಬ್ಬಿಬ್ಬರಾದ ಮುಖಂಡರು ಒಪ್ಪದೆ ಪೋ ಲೀಸರ - ಅಧಿಕಾರಿಗಳ ಸಹಾಯದಿಂದ ನಿಲ್ಲಿಸುತ್ತಲೇ ಬಂದರು - ನಮ್ಮ ಪ್ರಯತ್ನಗಳೆಲ್ಲಾ ವ್ಯರ್ಥವಾದವು.
ಊರಿನ ಜನರಿಗೆ ಸುಮಾರು 3 – 4 ಸಾವಿರ ರೂಪಾಯಿಗಳು ಖರ್ಚು - ಹರಿಜನರಿಗೆ 2 ಸಾವಿರ ರೂಪಾಯಿಗಳವರೆಗೂ ಖರ್ಚಾಗಿರಬಹುದು. ಸುಮಾರು 4 – 5 ವರ್ಷಗಳಕೆಳಗೆ 1937 ರಲ್ಲಿ ಜಿಲ್ಲಾ ಹರಿಜನಸೇವಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಟಿ. ಬಿ. ಕೇಶವರಾಯರು - ಇದರಲ್ಲಿ ಶ್ರದ್ಧೆಯಹಿಸಿ - ರಾಜಿಮಾಡಲು ವಿಶ್ವಪ್ರಯತ್ನ ಮಾ ಡಿದರು - ಮುಖಂಡರು ಹೇಗಿದಂತೆ ಎಲ್ಲಾಜನರೂ ನೀರು ತುಂಬಲು ಅನುಕೂಲಕೊಡಲಾಯಿತು - ಏನುಮಾಡಿದರೂ ಊರಿನ ಇಬ್ಬರು ಮುಖಂಡರು ಶ್ರೀ ಅಡಿನೆಪ್ಪ - ಭೀಮಪ್ಪ ಮಾತ್ರ ರಾಜಿಗೆ ಬರಲೇಇಲ್ಲ. ಗವರ್ನಮೆಂಟಿಗೆ ಹರಿ ಜನರ ಹಕ್ಕು ಚಲಾಯಿಸಲು ನೋಟೀಸು ಕೊಡಲಾಯಿತು - ಕಲೆಕ್ಟರನರಾದ ಕ್ರಾಂಬಿ ಫೊರೆಗಳು. "ನೀವು ಕೋರ್ಟಿನಲ್ಲಿ ಪಂಚಕಲಶ ತೆಗೆದುಕೊಂಡು ಹೊಗಲು ಡಿಕ್ರಿಯನ್ನೆಯಿರಿ. ನಾವು ಬಂದೋಬಸ್ತು ಕೊಡುತ್ತೇನೆ" ಎಂತ ಬರೆದರು – ಹರಿಜನರ ಪರವಾಗಿ ವಕಾಲತ್ತುಮಾಡಲು ಅಡ್ವೋಕೇಟ್ ವೀರಾಸ್ವಾಮಿಯವರಿಗೆ ಒಪ್ಪಿಸಲಾಯಿತು - ಇದು ಬಳ್ಳಾರಿ ಮುನ್ಸಿಫ್ ಕೋರ್ಟಿನಲ್ಲಿ ಎರಡು ವರ್ಷಗಳವರೆಗೂ ನಡೆದು - 1942 ನೆಯ ಏಪ್ರಿಲ್ ಅಖೈರಿನಲ್ಲಿ ಅಡಿಷನಲ್ ಜಿಲ್ಲಾ ಮುನ್ಸೀಫರಾದ ಶ್ರೀ ರಘುರಾಮಯ್ಯನವರು - ಹರಿಜನರ ಪರವಾಗಿ ಡಿಕ್ರೀಕೊಟ್ಟು - ಹರಿಜನ ರಿಗೆ ಪಂಚಕಲಶದಿಂದ ಸೆರವಣಿಗೆ ತೆಗೆದುಕೊಂಡು ಹೋಗುವಹಕ್ಕನ್ನು ಮೊಂದರು - ಹರಿಜನರ ಪರವಾಗಿ ಶ್ರೀಗಳಾದ ಟಿ. ಬಿ. ಕೇಶವರಾವು - ಬೆಲ್ಲೋಣ ಭೀಮಶಾನು - ಡಿ. ಗೋವಿಂದದಾಸು - ಹೊಟ್ಟೆ ವೀರಪ್ಪ - ಪಸ್ಯೆರೆಯವರೂ - ವಿರೋಧಪಕ್ಷದ ಪಲ್ಲೇದ ಅಡಿನೆಪ್ಪ - ಕಂದಾರಿ ಭೀಮಪ್ಪನವರ ಪರವಾಗಿ - ಉಜ್ಜಿನಿಸ್ವಾಮಿಗಳ ಪ್ರತಿನಿಧಿ - ಆಲೂರು ಮರೆಗೌಡ - ಚಿಂತಕುಂಟೆ ಗಂಗಾಧರಗೌಡ - ಅಡಿನೆಪ್ಪ ಪಸ್ಯೆರೆಯನವರು ಸಾಕ್ಷಿಕೊಟ್ಟರು - ವಿರೋಧಿಪಕ್ಷ ದ ವಕೀಲರು ಶ್ರೀ ಯಸ್. ಶ್ರೀನಿವಾಸಯ್ಯರ್ ಮತ್ತು ಕೆಲಕಾಲ ಜನಾಬ್ ಅಬ್ದುಲ್‌ರಹೂಫ್ ಸಾಹೇಬರು -

ಈ ಡಿಕ್ರಿಯ ಅಮಲನ್ನು ನಿಲ್ಲಿಸಲು - ರವುಫ್‌ಸಾಹೇಬರ ಮುಖಾಂತರ ಕಲೆಕ್ಟರರಲ್ಲಿ ಅರ್ಜಿ ಇಡಿಸಿದರು ಅಲ್ಲಿಯೂ - ಪೋಲೀಸರಲ್ಲೂ ಬೇರೆಯು ಬೇಯಲಿಲ್ಲ - ಪೋಲೀಸರು ಡಿಕ್ರಿಯನ್ನು 31-3-42 ಕ್ಕೆ ಜಾರಿ ಮಾಡಿದರು.

[ಜಿಲ್ಲೆಯ ಇನ್ನಾವ ಹಳ್ಳಿಗಳಲ್ಲಾದರೂ ಈ ತೊಂದರೆ ಇದ್ದರೆ - ಕುಡುತಿನಿಗೆ ಬಂದು ಎಲ್ಲಾರಿಕಾರ್ಡು ನೋಡಬಹುದು.]

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—10—40.	31—5—42.
ರು. 1,14,774-0-0	ರು. 2,41,525-0-0

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:—

1 ತಿಮ್ಮನಚರ್ಲ 2 ಕೊಟ್ಟೂರು. 3 ಹುರವಕೊಂಡ. 4 ಪತ್ತಿಕೊಂಡ

ಹೆಚ್. ಶೀತಾರಾಮರೆಡ್ಡಿ., ಬಿ. ಎ. ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಜೋಡ್ಸು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಹಿಂದೂಸ್ತಾನ

ಮದ್ರಾಸು ಪ್ರಾಂತ್ಯದಲ್ಲಿ ಸಕ್ಕರೆಯ ಬೆಲೆಯು ಒಂದು ಸೇರಿಗೆ ೦-೫-೦ ಎಂದು ನಿಶ್ಚಿತವಾಗಿದೆ. ಇದು ಜೂನ್ ೧ನೆಯ ತಾ. ನಿಂದ ಆಚರಣೆಯಲ್ಲಿ ಬಂದಿದೆ

ವೈಸ್ರಾಯ ಕಾರ್ಯಕಾರಿಣೀಸಮಿತಿ ಯಲ್ಲಿದ್ದ ಶ್ರೀ ಇ. ರಾಘವೇಂದ್ರರಾಯರು ರಾಜೀನಾಮೆ ಕೊಟ್ಟ ಕಾರಣ. ಶ್ರೀ ರಾಮಸ್ವಾಮಿ ಮೊದಲಿಯಾರ್‌ರವರು ಬ್ರಿಟಿಷ್ ಯುದ್ಧ ಮಂತ್ರಿಮಂಡಲದ ಸದಸ್ಯರಾಗಿ ಹೋಗುವ ಕಾರಣಗಳಿಂದ ಸದರಿ ಸ್ಥಳಗಳನ್ನು ಭರ್ತಿಮಾಡಲು, ಸರ್ ಮಹಮದ್ ಉಸ್ಮಾನ್, ಅಂಜೈಯ್ಯರ್ ಮತ್ತು ಒಬ್ಬ ಸಿಕ್ಖ ಪ್ರತಿನಿಧಿಗಳನ್ನಾರಿಸಲಿರುವರೆಂದು ಸುದ್ದಿ ಇದೆ.

ಕ್ರೈಸ್ತ ಸಂಘಾನವು, ಬ್ರಿಟಿಷರು ಇಂಡಿಯಾ ರಕ್ಷಣೆಯ ಭಾರವನ್ನು ಭಾರತೀಯರಿಗೆ ವಹಿಸಲು ತಯಾರಿಲ್ಲದ ಕಾರಣ ಯುದ್ಧ ಪ್ರಯತ್ನಗಳಲ್ಲಿ ಸಹಕರಿಸಲಾರದೆಂದು ಸೌಲಾನಾ ಅಜಾದರು, ರಾಜಾಜಿಯವರ ಹೇಳಿಕೆಯನ್ನು ಖಂಡಿಸಿ ಹೇಳಿದರು.

ಪೆತಲಿ ಫಾರ್ವರ್ಡ್ ಬ್ಲಾಕಿನ ಕಾರ್ಯ ನರ್ವಿಗಳಾದ ಹಮೀದುದ್ದೀನ್ ದಿಲ್ಲರ್ ರವರು ರೋಸನಾರ ಕೋಟೆಯ ಹತ್ತಿರ ಬ್ರಿಟಿಷ ಪ್ರಾ. ಸತ್ತುಬಿದ್ದಿದ್ದರು. ಪೋಲೀಸರು ನಿಜಾರಣೆ ನಡೆಸಿದ್ದಾರೆ.

ಬಂಗಾಳ ಕೊಲ್ಲಿಯಲ್ಲಿ ಏಪ್ರಿಲ್ 6ನೆಯ ತಾ. ನಿನ ಜಪಾನಿಕಾಕ್ರೆ ಸೇರಿದ 7 ವರ್ತಕ ಹಡಗುಗಳನ್ನು ಜಪಾನರು ಮುಳುಗಿಸಿದರೆಂದು, ಜೂನ್ 4ನೆಯ ತಾ. ನ ವಾಶಿಂಗ್ಟನ್ ವಾರ್ತೆಯು ಪ್ರಕಟನಾಗಿದೆ.

ಸಿಂಧೂ ನದಿಯಲ್ಲಿ ಹುರ್ ಜನಾಂಗದ ನೇಲೆ ಮಿಲಿಟರಿಯವರು ಜಯ ಪಡೆದು ಕೊಂಡು ದಂಗೆಕೋರರನೇಕರನ್ನು ಕೊಂದಿರುವರು. ಹುರ್ ಜನಾಂಗದ ದಂಗೆಯು ನಿಂತಿಲ್ಲ, ಸಿಪಾಲವಾಸ ಪೆರುಮಾಳರ ಊರಿಗೆ ಮೂರು ಜನ ಹುರ್‌ರು ಮುತ್ತಿಗೆ ನಡೆಸಿದರು, ಊರಿನವರು ತಿರುಗಿಬಿದ್ದ ಕಾರಣ 8 ಜನ ಹುರ್‌ವರೋಡಿಕೋರರು ಸತ್ತು ಪಲಾಯನವಾದರು.

ಆಫ್ರಿಕಾದಲ್ಲಿ ಭಯಂಕರ ಯುದ್ಧ

ಜರ್ಮನ ಸೇನಾ ನಾಯಕನಾದ ಜನರಲ್ ರೊಮೆಲನ ಆಧಿಪತ್ಯವಲ್ಲಿ ಏಕಾಏಕಿ ಒಂದು ಟ್ಯಾಂಕ ಸಡೆಯು ನೈಟ್ಸು ಬ್ರಿಡ್ಜ್ ಅಕ್ಕೋಮಾ ಭಾಗಗಳಲ್ಲಿ ನುಗ್ಗಲಿಕ್ಕೆ ಹತ್ತಿತು. ಟೊಬ್ರುಕ್ ಕೋಟೆಯನ್ನು ಭೇದಿಸಬೇಕೆಂಬುದೇ ನಾಜಿಗಳ ಉದ್ದೇಶ್ಯ. ಇದನ್ನೆಲ್ಲಾ ಮೊದಲೇ ಅರಿತಿದ್ದ ಬ್ರಿಟಿಷರು ಅವರನ್ನು ತಡೆದರು ಗಜಾಲಾ ಪೂರ್ವದಲ್ಲಿ ಪ್ರಚಂಡವಾದ ಟ್ಯಾಂಕ್ ಕಾಳಗವಾಗುತ್ತಲಿದೆ. ರತ್ಯಗಳ 600 ವಾಹನಗಳು ನಾಶವಾಗಿವೆಯೆಂದೂ ಬ್ರಿಟಿಷರಿಗಾದರೂ ಬಹಳ ಹಾನಿಯಾಗಿದೆ. ಲಿಬ್ಯಾದಲ್ಲಿ ಇನ್ನೂ ಕಾಳಗವು ನಡೆಯುತ್ತಲಿರುವುದೆಂದೂ, ಜನರಲ್ ರೊಮೆಲರ ಆಕಾಂಕ್ಷೆಯು ನೆರವೇರಲಿಲ್ಲವೆಂದೂ, ಜರ್ಮನರಿಗೆ ಬಹಳ ನಷ್ಟವಾಗಿದೆಯೆಂದೂ ಪ್ರಧಾನ ಮಂತ್ರಿ ಚರ್ಚಿಲರು ತಿಳಿಸಿದರು. ರೊಮೆಲನ ಸೈನ್ಯವು ಬಹು ಬಲದಿಂದ ಪೂರ್ವ ಭಾಗಕ್ಕೆ ನುಗ್ಗುತ್ತಲಿದೆ.

ಬ್ರಿಟಿಷರ ವಿಮಾನ ಮುತ್ತಿಗೆ

30ನೆಯ ತಾ. ರಾತ್ರಿ ಒಂದು ಸಹಸ್ರ ಬ್ರಿಟಿಷ ವಿಮಾನಗಳು ಜರ್ಮನಿಯಮೇಲೆ ಮುತ್ತಿಗೆ ನಡೆಸಿದುದರ ಫಲವಾಗಿ ಕೊಲೋನ ನಗರದ ಬಹು ಭಾಗವು ನಾಶ ಹೊಂದಿದೆಯಂತೆ. ಯುದ್ಧವಾರಂಭವಾದನೇಲೆ ಇಷ್ಟು ಭಾರಿ ಮುತ್ತಿಗೆಯು ನಡೆದಿರಲಿಲ್ಲ. ಮಿತ್ರರ 44 ವಿಮಾನಗಳು ಕಾಣೆಸದಂತಾಗಿವೆ. ಜೂನ್ 1 ನೆಯ ತಾ॥ ಕೂಡ ಸತ್ಪಿನು ಜರ್ಮನಿಯಮೇಲೆ ದಾಳಿಯಾಯಿತು.

ಜರ್ಮನರ ಪ್ರತೀಕಾರವೇ ?

30 ನೆಯ ತಾ॥ ನಡೆಸಿದ ದಾಳಿಗೆ ಪ್ರತೀಕಾರವೆಂಬಂತೆ ಜರ್ಮನ ವಿಮಾನ ದಾಳಿಗಳು ಕ್ಯಾಂಟಬರಿಯಮೇಲೆ ದಾಳಿ ನಡೆಸಿದವು. ಅನೇಕ ಮನೆಗಳೂ ಚರ್ಚುಗಳೂ ನೆಲಸಮವಾದವು. ಅನೇಕ ಮಂದಿ ಸತ್ತು ಅನ್ಯ ಸಾಸ್ತಿಗಳಿಗೆ ಹಾನಿಯಾಯಿತು. ಇದೆಂತಾದ ಪೂರ್ವತೀರದಲ್ಲಿ ರತ್ಯ ಕಾರ್ಯದಿಂದ 4 ಹಡಗುಗಳು ನುಗ್ಗಾಗಿ ಸಲ್ಪಟ್ಟವೆಂದು ಹೇಳಲಾಗಿದೆ.

ಮಾರ್ಷಲ ಟಿಮೊಶಂಕರವರು

ಕಾರ್ಪೋವನ ದಕ್ಷಿಣ ಭಾಗದ ಪ್ಲಯಿಯೋವ್ಯಮದಲ್ಲಿ ತೊಡಗಿರಬೇಕಾದರೆ ಜರ್ಮನರ ವಿಮಾನದಾಳಿಯಿಂದಾಗಿ ಮರಣದಿಂದ ಸ್ವಲ್ಪದರಲ್ಲಿ ಪಾರಾದರೆಂದು ಸ್ವೀಡ್ ಪತ್ರಿಕೆಯು ತಿಳಿಸುತ್ತದೆ.

ಜರ್ಮನರ ಲೆ. ಕರ್ನಲರವರು, ಸೈನಿಕರಿಗಾಗಿ 200 ಬಹು ಪಾನ ಸ್ಥಳಗಳನ್ನು ಕೊಂಡೊಯ್ಯಬೇಕಾದರೆ, ರಷ್ಯನರ ಕೈಸೆರೆಯಾಗಿದ್ದರಂತೆ

ರಷ್ಯಾ:—

ಆರ್ಕಟಿಕ್ಕ ರಣರಂಗದಲ್ಲಿ ಜರ್ಮನಿ ರಷ್ಯಾದ ಭಯಂಕರ ಯುದ್ಧವು ಸಾಗಿದೆ. ಮೆರ್ಮಾನ್ಸ್ಕ್ ನಗರವನ್ನು ಜರ್ಮನರು ಆಕ್ರಮಿಸುವಂತೆ ಕಾಣಾಡಲು ರಷ್ಯನರು ಹೋರಾಟವನ್ನು ನಡೆಸಿರುವರು. ಕಾರ್ಕೋವರಣರಂಗದಲ್ಲಿ ಇನ್ನೂ ಮಹತ್ವದ ಘಟನೆಗಳಾಗಿಲ್ಲ.

ಆಫ್ರಿಕಾದಲ್ಲಿ ಬೇರ್ ಯೆಲಹಕೀಮದ ಹತ್ತಿರ ಕಾಳಗವುಸಾಗಿದೆ. ಜರ್ಮನರ ಪ್ರಯತ್ನಗಳು ಯಶಸ್ವಿಯಾಗಿಲ್ಲ.

ಅಮೆರಿಯವರ ಹೇಳಿಕೆ.

ಹಿಂದೂಸ್ತಾನದಲ್ಲಿ ಸ್ವಾತಂತ್ರ್ಯವನ್ನೂ ಐಕ್ಯವನ್ನೂ ಕೊಟ್ಟರುವೆಯೆಂದು ಭಾರತ ಮಂತ್ರಿಗಳಾದ ಅಮೆರಿಯವರು ಮತ್ತೆ ಹೇಳಿದರು.

ಜಪಾನರು ಆಸ್ಟ್ರೇಲಿಯಾ ರಾಜಧಾನಿಯಾದ ಸಿಡ್ನಿಯಮೇಲೆ ಮಾಡಿದ ಸಚ್ಚಿರೀನ ದಾಳಿಯಿಂದ ಅಷ್ಟೇನೂ ನಷ್ಟವಾಗಿಲ್ಲವೆಂದು ಪ್ರಕಟವಾಗಿದೆ.

ಚೀನಾ ಜಪಾನು ವಿಷವಾಯುವಿನ ಬಳಕೆ.

ಕಿನ್ಹ್ವಾ ನಗರಕ್ಕೆ 50 ಮೈಲಿ ದೂರದಲ್ಲಿರುವ ಚೂಸ್ಸು ಎಂಬಲ್ಲಿ ನಿಬರವಾದ ಕಾಳಗನಾಗುತ್ತಲಿದೆ. ಜಪಾನರು ಪೂಫೋ ಬಂದರನ್ನು ಹಿಡಿದು ಅಲ್ಲಿ 60 ರಿಂದ 80 ಸಾವಿರ ಸೈನ್ಯವನ್ನು ಶೇಖರಿಸಿರುವುದಾಗಿ ಚೀನಾದ ಪ್ರಕಟನೆಯು ಹೊರಟಿದೆ ಜಪಾನರು ಚೀನದಲ್ಲಿ ಧಾರಾಳವಾಗಿ ವಿಷವಾಯುವನ್ನು ಉಪಯೋಗಿಸುತ್ತಿರುವದಾಗಿ ಚೀನರು ಹೇಳುತ್ತಾರೆ.

ಚೀನರ ಕಷ್ಟಪರಿಸ್ಥಿತಿಯನ್ನು ಚೀನ ಸ್ನೇಹಿರುವ ಮಹತ್ವನೆನ್ನಿ ಅರಿತು, ಅಮೆರಿಕಾದ ಅಧ್ಯಕ್ಷರಾದ ರೂಸನೇಲ್ಟರೂ ಬ್ರಿಟಿಷ್ನಿನ ಸರ ರಾಷ್ಟ್ರ ಮಂತ್ರಿಗಳಾದ ಈಡನ್ರವರೂ ವೀಶೇಷವಾಗಿ ಸಹಾಯವನ್ನೊದಗಿಸಲು ಸಚಿವವಿತ್ತಿದ್ದಾರೆ.

ಒಟ್ಟೂರ್ ಮಾನರಹೀಂ ಭೇಟಿ.

ಒಟ್ಟೂರವರು ಫಿನ್ಲೆಂಡಿನ ಸರ್ವಾಧಿಕಾರಿಗಳಾದ ಮಾನರ್ ಹೀಂರನ್ನು ಭೇಟಿ ಮಾಡಿ ರಷ್ಯಾ ದಂಡಯಾತ್ರೆಗೆ ಕುರಿತ ಮುಖ್ಯಾಂಶಗಳನ್ನು ಅವರೊಡನೆ ಚರ್ಚಿಸಿದರಂತೆ.

ಮೈಸೂರು ವಾರ್ತೆಗಳು.

ಭದ್ರಾವತಿಯ ಕೂಲಿಕಾರ ಮುಖಂಡರ ಮೇಲೆ ಹಾಕಿದ್ದ ಗಡೀಪಾರು ಆಜ್ಞೆಗಳನ್ನು ಮೈಸೂರು ಸರಕಾರದವರು ಹಿಂದೆಗೆದು ಕೊಂಡಿರುವರೆಂದು ಗೊತ್ತಾಗಿದೆ.

ಕಬ್ಬಣ ಮತ್ತು ಉಕ್ಕಿನ ಕಾರ್ಖಾನೆ ಅಧ್ಯಕ್ಷರಾದ ಶ್ರೀ ವೆಂಕಟನಾರಾಯಣಪ್ಪನವರು ಬೆಂಗಳೂರಿನಲ್ಲಿ ಹೃದಯ ವಿಕಾರದಿಂದ ನಿಧನಹೊಂದಿದರು. ಮೈಸೂರಿನ ಎಲ್ಲಾ ಭಾಗಗಳಲ್ಲೂ ಮುಚ್ಚುಸೂಚಿತ ನಿರ್ಣಯಗಳು ಮೃತರ ಕುಟುಂಬಕ್ಕೆ ಬರುತ್ತಲಿವೆ.

ಮೈಸೂರಿನ ಸಾಚಿ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಜಯಪುರ ಸಂಸ್ಥಾನದ ದಿವಾನ ಪದವಿಯನ್ನು ಸ್ವೀಕರಿಸಿದರು.

29 ವರ್ಷ ವಯಸ್ಸಿನ ಬಾಲಿಲಿಯರ್ ಬಂದಿಯು ರೇಜರ್ ಬ್ಲೇಡಿನಿಂದ ಆತ್ಮಹತ್ಯೆ ಮಾಡಿಕೊಂಡನೆಂದು ಗೊತ್ತಾಗಿದೆ.

ಜರ್ಮನ ಆಕ್ರಮಿತ ಪ್ರದೇಶಗಳ ಅಧಿಕಾರಿಗಳಾದ ಹೈಡ್ರಿಚ್‌ರವರನ್ನು ಪ್ರೇಗ್ ನಗರದಲ್ಲಿ ಯಾರೋ ಗುಂಡಿನಿಂದ ಹೊಡೆದರು ಅವರಿಗೆ ಆಸ್ಪತ್ರೆಯಲ್ಲಿ ಆಪರೇಷನ್ ಆಗಿ ಮರಣಹೊಂದಿದರೆಂದು ಒಂದು ವಾರ್ತೆ.

ಲಕ್ನೋದ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯು ಈಗ 12 ಸಾವಿರ ರೂ ತೆವಣಿ ಕಟ್ಟಬೇಕಾಗಿದೆ

ಬಳ್ಳಾರಿ ಪೇಟೆ ಧಾರಣೆ

5-6-42 ಶುಕ್ರವಾರ

—○—

ಭಂಗಾರ ತೊಲ 1ಕ್ಕೆ	47-12-0
ಸಾವರಿನ್	37-1 0
ಬೆಳ್ಳಿ 100 ತೊಲ ರೂ.	76-4-0
ಹರಳೆಮುಂಗಾರಿ 12 ಮಣಕ್ಕೆ	65-0-0
ಹರಳೆ ಭಾರಂ	105-0-0
ಅಕ್ಕಿ 1 ರೂ. ಗೆ	3½ ರಿಂದ 4½ ಸೇರು
ಬೇಳೆ ,,	4 ,,
ಗೋಧಿ ,, ...	4 ,,
ಜೋಳ ,,	,, 12½ ,,
ರಾಗಿ ,,	16 ,,
ಹುಣಸೆ ,,	11½ ,,
ನೆಲಗಡಲೆ ...	... 1-6-6
ಪಕ್ಕರಿ	ನೀಸ 0-8-6
ಬೆಲ್ಲ ...	14 ರಿಂದ 16

ಹೊಸಪೇಟೆ

ವೈಶ್ಯರಿಗಾಗಿ ಉಚಿತ ವಿದ್ಯಾರ್ಥಿ ನಿಲಯ.

ಪತ್ತಿಕೊಂಡ ಸೆಂಗಣ್ಣಶೆಟ್ಟಿ ಮತ್ತು ಇವರ ಸೋದರರ ಧರ್ಮಾಪಾಯದಿಂದ ವೈಶ್ಯರಿಗಾಗಿ ಉಚಿತ ವಾಚನಾಲಯವೊಂದು ರವಿವಾರ ಜೋಡಿಸಿ ಉಪಕಾರ್ಯದರ್ಶಿಗಳಾದ ಶ್ರೀ ಎಸ್. ವಿರುಪಾಕ್ಷ ಶೆಟ್ಟಿಯವರಿಂದ 3 6-42 ರ ದಿನ ಪ್ರಾರಂಭಿಸಲಾಯಿತು. ಶ್ರೀ ವಿ. ನಾರಾಯಣ ಶೆಟ್ಟಿಯವರು ಸೆಂಗಣ್ಣಶೆಟ್ಟಿಯವರ ಭಾವಚಿತ್ರದ ಅನಾವರಣಮಾಡಿದರು. ಬಳ್ಳಾರಿಯಿಂದಲೂ ಇತರ ಭಾಗಗಳಿಂದಲೂ ಸುಮಾರು ಸ್ನೇಹಿತರು ಈ ಮಹೋತ್ಸವಕ್ಕಾಗಿ ಹೋಗಿದ್ದರು. ನಗರೇಶ್ವರ ದೇವಸ್ಥಾನದಿಂದ ಮೆರವಣಿಗೆಯು ಹೊರಟು ನಿಲಯವನ್ನು ಸೇರಿ ಪ್ರಾರಂಭೋತ್ಸವವು ನೆರವೇರಿತು. ಪ್ರಾರಂಭದಲ್ಲಿ ಶ್ರೀಗಳಾದ ಕೆ ವೆಂಕಟಗೋಪಾಲ ಶೆಟ್ಟಿ, ಎಸ್. ವಿ. ಶೆಟ್ಟಿ, ಡಿ. ಯಲ್. ಶೆಟ್ಟಿ, ಡಾಕ್ಟರ್ ನಾಗವಗೌಡ, ಬೆಳ್ಳದ ಚನ್ನಪ್ಪ ಮೈರೆ ಅನೇಕ ಮುಖಂಡರು ಹಾಸ್ಟಲ್ ಯಶಸ್ವಿಯಾಗಲೆಂದು ಕೋರಿ ಭಾಷಣ ಕೊಟ್ಟರು. ಎಲ್ಲರಿಗೂ ಉಪಾಹಾರವೇರ್ಪಡಿಸಲಾಗಿತ್ತು. ಅಧ್ಯಕ್ಷರು 30 ರೂ ಗಳನ್ನೂ ಲೇಟ್ ರಿಂದಯ್ಯ ಶೆಟ್ಟಿಯವರ ಧರ್ಮದಿಂದ 200 ರೂ ಗಳನ್ನೂ ಹಾಸ್ಟಲ್‌ಗೆ ಧರ್ಮಾರ್ಥವಾಗಿ ಕೊಟ್ಟರು.

—●—

ದೆಹಲಿ ಕೇಂದ್ರ ಶಾಸನ ಸಭೆಯು ನೂತನ ಅಧ್ಯಕ್ಷರಾಗಿದ್ದ ಸರ್ ಇಬ್ರಾಹಿಂ ರಹೀಮತುಲ್ಲಾರವರು ತಮ್ಮ 80 ನೆಯ ವಯಸ್ಸಿನಲ್ಲಿ ಜೊಹಾನ್ಸ್‌ಬರ್ಗಿಯಲ್ಲಿ ನಿಧನ ಪಟ್ಟರು.

— X—

ಪಂಜಾಬ್ ಪ್ರಾಂತ್ಯದ ಸಿಖ್ ಪಾರ್ಟಿ ಮತ್ತು ಮುಖ್ಯ ಮಂತ್ರಿಗಳಲ್ಲಿ ಸಂಧಾನವಾಗಿ ಪಂಜಾಬ್ ಮಂತ್ರಿಮಂಡಳದಲ್ಲಿ ಸರ್ದಾರ ಬಲದೇವಸಿಂಗರು ಸೇರಲಿದ್ದಾರೆಂಬ ನಿರೀಕ್ಷಣೆಯುಂಟು.

ಬರ್ಮಾ ಸರ್ಕಾರದ ಮುಖ್ಯ ಕಛೇರಿಗಳನ್ನು ಹಿಂದೂಸ್ತಾನದಲ್ಲಿ ಸ್ಥಾಪಿಸುವವಾಗಿ ಗೊತ್ತಾಗಿದೆ.

ಅಖಿಲ ಭಾರತ ಕಿಸಾನ ಸಭೆಯವರು ಬ್ರಿಟಿಷರ ಯುದ್ಧ ಪ್ರಯತ್ನಕ್ಕೆ ಸಹಾನುಭೂತಿಸಿ ವಿ ಭಾ.ರಶಕ್ತಿ ರಾಷ್ಟ್ರೀಯ ಸರಕಾರ ಕೊಡಬೇಕೆಂದು ಸೂಚಿಸಿದ್ದಾರೆ

ಸಬ್ಮೆರೀನ್

ಜಲಾಂತರ್ಗಾಮಿಯಲ್ಲಿ ಜೀವನ

ಇಂದಿನ ಯುದ್ಧದಲ್ಲಿ ಜಲಾಂತರ್ಗಾಮಿಗಳು ಎಂತಹ ಮಹತ್ವದ ಪಾತ್ರವಹಿಸಿವೆ ಎಂಬದು ಎಲ್ಲರಿಗೂ ತಿಳಿದೇ ಇರಬೇಕು. ಆದರೆ ಜಲಾಂತರ್ಗಾಮಿಗಳಲ್ಲಿ ಜೀವಿಸುವವರ ಜೀವನ ಯಾವ ರೀತಿ ಇರುತ್ತದೆಂಬ ವಿಷಯವು ಅನೇಕರಿಗೆ ಗೊತ್ತಿರವೆ ಇರಬಹುದು. ಹತ್ತಾರುವಾರ ಗಟ್ಟಲೇ ಸಮುದ್ರದೊಳಗೆ ಜಡಿಗಿಕೊಂಡು ಜೀವಿಸಿನರ್ವಹಿಸುವ ಈ ಜಲಾಂತರ್ಗಾಮಿಗಳಲ್ಲಿನ ಅಧಿಕಾರಿಗಳು ಇಂಜಿನಿಯರುಗಳು ನಾವಿಕರು ಇವರೇ ಮೊದಲಾದವರು ಬದುಕುವದಾದರೂ ಹೇಗೆ ಎಂಬ ವಿಷಯ ಸ್ವಾರಸ್ಯಕರವಾದ ಯೋಚನೆಯಾಗಿರುವದು. ಭಾರತಕ್ಕೂ ಸ್ವಾತಂತ್ರ್ಯ ನೌಕಾಬಲವನ್ನು ಟ್ಟುಕೊಳ್ಳುವ ಸುಯೋಗ ಮೊರೆತರೆ ಆಗ ಕೆಲವು ಭಾರತೀಯರು ಅತ್ಯುತ್ತಮವಾದ ಸಬ್ಮೆರೀನ್ ನೌಕೆಗಳನ್ನು ನಿರ್ಮಾಣ ಮಾಡಬಹುದಲ್ಲವೆ ಮತ್ತೆ ಕೆಲವರು ನಾವಿಕರಾಗಿಯೂ ಆದರಲ್ಲಿ ಸಾಹಸವನ್ನು ಜೀವನವನ್ನು ಕಳೆಯಬಹುದು

ಒಂದು ಜಲಾಂತರ್ಗಾಮಿಯು ತನ್ನ ಉದ್ಯೋಗದ ಮೇಲೆ ಹೊರಹೊಮ್ಮವದಕ್ಕೆ ಮುಂಚೆ ಹಲವಾರು ವಾರಗಳ್ಗಾಗುವಷ್ಟು ಎಣ್ಣೆ, ಪೆಟ್ರೋಲು, ಆಹಾರ ಸಾಮಗ್ರಿಗಳು ಇತ್ಯಾದಿ ಸಾಮಗ್ರಿಗಳನ್ನು ಶೇಖರಿಸಿಕೊಂಡು ಹೊರಡುತ್ತವೆ. ನಾವಿಕರು ಇಂಜಿನಿಯರುಗಳು ಒಮ್ಮೆ ಕೆಲಸದಲ್ಲಿ ನಿಯುಕ್ತರಾದರೆಂದರೆ ತೀರಿತು, ಕೆಲವು ಸಮಯ, ವಾರಗಟ್ಟಲೆ ಸೂರ್ಯನ ಮುಖವನ್ನು ಸಹ ನೋಡದೆ ಕಾರ್ಯ ನಿರ್ವಹಿಸಬೇಕಾಗಬಹುದು. ಆ ರೀತಿ ಇರುತ್ತದೆ ಜಲಾಂತರ್ಗಾಮಿನೊಳಗಿನ ಜೀವನ.

ಜಲಾಂತರ್ಗಾಮಿಯೊಳಗಿನ ಜನರಿಗೆ ಹೊರೆಯುವ ಆಹಾರ ಸಾಮಾನ್ಯ ಸೈನಿಕರಿಗೆ ಕೊಡುವಂತಹುದಾಗಿದೆ ಕೆಲವು ಪಿಷ್ಟಕ್ಕೆಗಳಂದ ಕೂಡಿರುತ್ತದೆ. ಆಹಾರ ಶಾಸ್ತ್ರವಿಶಾರದರು ಇಂಥದೆಂದು ಗೊತ್ತುಮಾಡಿ ಕೊಟ್ಟು ಆಹಾರವನ್ನೇ ಜಲಾಂತರ್ಗಾಮಿಯೊಳಗಿನ ಜನರಿಗೆ ಕೊಡಲಾಗುವದು. ಸೂರ್ಯನ ಬೆಳಕಿಲ್ಲದ ಭೂಮಿಯ ಮೇಲಿನ ಯಾವ ಚೇತನವೂ ಬಹುದಿನ ಜೀವಿಸಲಾರದು ಹಾಗೆ ಸೂರ್ಯನ ಸಹಾಯವಿಲ್ಲದೆ ಬದಕುವ ಪ್ರಾಣಿಗಳ ಆಹಾರ ವ್ಯವಹಾರಗಳೇ ಬೇರೆ ತರಹದ್ದಿರುತ್ತವೆ. ಆದರಂತೆಯೆ ಸೂರ್ಯನ ಬೆಳಕನ್ನೇ ಕಾಣದೆ ಹಲವಾರು ವಾರ ನೀರಿನೊಳಗೆ ಇರಬೇಕಾಗಿರುವ ಈ ನಾವಿಕರ ಆಹಾರ ವಿಶಿಷ್ಟ ಗುಣಗಳಿಂದ ಕೂಡಿದ್ದಾಗಿರುತ್ತದೆ. ಅಲ್ಲದೆ ನೀರಿನೊಳಗೆ ಬಹು ದಿನ ಇರಬೇಕಾದಾಗ ನಾವಿಕರ ತಪಸಿನ ಹಿಂಗಿ ಹೋಗಿರುತ್ತದೆ ಆವ್ದರಿಂದ ಆಹಾರವನ್ನು ನೋಡಿದ ಕೂಡಲೆ ಊಟ ಮಾಡಬೇಕೆಂದೆನಿಸುವಂತೆ ಅವರ ಆಹಾರವನ್ನು ಮನೋಹರವಾಗಿ ತಯಾರಿಸಲಾಗುತ್ತದೆ.

ತಲೆಕೆಳಗು ಪ್ರಪಂಚ

ಜಲಾಂತರ್ಗಾಮಿಗಳಲ್ಲಿ ಜೀವಿಸುವ ನರ ಜೀವನ ಭೂಮಿಯ ಮೇಲೆ ಇರುವ ನರ ಜೀವನಕ್ಕೆ ಸಂಪೂರ್ಣ ವಿರುದ್ಧವಾಗಿರುತ್ತದೆ. ಸಮುದ್ರದ ಮೇಲೆ ಸಂಚರಿಸುವ ನಾವಿಕರು ಹಗಲು ಬಿಸಿ ಊಟವನ್ನುಂಡು ರಾತ್ರಿ ಆರಿದ ಊಟವನ್ನು ಉಂಡರೆ ಜಲಾಂತರ್ಗಾಮಿಗಳವರು ಹಗಲು ಆರಿದ ಊಟವನ್ನುಂಡು ರಾತ್ರಿ ಬಿಸಿ ಊಟವನ್ನುತ್ತಾರೆ ಇದಕ್ಕೆ ಕಾರಣ ಇಷ್ಟೆ. ಹಗಲು ಹೊತ್ತಿನಲ್ಲಿ ಜಲಾಂತರ್ಗಾಮಿಯೊಳಗೆ ಇರುವಷ್ಟೇ ಗಾಳಿ ಅ ಹಗಲಿರಿಲ್ಲ ಅನಪೊಳಗಿರುವವರೆಲ್ಲರಿಗೂ ಆಗ ಬೇಕಾಗುತ್ತದೆ ಆಕ್ಸಿಜೆನ್ ಮತ್ತಷ್ಟು ಗಾಳಿ ಬೇಕಾಗುತ್ತದೆ ಆದ್ದರಿಂದ ಸಾಯಂಕಾಲ ಹೊತ್ತಿಗೆ ಜಲಾಂತರ್ಗಾಮಿ ನೀರಿನ ಮೇಲಕ್ಕೆ ಬಂದ ಮೇಲೆಯೇ ರಾತ್ರಿ ಬಿಸಿ ಊಟವನ್ನು ತಯಾರಿಸುವರು.

ಹತ್ತಾರು ವಾರಗಳವರೆಗೆ ಕೆಡದಂತೆ ಹೆಚ್ಚು ಪ್ರಮಾಣವನ್ನು ಆಕ್ರಮಿಸಿಕೊಳ್ಳದಂತೆ ಆಹಾರ ಸಾಮಗ್ರಿಗಳನ್ನು ಜಲಾಂತರ್ಗಾಮಿಗಳಲ್ಲಿ ಸಂಗ್ರಹಿಸುವದು ಒಂದು ಕಲೆಯೆನ್ನಬಹುದು.

ಜಲಾಂತರ್ಗಾಮಿಯ ಇಂಜಿನುಗಳಿರುವ ಕೋಣೆಗಳಲ್ಲಿಯೇ ಜೀವನ ವಿಚಿತ್ರವಾಗಿದೆ ಇಂಜಿನು ಕೋಣೆಗಳೆಂದರೆ ನಿಸರ್ಗತ ಸೆಕೆಯಾಗುವ ಸ್ಥಳಗಳೆಂದು ನಮ್ಮ ಭಾವನೆ ಇರುತ್ತದೆ ಆದರೆ ಜಲಾಂತರ್ಗಾಮಿಯ ಇಂಜಿನ್ ರೂಮಿನಲ್ಲಿ (ಎಂಜಿನ್ ಕೋಣೆಗಳಲ್ಲಿ) ಹಾಗಿಲ್ಲ ತಪ್ಪನೆಯ ಉಷ್ಣೆಯ ಬಟ್ಟೆಗಳನ್ನು ಹಾಕಿಕೊಂಡು ಅಲ್ಲಿನವರು ಕೆಲಸಮಾಡುತ್ತಿರುತ್ತಾರೆ. ನೀರಿನ ಮಟ್ಟದ ಮೇಲೆ ಬಂದಾಗ ಹೊರಗಿನ ಗಾಳಿಯನ್ನು ಎಳೆದುಕೊಳ್ಳುವ ಈ ಜಲಾಂತರ್ಗಾಮಿಗಳ ಇಂಜಿನ್ ರೂಮಿನಲ್ಲಿ ಅಷ್ಟು ಚಳಿಯಾಗುತ್ತಿರುತ್ತದೆ.

ಎರಡು ಬಗೆಯ ಇಂಜಿನ್ನುಗಳು

ಜಲಾಂತರ್ಗಾಮಿಗಳಲ್ಲಿ ಎರಡು ತರಹದ ಇಂಜಿನುಗಳನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ನೀರಿನ ಮಟ್ಟದ ಮೇಲೆ ಇರುವಾಗ ಡಿಸೆಲ್ ಇಂಜಿನುಗಳನ್ನೂ, ನೀರಿನೊಳಗಿರುವಾಗ ವಿದ್ಯುಚ್ಛಕ್ತಿಯ ಮೋಟಾರುಗಳನ್ನೂ ಜಲಾಂತರ್ಗಾಮಿಯ ಚಲನಕ್ಕೆ ಉಪಯೋಗಿಸಲಾಗುತ್ತದೆ. ಡಿಸೆಲ್ ಇಂಜಿನುಗಳು ನಡೆಯಬೇಕಾದರೆ ಗಾಳಿಯು ಅತ್ಯಗತ್ಯ. ಆದರೆ ವಿದುಚ್ಛಕ್ತಿಯ ಇಂಜಿನುಗಳಿಗೆ ಗಾಳಿಯು ಅಷ್ಟು ಅಗತ್ಯವಿಲ್ಲ, ಆದರಿಂದಲೇ ಈ ಎರಡು ತರದ ಇಂಜಿನುಗಳೂ ಜಲಾಂತರ್ಗಾಮಿಗೆ ಅವಶ್ಯವಾದವು. ಡಿಸೆಲ್ ಇಂಜಿನುಗಳಿಗೆ ಒಂದು ಸಾರಿ ಎಣ್ಣೆಯನ್ನು ತುಂಬಿದರೆ 12000 ಮೈಲು ದೂರ ಹೋಗುವನರೆಗೂ ಎಷ್ಟು ದಿನ ಅಂದರೆ ಅಷ್ಟು ದಿನ ನಡೆಯುತ್ತಿರುತ್ತದೆ. ಆದರೆ ಅದೇ ವಿದ್ಯುಚ್ಛಕ್ತಿಯ ಇಂಜಿನುಗಳು ಬ್ಯಾಟರಿಗಳಲ್ಲಿ ವಿದ್ಯುಚ್ಛಕ್ತಿ ಇರುವವರೆಗೂ ನಡೆಯಬಲ್ಲವು. ಸ್ಟೋರೇಜ್ ಬ್ಯಾಟರಿಗಳಲ್ಲಿರುವ ವಿದ್ಯುಚ್ಛಕ್ತಿ ಬಹು ಬೇಗ ಬರಿದಾಗಿ ಹೋಗುತ್ತದೆ. ಆದ್ದರಿಂದ ಈ ಬ್ಯಾಟರಿಗಳಲ್ಲಿ ಸಂಗ್ರಹವಾಗಿರುವ ವಿದ್ಯುಚ್ಛಕ್ತಿಯು ಜಾಗ್ರತೆ ಖರ್ಚಾಗದಿರಲೆಂದು ಜಲಾಂತರ್ಗಾಮಿಯು ನೀರೊಳಗೆ ಸಂಚಾರ ಮಾಡುವಾಗ ಅತಿ ವೇಗವನ್ನು ಬಹು ಕಡಿಮೆ ಮಾಡಲಾಗುವದು. ವಿದ್ಯುಚ್ಛಕ್ತಿಯು ಬರಿದಾದ ಕೂಡಲೆ ಜಲಾಂತರ್ಗಾಮಿಯು ನೀರಿನ ಮೇಲಕ್ಕೆ ಬಂದು ಡಿಸೆಲ್ ಇಂಜಿನುಗಳ ಸಹಾಯದಿಂದ ಮತ್ತೆ ವಿದ್ಯುಚ್ಛಕ್ತಿಯನ್ನು ಸ್ಟೋರೇಜ್ ಬ್ಯಾಟರಿಗಳಲ್ಲಿ ಭರ್ತಿಮಾಡಿಕೊಳ್ಳಬೇಕಾಗುತ್ತದೆ. ಆವ್ದರಿಂದಲೆ ಜಲಾಂತರ್ಗಾಮಿಗಳು ಶತ್ರುಗಳ ಜೇಬಿಗೆ ಸಿಕ್ಕಿಬಿದ್ದಾಗ ನಿಶ್ಚಬ್ದವಾಗಿ ನೀರಿನೊಳಕ್ಕೆ ಇದ್ದು ಬಿಡುವವು. ಜಲಾಂತರ್ಗಾಮಿಗಳು ಹೆಚ್ಚಿನ ಪೂರೈಕೆಗಳನ್ನು ಅಪೇಕ್ಷಿಸದೆ 110 ದಿನಗಳವರೆಗೆ ಇರಬಲ್ಲವು.

ಕರ್ಮವೀರ

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸು ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

15 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000 ನಿಂರಿದೆ
ಚಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ. 14,84,44,000 ,,
ಆಸ್ತಿ	ರೂ. 5,80,86,000 ,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪ್ರೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮಾಡಿದ ಕೂಲಿ ನೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚ್‌ಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರನ್ನು ನಿವರಗಳನ್ನು ತಿಳಿಯಿರಿ

ನಿಮಗನುಸುಕೂಲವಾದ ಶಿಕ್ಷಣಕ್ಕೆ ವ್ಯವಸ್ಥೆಯಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಕಗಳು ಕಛೇರಿಯಲ್ಲಿ ದೊರೆಯುವುದಲ್ಲದೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ಸ್ವಇಚ್ಛೆಯಾಗಿ ಹೇಳಲಾಗುವುದು

ಟಿ. ಬಿ. ಕೇಶವರಾವ್,
ಕ್ರೈಸ್ತ ಮಾಣಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—0—0	ಬಳ್ಳಾರಿಯವರಿಗೆ 2-0-0
Moffusil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local 1—4—0	ಬಳ್ಳಾರಿಯವರಿಗೆ 1-4-0
Moffusil 2—0—0	ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri _____

Printed at Vittal Press, Car Street Edited & Published by T. B Keshava Rao, Bellary

Reg. No. M. 3937 ವಂದೇ ಮಾತರಂ

ನವ ಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯವರಾನ್ನಿ ಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೩೭ ಬಳ್ಳಾರಿ ಜೂನ್ ೧೪ ನೇ ಭಾನುವಾರ ೧೯೨೨. ಟಿ. ಪಿ. ಕೇಶವರಾವ್

೩೦೬ ಮಂದಿ ಗಲ್ಲಿಗೆ.

ಫೈಡ್ರಿಜ್‌ರವರ ಕೊಲೆಯಪ್ರಯತ್ನ ನಡೆದಂದಿನಿಂದ ಇಲ್ಲಿಯವರಿಗೆ ಜರ್ಮನರು 306 ಜನರನ್ನು ಗಲ್ಲಿಗೇರಿಸಿದ್ದಾರೆಂದು ಲಂಡನ್ ವಾರ್ತೆಯು ತಿಳಿಸುತ್ತದೆ.

ಜಪಾನ ಸೈನ್ಯಗಳ ಮುಂದೋಟ.

ಚೆಕಿಯಾಂಗ ಪ್ರಾಂತ್ಯದ ಚಷೀನ ನಿವಾಸಿ ನಿಲ್ಲಾಣವೂ ಸೂಚೋನಗರವೂ ಶತ್ರುಗಳ ಸ್ವಾಧೀನವಾಯ್ತೆಂದು ಚಂಗ್ ಕೆಂಗ್ ನಿಂದ ಅಧಿಕೃತ ಸುದ್ದಿಯು ಹೊರಟಿದೆ.

ಚೀನಾದ ದುರ್ದೈವ ಸಹಾಯವು ಆವಶ್ಯಕ

ಬರ್ಮಾದೇಶದ ಆಕ್ರಮಣವನ್ನು ಮುಗಿಸಿ ಜಪಾನರು ಚೀನದೊಳಕ್ಕೆ ಪ್ರವೇಶಿಸಿ ಅತ್ಯಂತ ಮುಖ್ಯವಾದ ಪ್ರದೇಶಗಳನ್ನೆಲ್ಲಾ ಹಿಡಿದಿರುವರು. ಚೀನದ ಪತನವಾಗುವುದು ಅಸಂಭವವೆಂದೆನಿಸಿದರೂ, ಅವರಿಗೆ ಶಸ್ತ್ರಾಸ್ತ್ರಗಳ ಪೂರೈಕೆಯಾಗದ ಕಾರಣ, ಅವರಿಗೆ ಸೋಲಿನಮೇಲೆ ಸೋಲಾಗುತ್ತಲಿವೆ. ಅಮೆರಿಕಾದೇಶವು ತನ್ನ ರಕ್ಷಣೆ ಮಾಡಿಕೊಂಡು ಪೆಸಿಫಿಕ್ ಸಾಗರದ ರಂಗದಲ್ಲಿ ಜಪಾನೀಯರ ಜಲಾಂತರ್ಗಾಮಿಗಳನ್ನೆಲ್ಲ ದುರಿಸಿ 4—5 ಸಾವಿರ ನೈಲಿಯ ನಿಸ್ತೀರ್ಣದಲ್ಲಿ ಯುದ್ಧವನ್ನು ಸಾಗಿಸಬೇಕಾಗಿದೆ. ಇತ್ತ ಇಂಗ್ಲೆಂಡು ದೇಶವು ಯೂರೋಪ್ ಖಂಡದಲ್ಲಿ ಜರ್ಮನಿ ಇಟಲಿ ದೇಶಗಳ ದಾಂಧಲೆಗಳನ್ನು ಎದುರಿಸಿ ಸ್ವಸಂರಕ್ಷಣೆಯ ಕಾರ್ಯದಲ್ಲಿ ತೊಡಗಿದೆ. ಬರ್ಮಾದಲ್ಲಿ ಜನರಲ್ ಅಲೆಕ್ಸಾಂಡರವರ ಅಧಿಪತ್ಯದಲ್ಲಿ- ಸೈನ್ಯವು ಚೈನೀಯರ ಸಹಾಯವನ್ನು ಪಡೆದು ಶೌರ್ಯದಿಂದ ಹೋರಾಡಿದರೂ ಹಿಂದಕ್ಕೆ ಬರಬೇಕಾಯಿತು. ಭಾರತದ ಸೈನ್ಯವು ಬೇರ್ಪಡಿಸಲ್ಪಟ್ಟಮೇಲೆ ಚೈನೀಯರ ಸಂಕಟಗಳು ಹಚ್ಚಾದವು. ಅವರೊಬ್ಬರೇ ಕಾದಾಡಬೇಕಾಯಿತು.

ಕಳೆದ 5-6 ವರ್ಷಗಳಿಂದ ಚೀನಾ ದೇಶವು ಜಪಾನಿನೊಡನೆ ಯುದ್ಧವನ್ನು ಹೂಡಿದೆ. ಪರದೇಶಗಳಿಂದ ಚೀನಕ್ಕೆ ಸಹಾಯವು ಬರುತ್ತಲಿತ್ತು. ಬರ್ಮಾ ರಸ್ತೆಯು ಜಪಾನರಿಂದ ಆಕ್ರಮಿಸಲ್ಪಟ್ಟನಂತರ ಸಹಾಯವು ಹೋಗುವುದುಕೂಡ ನಿಂತು ಹೋಯಿತು. ಹೀಗಾಗಿ ಚೀನಾದೇಶೀಯರು ಬಹಳ ಆಪತ್ತಿಗೆ ಸಿಕ್ಕಿರುವರು. ಪ್ರಪಂಚದಲ್ಲಿ ಅತಿದೊಡ್ಡ ದೇಶಗಳಾದ ಚೀನಾ ಮತ್ತು ಇಂಡಿಯಾ ದೇಶಗಳು ಸ್ವತಂತ್ರ ಉಳಿಯದಿದ್ದರೆ, ಪ್ರಪಂಚಕ್ಕೇ ಶಾಂತಿ ಇಲ್ಲವೆಂದು ಪಂಡಿತ ಜವಹರಲಾಲರೂ ಮಾರ್ಷಲ್ ಚಂಗ್‌ಕೇಶೇಕರೂ ಅಭಿಪ್ರಾಯಪಟ್ಟಿರುವರು. ಇಂಧಾ ಕನ್ನಡೆಕೆಯಲ್ಲಿ ಇನ್ನೂ ಸರಾಧೀನರಾಗಿರುವ, ನಿಶ್ಶಸ್ತ್ರರಾಗಿರುವ, ಭಾರತೀಯರು ಚೀನಕ್ಕೆ ಸಹಾಯ ಒದಗಿಸುವುದು ಸಾಧ್ಯವಿಲ್ಲವೆಂದು ನಮ್ಮ ಕಿಳಿ ಪ್ರಾಯ. ಮಿತ್ರರಾಷ್ಟ್ರಗಳಾದ ಇಂಗ್ಲೆಂಡ್ ಅಮೆರಿಕಾಗಳು ಚೀನಕ್ಕೆ ಸಹಾಯಮಾಡಿ ಅದರ ಸ್ವಾತಂತ್ರ್ಯವನ್ನುಳಿಸಿದರೆ ಆಗ ಮಾತ್ರ ಅವುಗಳ ಪ್ರಜಾ ಸಾಮ್ರಾಜ್ಯ ತತ್ವವು ಕಾರ್ಯತಃ ವ್ಯಕ್ತವಾಗುವುದು. ಜನರಲ್ ಸ್ಟಿಲ್‌ವೆಲರು ಚಂಗ್ ಕೆಂಗನ್ನು ಹೋಗಿರುವರು. ತಡಮಾಡಿದಂತೆಲ್ಲಾ ಅಪಾಯವು ಹೆಚ್ಚುವುದು. ಚೀನದ ಪತನವಾಯ್ತೆಂದರೆ ಹಿಂದೂದೇಶಕ್ಕೆ ಗಂಡಾಂತರವು ತಪ್ಪಿದ್ದಲ್ಲ. ಈ ಕಾರಣ ಮಿತ್ರರಾಷ್ಟ್ರಗಳು ಕೂಡಲೇ ಅವಕ್ಕೆ ಸಹಾಯಮಾಡಲೆಂದು ಆಶಿಸೋಣ.

ಅಲಸ್ಕಾ ಮುತ್ತಿಗೆ.

ಅಮೆರಿಕಾದ ಅಧೀನದಲ್ಲಿರುವ ಅಲಾಸ್ಕಾ ದ್ವೀಪದ ಬಹು ಮುಖ್ಯ ಬಂದರಿನ ಮೇಲೆ ಕಳೆದವಾರ 19 ಜಪಾನ್ ವಿಮಾನಗಳು ಬಾಂಬುಗಳನ್ನು ಸುರಿಸಿ ನಷ್ಟವುಂಟುಮಾಡಿದವು. ಇದು ಪೋರ್ಟ್‌ಹೋದಮೇಲೆ ಅಮೆರಿಕನ್ನರು ಮಾಡಿದ ಮುತ್ತಿಗೆಯ ಬದಲೆಂಬುದಾಗಿ ಹೇಳಲಾಗಿದೆ.

೧೫೦ ನಾವಿಕರು ಸತ್ತರು.

ಏಪ್ರಿಲ್ 6 ನೆಯ ತಾ. ಬಂಗಾಳ ಕೊಲ್ಲಿಯಲ್ಲಿ ಮುಳುಗಿದ 7 ಮಿತ್ರರಾಷ್ಟ್ರ ಹಡಗುಗಳಲ್ಲಿ 150 ಜನ ನಾವಿಕರು ಸತ್ತಿರ ಬಹುದೆಂದು ಈಗ ಅಂದಾಜು ಮಾಡಿರುವರು.

ಭೂಮಧ್ಯ ಸಮುದ್ರದಲ್ಲಿರುವ ಮಾಲ್ಟಾ ಬಂದರಿನ ಮೇಲೆ ಮಾರ್ಚ್ 24ರಿಂದ ಏಪ್ರಿಲ್ 12ರವರೆಗೆ 1869 ಟನ್ ಬಾಂಬುಗಳನ್ನು ಶತ್ರುಗಳು ಸುರಿಸಿರುವುದಾಗಿ ಮಾಲ್ಟಾದಿಂದ ಬಂದ ವಾರ್ತೆಯಿಂದ ಗೊತ್ತಾಗಿದೆ.



ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓಮವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ ಒಂದುಸಲ ಉಪಯೋಗಿಸಿದರೆ ನಮಗೆ ತೃಪ್ತಿಯಾಗುವುದು.

ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ

322

THE NAVA BHARAT
ನವಭಾರತ
ಸಂಪಾದಕ-ಟಿ.ಆರ್.ಕೇತವರಾವ್
ಜೂನ್ 14, ಭಾನುವಾರ 1942.

ಆಹಾರಸಾಮಗ್ರಿ ಮತ್ತು ಕಾಗದದ ಧಾರಣೆ ನಿಯಂತ್ರಣ.

ಮುಖ್ಯಮಂತ್ರಿ ಸರ್ಕಾರದವರು ಆಹಾರ ಸಾಮಗ್ರಿಗಳನ್ನು ನಿಯಂತ್ರಣದಲ್ಲಿಡಲು ಜಿಲ್ಲಾ ಕಲೆಕ್ಟರುಗಳು ಮತ್ತು ತಹಸೀಲ್ದಾರರ ಮೂಲಕ ವರ್ತಕರ ಸಹಕಾರವನ್ನು ಕೋರಿ, ಅವರ ಸಲಹೆಗಳಿಂದಲೇ ಧಾರಣೆಯನ್ನು ನಿರ್ಣಯಿಸುತ್ತಲಿರುವರು. ಮಾರಕ್ಕೊಂದು ಸಲ ಹೀಗೆ ಮಾಡುವರು. ಯುದ್ಧದ ಕಾರಣ ವಾಗೀಸುಗಳು ಹೊರಿಯದೆ ಸಾಮಗ್ರಿಗಳು ಒಂದು ಕಡೆಯಿಂದ ಮತ್ತೊಂದುಕಡೆಗೆ ಸಾಗುವುದು ಕಠಿಣವಿದೆ ಬೇಕಾದರೆ ವರ್ತಕರ ತಲ್ಪಸ್ವಲ್ಪ ಸ್ಟಾಕುಗಳು ಬರ್ಜಾಗುತ್ತಿರುವಾಗ ಒಂದೇ ಧಾರಣೆಯನ್ನು ಇಡುವುದು ಸಾಧ್ಯವಿಲ್ಲವೆಂದು ಕೆಲ ವರ್ತಕರು ಮಾನವಿರಬಹುದು. ಆದರೆ ಇದು ಸಂಪೂರ್ಣ ಸತ್ಯವಾದುದಲ್ಲ ಲಾಭದ ಉದ್ದೇಶ ಅನೇಕ ವರ್ತಕರು ಬಹಳ ಸಾಲವನ್ನು ಸ್ಟಾಕುಮಾಡಿರುವರು. ಯುದ್ಧ ವೆಕಾರಣವನ್ನು ಹೇಳಿ ಅವರ ಸೋಗಿನಲ್ಲಿ ಅಪರಿಮಿತ ಲಾಭವನ್ನು ಪಡೆಯುತ್ತಿರುವರು. ಆಹಾರಸಾಮಗ್ರಿಗಳು ಯುದ್ಧದ ಪರಿಸ್ಥಿತಿಯಿಂದ ಪರದೇಶಕ್ಕೆ ರಫ್ತಾಗುತ್ತಿಲ್ಲ ಒಂದೂರಿಂದ ಮತ್ತೊಂದೂರಿಗೆ ಬರುವುದು ಸ್ವಲ್ಪ ತಡವಾಗಬಹುದು ಅಷ್ಟೇ

ಸರಕಾರದವರ ಈಸಲಹಾ ಸಮಿತಿಯ ಯತ್ನಗಳಿಂದ ಉತ್ಪನ್ನವಾದ ಬೆಲೆಗಳ ನಿಯಂತ್ರಣಕ್ಕೆ ಶಾಸನದ ಅಧಿಕ ರವಿಲ್ಲದೆ ಅವನ್ನು ಅಮಲಿನಲ್ಲಿ ತರುವುದು ಸುಲಭವಾಗುತ್ತದೆ. ಈಗಿನ ನಿರ್ಬಂಧಗಳಿಗೆ ಶಾಸನದ ಅಧಿಕ ರವಿಲ್ಲದ ಕಾರಣ (ವರ್ತಕರಿಗೆ ಅದು ಚೆನ್ನಾಗಿ ತಿಳಿದಿರುವುದರಿಂದ) ವರ್ತಕರು ತಮಗೆ ಚೆನ್ನಾಗಿ ಲಾಭಬರುವ ರೀತಿಯಲ್ಲಿ ಕೆಲವಸ್ತುಗಳನ್ನು ಸಿಕ್ಕಾಪಟ್ಟೆ ಮಾರುತ್ತಿರುವರು. ನಿರ್ಬಂಧಿಸಿದ ಬೆಲೆಗಳು ಜಾರಿಯಲ್ಲಿರುವವೇ ಎಂಬುದನ್ನು ಕಂಡು ಹಿಡಿಯಲು ಪ್ರತ್ಯೇಕ ಸಿಬ್ಬಂದಿ ಇಲ್ಲ.

ಶ್ರೀ ಟಿ. ಜಿ. ಲಕ್ಷ್ಮಯ್ಯಶ್ರೇಷ್ಠಿ, ಆದವಾನಿ.

(ಇವರು ಬಳ್ಳಾರಿ ಹರಿಜನ ಸೇವಕ ಸಂಘದಾಶ್ರಯದ ವಿದ್ಯಾರ್ಥಿನಿಲಯಕ್ಕೆ 100 ರೂ. ದಾನ ಕೊಟ್ಟಿರುವರು.)

ಇನ್ನು ಕಾಗದದ ವಿಚಾರ:- ವಿವಿಧ ಜಾತಿಯ ಜಾತಿಯ ಕಾಗದಗಳನ್ನು ಇಂತಿಷ್ಟು ಬೆಲೆಗೆ ಮಾರಬೇಕೆಂದೂ, ಮಾರುವವರು ತಮ್ಮಲ್ಲಿರುವ ಮಾಲಿನ ನಿಜವಾದ ಸ್ಟಾಕನ್ನು ಇಂತಿಷ್ಟು ದಿನಗಳೊಳಗೆ ಕಲೆಕ್ಟರರಿಗೆ ತಿಳಿಸಬೇಕೆಂದೂ ಇಂಡಿಯಾ ರಕ್ಷಣೆ ಶಾಸನವನ್ವಯ ಮುಖ್ಯಮಂತ್ರಿ ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ.

ಆ ಆಜ್ಞೆಯು ಕಾಗದದ ಸೇಲಿಯೆ. ವರ್ತಕರ್ಯಾರೂ ಸರಕಾರವು ನಿಯಂತ್ರಿಸಿದ ಬೆಲೆಗೆ ಮಾರುತ್ತಿಲ್ಲವೆಂದು ದೃಢಪಟ್ಟುಹೋಗಿದೆ. ಉದಾಹರಣೆಗಾಗಿ ಪ್ರಿಂಟಿಂಗ್, ಕೇಪ್ ಕಾಗದವನ್ನು ಒಂದಾಂಡು ಕಾಗದದ ರೀಮಿಗೆ ರೂ. ೩-೬-೦, ೪ ಪೌಂಡು ರೀಮಿಗೆ ೪ ರೂ. ಮಾರಬೇಕೆಂದು ಸರಕಾರದ ನಿಯಮವಿದೆ ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲ ಪರಿಶೋಧಿಸಿದರೂ ಈ ಧಾರಣೆಗೆ ಮಾರುವವರು ದೊರಕುವುದಿಲ್ಲ ಕಲೆಕ್ಟರವರಿಗೆ ಕೆಲವರು ಹೇಳಿಕೊಂಡು ವರ್ತಕರನ್ನು ಅವರು ಎಚ್ಚರಿಸಿದರೂ ಉಪಯೋಗವಾಗಲಿಲ್ಲ. ಆದರಿಂದ ಏನೂ ಪರಿಣಾಮವಾಗಲಿಲ್ಲ. ಕಾಗದದ ವರ್ತಕರು ತಮ್ಮಲ್ಲಿ ಸ್ಟಾಕು ಇಲ್ಲವೆಂಬಂಶವನ್ನು ಪ್ರಕಟನೆಗಳಲ್ಲಿ ತೋರಿಸಿ ಗುಪ್ತವಾಗಿ ಮಾರಲು ಬರುತ್ತಿದೆ. ಈ ವರ್ತಕರಿಗೆ ಎಷ್ಟೂ ಉಪಾಯಗಳೂ ಗೊತ್ತಿರುತ್ತವೆ ಸರಕಾರದ ಆಜ್ಞೆಯು ಒಂದು ದೊರಟರೆ ಅ ಪತ್ತನ್ನು ಜಾರಿಯಲ್ಲಿ ತರಲು ಪೋಲೀಸರ ಸಹಾಯವು ಬೇಕು. ಆಗ್ನೆಯನ್ನು ಭಂಗಿಸಿ, ಹೆಚ್ಚಿನ ಬೆಲೆಗೆ ಮಾರುವವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಬೇಕು. ಯುದ್ಧದ ನಿತ್ಯಸರಿಸ್ಥಿತಿಯಿಂದ ಉದ್ಭವವಾದ ಕಾರಣಗಳಿಗಾಗಿ ಇಂಡಿಯಾ ಸರಕಾರವು - ಪ್ರಾಂತೀಯ ಸರಕಾರಗಳೂ ನಿತ್ಯ ಆಜ್ಞೆಗಳನ್ನು ಮಾಡಿ ಅವುಗಳನ್ನು ಜಾರಿಯಲ್ಲಿ ತರಲು ರಿವಿನ್ಯೂ ಅಧಿಕಾರಿಗಳನ್ನೇ ಆಧಾರಪಟ್ಟಿರುವವು. ಇದು ಸಕ್ರಮವಾದುದಲ್ಲ.

ರಿವಿನ್ಯೂ ಅಧಿಕಾರಿಗಳಿಗೆ ಕೆಲಸ ಬಹಳ ಹೆಚ್ಚಿರುವುದೆಂದು ಅವರು ಈಗಾಗಲೇ ಗೊಣಗುಟ್ಟುತ್ತಿರುವರು. ಇಂಥಾ ಸಂದರ್ಭದಲ್ಲಿ ಅವರ ಕೆಲಸ ಹೆಚ್ಚು ಮಾಡುವುದು ಒಳ್ಳೆಯದಲ್ಲ ಸರಕಾರದವರು ಇದನ್ನೆಲ್ಲಾ ಆಲೋಚಿಸಿ ತಕ್ಕ ವ್ಯವಸ್ಥೆಯನ್ನು ಮಾಡುವರೆಂದು ನಂಬುತ್ತೇವೆ.

ರಾಜಾಜಿಯವರ ಅಸ್ವಾಭಾವಿಕ ಯೋಜನೆ

ರಾಜಾಜಿಯವರ ಪ್ರಸಾರದಿಂದ ದೇಶವನ್ನು ತಪ್ಪುದಾರಿಗೆ ಒಯ್ದಂತಾಗುವದು.

ಮಹಾತ್ಮಗಾಂಧಿಯವರ ಲೇಖನ.

ಹೊರಗಿನ ನಟನೆಯಿಂದ ಈ ರೀತಿ ಭಿನ್ನಾಭಿಪ್ರಾಯಗಳನ್ನು ಸರಿಪಡಿಸಲು ಸಾಧ್ಯವಿಲ್ಲ ಇದಕ್ಕೆ ಪ್ರತಿಯಾಗಿ ಈ ಘಟನೆಯಿಂದ ದೇಶವನ್ನು ತಪ್ಪುದಾರಿಗೆ ಒಯ್ದಂತಾಗುತ್ತದೆ ಇದರಿಂದ ರಾಜಾಜಿಯವರ ತಕ್ಷಣದ ಉದ್ದಿಶ್ಯವಾಗಲಿ ನನ್ನದಾಗಲಿ ನೆರವೇರುವುದಿಲ್ಲ. ನಾನಿಬ್ಬರೂ ಸಮಾನ ರೀತಿಯಲ್ಲಿ ದೇಶವನ್ನು ಪ್ರೀತಿಸುತ್ತೇವೆ. ಆದರೆ ನಮ್ಮ ಸೇವಾಕಾರ್ಯವು ಸದ್ಯಕ್ಕೆ ಪರಸ್ಪರ ಭಿನ್ನವಾಗಿದೆ, ಬ್ರಿಟಿಷರ ಸಹಾಯದಿಂದ ಜಪಾನರ ಮುತ್ತಿಗೆಯನ್ನು ಎದುರಿಸಬಹುದೆಂದು ಅವರು ನಂಬುತ್ತಾರೆ. ನಾನಾವರೂ ಕಟ್ಟಕಡೆಯಲ್ಲಿ ಇದು ಅಸಾಧ್ಯವೆಂದು ಭಾವಿಸುತ್ತೇನೆ.

"ಭಾರತವು ಬ್ರಿಟಿಷ ಜನರ ಮಾತೃಭೂಮಿಯಲ್ಲ ಶತ್ರುಗಳ ಏಟು ಜೋರಾದರೆ ಅವರು ಭಾರತದಿಂದ ಹಿಮ್ಮೆಟ್ಟುವರು. ಸಿಂಗಪುರ್, ಮಲಯಾ ಮತ್ತು ರಂಗೂನುಗಳಿಂದ ಬ್ರಿಟಿಷರು ತಮ್ಮ ಹೆಂಗಸರು ಮಕ್ಕಳೊಡನೆ ಯಾವರೀತಿ ಹಿಂದೆ ಸರಿದರೋ ಅದೇ ರೀತಿ ಭಾರತದಿಂದಲೂ ತೆರಳುವರು. ಇದರಿಂದ ಅವರಿಗೆ ಅವಮಾನವೇನೂ ಇಲ್ಲ. ಪ್ರತಿಯೊಂದು ಸೇನೆಯೂ ಹಾಗೆ ಮಾಡಬೇಕಾದದ್ದೆ. ಆದರೆ ಅವರು ಬಹುಬೇಗ ಭಾರತವಿಂದ ಭಾರತೀಯ ಸೈನ್ಯವನ್ನು ಕರೆದೊಯ್ಯುವುದಿಲ್ಲ. ಭಾರತೀಯರು ಹೊಡೆದಾಟವನ್ನು ಮುಂದುವರಿಸುವಂತೆ ಅವರು ಸಿದ್ಧರೀಕ್ಷಿಸಬಹುದು. ಬ್ರಿಟಿಷರು ಅವಕಾಶವಿದ್ದರೆ ಭಾರತದ ಹೊರಗಿನಿಂದ ಜರ್ಮನರಿಗೆ ತೊಂದರೆ ಕೊಡಬಹುದು ಆದ್ದರಿಂದ ನನ್ನ ಲೇಖಕರು ತಿಳಿಸುವುದಕ್ಕೂ ನಾನು ಹೇಳುವುದಕ್ಕೂ ವ್ಯತ್ಯಾಸವೇನೂ ಇಲ್ಲ ಬ್ರಿಟಿಷರು ಶಿಸ್ತಿನಿಂದ ಭಾರತವನ್ನು ಬಿಡಬೇಕೆಂದು ಮಾತ್ರ ನಾನು ಹೇಳುತ್ತೇನೆ. ಮೊದಲೇ ಆಲೋಚಿಸಿದ್ದ ಮಿಲಿಟರಿ ಕಾರ್ಯಕ್ರಮದಂತೆ ಇದು ನಡೆದುಹೋಗಬೇಕು. ಇದರಿಂದ ಭಾರತದ ಕೋಟ್ಯಾಂತರ ಜನರಿಗೆ ಸಂತೋಷವಾಗಬಹುದು. ಈಗ ಶತ್ರುಗಳೆನಿಸಿರುವ ಬ್ರಿಟಿಷರು ಆಗ ಮಿತ್ರರೆನಿಸುವರು ಅವರು ಆಗ ತಮ್ಮ ಮಿತ್ರರಾದ ಭಾರತೀಯರೊಡನೆ ಸಹಕರಿಸಿ ಕೆಲಸಮಾಡುವರು. ಆಗ ಪರಿಸ್ಥಿತಿಯು ಸಂಪೂರ್ಣವಾಗಿ ಸ್ವಾಭಾವಿಕವೆನಿಸುವುದು. ನಮಗೂ ಬ್ರಿಟಿಷರಿಗೂ ದೊಡ್ಡ ಸೇನೆಯು ದೊರೆಯುವಂತಾಗುವುದು. ಇದಲ್ಲದೆ ಬ್ರಿಟನ್ನು ನೈತಿಕವಾಗಿ ಉಚ್ಚ ಸ್ಥಾನವನ್ನು ಹೊಂದುವುದು.

ಸ್ವಾತಂತ್ರ್ಯದ ಹಿಂದೆ ಏಕಮತ್ಯ.

ಇನ್ನು ಕೋಮುವಾರು ಏಕಮತ್ಯದ ವಿಚಾರ ಮೂರನೆ ಪ್ರಶ್ನೆಯು ಮಾಯವಾಯಿತೆಂದರೆ ರಾತ್ರಿಯ ಹಿಂದೆ ಹಗಲು ಬರುವಂತೆ ಏಕಮತ್ಯವುಂಟಾಗುವುದು ಖಂಡಿತ ಸ್ವಾತಂತ್ರ್ಯಕ್ಕೆ ಮುಂಚೆ ಏಕಮತ್ಯವುಂಟಾಗುವುದಿಲ್ಲ. ಅದು ಸ್ವಾತಂತ್ರ್ಯದ ಹಿಂದೆ ಬರುತ್ತದೆ. ಇಂದು ನಮಗೆ ಕಾಂಗ್ರೆಸ್ ಮತ್ತು ಲೀಗ್‌ಗಳ ಗುರಿ ಒಂದೆಂಬುದು ಸಹ ಗೊತ್ತಿಲ್ಲ. ಸ್ವಾತಂತ್ರ್ಯ ಪಡೆಯುವ ವಿಚಾರಗಳಲ್ಲಿ ಲೀಗಿನ ಸಹಕಾರ ಪಡೆಯಲೋಸುಗ ಲೀಗಿಗೆ ಲಂಚ ಕೊಡಲು ಸಾಧ್ಯವಿಲ್ಲ ಭಾರತವು ಮುಸ್ಲಿಮೇತರರಿಗೆ ಸೇರಿರುವಂತೆಯೇ ಮುಸ್ಲಿಮರಿಗೂ ಸೇರಿದ್ದೆಂದು ಲೀಗು ಭಾವಿಸಬಹುದು ಅಥವಾ ಭಾವಿಸದಿರಬಹುದು. ಹಾಗೆ ಅದು ಭಾವಿಸಿದ ದರಿಮೊದಲು ಅದು ಭಾರತವನ್ನು ಗುಲಾಮಗಿರಿಯಿಂದ ಬಿಡಿಸಬೇಕು. ತದನಂತರ ವಿಭಾಗದ ಪ್ರಶ್ನೆ. ಇಂದು ಭಾರತವನ್ನು ಕತ್ತರಿಸಬೇಕಾದ ಕಾರಣವೇ ಇಲ್ಲ ಮನೆಯೊಳಗೆ ಸೇರಿಕೊಂಡಿರುವ ಹೊರಗಿನವರನ್ನು ಓಡಿಸಿದಮೇಲೆ ಅದರ ಹಂಚಿಕೆಗಾಗಿ ಲೀಗ್ ಒತ್ತಾಯ ಪಡಿಸಬಹುದು. ಸಂಧಾನದ ಮೂಲಕವಾಗಿಯಾಗಲಿ ಬಲವಂತದಿಂದ ಆಗಲಿ ಈ ಕಾರ್ಯವನ್ನು ನೆರವೇರಿಸಬಹುದು. ಭಾರತವು ಮುಸ್ಲಿಮರ ಮಾತೃಭೂಮಿಯಲ್ಲವೆಂದು ಲೀಗು ನಂಬುವುದಾದರೆ, ಭಾರತವನ್ನು ಗುಲಾಮಗಿರಿಯಿಂದ ಬಿಡಿಸಲು ಲೀಗಿನೊಂದಿಗೆ ಸಂಧಾನ ನಡೆಸುವ ಮಾತೇ ಇಲ್ಲ.

"ರಾಜಾಜಿಯವರ ಯೋಜನೆಯು ನನ್ನ ಅಭಿಪ್ರಾಯದಲ್ಲಿ ಸಂಪೂರ್ಣವಾಗಿ ಅಸ್ವಾಭಾವಿಕವಾದುದು. ಅವರು ಬಲವಂತವಾಗಿ ನನ್ನು ಸಹಾಯವನ್ನೂ ತೆಗೆದುಕೊಳ್ಳಲೆಂದು ಬ್ರಿಟಿಷರನ್ನು ಒತ್ತಾಯ ಪಡಿಸುತ್ತಿದ್ದಾರೆ. ಬ್ರಿಟಿಷರು ಭಾರತವನ್ನು ಗೆದ್ದಿರುವುದರಿಂದ ಅವರು ತಮ್ಮ ಹಕ್ಕನ್ನು ಬಯಸಿ ತಮಗೆ ಬೇಕಾಗುವುದನ್ನು ಸಜೆಯುತ್ತಲೇ ಇದ್ದಾರೆ. ಬಲವಂತವಾಗಿ ಬ್ರಿಟಿಷರಕಡೆ ಹೋಗಿ ನಿಲ್ಲಲೋಸುಗ ರಾಜಾಜಿಗಳು ಇಂದು ಮುಸ್ಲಿಂಲೀಗಿಗೆ ಸ್ವಯಂ ನಿರ್ಣಯಾಧಿಕಾರವನ್ನು ಕೊಡಲು ಮುಂದೆ ಬಂದಿದ್ದಾರೆ. ರಾಜಾಜಿಯವರು ಭಾರತದ ವಿಭಾಗವನ್ನು ಒಪ್ಪುವುದಿಲ್ಲ ಆದರೆ, ವಿಭಾಗಕ್ಕೆ ಒಪ್ಪಿಕೊಳ್ಳುವುದರಿಂದ ವಿಭಾಗವಾಗದಂತೆ ನೋಡಿಕೊಳ್ಳಬಹುದೆಂದು ಅವರು ನಂಬಿದ್ದಾರೆ.

"ನಮ್ಮ ಭಿನ್ನಾಭಿಪ್ರಾಯಗಳನ್ನು ಕಟ್ಟಕೊಂಡು ತಾಪತ್ರಯ ಪಡಬಾರದೆಂದು ನಾನು ನನ್ನ ಲೇಖಕರಿಗೆ ತಿಳಿಸುವೆನು. ನನಗೂ ರಾಜಾಜಿಯವರಿಗೂ ತಕ್ಕಷ್ಟು ಪರಿಚಯವಿದೆ. ಪರಸ್ಪರ ಪ್ರೀತಿಯಿದೆ. ತಪ್ಪು ನನ್ನದಾಗಿರಲಿ, ಅವರದಾಗಿರಲಿ ಈ ಕಾಲಕ್ರಮವನ್ನಲ್ಲಿ ಸರಿ ಹೋಗಬೇಕೆಂದು ಬಿಟ್ಟು ಬಿಡುವೆನು ಆದರೆ ಈಗ ಕೋಪವನ್ನೂ, ಅಸಹನೆಯನ್ನೂ ತ್ಯಜಿಸಬೇಕಾಗಿದೆ. ಸರಿಯಾಗಿ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದಂತೆ ಜಪಾನಿಯರು ಶತ್ರುಗಳು" ಎಂಬುದಾಗಿ ಬರೆದಿದ್ದಾರೆ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಚಿನವ್ಯಗೀತೆ	೦—೮—೦
ಕನ್ನಡ ಪದ್ಯಪಾಠಸಮುಚ್ಚಯಗಳು	೦—೯—೦
ಶಿವಾನುಭವ ಬೋಧೆ	೦—೮—೦
ಸುಮತಿ ಶತಕ	೦—೧—೬

ಅಂಚೆ ವೆಚ್ಚ ಬೇರೆ ಪುಸ್ತಕ ವ್ಯಾಪಾರಿಗಳಿಗೂ ಹೊಸ ಪುಸ್ತಕ ಕೊಳ್ಳುವರಿಗೂ ಫಾರಿನವಾಡ ಕಮೀಶನ್

ಕಾಲವ ಸುಬ್ಬಣ್ಣ, ಮಜ್ಜಂಟ್ಟು, ಬಳ್ಳಾರಿ.

M. HULUGOJI RAO MEMORIAL FOOT-BALL TOURNMENT.

BELLARY.

1) Navajeevana & Mallasajjon won against Reserve Police by 2 goals to one.
2) Free looters won against B. U F. C. 'B' team by 3goals to 1.
3) Merchants 'A' team won aginst Merchants 'B' team by three goals to nil.
4) B. U. F. C. 'C' team won against Young Wardlaw High School by one goal is to nil.
5) Razzek eleven Adont won against Moti Club by three goals to nil.
6) B. U F. C. 'A' team won ogainst Civic guards of Adoni by erght goals to one.

ಬಳ್ಳಾರಿಯ ಸುಪ್ರಸಿದ್ಧ ವರ್ತಕರಾದ ಶ್ರೀ ವೈ. ಮಹಾಬಲೇಶ್ವರಪ್ಪನವರಿಗೆ ಬ್ರಿಟಿಷ್ ಭೊರೆಗಳ ಜನ್ಮ ದಿನ ಕೊಡುವ ಗೌರವ ಪದವಿಗಳಲ್ಲಿ ರಾವ್ ಬಹಾದ್ದುರ್ ಪದವಿಯು ದೊರೆತಿದೆ. ಸನ್ಮಾನ ಸಮಾರಂಭವು ಶೀಘ್ರದಲ್ಲೇ ನಡೆಯಲಿದೆಯೆಂದು ಗೊತ್ತಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಕ್ಷಾಮ.

ಆದವಾನಿ ತಾಲೂಕಿನ ಸಂಬಳದಿನ್ನೆ, ನಂದನರ, ತಿಮ್ಮಾಪುರ, ಮುನ್ತಿಸುಂಚಾಲ ಕೇಂದ್ರಗಳಲ್ಲಿ 6ನೆಯ ತಾ. ಗೆ ಮುಗಿಯುವ ವಾರವಲ್ಲಿ 22510 ಜನರು, ಆಲೂರು ತಾಲೂಕಿನ ಪೆಬ್ಬಟಪಲ್ಲಿ 2444 ಜನರು, ಸಿರುಗುಪ್ಪೆ ತಾಲೂಕು ರಾಯಪಾಳು ವತ್ತುಸುರವಣಿ ರಸ್ತೆ ಕಾರ್ಯದಲ್ಲಿ 2436 ಜನರು ಸಹಾಯ ಹೊಂದಿದರು. ರಾಯದುರ್ಗದಲ್ಲಿ 697 ಜನರೂ, ಆದವಾನಿ ತಾಲೂಕಿನ 5 ಕೇಂದ್ರಗಳಲ್ಲಿ 4539 ಜನ ನೆಯ್ಕಾರರು ಸಹಾಯ ಹೊಂದಿದರು ಸಂಕಟವು ಹೆಚ್ಚುತ್ತಲಿದೆ.

ಎಮ್ಮಿಗನೂರು ಅಧಿಕಾರಿ ಸಮಿತಿಯವರು ಕ್ಷಾಮಕೇಂದ್ರಗಳಲ್ಲಿ

ಹಾಲಿನಪುಡಿಯನ್ನೂ, ಕಾಡ್ಲಿವರ್ ಆಯಿಲನ್ನು ಮಕ್ಕಳಿಗೆ ಕೊಡುತ್ತಿರುವರು.

ವಿದ್ಯಾನಿಯಮಗಳು ಉಪನಿಯಮ.

'ಎಲ್ಲಾ ಮಾಧ್ಯಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸವು ಸ್ಥಾನೀಯಭಾಷೆಯಲ್ಲಾಗಬೇಕು. ಆದರೆ ಡೈರೆಕ್ಟರ್‌ವರು ಪ್ರತ್ಯೇಕ ಕಾರಣಗಳಿಂದ 1 ರಿಂದ 6 ಫಾರಂವರೆಗಿನವರೆಗೆ ಯಾವ ಶಾಲೆಯಲ್ಲೇ ಆಗಲಿ, ಇಂಗ್ಲೀಷ ಭಾಷೆಯಮೂಲಕ ಶಿಕ್ಷಣವನ್ನೇರ್ಪಡಿಸಲು ಅಧಿಕಾರ ನಡೆದಿರುತ್ತಾರೆ' ಎಂಬ ಉಪನಿಯಮವು ಜೋಡಿಸಲ್ಪಟ್ಟಿದೆ.

ಆಸ್ಪಾರಿ

ಆಲೂರು ತಾಲೂ ಆಸ್ಪಾರಿ ಪಂಚಾಯ್ತಿ ಬೋರ್ಡಿನಧ್ಯಕ್ಷರನ್ನು ದುರಾಡಳಿತದ ಕಾರಣ ಉಚ್ಚಾಟನೆ ಗೊಳಿಸಲಾಗಿದೆಯೆಂದು ಸರ್ಕಾರದ ಪ್ರಕಟನೆಯಿಂದ ತಿಳಿದುಬಂದಿದೆ.

ಉಪಾಧ್ಯಾಯರ ಚಳುವಳಿ.

ಡೈರೆಕ್ಟರವರಲ್ಲಿ ವಾರ ಆಲೋರ್ಯನ್ಸ್ ಬೇಡಿಕೆ.

ಮಡ್ರಾಸ್ ವಿದ್ಯಾಖಾತೆಯ ಮುಖ್ಯರಾದ (ಡೈರೆಕ್ಟರ್) ಶ್ರೀ ಆರ್. ಯಂ. ಸ್ಟಾಫಂರವರು ನಂದ್ಯಾಲ ಜಿಲ್ಲೆಯ ಪ್ರವಾಸಕ್ಕೆ ಹೋದಾಗ, ವಲ್ಲುನನಾಡು, ಎರ್ನಾಡು ಪೊನ್ನಾನಿ, ಈ ಮೂರು ತಾಲೂಕುಗಳ ಪ್ರಾಥಮಿಕೋಪಾಧ್ಯಾಯರ ಸಂಘದ ಪ್ರತಿನಿಧಿಗಳು ಯುದ್ಧ ಪರಿಸ್ಥಿತಿಯಿಂದ ಧಾರಣೆವಾಸಿ ವಿರುವುದನ್ನು ತಿಳಿಸಿ ತಮ್ಮ ಕುಟುಂಬಕ್ಕೆ ಒದಗಿದ ಕಷ್ಟಗಳನ್ನು ಅದ್ಯಂತವಾಗಿ ವರ್ಣಿಸಿ ಯುದ್ಧಕಾಲದಲ್ಲಿ ಅಲೋರ್ಯನ್ಸ್ ಕೊಡಲು ಬೇಡಿದರು ಉಪಾಧ್ಯಾಯರಿಗೆ ವಾರ ಅಲೋರ್ಯನ್ಸ್ ಕೊಡುವ ವಿಷಯದಲ್ಲಿ ನಾಗ್ವಾನಮಾಡಲಾರೆ. ಆದರೆ ನಿಮ್ಮ ಕಷ್ಟ ಪರಿಹಾರಕ್ಕೆ ಶೀಘ್ರದಲ್ಲೆ ವಿಪರ್ಡಿಸಲಾಗುವುದು ಎಂದು ಡೈರೆಕ್ಟರವರು ಹೇಳಿದರು. ಏನುನೂಡುವರೋ ಕಾರಣಬೇಕಾಗಿದೆ!

ಗಾಂಧಿ-ಅಜಾದ-ನೆಹರೂ ಮಾತುಕತೆ.

ವಾರ್ಧಾದಲ್ಲಿ ತ್ರಿಮೂರ್ತಿಗಳ ಮಾತುಕತೆ ನಡೆಯುತ್ತಲಿದೆ. ಮಹಾತ್ಮ ಗಾಂಧಿಯವರು ಹೊಸ ಆಂದೋಳನವನ್ನಾರಂಭಿಸುವರೋ? ಆ ವಿಷಯವನ್ನೂ ಚರ್ಚಿಸಿದಿರಾ? ಎಂಬುದಾಗಿ ಅಜಾದನನ್ನು ವಿಚಾರಿಸಿದಾಗ 'ಅಹುದು' ಎಂದುತ್ತರವಿತ್ತರು.

ಗ್ರೇಟ್ ಬಿಟನ್ನಿನಿಂದ ಹಿಂದೂಸ್ತಾನಕ್ಕೆ ಯುದ್ಧ ಸಾಮಗ್ರಿಗಳನ್ನು ಳ ಅನೇಕ ಹಡಗುಗಳೂ ಯೋಧರೂ ಬಂದರೆಂದು ನವದೆಹಲಿಯಿಂದ ಪ್ರಕಟವಾಗಿದೆ.

ಫ್ರಾನ್ಸಿನಲ್ಲಿ ಜರ್ಮನಿಯು ಆಕ್ರಮಿಸಿರುವ ಸಮುದ್ರ ತೀರಗಳಲ್ಲಿನ ಫ್ರೆಂಚರು ಅವನ್ನು ಬೇಗಬಿಟ್ಟು ಹೋಗಬೇಕೆಂದು ಲಂಡನ್ನಿನ ರೇಡಿಯೋದಿಂದ ಫ್ರೆಂಚ ಭಾಷೆಯಲ್ಲಿ ಎಚ್ಚರಿಕೆ ಕೊಡಲಾಯಿತು

Visit Royal Cafe
Near Royal Picture Palace
Royal Cafe is ROYAL.

ಬಳ್ಳಾರಿ ಪೇಟೆ ಧಾರಣೆ

14-6-42 ಶುಕ್ರವಾರ

ಭಂಗಾರ ತೊಲ 1ಕ್ಕೆ			49-0-0
ಸಾವರಿನ್			38-8-0
ಬೆಳ್ಳಿ 100 ತೊಲ ರೂ.			85-0-0
ಹರಳೆ ಮುಂಗಾರಿ 12 ಮಣಕ್ಕೆ			56-0-0
ಹರಳೆ ಫಾರಂ ...			102-0-0
ಅಕ್ಕಿ 1 ರೂ ಗೆ	4½	ರಿಂದ 5	ಸೇರು
ಬೇಳೆ ,,		4	,,
ಗೋಧಿ ,,		4	,,
ಜೋಳ ,,	11½	12	,,
ನವಣೆ ,,		16	,,
ಸಜ್ಜೆ ,,		11	,,
ನೆಲಗಡಲೆ			1-6-0
ಸಕ್ಕರೆ ವೀಸ			0-8-6
ಬೆಲ್ಲ		14 ರಿಂದ	16

ಓರಿಯಂಟಲ್

ಸಂಪೂರ್ಣ ರಕ್ಷಣೆ, ಪೂರ್ಣ ಭರವಸೆ

ಈ 68 ವರ್ಷಗಳ ಜೀವನವಲ್ಲಿ **ಓರಿಯಂಟಲ್** ಕಂಪನಿಯು ತನ್ನ ಲಕ್ಷಾಂತರ ವಿಮಾದಾರರಿಗೆ **ಶಾಂತ ಮತ್ತು ಯುದ್ಧಕಾಲಗಳಲ್ಲೂ** ಸಹ ಮಾದರಿ ವಿಮಾಕಾರ್ಯದ ಶ್ರೇಷ್ಠ ತತ್ವಗಳ ಅನುಕರಣೆಯಿಂದ ಮೇಲ್ಮಾಣಿಸಿದುದನ್ನು ಕೊಟ್ಟಿದೆ. ಅವರಿಗೊದಿಗಿಸಿದ ಸೌಲಭ್ಯಗಳನ್ನು ನಿಮಗೂ **ಓರಿಯಂಟಲ್** ಒದಗಿಸಲು ಸಿದ್ಧವಿದೆ.

ಇಲ್ಲಿಯವರಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26ಕೋ. ಮೀರಿ
ಜಾರಿಯಲ್ಲಿರುವ ವಿಮಾಪತ್ರಗಳ ಸೊತ್ತ ರು 85½ ಕೋಟಿ
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5 ಕೋಟಿ
ನಿಧಿಯ ದ್ರವ್ಯ ರು 30 ಕೋಟಿ

ಗವರ್ನಮೆಂಟು ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ ಕಂಪನಿ ಲಿಮಿಟೆಡ್,
ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ.

ಶಾಖೆ:-
ಓರಿಯಂಟಲ್ ಬಿಲ್ಡಿಂಗ್ಸ್ ಆರ್ಮೀನಿಯನ್ ಬೀದಿ, ಜಿ. ಟಿ. ಮದ್ರಾಸು.
ಇನ್ಸ್‌ಪೆಕ್ಟರವರ ಅಡ್ರೇಸು:- **೩೧೨ ರೂಪರ್ಟಸ್ ಗೇಟ್ ಬ್ರೂಸಪೇಟೆ ಬಳ್ಳಾರಿ.**

ಬಳ್ಳಾರಿ ಮು. ಹೈಸ್ಕೂಲಿನಲ್ಲಿ ಹಿಂದೂಹಿತಕ್ಕೆ ಧಕ್ಕೆ?

ಶ್ರೀ ದೇವೇಂದ್ರನಾಯಿಡುರವರ ಅಧ್ಯಕ್ಷತೆಯಲ್ಲಿ 12 ನೆಯ ತಾ. ಸಾಯಂಕಾಲ ಆಗಡಿಯವರ ಭತ್ರದಲ್ಲಿ ಒಂದು ಸಭೆಯು ನೆರಿ, ಪಬ್ಲಿಸಿಸಲ್ ಕಮೀಷನರವರು 5 ನೆಯು ತರಗತಿಯಲ್ಲಿ ಹಿಂದೂ ನೆಕ್ಷನ್ ತೆಗೆದುಹಾಕಬೇಕೆಂದು ಹೆ. ಮಾ. ರವರಿಗೆ ನೂಚಿಸಿದ್ದನ್ನು ಖಂಡಿಸಿದರು ಮತ್ತು ಇವನ್ನು ಮುನಿಸಿಪಾಲಿಟಿಯವರು ಸರ್ವಥಾ ಒಪ್ಪಬಾರದೆಂದರು. ಈ ಆರ್ಥವ ಎರಡು ತೀರ್ಮಾನಗಳಾದವು. ಶ್ರೀ ಡಿ ಯಲ್. ಗಂಗಾಧರ್, ಶ್ರೀ ರಾಜಗೋಪಾಲ್, ಶ್ರೀ ಹನುಮಂತರಾವು, ವೆಂಕಟಸುಬ್ಬರಾವು, ವಗೈರೆ ಮಾತಾಡಿದರು.

ಹಳ್ಳಿಗರಿಗೆ ಎಚ್ಚರಿಕೆ

ಇನ್ನುಮೇಲೆ ಎಷ್ಟರ್ದ ರೂಪಾಯಿಗಳ ಚಲಾವಣೆ ಇಲ್ಲ.

ಈ ತಿಂಗಳ 1ನೆಯ ತಾ॥ ನಿಂದ ಎಷ್ಟರ್ದು ರೂಪಾಯಿಗಳು ನಡೆಯತಕ್ಕವ್ವಲ್ಲಿ ನೆಂದು **(not a legal tender)** ಸರ್ಕಾರದವರು ನಿಶ್ಚಯಿಸಿರುವರು. ಆದೂ ಪಾಯಿಗಳನ್ನು ಸರ್ಕಾರೀ ಟ್ರೆಜರಿ ಮತ್ತು ಬ್ಯಾಂಕುಗಳಲ್ಲಿ ನವ್ಹಂಬರ್ 1942 ಅಖೈರಿನವರೆಗೂ ತೆಗೆದುಕೊಳ್ಳುತ್ತಾರೆ.

ಆಹಾರ ಧಾನ್ಯ ಬೆಲೆನಿಗದಿ

ಮದ್ರಾಸ್ ಪ್ರಾಂತ್ಯದಲ್ಲಿ ಆಹಾರ ಧಾನ್ಯಗಳ ಬೆಲೆನಿಗದಿಗಾಗಿ ಒಬ್ಬ ಅಧಿಕಾರಿಗಳು ನಿಯಮಿಸಲ್ಪಟ್ಟಿರುತ್ತಾರೆ. ಈ ನಿಯಮವು ಜೂ 15ರಿಂದ ಜಾರಿಯಲ್ಲಿ ಬಂದಿದೆ. ಈ ಆರ್ಡರಿನ ನ್ವಯ ವಾರುವವರು ಲೈಸನ್ಸ್ ಪಡೆಯಬೇಕು

ಮೈಸೂರು ದೇಶದಲ್ಲಿ ಹೋಳಿ ಧೋರಣೆಇಲ್ಲ.

ಯುನ್ನತ ಪರಿಸ್ಥಿತಿಯಿಂದ ಸ್ವಸಂಪತ್ತಿಯನ್ನು ನಾರಮಾಡುವ ವಿಷಯವನ್ನು ಕುರಿತು ಅಂಥಾ ಘೋರಣೆಯನ್ನು ಇಲಿ ಅನಲಂಬಿಸಲಾಗುತದಿಲ್ಲನೆಂದು ಮೈಸೂರು ದಿವಾನರು ವಾಗ್ದಾನವಿತ್ತರು.

ಭದ್ರಾವತಿ

10ನೆಯ ತಾ. ಜಿಲ್ಲಾ ಮ್ಯಾಜಿಸ್ಟ್ರೇಟ ಶ್ರೀ ನನನೀತಂರವರು ಭದ್ರಾವತಿ ಕೂಲಿಗಾರರ ಮೇಲೆ ಹೂಡಲಾಗಿದ್ದ ಮೊಕದ್ದಮೆಗಳನ್ನು ಹಿಂಪೆಗೆದುಕೊಂಡರು. 20 ಜನರಲ್ಲಿ 14 ಜನರು ಮಾತ್ರ ಹಾಜರಾದ್ದರು. ಉಳಿದ 6 ಜನಕ ಮೊಕದ್ದಮೆಗಳನ್ನೂ ಶೀಘ್ರದಲ್ಲೇ ಹಿಂದೆರೆದುಕೊಳ್ಳುವರೆಂದು ನಿರೀಕ್ಷಿಸಲಾಗಿದೆ.

ನ್ಯಾಯ ಮಂತ್ರಿಗಳ ಸಲಹೆಯಂತೆ ಕೂಲಿಕಾರರು ಜಿಲ್ಲಾ ಆಧಿಕಾರಿಗಳನ್ನು ನೋಡಿ ಮೊಕದ್ದಮೆಗಳನ್ನು ಹಿಂದೆಗೆದುಕೊಳ್ಳಲು ಬೇಡಿದ ಪ್ರಕಾರಕ್ಕೆ ಜಿಲ್ಲಾಧಿಕಾರಿಗಳು ಹಾಗೆ ಮಾಡಿದು ನ್ಯಾಯವಾಗಿದೆ.

ಶ್ರೀ ಬಾದರಾಯಣ್ ವಗೈರೆಯವರು ಜಿ. ಮ್ಯಾ. ರಲ್ಲಿ ಹೋಗಿ ಕ್ಷಮಾಪಣೆ ಬೇಡಿಕೊಂಡದ್ದರಿಂದ -ಮೊಕದ್ದಮೆಗಳು ಹಿಂದೆಗೆದುಕೊಳ್ಳಲ್ಪಟ್ಟವೆಂದು -ಶಿವಮೊಗ್ಗೆಯ 'ಹಿಂದೂ' ಸುದ್ದಿಗಾರರು ತಮ್ಮ ಪತ್ರಿಕೆಗೆ ಬರೆದಿರುವುದು ವಿಚಿತ್ರವಾಗಿದೆ.

ಪರದೇಶ ಪತ್ರಿಕೆಗಳವಜೊಡನೆ ಪಂ. ಜವಹರಲಾಲರ ಸಂಭಾಷಣೆ

ಬ್ರಿಟಿಷರು ಹಿಂದೂಸ್ತಾನವಿಂದ ಸಿಸ್ತಾಗಿ ಹೊರಟುಹೋಗಬೇಕೆಂಬ ಗಾಂಧಿಯವರ ಹೇಳಿಕೆಗೆ ನನ್ನ ಪೂರ್ಣಬೆಂಬಲ ನಿವೆಯೆಂದು ಪಂ. ಜವಹರಲಾಲರು ಹೇಳಿದರು. ಅವರು ಹಾಗೆಯೇ ಮುಂದುವರಿಯುತ್ತ, ಬ್ರಿಟಿಷ ಪಾರ್ಲಿಮೆಂಟ್ ಮತ್ತು ತಮ್ಮ ಪ್ರಾಂತದಲ್ಲಿನ ದಬ್ಬಾಳಿಕೆಯಿಂದ ಮನಸ್ಸು ವ್ಯಾಕುಲವಾಗಿವೆಯೆಂದರು. ನಾವು ಆಕ್ಸಿಸ್‌ರಾಷ್ಟ್ರಗಳ ವಿರೋಧಿಗಳಾದ್ದೇನೆ ಅವರ ದಂಪಯಾತ್ಮೆಯನ್ನು ಸರ್ವವಿಧಗಳಿಂದಲೂ ತಡೆಯುತ್ತೇವೆ. ಆದರೆ ಹಿಂದೂಸ್ತಾನವನ್ನು ಸ್ವಾತಂತ್ರ್ಯಮಾಡಲು ಇಚ್ಛೆಯಿಲ್ಲದ ಬ್ರಿಟನ್ನ ಕೊಡನೆಯೂ ಹೋರಾಡುತ್ತೇವೆ- ಗಾಂಧೀಜೀಯವರ ಹೊಸ ಯೋಜನೆಯನ್ನು ಕುರಿತು ಎರಡು ತಿಂಗಳುಗಳವರಿಗೂ ತಡೆಯಿರಿ ಎಂಬುದಾಗಿ ಸಂಡಿತರು ಸೂಚಿಸಿದರು.

ಸಂಧಾನಕ್ಕಾಗಿ ಬಂದಿದ್ದ ಸ್ಟ್ಯಾಫರ್ಡ ಕ್ರಿಪ್ಸರು ಉದ್ದೇಶ ಪೂರ್ವಕವಾಗಿಯೇ ಸಂಧಾನ ಮುರಿಯುವಂತೆ ಬ್ರಿಟಿಷ ಸರ್ಕಾರದವರು ಮಾಡಿದ್ದರು ಪ್ರಪಂಚದ ಸಾನುಭೂತಿಯನ್ನು ತಮ್ಮೆಡೆಗೆಳೆದುಕೊಳ್ಳಲು ಅವರು ಈ ಜಾಲವನ್ನು ರಚಿಸಿದ್ದರು ಪ್ರಜೆಗಳಿಗೆ ಕಿಂಚಿತ್ತಾದರು ಅಧಿಕಾರಕೊಡಲು ಬ್ರಿಟಿಷ ಸರ್ಕಾರಕ್ಕೆ ಇಷ್ಟವಿಲ್ಲ

ಹಿಂದೂಸ್ತಾನಕ್ಕೆ ಸ್ವಾತಂತ್ರ್ಯವನ್ನು ದೊರಕಿಸಲು ಪ್ರಜಾಸಾಮಾನ್ಯರ ಹೋರಾಟವಾಗಬೇಕೆಂದು ಪಂಡಿತರ ಅಭಿಪ್ರಾಯವಿದ್ದಂತೆ ತೋರುತ್ತದೆ.

—●—

ಉಜ್ಜನಿ ಜಗದ್ಗುರು ಹೈಸ್ಕೂಲ್ ಪ್ರಾರಂಭೋತ್ಸವ.

8-6-42 ಗಾಂಧಿನಗರದ ವೀರಶೈವ ಹಾಸ್ಪಲ್‌ನಲ್ಲಿ ಡಿವಿಜನಲ್ ಇನ್‌ಸ್ಪೆಕ್ಟರವರಾದ ಶ್ರೀ ಡಿ. ಸದಾಶಿವರೆಡ್ಡಿಯವರಿಂದ ಇನು ನೆರವೇರಿಸಲ್ಪಟ್ಟಿತು ಪ್ರಾರ್ಥನಾನಂತರ ಸಂದೇಶಗಳು ಓದಲ್ಪಟ್ಟನೇಲೆ ಶಾಲೆಯ ಮ್ಯಾನೇಜರರಾದ ಶ್ರೀ ವೀರವುಲ್ಲಪ್ಪನವರು, ಸರದಿಯನ್ನೋದಿ ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದ ಪ್ರಗತಿಯನ್ನು ತಿಳಿಸಿ, ಉಜ್ಜಿನಿ ಜಗದ್ಗುರುಗಳವರು, ಹೈಸ್ಕೂಲಿಗಾಗಿ 50 ಸಾವಿರ ವಾಗ್ದಾನಮಾಡಿರುವುದು. ವಂದನಾರ್ಹ ನೆಂದರು. ಇದಾವನಂತರ ವೀರಶೈವ ಪ್ರಾಥಮಿಕ ಪಾಠಶಾಲೆಯ ವರದಿಯೋದಲ್ಪಟ್ಟು ಶ್ರೀ ರೆಡ್ಡಿಯವರ ಹಸ್ತವನುಲಕ ಒಪ್ಪು ಪಾನೆಗಳನ್ನ ಹಂಚಲಾಯಿತು

"ರಾಯಲಸೀಮೆಯ 4 ಜಿಲ್ಲೆಗಳಲ್ಲಿಲ್ಲೂ ಅನಧಿಕಾರೀ ಸಂಸ್ಥೆಗಳಿಲ್ಲದಿರುವ ಕಾಲದಲ್ಲಿ ಶ್ರೀ ವೀರಪುಲ್ಲಪ್ಪನವರ ಕಾರ್ಯವು ಪ್ರಥಮ. ಉತ್ತರ ಸರಕಾರ ಜಿಲ್ಲೆಗಳಂತೆ ನಾವೂ ವಿದ್ಯಾವಿಷಯವಲ್ಲಿ ಮುಂದುವರಿಯುವ ಅವಶ್ಯ ಶ್ರೀಮಂತರಾದವರು, ಉಚ್ಚ ಶಿಕ್ಷಣದ ಪ್ರೋತ್ಸಾಹಕ್ಕೆ ಮುಂಪೆ ಬರಬೇಕು. ಕನ್ನಡ, ತೆಲುಗು ಗಳಲ್ಲಿ ಸ್ಪರ್ಧೆಯು ಅನಾವಶ್ಯಕ ಈ ಶಾಲೆಯು ಉತ್ತರೋತ್ತರ ಅಭಿವೃದ್ಧಿಯಾಗಿ ಕಾಲೇಜಾಗಲೆಂದು ಹರಸಿದರು. ಶ್ರೀ ಬಿ ಯಂ ರೆಡ್ಡಿಯವರ ಭಾಷಣವನ್ನು ಕನ್ನಡಿಸಿದರು ಹೆಡ್ಮಾಸ್ಟರು ಶ್ರೀ ವೆಂಕಪ್ಪ ಶಾಸ್ತ್ರಿಗಳು ವಂದನಾರ್ಪಣೆ ಮಾಡಿದ ಮೇಲೆ ಸಭೆಯು ಮುಗಿಯಿತು ಸಾಯಂಕಾಲ ಶ್ರೀ ರೆಡ್ಡಿಯವರ ಸನ್ಮಾನಾರ್ಥವಾಗಿ ಉಪಾಹಾರವು ಏರ್ಪಡಿಸಲಾಗಿತ್ತು.

ಬಳ್ಳಾರಿ ಜಿಲ್ಲೆಯ ಆರೋಗ್ಯ

ಕಾಲರಾ: —ಜಿಲ್ಲೆಯ ಕೂಡ್ಲಿಗಿ ತಾ॥ ಹೊರತಾಗಿ ಉಳಿದ 8 ತಾಲೂಕುಗಳ 76 ಹಳ್ಳಿಗಳಲ್ಲಿ 6ನೆಯ ಜೂನ್‌ಗೆ ಮುಗಿಯುವ ವಾರದಲ್ಲಿ 418 ಜನರಿಗೆ ಕಾಲರಾ ಬೇನೆಯು ತಗಲಿ 106 ಜನರು ಸತ್ತಿರುವರು. ಹರಪನಹಳ್ಳಿ ಕೂಡ್ಲಿಗಿ ತಾಲೂಕುಗಳ 9 ಹಳ್ಳಿಗಳಲ್ಲಿ 17 ಜನರಿಗೆ ಸೈಲಿ ಬೇನೆಯಾಗಿ 2 ಸತ್ತಿರುವರು. ಜಿಲ್ಲೆಯ ಯಾವ ಭಾಗದಲ್ಲೂ ಪ್ಲೇಗಿಲ್ಲ.

ಕಮಲಾಪುರ (ಹೊಸಪೇಟೆ)

6-6-42 ಶ್ರೀ ಜೂಟೂರು ಚಂದ್ರಪ್ಪನವರ ಎಲಿಮೆಂಟರೀ ಶಾಲೆಯಲ್ಲಿ ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಡಾ. ಆರ್. ನಾಗನಗೌಡರವರಿಂದ 8ನೇಯ ತರಗತಿಯು ತೆರೆಯಲ್ಪಟ್ಟಿತು.

ಪ್ರಾರ್ಥನಾನಂತರ ಶಾಲಾವರದಿಯು ಮಕ್ಕಳ ಸಂಭಾಷಣೆಯು ನಡೆದು ಎಲ್ಲರನ್ನು ಆನಂದಗೊಳಿಸಿತು. ಅನಂತರ ಶ್ರೀಮತಿ ಡಾ॥ ಸಾವಿತ್ರಿಬಾಯಿಯವರೂ ಮತ್ತು ಶ್ರೀ ಬಿ ಸಂತಾಚಾರ್ಯರವರು ಭಾಷಣಮಾಡುತ್ತಾ, ಈ ಶಾಲೆಯು ಈ ಎರಡುವರ್ಷಗಳಲ್ಲಿ ಬಹಳ ಅಭಿವೃದ್ಧಿಹೊಂದ ತ್ತಾ ಮಕ್ಕಳ ಸಂಖ್ಯೆಯು 80 ರಿಂದ 160 ಕ್ಕೆ ಏರಿದು ಉಪಾಧ್ಯಾಯರ ಸಂಖ್ಯೆ 3 ರಿಂದ 5 ಆಗಿ ಪರಿಜನರ ಸಂಖ್ಯೆ 24ಕ್ಕೂ ಬಾಲಿಕೆಯರ ಸಂಖ್ಯೆ 18ಕ್ಕೂ ಏರಿದುದನ್ನು ಕೇಳಿದುದು ಬಹಳ ಸಂತೋಷಕರವಾದುದೆಂದೂ ಇಲ್ಲಿನ ಉಪಾಧ್ಯಾಯರ ಆಸಕ್ತಿ, ಕಾರ್ಯದಕ್ಷತೆ ಮತ್ತು ಪರಸ್ಪರ ಪ್ರೀತಿ ಮತ್ತು ತಂದೆ ತಾಯಿಗಳು ತಮ್ಮ ಜವಾಬುದಾರಿಯನ್ನು ವಹಿಸಿ ತಮ್ಮ ಮಕ್ಕಳನ್ನು ಶಾಲೆಗೆ ಕ್ರಮವಾಗಿ ಕಳಿಸುವುದರಲ್ಲಿ ಹೋರಿನ ಪ್ರಯತ್ನೆಯ ನ್ಯತಿಫಲವೆಂದು ಪ್ರೋಷಕರು ಏಕೀಕರಿತಿಯಾಗಿ ಉಪಾಧ್ಯಾಯರಿಗೆ ಪ್ರೋತ್ಸಾಹ ಪೂರ್ವಕ ಸಹಾಯ ಮಾಡುತ್ತಿರುವರೆಂದೂ ಶಾಲೆಯು ಇನ್ನೂ ಉನ್ನತ ಸ್ಥಿತಿಗೆ ಒರಲು ಸಂದೇಹವಿಲ್ಲವೆಂದು ನುಡಿದರು.

ತದನಂತರ ಶ್ರೀ ಜಾಗೀರ್‌ದಾರ್ ವೇಶಿಕಾಚಾರ್ಯರು, ಶ್ರೀ ವೇದವ್ಯಾಸ ಆಚಾರ್ಯರು, ಶ್ರೀ ನಾಗೇಂದ್ರರಾಯರವರು ಶಾಲೆಯ ಏಳ್ಗೆಯ ವಿಷಯವಾಗಿ ಮಾತಾಡಿದರು.

ಅಧ್ಯಕ್ಷರು ತಮ್ಮ ಸಮಾರೋಪ ಭಾಷಣೆಯಲ್ಲಿ ಸಭಿಕರನ್ನು ವಂದಿಸಿ ಈ ಶಾಲೆಯ ಈಗಿನ ಅಭಿವೃದ್ಧಿಯ ಸ್ಥಿತಿಯನ್ನು ಕಂಡು ತಮ್ಮಗೆ ಬಹಳ ಸಂತೋಷವಾಯಿತೆಂದೂ ಮಕ್ಕಳ ತಂದೆ ತಾಯಿಗಳು ಶಾಲಾ ಮಕ್ಕಳ ಸಂಖ್ಯೆಯನ್ನು ಯಿನ್ನೂ ಹೆಚ್ಚುಮಾಡಿ, ಯಿಾ ಶಾಲೆಯನ್ನು ಉತ್ತಮೋತ್ತಮ ಸ್ಥಿತಿಗೆ ತರುವುದಾಗಿ ಕೋರಿದರು

6-6-42ರಲ್ಲಿ ಕಾಮಲಾಪುರ ಕೇಂದ್ರ ಉಪಾಧ್ಯಾಯರ ಸಂಘವು, ಕೂಡಿ ಧಾರಣೆ ವಾಸಿಗಳು ಬಹಳ ಹೆಚ್ಚಿರುವ ಕಾರಣ ಜಿಲ್ಲಾ ಬೋರ್ಡುನವರು, ದಯೆಯಿಟ್ಟು ಹೃದಯವಂತರಾಗಿ ಸಂಬಳವನ್ನು ಹೆಚ್ಚಳ ಮಾಡಬೇಕಲ್ಲದೆ, ತುಟ್ಟಿ ಭತ್ಯವನ್ನು ದಯಪಾಲಿಸಬೇಕೆಂಬರ್ಥದ ತೀರ್ಮಾನವಾಯಿತು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ.

ಆಶ್ರಯದಲ್ಲಿ ಈ ತಿಂಗಳ 15 ನೇಯ ತಾ. ಗೆ ಪ್ರಾಂತೀಯ ಶಾಂತಿದಳ ಶಿಬಿರವನ್ನು ಪ್ರಾರಂಭಮಾಡಿ ಒಂದು ತಿಂಗಳ ವರೆಗೆ ನಡೆಯಿಸುವ ನಿಶ್ಚಯಮಾಡಿದೆ. ಶಿಬಿರವಲ್ಲಿ ಶಾಂತಿ ಸೈನಿಕರಿಗೆ ಯೋಗ್ಯವಾದ ಎಲ್ಲಾ ಶಿಕ್ಷಣವನ್ನು ಕೊಡುವ ನಿಶ್ಚಯಮಾಡಿದೆ. ಬೆಳಗಾವಿ ಜಿಲ್ಲೆ ಸವದತ್ತಿ ತಾ॥ ಮುನವಳ್ಳಿ ಗ್ರಾಮದಲ್ಲಿ ಶಿಬಿರವನ್ನು ನಡೆಸುವ ಏರ್ಪಾಟಾಗಿದೆ. ಎಲ್ಲಾಕಡೆಗಳಿಂದಲೂ ಮೋಟಾರ್ ಸರ್ವಿಸ್ ಇವೆ ಹೆಚ್ಚಿನ ವಿವರಾತಿ ಬೇಕಾದವರು ಬರೆಯಬೇಕು. ಇಲ್ಲವೇ ಸಪ್ರತ್ಯಕ್ಷರು ಭೇಟಿಯಾಗಬೇಕು ಎಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಲಿಬಿಯಾದಲ್ಲಿ ಭಯಂಕರ ಕದನ.

ಉತ್ತರ ಆಫ್ರಿಕಾದಲ್ಲಿ ನಡೆದ ಇಂಥಾ ಕದನವು ಈ ಹಿಂದೆ ಯಾವಾಗಲೂ ನಡೆದಿರಲಿಲ್ಲ. 6 ನೆಯ ತಾ. ಬೆಳಿಗ್ಗೆ ಜರ್ಮನರ ಸೈನ್ಯವು ನೈಟ್ಸ್ ಬ್ರಿಜದ ಸಮೀಪದಲ್ಲಿ ಬ್ರಿಟಿಷ್ ಸೇನೆಗಳ ಮೇಲೆ ಬಿದ್ದಿತು. ಭಯಂಕರ ಕದನವಾಗಿ ಅನೇಕರನ್ನು ಹಿಂದಕ್ಕೆ ಓಡಿಸಲಾಯಿತು. ಹಾರ್ಮಾಬ್‌ಗೆ ಎಲ ಹತ್ತಿರದಲ್ಲೂ ಯುದ್ಧವು ನಡೆಯಿತು.

ರಷ್ಯಾ.

ಕಪ್ಪುಸಮುದ್ರದ ಬಂದರಾದ ಸೆಬಾಸ್ಟ್‌ಪೋಲ್‌ನಮೇಲೆ ಜರ್ಮನರು ಅತ್ಯುಗ್ರವಾದ ವಿಮಾನ ಕದನವನ್ನು ಆರಂಭಿಸಿದ್ದಾರೆ. ರಕ್ಷಕರು ಅತಿಧೈರ್ಯದಿಂದ ಬಂದರನ್ನು ರಕ್ಷಿಸುತ್ತಿರುವರು. ಈ ಒಂದು ವಾರದಲ್ಲಿ 500ಕ್ಕಿಂತ ಹೆಚ್ಚು ಜರ್ಮನ್ ವಿಮಾನಗಳೂ, ರಷ್ಯಾದಕಡೆ 151 ವಿಮಾನಗಳೂ ನಾಶವಾಗಿವೆ.

ಮಿಡವೇ ದ್ವೀಪಗಳಲ್ಲಿ

ಜಪಾನರಿಗೆ ಸೋಲಾಯಿತೆಂದು ಹೇಳಲು ಬರುವುದಿಲ್ಲ. ಆದರು ಹಿಮ್ಮೆಟ್ಟಿದ್ದಾರೆ. ಜಪಾನಿಗೇನೋ ಅಧಿಕ ನಷ್ಟವಾಗಿದೆ. ಇದರಿಂದ ಆಸ್ಟ್ರೇಲಿಯಾ ಮುಕ್ತಿಗೆಯು ಭೀತಿಯು ತಪ್ಪಿತು

—ಹಂಗೇರಿಯ ಮುಖ್ಯ ಮಂತ್ರಿಗಳು ಹಿಟ್ಲರನೊಡನೆ ರಾಜಕೀಯ ಮತ್ತು ಮಿಲಿಟರಿ ವಿಚಾರ ಚರ್ಚಿಸಿದರೆಂದು ಬರ್ಲಿನ್ ವಾರ್ತೆ.

ರಾಯಲಸೀಮ ಬ್ಯಾಂಕ್ಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—10—40.	31—5—42.
ರು. 1,14,774-0-0	ರು. 2,41,525-0-0

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಳರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮೀಪಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:—

1 ತಿಮ್ಮನಚರ್ಲ 2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ

ಹೆಚ್. ಶೀತಾರಾಮರೆಡ್ಡಿ, ಬಿ. ಎ. ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಚೋರ್ಮು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಹಿಂದೂಸ್ತಾನ.

—೦—

ಕೇಂದ್ರಾಡಳಿತ ಸಭೆಯ ಕಾಲಾವಧಿಯನ್ನು 1-10-42 ರಿಂದ 1-10-43ರ ವರೆಗೆ ಬೆಳೆಸಲು ಗವರ್ನರ ಜನರಲ್‌ರವರು ನಿರ್ಧರಿಸಿದ್ದಾರೆ.

ವೈಸ್ರಾಯರ ಮಂತ್ರಿಮಂಡಲದ ಬದಲಾವಣೆ ಆಗುವ ಸುದ್ದಿಗಳೆಯಾಗಲಿ ಯಾವ ಅಧಿಕೃತ ಹೇಳಿಕೆಗಳೂ ಹೊರಬೀಳ್ಳ ತಿರುವಾಂಕೂರು ದಿವಾನರಾದ ಸರ್ ಪಿ. ಪಿ. ರಾಮಸ್ವಾಮಯ್ಯರವರು ರಕ್ಷಣಾ ಮಂತ್ರಿಗಳಾಗಬಹುದೆಂಬ ಸುದ್ದಿಯೊಂದು ತಿಳಿಸುತ್ತದೆ.

ಕಳೆದವಾರ ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯರು ಅಸಾಮಿಗೆ ಸಾಲ್ಡನೇ ಕಾಂಗ್ರೆಸ್ ಚಿಕಿತ್ಸಾಪದ್ಧತಿಯನ್ನು ಕಲಿಸಿದರು.

ಸಿಂಧೂಶೇಠರ ಜಾಕೋಬಾಬಾದು ಜಿಲ್ಲೆಯಲ್ಲಿ ವೈ ಲ್ಡೇ ಥಕಾಯ್ತೊಂದು ನಡೆದು ಸರ್ಕಾರೀ ಅಧಿಕಾರಿಯೊಬ್ಬನು ಕೊಲ್ಲಲ್ಪಟ್ಟನು. ವೈಲು ಓಪುತ್ತಿರಬೇಕಾದರೇ ಸರಸ್ವತರೋಡೆಕೋರರು ಒಳನುಗ್ಗಿ ಅಧಿಕಾರಿಯನ್ನು ಕೊಂದು ಕಾಗದಪತ್ರ 83.0 ರೂ ತೆಗೆದುಕೊಂಡು ಓಡಿದರು.

ಮೈಸೂರು ವಾರ್ತೆಗಳು.

—×—

ಶ್ರೀ ಮನ್ಮಹಾರಾಜರಾದ ಶ್ರೀ ಜಯರಾಜರಾಜ ಒಡೆಯರ್ ಬಹದೂರರವರು ಜುಲೈ 4 ರಿಂದ 16ರವರೆಗೆ ತುಮಕೂರು ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸಂಚರಿಸುವರು.

ಆಂಧ್ರ ಪ್ರಾಂತದ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಪ್ರಕಾಶಂರವರು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಕುರಿತು ಬೆಂಗಳೂರಲ್ಲಿ ಉಪನ್ಯಾಸ ನೀಡಿದರು. ರಾಜಗೋಪಾಲಾಚಾರ್ಯರ ಪಾಕಿಸ್ತಾನವಾದವು ಘಾತಕವಾದುದೆಂದೂ ಕಾಂಗ್ರೆಸ್ ಸಿದ್ಧಿಗೆ ಭಂಗ ತರುವಂಥದ್ದಾಗಿದೆಯೆಂದೂ ಅಭಿಪ್ರಾಯ ಪಟ್ಟರು.

ಚಾವಣಗೆರೆಯಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕವಾಗಿ ಒಂದು ಹೈಸ್ಕೂಲ್ ತೆರೆಯಲಾಗಿದೆ ಈ ವರ್ಷ ಎಡು ತರಗತಿಗಳು ಮಾತ್ರ ನಡೆಯುವುವು. ಸದ್ಯಕ್ಕೆ ಬಾಲಕರ ಶಾಲೆಯಲ್ಲಿ 30 ಬಾಲಕಿಯರಿದ್ದಾರೆ.

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಮಳೆಯಾಗದೆ ಕ್ಷಾಮ ಪರಿಸ್ಥಿತಿಯು ತಲೆದೋರಿದೆ.

ಮೈಸೂರು ಸರಕಾರವು 1941-42ರಲ್ಲಿ ಜಾಹೀರಾತುಗಳಿಗಾಗಿ ₹65,500 ರೂ. ಖರ್ಚು ಮಾಡಿದುವೆಂದೂ 58 ಪತ್ರಿಕೆಗಳು ಹೊರಭಾಗದಲ್ಲಿ, ಸಂಸ್ಥಾನದಲ್ಲಿ 20 ಪತ್ರಿಕೆಗಳೆಂದೂ ಇಂಗ್ಲೀಷ್, ಕನ್ನಡ, ಉರ್ದು ಪತ್ರಿಕೆಗಳಿಗೆ ಕೊಡಲಾಗಿದೆಯೆಂದೂ ಗೊತ್ತಾಗಿದೆ ಅವುಗಳಲ್ಲಿ ಕನ್ನಡ ಪತ್ರಿಕೆಗಳ ಸಂಖ್ಯೆ 19.

ಕೊಲೋನ್ ಮುತ್ತಿಗೆ.

ಬ್ರಿಟನ್ನು ಜರ್ಮನಿಯ ಕೊಲೋನ ಮೇಲೆ ಮುತ್ತಿಗೆ ನಡೆಸಿದಾಗ ೧೧-೧೨ ಸಾವಿರ ಜನರು ಸತ್ತರೆಂದು ಜರ್ಮನಿ ಅಧಿಕಾರಿಯು ಒಪ್ಪಿಕೊಂಡಿದ್ದಾನಂತೆ.

ಜರ್ಮನಿಯ ಪೋಲೀಸ್ ಕಛೇರಿಗಳಲ್ಲಿ ಇನ್ನು ಮೇಲೆ ಸ್ತ್ರೀಯರು ಕೆಲಸ ಮಾಡಬೇಕೆಂದು ಜರ್ಮನ್ ಗುಪ್ತಪಡೆಯ ನಾಯಕರು ಆಜ್ಞೆ ಮಾಡಿದ್ದಾರೆ. ಫ್ರಾನ್ಸ್ ಮುಂತಾದ ಆಕ್ರಮಿತ ಪ್ರದೇಶಗಳಲ್ಲಿ ಜರ್ಮನ ಪೋಲೀಸರ ಆವಶ್ಯಕತೆ ಹೆಚ್ಚಾಗಿದೆಯಂತೆ.

ಕಳೆದವಾರ ನಡೆದ ಮಿಡವೇ ದ್ವೀಪಗಳ ಮುತ್ತಿಗೆಯಲ್ಲಿ ಜಪಾನರು 13 ಯುದ್ಧದ ಹಡಗುಗಳು ನಾಶವಾದವಂತೆ ಆದರೆ ಮಿತ್ರರ ನಷ್ಟವನ್ನು ಮಾತ್ರ ಪ್ರಕಟಿಸಿಲ್ಲ.

ಬ್ರಿಟಿಷರು ಆಕ್ರಮಿಸಿಕೊಂಡಿರುವ ಮಿಡವೇ ದ್ವೀಪದ ಮೇಲೆ ಜಪಾನರ ಸಜ್ಜೆರೀನ್ ಮುತ್ತಿಗೆಯಾಯಿತು ನಷ್ಟವೇನೂ ಆಗಿಲ್ಲ. ಇಬ್ಬರು ಜಪಾನೀ ನಾವಿಕಾಧಿಕಾರಿಗಳು ಬ್ರಿಟಿಷ್ ಕಾವಲು ಪಡೆಯವರಿಂದ ಕೊಲ್ಲಲ್ಪಟ್ಟರು.

ಜಪಾನರು ಚೀನದಲ್ಲಿ 18 ಲಕ್ಷ ಸೈನ್ಯಗಳನ್ನು ಉಪಯೋಗಿಸುತ್ತಿರುವರೆಂದು ಸೊತ್ತಾಗಿದೆ. ಈ ಕಾರಣ ಚೀನರಿಗೆ ಸೋಲಾಗುತ್ತಿರಬಹುದು ಜಪಾನರು ಚೀನದಲ್ಲಿ ಕೆಂಗಟ್ಟಿಂಗ ಪಟ್ಟಣವನ್ನು ಹಿಡಿದಿರುವರು.

ಜರ್ಮನರು ಕರ್ಜ ದಾಟದಕೇ ?

ಜರ್ಮನರು ಕರ್ಜ ಜಲಸಂಧಿಯನ್ನು ದಾಟಿ ಚನಾಸ ಎಂಬ ಆರೋಗ್ಯಧಾಮವನ್ನು ಆಕ್ರಮಿಸಿಕೊಂಡಿರುವಂತೆ ಬಿಬಿಸಿ ವಿಜಯವಾರ್ತೆಯು ತಿಳಿಸುತ್ತದೆ. ಸೋವಿಯಾಸಿಕ ಎಂಬ ಬಂದರಿಗೆ ಇವು 25 ಮೈಲಿ ದೂರದಲ್ಲಿವೆ.

ಚೀನದಲ್ಲಿ ಜಪಾನರು ವಿಷವಾಯುವನ್ನು ಉಪಯೋಗಿಸುತ್ತಿದ್ದುದರ ಪ್ರತೀಕಾರವನ್ನು ಅಮೆರಿಕಾವು ಸೇಡು ತೀರಿಸುವುದೆಂದು ರೂಸ್‌ವೆಲ್ಟರು ಹೇಳಿದ್ದಾರೆ

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000 ಮೀರಿದೆ
ಜಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ. 14,84,44,000 ,,
ಆಸ್ತಿ	ರೂ. 5,80,86,000 ,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಸಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರೆಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ಮೂಡಿವ ಕೂಲಿ ಮೇಕ್ಸ್‌ಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಮ್ಮೆ ಸಲ ದಯಪಟ್ಟು ಬಂದು ವೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಕೆಳಗಿನವರಲ್ಲಿ ವಿವರಗಳನ್ನು ತಿಳಿಯಿರಿ

ನಿಮಗನುಕೂಲವಾದ ರೀತಿಗೆ ವರ್ತಿಸಲಾಗುವುದು ಪರೀಕ್ಷೆಯ ಸಾಮಗ್ರಿಗಳು, ಕಥೆ ಕಾದಂಬರಿ ಮಸ್ತಕೆ ದೊರೆಯುತ್ತವೆ ನಮಗೆ ಎಷ್ಟಾ ಉಪಯುಕ್ತವಾದ ಮಾಹಿತಿಯೂ, ಸೂಚನೆಯಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಶ್ರೀಕೃಷ್ಣ ಮಾಜಾರಿ ಕಾಂಪೌಂಡು, ಬಳ್ಳಾರಿ.

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—0—0	ಬಳ್ಳಾರಿಯವರಿಗೆ 2-0-0
Moffusil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local 1—4—0	ಬಳ್ಳಾರಿಯವರಿಗೆ 1-4-0
Moffusil 2—0—0	ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri _____

_____

_____

Printed at Vittal Press, Car Street Edited & Published by T. B Keshava Rao, Bellary

Reg. No. M. 3937

ವಂದೇ ಮಾತರಂ'

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—

ಸಂಚಿಕೆ ೩೮ ಬಳ್ಳಾರಿ ಜೂನ್ ೨೧ ನೇ ಭಾನುವಾರ ೧೯೪೨. ಟಿ. ಬಿ. ಕೇಶವರಾವ್

ಮಹಾತ್ಮ ಗಾಂಧಿಯವರ ಲೇಖನಗಳು ★

ಸಂಸ್ಥಾನದರಸರ ವಿಷಯ

ಪ್ರಶ್ನೆ— ಬ್ರಿಟಿಶರು ಹೋದಬಳಿಕವೂ ತಮ್ಮ ಹಕ್ಕುಬಾಧ್ಯತೆಗಳನ್ನು ಇಟ್ಟುಕೊಳ್ಳಲು ಸಂಸ್ಥಾನಿಕರು ನಿರ್ಧರಿಸಿರುವರೆಂದು ತೋರುತ್ತದೆ, ಆ ಮೂಲಕ ಸ್ವತಂತ್ರ ಹಿಂದುಸ್ತಾನದಲ್ಲಿ ಅವರಿಗೆ ಸ್ಥಾನವಿಲ್ಲೆಂಬಂತಾಗಿ ಪ್ರಸ್ತುತ ರೀತಿಯ ಪ್ರಸಾರವ ಅವಶ್ಯಕತೆಯಿಲ್ಲವೆ ಅವರಿಗೆ ನೀವು ಅವಶ್ಯವಿದ್ದುದಕ್ಕಿಂತ ಹೆಚ್ಚು ಸ್ಥಾನ ಮಾನಗಳನ್ನು ಈ ವರೆಗೆ ಕೊಡುತ್ತ ಬಂದಿರುವಿರೆಂಬ ನನ್ನ ಭಾವನೆ

ಉತ್ತರ—ನಿಮ್ಮ ನಿರ್ಣಯವು ಸರಿಯಿದ್ದರೆ ಆ ಹಕ್ಕುಬಾಧ್ಯತೆಗಳೇ ಸಂಸ್ಥಾನಿಕರನ್ನು ನಾಶಪಡಿಸುವವು ಪ್ರಜಾಸೇವೆಯ ಹಕ್ಕು ಯಾವಾಗಲೂ ಇತ್ತೆ ಇರುವದು. ಅವರ ವೈಭವ ಮತ್ತು ಪರಿಸ್ಥಿತಿಯಿಂದ ಬಂದ ಬಾಹ್ಯಾಡಂಬರ ಮೊದಲಾದವುಗಳು ಮಾತ್ರ ನಾಶವಾಗುವವು.

ಅವರೆ ನೀವು ಬಯಸಿದಂತೆ ನಾನು ಘೋಷಣೆ ಮಾಡಲಾರೆನು. ಅದಿಂದೆಯ. ತತ್ವಕ್ಕೆ ಅದು ವಿರುದ್ಧವಾಗಿದೆ. ನಾವಮಾಡಬೇಕಾದ ಪರಿಶುದ್ಧ ಸಡಿಸುವದು ಹಿಂದಿಯ ತಿರುಳು. ವಿಶುದ್ಧವಾಗದಂತಿದ್ದವೆಲ್ಲ, ದೋಗಗ್ರಸ್ತ ರೋಗವು ತಾನಾಗಿಯೇ ಬಿದ್ದ ಹೋಗುವಂತೆ ಬಾಹ್ಯಪ್ರಯತ್ನಗಳಿಲ್ಲದೆ ನಾಶವೊಂದುವದು

ಬ್ರಿಟಿಶ ಅಧಿಕಾರವು ಸಂಪೂರ್ಣವಾಗಿ ಹೊರಟು ಹೋದ ಬಳಿಕ ಹಿಂದುಸ್ತಾನದ ಜನಸಾಮಾನ್ಯರಲ್ಲಿ ಜಾಗೃತಿಯುಂಟಾಗದಿದ್ದರೆ ಹಿಂದುಸ್ತಾನವು ಬೇರೆ ಬೇರೆ ಜಾಗೀರುಗಳಾಗಿ ವಿಭಾಗಿಸಲ್ಪಡುವದು. ಪ್ರತಿಯೊಂದು ಜಾಗೀರಿಯು ಸಣ್ಣದನ್ನು ಕಬಳಿಸಿಕೊಳ್ಳಲು ಪ್ರಯತ್ನಿಸಬಹುದು ಹಲವು ಜಾಗೀರ್‌ದಾರರು ನಿಕಳತ್ರಾಧಿಪತ್ಯಕ್ಕಾದರೂ ಹಂಬಲಿಸಬಹುದು. ಸಾರ್ವಜನಿಕ ಬೇಡಿಕೆಗೆ ಜನ ಸಾಮಾನ್ಯರು ಒಂದೇ ಸಮನೆ ಒತ್ತಾಯ ಪಡಿಸಬೇಕಂದೂ ಇದಕ್ಕೆ ಈ ವಿಷಯ ಹಕ್ಕು ಬಾಧ್ಯತೆಗಳನ್ನು ಪರ್ಯಾಲೋಚಿಸಿ ಸ್ವಾಧ್ಯ ಉತ್ತರ ಕೊಡಬೇಕೆಂದೂ ನಾನು ಅಸಮಾಧಾನವಿಲ್ಲದೆ ಆ ಬಗ್ಗೆ ಪ್ರಯತ್ನ ಪಡುತ್ತೇನೆ ಅವರೆ ಈ ಚಿತ್ರವು ಸತ್ಯಕ್ಕೆ ಕಾಲ್ಪನಿಕವಿರುವದೆಂದು ನನಗನಿಸಿರುವದೆಂದ ಅತ್ಯಂತ ಕೆಟ್ಟ ಪರಿಸ್ಥಿತಿಯನ್ನು ಕೂಡ ಎದುರಿಸಲು ನಾನು ಸಿದ್ಧನಿರುವೆನು ಅಂತೆಯೇ ದೇಶದಲ್ಲಿ ಅರಾಜಕತೆ ಯುಂಟಾದರೂ ಚಿಂತೆಯಿಲ್ಲ. ಸತ್ಯವ ಪರಿಸ್ಥಿತಿಯನ್ನು ಕೊನೆಗೊಳಿಸಬೇಕೆಂದು ನಾನು ಪ್ರಕಟಿಸಿದ್ದೇನೆ ಹೊರಡಿಸಿದ್ದೇನೆ

'ರಾಯಲ್' ಸಿನೆಮಾಭವನದಲ್ಲಿ 'ತಾಜಮಹಲ್' ಎಂಬ ಚಾರಿತ್ರಾರ್ಹಕ ವಾಕ್ಚಿತ್ರವು 18—5—42 ರಿಂದ ತೋರಿಸಲ್ಪಡುತ್ತಿದೆ.

ಹಿಂದೂಸ್ಥಾನವನ್ನು ಬಿಟ್ಟು ಹೋಗಿರೆಂದರೆ—

ಅಧಿಕಾರ ಸೂತ್ರಗಳನ್ನು ಬಿಟ್ಟುಕೊಡಿರಿ.

ಪಂ. ಜವಹರಲಾಲರ ಹೇಳಿಕೆ—

ಬೊಂಬಾಯಿ ನಗರದಲ್ಲಿ ಪಂಡಿತ ಜವಹರಲಾಲರು ಒಂದು ಹೇಳಿಕೆಯನ್ನು ಕೊಡುತ್ತ, ಮಹಾತ್ಮಗಾಂಧಿಯವರು ಹೇಳಿದ 'ಹಿಂದೂಸ್ಥಾನವನ್ನು ಬಿಟ್ಟು ಹೋಗಿರಿ' ಎಂಬ ಹೇಳಿಕೆಯನ್ನು ಸಮರ್ಥಿಸಿದರು. ಮುಂದುವರಿಯುತ್ತ ಇದರ ಅರ್ಥವೆಂದರೆ ಬ್ರಿಟಿಷರು ಅಧಿಕಾರೀ ಸೂತ್ರಗಳನ್ನು ಭಾರತೀಯರಿಗೆ ಒಪ್ಪಿಸುವದು, ಹೀಗೆ ಎಲ್ಲಾ ಜವಾಬ್ದಾರಿಯನ್ನೂ ಭಾರತೀಯರಿಗೆ ಬಿಟ್ಟುಕೊಡುವುದರಿಂದ ಬ್ರಿಟಿಷರು ಹಿಂದೂಸ್ತಾನದಲ್ಲಿನ್ನ ಹಿತರ ತೆರಲು ಸಹಾಯವಾಗುವುದೆಂದು ಹೇಳಿದರು

ಕ್ರಿಪ್ಸರ ಉತ್ತರ:—

ಯುದ್ಧದ ಮಧ್ಯಕಾಲದಲ್ಲಿ ಬ್ರಿಟಿಷರು ಹಿಂದೂದೇಶವನ್ನು ಬಿಟ್ಟು ಹೋಗಲು ಸಾಧ್ಯವಿಲ್ಲೆಂದು ಸರ್ ಸ್ಟಾಫರ್ಡ ಕ್ರಿಪ್ಸರು ಹೇಳಿದರು

ಜವಾಹರ - ಜನ್ನಾರಿಗೆ ರಾಜಾಜಿಯವರ ವಿನಂತಿ.

ದೇಶವನ್ನುಳಿಸಿರಿ

"ದೇಶವನ್ನು ಬಿಟ್ಟು ಹೋಗಿರಿ, ಎಂಬ ಘೋಷಣೆಯಿಂದ ಬ್ರಿಟಿಷರು ಹೋಗಲಾರರು ಅಷ್ಟಲ್ಲದೆ ಬಿಟ್ಟುಹೋದ ಪ್ರತಿ ಅಂಗುಲ ಸ್ಥಳವನ್ನೂ ಜಪಾನರುಆಕ್ರಮಿಸಿರುವದನ್ನು ನಾವು ನೋಡಿರುತ್ತೇವೆ ದೇಶದ ಇಂಥಾ ಗಂಡಾಂತರಪರಿಸ್ಥಿತಿಯಲ್ಲಿ ಪಂಡಿತ ಜವಹರಲಾಲರೂ ಜನ್ನಾರೂಕಲೆತು ದೇಶವನ್ನುಳಿಸಬೇಕು. ಕಾಂಗ್ರೆಸ್ ಲೀಗ್ ಒಪ್ಪಂದವಾಗದೆ ಗತಂತರವೇ ಇಲ್ಲ. ನನ್ನ ವಿಷಯವೇನಾದರೂ ಆಗಲಿ, ಈಗ ದೇಶವನ್ನು ಕಾಪಾಡಲಿಕ್ಕೆ ಅವರಿಬ್ಬರೇ ಸಮರ್ಥರು" ಎಂದು ರಾಜಗೋಪಾಲಾಚಾರ್ಯರು ಭಾಷಣ ಒಂದರಲ್ಲಿ ಹೇಳಿದರು

ನೆಹರೂರವರು ರಷ್ಯಾಕ್ಕೆ ಹೋಗುವುದಿಲ್ಲ.

ರಷ್ಯಾಕ್ಕೆ ಹೋಗಲಿರುವ ಸೌಹಾರ್ದ ಮಂಡಲಿಯೊಂದಿಗೆ ಪಂಡಿತ ಜವಹರಲಾಲ ನೆಹರೂರವರು ಹೋಗುವರೆಂಬ ವಾರ್ತೆಯು ನಿರಾಧಾರವಾಗಿದೆ. ಅವರು ಅಹಮದಾಬಾದಿನಲ್ಲೇ ಕೇಳಿಲ್ಲ.

ಸ್ವಾತಂತ್ರ್ಯ ಸಂಗ್ರಾಮವು ಅಹಿಂಸೆಯಿಂದಲೇ ನಡೆಯಬೇಕು.

ಪಂಡಿತ ಜವಹರಲಾಲರು:

ಬೆಂಗಾವಿಯ ಗೋಪಾಲಕೇವನರಾಯರಿಗೊಂದು ಪತ್ರ ಬರೆಯುತ್ತ,ಗಂಡಾಂತರಪರಿಸ್ಥಿತಿಯಲ್ಲಿ ಅಹಿಂಸೆಯ ಸಾಲನೆಯುಸಾಧ್ಯವಿಲ್ಲೆಂತೂಸ್ಪಷ್ಟೀಯರನ್ನು ರ್ಪಸುವ ಕಾರ್ಯದಲ್ಲಿ ಹಿಂಸೆಯ ಪ್ರಯೋಗವನ್ನು ಮಾಡಬಾರದೆಂತ ಕಾಂಗ್ರೆಸ್ ಹೇಳಿಲ್ಲನೆಂದೂ, ಸ್ವಾತಂತ್ರ ಸಂಗ್ರಾಮವು ಅಹಿಂಸೆಯಿಂದಲೇ ನಡೆಯಬೇಕೆಂದೂ ಅಭಿಪ್ರಾಯ ಪಟ್ಟಿರುವರು.

ಶ್ರೀ ಸುಭಾಸಚಂದ್ರಬೋಸ್

ಹರ ಹಿಜ್ಞರವರನ್ನೂ ನುತ್ತು ಮನೋಲಿಸಿಯವರನ್ನೂ ಭೇಟಿಮಾಡಿದ್ದ ಶ್ರೀ ಸುಭಾಸಚಂದ್ರಬೋಸರು ಬರ್ಲೀರಿಯಾಕ್ಕೆ ಆಗಮಿಸಿದ್ದಾರೆಂದಾಗಿ 14 ನೆಯ ತಾ. ಲಂಡನ್ನಿಗೆ ಸುದ್ದಿ ಬಂದಿದೆ

—●—

ಯೂರೋಪಿನಲ್ಲಿ ಎರಡನೆಯ ಯುದ್ಧರಂಗ

ಇದೇವರ್ಷ ಯೂರೋಪಿನಲ್ಲಿ ಎರಡನೆಯ ಯುದ್ಧರಂಗ ನನ್ನಾರಂಭಿಸುವ ವಿಷಯದಲ್ಲಿ, ರಷ್ಯಾ ಬ್ರಿಟನ್‌ಗಳು ಒಂದು ತೀರ್ಮಾನಕ್ಕೆ ಒಂದಿವೆಯೆಂದು ಪ್ರಕಟನೆಯೊಂದು ತಿಳಿಯುತ್ತದೆ. ಅಮೆರಿಕಾದಲ್ಲಿ ರೂಸವೆಲ್ಟರು ಇದನ್ನು ತಿಳಿಸಿದುದರಿಂದ ಅಲ್ಲಿನ ಕಾಂಗ್ರೆಸ್ ಕ್ಷೇತ್ರಗಳಲ್ಲಿ ಬಹಳ ಸಂತೋಷವುಂಟಾಗಿದೆ

ಜರ್ಮನರು ಕರ್ಚ್ ಪ್ರದೇಶಕ್ಕೆ ನುತ್ತಿ ಬಂದರು

ಕಾಕಸಸ್ ತೀರದ ಟಾರ್ಮಾ ಪರ್ಯಾಯ ದ್ವೀಪದಲ್ಲಿ ಬಂದೀಕಿದ್ದ ಜರ್ಮನರು ಪರಿಶೀಲನೆ ನಡೆಸಿಕೊಂಡು ಹಿಂದಿರುಗಿದರು ಸೆಬಸ್ತ ಪೂಲಿನಲ್ಲಿ ಜರ್ಮನರ ಒತ್ತಡವು ಹೆಚ್ಚಾಗಿದೆ ರಷ್ಯನರು 7 ಜರ್ಮನ ಮುತ್ತಿಗೆಗಳನ್ನು ಹಿಂದಕ್ಕಟ್ಟಿದರು.

ಜಪಾನರು 3 ಕಡೆಗಳಿಂದ ದಕ್ಷಿಣ ಪಾನ್ಸ್ ಪ್ರಾಂತ್ಯದಲ್ಲಿ ನುಗ್ಗುತ್ತಿದ್ದಾರೆ.

ರಣ್ಯಾದಲ್ಲಿ ಜರ್ಮನರು ಆಕ್ರಮಿಸಿದ ಪ್ರದೇಶಗಳಲ್ಲಿ 30 ಲಕ್ಷ ಡಚ್ಚರನ್ನು ಸಾಗಿಸಿ ಅವರಿಗೆ ಕೆಲಸಗಳನ್ನೇರ್ಪಡಿಸಲು ತಕ್ಕ ವ್ಯವಸ್ಥೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಇಂಗ್ಲೆಂಡ ರಷ್ಯಾ ಒಪ್ಪಂದ

ಈ ಎರಡು ದೇಶಗಳೊಡನೆ ಸರ್ವರ ಸಹಾಯ ಒಪ್ಪಂದವು ಆಯ್ತೆಂದು ಬ್ರಿಟನ್ ನಿದೇಶಾಂಗಸಚಿವರಾದ ಎಡನ್ನರು ಕಾಮನ್ಸ ಸಭೆಯಲ್ಲಿ ತಿಳಿಸಿದರು ಯುದ್ಧ ನುಗಿದ ನೇರೆ 20 ವರ್ಷಗಳನರೆಗೆ ಸರಸ್ಪರರ ಮೇಲೆ ಲಕ್ಷಿಸ ರಾಷ್ಟ್ರಗಳವಾಗಲಿ, ಅವರ ಸ್ನೇಹಿತರಾಗಲಿ ಯುದ್ಧ ಹೂಡಿದರೆ, ಒಬ್ಬರಿಗೊಬ್ಬರು ಎಲ್ಲಾ ತರದ ಮಿಲಿಟರಿ ಸಹಾಯವನ್ನಿತ್ತಿರಬೇಕು. ಮೇ 29 ನೆಯ ತಾರೀಖಿನಂದೆನ್ನಲ್ಲಿ ಇದಕ್ಕೆ ಸಹಿಬಿತ್ತು.

ರಷ್ಯಾದಲ್ಲಿ.

ಕಾಖ್ರಾವ ಸೆಬಸ್ತ ಪೋಲಗ ಪತ್ತರಿ ಭೀಕರ ಸಂಗ್ರಾಮವು ಸಾಗಿದ್ದು ಜರ್ಮನರು ಹೊಸ ಹೊಸ ಸೈನ್ಯ ಟ್ಯಾಂಕುಗಳನ್ನು ತರುತ್ತಿರುವರು. ಸೆಬಸ್ತ ಪೋಲ್ ಭಯಂಕರ ವಿನಾಶನದಾಗಿದ್ದು ಅದರ ಅಗ್ನಿ ಪರೀಕ್ಷೆಯು ಸಾಗಿದೆ

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವಾಗ್ಗೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ದುಳಿದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭವರದಲ್ಲಿ ಮಾರುತ್ತೇವೆ. ಸ್ಯಾರಂಟೆಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿನರೆ ನಿಮಗೆ ತೃಪ್ತಿಯಾಗುವುದು.

ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ

ಬಳ್ಳಾರಿ ಜಿಲ್ಲೆಯ ಆರೋಗ್ಯ

(13—6—42)

—×—

ಕಾಲರಾ:— 8 ತಾಲೂಕುಗಳ 75 ಹಳ್ಳಿಗಳಲ್ಲಿ ತಾ|| 13ಕ್ಕೆ ಮುಗಿಯುವ ವಾರದಲ್ಲಿ 181 ಜನರಿಗೆ ಕಾಲರಾ ತಗಲಿ 80 ಜನರು ಸತ್ತಿರುವರು. ರಾಯದುರ್ಗ ಹರಪನಹಳ್ಳಿ, ಕೂಡ್ಲಿಗಿಗಳ 9 ಹಳ್ಳಿಗಳಲ್ಲಿ 29 ಜನರಿಗೆ ಪೈಲಿ ಬೇನೆಯಾಗಿ 3 ಸತ್ತಿರುವರು.

ಬಳ್ಳಾರಿ

ಸಂಯುಕ್ತ ರಾಷ್ಟ್ರಗಳ ಧ್ವಜಾರೋಹಣ ದಿನಾಚರಣೆಯು 14-6-42 ನೆಯ ತಾ. ಕಲೆಕ್ಟರ್‌ರವರಧ್ಯಕ್ಷತೆಯಲ್ಲಿ ನಡೆದು ಅದರ ಮಹತ್ವದ ವಿಷಯದಲ್ಲಿ ಭಾಷಣಗಳಾದವು.

ಬಳ್ಳಾರಿ ಪುರ ಸಭೆಯವರು - ನಗರ ರಚನೆ ನಿಬಂಧನೆಗಳಿಗೆ ಮತ್ತು ಲೈಸೆನ್ಸಿಗೆ ವಿರೋಧವಾಗಿ ಕ್ರೈಸ್ತಮಾಚಾರಿ ಕಾಂಪೌಂಡಿನಲ್ಲಿ ಕಟ್ಟುತ್ತಿರುವ ಗುತ್ತಿ ಕಾಳಪ್ಪನವರ ಮನೆಯ ಕೆಲ ಭಾಗವನ್ನು ಕೆಡಿಸಿ ಸರ ಕಾರೀ ನಿಯಮಗಳನ್ನು ಉಲ್ಲಂಘಿಸಿದಂತೆ ಬುದ್ಧಿ ಕಲಿಸಿದರು.

—○—

ಉಪಾಧ್ಯಾಯರನ್ನು ಮನೆಗೆ ಕಳುಹಿಸಬೇಡಿರಿ.

ಮದ್ರಾಸಿನಲ್ಲಿ:- ಒಂದು ತಿಂಗಳ ನೋಟೀಸು ಕೊಟ್ಟು 200 ಉಪಾಧ್ಯಾಯರು ಮನೆಗೆ ಹೋಗಬೇಕಾಗುತ್ತದೆಂದು ಮದ್ರಾಸ್ ಕಾರ್ಪೊರೇಶನ್‌ದವರು - ತಿಳಿಸಿದ್ದರು. ಈ ಸಲಹೆಗೆ ಸಚಿವರದವರೊಪ್ಪದೆ ಕಾರ್ಪೊರೇಶನ್ ಅಧಿಕಾರಿಗಳಿಗೆ ಆಜ್ಞೆಕಳ್ಳ ಹಿಸಿರುವರು. ಗ್ರಾಂಟು ಶಾಲೆಗಳ ಮ್ಯಾನೇಜ್‌ಮೆಂಟ್‌ನವರಿಗೂ ಈ ಪ್ರಕಾರ ತಿಳುಹಿಸಿ ಉಪಾಧ್ಯಾಯರನ್ನು ಮನೆಗೆ ಕಳುಹಿಸಿದರೆ ಗ್ರಾಂಟು ಕೊಡುವುದನ್ನೇ ನಿಲ್ಲಿಸಿಬಿಡುವುವಾಗಿ ಸೂಚಿಸಿರುವರು.

ಬಳ್ಳಾರಿಯಲ್ಲಿ:— ಈ ಭಾಗದ ಡಿವಿಜನಲ್ ಇನ್‌ಸ್ಪೆಕ್ಟರಾದ ಶ್ರೀ ಸದಾಶಿವ ರೆಡ್ಡಿಯವರೊಂದಿಗೆ ಜಿಲ್ಲಾ ಬೋರ್ಡಿನ ಉಪಸಮಿತಿಯವರು ಕಲೆತು ಕ್ಷಾಮಪೀಡಿತ ಮತ್ತು ವಿದ್ಯೆಯಲ್ಲಿ ಹಿಂದುಳಿದ ಈ ಜಿಲ್ಲೆಯಲ್ಲಿ ಬೋರ್ಡಿನಧೀನದಲ್ಲಿನ 98 ಶಾಲೆಗಳನ್ನು ಮುಚ್ಚಿ ಉಪಾಧ್ಯಾಯರನ್ನು ವಿಪತ್ಸಾಗರದಲ್ಲಿ ಮುಳುಗಿಸಬಾರದೆಂಬ, ನಿಯಮಗಳ ಪೂರೈಕೆಮಾಡಲು ಒಂದು ವರ್ಷ ಅವಧಿ ಬೇಕೆಂತಲೂ ಕೇಳಲಾಯಿತು. ಸಹಾನುಭೂತಿ ಪರವಾಗಿ ಆಲೋಚಿಸುವೆವೆಂದು ನಾನ್ವಾನವಿತ್ತರು.

—●—

ಅಮೆರಿಕಾದ ಯೋಧರನ್ನು ಮದುವೆಯಾಗಬೇಡಿ.

ಉತ್ತರ ಐರ್ಲೆಂಡಿನಲ್ಲಿಳಿಯುತ್ತಿರುವ ಅಮೆರಿಕಾದ ಯೋಧರನ್ನು ನೋಡಿಸಿ ಅಲ್ಲಿನ ಬಾಲೆಯರು ಮದುವೆಯಾಗುತ್ತಿರುವದರಿಂದ ಅಲ್ಲಿನ ಜನರಿಗೆ ಭಯವುಂಟಾಗಿದೆ ಚರ್ಚಿನ ಯಜಮಾನರೂ ಅಮೆರಿಕಾ ಸೈನ್ಯದ ಅಧಿಕಾರಿಗಳೂ ಅಲ್ಸ್‌ಟರ್ ಮಹಿಳೆಯರಿಗೆ **"ಅಮೆರಿಕಾ ಯೋಧರನ್ನು ಮದುವೆಯಾಗಬೇಡಿ"** ಎಂದು ಎಚ್ಚರಿಕೆ ಕೊಡುತ್ತಿರುವರು ಉತ್ತರ ಅಮೆರಿಕಾದ ಎಲ್ಲಾ ಚರ್ಚುಗಳಲ್ಲೂ ಈ ಎಚ್ಚರಿಕೆಯನ್ನು ಓದುತ್ತಿರಲಾಗಿದೆ ಅಲ್ಲದೆ ಈ ಸಂಬಂಧದಿಂದ ಅಮೆರಿಕಾ ನಾಗರಿಕ ಹಳ್ಳು ಬರಬಾರದೆಂದು ಹೇಳಲಾಗಿದೆ.

ಮಿತ್ರರ ಪರಿಸ್ಥಿತಿ ಚನ್ನಾಗಿಲ್ಲ ಕರ್ಟಿನರ ಹೇಳಿಕೆ.

ಆಸ್ಟ್ರೇಲಿಯಾದ ಪ್ರಧಾನ ಮಂತ್ರಿಗಳಾದ ಕರ್ಟಿನರವರು ರೇಡಿಯೋ ಭಾಷಣವನ್ನು ಕೊಡುತ್ತ, ಆಸ್ಟ್ರೇಲಿಯಾ ರಕ್ಷಣೆಯು ಮಹತ್ವವನ್ನರಿಹಿದರು. ಆಸ್ಟ್ರೇಲಿಯವು ಜಪಾನಿನಿಂದ ಆಕ್ರಮಿಸಲ್ಪಟ್ಟಿತೆ, ಜಪಾನನ್ನೇಗೆಲ್ಲುವುದು ಸಾಧ್ಯವಿಲ್ಲೆಂದರು, ಮಿತ್ರರ ಉತ್ಪನ್ನಕ್ಕಿಂತಲೂ, ಅವು ಹಡಗುಗಳ ನಾಶವೇ ಅಧಿಕವಿದೆಯೆಂದು ಅಭಿಪ್ರಾಯ ಪಟ್ಟರು. ಲಿಬ್ಯಾದಿಂದ ಬರುತ್ತಿರುವ ಸುದ್ದಿಯು ಆಶಾದಾಯಕವಿಲ್ಲೆಂದರು.

ಭೂಮಧ್ಯ ಸಮುದ್ರವಲ್ಲಿ ನಡೆದ ಯುದ್ಧದಲ್ಲಿ ಶತ್ರುಗಳಿಗೇ ಅಧಿಕನಷ್ಟವಾಗಿರುವುದೆಂತಲೂ ಒಂದು ಬ್ರಿಟಿಷ್ ಹಡಗು ಮಾತ್ರ ಮುಳುಗಿಬೇಕೆಂತಲೂ ಲಂಡನ್ ವಾರ್ತೆಯು ತಿಳಿಸುತ್ತದೆ

ಸೆಬಸ್ಟಪೋಲ್ ಪ್ರದೇಶದಲ್ಲಿ ಜರ್ಮನರು ಅಧಿಕ ಸಂಖ್ಯಾಕರಾಗಿರುವ ಕಾರಣ ಅದನ್ನು ರಕ್ಷಿಸುವುದು ಕಷ್ಟವಾಗಿದೆಯೆಂದು ಕೆಲ ಕ್ಷೇತ್ರಗಳಲ್ಲಿ ಹೇಳಲಾಗಿದೆ.

Visit Royal Cafe
Near Royal Picture Palace
ROYAL is ROYAL

ಆಫ್ರಿಕಾದಲ್ಲಿ ಬ್ರಿಟಿಷರ ಹಿನ್ನಡೆ

ಗಾಜಾಲದಿಂದ ಹಿಂದೆಗೆದರು. ಭಯಂಕರ - ಸಂಗ್ರಾಮ.

ಗಾಜಾಲದಿಂದ ಪ್ರತ್ಯೇಕಿಸಲ್ಪಡುವ ಸಂಭವ ಕಂಡು ಬಂದ ಕಾರಣ, ಬ್ರಿಟಿಷ್ ಸೈನ್ಯಗಳನ್ನು ಗಾಜಾಲದಿಂದ ಹಿಂದಕ್ಕೆ ತೆಗೆದುಕೊಳ್ಳಲಾಯ್ತೆಂದು ಪ್ರಕಟವಾಗಿದೆ. ಅಕ್ಕ್ರೋಮಾದಬಳಿ ಭಯಂಕರ ಕದನವು ಸಾಗಿದ್ದು ಅಲ್ಲಿ ಪರಿಸ್ಥಿತಿಯು ಗೊಂದಲ ಮಯವಾಗಿದೆಯೆಂದು ಹೇಳಲಾಗಿದೆ. ತೋಬ್ರುಕ್‌ಗೆ 15-20 ಮೈಲಿ ದೂರದಲ್ಲಿಯುದ್ಧವು ಸಾಗಿದೆ. ಇಂಥಾ ಭಯಂಕರ ಕದನವು ಹಿಂದೆ ನಡೆದಿರಲಿಲ್ಲವೆಂದು ಸೈನ್ಯದೊಡನೆ ಇದ್ದ ಸುದ್ದಿಗಾರನು ಹೇಳಿದ್ದಾನೆ. ಮೇ 27ರಿಂದ ಶತ್ರುಗಳ 105 ವಿಮಾನಗಳು ನಾಶವಾಗಿವೆ.

ಉತ್ತರ ಆಫ್ರಿಕಾದಲ್ಲಿ ಎಲ್ಅಂ - ಸಿದಿ ಬರೇಜ, ಅಕ್ಕ್ರೋಮಾ ಭಾಗಗಳಿಂದ ಬ್ರಿಟಿಷರು ತಮ್ಮ ಸೈನ್ಯಗಳನ್ನು ಹಿಂದೆಗೆದುಕೊಂಡಿರುವದಾಗಿ, ಪ್ರಕಟಿಸಲಾಗಿದೆ. ತೋಬ್ರುಕ್ ರಕ್ಷಣೆಗಾಗಿ ಪ್ರಯತ್ನಗಳು ಸಾಗಿವೆ. ಬ್ರಿಟಿಷರ ಎಲ್ಲಾ ಸೈನ್ಯಗಳೂ ಅಲ್ಲಿ ಕೇಂದ್ರೀಕೃತವಾಗಿವೆ.

ಸಮಯ ಬಂದರೆ ವೈಸ್ರಾಯರು - ಅಧಿಕಾರಿಗಳ ಮನೆಗಳನ್ನೂ ಸಹ ತೆರವುಮಾಡಿ ಮಿಲಿಟರಿ ಉಪಯೋಗಕ್ಕೆ ಕೊಡಬೇಕಾಗಿ ಬರಾವುದೆಂದು ಪಂಡಿತ ಜವಹರಲಾಲರು ಹೇಳಿದರು. ಜನದ ಮನೆಗಳನ್ನು ಬಿಡಿಸಿದಾಗ, ಅವರಿಗೆ ಬೇರೆ ಏರ್ಪಾಟು ಮಾಡಬೇಕಾಗುವುದು ಅನಿವಾರ್ಯವೆಂದರು.

ಪಂಜಾಬಿನ ಸಿರ್ - ಮುಸಲ್ಮಾನ ಸಂಧಿಗೆ ಕ್ರಿಪ್ಸರು ಕಾರಣರೆಂದು ಈಗ ಹೇಳಲಾಗಿದೆ.

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೪—೦
ಕನ್ನಡ ದಶೋಪನಿಷತ್ತುಗಳು	೦—೯—೦
ಶಿವಾನುಭವ ಜ್ಯೋತಿ	೦—೪—೦
ಸುಮತಿ ಶತಕ	೦—೧—೬

ಅಂಚೆ ವೆಚ್ಚ ಬೇರೆ ಪುಸ್ತಕ ವ್ಯಾಪಾರಿಗಳು ಹೆಚ್ಚು ಪುಸ್ತಕ ಕೊಳ್ಳುವರಿಗೂ ಫಾರಾಳವಾಡಿ ಕಮೀಶನ್

ಕಾಂವ ಸುಬ್ಬಣ್ಣ, ಮರ್ಚಂಟು, ಬಳ್ಳಾರಿ.

ಗೋಬೆಲ್ಸನ ಕಥೆ.

ಜರ್ಮನಿಯ ಪ್ರಚಾರ ಯಂತ್ರ

(ಶ್ರೀ ಎಸ್. ಎಸ್. ಕಾರಂತ - ಹುಬ್ಬಳ್ಳಿ)

ಗೊಬೆಲ್ಸನ ವಿದ್ಯಾಭ್ಯಾಸವು ಕೆಥೋಲಿಕ ಶಾಲೆ ಮತ್ತು ವಿಶ್ವವಿದ್ಯಾಲಯಗಳಲ್ಲಾಯಿತು ಹಿಂದಿನ ಮಹಾಯುದ್ಧಾನಂತರ ಉಂಟಾದ ವಿಷಮ ಪರಿಸ್ಥಿತಿಯ ಪೂರ್ಣ ಅವಕಾಶವನ್ನು ಈತನು ತೆಗೆದುಕೊಂಡನು. ರಾಜಕಾರಣದಲ್ಲಿ ಬೆದರಿಕೆಯ ಜೀವನಯು ಜೀವಿಸುವುದೆಂಬುದನ್ನು ಅವನು ಪ್ರತ್ಯಕ್ಷಾನುಭವದಿಂದ ತಿಳಿಸಿದನು. ಒಮ್ಮೆ ಒಂದು ಸ್ವಾಂತವ ಆಡಳಿತದಲ್ಲಿ ಒಡಕನ್ನುಂಟುಮಾಡಿದರೆ ಮತ್ತೆ ಅದು ಬೆಳೆಯುತ್ತ ಹೋಗುವುದೆಂದೂ ಇದರಿಂದಾಗಿ ನಾಗರಿಕಪ್ರಜೆಗಳನ್ನು ಮೊಸಗೊಳಿಸಬಹುದೆಂದೂ ಅವನಿಗನಿಸಿತು. ಇವನ ಈ ರೀತಿಯ ಭಾಷಣೆಯನ್ನು ಕ್ರಮವಾಗಿ ಕಾರ್ಯರೂಪಕ್ಕೆ ತರಲು ಇವನು ಪ್ರಯತ್ನಿಸಿದ್ದಂದ ರುಹರ್ ಸಂಗಡಿಗರು ಇವನನ್ನು ತಮ್ಮ ಸಂಸ್ಥೆಯಿಂದ ಬಹಿಷ್ಕರಿಸಿದರು ಹಿಟ್ಲರನು ಇವನನ್ನು ಸ್ವಾಗತೀಕರಿಸಿ ಅವನನ್ನು ಉಚ್ಚಪದವಿಗೇರಿಸಿದನು. 1926 ರಲ್ಲಿ ಬರ್ಲಿನಿನ ಗಾವಲ್ಟೈಡಿಯರ ಪದವಿಯನ್ನು ಹಿಟ್ಲರನು ಇವನಮೇಲೆ ಹೊರಿಸಿದನು. ವಿಂಗ್ರಿಫ್ ಎಂಬ ಪತ್ರಿಕೆಯು ಜನ್ಮತಾಳುವಂತೆ ಮಾಡಿದ ಮೂಲ ಪುರುಷರಲ್ಲಿ ಗೋಬೆಲ್ಸನೊಬ್ಬನು. 1929ರಲ್ಲಿ ಗೋಬೆಲ್ಸನು ನ್ಯಾಶನಲ್ ಸೊಸಿಯಲಿಸ್ಟ್ ಪ್ರೊಪ ಗಾಂಡದ ಡಾಯಿರ್‌ಕ್ಟರ ಪದವಿಯನ್ನೇರಿದನು. ಗೋಬೆಲ್ಸನ ಮಿತ್ರರ ಸಂಖ್ಯೆಗಿಂತ ಅವನ ವೈರಿಗಳ ಸಂಖ್ಯೆಯು ಹೆಚ್ಚು. ಇದಕ್ಕೆ ಕಾರಣವಿದೆ. ಒಂದು ಮನುಷ್ಯನಿಂದ ತಾನು ಉಪಕೃತನಾಗುವಷ್ಟು ಸಮಯ ಗೋಬೆಲ್ಸನು ಅವನ ಮಿತ್ರನಂತೆ ವರ್ತಿಸುವನು. ಅದು ನಿಂತಿತೆಂದರೆ ಸುರುಕ್ಷಣವೇ ಅವನನ್ನು ನುಲಿತು ಬಡುವನು ಅವನು ಮೇಧಾವಿಯಾದ ಭಾಷಣಕಾರನು: ಹಿಟ್ಲರನ ಸ್ಫೂರ್ತಿದಾಯಕ ಭಾಷಣಗಳಿಗಿಂತಲೂ ಗೋಬೆಲ್ಸನ ಭಾಷಣಗಳು ಒಂದು ತೂಕ ಹೆಚ್ಚುದೆ ಎಂದರೆ ಅತಿಶಯೋಕ್ತಿ ಯಾಗಲಾರದು. ಪರರಿಂದ ಉಪಕೃತನಾಗುವುದು. ತನ್ನ ಜನ್ಮ ಸಿದ್ಧ ಹಕ್ಕು ಎಂದು ಹೇಳುವವರಲ್ಲಿ ಗೋಬೆಲ್ಸನು ಅಗ್ರಗಣ್ಯನು.

ಹಿಟ್ಲರನು ತನ್ನ ಬಾಹ್ಯಾಡಂಬರದಿಂದ ಎಲ್ಲರ ಮನಸ್ಸನ್ನು ತನ್ನೆಡೆಗೆ ಎಳೆಯುವನಾದರೆ ಗೋರಿಂಗನು ತನ್ನ ಹಾಸ್ಯ ಮನೋವೃತ್ತಿಯಿಂದ ಎಲ್ಲರಿಗೂ ಪ್ರಿಯನಾಗುವನು ಆದರೆ ಗೋಬೆಲ್ಸನು ಜನರನ್ನು ಆಕರ್ಷಿಸುವ ರೀತಿಯೇ ಬೇರೆಯಿದೆ. ಅವನು ಭಯವನ್ನು ತೋರಿಸಿ ಕೂಡಿದ ಜನರನ್ನು ತನ್ನ ಕಡೆಗೆ ಎಳೆದುಕೊಳ್ಳುತ್ತಿದ್ದನು.

1933ರಿಂದ 1939ರ ವರೆಗೆ ಜರ್ಮನಿಯ ಎಲ್ಲೆಡೆಗಳಲ್ಲಿಯೂ ಹಿಟ್ಲರನೊಬ್ಬನಿಂದಲೇ ಬಾಲ್ಶೆವಿಸಮು ಜರ್ಮನಿಯಲ್ಲಿಲ್ಲದಂತೆ ಮಾಡಲು ಶಕ್ಯನಿವೆ ಎಂದು ಪ್ರಚಾರ ಮಾಡಿದನು. ಈ ಪ್ರಚಾರ ಮೂಲ ಉದ್ದೇಶವು ಬೇರೆಯೇ ಇತ್ತು. ಈ ಪ್ರಚಾರದ ದೆಸೆ ಇಂದಾಗಿ ಬ್ರಿಟಿಷರೂ, ಫ್ರೆಂಚರೂ ಜರ್ಮನಿಯನ್ನು ಉಪೇಕ್ಷಿಸಿದರು. ಆದರೆ ಗೋಬೆಲ್ಸನು ಈ ಪ್ರಚಾರದ ವಿಷಯದಲ್ಲಿ ಜರ್ಮನಿಯ ಯುದ್ಧೋಪಕರಣಗಳ ಪೂರೈಕೆಯನ್ನು ಮಾಡಿದ ಅದು ಈ ಪ್ರಚಾರದ ಮರೆಯಲ್ಲಿಯೇ ಪೂರ್ಣವಾಯಿತು. ರಾಯಿನ್ ಲ್ಯಾಂಡ್ ಆಸ್ಟ್ರಿಯಾ ಮತ್ತು ಝಿುಡೋಸವಾಸಿಗಳನ್ನು ಯುದ್ಧವಿಲ್ಲದೆ ಆಕ್ರಮಿಸಲು ಈ ಪ್ರಚಾರವು ಬಹುಮಟ್ಟಿಗೆ ಸಹಕರಿಸಿತು ಪ್ರೇಗುದ ಪತನದಿಂದಾಗಿ ಬ್ರಿಟಿಷರು ಎಚ್ಚೆತ್ತರು. ಆದರೆ ಇವರು ಸಂಪೂರ್ಣ ನಿದ್ದೆ ತಿಳೆದು ಕಣ್ಣೂರಿಸಿ ಬರುವುದರೊಳಗಾಗಿ ಹಿಟ್ಲರನು ಜೊಲ್ಶೆವಿಝುವಿನ ಕೇಂದ್ರಾದರವಿಯೊಂದಿಗೆ ಶಾಶ್ವತವಾದ ಸಖ್ಯವನ್ನು ಮಾಡಿಕೊಂಡನು.

ವಿಂಚಿನ ವೇಗದಿಂದ ಆವ ಈ ಸಖ್ಯವು ಅದೇ ವೇಗದಿಂದ ತಾ॥ 22-6.41 ಕ್ಕೆ ಕಡಿದುಹಾಕಲ್ಪಟ್ಟಿತು. ಬೊಲ್ಶೆವಿಝುಮಿನ ವಿಶೋಭವಿದ್ದ ಗಾಡಿಗಳೆಲ್ಲವೂ ಪುನಃ ತಮ್ಮ ಕರ್ತೃಪಿಕೋಣೆಯನ್ನು ಬಿಟ್ಟು ಹೊರಗೆ ಬಂದವು. ಬೊಲ್ಶೆವಿಝುವು ಎಂಬುದು ತಮ್ಮ ಜನ್ಮಾಂತರದ ವೈರಿಯೆಂದು ಗೋಬೆಲ್ಸನು ಪ್ರಚಂಡ ಪ್ರಚಾರ ಮಾಡತೊಡಗಿದನು. ಆ ಪ್ರಚಾರವು ಈಗಲೂ ನಡವೇ ಇದೆ.

ಅಧಿಕಾರವು ತನ್ನ ಕಡೆಗೆ ಬಂದೊಡನೆ ಇಡೀ ಜಗತ್ತಿನಲ್ಲಿ ಪ್ರಚಾರ ಕೇಂದ್ರಗಳನ್ನು ಸ್ಥಾಪಿಸುವದರಲ್ಲಿ ಗೋಬೆಲ್ಸನು ಬದ್ಧಕಂಕಣನಾದನು. ಡಾಕ್ಟರ ಗೊಬೆಲ್ಸನ ಪ್ರಚಾರ ಶಾಖೆಯಲ್ಲಿ ಗಂಡನನ್ನು ಬಿಟ್ಟ ಹೆಂಡದಿರು. ಹೆಂಡತಿಯನ್ನು ಬಿಟ್ಟ ಗಂಡಂದಿರು, ವ್ಯಭಿಚಾರಿಗಳು, ವ್ಯಾಪಾರಸ್ಥರು, ನರ್ತಕಿಯರು, ಕೂಲಿಹುಡುಗಿಯರು ಹೆಚ್ಚೀಕೆ ಎಲ್ಲರಿಗೂ ಸ್ಥಾನ ಮಾನಗಳಿದ್ದವು. ಬರ್ಲಿನದಲ್ಲಿ ಕೂತುಕೊಂಡು, ಫ್ರಾನ್ಸ, ಇಂಗ್ಲೆಂಡ, ರಸಿಯ, ಅಮೇರಿಕಾ, ಟರ್ಕಿ ಮತ್ತು ಅತಿಪೂರ್ವ ರಾಷ್ಟ್ರಗಳಲ್ಲಿ ಏನಾಗುತ್ತದೆಂಬ ವರ್ತಮಾನವನ್ನು ಗೋಬೆಲ್ಸನು ಕೂಡಿಹಾಕುತ್ತಿದ್ದನು ಪರರಾಷ್ಟ್ರಗಳಲ್ಲಿದ್ದ ಜರ್ಮನರು ಜರ್ಮನಿಗಾಗಿ ಈ ವರ್ತಮಾನಗಳನ್ನು ಸಂಗ್ರಹಿಸಿ ಸ್ಥಳೀಯ ಕೇಂದ್ರಗಳಿಗೆ ಒಪ್ಪಿಸಬೇಕೆಂಬ ನಿಯಮವಿದ್ದಿತು. ಲಂಚ, ಬೆದರಿಕೆ, ಆಶ್ವಾಸನ, ಹೆಚ್ಚೀಕೆ ಸಾಮ, ದಾನ, ಭೇದ ದಂಡ ಈ ಉಪಾಯಗಳಿಂದ ವರ್ತಮಾನವನ್ನು ಪಡೆಯುವುದರಲ್ಲಿ ಗೋಬೆಲ್ಸನು ಕೃತಕೃತ್ಯನಾವನೆನ್ನಬಹುದು. ಜರ್ಮನಿಯ ಬಗ್ಗೆ ಸೌಹಾರ್ದವನ್ನು ವ್ಯಕ್ತಮಾಡುವ ರಾಷ್ಟ್ರಗಳಲ್ಲಿ ಅಕ್ಲಿಯ ಜನತೆಗೆ ಉಪಯೋಗವಾಗುವ ಕೇಂದ್ರಗಳೂ ಸ್ಥಾಪನೆ ಹೊಂದಿದುವು.

ಪ್ರಚಾರಕ್ಕಾಗಿ ಗೊಬೆಲ್ಸನು ಕೇಂದ್ರವನ್ನಾಗಿ ಮಾಡಿಕೊಂಡಿರುವನು. ರೇಡಿಯೋ, ಚಲಚಿತ್ರದ ವ್ಯವಸಾಯ ಮತ್ತು ವೃತ್ತ ಪತ್ರಿಕೆಗಳ ಅಧಿಕಾರವು ಇವನ ಕೆಡೆಗಿತ್ತು ತನ್ನ ಪ್ರಚಾರ ಕಾರ್ಯಕ್ಕೆ ಬೇಕಾದಂತೆ ಮೇಲಿನವುಗಳನ್ನು ಉಪಯೋಗಿಸಲು ಗೊಬೆಲ್ಸನಿಗೆ ಯಾವ ಅಡ್ಡಿ ಆತಂಕಗಳೂ ಇರಲಿಲ್ಲ. ವೃತ್ತಪತ್ರಿಕೆಯವರಿಗೆ ಹೀಗೆ ಹೀಗೆ ಬರೆಯಿರಿ ಎಂದಂತೆ ಬರೆಯಲು ಅಧಿಕಾರವಿಲ್ಲ ಗೋಬೆಲ್ಸನು ಏನು ಹೇಳುವನೋ ಅದನ್ನಷ್ಟೆ ಅಕ್ಷರಶಃ ಬರೆಯಬೇಕು ಇದಕ್ಕಾಗಿ ಗೋಬೆಲ್ಸನು ಪ್ರತಿದಿನವೂ ಪತ್ರಿಕಾ ಪ್ರತಿನಿಧಿಗಳ ಸಭೆಯನ್ನು ಮುಂಜಾನೆ ಕರೆಯುತ್ತಿದ್ದನು. ಈ ನಿಯಮಾವಳಿಯನ್ನು ಮೀರಿ ಹೋಗದಂತೆ ಪ್ರತಿಯೊಂದು ಮುದ್ರಣಾಲಯವನ್ನೆಲ್ಲಿಯೂ ಗೋಬೆಲ್ಸನ ಪಂಗಡದ ಒಬ್ಬ ಸೇವಕನಿರುತ್ತಿದ್ದನು ಬೆಲ್ಜ್ರೇಡ, ಬುಡಪೇಸ್ಟ್, ಒಸ್ಲೊ ಮೊದಲಾದ ಪ್ರಾಂತಗಳಲ್ಲಿರುವ ಪತ್ರಿಕೆಗಳ ಒಡೆತನವ ಬಹುಮತವನ್ನು ಗೋಬೆಲ್ಸನು ಪಡೆದಿದ್ದನು. ಪರದೇಶದ ವೃತ್ತಪತ್ರಿಕೆಗಳು ಜರ್ಮನಿಯನ್ನು ಹೊಗಳಿಬರೆಯುವಂತೆ ಗೋಬೆಲ್ಸನು ಹೊಸಯೋಜನೆಯನ್ನು ಮಾಡಿದ್ದನು. ಪರರಾಷ್ಟ್ರದ ವೃತ್ತ

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ.— ಬಳ್ಳಾರಿ.

ಒಟ್ಟು ವ್ಯವಹಾರದ ಪೊತ್ತ.

31—10—40.	31—5—42.
ರೂ. 1,14,774-0-0	ರೂ. 2,41,525-0-0

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಒಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಪೂಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು —

1 ತಿಮ್ಮನಚರ್ಲ 2 ಕೊಟ್ಟೂರು 3 ಹುರವಕೊಂಡ 4 ಪತ್ತಿಕೊಂಡ

ಹೆಚ್. ಶೇತಾರಾಮರೆಡ್ಡಿ, ಬಿ ಎ ಬಿ ಎಲ್ (ಎಂ ಎಲ್ ಎ)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ ಕಾರ್ಯಾಧರ್ಶಿ.

ಪತ್ರಿಕೆಗಳು ಜರ್ಮನಿಯ ಸಮಾಚಾರಗಳನ್ನು ಸ್ಪಷ್ಟಪಡಿಸಲಾಸಿನುವುದು ಸಹಜವೇ. ಹೀಗಾಗಿ ತನಿ ಒನ್ಮೆ ಜರ್ಮನಿಯ ನುಡಿಯಿಂದರನ್ನು ಇವಕ್ಕಾಗಿ ಕೇಳಿಕೊಂಡರೆಂದು ತೀರಿತು ಗೋಬೆಲ್ಸನು ತನ್ನ ಸಂಪೂರ್ಣ ಸಹಾಯ ಸಹಾನುಭೂತಿಯನ್ನು ಕೊಡಲನು ಈ ರೀತಿ ಕೇಳಿಕೊಂಡ ಪತ್ರಿಕಾಕರ್ತನಿಗೆ ಗೋಬೆಲ್ಸನ ಕೆಲಸ ಸಹ ಸಂಪಾದಕರ ಸ್ಥಾನವೆಯನ್ನು ತನ್ನ ವೈಷ್ಟಕ್ಕಿಂತ ಮಾಡಿಕೊಡುವನು. ಆನುಗಾಗಿ ಪ್ರತ್ಯೇಕ ಕೇಡಿಯೋ ಮಾಯರ್‌ಲೆಸ್, ಬೊಸಲುದ ಸಲಕರಣೆಗಳನ್ನೂ ಜರುಗಿಸುವನು

ಇಂವಿನ ಈ ಜಾಗರಿಕ ಯುದ್ಧದ ಸರ್ವಸಾಧನವನ್ನು ಕೊಂಡುಕೊಳ್ಳುವಲ್ಲಿ ಜರ್ಮನು ಬ್ರಿಟಿಶರನ್ನು ಹಿಂದೆ ಹಾಕಿದನು ಪ್ರತಿಯೊಂದು ಸೈನಿಕ ಸಂಗಡಣೆಯಿಂದಿಗೆ ವಾರ್ತಾ ಸಂಗ್ರಹಗಳ ಸಂಗಡಣೆಯನ್ನು ಗೋಬೆಲ್ಸನು ಸ್ಥಾಪಿಸಿರುವುದರಿಂದ ಯುದ್ಧರಂಗದಿಂದಲೇ ಕ್ಷಣಾರ್ಧದಲ್ಲಿ ವರ್ತಮಾನವು ತಮಗೆ ಸುಟ್ಟುಳಿಯು ಇತರ ರಾಷ್ಟ್ರಗಳಲ್ಲಿಯವ ತನ್ನ ಸಂಗಡಿಗರಿಗೆ ಈ ವರ್ತಮಾನವನ್ನು ತಡಮಾಡದೆ ಕಳುಹಿಸುವಂತೆ ಗೋಬೆಲ್ಸನು ಪೂರ್ಣ ಸಿದ್ಧತೆಯನ್ನು ಮಾಡಿರುವನು. ಇತರ ಪತ್ರಿಕೆಗಳಲ್ಲಿ ಪ್ರಸಿದ್ಧನಾಗುವ ವರ್ತಮಾನಗಳನ್ನು ಜರ್ಮನ ಪತ್ರಿಕೆಯಲ್ಲಿ ಎರಡು ದಿನದ ಮುಂಚೆ ಸ್ಫುಟಪಡಿಸಲು ಈ ಯೋಜನೆಯಿಂದ ಸಾಧ್ಯವಾಗುವುದು.

ಪ್ರತಿಯೊಂದು ರಾಷ್ಟ್ರದ ಹಿಂದಿನ ಮತ್ತು ಇಂದಿನ ಜಿಪಿತ್ರೆ ಯಾಸ ರಾಷ್ಟ್ರವನ್ನು ಹೇಗೆ ವರ್ತಮಾನಿಸಿಕೊಳ್ಳಬೇಕೆಂಬುದು ಎನಿಸಿಗೆ ಗೊತ್ತಿದೆ ಹಿಟ್ಲರನ "ಪ್ರಾಂಯುರ ಡಿವಿಜನು" ಗಳು ಫ್ರಾನ್ಸನ್ನು ವಶವಡಿಸಿಕೊಳ್ಳಬೇಕಾದರೆ ಮುಂಚಿತವಾಗಿ ಗೋಬೆಲ್ಸನ ಸಂಚಿಮನಲವು ಫ್ರಾನ್ಸನ್ನು ಆಕ್ರಮಿಸಿಕೊಂಡಿತ್ತು. ಹಿಟ್ಲರನು ಫ್ರಾನ್ಸನ್ನು ಸರವಡಿಸಿಕೊಂಡನಂತರ ತಮಗೆ ಉತ್ತರ ಪದವಿಯನ್ನು ಕೊಡದಿರಬೇಕೆಂದು ಗೋಬೆಲ್ಸನು ಭೋಧಿಸಿದ ಜೋಕ್ಯಮಾತನ್ನು ಲಾನಲ್ಲ, ಜೊನೆಟ್ ಪಂತಾವ ಧುರೀಣರು ನೆಂಬಿಸುವರಿಂದ ಯೇ ಫ್ರಾನ್ಸಿನ ರಕ್ಷಣಾಸಾಮಿತಿಯಲ್ಲಿ ಜರ್ಮನಿಯ ಸೈನ್ಯಬಲದಿಂದ ಈ ಜಯವು ಸಾಧಿಸಲ್ಪಟ್ಟಿಲ್ಲ "ಸೇನಿಸ ರೆಪ್ಪರ್" ಗಿತ ಹಿಟ್ಲರನ ತಳಕೆಯು ಸಾಧಿಸಿ ಪಾಲಿಗೆ ಉತ್ತಮವಾಗಿದೆ ಎಂದು ಗೋಬೆಲ್ಸನು ರಚಿಸಿದ ವಾಕ್ಯವು ಫ್ರಾನ್ಸಿನ ತುಂಬ ಹಬ್ಬಿ ನೇವಾಕ್ಯವಾಗಿ ಪರಿಣಮಿಸಿತು. ಫ್ರೆಂಚ್ ಸೈನ್ಯಬಲಕ್ಕೆ ಗೋಬೆಲ್ಸನು ಲಂಚನನ್ನು ಕೊಟ್ಟ ಪ್ರಸಂಗವೂ ಹಲವಾರು ಇವೆ ಇಷ್ಟೇ ಅಲ್ಲದೆ ವಿಮಾನಗಳಮೂಲಕ ಕರಪತ್ರವನ್ನು ಪ್ರಕಟಿಸಿ, ಪತ್ರಿಕೆಗಳ ಮೂಲಕ ಜನರ ಮನಸ್ಸನ್ನು ಸೆಳೆದು, ಚಲಚ್ಚಿತ್ರಗಳ ಮೂಲಕ ಜನತೆಯನ್ನಾಕರ್ಷಿಸಿ ಫ್ರಾನ್ಸಿನ ಮನಸ್ಸನ್ನು ಸಂಪೂರ್ಣವಾಗಿ ತನ್ನ ಕಡೆಗೆ ಎಳೆಯುವುದರಲ್ಲಿ ಗೋಬೆಲ್ಸನು ಕೃತಕೃತ್ಯನಾದನು. ಬ್ರಿಟಿಶರು ಫ್ರಾನ್ಸಿನವನ್ನು ರಕ್ಷಿಸುವುದಿಲ್ಲ ಅವರು ಅಸಮರ್ಥರಿರುವರು. ತನ್ನನ್ನು ತಾವು ರಕ್ಷಿಸಿಕೊಳ್ಳದವರು ಬೇರೆಯವರನ್ನು ರಕ್ಷಿಸುವುದು ಅಸಾಧ್ಯವಿದೆ. ಜರ್ಮನಿಯು ಫ್ರಾನ್ಸಿನವನ್ನು ರಕ್ಷಿಸಲು ಅಸಮರ್ಥವಿದೆ ಎಂದು ಗೋಬೆಲ್ಸನು ಮಾಡಿದ ಘೋಷಣೆಯು ಫ್ರಾನ್ಸಿನ ಜನತೆಯಲ್ಲಿ ಅವನು ಎಣಿಸಿದಷ್ಟು ಕೆಲಸವನ್ನು ಮಾಡಿಯೇ ಬಿಟ್ಟಿತು.

ಗೋಬೆಲ್ಸನ ಸಹಧರ್ಮಿಣಿಯ ಹೆಸರು ಮಗಡಕ್ಕಾನಾದಿಡಿಟ ಎಂದು ಅವನಿಗೆ ದೊಡ್ಡಸಂಸಾರವಿದೆ. ನಾಯಿಸಂಗಡದ ಸಭೆಗಳಲ್ಲಿ ಹಿಟ್ಲರನೊಂದಿಗೆ ಅವನಿಗೆ ಸ್ಥಾನವಿದೆ. ಜರ್ಮನರು ಅವನನ್ನು ಕಂಡುವರು. ಅವನು ಕೆಟ್ಟವನೆಂದು ಜರ್ಮನಿ ಪ್ರಜೆಗಳೆಲ್ಲರೂ ಆರಿತಿರುವರು. ಆದರೆ ತನ್ನ ಚಾತುರ್ಯದಿಂದ ತನ್ನನ್ನು ಹಿಟ್ಲರನು ತ್ಯಜಿಸದ ರೀತಿಯಲ್ಲಿ ಸ್ಥಾನವನ್ನು ಭದ್ರಪಡಿಸಿಕೊಂಡಿರುವನು. ಅವನನ್ನು ಬಿಟ್ಟರೆ ಗತಿಯಿಲ್ಲವೆಂದು ಹಿಟ್ಲರನು ತಿಳಿಯುವಂತೆ ಹಿಟ್ಲರನಿಗೂ ನುಂಕುಬೂದಿ ಎರಚಿರುವನು. ಆಡಂಬರಪ್ರಿಯನಾದ ಗೋಬೆಲ್ಸನು ತನ್ನ ಕಚೇರಿಯಲ್ಲಿ ವಾದ್ಯಗೋಷ್ಟಿಯ ಒಂದು ಪಂಗಡವನ್ನಿಟ್ಟಿರುವನು. ತಾನು ಬಂದಕೂಡಲೇ ಈ ವಾದ್ಯಗೋಷ್ಟಿಯು ಪ್ರಾರಂಭವಾಗಬೇಕೆಂದು ಆಪ್ಪಣೆಮಾಡಿರುವನು ಸೈನ್ಯಕ್ಕೆ ಸಂಬಂಧಪಟ್ಟ ನೂತನ ಕತೆಗಳನ್ನು ನಡಿಸಲೂ ಅವನಿಗೆ ಅವಕಾಶವಿದೆ ಮತ್ತು ಅಧಿಕಾರವಿದೆ

ಚರ್ಚಿಲ್ಲನು ಬ್ರಿಟಿಶ ಮಂತ್ರಿಯಾದನಂತರ ಜರ್ಮನಿ ರೇಡಿಯೋಗಳಮೂಲಕ ಗೋಬೆಲ್ಸನು ಒಂದೇ ಸವನೆ ಚರ್ಚಿಲ್ಲನನ್ನು ಟೀಕೆ ಸಹೊಡಗಿದನು. ಚರ್ಚಿಲ್ಲನಿಂದ ಇಂಗ್ಲಂಡವ ಸರ್ವನಾಶವಾಗುವುದೆಂದನು ಹೆಚ್ಚೇಕೆ ಈ ಯುದ್ಧವು ಈ ರೀತಿ ಸಾಗಿದುದಕ್ಕೆ ಚರ್ಚಿಲ್ಲನ ಮುನ್ನೋಡದ ಅಜ್ಞಾನವೇ ಕಾರಣವೆಂದು ಕೂಗಿದನು ಅಮೇರಿಕದ ಮನಿಗಾಗಿ ಬ್ರಿಟಿಶರು ಯುದ್ಧಮಾಡುತ್ತಾರೆಂಬ ಸುಳ್ಳುಸುದ್ದಿಯನ್ನು ಪ್ರಚಾರಪಡಿಸಿದನು. ಇದನ್ನು ಸಮರ್ಥಿಸಲು ಜರ್ಮನಿಯ ಎಲ್ಲ ದೇಶಗಳಲ್ಲಿಯೂ ವ್ಯಂಗಚಿತ್ರಗಳು ಪ್ರದರ್ಶಿಸಲ್ಪಟ್ಟವು

ಬ್ರಿಟಿಶರು ಪ್ರಚಾರವನ್ನು ಅಲಕ್ಷಿಸಿದುದೇ ಗೋಬೆಲ್ಸನ ಪ್ರತಿಷ್ಠೆಗೆ ಕಾರಣವಾಯಿತೆನ್ನಬಹುದು. ಜರ್ಮನರು ಈಗ ಗೆದ್ದ ರಾಷ್ಟ್ರಗಳಲ್ಲಿ ನೂರಕ್ಕೆ 50 ರಷ್ಟು ಪ್ರಚಾರದ ಬಲದಿಂದ ಗೆದ್ದವುಗಳೆಂದು ನಿರಾತಂಕವಾಗಿ ಹೇಳಬಹುದು.

M. HULUGOJI RAO MEMORIAL
FOOT-BALL TOURNMENT, BELLARY.

Conducted by Merchants foot-ball club, Bellary.

IInd rounds:-

(1) Merdhants 'A' team won by 6 goals to nil against the Free-Looters on 13-6-42.

(2) B. U. C. 'A' won by 5 goals to nil against Razjakh's eleven Adoni on 14-6-42.

(3) Atheletic Association, Hospet won by 2 goals to one against B. U. F. C. 'C' team on 15-6-42.

(4) Navajeevan & Mallasajjan Vyama Shala won by 1 is to to nil against Sporting Club 'B' on 16-6-42.

Semi-Finals:-

(1) Atheletic Association, Hospet won by 1 goal to nil against Navageevan & Mallasajjan Vyama Shala on 17-6-42.

ಅಮರಿಕ ದೇಶವು ಯುದ್ಧಕ್ಕಾಗಿ ಎಷ್ಟು ಖರ್ಚು ಮಾಡುತ್ತದೆ ?

ಮಾರ್ಚ್ 1942 ತಿಂಗಳಲ್ಲಿ 250 ಕೋಟಿ ಡಾಲರ್ (ಡಾಲರ್ - 3 ರೂ.) ರೂ. ಗಳನ್ನು ವ್ಯಯಮಾಡಿದೆ. ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಮತ್ತು ಸ್ವಸಂಚಲಿತವೇ ವಿಶಾಲವಾದ ಸೈನ್ಯವನ್ನು ನಿರ್ಮಿಸಲು ವರ್ಷ ಒಂದಕ್ಕೆ 3300 ಕೋಟಿ ಡಾಲರ್‌ಗಳನ್ನು ಖರ್ಚುಮಾಡಲು ನಿಶ್ಚಯಿಸಿದೆ ಬರಬರುತ್ತಾ ಅಮೆರಿಕಾದ ವಾರ್ಷಿಕ ಯುದ್ಧವ ಖರ್ಚು 4000ಕೋಟಿ ಡಾಲರ್‌ಗಳಿಗೆ ಬರಲಿರುವದೆಂದು ಆರ್ಥಿಕ ತಜ್ಞರು ಹೇಳುತ್ತಾರೆ.

ಭೂಮಧ್ಯ ಸಮುದ್ರದಲ್ಲಿ ಮಿತ್ರರ ಹಡಗುಗಳು ಮುಳುಗಿದವೇ ?

ಇಟಲಿ-ಜರ್ಮನ್ ನಾವಿಕೆಗಳೊಡನೆ ಎರಡು ಕಾನ್ವಾಯಿಗಳಿಂದ ಸುರಕ್ಷಿತವಾದ ಮಿತ್ರಹಡಗುಗಳು ಹೋರಾಟವನ್ನು ನಡೆಸಿರುವವೆಂದೂ ಮಿತ್ರರ ಹಡಗುಗಳಿಗೆ ಕೆಲವಕ್ಕೆ ಧಕ್ಕೆಯಾಗಿ ಕೆಲವು ಮುಳುಗಿದವೆಂದೂ ರೋಂ ಸುದ್ದಿಯು ಲಂಡನ್ನಿನ ಕ್ಷೇತ್ರಗಳಲ್ಲಿ ದೃಢಪಟ್ಟಿಲ್ಲ.

ಆಸ್ಟ್ರೇಲಿಯಾ

ಡಾರ್ವಿನ್ ಮೇಲೆ ಜಪಾನರ 27 ವಿಮಾನಗಳು ದಾಳಿ ನಡೆಸಿದವು. ಕೆಲವರ ಪ್ರಾಣ ಹಾನಿಯಾಗಿ ಅಲ್ಪಸ್ವಲ್ಪ ಆಸ್ತಿ ಹಾನಿಯಾಯಿತು.

ಬ್ರಿಟನ್ನಿನ ಯುದ್ಧ ವೆಚ್ಚ
"ನಾವೇನೂ ಎದೆಗೆಟ್ಟಿಲ್ಲ."

ಬ್ರಿಟನ್ನು ಈಗಾಗಲೇ ಸಂಗ್ರಾಮಕ್ಕಾಗಿ ೬೬೦೦ ಮಿಲಿಯನ್ ಪೌಂದುಗಳನ್ನು ವೆಚ್ಚಮಾಡಿದಯೆಂದೂ, ಸರಾಸರಿ ವಾರಕ್ಕೆ ೪೪ ಮಿಲಿಯ ಪೌಂಡುಗಳನ್ನು ಅಂದರೆ ದಿನಕ್ಕೆ 15 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದೆ ಯೆಂದೂ ಸರ್ ಕಿಂಗ್ಸ್‌ಲೆ ವುಡ್‌ರವರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು. "ಇದರಿಂದ ನಾವೇನೂ ಎದೆಗೆಟ್ಟಿಲ್ಲ" ಎಂದರು.

ಚರ್ಚಿಲರು ಅಮೆರಿಕಾದಲ್ಲಿ:-

ಯೂರೋಪಿನಲ್ಲಿ ದ್ವಿತೀಯ ರಣರಂಗದ ಮಾತುಕತೆಗಳಿಗಾಗಿ ಚರ್ಚಿಲರು ತಮ್ಮ ಕೆಲ ಸೇನಾಪತಿಗಳೊಂದಿಗೆ ಅಮೆರಿಕಾಕ್ಕೆ ಬಂದಿರುವರು.

ಸೆಬಸ್ಟಪೋಲ ವಶವಾಯಿತೇ?

ಜರ್ಮನರ ದಂಡುಗಳು ಸೆಬಸ್ಟಪೋಲ ದುರ್ಗದಲ್ಲಿ ನುಗ್ಗಿವೆಂದು ಒಂದು ವಾರ್ತೆಯು ಹೇಳುತ್ತದೆ.

—●—

ಮದ್ರಾಸು ವಿಲೇಜ ಪಂಚಾಯ್ತಿ ಬಿಲ್.

ಜೂನ್ 18 ಮದ್ರಾಸು

ಪಂಚಾಯ್ತಿ ಬಿಲ್ ನಿಧಿ ನಿಯಮಗಳನ್ನು ವಿಮರ್ಶಿಸಲು ಏರ್ಪಟ್ಟ ಉಪ ಸಮಿತಿಯು ಕಳೆದ 3 ದಿವಸಗಳಿಂದ ಮದ್ರಾಸಿನಲ್ಲಿ ರೊದರಫರ್ಡರಧ್ಯಕ್ಷತೆಯಲ್ಲಿ ಕೂಡುತ್ತಲಿದೆ. ಈ ಸಮಿತಿಯು ಕೆಲ ಸಿಫಾರ್ಸುಗಳನ್ನು ಮಾಡಿದೆ.

ಕೆಲ ವರ್ಷಗಳಲ್ಲಿ ಪ್ರಾಂತದಲ್ಲೆಲ್ಲಾ ಪಂಚಾಯ್ತಿಗಳು ಒತ್ತಾಯವಾಗಿ ಏರ್ಪಡಬೇಕು. ಪಂಚಾಯ್ತಿ ಕ್ಷೇತ್ರವು ವಾರ್ಡುಗಳಾಗಿ ವಿಭಾಗಿಸಲ್ಪಟ್ಟು ಅಲ್ಲಿಂದ ಪ್ರತಿನಿಧಿಗಳು ಆರಿಸಲ್ಪಡಬೇಕು. 21 ವರ್ಷಕ್ಕೆ ಹೆಚ್ಚಿಗಿರುವ ಸ್ತ್ರೀ ಪುರುಷರಿಗೆ ವೋಟಿನ ಹಕ್ಕು ಇರಬೇಕು ಅಲ್ಪ ಸಂಖ್ಯಾಕರಿಗೆ ಸ್ಥಾನಗಳು ಕಾದಿಡಲ್ಪಡಬೇಕು. ಇನ್ನೂ ಇತರ ವಿಷಯಗಳು ಚರ್ಚಿಸಲ್ಪಡುತ್ತಿವೆ.

ಕ್ರಿಪ್ಸರಿಗೆ ನೆಹರೂರವರ ಉತ್ತರ.

ಬ್ರಿಟಿಷನವರುಯುದ್ಧಮಧ್ಯದಲ್ಲಾಗಲಿ, ಯುದ್ಧವಾದಮೇಲಾಗಲಿ ಭಾರತವನ್ನು ಬಿಡುವ ಉದ್ದೇಶವೇ ಇಲ್ಲ. ಅವರಿಗೆ ಇಷ್ಟವಿಲ್ಲದಂತಹ ಘಟನೆಗಳು ಎಷ್ಟೋ ಆಗಿವೆ. ಭಾರತದಲ್ಲಿಯೂ ಅಂಥಾ ಘಟನೆಗಳಾಗಲಿವೆ. ಸಂಧಾನ ಕಾಲದಲ್ಲಿ ಏನಾಯ್ತೆಂಬ ವಿಚಾರದ ವಿಮರ್ಶೆಯು ಈಗ ಬೇಡ ಗಾಂಧೀಜಿಯವರು ವಾರ್ಧಾಕ್ಕೆ ಹೋಗಿಬಿಟ್ಟಿದ್ದರು. ಸಂಧಾನ ಮುರಿಯಲು ಅವರು ಕಾರಣರೇ ಅಲ್ಲ. ಇಂಥಾ ಅವಮಾನಕಾರಕವಾದ ಸಲಹೆಗಳನ್ನು ಕಾಂಗ್ರೆಸ್ ಹೇಗೆ ಅಂಗೀಕರಿಸಬೇಕು?

ಶ್ರೀ ಸಿ. ರಾಜಗೋಪಾಲಾಚಾರಿಯವರು ಗಾಂಧೀಜೀಯವರೊಡನೆ ವಿಮರ್ಶಿಸಿದರು.

ಬಳ್ಳಾರಿ ಪೇಟೆ ಧಾರಣೆ
19-6-42 ಶುಕ್ರವಾರ

ಭಂಗಾರ ತೊಲ 1ಕ್ಕೆ		48-8-0
ಸಾವರಿನ್		37-8-0
ಬೆಳ್ಳಿ 100 ತೊಲ ರೂ.		81-0 0
ಅರಳೆ ಮುಂಗಾರಿ 12 ಮಣಕ್ಕೆ		58-0-0
ಅರಳೆ ಘಾರಂ ...		104-0-0
ಅಕ್ಕಿ 1 ರೂ ಗೆ	4 ರಿಂದ 5	ಸೇರು
ಬೇಳೆ ,,	4	,,
ಗೋಧಿ ,,	3	3½ ,,
ಜೋಳ ,,		11 ,,
ನವಣೆ ,,		15½ ,,
ಸಜ್ಜೆ ,,		8¾ ,,
ನೆಲಗಡಲೆ	....	1-7-0
ಸಕ್ಕರೆ ವೀಸ		0-9-0
ಬೆಲ್ಲ		20 ರೂ.
ಚಿಮ್ಮಿ ಎಣ್ಣೆ		4-10-0

ರಾಷ್ಟ್ರೀಯತಾ ವೃಕ್ಷವು ಕತ್ತರಿಸಲ್ಪಟ್ಟಿತು.

ಭದ್ರಾವತಿಯ ಪ್ರಕರಣ—ಕ್ಷಮಾಪಣೆ ಬೇಡಿದರು.

ಕಳೆದ ಒಂದು ವರ್ಷದಲ್ಲಿ ಭದ್ರಾವತಿಯ ಆಂದೋಳನಕ್ಕೆ ವಿಚಿತ್ರ ಶಕ್ತಿಯು ಪ್ರಾಪ್ತವಾಗಿದ್ದಿತು. ಜಗತ್ತಿನಲ್ಲೇ ಶ್ರೇಷ್ಠ ಪುರುಷರಾದ ಮಹಾತ್ಮ ಗಾಂಧಿಯವರ ಗಮನವು ಇತ್ತಕಡೆಗೆ ಸೆಳೆಯಲ್ಪಟ್ಟಿದ್ದಿತು. ಕೂಲಿಕಾರರು ಹಿಂದಿನ ಮುಸ್ಸೂರದಲ್ಲಿ ಅನುಭವಿಸಿದ ಕಷ್ಟಗಳು ಶಂಕರ್, ರಾಮಚಂದ್ರಶೆಟ್ಟಿ ಮೊದಲಾದ ಮಿತ್ರರ ಸ್ವಾರ್ಥತ್ಯಾಗದಿಂದ ಕೂಲಿಕಾರರಲ್ಲಿ ಸಂಘಟನಾಶಕ್ತಿಯು ಬೆಳೆದು ಅವರ ಚಳವಳಿಯು ಉಚಿತಪಥಾರ್ಗವಲಂಬಿಯಾಗಿತ್ತು.

ಪ್ರಪಂಚದಲ್ಲಿ ತಪ್ಪು ಮಾಡಿದರೆ ಕ್ಷಮೆ ಬೇಡುವುದು ವಾಡಿಕೆಯಾಗಿದೆ. ಕೂಲಿಕಾರರೆಲ್ಲಾ ತಪ್ಪು ಮಾಡಿದರೆ? ಹಾಗೆ ತಪ್ಪು ಮಾಡಿದ್ದರೆ ವಿಚಾರಣಾ ಸಮಿತಿಯ ಬೇಡಿಕೆ ಏತಕ್ಕೆ? ಇರಲಿ ಕೆಲವು ಹುಂಬರು ಕಲ್ಲುಗಳನ್ನೆಸೆದು ಅಧಿಕಾರಿಗಳನ್ನು ಘಾಯಗೊಡಿಸಿದರೆಂಬುವದನ್ನು ಒಪ್ಪಿಕೊಳ್ಳೋಣ. ಆದರೆ ಕೂಲಿಕಾರರು ಮುಖಂಡರು ತಮ್ಮ ಕೂಲಿಕಾರರಲ್ಲೇ ಸದರೀ ಹುಂಬರಿದ್ದರೆಂಬವಾದವನ್ನು ಸ್ವೀಕರಿಸಿ ಆ ತಪ್ಪಿಗಾಗಿಯೇ ಕ್ಷಮೆ ಬೇಡಿದರೇ? ಆಪರಾಧಗಳನ್ನು ಹೊತ್ತು ಕೂಲಿಕಾರ ನರ್ಗವು ಶಿವಮೊಗ್ಗೆಗೆ ಹೋಗಿ ಜಿಲ್ಲಾ ಮ್ಯಾಜಿಸ್ಟ್ರೇಟರಲ್ಲಿ ಏತಕ್ಕೋಸ್ಕರ ಕ್ಷಮಾಪಣೆ ಬೇಡಿದರು? ಬಾಹ್ಯ ಪ್ರಪಂಚಕ್ಕೆ ಇದರಿಂದ ಏನು ಅರ್ಥವಾಗುತ್ತಿದೆ?

ಪ್ರಜೆಗಳ ಬೆಂಬಲವಿಲ್ಲದೆ ಆಳುವ ಸ್ವೇಚ್ಛಾಪ್ರಭುತ್ವಕ್ಕೆ ಬಹುಮಟ್ಟಿಗೆ ದಂಡನೀತಿಯೇ ಆಧಾರವಾಗಿದ್ದರೂ, ಪರಿಸ್ಥಿತಿಯ ಲಕ್ಷಣವನ್ನನುಲಕ್ಷಿಸಿ ಪ್ರಭುತ್ವವು ಸಾಮ್ಯ-ದಾನ - ಭೇದೋಪಾಯಗಳನ್ನೂ ಅನುಸರಿಸುವುದು. ಹಿಂದೂದೇಶದ ದೇಶೀ ಸಂಸ್ಥಾನಗಳಲ್ಲೆಲ್ಲಾ ಸ್ವೇಚ್ಛಾಪ್ರಭುತ್ವವಿದ್ದಂತೆ ಮೈಸೂರಿನಲ್ಲಿರೂ ಸ್ವೇಚ್ಛಾಪ್ರಭುತ್ವವಿದೆ. ಅಧಿಕ ಸಂಖ್ಯಾಕ ದೇಶೀ ಸಂಸ್ಥಾನಗಳೊಡನೆ ಹೋಲಿಸುವುದಾದರೆ ಮೈಸೂರಿನ ಆಡಳಿತವು ಒಳ್ಳೆಯದಿದ್ದು ಅದಕ್ಕೆ ಸ್ವಲ್ಪ ಉತ್ತಮ ಸ್ಥಾನವು ದೊರೆಯಬಹುದು. ಆದರೆ ಅದು ಚುನಾವಣೆಗಳನ್ನು ನಡೆಸಿದ ವಿಧಾನ, ಪ್ರಜೆಗಳ ನಿಜಪ್ರತಿನಿಧಿಗಳು ಮಂತ್ರಿವರ್ಗದಲ್ಲಾರಿಸಲ್ಪಡದೆ "ಜೋಡುಕುಂ" ಜನರು ಮಂತ್ರಿಗಳಾದುದು, ಸಮಿತಿಗಳ ಮತ್ತು ಪ್ರಜಾಪ್ರತಿನಿಧಿ ಸಭೆಗಳ ನಿರ್ಣಯಗಳಿಗೆ ಶಾಸನಾಧಿಕಾರವಿಲ್ಲದಿರುವುದು ವಗೈರೆ ಪ್ರಭುತ್ವದ ಅನೇಕ ಕೃತ್ಯಗಳು ಸ್ವೇಚ್ಛಾಧಿಕಾರವನ್ನು ಸಮರ್ಥಿಸುತ್ತವೆ.

ಪ್ರಜೆಗಳೆಲ್ಲಾ ಆಂದೋಳನವಿಲ್ಲದೆ ಶಾಂತರೀತಿಯಲ್ಲಿದ್ದರೆ ಸ್ವೇಚ್ಛಾಧಿಕಾರೀ ಯಂತ್ರವು ಸುಲಲಿತವಾಗಿ ನಡೆಯುತ್ತದೆ ಬಹುಕಾಲ ಕ್ರೂರವರ್ತನೆಗೂ ದಬ್ಬಾಳಿಕೆಗೂ ಒಳಗಾದ ಪ್ರಜಾವರ್ಗದಲ್ಲಿ ಜಾಗೃತಿ ಆಯಿತೆಂದರೆ ಪ್ರಭುತ್ವದ ಯಂತ್ರವು 'ಕಿರ್' ಎನ್ನುತ್ತದೆ ಪ್ರಪಂಚದ ಅನೇಕ ರಾಜ್ಯಗಳ ಇತಿಹಾಸವೆಲ್ಲಾ ಪ್ರಜೆಗಳ ಮತ್ತು ಪ್ರಭುತ್ವದ ಸಂಘರ್ಷಣೆಯ ಕಥೆ ಇಂದಲೇ ತುಂಬಿದೆ ಮತ್ತು ಎಲ್ಲಾ ದೇಶಗಳಲ್ಲೂ ಬಹುಕಾಲದ ಹಿಂಸೆಯನಂತರ ಪ್ರಜಾಶಕ್ತಿಯು ವಿಜಯನಾಗಿದೆ. ರಷ್ಯಾ ದೇಶವು ಇದಕ್ಕೆ ಉಜ್ವಲ ಉದಾಹರಣೆ.

ಈ ದೃಷ್ಟಿಯಿಂದ ಭದ್ರಾವತಿಯ ಕಾರ್ಯಕರ್ತರು ತಮ್ಮಲ್ಲಿ ಬೆಳೆದ ಶಕ್ತಿಯನ್ನೇ ಕುಂಠಿತನಾಡಿ, ದಬ್ಬಾಳಿಕೆಯ ಶಕ್ತಿಯನ್ನು ಬೆಳೆಸಿದರು. ಅಲ್ಪ ಕೂಲಿಯಿಂದ 8 ಘಂಟೆ ದುಡಿದು ಕುಟುಂಬಕರಾಗಿದ್ದರೆ ಅಸಹ್ಯಪನಿ ಕಾಲಕ್ಷೇಪಮಾಡಿ ಸಾಮೂಹಿಕವಾಗಿ ಲಕ್ಷಗಟ್ಟಲೆ ಲಾಭ ಸಂಪಾದಿಸುವ ಸರ್ಕಾರದ ಕೃತ್ಯವನ್ನು ಸಮರ್ಥಿಸಿದರು.

"ನಾವು ಮಾಡಿರುವುದು ತಪ್ಪುಕೆಲಸ ಇನ್ನು ಮೇಲೆ ಇಂಥಾ ಕಾರ್ಯಗಳಲ್ಲಿ ಪ್ರವೇಶಿಸುವುದಿಲ್ಲ" ವೆಂದು ಬಂಧಿತರಾದ ಶಂಕರ್‌ರವರೂ ಹೊರದೂಡಲ್ಪಟ್ಟ ಶಿಟ್ಟರೂ ಹೇಳಲಿ, ತಕ್ಷಣವೇ ಅವರ ನಿರ್ಬಂಧಗಳು ದೂರವಾಗುವುವು 'ವಿಶ್ವಕರ್ನಾಟಕವು' ಕೂಲಿಕಾರರ ಕೃತ್ಯವನ್ನು ಸಂಪಾದಕೀಯ ಲೇಖನದಿಂದ ಸಮರ್ಥಿಸಿದೆ. ಇನ್ನಾವಂತೂ ಇದನ್ನೊಪ್ಪುವುದಿಲ್ಲ. ಮಹಾತ್ಮ ಗಾಂಧಿ ಜವಹರಲಾಲಜೀಯವರ ಮುಂದೆ ವಂಚನೆ ಇಲ್ಲದೆ ಸತ್ಯಾಂಶಗಳನ್ನೆಲ್ಲಾ ಇಡಲಿ ಆವರು ಕೂಲಿಕಾರರ ಕೃತ್ಯವನ್ನು ಖಂಡಿಸದೆ ಬಿಡಲಾರರು. ಈಗ ಕೂಲಿಕಾರರಿಗೆ ಸರಿಯಾದ ಮಾರ್ಗದಲ್ಲಿ ತೆಗೆದುಕೊಂಡು ಹೋಗುವ ಮುಖಂಡರಿಲ್ಲವೆಂದು ದುಃಖದಿಂದ ಹೇಳಬೇಕಾಗಿದೆ.

ಮೈಸೂರು ವಾರ್ತೆಗಳು.

ಶ್ರೀ ಡಿ ಹೆಚ್. ಚಂದ್ರಶೇಖರಯ್ಯನವರ ಸಮಿತಿಯವರು, ವರ್ಷಕ್ಕೆ 3 ಸಲ ಪ್ರಜಾಪ್ರತಿನಿಧಿಯು ಸೇರಬೇಕೆಂದು ನಿರ್ಧರಿಸಿರುತ್ತಾರೆ.

ಮೈಸೂರು ರಾಜಧಾನಿಗೆ ಬ್ರಿಟಿಷ ಚಕ್ರವರ್ತಿಗಳ ಸೋದರರಾದ ಡ್ಯೂಕ್ ಆಫ್ ಗ್ಲಾಸೆಸ್ಟರ್‌ರವರು ಬರಲಿದ್ದಾರೆ.

ಮೈಸೂರು ಕಾಲೇಜುಗಳಲ್ಲಿ ಕನ್ನಡದ ಮೂಲಕ ಶಿಕ್ಷಣ ಕೊಡಬೇಕೆಂಬ ನಿರ್ಣಯವು ಪ್ರಜಾಪ್ರತಿನಿಧಿ ಸಭೆಯಲ್ಲಿ ಅಂಗೀಕೃತವಾಯಿತು.

ಓರಿಯಂಟಲ್

ಸಂಪೂರ್ಣ ರಕ್ಷಣೆ, ಪೂರ್ಣ ಭರವಸೆ

ಈ 18 ವರ್ಷಗಳ ಜೀವನದಲ್ಲಿ ಓರಿಯಂಟಲ್ ಕಂಪನಿಯು ತನ್ನ ಲಕ್ಷಾಂತರ ನಿಮಾದಾರರಿಗೆ ಶಾಂತ ಮತ್ತು ಯುದ್ಧಕಾಲಗಳೆಲ್ಲೂ ಸಹ ಮಾದರಿ ವಿಮಾಕಾರ್ಯದ ಶ್ರೇಷ್ಠ ತತ್ವಗಳ ಅನುಸರಣೆಯಿಂದ ಮೆಚ್ಚುಗೆಯನ್ನು ಕೊಟ್ಟಿದೆ. ಅವರಿಗೊದಗಿಸಿದ ಸೌಲಭ್ಯಗಳನ್ನು ನಿಮಗೂ ಓರಿಯಂಟಲ್ ಒದಗಿಸಲು ಸಿದ್ಧವಿದೆ.

ಇಲ್ಲಿಯವರೆವಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26 ಕೋ. ಮೀರಿ
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು 85½ ಕೋಟಿ
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5 ಕೋಟಿ
ನಿಧಿಯ ದ್ರವ್ಯ ರು 30 ಕೋಟಿ

ಗವರ್ನಮೆಂಟು ಸೆಕ್ಯೂರಿಟಿ ಲೆಫ್ ಅಷ್ಯೂರೆನ್ಸ್ ಕಂಪನಿ ಲಿಮಿಟೆಡ್,
ಸ್ಥಾಪನೆ ೧೯೭೪. ಮುಖ್ಯ ಕಛೇರಿ ಬೊಂಬಾಯಿ.

ಶಾಖೆ:-
ಓರಿಯಂಟಲ್ ಬಿಲ್ಡಿಂಗ್ಸ್ ಆರ್‌ಮೀನಿಯನ್ ಬೀದಿ, ಪಿ. ಟಿ. ಮದ್ರಾಸು.
ಇನ್‌ಸ್ಪೆಕ್ಟರವರ ಆಫೀಸು:- ೩೧೩ ರೂಪರ್ಟ್ಸ್ ರೋಡ್ ಬ್ರಾಸಪೇಟೆ ಬಳ್ಳಾರಿ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ. 85,61,000 ಮೀರಿದೆ
ಚಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ. 14,84,44,000 ,,
ಆಸ್ತಿ	ರೂ. 5,80,86,000 ,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.

ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ಜೊರಿಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರುರುವ ಹಳೆಯ ವಸ್ತುಗಳನ್ನು ಕೊಟ್ಟು ಮೂಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ವೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೇ ಈಗಿನವರಲ್ಲಿ ನಿಮ್ಮ ಗಳನ್ನು ತಿಳಿಯಿರಿ

ನಮಗನುಕೂಲವಾದ ಶಿಕ್ಷಣಕ್ಕೆ ವ್ಯವಸ್ಥೆಯಾಗುವುದು. ಪರೀಕ್ಷೆಯ ಸಾಧ್ಯ ಪುಸ್ತಕಗಳು, ಕಛೇರಿ ಕಾರ್ಯಂಬರಿ ವಗೈರೆ ದೊರೆಯುವುದಲ್ಲದೆ ನಮಗೆ ಎಲ್ಲಾ ವಿಧವಾದ ಸಹಾಯವೂ, ನ್ಯಾಯವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಪ್ರಿನ್ಸಿಪಾಲರು ಕಾಂಗ್ರೆಸ್ಸು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription	ಚಂದಾ ವಿವರ
Annual	ವರ್ಷಕ್ಕೆ
Local 2—0—0	ಬಳ್ಳಾರಿಯವರಿಗೆ 2-0-0
Moffusil 3—0—0	ಹೊರಗಿನವರಿಗೆ 3-0-0
6 Months	೬ ತಿಂಗಳಿಗೆ
Local 1—4—0	ಬಳ್ಳಾರಿಯವರಿಗೆ 1-4-0
Moffusil 2—0—0	ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri_____

Printed at Vittal Press, Car Street Edited & Published by T. B. Keshava Rao, Bellary

Reg. No M. 3937

ಮಂದೆ ಮಾತರಂ'

ನವ ಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಸಂಚಿಕೆ ೪೯

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.
ಬಳ್ಳಾರಿ ಜೂನ್ ೨೮ ನೇ ಭಾನುವಾರ ೧೯೨೨.

ಸಂಪಾದಕ—
ಟಿ ಪಿ. ಕೇಶವಪಿಳ್ಳೈ

ಮಹಾತ್ಮ ಗಾಂಧಿಯವರ ಲೇಖನಗಳು

ಹಿಂದೂಸ್ತಾನವನ್ನು ಬಿಟ್ಟುಹೋಗುವುದರ ಅರ್ಥ!
ಅಹಿಂಸೆಯ ಗತಿ ಏನು?

—oOo—

ಗಾಂಧೀಜಿಯವರ ಹೇಳಿಕೆಗಳು ಅಚ್ಚಿಸಿ ರಾಷ್ಟ್ರಗೀತಗಳುಳಲ್ಲವೇ?

ಅದರ ಅರ್ಥವು

ಪ್ರಶ್ನೆ:- ಹಿಂದುಸ್ತಾನದಿಂದ ಹೊರಟು ಹೋಗಬೇಕೆಂದು ಸೀಪು ಬ್ರಿಟಿಷ್ ಸರ್ಕಾರವರಿಗೆ ಮಾಡಿಕೊಂಡ ವಿನ್ನಹದ ಅರ್ಥವೇನು? ಇತ್ತೀಚೆಗೆ ನೀವು ಆ ಬಗ್ಗೆ ಒಹಳ ಬರೆದಿರುವಿರಿ. ಆದರೆ ಅದರ ಅರ್ಥದ ಬಗ್ಗೆ ಸಾರ್ವಜನಿಕರಲ್ಲಿ ಗೊಂದಲವುಂಬುದಂತೆ ತೋರುತ್ತದೆ.

ಉತ್ತರ - ನನ್ನ ಅಭಿಪ್ರಾಯವನ್ನು ಹೇಳಬೇಕಾದರೆ, ಬೇರೆ ಬೇರೆ ಪಕ್ಷ ಪಂಗಡಗಳ ಇಚ್ಛೆ ಇಲ್ಲವೆ ಬೇಡಿಕೆಗಳೇನೇ ಇದ್ದರೂ ಅತ್ತ ಗಮನಿಸದೆ ಬ್ರಿಟಿಷ್ ಸರಕಾರವು ಸಂಪೂರ್ಣವಾಗಿ ಇಲ್ಲಿಂದ ನಿವೃತ್ತವಾಗಲೇ ತಕ್ಕದ್ದು. ಆದರೆ ಅವರ ಸ್ವಂತ ನೈಸರ್ಗಿಕ ಅವಶ್ಯಕತೆಯು ಅದಿನ್ನು ನನಗಿದೆ. ಜಪಾನಿನ ಪ್ರವೇಶವನ್ನು ತಡೆಯುವದಕ್ಕಾಗಿ ಅವರು ಹಿಂದುಸ್ತಾನದಲ್ಲಿರುವ ಅವಶ್ಯಕತೆಯಿದೆ ಆ ರೀತಿ ಜಪಾನರ ಪ್ರವೇಶವನ್ನು ತಡೆಯುವದು ನಮಗೂ ಬೇಕಾಗಿದೆ, ಅವರಿಗೂ ಬೇಕಾಗಿದೆ. ಚೀನದ ಸಲುವಾಗಿ ನಾಗೆ ಮಾಡುವ ಅವಶ್ಯಕತೆಯಿರುಬಹುದು ಆ ದುದರಿಂದ ಹಿಂದುಸ್ತಾನದಲ್ಲಿ ಅವರು ಇರುವದನ್ನು ನಾನು ಸಹಿಸಬಲ್ಲೆ. ಆದರೆ ಅವರು ಅಳುವವರೆಂದು ಇಲ್ಲಿ ಇರದೆ ಸ್ವತಂತ್ರ ಹಿಂದುಸ್ತಾನದ ಮಿತ್ರರೆಂದು ಇಲ್ಲಿರಬಹುದು. ಬ್ರಿಟಿಷರು ಇಲ್ಲಿಂದ ಹೊರಟು ಹೋಗುವದಾಗಿ ಸಾರಿದ ಬಳಿಕ, ಹಿಂದುಸ್ತಾನದಲ್ಲಿ ಒಂದು ಸ್ಥಿರವಾದ ಸರಕಾರವು ಸ್ಥಾಪಿಸಲ್ಪಡುವದೆಂದು ನಿಶ್ಚಿತವಾಗಿ ಗ್ರಹಿಸಬಹುದಾಗಿದೆ. ಪರಕೀಯ ಅಧಿಕಾರದ ಒಂದು ತೊಡಕು ಸಂಪೂರ್ಣವಾಗಿ ಮಾಯವಾದ ಕೂಡಲೆ ಆಯಾ ಪಕ್ಷಗಳಲ್ಲಿ ಒಮ್ಮತಿಕೆ ಯಾಗುವದು ಬಹಳ ಸುಲಭವಾದುದು ಮಿತ್ರರಾಷ್ಟ್ರಗಳವರು ಯಾವ ಕರಾರಿಗಳ ಮೇಲೆ ಇಲ್ಲಿ ಚುಮ್ಮನೆಬಿಕೆಗಳನ್ನು ನಡೆಸಬೇಕೆಂಬುವನ್ನು ಆ ಸ್ವತಂತ್ರ ಸರಕಾರವರೆ ನಿರ್ಧರಿಸಬಲ್ಲರು, ಅವರಲ್ಲಿ ಕರ್ತವ್ಯವು ಈಗಿದ್ದ ಪಕ್ಷಗಳೆಲ್ಲ ರಾಷ್ಟ್ರೀಯ ಸರಕಾರದಲ್ಲಿ ವಿಸರ್ಜನ ಹೊಂದಬಹುದು. ಅವು ಮುಂದೆಯೂ ಅಸ್ತಿತ್ವದಲ್ಲುಳಿದರೆ ಕೇವಲ ತಮ್ಮ ಪಕ್ಷಗಳ ಕಾರ್ಯದ ಸಲುವಾಗಿ ಉಳಿಯಬಹುದು. ಆದರೆ ಬಾಹ್ಯಜಗತ್ತಿನೊಡನೆ ವ್ಯವಹಾರ ಸಾಗಿಸಲಿಕ್ಕೆ ಮಾತ್ರ ಅವುಳಿಯಲಾರವು.

ಅಹಿಂಸೆಯ ಗತಿಯೇನು?

ಪ್ರಶ್ನೆ — ಆದರೆ ನಿಮ್ಮ ಅಹಿಂಸೆಯ ಗತಿಯೇನು? ಸ್ವತಂತ್ರ ವ್ಯವಸ್ಥಿತ ಬಳಿಕ ಯಾವ ಸಂಘರ್ಷವಿಲ್ಲದೆ ನೀವು ನಿಮ್ಮ ಧೋರಣವನ್ನು ಒಯ್ಯುವಿರಿ?

ಉತ್ತ - ಈ ಪ್ರಶ್ನೆ ಬಹುಶಃ ಉದ್ಭವಿಸಲಾರದಿತ್ತು. ಸಂಕ್ಷೇಪವಾಗಿ ಹೇಳಬೇಕೆಂದು ನಾನು ಉತ್ತರಿಸುತ್ತಿರುವೆನೆಂಬ ಸಂಗತಿಯನ್ನು ಉಪಯೋಗಿಸುತ್ತಿರುವೆ. ಆದರೆ ಆದರಲ್ಲಿ ನನ್ನ ಕಲ್ಪನೆಯಂತೆ ಹಿಂದುಸ್ತಾನದ ಅಭಿಪ್ರಾಯವನ್ನೇ ಹೇಳುತ್ತಿರುವೆನೆಂದು ಅರ್ಥವಲ್ಲ. ಅಹಿಂಸೆಯು ಈ ಘೋರಣವು ಮಿತ್ರ ಘೋರಣವಾಗುವದು ರಾಷ್ಟ್ರೀಯ ಸರ್ಕಾರವು ಯಾವ ಘೋರಣವನ್ನು ಸ್ವೀಕರಿಸುವ ದೆಂಬದನ್ನು ನಾನು ಹೇಳಲಾರೆ. ರಾಷ್ಟ್ರೀಯ ಸರ್ಕಾರ ಸ್ಥಾಪನೆಯಾದ ನಂತರ ಕದಾಚಿತ್ ಜೀವಂತವೂ ಇರಲಿಕ್ಕಿಲ್ಲ ಆದರೆ ಜೀವಂತವಿರಬೇಕೆಂದು ನನ್ನ ಮನಸ್ಸಿನಲ್ಲಿ ಬಹಳವಿದೆ ನಾನು ಜೀವಂತ ಉಳಿದರೆ, ಅಹಿಂಸಾ ಘೋರಣವನ್ನು ಅನಾಹ್ವ ಹೆಚ್ಚು ಪ್ರಮಾಣದಲ್ಲಿಟ್ಟುಕೊಳ್ಳಲು ರಾಷ್ಟ್ರೀಯ ಸರ್ಕಾರಕ್ಕೆ ನಾನು ಸಲಹೆ ತೊಡುವೆನು. ಜಗತ್ತಿನ ಶಾಂತಿಸ್ಥಾಪನೆ ನುತ್ತು ಹೊಸ ಮನ್ವಂತರ ಸ್ಥಾಪನೆಗೆ ಅ ಜೊಳ್ಳೆ ಸಹಾಯಕವಾಗುವನು. ಹಿಂದು ಸ್ತಾನದಲ್ಲಿ ಸ್ಪಷ್ಟಿಯ ಸೃಷ್ಟಿಯ ಅನೇಕ ಜನರಿರುವರು. ಮುಂದಿನ ಸರ್ಕಾರದಲ್ಲಿ ಇವರ ಅಂಗವು ಪ್ರಾಮುಖ್ಯವಾಗಿ ಇದ್ದೇ ಇರುವದು. ಈ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಸರ್ಕಾರದ ಘೋರಣವು ಸ್ವಲ್ಪ ಸೌಮ್ಯ ಸ್ವರೂಪದಲ್ಲಿಯಾದರೂ ಸೈನಿಕ ಸೃಷ್ಟಿಯನ್ನೆ ಆಗಬಹುದು. ಆದರೆ ಕಳೆದ 22 ವರ್ಷಗಳಿಂದ ಅಹಿಂಸೆಯು ಅತ್ಯಂತ ಪ್ರಧಾನವಾಗಿರುವ ರಾಜಕೀಯ ಹೋರಾಟಗಳಿಗೆ ಬಂದು ಬಿಡುವಂತಾಗಿ ನಡೆದ ಪ್ರಯತ್ನವೆಲ್ಲ ನಿರರ್ಥವಾಗಿದೆ, ವಿರುದ್ಧ ಅಹಿಂಸೆಯನ್ನು ಆಚರಿಸುತ್ತಿರುವ ಬಲಿಷ್ಠ ಪಕ್ಷವು ದೇಶದಲ್ಲುಳಿಯಬಹುದೆಂದು ನಾನು ಆಸಿಸುತ್ತೇನೆ. ಏನೇ ಆದರೂ ಸ್ವತಂತ್ರ ಹಿಂದುಸ್ತಾನವು ಮಿತ್ರರಾಷ್ಟ್ರಗಳ ಮಿತ್ರವಾಗುವದರಿಂದ ಅವರ ಧ್ಯೇಯ ಸಾಧನೆಗೆ ಬಹಳ ಸಹಾಯವಾಗಲಿಕ್ಕೆ ಬೇ

ಕ್ಕು. ಆದರೆ ಇಂದಿನಂತೆ ಹಿಂದುಸ್ತಾನವು ಧಾನ್ಯದಲ್ಲುಳಿದರೆ ಯುದ್ಧದ ಕೊ ರ ಳ ಲ್ಲಿ ಬೇಸುಳ್ಳಲ್ಲಾಗಿ ಪರಿಣಮಿಸುವುದು. ಅಲ್ಲದೆ ಅತ್ಯಂತ ಅಯತ್ತ ಸಮಯದಲ್ಲಿ ಒ ಳ್ಳೇ ಗಂಡಾಂತರದ್ದೆಂದೆನಿಸಬಹುದು.

ರೇಡಿಯೋ ಸುದ್ದಿಗಳು.

ಪ್ರಶ್ನೆ:—ನೀವು ರೇಡಿಯೋ ಸುದ್ದಿಗಳನ್ನು ಕೇಳುವದಿಲ್ಲ. ನಾನು ಒಳ್ಳೆ ದಕ್ಷತೆಯಿಂದ ಕೇಳುತ್ತೇನೆ. ನಿಮ್ಮ ಬೆಂಬಲದ ಬಲವು ಆಚ್ಚಿನ ರಾಷ್ಟ್ರಗಳಿಗನುಕೂಲವಾಗಿರುವದೆಂದು ಆ ರೇಡಿಯೊ ಸುದ್ದಿಗಳು ನಿಮ್ಮ ಬರಹಗಳ ಅರ್ಥವನ್ನು ಮಾಡುತ್ತವೆ. ಬ್ರಿಟಿಷ್ ಆಳಿಕೆಯನ್ನು ಕೊನೆಗೊಳಿಸುವದಕ್ಕಾಗಿ ಸುಭಾಸಚಂದ್ರರಂತೆ ನೀವೂ ಹೊರಗಿನ ಸಹಾಯವನ್ನು ತೆಗೆದುಕೊಳ್ಳಬೇಕೆಂಬ ಅಭಿಪ್ರಾಯಕ್ಕೆ ಬಂದಿರುವರೆಂದೂ ರೇಡಿಯೊಗಳು ಸುದ್ದಿ ಹೇಳುತ್ತವೆ. ಈ ವಿಷಯದಲ್ಲಿ ನೀವು ನಿಮ್ಮ ಅಭಿಪ್ರಾಯವನ್ನು ಸ್ಪಷ್ಟೀಕರಿಸಬೇಕೆಂದು ನನ್ನ ಇಚ್ಛೆ. ಪ್ರಶಿದ್ಧವಿರುವ ನಿಮ್ಮ ವಿಚಾರಗಳನ್ನು ತಪ್ಪಾಗಿ ಹೇಳುವದು ತೀರ ಘಾತಕ ಮೆಟ್ಟಲಕ್ಕೆ ಮುಟ್ಟಿದೆ.

ಉತ್ತರ:—ಈ ಪ್ರಶ್ನೆ ನೀವು ಕೇಳಿದ್ದಕ್ಕಾಗಿ ನನಗೆ ಸಂತೋಷ. ಪರಕೀಯದ ಸ್ವಯಂದಿಂದ ಸ್ವತಂತ್ರವಾಗುವ ಪ್ರಯತ್ನದಲ್ಲಿ ಹಿಂದುಸ್ತಾನವು ಯಾವದೆ ಪರಕೀಯ ಸರಕಾರದ ಸಹಾಯವನ್ನು ಕೋರಲು ನನಗೆ ಯಾವದೆ ಬಗೆಯ ಇಚ್ಛೆ ಇಲ್ಲ. ಬ್ರಿಟಿಶ್ ಸರ್ಕಾರವ ಬದಲು ಬೇರೆ ಯಾವದೆ ಪರಕೀಯ ಸರ್ಕಾರವನ್ನು ನಾನು ಅಪೇಕ್ಷಿಸುವದಿಲ್ಲ. ಪರಿಚಯವಿಲ್ಲದ ಶತ್ರುವಿಗಿಂತ ಪರಿಚಯವಿದ್ದ ಶತ್ರುವು ಲೇಸು. ಆಚ್ಚಿನ ರಾಷ್ಟ್ರಗಳ ಮಿತ್ರತ್ವದ ವೃತ್ತಿಯ ಬಗ್ಗೆ ನಾನು ಸ್ವಲ್ಪವೂ ಮಹತ್ವ ಇಲ್ಲವೆ ಬೆಲೆ ಕೊಟ್ಟಿರುವನಿಲ್ಲ. ಅವರು ಹಿಂದುಸ್ತಾನಕ್ಕೆ ಬಂದರೆ, ಅವರೇನು ನಮಗೆ ಸ್ವಾತಂತ್ರ್ಯಕೊಡಲು ಬರುವದಿಲ್ಲ. ಆದರೆ ನಮ್ಮ ಸುಲಿಗೆಯಲ್ಲಿ ಪಾಲುಗಾರರಾಗಲು ಬರುವರು. ಅದುದರಿಂದ ಸುಬಾಷಬಾಬುರವರ ಧೋರಣಕ್ಕೆ ನಾನು ಸಮ್ಮತಿಸುತ್ತೇನೆಂಬ ಪ್ರಶ್ನೆಯು ಹುಟ್ಟುವದಿಲ್ಲ. ನಮ್ಮಿಬ್ಬರಲ್ಲಿದ್ದ ಪರಕೆಯ ಮತಭೇದವು ಇನ್ನೂ ಹಾಗೆಯೇ ಇವೆ. ಅವರ ಸ್ವಾರ್ಥತ್ಯಾಗ ಇಲ್ಲವೆ ಅವರ ದೇಶಾಭಿಮಾನದ ಬಗ್ಗೆ ನನಗೆ ಸಂಶಯವಿವೆಯೆಂದು ಮಾತ್ರ ಇದರ ಅರ್ಥವಲ್ಲ.

ಅದರೆ ಅವರ ದೇಶಾಭಿಮಾನ ಮತ್ತು ತ್ಯಾಗದ ಪ್ರಶಂಸೆಯನ್ನು ನಾನು ಮಾಡಿದರೂ ಅವರು ತಪ್ಪುದಾರಿ ಹಿಡಿದಿರವರೆಂದೂ ಅವರ ದಾರಿಯಿಂದ ಹಿಂದುಸ್ತಾನಕ್ಕೆಂದಿಗೂ ಮೋಕ್ಷವಿಲ್ಲೆಂದು ಸುಂತಾವ್ದನ್ನು ನಾನು ಉಪೇಕ್ಷಿಸಲಾರೆ, ಹಿಂದುಸ್ತಾನದ ಉದಾಸೀನತೆ ಮತ್ತು ಬ್ರಿಟನವು ಯುದ್ಧದಲ್ಲಿ ಪರಾಜಯವಾದಾಗ ಹಿಂದುಸ್ತಾನದಲ್ಲಿಯ ದುರಿಹೋಕನು ಕೂಡ ಅವ್ಯಕ್ತ ಆನಂದ ಪಡುವದನ್ನು ನೋಡಿ ಯೋಗ್ಯರೀತಿಯಿಂದ ಅವನ್ನು ಹತ್ತಿಕ್ಕಿದ್ದರೆ ಹಿಂದುಸ್ತಾನವನ್ನು ಗೆದೆಯಬೇಕೆಂಬ ಜಪಾನದವರ ಯೋಜನೆ ಯಶಸ್ವಿಯಾಗುವ ಲಕ್ಷಣಗಳಿವೆಂದು ನನಗೆನಿಸಿದ್ದರಿಂದ ಬ್ರಿಟಿಶರ ಈ ಸ್ನಿಮಿತ್ತದ ಬಗ್ಗೆ ನಾನು ಹೆಚ್ಚೆಂದು ಅಸಹಿಷ್ಣು ಆಗಿರುವೆನು ತಪ್ಪಿರುದ್ಧವಾಗಿ ಹಿಂದುಸ್ತಾನಕ್ಕೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕರೆ ಜಪಾನರು ಹಿಂದುಸ್ತಾನದಲ್ಲಿ ಪ್ರವೇಶಪಡಬೇಕೆಂದು ಹಿಂದುಸ್ತಾನವೆಂದೂ ಭಯಪಡಲಾರದು ಆಗ ಹಿಂದುಸ್ತಾನದ ಡಿಫೆನ್ಸಿನ್ನ ಮತ್ತು ಆಸಂತೋಷವು ದೈವೀ ಚಮತ್ಕಾರದಂತೆ ಒಮ್ಮೆಲೆ ಬದಲಾಗಿ ಭಾರತೀಯರು ಮಿತ್ರರಾಷ್ಟ್ರಗಳೊಡನೆ ಸಹಕರಿಸಲು ಒಳ್ಳೆ ಸಂತೋಷದಿಂದ ಮನಃಪೂರ್ವಕವಾಗಿ ಮುಂದೆ ಬರುವರೆಂದೆ ಪ್ರತಿಯೊಬ್ಬ ಕೇಡಿಯಿಂದ ಅವನು ಯಾವನೆ ಇರಲಿ ತನ್ನ ಸ್ವಾತಂತ್ರ್ಯದ ರಕ್ಷಣೆ ಮಾಡಿಕೊಳ್ಳಲು ಆವರೊಡನೆ ಕೂಡಿಕೊಂಡು ಕಾರ್ಯ ಮಾಡುವರು.

ಪ್ರಜೆಗಳಿಗೆ ಆಹಾರಬೇಕು

* * * ರೈತರಿಗೆ ಸಹಾಯಬೇಕು

(ಶ್ರೀ ಟಿ. ಟಿ. ಕರ್ಮ.)

ಕೆಲವು ವಾರಗಳ ಹಿಂದೆ ದೆಹಲಿಯಲ್ಲಿ ಶ್ರೀ ಎನ್. ಆರ್ ಸರಕಾರರ ಅಧ್ಯಕ್ಷತೆಯಲ್ಲಿ ಪವಸ ಧಾನ್ಯಗಳಬೆಳೆ ಸಮ್ಮೇಳನವೊಂದು ನಡೆಯಿತು ಆ ಸಮ್ಮೇಳನದಲ್ಲಿ ಈ ಸಮಸ್ಯೆಗೆ ಸಂಬಂಧಪಟ್ಟಂತೆ ಸೂಕ್ಷ್ಮ ಚರ್ಚೆಗಳಾದವು.

[1] ಆಹಾರ ಪದಾರ್ಥಗಳ ಸಂಬಂಧವಾಗಿ ಒಂದು ಕೇಂದ್ರ ಸಲಹಾ ಸಮಿತಿ ಇರತಕ್ಕದ್ದು ಇದರಲ್ಲಿ ಪ್ರಾಂತ್ಯಗಳಿಂದಲೂ ಸಂಸ್ಥಾನಗಳಿಂದಲೂ ಪ್ರತಿನಿಧಿಗಳಿರತಕ್ಕದ್ದು. ಈ ಸಮಿತಿಯು ಇಂಡಿಯಾ ಸರ್ಕಾರಕ್ಕೆ ಸಲಹೆಗಳನ್ನು ಕೊಡತಕ್ಕದ್ದು.

(2) ದವಸ ಧಾನ್ಯಗಳ ಬೆಳೆಗೆ ಸಂಬಂಧಪಟ್ಟ ಅಂಕಿಗಳನ್ನೂ, ಕಾರ್ಯವಿಧಾನಗಳನ್ನೂ ಎಲ್ಲ ಕಡೆಯಿಂದಲೂ ಸಂಗ್ರಹಿಸಿ ಎಲ್ಲರ ಉಪಯೋಗಕ್ಕಾಗಿಯೂ ಈ ಸಮಿತಿಯು ಪ್ರಚಾರ ಮಾಡತಕ್ಕದ್ದು.

(3) ಅಖಿಲ ಭಾರತ ಆಹಾರ ಪದಾರ್ಥಗಳ ಬೆಳೆಯ ಕಾರ್ಯಕ್ರಮವೊಂದನ್ನು ರೂಪುಗೊಳಿಸತಕ್ಕದ್ದು.

(4) ದೇಶದ ಆಹಾರ ಮೂಲಗಳನ್ನೆಲ್ಲ ಪರಿಶೀಲಿಸಿ, ದೇಶದ ಎಲ್ಲ ಕಡೆಗಳಿಗೂ ಸಮಾನವಾಗಿ ಹಂಚತಕ್ಕದ್ದು

ಎಂಬ ನಿರ್ಣಯಗಳಾದುವು ಆ ಸಮ್ಮೇಳನದಲ್ಲಿ.

ಸಮ್ಮೇಳನಾನಂತರ ಪ್ರಾಂತ್ಯಗಳಲ್ಲಂತೂ ವ್ಯವಸಾಯ ಶಾಖಾಧಿಕಾರಿಗಳು "ಹಣ ಸಂಪಾದನೆಮಾಡುವ ವ್ಯಾಪಾರ ಪದಾರ್ಥಗಳನ್ನು ಬೆಳೆಯುವುದು ಬಿಟ್ಟು ಹೆಚ್ಚು ಹೆಚ್ಚಾಗಿ ಆಹಾರ ಪದಾರ್ಥಗಳನ್ನು ಬೆಳೆಯಿರಿ ಬಾ" ಎಂಬುದಾಗಿ ರೈತನಿಗೆ ಉಪದೇಶ ಮಾಡಲಾರಂಭಿಸಿದ್ದಾರೆ.

ಯುದ್ಧಕ್ಕೆ ಮೊದಲು ರೆಂಗೂನಾದರೂ ದೂರಾಲೋಚನೆ ಇಲ್ಲದೆ "ಓಬೀರಾಯನ ಕಾಲದಂತೆ ದವಸ ಧಾನ್ಯಗಳನ್ನು ಬೆಳೆದರೇನಾದೀತು? ಕೈತುಂಬ ಹಣ ಬರತಕ್ಕ ವ್ಯಾಪಾರೀ ದಿನಸುಗಳನ್ನು ಬೆಳೆಯಣ್ಣಿ"ಎಂದು ರೈತನಿಗೆ ಹೇಳುತ್ತ ಬಂದರು. ಪ್ರೋತ್ಸಾಹ ಕೊಡುತ್ತ ಬಂದರು.

ಇವರಿಂದ ಆಪದ್ದೇನು? ಆಹಾರ ಪದಾರ್ಥಗಳು ಕಡಿಮೆ ಬಿದ್ದವು. ಯುದ್ಧ ಮೊದಲಾದ ಮೇಲಂತೂ ವ್ಯಾಪಾರೀ ಬೆಲೆಗೆ ಬೆಲೆ ಇಲ್ಲವಾಯಿತು. ರಫ್ತಾಗುವ ಸಂಭವನೇ ಇಲ್ಲ. ಆ ಮಾತಿರಲಿ ಒಳದೇಶದಲ್ಲೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸರಕು ಹೋಗುವುದೇ ದುಸ್ತರವಾಯಿತು ಇದರಿಂದ ರೈತನಗತಿ ಅಧೋಗತಿಯಾಯಿತು. ಆಹಾರ ಪದಾರ್ಥಗಳ ಅಭಾವದಿಂದ ಅವುಗಳ ಧಾರಣೆಗಳಿಗೆ ಹೆಚ್ಚಿದುವು. ಜನರ ದುಃಖವನ್ನು ಊಹಿಸಲಾಗದು.

"ಈ ಆಹಾರ ಪದಾರ್ಥ ಬೆಳೆಯಿರಿ" ಎಂಬ ಹಾಡನ್ನು ಹಾಡಲಾರಂಭಿಸಿದಾರೆ.

ಹಳ್ಳಿ ಹಳ್ಳಿಗಳಲ್ಲೂ ಈ ಪ್ರಚಾರ ಮೊದಲಾಗಿದೆ ಯಾವ ಯಾವ ಪ್ರಾಂತ್ಯದ ಯಾವ ಯಾವ ಕಡೆ ಏನೇನು ಆಹಾರ ಪದಾರ್ಥ ಹೆಚ್ಚಾಗಿ ಬೆಳೆಯುವುದೋ ಅಲ್ಲೆಲ್ಲ ಮತ್ತಷ್ಟು ಹೆಚ್ಚು ಬೆಳೆಯುವ ಪ್ರಯತ್ನಗಳಾಗುತ್ತಿವೆ

ಆಹಾರ ವಿಚಾರದಲ್ಲಿ ಒಂದೊಂದು ಪ್ರಾಂತ್ಯ ಒಂದೊಂದು ಸಂಸ್ಥಾನವನ್ನೂ ಪರಾಕ್ಕೆಕ್ಕೆ ಇಲ್ಲದಂತೆ ಮಾಡಬೇಕೆಂಬ ಪ್ರಯತ್ನವೂ ನಡೆಯುತ್ತಿದೆ. ರೈತರಿಗೆ ಬೇಕಾದ ಬೀಜವನ್ನು ಸರಬರಾಯಿ ಮಾಡಲಾಗುತ್ತಿದೆ. ಅನೇಕ ಕಡೆ ಈಗಾಗಲೇ ವ್ಯಾಪಾರೀ ಬೆಳೆಗಳು ಶೇಕಡ 5 ರಿಂದ 10 ರಷ್ಟು ಕಡಿಮೆ ಬಿದ್ದು ಆಹಾರ ಪದಾರ್ಥಗಳ ಬೆಲೆ ಹೆಚ್ಚುತ್ತಿದೆ.

ಮೈಸೂರು ಸರ್ಕಾರವೂ ಈ ವಿಚಾರದಲ್ಲಿ ವಿಶೇಷ ಚಟುವಟಿಕೆ ತೋರಿಸುತ್ತಿದೆ. ಹತ್ತಿ ಬೆಳೆ ಹೆಚ್ಚಿಸಲಿಕ್ಕಾಗಿ ಸರ್ಕಾರದವರು ಮಾಸಲು ಮಾಡಿದ್ದ 15000 ಎಕರೆಗಳಲ್ಲಿ 10000 ಎಕರೆಗಳನ್ನು ಮತ್ತೆ ಭತ್ತ ಬೆಳೆಯಲಿಕ್ಕಾಗಿಯೇ ಕೊಟ್ಟಿದ್ದಾರೆ. ಆರ್ವಿಸ್ ನಾಲಾಕ್ಷೇತ್ರದಲ್ಲಿ ಮತ್ತೆ 3000 ಎಕರೆಪಟ್ಟನಲ್ಲಿ ಭತ್ತ ಬೆಳೆಯುವಂಥ ಆರಂಭವಾಗಿದೆ. ಇತರ ಕಡೆಗಳಲ್ಲೂ ಸರಕಾರದವರು ಆಹಾರ ಬೆಳೆಗಾಗಿ ರೈತರಿಗೆ ನಾನಾಸೌಕರ್ಯಗಳನ್ನು ಕಲ್ಪಿಸುತ್ತಿದ್ದಾರೆ. ಬೀಜ, ಗೊಬ್ಬರ ಗೋಡು, ಪುರಮುಟ್ಟುಗಳನ್ನೊಳಗಿ ಸುತ್ತಿದ್ದಾರೆ. ಇದಕ್ಕಾಗಿ ಸರಕಾರದವರು ಅಭಿವಂದ್ಯರೆ.

ಆದರೆ ಸರಕಾರದವರು ಅನ್ನಕೊಡುವ ರೈತನಿಗೆ ದೇವಕ್ಕೆಲ್ಲ ನಿಜವಾಗಿಯೂ ಪ್ರಯೋಜನವಾಗುವ ಏರ್ಪಾಡುಗಳು ಹಲವನ್ನು ಮಾಡಲೇ ಬೇಕು. ರೈತನು ಏನು ಬೆಳೆದರೇನು, ಎಷ್ಟು ಬೆಳೆದರೇನು? ಅವನು ಚಿನ್ನ ಬೆಳೆದರೂ ಅವನ ಬಾಯಿಗೆ ಮಣ್ಣೇ.

[1] ರೈತನು ದುಡಿದು ಬೆಳೆಯೋನೋ ಬೆಳೆಯುತ್ತಾನೆ. ಆದರೆ ಅವನ್ನು ಮಾರಾಟ ಮಾಡುವ ಬುದ್ಧಿಯಾಗಲಿ, ಸೌಕರ್ಯವಾಗಲಿ ಅವನಿಗಿಲ್ಲ. ಬಂಡವಾಳಗಾರರು, ದಲ್ಲಾಳಿ ವರ್ತಕರು, ಕಮಿಷನ್ ಏಜಂಟರು ಬೆಳೆಯುವವನ ಮತ್ತು ಕೊಂಡುಕೊಳ್ಳುವವನ ಮಧ್ಯೆ ಬಂದು ಇಬ್ಬರಿಗೂ ಚನ್ನಾಗಿ ಕ್ಷೌರ ಮಾಡುತ್ತಿದ್ದಾರೆ; ಸೂರೆಮಾಡುತ್ತಿದ್ದಾರೆ ಶಾಸನಗಳಿಂದಲೂ, ಪರಿಣಾಮಕಾರಿಯಾದ 'ಮಾರ್ಕೆಟಿಂಗ್' ಏರ್ಪಾಡುಗಳಿಂದಲೂ ಸರಕಾರದವರು ಬೆಳೆಯುವವನಿಗೆ ಹೆಚ್ಚು ಪ್ರಯೋಜನವಾಗುವಂತೆ ಮಾಡಬೇಕು.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—10—40.	31—5—42.
ರು. 1,14,774-0-0	ರು 2,41,525-0-0

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:—

1 ತಿಮ್ಮಸಮುದ್ರ 2 ಕೊಟ್ಟೂರು. 3 ಉರವಕೊಂಡ 4 ಪತ್ತಿಕೊಂಡ

ಹೆಚ್. ಶೇಷಾರಾಮರೆಡ್ಡಿ,, ಬಿ. ಎ ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

[2] ರೈತನಿಗೆ ಹೊಣಕಾಸಿನ ಸೌಲಭ್ಯವನ್ನುಂಟು ಮಾಡಬೇಕು. ಎಲ್ಲ ಬ್ಯಾಂಕುಗಳ ಪ್ರಯೋಜನವೂ ಬಂಡವಾಳಗಾರರಿಗೇ! ರೈತರಿಗೇನಿದೆ! ಸರಕಾರದವರು ರೈತರಿಗೆ ಈ ಹೊಣಕಾಸಿನ ಸೌಲಭ್ಯದ ಸಂಸ್ಥೆಗಳ ಪ್ರಯೋಜನವನ್ನು ಹೆಚ್ಚಾಗಿ ಉಂಟು ಮಾಡಿಕೊಡಬೇಕು.

[3] ಹಳ್ಳಿಗಳಿಂದ ರಾಜಮಾರ್ಗಗಳವರೆಗೆ, ಹಳ್ಳಿಯಿಂದ ಹಳ್ಳಿಗೆ ಸಾಮಾನು ಸಾಗಿಸಲು ದಾರಿಗಳಿಲ್ಲ. ಮಾರ್ಗ ಸೌಕರ್ಯ ಕಲ್ಪಿಸುವವರೆಗೆ ರೈತನು ತನ್ನ ಬೆಳೆಯನ್ನು ಬೇರೆ ಕಡೆಗೆ ಸುಲಭವಾಗಿ ಸಾಗಿಸುವ ಹಾಗಿಲ್ಲ.

[4] ಯಾವ ಕಾಲದಲ್ಲಿ ದಿನಸುಗಳನ್ನು ಮಾರಿದರೆ ಹೆಚ್ಚು ಬೆಲೆಬರುತ್ತದೆ; ಎಷ್ಟು ಮಾರಿದರೆ, ಹೇಗೆಮಾರಿದರೆ ಹೆಚ್ಚು ಲಾಭವಾಗುತ್ತದೆ ನೋಡಲಾದ ಸಂಗತಿಗಳೊಂದೂ ಬಡಪೈತನಿಗೆ ಗೊತ್ತಿಲ್ಲ. ಈ ಅಂಶಗಳನ್ನೆಲ್ಲ ವ್ಯವಸಾಯ ಶಾಖಾ ಸೌಕರರ ಮೂಲಕ, ಪರಸ್ಪರ ಸಹಾಯ ಸಂಘಗಳ ಸೌಕರರ ಮೂಲಕ ತಿಳಿಸಬೇಕು. ಪ್ರತಿಯೊಂದು ಪಂಚಾಯಿತಿ ಕಚೇರಿಯಲ್ಲೂ ದಿನಸಿ ಧಾರಣೆಗಳ ಅಂಕಿಗಳಿರುವಂತೆ ಮಾಡಬೇಕು. ದಿನ ದಿನದ ಧಾರಣೆನಾಸಿಗಳ ಅಂಕಿಗಳೆಲ್ಲ ಹಳ್ಳಿಗಳಲ್ಲಿ ಸಿಗುವಂತೆ ವ್ಯವಸ್ಥೆಯಾಗಬೇಕು.

[5] ಒಕ್ಕೆ ಧಾರಣೆ ಬರುವವರೆಗೆ ಸರಕನ್ನು ಕಾಪಾಡಿಕೊಳ್ಳಲು ಯಾವ ಯಾವ ವೈಜ್ಞಾನಿಕ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂಬ ತಿಳುವಳಿಕೆಯನ್ನೆಲ್ಲ ವ್ಯವಸಾಯ ಶಾಖೆಯವರು ರೈತರಿಗೆ ಕೊಡಬೇಕು.

[6] ಕಾಯಿದೆಕಾನೂನಳಿಗೆಗಳನ್ನೆಲ್ಲ ಹಿಂದಿನ ಕಾಲದಲ್ಲಿದ್ದಂತೆ ಸರಕಾರದವರು ದವಸ ಧಾನ್ಯಗಳ ಮೂಲಕವೇ ತೆಗೆದುಕೊಂಡು ಸರಕಾರದವರು ಆ ದವಸ ಧಾನ್ಯಗಳನ್ನು ಮಾರಾಟಮಾಡುವ ಏರ್ಪಾಡನ್ನು ಮಾಡಬೇಕು

ನಾವು ಮಾಡಿರುವ ಈ ಸೂಚನೆಗಳ ಕಡೆಗೆ ಸರಕಾರದವರು ಗಮನಕೊಡದೇ ಕೆಂದೂ ಆವಶ್ಯವಿಟ್ಟಿಗೆ ಈ ಸೌಕರ್ಯಗಳನ್ನು ರೈತರಿಗೆ ಮಾಡಿಕೊಡಬೇಕಂದೂ ನಾವು ಸರ್ಕಾರದವರಲ್ಲಿ ವಿಜ್ಞಾಪಿಸಿಕೊಳ್ಳುತ್ತೇವೆ.

ಚರ್ಚಿಲ - ರೂಸವೆಲ್ಟ್:—

ಬ್ರಿಟಿಷ ಪ್ರಧಾನ ಮಂತ್ರಿಗಳಾದ ಚರ್ಚಿಲರು ಅಮೆರಿಕಾದ ಎಲ್ಲೋ ಒಂದು ಭಾಗದಲ್ಲಿ ಅತಿರಹಸ್ಯವಾದರೀತಿಯಲ್ಲಿ ಬಹು ಮುಖ್ಯ ವಿಷಯಗಳನ್ನು ಕುರಿತು ಸಂಭಾಷಿಸುತ್ತಿರುವರೆಂದು ಪ್ರಕಟವಾಗಿದೆ.

ತೋಬ್ರುಕದ ಪತನ:....

ಲಿಬ್ಯಾದಲ್ಲಿ ಬಲಿಷ್ಠ ದುರ್ಗವೂ, ಬ್ರಿಟಿಷರಿಗೆ ಮೆಡಿಟರೇನಿಯರ್ ಸಮುದ್ರದಲ್ಲಿ ಬಹು ಮುಖ್ಯ ಬಂದರವೂ ಆದ ತೋಬ್ರುಕ್‌ದ ಪತನವಾಯ್ತೆಂದು ಪ್ರಕಟಿಸಲ್ಪಟ್ಟಿದೆ.

ತೋಬ್ರುಕ್‌ದ ಪತನದಿಂದ ಬ್ರಿಟಿಷರಿಗೆ ಒಂದು ದೊಡ್ಡ ಸೋಲೆಂತಲೂ, ಅದು ಸೋಲಿನ ಪರಮಾವಧಿ ಯೆಂತಲೂ, ಲಂಡನ್ ಟೈಮ್ಸ್ ಪತ್ರಿಕೆಯು ಟೀಕಿಸಿದೆ, ಇಂಗ್ಲೆಂಡಿನ ಪತ್ರಿಕೆಗಳೆಲ್ಲಾ ಸಾಮ್ರಾಜ್ಯದ ಬಹು ಮುಖ್ಯ ಭಾಗವು ಹೋದಕಾರಣ, ಗೋಳಿಟ್ಟವೆ ತೋಬ್ರುಕದ ಪತನದಿಂದ ಉತ್ತರ ಆಫ್ರಿಕಾದ ಇಡೀ ಲಿಬ್ಯಾದೇಶವೇ ಬ್ರಿಟಿಷರ ಕೈಬಿಟ್ಟಂತಾಯಿತು. ಕಳೆದ ವರ್ಷ 7-8 ತಿಂಗಳು ಜರ್ಮನಿ-ಇಟಲಿಗಳ ಪ್ರಚಂಡ ದಾಳಿಯನ್ನು ಸಹಿಸಿ, ತೋಬ್ರುಕ್‌ವು ರಕ್ಷಣಾಗತವಾಗದೆ ಈಗ ಇಷ್ಟು ಜಾಗ್ರತೆಯಾಗಿ ಅದು ಪತನವಾದುದು ಎಲ್ಲರಿಗೂ ಆಶ್ಚರ್ಯವುಂಟುಮಾಡಿದೆ ಮೆಡಿಟರೇನಿಯರ್ ಸಮುದ್ರದ ಆಫ್ರಿಕಾಭಾಗದಲ್ಲಿ ಇದು ಒಂದು ಜಲದುರ್ಗದಂತಿದ್ದು ಬ್ರಿಟಿಷರ ಹಡಗುಗಳನ್ನೆಲ್ಲಾ ಸಂರಕ್ಷಿಸುವ ಕೇಂದ್ರವಾಗಿದ್ದಿತು ಅಲ್ಲದೆ ಈ ದುರ್ಗದಲ್ಲಿ ಅಪಾರ ಯುದ್ಧ ಸಾಮಗ್ರಿಗಳು ಶೇಖರಿಸಲ್ಪಟ್ಟಿದ್ದವು. ಇದರ ಪತನದಿಂದ ಬ್ರಿಟಿಷರಿಗೆ ಅಪಾರ ಹಾನಿಯಾಯ್ತೆಂತ ಹೇಳಲಿಕ್ಕೆ ಯಾವ ಅಡ್ಡಿಯೂ ಇಲ್ಲ

ತೋಬ್ರುಕ್‌ದ ಪತನಾನಂತರ ಈಜಿಪ್ಟಿನಲ್ಲಿ ಪ್ರವೇಶ.

ಜನರಲ್ ಆಚ್ಲೆಯನವರು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ತೋಬ್ರುಕ್ ಪತನವೂ ಮತ್ತು ಅವರಲ್ಲಿದ್ದ ಬ್ರಿಟಿಷ್ ಮತ್ತು ಸಾಮ್ರಾಜ್ಯ ಸೈನ್ಯಗಳ ಕೈಸೆರೆಯೂ, ಅನಿರೀಕ್ಷಿತವಾದ ಮತ್ತು ಬಲವಾದ ಪೆಟ್ಟೆಂದು ಹೇಳಿದರು. ಲಿಬ್ಯಾದಲ್ಲಿ ಇನ್ನೂ ಯುದ್ಧವು ನಡೆಯುತ್ತಿರುವದೆಂದು ಹೇಳಿದರು ಮೆಡಿಟರೇನಿಯರ್ ಸಮುದ್ರದಲ್ಲಿ ನಡೆದ ನೌಕಾಯುದ್ಧದಲ್ಲಿ ಒಂದು ಲೈಟ್ ಕ್ರೂಯಿಸರ್, 4 ಡಿಸ್ಟ್ರಾಯರ್, ಎರಡು ಮೈಗಾವಲು ಹಡಗುಗಳೂ ಮುಳುಗಿದವೆಂದು ಸೂಚಿಸಿದರು ಶತ್ರುಗಳ ಕಡೆ ಅಪಾರನಷ್ಟವಾಯಿತೆಂದರು ಜನರಲ್ ರೊಮೇಲರವರಿಗೆ ಯಥೇಚ್ಛವಾದ ವಾಹನ ಸೌಕರ್ಯಗಳಿರುವುದರಿಂದ ಈಜಿಪ್ಟಿನಲ್ಲಿ 15 ಮೈಲು ಮೇರ ಪ್ರವೇಶಿಸಿದ್ದಾರೆಂದು ಗೊತ್ತಾಗಿದೆ. ಬ್ರಿಟಿಷ್ ಸೈನ್ಯಗಳು ಸೊಲ್ಲಂ ಮತ್ತು ಸಿದಿಬರಾನಿಯಿಂದ ಹಿಂದೆಗೆದಿವೆ. ಪರಿಸ್ಥಿತಿಯು ಗಂಭೀರವಾಗಿದೆ.

ಓರಿಯಂಟಲ್

ಸಂಪೂರ್ಣ ರಕ್ಷಣೆ, ಪೂರ್ಣ ಭರವಸೆ

ಈ 68 ವರ್ಷಗಳ ಜೀವನದಲ್ಲಿ ಓರಿಯಂಟಲ್ ಕಂಪನಿಯು ತನ್ನ ಲಕ್ಷಾಂತರ ವಿಮಾದಾರರಿಗೆ **ಶಾಂತ ಮತ್ತು ಯುದ್ಧಕಾಲಗಳೆಲ್ಲೂ** ಸಹ ಮಾದರಿ ವಿಮಾಕಾರ್ಯದ ಶ್ರೇಷ್ಠ ತತ್ವಗಳ ಅನುಕರಣೆಯಿಂದ ಮೇಲ್ಬಾಣಿಸಿದುದನ್ನು ಕೊಟ್ಟಿದೆ. ಆವರಿಗೊದಿಗಿಸಿದ ಸೌಲಭ್ಯಗಳನ್ನು ನಿಮಗೂ ಓರಿಯಂಟಲ್ ಒದಗಿಸಲು ಸಿದ್ಧವಿದೆ.

ಇಲ್ಲಿಯವರಿವಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26 ಕೋ ಮೀರಿ
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು 85½ ಕೋಟಿ
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5 ಕೋಟಿ
ನಿಧಿಯ ದ್ರವ್ಯ ರು 30 ಕೋಟಿ

ಗವರ್ನ್‌ಮೆಂಟು ಸೆಕ್ಯೂರಿಟಿಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್,
ಸ್ಥಾಪನೆ ೧೮೭೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ:-
ಓರಿಯಂಟಲ್ ಬಿಲ್ಡಿಂಗ್ಸ್ ಆಫ್ ಮೀನಿಯನ್ ಬೀದಿ, ಜಿ.ಟಿ ಮದ್ರಾಸು.
ಇನ್ಸ್‌ಪೆಕ್ಟರವರ ಆಫೀಸು:- **೪೧೨ ರೂಪರ್ಟಸ್ ಗೇಟ್ ಬ್ರಾಸವೇಟ ಬಳ್ಳಾರಿ.**

ಸೆಬಸ್ಟಪೋಲ್ ಪತನವೇ ?

ರಷ್ಯಾರೆಂಗದ ಕ್ರೀಮಿಯಾ ಪ್ರದೇಶದಲ್ಲಿ ಜರ್ಮನರು ತಮ್ಮ ಅಪಾರ ಹಾನಿಯನ್ನು ಲೆಕ್ಕಿಸದೆ. ಒಂದು ಭಾಗದಿಂದ ಸೆಬಸ್ಟಪೋಲ ನಗರದಲ್ಲಿ ಒಳನುಗ್ಗಿದೆಂದು ಒಂದು ಪ್ರಕಟನೆಯು ಹೇಳುತ್ತದೆ. ಆಂತು ರಷ್ಯನರು ಭಯಂಕರ ರೀತಿಯಲ್ಲಿ ಇನ್ನೂ ಪ್ರತಿಭಟಿಸುತ್ತಲೇ ಇರುವರು.

ಇಂಗ್ಲೀಷನನೆಲೆ ಅಲ್ಲಲ್ಲಿ ಕಳೆನಮಾರ ಶತ್ರು ವಿಮಾನಗಳ ದಾಳಿಯಾಯ್ತೆಂದೂ ನಷ್ಟವೇನೂ ಅಧಿಕವಾಗಿಲ್ಲವೆಂದೂ ಪ್ರಕಟವಾಗಿದೆ.

ರೊಮೆಲರವರು ಫೀಲ್ಡ ಮಾರ್ಷಲ್

ರೊಮೆಲರವರು ಈ ಅಪೂರ್ವ ವಿಜಯವನ್ನು ಸಂಪಾದಿಸಿದುದಕ್ಕಾಗಿ, ಹಿಟ್ಲರವರು ಅವರನ್ನು ಫೀಲ್ಡ ಮಾರ್ಷಲ ಪದವಿಗೇರಿಸಿದ್ದಾರೆ.

ಜರ್ಮನಿಗೆ ಸಹಾಯ ಮಾಡಲು ಆತುರತೆ.

1939ರಲ್ಲಿ ನಾವು ಯುದ್ಧ ಹೊಡಿದುದು ತಪ್ಪು ಜರ್ಮನಿಗೆ ಜಯವಾಗಬೇಕೆಂಬುದೇ ನನ್ನ ಅಭಿಲಾಷೆ, ಫ್ರಾನ್ಸಿನ ಕೆಲಸಗಾರರು ಜರ್ಮನಿಗೆ ಹೋಗಿ ಕಾರ್ಯಗಳಲ್ಲಿ ನಿರತರಾಗಬೇಕು.

ಜರ್ಮನ್—ರಷ್ಯಾ. ಜರ್ಮನಿಗೆ ಅಪಾರ ನಷ್ಟ.

ಸೆಬಸ್ಟಪೋಲ ದುರ್ಗವು ಇನ್ನೂ ಸಂಪೂರ್ಣವಾಗಿ ಜರ್ಮನರ ವಶವಾಗಿಲ್ಲವೆಂದು ಹೇಳಲಾಗಿದೆ. ಕಾರ್ಕೋವ ಭಾಗದಲ್ಲಿ ರಷ್ಯನರು ಹಿಂದೆಸರಿದಿರುವರು. ಜರ್ಮನರು ೬ ಸಂಖ್ಯಾತ ಟ್ಯಾಂಕುಗಳನ್ನು ತರುತ್ತಿರುವರಂತೆ ಒಂದೊಂದು ಕಡೆ 200 ಟ್ಯಾಂಕುಗಳೊಂದಿಗೆ ಹೋರಾಡುವರಂತೆ, ಜೂನ್ 22ನೆಯ ತಾರೀಕಿ ಜರ್ಮನಿ-ರಷ್ಯಾ ಯುದ್ಧವಾರಂಭವಾಗಿ 1 ವರ್ಷವಾಯಿತು. ಜರ್ಮನರು ಒಂದು ಕೋಟಿ ಜನರನ್ನೂ, 21 ಸಾವಿರ ಟ್ಯಾಂಕು 35,5000 ಗನ್ ಕಳೆದುಕೊಂಡರು. ರಷ್ಯಾದ ಕಡೆ 45 ಲಕ್ಷ ಜನ 15 ಸಾವಿರ ಟ್ಯಾಂಕು 22000 ಗನ್‌ಗಳ ನಷ್ಟವಾಯಿತು.

ಬ್ರಿಟಿಷ ಹಡಗುಗಳು ಸಮುದ್ರದಲ್ಲಿ ಎಷ್ಟು ನ ಶವಾದವೆಂಬ ದರ ಸಂಖ್ಯೆಯನ್ನು ಕೊಡಲಿಕ್ಕೆ ಸಾಧ್ಯವಿಲ್ಲೆಂದೂ ಶತ್ರುಗಳು ಈ ಸುದ್ದಿಯಿಂದ ಲಾಭ ಪಡೆದರೆಂದೂ ಪಾರ್ಲಿಮೆಂಟಿನಲ್ಲಿ ಸದಸ್ಯರ ಪ್ರಶ್ನೆಗೆ ಸರಕಾರದವಿಕಾರಿಗಳು ಜವಾಬು ಕೊಟ್ಟರು.

—ಸೆಬಸ್ಟಪೋಲ ಸಂಪೂರ್ಣವಾಗಿ ನಾಶವಾಗಿರುವದೆಂದು ರೆಡ್‌ಸ್ಟಾರ್ ಪತ್ರಿಕೆಯು ಬರೆದಿದೆ.

ಚೀನ-ಜಪಾನ್-

ಕೈಕೇಯನ್ನು ಚೀನರು ಪುನರಾಕ್ರಮಿಸಿರುವರು. ರೈಲ್ವೇ ಮತ್ತು ಇತರ ನಿಮಾನ ನಿಲ್ದಾಣಗಳನ್ನು ಜಪಾನೀಯರು ಆಕ್ರಮಿಸುತ್ತಿರುವದರಿಂದ ಚೀನದಲ್ಲಿ ಭೀಕರ ಪರಿಸ್ಥಿತಿಯುಂಟಾಗುತ್ತಲಿದೆ. ಕಿಯಾಂಗ್ಸಿಭಾಗದಲ್ಲಿ ಘೋರ ಕದನವಾಗುತ್ತಲಿದೆ. ಚೀನಕ್ಕೆ ತಕ್ಷಣ ಯುದ್ಧಸಾಮಗ್ರಿ ವಿಮಾನಗಳ ಸಹಾಯಮಾಡೇಕೆಂದು ಸನ್ ಘೋರವರು ಚೀನದ ರಾಜಧಾನಿಯಾದ ಚಂಗ್‌ಕಿಂಗ್‌ದಿಂದ ಬೇಡಿದ್ದಾರೆ.

ಸೆಬಸ್ಟಪೋಲ:-

ಕ್ರೀಮಿಯಾ ಕ್ಷೇತ್ರದಲ್ಲಿ ಜರ್ಮನ ಒತ್ತಾಯವು ಕೊಂಚವಾದರೂ ಕಡಮೆಯಾಗಿಲ್ಲ. ಶತ್ರುಗಳು ಅಧಿಕ ಸಂಖೆಯಲ್ಲಿ ಬಂದು ಮುತ್ತಿಗೆ ಹಾಕಿ ಘೋರ ಕದನವನ್ನು ನಡೆಸುತ್ತಿರುವರು. ಎರಡು ಕಡೆಗಳಲ್ಲಿ ಜರ್ಮನರು ರಷ್ಯನರನ್ನು ಹಿಂದಕ್ಕೊತ್ತಲು ಸಮರ್ಥರಾಗಿದ್ದಾರೆಂದು 'ರೆಡ್ ಸ್ಟಾರ್' ಪತ್ರಿಕೆಯು ತಿಳಿಸಿದೆ. ಬಹಳ ವಿಷಮ ಪರಿಸ್ಥಿತಿಯುಂಟಾಗಿದೆ.

—'ರಿಯೋಟಿರ್ಸರೋ' ಎಂಬ ಅರ್ಜೆಂಟ್ಯಿನ ಹಡಗು ಮುಳುಗಿಸಲ್ಪಟ್ಟ ಕಾರಣ ಅರ್ಜೆಂಟ್ಯಿನ ಸರ್ಕಾರವು ಜರ್ಮನಿಗೆ ತನ್ನ ಪ್ರತಿಭಟನೆಯನ್ನು ತಿಳಿಸಿದೆ.

ಹಿಂದೂಸ್ತಾನ.

ಪಾರ್ವರ್ಡ್ ಬ್ಲಾಕ್ ಆಕ್ರಮ ಸಂಘವೆಂದು ಸಾರಲಾಯಿತು. ಅದರ ಕಛೇರಿಗಳ ಜಪ್ತಿಯೂ, ಕೆಲಸಗಾರರ ಬಂಧನವೂ ನಡೆದಿದೆ.

ಘಾಕಾದಲ್ಲಿ ನಡೆದ ಹಿಂದೂ ಮುಸ್ಲಿಂ ದಂಗೆಯಲ್ಲಿ ನುತ್ತೆ ೨ ಜನರು ಮರಣ ಹೊಂದಿದ್ದಾರೆ.

ಶ್ರೀ ರಾಜಗೋಪಾಲಾಚಾರಿಯವರು ಜಿನ್ನಾಸಾಹೇಬರೊಡನೆ 24 ನೆಯ ತಾ. 90 ನಿಮಿಷಗಳವರೆಗೆ ಮಾತಾಡಿದರು. 25 ನೆಯ ತಾ. ಪ್ರಾತಃಕಾಲವೂ ಸಹ ಜಿನ್ನಾರೊಡನೆ ಮಾತಾಡಿದರು.

ಲಂಡನ್ನಿನ ಫ್ರೆಂಡ್ಸ್ ಆಫ್ ಸೊವೈಟಿಯ ಅಲೆಕ್ಸಾಂಡರರವರು ಮಹಾತ್ಮಾ ಗಾಂಧಿಯವರೊಡನೆ ಸಂಭಾಷಿಸಿದರು.

ಸರಹದ್ದು ಪ್ರಾಂತ್ಯದಲ್ಲಿ ಸರಕಾರವ ಕಾಟವು ಹೆಚ್ಚಾಗಿರುವ ಕಾರಣ, ತಾವು ಸತ್ಯಾಗ್ರಹಮಾಡಬೇಕಾಗುವದೆಂದು ಖಾನ ಅಬ್ದುಲ್‌ಗಫರಖಾರು ಪ್ರಕಟಿಸಿದ್ದಾರೆ.

ವಾರ್ಧಾದಲ್ಲಿ ಜುಲೈ ಪ್ರಥಮ ವಾರದಲ್ಲಿ ಕೂಡುವ ಕಾಂಗ್ರೆಸ್ ವರ್ಕಿಂಗ್ ಸಮಿತಿಯ ಸಭೆಗೆ ಇತರ ಮಹನೀಯರು ಆಹ್ವಾನಿಸಲ್ಪಟ್ಟಿದ್ದಾರೆ.

ಅಖಿಲ ಭಾರತ ಮುಸ್ಲಿಂಲೀಗ್ ನಾಯಕರಾದ ಫಜಲುಲ್ ಹಕರವರು ಬೇರೊಂದು ಸುಧಾರಿತ ಲೀಗ್ ಸಂಸ್ಥೆಯನ್ನು ಸ್ಥಾಪಿಸಿ, ಜಿನ್ನಾರವರ ಅಧಿಕಾರವನ್ನು ಪ್ರಶ್ನಿಸಿದ್ದಾರೆ.

ಭಾರತದಿಂದ ಬ್ರಿಟಿಶರು ಬಿಟ್ಟು ಹೋಗಬೇಕೆಂಬ ತಮ್ಮ ಅಭಿಪ್ರಾಯವು ಸಾಧುವಾದದ್ದೂ, ದ್ವೇಷರಹಿತವೂ ಇರುವುದಲ್ಲದೆ ಇದರಲ್ಲಿ ಯಾವದುರುದ್ದೇಶಗಳೂ ಇಲ್ಲವೆಂಬ ಇದರಿಂದ ಭಾರತದ ಮತ್ತು ಇಂಗ್ಲೇಂಡಿನ ಎರಡೂ ದೇಶಗಳ ಹಿತವೂ ಸಾಧಿಸುವದೆಂದು ಮಹಾತ್ಮಗಾಂಧಿಯವರು ಲಂಡನ್ ಟೈಮ್ಸ್ ಪತ್ರಿಕೆಗೆ ಜವಾಬು ಕೊಟ್ಟಿರುವರು.

—ಕೊಲ್ಲಾಪುರ ಮಹಾರಾಜರು ಬಹಳ ಚಿಕ್ಕ ವಯಸ್ಸಿನವರಿರುವದರಿಂದ ವೈಸ್ರಾಯರು ಮಹಾರಾಣಿಯವರಧ್ಯಕ್ಷತೆಯಲ್ಲಿ ರೀಜಂಟರನ್ನು ಏರ್ಪಡಿಸಿರುವರು.

—ಮದ್ರಾಸ್ ಸರ್ಕಾರವು ಕಮ್ಯೂನಿಸ್ಟ ಕೈದಿಗಳ ಬಿಡುಗಡೆ ಮಾಡಲು ಪ್ರಾರಂಭಿಸಿದೆ. ಈಗಾಗಲೇ ಅನೇಕರು ಬಿಡುಗಡೆ ಹೊಂದಿರುವರು.

—●—

ಮೈಸೂರು

ಭದ್ರಾವತಿ ಪ್ರಕರಣ ಸಂಬಂಧವಾಗಿ ಶ್ರೀ ರಾಮಚಂದ್ರಶೆಟ್ಟಿ ಮತ್ತು ಕೃಷ್ಣಭಟ್ಟ ಇವರ ಮೇಲೆ ಹಾಕಿದ್ದ ಪ್ರತಿಬಂಧಕಾಜ್ಞೆಗಳನ್ನು ಸರಕಾರದವರು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಹಾಸನ ಜೈಲಿನಲ್ಲಿದ್ದ ಶ್ರೀ ಎ. ಡಿ. ಶಂಕರರವರ ಬಿಡುಗಡೆಯಾಗಿದೆ.

ಮಿಲಿಟರಿ ಕಾರ್ಯಕ್ಕಾಗಿ ಹಳ್ಳಿಗರನ್ನು ಹೊರಡಿಸುತ್ತಿರುವರೇ?

ಬೆಂಗಳೂರು ಜಿಲ್ಲಾ ದೇವನಹಳ್ಳಿ ವ್ಯಾಪ್ತ್ಯವಲ್ಲಿ 40 ಹಳ್ಳಿಗಳ ಜನರು ಪ್ರಾತಃಕಾಲದಿಂದ ಸಾಯಂಕಾಲದವರೆಗೆ ತಮ್ಮ ತಮ್ಮ ಹಳ್ಳಿಗಳನ್ನು ಬಿಟ್ಟುಹೋಗಬೇಕೆಂಬ ಮಿಲಿಟರಿ ಆಜ್ಞೆಯಾಗಿತ್ತೆಂತಲೂ, ಇದು ಮಿಲಿಟರಿಯವರ ಕವಾಯ್ತಿಗಾಗಿ ಏರ್ಪಟ್ಟಿತ್ತೆಂತೂ ತಿಳಿದುಬಂದಿದೆ. ನ್ಯಾಯ ವಿಧಾಯಕ ಸಭೆಯು ಮುಂದೆ ಈ ಪದ್ಧತಿಯು ಬಂದಾಗ ದಿವಾನರು ತಮಗಿರುವ ಅಧಿಕಾರವನ್ನು ಉಪಯೋಗಿಸಿ ಅದರ ಚರ್ಚೆಗೆ ಅವಕಾಶ ಕೊಡಲಿಲ್ಲ.

ಬಳ್ಳಾರಿ ಜಿಲ್ಲೆ

ಹೆಚ್ಚು ಆಹಾರ ಬೆಳೆಯಿರಿ:—

ಮದ್ರಾಸ್ ಇಲಾಖೆಯ ವ್ಯವಸಾಯ ಖಾತೆ ಡೈರೆಕ್ಟರರಾದ ಶ್ರೀ ರಾಮಿರೆಡ್ಡಿಯವರು 'ಹೆಚ್ಚಿನ ಆಹಾರ ಬೆಳೆಯಿರಿ' ಎಂಬ ವ್ರಚಾರವನ್ನು ಜಿಲ್ಲೆಯಲ್ಲೆಲ್ಲಾ ಸಂಚರಿಸಿ ಉಪನ್ಯಾಸ ಕೊಟ್ಟರು.

ಹರಿಜನ ನಿಲಯ:- ಬಳ್ಳಾರಿಯ ಹರಿಜನ ವಿದ್ಯಾರ್ಥಿನಿಲಯದ ಸಂಖೆಯನ್ನು 20ಕ್ಕೆ ಹೆಚ್ಚಿಸಲಾಯಿತು. ಹೊಸದಾಗಿ 9 ಬಾಲಕರನ್ನು ದಾಖಲು ಮಾಡಲಾಗಿದೆ.

ಜಿಲ್ಲಾ ಬೋರ್ಡು ಸಭೆ:- ಬಳ್ಳಾರಿ ಜಿಲ್ಲಾಬೋರ್ಡು ಸಭೆಯು 4-7-42ನೆಯ ಶನಿವಾರ ಸಾಯಂಕಾಲ 4 ಘಂಟೆಗೆ ಕೂಡಲಿದೆ.

ಪ್ರಾಥಮಿಕೋಪಾಧ್ಯಾಯ ಸಂಘ- ಈ ಸಂಘದ ಸಭೆಯು 4-7-42 ಸೇರುವುದಿಲ್ಲ. ರೇಕಗ್ನಿಷನ್ ಪ್ರಶ್ನೆಗೆ ತೊಂದರೆ ಬಂದಿದೆ. ನವಭಾರತದಲ್ಲಿ ಮುಂದೆ ತಿಳಿಸಲಾಗುವುದು.

ಜಿಲ್ಲಾ ಆರೋಗ್ಯ:- ಜಿಲ್ಲೆಯ 8 ತಾ|| ಗಳಲ್ಲಿ 182 ಜನರಿಗೆ ಕಾಲರಾ ತಗಲಿ 71 ಜನರು 20-6-42ಕ್ಕೆ ಮುಗಿಯುವ ವಾರದಲ್ಲಿ ಸತ್ತಿರುವರು. ಜಿಲ್ಲೆಯ 47 ಹಳ್ಳಿಗಳಲ್ಲಿ ಕಾಲರಾ ಬೇನೆ ಇದೆಯೆಂದು ಗೊತ್ತಾಗಿದೆ. ಮೈಲಿ ಬೇನೆಯಿಂದ 2 ಮಾತ್ರ ಸತ್ತಿರುವರು.

ಬಳ್ಳಾರಿ ಪೇಟೆ ಧಾರಣೆ

26-6-42 ಶುಕ್ರವಾರ

ಭಂಗಾರ ತೊಲ 1ಕ್ಕೆ	48-12-0
ಸಾವರಿನ್	38-9-0
ಬೆಳ್ಳಿ 100 ತೊಲ ರೂ.	84-0 0
ಅರಳೆ ಮುಂಗಾರಿ 12 ಮಣಕ್ಕೆ	58-0-0
ಅರಳೆ ಫಾರಂ ...	112-0-0
ಅಕ್ಕಿ 1 ರೂ. ಗೆ	4 ರಿಂದ 5 ಸೇರು
ಬೇಳೆ ,,	4 ,,
ಗೋಧಿ ,,	3½ ,,
ಜೋಳ ,,	11 ,,
ನವಣೆ ,,	15½ ,,
ಸಜ್ಜೆ ,,	9 ,,
ನೆಲಗಡಲೆ	1-7-0
ಸಕ್ಕರೆ ವೀಸ	0-9-0
ಬೆಲ್ಲ	20 ರೂ.
ಚಿಮ್ಮು ಎಣ್ಣೆ	4-10-0

ಮಗುವಿನ ವಿದ್ಯಾಭ್ಯಾಸದಲ್ಲಿ ತಂದೆತಾಯಿಗಳ ಮುಖ್ಯ ಕರ್ತವ್ಯ

(ಲೇ:- ಯಂ. ಓಬಪ್ಪ, ಲೇಬರು ಶಾಲೆ, ಕುರುಗೋಡು.)

ಮಗುವು ಜನಿಸಿದ ನಂತರ ತನ್ನ ಜೀವಾಂತ್ಯವವರೆಗೂ ಕರ್ತವ್ಯದಲ್ಲಿ ದಕ್ಷತೆಯು ಳ್ಳದ್ದಾಗಿದ್ದು ಉತ್ತಮ ಮಾರ್ಗದಲ್ಲಿ ಪ್ರವರ್ತಿಸಿ ಈ ಲೋಕದಲ್ಲಿ ತನ್ನ ಭಾವಿ ಜೀವನೋಪಾಯವನ್ನು ಸುಗಮವಾಗಿ ನೆರವೇರಿಸಿಕೊಳ್ಳುವಂತೆ ಆ ಮಗುವಿಗೆ ಸರಿಯಾದ ಶಿಕ್ಷಣವನ್ನು ಕೊಟ್ಟು ನಡೆನುಡಿಗಳನ್ನು ತಿದ್ದಿ ಸರಿಪಡಿಸುವ ಭಾರವನ್ನು ದೇವರು ಆ ಮಗುವಿನ ಮಾತಾ ಪಿತೃಗಳಿಗೆ ನೇಮಿಸಿರುತ್ತಾನೆಂದು ನಾವು ತಿಳಿದುಕೊಳ್ಳಬೇಕಾಗಿದೆ. ಯಾತಕ್ಕಂದರೆ ಮಗುವು ಚಿಕ್ಕ ಪ್ರಾಯದಲ್ಲಿ ಇಹಲೋಕದ ಕಾರ್ಯಗಳ ಅನುಭವವನ್ನು ತಪ್ಪ ಜನನೀ ಜನಕರ ಸಾಲಕವೇ ಅರಿತು ಕೊಳ್ಳಬೇಕಾಗಿದೆ. ಆದ ಕಾರಣ ಮಾತಾ ಪಿತೃಗಳು ಮಗುವಿಗೆ ಚಿಕ್ಕಂದಿನಿಂದಲೇ ಉತ್ತಮ ಮಾರ್ಗದಲ್ಲಿ ಪ್ರವರ್ತಿಸುವಂತೆ ಪ್ರೇರೇಪಣೆ ಮಾಡಿದರೆ ಅದು ಉತ್ತಮವಾಗುವದರಲ್ಲಿ ಯಾವ ಸಂಶಯವಿಲ್ಲ. ಇದನ್ನರಿಯದೆ ಕೆಲವರು ಆ ಮಗುವಿನ ಭಾವಿ ಜೀವನೋಪಾಯಕ್ಕಾಗಿ ಧನಧಾನ್ಯವನ್ನಾಗಲಿ ಆಧವ ಭೂ ಆಸ್ತಿಯನ್ನಾಗಲಿ ಸಂಪಾದಿಸಿಟ್ಟರೆ ಮಗುವು ತನ್ನ ಭಾವಿ ಜೀವನೋಪಾಯವನ್ನು ಸುಗಮವಾಗಿ ಸಾಗಿಸಬಹುದೆಂಬ ನಂಬಿಕೆ ಚಿಕ್ಕ ಪ್ರಾಯದಲ್ಲಿ ಸರಿಯಾದ ಶಿಕ್ಷಣವನ್ನು ಕೊಡದೆ ನಡೆನುಡಿಗಳನ್ನು ತಿದ್ದದೆ ಇದ್ದರೆ ಆ ಮಗುವು ತನ್ನ ತಂದೆ ಸಂಪಾದಿಸಿಟ್ಟ ಧನ ಸಂಪತ್ತನ್ನು ದುಂದುವೆಚ್ಚದಿಂದ ಸ್ವಲ್ಪಕಾಲದಲ್ಲಿಯೇ ಖರ್ಚುಮಾಡಿಕೊಂಡು ದರಿದ್ರಾವಸ್ಥೆಯನ್ನು ಅನುಭವಿಸುವುತ್ತ ಕಡೆಗೆ ಮಹಾ ಸಂಕಡಕ್ಕೊಳಗಾಗಬೇಕಾಗುತ್ತೆ. ಸ್ಥಿರಭಾಗ್ಯವಾದ ವಿದ್ಯೆ ಎಂಬುವ ಮಹಾಭಾಗ್ಯವನ್ನು ಮಗುವಿಗೆ ಚಿಕ್ಕ ಪ್ರಾಯದಲ್ಲಿ ಒದಗಿಸಿಕೊಟ್ಟದ್ದಾದರೆ ಭಾವಿಜೀವನೋಪಾಯವು ಸುರಕ್ಷಿತನಾಗುವದರಲ್ಲಿ ಯಾವವಿಧವಾದ ಅನುಮಾನವಿರುವದಿಲ್ಲ.

ವಿದ್ಯೆ ಇಲ್ಲದವರು ರೂಪವಂತರಾಗಿದ್ದರೂ ದೊಡ್ಡ ಮನೆತನದಲ್ಲಿ ಹುಟ್ಟಿದ್ದರೂ ಕಾಡಿನಲ್ಲಿ ವಿಶಾಲವಾಗಿ ಬೆಳೆದ ಪರಿಮಳವಿಲ್ಲದಿರುವ ಪುತ್ತುಗದ ಮರದ ಹೂಗಳಂತೆ ಕಂಗೊಳಿಸಲಾರರು. ಗುರು ಶುಶ್ರೂಷೆ ಮಾಡಿ ಪುಸ್ತವನ್ನು ಹಿಡಿದು ಓದು ಕಲಿಯದ ಮಗನು ಸಭೆಯಲ್ಲಿ ಗಣನೆಗೆ ಬರಲಾರನು. ಮೂರ್ಖನು ಸಸ್ಯಭೂಷಿತನಾಗಿ ಸಭೆಯಲ್ಲಿ ಕುಳಿತರೂ ಫಲವೇನು? ಅವನು ಬಾಯ್ದೆರೆದು ಮಾತನಾಡುವವರೆಗೆ ಮಾತ್ರವೆ ಪಂಡಿತನಂತೆ ಕಾಣುವನು, ಮಾತನಾಡಿದನೆಂದರೆ ಅವನ ಗುಟ್ಟುರಟ್ಟಾಗುವದು.

ಹೊಟ್ಟೆಯಿಂದ ಬಿದ್ದ ಮೂತ್ರಕ್ಕೆ ಮುಕ್ಕಳು ಪಂಡಿತರಾಗಲಾರರು. ಹೊಸ ಪಾತ್ರೆಗೆ ಅಂಟಿದ ಸಂಸ್ಕಾರವು ಎಂದಿಗೂ ಕಿಡುವುದಿಲ್ಲ. ಅದೇ ರೀತಿಯಿಂದ ಎಳಿತನದಲ್ಲಿ ಹುಡುಗರ ಮನಸ್ಸಿನಲ್ಲಿ ನಾಟಿದ ತಿಳುವಳಿಕೆಯು ಎಂದೆಂದಿಗೂ ಬರಿದಾಗುವುದಿಲ್ಲ. ಇದನ್ನರಿತು ತಾಯಿತಂದೆಗಳು ಮಕ್ಕಳಿಗೆ ಚಿಕ್ಕಂದಿನಲ್ಲಿ ಸುಶಿಕ್ಷಣವನ್ನು ಕೊಟ್ಟು ಗುಣವಂತರಾಗುವಂತೆ ಮಾಡುವದು ಶ್ರೇಯಸ್ಕರವು.

ನಮ್ಮ ದೇಶವು ಉತ್ತಮ ಸ್ಥಿತಿಗೆ ಬರಬೇಕಾದರೆ ಪ್ರತಿಯೊಬ್ಬರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಟ್ಟು ಪ್ರತಿಯೊಂದು ಮಗುವನ್ನು ವಿದ್ಯಾವಂತರನ್ನಾಗಿ ಮಾಡಿದ್ದಾದರೆ ಅವರು ಮುಂದೆ ನಮ್ಮ ದೇಶಕ್ಕೂ, ನಮ್ಮ ಜಾತಿಗೂ, ನಮ್ಮ ಸಂಘಗಳಿಗೂ ನಮ್ಮ ಸಂಸ್ಥೆಗಳಿಗೂ ಹೋರಾಡಿ ಮುಂದೆ ಬರಲು ಅನುಕೂಲವಾಗುವದು. ಇಲ್ಲವಾದರೆ ನಮ್ಮ ಜಾತಿಗೆ ಗೌರವವು ಉಂಟಾಗಲಾರದು ಆದಕಾರಣ ಪ್ರತಿಯೊಬ್ಬರು ಮಕ್ಕಳ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಹೆಚ್ಚಿನ ಶ್ರದ್ಧೆ ವಹಿಸುವದು ಅತಿ ಮುಖ್ಯವಾದುದಾಗಿದೆ.

ಮಕ್ಕಳು ಪಾಠಶಾಲೆಯಲ್ಲಿ ಕೆಲವು ಗಂಟೆಗಳ ಕಾಲವನ್ನು ಕಳೆಯುತ್ತಾರೆ. ಉಳಿದ ಹೆಚ್ಚು ಕಾಲವನ್ನೆಲ್ಲ ಮನೆಯಲ್ಲಿ ಬೇಕಾಕೆಯವರು. ಈ ಕಾರಣ ಬಾಲಕರ ವಿದ್ಯಾಭ್ಯಾಸವು ಶ್ರೇಷ್ಠವಾದ ಲಾಭಕಾರಿಯಾಗಬೇಕಾದರೆ ತಾಯಿತಂದೆಗಳ ಸಹಾಯವು ಅತ್ಯಾವಶ್ಯಕವಾಗಿರುವದು. ಮಕ್ಕಳು ಹೆಚ್ಚಿನವೇಳೆಯನ್ನು ಮನೆಯಲ್ಲಿಯೇ ವ್ಯಯಮಾಡುತ್ತ ತಮ್ಮ ಮಾತಾ ಪಿತೃಗಳೊಡನಾಟದಲ್ಲಿರುವದರಿಂದ ಮನೆಯಂತಹ ಪಾಠಶಾಲೆಯೂ, ತಂದೆಯಂತಹ ಗುರುವೂ ಬೇರೊಂದಿಲ್ಲವೆಂದು ಹೇಳಬಹುದು, ತಮ್ಮ ಮಕ್ಕಳ ಜ್ಞಾನಾಭಿವೃದ್ಧಿಗಾಗಿ ತಾವು ಪ್ರಯತ್ನಪಡುವದು ತಂದೆತಾಯಿಗಳ ಮುಖ್ಯಧರ್ಮವಾಗಿರುವದು. ಮಗನ ತಪ್ಪಾದರೆ ತಂದೆಯ ತಪ್ಪೆಂತಲೂ ಮಗಳ ತಪ್ಪಾದರೆ ತಾಯಿಯ ತಪ್ಪೆಂತಲೂ ಲೋಕೋಕ್ತಿಯುಂಟು. ಹೀಗಿರುವಲ್ಲಿ ಬಾಲಕರ ವಿದ್ಯಾಭ್ಯಾಸ ವಿಷಯದಲ್ಲಿ ತಂದೆತಾಯಿಗಳು ಏತಕ್ಕೆ ಶ್ರದ್ಧೆಯನ್ನು ವಹಿಸದಿರುವರು ಎಂಬುದನ್ನು ಪರೀಕ್ಷಿಸಿ ನೋಡಿದರೆ ಅವರಿಗೆ ಅವಕಾಶವಿಲ್ಲದೆ ಹೀಗೆ ಉದಾಸೀನರಾಗಿರುವಂತೆಯೂ ಕೆಲವರು ಅವಕಾಶವಿದ್ದೂ ಅಜ್ಞಾನದಿಂದ ಉದಾಸೀನರಾಗಿರುವಂತೆಯೂ ತಿಳಿದುಬರುವದು. ಆದರೆ ಪೋಷಕರ ಸಹಾಯವಿಲ್ಲದೆ ಬರೀ ಉಪಾಧ್ಯಾಯರಿಂದ ಬಾಲಕರ ವಿದ್ಯಾಭಿವೃದ್ಧಿಯನ್ನು ಉತ್ತಮಗೊಳಿಸಲು ಸಾಧ್ಯವಾಗಲಾರದು ಅದುದರಿಂದ ಸರ್ವರೀತಿಗಳಲ್ಲಿಯೂ ಬಾಲಕರ ವಿದ್ಯಾಭಿವೃದ್ಧಿಯು ನೆರವೇರಲಾರದು ಕಾರಣ ಪೋಷಕರು ತಮ್ಮ ಮಕ್ಕಳ ವಿಷಯದಲ್ಲಿ ಶ್ರದ್ಧೆ ವಹಿಸಿ ಉಪಾಧ್ಯಾಯರಿಗೆ ಸಹಾನುಭೂತಿಯನ್ನು ತೋರಿಸುವದು. ಅತ್ಯಾವಶ್ಯಕವಾಗಿರುವದು. ಬಾಲಕರ ವಿದ್ಯಾಭ್ಯಾಸ ವಿದ್ಯಾಭಿವೃದ್ಧಿಗಳ ವಿಷಯದಲ್ಲಿ ತಾಯಿ ತಂದೆಗಳು ಸಹಕರಿಸಿ ಸುಹೃದಯರಾಗಿ ಸತತವು ಉಪಾಧ್ಯಾಯರಿಗೆ ತಕ್ಕ ಸಹಾಯ ಮಾಡಿದಲ್ಲಿ ಜ್ಞಾನದ ಬೀಜವು ವಿದ್ಯಾರ್ಥಿಗಳಲ್ಲಿ ಚೆನ್ನಾ

Visit Royal Cafe
Near Royal Picture Palace
ROYAL is ROYAL

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ ೦—೪—೦
ಕನ್ನಡ ದರೋಪಾಸನಪದ್ಧತಿಗಳು ೦—೯—೦
ವಿವಾಹಾನುಭವ ಪೂರ್ವಾರ್ಧ ೦—೮—೦
ಸುಮತಿ ಶತಕ ೦—೧—೬
ಅಂಚೆ ಪೆಟ್ಟಿ ಬೇರೆ ಪುಸ್ತಕ ವ್ಯಾಪಾರಿಗಳಿಗೂ ಹೊಸ ಪುಸ್ತಕ ಕೊಳ್ಳುವರಿಗೂ ಧಾರಾಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮರ್ಚೆಂಟು, ಬಳ್ಳಾರಿ.

ಗಿನಾಟೆ. ಆದು ನಿಜರೂಪವನ್ನು ಹೊಂದಿ. ಪತ್ರ. ಪುಷ್ಪ. ಫಲ ದಾಯಗಳನ್ನು ಕೊಡುವುದರಲ್ಲಿ ಸಂದೇಹವೇಇಲ್ಲ. ಈಗಿನ ಬಾಲಕರೇ ಮುಂದಿನ ಪ್ರಜೆಗಳು ಆದ್ದರಿಂದ ನಮಗೆ ಎಂಥಾ ಬಡತನವಿದ್ದರೂ ಆದನ್ನು ಸುದಾರಿಸಿಕೊಂಡು ಮಕ್ಕಳ ವಿಷಯದಲ್ಲಿ ದೇವರು ತಂದೆ ತಾಯಿಗಳಿಗೆ ವಹಿಸಿರುವ ಜವಾಬ್ದಾರಿಯ ಕಡೆಗೆ ಲಕ್ಷ್ಯವಿಟ್ಟು ಬಾಲಕರ ಶ್ರೇಯೋಭಿವೃದ್ಧಿಗಾಗಿ ಪ್ರತಿಯೊಬ್ಬ ಸೋದರಿಯರು ಉಸಾಧ್ಯಾಯರೊಡನೆ ಬೆರೆತು ಮಗುವಿನ ಉದ್ಧಾರ ಮಾಡುವದು ಅತ್ಯಾವಶ್ಯಕ.

ಬಳ್ಳಾರಿ.

ಮಹಾಬಲೇಶ್ವರಪ್ಪನವರಿಗೆ ಸತ್ಕಾರ

21ನೇಯ ತಾ॥ ವೀರಶೈವ ಪ್ರಾಥಮಿಕ ಶಾಲೆಯ ಕಟ್ಟಡದಲ್ಲಿ ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದವರು ಶ್ರೀ ಮಹಾಬಲೇಶ್ವರಪ್ಪನವರಿಗೆ ಪ್ರಭುತ್ವ ವಹಿಸಿ 'ರಾವ್‌ಬಹದ್ದೂರ್' ಪ್ರಶಸ್ತಿಯನ್ನು ಕೊಟ್ಟ ಸ್ಮಂತೋಷಾರ್ಥವಾಗಿ ಮಾನಪತ್ರಿಕೆಯನ್ನರ್ಪಿಸಿ ಸನ್ಮಾನ ಮಾಲೆಯ ಪದ್ಯಗಳನ್ನರ್ಪಿಸಿದರು. ಅಭಿನಂದನೀಯ ಭಾಷಣಗಳನಂತರ ಶ್ರೀ ಮಹಾಬಲೇಶ್ವರಪ್ಪನವರು ಉಚಿತರೀತಿಯಲ್ಲಿ ಉತ್ತರವನಿತ್ತು ಸಂಘದವರನ್ನು ಈ ಸತ್ಕಾರಕ್ಕಾಗಿ ಸಂದಿಸಿದರು. ವೀರಶೈವ ಸಮಾಜದವರು ಬಂದ ಅತಿಥಿಗಳಿಗೂ, ಶಾಲಾವಿದ್ಯಾರ್ಥಿಗಳಿಗೂ ಉಸಾಹಾರವನ್ನೇರ್ಪಡಿಸಿದ್ದರು.

ಜಿಲ್ಲಾ ಪ್ರಾಥಮಿಕೋಪಾಧ್ಯಾಯರ ಸಂಘ

ಕಾರ್ಯಕಾರಿಣೀ ಸಮಿತಿಯ ಸಭೆಯು ಸಂಘದ ನಿಯಮಾವಳಿ ಮತ್ತು ಇತರ ಮುಖ್ಯ ವಿಷಯಗಳನ್ನು ಚರ್ಚಿಸಲು ಬಳ್ಳಾರಿಯಲ್ಲಿ 4-7-42 ಶನಿವಾರ ಸಾಯಂಕಾಲ 5 ಘಂಟೆಗೆ ಶ್ರೀ ಟಿ. ಬಿ–ಕೇಶವರಾಯರ ಮನೆಯಲ್ಲಿ ಕೂಡುವುದು. ಕಾರ್ಯವರ್ಶಿಗಳು ಎಲ್ಲಾ ಸದಸ್ಯರಿಗೂ ಪ್ರತ್ಯೇಕ ಆಹ್ವಾನಗಳನ್ನು ಕಳುಹಿಸಿದೆವೆಂದು ಗೊತ್ತಾಗಿದೆ.

—+—

ಚಿಕ್ಕ ಜೋಗಿಹಳ್ಳಿ ತಾಂಡದಲ್ಲಿ ಲಂಬಾಣೀ ಮಹಾಸಭೆ

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕು ಚಿಕ್ಕ ಜೋಗಿಹಳ್ಳಿ ತಾಂಡದಲ್ಲಿ ಲಂಬಾಣಿ ಜನರ ಮಹಾಸಭೆಯು 23ನೆಯ ಪ್ರಾತಃಕಾಲ ಕೂಡ್ಲಿಗಿಯು. ಬಳ್ಳಾರಿಯ ಶ್ರೀ ಎಸ್. ವಿ. ಶೆಟ್ಟಿಯವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಶಾಲೆಯ ಮುಂದೆ ಮಂಟಪವು ಹಾಕಲ್ಪಟ್ಟು ಮಂಟಪವು ತಳಿರು ತೋರಣಗಳಿಂತಲಂಕೃತವಾಗಿತ್ತು. ಕೂಡ್ಲಿಗಿ ತಾಲೂಕಿನಿಂದಲೂ ಮೈಸೂರು ದೇಶದ ಕೆಲ ಭಾಗಗಳಿಂದಲೂ ಲಂಬಾಣಿ ಜನರು ಹಿಂದಿನ ದಿನವೇ ಬಂದಿದ್ದರು. ಸಭೆಗೆ ಅನಿವಾರ್ಯಕಾರ್ಯಗಳಿಂದ ಬರಲಾಗದ ಶ್ರೀ ಶೇಕಾದಾಮರೆಡ್ಡಿಯವರು ಸಂದೇಶವನ್ನು ಕಳುಹಿಸಿದ್ದರು.

ಲಂಬಾಣಿ ಬಾಲೆಯರ ಪ್ರಾರ್ಥನಾನಂತರ ಶ್ರೀ ಎಸ್.ವಿ. ಶೆಟ್ಟಿಯವರು ಅಧ್ಯಕ್ಷಸ್ಥಾನಕ್ಕೆ ಸೂಚಿಸಲ್ಪಟ್ಟು ನಂತರ ಶೆಟ್ಟಿಯವರು ತಮಗೆ ಇಂಥಾ ಗೌರವಕೊಟ್ಟು ವಕ್ತಾಗಿ ನಂದಿಸಿ ಎಲ್ಲಾ ವಿಷಯಗಳಲ್ಲೂ ಹಿಂದುಳಿದ ವರ್ತು ಒಹುಮಟ್ಟಿಗೆ ಕಾಡು ಪ್ರದೇಶಗಳಲ್ಲಿ ವಾಸಿಸುತ್ತಿರುವ ಲಂಬಾಣಿ ಜನರ ಅಭಿವೃದ್ಧಿಯು ಅತ್ಯಾವಶ್ಯಕವೆಂದರು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ರಾಮಚಂದ್ರ ಗುಪ್ತರು ತಮ್ಮ ಉದ್ಧಾರದ ಒಳ್ಳೆ ಕೆಲ ಸೂಚನೆಗಳನ್ನು ಕೊಟ್ಟು ನಿರ್ಭಯವಾಗಿ ಜೀವನ ಕಳೆಯಲು ತಿಳಿಸಿದರು. ಕೂಡ್ಲಿಗಿ ಇನ್ಸ್‌ಪೆಕ್ಟರ್ ಶ್ರೀ ನರಸಿಂಹ ಪಂತಲುರವರು ಹಿಂದುಳಿದವರ ಏಳಿಗೆಯ ಬಗ್ಗೆ ಸರಕಾರದ ಸ್ವಯತ್ನಗಳನ್ನು ವಿವರಿಸಿದರು. ನಂತರ ಶ್ರೀ ಟಿ.ಬಿ. ಕೇಶವರಾಯರು ತಮ್ಮ ದೀರ್ಘೋಭಾಷಣದಲ್ಲಿ ಪರಿಶ್ರಮೀಜನರು, ಶ್ರೀಮಂತ ಜನರ ಜೀವನ ಕ್ರಮವನ್ನು ವಿವರಿಸಿ ದುಡಿಯತಕ್ಕಂಥವರೂ ಕೂಡ ಸುಖವಾಗಿರಲು ಮಾರ್ಗಗಳನ್ನು ಹುಡುಕಬೇಕಾದುದು ಅವಶ್ಯಕವೆಂದು ತಿಳಿಸಿ ಸ್ವೀಕೃತವಾಗಬೇಕಾದ ನಿರ್ಣಯಗಳನ್ನು ಓದಿ ಅರ್ಥವನ್ನು ತಿಳಿಯ ಹೇಳಿದರು ಇದಾದ ಮೇಲೆ ನಿರ್ಣಯಗಳ ಚರ್ಚೆಗೆ ಪ್ರಾರಂಭವಾಗಿ ಈ ಕೆಳ ನಿರ್ಣಯಗಳು ಸರ್ವಾನುಮತವಾಗಿ ಸ್ವೀಕೃತವಾದವು.

ನಿರ್ಣಯಗಳು:-

1) ಲಂಬಾಣಿ ಜನರ ಆರ್ಥಿಕೋನ್ನತಿಕ್ಕೂ ವೈಫಿಕ ಬೆಳವಣಿಗೆಗೂ ಕುಂದಾವ ವ್ಯರ್ಥಾಪರಿಹಾರಗಳನ್ನು ತ್ಯಾಜ್ಯ ಮಾಡಿ ಸಾಮಾ ಉಡುವನ್ನು ಧರಿಸಬೇಕು. 2) ಲಂಬಾಣಿ ಸಮಾಜದಲ್ಲಿ ವ್ಯಾಪ್ತನಾಗಿರುವ ಕುಡಿತ ಮತ್ತು ಅಲ್ಲಲ್ಲಿ ಗುಪ್ತ ಸಾರಾಯಿ ಭಟ್ಟಿ ಇಳಿಸುವಿಕೆಯು ಪೂರ್ಣವಾಗಿ ನಿಷೇಧಿಸಲ್ಪಟ್ಟಿವೆ. 3) ಶುಭಾಶುಭ ಕಾರ್ಯಗಳಲ್ಲಿ ತಿಳುವುದು. ಕನ್ಯಾಶುಲ್ಕ ವಗೈರೆ ಮರಾಬಾರಗಳನ್ನು ಮೊರಗೊಳಿಸಬೇಕು. 4) ಅಪರಾಧಗಳನ್ನು ಕಂಡುಹಿಡಿಯಲು ಸರ್ಕಾರದವರೊಡನೆ ಸಹಕರಿಸಬೇಕು. 5) ನಿರುದ್ಯೋಗ ಮತ್ತು ದಾರಿದ್ರ್ಯನಿವಾರಣೆಗೆ ಖಾದಿ-ಕಾಗದದ ಉತ್ಪತ್ತಿ ವಗೈರೆ ಕಾರ್ಯಗಳ ಪ್ರಾರಂಭಕ್ಕೆ ಎಲ್ಲರೂ ಸಹಾಯಮಾಡಬೇಕು. 6) ಶಾಲೆಗಳಿಗೆ ಎಲ್ಲರೂ ಮಕ್ಕಳನ್ನು ಕಳಿಸಿ ವಿದ್ಯೆಗೆ ಪ್ರೋತ್ಸಾಹಕೊಡಬೇಕು. 7) ಅನೇಕ ವಿಷಯಗಳಿಂದ ಅಪರಾಧಮಾಡಿದಿರುವ ಲಂಬಾಣೀ ಜನರನ್ನು ಈ ಡಿ. ರಿಜಿಸ್ಟರನಿಂದ ತೆಗೆಯಲು ಡಿ. ಯಸ್ ಪಿ. ಯವರನ್ನು ಪ್ರಾರ್ಥಿಸಬೇಕು. 8) ಉನ್ನತ ಶಾಲೆಗಳಲ್ಲಿ ಉಚಿತ ವಿದ್ಯಾಭ್ಯಾಸ ಸರಕಾರೀ ನವಕರಿಗಳಲ್ಲಿ ಸ್ಥಾನ-ತಿವಾಜಿಮೆ ಜಮೀನುಗಳಿಗೆ ಪಟ್ಟಾ ಕೊಡಲು ಸರ್ಕಾರದವರನ್ನು ಕೇಳಬೇಕು. 9) ಜಿಲ್ಲೆಯ ಪ್ರತಿಯೊಂದು ತಾಲೂಕಿನಲ್ಲಿ ಸಂಘಗಳನ್ನು ಏರ್ಪಡಿಸಬೇಕು. ಇದರ ವ್ಯವಸ್ಥೆ ಮಾಡಲು ಶ್ರೀ ಕುಬೇರನಾಯ್ಕ-ಸಾಕ್ರಾನಾಯ್ಕ-ವೀರಾನಾಯ್ಕ-ಪೂರ್ಯನಾಯ್ಕ ಇವರಿಗೆ ಅಧಿಕಾರ ಕೊಡಲಾಯಿತು. ತಾಂಡಕ್ಕೆ ಇಬ್ಬರಂತೆ ಪ್ರತಿನಿಧಿಗಳನ್ನಾರಿಸಿ ಕೂಡ್ಲಿಗಿ ತಾಲೂಕು ಸಂಘವು ಏರ್ಪಾಟಾಯಿತು. ವಂದನಾರ್ಪಣ ಮತ್ತು ವಂದೇ ಮಾತರಂ ಗಾನದಿಂದ ಸಭೆಯು ಮುಕ್ತಾಯವಾಯಿತು.

ಹಿಂದೂಸ್ತಾನ.

ಕಲ್ಕತ್ತಾ ನಗರದಲ್ಲಿ 'ಹಿಂದುಸ್ತಾನ ಸ್ಟಾಂಡರ್ಡ್' ವೃತ್ತ ಪತ್ರಿಕಾ ಕಾರ್ಯಾಲಯವನ್ನು ಸರ್ಕಾರದವರು ಝಪ್ತಿಮಾಡಿದರು.

ಬಂಗಾಳದ ಘಾಕಾವಲ್ಲಿ ಮತ್ತೆ ಜಾತೀಯ ದಂಗೆಯಾರಂಭವಾಗಿ, ಕಳೆದವಾರ 4 ಜನರು ಮರಣ ಹೊಂದಿರುವರು.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ರೀತ್ಯ (ಫ್ರೇಂ) ನಮ್ಮಲ್ಲಿವೆ. ಒಮ್ಮೆಸಲ ಉಪಯೋಗಿಸಿನರೆ ನಿಮಗೆ ತೃಪ್ತಿಯಾಗುವುದು.

ಹೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1897.

43 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ.	85,61,000 ಮೀರಿದೆ
ಜಾಲ್ತಿಯಲ್ಲಿರುವ ವಿಮಾ ಪಾಲಿಸಿಗಳು	ರೂ.	14,84,44,000 ,,
ಆಸ್ತಿ	ರೂ.	5,80,86,000 ,,
ಕಂಪೆನಿ ಸ್ಥಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು	ರೂ.	7,48,66,000 ,,

ವಿಜ್ಞಾಪನೆಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್, ಬಳ್ಳಾರಿ.



ಪರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರುವ ಹಳೆಯ ವಸ್ತುಗಳನ್ನು ಕೊಟ್ಟು ಮೂಡಿದ ಕೂಲಿ ವೇಸ್ಟೇಜು ಕೊಟ್ಟುರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ಮೆಸ್ಸ ಎಂಡ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಕರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹೀಗಾದರೆ ಕೂಡಲೇ ಕಳಗಿನವರಲ್ಲಿ ವಿಚಾರಿಸಿರಿ ಅಥವಾ ಕಾಗದ ಬರೆದು ನಿಮಗನುಕೂಲವಾದ ಶಿಕ್ಷಣಕ್ಕೆ ಏರ್ಪಡಿಸಲಾಗುವುದು ಪರೀಕ್ಷೆಯ ಪಾಸ್ ಪತ್ರಿಕೆಗಳು ಕಛೇರಿಯಲ್ಲಿ ವಗ್ಗೆಗೆ ಮೋಯಿಸಿಕೊಡಲಾಗುವುದು ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ಸ್ಥಳವಾಗಿ ತಿಳಿಸಲಾಗುವುದು

ಟಿ. ಬಿ. ಕೇಶವರಾವ್,
ಕ್ರಿಸ್ಟವಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local 2—0—0
Mofussil 3—0—0

6 Months

Local 1—1—0
Mofussil 2—0—0

ಚಂದಾ ವಿವರ
ವರ್ಷಕ್ಕೆ
ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0
೬ ತಿಂಗಳಿಗೆ
ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. M. 3337.

Sri_____

Printed at Vittal Press, Car Street Edited & Published by T. B Keshava Rao, Bellary

Reg. No. M. 3937 ಪಂಚೆ. ಪೂತರಂ

ನವಭಾರತ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ ೪ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ. ಸಂಪಾದಕ:—
ಸಂಚಿಕೆ ೪೦ ಬಳ್ಳಾರಿ ಜೂಲೈ ೫ ನೇ ಭಾನುವಾರ ೧೯೨೩. ಟಿ. ಪಿ. ಕೇಶವಮೆನ್

ಮಹಾತ್ಮ ಗಾಂಧಿಯವರ ಲೇಖನಗಳು

(ಹರಿಜನ ಪತ್ರಿಕೆಯಿಂದ)

ಲಂಡನ ಟಾಯಿನ್ಸ್‌ಗೆ ಮಹಾತ್ಮರ ಉತ್ತರ

—oOo—

ತ್ತೀಚಿನ ತನ್ನ ಸೂಚನೆಯನ್ನು ಕುರಿತು ಲಂಡನ್ ಟ್ಯಾಯಿನ್ಸ್‌ದವು ಮಾಡಿದ ಟೀಕೆಗೆ ಉತ್ತರ ಕೊಡುತ್ತ ಗಾಂಧೀಜಿಯವರು ಈ ರೀತಿ ಹೇಳಿದರು.

ರಾಷ್ಟ್ರೀಯರು ಸನುಷ್ಯ ಬಿಡಿಸಲು ಉಪಾಯಗಳನ್ನು ಸೂಚಿಸಿದಾಗಲೆಲ್ಲ ಅವು ವಾಸ್ತವಿಕತೆಯಲ್ಲಿ ಎಷ್ಟೇ ಭವ್ಯವಾಗಿದ್ದರೂ ಅವರ ಭಾಷಣ ಹಾಗೂ ಬರೆಹಗಳ ಅಪಾರ್ಥವೇ ಯಾವಾಗಲೂ ನಡೆದಿವೆ. ಇಷ್ಟೇ ಅಲ್ಲ ಅವರು ಶಾಸನಕ್ಕೂ ಗುರಿ ಮಾಡಲ್ಪಟ್ಟಿದ್ದಾರೆ. ಸೌಹಾರ್ದ ಭಾವವಿಂದ ಯೋಚಿಸಿದ ಮತ್ತು ನನ್ನ ಅಭಿಪ್ರಾಯ ಪ್ರಕಾರ ವಾಸ್ತವಿಕತೆಯಲ್ಲಿ ಭವ್ಯವಾಗಿನ್ನ ನನ್ನ ಇತ್ತೀಚಿನ ಸೂಚನೆಯೂ ಈಗಾಗಲೆ ನಿಪರ್ಯಸ್ತ ಮಾದಲ್ಪಡತೊಡಗಿವೆ. ನನ್ನ ಸೂಚನೆಯು ಮೆರುಳತನದಿರುವದಿಲ್ಲ. ನನ್ನ ಸೂಚನೆಯಲ್ಲಿ ನಾನು ಜಪಾನಿ ಆಕ್ರಮಣದ ವಿರುದ್ಧ ಮಿತ್ರ ದಂಡುಗಳು ಮಾಡಿಸಿದ ಚಟುವಟಿಕೆಗಳಿಗೆ ಯಾವನೇ ರೀತಿಕ್ಕೆ ಕೈಹಚ್ಚಿಲ್ಲ ಆದರ ಅರ್ಥವೆಂದರೆ ಈ ರೀತಿ ಇರುವದು.

ಬ್ರಿಟನವು ತನ್ನ ಘೋಷಣೆಯಂತೆ ನಡೆದುಕೊಂಡು ಹಿಂದುಸ್ತಾನದ ಮೇಲಿನ ತನ್ನ ಪ್ರಭುತ್ವವನ್ನು ಮತ್ತು ಅದರ ಆಗುಹೋಗು ನಿಶ್ಚಯಿಸುವದನ್ನು ಬಿಟ್ಟುಬಿಡಬೇಕಲ್ಲದೆ ಹಿಂದೂಸ್ತಾನದ ಭವಿತವ್ಯವನ್ನು ಅದಕ್ಕೇ ಒಪ್ಪಿಸಬೇಕು. ಆದರಲ್ಲಿ ಎಷ್ಟೂ ಕೈಯಾಕತಕ್ಕದ್ದಲ್ಲ. ಹೀಗೆ ಮಾಡಿದ್ದಾನತೆ ಬ್ರಿಟಿಷರ ಪಕ್ಷಕ್ಕೆ ನೈತಿಕ ಆಸ್ತಿಭಾರ ಮೊತ್ತು ಹಿಂದುಸ್ತಾನವು ಅದರ ಮಹತ್ವದ ಮಿತ್ರರಾಷ್ಟ್ರವಾಗಿ ಪರಿಣಮಿಸುವುದು. ಆದರೆ ಇದು ಸಾಮ್ರಾಜ್ಯವಾದಿತ್ವದ ದೃಷ್ಟಿಯಿಂದ ಆಗದೆ ಮಾನವೀಸ್ವಾತಂತ್ರ್ಯದ ದೃಷ್ಟಿಯಿಂದ ಆಗುವದು. ಹಿಂದುಸ್ತಾನದಲ್ಲಿ ಅರಾಜಕತೆ ನೆಲೆಸಿದ್ದೇ ಆದರೆ ಬ್ರಿಟನದೇ ಅವಕ್ಕೆ ಜವಾಬದಾರಿವಿನವದು! ನನ್ನ ಮೇಲೆ ಅದರ ಎಷ್ಟೂ ಹೊಣೆಯಿಲ್ಲ ಸತ್ಯದ ದಾಸ್ಯ ಮತ್ತು ಅದರಿಂದ ಉದ್ಭೂತವಾದ ಅಹಿಂಸೆಯಿಂದ ಅರಾಜಕತೆಯೆ ನನಗೆ ಪ್ರಶಸ್ತ ತೋರುವದೆಂದು ನಾನು ಹೇಳಿದ್ದೇನೆ. ನಾನು ಮಾಡಿದ ಸೂಚನೆಗಳನ್ನು ವಿಪರ್ಯಸ್ತ ಮಾಡುವನನು ಎಷ್ಟೇ ದೊಡ್ಡವನಿರಲಿ, ಇತಿಮಾತ್ರದಿಂದ ಮಿತ್ರ ಪಕ್ಷದ ಶತ್ರುವೆಂದು ನಿಷೇಧಿಸಲ್ಪಡವೆ ಇರನು. ಸರ್ ಸ್ಟಾಫರ್ಡ್ ಕ್ರಿಪ್ಸರ ಸೂಚನೆಗಳನ್ನು ಹಿಂದುಸ್ತಾನವು ಕೂಲಂಕಷವಾಗಿ ಪರಿಶೀಲಿಸಿ ವಿಚಾರಾಂತ್ಯದಲ್ಲಿ ತ್ಯಾಜ್ಯವೆಂದು ಬಿಟ್ಟುಬಿಟ್ಟಿದೆ. ಯಾವ ಪಕ್ಷದವರಿಗೂ ಅವು ಸನ್ಮತನಿಲ್ಲ. ಬ್ರಿಟಿಷ ಮುತ್ಸದ್ದಿಗಳು ಇವತ್ತಿಂತ ಮುಂದೆ ಹೋಗುವದು ಶಕ್ಯನಿಲ್ಲವೆಂದು ಪುನಃ ಪುನಃ ಅವನ್ನೇ ಮುಂದೆ ಮಾಡುವನು ಹಿಂದುಸ್ತಾನಕ್ಕೆ ಅವಮಾನಕರವಾಗಿದೆ.

"ನೀವು ಏನು ಮಾಡುವಿರಿ?"

ನಿಮ್ಮ ವಿನಂತಿಗೆ ಮಾನ್ಯಕೊಟ್ಟು ಬ್ರಿಟಿಷ ಸರಕಾರವು ಹಿಂದುಸ್ತಾನದ ನಿರೋಪ ತೆಗೆದುಕೊಂಡರೆ ಮತ್ತು ಅನಂತರ ನೀವು ಅನ್ನುವಂತೆ ಒಂದುವೇಳೆ ಅರಾಜಕತೆ ಉತ್ಪನ್ನವಾದರೆ ನೀವು ಸ್ವತಃ ಏನು ಮಾಡುವಿರಿ ಮತ್ತು ನಿಮ್ಮ ಜನುಯಾಯಿಗಳಿಗೆ ಯಾವ ಸಲಹೆ ಕೊಡುವಿರಿ ಎಂದು ಕೇಳಿದ್ದಕ್ಕೆ ಮಹಾತ್ಮರು ಈ ರೀತಿ ಉತ್ತರ ಕೊಟ್ಟಿರುವರು.

ಅಂಥ ಪ್ರಸಂಗ ಬಂದರೆ ಅರಾಜಕತೆ ಇಲ್ಲದಂತೆ ಮಾಡಲು ನಾನು ನನ್ನ ಜನುಯಾಯಿಗಳೊಂದಿಗೆ ಅವಶ್ಯವಿದ್ದ ಅಹಿಂಸಕ ಪ್ರಯತ್ನ ಮಾಡುವೆನು. ಅರಾಜಕತೆ ಉಂಟು ಮಾಡುವವರಿಗೆ ತಿಳಿ ಹೇಳಿ ಅವರನ್ನು ಪರಾವೃತ್ತ ಮಾಡುವೆನು. ನುತ್ತು ಹಾಗೆ ನಾಡುವಾಗ ಮರಣ ಹೊಂದುವ ಪ್ರಸಂಗ ಬಂದರೂ ಮರಣ ಹೊಂದಿ ಮುಕ್ತರಾಗುವೆನೆ. ಅಹಿಂಸಕ ವೃತ್ತಿಯ ಅನೇಕ ಜನುಯಾಯಿಗಳು ಸಿಕ್ಕರೆ ಅರಾಜಕತೆ ಆಗುವಂದಾಗ್ಗೆ ಶಾಂತವಾಗಿ ಹೋಗುವದು. ಇಂಗ್ಲೀಷರ ಸತ್ತೆ ಹೊರಟು ಹೋದಮೇಲೆ ಕೇಡಿಗಳ ಅಹಿಂಸೆಗೆ ಅಸ್ಪದವೇ ಉಳಿಯುವದಿಲ್ಲ. ಲೂಟ ಮಾಡಲಿಚ್ಛಿಸುವವರು ಯಾರನ್ನೂ ತುರಂಗವಲ್ಲಿ ಹಾಕಬಯಸುವದಿಲ್ಲ. ಇಲ್ಲವೆ ಯಾರಿಗೂ ಭಯ ತೋರಿಸುವದಿಲ್ಲ. ಹೊಡಿ ಬಡಿ ಹೊರತು ಅವರ ಬಾಯಿಯಲ್ಲಿ ಎರಡನೆಯದೇನೂ ಇರುವದಿಲ್ಲ ಅವರನ್ನು ಒಲಿಸಿಕೊಳ್ಳಲು ಬಹಳ ಬಲಿದಾನಮಾಡಬೇಕಾಗುವದು.

ಅರಾಜಕತೆಯಲ್ಲಿ ಕೇವಲ ಅಹಿಂಸೆಯಷ್ಟೇ ಸ್ಪರ್ಧೆತ್ತನಾಗುವದಿಲ್ಲ. ಲೂಟ ಮೊದಲಾದದ್ದನ್ನು ಮಾಡುವವನನ್ನು ದಂಡೋಪಾಯದಿಂದ ಹಾದಿಗೆ ತರುವ ಕೆಲವು ಪಕ್ಷಗಳು ನಿರ್ಮಾಣವಾಗುವವು. ಅರಾಜಕತೆಯಲ್ಲಿಯೂ ಯಾವತ್ತರೆ ನಿಜವಾದ ಪುರೋಕ್ಷಯಾಗುವದು.

(ಗುಜರಾಥಿಯಿಂದ) **ಮೋ. ಕ. ಗಾಂಧಿ**

ಕೈಗಾರಿಕೆಯಮೂಲಕ ಶಿಕ್ಷಣ

ಶ್ರೀಮತಿ ಅಶಾದೇವಿಯವರು ಈ ಕೆಳಗೆ ಕೊಡಲಾಗಿರುವ ಸ್ವಾರಸ್ಯಕರವಾದ ಅಂಕೆಗಳನ್ನು ಕಳುಹಿಸಿರುವರು:—

ಬಿಹಾರಿನ ಚಂಪಾರಣ್ಯ ಜಿಲ್ಲೆಯ ಬೆಟ್ಟಯ್ಯಧಾನಾಕ್ಕೆ ಸೇರಿದ ಸಣ್ಣ ಕ್ಷೇತ್ರದಲ್ಲಿ 27 ಬೇಸಿಕ್ ಶಾಲೆಗಳು ಕೆಲಸ ಮಾಡಿ ಹತ್ತಿ 1942ನೇ ಎಪ್ರಿಲ್ ತಿಂಗಳಿಗೆ ಮೂರು ವರ್ಷಗಳಾದವು ಈ ಶಾಲೆಗಳ 1, 2 ಮತ್ತು 3ನೇ ವರ್ಗದ 1941-42ನೇ ವರ್ಷದ ವಾರ್ಷಿಕಆರ್ಥಿಕ ಅಂಕಿ ಅಂಶಗಳು ಬೇಸಿಕ್ ಶಿಕ್ಷಣ ವ್ಯವಸ್ಥೆಯಲ್ಲಿ ನಿರತರಾದವರಿಗೆಲ್ಲ ಉತ್ತೇಜನ ಕೊಡುವಂತಹುದಾಗಿವೆ ಬೇಸಿಕ್ ಶಿಕ್ಷಣದ ಮುಖಪತ್ರವಾದ 'ನಯೆತಾಲಿಮ'ದಲ್ಲಿ ಆ ಅಂಕೆ ಅಂಶಗಳ ವಿವರಗಳನ್ನು ಪ್ರಕಟಿಸಲಾಗುವದು. ಮೂಲ ಶಿಕ್ಷಣ ಯೋಜನೆಯ ಅಭಿವೃದ್ಧಿಯ ಕಾರ್ಯದಲ್ಲಿ ಅಸಕ್ತರಾದವರ ಉಪಯೋಗಕ್ಕೆಂದು ಆ ಆರ್ಥಿಕ ಅಂಕೆ ಅಂಶಗಳಿಗೆ ಸಂಬಂಧಪಟ್ಟ ಮುಖ್ಯವಿಷಯಗಳನ್ನು ಮಾತ್ರ ಇಲ್ಲಿ ಕೊಟ್ಟಿರುತ್ತದೆ. ಆ 27 ಶಾಲೆಗಳಲ್ಲಿ ಮೊದಲನೆ ವರ್ಗದಲ್ಲಿ ನೂರಕ್ಕೆ 70 ಹುಡಗರೂ ಎರಡನೇ ವರ್ಗದಲ್ಲಿ ನೂರಕ್ಕೆ 76 ಹುದಗರೂ ಮೂರನೆ ವರ್ಗದಲ್ಲಿ ನೂರಕ್ಕೆ 79 ಹುಡುಗರೂ ಸರಾಸರಿ ತಪ್ಪದೇ ಶಾಲೆಗೆ ಬಂದಿದ್ದಾರೆ. ಅವರ ಸರಾಸರಿ ದುಡಿಮೆ, ಮೊದಲನೇ ವರ್ಗದ ಪ್ರತಿ ವಿದ್ಯಾರ್ಥಿಗೆ ಹನ್ನೊಂದಾಣೆಯಂತೆಯೂ ಎರಡನೇ ವರ್ಗದವರೊಬ್ಬರಿಗೆ ರೂ 2-4-2 ಯಂತೆಯೂ ಮೂರನೆ ವರ್ಗದವರೊಬ್ಬೊಬ್ಬರಿಗೆ ರೂ 6-1-1 ಯಂತೆಯೂ ಇದೆ. ಆ ಎಲ್ಲ ಶಾಲೆಗಳ ಹುಡುಗರ ಒಟ್ಟು ಸಂಪಾದನೆ ಈ ರೀತಿ ಇದೆ— ಮೊದಲನೇ ವರ್ಗದ 390 (ತಪ್ಪದೆ ಶಾಲೆಗೆ ಬರುತ್ತಿದ್ದ ಹುಡುಗರ ಸರಾಸರಿ ಹುಡುಗರು ಒಟ್ಟು 10, 264 ಗಂಟೆ ಕಾಲ ಕೆಲಸ ಮಾಡಿ ರೂ 267 8-6ಗಳನ್ನು ಸಂಪಾದಿಸಿರುವರು, ಎರಡನೆ ವರ್ಗದ 356 [ತಪ್ಪದೆ ಶಾಲೆಗೆ ಬರುತ್ತಿದ್ದ ಹುಡುಗರ ಸರಾಸರಿ] ಹುಡುಗರು ಒಟ್ಟು 14,982 ಗಂಟೆ ಕೆಲಸ ಮಾಡಿ ರೂ. 804-13-8 ಗಳನ್ನು ಸಂಪಾದಿಸಿದರು; ಮೂರನೇ ವರ್ಗದ 319 (ಶಾಲೆಗೆ ತಪ್ಪದೆ ಬರುತ್ತಿದ್ದ ಹುಡುಗರ ಸರಾಸರಿ) ಹುಡುಗರು ಒಟ್ಟು 14,362 ತಾಸು ಕೆಲಸಮಾಡಿ ರೂ. 1935-14-11 ಗಳನ್ನು ಸಂಪಾದಿಸಿರುವರು. ಅಂದರೆ 1,065 ಹುಡುಗರು ಒಂದು ವರ್ಷಕ್ಕೆ ಒಟ್ಟು ರೂ.3008-2 1 ಗಳನ್ನು ಸಂಪಾದಿಸಿದಂತಾಯಿತು. ಆ ದ್ದರಿಂದ ಪ್ರತಿಯೊಬ್ಬನ ಆಕಿ ಹೆಚ್ಚಿನ ಸರಾಸರಿ ಸಂಪಾದನೆಯೆಂದರೆ ಮೂರನೇ ವರ್ಗದವ ರೂ. 15-12-0 ಎರಡನೆ ವರ್ಗದವ ರೂ. 6-2-0, ಮೂರನೆ ವರ್ಗದವ ರೂ. ರೂ. 2-10-1 ಗಳಾದವು ಚರಕದ ಮೇಲೆ ಮೂರನೇ ವರ್ಗದ ಹುಡುಗರು ಗಂಟೆಗೆ 480 ಸುತ್ತುಗಳಂತೆಯೂ 2ನೇ ವರ್ಗದ ಹುಡುಗರು ಗಂಟೆಗೆ 350 ಸುತ್ತುಗಳಂತೆಯೂ ಕೆಲಸ ಮಾಡಿದುದೇ ಅವರಿಂದ ಸಾಧ್ಯವಾದ ಅತ್ಯಂತ ಹೆಚ್ಚಿನ ವೇಗ. ತಕಲಿಯ ಮೇಲೆ ಮೂರನೇ ವರ್ಗದ ಹುಡುಗರು ಗಂಟೆಗೆ 281 ಸುತ್ತುಗಳಂತೆಯೂ ಎರಡನೇ ವರ್ಗದ ಹುಡುಗರು ಗಂಟೆಗೆ 242 ವರ್ಗದ ಸುತ್ತುಗಳಂತೆಯೂ ಮೊದಲನೇ ಹುಡುಗರು ಗಂಟೆಗೆ 164 ಸುತ್ತುಗಳಂತೆಯೂ ಸರಾಸರಿ ಅತ್ಯಂತ ಹೆಚ್ಚಿನ ವೇಗದಲ್ಲಿ ಕೆಲಸ ಮಾಡಬಲ್ಲವರಾಗಿದ್ದರು.

ವಸ್ತುಗಳ ಒಟ್ಟು ಉತ್ಪನ್ನ ಮತ್ತು ಸಂಪಾದನೆಯ ಅಂಕೆಅಂಶಗಳು ಮುಖ್ಯವಾಗಿದ್ದರೂ ಇಲ್ಲಿ ಆ ಅಂಕೆಗಳನ್ನು ಕೊಟ್ಟಿರುವದು ಅವಕ್ಕೆ ಮಹತ್ವ ಕೊಟ್ಟಿಲ್ಲ ಶಿಕ್ಷಣ ಯೋಜನೆಯಲ್ಲಿ ಅವಕ್ಕೆ ಎರಡನೆಸ್ಥಾನವಿದ್ದರೂ ಯುವಕರಿಗೆ ಶಿಕ್ಷಣಕೊಡುವದರಲ್ಲಿ ಕೈಗಾರಿಕೆಗಳು ಎಷ್ಟು ಶಿಕ್ಷಣ ಮಹತ್ವವುಳ್ಳವುಗಳಾಗಿವೆಯೆಂಬುದನ್ನು ಸ್ಪಷ್ಟಪಡಿಸಲು ಅನ್ನಿಲ್ಲಿ ಕೊಡಲಾಗಿದೆ. ಕಾರ್ಯತತ್ಪರತೆ, ದಕ್ಷತೆ, ವಿವರಗಳಿಗೆ ಹೆಚ್ಚು ಗಮನ ಕೊಡುವದು ಇವೆಲ್ಲ ಇರದೆ ಕಾರ್ಯ ಸಾಗದೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಮೋ. ಕೆ. ಗಾಂಧಿ

—0—

ALL INDIA PEOPLE'S BENEFIT SERVICE.

ಆಲ್ ಇಂಡಿಯಾ ಪೀಪಲ್ಸ್ ಬೆನಿಫಿಟ್ ಸರ್ವಿಸ್.

ಬಳ್ಳಾರಿ ಮತ್ತು ಆಂಧ್ರ ಜಿಲ್ಲೆಗಳಿಗೆ ಮುಖ್ಯ ಕಛೇರಿಯೊಂದು ಬಳಾರಿಯಲ್ಲಿ ಆಲ್ ಇಂಡಿಯಾ ಪೀಪಲ್ಸ್ ಬೆನಿಫಿಟ್ ಸರ್ವಿಸ್' ಎಂದರೆ ಅಖಿಲಭಾರತ ಪ್ರಜೆಗಳ ಉಪಕಾರೀ ಸಂಸ್ಥೆಯೊಂದನ್ನು ತೇರು ಬೀದಿಯಲ್ಲಿ ತೆರೆದಿರುವರು ಸಾರ್ವಜನಿಕ ಹಿತದೃಷ್ಟಿಯಿಂದ ಈ ಸಂಸ್ಥೆಯವರು ಕೆಳಗಣ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು.

(1) ಈ ಸಂಸ್ಥೆಯು ರಿಜಿಸ್ಟರ್ ಆಗಿದೆಯೋ ?

(2)— ನಿಮ್ಮ ಇಂಗ್ಲೀಷ್ ಕರಪತ್ರಗಳ ಪ್ರಕಾರ ಈ ಜಿಲ್ಲೆಯ ಎಷ್ಟು ತಾಲೂಕುಗಳಲ್ಲಿ ಎಷ್ಟು ಮಾಸಿಕ ಸಂಜಆದ ಏಜಂಟರನ್ನು ನಿಯಮಿಸಿರುವಿರಿ?

(3) ಸದರಿ ಏಜಂಟರಿಂದ ನೀವು ಎಷ್ಟೆಷ್ಟು ಹಣವನ್ನು ಡಿಪಾಜಿಟ್ ಮೂಲಕ ತೆಗೆದುಕೊಂಡಿರುವಿರಿ? ಹಾಗೆ ತೆಗೆದುಕೊಂಡಿದ್ದರೆ, ಅವರ ಹಣದ ಭದ್ರತೆಗೆ ಯಾವ ಭರವಸೆ ಕೊಟ್ಟಿರುವಿರಿ ?

(4) ಏಜಂಟರು ಮಾಡಬೇಕಾದ ಕೆಲಸಗಳೇನು ?

(5) ನಿಮ್ಮ ಶೇರು ಮೊತ್ತವೆಷ್ಟು? ಇದರಿಂದ ಶೇರುದಾರರಿಗೆ ದೊರೆಯುವ ಲಾಭವೇನು ?

(6) ನಿಮ್ಮ ವಿವರಪಟ್ಟಿ (Prospectus) ಯು ಇದಯೇ ? ಅದು ಇದ್ದರೆ ಏಕೆ ಪ್ರಕಟಿಸಿದ್ದಿಸುವುದಿಲ್ಲ ? ಅಥವಾ ಇದುವರೆಗೆ ಏಕೆ ಪ್ರಕಟಿಸಿದ್ದಿಲ್ಲ ?

(7) ತಿಂಗಳಿಗೆ ಇಷ್ಟುಸಂಬಳ, ವಾರ್ಷಿಕ ಇನ್‌ಕ್ರಿಮೆಂಟ್ ಇಷ್ಟು, ಕೆಲಸಮಾಡಲು ಏಜಂಟರುಬೇಕು. ಎಂಬರ್ಥದ ಇಂಗ್ಲಿಷ್ ಕರಪತ್ರಗಳನ್ನು ವಿವಿಧ ತಾಲೂಕುಗಳಲ್ಲಿ ಹಂಚಿರುವುದರ ನಿಮ್ಮ ಆಶಯವೇನು ? ಕೂಡಲೇ 'ನವಭಾರತ' ಪತ್ರಿಕೆಯಲ್ಲಿ ತಿಳಿಸಿರಿ.

'ಪ್ರಜಾಹಿತೈಷಿ'
ಬಳ್ಳಾರಿ.

ಹಿಂದೂಸ್ತಾನ

ಮದ್ರಾಸ್ ಶಾಸನಸಭೆಗಳ ಕಾಂಗ್ರೆಸ್ ಪಾರ್ಟಿಸಭೆಯು ತ್ಯಾಗರಾಯ ನಗರದ ಹಿಂದೀಪ್ರಚಾರ ಭವನದಲ್ಲಿ 15-7.42 ಕೂಡಲಿದೆ

ಬೋಂಬಾಯಿಯಲ್ಲಿ ಕಳೆದ ತಿಂಗಳು 29ನೆಯ ತಾ ಐದಂತಸ್ತಿನ ಮನೆಯೊಂದು ಕುಸಿದು ಬಿದ್ದು 7 ಜನರುಸತ್ತು ಅನೇಕರು ಹೂಳು ಹೋಗಿರುವರು. 67 ಜನರಿಗೆ ಬಹಳ ಘಾಯ ತಗಲಿದೆ.

ಶ್ರೀ ಸಿ. ರಾಜಗೋಪಾಲಾಚಾರಿಯವರು ಜಿನ್ನಾರೊಡನೆ ಬೊಂಬಾಯಿಯಲ್ಲಿ ಹಿಂದೂ, ಮುಸ್ಲಿಂ ಸಮಸ್ಯೆಯನ್ನು ಚರ್ಚಿಸಿದನಂತರ, ಗಾಂಧೀಜಿಯವರೊಡನೆ ಮಾತಾಡಲು ವಾರ್ಧಾಕ್ಕೆಬಂದರು.

ಬ್ರಿಟಿಷ್ ರೊರೆಗಳ ಸೋದರಳಿಯಾದ ಡ್ಯೂಕ್ ಆಫ್ ಗ್ಲಾಸೆಸ್ಟರರವರು ಕಳೆದವಾರ ಬೆಂಗಳೂರು ಮೈಸೂರುಗಳನ್ನು ಸಂದರ್ಶಿಸಿ ಯುದ್ಧ ತಯಾರಿಯ ಬಗ್ಗೆಸಮಾಧಾನ ವ್ಯಕ್ತಪಡಿಸಿದರು.

3½ ಲಕ್ಷ ಸ್ವಯಂಸೇವಕರು

"ಕ್ರಿಪ್ಸ್ - ಕಾಂಗ್ರೆಸ್ ಸಂಧಾನವು ಯಶಸ್ವಿಯಾಗಿದ್ದರೆ-ಹಿಂದು ಸ್ತಾನ ರಕ್ಷಣೆಗಾಗಿ ಯೂ, ಜಪಾನರನ್ನು ದುರಿಸುವ ಉದ್ದೇಶದಿಂದ ಕೂಡಿ 3½ ಲಕ್ಷ ಸ್ವಯಂಸೇವಕರ ಸೈನ್ಯವನ್ನು ರಚಿಸುತ್ತಿದ್ದರೆಂದು ಕ್ರಿಪ್ಸರಿಗೆ ತಿಳಿಸಲಾಯಿತು. ಆದರೆ ಅವರು ನಮ್ಮ ತರ್ಕುಗಳನ್ನೊಪ್ಪಲಿಲ್ಲ "

ಹೀಗೆಂಬುದಾಗಿ ಪಂಡಿತ ಜವಹರಲಾಲರು ಅಲಿಘರ ರಾಜಕೀಯ ಸಭೆಯಲ್ಲಿ ತಿಳುಹಿಸಿದರೆಂದು ನ್ಯಾಷನಲ್ - ಹೇರಾಲ್ಡ ಪತ್ರಿಕೆಯು ಬರೆದಿದೆ

ಬಂಗಾಲದ ಢಾಕಾನಗರದಲ್ಲಿ ಈಗ ಶಾಂತತೆಯು ನೆಲೆಸಿರುವ ಕಾರಣ ಅಲ್ಲಿಂದ ಮಿಲಿಟರಿಯನ್ನು ಹಿಂದೆಗೆಯಲಾಗಿದೆ.

ವೈಸ್ರಾಯಿ ಕೌನ್ಸಿಲ ಹೊಸ ಸದಸ್ಯರು.

ವೈಸ್ರಾಯರ ಕಾರ್ಯಕಾರಿಣೀ ಸಮಿತಿಗೆ ಈ ಕೆಳಗಣ ಹೊಸ ಸದಸ್ಯರು ನೇಮಿಸಲ್ಪಟ್ಟಿರುವರು:—

ಸರ್ ಶಿ. ಪಿ. ರಾಮಸ್ವಾಮಿ ಅಯ್ಯರ್, ಬಿ. ಆರ್. ಅಂಬೇಡ್ಕರ್, ಸರ್ ವಿ. ಶಿ. ಬೆಂಥಾಲ, ಸರ್ ಜೋಗೇಂದ್ರಸಿಂಹ, ಜೆ. ಪಿ. ಶ್ರೀವಸ್ತವ, ಸರ್ ಮಹಮ್ಮದ್ ಉಸ್ಮಾನ.

ತಮ್ಮ ಆರೋಗ್ಯವು ಸರಿಯಾಗಿಲ್ಲದ ಕಾರಣ ಕಾಂಗ್ರೆಸ್ ಕಾರ್ಯಕಾರಿಣೀ ಸಮಿತಿಗೆ ಭೂಲಾಭಾಯಿದೇಶಾಯಿಯವರು ರಾಜೀನಾಮೆ ಇತ್ತಿರುವರು.

ಲಕ್ನೋದ ನ್ಯಾಷನಲ್ ಹೆರಾಲ್ಡ ಪತ್ರಿಕೆಗೆ ಸರಕಾರದವರು ಜಾಮೀನು ಕೇಳಿದ್ದರಿಂದಲೂ ಆಪತ್ರಿಕೆಯ ಸಂಪಾದಕರನ್ನು ಶಿಕ್ಷಿಸಿದ್ದರಿಂದಲೂ ಪಂಡಿತ ಜವಹರಲಾಲರು ಆ ಪತ್ರಿಕೆಗೆ ಸಹಾಯ ಕೋರಿದ್ದರು ಇದುವರೆಗೆ 42 ಸಾವಿರ ರೂ. ಸಹಾಯ ದ್ರವ್ಯವು ಬಂದಿದೆ.

ಭಾರತದಲ್ಲಿ ಸಕ್ಕರೆಯು ಸಾಕಷ್ಟಿದೆ

20ನೆಯ ಜೂನ್ 1942 ನೆಯ ದಿನ, ಸಕ್ಕರೆಯ ಕಾರ್ಖಾನೆಗಳಲ್ಲಿ ಮಾರಲ್ಪಟ್ಟ ನುತ್ತು ನೂರದೆ ಇರುವ ಸಕ್ಕರೆಯ ಸಂಗ್ರಹ 4,24,000 ಟನ್‌ಗಳಷ್ಟಿದೆ. ಕಾರ್ಖಾನೆಗಳಲ್ಲಿರುವ ಮತ್ತು ವರ್ತಕರು ಸಂಗ್ರಹಿಸಿಟ್ಟಿರುವ ಸಕ್ಕರೆಯು ಮುಂದೊಂದು ವರ್ಷದವರೆಗೂ ಸಾಕಾಗುವದೆಂದು ಹೇಳಲಾಗಿದೆ. ಅಂದರೆ ವರ್ತಕರು ಬಚ್ಚಿಡದಂತೆ ಮಾಡಬೇಕು. ಸರ್ಕಾರದವರು ನಿಶ್ಚಯಿಸಿರುವ ಬೆಲೆಯು 80 ದಿನಗಳ ಸೀಸನ್ ಲೆಕ್ಕದ ಪ್ರಕಾರವಿದೆ. ಬರುವ ವರ್ಷದ ಪರ್ಯಾಯದಲ್ಲಿ ಬೇಕಾದ ಹಾಗೆ ಸಕ್ಕರೆ ತಯಾರಿಸಲು ಅವಕಾಶ ಪುಂಟು. ಸಕ್ಕರೆಯ ಬೆಲೆಯು ಅಧಿಕವಾಗುವುದೆಂಬ ಊಹೆಗಳು ನಿರಾಧಾರವಾಗಿವೆ.

ಸೆಬಸ್ಟೋಲ ಪತನ.

ಕ್ರೀಮಿಯಾದ ಈಬಂದರು ಬಹಳ ದಿನಗಳ ಮುತ್ತಿಗೆಯ ನಂತರ ಜರ್ಮನರ ವಶವಾಯ್ತೆಂದು ಜರ್ಮನ ಸುದ್ದಿಯು ಹೇಳುತ್ತದೆ. ಜರ್ಮನರು ಅಪಾರ ತ್ಯಾಗ ಮಾಡಿ ಬಹುಜನರ ಸಂಹಾರಕ್ಕೆ ಕಾರಣರಾದರು.

ರಷ್ಯನರ ದೇಶಪ್ರೇಮ

ರಷ್ಯಾದೇಶದಲ್ಲಿ ಕಳೆದ ಒಂದು ವರ್ಷದಲ್ಲಿ 45 ಲಕ್ಷ ಯೋಧರು ಯುದ್ಧರಂಗದಲ್ಲಿ ಸತ್ತಿರಬಹುದೆಂದು ಅಂದಾಜು ಮಾಡಲಾಗಿದೆ. ದಿನ 1ಕ್ಕೆ 12 ಸಾವಿರ ಜನರು ಮಾತೃಭೂಮಿಗಾಗಿ ಬಲಿದಾನ ಮಾಡಿದ್ದಾರೆ, ಲಕ್ಷಾಂತರ ಜನರು ಜರ್ಮನ ಕೈದಿಗಳಾಗಿದ್ದರೂ ಜರ್ಮನರು ಹೇಳುವ ಪ್ರಕಾರಕ್ಕೆ 45 ಲಕ್ಷ ಜನರು ಕೈಸೆರೆಯಾಗಿಲ್ಲ.

ಈಜಿಪ್ತಿನಲ್ಲಿ ಘನಘೋರ ಸಂಗ್ರಾಮ.

ಮೆಸಾ ಮೆಟ್ರೂಹದ ಪೂರ್ವಕ್ಕೆ ಎಲ ಅಮೀನ ಭಾಗದಲ್ಲಿ ಬ್ರಿಟಿಷ ಮತ್ತು ಜರ್ಮನ್ ಸೈನ್ಯಗಳ ಮಧ್ಯೆ ಭಯಂಕರ ಸಂಗ್ರಾಮವು ಸಾಗಿದೆ. ಈ ಕೇಂದ್ರವು ಅಲೆಕ್ಸಾಂಡ್ರಿಯಾಕ್ಕೆ 70 ಮೈಲಿ ದೂರದಲ್ಲಿದೆ. ಎಲ್ ಅಮೀನವು ತಮಗೆ ಸೇರಿತೆಂದು ಶತ್ರುಗಳು ಹೇಳುತ್ತಾರೆ. ಅದು ದೃಢಪಟ್ಟಿಲ್ಲ.

ಬರ್ಚಿಲರ್‌ಗೆ ವಿಜಯ

ಲಿಬ್ಯಾದ ಯುದ್ಧದಲ್ಲಿ ತೊಡಗಿದ ಸೈನಿಕರು ಸರಿಯಾಗಿ ಶಿಕ್ಷಣ ಹೊಂದಿರಲಿಲ್ಲವೆಂದೂ ಅವರಿಗೆ ಒಳ್ಳೆಯಶಸ್ತ್ರಗಳನ್ನು ಕೊಡಲಿಲ್ಲವೆಂದೂ, ಚರ್ಚಿಲರಿಗೆ ಸಂರಕ್ಷಣ ಖಾತೆಯನ್ನು ತ್ಯಜಿಸಬೇಕೆಂದೂ ಕಾರಣಗಳನ್ನು ಸೂಚಿಸಿ ಚರ್ಚಿಲರಮೇಲೆ ಅವಿಶ್ವಾಸ ನಿರ್ಣಯವನ್ನು ಸರ್ ಜಾನ್ ವಾರ್ಡಲಾಮಿಲ್ಲೆಯವರು ತಂದಿದ್ದರು. ಬಹಳ ಚರ್ಚೆಯನಂತರ 25 ವಿರೋಧ 475 ಮತಗಳಿಂದ ಅದು ಸೋತಿತು.

ಮಿತ್ರ ಸಕ್ಷದ ಹಡಗುಗಳ ನಿರ್ಮಾಣ.

[ತಯಾರಿಗಿಂತಲೂ ನಾಶವಧಿಕ]

ಜೂ ತಿಂಗಳಲ್ಲಿ 66 ಸಾರಿಗೆ ಹಡಗುಗಳೂ - ಟ್ಯಾಂಕುಗಳೂ ಅಮೆರಿಕೆಯಲ್ಲಿ ತಯಾರಾದವು. ಆದರೆ ನಾವಿಕಾಶಾಖೆಯ ಹೇಳಿಕೆಯಪ್ರಕಾರಕ್ಕೆ ನಿರ್ಮಾಣಕ್ಕಿಂತಲೂ, ನಾಶವು ಅಧಿಕವಾಗಿದೆ. ಅಂದರೆ ಶತ್ರುಗಳು ಮುಳುಗಿಸುವ ಹಡಗುಗಳ ಸಂಖೆಯೇ ಹೆಚ್ಚಾಗಿದೆ. ಅಡ್ಮಿರಲ್ ವಿಕರಿಯವರು ಹೇಳುವಪ್ರಕಾರಕ್ಕೆ ಪರ್ಲಬಂದರದಲ್ಲಿ ಆದ ಜಪಾನಿ ದಾಳಿಯನಂತರ ಶೇ॥ 450 ಪ್ರಕಾರ ತಯಾರಿಯ ಕಾರ್ಯವು ನಡೆದಿದೆ.

ಬಳ್ಳಾರಿ ಪೇಟೆ ಧಾರಣೆ

3-7-42 ಶುಕ್ರವಾರ

ಭಂಗಾರ ತೊಲ 1ಕ್ಕೆ	51-12-0
ಸಾವರಿನ್	38-8-0
ಬೆಳ್ಳಿ 100 ತೊಲ ರೂ.	86.0 0
ಅರಳೆ ಮುಂಗಾರಿ 12 ಮಣಕ್ಕೆ	58-0-0
ಅರಳೆ ಫಾರಂ ...	112.0-0
ಅಕ್ಕಿ 1 ರೂ ಗೆ	4 ರಿಂದ 5 ಸೇರು
ಬೇಳೆ ,,	4 ,,
ಗೋಧಿ ,,	3½ ,,
ಜೋಳ ,,	11 ,,
ನವಣೆ ,,	15½ ,,
ಸಜ್ಜೆ ,,	9 ,,
ನೆಲಗಡಲೆ	1.9.6
ಸಕ್ಕರೆ ವೀಸ	0.9-0
ಬೆಲ್ಲ	20 ರೂ.
ಚಿಮ್ಮು ಎಣ್ಣೆ	4-12-0

ಕೈಗಾರಿಕೆಯಮೂಲಕ ಶಿಕ್ಷಣ

ಶ್ರೀಮತಿ ಆಶಾದೇವಿಯವರು ಈ ಕೆಳಗೆ ಕೊಡಲಾಗಿರುವ ಸ್ವಾರಸ್ಯಕರವಾದ ಅಂಕೆಗಳನ್ನು ಕಳುಹಿಸಿರುವರುಃ—

ಬಿಹಾರಿನ ಚಂಪಾರಣ್ಯ ಜಿಲ್ಲೆಯ ಬೆಟ್ಟಯ್ಯಧಾನಾಕ್ಕೆ ಸೇರಿದ ಸಣ್ಣ ಕ್ಷೇತ್ರದಲ್ಲಿ 27 ಬೇಸಿಕ್ ಶಾಲೆಗಳು ಕೆಲಸ ಮಾಡಿ ಹತ್ತಿ 1942ನೇ ಎಪ್ರಿಲ್ ತಿಂಗಳಿಗೆ ಮೂರು ವರ್ಷಗಳಾದವು. ಈ ಶಾಲೆಗಳ 1, 2 ಮತ್ತು 3ನೇ ವರ್ಗದ 1941-42ನೇ ವರ್ಷದ ವಾರ್ಷಿಕಆರ್ಥಿಕ ಅಂಕಿ ಅಂಶಗಳು ಬೇಸಿಕ್ ಶಿಕ್ಷಣ ವ್ಯವಸ್ಥೆಯಲ್ಲಿ ನಿರತರಾದವರಿಗೆಲ್ಲ ಉತ್ತೇಜನ ಕೊಡುವಂತಹುದಾಗಿವೆ. ಬೇಸಿಕ್ ಶಿಕ್ಷಣದ ಮುಖಪತ್ರವಾದ 'ನಯೀತಾಲೀಮ'ದಲ್ಲಿ ಆ ಅಂಕೆ ಅಂಶಗಳ ವಿವರಗಳನ್ನು ಪ್ರಕಟಿಸಲಾಗುವದು. ಮೂಲ ಶಿಕ್ಷಣ ಯೋಜನೆಯ ಅಭಿವೃದ್ಧಿಯ ಕಾರ್ಯದಲ್ಲಿ ಆಸಕ್ತರಾದವರ ಉಪಯೋಗಕ್ಕೆಂದು ಆ ಆರ್ಥಿಕ ಅಂಕಿ ಅಂಶಗಳಿಗೆ ಸಂಬಂಧಪಟ್ಟ ಮುಖ್ಯವಿಷಯಗಳನ್ನು ಮಾತ್ರ ಇಲ್ಲಿ ಕೊಟ್ಟಿರುತ್ತದೆ. ಆ 27 ಶಾಲೆಗಳಲ್ಲಿ ಮೊದಲನೆ ವರ್ಗದಲ್ಲಿ ನೂರಕ್ಕೆ 70 ಹುಡಗರೂ ಎರಡನೇ ವರ್ಗದಲ್ಲಿ ನೂರಕ್ಕೆ 76 ಹುಡಗರೂ ಮೂರನೆ ವರ್ಗವಲ್ಲಿ ನೂರಕ್ಕೆ 79 ಹುಡುಗರೂ ಸರಾಸರಿ ತಪ್ಪದೇ ಶಾಲೆಗೆ ಬಂದಿದ್ದಾರೆ. ಅವರ ಸರಾಸರಿ ದುಡಿಪೆ, ಮೊದಲನೇ ವರ್ಗದ ಪ್ರತಿ ವಿದ್ಯಾರ್ಥಿಗೆ ಹನ್ನೊಂದಾಣೆಯಂತೆಯೂ ಎರಡನೇ ವರ್ಗದವರೊಬ್ಬಬ್ಬರಿಗೆ ರೂ 2-4-2 ಯಂತೆಯೂ ಮೂರನೆ ವರ್ಗದವರೊಬ್ಬೊಬ್ಬರಿಗೆ ರೂ 6-1-1 ಯಂತೆಯೂ ಇದೆ. ಆ ಎಲ್ಲ ಶಾಲೆಗಳ ಹುಡುಗರ ಒಟ್ಟು ಸಂಪಾದನೆ ಈ ರೀತಿ ಇದೆ— ಮೊದಲನೇ ವರ್ಗದ 390 (ತಪ್ಪದೆ ಶಾಲೆಗೆ ಬರುತ್ತಿದ್ದ ಹುಡುಗರ ಸರಾಸರಿ ಹುಡುಗರು ಒಟ್ಟು 10, 264 ಗಂಟೆ ಕಾಲ ಕೆಲಸ ಮಾಡಿ ರೂ. 267 8-6ಗಳನ್ನು ಸಂಪಾದಿಸಿರುವರು; ಎರಡನೆ ವರ್ಗದ 356 [ತಪ್ಪದೆ ಶಾಲೆಗೆ ಬರುತ್ತಿದ್ದ ಹುಡುಗರ ಸರಾಸರಿ] ಹುಡುಗರು ಒಟ್ಟು 14,982 ಗಂಟೆ ಕೆಲಸ ಮಾಡಿ ರೂ. 804-13-8 ಗಳನ್ನು ಸಂಪಾದಿಸಿದರು; ಮೂರನೇ ವರ್ಗದ 319 (ಶಾಲೆಗೆ ತಪ್ಪದೆ ಬರುತ್ತಿದ್ದ ಹುಡುಗರ ಸರಾಸರಿ) ಹುಡುಗರು ಒಟ್ಟು 14,362 ತಾಸು ಕೆಲಸಮಾಡಿ ರೂ. 1935-14-11 ಗಳನ್ನು ಸಂಪಾದಿಸಿರುವರು. ಅಂದರೆ 1.065 ಹುಡುಗರು ಒಂದು ವರ್ಷಕ್ಕೆ ಒಟ್ಟು ರೂ.3008-2 1 ಗಳನ್ನು ಸಂಪಾದಿಸಿದಂತಾಯಿತು. ಆ ದ್ದರಿಂದ ಪ್ರತಿಯೊಬ್ಬನ ಅತಿ ಹೆಚ್ಚಿನ ಸರಾಸರಿ ಸಂಪಾದನೆಯೆಂದರೆ ಮೂರನೇ ವರ್ಗದವ ರೂ. 15-12-0 ಎರಡನೆ ವರ್ಗದವ ರೂ. 6-2-0, ಮೂರನೆ ವರ್ಗದವ ರೂ. ರೂ. 2-10-1 ಗಳಾದವು ಚರಕದ ಮೇಲೆ ಮೂರನೇ ವರ್ಗದ ಹುಡುಗರು ಗಂಟೆಗೆ 480 ಸುತ್ತುಗಳಂತೆಯೂ 2ನೇ ವರ್ಗದ ಹುಡುಗರು ಗಂಟೆಗೆ 350 ಸುತ್ತುಗಳಂತೆಯೂ ಕೆಲಸ ಮಾಡಿದುನೇ ಅವರಿಂದ ಸಾಧ್ಯವಾದ ಅತ್ಯಂತ ಹೆಚ್ಚಿನ ವೇಗ. ತಕಲಿಯ ಮೇಲೆ ಮೂರನೇ ವರ್ಗದ ಹುಡುಗರು ಗಂಟೆಗೆ 281 ಸುತ್ತುಗಳಂತೆಯೂ ಎರಡನೇ ವರ್ಗದ ಹುಡುಗರು ಗಂಟೆಗೆ 242 ವರ್ಗದ ಸುತ್ತುಗಳಂತೆಯೂ ಮೊದಲನೇ ಹುಡುಗರು ಗಂಟೆಗೆ 164 ಸುತ್ತುಗಳಂತೆಯೂ ಸರಾಸರಿ ಅತ್ಯಂತ ಹೆಚ್ಚಿನ ವೇಗದಲ್ಲಿ ಕೆಲಸ ಮಾಡಬಲ್ಲವರಾಗಿದ್ದರು.

ವಸ್ತುಗಳ ಒಟ್ಟು ಉತ್ಪನ್ನ ಮತ್ತು ಸಂಪಾದನೆಯ ಅಂಕಿಅಂಶಗಳು ಮುಖ್ಯವಾಗಿದ್ದರೂ ಇಲ್ಲಿ ಆ ಅಂಕಿಗಳನ್ನು ಕೊಟ್ಟಿರುವದು ಅವಕ್ಕೆ ಮಹತ್ವ ಕೊಟ್ಟಲ್ಲ ಶಿಕ್ಷಣ ಯೋಜನೆಯಲ್ಲಿ ಅವಕ್ಕೆ ಎರಡನೆಸ್ಥಾನವಿದ್ದರೂ ಯುವಕರಿಗೆ ಶಿಕ್ಷಣಕೊಡುವದರಲ್ಲಿ ಕೈಗಾರಿಕೆಗಳು ಎಷ್ಟು ಶಿಕ್ಷಣ ಮಹತ್ವವುಳ್ಳವುಗಳಾಗಿವೆಯೆಂಬುದನ್ನು ಸ್ಪಷ್ಟಪಡಿಸಲು ಅವನ್ನಿಲ್ಲಿ ಕೊಡಲಾಗಿದೆ. ಕಾರ್ಯತತ್ಪರತೆ, ದಕ್ಷತೆ, ವಿವರಗಳಿಗೆ ಹೆಚ್ಚು ಗಮನ ಕೊಡುವದು ಇವೆಲ್ಲ ಇರದೆ ಕಾರ್ಯ ಸಾಗದೆಂಬುದು ಇದರಿಂದ ವ್ಯಕ್ತವಾಗುತ್ತದೆ.

ಮೋ. ಕ. ಗಾಂಧಿ

—0—

ALL INDIA PEOPLE'S BENEFIT SERVICE.

ಆಲ್ ಇಂಡಿಯಾ ಪೀಪಲ್ಸ್ ಬೆನಿಫಿಟ್ ಸರ್ವಿಸ್.

ಬಳ್ಳಾರಿ ಮತ್ತು ಆಂಧ್ರ ಜಿಲ್ಲೆಗಳಿಗೆ ಮುಖ್ಯ ಕಛೇರಿಯೊಂದು. ಬಳ್ಳಾರಿಯಲ್ಲಿ ಆಲ್ ಇಂಡಿಯಾ ಪೀಪಲ್ಸ್ ಬೆನಿಫಿಟ್ ಸರ್ವಿಸ್' ಅಂದರೆ ಅಖಿಲಭಾರತ ಪ್ರಜೆಗಳ ಉಪಕಾರೀ ಸಂಸ್ಥೆಯೊಂದನ್ನು ತೀರು ಬೀದಿಯಲ್ಲಿ ತೆರೆದಿರುವರು ಸಾರ್ವಜನಿಕ ಹಿತದೃಷ್ಟಿಯಿಂದ ಈ ಸಂಸ್ಥೆಯವರು ಕೆಳಗಣ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು.

(1) ಈ ಸಂಸ್ಥೆಯು ರಿಜಿಸ್ಟರ್ ಆಗಿದೆಯೋ ?

(2) ನಿಮ್ಮ ಇಂಗ್ಲೀಷ್ ಕರಪತ್ರಗಳ ಪ್ರಕಾರ ಈ ಜಿಲ್ಲೆಯ ಎಷ್ಟು ತಾಲೂಕು ಗಳಲ್ಲಿ ಎಷ್ಟು ಮಾಸಿಕ ಸಂಜಳದ ಏಜಂಟರನ್ನು ನಿಯಮಿಸಿರುವಿರಿ ?

(3) ಸದರಿ ಏಜಂಟರಿಂದ ನೀವು ಎಷ್ಟೆಷ್ಟು ಹಣವನ್ನು ಡಿಪಾಜಿಟ್ ಮೂಲಕ ತೆಗೆದುಕೊಂಡಿರುವಿರಿ? ಹಾಗೆ ತೆಗೆದು ಕೊಂಡಿದ್ದರೆ, ಆವರ ಹಣದ ಭದ್ರತೆಗೆ ಯಾವ ಭರವಸೆ ಕೊಟ್ಟಿರುವಿರಿ ?

(4) ಏಜಂಟರು ಮಾಡಬೇಕಾದ ಕೆಲಸಗಳೇನು ?

(5) ನಿಮ್ಮ ಶೇರು ಮೊತ್ತವೆಷ್ಟು? ಇದರಿಂದ ಶೇರುದಾರರಿಗೆ ದೊರೆಯುವ ಲಾಭವೇನು ?

(6) ನಿಮ್ಮ ವಿವರಪಟ್ಟಿ (Prospectus) ಯು ಇದಯೇ ? ಅದು ಇದ್ದರೆ ಏಕೆ ಪ್ರಕಟಿಸುವುದಿಲ್ಲ ? ಅಥವಾ ಇದುವರೆಗೆ ಏಕೆ ಪ್ರಕಟಿಸಿಲ್ಲ ?

(7) ತಿಂಗಳಿಗೆ ಇಷ್ಟುಸಂಬಳ, ವಾರ್ಷಿಕ ಇಂಕ್ರಿಮೆಂಟ್ ಇಷ್ಟು, ಕೆಲಸಮಾಡಲು ಏಜಂಟರುಬೇಕು. ಎಂಬರ್ಥದ ಇಂಗ್ಲಿಷ್ ಕರಪತ್ರಗಳನ್ನು ವಿವಿಧ ತಾಲೂಕುಗಳಲ್ಲಿ ಹಂಚಿರುವುದರ ನಿಮ್ಮ ಆಶಯವೇನು ? ಕೂಡಲೇ 'ನವಭಾರತ' ಪತ್ರಿಕೆಯಲ್ಲಿ ತಿಳಿಸಿರಿ.

'ಪ್ರಜಾಹಿತೈಷಿ'
ಬಳ್ಳಾರಿ.

ಹಿಂದೂಸ್ತಾನ

ಮದ್ರಾಸ್ ಶಾಸನಸಭೆಗಳ ಕಾಂಗ್ರೆಸ್ ಪಾರ್ಟಿಸಭೆಯು ತ್ಯಾಗರಾಯ ನಗರದ ಹಿಂದೀಪ್ರಚಾರ ಭವನದಲ್ಲಿ 15-7-42 ಕೂಡಲಿದೆ

ಬೊಂಬಾಯಿಯಲ್ಲಿ ಕಳೆದ ತಿಂಗಳು 29ನೆಯ ತಾ. ಐದಂತಸ್ತಿನ ಮನೆಯೊಂದು ಕುಸಿದು ಬಿದ್ದು 7 ಜನರುಸತ್ತು ಅನೇಕರು ಹೂತು ಹೋಗಿರುವರು. 67 ಜನರಿಗೆ ಬಹಳ ಘಾಯ ತಗಲಿದೆ.

ಶ್ರೀ ಶಿ. ರಾಜಗೋಪಾಲಾಚಾರಿಯವರು ಜಿನ್ನಾರೊಡನೆ ಬೊಂಬಾಯಿಯಲ್ಲಿ ಹಿಂದೂ, ಮುಸ್ಲಿಂ ಸಮಸ್ಯೆಯನ್ನು ಚರ್ಚಿಸಿದನಂತರ, ಗಾಂಧೀಜಿಯವರೊಡನೆ ಮಾತಾಡಲು ವಾರ್ಧಾಕ್ಕೆಬಂದಿಗು.

ಬ್ರಿಟಿಷ್ ಧೊರೆಗಳ ಸೋದರರಾದ ಡ್ಯೂಕ್ ಆಫ್ ಗ್ಲಾಸೆಸ್ಟರರವರು ಕಳೆದ ವಾರ ಬೆಂಗಳೂರು ಮೈಸೂರುಗಳನ್ನು ಸಂದರ್ಶಿಸಿ ಯುದ್ಧ ತಯಾರಿಯ ಬಗ್ಗೆಸಮಾಧಾನ ವ್ಯಕ್ತಪಡಿಸಿದರು.

೨೫ ಲಕ್ಷ ಸ್ವಯಂಸೇವಕರು

"ಕ್ರಿಪ್ಸ - ಕಾಂಗ್ರೆಸ್ ಸಂಧಾನವು ಯಶಸ್ವಿಯಾಗಿದ್ದರೆ-ಹಿಂದು ಸ್ತಾನ ರಕ್ಷಣೆಗಾಗಿಯೂ, ಜಪಾ-ನರಕ್ಷಿದುರಿಸುವ ಉದ್ದೇಶವೂ, ಕಾವು ೨೫ಲಕ್ಷ ಸ್ವಯಂ ಸೇವಕರ ಸೈನ್ಯವನ್ನು ರಚಿಸುತ್ತಿದ್ದರೆಂದು ಕ್ರಿಪ್ಸರಿಗೆ ತಿಳಿಸಲಾಯಿತು. ಆದರೆ ಅವರು ನಮ್ಮ ಕರ್ತುಗಳನ್ನೊಪ್ಪಲಿಲ್ಲ"

ಹೀಗೆಂಬುದಾಗಿ ಪಂಡಿತ ಜವಹರಲಾಲರು ಅಲಿಘರ ರಾಜಕೀಯ ಸಭೆಯಲ್ಲಿ ತಿಳುಹಿಸಿದರೆಂದು ನ್ಯಾಷನಲ್ - ಹೇರಾಲ್ಡ ಪತ್ರಿಕೆಯು ಬರೆದಿದೆ.

ಬಂಗಾಲದ ಧಾಕಾನಗರದಲ್ಲಿ ಈಗ ಶಾಂತತೆಯು ನೆಲೆಸಿರುವ ಕಾರಣ ಅಲ್ಲಿಂದ ಮಿಲಿಟರಿಯನ್ನು ಹಿಂದೆಗೆಯಲಾಗಿದೆ.

ವೈಸ್ರಾಯಿ ಕೌನ್ಸಿಲ ಹೊಸ ಸದಸ್ಯರು.

ವೈಸ್ರಾಯರ ಕಾರ್ಯಕಾರಿಣೀ ಸಮಿತಿಗೆ ಈ ಕೆಳಗಣ ಹೊಸ ಸದಸ್ಯರು ನಿಯಮಿಸಲ್ಪಟ್ಟಿರುವರು:—

ಸರ್ ಶಿ. ಪಿ. ರಾಮಸ್ವಾಮಿ ಅಯ್ಯರ್, ಬಿ. ಆರ್. ಅಂಬೇಡ್ಕರ್, ಸರ್ ಐ. ಶಿ. ಬೆಂಥಾಲ, ಸರ್ ಜೋಗೇಂದ್ರಸಿಂಹ, ಜೆ. ಪಿ. ಶ್ರೀನಿವಾಸನ, ಸರ್ ಮಹಮ್ಮದ್ ಉಸ್ಮಾನ.

ತಮ್ಮ ಆರೋಗ್ಯವು ಸರಿಯಾಗಿಲ್ಲದ ಕಾರಣ ಕಾಂಗ್ರೆಸ್ ಕಾರ್ಯಕಾರಿಣೀ ಸಮಿತಿಗೆ ಭೂಲಾಭಾಯಿದೇಸಾಯಿಯವರು ರಾಜೀನಾಮೆ ಇತ್ತಿರುವರು.

ಲಕ್ನೋದ ನ್ಯಾಷನಲ್ ಹೆರಾಲ್ಡ ಪತ್ರಿಕೆಗೆ ಸರಕಾರವವರು ಜಾಮೀನು ಕೇಳಿದ್ದರಿಂದಲೂ ಆಪತ್ರಿಕೆಯ ಸಂಪಾದಕರನ್ನು ಶಿಕ್ಷಿಸಿದ್ದರಿಂದಲೂ ಪಂಡಿತ ಜವಹರಲಾಲರು ಆ ಪತ್ರಿಕೆಗೆ ಸಹಾಯ ಕೋರಿದ್ದರು ಇದುವರೆಗೆ 42 ಸಾವಿರ ರೂ. ಸಹಾಯ ದ್ರವ್ಯವು ಬಂದಿದೆ.

ಭಾರತದಲ್ಲಿ ಸಕ್ಕರೆಯು ಸಾಕಷ್ಟಿದೆ

20ನೆಯ ಜೂನ್ 1942 ನೆಯ ದಿನ ಸಕ್ಕರೆಯ ಕಾರ್ಖಾನೆಗಳಲ್ಲಿ ಮಾರಲ್ಪಟ್ಟ ನುತ್ತು ಮಾರದೆ ಇರುವ ಸಕ್ಕರೆಯ ಸಂಗ್ರಹ 4,24,000 ಟನ್‌ಗಳಷ್ಟಿದೆ. ಕಾರ್ಖಾನೆಗಳಲ್ಲಿರುವ ಮತ್ತು ವರ್ತಕರು ಸಂಗ್ರಹಿಸಿಟ್ಟಿರುವ ಸಕ್ಕರೆಯು ಮುಂದಿನ ವರ್ಷದವರೆಗೂ ಸಾಕಾಗುವದೆಂದು ಹೇಳಲಾಗಿದೆ. ಅಂದರೆ ವರ್ತಕರು ಬಚ್ಚಿಡದಂತೆ ಮಾಡಬೇಕು. ಸರ್ಕಾರದವರು ನಿಶ್ಚಯಿಸಿರುವ ಬೆಲೆಯು 80 ದಿನಗಳ ಸೀಸನ್ ಲೆಕ್ಕದ ಪ್ರಕಾರವಿದೆ. ಬರುವ ವರ್ಷದ ಪರ್ಯಾಯದಲ್ಲಿ ಬೇಕಾದ ಹಾಗೆ ಸಕ್ಕರೆ ತಯಾರಿಸಲು ಅವಕಾಶವುಂಟು. ಸಕ್ಕರೆಯ ಬೆಲೆಯು ಅಧಿಕವಾಗುವುದೆಂಬ ಊಹೆಗಳು ನಿರಾಧಾರವಾಗಿವೆ.

ಸೆಬಸ್ಟಪೋಲ ಪತನ

ಕ್ರೀಮಿಯಾದ ಈಬಂದರು ಬಹಳ ದಿನಗಳ ಮುತ್ತಿಗೆಯ ನಂತರ ಜರ್ಮನರ ವಶವಾಯ್ತೆಂದು ಜರ್ಮನ ಸುದ್ದಿಯು ಹೇಳುತ್ತವೆ. ಜರ್ಮನರು ಅಪಾರ ತ್ಯಾಗ ಮಾಡಿ ಬಹುಜನರ ಸಂಹಾರಕ್ಕೆ ಕಾರಣರಾದರು.

ರಷ್ಯನರ ದೇಶಪ್ರೇಮ

ರಷ್ಯಾದೇಶದಲ್ಲಿ ಕಳೆದ ಒಂದು ವರ್ಷದಲ್ಲಿ 45 ಲಕ್ಷ ಯೋಧರು ಯುದ್ಧರಂಗದಲ್ಲಿ ಸತ್ತಿರಬಹುದೆಂದು ಅಂದಾಜು ಮಾಡಲಾಗಿದೆ. ದಿನ 1ಕ್ಕೆ 12 ಸಾವಿರ ಜನರು ಮಾತೃಭೂಮಿಗಾಗಿ ಬಲಿದಾನ ಮಾಡಿದ್ದಾರೆ, ಲಕ್ಷಾಂತರ ಜನರು ಜರ್ಮನ ಕೈದಿಗಳಾಗಿದ್ದರೂ ಜರ್ಮನರು ಹೇಳುವ ಪ್ರಕಾರಕ್ಕೆ 45 ಲಕ್ಷ ಜನರು ಕೈಸೆರೆಯಾಗಿಲ್ಲ.

ಈಜಿಪ್ತಿನಲ್ಲಿ ಘನಘೋರ ಸಂಗ್ರಾಮ.

ಸೆಸಾ ಮೆಟ್ರೂಹದ ಪೂರ್ವಕ್ಕೆ ಎಲ ಅಮೀನ ಭಾಗದಲ್ಲಿ ಬ್ರಿಟಿಷ ಮತ್ತು ಜರ್ಮನ್ ಸೈನ್ಯಗಳ ಮಧ್ಯೆ ಭಯಂಕರ ಸಂಗ್ರಾಮವು ಸಾಗಿದೆ. ಈ ಕೇಂದ್ರವು ಅಲೆಕ್ಸಾಂಡ್ರಿಯಾಕ್ಕೆ 70 ಮೈಲಿ ದೂರದಲ್ಲಿದೆ. ಎಲ್ ಅಮೀನವು ತಮಗೆ ಸೇರಿತೆಂದು ಶತ್ರುಗಳು ಹೇಳುತ್ತಾರೆ. ಅದು ದೃಢಪಟ್ಟಿಲ್ಲ.

ಬರ್ಚಿಲರಿಗೆ ವಿಜಯ

ಲಿಬ್ಬಾದ ಯುದ್ಧದಲ್ಲಿ ತೊಡಗಿದ ಸೈನಿಕರು ಸರಿಯಾಗಿ ಶಿಕ್ಷಣ ಹೊಂದಿರಲಿಲ್ಲವೆಂದೂ ಅವರಿಗೆ ಒಳ್ಳೆಯಶಸ್ತ್ರಗಳನ್ನು ಕೊಡಲಿಲ್ಲವೆಂದೂ ಚರ್ಚಿಲರಿಗೆ ಸಂರಕ್ಷಣ ಖಾತೆಯನ್ನು ತಪ್ಪಿಸಬೇಕೆಂದೂ ಕಾರಣಗಳನ್ನು ಸೂಚಿಸಿ ಚರ್ಚಿಲರಮೇಲೆ ಅವಿಶ್ವಾಸ ನಿರ್ಣಯವನ್ನು ಸರ್ ಜಾನ್ ವಾರ್ಡಲಾಮಿಲ್ನೆಯವರು ತಂದಿದ್ದರು. ಬಹಳ ಚರ್ಚೆಯನಂತರ 25 ವಿರೋಧ 475 ಮತಗಳಿಂದ ಅದು ಸೋತಿತು.

ಮಿತ್ರಪಕ್ಷದ ಜಡಗುಗಳ ನಿರ್ಮಾಣ.

[ತಯಾರಿಗಿಂತಲೂ ನಾಶವಧಿಕ]

ಜೂನ್ ತಿಂಗಳಲ್ಲಿ 66 ಸಾರಿಗೆ ಹಡಗುಗಳೂ - ಟ್ಯಾಂಕುಗಳೂ ಅಮೆರಿಕೆಯಲ್ಲಿ ತಯಾರಾದವು. ಆದರೆ ನಾವಿಕಾಕಾಪೆಯ ಹೇಳಿಕೆಯಪ್ರಕಾರಕ್ಕೆ ನಿರ್ಮಾಣಕ್ಕಿಂತಲೂ, ನಾಶವು ಅಧಿಕವಾಗಿದೆ. ಅಂದರೆ ಶತೃಗಳು ಮುಳುಗಿಸುವ ಹಡಗುಗಳ ಸಂಖೆಯೇ ಹೆಚ್ಚಾಗಿದೆ. ಅಡ್ಮಿರಲ್ ಎಕರಿಯವರು ಹೇಳುವಪ್ರಕಾರಕ್ಕೆ ಪರ್ಲಬಂದರದಲ್ಲಿ ಆದ ಜಪಾನಿ ದಾಳಿಯನಂತರ ಶೇ॥ 450 ಪ್ರಕಾರ ತಯಾರಿಯ ಕಾರ್ಯವು ನಡೆದಿದೆ.

ಬಳ್ಳಾರಿ ಪೇಟೆ ಧಾರಣೆ

3-7-42 ಶುಕ್ರವಾರ

ಭಂಗಾರ ತೊಲ 1ಕ್ಕೆ	51-12-0
ಸಾವರಿನ್	38-8-0
ಬೆಳ್ಳಿ 100 ತೊಲ ರೂ.	86.0 0
ಅರಳಿ ಮುಂಗಾರಿ 12 ಮಣಕ್ಕೆ	58-0-0
ಅರಳಿ ಫಾರಂ ...	112-0-0
ಅಕ್ಕಿ 1 ರೂ ಗೆ	4 ರಿಂದ 5 ಸೇರು
ಬೇಳೆ ,,	4 ,,
ಗೋಧಿ ,,	3½ ,,
ಜೋಳ ,,	11 ,,
ನವಣೆ ,,	15½ ,,
ಸಜ್ಜೆ ,,	9 ,,
ನೆಲಗಡಲೆ	1-9-6
ಸಕ್ಕರೆ ವೀಸ	0-9-0
ಬೆಲ್ಲ	20 ರೂ.
ಚಿಮ್ಮಿ ಎಣ್ಣೆ	4-12-0

ಜಿಲ್ಲಾ ವಾರ್ತೆಗಳು.

ಬಳ್ಳಾರಿ.

ಆಹಾರ ಸಾಮಗ್ರಿಗಳ ಅಂಗಡಿ

ಬಳ್ಳಾರಿ ಜನತೆಗೆ ಸರಿಯಾದ ದರದ ದಲ್ಲಿ ಆಹಾರ ಸಾಮಗ್ರಿಗಳನ್ನೊದಗಿಸಲು ಕೆಂಟ್ರಲ್ ಕೋ-ಆಪರೇಟಿವ್ ಸ್ಟೋರ್ಸ ಎಂಬ ಸಂಸ್ಥೆಯ ಸಾಧಾರಣ ಪ್ರಾರಂಭೋತ್ಸವವನ್ನು ಕಳೆದ ವಾರ ಕಲೆಕ್ಟರರು ನೆರವೇರಿಸುತ್ತಾ ಯುದ್ಧಕಾಲದಲ್ಲಿ ಆಹಾರಸಾಮಗ್ರಿಗಳನ್ನು ಸರಿಯಾದ ಬೆಲೆಗೆ ಮಾರುವ ಅಗತ್ಯವನ್ನು ವಿವರಿಸಿದರು. ಡೆಪ್ಯೂಟಿ ರಿಜಿಸ್ಟ್ರಾರವರು ಇದಕ್ಕೆ ಪ್ರೋತ್ಸಾಹವನ್ನು ಕೋರುತ್ತಾ 50 ರೂ. ಬೆಲೆಯ ಷೇರುಗಳನ್ನು ತೆಗೆದುಕೊಳ್ಳಲು ಹೇಳಿದರು. ಅಂಗಡಿಯು ಇನ್ನು ಕೆಲ ದಿನಗಳಲ್ಲಿ ತೆರೆಯಲ್ಪಡುವುದು.

ಎ. ಐ. ಶಿ. ಶಿ. ಇನ್‌ಸ್ಪೆಕ್ಟರ್.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಇನ್‌ಸ್ಪೆಕ್ಟರರಾದ ನಂದಕೇಲಿಯಾರ್‌ರವರು 5ನೆಯ ತಾ|| ಬಳ್ಳಾರಿಯನ್ನು ಸಂದರ್ಶಿಸಿ ಕಾಂಗ್ರೆಸ್ ಕೆಲಸಗಾರರೊಡನೆ ವಿಚಾರವಿನಿಮಯ ಮಾಡಲಿರುವರು.

ಬೋರ್ಡು ಪ್ರಾಥಮಿಕ ಶಾಲೆಗಳ ಪಠ್ಯಪುಸ್ತಕಗಳನ್ನು ಮತ್ತೆ ಬದಲಾಯಿಸಿದರು? ಇದಕ್ಕೆ ಕಾರಣರಾರು?

ಬಳ್ಳಾರಿಜಿಲ್ಲೆಯ ಬೋರ್ಡು ಪ್ರಾಥಮಿಕ ಪಾಠಶಾಲೆಗಳು ಬಿಸಲುಕಾಲದ ರಜಾನಂತರ ಮೇ ತಿಂಗಳಲ್ಲಿ ಪ್ರಾರಂಭವಾದವು. ಉಪಾಧ್ಯಾಯರಿಗೆ ಯಾವ ಸೂಚನೆಗಳೂ ಇಲ್ಲದಕಾರಣ ಕಳೆದವರ್ಷದ ಪಠ್ಯಪುಸ್ತಕಗಳನ್ನೇ ಬಾಲಕರಿಗೆ ಕೊಡಿಸಿದರು. 1½ ತಿಂಗಳು ಶಾಲೆಯು ಪ್ರಾರಂಭವಾಗಿ ಪಾಠಗಳು ನಡೆದನಂತರ ಪಠ್ಯಪುಸ್ತಕಗಳನ್ನು ಬದಲಾಯಿಸಲಾಗಿದೆಯೆಂದು ಸೂಚನೆಬಂದಿದೆ.

ಕೆಲಗ್ರಂಥಕರ್ತರನ್ನಾಗಲಿ ಪುಸ್ತಕಾಲಯಗಳ ಮಾಲೀಕರನ್ನಾಗಲಿ ಪ್ರೀತಿಗೊಳಿಸಲು ಅವರ ಲಾಭದ ಹಿತದ ದೃಷ್ಟಿಯಿಂದ ಈ ಆಜ್ಞೆಯು ಹೊರಟಿರಬಹುದೆಂದು ಊಹಿಸಲಾಗಿದೆ. ಇದು ಯುದ್ಧದಕಾಲ. ಹಳ್ಳಿಗರಿಗೇಕೆ ಪಟ್ಟಣಿಗರೂ ಕೂಡ ಆರ್ಥಿಕಸ್ಥಿತಿಗೆ ಒಳಗಾಗಿರುವರು. ಇದರಿಂದ ತಂದೆತಾಯಿಗಳಿಗೂ ಪೋಷಕರಿಗೂ ಆಪತ್ತು ಬಂದಂತಾಗಿದೆ. ಒಡವರಂತೂ ಪುಸ್ತಕಕೊಡಿಸದೆ ತನ್ನ ವಾಕ್ಯಗಳನ್ನು ಬಿಡಿಸುನರು. ಇದಕ್ಕೆ ಕಾರಣರ್ಯಾರೋ ಗೊತ್ತಿಲ್ಲ ಇವನ್ನೆಲ್ಲಾ ಆಲೋಚಿಸಿ ಜಿಲ್ಲಾಬೋರ್ಡು ಅಧ್ಯಕ್ಷರು ಸಹಾಯ ಒದಗಿಸಬೇಕು.

ಒಬ್ಬ ಪೋಷಕ.

ಹಣ ಸಂಪಾದನೆಗಾಗಿ ಮೋಸದ ಮಾರ್ಗಗಳು.

ಬಳ್ಳಾರಿ ನಗರಕ್ಕೆ ಕಳೆದ ತಿಂಗಳ ಉತ್ತರಾರ್ಧದಲ್ಲಿ 18—20 ವರ್ಷ ವಯಸ್ಸಿನ ತರುಣಿಯೋರ್ವಳು ಬಂದು, ಮದ್ರಾಸ್ ಹೋಟೆಲಿನಲ್ಲಿ ಕೆಲವಿನಗಳಿದ್ದಳು. ಜಟ್ಟಾದಲ್ಲಿ ಕೆಲ ಮುಖ್ಯರ ಮನೆಗೆ ಹೋಗಿ 'ತಾನು ಕಲ್ಕತ್ತೆಯ ಹತ್ತಿರ ಮೋಹನಪುರದ ಅನಾಥ ಶರಣಾಲಯದ ಸರವಾಗಿ ಬಂದಿರುವುದಾಗಿಯೂ, ಚಂದಾಗಳಿಂದ ಸಹಾಯಮಾಡಬೇಕೆಂತಲೂ ತಿಳಿಸುತ್ತಾ ಹಣ ಸಂಗ್ರಹ ಮಾಡಲಿಕ್ಕೆ ಪ್ರಾರಂಭಿಸಿದಳು. ಈಕೆಯ ಚಲನ, ವಲನ, ರೀತಿ - ನೀತಿಗಳಿಂದ ಪೋಲೀಸರಿಗೆ ಅನುಮಾನ ಹುಟ್ಟಿ ವಿಚಾರಣೆಗಾರಂಭಿಸಿದರು. ಈ ತರುಣಿಯು ಒಂದೊಂದೂರಲ್ಲಿ ಒಂದೊಂದು ಹೆಸರಿಟ್ಟುಕೊಂಡು, ಸಂಚರಿಸುವುದೂ, ಚಂದಾ ಪಟ್ಟಿಯಲ್ಲಿ ತಿದ್ದಿ ಕೊಟ್ಟಹಣಕ್ಕಿಂತ ಹೆಚ್ಚು ತೋರಿಸುವುದೂ, ಮೋಹನಪುರದಲ್ಲಿ ಆಶ್ರಮವಿಲ್ಲದಿರುವುದೂ ಗೊತ್ತಾಯಿತು. ಪೋಲೀಸರ ನಿಗಾ ತಪ್ಪಿಸಿ, ಹೋಗಲು ಪ್ರಯತ್ನಿಸಿದಾಗ, ಮತ್ತೆ ಕರೆತಂದರು. ಕೊನೆಗೆ ಈ ತರುಣಿಯ ಜವಾಬ್ದಾರಿಯನ್ನು ಮುದ್ರಾಸಿನಿಂದ ಬಂದ ಓರ್ವ ಮಹಿಳೆಯು ವಹಿಸಿಕೊಂಡು ಅನಂತಪುರದ ಸೇವಾಸದನಕ್ಕೆ ಸಾಗಿಸಲ್ಪಟ್ಟಳು.

ಸುಂದರಿಯರಾದ ಯುವತಿಯರೂ ಇಂಥಾ ಕಾರ್ಯವಲ್ಲಿ ಪ್ರವೇಶಿಸಿರುವುದು ಶೋಚನೀಯವಾಗಿದೆ.

ಶಾನವಾಸಪುರ ಉಪಾಧ್ಯಾಯರ ಸಂಘ

ಹೋದ ತಿಂಗಳು 27 ನೆಯ ತಾ ಮೀಟಿಂಗಿನಲ್ಲಿ 20 ಮಂದಿ ಉಪಾಧ್ಯಾಯರ ಪೈಕಿ 19 ಜನ ಉಪಾಧ್ಯಾಯರು ಹಾಜರಾಗಿ, ಕರೂರು ಮತ್ತು ಸಿರಿಗೆರೆ ಕೇಂದ್ರಗಳನ್ನು ತೆಗೆದ ಕಾರಣ ಆಗಿರುವ ತೊಂದರೆಯನ್ನು ಚರ್ಚಿಸಿ, ಅವುಗಳನ್ನು ಪುನಃ ಸ್ಥಿರಪಡಿಸಲು ವಿದ್ಯಾಧಿಕಾರಿಗಳನ್ನು ಬೇಡುವ ತೀರ್ಮಾನವಾಯಿತು. ಜಿಲ್ಲಾ ಪ್ರಾಥಮಿಕೋಪಾಧ್ಯಾಯರ ಸಂಘವು ಮುಂಜೂರಾದರೆ, ಇಂಥಾ ಪ್ರಶ್ನೆಗಳ ತೊಡಕನ್ನು ಸುಲಭವಾಗಿ ಬಿಡಿಸಬಹುದು. ಸಂಪಾದಕ)

ಪಂಚಾಯ್ತಿ ಬೋರ್ಡುಗಳು

ಉಪಸಮಿತಿ

ಪಂಚಾಯ್ತಿ ಬೋರ್ಡುಗಳ ಸುಧಾರಣೆಗಾಗಿ ಸರ್ಕಾರದವರು ಮಾಡಿದ ಶಾಸನದಲ್ಲಿ ಬದಲಾವಣೆಗಳನ್ನು ಮಾಡಲು ಉಪಸಮಿತಿಯು ಇದುವರಿವಿಗೆ 7 ಸಲ ಕೂಡಿದೆ. ಆಗಷ್ಟಿನಲ್ಲಿ ಕೊನೆಯಸಲ ಕಲೆತು ರಿಪೋರ್ಟಿಗೆ ತಮ್ಮ ದಸ್ಕತ್ತುಗಳನ್ನು ಹಾಕಿ ಪೂರ್ಣ ಮಾಡುವರು.

1) ಪಂಚಾಯ್ತಿ ಬೋರ್ಡುಗಳಿರುವ ಸ್ಥಳಗಳಲ್ಲಿ ನೂತನ ತರಗತಿಪರೀಕ್ಷೆಗಳನ್ನು ನಡೆಸಲು ಒಪ್ಪಿಸಿ ಜಿಲ್ಲಾ ಬೋರ್ಡಿನವರಿಗೆ ಕೊಡುವ ಗ್ರಾಂಟನ್ನು ಪಂಚಾಯಿತಿಗಳಿಗೆ ಕೊಡುವುದು

2) ಪ್ರತಿಯೊಂದು ವಿಚಾರಣೆಗಾಗಿ ಅಧಿಕಾರಿಗಳಿದ್ದು ಪಂಚಾಯಿತಿ ಬೋರ್ಡುಗಳ ಆಡಳಿತ ವನ್ನೆರೆ ನೋಡಿಕೊಳ್ಳುವರು. ಪ್ರಾಂತ್ಯಕ್ಕಾಗಿ ರೆಜಿಸ್ಟ್ರಾರ್ ಜನರಲ್ ಆಫ್ ಪಂಚಾಯತ್ಸ ಎಂಬ ಅಧಿಕಾರಿಗಳಿದ್ದು ಪ್ರಾಂತ್ಯದಲ್ಲೆಲ್ಲಾ ವಿಧಿನಿಯಮಗಳು ಸಮನ್ವಯವಾಗಿ ಲಗಾಮಾಗುವಂತೆ ನೋಡಿಕೊಳ್ಳುವುದು.



ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓಸುವದಕ್ಕೂ, ದೂರದೃಷ್ಟಿಗೂ, ಕನ್ನಡಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿಯಾದ ಕ್ರೂಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ. ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಅಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು.

ಜೆಜ್ ಎಸ್. ಅಂಡ್ ಸನ್ಸ್ ಬಳ್ಳಾರಿ

3) ಭೂತೆರಿಗೆಯಲ್ಲಿ ರೂಪಾಯಿಗೆ ಕಾಲಾಣೆ ವಿಧಿಸುವಿಕೆ, ಮತ್ತು ಮನೆ ತೆರಿಗೆ ವಾಹನಗಳ ತೆರಿಗೆ ವಗೈರೆ ತೆರಿಗೆಗಳ ವಿಧಿಸುವಿಕೆಯನ್ನು ಪಂಚಾಯ್ತಿ ಬೋರ್ಡುಗಳ ಇಷ್ಟಕ್ಕೇ ಬಿಡಲಾಗಿದೆ. ಈ ತೆರಿಗೆ ಹಣವನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿನವರೇ ವಸೂಲಿಮಾಡಬೇಕೆಂದೂ ವಸೂಲಿಮಾಡಲು ಗ್ರಾಮ ಕರಣಂರವರಿಗೆ ರೂಪಾಯಿಯಲ್ಲಿ ಒಂದಾಣೆ ಕಮಿಷನ್ ಕೊಡಬೇಕೆಂದೂ ಸೂಚನೆ.

4) 5000 ರೂ. ಆದಾಯ ಅಥವಾ ಅದಕ್ಕಿಂತ ಹೆಚ್ಚಿನ ಪಂಚಾಯ್ತಿಗೆ ಸರ್ಕಾರದ ಪ್ರತೇಕ ಶಿಕ್ಷಣ ಹೊಂದಿರುವ ಎಕ್ಸಿಕ್ಯೂಟಿವ್ ಆಫೀಸರುಗಳು ಇದ್ದೇತೀರಬೇಕು.

5) ಹಳ್ಳಿಯನ್ನು ವಾರ್ಡುಗಳಾಗಿ ವಿಂಗಡಿಸಿ ಅವರ ಸೃಜನ ಪ್ರಕಾರಕ್ಕೆ ಒಬ್ಬರು ಅಥವಾ ಇಬ್ಬರು ಸದಸ್ಯರು ಇರತಕ್ಕದ್ದು. ಚುನಾವಣೆಯು ಶಾಸನಸಭೆಗಳ ಚುನಾವಣೆಯಂತಿದ್ದು ಹರಿಜನ – ಮುಸಲ್ಮಾನ ಮತ್ತು ಕ್ರೈಸ್ತಿಯನ್ನರಿಗೆ ಪಂಚಾಯ್ತಿಯಲ್ಲಿ ಸ್ಥಾನಗಳನ್ನು ಕಾದಿರಿಸಬೇಕು.

ಸರ್ಕಾರಕ್ಕೆ ಬರುವ ತೆರಿಗಳು ಕಳುಹಿಸಲ್ಪಡಬೇಕಾದ ಸಿಫಾರ್ಸುಗಳಲ್ಲಿ ಇವೇ ಮುಖ್ಯವಾದವು. ಸರ್ಕಾರದವರು ಇವುಗಳನ್ನು ಅಂಗೀಕರಿಸುವವರೆಲ್ಲಿ ಸಂದೇಹವಿಲ್ಲ. ಈ ಯೋಜನೆಯ ಪ್ರಕಾರಕ್ಕೆ ಸ್ಥಾಂತದಲ್ಲಿ ಸುಮಾರು 30 ರಿಂದ 40 ಸಾವಿರ ಪಂಚಾಯಿತಿಗಳೇರ್ಪಡುತ್ತವೆ

ಕತ್ತು ಮುರವಣಿ - ರಾವಿಹಾಳು ಹೊಸ ರಸ್ತೆ

ಸರಕಾರದವರು ಈಗ ಯೋಚಿಸಿರುವ ಪ್ರಕಾರ ರಸ್ತೆಯನ್ನು ಹಾಕಿಸುವುದರಿಂದ (ಸ. ನಂ 207,206,202,201)ಕತ್ತು ಮುರವಣಿ ಹೊಲಗಳು ತುಂಡು ತುಂಡಾಗಿ ಬಡ ರೈತರಿಗೆ ಬಹಳ ನಷ್ಟವುಂಟಾಗುತ್ತದೆ. ಈ ಕಾರಣ ಸರಕಾರದವರು ಮೊನಲು ಆಲೋಚಿಸಿದ ಪ್ಲಾನು ಪ್ರಕಾರ 208-210,212,215 ಮತ್ತು 216 ಸರ್ವೆ ನಂಬರುಗಳಲ್ಲಿ ರೋಡು ಹಾಕಿಸಬೇಕೆಂದು ರೈತರು ಕೋರುತ್ತಾರೆ ಕತ್ತುಮುರವಣಿ ರೈತರು ಒಳ್ಳಾರಿಗೆ ಬಂದು ಎಂಜಿನಿಯರ್ ರವರಿಗೆ ಅರ್ಜಿಕೊಟ್ಟಿರುತ್ತಾರೆ.

ಜಿಲ್ಲೆಯ ಆರೋಗ್ಯ

ಬಳ್ಳಾರಿ ಜಿಲ್ಲೆಯ 53 ಹಳ್ಳಿಗಳಲ್ಲಿ 256 ಜನರಿಗೆ ಕಾಲರಾತಗಲಿ, 112 ಜನರು ಸತ್ತಿರುವರು. 14 ಹಳ್ಳಿಗಳಲ್ಲಿ ಸೈಲಿ ಬೇನೆಯು 15 ಜನರಿಗೆ ತಗಲಿ, 4ಜನರು ಸತ್ತಿರುವರು. ನಿವಾರಣೋಪಾಯಗಳನ್ನು ಕೈಗೊಳ್ಳಲಾಗಿದೆ.

'ರಾಯಲ್' ನಲ್ಲಿ 2- 7—42 ನೆಯ ಗುರುವಾರದಿಂದ
'ಕಸೌಟಿ' ಎಂಬ ಉರ್ದೂ ವಾಕ್ಚಿತ್ರ,
ನಯನ, ಮನೋಹರ ದೃಶ್ಯಗಳು.

ಆಹಾರ ಧಾನ್ಯಗಳನ್ನು ಬೆಳೆಯುವ ರೈತರಿಗೆ ಸರ್ಕಾರದ ಸಹಾಯ.

ಮದ್ರಾಸ್ 30

1349-50 ಫಸಲಿಗಳಲ್ಲಿ ಬೆಳೆ ಇಲ್ಲದ ಸರ್ಕಾರಿ ಭೂಮಿ ಫಾರೆಸ್ಟ್ ಭಾಗದಿಂದ ಸರ್ಕಾರಕ್ಕೆ ಬಂದ ಭೂಮಿ ಮತ್ತು ತೆರಿಗೆ ಹಾಕದ ಇತರ ಬಂಜರು ಭೂಮಿಗಳಲ್ಲಿ ರೈತರು 1351-1352 ಮತ್ತು 1353 ನೆಯ ಫಸಲಿಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಲು ಸಹಾಯ ಕೊಡುವ ಉದ್ದೇಶ ಅವುಗಳಿಗೆ ಈ ಮೂರು ವರ್ಷಗಳು ತೆರಿಗೆ ಇಲ್ಲವೆಂದು ಸರ್ಕಾರದವರು ಈಗಾಗಲೇ ವಿಧಿಸಿದ್ದರು. ರೈತರು ಅಂಥಾ ಭೂಮಿಗಳನ್ನು ಸಾಗುಮಾಡಲು ಗೊಬ್ಬರ ಗೂಡಿಗಾಗಿ ಹಸನುಮಾಡಲಿಕ್ಕೆ ಬಹಳ ವ್ಯಯಮಾಡಬೇಕಾಗುತ್ತದೆಂಬ ಮಾರು ಸರ್ಕಾರಕ್ಕೆ ಬಂದಿತು. ಈ ಕಾರಣ ಸರಕಾರದವರು 1349-50ರಲ್ಲಿ ಬೆಳೆ ಇಲ್ಲದ ಭೂಮಿಗಳನ್ನು ಫಸಲು 1 52-1354 ರಲ್ಲಿ ಸಾಗುಮಾಡುವ ರೈತರ ಹೆಸರಲ್ಲಿ ಪಟ್ಟಾ ಮಾಡಲು ಉತ್ತರ ಮಾಡಿದ್ದಾರೆ. ಪಟ್ಟಾಮಾಡಬೇಕಾದ ಹೊಲವು ಮೊದಲ ಭಾಗಕ್ಕೆ ಸೇರಿರಬಾರದು ವಿಧಿ ನಿಯಮಗಳನ್ನು ಮೀರಬಾರದು. ಮತ್ತು ಹಂಗಾಮ ಪಟ್ಟಾಮಾಡುವ ಹೊಲದಲ್ಲಿ ಆಹಾರ ಧಾನ್ಯಗಳನ್ನೇ ಬೆಳೆಯಬೇಕು.

ಭವಾಲಿ ಸನ್ಯಾಸಿ ಮೊಕದ್ದಮೆ.

ಅತ್ಯಂತ ಆಶ್ಚರ್ಯಕರವೂ, ವಿಚಿತ್ರವೂ ಆದ ಭವಾಲಿ ಸನ್ಯಾಸಿ ಮೊಕದ್ದಮೆಯಲ್ಲಿ ರಾಣಿ ಬಿಭಾವತಿಯು ಲಂಡನ್ನಿನ ಪ್ರೀವಿ ಕೌನ್ಸಿಲ್‌ಗೆ ಅಪೀಲುಮಾಡುವ ಜಪ್ಪಣೆ ಯಾಗಲಿಲ್ಲ. ರಾಣಿಯವರೇ ಈ ಕಾರ್ಯಕ್ಕಾಗಿ ಲಂಡನ್ನಿಗೆ ಹೋಗಲಿರುವರು.

ಒರಿಸ್ಸಾದ ಹಿಂದಿನ ಮಂತ್ರಿಗಳಾದ ಶ್ರೀ ವಿಶ್ವನಾಥದಾಸರು ಇಂಡಿಯಾ ರಕ್ಷಣಾ ಶಾಸನ ಪ್ರಕಾರ ಬಂಧಿಸಲ್ಪಟ್ಟಿರುವರು. ಕಾಂಗ್ರೆಸ್ ಅಧ್ಯಕ್ಷರು ಒರಿಸ್ಸಾ-ಸರಕಾರದ ದಮನ ನೀತಿಯನ್ನು ಖಂಡಿಸಿರುವರು.

Visit Royal Cafe
Near Royal Picture Pala: e
ROYAL is ROYAL

ಎಂ. ಎಸ್. ಸುಬ್ಬಣ್ಣನವರ ಗ್ರಂಥಗಳು.

ಕನ್ನಡ ಭಗವದ್ಗೀತೆ	೦—೮—೦
ಕನ್ನಡ ದರೋಪಸಪತ್ತುಗಳು	೦—೪—೦
ವಿವಾಸಭವ ಬೋಧೆ	೧—೮—೦
ಸುಮತಿ ಚರಿತೆ	೦—೧—೬

ಅಂಚೆ ವೆಚ್ಚ ಬೇರೆ ಪುಸ್ತಕ ವ್ಯಾಪಾರಿಗಳಿಗೂ ಹೆಚ್ಚು ಪುಸ್ತಕ ಕೊಳ್ಳುವವರಿಗೂ ಧಾರಾಳವಾದ ಕಮೀಶನ್

ಕಾಲವ ಸುಬ್ಬಣ್ಣ, ಮಜೀಂಟು, ಬಳ್ಳಾರಿ.

" ತಿಮ್ಮಣ್ಣನವರ " ಶಾಶ್ವತ ನಿಧಿ.

"ತಿಮ್ಮಣ್ಣ"ನವರ ಶಾಶ್ವತ ನಿಧಿಯು ಪ್ರಾರಂಭವಾಗಿ ಇಂದಿಗೆ ಸುಮಾರು ವಂದೂವರೆ ವರ್ಷವಾದವು. ಈ ಅವಧಿಯಲ್ಲಿ ಕೆಳಗೆ ಕಾಣಿಸಿದ ಮೇರೆಗೆ ವ್ಯವಹಾರಗಳು ನಡೆದಿವೆ. ನಿಧಿಯು, ರೂಪಗೊಂಡ ವರ್ಷದಲ್ಲಿಯೇ " ಹಳ್ಳಿಯ ಜೀವನದ ಸೊಗಸು " ಎಂಬ ವಿಷಯವನ್ನು ಸ್ಪರ್ಧೆಗಾಗಿ ಆರಿಸಿ ಸ್ಪರ್ಧೆಯಲ್ಲಿ ಉತ್ತೀರ್ಣರಾದವರಿಗೆ ಪುಸ್ತಕ ರೂಪದಲ್ಲಿ ಬಹುಮಾನಗಳನ್ನು ಹಂಚುವ ಯೋಗ್ಯತೆಯನ್ನು ಪಡೆದುಕೊಂಡಿತು. ಆ ಯೋಗ್ಯತೆಯನ್ನು ಪಡೆಯಲು ನೆರವಾದ ಉದಾರಿಗಳೆಲ್ಲರಿಗೂ ನಿಧಿಯು ಚಿರರುಣಿಯಾಗಿದೆ, ಮತ್ತು ಆಶ್ವಾಶನವಿತ್ತು ಯಿದುವರೆವಿಗೂ ಹಣವನ್ನು ಸಾವತಿ ಮಾಡದಿರುವ ಚಂದಾದಾರರನ್ನು, ಆನಷ್ಟು ಬೇಗನೆ ತಮ್ಮ ದಾನವನ್ನು ಸಲ್ಲಿಸಬೇಕಾಗಿ ಬೇಡುತ್ತೆ.

ನಿಧಿಯ, ಹಿಂದಿನ ಮತ್ತು ಯಿಂದಿನ ಕಾರ್ಯಕರ್ತರೆಲ್ಲರು ತನುಮನಧನಗಳಿಂದ ಸಲ್ಲಿಸಿದ ಪರಾರ್ಥ ಬುದ್ಧಿಯ ಸೇವೆಯೇ, ನಿಧಿಯ ಸ್ವಕೃತದ ನೆಲೆಗೆ ಕಾರಣವಾಗಿದೆ. ಆವರೆಲ್ಲರೂ ಅಭಿನಂದನೀಯರು. ಮುಂದಾದರು ಎಲ್ಲಕಾರ್ಯಕರ್ತರು, ಎಂದಿನಂತೆ ದಕ್ಷತೆಯನ್ನು ವಹಿಸಿ, ಕೈಕೊಂಡ ಕಾರ್ಯವನ್ನು ಯಶಸ್ವಿಯಾಗಿ ಸಾಗಿಸುವರೆಂಬ ಭರವಸೆಯಿದೆ. ಸಕಾಲಕ್ಕೆ ಸಲಹೆಗಳನ್ನಿತ್ತು ಸಲಹಿದ "ಸಲಹೆಗಾರ"ರಿಗೆ ಕಾರ್ಯನಿರ್ವಾಹಕ ಮಂಡಳಿಯು ಕೃತಜ್ಞತೆಯ ಧನ್ಯವಾದಗಳನ್ನು ಅರ್ಪಿಸುತ್ತೆ.

"ತಿಮ್ಮಣ್ಣ"ನವರ ಸನ್ಮಾನದ ದೃಷ್ಟಿಯಿಂದಲೂ, ಅವರ ಜೀವನದ ಧ್ಯೇಯವಾಗಿರುವ ಕನ್ನಡದ ಏಳ್ಗೆಗೆ ಪ್ರೋತ್ಸಾಹನೆಯ ದೃಷ್ಟಿಯಿಂದಲೂ ಸ್ಥಾಪಿಸಲ್ಪಟ್ಟ ಯಾ ನಿಧಿಯು ಚಿರಕಾಲ ಬಾಳಿ ಬದುಳುವಂತೆ ಸರ್ವರೂ ಕೊಡುಗೈಯಿಂದ ಅತೀವ್ರದಿಸಬೇಕಾಗಿ ಬೇಡಿಕೆ.

(Sd) ಮುದನಂತ ಅನಂತಾಚಾರ್ಯ.
ಅಧ್ಯಕ್ಷರು.

1942ನೇ ಮಾರ್ಚ್ 31ನೇ ತೇದಿಯವರೆಗೆ ಆದ ಗಳಿಕೆ, ಬಳಿಕೆ, ಉಳಿಕೆಗಳ ನಿವರಗಳು.

ಜಮಾ

೧೫೮-೮-೦	ವಟ್ಟು ವಸೂಲಿ ಆದ ಚಂದಾ ಹಣ
೦-೪-೨	ಪ್ರಿಂಟಿಂಗಿನಲ್ಲಿ ಕಿಯಾಯಿತಿ
೦-೧೫-೦	ಸೇವಿಂಗ್ಸ ಬ್ಯಾಂಕಿನಲ್ಲಿನ ಹಣದ ಮೇಲಿನ ಬಡ್ಡಿ.

೧೫೯-೪-೦

ಖರ್ಚು

೫೯-೮-೦	ಮುದ್ರಣ ಖರ್ಚುಗಳು
೪-೦-೦	ಅಂಚೆಚೆಚ್ಚ
೧-೧೫-೦	ಕಾಗದ, ರಬ್ಬರಸ್ಟಾಂಪ ಯತ್ಯಾದಿ
೪-೩-೦	ಪ್ರವಾಸದ ಖರ್ಚು
೦ ೬ ೦	ಬ್ಯಾಂಕಿನ ಕಮೀಶನ್
೧-೦ ೦	ಹೆಚ್ಚಿನ ವಸೂಲಿಯಬಗ್ಗೆ ವಾಪಸು
೦ ೪-೦	ಬ್ಯಾಂಕಿನ ಪ್ರಾರಂಭಿಕ ಖರ್ಚು
೫-೦-೦	೧೯೪೧ನೇ ಸ್ಪರ್ಧೆಯ ಬಹುಮಾನಗಳ
೧೦೦-೦-೦	ಬಳ್ಳಾರಿ ಕೋಆಪರೇಟಿವ ಬ್ಯಾಂಕಿನಲ್ಲಿ ಶೇವಣಾತ
೭ ೦ ೦	ನಗದು ಹೊಸಪೇಟೆ ಕೋಆಪರೇಟಿವ ಸೆಂಟ್ರಲ್ ಬ್ಯಾಂಕು ಬಳ್ಳಾರಿಯಲ್ಲಿ

೧೫೯-೪-೦

ಯಂ. ಆನಂತಾಚಾರ್ಯ
ಅಧ್ಯಕ್ಷರು.
ಆರ್. ಎಸ್. ಹಯವದನ್
ಉಪಾಧ್ಯಕ್ಷರು.
ಯಂ. ರಾಜಾರಾವ
ಕೋಶಾಧ್ಯಕ್ಷರು.
ಆರ್. ಎಸ್. ಬಿ. ಸೇನ್
ಆರ್. ಎಸ್ ಮೂಲಿಮನಿ
ಕಾರ್ಯದರ್ಶಿಗಳು.

ಬಳ್ಳಾರಿ — ೧೫-೪-೧೯೪೨

ಮೈಸೂರು ವಾರ್ತೆಗಳು.

ಅಖಿಲ ಮೈಸೂರು ಚರಖಾ ಸಂಘಕ್ಕೆ ಅಖಿಲಭಾರತ ಚರಖಾ ಸಂಘದ ಕರ್ನಾಟಕ ಶಾಖೆಯಿಂದ ಸಾಮ್ಯತೆ ದೊರೆತಿದೆ. ಇಡೀ ಸಂಸ್ಥಾನದಲ್ಲಿ ದೊಡ್ಡ ಪ್ರಮಾಣದಿಂದ ಖಾದಿಯುತ್ಪನ್ನ ಮಾಡುವ ಯೋಜನೆಯು ಕೈಕೊಳ್ಳಲಾಗುವುದು.

ಭತ್ತದ ಬೆಳೆಯನ್ನು ಹೆಚ್ಚಿಸಲು ಮೈಸೂರು ಸರಕಾರವು 1,17,200 ರೂ. ಗಳನ್ನು ಮುಂಜೂರ್ಮಾಡಿದೆ

ಗ್ಲೈಸ್ಟರ್ ಡ್ಯೂಕರಿಗೆ ಮೈಸೂರಿನಲ್ಲಿ ಒಳ್ಳೆಯ ಸ್ವಾಗತವಾಯಿತು. ಝುಗ್ಲೆರ್ಝುಗ್ಗಾಯಮಾನವಾವ ವಿದ್ಯುದ್ದೀಪ, ಮೈಸೂರಿನ ತೋಟ, ಅರಮನೆಯ ಸೊಬಗು ದಿವ್ಯ ಭೋಜನ - ಕೇಳಬೇಕೆ - ಹೊರಗಿನಿಂದ ಬಂದವರು ಬೆಪ್ಪಾಗುವದರಲ್ಲಿ ಸಂಶಯವಿಲ್ಲ.

ಆಹಾರ ಪದಾರ್ಥಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯಲು ಸರಕಾರದವರು ರೈತರಿಗೆ 5 ವರ್ಷಗಳ ಕಾಲ ಭೂಮಿಯನ್ನು ಉಚಿತವಾಗಿಕೊಟ್ಟುನಂತರ ಕೊಂಡುಕೊಳ್ಳಲು ಸೌಕರ್ಯ ಕಲ್ಪಿಸಿದ್ದಾರೆ.

ಓರಿಯಂಟಲ್

ಸಂಪೂರ್ಣ ರಕ್ಷಣೆ, ಪೂರ್ಣ ಭರವಸೆ

ಈ 68 ವರ್ಷಗಳ ಜೀವನದಲ್ಲಿ **ಓರಿಯಂಟಲ್** ಕಂಪನಿಯು ತನ್ನ ಲಕ್ಷಾಂತರ ವಿಮಾದಾರರಿಗೆ **ಶಾಂತ ಮತ್ತು ಯುದ್ಧಕಾಲಗಳೆಲ್ಲೂ** ಸಹ ಮಾದರಿ ವಿಮಾಕಾರ್ಯದ ಶ್ರೇಷ್ಠ ತತ್ವಗಳ ಅನುಕರಣೆಯಿಂದ ಮೇಲ್ಕಾಣಿಸಿದುವನ್ನು ಕೊಟ್ಟಿದೆ. ಆವರಿಗೊದಿಗಿಸಿದ ಸೌಲಭ್ಯಗಳನ್ನು ನಿಮಗೂ **ಓರಿಯಂಟಲ್** ಒದಗಿಸಲು ಸಿದ್ಧವಿದೆ.

ಇಲ್ಲಿಯವರಿವಿಗೆ ಸಲ್ಲಿಸಿರುವ ಹಕ್ಕುಗಳ ಹಣ ರು 26ಕೋ. ಮೀರಿ
ಜಾರಿಯಲ್ಲಿರುವ ವಿಮಾಪತ್ರಗಳ ಮೊತ್ತ ರು 85½ ಕೋಟಿ
ವಾರ್ಷಿಕ ಆದಾಯ 1941ರಲ್ಲಿ ಸುಮಾರು ರು 5 ಕೋಟಿ
ನಿಧಿಯ ದ್ರವ್ಯ ರು 30 ಕೋಟಿ

ಗವರ್ನಮೆಂಟು ಸೆಕ್ಯೂರಿಟಿಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್,
ಸ್ಥಾಪನೆ ೧೮೬೪. ಮುಖ್ಯ ಕಛೇರಿ ಬೊಂಬಾಯಿ

ಶಾಖೆ:-
ಓರಿಯಂಟಲ್ ಬಿಲ್ಡಿಂಗ್ಸ್ ಆರ್‌ಮೀನಿಯನ್ ಬೀದಿ, ಜಿ.ಟಿ. ಮದ್ರಾಸು.
ಇನ್ಸ್‌ಪೆಕ್ಟರವರ ಆಫೀಸು:- ೩೧೩ ರಾಯಲ್ ಗೇಟ್ ಬ್ರಾಸಪೇಟೆ ಬಳ್ಳಾರಿ.

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—10—40.	31—5—42.
ರು. 1,14,774-0-0	ರು. 2,41,525-0-0

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ನ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭಂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮೀಕ್ಷಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:—

1 ತಿಮ್ಮನಚರ್ಲ 2 ಕೊಟ್ಟೂರು. 3 ಉರವಕೊಂಡ. 4 ಪತ್ತಿಕೊಂಡ

ಹೆಚ್. ಶೇಷಾರಾಮರೆಡ್ಡಿ, ಬಿ. ಎ ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಬೋರ್ಡು ಅಧ್ಯಕ್ಷರು

ಬಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಯುದ್ಧದ ಸಮಾಚಾರಗಳು.

ಜರ್ಮನ ವಿಮಾನದಾಳಿ:—

ಇಂಗ್ಲೆಂಡಿನಲ್ಲಿ **ಕ್ಯಾಂಟರ್‌ಬರಿ** ನಗರವು ಶತ್ರುಗಳ ವಿಮಾನ ದಾಳಿಯಿಂದ ಬಹಳ ಹಾಳಾಗಿದೆ. ಕಿಂಗ್ಸ್ ಸ್ಕೂಲ್ ಎಂಬ ಪೂರ್ವ ಕಾಲದ ಶಾಲೆಯು ಹಾಳಾಗಿದೆ. ಕ್ರೈಸ್ತರ ದೇವಾಲಯವು ಬಿದ್ದು, ಸಾವಿರಾರು ಪೌಂಡುಗಳ ನಷ್ಟವಾಗಿದೆ. ಪಟ್ಟಣದಲ್ಲಿ ನೂರಾರು ಮುಖ್ಯ ಕಟ್ಟಡಗಳು ನೆಲಸಮವಾಗಿವೆ. 74 ವರ್ಷ ವಯಸ್ಸಿನ ವೃದ್ಧ ಶ್ರೀಮಂತರೂ, ಜೂಜು ಕುದುರೆಗಳ ಮಾಲೀಕರೂ ಆದ ಲಾರ್ಡ್ ಗ್ಲಾನ್ಲಿಯಿನರು ಶತ್ರುಗಳ ದಾಳಿಯಿಂದ ಸತ್ತರು.

ಇಂಗ್ಲೆಂಡಿನ ದಕ್ಷಿಣ ಮತ್ತು ಪಶ್ಚಿಮ ಭಾಗದ ಪಟ್ಟಣಗಳಮೇಲೆ ದಾಳಿಯಾಗಿ ನಿವಾಸಸ್ಥಾನಗಳಿಗೆ ನಷ್ಟವಾಗಿದೆ.

ಜರ್ಮನಿಯಮೇಲೆ ದಾಳಿ:—

ಜರ್ಮನಿಯಲ್ಲಿನ ಅತಿ ಮುಖ್ಯ ಬಂದರವೂ ಮತ್ತು ನಾವೆಗಳನ್ನು ಕಟ್ಟುವ ಕೇಂದ್ರವೂ ಆದ ಬ್ರೆಮನ್ ನಗರದಮೇಲೆ ಒಂದು ಸಹಸ್ರ ಬ್ರಿಟಿಷ್ ವಿಮಾನಗಳು ದಾಳಿಮಾಡಿ ಬಹಳ ನಷ್ಟವುಂಟು ಮಾಡಿರುವನೆಂದು ಪ್ರಕಟವಾಗಿದೆ.

ಚರ್ಚಿಲ - ರೂಸವೆಲ್ಟ:—

ಚರ್ಚಿಲರು ಇಂಗ್ಲೆಂಡಿಗೆ ಮರಳಿದ ಮೇಲೆ ಒಂದು ಪ್ರಕಟನೆಯು ಹೊಂಟಿದೆ. ಚರ್ಚಿಲ - ರೂಸವೆಲ್ಟರ ಮಾತುಕತೆಗಳ ಫಲವಾಗಿ ಯುದ್ಧದ ಭವಿತವ್ಯವನ್ನೇ ಬದಲಾಯಿಸತಕ್ಕಂಥ ಯೋಜನೆಯನ್ನು ಸಿದ್ಧಗೊಳಿಸಿರುವರಂತೆ, ಇದರಿಂದ ಇಂಗ್ಲೆಂಡಿನ ಜನರಿಗೆ ಸಂತೋಷವಾಗಿದೆ.

ಚೀನ—ಜಪಾನ್

ಕಿಯಾಂಗ್ಸಿ ಪ್ರಾಂತ್ಯದಲ್ಲಿ ಜಪಾನರು ಯೂಕಾನ ಪಟ್ಟಣವನ್ನು ಹಿಡಿದಿರುತ್ತಾರೆ. ಪಟ್ಟಣದ ಹೊರಗೆ ಹೋರಾಟವು ನಡೆಗಿದೆ. ಚೈನೀಯರು ಲಿನ್ಸೀನ್ ಪಟ್ಟಣವನ್ನು ಜಪಾನರಿಂದವಾಪ್ತಿ ಹಿಡಿದಿದ್ದಾರೆ. ಸರ್ಸೋರವರು ಯೂಹೋಪಿನಲ್ಲಾಗಲಿ, ಏಶಿಯಾದಲ್ಲಾಗಲಿ ಯುದ್ಧಾನಂತರ ಸಾಮ್ರಾಜ್ಯವಾದವು ಕೊನೆಗಾಣಬೇಕೆಂದು ಚೀನವು ಖಂಡನು ಹೇಳಿಕೆ ಇತ್ತಿರುವರು.

—ಅಮೆರಿಕಾ ದೇಶದಲ್ಲಿ ಗಲಭೆ ಮಾಡಲು ಬಂದಿಳಿದ 8 ಜರ್ಮನರನ್ನು ಬಂಧಿಸಲಾಗಿದೆ.

—ಮಿಡನೇಸಮುದ್ರದ ಯುದ್ಧದಲ್ಲಿ ಜಪಾನರು 4 ವಿಮಾನವಾಹಕಹಡಗುಗಳು, 3 ವಿನಾಶಕಗಳು, 2 ಸಾರಿಗೆ ಹಡಗುಗಳನ್ನೂ ಬಹಳ ಜನಸಾಮಗ್ರಿಗಳನ್ನು ಕಳೆದು ಕೊಂಡರೆಂದು ಅಮೆರಿಕಾದ ಪ್ರಕಟನೆಯು ತಿಳಿಸುತ್ತದೆ.

ಉತ್ತರ ಆಫ್ರಿಕಾದಲ್ಲಿ ಬ್ರಿಟಿಷರಿಗೆ ಸೋಲು.

ಸೊಲ್ಲಂಪಟ್ಟಣದ ಪತನಾನಂತರ ಲಿಬ್ಯಾವು ಬ್ರಿಟಿಷರ ಕೈಯಿಂದ ಸಂಪೂರ್ಣವಾಗಿ ಶತ್ರುಗಳ ಹಸ್ತಗತವಾಯಿತು. ಈಗ ಜರ್ಮನ್ ಸೈನ್ಯಗಳು ಈಜಿಪ್ಟಿನ ಮೆಡಿಟರೇನಿಯ ಸಮುದ್ರ ತೀರದಲ್ಲಿ 200 ಮೈಲಿಗಳಿಗಿಂತಲೂ ಮುಂದೆ ನುಗ್ಗಿ ಮೆಸಾಮೆ ಟ್ರೂಹ ಪೂಕ ಎಲ್ ಅಡಾಮ ಭಾಗಗಳನ್ನು ಆಕ್ರಮಿಸಿ, ಅಲೆಕ್ಸಾಂಡ್ರಿಯಾ ನಗರವನ್ನು ಸಮೀಪಿಸಿರುವವು. ನೂರಾರು ಮೈಲಿಗಳ ಪ್ರದೇಶದಲ್ಲಿ ಘನಘೋರ ಯುದ್ಧವಾಯಿತು. ಪರಿಸ್ಥಿತಿಯು ಮಿತ್ರ ಪಕ್ಷಕ್ಕೆ ಕಷ್ಟವಾಗಿದೆ.

ಜರ್ಮನ ಪ್ರಜೆಗಳ ಭೀತಿ.

ಇಂಗ್ಲೆಂಡಿನ ಸಾವಿರಾರು ವಿಮಾನಗಳು ಜರ್ಮನಿಯಮೇಲೆ ಬಾಂಬುದಾಳಿಮಾಡುತ್ತಿರುವಕಾರಣ, ನಗರಗಳಲ್ಲಿ ವಿಶೇಷ ಪ್ರಾಣಹಾನಿಯಾಗುತ್ತಿದೆ. ಬ್ರಿಟಿಷ್ ರಾಜಧಾನಿ ಲಂಡನ್-ಜರ್ಮನ್ ರಾಜಧಾನಿ ಬರ್ಲಿನ್ ಗಳಮೇಲೆ ಬಾಂಬುದಾಳಿಯಾಗದಂತೆ ಒಪ್ಪಂದವಾಗಬೇಕೆಂದು ಜರ್ಮನ್ ಪ್ರಜೆಗಳ ಆಶಯವಿದೆಯೆಂದು ಸ್ವಾಕ್ ಹೋಂಗೆ ಆಗಮಿಸಿದ ಜರ್ಮನ್ ಸುದ್ದಿಗಾರರು ತಿಳಿಸಿದರು.

ಆಸ್ಟ್ರೇಲಿಯಾ ಹಡಗಿನ ನಾಶ.

'ಸ್ವಾರ್' ಎಂಬ ಆಸ್ಟ್ರೇಲಿಯಾದ ಡಿಸ್ಟ್ರಾಯರ್ ಜೂನ್ 14ನೆಯ ದಿನ ನಡೆದ ಮುತ್ತಿಗೆಯ ಫಲವಾಗಿ ಮುಳುಗಿ 3 ಸತ್ತಿವೆಂದೂ 200 ಜನರಿಗೆ ಉಗ್ರಕಾಯಗಳಾಯ್ತೆಂದೂ, ಈಗ ಗೊತ್ತಾಗಿದೆ.

ರಾಜಾಜಿಯವರಮೇಲೆ ತಿಸ್ತಿನ ಕ್ರಮ

ತಮಿಳುನಾಡು ಕಾಂಗ್ರೆಸ್ ಕಾರ್ಯಕಾರಿಣೀಸಮಿತಿಯು ಶ್ರೀ ಶಿ. ರಾಜಗೋಪಾಲಾಚಾರಿ, ಸುಬ್ಬರಾಯನ್, ರಾಮನಾಥನ್ ರಾಜನ್ ಈ ಮಂತ್ರಿಗಳು, ರಾಧಾಬಾಯಿ ಸುಬ್ಬರಾಯನ್, ಕೆ. ಸಂತಾನಂ ಕೇಂದ್ರ ಅಸೆಂಬ್ಲಿ ಸದಸ್ಯರು ಇವರಮೇಲೆ ಅಖಿಲ ಭಾರತ ಕಾಂಗ್ರೆಸ್ ನಿರ್ಣಯಗಳಿಗೆ ವಿರೋಧವಾಗಿ ಪ್ರಚಾರ ಕಾರ್ಯಕ್ರಮವಿಟ್ಟುಕೊಂಡದ್ದಕ್ಕೆ ನೋಟೀಸು ಕೊಟ್ಟಿರುತ್ತಾರೆ.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪನೆ: 1897.

45 ನೇ ವಾರ್ಷಿಕ ವರದಿಯ ಕೆಲವು ಮುಖ್ಯ ಅಂಶಗಳು

ಒಟ್ಟು ಆದಾಯ	ರೂ.	85,61,000 ಮೀರಿದೆ
ಜಾರ್ಯಲ್ಲಿರುವ ವಿಮಾ ಪಾಲಿಸಿಗಳು	ರೂ.	14,84,44,000 ,,
ಆಸ್ತಿ	ರೂ.	5,80,86,000 ,,

ಕಂಪೆನಿ ಪ್ರಾರಂಭವಾದ ಲಾಗಾಯ್ತು ಪಾವತಿ ಮಾಡಿರುವ ಕ್ಲೈಂಗಳು ರೂ. 7,48,66,000 ,,

ಏಜನ್ಸಿಗಳಿಗೆ ದರಖಾಸ್ತುಗಳನ್ನು ಕಳುಹಿಸುವುದು.

ಮುಖ್ಯ ಕಛೇರಿ:
ಎಂಪೈರ್ ಆಫ್ ಇಂಡಿಯಾಲೈಫ್ ಬಿಲ್ಡಿಂಗ್,
ಬೊಂಬಾಯಿ.

ಬೆಂಗಳೂರು ಬ್ರಾಂಚ್:
ಡಿಸ್ಪೆಕ್ಟ್‌ಬೋರ್ಡ್ ಬಿಲ್ಡಿಂಗ್,
ಕೆಂಪೇಗೌಡ ರಸ್ತೆ.

S. V. Setty & Bros, Bellary.

ಯಸ್. ವಿ. ಶೆಟ್ಟಿ ಅಂಡ್ ಬ್ರದರ್ಸ್. ಬಳ್ಳಾರಿ.



ಸರಿಶುದ್ಧವಾದ ಭಂಗಾರ ಮತ್ತು ಬೆಳ್ಳಿಯ ವಸ್ತುಗಳು ನಮ್ಮಲ್ಲಿ ದೊರಿಯುತ್ತವೆ ನಮ್ಮ ಹೆಸರಿನ ಶೀಲು ಪ್ರತಿಯೊಂದು ವಸ್ತುವಿನ ಮೇಲೆ ಇರುತ್ತದೆ. ನಮ್ಮ ಹೆಸರಿರುವ ಹಳೆಯ ವಸ್ತುಗಳನ್ನು ಕೊಟ್ಟು ನೂಡಿದ ಕೂಲಿ ವೇಸ್ಟೇಜು ಕೊಟ್ಟರೆ ಹೊಸ ವಸ್ತುಗಳನ್ನು ಕೊಡುತ್ತೇವೆ. ನೆಸ್ಟ್ ಎಂಡ್ ವಾಚುಗಳೂ ದೊಡ್ಡ ಗಡಿಯಾರಗಳೂ ನಮ್ಮಲ್ಲಿ ದೊರೆಯುತ್ತವೆ. ಒಂದು ಸಲ ದಯವಿಟ್ಟು ಬಂದು ಪರೀಕ್ಷಿಸಿರಿ

ಹಿಂದಿ - ಹಿಂದೂಸ್ಥಾನಿ ಕಲಿಯಿರಿ.

- ಪರೀಕ್ಷೆಗಳಿಗೆ ಕೂಡಲು,
- ವ್ಯವಹಾರದ ಭಾಷೆಯನ್ನು ಕಲಿಯಲು,
- ಮಾತಾಡುವುದನ್ನು ಕಲಿಯಲು,
- ನಿಮಗೆ ಸಹಾಯವು ಬೇಕೋ?

ಹಾಗಾದರೆ ಕೂಡಲೆ: ಕಳಗಿನವರಲ್ಲಿ ವಿವರಗಳನ್ನು ತಿಳಿಯಿರಿ

ನಿಮಗನುಕೂಲವಾದ ತಿಕ್ಷೆಗಳಿಗೆ ವರ್ಷದಿಸಲಾಗುವುದು. ಪರೀಕ್ಷೆಯ ಪಾಠ್ಯ ಪುಸ್ತಕಗಳು ಕಛೆ ಕಾಂಬರಿ ವಗೈರೆ ದೊರೆಯುವುದಲ್ಲದೆ ನಿಮಗೆ ಎಲ್ಲಾ ವಿಧವಾದ ಮಾಹಿತಿಯೂ, ಸ್ಪಷ್ಟವಾಗಿ ಹೇಳಲಾಗುವುದು.

ಟಿ. ಬಿ. ಕೇಶವರಾವ್,
ಕ್ರಿಸ್ತ ಮಾಚಾರಿ ಕಾಂಪೌಂಡು, ಬಳ್ಳಾರಿ

NAVA BHARAT BELLARY.

With which is incorporated Congress Bulletin

THE LEADING NATIONAL WEEKLY.

ನವ ಭಾರತ ಬಳ್ಳಾರಿ.

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

The Rates of Subscription

Annual

Local 2—0—0
Moffusil 3—0—0

6 Months

Local 1—4—0
Mofussil 2—0—0

ಚಂದಾ ವಿವರ

ವರ್ಷಕ್ಕೆ

ಬಳ್ಳಾರಿಯವರಿಗೆ 2-0-0
ಹೊರಗಿನವರಿಗೆ 3-0-0

6 ತಿಂಗಳಿಗೆ

ಬಳ್ಳಾರಿಯವರಿಗೆ 1-4-0
ಹೊರಗಿನವರಿಗೆ 2-0-0

Nava Bharat, Bellary.

REG. No. M. 3937.

Sri ____

Printed at Vittal Press, Car Street Edited & Published by T. B Keshava Rao, Bellary

Reg. No M. 3937

ವಂದೇ ಮಾತರಂ

ನವಚೈತನ್ಯ

ಉತ್ತಿಷ್ಠತ! ಜಾಗ್ರತ!! ಪ್ರಾಪ್ಯ ವರಾನ್ನಿಬೋಧತ.

ವರ್ಷ. ೪

ಸಂಚಿಕೆ ೪೧

ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ.

ಬಳ್ಳಾರಿ ಜುಲೈ ೧೨ ನೇ ಭಾನುವಾರ ೧೯೪೨.

ಸಂಪಾದಕ:—

ಟಿ. ಬಿ. ಕೇಶವರಾವ್

ರಷ್ಯಾ ಸೈನ್ಯಕ್ಕೆ ಏಪತ್ತು.

160 ಮೈಲಿಯ ರಣರಂಗದಲ್ಲಿ ಜರ್ಮನಿಯ ಒತ್ತಾಯವು ಅಧಿಕವಾಗಿರುವ ಕಾರಣ ರಷ್ಯಾ ಸೈನ್ಯವು ಸುತ್ತಲ್ಪಟ್ಟಿದೆಯೆಂದೂ ಅವಕ್ಕೆ ವಿನಹ್ತೊದಗಿದೆಯೆಂದೂ ಮಾಸ್ಕೋವಲ್ಲಿ ಒಪ್ಪಿಕೊಳ್ಳಲಾಗಿದೆ. ಕರ್ಸಕ ಮತ್ತು ಬಿಯಾಲಗೊರಾಡ ರಣರಂಗದಲ್ಲಿ ರಷ್ಯಾ ಸೈನಿಕರು ಹಿಮ್ಮೆಟ್ಟಿದ್ದಾರೆ.

ಜರ್ಮನಿಯ ಘೋರ ಆಕ್ರಮಣ.

ಆರಂಭವಾದಂತಾಗಿದೆ. ಜರ್ಮನ ಸೈನ್ಯಗಳು ಅನೇಕ ಪ್ರದೇಶಗಳಲ್ಲಿ ಡಾನ್ ನದಿಯನ್ನು ದಾಟಿವೆ. ಅವರ ಉದ್ದೇಶವು ಪ್ರಾಯಶಃ ಕಾಕಸಸ್ ಕಡೆನುಗ್ಗಲಿರಬಹುದು. ರಷ್ಯಾದ ಸೇನಾಧಿಪತಿ ಮಾರ್ಷಲ್ ಟಿಮೊಶಂಕೋವರ ಸೈನ್ಯವೂ ಉತ್ತರದಲ್ಲಿರುವ ರಷ್ಯನ ಸೈನ್ಯಗಳೂ ಬೇರ್ಪಡಿಸಲ್ಪಟ್ಟವೆಯೆಂದು ಹೇಳಲಾಗಿದೆ. ಇದು ಅಸ್ಯಾಯಕಪರಿಸ್ಥಿತಿಯೆಂದು ಟೈಂಸ್ ಪತ್ರಿಕೆಯು ಒಪ್ಪಿಕೊಂಡಿದೆ.

ಡೈಲಿಮೇಲ್ ಪತ್ರಿಕೆಯು ಬರೆಯುತ್ತ "ಈಜಿಪ್ತಿನಲ್ಲಿ ಜನರಲ್ ಆಚಿನ್‌ಲೆಕ್ ರವರು ಯಾವ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆಯೋ. ಆಪರಿಸ್ಥಿತಿಯನ್ನೇ ಇಂದು ಮಾರ್ಷಲ್ ಟಿಮೋ ಶೆಂಕೋರವರು ರಷ್ಯದಲ್ಲಿ ಎದುರಿಸಬೇಕಾಗಿದೆ. "ಅವರು ಇಂದು ಬಹು ಇಕ್ಕಟ್ಟಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಆಕಷ್ಟ ಪರಿಸ್ಥಿತಿಯಿಂದ ಅವರು ಪಾರಾಗಬೇಕು. ಮಾರ್ಷಲ್ ಟಿಮೋಶೆಂಕೋರವರ ಸೈನ್ಯ ಪಡೆಗಳಿಗೂ ಉತ್ತರದಲ್ಲಿರುವ ರಷ್ಯ ಸೈನ್ಯ ಪಡೆಗಳಿಗೂ ಇರುವ ಸಂಬಂಧವನ್ನೇ ಕತ್ತರಿಸಿ ಹಾಕಲ್ಪಡುವ ಸನ್ನಿವೇಶವುಂಟಾಗಿದೆ" ಎಂಬುದಾಗಿ ಪತ್ರಿಕೆಯು ಬರೆಯುತ್ತಿದೆ.

ಚೀನಾ-ಜಪಾನ ಯುದ್ಧ.

ಪ್ರಾರಂಭವಾಗಿ 5 ವರ್ಷಗಳಾಯಿತು. ಚರ್ಚಿಲ್‌ರವರೂ - ರೂಸವೆಲ್ಟರೂ ಶುಭಸಂದೇಶಗಳನ್ನು ಕಳುಹಿಸುತ್ತಿರುತ್ತಾರೆ. ಚೀನಾ ಸೈನ್ಯಗಳ ಪ್ರಜೆಗಳ ಧೈರ್ಯಸಾಹಸಗಳನ್ನು ಪ್ರಶಂಸಿಸಿ ಅವರಿಗೆ ಜಯವಾಗುವದೆಂದು ಕೋರಿದ್ದಾರೆ.

ಕಿಯಾಂಗ್ಸಿ ಪ್ರಾಂತ್ಯದಲ್ಲಿ ಜಪಾನರ ಹಿಂದೋಟವು ಮತ್ತೆ ಆರಂಭವಾಗಿದೆಯೆಂಬು ಹೇಳಬಹುದಾಗಿದೆ.

ಸೈಬೇರಿಯಾದಮೇಲೆ ಮುತ್ತಿಗೆ.

ತನಗೆ ಸೋಲಾಗುವುದನ್ನು ತಪ್ಪಿಸಲು ಜಪಾನು ಇನ್ನೂ ಅಪಾಯಕರವಾದ ಪ್ರಯತ್ನಗಳನ್ನು ಮಾಡಲಿರುವುದೆಂದು ನ್ಯೂಯಾರ್ಕ್ ಹೆರಾಲ್ಡ್ ಪತ್ರಿಕೆಯು ಬರೆಯುತ್ತಲಿದೆ. ರಷ್ಯಾವೆಲ್ಲಿ ಜರ್ಮನಿಗೆ ಸೋಲಾದರೆ ಜಪಾನಿನ ಪರಿಸ್ಥಿತಿ ವಿಷಯವಾಗುತ್ತದೆ. ಈ ಕಾರಣ ಜಪಾನು ರಷ್ಯಾದಮೇಲೆ ಬೀಳಬಹುದು.

ಜರ್ಮನರ ಹಡಗಿಗೆ ಧಕ್ಕೆ.

ಆರ್ಕಟ್ಟಿನ ಸಮುದ್ರದಲ್ಲಿ ರಷ್ಯನ ಜಲಾಂತರ್ಗಾಮಿಗಳಿಂದ ದಾಳಿ ಮಾಡಲ್ಪಟ್ಟ, 35 ಸಾವಿರ ಟನ್ನಿನ ಟರ್ಪಿಟ್ಸ್ ಎಂಬ ಜರ್ಮನರ ಯುದ್ಧದ ಹಡಗಿಗೆ ಬಹಳ ಧಕ್ಕೆ ತಗಲಿದೆಯೆಂದು ರಷ್ಯನ ಪ್ರಕಟನೆಯು ತಿಳಿಸುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ - ಕಾಲರಾವ್ಯಾಪ್ತಿ.

(4-7-42ಕ್ಕೆ ಮುಗಿಯುವ ವಾರ)

ತಾಲೂಕು	ಎಷ್ಟುಹಳ್ಳಿಗಳಲ್ಲಿ	ತಗಲಿದವರು	ಸತ್ತವರು
ಆಲೂರು	4	10	6
ಆದವಾನಿ	4	47	30
ಎಮ್ಮಿಗನೂರು	29	144	60
ಬಳ್ಳಾರಿ	2	7	1
ರಾಯದುರ್ಗ	7	24	19
ಹೊಸಪೇಟೆ	6	16	8
ಹಡಗಲಿ	12	46	25
ಹರಪನಹಳ್ಳಿ	3	7	3
ಕೂಡ್ಲಿಗಿ	1	9	6
ಸಿರುಗುಪ್ಪ	20	51	17

ಕುಡುಕರು ಕುಡಿತವನ್ನು ಹೇಗೆ ಬಿಟ್ಟರು.

(ಹರಿಜನ ಪತ್ರಿಕೆಯಲ್ಲಿ ಶ್ರೀ ಮಹದೇವ ದೇಶಾಯಿಯವರ ಲೇಖನ.)

ಪ್ರೇಮದ ಒತ್ತಾಯವು

ಒಬ್ಬ ಸುದ್ದಿಗಾರನು ಗುಜರಾತಿಯಲ್ಲಿ ಬರೆದ ಲೇಖದ ಕೆಲ ಅಂಶಗಳನ್ನು ಕೆಳಗೆ ಉದ್ಧರಿಸುತ್ತೇನೆ.

"ಕಳೆದವಾರ ನಮ್ಮ ಸಣ್ಣ ಹಳ್ಳಿಯಲ್ಲಿ ಒಂದು ಘಟನೆ ಸಂಭವಿಸಿತು. ನಮ್ಮ ಹಳ್ಳಿಯಲ್ಲಿಯ ಇಬ್ಬರು ಪ್ರಮುಖ ಜನರು ಕುಡುಕತನಕ್ಕೆ ಬಲಿಬಿದ್ದಿದ್ದರು. ಸುಧಾರಣಾವಾದಿಗಳಾಗಿರುವ ಅವರ ಮಕ್ಕಳಿಗೆ ಇದು ಸೇರಲಿಲ್ಲ. ಮಕ್ಕಳು ಎಷ್ಟೊಂದು ಹೇಳಿದರೂ ತಂದೆಗಳಿಬ್ಬರೂ ಆತ್ತ ಕಿವಿಗೊಡಲಿಲ್ಲ. ಆದುದರಿಂದ ತಂದೆಗಳು ಕುಡುಕತನವನ್ನು ಬಿಡುವ ಪ್ರತಿಜ್ಞೆ ಮಾಡುವವರೆಗೆ ಏನೂ ಆಹಾರ ತೆಗೆದುಕೊಳ್ಳುವದಿಲ್ಲೆಂದು ಮಕ್ಕಳು ಉಪೋಷಣ ಸುರು ಮಾಡಿದರು. ಇದರಿಂದ ಹಳ್ಳಿಯಲ್ಲೆಲ್ಲ ಕಳವಳವುಂಟಾಯಿತು. ಒಂದು ದಿವಸದ ಉಪೋಷಣದ ನಂತರ ತಂದೆಗಳು ಹಲವು ಗೆಳೆಯರೆದುರಿಗೆ ಕುಡಿಯುವದನ್ನು ಬಿಡುವದಾಗಿ ಬಾಸಗಿ ರೀತಿಯಿಂದ ವಚನ ಕೊಟ್ಟರು. ಈ ವಚನವು ಸಮಾಧಾನಕರವೆಂದು ತಿಳಿಯಲು ಮಕ್ಕಳು ಒಪ್ಪಲಿಲ್ಲ. ಹಳ್ಳಿಗರ ಸಾರ್ವಜನಿಕ ಸಭೆಯಲ್ಲಿ ವಚನ ತೆಗೆದುಕೊಳ್ಳಬೇಕೆಂದು ಅವರು ಆಗ್ರಹ ಹಿಡಿದರು. ಎರಡು ದಿನಗಳ ನಂತರ ತಂದೆಗಳು ಕನಿಕರಪಟ್ಟು ಎಂದೂ ಮದ್ಯವನ್ನು ಮುಟ್ಟುವದಿಲ್ಲವಾಗಿ ಸಾರ್ವಜನಿಕವಾಗಿ ವಚನ ತೆಗೆದುಕೊಳ್ಳಲು ಒಪ್ಪಿದರು. ಇಲ್ಲಿಗೆ ಬಂದಿದ್ದ ಗೋವರ್ಧನದಾಸ ಚೋಖಾವಾಲಾರವರಿಗೆ ಈ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಲು ವಿನ್ನವಿಸಿಕೊಳ್ಳಲಾಯಿತು. ಆನಂತರ ಮಕ್ಕಳು ಉಪೋಷಣವನ್ನು ಬಿಟ್ಟರು.

"ಇದೆಲ್ಲ ಒಳ್ಳೆತೆ ಆಯಿತು. ತಮ್ಮ ತಂದೆಗಳಿಗೆ ಈ ರೀತಿ ಪೀಡೆ ಕೊಡುವದು ಮಕ್ಕಳಿಗೆ ನ್ಯಾಯವೊ ಎಂಬದು ನನಗೆ ತಿಳಿಯದು. ಈ ಒತ್ತಾಯವು ಹಿಂಸೆಯಲ್ಲವೆ? ನನ್ನ ತಂದೆಗೂ ಕುಡಿಯುವ ಚಟವಿದೆ. ಬಹಳ ದಿನಗಳಿಂದ ನಾನು ಅವನನ್ನು ಈ ಚಟದಿಂದ ಪರಾವೃತ್ತ ಮಾಡಬೇಕೆಂದು ಒಳ್ಳೆ ಪರಿಶ್ರಮಪಟ್ಟರುನೆನು. ಆದರೆ ಎಲ್ಲ ನಿರರ್ಥಕವಾಗಿದೆ ಆದರೆನನ್ನ ಈ ಕಕ್ಕನ ಮಕ್ಕಳು ಯಶಸ್ವಿಯಾಗಿರುವರು. ಮತ್ತು ಅವರ ಪ್ರಗತಿಯಿಂದ ಹಳ್ಳಿಯಲ್ಲೆಲ್ಲ ಮತ್ತು ಸುತ್ತಲೆಲ್ಲ ಒಳ್ಳೆ ಪರಿಣಾಮವುಂಟಾಗಿದೆ. ನಾನೂ ಅವರ ಅನುಕರಣ ಮಾಡಲೊ? ನೈತಿಕ ದೃಷ್ಟಿಯಿಂದ ಅವರ ಮಾರ್ಗವು ಸರಿಯಾಗಿರುವದೆಂಬ ಬಗ್ಗೆ ನನಗೆ ಮನಸಂಕೆಯಾಗಿಲ್ಲ; ಇಲ್ಲವಿದ್ದರೆ ನಾನೂ ಅವರಂತೆ ಮಾಡುತ್ತಿದ್ದೆ. ಆದರೆ ನಿಮ್ಮ ವಾಕ್ಯವೆ ನನಗೆ ಪ್ರಮಾಣವು. ಆದುದರಿಂದ ಈ ಪತ್ರದ ಸಂಬಂಧದಲ್ಲಿ ನೀವು ಹರಿಜನ ಒಂಧುವಿನಲ್ಲಿ ಬರೆಯಬೇಕೆಂದು ನನ್ನ ವಿನ್ನಹ. ಎಂದರೆ ನನ್ನಂಥ ತರುಣ ಸ್ನೇಹಿತರಿಗೆ ತಮ್ಮ ಸಲಹೆಯಂತೆ ವರ್ತಿಸಲು ಅನುಕೂಲವಾಗುವದು."

ತರುಣ ಜನರು ಕೈಕೊಂಡ ಮಾರ್ಗದಲ್ಲಿ ಎಷ್ಟಾವದೇ ಬಗೆಯ ಒತ್ತಾಯವಿರಲಿಲ್ಲೆಂಬದಾಗಿ ನನ್ನ ದೃಢಭಾವನೆ. ಮತ್ತು ಅದಕ್ಕೆ ಗಾಂಧೀಜಿಯವರ ಸಂಪೂರ್ಣ ಆತೀರ್ವಾದವಿದೆಂದೂ ನಾನು ಹೇಳಬಲ್ಲೆ. ದುಷ್ಟಚಟಕ್ಕೆ ಬಿದ್ದ, ತಮ್ಮ ಆಪ್ತೇಷ್ಟರನ್ನು ಮುಕ್ತಮಾಡಲು ತರುಣರು ಈ ಮಾರ್ಗವನ್ನನುಸರಿಸಬೇಕೆಂದು ಗಾಂಧಿಜಿಯವರು ಸಲಹೆ ಕೊಟ್ಟವರು. ಗೃಹ ಕಾರ್ಯಗಳಲ್ಲಿ ಸತ್ಯಾಗ್ರಹವು ಅನುಭವಸಿದ್ಧ ಏಕ ಮೇವ ಉಪಾಯವಾಗಿದೆ. ಆದಕ್ಕೆ ಕೆಲ ಪ್ರೌಢ ಸ್ಪಷ್ಟ ಕರಾರಗಳಿರುವವು ಮಾತ್ರ ಆ ಸುಸ್ಪಷ್ಟವು ಅಸಮಾನಕಾರಕ ಮತ್ತು ಚಟಗಾರನ ಶಾರೀರಕ ಹಾಗು ನೈತಿಕ ಹಾನಿಯನ್ನುಂಟುಮಾಡುವಂತಹದಿರಬೇಕು. ಎರಡನೆಯದೆಂದರೆ ಇಬ್ಬರಲ್ಲಿಯೂ ನಿಶ್ಚಲ ಪ್ರೇಮಬಂಧನವಿರತಕ್ಕದ್ದು, ಸೇವೆ ಮತ್ತು ಪ್ರೇಮದ ಹಕ್ಕ

[9ನೇ ಪುಟ ನೋಡಿರಿ]

ರಾಯಲಸೀಮ ಬ್ಯಾಂಕು, ಲಿ.

ಮುಖ್ಯ ಕಾರ್ಯಾಲಯ:— ಬಳ್ಳಾರಿ.

ಒಟ್ಟು ವ್ಯವಹಾರದ ಮೊತ್ತ.

31—10—40.	31—5—42.
ರು. 1,14,774-0-0	ರು 2,41,525-0-0

ನಮ್ಮಲ್ಲಿ ಸರ್ವ ವಿಧವಾದ ಬ್ಯಾಂಕಿಂಗ್ ವ್ಯವಹಾರವು ನಡೆಯುತ್ತದೆ. ಹಿಂದೂದೇಶದ ಯಾವ ಭಾಗದಲ್ಲಾದರೂ ನಿಮಗೆ ವ್ಯಾಪಾರೀ ಸೌಕರ್ಯವನ್ನೊದಗಿಸಿಕೊಡುತ್ತೇವೆ. ಭೂಗಾರ ಮತ್ತು ಇತರ ಉಪಯುಕ್ತ ಮಾಲಿನ ಮೇಲೆ ಅಲ್ಪದರದ ಬಡ್ಡಿಯಿಂದ ಸಾಲವು ದೊರೆಯುತ್ತದೆ. ಸಮಕ್ಷಮ ಬಂದು ಎಲ್ಲಾ ತಿಳಿದುಕೊಳ್ಳಿರಿ.

ಶಾಖೆಗಳು:—

1 ತಿಮ್ಮಸಮುದ್ರ 2 ಕೊಟ್ಟೂರು. 3 ಹುರವಕೊಂಡ 4 ಪತ್ತಿಕೊಂಡ

ಹೆಚ್. ಶೇಷಾರಾಮರೆಡ್ಡಿ,, ಬಿ. ಎ. ಬಿ. ಎಲ್ (ಎಂ ಎಲ್. ಎ.)
ಡೈರೆಕ್ಟರುಗಳಬೋಡು: ಅಧ್ಯಕ್ಷರು

ಪಿ. ವಿ. ಶೇಷಗಿರಿರಾವ್, ಬಿ. ಕಾಂ. ಕಾರ್ಯದರ್ಶಿ.

ಹಿಂದೂ ಮಹಾ ಸಭೆ ನಾಯಕರ ವಾದ.

ಗಾಂಧೀಜೀಯವರು ದೇಶದ ನಿರ್ಬಲತೆಗೆ ಕಾರಣರೇನು?

ಜುಲೈ ತಿಂಗಳು 12 ತಾ॥ ಭಾನುವಾರ

ಕಳೆದವಾರ ಬಳ್ಳಾರಿಗೆ ಆಗಮಿಸಿದ ಹಿಂದೂಮಹಾ ಸಭಾನಾಯಕರಾದ ಡಾ॥ ಮೂಂಜಿಯವರು ಶ್ರೀ ವರದರಾಜುಲುನಾಯಿಡುರವರು ಪಾಕಿಸ್ತಾನ ನಾದವನ್ನು ಖಂಡಿಸಿದರು. ವಿಕರಾಸ್ಯದ ಭಿನ್ನತೆಯನ್ನು ನಿಷೇಧಿಸುತ್ತಾ ಅವರು ಸೂಚಿಸಿದ ಅಂಶಗಳ ವಿಷಯಕ್ಕೆ ನನ್ನ ಆಕ್ಷೇಪಣೆ ಯೇನು ಇಲ್ಲ. ಡಾಕ್ಟರ್ ಮೂಂಜಿಯವರು ದೇಶದ ಸಂಸ್ಕೃತಿ, ಜಾತಿಯ ವೈಶಿಷ್ಟ್ಯತೆ, ರೀತಿ ನೀತಿಗಳಲ್ಲಿ ಅಧಿಕ ಸಂಖ್ಯಾಕರಾದ ಹಿಂದುಗಳನ್ನೇ ಅನುಕರಣ ಮಾಡಬೇಕೆಂದು ಅನೇಕ ಉದಾಹರಣೆಗಳಿಂದ ಸಮರ್ಥಿಸಿದರು.

ತಮ್ಮ ನಂಬಿಕೆಯ ಪ್ರಕಾರಕ್ಕೆ ಹಿಂಸಾ ಹಿಂಸೆಗಳ ವಾದವನ್ನು ಪುಷ್ಟೀಕರಿಸುವುದರಲ್ಲಿಯೂ ತಪ್ಪಿಲ್ಲ. ಆದರೆ ತಮ್ಮ ವಾದ ಸಮರ್ಥನೆಯಕಾಲಕ್ಕೆ ಇತರ ಮಹಾಪುರುಷರಮೇಲೆ ಕಳಂಕ ಹೊರಿಸುವುದು ಅವಿವೇಕವೂ, ಅಸಾಧುವೂ ನೀಚವುಆಗಿದೆ. ಗಾಂಧಿಯವರ 25 ವರ್ಷಗಳ ಅಹಿಂಸಾ ಬೋಧೆಯಿಂದ ದೇಶವು ನಿರ್ಬಲವಾಯಿತು. ನಾವು ಹೇಡಿಗಳಾದೆವು ಶಸ್ತ್ರಾಸ್ತ್ರಗಳನ್ನು ಒಗೆದೆವು ಗಾಂಧಿಯವರನ್ನು ಗೌರವಿಸಿರಿ. ಅವರನ್ನು ಸುಳಿರಿಸಬೇಡಿರಿ ನಮ್ಮೆರಿ ಶ್ರೀ ನಾಯುಡೂರವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದರು.

ಇದು ನಿಜವೇ? ಇದನ್ನು ಸರಿಯಾಗಿ ಆಲೋಚಿಸಬೇಕು. ಗಾಂಧೀಜಿಯವರು ರಾಜಕೀಯಾಂದೋಳನ ಪ್ರಾರಂಭಮಾಡುವ ಪೂರ್ವಕ್ಕೆ 'ನಂದೇಮಾತರಂ' ಎಂಬುವುದು ರಾಜದ್ರೋಹಕರವಾಗಿದ್ದಿತು. ಸ್ವದೇಶೀ ಪ್ರಚಾರಮಾಡುವದು ಶಾಸನ ವಿರುದ್ಧವಾಗಿದ್ದಿತು. ಯಾವ ಸಭೆಗಳಲ್ಲಾಗಲಿ ಸರಕಾರವನ್ನು ಕ್ಷಾರ್ಥಿಸುವ ತೀರ್ಮಾನಗಳಾಗುತ್ತಿದ್ದವಾಗಲಿ ಜನರನ್ನು ಜಾಗೃತಗೊಳಿಸುವ ಕಾರ್ಯಕ್ರಮವೇ ಇದ್ದಿಲ್ಲ. ಮಹಾತ್ಮ ಗಾಂಧಿಯವರು ನಾಯಕತ್ವ ವಹಿಸಿದ ಈ 25 ವರ್ಷಗಳೊಳಗಾಗಿ ಅಬಾಲವೃದ್ಧರಾದಿಯಾಗಿ ಸ್ತ್ರೀಪುರುಷರಲ್ಲೆಲ್ಲಾ ಸ್ವಾಭಿಮಾನ ಸ್ವದೇಶಾಭಿಮಾನದ ಕುರುಹುಗಳು ಕಂಡುಬಂದವು. ಸರಕಾರದ ಸಾಮಾನ್ಯವಿಧಿಗಳಿಗೆ ಮಣಿಯುತ್ತಿದ್ದವರಲ್ಲಿ ಧೈರ್ಯ ಸಾಹಸಗಳು ಉತ್ಪನ್ನವಾದವು. 1921, 1930-32 ಮತ್ತು 1941 ರ ಸತ್ಯಾಗ್ರಹಾಂದೋಳನದಿಂದ ಪ್ರತಿಯೊಬ್ಬರಲ್ಲಿ ಸ್ವಾರ್ಥ ಅಧ್ಯತತ್ಯಾಗದ ಕಿರಣಗಳು ತಲೆದೋರಿದವು ಮಹಾತ್ಮಗಾಂಧಿಯವರ ಪ್ರಯತ್ನಗಳಿಂದ ಪ್ರಪಂಚದ ಭೂಪಟದಲ್ಲಿ ಹಿಂದೂದೇಶಕ್ಕೆ ಸ್ಥಾನವು ದೊರೆಯಿತು

ಭಾರತೀಯರು ಹೇಡಿಗಳಾದುದಕ್ಕೆ ಕಾರಣ ಬ್ರಿಟೀಷ್ ಸರಕಾರದ 'ಶಸ್ತ್ರ ಶಾಸನ' (Arms Act) ಶ್ರೀ ನಾಯುಡೂರವರು ಕಾಂಗ್ರೆಸ್ಸಿನ ಸ್ವಾತಂತ್ರ್ಯ ಪ್ರತಿಜ್ಞೆಯನ್ನೋದದೇ ಇಲ್ಲ. ಬ್ರಿಟಿಷ ಶಾಸನದಲ್ಲಿ ಭಾರತೀಯರು ಸ್ವತಂತ್ರ ಯೋಧರಾಗಲಿಕ್ಕೆ ಮಾರ್ಗವೆಲ್ಲಿದೆ? ಕೊನೆಗೆ ಸ್ವಾವಲಂಬನಕ್ಕಾಗಿ ಪ್ರಜೆಗಳಿಗೆ ಸೈನಿಕ ಶಿಕ್ಷಣವನ್ನು ಇಂದಾಕಷ್ಟೆ ಅವಾಯಕರವಾದ ಕಾಲದಲ್ಲೂ ಕೂಡ ಕೊಟ್ಟಿಲ್ಲ ಇತರ ದೇಶಗಳಲ್ಲಿರುವಂತೆ ಪ್ರತಿಯೊಬ್ಬ ನಾಗರೀಕನೂ ಶಸ್ತ್ರ ಹಿಡಿಯಲು ಭಾರತದಲ್ಲಿ ಅನಕಾಶವಿಲ್ಲ.

ಭಾರತೀಯರ ಇಂಥಾ ನಿಸ್ಸಹಾಯ ಪರಿಸ್ಥಿತಿಗೆ ಪರರಾಷ್ಟ್ರದವರ ಆಡಳಿತವೇ ಕಾರಣವೆಂದು ಬೇರೆ ಹೇಳಬೇಕಾಗಿಲ್ಲ. ಮಹಾತ್ಮ ಗಾಂಧಿಯವರ ಅಹಿಂಸಾತತ್ವವು ಸರ್ವಸಾಮಾನ್ಯ ಮನುಷ್ಯನಿಂದ ಪೂರ್ಣರೂಪವಿಂದ ಪಾಲಿಸಲ್ಪಡಲು ಅಸಾಧ್ಯವಾಗಿದ್ದರೂ, ಸದ್ಯದ ಪರಿಸ್ಥಿತಿಯಲ್ಲಿ ಅವರ ಮಾರ್ಗವೇ ಸರ್ವಶ್ರೇಷ್ಠ ವಾಗಿದೆ. ಭಾರತಯುವಕ ನಾಯಕರಾದ ಪಂಡಿತ ಜವಹರಲಾಲರಿಗೆ ಅಹಿಂಸಾ ಮಾರ್ಗದಲ್ಲಿ ಪೂರ್ಣ ವಿಶ್ವಾಸವಿಲ್ಲದಿದ್ದರೂ ಗಾಂಧೀಜೀಯರ ಆಂದೋಳನ ವಿಧಾನವೇ ಯೋಗ್ಯವೆಂದು ಅವರ ನಾಯಕತ್ವದಕೆಳಗೆ ಕೃಷಿನಾಯುತ್ತಿರುವರು.

ತಮ್ಮ ಪ್ರಚಾರಕಾರ್ಯದಲ್ಲಿ ಅಸತ್ಯ ಮತ್ತು ಹೇಯ ವಿಚಾರಗಳನ್ನು ನಿಜವೆಂದು ನಂಬುವಂತೆ ಜನತೆಗೆಯಲ್ಲಿ ಪ್ರಚಾರ ಮಾಡುತ್ತಿರುವ ಮತ್ತು 25 ವರ್ಷ ಕಾಂಗ್ರೆಸ್ ಭಕ್ತರಾಗಿ ಮುಖ್ಯ ಅಧಿಕಾರಿಗಳಾಗಿ 5 ಸಲ ಜೈಲಿಗೆ ಹೋಗಿಬಂದ ಶ್ರೀ ನಾಯುಡೂರವರಿಗೆ ಈ ಕಾರ್ಯವು ಶೋಭಿಸದೆಂದು ನಾವು ಹೇಳಲಿರಬಾರೆವು.

ಯುದ್ಧವಾರ್ತೆಗಳು.

ಈಜಿಪ್ಟಿನಲ್ಲಿ:—

ಎಲ್ ಅಲಮೀನ್ ಪ್ರದೇಶದಲ್ಲಿ ಜರ್ಮನ್ ಜನರಲ್ ರೊಮೆಲನನ್ನು ತಡೆಯಲಾಗಿದೆ. ಬ್ರಿಟೀಷರ ಆಧೀನದಲ್ಲಿರುವ ಸೈನ್ಯಗಳು ಶತ್ರುಗಳಿಗೆ ಭೂಮಿ ಮತ್ತು ವಾಯು ಭಾಗಗಳಿಂದ ಅಧಿಕ ನಷ್ಟ ಉಂಟುಮಾಡುತ್ತಲಿವೆ. 800 ಜರ್ಮನರು ಶರಿಸಿಕ್ಕಿರುವರು.

ರಷ್ಯಾದಲ್ಲಿ:—

ಜರ್ಮನರು ಸೆಬಾಸ್ಟಪೋಲಿನಲ್ಲಿ ಪ್ರವೇಶಿಸಿರುವುದು ಈಗ ಅಧಿಕೃತವಾಗಿ ಪ್ರಕಟವಾಗಿದೆ. ಈನಗರವು 7-8 ತಿಂಗಳ ವಿಮಾನ ದಾಳಿಯಿಂದ ಸಂಪೂರ್ಣ ಹಾಳಾಗಿದೆ. ಕರ್ಸಕ್-ಕಾರ್ಖಾವ ಮಧ್ಯ ಭಾಗದಲ್ಲಿ ಜರ್ಮನರ ಒತ್ತಡವು ಹೆಚ್ಚಾಗಿ-ಮುಂದುವರಿಯುತ್ತಿರುವರು. ಡಾನನ ಏಯ ಭಾಗವನ್ನು ತಾವು ಮುಟ್ಟಿದೆವೆಂದು ಜರ್ಮನ್ ರೇಡಿಯೋ ಹೇಳುತ್ತದೆ. ಶತ್ರುಗಳ ಭಯಂಕರ ಒತ್ತಡದಿಂದ-ರಷ್ಯನರು ಶಿಸ್ತಿನಿಂದ ಹಿಂದಕ್ಕೆ ಸರಿಯುತ್ತಿರುವುದಾಗಿ ನ್ಯೂಸ್‌ಕ್ರಾನಿಕಲ್ ಪತ್ರಿಕೆಯ ಮಾಸ್ಕೋ ಸುದ್ದಿಗಾರನು ಬರೆಯುತ್ತಾನೆ.

ಭೂಮಧ್ಯದ ಸಮುದ್ರದಲ್ಲಿ ನೌಕಾಯುದ್ಧ:—

ಭೂಮಧ್ಯ ಸಮುದ್ರದಲ್ಲಿ ಹೋಗುತ್ತಿದ್ದ ಮಿತ್ರ ಹಡುಗುಗಳಮೇಲೆ ಜರ್ಮನ ವಿಮಾನಗಳು ಎಲ್ಲಾತರದ ಯುದ್ಧ ಕೌಶಲದಿಂದ ದಾಳಿಮಾಡಿದವು. ಆದರೆ ಅವೆಲ್ಲಾ ವ್ಯರ್ಥವಾಯಿತೆಂದು ಹೇಳಲಾಗಿದೆ.

ಮಾಲ್ಟಾದ್ವೀಪದ ಮೇಲೆ ಮತ್ತೆ ದಾಳಿಯಾಗುತ್ತಲಿದೆ. ಹೋದ ವಾರ ನಡೆದ ದಾಳಿಯಲ್ಲಿ ಅಲ್ಪ ಸ್ವಲ್ಪ ಪ್ರಾಣ ಹಾನಿಯೂ ನಷ್ಟವೂ ಆಗಿದೆಯಂತೆ.

ಈಜಿಪ್ಟಿನಲ್ಲಿ:—

ಎಲ್ ಅಮೀನ ಪ್ರದೇಶದಲ್ಲಿ ಮಹತ್ತರವಾದ ಬದಲಾವಣೆ ಆಗಿಲ್ಲ. ವೈರಿಯು ಹಿಂದೆ ಸರಿದಿರುವನೆಂದು ಹೇಳಬರುವಂತಿಲ್ಲ. ಬ್ರಿಟಿಷ್ ವಿಮಾನಗಳು ಶತ್ರುಪ್ರದೇಶಗಳ ಮೇಲೆ ದಾಳಿ ಮಾಡುತ್ತಿನೆಯೆಂತು ಹೇಳಲಾಗಿದೆ.

ಮಹಾತ್ಮಗಾಂಧಿಯವರ ಲೇಖನಗಳು

(ಹರಿಜನ ಪತ್ರಿಕೆಯಿಂದ.)

ರಾಜಾಜಿಯವರ ಸಭೆಯಲ್ಲಿ ಪುಂಡಾಟಿಕೆ.

ಗಾಂಧೀಜಿಯವರ ಖಂಡನೆ.

ಮಾತುಂಗಾದಲ್ಲಿ ರಾಜಾಜಿಯವರ ಸಭೆಯಲ್ಲಿ ನಡೆದ ಪುಂಡಾಟಿಕೆಯ ಸುದ್ದಿಯನ್ನೋದಿ ವಿಷಾದವಾಗುವದು. ರಾಜಾಜಿಯವರು ಲೋಕಪ್ರಿಯವಲ್ಲದೆಂದು ತೋರುವ ಅಭಿಪ್ರಾಯವನ್ನು ತಳೆದ ಕೂಡಲೆ ಮರ್ಯಾದೆಯ ಎಲ್ಲ ಹಕ್ಕನ್ನು ಅವರು ಕಳೆದುಕೊಂಡರೊ? ಆಮಂತ್ರಣದ ನೇರೆಗೆ ಅವರು ಮಾತುಂಗಾಕ್ಕೆ ಹೋದರು. ಅವರ ಭಾಷಣವನ್ನು ಶಾಂತರೀತಿಯಿಂದ ಕೇಳುವದವಶ್ಯವಾಗಿತ್ತು. ಅವರ ಅಭಿಪ್ರಾಯ ಸರಿಯಲ್ಲೆಂದೆನಿಸುವವರು ಆ ಸಭೆಗೇ ಹೋಗಬೇಕಾಗಿದ್ದಿಲ್ಲ. ಅಲ್ಲಿಗೆ ಹೋದಬಳಿಕ ಅವರು ಹೇಳುವದನ್ನು ಕೇಳಿಕೊಳ್ಳಬೇಕಾಗಿತ್ತು. ಅವರಿಗೆ ಪ್ರತಿಪ್ರಶ್ನೆ ಕೇಳಬಹುದಾಗಿತ್ತು. ಅವರ ಮೇಲೆ ಡಾಂಬರ ಸುರುವಿ ಗೊಂದಲ ಹಾಕಿದನರು ತಮ್ಮ ಸ್ವಂತ ಅಮರ್ಯಾದೆ ಮಾಡಿಕೊಂಡಂತಾಯಿತಲ್ಲದೆ ತಮ್ಮ ಉದ್ದೇಶಕ್ಕೂ ಭಾಧೆಯನ್ನುಂಟು ಮಾಡಿದರು. ಅವರ ಮಾರ್ಗವು ಸ್ವರಾಜ್ಯ ಮಾರ್ಗವು ಅಲ್ಲ. ಅಜಂತ ಹಿಂದುಸ್ತಾನದ ಮಾರ್ಗವೂ ಅಲ್ಲ. ಮಾತುಂಗಾದಲ್ಲಿಯ ಪುಂಡಾಟಿಕೆಯೇ ಇಂಥ ಅಸಭ್ಯತನ ತೋರಿಸುವ ಕೊನೆಯ ಕೃತಿಯಾಗಲಿ! ರಾಜಾಜಿಯನರು ಅಂಥ ಕಠಿಣ ಪ್ರಸಂಗದಲ್ಲಿ ಅಂದು ತೋರಿದ ಶಾಂತತೆ, ಸೌಜನ್ಯ, ಸಹನಶೀಲತೆ ಮತ್ತು ನಿರ್ಧಾರ ಮುಂತಾದ್ದು ಅವರ ಯೋಗ್ಯತೆಗೆ ತಕ್ಕುವಾಗಿವೆ. ಇವುಗಳಿಂದ ಅವರಿಗೆ ಅನುಯಾಯಿಗಳು ಸಿಕ್ಕವಿದ್ದರೂ ಅವರ ಪ್ರಶಂಸೆ ನಾಡುವ ಅನೇಕ ಜನ ಅವರಿಗೆ ಸಿಕ್ಕುನರು. ಏಕೆಂದರೆ ಸಾಮಾನ್ಯವಾಗಿ ಜನರು ಯಾವದೇ ಸಾಧಕ ಬಾಧಕ ವಿಚಾರ ಮಾಡುವದಿಲ್ಲ. ಅವರು ತಮ್ಮ ಧುರೀಣರನ್ನು ಹಿಂಬಾಲಿಸುವರು. ಆ ಧುರೀಣರಲ್ಲಿರಬೇಕಾದ ಗುಣಗಳು ರಾಜಾಜಿಯನರಲ್ಲಿ ಎಂದೂ ಇಲ್ಲದೆ ಇರುವದಿಲ್ಲ.

ಬಂಗಾಲಿ ಖಾಯಿಯ ಎರಡು ಪ್ರಶ್ನೆಗಳಿಗೆ ಗಾಂಧೀಜಿಯವರ ಉತ್ತರ.

ಪ್ರಶ್ನೆ—ಜವಾನ ಡಾಳಿಯ ಅಂಜಿಕೆ ಈಗ ಬಂಗಾಲಕ್ಕುಂಟಾಗಿದೆ. ಈ ನ್ಯಾಯದಲ್ಲಿಯ ರಾಜಕೀಯ ಕಾರ್ಯಕರ್ತರು ತಮ್ಮ ತಮ್ಮೊಳಗಿನ ಮತಭೇದಗಳನ್ನು ಸರಿಪಡಿಸಿಕೊಳ್ಳುವ ಸಮಯವೀಗ ಪ್ರಾಪ್ತವಾಗಿದೆ. ಯೋಗ್ಯ ಮನುಷ್ಯನು ಮಧ್ಯಸ್ತಿಕೆ ಮಾಡಿದರೆ ಮಾತ್ರ ಅವರು ತಮ್ಮ ಈ ಗೃಹಕಲಹವನ್ನು ಕೂಡಲೆ ಮರೆಯುವರು. ಆ ಧ್ಯೇಯಸಾಧನೆಗಾಗಿ ನೀವು ಪ್ರಯತ್ನಿಸಿ ಉಂಟಾಗಬಹುದಾದ ಅನರ್ಥದಿಂದ ಬಂಗಾಲವನ್ನುಳಿಸುವಿರಾ?

ಉತ್ತರ—ನೀವು ಹೇಳುವದೆಲ್ಲ ನಿಜವಿರುವದು. ಆದರೆ ಮಧ್ಯಸ್ತಿಕೆ ಮಾಡಲು ನಾನು ಯೋಗ್ಯ ಮನುಷ್ಯನೋ ಎಂಬ ಬಗ್ಗೆ ನನಗೆ ಸಂದೇಹ. ಬಂಗಾಲದ ಮನುಷ್ಯನೆ ಈ ಪ್ರಶ್ನೆಯನ್ನು ಬಿಡಿಸಬೇಕು. ನಾನೀತಂತ್ರವನ್ನು ಮಾಡಬಲ್ಲೆನೆಂದು ನನ್ನಲ್ಲಿ ಆತ್ಮನಿಶ್ವಾಸವಿದ್ದರೆ ಈ ಹೊತ್ತೆ ನಾನು ಬಂಗಾಲಕ್ಕೆ ಹೋಗುತ್ತಿದ್ದೆ. ಯಾವನೊಬ್ಬನು ವಿಜಾರವಾತಿದರೆ ಮತಭೇದಗಳೆಲ್ಲ ತೀರ ಕ್ಷುಲ್ಲಕನೆಂದೆನಿಸಿ ಅವನ್ನು ಹೋಗಲಾಡಿಸಲು ಮಧ್ಯಸ್ತನ ಅನಶ್ಯಕತೆಯೆ ಉಳಿಯುವದಿಲ್ಲ.

ಪ್ರಶ್ನೆ—ನನ್ನ ಗಂಡನು ಕಲಕತ್ತೆಯ ಒಂದು ಸಾಲೆಯಲ್ಲಿ ಶಿಕ್ಷಕನಾಗಿರುವನು. ಅವನ ಉತ್ಪನ್ನವು ಈಗಾಗಲೆ ಬಹಳ ಕಡಮೆಯಾಗಿದೆ. ಇನ್ನೊಂದು ತಿಂಗಳೊಪ್ಪತ್ತಿನಲ್ಲಿ ಅವನ ಉತ್ಪನ್ನವು ಸ್ವಲ್ಪೂ ಉಳಿಯಲಿಕ್ಕಿಲ್ಲೆಂಬ ಭೀತಿ ನನಗೆ. ಜನ ಈಗ ಅವನಿಂದ ಉದರಪೋಷಣೆ ಮಾಡಿಕೊಳ್ಳುತ್ತಿರುವರು. ಪೊಡಲು ಕುಟುಂಬಕ್ಕೆ ಸಾಲುವಷ್ಟು ಅವನು ಸಂಪಾದನೆ ಮಾಡುತ್ತಿದ್ದನು. ಆದರೆ ಈಗ ಉದರಪೋಷಣಕ್ಕೆ ಬೇರೆ ಮಾರ್ಗವೆ ಇಲ್ಲ. ನನ್ನ ಗಂಡನು ದೇಶಾಭಿಮಾನಿ ಮತ್ತು ಕಾಂಗ್ರೆಸ್ ವೃತ್ತಿಯವನಿರುವ ನೆಂಬುದು ನನಗೆ ಗೊತ್ತಿದೆ. ಆದರೆ ನನ್ನೆಲ್ಲರಿಗೆ ಅನ್ನವನ್ನು ಕೊಡುವದಕ್ಕಾಗಿ ಅವನು ನಿರ್ವಾಹವಿಲ್ಲದೆ ಯುದ್ಧದ ನೋಕರಿಯಲ್ಲಿ ಸೇರಬೇಕಾಗಿದೆ. ಬೇರೆ ಯಾವದನ್ನು ಅವನು ಮಾಡಬಲ್ಲನು? ಇಂಥ ವಿಪತ್ತಿನಲ್ಲಿ ಸಿಕ್ಕವರಿಗೆ ನಿಮ್ಮ ಸಲಹೆಯೇನು?

ಉತ್ತರ—ಇದೊಳ್ಳೆ ಗಂಭೀರವಾದ ಪ್ರಶ್ನೆ. ಹೊಟ್ಟೆಗೆ ಹಿಟ್ಟನ್ನು ಸಂಪಾದಿಸುವದಕ್ಕಾಗಿ ಸೈನ್ಯಖಾತೆಯನ್ನು ಸೇರುವದು ಬಹಳ ಸುಲಭವಾಗುವದೆಂದು ನನಗೆ ಗೊತ್ತಿದೆ. ನನ್ನಂತೆ ನೀನು ಮತ್ತು ನಿನ್ನಗಂಡನು ಎಲ್ಲ ಯುದ್ಧವಿರೋಧಿಯಾಗಿದ್ದರೆ ನೀವು ಹಸಿವೆಯಿಂದೆ ಬಳಲಿಯಾದರೂ ನಿಮ್ಮ ವಿರೋಧವನ್ನು ವ್ಯಕ್ತಮಾಡಬೇಕು. ಹೊಟ್ಟೆಗಿಲ್ಲದ್ದಕ್ಕಾಗಿ ನೀವು ಮರಣ ಹೊಂದುವದನ್ನು ಪರಮಾತ್ಮನು ತಡೆಯುವನು. ನೀವು ನಿಮ್ಮ ಇರುವಿಕೆಯನ್ನು ಸ್ವಲ್ಪಮಟ್ಟಿಗೆ ಬದಲಿಸಬಹುದು ಮಧ್ಯಮವರ್ಗದವರ, ರೈತರ, ಜೀವನ ಮಟ್ಟಕ್ಕೆ ಬರಬೇಕಾಗುವದು ಎಂದರೆ ಮಾತ್ರ ಹಿಂದುಸ್ತಾನದ ನಿಜ ಚಿತ್ರವು ನಮ್ಮ ಕಣ್ಣಿಗೆ ಗೋಚರವಾಗುವದು. ಅಲ್ಲದೆ ಲಕ್ಷಗಟ್ಟಲೆ ಜನರ ದಿನಕ್ಕೂ ಬೆಳೆಯುತ್ತಿರುವ ದುಃಖವನ್ನು ಹೋಗಲಾಡಿಸುವ ಮಾರ್ಗ ನಮಗೆ ಗೊತ್ತಾಗಬಹುದು. ಆದರೆ ಈ ಬಗೆಯ ವಿರೋಧವು ನಿನ್ನುದಿಲ್ಲದಿದ್ದರೆ ನಿಮ್ಮ ಗಂಡನು ಸೈನ್ಯ ಖಾತೆಯಲ್ಲಿ ಸೇರುವದಲ್ಲಿ ಏನೂ ಅಪಾಯವಿಲ್ಲೆಂದು ನನಗೆನಿಸುತ್ತದೆ. ಅನೇಕರು ಮಾಡುತ್ತಿರುವದಕ್ಕಿಂತ ಬೇರೆ ಕಟ್ಟು ಕೆಲಸವನ್ನು ಅವರೇನು ಮಾಡುವದಿಲ್ಲ.

ಸೇವಾಗ್ರಾಮ ೨೯-೬-೪೨.

ಮೋ. ಕ. ಗಾಂಧಿ

ಶ್ರೀ ಜವಾಹರ್‌ಲಾಲ್‌ನೆಹರು ತಮ್ಮ ರಕ್ತವನ್ನು ಕೊಡಲು ಒಪ್ಪಿದ್ದಾರೆ.

ವಿಮಾನ ಮುತ್ತಿಗೆಗಳಲ್ಲಿಯೂ ಇತರ ವಿಧವಾದ ಮುತ್ತಿಗೆಗಳಿಗೂ ಗುರಿಯಾಗಿ ಗಾಯಗೊಂಡು ನರಳುವ ಪ್ರಜೆಗಳಿಗೆ ಬೇಕಿಯವರ ರಕ್ತವನ್ನು ಕೊಡಲು ಈಗ ಎಲ್ಲಾ ಕಡೆಗಳಲ್ಲಿಯೂ ರಕ್ತಕೂಡಿಡುವ ಪ್ರಯತ್ನ ನಡಿಸುತ್ತಿರಲಾಗಿದೆಯೆಷ್ಟೆ. ಪಂಡಿತ ಜವಾಹರ್‌ಲಾಲ್ ನೆಹರುರವರು ಕೂಡ ತಮ್ಮ ರಕ್ತವನ್ನು ಕೊಡಲು ಮುಂದೆ ಬಂದಿದ್ದಾರೆ ಕಲ್ಕತ್ತೆದಲ್ಲಿರುವ ರಕ್ತ ಕೂಡಿಸುವ ಸಂಸ್ಥೆಯ ವೈದ್ಯಸ್ಥಾಪಕರಾದ ಡಾ॥ ಜೆ. ಬಿ ಗ್ರಾಂಟ್‌ರವರಿಗೆ ಶ್ರೀ ಜವಾಹರ್‌ಲಾಲ್ ನೆಹರುರವರು ಒಂದು ಪತ್ರಬರೆದು ತಮ್ಮ ಸಹಕಾರವನ್ನು ನೀಡಿದ್ದಾರೆ. ತಮ್ಮ ರಕ್ತವನ್ನು ಕೊಡುವದಕ್ಕೆ ಕಾವು ಸಿದ್ಧರಾಗಿರುವುದಾಗಿ ನುಡಿದಿದ್ದಾರೆ. ಇದರಲ್ಲಿ ರಾಜಕೀಯ ವಾದ ವಿವಾದಕ್ಕೆ ಆಸ್ಪದವಿಲ್ಲವೆಂದೂ ಲೇಶವಾದರೂ ಸಂಶಯ ಬರಕೂಡದೆಂದು ತಾವು ರಕ್ತವನ್ನು ಕೊಡುವದರಿಂದ ಸಂಶಯ ನಿವಾರಣೆಯಾಗಬಹುದೆಂದೂ ಅವರು ಸೂಚಿಸಿದ್ದಾರೆ.

ಶ್ರೀ ಬಿ. ವಿ. ವೈದ್ಯ, ಡಿಸ್ಟ್ರಿಕ್ಟ್ ಸೂಪರೆಂಟೆಂಡೆಂಟ್ ಇನ್ ಛಾರ್ಜ್ ಆಲ್ ಇಂಡಿಯಾ ಪೀಪಲ್ಸ್ ಬಿನಫಿಟ್ ಸರ್ವಿಸ್ - ಲಿಮಿಟೆಡ್. ಬಳ್ಳಾರಿ

ಇವರಿಗೆ

ನೀವು 7-12ರಲ್ಲಿ ನಾನು ಪ್ರಕಟಿಸಿದ ಪ್ರಶ್ನೆಗಳಿಗೆ ತಾವು ಉತ್ತರ ಕೊಡದೆ, 'ನವಭಾರತ' ಪತ್ರಿಕೆಯು ಪ್ರತಿಗಳನ್ನು ಆರ್ಗನೈಜರ್ ಮತ್ತು ಗವರ್ನಿಂಗ್ ಬಾಡಿಗೆ ಕಳುಹಿಸಿರುವೆಂದೂ, ಇದಕ್ಕೆ ನೀವು ಜವಾಬ್ದಾರರಲ್ಲವೆಂದೂ. ಪ್ರಶ್ನೆಗಳಿಗೆ ಉತ್ತರ ಬಂದರೆ 'ಹಿಂದೂ' ಪತ್ರಿಕೆಯಲ್ಲಿ ಪ್ರಕಟಿಸುವಿರೆಂದೂ ಬರೆದ ತಮ್ಮ B ೩೬೬೪ ತಾ. ೯-೬-೪೨ ಪತ್ರ ಇಂದು ಟಪ್ಪಾಲಿನಿಂದ ನನ್ನ ಕೈಸೇರಿದೆ. ಬಹಳ ಸಂತೋಷ, ಹರಪನಹಳ್ಳಿಯ ಮಾನ್ಯಸದ್ಗೃಹಸ್ಥರಾದ ನೀವು ಜಿಲ್ಲಾ ಸೂಪರೆಂಟರ ನಡಿಯಿಂದ ಜವಾಬ್ದಾರಿ ನಹಿಸಿ, ಇಷ್ಟಾದರೂ ಪತ್ರ ಬರೆದುದಕ್ಕೆ ನಿಮಗೆ ರುಣಿ ಇರುತ್ತೇನೆ. ಇಲ್ಲವೆ ಒಬ್ಬರಾದರೂ ಪರಿಚಯ ವ್ಯಕ್ತಿಗಳು ದೊರೆತಂಬುದು ಮತ್ತೊಂದು ಸಂತೋಷದ ವಿಷಯ.

ನೀವು ಕೆಲ ತಿಂಗಳಿಂದ ಈ ಕಂಪನಿಯ ಪರವಾಗಿ ಕೆಲಸ ಮಾಡುತ್ತಿರುವಿರಷ್ಟೆ, ಆಫ್ಟರ್ ಡಿಸ್ಟಿಬ್ಯೂಟ್ ಕಟ್ಟಿ, ಕಂಪನಿಯ ಸಾಕಷ್ಟರಾಗಿ ಸೇರುವ ಮುಂಚೆ ಪೂರ್ವಾ ಪರಗಳನ್ನು ಚನ್ನಾಗಿ ವಿಚಾರಿಸಿಯೇ – ನೀವು ಕಾರ್ಯ ಪ್ರಾರಂಭಿಸಿದ್ದಲ್ಲವೇನು? ಅಂದ ಮೇಲೆ ನೀವಾದರೂ, ನಿಮಗೆ ತಿಳಿದ ನಿಯಮಗಳನ್ನು ಸಾರ್ವಜನಿಕರ ಹಿತವ ದೃಷ್ಟಿಯಿಂದ ತಿಳಿಸಬೇಕೆಂದು ಕೋರುತ್ತೇನೆ.

೧) ಮೇಲ್ಕಾಣಿಸಿದ ಸರ್ವಿಸ್ ನ ಮುಖ್ಯ ಕಾರ್ಯಾಲಯವು ಯಾವ ಊರಲ್ಲಿದೆ? ೨) ಇದನ್ನು ಸ್ಥಾಪಿಸಿದವರ ಹೆಸರುಗಳೇನು? 3) ಇಕಾಸ್ಟೋರೇಟೆಡ್ ಇನ್ ಮೈಸೂರು ಎಂದು ನಿಮ್ಮ ಪತ್ರಗಳಲ್ಲಿದೆ, ಅಂದರೆ, ಬಳ್ಳಾರಿಯ ಶಾಖೆಯು ಮೈಸೂರಿನ ಶಾಖೆಯೇ? ಮೈಸೂರಿನ ಶಾಖೆಯ ಪ್ರಮುಖರ ಹೆಸರುಗಳೇನು? 4) ನೀವೂ, ನಿಮ್ಮ ಸ್ನೇಹಿತರೂ ಕಟ್ಟಿರುವ 50 ರೂ. ಪ್ರಕಾರವ ಡಿಪಾಜಿಟ್ ಯಾವ ಬ್ಯಾಂಕಿನಲ್ಲಿ ಯಾರ ಹೆಸರಮೇಲೆ ಡಿಪಾಜಿಟ್ ಇರುತ್ತದೆ? ಆ ಹಣದ ಭದ್ರತೆಗೆ ಯಾರು ಜವಾಬ್ದಾರರು? 5) ನಿಮಗೆ ಕೊಡುತ್ತಿರುವ ಮಾಸಿಕ ನೇತನವನ್ನು ಯಾವ ಘಂಡಿನಿಂದ ಕೊಡಲಾಗುತ್ತಿದೆ? 6) ನೀವು ಹರಪನಹಳ್ಳಿ ತಾಲ್ಲೂಕಿನಲ್ಲಿ ಸೇರಿನ ರೂಪದಿಂದಲೋ ಅಥವಾ ವಿಜಂಟರ ಡಿಪಾಜಿಟ್ ರೂಪದಿಂದಲೋ ಎಷ್ಟು ಹಣವನ್ನು ವಸೂಲಿಮಾಡಿರುವಿರಿ? 7) ಈಗ ನೀವು ಸೂಪರೆಂಟರ ಸ್ಥಾನದಲ್ಲಿ ಇನ್‌ಛಾರ್ಜು ಆಗಿರುವ ದರಿಂದ, ಎಷ್ಟು ಜನರಿಂದ ಎಷ್ಟು ತಾಲೂಕುಗಳ ಪರವಾಗಿ ಡಿಪಾಜಿಟ್ ಹಣ ತೆಗೆದುಕೊಂಡಿರುವ ಲೆಕ್ಕ ಸಾರ್ವಜನಿಕರ ಮುಂದೆ ಇಡಿರಿ.

ಕಾರ್ಯಾಲಯ, ಜವಾನ-ಜಗ್ರೀನೆಂಟ್ ಫಾರಂ-ಲೋನ್ ಬಾಂಡು ಒಕ್ಕೆಯ ಲೆಟರ್ ಹೆಡ್-ರಬ್ಬರ್ ಸ್ಟ್ಯಾಂಪುಗಳಿಂದಲೇ ಜನರಿಗೆ ವಿಶ್ವಾಸಹುಟ್ಟುವುದು ಕಠಿಣವೆಂಬುದನ್ನು ನೀವು ಅರಿಯದೆ ಇಲ್ಲ. **ತಲೆ ಕಟ್ಟಿ ನಿರುದ್ಯೋಗೀ ಯುವಕರಿಗೆ ನೀವು ನಿಜವಾಗಿಯೂ ಉದ್ಯೋಗ ಪ್ರದಾನಮಾಡಿ ಸಹಾಯಮಾಡುವ ಇಚ್ಛೆಇದ್ದರೆ ಮತ್ತು ನಿಮ್ಮದು ಸಾರ್ವಜನಿಕ ಸಂಸ್ಥೆಯಾದರೆ ಮುಚ್ಚುಮರೆಯಿಲ್ಲದೆ ಎಲ್ಲಾ ಪ್ರಕಟಿಸಿರಿ.** ಇಲ್ಲವಾದರೆ ನಾನೇ ಸಾರ್ವಜನಿಕರಿಗೆ ಎಚ್ಚರಿಕೆ ಕೊಟ್ಟು ನಿಮ್ಮಮೇಲೆ ತಕ್ಕ ಚರ್ಯೆ ತೆಗೆಮಕೊಳ್ಳಲು ಏರ್ಪಡಿಸಬೇಕಾಗುತ್ತದೆ.

"ಪ್ರಜಾಹಿತೈಷಿ"

ಬಳ್ಳಾರಿ ಜಿಲ್ಲಾ ಬೋರ್ಡು ಸಭೆ.

ಜಿಲ್ಲಾಬೋರ್ಡು ಸಭೆಯು 4 7-42ನೇ ಶನಿವಾರ ಸಾಯಂಕಾರ ಶ್ರೀ ನ ಗನಗೌಡ ರವ್ಯಕ್ಷತೆಯಲ್ಲಿ ನೆರೆಯಿತು. ಈ ಪೂರ್ವ ಭಾಗದ ರಸ್ತೆಗಳ ರಿಪೇರಿ ಸುತ್ತು ಇತರ ಸಾಮಾನ್ಯ ವಿಷಯಗಳ ನಿರ್ಣಯವಾದ ನಂತರ ಈ ಮುಖ್ಯ ವಿಷಯಗಳು ತೀರ್ಮಾನಿಸಲ್ಪಟ್ಟವು.

ವಿದ್ಯಾಸೆಸ್ಸನ್ನನ್ನು 3 ರಿಂದ 3½ ಪೈ ಹೆಚ್ಚಿಸಬೇಕು ಜಿಲ್ಲಾಬೋರ್ಡು ಎಡುಕೇರನಲ್ ಆಫೀಸರವರ ಸ್ಥಳವನ್ನು ವಿದ್ಯಾಶಾಖೆಯಲ್ಲಿರುವ ಬಿ. ಎ. ಯಲ್. ಟಿ ಯವರಿಂದಲೇ ತುಂಬಬೇಕು. ಶಾಲೆಗಳಲ್ಲಿ ಶೇಕಡ 25 ಬಾಲೆಯರಿರಬೇಕೆಂಬನಿಯಮವು ಹೋಗಬೇಕು. ಪ್ರಾಥಮಿಕ ಶಾಲೋಪಾಧ್ಯಾಯರಿಗೆ, ಸಬಳವನ್ನು ಕೊಟ್ಟರುವ ಕಾರಣ [ಯಾವಾಗ ಕೊಟ್ಟರುವಿರಿ? ಕೊಟ್ಟಿಲ್ಲವಿನ್ನಿರಿ ಯಾವಾಗ ಕೊಡುವಿರಿ? - ಸಂಪಾದಕ] ಜವರನ್ನು ಹೊರತಾಗಿ ಉಳಿದ ಜಿಲ್ಲಾಬೋರ್ಡು ನವಕರರಿಗೆ, ವಾರ್ಷಿಕ ಸಂಬಳ 30 ರೂಪಾ ಅದಕ್ಕೋಸ್ಕರವಿರುವವರಿಗೆ, **ಯುದ್ಧದ ತುಟ್ಟಿಭತ್ಯ** - ಕೊಡಲು ತೀರ್ಮಾನವಾಯಿತು.

ಕಾಂಗ್ರೆಸ್ ವರ್ಕಿಂಗ್ ಸಮಿತಿ ಹೊಸ ಚಳವಳಿ. [ಜವಹರಲಾಲರ ಹೇಳಿಕೆ]

ಈ ಸಭೆಯಲ್ಲಿ ಗಾಂಧೀಜೀಯವರ ಹೊಸಚಳವಳಿ ಬಗ್ಗೆ ಚರ್ಚೆಯಾಗಿ, ಗಾಂಧೀಜೀಯವರೇ ಶರಾವನ್ನು ಮಂಡಿಸುವುದು ನಿಶ್ಚಯವಾದಂತಿದೆ. ಪಂಡಿತ ಜವಹರಲಾಲರು ವಾರ್ಧಾದಲ್ಲಿ ಉಪನ್ಯಾಸಕೊಡುತ್ತ, 'ನಾವು ಸುಮ್ಮನೆ ಕೊಡುವುದು ಸಾಧ್ಯವಿಲ್ಲ' ಸಾಮ್ರಾಜ್ಯ ತತ್ವಧಾರಿಯಾದ ಬ್ರಿಟನ್ನಿಗೂ ಜಪಾನಿಗೂ ಯೋಗ್ಯ ಪ್ರತಿಭಟನೆಯಾಗಬೇಕಾಗಿದೆ. ನಾವು ಮಾಡುವ ಕಾರ್ಯದಿಂದ ಭಾರತ ರಕ್ಷಣೆಗಾಗಲಿ, ಚೀನಕ್ಕೆ ಸಹಾಯ ವೊದಗಿಸುವ ಕಾರ್ಯದಲ್ಲಾಗಲಿ ಯಾವ ತೊಂದರೆಯೂ ಆಗಲಾರದು, ನನ್ನನ್ನು ಬಂಧಿಸಿದರೆ, ರಕ್ಷಣೆಯ ಕಾರ್ಯಕ್ಕೆ ಪ್ರತಿಬಂಧಕವಾಗಬಹುದು. ಈ ಕಾರಣ ನನ್ನನ್ನು ಕೈಸೆರೆಮಾಡಲಿಕ್ಕಿಲ್ಲ. ನಾವು ಇಂಥಾ ಸಂದರ್ಭದಲ್ಲಿ ಸುಮ್ಮನೆ ಕೊಡುವುದರಿಂದ ಹಿಂದೂಸ್ತಾನದಲ್ಲಿ ಈಗ ನಡೆಯುತ್ತಲಿರುವ ಪ್ರತಿಯೊಂದು ಕಾರ್ಯಕ್ಕೂ ಒಪ್ಪಿಗೆಯನ್ನಿತ್ತಂತಾಗುವುದು. "

ರಷ್ಯಾದಲ್ಲಿನ ಪರಿಸ್ಥಿತಿ ಬಹಳ ಕಟ್ಟದೆ.

ವೋರೋನೆಸ್ಸಿ ಎಂಬ ಮುಖ್ಯ ಪಟ್ಟಣವನ್ನು ಖಾಲಿಮಾಡಿದನಂತರ, ಸ್ಟಾರಿ ಯಸ್ಕೊಲ ಎಂಬ ಪೂರ್ವದ ನಗರವನ್ನು ರಷ್ಯನರು ಖಾಲಿ ಮಾಡಿರುವರು ಮಾಸ್ಕೋಕ್ಕೆ 60 ಮೈಲಿ ದೂರದಲ್ಲಿರುವ ಪಿಸ್ಕಲ್ ಎಂಬ ನಗರವನ್ನೂ ಖಾಲಿಮಾಡಲಾಗಿದೆಯೆಂದು ತಿಳಿದುಬಂದಿದೆ. ಜರ್ಮನರ ಒತ್ತಡವು ಬಹಳ ಹೆಚ್ಚಿದೆ. ಅವರು ಅಧಿಕ ಸಂಖ್ಯಾಕರಾಗಿ ಆಧುನಿಕ ರಷ್ಯನು ಸಜ್ಜಿತರಾಗಿ ಮುಂದೆ ನುಗ್ಗುತ್ತಿರುವರೆಂದು, ರಷ್ಯದಲ್ಲಿ ಭೀಕರ ಗಂಡಾಂತರ ಒದಗಿದೆ.

ಶ್ರೀ ಲೋಕಿರೆಡ್ಡಿಯವರು ಗೆದ್ದರು.

ಆದೇನಾಲ್ ಮಾರ್ಕೆಟಿಂಗ್ ಬೋರ್ಡಿಗೆ ಬಳ್ಳಾರಿ ಜಿಲ್ಲಾ ಸ್ಥಾನೀಕ ಸಂಸ್ಥೆಗಳ ಪರವಾಗಿ, ಜಿಲ್ಲಾಬೋರ್ಡು ಪ್ರೆಸಿಡೆಂಟರಾದ ಶ್ರೀ ಪಿ. ಲೋಕಿರೆಡ್ಡಿಯವರೂ, ಹಾಲರ್ವಿ ರಾಮುರೆಡ್ಡಿಯವರೂ ನಿಂತಿದ್ದರು ಮೊದಲನೆಯವರಿಗೆ 49 ವೋಟುಗಳೂ, ಎರಡನೆಯವರಿಗೆ 25 ವೋಟುಗಳೂ ಬಂದು ಶ್ರೀ ಲೋಕಿರೆಡ್ಡಿಯವರು ಗೆದ್ದರು.

ಪ್ರಾಥಮಿಕ ಶಾಲೋಪಾಧ್ಯಾಯರಿಗೆ ಇಕ್ರಿಮೆಂಟು ಎಂದು ಕೊಡುವರು ?

[ಉಗ್ರಕಾರ್ಯಕ್ರಮವಿಲ್ಲದೆ ಸಾಧಿಸಲಾರದು]

—ಕ್ರ—

ಜಿಲ್ಲಾ ಪ್ರಾಥಮಿಕೋಪಾಧ್ಯಾಯರ ಪ್ರತಿನಿಧಿಗಳು ಮೇ ತಿಂಗಳಲ್ಲಿ ಜಿಲ್ಲಾಬೋರ್ಡಿನ ಅಧ್ಯಕ್ಷರನ್ನು ಕಂಡು ಶಿಷ್ಟಮಂಡಲ ದಮೂಲಕ (Deputation) ತಮ್ಮ ಕಷ್ಟಗಳನ್ನು ಹೇಳಿಕೊಂಡರು. ಯುದ್ಧದ ಕಾರಣದಿಂದ ಭಯಂಕರ ಆರ್ಥಿಕ ಪರಿಸ್ಥಿತಿಯೊದಗಿ ಬಡ ಉಪಾಧ್ಯಾಯರು ಆರ್ಥಿಕ ಸಂಕಟಕ್ಕೊಳಗಾಗಿದ್ದರೂ ಜಿಲ್ಲಾಬೋರ್ಡು ಉಪಾಧ್ಯಾಯರಿಗೆ ವಾರ ಆಲೋಯನ್ನು ಕೊಡಲು ದ್ರವ್ಯದ ಅಭಾವವಿದೆಯೆಂದು ಹೇಳಲಾಯಿತು. ಒಳ್ಳೆಯದು ! ಬೋರ್ಡಿನ ಕಷ್ಟಪರಿಸ್ಥಿತಿಯಲ್ಲಿ ಅದನ್ನು ಒತ್ತಾಯಪಡಿಸುವುದು ಬೇಡ - ಆದರೆ - ನಮಗೆ ನ್ಯಾಯವಾಗಿ ಬರಬೇಕಾದ ನಮಗೆ ಯೋಗ್ಯವಾಗಿ ಸಲ್ಲಬೇಕಾದ ಇಕ್ರಿಮೆಂಟುಗಳನ್ನು ಕೊಡಲು ಏತಕ್ಕೆ ಇಂಥಾ ವಿಷಮತೆ - ಇಂಥಾ ಸಾವತ್ರಾಶ ? ಆಹಾರಪದಾರ್ಥಗಳ ಧಾರಣೆಯು ಏರುತ್ತಿರುವ ಈ ಕಾಲದಲ್ಲಿ ನಮಗೆ ನಿತ್ಯಸಂಕಟ ಒದಗಿ ಜೀವನ ಪ್ರಶ್ನೆಯು ನಿತ್ಯಸಮಸ್ಯೆಯಾಗಿದೆ - **'ಬೆಳ್ಳಿಗೆ ಬಿನ್ನಾಟ - ಇಲಿಗೆ ಪ್ರಾಣ ಸಂಕಟ'** ಎಂಬುವ ರೀತಿಯಲ್ಲಿ ನಮ್ಮ ಪರಿಸ್ಥಿತಿಯಾಗಿದೆ. ಇಕ್ರಿಮೆಂಟು ಕೊಡಲು ಸರಕಾರವ ಆಕ್ಷೇಪಣೆ ಏನೂ ಇಲ್ಲವೆಂದು ನಿರ್ಧಾರವಾಗಿ ತಿಳಿದುಬಂದಿದೆ - ಆದರೆ ಯಾರ ಆಕ್ಷೇಪಣೆ - ಯಾರ ಆಡಚಣೆ ?

ಆಪತ್ತುಗಳಮೇಲೆ ಆಪತ್ತು ಎಂಬಂತೆ - ಪ್ರಾಥಮಿಕ ಶಾಲೋಪಾಧ್ಯಾಯರ ಜಿಲ್ಲಾ ಸಂಘವನ್ನು [District Board Elementary Teachers Guild] ನಿರ್ನಾಮಮಾಡಲಿಕ್ಕೆ ಸಾಧ್ಯವಿಲ್ಲೆಂದು ಡಿ. ಇ. ಒ. ರವರು ತಿಳಿಸಿದ್ದಾರಂತೆ. ಅದಕ್ಕೆ ಕಾರಣಗಳೇನು ? ಹೊಡಕುಗಳೇನು ? ಇವನ್ನಾಲೋಚಿಸಿ ಗಿಲ್ಡಿಗೆ ನಿಯಾಮಕವಾದ ಕಾರ್ಯದರ್ಶಿಗಳು ಡಿ. ಇ. ಒ. ರವರೊಡನೆ ಮಾತಾಡಿ ಮಾನ್ಯತೆ ಪಡೆಯಬೇಕು. ಇದು ಹೇಗೇ ಆಗಲಿ - ಸದರಿ ಸಂಘದ ಸದಸ್ಯರು ಮತ್ತೊಮ್ಮೆ ಕಲೆತು - ಇಕ್ರಿಮೆಂಟು ವಿಷಯನ್ನಲ್ಲಿ ಉಗ್ರಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

ಆರ್ಥಿಕ ಕಷ್ಟದಲ್ಲಿರುವ,
ಒಬ್ಬ ಉಪಾಧ್ಯಾಯ.

ರಿಜಿಸ್ಟರಾದ ವೈದ್ಯರು ಸಾಮಾನ್ಯ ವೈದ್ಯರು.

(Registered Medical Practitioners & ordinary Practitioners)

ಮದ್ರಾಸು ಸರಕಾರದವರು ವೈದ್ಯರನ್ನು ವಿವಿಧ ಭಾಗಗಳಾಗಿ ವಿಂಗಡಿಸಲು ಆಲೋಚಿಸುತ್ತಿರುವರು. ಸರಕಾರದಿಂದ ಮಾನ್ಯತೆ ಪಡೆದ ವೈದ್ಯಕೀಯ ಶಾಲೆಗಳಲ್ಲಿ ಶಿಕ್ಷಣ ಪಡೆದು ಉತ್ತೀರ್ಣರಾದವರಿಗೆ ಮಾತ್ರ - (Recognised Medical Schools) ರಿಜಿಸ್ಟರ್ಡ ಮೆಡಿಕಲ್ ಪ್ರಾಕ್ಟೀಷನರ್ ಎಂಬ ಹೋದಾ ದೊರೆಯುವುದೆಂದು ಕೇಳಿದ್ದೇನೆ. ಈ ಸೂಚನೆಯು ಬಹಳ ಒಳ್ಳೆಯದೆಂದೂ - ಸಾರ್ವಜನಿಕ ಆರೋಗ್ಯದೃಷ್ಟಿಯಿಂದ ಹಿತಕರವಾದುದೆಂದೂ ನಾನು ಸೂಚಿಸಬಯಸುತ್ತೇನೆ. ವೈದ್ಯಶಾಸ್ತ್ರದಲ್ಲಿ, ಶಸ್ತ್ರಚಿಕಿತ್ಸೆಯಲ್ಲಿ ಏನೂ ಜ್ಞಾನವಿಲ್ಲದ ಸಾಮಾನ್ಯರೂ (Quaks) ಶುಲ್ಕವನ್ನು ಸಲ್ಲಿಸಿ ತಮ್ಮ ಹೆಸರನ್ನು ರಿಜಿಸ್ಟರು ಮಾಡಿಕೊಳ್ಳುತ್ತಾರೆ. ಇದರಿಂದ ಶಿಕ್ಷಣ ಹೊಂದಿದವರಿಗೂ ಹೊಂದದವರಿಗೂ ಜನರು ಭೇದವನ್ನು ಕಂಡುಹಿಡಿಯುವುದು ಅಸಾಧ್ಯವಾಗಿದೆ. ಶಸ್ತ್ರಜ್ಞಾನವಿಲ್ಲದ ದ್ರವ್ಯನಗಳ ಪರಿಮಿತಿ ಪ್ರಮಾಣಗಳನ್ನರಿಯದ ಮತ್ತು ಆಂಗ್ಲಭಾಷೆಗೆ ಅಪರಿಚಿತರಾದ ಎಷ್ಟೋ ವೈದ್ಯರು ಶಸ್ತ್ರ ಹಿಡಿದು 'ಇಂಜಕ್ಷೇ' ಮಾಡುವುದು ನಿತ್ಯವಾಡಿಕೆಯಾಗಿಬಿಟ್ಟಿದೆ. ಈ ಪರಿಸ್ಥಿತಿಯಿಂದ ಅನೇಕ ಜನರು ಅಪಾಯಕ್ಕೊಳಗಾಗಿರುವರು. ಅನೇಕರು ಜೀವದಾನಮಾಡಿರುವರು.

ಈ ಕಾರಣ ಶಿಕ್ಷಣಹೊಂದಿದ ವೈದ್ಯರೆಲ್ಲಾ ಸಭೆಸೇರಿ ತಮ್ಮ ನಿರ್ಣಯವನ್ನು ಸರಕಾರಕ್ಕೆ ತಿಳುಹಿಸಬೇಕು. ಇದರಿಂದ ನಾವು ಆಯುರ್ವೇದ ವೈದ್ಯರ ಅವಮಾನವನ್ನು ಮಾಡುತ್ತೇವೆಂದಲ್ಲ. ಪಟ್ಟಣಗಳಿಗೆ ದೂರ ವಿರುವ ಸಾವಿರಾರು ಹಳ್ಳಿಗಳಲ್ಲಿ ಆಯುರ್ವೇದ ವೈದ್ಯರೂ, ಗಿಡಮೂಲಿಕೆಗಳ ಜ್ಞಾತರೂ ಆಮೋಘ ಉಪಕಾರ ಸಲ್ಲಿಸುತ್ತಿರುವರು. ಸರಕಾರವು ಪ್ರತಿ ಹಳ್ಳಿಗೂ ಶಿಕ್ಷಣ ಹೊಂದಿದ ವೈದ್ಯರನ್ನೊದಗಿಸಲು ಸಾಧ್ಯವೇ ಇಲ್ಲ, ಇಂಥಾ ಪರಿಸ್ಥಿತಿಯಲ್ಲಿ ಜನಸಾಮಾನ್ಯರಿಗೆ ಹಳ್ಳಿಯ ವೈದ್ಯರ ಅವಶ್ಯಕತೆ ಇದೆ. ಆದರೆ ಶಿಕ್ಷಣಹೊಂದಿದವರಿಗೂ - ಹೊಂದದವರಿಗೂ ವ್ಯತ್ಯಾಸವಿರಬೇಕೆಂಬುದೇ ನನ್ನ ಸಲಹೆ.

ಒಬ್ಬ,
ರಿಜಿಸ್ಟರ್ಡ ಮೆಡಿಕಲ್ ಪ್ರಾಕ್ಟೀಷನರ್

ರಾಜಾಜಿಯವರ ರಾಜೀನಾಮೆ.

ಮದ್ರಾಸು ಪ್ರಾಂತ್ಯದ ಹಿಂದಿನ ಕಾಂಗ್ರೆಸ್ ಮಂತ್ರಿಗಳೂ, ಸ್ವಪ್ರಸಿದ್ಧ ದೇಶಭಕ್ತರೂ ಆದ ಶ್ರೀ ಸಿ. ರಾಜಗೋಪಾಲಾಚಾರಿಯವರು ಕಾಂಗ್ರೆಸ್ಸಿನ ಎಲ್ಲಾ ಅಧಿಕಾರವದವಿಗಳಿಗೂ ರಾಜೀನಾಮೆ ಕೊಟ್ಟಿರುವರು ಮದ್ರಾಸು ಕಾಂಗ್ರೆಸ್ ಶಾಸನ ಸಭೆಯ ಮುಖಂಡರನ್ನು ಚುನಾಯಿಸಿಕೊಳ್ಳಲು 15.7 42ನೆಯ ಬುಧವಾರ ಪಾರ್ಟಿಮೀಟಿಂಗು ಸೇರಲಿದೆ.

ಭಾರತದಲ್ಲಿ ಪದಾರ್ಥಗಳ ಬೆಲೆಯು ವಿಶೇಷವಾಗಿ ಏರುತ್ತಿರುವುದನ್ನು ಗಮನಿಸಿ ಉಪಕ್ತಾಗಿ ಕಳವಳವನ್ನು ವ್ಯಕ್ತಪಡಿಸಿ ಪದಾರ್ಥಗಳ ಬೆಲೆಯನ್ನು ಹತೋಟಿಯಲ್ಲಿಡಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವಾಯಿತು.

ನಾವು ಕಣ್ಣುಗಳನ್ನು ಉಚಿತವಾಗಿ ಪರೀಕ್ಷಿಸುತ್ತೇವೆ.

ಓದುವದಕ್ಕೂ, ದೂರದೃಷ್ಟಿಗೂ, ಕನ್ನಡಿಕಗಳನ್ನೂ, ಬಿಸಿಲಿನ ಝಳದಿಂದ ಕಣ್ಣುಗಳನ್ನು ಕಾಪಾಡಿ ತಂಪಾಗಿಡಲು ಅನುವಾಗುವ ತಂಪು ಕನ್ನಡಿಕಗಳನ್ನೂ ಸುಲಭದರದಲ್ಲಿ ಮಾರುತ್ತೇವೆ. ಗ್ಯಾರಂಟಿ, ಯಾವ ಕ್ರೋಕ್ಸ್ ಕನ್ನಡಿಗಳು ಸರಿಯಾದ ಬೆಲೆಗೆ ದೊರೆಯುತ್ತವೆ ಬಡವರಿಗೂ, ಶ್ರೀಮಂತರಿಗೂ ಅನುಕೂಲಿಸುವ ಆಧುನಿಕ ಕಟ್ಟು (ಫ್ರೇಂ) ನಮ್ಮಲ್ಲಿವೆ. ಒಂದುಸಲ ಉಪಯೋಗಿಸಿದರೆ ನಿಮಗೆ ತೃಪ್ತಿಯಾಗುವುದು

ಹೆಚ್. ಎಸ್. ಅಂಡ್ ಸನ್ಸ್ ಬಳ್ಳಾರಿ

ಬಳ್ಳಾರಿಯಲ್ಲಿ

ಹಿಂದೂ ಮಹಾಸಭಾ ನಾಯಕರು.

ಅಖಿಲಭಾರತ ಹಿಂದೂ ಮಹಾಸಭಾ ಉಪಾಧ್ಯಕ್ಷರಾದ ಡಾಕ್ಟರ್ ಮೂಂಜಯವರು, ತಮಿಳ್ ನಾಂತ ಹಿಂದೂ ಮಹಾಸಭಾಧ್ಯಕ್ಷರಾದ ಶ್ರೀ ಪಿ. ವರದರಾಜುಲು ನಾಯಿಡುರವರು, ಬಳ್ಳಾರಿಗೆ 7 ನೇ ತಾ. ಆಗಮಿಸಿದರು. ಅವರನ್ನು ನಗರದ ಸಾವಿರಾರು ನಿವಾಸಿಗಳು ಸ್ಟೇಷನ್ನಿನಲ್ಲಿ ಸ್ವಾಗತಿಸಿ ಊರಿನ ಬೀದಿಗಳಲ್ಲಿ ನೆರವಣಿಗೆಯಿಂದ ತೆಗೆದು ಕೊಂಡು ಹೋದರು. ವಿಶ್ರಾಂತಿಯನಂತರ ಮಧ್ಯಾಹ್ನ ಕೆಲವ್ರನುಯರು ಅವರೊಡನೆ ಸಂಭಾಷಿಸಿದರು. ಸಾಯಂಕಾಲ ವೀರಶೈವ ಶಾಲೆ, ಕರಡೆಸ್ಪನ, ಜೌಕಿ ಸಂಸ್ಕೃತಪಾಠ ಶಾಲೆ, ಸನಜೀವನ, ಸುಬ್ಬನಜ್ಜನ ವ್ಯಾಯಾಮ ಶಾಲೆಗಳನ್ನು ಸಂದರ್ಶಿಸಿದರು. ಸಂಸ್ಕೃತ ಪಾಠಶಾಲಾಧ್ಯಾಪಕರಾದ ಶ್ರೀ ಷಡಕ್ಷರಶಾಸ್ತ್ರಿಗಳು ಸಂಸ್ಕೃತದಲ್ಲಿ ಮನೋಹರ ಭಾಷಣವಿತ್ತು ನಾಯಕರಿಗೆ ಹೃತ್ಪೂರ್ವಕ ಸ್ವಾಗತಿಸಿ ಹಿಂದೂಮಹಾಸಭಾ ಕಾರ್ಯಭಾಗದಲ್ಲಿ ಸಂಸ್ಕೃತಕ್ಕೆ ಯೋಗ್ಯಸ್ಥಾನವೀಯಬೇಕೆಂದು ಹೇಳಿದರು. ಸನಜೀವನದ ರಾಮಮೂರ್ತಿಯವರೂ ಸ್ಫೂರ್ತಿದಾಯಕವಾಗಿ - "ವಿಜಯನಗರ ವೀರರಕ್ತೋತ್ಪನ್ನರಾದ ಬಳ್ಳಾರಿಯ ಸನಯುವಕರು ದೇಶದ ಏಳಿಗೆಗೆ ಸರ್ವವಿಧ ಬಲಿದಾನಕ್ಕೆ ಸಿದ್ಧರಿರುವರೆಂದು ಹೇಳಿದರು. ಡಾಕ್ಟರವರು ಸಂತೋಷವನ್ನು ವ್ಯಕ್ತಪಡಿಸಿ ವ್ಯಾಯಾಮ ಶಾಲೆಯನ್ನು ಆಶೀರ್ವದಿಸಿದರು. ಸುಬ್ಬನಜ್ಜನ ವ್ಯಾಯಾಮಶಾಲೆಯ ಪಾರ್ಥಸಾರಥಿಯೂ ಕೂಡ ಒಳ್ಳೆಯಸ್ವಾಗತ ಕೊಟ್ಟು ನಾಯಕರ ಆಶೀರ್ವಾದ ಬೇಡಿದನು.

7 ನೇಯ ತಾ. ಮಂಗಳವಾರ ಸಾಯಂಕಾಲ ಸಾಂಬಮೂರ್ತಿ ವೈಧಾನದಲ್ಲಿ ಸೇರಿದ ಸಭೆಗೆ ಸಾವಿರಾರು ಜನ ಸ್ತ್ರೀ ಪುರುಷರು ಕಿಕ್ಕಿರಿದು ನೆರೆದಿದ್ದರು. ಸ್ವಾಗತಾನಂತರ ಬಳ್ಳಾರಿ ಹಿಂದೂಮಹಾಸಭೆ, ಹಿಂದೂಯುವಸಂಘ, ಆರ್ಯವೈಶ್ಯಯುವ ಜನಸಂಘದವರು ಮಾನಪತ್ರಗಳನ್ನರ್ಪಿಸಿದರು.

ಡಾ॥ ಮೂಂಜಿಯವರ ಭಾಷಣ: —

ಭಾರತ ರಾಜಕೀಯ ಜೀವನದಲ್ಲಿ ಪ್ರಮುಖರಲ್ಲೊಬ್ಬರಾದ ಶ್ರೀ ಬಿ. ರಾಜಗೋಪಾಲಾಚಾರಿಯವರು ದಕ್ಷಿಣ ಹಿಂದೂಸ್ಥಾನದಲ್ಲಿ ಬಲವತ್ತಾದ ಪ್ರಚಾರ ಕೈಗೊಂಡು ಮುಸಲ್ಮಾನರಿಗೆ ವಾಕಿಸ್ತಾನ ಕೊಡಬೇಕೆಂದು ಹೇಳುತ್ತಿದ್ದಾರೆ. ಇದರಿಂದ ಪ್ರಜಾಸಾಮಾನ್ಯರಲ್ಲಿ ದುಸ್ಪರಿಣಾಮವಾಗುತ್ತಿದೆ. ಇದನ್ನು ಸಕಾಲದಲ್ಲಿ ತಡೆಯಲು ನಾವು ಪ್ರಚಾರ ಕಾರ್ಯಕ್ರಮವನ್ನಿಟ್ಟುಕೊಳ್ಳಬೇಕಾಯಿತು. ಹಿಂದೂಧರ್ಮ, ಹಿಂದುಸಂಸ್ಕೃತಿ ಭಾರತ ಶಿಕ್ಷಣ ಸಂವಿಧಾನವನ್ನು ರಾಜಾಜಿಯವರು ರಚಿಸಿದರು.

ಲೀಗ ಮುಸಲ್ಮಾನರ ಏಕ ಮಾತ್ರ ಸಂಸ್ಥೆಯಲ್ಲ: -

ಅಖಿಲ ಭಾರತ ಮುಸ್ಲಿಂಲೀಗು ಮುಸಲ್ಮಾನರ ಏಕಮಾತ್ರ ಸಂಸ್ಥೆಯೆಂದು ಹೇಳಿಕೊಳ್ಳುತ್ತಿದೆ. ಅದರಲ್ಲಿ ಏನೂ ಹುರುಳಿಲ್ಲ. ಖಿಯೊಸಂಘ, ಅಹರಾರಸಂಘ ಜಮಿಯತ್ ಉಲೆಮಾ, ಮೋಮಿನ್ ಸಂಘಗಳೆಷ್ಟೋ ಮುಸಲ್ಮಾನರಿವೆ. ಭಾರತ ಮಂತ್ರಿಗಳು ಕೆಲವಿನಗಳ ಕೆಳಗೆ ಒಂದು ಹೇಳಿಕೆಯನ್ನು ಕೊಟ್ಟಾಗ ಅದನ್ನು ಖಂಡಿಸಿ ಮೋಮಿನಾನರು ತಾವು 4 ಕೋಟಿ 50 ಲಕ್ಷ ಜನರಿರುವುದಾಗಿಯೂ ತಾವು ಮುಸ್ಲಿಂಲೀಗನ್ನು ಒಪ್ಪುವುದಿಲ್ಲೆಂದೂ ಘಂಟಾಘೋಷವಾಗಿ ಹೇಳಿಬಿಟ್ಟರು. ಅನೇಕ ಮುಸ್ಲಿಂಸಂಸ್ಥೆಗಳು ಲೀಗಿಗಿಂತಲೂ ಹೆಚ್ಚು ವ್ಯಾಪ್ತಿನಿಧ್ಯವನ್ನು ಪಡೆದಿವೆ. ಲೀಗಿಗೂ ಜಿನ್ನಾರವನಿಗೂ ಬ್ರಿಟೀಷ ಸರಕಾರವು ಕೃತಕ ಜೀವನವನ್ನು ಕೊಟ್ಟು ಸಲ್ಲದ ಪ್ರಾಮುಖ್ಯತೆಯನ್ನು ಕೊಟ್ಟಿದೆ.

ಧರ್ಮಭೇದವಿರಬಹುದು ಸಂಸ್ಕೃತಿ ಭೇದವೆಲ್ಲಿಯದು ?

ಒಂದುದೇಶದಲ್ಲಿ ಅನೇಕ ಧರ್ಮಗಳ ಅಲ್ಪ ಸಂಖ್ಯಾಕರಿರಬಹುದು. ಆದರೆ ಅವರು ಬಹು ಸಂಖ್ಯಾಕ ಸಂಸ್ಕೃತಿಯನ್ನು ಸ್ವೀಕರಿಸಬೇಕಾಗಬಹುದು. ಹಿಂದೂಸ್ಥಾನದಲ್ಲಿರುವವರೆಲ್ಲಾ ಹಿಂದೂಗಳೆ ಅಂದರೆ ಎಲ್ಲರೂ ಹಿಂದೂ ಸಂಸ್ಕೃತಿಗೆ ಸೇರಿದವರೇ ಎಂದರ್ಥ ಒಬ್ಬ ಮುಸಲ್ಮಾನನು 3 ದಿನಗಳ ಹಿಂದೆ ಯೊ 3 ತಿಂಗಳು 3 ವರ್ಷ ಅಥವಾ 300 ವರ್ಷದ ಹಿಂದೆ ತನ್ನ ಹಿರಿಯರು ಹಿಂದೂ ಧರ್ಮವಿಟ್ಟು ಮುಸಲ್ಮಾನ ಧರ್ಮಾಂತರ ಹೊಂದಿದ ಮಾತ್ರಕ್ಕೆ ಅವನ ರಕ್ತಸಂಸ್ಕೃತಿ, ಭಾಷೆ, ವೇಷ, ಸ್ವಭಾವಗಳೆಲ್ಲಿ ಬದಲಾದಾವು? ಇಲ್ಲಿಯವರು ಮುಸಲ್ಮಾನರಾದ ಮಾತ್ರಕ್ಕೆ ಪರ್ಶಿಯನರಾದಾರೇ? ಪಂಜಾಬಿನ ಸುಪ್ರಸಿದ್ಧ ಶ್ರೀಮಂತರೂ ದೊನ್ನ ಕಾಂಗ್ರೆಸ್ ಪ್ರಮುಖರೂ ಆದ ಲಾಲಾ ಹರಿಕಿಸನಲಾಲರಿಗೆ 4 ಗಂಡು ಮಕ್ಕಳು 4 ಹೆಣ್ಣುಮಕ್ಕಳಿದ್ದಾರೆ. ಅವರ ಜ್ಯೇಷ್ಠ ಪುತ್ರನು ಮುಸಲ್ಮಾನನಾದನು. ಅಂದಮಾತ್ರಕ್ಕೆ ಅವನು ಹಿಂದೂಸ್ಥಾನಕ್ಕೆ ಪರಾಯನಾದನೇ? ಹಿಂದೂ ದೇಶದಲ್ಲಿರುವ ಮುಸಲ್ಮಾನರ ರಕ್ತ ಎಲುಬು ಸಂಸ್ಕೃತಿ ವಗೈರೆ ಹಿಂದೂಗಳೆದು. ಅವರ ರಾಷ್ಟ್ರೀಯತೆ ನಮ್ಮ ರಾಷ್ಟ್ರೀಯತೆಯಲ್ಲಿ ಭೇದವೆಣಿಸುವದು ಹುಚ್ಚತನ.

ಮುಸಲ್ಮಾನರು ಪ್ರತ್ಯೇಕ ರಾಷ್ಟ್ರವಲ್ಲ:

ಮುಸಲ್ಮಾನರು ಪ್ರತ್ಯೇಕ ರಾಷ್ಟ್ರವೆಂದು ಜಿನ್ನಾರವರು ಹೇಳುತ್ತಿರೆ (Separate Nation). ಹಿಂದೂಸ್ಥಾನದಲ್ಲಿ ನೆಲೆಸಿರುವ ಇಂಗ್ಲೀಷ್ ಪ್ರಂಚನಗ್ಯರೀಯನರು ವರರಾಷ್ಟ್ರಿಯವರಾಗುತ್ತಾರೆ. ವೇಷ, ಭಾಷೆ, ಸ್ವಭಾವ ಜೀವನ ವಿಧಾನ ಬೇರೆ ಇವೆ. ಅವರೆ ಹಿಂದೂಸ್ಥಾನದಲ್ಲೇ ಹುಟ್ಟಿ ಬೆಳದು ಕೆಲಕಾಲದ ಕೆಳಗೆ ಧರ್ಮದ ಬಣ್ಣವನ್ನು ಪರಿವರ್ತಿಸಿದ ಮಾತ್ರಕ್ಕೆ ಬೇರೆ ಹೇಗಾದಾರು? ತುರ್ಕಿ, ಅರೇಬಿಯಾ, ಸಿರಿಯಾ ಅಫ್ಘಾನಿಸ್ತಾನ ಈಜಿಪ್ಟುಗಳಲ್ಲಿಯೂ ಅಲ್ಪಸಂಖ್ಯಾಕರಿದ್ದಾರೆ. ಆದರೆ ಅವರು ಬಹುಸಂಖ್ಯಾಕರ ಸಂಸ್ಕೃತಿಯನ್ನು ಸ್ವೀಕರಿಸಿದ್ದಾರೆ. ದೇಶದ ಏಳಿಗೆಗೆ ಐಕಮತ್ಯದಿಂದ ಹೊದೆದಾಡುತ್ತಿದ್ದಾರೆ.

ಅಲ್ಪಸಂಖ್ಯಾಕರ ಹಕ್ಕುಗಳನ್ನು ಸಂರಕ್ಷಿಸುವೆವು:—

ಅಂತರರಾಷ್ಟ್ರೀಯ ಸಂಘವನರು ಹೇಳಿರುವ ಪ್ರಕಾರಕ್ಕೆ ಅಲ್ಪಸಂಖ್ಯಾಕರ ಹಕ್ಕು, ಹಿತಗಳನ್ನು ಸಂರಕ್ಷಿಸಲು ಹಿಂದೂ ಮಹಾಸಭೆಯು ಸಿದ್ಧವಿದೆ. ಮುಸಲ್ಮಾನರು ತಮ್ಮ ಹಕ್ಕುಗಳನ್ನು ತೆಗೆದು ಕೊಳ್ಳಲಿ. ನಾವು ನಮ್ಮ ಹಕ್ಕುಗಳನ್ನು ಪಡೆಯೋಣ ಎಲ್ಲರೂ ಸುಖದಿಂದಿರೋಣ.

ಮುಸಲ್ಮಾನರಿಗೆ ಸೌಲಭ್ಯಗಳನ್ನು ಕೊಟ್ಟೆವು :—

1916 ರ ಹಿಂದೂ-ಮುಸ್ಲಿಂ ಸಂಧಿಯ ಪ್ರಕಾರ ಮುಸಲ್ಮಾನರಿಗೆಷ್ಟೋ ಸೌಲಭ್ಯಗಳನ್ನು ಕೊಡಲಾಯಿತು. ಇದು ಅವಾಯಕರವೆಂದೂ - ಹೀಗೆ ನೂಡುವುದು ಯೋಗ್ಯವಲ್ಲವೆಂದೂ ನಾನು ಲೋಕಮಾನ್ಯ ಬಾಲಗಂಗಾಧರ ತಿಲಕರಿಗೆ ತಿಳುಹಿಸಿದೆನು. ಅವರು ಕೂನೆಗೆ ತಮ್ಮ ವ್ಯಕ್ತಿತ್ವದ ಬಲುನೆಯಿಂದ ಔದಾರ್ಯವನ್ನು ತೋರಿಸಿದರು. ಪರಿಣಾಮವೇನಾಯಿತು? ಮುಸಲ್ಮಾನರು ಇನ್ನೂ ಹೆಚ್ಚು ಹೆಚ್ಚು ಕೇಳುತ್ತಿರುವರು. ಇದಕ್ಕೆ ಕೊನೆ